ಕನ್ನಡ ಸಾಹಿತ್ಯ ಚರಿತ್ರೆ

★

ರಂ. ಶ್ರೀ. ಮುಗಳಿ, ಎಂ.ಎ., ಬಿ.ಟಿ., ಡಿ.ಲಿಟ್.
ಕನ್ನಡ ಪ್ರಾಧ್ಯಾಪಕ, ವಿಲಿಂಗ್ಡನ್ ಕಾಲೇಜ್, ಸಾಂಗಲಿ

★

ಉಷಾ ಸಾಹಿತ್ಯ ಮಾಲೆ
ಮೈಸೂರು
೧೯೬೦

ಮೊದಲನೆಯ ಮುದ್ರಣ : ೧೯೫೩
ಎರಡನೆಯ ಮುದ್ರಣ : ೧೯೬೦

ಬೆಲೆ :
ಎಂಟು ರೂಪಾಯಿ

ಮುದ್ರಕರು, ಪ್ರಕಾಶಕರು :
ಆರ್. ಎನ್. ಹಬ್ಬು
ಉಷಾ ಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು

ಮುನ್ನುಡಿ

ಕನ್ನಡಸಾಹಿತ್ಯಚರಿತ್ರೆಯನ್ನು ಕುರಿತು ಈವರೆಗೆ ಹಲವು ಗ್ರಂಥಗಳು ಪ್ರಕಟವಾಗಿವೆ. ದಿ. ಆರ್. ನರಸಿಂಹಾಚಾರ್ಯರ ಕವಿಚರಿತೆಯ ಮೂರು ಸಂಪುಟಗಳಂತೂ ಬೆರಗುಗೊಳಿಸುವ ಸಾಮಗ್ರಿಯನ್ನೊಳಗೊಂಡಿವೆ, ಚರಿತ್ರಲೇಖಕರಿಗೆ ಮುಖ್ಯ ಆಕರಗಳಾಗಿವೆ. ತರುವಾಯದ ಗ್ರಂಥಗಳಲ್ಲಿ ಒಂದೊಂದು ಗುಣವಿಶೇಷವಿದೆ. ಆದರೂ ಕನ್ನಡಸಾಹಿತ್ಯವನ್ನು ಆಧುನಿಕ ದೃಷ್ಟಿಯಿಂದ ವ್ಯಾಸಂಗಮಾಡಬೇಕೆನ್ನುವವರಿಗೆ ಅವಶ್ಯವೆಂದು ತೋರುವ ಚಾರಿತ್ರಿಕ ಮತ್ತು ವಿಮರ್ಶಾತ್ಮಕ ವಿವೇಚನೆ ಒಂದು ಸಮಗ್ರವಾದ ಗ್ರಂಥರೂಪದಲ್ಲಿ ದೊರೆಯಬೇಕಾಗಿತ್ತು. ಪಾಠಹೇಳುವ ಅಧ್ಯಾಪಕರಿಗೂ ಕೇಳುವ ವಿದ್ಯಾರ್ಥಿಗಳಿಗೂ ಇಂಥ ಗ್ರಂಥದ ಅಗತ್ಯವು ವಿಶೇಷವಾಗಿ ತೋರಿತ್ತು. ಅದನ್ನು ಪೂರೈಸುವ ಮನೀಷೆಯಿಂದ 'ಕನ್ನಡಸಾಹಿತ್ಯಚರಿತ್ರೆ' ಎಂಬ ಗ್ರಂಥವನ್ನು ಬರೆದು ಕನ್ನಡಿಗರಿಗೆ ಇಲ್ಲಿ ಅರ್ಪಿಸುತ್ತಿದ್ದೇನೆ.

ವ್ಯಾಸಂಗಪ್ರಿಯರಿಗೆ ಬೇಕಾದುದೆಲ್ಲ ಈ ಗ್ರಂಥದಲ್ಲಿದೆ ಎಂದು ನಿಜವಾಗಿಯೂ ಹೇಳಲಾರೆ. ತೀರ ಪ್ರಾರಂಭಕಾಲದಿಂದ ೧೯ನೆಯ ಶತಮಾನದ ಕೊನೆಯ ವರೆಗಿನ ಅಂದರೆ ಹೆಚ್ಚಾಗಿ ಹಳೆಯ ಕನ್ನಡಸಾಹಿತ್ಯದ ಚರಿತ್ರೆ ಮಾತ್ರ ಇಲ್ಲಿದೆ. ಅದು ವಿಸ್ತಾರಕ್ಕಿಂತ ಸಂಗ್ರಹದಲ್ಲಿ ನೆಟ್ಟದೃಷ್ಟಿಯುಳ್ಳುದು. ಯಾವುದೇ ಚರಿತ್ರೆಯ ಅಧಿಷ್ಠಾನವು ಅದರ ಸಾಮಗ್ರಿಗಳಲ್ಲಿರುತ್ತದೆ. ಕನ್ನಡಸಾಹಿತ್ಯದ ಮಟ್ಟಿಗೆ ಇಂದು ಸಾಮಗ್ರಿ ಸಮಗ್ರವಾಗಿ ದೊರೆತಿಲ್ಲ ಅಂದರೆ ಸಾಮಗ್ರಿ ಎಂಬ ಹೆಸರಿಗೆ ತಕ್ಕುದಾಗಿಲ್ಲ. ದೊರೆತ ಸಾಮಗ್ರಿಯೂ ಹಲವು ಸಲ ಪಾಠದೋಷಗಳಿಂದ ದೂಷಿತವೂ ಅರಕೆಗಳಿಂದ ಅತೃಪ್ತಿಕರವೂ ಆಗಿದೆ. ಕಾಲದೇಶಾದಿ ಚರಿತ್ರೆಯಂತೂ ಬಹುಶಃ ಅಲಭ್ಯವೆಂಬ ಸ್ವರೂಪದಲ್ಲಿರುತ್ತದೆ. ಈ ಎಲ್ಲ ಅಪರಿಹಾರ್ಯವಾದ ಎಡರುಗಳನ್ನು ಮನದಂದು ಎದೆಗುಂದದೆ ಕನ್ನಡಸಾಹಿತ್ಯಚರಿತ್ರೆಯನ್ನು ಬರೆಯಬೇಕಾಗುತ್ತದೆ. ಅದರ ವಿವೇಚನೆಯಲ್ಲಿ ಊಹೆಗಳು ಕೆಲವು ಸಲ ಅಭಿಪ್ರಾಯಗಳೆಂದು ಮೆರೆಯಬಹುದು, ಅನುಮಾನಗಳು ನಿರ್ಣಯಗಳ ಸೋಗುಹಾಕಬಹುದು. ನಾನು ಕೈಕೊಂಡ ಈ ಚರಿತ್ರಲೇಖನದಲ್ಲಿ ಹಾಗೆ ತೋರಿದರೆ ಅದು ಸ್ವಾಭಾವಿಕ. ಅದರ ಅರಿವು ನನಗಿದೆ ಎಂದು ಮಾತ್ರ ಹೇಳಬಯಸುತ್ತೇನೆ.

ಈ ಚರಿತ್ರೆಯಲ್ಲಿ ಸಾಮಾನ್ಯವಾದ ಒಂದು ಕ್ರಮವನ್ನು ಇಟ್ಟುಕೊಂಡಿದೆ. ಚರಿತ್ರೆಯನ್ನು ಕೆಲವು ಯುಗಗಳಲ್ಲಿ ವಿಭಾಗಮಾಡಿ ಆಯಾ ಯುಗದ ಪ್ರಮುಖಗ್ರಂಥಕಾರರ ಪಟ್ಟಿ, ತತ್ಕಾಲೀನ ಜೀವನಚಿತ್ರ, ಯುಗದ ಸಾಹಿತ್ಯವೈಶಿಷ್ಟ್ಯಗಳು ಇವನ್ನು ಮೊದಲಿಗೆ ಕೊಟ್ಟು ಆಮೇಲೆ ಆ ಯುಗದಲ್ಲಿ ಬರುವ ಗ್ರಂಥಕಾರರ ಮತ್ತು ಗ್ರಂಥಗಳ ಸಂಗ್ರಹ ವಿಮರ್ಶೆಯನ್ನು ಬರೆಯುವ ಪ್ರಯತ್ನ ಮಾಡಿದೆ. ಪ್ರಮುಖರೆಂಬ ಎಲ್ಲರ ವಿಮರ್ಶೆ ಸಂಗ್ರಹವಾಗಿ ಆದರೂ ಸಂಪೂರ್ಣವಾಗಿ ಇದರಲ್ಲಿ ಬರಬೇಕೆಂಬುದು ನನ್ನ ಉದ್ದೇಶವಿತ್ತು. ಅದು ಎಲ್ಲ ಕಡೆಗೆ ಕೈಗೂಡಿದೆ ಎಂದು ಹೇಳುವುದು ಧಾರ್ಷ್ಟ್ಯ-

ವಾದೀತು. ಆದರೆ ಪ್ರಮುಖಗ್ರಂಥಕಾರರಲ್ಲಿಯೂ ತಾವು ಒಂದು ಎತ್ತರಕ್ಕೆ ಮುಟ್ಟಿ ಕನ್ನಡದ ಎತ್ತರವನ್ನು ಹೆಚ್ಚಿಸಿರುವ ಎಂಟು ಹತ್ತು ಶ್ರೇಷ್ಠ ಪ್ರತಿಭಾಶಾಲಿಗಳನ್ನು ಕುರಿತು ಸಾಧ್ಯವಾದಷ್ಟು ವಿಮರ್ಶನಸಾಮಗ್ರಿಯನ್ನು ಒದಗಿಸುವ ಪ್ರಯತ್ನ ಮಾಡಿ-ದ್ದೇನೆ. ಈ ಪ್ರಯತ್ನವು ವ್ಯಾಸಂಗಿಗಳಿಗೆ ಯಶಸ್ವಿಯೆಂದು ತೋರಿದರೆ ನನಗೆ ತುಂಬ ಸಮಾಧಾನವಾಗುವುದು.

ಇದರಲ್ಲಿ ವಿಮರ್ಶೆಯ ಸಂದರ್ಭದಲ್ಲಿ ಗ್ರಂಥಕಾರರ ಬಗ್ಗೆ, ಗ್ರಂಥಗಳ ಬಗ್ಗೆ ವಿಮರ್ಶಕರ ಅಭಿಪ್ರಾಯಗಳನ್ನು ಅವತರಿಸಿ ಅವನ್ನು ಚರ್ಚಿಸಿದ್ದೇನೆ, ನನ್ನ ಪ್ರಾಮಾಣಿಕವಾದ ನಿರ್ಣಯಗಳನ್ನು ನಿರೂಪಿಸಿದ್ದೇನೆ. ಅವಕ್ಕೆ ಸಂಕ್ಷೇಪವಾಗಿ ಕಾರಣಗಳನ್ನು ಕೊಟ್ಟಿದ್ದೇನೆ. ಕೆಲವು ಸಲ ಮನಸ್ಸಿನಲ್ಲಿರುವ ವಿವರಣೆ ಸಾಧ್ಯ-ವಾಗದೆ ಹೋಗಿರಬಹುದು. ವಿವರಣೆಯಿದ್ದಲ್ಲಿಯೂ ನನ್ನ ನಿರ್ಣಯಗಳು ಕೆಲವರಿಗೆ ಸಂಮತವಾಗದೆ ಹೋಗಬಹುದು. ಅದೇನೇ ಇದ್ದರೂ ಸಾಹಿತ್ಯದೃಷ್ಟಿಯಿಂದ ನನಗೆ ತೋರಿದ್ದನ್ನು ಬರೆದಿದ್ದೇನೆ ಎಂದು ವಾಚಕರು ಗ್ರಹಿಸುವರೆಂದು ಭಾವಿಸುತ್ತೇನೆ.

ಕಾಲವಿಚಾರದ ಚರ್ಚೆಯಲ್ಲಿ ನಾನು ಬಹುಮಟ್ಟಿಗೆ ಪ್ರವೇಶಿಸಿಲ್ಲ. ಅವಶ್ಯ ಕಂಡಲ್ಲಿ ಕೆಲವು ಅಂಶಗಳನ್ನು ಎತ್ತಿ ಹೇಳಿ ನನಗೆ ಒಪ್ಪಿತವಾದ ಕಾಲವನ್ನು ಸೂಚಿಸಿ-ದ್ದೇನೆ. ಅಭ್ಯಾಸಿಗಳ ಸೌಕರ್ಯದೃಷ್ಟಿಯಿಂದ ಗ್ರಂಥಕಾರರ ಪಟ್ಟಿಯಲ್ಲಿ ಕಾಲ-ನಿರ್ದೇಶವನ್ನು ಸ್ಥೂಲಮಾನದಿಂದ ಕೊಟ್ಟಿರುತ್ತದೆ. ಗ್ರಂಥರಚನೆಯ ಕಾಲವು ಗೊತ್ತಿರುವಲ್ಲಿ 'ಗ್ರಂ.ರ.' ಎಂಬುದಾಗಿ ಅದನ್ನು ಹೇಳಿರುತ್ತದೆ.

ಈ ಗ್ರಂಥವು ಹಲವಾರು ವರ್ಷಗಳ ನನ್ನ ಪರಿಶ್ರಮದ ಫಲವೆಂಬುದೇನೋ ನಿಜ. ಆದರೆ ಇದಕ್ಕೆ ವಿಷಯಸಂಗ್ರಹಮಾಡುವಲ್ಲಿ, ವಿಮರ್ಶೆಮಾಡುವಲ್ಲಿ, ಅನೇಕ ವಿಧದಲ್ಲಿ ನನ್ನ ಅನೇಕ ಮಿತ್ರರು ನೆರವಾಗಿದ್ದಾರೆ. ನಮ್ಮ ನಾಡಿನ ವಿದ್ವಾಂಸರು ಮತ್ತು ವಿಮರ್ಶಕರು ಇವರ ಗ್ರಂಥ–ಲೇಖನಗಳಿಗೆ ನಾನು ಎಷ್ಟು ಋಣಿಯಾಗಿದ್ದೇನೆ ಎಂಬುದನ್ನು ಈ ಗ್ರಂಥವು ಪುಟಪುಟದಲ್ಲಿ ಸಾರುತ್ತದೆ. ಶ್ರೀ. ಗೋವಿಂದ ಪೈ, ಡಾ. ಉಪಾಧ್ಯೆ, ಪ್ರೊ. ಕುಂದಣಗಾರ ಮುಂತಾದವರು ನನಗೆ ಬೇಕಾದ ಆಧಾರ-ಗಳನ್ನು ಒದವಿಸಿಕೊಟ್ಟು ಉಪಕಾರಮಾಡಿದ್ದಾರೆ. ಶ್ರೀ.ಗಳಾದ ಡೊ.ಲ. ನರಸಿಂಹಾ-ಚಾರ್ ಮತ್ತು ತೀ. ನಂ. ಶ್ರೀಕಂಠಯ್ಯ ಇವರಿಬ್ಬರೂ ಪ್ರಾರಂಭದಿಂದ ಪ್ರೋತ್ಸಾಹ–ಸಹಾಯಗಳನ್ನು ಕೊಡುವುದಲ್ಲದೆ ಹಸ್ತಪ್ರತಿಯನ್ನೂ ಮುದ್ರಿತ ಪುಟಗಳನ್ನೂ ಓದಿ ಸೂಕ್ತಸಲಹೆಗಳನ್ನು ಇತ್ತಿದ್ದಾರೆ. ಶ್ರೀ. ಕ. ವೆಂ. ರಾಘವಾಚಾರ್ಯರು ಮುದ್ರಿತ ಪುಟಗಳನ್ನು ನೋಡಿ ಮೆಚ್ಚಿಗೆಯನ್ನು ತಿಳಿಸಿದ್ದಾರೆ. ನನ್ನ ವಿದ್ಯಾರ್ಥಿಗಳಾಗಿದ್ದ ಶ್ರೀ. ಆರ್. ವಿ. ಕುಲಕರ್ಣಿ, ವರದರಾಜ ಹುಯಿಲಗೋಳ, ಎಸ್. ವಿ. ಸಂಪತ್ತು, ಕೆ. ಜಿ. ಶಾಸ್ತ್ರಿ ಮುಂತಾಗಿ ಹಲವರು ನನಗೆ ಹಲವು ಬಗೆಯಲ್ಲಿ ಸಾಮಗ್ರಿಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೆ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಅಚ್ಚುಗೊಳಿಸಿ ಪ್ರಕಾಶನಗೊಳಿಸುವ ಭಾರವನ್ನು ಪ್ರೀತಿಯಿಂದ ಹೊತ್ತುಕೊಂಡು ಯಾವ ತೊಂದರೆಗಳನ್ನೂ ಗಮನಿಸದೆ ಉಷಾ ಮುದ್ರಣಾಲಯದ ಒಡೆಯರಾದ ಶ್ರೀ. ರಾ. ನಾ. ಹಬ್ಬು ಅವರು ಬಹುಪರಿಶ್ರಮದಿಂದ ಇದನ್ನು ಪ್ರಕಟಗೊಳಿಸಿದ್ದಾರೆ. ಅಚ್ಚಿನ ಅಂದ, ಹೊರಮೈಯ ಚೆಂದ ಇದಕ್ಕೆಲ್ಲ ಅವರೇ ಶ್ರೇಯೋಭಾಗಿಗಳು. ಅವರಿಗೆ ನಾನು ಬಹಳ ಋಣಿಯಾಗಿದ್ದೇನೆ. ಶ್ರೇಯಸ್ಸಿನ ಜೊತೆಗೆ ವಿಪರೀತ ವೆಚ್ಚಕ್ಕೂ ಅವರೇ ಭಾಗಿಯಾಗಿದ್ದಾರೆ. ಇಂಥ ಗ್ರಂಥವನ್ನು ನಾಡು ಮೆಚ್ಚಬಹುದು ಎಂಬ ದೃಢವಾದ ನಂಬಿಗೆಯಿಂದ ಅವರು ಇದನ್ನು ಕೈಗೊಂಡರು. ಇದನ್ನು ಹೆಚ್ಚು ಜನ ಕೊಂಡು ಓದಿ ಅವರ ಭಾರವನ್ನು ಇಳಿಸುವರೆಂದು ನಾನು ಹಾರೈಸುತ್ತೇನೆ.

ಸಾಹಿತ್ಯಚರಿತ್ರೆಯ ಕೆಲಸ ಯಾವೊಬ್ಬನಿಂದಲೂ ಸಮರ್ಪಕವಾಗಿ ನಡೆಯದು. ಸುದೈವದಿಂದ ಎಲ್ಲ ಪಂಡಿತರ ಸಹಕಾರಪಡೆದು ಒಂದು ವಿಸ್ತಾರವೂ ಸಮರ್ಪಕವೂ ಆಗಿರುವ ಕನ್ನಡಸಾಹಿತ್ಯಚರಿತ್ರೆಯನ್ನು ಪ್ರಕಟಿಸಬೇಕೆಂದು ಕರ್ನಾಟಕ ವಿಶ್ವವಿದ್ಯಾನಿಲಯವು ಯೋಜನೆಮಾಡಿದೆಯೆಂದು ತಿಳಿದಿದೆ. ಅದು ಬರುವುದಕ್ಕೆ 'ಕಣ್ಸನ್ನೆ'-ಯಾಗಿ ಈ ಗ್ರಂಥವು ತೋರಿದರೆ ನನಗದೇ ತೃಪ್ತಿ. ಇದನ್ನು ವಿದ್ಯಾರ್ಥಿಗಳಿಗೆ ಮತ್ತು ವ್ಯಾಸಂಗಿಗಳಿಗೆ ಮುಖ್ಯವಾಗಿ ಬರೆದಿರುವುದಾದರೂ ಸಾಮಾನ್ಯವಾಚಕರೂ ಇದರಿಂದ ಕನ್ನಡಸಾಹಿತ್ಯಸಂಪತ್ತಿಯನ್ನು ಅರಿತುಕೊಳ್ಳಬೇಕೆಂದು ಅಪೇಕ್ಷೆಯಿದೆ. ವಿದ್ವಾಂಸರು ಇದನ್ನೋದಿ ತಮ್ಮ ಅಭಿಪ್ರಾಯಗಳನ್ನೂ ಸೂಚನೆಗಳನ್ನೂ ತಿಳಿಸ-ಬೇಕೆಂದು ಬಿನ್ನವಿಸುತ್ತೇನೆ. ಅವನ್ನು ಮುಂದಿನ ಆವೃತ್ತಿಯಲ್ಲಿ ಉಪಯೋಗಿಸ-ಬಹುದಾಗಿದೆ.

ಇದರಲ್ಲಿಯ ಅಭ್ಯಾಸ ಸೂಚಿಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ನನ್ನ ಮಿತ್ರರಾದ ಶ್ರೀ. ಕೆ. ಜಿ. ಶಾಸ್ತ್ರಿ, ಎನ್. ಪ್ರಹ್ಲಾದರಾವ್, ಪಿ. ಟಿ. ಕುಲಕರ್ಣಿ ಮುಂತಾದವರು ನೆರವಾಗಿದ್ದಾರೆ. ಅವರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

ಸಾಹಿತ್ಯರೂಪಗಳ ದೃಷ್ಟಿಯಿಂದ ಸಾಹಿತ್ಯಚರಿತ್ರೆ ಮತ್ತು ಹಳೆಯ ಸಾಹಿತ್ಯಕ್ಕೆ ಸಂಬಂಧಿಸಿದ ಇತರ ಪ್ರಶ್ನೆಗಳು ಇವನ್ನು ಕುರಿತು ಇನ್ನೊಂದು ಗ್ರಂಥವನ್ನು ಬರೆಯುವ ಉದ್ದೇಶವಿದೆ. ಹೊಸಗನ್ನಡ ಸಾಹಿತ್ಯಚರಿತ್ರೆಯನ್ನೂ ಬರೆಯುವ ವಿಚಾರವಿದೆ. ಇವುಗಳಿಗೆ ಮೂರ್ತಸ್ವರೂಪ ಬರಲಿ ಎಂದು ಆಶಿಸುತ್ತೇನೆ.

ಅಪರಿಹಾರ್ಯವಾಗಿ ಉಳಿದ ಕೆಲವು ದೋಷಗಳನ್ನು ಓದುಗರು ದಯವಿಟ್ಟು ತಿದ್ದಿಕೊಳ್ಳಬೇಕು. ಮಹತ್ವದ ಕೆಲವು ತಿದ್ದುಪಡಿಗಳನ್ನು ಮಾತ್ರ ಕೊನೆಗೆ ಕೊಟ್ಟಿದೆ. ಅಭ್ಯಾಸಿಗಳು ಮೂರು ಅನುಬಂಧಗಳ, ಅಭ್ಯಾಸ ಸೂಚಿಯ ಮತ್ತು ಅಕಾರಾದಿಯ ಪ್ರಯೋಜನವನ್ನು ಪಡೆಯಬೇಕು.

ವಿಶ್ರಾಮಬಾಗ
ವಿಜಯದಶಮಿ : ೧೭-೧೦-೧೯೫೩

ರಂ. ಶ್ರೀ. ಮುಗಳಿ

ಮುನ್ನುಡಿ

(ಎರಡನೆಯ ಆವೃತ್ತಿಗೆ)

ಸುಮಾರು ಏಳು ವರ್ಷಗಳಾದ ಮೇಲೆ ಈ ಗ್ರಂಥದ ಎರಡನೆಯ ಆವೃತ್ತಿ ಪ್ರಕಟವಾಗುತ್ತಿದೆ. ತೀರ ಅವಶ್ಯವೆಂದು ತೋರಿದ ತಿದ್ದುಪಡೆಗಳನ್ನೂ ಸೇರ್ಪಡೆಗಳನ್ನೂ ಇದರಲ್ಲಿ ಅಳವಡಿಸಲಾಗಿದೆ. ಅಭ್ಯಾಸಿಗಳಿಗೆ ಸುಕರವಾಗಲೆಂದು ಪ್ರಕರಣಗಳ ಒಳಭಾಗದಲ್ಲಿ ವಿಷಯಾನುಗುಣವಾಗಿ ಸಣ್ಣ ಸಣ್ಣ ಶೀರ್ಷಕಗಳನ್ನು ಕೊಟ್ಟಿದೆ. ಉದಾಹೃತವಾದ ಪೂರ್ಣಪದ್ಯಗಳನ್ನು ಪದ್ಯಕಾವ್ಯದ ರೀತಿಯಲ್ಲಿ ಪ್ರಕಟಿಸಲಾಗಿದೆ. 'ಅಭ್ಯಾಸ ಸೂಚಿ'ಯನ್ನು ಅದ್ಯಾವತ್ತಾಗಿ ಮಾಡಿರುವುದಲ್ಲದೆ ಅಕ್ಷರಾನುಕ್ರಮವನ್ನು ಅನುಸರಿಸಲಾಗಿದೆ. ಅಭ್ಯಾಸ ಸೂಚಿಯ ಕಾರ್ಯವನ್ನು ನನಗಾಗಿ ಮಾಡಿಕೊಟ್ಟ ಶ್ರೀ. ಶ್ರೀನಿವಾಸ ಹಾವನೂರ ಅವರಿಗೆ ನನ್ನ ಹಾರ್ದಿಕ ಕೃತಜ್ಞತೆಗಳು ಸಲ್ಲುತ್ತವೆ.

ಮೊದಲನೆಯ ಆವೃತ್ತಿ ಪ್ರಕಟವಾದ ಮೇಲೆ ಅದನ್ನು ಸ್ವಾಗತಿಸಿ ತಮ್ಮ ಮೆಚ್ಚಿಗೆಯನ್ನು ತಿಳಿಸಿದ, ಸಲಹೆ–ಸೂಚನೆಗಳನ್ನು ಮಾಡಿದ ಮತ್ತು ವಿವಿಧ ದೃಷ್ಟಿಕೋನಗಳಿಂದ ವಿಮರ್ಶಿಸಿದ ಎಲ್ಲರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಯಾವುದೇ ವಿಮರ್ಶೆಯನ್ನು ತಿಳಿದುಕೊಳ್ಳಲು ಮತ್ತು ಅದರಲ್ಲಿ ನನಗೆ ಗ್ರಾಹ್ಯವೆಂದು ತೋರಿದ್ದನ್ನು ಸ್ವೀಕರಿಸಲು ನಾನು ಯಾವಾಗಲೂ ಸಿದ್ಧನಾಗಿದ್ದೇನೆ. ನನ್ನ ಗ್ರಂಥವು ಪರಿಪೂರ್ಣವೆಂದು ನಾನು ತಿಳಿದಿಲ್ಲ. ನನ್ನ ಮೂಲ್ಯಮಾಪನ ಅಥವಾ ಅಭಿಪ್ರಾಯಗಳು ಕೊನೆಯ ಮಾತುಗಳೂ ಅಲ್ಲ. ನನ್ನ ಮಟ್ಟಿಗೆ ಕನ್ನಡಸಾಹಿತ್ಯದ ಎಲ್ಲ ವಿಭಾಗಗಳನ್ನೂ ಎಲ್ಲ ಅಂಗಗಳನ್ನೂ ಶುದ್ಧಹೇತುವಿನಿಂದ, ಸಮಬುದ್ಧಿಯಿಂದ ನಾನು ವಿವೇಚಿಸುವ ಪ್ರಯತ್ನ ಮಾಡಿದ್ದೇನೆ. ನನ್ನ ಬರೆವಣಿಗೆಯ ವಿಷಯದಲ್ಲಿ ಮತಭೇದವುಳ್ಳ ಮಿತ್ರರು ಅವಶ್ಯವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಬೇಕು. ಆದರೆ ನನ್ನ ಸದ್ಧೇತುವಿನ ಬಗ್ಗೆ ಅವರು ನನ್ನಲ್ಲಿ ನಂಬಿಗೆಯನ್ನಿಡಬೇಕು ಎಂದು ಕೇಳಿಕೊಳ್ಳುತ್ತೇನೆ. ಯಾರೊಡನೆಯೂ ಈ ಗ್ರಂಥಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತು ಮುಕ್ತಮನಸ್ಸಿನಿಂದ ಚರ್ಚೆಮಾಡಲು ನಾನು ಆತುರನಾಗಿದ್ದೇನೆ. ಇಂಥ ಸಂದರ್ಭದಲ್ಲಿ ಮಾತಿಗೆ ಮಾತು, ಉತ್ತರಕ್ಕೆ ಪ್ರತ್ಯುತ್ತರ ಎಂಬ ವಾದಸರಣಿ ಲೇಖನರೂಪದಲ್ಲಿ ಬರುವುದು ನನಗೆ ಸಂಮತವಿಲ್ಲ. ನಾಡಿನ ಪ್ರಗತಿಯ ದೃಷ್ಟಿಯಿಂದ, ಸಾಹಿತ್ಯದಲ್ಲಿ ಸದ್ಭಾವನೆ ಬೆಳೆಯುವ ದೃಷ್ಟಿಯಿಂದ, ಇದು ಹಿತವಲ್ಲ ಎಂದು ನನ್ನ ತಿಳಿವಳಿಕೆ.

ಈ ಗ್ರಂಥವನ್ನು ಕನ್ನಡ ಪಂಡಿತರಿಂದ ಅವಲೋಕನಗೊಳಿಸಿ ಅವರ ಸೂಚನೆಯ ಮೇರೆಗೆ ನನಗೆ ಡಿ.ಲಿಟ್. ಪದವಿಯನ್ನು ದಯಪಾಲಿಸಿದ ಪುಣೆ ವಿದ್ಯಾಪೀಠಕ್ಕೂ ಇದಕ್ಕೆ ರಾಷ್ಟ್ರಪ್ರಶಸ್ತಿಯನ್ನು ನೀಡಿದ ಸಾಹಿತ್ಯ ಅಕ್ಯಾಡಮಿಗೂ ನಾನು ಋಣಿಯಾಗಿದ್ದೇನೆ. ಇದನ್ನು ಪಠ್ಯಪುಸ್ತಕವೆಂದು ನೇಮಕಮಾಡಿದ ಎಲ್ಲ ವಿಶ್ವವಿದ್ಯಾನಿಲಯಗಳಿಗೂ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಎರಡನೆಯ ಆವೃತ್ತಿಯನ್ನು ಅಂದವಾಗಿ ಅಚ್ಚುಗೊಳಿಸಿದ ಉಷಾ ಪ್ರೆಸ್ಸಿನ ಒಡೆಯರಾದ ಶ್ರೀ. ರಾ. ನಾ. ಹಬ್ಬು ಅವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ವಿಶ್ರಾಮಬಾಗ
೨೮-೩-೧೯೬೦

ರಂ. ಶ್ರೀ. ಮುಗಳಿ

ವಿಷಯಾನುಕ್ರಮ

ಪಂಪಪೂರ್ವಯುಗ

ಪಂಪಯುಗ

ಬಸವಯುಗ

ಕುಮಾರವ್ಯಾಸಯುಗ

ಕನ್ನಡ ಸಾಹಿತ್ಯ ಚರಿತ್ರೆ

೧. ಸಾಹಿತ್ಯೋದಯ

ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ. ಇಷ್ಟೇ ಯಾಕೆ, ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ. ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ. ಸಾಹಿತ್ಯದ ಈ ಮೂಲಸತ್ತ್ವವು ಅಭಿವ್ಯಕ್ತಿಯ ಸಾಧನವಾದ ಭಾಷೆಯಲ್ಲಿ ಇರುತ್ತದೆ. ಸೌಂದರ್ಯದ ಪ್ರಜ್ಞೆ ಮನುಷ್ಯನಷ್ಟು ಪ್ರಾಚೀನವಾಗಿದೆ. ಒಂದೊಂದು ಭಾಷೆಯ ನಿರ್ಮಾಣದಲ್ಲಿ ಅದು ತಲೆದೋರಿದೆ. ಇಂದಿನ ಭಾಷೆಗಿಂತ ತೀರ ಹಿಂದಿನ ಭಾಷೆ ಹೆಚ್ಚು ಕಾವ್ಯಮಯವಾಗಿತ್ತೆಂದು ಬಲ್ಲವರು ತೋರಿದ್ದಾರೆ. ಒಂದು ವರ್ಣದಲ್ಲಿ ಇಲ್ಲವೆ ಶಬ್ದದಲ್ಲಿ, ಒಂದು ಕವನ ಇಲ್ಲವೆ ಗ್ರಂಥದಲ್ಲಿ ಇರುವಂಥ ರಸಧ್ವನಿಯನ್ನು ಕೆಲವು ಸಲ ಗುರುತಿಸಬಹುದು. ಹೀಗೆ ಒಂದು ಕಾಲಕ್ಕೆ ಭಾಷೆಯೇ ಸಾಹಿತ್ಯವಾಗಿತ್ತು. ಇಂದಿಗೂ ಕಾಡುಜನ ಎಂದು ಕರೆಸಿಕೊಳ್ಳುವವರ ನುಡಿಯಲ್ಲಿ ಕಾಡುತನವೆಷ್ಟೇ ಇರಲಿ, ಸಾಹಿತ್ಯದ ಸವಿಯಿದೆ. ಜನ ಬೆಳೆದಂತೆ ಎಲ್ಲಿ ಭಾಷೆ ಬೆಳೆದಿದೆಯೊ ಅಲ್ಲಿ ಸಹಜ-ಸ್ಫೂರ್ತವಾದ ಸಾಹಿತ್ಯವೂ ಬೆಳೆದಿದೆ. ಭಾಷೆಯ ಉದಯದ ತೀರ ಮೊದಲಿನ ಅವಸ್ಥೆಯಲ್ಲಿ ಭಾಷೆಯೇ ಸಾಹಿತ್ಯವಾಗಿದ್ದರೆ ಎರಡನೆಯ ಅವಸ್ಥೆಯಲ್ಲಿ ಭಾಷೆಯಷ್ಟೇ ಸಹಜವಾದ ಆದರೂ ಪ್ರತ್ಯೇಕವಾದ ಸಾಹಿತ್ಯ ಉದಯವಾಗಿರಬೇಕು. ಈ ಬಗೆಯ ಸಾಹಿತ್ಯಕ್ಕೆ ಬಾಯಿಯೇ ಆಧಾರ. ಇದಕ್ಕೆ ಲಿಪಿಯಿಲ್ಲ, ಕರ್ತೃ ಯಾರೆಂದು ತಿಳಿಯು-ವುದು ಸುಲಭವಲ್ಲ. ಹಲವು ಕಾಲದ ಹಲವು ಬಾಯಿ ಇದನ್ನು ಹೇಳುಹೇಳುತ್ತ ರೂಪಿಸಬಹುದು, ತಿದ್ದಬಹುದು, ಕೆಡಿಸಲೂ ಬಹುದು. ಇದಕ್ಕೆ ಇಂದು ನಾವು ಜನಪದಸಾಹಿತ್ಯ ಎಂದು ಹೇಳುತ್ತೇವೆ.

ಸಾಹಿತ್ಯಚರಿತ್ರೆಯಲ್ಲಿ ಜನಪದಸಾಹಿತ್ಯಕ್ಕೆ ಮೇಲಾದ ಸ್ಥಾನವಿದೆ. ಇತರ ಸಾಹಿತ್ಯದ ಮೇಲೆ ಅದು ಬೀರಿದ ಪ್ರಭಾವದ ದೃಷ್ಟಿಯಿಂದಂತೂ ಅದನ್ನು ಅಲ್ಲಗಳೆಯು-ವುದು ಸಾಧ್ಯವಿಲ್ಲ. ಬಹುಶಃ ಎಲ್ಲ ಪಳಗಿದ ಭಾಷೆಗಳಲ್ಲಿ ಇರುವಂತೆ ಕನ್ನಡ ಭಾಷೆ-ಯಲ್ಲಿಯೂ ಜನಪದಸಾಹಿತ್ಯವು ತೀರ ಪ್ರಾಚೀನ, ವಿಪುಲ ಹಾಗೂ ವಿವಿಧವಾಗಿದೆ. ಕ್ರಿ.ಶ. ೭ನೆಯ ಶ.ದ ಶಾಸನದಲ್ಲಿಯ ತ್ರಿಪದಿಗಳು, ೮ನೆಯ ಶ.ದಲ್ಲಿಯ ಒನಕೆವಾಡು, ೯ನೆಯ ಶ.ದಲ್ಲಿ ಬೆದಂಡೆ-ಚತ್ತಾಣಗಳಲ್ಲಿಯ ಅಚ್ಚಗನ್ನಡ ಛಂದೋರೂಪಗಳು ಇವೆಲ್ಲ ಅಲ್ಲದೆ ಕ್ರಿ.ಶ. ೨ನೆಯ ಶ.ದಲ್ಲಿ (ಇಲ್ಲವೆ ಕೆಲವರ ಪ್ರಕಾರ ೫ನೆಯ ಶ.ದಲ್ಲಿ) ರಚಿತವಾದ 'ಶಿಲಪ್ಪದಿಗಾರಂ' ಎಂಬ ಹೆಸರಾದ ತಮಿಳು ಕೃತಿಯಲ್ಲಿ ವರ್ಣಿಸಲಾದ ನೀಲಗಿರಿಯ ಕನ್ನಡಿತಿಯರ ಕುಣಿತದ ಹಾಡು—ಈ ಮುಂತಾದ ನಿದರ್ಶನಗಳು ಮೇಲಿನ ಮಾತಿಗೆ ಸಾಕ್ಷಿಯಾಗಿವೆ. ಕನ್ನಡಸಾಹಿತ್ಯವನ್ನು ಅಭ್ಯಾಸಮಾಡುವಾಗ ಈ ಬಗೆಯ ಸಾಹಿತ್ಯದ

ಕಡೆಗೆ ಹೆಚ್ಚು ಗಮನವನ್ನೀಯುವುದು ಅವಶ್ಯವಾಗಿದೆ. ಆದರೆ ಬರೆಹಕ್ಕೆ ಒಳಪಟ್ಟ ಆಧಾರಗಳ ಅಭಾವದಿಂದ ಇದನ್ನು ಕ್ರಮಬದ್ಧವಾಗಿ ನೇರವಾಗಿ ಅಭ್ಯಾಸಿಸಲು ಬರುವಂತಿಲ್ಲ. ಅಂತೇ ನಾವು ಕೈಕೊಂಡ ಚಾರಿತ್ರಿಕ ವಿವೇಚನೆಯಲ್ಲಿ, ಬರೆಹದಲ್ಲಿ ದೊರೆತ ಸಾಹಿತ್ಯಕ್ಕೆ ಹೆಚ್ಚು ಎಡೆದೊರೆಯುವುದು ಸ್ವಾಭಾವಿಕವಾಗಿದೆ. ಸಾಹಿತ್ಯೋ-ದಯದ ಸಂದರ್ಭದಲ್ಲಿಯೂ ಅದು ತಪ್ಪಿದ್ದಲ್ಲ. ಆದ್ದರಿಂದ ಇನ್ನುಮುಂದೆ ಕನ್ನಡ ಸಾಹಿತ್ಯದ ಉದಯವು ಎಂದು, ಯಾರಿಂದ ಎಂಬ ಮಾತುಗಳನ್ನು ಬರೆಯುವಾಗ ಗ್ರಂಥಸ್ಥವಾದ ಅಂದರೆ ಬರೆಹಕ್ಕೆ ಇಳಿದ, ಇಲ್ಲವೆ ಆಮೇಲೆ ಇಳಿಸಿದ, ಸಾಹಿತ್ಯವನ್ನು ಗಮನದಲ್ಲಿ ಇಡುತ್ತೇವೆ.

ಸಾಹಿತ್ಯೋದಯದ ಕಾರಣಗಳು

ಯಾವುದೇ ಬೆಳೆಯುತ್ತಿರುವ ಭಾಷೆಯಲ್ಲಿ ಯಾವುದೋ ಒಂದು ಕಾಲಕ್ಕೆ ಗ್ರಂಥಸ್ಥವಾದ ಸಾಹಿತ್ಯವು ತಲೆದೋರುತ್ತದೆ, ಮುಂದೆ ಪರಂಪರೆಯಾಗಿ ಸಾಗುತ್ತದೆ. ಆಯಾ ಕಾಲಕ್ಕೆ ಮಾತ್ರ ಸಾಹಿತ್ಯವು ಉದಯವಾಗಲು ಕಾರಣಗಳೇನು ಎಂಬುದನ್ನು ತಿಳಿದಿರಬೇಕು. ಕಾರಣಗಳು ಎಲ್ಲ ಸಾಹಿತ್ಯಗಳಿಗೆ ಸಮಾನವಾದುವು ಕೆಲವಿದ್ದರೆ ವಿಶಿಷ್ಟ ಪರಿಸ್ಥಿತಿಯಲ್ಲಿ ಭಿನ್ನವಾದುವೂ ಕೆಲವು ಇರಬಹುದು. ಗ್ರಂಥಸ್ಥವಾದ ಸಾಹಿತ್ಯ ಎಂದು ಹೇಳುವಾಗ ನಾವು ಎರಡು ಮಾತುಗಳನ್ನು ಗೃಹೀತವಾಗಿ ಹಿಡಿಯುತ್ತೇವೆ. ಸಾಹಿತ್ಯವು ಗ್ರಂಥರೂಪದಲ್ಲಿ ನಿಲ್ಲಲು ಆಯಾ ಭಾಷೆಗೆ ಲಿಪಿಯೊಂದು ಉಂಟಾಗಿರ-ಬೇಕು, ಗ್ರಂಥ ಬರೆಯಲು ಪ್ರವೃತ್ತನಾದ ವ್ಯಕ್ತಿಯಲ್ಲಿ ಗ್ರಥನದ ಅಂದರೆ ಕಲಾಯುತ-ವಾದ ರಚನೆಯ ಉದ್ದೇಶ ಮತ್ತು ನೈಪುಣ್ಯ ತೋರಿರಬೇಕು. ಸೌಂದರ್ಯದೃಷ್ಟಿ ಹಾಗೂ ಪ್ರತಿಭೆ ಇವಿಷ್ಟೇ ಇದ್ದರೆ ಸಾಲದು. ಸಾಮಾನ್ಯವಾಗಿ ಎಲ್ಲ ಸಾಹಿತ್ಯದ ಉದಯಕ್ಕೆ ಕಾರಣವಾಗಿ ಮೇಲಿನ ಎರಡು ಸಂಗತಿಗಳು ಇದ್ದೇ ಇರುತ್ತವೆ. ಇದಕ್ಕೆ ಅಪವಾದವಿಲ್ಲ ಎಂದು ತಿಳಿಯಕೂಡದು. ಜನಪದಸಾಹಿತ್ಯದಷ್ಟೇ ಸಹಜಸ್ಫೂರ್ತ-ವಾದರೂ ಅದಕ್ಕಿಂತ ಹೆಚ್ಚು ಸಂಸ್ಕಾರಹೊಂದಿದ, ಬರೆಹದ ಹಿಡಿತಕ್ಕೆ ಸಿಕ್ಕದ ಸಾಹಿತ್ಯವು ಹಿಂದಿನಿಂದಲೂ ನಿರ್ಮಾಣವಾಗಿದೆ. ಜಗತ್ತಿನ ಅತಿಪ್ರಾಚೀನ ವಾಙ್ಮಯ-ದಲ್ಲಿ ಅಳವಡುವ ವೇದ-ವೇದಾಂತಗಳು ಸಂಸ್ಕೃತದಲ್ಲಿವೆ. ವಚನ-ಕೀರ್ತನೆಗಳು ಕನ್ನಡದಲ್ಲಿವೆ. ಇವುಗಳ ಸಾರವತ್ತಾದ ಭಾಗದಲ್ಲಿ ಜೀವನ ಮತ್ತು ಕಾವ್ಯ ತಮ್ಮ ಸಿದ್ಧಿಯ ತುತ್ತತುದಿಯಲ್ಲಿ ನಿಂತಿವೆ. ಆದರೆ ಇವುಗಳನ್ನು **ಬರೆದ** ಸಾಹಿತ್ಯ ಎಂದು ಯಾವಾಗಲೂ ಹೇಳಬಹುದೆ? ಋಷಿಗಳ, ಭಕ್ತರ ಕಿವಿಗಳಲ್ಲಿ ಕೇಳಿದಂತಾಗಿ ಹೃದಯ-ಪಟಲದಲ್ಲಿ ನೆಲೆನಿಂತ ಕಾರಣ ಇವಕ್ಕೆ **ಶ್ರುತಿ**ಯೆಂಬ ಸಾರ್ಥಕವಾದ ಹೆಸರು ಬಂದಿತು. **ಕೃತಿ**ಯೆಂಬ ಸ್ವರೂಪದ ಸಾಹಿತ್ಯಕ್ಕಿಂತ ಇವು ಬೇರೆಯಾದುವು. ಆಮೇಲೆ ಇವನ್ನು ಲಿಪಿಯ ಪಂಜರದಲ್ಲಿ ಸೆರೆಗೊಳಿಸಿದರು, ಕೃತಿಯ ದೃಷ್ಟಿಯಿಂದ ಇವನ್ನು ನೋಡ-ತೊಡಗಿದರು. ಅಂತೇ ಸಾಹಿತ್ಯಚರಿತ್ರೆಯಲ್ಲಿ ಇವಕ್ಕೆ ಮಿಗಿಲಾದ ನೆಲೆಯಿದೆ.

ಸಾಹಿತ್ಯೋದಯಕ್ಕೆ ಇರಬಹುದಾದ ಕಾರಣಗಳು ಆಂತರಿಕ, ಬಾಹ್ಯ ಎಂದು ಇಬ್ಬಗೆಯಾಗಿ ಇರುತ್ತವೆ. ಎಲ್ಲವೂ ಎಲ್ಲ ಸಾಹಿತ್ಯಕ್ಕೆ ಸರಿಹೋಗುತ್ತವೆ ಎಂದಲ್ಲ. ಅವುಗಳಲ್ಲಿ ಕೆಲವು ಏಕಕಾಲಕ್ಕೆ ಕೂಡಿಬಂದಾಗ ಸಾಹಿತ್ಯವು ಉದಯವಾಗುತ್ತದೆ. ಮನುಷ್ಯನ ಮನಸ್ಸು ಬೆಳೆದಂತೆ ಅವನು ಹೊಸ ಹಂಬಲುಗಳನ್ನು ಪಡೆಯುತ್ತಾನೆ, ಹೊಸ ಸಂಸ್ಕಾರಗಳನ್ನು ಹೊಂದುತ್ತಾನೆ. ಅಂದಂದಿನ ಮಟ್ಟಿಗೆ ಯೋಚಿಸುವ ಅವನು ಹಿಂದುಮುಂದನ್ನು ಬಗೆಯುತ್ತಾನೆ. ತಾನು ಕಂಡ ಚೆಲುವು, ಉಂಡ ನಲಿವು ತನ್ನಂತೆ ಇತರರಿಗೆ ದೊರೆಯಲಿ, ಇಂದಿನಂತೆ ಮುಂದೆಯೂ ದೊರೆಯಲಿ ಎಂಬ ಸಾಮಾಜಿಕ ಪ್ರೇರಣೆ, ಕೀರ್ತಿಯ ಹಂಬಲಿಕೆ ಅವನಲ್ಲಿ ಹುಟ್ಟುತ್ತವೆ. ನಾಗರಿಕತೆ ಈ ನೆಲೆಗೆ ಬಂದಾಗ ಗ್ರಂಥಸ್ಥವಾದ ಸಾಹಿತ್ಯಕ್ಕೆ ಭೂಮಿಕೆ ಸಿದ್ಧವಾಗುತ್ತದೆ. ಇದರಲ್ಲಿ ವ್ಯಕ್ತಿಯ ಆಂತರಿಕ ಆಕಾಂಕ್ಷೆಯಂತೆ ಸಮಾಜದ ಸಾಮೂಹಿಕ ಅಪೇಕ್ಷೆ ಅಷ್ಟೇ ಮಹತ್ವದ್ದಾಗಿದೆ. ಸಮಾಜದಲ್ಲಿ ಪರಂಪರೆಯ ಪ್ರೀತಿ, ಪ್ರಗತಿಯ ಒಲವುಗಳು ಉದಯವಾದರೆ ಸಾಹಿತ್ಯೋದಯಕ್ಕೆ ಕಾರಣವುಂಟಾಗುತ್ತದೆ. ಅದರೊಡನೆ ಒಂದಿಲ್ಲೊಂದು ಬಗೆಯಲ್ಲಿ ಸಾಮಾಜಿಕ ಜೀವನದಲ್ಲಿ ಸಂಘಟನೆ ಎಂಬುದಾಗಬೇಕು. ಅದರಿಂದ ವಿದ್ಯಾಬುದ್ಧಿಯನ್ನು ಪಡೆಯುವ ಸಾಧನಗಳು, ಕಲೆಯನ್ನು ಕುದುರಿಸಿಕೊಳ್ಳುವ ಸೌಕರ್ಯಗಳು, ಶೌರ್ಯ–ಧೈರ್ಯವನ್ನು ತೋರಿಸುವ ಸಂದರ್ಭಗಳು ಹೆಚ್ಚಬೇಕು. ಸಾಹಿತ್ಯವು ಅವುಗಳಿಂದ ಸ್ಫೂರ್ತಿಹೊಂದಿ ಅವುಗಳಿಗೆ ಸ್ಫುರಣ ಕೊಡಲು ಜನ್ಮತಾಳುತ್ತದೆ. ಜೀವನವಿಕಾಸವಿಲ್ಲದೆ ಸಾಹಿತ್ಯದ ಉದಯವೂ ಇಲ್ಲ, ವಿಕಾಸವೂ ಇಲ್ಲ. ಅಲೌಕಿಕ ವ್ಯಕ್ತಿಗಳು ಕುಂಠಿತವಾದ ಜೀವನವನ್ನೂ ಸಾಹಿತ್ಯವನ್ನೂ ತಮ್ಮ ಆಂತರಿಕಬಲದಿಂದ ವಿಕಾಸಗೊಳಿಸಬಹುದು, ಯುಗಪುರುಷರಾಗಿ ಹೊಸ ಸಂಪ್ರದಾಯಗಳನ್ನು ಸ್ಥಾಪಿಸಬಹುದು. ಆದರೆ ಸಾಮಾನ್ಯವಾಗಿ ಸಾಹಿತ್ಯನಿರ್ಮಾಣದ ಸ್ಥಾಯಿಗೆ ವಿಕಾಸಗೊಳ್ಳುತ್ತಿರುವ ಜೀವನವೇ ಉದ್ದೀಪಕವಾಗುತ್ತದೆ. ನಿರ್ಮಾಣವಾದ ಸಾಹಿತ್ಯವನ್ನು ಮೆಚ್ಚಬಲ್ಲ ರಸಿಕರೂ ಆಶ್ರಯಕೊಟ್ಟು ಪ್ರೋತ್ಸಾಹಿಸುವ ಅರಸರೂ ಇನ್ನೂ ಹೆಚ್ಚಾದ ಸಾಹಿತ್ಯನಿರ್ಮಾಣಕ್ಕೆ ಕಾರಣರಾಗುತ್ತಾರೆ. ಬರೀ ಜನದ ಮಾತಾಗಿ ಯಾವುದೊಂದು ಭಾಷೆ ಇದ್ದರೆ, ಜನದ ಮಾತಾಗಿರದ ಬೇರೆಯಾದೊಂದು ಭಾಷೆ ಪರಂಪರೆಯಿಂದ ಗ್ರಂಥರಚನೆಯ ಭಾಷೆಯಾಗಿದ್ದರೆ, ಜನದ ಮಾತಿಗೆ ಗ್ರಂಥರಚನೆಯ ನುಡಿಯಾಗಿಸಿ ಮನ್ನಣೆಕೊಡಲು ಕ್ರಾಂತಿಕಾರಕವಾದ ಘಟನೆಗಳೂ ಆಂದೋಲನಗಳೂ ಉಂಟಾಗುತ್ತವೆ. ಹೊಸ ದೃಷ್ಟಿ ತಲೆದೋರುತ್ತದೆ, ಹಳೆಯ ದೃಷ್ಟಿಯೊಡನೆ ತಾಕಲಾಡಿ ಮಿನುಗುತ್ತದೆ. ಆಗ ಸಾಹಿತ್ಯೋದಯಕ್ಕೆ ತಕ್ಕ ಸಂದರ್ಭವು ಒದಗುವುದು. ಹೊಸ ತತ್ತ್ವ, ಧರ್ಮ ಇವುಗಳ ಪ್ರಸಾರಕ್ಕೆ ಹೊಸ ವಾಹಕವಾಗಿ ಜನಭಾಷೆ ತಲೆಯೆತ್ತುವುದು. ಹೀಗೆ ಜನಜೀವನದ ತಿದ್ದುಪಾಡಿಗೆ ಮತ್ತು ಮತಪ್ರಚಾರಕ್ಕೆ ಒಂದು ಸಾಧನವಾಗಿ ಜನಭಾಷೆಯಲ್ಲಿ ಸಾಹಿತ್ಯವು ಕಣ್ದೆರೆಯುತ್ತದೆ. ಒಟ್ಟಿನಲ್ಲಿ ಬಾಹ್ಯಜೀವನದ ವ್ಯವಸ್ಥೆಯ ಗುರುತಾದ ನಾಗರಿಕತೆ, ಆಂತರಿಕಜೀವನದ ಗುರುತಾದ ಸಂಸ್ಕೃತಿ–ರಸಿಕತೆಗಳು

ಒಂದು ಮಟ್ಟಕ್ಕೆ ಬಂದಾಗ ಮಾತ್ರ ಸಾಹಿತ್ಯವು ಉದಯವಾಗುತ್ತದೆ, ಪರಂಪರೆಯಾಗಿ ಮುನ್ನಡೆಯುತ್ತದೆ.

ಯಾವುದೊಂದು ಜನದ ಮಾತು ಸಾಹಿತ್ಯಪದವಿಗೆ ಏರಲು ಮೂರು ಕಾರಣಗಳು ಬೇಕೆಂದು ಶ್ರೀ ಬೇಂದ್ರೆಯವರು ಹೇಳಿದ್ದಾರೆ: (೧) ಶ್ರವಣಪ್ರಿಯ ಬಹುಜನಸಮಾಜ, (೨) ಪ್ರತಿಷ್ಠಾಪ್ರಿಯ ವಿದ್ವಾನ್ ಪಂಡಿತವರ್ಗ, (೩) ಕೀರ್ತಿಪ್ರಿಯ ಆಶ್ರಯಶೀಲ ರಾಜರು. ಇವುಗಳಲ್ಲಿ ಎರಡು ಕಾರಣಗಳು ಅನುಕೂಲವಿದ್ದರೆ ಮೂರನೆಯ ಕಾರಣವು ಅನುಕೂಲವಾಗುತ್ತ ಹೋಗುತ್ತದೆ, ಈ ತ್ರಿಕೂಟಕ್ಕೆ ಸಂಮತವಾದ ಭಾಷೆ ವಾಙ್ಮಯದಲ್ಲಿಳಿದು ಇತಿಹಾಸದಲ್ಲಿ ಸ್ಥಾನಪಡೆಯುತ್ತದೆ. ಆದರೆ ಆ ಮೂರನೆಯ ಕಾರಣವು ಅತಿ ಬಲಿಷ್ಠವಾಗಿದ್ದರೆ ಅದು ಅನುಕೂಲವಾಗುವುದು ಕಠಿಣವಾಗಿ ಇಷ್ಟಪರಿಣಾಮಕ್ಕೆ ಕಾಲಾವಧಿ ಹಿಡಿಯುತ್ತದೆ. ಎರಡು ಕಾರಣಗಳು ಒಕ್ಕಟ್ಟಾದರೆ ಮಾತ್ರ ಗೆಲವು ದೊರೆಯಲೇಬೇಕು. ಬಹುಜನದ ಭಾಷೆ ಪಂಡಿತರಿಗೆ ಮಾನ್ಯವಾದರೆ ರಾಜಾಶ್ರಯ ದೊರಕಿಸುವುದು ಕಠಿಣವಾಗಲಾರದು. ಪಾಲಿ ಮತ್ತು ಅರ್ಧಮಾಗಧಿಗಳ ಇತಿಹಾಸವು ಇದನ್ನೆ ಹೇಳುತ್ತದೆ. ಪಂಡಿತರು, ರಾಜರು ಒಂದಾದರೆ ಬಹುಜನಸಮಾಜವನ್ನು ಒಲಿಸಿಕೊಳ್ಳಬಹುದು. ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಇತಿಹಾಸವು ಇದನ್ನು ಹೇಳುತ್ತದೆ. ರಾಜರು, ಬಹುಜನಸಮಾಜವು ಒಂದುಗೂಡಿದರೆ ಪಂಡಿತರನ್ನು ಮಣಿಸಬಹುದು. ಅಪಭ್ರಂಶ ಮತ್ತು ದೇಶೀಯ ಭಾಷೆಗಳ ಇತಿಹಾಸವು ಈ ತತ್ತ್ವವನ್ನು ಸಾರುತ್ತದೆ. ಕರ್ನಾಟಕದಲ್ಲಿ ರಾಜರು ಮತ್ತು ಬಹುಜನಸಮಾಜ ಇವರ ಒಕ್ಕಟ್ಟಿನಿಂದ ಪಂಡಿತವರ್ಗವು ಸಂಸ್ಕೃತ, ಪ್ರಾಕೃತ, ಅಪಭ್ರಂಶಗಳ ವ್ಯೂಹದಿಂದ ಬೇಗನೆ ಹೊರಬಿದ್ದಿತೆಂದು ದೇಶೀಯ ಭಾಷೆಗಳಿಗೆ ಭಾಗ್ಯದ ದಿವಸವು ಬೇಗ ಬಂದಿತು. ದೇಶೀಯ ಭಾಷೆಗಳ ವಿಜಯವೆಂದರೆ ಬಹುಜನಸಮಾಜದ ವಿಜಯ. ಆದರೆ ಈ ವಿಜಯವು ದೊರಕಬೇಕಾದರೆ ಅನೇಕ ಯುದ್ಧಗಳಾದುವು.[1]

ಸರ್ವಸಾಮಾನ್ಯವಾಗಿ ಸಾಹಿತ್ಯೋದಯದ ಕಾರಣಗಳನ್ನು ಕುರಿತು ನಾವು ಹೇಳಿದ ಮಾತುಗಳೊಂದಿಗೆ ಭಾರತ ದೇಶದ ವಿಶೇಷ ಪರಿಸ್ಥಿತಿಯಲ್ಲಿ ಜನಭಾಷೆ ಸಾಹಿತ್ಯದ ಭಾಷೆ ಯಾವಾಗ ಆಯಿತು ಎಂಬ ವಿಚಾರದಲ್ಲಿ ಮೇಲಿನ ವಿಂಗಡಣೆ ತುಂಬ ವಿಚಾರಣೀಯವಾಗಿದೆ. ಹಿಂದಿನ ಸಾಹಿತ್ಯಪ್ರಪಂಚದ ಮೂರು ಘಟಕಗಳೆಂದರೆ ಶ್ರೋತೃಗಳು (ಬಹುಜನರು), ನಿರ್ಮಾಪಕರು (ಪಂಡಿತರು, ಕವಿಗಳು), ಆಶ್ರಯದಾತರು (ರಾಜರು). ಈ ಮೂವರಲ್ಲಿ ಸ್ವಭಾಷೆಯ ಸಾಹಿತ್ಯದ ಬಗ್ಗೆ ಅನುಕ್ರಮವಾಗಿ ಸಹೃದಯತೆ ಇಲ್ಲವೆ ಅಭಿರುಚಿ, ನಿರ್ಮಾಣಪ್ರೇರಣೆ, ಆಶ್ರಯಬುದ್ಧಿ ಈ ಗುಣಗಳು ತಲೆದೋರಬೇಕು. ಮೇಲಿನ ವಿವೇಚನೆಯಲ್ಲಿ ಹೇಳಲಾದ ಶ್ರವಣ-

1 ದ. ರಾ. ಬೇಂದ್ರೆ: ಜ್ಞಾನೇಶ್ವರಪೂರ್ವಕಾಲೀನ ಕಾನಡೀ ವಾಙ್ಮಯ (ಮಹಾರಾಷ್ಟ್ರ ಸಾಹಿತ್ಯ ಪರಿಷತ್ ಪತ್ರಿಕೆ, ೭-೪, ಪು. ೫೫-೫೬)

ಪ್ರಿಯತೆ ಅಭಿರುಚಿಯ ಅಂಗ, ಪ್ರತಿಷ್ಠಾಪ್ರಿಯತೆ ನಿರ್ಮಾಣಪ್ರೇರಣೆಯ ಅಂಗ, ಕೀರ್ತಿಪ್ರಿಯತೆ ಆಶ್ರಯಬುದ್ಧಿಯ ಅಂಗ ಎಂದು ವಿವರಿಸಬಹುದು. ಸ್ಥಿರವಾದ ಮೂಲಗುಣಗಳು ತಲೆದೋರಿದಾಗ ಅದರ ಅಂಗಭೂತವಾದ ಗುಣಗಳ ಪರಿಣಾಮ-ವಾಗಿ ಸಾಹಿತ್ಯವು ಉದಯವಾಗುತ್ತದೆ, ಸಾತತ್ಯದ ದಾರಿಯಲ್ಲಿ ಸಾಗುತ್ತದೆ. ಕೇವಲ ಅಂಗಭೂತವಾದ ಗುಣಗಳ ಸಮುಚ್ಚಯದಿಂದ ಸರಿಯಾದ ಸಾಹಿತ್ಯ ಉದಯವಾಗ-ಲಿಕ್ಕಿಲ್ಲ, ಸಾತತ್ಯಕ್ಕೂ ಬಾಧೆ ಬರಬಹುದು. ಮೂರು ಕಾರಣಗಳು ಕೂಡಿದರೆ ಸರಿಯೆ, ಎರಡು ಕೂಡಿದಾಗ ಮೂರನೆಯದನ್ನು ಹೇಗೆ ಅನುಕೂಲಗೊಳಿಸುತ್ತವೆ ಎಂಬ ಪೃಥಕ್ಕರಣೆ ಬೆಲೆಯುಳ್ಳದಾಗಿದೆ. ಆದರೆ ಅದರಲ್ಲಿ ಬಂದಿರುವ ಬಹುಜನಸಮಾಜ ಎಂದರೇನು, ಅದು ಅಷ್ಟು ಪ್ರಭಾವಿಯಾದ ಶಕ್ತಿಯಾಗಿತ್ತೇ ಎಂಬುದನ್ನು ಚರ್ಚಿಸ-ಬೇಕು. ನಮಗೆ ತೋರುವ ಮಟ್ಟಿಗೆ ಹಿಂದಿನ ಕಾಲದಲ್ಲಿ ಬಹುಜನಸಮಾಜ ಅಶಿಕ್ಷಿತ-ವಾದರೂ ಸಹೃದಯವಾಗಿತ್ತು, ಆದರೆ ತಾನಾಗಿ ಒಂದು ಪ್ರಭಾವವಾಗುವಷ್ಟು ಜಾಗೃತ ಶಕ್ತಿಯಾಗಿರಲಿಲ್ಲ. ಬಹುಜನಸಮಾಜದ ವಿಜಯವಾದಲ್ಲಿ ಆಯಾ ಕಾಲದ ಪ್ರಮುಖರಲ್ಲಿ ಬಹುಜನದೃಷ್ಟಿಯುಳ್ಳವರ ವಿಜಯವಾಗಿದೆ ಎನ್ನುವುದು ಹೆಚ್ಚು ವಿಹಿತ. ತಮ್ಮ ನುಡಿಯಲ್ಲಿ ಸಾಹಿತ್ಯ ನಿರ್ಮಾಣವಾಗಲು, ಸಂಸ್ಕೃತಾದಿಗಳ ಮೋಹ-ವನ್ನು ಪಂಡಿತರು ಬಿಡಲು, ಅದನ್ನು ನೋಡಿ ಬಹುಜನ ಮೆಚ್ಚಿದೆ. ನೇರವಾಗಿ ಹೊಸ ಮತದ ಸಂದೇಶವನ್ನರಿತು ಅದನ್ನು ಸ್ವೀಕರಿಸಿದೆ. ಸ್ವಭಾಷೆಯ ಸಾಹಿತ್ಯವನ್ನು ಗಮಕಿಗಳ ಬಾಯಿಂದ ಕೇಳಿ ಅಭಿರುಚಿಯನ್ನು ಬೆಳೆಸಿಕೊಂಡಿದೆ. ಇತರ ಭಾಷೆಗಳಲ್ಲಿ ಹೇಳಿದ್ದು ಅರ್ಥವಾಗದೆ, ಹೃದಯ ಕರಗದೆ, ನಿಷೇಧರೂಪವಲ್ಲಿ ಪಂಡಿತರ ಮೇಲೆ ಪ್ರಭಾವವನ್ನೂ ಬೀರಿದೆ. ಆದರೆ ಜನಭಾಷೆಯೆ ಸಾಹಿತ್ಯದ ಭಾಷೆಯಾಗಬೇಕೆಂದು ಆಂದೋಲನ ಹೂಡುವಷ್ಟು ಸ್ವಂತ ಪ್ರೇರಣೆ ಇಲ್ಲವೆ ತಿಳಿವಳಿಕೆ ಬಹುಜನದಲ್ಲಿ ಸಾಮಾನ್ಯವಾಗಿ ತೋರಿದಂತಿಲ್ಲ. ಯಾವ ಕಾಲಕ್ಕೆ ಯಾವ ಎರಡರ ಪ್ರಭಾವದಿಂದ ಮೂರನೆಯದು ಅನುಕೂಲವಾಯಿತು ಎಂಬ ಬಗ್ಗೆ ಶ್ರೀ ಬೇಂದ್ರೆಯವರು ಕೊಟ್ಟ ಉದಾಹರಣೆಗಳ ಪರಾಮರ್ಶೆ ಈಗ ಪ್ರಕೃತವಲ್ಲ. ಕನ್ನಡ ಸಾಹಿತ್ಯದ ಉದಯ-ಸಂದರ್ಭದಲ್ಲಿ ಯಾವ ಕಾರಣಗಳು ಕೈಗೊಟ್ಟುವು ಎಂಬುದು ನಮಗೆ ಪ್ರಸ್ತುತವಾದುದು. ಅದನ್ನು ಈ ಮುಂದೆ ಉಚಿತ ಸಮಯದಲ್ಲಿ ಎತ್ತಲಾಗುವುದು.

೨. ಕನ್ನಡ ಸಾಹಿತ್ಯೋದಯ

(ಕನ್ನಡ ಸಾಹಿತ್ಯದ ಉದಯವು ಯಾವ ಕಾಲದಲ್ಲಿ ಆಯಿತು, ಅದಕ್ಕೆ ಯಾವ ಕಾರಣಗಳು ಕೂಡಿಬಂದುವು) ಎಂಬ ಪ್ರಶ್ನೆಯಷ್ಟು ಉತ್ತರ ಸರಳವಾಗಿಲ್ಲ. ಖಚಿತವಾದ ಆಧಾರಗಳಂತೂ ಇಲ್ಲ. ದೊರೆತ ಸಾಮಗ್ರಿಯ ಬಲದಿಂದ ಯಾರೂ ತಮಗೆ ತಿಳಿದಂತೆ ಊಹೆಯ ಕುದುರೆಯನ್ನು ಓಡಿಸಬಹುದು. ಸುನಿಶ್ಚಿತವಾದ ಒಂದು ಸಂಗತಿಯೆಂದರೆ ಕ್ರಿ.ಶ. ೯ನೆಯ ಶತಮಾನದಲ್ಲಿ ರಚಿತವಾದ ‘ ಕವಿರಾಜಮಾರ್ಗ ’ವು ನಮಗೆ ನಿರ್ವಿ-

ವಾದವಾಗಿ ದೊರೆತ ಮೊದಲನೆಯ ಗ್ರಂಥವಾದರೂ ಕನ್ನಡದಲ್ಲಿ ಅದು ಮೊದಲನೆಯ ಗ್ರಂಥವಲ್ಲ. ಅದಕ್ಕಿಂತ ಹಿಂದೆ ಕನ್ನಡದಲ್ಲಿ ಸಾಹಿತ್ಯ ಹುಟ್ಟಿತ್ತು ಮಾತ್ರವಲ್ಲ, ಒಂದು ಶಿಷ್ಟಸಂಪ್ರದಾಯವಾಗಿ ರೂಪಗೊಳ್ಳುತ್ತಲಿತ್ತು. ಇದಕ್ಕೆ 'ಕವಿರಾಜಮಾರ್ಗ'ದಲ್ಲಿಯೂ ಬೇರೆಯಾಗಿಯೂ ಪ್ರಮಾಣಗಳು ಸಿಗುತ್ತವೆ. ಆದರೆ ಎಷ್ಟು ಹಿಂದೆ ಎಂಬುದರ ಅರಿವಿಲ್ಲ. ಕನ್ನಡ ಸಾಹಿತ್ಯ ಬಹಳ ಪ್ರಾಚೀನವಾಗಿತ್ತು ಎಂದು ಅಲ್ಪ ಆಧಾರಗಳ ಮೇಲಿಂದ ಸಾಧಿಸುವುದು ಅಂಥ ಹೆಮ್ಮೆಯ ಮಾತಲ್ಲ. ಪ್ರಾಚೀನತೆಯಲ್ಲಿಯೆ ಸಾಹಿತ್ಯದ ಶ್ರೇಷ್ಠತೆಯ ಅಳತೆಗೋಲಿಲ್ಲ. ಇದನ್ನು ನೆನೆದು ದೊರೆತಿರುವ ಆಧಾರಗಳು ತೋರಿದ ದಾರಿಗುಂಟ ಒಂದು ಮಿತಿಯಲ್ಲಿ ಊಹೆಯನ್ನು ನಡೆಸಿ ಸಾಹಿತ್ಯದ ಹಳಮೆ-ಯನ್ನು ಅರಿಯಬೇಕು. ಆ ಆಧಾರಗಳನ್ನು ಹೀಗೆ ಪರಿವಿಡಿಗೊಳಿಸಬಹುದು: (೧) ಅನ್ಯದೇಶ ಇಲ್ಲವೆ ಅನ್ಯಭಾಷೆಯಲ್ಲಿಯ ಪ್ರಾಚೀನ ಅವಶೇಷಗಳು, (೨) ಕರ್ನಾಟಕ-ದಲ್ಲಿಯ, ಅದರಲ್ಲಿಯೂ ಕನ್ನಡದಲ್ಲಿ ಬರೆದ, ಪ್ರಾಚೀನ ಶಾಸನಗಳು, (೩) 'ಕವಿರಾಜ-ಮಾರ್ಗ'ದಲ್ಲಿ ದೊರೆತ ಆಧಾರಗಳು, (೪) ಇತರ ಗ್ರಂಥಗಳಲ್ಲಿ ದೊರೆತ ಆಧಾರಗಳು. ಇವನ್ನು ಪರೀಕ್ಷಿಸುವಾಗ ಹೊಳೆಯುವ ಊಹೆಗಳನ್ನು ಅಲ್ಲಲ್ಲಿ ನಿರೂಪಿಸಲಾಗುವುದು.

ಅನ್ಯದೇಶ್ಯ ಪ್ರಾಚೀನ ಅವಶೇಷಗಳು

(೧) ವೇದಪೂರ್ವಕಾಲ ಇಲ್ಲವೆ ವೇದಕಾಲದಿಂದಲೂ ಕನ್ನಡನಾಡುನುಡಿಗಳು ಅಸ್ತಿತ್ವದಲ್ಲಿರಬೇಕೆಂಬ ಊಹೆಯ ಸಾಹಸವನ್ನು ತಮ್ಮ ರೀತಿಯಲ್ಲಿ ಹಲಕೆಲವರು ಮಾಡಿದ್ದಾರೆ. ನಮ್ಮ ಮಟ್ಟಿಗೆ ಕನ್ನಡ ಭಾಷೆ ಮತ್ತು ಅದನ್ನಾಡುವ ಜನವುಳ್ಳ ದೇಶ ಇವು ಕ್ರಿ.ಶ. ಪೂರ್ವದ ೩ನೆಯ ಶತಕದಿಂದಲಂತೂ ಇದ್ದುವೆಂಬುವಕ್ಕೆ ಎಲ್ಲರೂ ಒಪ್ಪಬಹುದಾದ ನಿದರ್ಶನಗಳಿರುತ್ತವೆ.[1] ಭಾಷೆ ಇದ್ದ ಮಾತ್ರಕ್ಕೆ ಗ್ರಂಥಸ್ಥವಾದ ಸಾಹಿತ್ಯವು ಇರಲೇಬೇಕೆಂದಿಲ್ಲ. ಇಜಿಪ್ತ ದೇಶದಲ್ಲಿ ಸಿಕ್ಕ ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳಿವೆ ಎಂಬ ಕಾರಣದಿಂದ ಕನ್ನಡವು ಕ್ರಿ.ಶ. ೨ನೆಯ ಶ.ಕ್ಕಿಂತ ಮುಂಚೆ ದಕ್ಷಿಣ ಕನ್ನಡ ಸಮುದ್ರತೀರದಲ್ಲಿ ವ್ಯವಹಾರಭಾಷೆಯಾಗಿತ್ತೆಂದು ಹಲವು ಪಂಡಿತರು ಸಿದ್ಧಗೊಳಿಸಿದ್ದಾರೆ. ಇವರಲ್ಲಿ ಶ್ರೀ ಗೋವಿಂದ ಪೈಗಳು ಗ್ರೀಕ್ ಮೂಲವನ್ನೇ ಪರಿ-ಶೋಧಿಸಿ ಅಲ್ಲಿಯ ಮಾತು ಕನ್ನಡವೆಂಬುದನ್ನು ತೋರಿಸಿದ್ದಾರೆ.[2] ಈ ವಿಷಯದಲ್ಲಿ ಮತಭೇದವಿದೆ. ಸದ್ಯಕ್ಕೆ ಇದನ್ನು ಗೃಹೀತವೆಂದು ಭಾವಿಸಿದರೂ ಕನ್ನಡ ಸಾಹಿತ್ಯವು ಆ ಕಾಲಕ್ಕೆ ಉದಯವಾಗಿತ್ತು ಎಂದು ಹೇಳಬರುವುದಿಲ್ಲ. ಯಾಕೆಂದರೆ ವ್ಯವಹಾರದಲ್ಲಿದ್ದ ಮಾತ್ರಕ್ಕೆ ಯಾವುದೊಂದು ಭಾಷೆಗೆ ಸಾಹಿತ್ಯವಿದ್ದೇ ತೀರಬೇಕೆಂದಿಲ್ಲ. ಅಲ್ಲದೆ ಆ ಪ್ರಹಸನದಲ್ಲಿ ಕನ್ನಡವೆನ್ನಬಹುದಾದ ಶಬ್ದ ಹಾಗೂ ವಾಕ್ಯಗಳು ಯಾವುವೆಂಬ ಬಗ್ಗೆ

---

1 R. S. Mugali: The Heritage of Karnataka (Chapters 1 & 2, Ancient Karnataka).

2 ಗೋವಿಂದ ಪೈ: ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳು (ಪ್ರ.ಕ. ೧೧–೧).

ಸಂಶೋಧಕರಲ್ಲಿ ಏಕವಾಕ್ಯತೆಯಿಲ್ಲ. ಆದುದರಿಂದ ಮಾತಿನ ಭಾಷೆ ವಾಙ್ಮಯದ ಪೀಠವನ್ನೇರಿತ್ತೋ ಹೇಗೆಂಬುದನ್ನು ನೆಲೆಗೊಳಿಸುವಂತಿಲ್ಲ. ಶ್ರೀ ಗೋವಿಂದ ಪೈಗಳ ಅಭಿಪ್ರಾಯದಂತೆ ಈ ಪ್ರಹಸನಕಾರನು ನಮ್ಮ ನಾಡಿಗೆ ಬಂದು ಪ್ರತ್ಯಕ್ಷವಾಗಿ ಕನ್ನಡ ಸೊಲ್ಲನ್ನು ಕೇಳಿದವನಾಗದೆ ಗ್ರೀಕ್ ವ್ಯಾಪಾರಿಗಳಿಂದ ತಿಳಿದುಕೊಂಡವನೆಂಬುದು ನಿಜ-ವಾದರೆ ಈ 'ಕೈಕಡದ ಹರದ'ನನ್ನು ನಂಬುವುದು ಕಷ್ಟ. ಮೇಲಿನದು ಅನ್ಯದೇಶದಲ್ಲಿ ದೊರೆತ ಅವಶೇಷವಾದರೆ ಅನ್ಯಭಾಷೆಯಲ್ಲಿ ದೊರೆತ ಅವಶೇಷವೊಂದನ್ನು ಶ್ರೀ ಗೋವಿಂದ ಪೈಗಳು ಮಾರ್ಮಿಕವಾಗಿ ಪರೀಕ್ಷಿಸಿದ್ದಾರೆ. ಅದೆಂದರೆ 'ಗಾಥಾಸಪ್ತಶತಿ' ಎಂಬ ಪ್ರಾಕೃತ ಭಾಷೆಯಲ್ಲಿಯ ಪದ್ಯಕಾವ್ಯ. ಇದನ್ನು ಸಂಕಲನಮಾಡಿದ ಹಾಲರಾಜನು ಕುಂತಲಜನಪದೇಶ್ವರ ಎಂದು ತನ್ನನ್ನು ಕರೆದುಕೊಂಡ ಶಾತವಾಹನವಂಶದ ರಾಜನು. ಇವನು ಕ್ರಿ.ಶ. ೧-೨ನೆಯ ಶತಕದಲ್ಲಿದ್ದವನೆಂದು ಅವರ ಅಭಿಪ್ರಾಯವಿದೆ. ಇವನ ಆ ಕಾವ್ಯದಲ್ಲಿ ಪೊಟ್ಟ (ಹೊಟ್ಟೆ), ತುಪ್ಪ ಎಂಬ ನಾಮಪದಗಳಲ್ಲದೆ ಪೆಟ್ಟು (ಹೊಡೆ), ತೀರ್ (ಶಕ್ಯವಾಗು) ಎಂಬ ಧಾತುಗಳನ್ನು ಪ್ರಾಕೃತ ರಚನೆಯಲ್ಲಿ ಬಳಸಿಕೊಂಡಿದೆ. ನಾಮಪದಗಳನ್ನು ಆಗ ಬಳಕೆಯಲ್ಲಿದ್ದ ಕನ್ನಡದಿಂದ ತೆಗೆದುಕೊಂಡಿರಬಹುದು, ಆದರೆ ಕ್ರಿಯಾಪದದ ಮೂಲಪ್ರಕೃತಿಗಳನ್ನು ಪ್ರಾಕೃತವು ತನಗಿಂತ ಸಮೃದ್ಧವಾದ ಅಂದರೆ ಸಾಹಿತ್ಯಸಂಪತ್ತಿಯುಳ್ಳ ಭಾಷೆಯಿಂದಲೇ ಎರವಲಾಗಿ ತೆಗೆದುಕೊಳ್ಳುವುದು ಯುಕ್ತವಾದ ಕಾರಣ, ೧-೨ನೆಯ ಶ.ಕ್ಕಿಂತ ಮುಂಚಿನಿಂದಲೇ ಕನ್ನಡದಲ್ಲಿ ಕಾವ್ಯ-ಸಾಹಿತ್ಯವಿದ್ದಿರಬೇಕೆಂದು ಅವರು ಊಹಿಸಿದ್ದಾರೆ.[1] ಸಂಸ್ಕೃತ-ಪ್ರಾಕೃತ ಭಾಷೆಗಳಲ್ಲಿ ಸೇರಿಕೊಂಡ ಕನ್ನಡ ಮುಂತಾದ ದ್ರಾವಿಡವರ್ಗದ ಶಬ್ದಗಳು ಯಾವುವು, ಯಾವ ಕಾಲಕ್ಕೆ ಯಾವ ಪರಿಸ್ಥಿತಿಯಲ್ಲಿ ಸೇರಿದುವು, ಅವನ್ನು ನಿಶ್ಚಿತಗೊಳಿಸುವ ಕ್ರಮವೇನು ಎಂಬುದು ಜಟಿಲವಾದ ಪ್ರಶ್ನೆಯಾಗಿದೆ. ಅದಕ್ಕೆ ವ್ಯಾಸಂಗ ಹೆಚ್ಚಬೇಕು. ಅಲ್ಲಿಯ ವರೆಗೆ ಈ ಊಹೆ ವಿಚಾರಣೀಯವೆನ್ನಬಹುದಾದರೂ ನಿರ್ಣಾಯಕವಾಗಲಾರದು. ಸಾಹಿತ್ಯಪದವಿಗೇರದ ವ್ಯವಹಾರಭಾಷೆಗಳಿಂದ ಸಾಹಿತ್ಯವುಳ್ಳ ಭಾಷೆಗಳು ನಾಮ-ಪದಗಳನ್ನು ಮಾತ್ರ ಎರವಲಾಗಿ ತೆಗೆದುಕೊಳ್ಳುತ್ತವೆ, ಕ್ರಿಯಾಪದಗಳನ್ನಲ್ಲ ಎಂಬು-ದನ್ನು ಸರ್ವಂಕಷವಾದ ಅಭ್ಯಾಸದಿಂದ ಭಾಷಾಪಂಡಿತರು ಸಿದ್ಧಮಾಡುವವರೆಗೆ ಅದು ವಿವಾದ್ಯವೆಂದೇ ಹೇಳಬೇಕಾಗುತ್ತದೆ.

ಪ್ರಾಚೀನ ಶಾಸನಗಳು

(೨) ಕರ್ನಾಟಕದಲ್ಲಿ ಕ್ರಿ.ಪೂ. ೩ನೆಯ ಶ.ದ ಅಶೋಕನ ಕಾಲದಿಂದಲೂ ಶಿಲಾಲಿಪಿಗಳೂ ತಾಮ್ರಪಟಗಳೂ ಸಿಕ್ಕಿವೆ. ಅವು ಪ್ರಾಕೃತ ಇಲ್ಲವೆ ಸಂಸ್ಕೃತ ಭಾಷೆ-ಯಲ್ಲಿ ಬರೆದುವು. ಕನ್ನಡ ಭಾಷೆಯಲ್ಲಿಯೇ ಬರೆದ ಶಾಸನಗಳು ತೀರ ಹಳೆಯವು ಕ್ರಿ.ಶ. ೬-೭ನೆಯ ಶ.ದಿಂದಲೇ ದೊರೆಯುತ್ತವೆಂದು ಮೊದಲು ಗ್ರಹಿಸಲಾಗಿತ್ತು. ಹಲ್ಮಿಡಿಯ ಶಾಸನವು ದೊರೆತಮೇಲೆ ಕ್ರಿ.ಶ. ೫ನೆಯ ಶ.ದವರೆಗೆ ಹಳಮೆಯ

1 ಗೋವಿಂದ ಪೈ: ಕನ್ನಡ ಸಾಹಿತ್ಯದ ಪ್ರಾಚೀನತೆ (ಉದಯಭಾರತ, ೨-೫, ಪು. ೧೧೬-೭)

ಗಡುವು ಹಿಂದೆ ಸರಿಯಿತು. ಕ್ರಿ.ಶ. ೨, ೩, ೪ನೆಯ ಶ.ಗಳಲ್ಲಿ ನಿರ್ದಿಷ್ಟ ಶಕವನ್ನು ಹೇಳಿಕೊಂಡ ೩–೪ ಕನ್ನಡದ ಶಾಸನಗಳೇನೋ ಇವೆ.[1] ಆದರೆ ಕೆಲವರು ಅವುಗಳ ಕಾಲ ಕೃತಕವೆಂದು ಅಭಿಪ್ರಾಯಪಟ್ಟಿದ್ದಾರೆ.[2] ಬೇರೆ ಪಂಡಿತರು ಕೃತಕವೆಂದ, ಆದರೆ ರಾಯಿಸರು ೫ನೆಯ ಶ.ದವೆಂದು ಹೇಳಿದ ಶಾಸನಗಳಲ್ಲಿ ಒಂದು ಗದ್ಯವಿದ್ದರೆ ಇನ್ನೊಂದು ಅಂದವಾದ ಪದ್ಯವಾಗಿದೆ.[3] ಕ್ರಿ.ಶ. ೭ನೆಯ ಶ.ದಿಂದ ೫ನೆಯ ಶ.ದಲ್ಲಿಯ ಈ ಪದ್ಯದವರೆಗೆ ಲಭಿಸಿದ ಕೆಲವು ಶಾಸನಪದ್ಯಗಳನ್ನು ಉದಾಹರಿಸಿ ಶ್ರೀ ಗೋವಿಂದ ಪೈಗಳು ಹೀಗೆ ತೀರ್ಮಾನಿಸುತ್ತಾರೆ: 'ಈ ಶೀಲಾಲೇಖಗಳಿಗೆ ಕಡಿಮೆ ಅಂದರೆ ೨–೩ ಆದರೂ ಶತಮಾನಗಳ ಹಿಂದಣಿಂದಲೇ ಅಂದರೆ ಕ್ರಿ.ಶ. ೨–೩ನೆಯ ಶತಕದಿಂದಲಾದರೂ ಸಂಸ್ಕೃತಮಿಶ್ರವಾದ ಹಾಗೂ ಸಂಸ್ಕೃತಛಂದೋಬದ್ಧವಾದ ಕನ್ನಡ ಸಾಹಿತ್ಯವಿದ್ದಿರಬೇಕು.'[4] ಕನ್ನಡದಲ್ಲಿ ಸಾಕಷ್ಟು ಸಮೃದ್ಧವಾದ ಸಾಹಿತ್ಯವಿರದ ಮುಂಚೆ ಶಾಸನಗಳು ರಚಿಸಲ್ಪಡವು, ಬೇಕಾದಷ್ಟು ಪದ್ಯಸಾಹಿತ್ಯವಿರದೆ ಪದ್ಯಶಾಸನಗಳ ರಚನೆಯಾಗದು; ಇಲ್ಲಿಯ ಪದ್ಯಶಾಸನಗಳಲ್ಲಿ ಹಲವು ಸಂಸ್ಕೃತದಲ್ಲಿಯೂ ದೊರೆಯದ ಸಂಸ್ಕೃತ ವೃತ್ತಗಳಲ್ಲಿವೆ, ಶೈಲಿಯಲ್ಲಿ ಸಂಸ್ಕೃತ ಶಬ್ದಗಳ ಹೆಚ್ಚಳವಿದೆ, ಈ ಮೊದಲು ಅಚ್ಚಗನ್ನಡ ಛಂದಸ್ಸು, ಶೈಲಿ ಇವುಗಳಿಂದ ಪ್ರಚುರವಾದ ಒಂದು ಕನ್ನಡ ಸಾಹಿತ್ಯ ಯುಗವು ಗತಿಸಿಹೋಗಿರಬೇಕು ಎಂದು ಮುಂತಾಗಿ ತಮ್ಮ ತೀರ್ಮಾನವನ್ನು ಸಮರ್ಥಿಸುತ್ತ ಅವರು ವಾದಿಸಿದ್ದಾರೆ. ಇದರಂತೆ ಕ್ರಿ.ಶ. ೬ನೆಯ ಶ.ದಿಂದ ೩ನೆಯ ಶ.ದ ವರೆಗೆ ಅಂದರೆ ಅವರ ಅಭಿಪ್ರಾಯದಲ್ಲಿ ಕ್ರಿ.ಶ. ೨೬೫–೨೮೨ರೊಳಗೆ ರಚಿಸಲ್ಪಟ್ಟಿರಬಹುದಾದ ಹಲ್ಮಿಡಿಯ ಶಾಸನದವರೆಗೆ ದೊರೆತ ಗದ್ಯಶಾಸನಗಳನ್ನು ಕೊಟ್ಟು 'ಹಲ್ಮಿಡಿಯ ಶಿಲಾಲೇಖದ ಕ್ರಿ.ಶ. ೩ನೆಯ ಶತಕಕ್ಕೆ ಸಾಕಷ್ಟು ಹಿಂದಿನಿಂದಲೇ ಕನ್ನಡದಲ್ಲಿ ಸಂಸ್ಕೃತಮಿಶ್ರವಾದ (ಅತ ಏವ ಸಂಸ್ಕೃತಛಂದೋಬದ್ಧವಾದ) ಕನ್ನಡ ಸಾಹಿತ್ಯವು ಇದ್ದಿರಬೇಕು' ಎಂದು ಅವರು ನಿರ್ಣಯಕ್ಕೆ ಬಂದಿದ್ದಾರೆ.[5] ಇದಕ್ಕೆ ಅವರ ವಾದಸರಣಿ ಬಹುಶಃ ಹಿಂದಿನಂತೇ ಇದೆ. ಹೆಚ್ಚಿನದಾಗಿ ಹೇಳಿದ ಅಂಶವೆಂದರೆ ವಿಸ್ತಾರವಾದ ಸಾಹಿತ್ಯವನ್ನನುಸರಿಸಿ ಬಂದ ವ್ಯಾಕರಣಬದ್ಧವಾದ ಭಾಷೆ ಪ್ರಚಾರದಲ್ಲಿ ಇರದೆ ಶಾಸನಗಳಲ್ಲಿ ಅದು ಬಳಸಲ್ಪಡದು ಎಂಬುದು. ಈ ವಿಷಯದ ಚರ್ಚೆಯಲ್ಲಿ ಶಾಸನಗಳ

---

1 E.C. Vol. III Nj 110 (103 A.D.), Nj 199 (189 A.D.), Nj 112 (266 A.D.), E.C. Vol. VII SK 52 (357 A.D.), E.C. Vol. 1 CG1 (466 A.D.)

2 A. N. Narasimhia: GOKI (pp. XIV–XV preface)

3 E.C. Vol. VI CM 50, Vol. XI Cd 43.

4 ಗೋವಿಂದ ಪೈ: ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು, ಪು. ೧೩೧)

5 ಅದೇ, ಪು. ೧೩೪.

ಕಾಲನಿರ್ಣಯ, ಆಮೇಲೆ ಸಾಹಿತ್ಯದ ಪ್ರಾಚೀನತೆಯನ್ನು ಕುರಿತ ವಾದಸರಣಿ ಇವು ಒಳಗೊಳ್ಳುತ್ತವೆ. ಕ್ರಿ.ಶ. ೭೦೦ರವೆಂದು ಹೇಳಿದ ಪದ್ಯಶಾಸನಗಳ ಕಾಲ ವಾದಗ್ರಸ್ತ-ವಾಗಿಲ್ಲ, ಆದರೆ ತಮಟಕಲ್ಲಿನ ಶಾಸನಪದ್ಯದ ಕಾಲ ಕ್ರಿ.ಶ. ೫೦೦ ಎಂಬುದು ವಾದಕ್ಕೆ ಬಿದ್ದಿದೆ. ಗದ್ಯಶಾಸನಗಳಲ್ಲಿ ತೇದಿಯನ್ನು ನೇರವಾಗಿ ಹೇಳದಿರುವ ಅನೇಕ ಶಾಸನಗಳಿವೆ. ಅವನ್ನು ಇತರ ಪ್ರಮಾಣಗಳಿಂದ ಗೊತ್ತುಪಡಿಸುವಲ್ಲಿ ಗಂಗ–ಕದಂಬ ರಾಜರ ಅರಸೊತ್ತಿಗೆಯ ಕಾಲವನ್ನು ತಾವು ನಿರ್ಣಯಿಸಿದಂತೆ ಅವರು ತೆಗೆದುಕೊಂಡಿದ್ದಾರೆ. ಇದರಿಂದ ಹಲ್ಮಿಡಿಯ ಶಾಸನವು ೬ನೆಯ ಶ.ಕ್ಕೆ ಸಂಬಂಧಪಟ್ಟುದಾಗಿದೆ. ಇದರ ಇತ್ಯರ್ಥವನ್ನು ತಜ್ಞರು ಮಾಡಬಲ್ಲರು. ನಮ್ಮ ಮಟ್ಟಿಗೆ ಕ್ರಿ.ಶ. ೫ನೆಯ ಶತಕಕ್ಕಿಂತ ಹಿಂದೆ ಕನ್ನಡ ಶಾಸನಗಳು ಇದ್ದುದು ಅಸಂಭವವಲ್ಲವಾದರೂ ಸದ್ಯಕ್ಕೆ ಅನೇಕರಿಗೆ ಒಪ್ಪಿಗೆಯಾದ ೫ನೆಯ ಶ.ದ ಗಡುವನ್ನು ದಾಟದಿರುವುದು ಒಳ್ಳೆಯದು. ಪ್ರಾಚೀನತೆಯ ಸಂಬಂಧದಲ್ಲಿ, ತಕ್ಕಮಟ್ಟಿಗೆ ಸಂಸ್ಕಾರಹೊಂದಿದ ಶಾಸನಪದ್ಯವಾಗಲಿ ಗದ್ಯವಾಗಲಿ ತನ್ನ ಮತ್ತು ಹಿಂದಿನ ಕಾಲದಲ್ಲಿಯ ಭಾಷೆ ಹಾಗೂ ಸಾಹಿತ್ಯದ ಬೆಳೆವಣಿಗೆಯನ್ನು ತೋರಿಸುತ್ತದೆಂಬುದು ಒಪ್ಪತಕ್ಕ ಮಾತು. ಶಾಸನ ವಿಷಯವು ತತ್ಕಾಲೀನ ಚರಿತ್ರೆಯನ್ನು ಮೂಡಿಸುವಂತೆ ಅದರ ರಚನೆ ಆಯಾ ಕಾಲದ ಭಾಷೆಯ ಮಾದರಿಯನ್ನು ಮೂಡಿಸುತ್ತದೆ. ಈ ದೃಷ್ಟಿ-ಯಿಂದ ಕ್ರಿ.ಶ. ೭೦೦ಕ್ಕಿಂತ ೧–೨ ಶತಕಗಳ ಹಿಂದಿನಿಂದಲಾದರೂ ಕನ್ನಡದಲ್ಲಿ ಪದ್ಯ-ರಚನೆಯಾಗುತ್ತಿರಬೇಕು ಎಂಬುದು ನಿರ್ವಿವಾದವಾಗಿದೆ. ಕ್ರಿ.ಶ. ೫ನೆಯ ಶ.ದ ಪದ್ಯವು ಅದಕ್ಕೆ ಹಿಂದಿನ ಸಾಹಿತ್ಯವರ್ಣವನ್ನು ಸೂಚಿಸುತ್ತಿರಬಹುದು. ಆದರೆ ಅದರ ಕಾಲವು ಖಚಿತವಾಗಿಲ್ಲ. ತನ್ನಷ್ಟಕ್ಕೆ ಆ ಪದ್ಯವು ಮಾತ್ರ ತೀರ ಹಳೆಯ ಕನ್ನಡದಲ್ಲಿದ್ದು ಸಾಹಿತ್ಯಗುಣದಿಂದ ಕೂಡಿದ ಚೊಕ್ಕಾದ ಸ್ವಭಾವಚಿತ್ರವಾಗಿದೆ.[1] ಕ್ರಿ.ಶ. ೭ನೆಯ ಶ.ದ ಬದಾಮಿಯ ಶಾಸನದಲ್ಲಿಯ ಸ್ವಭಾವಚಿತ್ರದೊಡನೆ ಹೋಲಿಸಿದರೆ ಇಂಥ ಬರೆವಣಿಗೆ ನಡೆಯುತ್ತಿರಬೇಕೆಂದು ತೋರುತ್ತದೆ.[2] ಕನ್ನಡದಲ್ಲಿ ಮೊದಲು ಅಚ್ಚಗನ್ನಡದ ಯುಗವಾಗಿ ಹೋಗಿರಬೇಕೆಂಬ ಊಹೆ ನಮಗೆ ಸಂಮತವಿಲ್ಲ. ಕನ್ನಡ ಭಾಷೆ–ಸಾಹಿತ್ಯಗಳು ಗ್ರಂಥಸ್ಥವಾದ ರೂಪದಲ್ಲಿ ಸಂಸ್ಕೃತದ ಸಾಕಷ್ಟು ಪ್ರಭಾವ-ದಿಂದಲೇ ಹುಟ್ಟಿ ಬೆಳೆದಿವೆ. ಅಚ್ಚಗನ್ನಡದೇಸಿ ಹಾಗೂ ಛಂದಸ್ಸಿನ ಎಳೆಗಳನ್ನು ಕನ್ನಡದ ನೇಯ್ಗೆಯಲ್ಲಿ ಗುರುತಿಸಬಹುದಾದರೂ ತಮಿಳಿನ ಹಾಗೆ ಸಂಸ್ಕೃತದಿಂದ ಬಹುಶಃ ಅಲಿಪ್ತವಾದ ಗ್ರಾಂಥಿಕ ಸ್ವರೂಪವು ಕನ್ನಡಕ್ಕೆ ಇದ್ದಿತೆಂದು ತೋರುವುದಿಲ್ಲ.

---

1 ಬಿಣಮಣಿ (ಫಣಮಣಿ) ಅನ್ತುಭೋಗಿ ಬಿಣ (ಫಣ) ದುಳ್ಮಣಿವಿಲ್ಮನದೋನ್ ।
ರಣಮುಖದುಳ್ಳ ಕೋಲಂ ನೆರಿಯುಕ್ಕ್ರ್ಮನಿನ್ದ್ಯಗುಣನ್ ॥
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್ ।
ಗುಣಮಧುರಾಂಕ್ಕ ದಿವ್ಯಪುರುಷನ್ ಪುರುಷಪ್ರವರನ್ ॥ E.C. XI Cg. 43.

2 I.A.X. (1881) p. 60.

ಬೆದಂಡೆ-ಚತ್ತಾಣಗಳು ಕನ್ನಡಕ್ಕೆ ವಿಶಿಷ್ಟಗಳಾದ ಕಾವ್ಯರೂಪಗಳೇನೋ ನಿಜ. ಆದರೆ ಅವುಗಳಲ್ಲಿ ವೃತ್ತಕಂದಗಳ ಜೊತೆಗೆ ಮಾತ್ರ ಅಚ್ಚಗನ್ನಡ ಛಂದಸ್ಸಿಗೆ ಎಡೆ ದೊರೆತಿದೆ. 'ಕವಿರಾಜಮಾರ್ಗ'ದಿಂದ ಮುಂದೆಲ್ಲ ಸಂಸ್ಕೃತ-ಕನ್ನಡಗಳ ಸಮನ್ವಯ ಪ್ರಯತ್ನವು ಕಾಲಕಾಲಕ್ಕೆ ನಡೆದಿದೆ. ಮೂಲದಲ್ಲಿಯೇ ಬೆರೆತು ಬಂದ ಸಂಸ್ಕೃತದ ತ್ಯಾಗವಲ್ಲ, ಅತಿರೇಕತ್ಯಾಗ ಎಂಬ ವಿವೇಕವು ಅದರಲ್ಲಿ ಅಡಗಿದೆ. ಸಂಸ್ಕೃತದಲ್ಲಿ ಪ್ರಚುರವಾದ ವೃತ್ತಗಳನ್ನು ಮೊದಲು ಪ್ರಯೋಗಿಸಿ ಕನ್ನಡಕ್ಕೆ ಅವು ಒಗ್ಗವೆಂದು ತಿಳಿದು ಒಗ್ಗುವ ಬೇರೆ ಸಂಸ್ಕೃತ ವೃತ್ತಗಳನ್ನು ರೂಢಗೊಳಿಸಲು ಕೆಲಕಾಲವು ಹಿಡಿದಿರಬಹುದು. ಒಟ್ಟಿನಲ್ಲಿ ಸಂಸ್ಕಾರಹೊಂದಿದ ಶಾಸನಗದ್ಯವಾಗಲಿ ಪದ್ಯವಾಗಲಿ ತನ್ನ ಕಾಲಕ್ಕಿಂತ ಒಂದೆರಡು ಶತಮಾನಗಳ ಹಿಂದಿನಿಂದ ಕನ್ನಡ ಭಾಷೆ-ವಾಙ್ಮಯಗಳ ಬೆಳೆವಣಿಗೆಯನ್ನು ಸೂಚಿಸುವುವೇ ಹೊರತು ಇನ್ನೂ ಹೆಚ್ಚಿನ ಪ್ರಾಚೀನತೆಯನ್ನಲ್ಲ ಎಂದು ತೋರುತ್ತದೆ.

ಶಾಸನಗದ್ಯದಲ್ಲಿ ಹಲ್ಮಿಡಿಯ ಶಿಲಾಲೇಖ ಎಲ್ಲಕ್ಕಿಂತ ಹಳೆಯದೆಂದು ಹಿಂದೆ ಹೇಳಿದೆ. ಅದರ ಅಭ್ಯಾಸದಿಂದ ನಾಲ್ಕು ಸಂಗತಿಗಳನ್ನು ಕಂಡುಹಿಡಿಯಲಾಗಿದೆ: (೧) ಕನ್ನಡ-ಸಂಸ್ಕೃತ ಸಂಬಂಧ ಕ್ರಿ.ಶ. ೪೫೦ಕ್ಕೆ ಬಹಳ ಹಿಂದೆಯೇ ಆರಂಭವಾಗಿ ಸಂಸ್ಕೃತ ಸಮಸ್ತಪದಗಳಿಂದ ಕೂಡಿದ ಪ್ರೌಢವಾದ ಕನ್ನಡವು ೫ನೆಯ ಶತಮಾನದ ವೇಳೆಗೆ ಚೆನ್ನಾಗಿ ಬಳಕೆಗೆ ಬಂದಿತ್ತು. (೨) ಜನಬಳಕೆಯಲ್ಲಿ ಶುದ್ಧ ಕನ್ನಡ ಪದಗಳಿದ್ದರೂ ಪಂಡಿತರ ಬರೆವಣಿಗೆಗಳಲ್ಲಿ ಸಂಸ್ಕೃತಪ್ರಚುರವಾದ ಭಾಷೆಯಿತ್ತು. (೩) ಪೂರ್ವದ ಕನ್ನಡದ ಪದರೂಪಗಳು ವ್ಯಾಕರಣನಿಯಮಗಳಿಗೆ ಕಟ್ಟುಬಿದ್ದು ಕನ್ನಡವು ಚೆನ್ನಾಗಿ ಬಲಿತ ಭಾಷೆಯಾಗಿತ್ತು. (೪) ಇದಕ್ಕೆ ಈ ಭಾಷೆಯೂ ಇದರ ವಾಙ್ಮಯವೂ ಕೆಲವು ಶತಮಾನಗಳ ಹಿಂದೆಯೇ ಬೆಳೆದು ಬದುಕಿ ಬಾಳಿರಬೇಕು.[1] ಈ ಶಾಸನಕಾರನು ಪ್ರೌಢ ಸಂಸ್ಕೃತಕ್ಕೆ ಮಾರುವೋದ ಪಂಡಿತಕವಿಯೆಂಬುದನ್ನು ಅವನ ಒಂದೆರಡು ರೂಪಕಗಳೂ ಸಮಸ್ತಪದಗಳೂ ತಿಳಿಸುತ್ತವೆ. ಆದರೆ ಶಾಸನದ ತೀರ ಸಂಕ್ಷಿಪ್ತವಾದ ಚಾರಿತ್ರಿಕ ನಿವೇದನದಲ್ಲಿ ಕವಿತ್ವಕ್ಕೆ ಹೆಚ್ಚಿನ ಅವಕಾಶ ದೊರೆತಿಲ್ಲ. ಇದರಲ್ಲಿಯ 'ಪೆತ್ತಜಯನ್' ಎಂಬ ಸಮಾಸವು ಕನ್ನಡ-ಸಂಸ್ಕೃತಗಳ ಚಿರಕಾಲದ ಸಂಬಂಧಕ್ಕೆ ಸಾಕ್ಷಿಯಾಗಿದೆ. ಯಾಕೆಂದರೆ ಕನ್ನಡದ ಕ್ರಿಯಾರೂಪವೊಂದು ಸಂಸ್ಕೃತ ಶಬ್ದದೊಡನೆ ನಿರ್ದೋಷವಾಗಿ ಬೆರೆತಿರುವುದು ಸಂಬಂಧವು ಹೊಸತಾಗಿದ್ದಾಗ ಸಾಧ್ಯ ಇಲ್ಲ. ಪೂರ್ವದ ಹಳಗನ್ನಡವೆಂಬ ರೂಪದಲ್ಲಿ 'ಪೊಗೞೆಪ್ಪೊಟ್ಟಣ' ಎಂಬುದು ಕರ್ಮಣಿಯ ಪ್ರಾಚೀನ ರೂಪವಾಗಿದೆ ಮಾತ್ರವಲ್ಲ, ಕನ್ನಡದ ಮೇಲಾದ ಸಂಸ್ಕೃತ ವರ್ಚಸ್ಸಿನ ಹಳಮೆಗೆ ಗುರುತಾಗಿದೆ. ಈ ಶಾಸನದಿಂದ ೧-೨ ಶತಕಗಳ ಹಿಂದಿನಿಂದ ಕನ್ನಡವು ಗ್ರಾಂಥಿಕ ಭಾಷೆಯಾಗಿ ಬೆಳೆಯತೊಡಗಿತ್ತು ಎಂದು ಹೇಳಬಹುದೇ

1 ಎಂ. ಎಚ್. ಕೃಷ್ಣ: ಅತ್ಯಂತ ಪ್ರಾಚೀನ ಕನ್ನಡ ಶಾಸನ (ಪ್ರ. ಕ. ೨೦-೩, ಪು. ೩೮)

ಹೊರತು ಬಹಳ ಹಿಂದಿನಿಂದ ಮೊದಲಾಗಿ 'ಚೆನ್ನಾಗಿ ಬೆಳೆದು ಬಲಿತ ಭಾಷೆಯಾಗಿತ್ತು' ಎಂದೆನ್ನುವಂತಿಲ್ಲ. ಉಳಿದ ಪೂರ್ವದ ಹಳಗನ್ನಡದ ನಿದರ್ಶನಗಳಂತೆ ಇದೂ ರೂಪಗೊಳ್ಳುತ್ತಲಿದ್ದ ಹಳಗನ್ನಡದ ಸಂಕ್ರಮಣಾವಸ್ಥೆಗೆ ನಿದರ್ಶನವಾಗಿದೆ. ಕನ್ನಡ ವಾಙ್ಮಯವು ಕೆಲವು ಶತಮಾನಗಳ ಹಿಂದೆಯೇ ಬೆಳೆದು ಬದುಕಿದ ಬಗೆಗೆ ಇದು ಆಧಾರವಾಗಲಾರದು. ಬಹುಶಃ ಸಂಸ್ಕೃತಮುಗ್ಧರಾದ ಪಂಡಿತರು ಕನ್ನಡಕ್ಕೆ ಕೆಲಕಾಲದಿಂದ ಮಾತ್ರ ಒಲಿದು ಸಂಸ್ಕೃತಭೂಯಿಷ್ಠವಾದ ಕನ್ನಡ ಶೈಲಿಯುಳ್ಳ ಗ್ರಂಥರಚನೆಗೆ ತೊಡಗಿದ್ದರೆಂದು ಅದು ಸೂಚಿಸುತ್ತಿರಬಹುದು. ಬಳಕೆಯ ಕನ್ನಡದಲ್ಲಿ ಇದಕ್ಕಿಂತ ಪೂರ್ವದಲ್ಲಿಯೇ ಸಂಸ್ಕೃತ ಪದಗಳು ಸೇರಿ ಕನ್ನಡವೇ ಎನ್ನುವಷ್ಟು ಒಂದಾಗಿರಬೇಕು.

ಇದರ ತರುವಾಯ ಸು. ಕ್ರಿ.ಶ. ೬೮೦ರ ಗಂಗರಾಜರ ತೀರ ಹಳೆಯ ಉಲ್ಲೇಖವುಳ್ಳುದೆಂದು ರಾಯಿಸರು ವರ್ಣಿಸಿದ ಸಿರಗುಂದದ ಶಾಸನವಿದೆ.[1] ಇದರಲ್ಲಿ ನಿವ್ವನೀತ ಎಂಬ ಹೆಸರಿನಲ್ಲಿ ಅಡಕವಾಗಿರುವ ದುರ್ವಿನೀತನ ಚರಿತ್ರಾಂಶವಿದೆ, ಶೈಲಿ ಅಸ್ಪಷ್ಟವಾಗಿದ್ದರೂ ಪೂರ್ವದ ಹಳಗನ್ನಡವೆಂಬುದು ಸ್ಪಷ್ಟವಿದೆ. ಈ ನಂತರ ಬದಾಮಿಯ ಚಾಲುಕ್ಯರಾಜ ಮಂಗಲೀಶನ ಕ್ರಿ.ಶ. ೫೭೮ರ ಚಿಕ್ಕ ಶಿಲಾಲೇಖವಿದೆ.[2] ಹಲ್ಮಿಡಿಯ ಶಾಸನ ದೊರೆಯುವುದಕ್ಕಿಂತ ಮುಂಚೆ ಇದೇ ನಿರ್ವಿವಾದವಾಗಿ ಮೊದಲನೆಯದೆಂದಾಗಿತ್ತು. ಇದರಲ್ಲಿ ಷಷ್ಠಿಯ ದೀರ್ಘಾದೇಶ ಮುಂತಾಗಿ ಹಳನುಡಿಯ ಪಡಿಯಚ್ಚಿದೆ. ಈ ಎರಡರಲ್ಲಿಯೂ ಸಾಹಿತ್ಯಗುಣದ ಲವಲೇಶವಿಲ್ಲ. ಕ್ರಿ.ಶ. ೭ನೆಯ ಶ.ದಲ್ಲಿಯೇ ಸಾಹಿತ್ಯಗುಣವುಳ್ಳ ಹೇರಳವಾದ ಶಾಸನಗಳನ್ನು ಬದಾಮಿ, ಶ್ರವಣಬೆಳ್ಗೊಳಗಳಲ್ಲಿ ಕೆತ್ತಲಾಗಿದೆ. ಆದರಿಂದ ಶಾಸನಸಾಹಿತ್ಯದ ಯುಗವು ೭ನೆಯ ಶ.ದಿಂದ ಮೊದಲಾಯಿತೆನ್ನಬೇಕು. ಕಪ್ಪೆ ಅರಭಟ್ಟನ ಸ್ವಭಾವಚಿತ್ರವುಳ್ಳ ಬದಾಮಿಯ ಶಾಸನವು ಅನೇಕ ದೃಷ್ಟಿಯಿಂದ ಸ್ಮರಣೀಯವಾಗಿದೆ.[3] ಕನ್ನಡ ಛಂದಸ್ಸಿನ ತಾಯಿಬೇರಾದ ತ್ರಿಪದಿಯ

---

1 E.C. Vol. VI. cm. 50.

2 I.A.X. (1881, p. 60)

3 I.A.X. 61.

ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ ।
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್ ।
ಮಾಧವನೀತನ್ ಪೆಱನಲ್ಲ ॥
ಒಳ್ಳಿತ್ತ ಕೆಯ್ವೋರಾರ್ ಪೊಲ್ಲದುಮದಱಂತೆ ।
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ- ।
ಮಿಲ್ಲಿ ಸಂದಿಕ್ಕುಮದು ಬಂದು ॥
ಕಟ್ಟೆದ ಸಿಂಘಮನ್ ಕೆಟ್ಟೋದೇನೆಮಗೆಂದು ।
ಬಿಟ್ಟವೋಲ್ ಕಲಿಗೆ ವಿಪರೀತಂಗಹಿತರ್ಕ್ಕಳ್ ।
ಕೆಟ್ಟರ್ ಮೇಣ್ ಸತ್ತರವಿಚಾರಂ ॥

ಮೊಟ್ಟಮೊದಲನೆಯ ರೂಪವು ಅದರಲ್ಲಿದೆ. ಒಬ್ಬ ಕನ್ನಡವೀರನ ಆವೇಶಯುತವಾದ ಸ್ವಭಾವಚಿತ್ರವು ಅಲ್ಲಿದೆ. ಅದರಲ್ಲಿ ಭಾವ–ಭಾಷೆಗಳ ಯೋಗ್ಯ ಮಿಲನವುಳ್ಳ ಸ್ವಯಂಪೂರ್ಣವಾದ ಭಾವಗೀತೆಯ ಸತ್ತ್ವವೂ ತುಂಬಿದೆ. ಶ್ರವಣಬೆಳ್ಗೊಳದ ಸು. ೩೦ ಶಾಸನಗಳಲ್ಲಿ ಪದ್ಯರಚನೆಯಿದೆ, ಅವುಗಳಲ್ಲಿ ಜೈನಮುನಿಗಳ ಹಾಗೂ ಕಂತಿಯರ ವೈರಾಗ್ಯ, ತಪೋಮಹಿಮೆ ಮುಂತಾದ ಗುಣಗಳ ಚಿತ್ರಣವು ಮೆಚ್ಚುವಂತಿದೆ. ಉದಾಹರಣೆಗೆಂದು ಶ್ರ.ಬೆ. ೨೨, ೨೭, ೮೮ ಇವನ್ನು ನೋಡಬಹುದು.[1] ‘ ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಂಜುವೊಲ್ತೋಱಿ ಬೇಗಂ | ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ ನಿಲ್ಲವಾರ್ಗಂ ’ ಎಂಬ ಪದ್ಯವು ತುಂಬ ಸೊಗಸಾದುದು. ಇಷ್ಟಾದರೂ ಇವುಗಳ ರಚಕರು ಬೇರೆ ಕನ್ನಡ ಕಾವ್ಯಗಳನ್ನು ರಚಿಸಿರಬೇಕೆಂದು ನಿರ್ಧರಿಸುವಷ್ಟು ಕಾವ್ಯಗುಣವು ಪ್ರಕರ್ಷದಲ್ಲಿ ಕಂಡುಬರುವುದಿಲ್ಲ. ಕ್ರಿ.ಶ. ೭ನೆಯ ಶ.ದಿಂದ ೩ನೆಯ ಶ.ದವರೆಗೆ ರಚಿತವಾದುವೆಂದು ತಿಳಿದು ಶ್ರೀ ಗೋವಿಂದ ಪೈಯವರು ಕೊಟ್ಟ ಗದ್ಯಶಾಸನಗಳಲ್ಲಿ ಕನ್ನಡಭಾಷೆಯ ದೃಷ್ಟಿಯಿಂದ ಅಭ್ಯಸನೀಯವಾದ ರೂಪಗಳಿದ್ದರೂ ಸಾಹಿತ್ಯಾಂಶಗಳು ಶೂನ್ಯವಾಗಿವೆ. ಶಿಲಾಲೇಖವಾಗಲಿ ತಾಮ್ರಶಾಸನವಾಗಲಿ ಮುಖ್ಯವಾಗಿ ಚಾರಿತ್ರಿಕ ಹಾಗೂ ರಾಜಕೀಯ ಮಹತ್ವದ ಬರೆಹಗಳು. ಅವುಗಳಲ್ಲಿ ಸಾಹಿತ್ಯ ಆನುಷಂಗಿಕ. ಆದರೂ ಮುಂದೆಮುಂದಿನ ಕಾಲದ ಶಾಸನಗಳಲ್ಲಿ ಸಾಹಿತ್ಯಗುಣವು ತೋರಿದೆ ಮಾತ್ರವಲ್ಲ, ಮೇಲ್ತರದ ಕಾವ್ಯಸಂಪತ್ತಿ, ವಿಶಿಷ್ಟವಾದ ಭಾಷಾವೈಖರಿ ಕೆಲವು ಕಡೆಗೆ ಪ್ರಕಟವಾಗಿವೆ ಎಂಬುದನ್ನು ಒಪ್ಪಬೇಕು.

ಶಾಸನಗಳಿಂದ ತಿಳಿದ ಸಾಹಿತ್ಯಗುಣವಲ್ಲದೆ ಒಬ್ಬ ನಟ ಮತ್ತು ಸಾಹಿತ್ಯಿಕನ ವರ್ಣನೆಯೂ ಪಟ್ಟದಕಲ್ಲಿನ ೮ನೆಯ ಶ.ದ ಒಂದು ಶಿಲಾಲೇಖದಲ್ಲಿ ದೊರೆತಿದೆ.[2] ಅದರಲ್ಲಿ ‘ ಇನ್ನಾತನೆ ನರ್ತಕಂ ನಟರೊಳಗ್ಗಳಂ ಈ ಭುವನಾನ್ತರಾಳದೊಳ್ ’ ಎಂಬುದಾಗಿ ಆ ನಟನ ಬಾಯ್ತುಂಬ ಹೊಗಳಿಕೆಯನ್ನು ‘ ದೇವಯ್ಯಗಳಾ ಮಗ **ಅಚಲನ್** ’ ಎಂಬ ಕವಿ ಮಾಡಿದ್ದಾನೆ. ಮಧುರಚೆನ್ನರು ಗೊತ್ತುಪಡಿಸಿದ ಈ ಶಾಸನಕಾಲವು ಸರಿಯೆಂದುದಾದರೆ ೮ನೆಯ ಶ.ದ ಶಾಸನಕವಿಯೊಬ್ಬನ ಹಾಗೂ ನಟನ ಉಲ್ಲೇಖವು ಸಿಕ್ಕಂತಾಯಿತು. ಪ್ರಾಚೀನ ಗಂಗಶಾಸನಗಳಲ್ಲಿ ಗಂಗರಾಜನಾದ ೨ನೆಯ ಮಾಧವನು ದತ್ತಕಸೂತ್ರದ ಮೇಲೆ ಗ್ರಂಥವನ್ನು ರಚಿಸಿದಂತೆ ಹೇಳಿದೆ.[3] ಅದರ ಕಾಲ ಕ್ರಿ.ಶ. ೩ನೆಯ ಶತಕವಾಗಬಹುದು. ಅದು ಸಂಸ್ಕೃತದಲ್ಲಿಯೇ ಇರಬೇಕು. ಅದು ಬಹುಶಃ

---

1 ಗೋವಿಂದ ಪೈ : ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು, ಪು. ೧೨೬–೭)

2 ಮಧುರಚೆನ್ನ : ಪ್ರಾಚೀನ ಕರ್ನಾಟಕದ ಒಬ್ಬ ನಟಶ್ರೇಷ್ಠ ಹಾಗೂ ಒಬ್ಬ ಆದಿಕವಿ (ಜ.ಕ. ೯–೫, ೬)

3 E.C. Mr. 73, DB 68.

ಕನ್ನಡದಲ್ಲಿ ಇರಬೇಕೆಂದು ರಾಯಿಸರು ಅಭಿಪ್ರಾಯಪಟ್ಟದ್ದಾರೆ.[1] '**ಪೊಲಕೇಶಿ ವಲ್ಲಭಂ**' ಎಂಬ ಬದಾಮಿ ಚಾಳುಕ್ಯ ರಾಜನ 'ವಿಕ್ರಮಯಜ್ಞ ವಿಧಾನ'ವನ್ನು ಬಣ್ಣಿಸಿದ ಲಕ್ಷ್ಯಪದ್ಯವೊಂದು ನಾಗವರ್ಮನ ಕಾವ್ಯಾವಲೋಕನದಲ್ಲಿದೆ (ಪದ್ಯ ೪೮೮). ಅದು ಶಾಸನಪದ್ಯವಾಗಿರದೆ, ೧ನೆಯ ಪುಲಿಕೇಶಿಯ ಕಾಲದಲ್ಲಿ ಅಂದರೆ ೬ನೆಯ ಶ.ದ ಉತ್ತರಾರ್ಧದಲ್ಲಿ ಇಲ್ಲವೆ ೮ನೆಯ ಶ.ದ ಒಳಗೆ ರಚಿತವಾದ ಯಾವೊಂದು ಕನ್ನಡ ಕಾವ್ಯದಿಂದ ಎತ್ತಿಕೊಂಡುದಾಗಿರಬೇಕು, ಕ್ರಿ.ಶ. ೬೩೪ರ ಐಹೊಳೆ ಶಾಸನವನ್ನು ಬರೆದ ರವಿಕೀರ್ತಿಯೇ ಅದನ್ನು ಬರೆದಿರಬಹುದು ಎಂಬುದಾಗಿ ಶ್ರೀ ಗೋವಿಂದ ಪೈಗಳು ಊಹಿಸಿದ್ದಾರೆ.[2] ಈ ಊಹೆಯನ್ನೂ ಇತರ ಊಹೆಗಳನ್ನೂ ಪರಿಶೀಲಿಸಿ ಆ ಕಾವ್ಯ ಯಾವುದೆಂಬುದನ್ನು ನಿರ್ಧರಿಸಬೇಕಾಗಿದೆ.

೩. ಕನ್ನಡ ಸಾಹಿತ್ಯೋದಯ ಮತ್ತು ಕವಿರಾಜಮಾರ್ಗ

'ಕವಿರಾಜಮಾರ್ಗ'ದಲ್ಲಿ ದೊರೆತ ಆಧಾರಗಳು: 'ಕವಿರಾಜಮಾರ್ಗ'ವು ದಂಡಿಯ ಕಾವ್ಯಾದರ್ಶವೆಂಬ ಸಂಸ್ಕೃತ ಅಲಂಕಾರಗ್ರಂಥದ ತದ್ರೂಪ ಅನುವಾದವಲ್ಲ, ಸ್ವತಂತ್ರವಾದ ಅನುವಾದ ಇಲ್ಲವೆ ರೂಪಾಂತರವಾಗಿದೆ. ಅನುವಾದದೃಷ್ಟಿಯಿಂದ ಅದು ಸ್ವತಂತ್ರವೆಂಬುದಲ್ಲದೆ ಅಂದಿನ ಕನ್ನಡ ನಾಡುನುಡಿಗಳ ಸ್ವರೂಪ, ಸಾಹಿತ್ಯಸ್ಥಿತಿ, ಕವಿಗಳಿಗೆ ರಾಜಮಾರ್ಗವನ್ನು ತೋರುವ ವಿಮರ್ಶಾತ್ಮಕ ವಿಚಾರಪ್ರಣಾಲಿ ಎಂಬಿವು-ಗಳಿಂದ ಸ್ವತಂತ್ರವಾದ ಮತ್ತು ಬೆಲೆಯುಳ್ಳ ಪ್ರಮಾಣಗ್ರಂಥವಾಗಿದೆ. ಇದರಿಂದ ಕನ್ನಡ ಸಾಹಿತ್ಯೋದಯದ ಬಗ್ಗೆ ನಮ್ಮ ಅಜ್ಞಾನವು ಕಡಿಮೆಯಾಗಿದೆ. ಕತ್ತಲೆ ಇರುವಲ್ಲಿ ಕೆಲವು ಸ್ಪಷ್ಟವಾದ ಬೆಳಕಿನ ಪಟ್ಟಿಗಳು ಮೂಡಿವೆ. ಕನ್ನಡ ಸಾಹಿತ್ಯ ಅದರ ಕಾಲದಲ್ಲಿ ಮತ್ತು ಅದಕ್ಕಿಂತ ಹಿಂದಿನಿಂದಲೂ ಇದ್ದಿತೆಂಬುದನ್ನು ಅದರಲ್ಲಿಯ ಕೆಳಗಣ ಅವತರಣಗಳು ಸಾರುತ್ತವೆ: (೧) '**ಕನ್ನಡ ಗಬ್ಬಂಗಳೊಳ್**' ಎಂದರೆ ಕನ್ನಡ ಕಾವ್ಯಗಳಲ್ಲಿ ಅಗಣಿತಗುಣ ಗದ್ಯಪದ್ಯ ಸಂಮಿಶ್ರಿತವನ್ನು ಗದ್ಯಕಥಾಪ್ರಗೀತಿಯಿಂದ **ಚಿರಂತನಾಚಾರ್ಯರು** ಹೇಳುತ್ತಾರೆ.[3] ಅಂದರೆ ಹಳಗಾಲದಿಂದ ಹೆಸರಾದ ವಿಮರ್ಶಾಚಾರ್ಯರು (ಚಿರಂತನಾಚಾರ್ಯ) ಕನ್ನಡ ಕಾವ್ಯಗಳಲ್ಲಿ (ಬಹುವಚನವನ್ನು ಲಕ್ಷಿಸಬೇಕು) ಗದ್ಯಪದ್ಯಮಿಶ್ರವಾದ ಗದ್ಯಕಥೆ ಎಂಬ ಸಾಹಿತ್ಯರೂಪವಿತ್ತೆಂದು ಹೇಳುತ್ತಾರೆ. ಇಲ್ಲಿ ಚಂಪೂಕಾವ್ಯಕ್ಕಿಂತ ಗದ್ಯಭಾಗ ಹೆಚ್ಚಾಗಿರುವ ಗದ್ಯಕಥೆ ಎಂಬ ಪ್ರಕಾರದ ಉಲ್ಲೇಖವಿರಬೇಕು. (೨) 'ನುಡಿಗೆಲ್ಲಂ ಸಲ್ಲದ ಕನ್ನಡದೊಳ್' ಚತ್ತಾಣ

---

1. Rice: Mysore and Coorg, p. 196.
2. ಗೋವಿಂದ ಪೈ: ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು, ಪು. ೧೦೮–೧೧೧)
3. ಕವಿರಾಜಮಾರ್ಗ, ೧–೨೭.

ಮತ್ತು ಬೆದಂಡೆ ಎಂದು (ದ?) ಈಗಡಿನ ಹೆಸರಾದ ಕಬ್ಬದಲ್ಲಿ ಪುರಾತನ ಕವಿಗಳು ಒಡಂಬಡಂ[1] ಮಾಡಿದರು. ಈ ಪದ್ಯದ ಅರ್ಥ ಅಷ್ಟು ಸ್ಫುಟವಾಗಿಲ್ಲ. ಆದರೂ ಇಲ್ಲಿ ಬಂದಿರುವ ಚತ್ತಾಣ, ಬೆದಂಡೆಗಳ ಉಲ್ಲೇಖ ಮತ್ತು **ಪುರಾತನ ಕವಿಗಳ** ನಿರ್ದೇಶ ಇವು ಗಮನಿಸತಕ್ಕುವು. ಚಿರಂತನಾಚಾರ್ಯರಿದ್ದಂತೆ ಪುರಾತನ ಕವಿಗಳೂ ಕನ್ನಡ-ದಲ್ಲಿ ಇದ್ದರೆಂಬುದು ತಿಳಿಯುತ್ತದೆ. ಇದೇ ಅರ್ಥದಲ್ಲಿ 'ಪುರಾಣಕವಿಗಳ್'[2] 'ಪೂರ್ವಾಚಾರ್ಯರ್'[3] ಎಂಬ ಪ್ರಯೋಗಗಳು ಮುಂದೆ ದೊರೆಯುತ್ತವೆ. ಪೂರ್ವಾ-ಚಾರ್ಯರು ಯತಿಯನ್ನು ಮೀರಿ ಖಂಡಪ್ರಾಸವು ಕನ್ನಡಕ್ಕೆ ಅತಿಶಯವೆಂದು ಎತ್ತಿ-ಹಿಡಿದು ತಮ್ಮ ಸ್ವತಂತ್ರಬುದ್ಧಿಯನ್ನು ತೋರಿದ ವಿಮರ್ಶಾಚಾರ್ಯರಾಗಿದ್ದರು. 'ಕವಿವೃಷಭರಾ ಪ್ರಯೋಗಂಗಳಂ',[4] 'ಪೂರ್ವಕಾವ್ಯರಚನೆಗಳಂ',[5] 'ಪರಮ-ಕವಿಪ್ರಧಾನರಾ ಕಾವ್ಯಂಗಳ್',[6] 'ಪುರಾಣಕಾವ್ಯಪ್ರಯೋಗದೊಳ್',[7] 'ಬಗೆದು ನೋಡಿ ಪುರಾಣಕವಿಪ್ರಭುಪ್ರಯೋಗಾವಿಲ ಸದ್ಗುಣೋದಯಮಂ'[8] ಇಂಥ ಪ್ರಯೋಗ-ಗಳು ಕನ್ನಡದಲ್ಲಿ ಪ್ರಾಚೀನ ಕಾವ್ಯಗಳ ನಿರ್ಮಿತಿಯಾಗಿತ್ತೆಂಬುದನ್ನು ನಿಃಸಂಶಯವಾಗಿ ತಿಳಿಸುತ್ತವೆ. ಇದರಲ್ಲಿಯ ಒಂದೆರಡು ಪ್ರಯೋಗಗಳು ಕನ್ನಡ–ಸಂಸ್ಕೃತ ಮುಂತಾದ ಸರ್ವಸಾಮಾನ್ಯವಾದ ಪ್ರಾಚೀನ ವಾಙ್ಮಯವನ್ನು ಸೂಚಿಸುತ್ತಿರಬಹುದು. ಆದರೆ ಕನ್ನಡವೆಂದು ಮಾತ್ರ ಅರಿಪುವ ಇತರ ಪ್ರಯೋಗಗಳ ಜೊತೆಗೆ ಇವನ್ನು ತೆಗೆದು-ಕೊಂಡರೆ ಕನ್ನಡವೆಂಬ ಸೂಚನೆಯೂ ಇವುಗಳಲ್ಲಿರಬಹುದೆಂದು ತಿಳಿಯಬಹುದು. (೩) ಕನ್ನಡಭಾಷೆ ಮತ್ತು ಸಾಹಿತ್ಯಗಳು ಪರಂಪರೆಯಾಗಿ ಬೆಳೆಯುತ್ತ ಬಂದು ಒಂದು ನಿಲುಕಡೆಯನ್ನು ಮುಟ್ಟಿದ್ದವೆಂಬುದನ್ನು ಹೇಳಿದ ಪದ್ಯವೊಂದು ಈ ಗ್ರಂಥದಲ್ಲಿದೆ.[9] ಅದರ ಅಭಿಪ್ರಾಯವೆಂದರೆ, **ನೆಲಸಿದ ಕಾವ್ಯವು** ಕಾವ್ಯಕ್ಕೆ ಸತತವೂ ಲಕ್ಷಣವೆಂದೇ ತಿಳಿದು ಆಗಮಬಲಹೀನರಾದ ಕೆಲವರು ಅದು ದೇಶಿಯಲ್ಲ ಎಂದು ಅರಿದಿದ್ದರೂ **ಪಟಿಗನ್ನಡ**ವನ್ನು ಪೊಲಗಿಡಿಸಿ ನುಡಿಯುವರು. ಇಲ್ಲಿ 'ಕವಿರಾಜಮಾರ್ಗ'ದ ಕಾಲಕ್ಕೆ ಪಟಿಗನ್ನಡ ಎಂಬ ಸ್ವರೂಪ ಕನ್ನಡಭಾಷೆಗೆ ಬಂದಿತ್ತೆಂಬ ಮಾತಿದೆ. ಅಲ್ಲದೆ ನೆಲಸಿದ ಕಾವ್ಯ ಎಂಬುದು ಅಂದಿನ ಕಾವ್ಯಕ್ಕೆ ಮಾದರಿಯಾಗುವಂಥದಾಗಿ ಇದ್ದಿತೆಂಬ ಮಾತೂ ಇದೆ. ಇವೆರಡೇ ಈಗ ಪ್ರಕೃತ ಅಂಶಗಳು. (೪) ಕನ್ನಡನಾಡಿನ ವಿಸ್ತಾರ, ತಿರುಳ್ಗನ್ನಡ ಸೀಮೆ, ಕನ್ನಡನಾಡವರ ಪೆರ್ಮೆಯನ್ನು ಹೇಳಿದಲ್ಲಿ ನಾಡವರ್ಗಳು ನಿಜವಾಗಿಯೂ ಚದುರರು, ಕುರಿತೋದದೆಯೂ **ಕಾವ್ಯಪ್ರಯೋಗಪರಿಣತಮತಿ-ಗಳು**[10] ಎಂಬ ಸ್ತುತಿವಾಕ್ಯವಿದೆ. ಇದರಲ್ಲಿ ಅತಿಶಯೋಕ್ತಿ ಇಲ್ಲವೆಂದಾದರೆ, ಆ ಕಾಲದ ಕರ್ನಾಟಕದಲ್ಲಿ ಅಪಂಡಿತರೂ ಕೂಡ ಸಹೃದಯರೂ ಸಹಜ ಕವಿಗಳೂ

---

1 ಅದೇ, ೧–೩೨. 2 ಅದೇ, ೧–೪೭. 3 ಅದೇ, ೧–೭೫. 4 ಅದೇ, ೧–೫.
5 ಅದೇ, ೧–೯. 6 ಅದೇ, ೧–೧೮. 7 ಅದೇ, ೧–೫೦. 8 ಅದೇ, ೨–೧೫೫.
9 ಅದೇ, ೧–೪೮. 10 ಅದೇ, ೧–೩೮.

ಆಗಿದ್ದರೆಂಬ ಅಭಿಪ್ರಾಯವು ಹೊರಡುತ್ತದೆ. ಆಗ ಕನ್ನಡ ಕಾವ್ಯಪರಂಪರೆ ಸಮೃದ್ಧವೂ ಅವ್ಯಾಹತವೂ ಆಗಿದ್ದಿತೆಂಬುದನ್ನು ಸೂಚಿಸುತ್ತದೆ.

'ಕವಿರಾಜಮಾರ್ಗ'ದ ತುಂಬ ನೃಪತುಂಗದೇವಮತ, ಅತಿಶಯಧವಳೋಕ್ತಿಕ್ರಮ ಇವನ್ನು ಅನುಸರಿಸಿ ಅಭಿಪ್ರಾಯಗಳನ್ನು ಹೇಳಿದಂತಿದೆ. ಪೂರ್ವಶಾಸ್ತ್ರವಿಧಿಯನ್ನು ತೆರೆದಿರೆ ಕನ್ನಡದಲ್ಲಿ ಇಪ್ಪು ಹೇಳುವೆ,[1] ಪುರಾಣಕವಿಗಳ ವಿದಿತಾಂತರವನ್ನು ಹೇಳುವೆ[2] ಎಂಬ ಉಕ್ತಿಗಳಿವೆ. ಇವುಗಳಿಂದ ಈ ಗ್ರಂಥಕ್ಕಿಂತ ಮುಂಚೆ ಕನ್ನಡದಲ್ಲಿ ಇತರ ಅಲಂಕಾರಗ್ರಂಥಗಳಿದ್ದುವೆಂದು ಊಹಿಸಬಹುದಾಗಿದೆ. ಆದರೆ ನೃಪತುಂಗನ ಮತವೆಂದಿದ್ದ ಅನೇಕ ಸಂದರ್ಭಗಳಲ್ಲಿ ಸಂಸ್ಕೃತ ಆಲಂಕಾರಿಕರ ಅಭಿಪ್ರಾಯವೇ ಇದ್ದುದು ಕಂಡುಬಂದಿದೆ. ಪದ್ಯಕ್ಕೆ ಪೂರಕವಾಗಿ ಮಾತ್ರ ಆ ಮಾತುಗಳು ಸೇರಿಕೊಂಡಿವೆ. ಹಾಗೆ ಪೂರ್ವಶಾಸ್ತ್ರವಿಧಿ ಎಂದು ಹೇಳಿದಲ್ಲಿ ಸಂಸ್ಕೃತ ಲಾಕ್ಷಣಿಕರು ಹೇಳಿದ ವಿಧಿಯೇ ಆಗಿದೆ. ಆದ್ದರಿಂದ ಕನ್ನಡದಲ್ಲಿ ಪ್ರಾಚೀನ ಕಾಲದಿಂದಲೂ ವಿಮರ್ಶಕರು ಇದ್ದರೆಂದೂ ಅವರು ಗ್ರಂಥಗಳನ್ನು ಬರೆದಿರಬಹುದೆಂದೂ ತಿಳಿಯಲು ಬೇರೆ ಆಧಾರಗಳು ಇದೇ ಗ್ರಂಥದಲ್ಲಿರುವಾಗ ಮೇಲಿನ ಆಧಾರಗಳ ಕೈಬಿಡುವುದೇ ಮೇಲು.

(೫) 'ಕವಿರಾಜಮಾರ್ಗ'ದಲ್ಲಿ ಸಂಸ್ಕೃತ ಗದ್ಯಪದ್ಯಗಳಲ್ಲಿಯ ಕವಿಕಾವ್ಯಗಳನ್ನು ಹೇಳಿದಮೇಲೆ ಕನ್ನಡ ಗದ್ಯಪದ್ಯ ಕವಿಗಳ ಹಲವು ಹೆಸರುಗಳನ್ನು ಕೊಡಲಾಗಿದೆ.[3] ಕನ್ನಡಸಾಹಿತ್ಯದ ಸಮೃದ್ಧತೆಯನ್ನೂ ಪ್ರಾಚೀನತೆಯನ್ನೂ ತೋರಿಸಲು ಈ ಆಧಾರಗಳು ಬಹಳ ಸಹಾಯಕವಾಗಿವೆ. 'ವಿಮಳೋದಯ, ನಾಗಾರ್ಜುನ, ಜಯಬಂಧು, **ದುರ್ವಿನೀತಾದಿಗಳ್** ಈ ಕ್ರಮದೊಳ್ ನೆಗಳ್ಚಿ ಗದ್ಯಾಶ್ರಮಪದಗುರುತಾಪ್ರತೀತಿಯಂ ಕೆಯ್ಕೊಂಡರ್' ಎಂಬಲ್ಲಿ ಕನ್ನಡದ ಪ್ರಸಿದ್ಧ ಗದ್ಯಕಾರರ ಹೆಸರುಗಳಿವೆ. ಕನ್ನಡಗಬ್ಬಗಳಲ್ಲಿ ಚಿರಂತನಾಚಾರ್ಯರು ಹೇಳಿದ ಅಗಣಿತಗುಣದ ಗದ್ಯಕಥೆಯ ಉಲ್ಲೇಖ; ಎಲ್ಲ ಕಲೆ, ಭಾಷೆ, ಲೋಕ, ಶಾಸ್ತ್ರ ಮುಂತಾದ್ದರ ವರ್ಣನೆ ಉಳ್ಳ ವಸ್ತುವಿಸ್ತರವನ್ನು ಅರಿಯದವನಿಂದ ಗ್ರಂಥರಚನೆ ಆಗದೆಂಬ ಉಕ್ತಿ ಇವು ಈ ಹಿಂದಿನ ಪದ್ಯಗಳಲ್ಲಿರುವುದನ್ನು ನೆನೆದರೆ, ಈ ಕನ್ನಡ ಗದ್ಯಕಾರರು ಸಾಮಾನ್ಯರಲ್ಲ ಎಂದೂ ಹಿಂದಿನಿಂದಲೂ ಪ್ರಖ್ಯಾತರಾದವರೆಂದೂ ತಿಳಿಯುತ್ತದೆ. ಗದ್ಯದಲ್ಲಿ ಪರಿಶ್ರಮ ತೋರಿ ಕೀರ್ತಿ ಪಡೆದವರೆಂದು ಇವರನ್ನು ಗೌರವಿಸಲಾಗಿದೆ. ಇಷ್ಟೆಲ್ಲ ಹೇಳಿಯೂ ಇವರ ಗ್ರಂಥಗಳಾವುವು ಎಂಬುದನ್ನು ಇಲ್ಲಿ ಹೇಳಿಲ್ಲ. ಬೇರೆ ಕಡೆಯಿಂದ ಒಬ್ಬಿಬ್ಬರ ವಿಷಯ ತಿಳಿಯುತ್ತದೆ. ಇವರಲ್ಲಿ ಯಾರ ಗ್ರಂಥಗಳೂ ದೊರೆಯದಿರುವುದು ಕನ್ನಡ ಸಾಹಿತ್ಯಕ್ಕೆ ಹಾನಿಯೇ ಸರಿ. ಇವರ ಬಗ್ಗೆ ತಿಳಿದ ಕೆಲವು ಅಂಶಗಳನ್ನು ಸಂಗ್ರಹಿಸಬಹುದು. ವಿಮಲ, ಉದಯ ಇವರಿಬ್ಬರೂ ಬೇರೆ; ವಿಮಲನು ೭೭೭ರಲ್ಲಿದ್ದ

1 ಅದೇ, ೨-೪೬. 2 ಅದೇ, ೨-೫೧. 3 ಅದೇ, ೧-೨೮, ೩೩.

ವಿಮಲಚಂದ್ರ ಎಂಬ ಗುರುವಾಗಿರಬಹುದು, ಉದಯನಾರೋ ಗೊತ್ತಿಲ್ಲ ಎಂದು ಕವಿಚರಿತಕಾರರು ಹೇಳಿದ್ದಾರೆ.[1] ಈ ವಿಮಲನು 'ಪ್ರಶ್ನೋತ್ತರರತ್ನಮಾಲೆ'ಯೆಂಬ ಸಂಸ್ಕೃತ ಕವಿತೆಯ ಕರ್ತೃವಾದ ವಿಮಲನಾಗಿರಲಾರನೆಂದು ಅವರ ಮತ. ಆದರೆ ವಿಮಲೋದಯ ಒಂದೇ ಹೆಸರೆಂದೂ 'ಪ್ರಶ್ನೋತ್ತರರತ್ನಮಾಲಿಕೆ'ಯ ಕರ್ತನೇ ಅವನೆಂದು ಶ್ರೀ ಗೋವಿಂದ ಪೈಗಳು ಹೇಳಿದ್ದಾರೆ.[2] ಯಾಕೆಂದರೆ ಈ ಕವಿತೆಯ ತಿಬೇಟ ಭಾಷೆಯ ಅನುವಾದದಲ್ಲಿ ರಚಯಿಕಾರನ ಹೆಸರು '**ಅಮೋಘೋದಯ**' ಎಂದಿದೆ. ಈ ಕವಿತೆಯನ್ನು ನೃಪತುಂಗನೇ ಬರೆದಿರಬಹುದೆನ್ನಲಿಕ್ಕೆ ಆಧಾರವಿದೆ. ಆದರೆ ಅದನ್ನು ಅಲ್ಲಗಳೆಯುವುದಕ್ಕೂ ಆಧಾರವಿದೆ.[3] ಅದೇನೇ ಇದ್ದರೂ ಕನ್ನಡದಲ್ಲಿ ವಿಮಲೋದಯನು ಬರೆದ ಗದ್ಯಗ್ರಂಥವಾವುದೆಂಬ ಬಗ್ಗೆ ನಾವು ಇನ್ನೂ ಚೋದ್ಯ-ಬಡುವ ಸ್ಥಿತಿಯಲ್ಲಿಯೇ ಇದ್ದೇವೆ. ಪೂಜ್ಯಪಾದನ ಸೋದರಳಿಯನಾದ ನಾಗಾರ್ಜುನ ಎಂಬುವನು ವೈದ್ಯದಲ್ಲಿ ಮಹಾನಿಪುಣನಾಗಿ ರಸವಾದದಲ್ಲಿ ನುರಿತು ಬೆಟ್ಟಗಳನ್ನೆಲ್ಲ ಬಂಗಾರ ಮಾಡುತ್ತಿದ್ದನಂತೆ. 'ನಾಗಾರ್ಜುನಕಕ್ಷಪುಟ' ಎಂಬ ವೈದ್ಯಗ್ರಂಥವು ದೊರೆಯುತ್ತದೆ.[4] ಇಲ್ಲಿಯ ನಾಗಾರ್ಜುನನು ಅವನೇ ಇರುವ ಸಂಭವವಿದೆ. ಆವನ ಕನ್ನಡ ಗ್ರಂಥವಾವುದೋ ಗೊತ್ತಿಲ್ಲ. ಜಯಬಂಧು ಯಾರೆಂಬುದು ತಿಳಿದೇ ಇಲ್ಲ. 'ಜಯಬಂಧುನಂದನ'ನ ಸೂಪಶಾಸ್ತ್ರವೆಂಬುದು ಪ್ರತ್ಯೇಕ ಗ್ರಂಥವೆಂದು ಕವಿಚರಿತ-ಕಾರರು ಭಾವಿಸಿದ್ದು ಸರಿಯಲ್ಲ,[5] ಅದು ಚಾವುಂಡರಾಯನ 'ಲೋಕೋಪಕಾರ' ಎಂಬ ಗ್ರಂಥದಲ್ಲಿಯ ೮ನೆಯ ಆಶ್ವಾಸವೆಂದು ತಿಳಿದುಬಂದಿದೆ. 'ಜಯಬಂಧುನಂದನ' ಇದು ಚಾವುಂಡರಾಯನು ತನ್ನ ಪದ್ಯಗಳ ಕೊನೆಯಲ್ಲಿ ಉಪಯೋಗಿಸಿದ ಶಿಷ್ಟಕಲ್ಪ-ದ್ರುಮ, ಬುಧೈಕಾಶ್ರಯ ಮುಂತಾದ ಅಂಕಿತಗಳಲ್ಲಿ ಒಂದಾಗಿ ಅವನಿಗೆ ಆಶ್ರಯ-ಕೊಟ್ಟ ದೊರೆಯ ಹೆಸರಾಗಿರಬೇಕು. ಈ ಚಾವುಂಡರಾಯನು (೧೦೨೫) 'ಚಾವುಂಡ-ರಾಯ ಪುರಾಣ'ದ ಚಾವುಂಡರಾಯನಲ್ಲ ಎಂಬಂತೆ ಇವನಿಗೆ ಆಶ್ರಯಕೊಟ್ಟಿರ-ಬಹುದಾದ ಜಯಬಂಧುನಂದನನು 'ಕವಿರಾಜಮಾರ್ಗ'ದಲ್ಲಿ ಹೇಳಿದ ಜಯ-ಬಂಧುವಿನ ಮಗನಾಗಲಾರನು.

ದುರ್ವಿನೀತನ ವಿಷಯವಾಗಿ ಉಳಿದವರಿಗಿಂತ ಹೆಚ್ಚು ಸಂಗತಿಗಳು ತಿಳಿದಿರು-ತ್ತವೆ. ಗಂಗವಂಶದ ರಾಜರಲ್ಲಿ ಪರಾಕ್ರಮದಲ್ಲಿಯೂ ಪಾಂಡಿತ್ಯದಲ್ಲಿಯೂ ಅಷ್ಟೇ

---

1 ಕವಿಚರಿತೆ, ಸಂ. ೧, ಪು. ೧೧.

2 ಗೋವಿಂದ ಪೈ : ಕನ್ನಡ ಸಾಹಿತ್ಯದ ಪ್ರಾಚೀನತೆ (ಉದಯಭಾರತ, ೨–೫, ಪು. ೧೧೧

3 ಗೋವಿಂದ ಪೈ : ನೃಪತುಂಗನ ಮತವಿಚಾರ (ಕ.ಸಾ.ಪ. ಪತ್ರಿಕೆ, ೧೨–೪, ಪು. ೨೫೭–೨೬೩

4 ಕ.ಚ., ಸಂ. ೧, ಪು. ೧೧–೧೨.

5 ಕ.ಚ., ಸಂ. ೧, ಪು. ೧೬.

ಹೆಸರಾದ ದುರ್ವಿನೀತನೆಂಬ ಅರಸಿದ್ದನು. ಅವನ ಕಾಲ ಕ್ರಿ.ಶ. ೬೦೦. ಅವನೇ 'ಕವಿರಾಜಮಾರ್ಗ'ದಲ್ಲಿಯ ದುರ್ವಿನೀತನಾಗಿರಬೇಕು. ಗಂಗಶಾಸನಗಳಲ್ಲಿ ಅವನ ಬಹುಮುಖವಾದ ಪಾಂಡಿತ್ಯ-ಪ್ರತಿಭೆಗಳ ವರ್ಣನೆಯಲ್ಲದೆ ಅವನು ರಚಿಸಿದ ಹಲವು ಗ್ರಂಥಗಳ ಸ್ಪಷ್ಟವಾದ ಉಲ್ಲೇಖವಿದೆ.[1] ವಿಶೇಷವಾಗಿ 'ಅನೇಕಕಾವ್ಯಕಥಾನಾಟಕ-ಪ್ರಣಯನಪ್ರರೂಢಪಾಟವೇನ' ಎಂಬ ಅವನ ಸ್ತುತಿಯನ್ನು ಗಮನಿಸಬೇಕು. ಜೊತೆಗೆ ಸಂಸ್ಕೃತ ಕವಿಯಾದ ಭಾರವಿಯ ಕಿರಾತಾರ್ಜುನೀಯ ಕಾವ್ಯದ ೧೫ನೆಯ ಸರ್ಗದ ಟೀಕಾಕಾರ, ಬೃಹತ್ಕಥೆಯನ್ನು ಸಂಸ್ಕೃತದಲ್ಲಿ ರಚಿಸಿದವನು, ಶಬ್ದಾವತಾರಕಾರ ಎಂದವನನ್ನು ವರ್ಣಿಸಲಾಗಿದೆ. 'ಅವಂತಿಸುಂದರೀ ಕಥಾಸಾರ'ದಿಂದ ಭಾರವಿ ದುರ್ವಿನೀತನ ಆಸ್ಥಾನದಲ್ಲಿದ್ದನೆಂದು ತಿಳಿಯುತ್ತದೆ. ಅದೇ ಸಮಯಕ್ಕೆ ಶಬ್ದಾ-ಲಂಕಾರದ ವಿವಿಧ ಪ್ರಭೇದಗಳಿಗೆ ಉದಾಹರಣೆಯಾಗಿ ಬರೆದಂತಿದ್ದ ಕಿರಾತಾರ್ಜು-ನೀಯದ ೧೫ನೆಯ ಸರ್ಗಕ್ಕೆ ಟೀಕೆಯನ್ನು ಬರೆದು ದುರ್ವಿನೀತನು ತನ್ನ ನೈಪುಣ್ಯ-ವನ್ನು ತೋರಿರಬೇಕು. ಈ ಟೀಕೆ ನಿಸ್ಸಂಶಯವಾಗಿ ಕನ್ನಡದಲ್ಲಿಯೇ ಇರಬೇಕೆಂದು ರಾಯಿಸರು ಹೇಳಿದ್ದಾರೆ.[2] ನಿಸ್ಸಂಶಯವಾಗಿ ಎಂದು ನಾವು ಹೇಳುವಂತಿಲ್ಲ, ಸಂಸ್ಕೃತದಲ್ಲಿ ಇದ್ದಿರಬಹುದೆಂಬ ಸಂಶಯಕ್ಕೆ ಹೆಚ್ಚು ಆಸ್ಪದವಿದೆ. ಅವನು ಗುಣಾ-ಢ್ಯನ ಬೃಹತ್ಕಥೆಯನ್ನು ಪೈಶಾಚೀ ಭಾಷೆಯಿಂದ ಸಂಸ್ಕೃತಕ್ಕೆ ಅನುವಾದಿಸಿದ್ದು ಬಹು ದೊಡ್ಡ ಸಾಹಿತ್ಯಕಾರ್ಯ. ಅದು ಬುಧಸ್ವಾಮಿ (ಕ್ರಿ.ಶ. ೮೦೦), ಕ್ಷೇಮೇಂದ್ರ (ಕ್ರಿ.ಶ. ೧೧೦೦) ಮತ್ತು ಸೋಮದೇವ (ಕ್ರಿ.ಶ. ೧೧೦೦) ಇವರಿಗಿಂತ ಪ್ರಾಚೀನವಾದ ಮೊದಲನೆಯ ಅನುವಾದವಾಗಿದೆ. ಅದು ದೊರೆಯದೆ ಇದ್ದುದು ಸಂಸ್ಕೃತ ವಾಙ್ಮಯಕ್ಕೆ ದೊಡ್ಡ ನಷ್ಟವೇ ಸರಿ. ಕನ್ನಡಗದ್ಯಕಾರನೆಂದು ಹೆಸರಾದ ದುರ್ವಿನೀತನು ಈ ಬೃಹತ್ ಕಥೆಯನ್ನು 'ವಡ್ಡಕಥಾ' ಎಂಬ ಹೆಸರಿನಲ್ಲಿ ಕನ್ನಡಿಸಿರಬೇಕೆಂದೂ ಪಂಚತಂತ್ರ ಕಥೆಗಳ ಮೂಲಪರಂಪರೆ ದಕ್ಷಿಣದಲ್ಲಿಯೇ ಆರಂಭವಾಯಿತೆಂದೂ ಒಂದೂಹೆ ವ್ಯಕ್ತ-ವಾಗಿದೆ.[3] ಇದಕ್ಕೆ ಪ್ರಬಲವಾದ ಆಧಾರವೇನೂ ಇಲ್ಲ. ಗುಣಾಢ್ಯನಿಂದ ಉದಯಿಸಿ ಬಂದ ವಸುಭಾಗಭಟ್ಟನ ಪಂಚತಂತ್ರಪರಂಪರೆ ದುರ್ಗಸಿಂಹನ ಪಂಚತಂತ್ರದಿಂದ ತಿಳಿದ ಮೇರೆಗೆ ಜೈನಪರವಾದ ಅಂಶಗಳಿಂದ ಕೂಡಿದ್ದಾಗಿ ದಕ್ಷಿಣದಲ್ಲಿ ತಲೆದೋರಿತು ಎಂದು ಹೇಳಬಹುದಾದರೆ ಮೇಲಿನ ಊಹೆಗೆ ಸಂಭವನೀಯತೆ ಬರುತ್ತದೆ. 'ಶಬ್ದಾವತಾರ'

---

1 R. Narasimhacharya: History of Kannada Literature, pp. 2-3, Nallala Plates, M.A.R. 1924, p. 70; M.A.R. 1912, pp. 65-9; I.A. XLII, 204; JRAS 1913, 389.

2 Rice: Mysore and Coorg from the Inscriptions, p. 196.

3 ದ. ರಾ. ಬೇಂದ್ರೆ: ಜ್ಞಾನೇಶ್ವರಪೂರ್ವಕಾಲೀನ ಕಾನಡೀ ವಾಙ್ಮಯ (ಮ.ಸಾ.ಪ.ಪ., ೭-೪, ಪು. ೫೯)

ಇದು ಅವನ ಮೂರನೆಯ ಗ್ರಂಥ. ಇದು ವ್ಯಾಕರಣಗ್ರಂಥವೆಂಬುದು ಸ್ಪಷ್ಟ. ಯಾವ ಭಾಷೆಯಲ್ಲಿ ಬರೆದುದು ಎಂಬುದು ತಿಳಿದಿಲ್ಲ. ಇದು ಪಾಣಿನೀವ್ಯಾಕರಣದ ಟೀಕೆಯೆಂದು ಒಂದು ಅಭಿಪ್ರಾಯವಿದೆ.[1] ಇವನ ಗುರುಗಳೂ ಸುಪ್ರಸಿದ್ಧ ವ್ಯಾಕರಣಪಂಡಿತರೂ ಆದ ಪೂಜ್ಯಪಾದರು 'ಶಬ್ದಾವತಾರ'ವೆಂಬ ಪಾಣಿನೀಸೂತ್ರ-ವೃತ್ತಿಯನ್ನೂ ಜೈನೇಂದ್ರವ್ಯಾಕರಣವನ್ನೂ ರಚಿಸಿದರು. ಆ ಟೀಕೆಗೆ ವಿವರಣೆಯಾಗಿ ದುರ್ವಿನೀತನು ಇನ್ನೊಂದು ಟೀಕೆಯನ್ನು ಸಂಸ್ಕೃತದಲ್ಲಿ ಬರೆದನೋ ಇಲ್ಲವೆ ಕನ್ನಡ-ದಲ್ಲಿ ಬರೆದನೋ ಎಂಬುದು ತಿಳಿಯದಾಗಿದೆ. ಗ್ರಾಂಥಿಕ ಭಾಷೆಯಾಗಿ ಬೆಳೆಯ-ತೊಡಗಿದ್ದ ಕನ್ನಡನುಡಿಗೆ ಅಗತ್ಯವಾದ ಒಂದು ವ್ಯಾಕರಣಗ್ರಂಥವೆಂದು ಕನ್ನಡದಲ್ಲಿ ಅದನ್ನವನು ಬರೆದಿರಬಹುದೇ ಎಂದು ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಅನುಕೂಲವಾದರೆ, ಶಾಸನಗಳಲ್ಲಿ ಹೇಳಲಾದ ಅವನ ಮೂರು ಗ್ರಂಥಗಳಲ್ಲಿ 'ಶಬ್ದಾವತಾರ'ವೊಂದು ಮಾತ್ರ ಕನ್ನಡ ಗ್ರಂಥವಾಗುತ್ತದೆ. ಈ ಎಲ್ಲ ಗದ್ಯಕಾರರ ಕನ್ನಡ ಗ್ರಂಥಗಳ ವಿಷಯ-ವಾಗಿ ಏನೂ ನಿಶ್ಚಿತವಾಗಿ ತಿಳಿಯದೆ ಹೋದರೂ ಅವರಲ್ಲಿ ಒಬ್ಬನಾದ ದುರ್ವಿನೀತನು ೬ನೆಯ ಶತಮಾನದ ಗಂಗರಾಜನಾಗಿದ್ದು ಸ್ವತಃ ಬಹುಶ್ರುತನೂ ಸಂಸ್ಕೃತ–ಕನ್ನಡ ಗ್ರಂಥಕಾರನೂ ಕವಿಗಳಿಗೆ ಆಶ್ರಯದಾತನೂ ಆಗಿ ಹೆಸರುಪಡೆದನೆಂಬ ಸಂಗತಿ ಕನ್ನಡ ಸಾಹಿತ್ಯಚರಿತ್ರೆಯ ಆರಂಭಕಾಲದ ನಿರೂಪಣೆಯಲ್ಲಿ ನೆನೆಯತಕ್ಕದ್ದಾಗಿದೆ.

ಪದ್ಯಕಾರರಲ್ಲಿ ಪರಮಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕ-ಪಾಲಾದಿಗಳನ್ನು 'ಕವಿರಾಜಮಾರ್ಗ'ವು ಉಲ್ಲೇಖಿಸಿದೆ. ಅವರ 'ನಿರತಿಶಯವಸ್ತು-ವಿಸ್ತರವಿರಚನೆ ತದಾದ್ಯಕಾವ್ಯಕ್ಕೆ ಎಂದುಂ ಲಕ್ಷ್ಯಂ' ಎಂದರೆ ಅವರ ವಿಸ್ತಾರವಾದ ಕಾವ್ಯಬಂಧವು ಅವರ ಶ್ರೇಷ್ಠ (ಪ್ರಾಚೀನ?) ಕಾವ್ಯಕ್ಕೆ ಉದಾಹರಣೆ ಇಲ್ಲವೆ ಗುರುತು ಆಗಿದೆ ಎಂದರ್ಥ. ಗದ್ಯಕಾರರಂತೆ ಈ ಪದ್ಯಕಾರರೂ ಸಣ್ಣಪುಟ್ಟ ಕವಿಗಳಲ್ಲವೆಂದೂ ಮಹಾಕಾವ್ಯರಚನೆಯಿಂದ ಶ್ರೇಷ್ಠತ್ವವನ್ನು ಪಡೆದವರೆಂದೂ ಧ್ವನಿತವಾಗುತ್ತದೆ. ಇವರಲ್ಲಿ ಶ್ರೀವಿಜಯನ ಉಲ್ಲೇಖ 'ಕವಿರಾಜಮಾರ್ಗ'ದ ಮೂರು ಪರಿಚ್ಛೇದದ ಕೊನೆಗಳಲ್ಲಿ ಬರುತ್ತದೆ. ಅವನೇ ಈ ಗ್ರಂಥವನ್ನು ಬರೆದವನೆಂದು ತಿಳಿಯಲು ಸಾಕಾ-ಗುವಷ್ಟು ಆಧಾರವಿದೆ. ಆದರೆ ಶ್ರೇಷ್ಠ ಕವಿಗಳ ಸಾಲಿನಲ್ಲಿ ತನ್ನ ಹೆಸರನ್ನೇ ತಾನು ಅದರಲ್ಲಿಯೂ ಮೊದಲನೆಯದಾಗಿ ಗ್ರಂಥಕರ್ತನು ಹೇಳಲಾರನು, ಮುಂದಿನ ಕಾಲದ ಉಲ್ಲೇಖಗಳಲ್ಲಿ 'ಶ್ರೀವಿಜಯರ ಕವಿಮಾರ್ಗಂ' ಎಂಬುದನ್ನು ದುರ್ಗಸಿಂಹನು ಆದರಪೂರ್ವಕವಾಗಿ ಹೇಳಿದ್ದು ನೋಡಿದರೆ 'ಕವಿಮಾರ್ಗ'ವೆಂಬ ಲಕ್ಷಣಗ್ರಂಥ-ವನ್ನು ಹಳಗಾಲದ ಶ್ರೀವಿಜಯನು ಬರೆದಿರಬೇಕು, ಅದನ್ನೆ 'ಕವಿರಾಜಮಾರ್ಗ' ಎಂದು ವಿಸ್ತಾರಗೊಳಿಸಿ ಕವೀಶ್ವರನೆಂಬೊಬ್ಬನು ನೃಪತುಂಗನ ಸಭಾಸದನಾಗಿ ರಚಿ-ಸಿದನೆಂಬ ಅಭಿಪ್ರಾಯ ಹುಟ್ಟಿತು.[1] ಚಂದ್ರಪ್ರಭಪುರಾಣವನ್ನು ಚಂಪುವಾಗಿ ಬರೆದ

---

[1] R. Narasimhacharya: History of Kannada Literature, p. 3.

ಶ್ರೀವಿಜಯನನ್ನು ಮುಂದಿನ ಒಬ್ಬಿಬ್ಬರು ಬಣ್ಣಿಸಿದ್ದಾರೆ. 'ಕವಿರಾಜಮಾರ್ಗ'ದಲ್ಲಿ ಹೇಳಲಾದ ಶ್ರೀವಿಜಯನೇ ಆ ಪುರಾಣಕಾರನೇ ಎಂಬ ಪ್ರಶ್ನೆಯೂ ತಲೆಯೆತ್ತಿದೆ. ಅವನೇ ಇವನು ಎಂದೂ ನೃಪತುಂಗನ ಹೆಸರಿನಲ್ಲಿ 'ಕವಿರಾಜಮಾರ್ಗ'ವನ್ನು ಬರೆದನೆಂದೂ ಕವಿಚರಿತೆಕಾರರು ಊಹಿಸಿದ್ದಾರೆ. ಈ ವಿಷಯದ ವಿಸ್ತೃತ ಚರ್ಚೆ ಇಲ್ಲಿ ಪ್ರಕೃತವಲ್ಲ. ಆದರೆ ಇನ್ನೂ ಪ್ರಾಚೀನನಾದ ಶ್ರೀವಿಜಯನೆಂಬ ಗ್ರಂಥಕಾರ ಇದ್ದನೆಂದು ತಿಳಿಯುವವರೆಗೆ ಕವಿರಾಜಮಾರ್ಗಕಾರನೇ ಶ್ರೀವಿಜಯನೆಂದು ನಮಗೆ ತೋರುತ್ತದೆ. ಅವನೇ ಚಂದ್ರಪ್ರಭಪುರಾಣವನ್ನು ಬರೆದನೆಂಬುದು ಮಾತ್ರ ಅಷ್ಟು ಖಚಿತವಲ್ಲ. ಆತ್ಮಸ್ತುತಿಯ ದೋಷಕ್ಕೆ ಶ್ರೀವಿಜಯನು ಗುರಿಯಾಗುವನಲ್ಲ ಎಂದರೆ ಅದಕ್ಕೆ ಪಕ್ಕಾಗದ ಕನ್ನಡ ಕವಿಗಳನ್ನು ಬೆರಳಿನಿಂದ ಎಣಿಸಬೇಕಾಗುತ್ತದೆ. ತನ್ನ ಹೆಸರನ್ನು ಮೊದಲನೆಯದಾಗಿ ಇಟ್ಟು ತಾನೇ ಕವಿರಾಜಮಾರ್ಗದ ಕರ್ತೃ ಎಂಬುದನ್ನು ಸೂಚಿಸುವುದು ಅವನ ಉದ್ದೇಶವಾಗಿರಬಹುದು. 'ಕವಿರಾಜಮಾರ್ಗ'ದ ಬಗ್ಗೆ ಮುಂದೆ ಬರೆಯುವ ಪ್ರಕರಣದಲ್ಲಿ ಈ ಅಭಿಪ್ರಾಯವನ್ನು ವಿಶದಗೊಳಿಸಲಾಗುವುದು. ಕವೀಶ್ವರ ಎಂಬುದು ಬೇರೊಬ್ಬ ಕವಿಯ ಬಿರುದು, ಕವಿರಾಜಮಾರ್ಗದ ಕರ್ತೃ ಅವನೇ ಎಂದು ಒಂದಿಲ್ಲೊಂದು ಬಗೆಯಲ್ಲಿ ಹಲವರು ಅಭಿಪ್ರಾಯಪಟ್ಟಿದ್ದಾರೆ.[1] ಆದರೆ ನಮಗೆ 'ಶ್ರೀವಿಜಯ ಕವೀಶ್ವರ' ಇದೊಂದೇ ಪದವಾಗಿ ಇರಬಹುದೆಂದು ತೋರುತ್ತದೆ. 'ವಿಜಯಕವೀಂದ್ರ' ಎಂದು ಚಂದ್ರಪ್ರಭ ಸಾಂಗತ್ಯದಲ್ಲಿ ದೊಡ್ಡಯ್ಯನು ಕರೆದದ್ದನ್ನು ನೆನೆಯಬೇಕು. ಹಾಗಿರದಿದ್ದರೆ ಕವೀಶ್ವರ ಎಂಬ ಬಿರುದಿನ ಬೇರೊಬ್ಬ ಕವಿಯಿರಬೇಕು. 'ಕವಿರಾಜಮಾರ್ಗ'ದ ರಚನೆಯಲ್ಲಿ ಅವನ ಸಂಬಂಧವಿರಲಾರದು. ಈ ಸಂದರ್ಭದಲ್ಲಿ ಸಮಂತಭದ್ರನೇ ಶ್ರೀವಿಜಯನಾಗಿರಬೇಕೆಂಬ ಊಹೆಯೊಂದನ್ನು ಆಲೋಚಿಸಬಹುದು.[2] ಈ ಊಹೆಯಲ್ಲಿ ತಥ್ಯಾಂಶವಿದ್ದರೆ ಕ್ರಿ.ಶ. ೨ನೆಯ ಶ.ದಲ್ಲಿಯೋ ೪ನೆಯ ಶ.ದಲ್ಲಿಯೋ ಇದ್ದ ಸಮಂತಭದ್ರನು ಶ್ರೀವಿಜಯನೆಂಬ ಇನ್ನೊಂದು ಹೆಸರಿನಲ್ಲಿ 'ಕವಿಮಾರ್ಗ'ವೆಂಬ ಕನ್ನಡ ಗ್ರಂಥವನ್ನು ರಚಿಸಿದನೆಂದು ಹೇಳಿ ಕನ್ನಡ ಸಾಹಿತ್ಯದ ಹಳಮೆಯನ್ನು ಕ್ರಿ.ಶ. ಆರಂಭ ಶತಕಗಳ ವರೆಗೆ ಹಿಂದೆ ಸರಿಸಲು ಅನುವು ದೊರೆಯುತ್ತದೆ. ಆದರೆ ಈ ಸಮೀಕರಣಕ್ಕೆ ಇನ್ನೂ ಹೆಚ್ಚಿನ ಪ್ರಮಾಣಗಳು ಬೇಕು. 'ಪಂಡಿತ' ಎಂಬುದೂ ಬಿರುದೇ ಆಗಿರಬೇಕು, ಯಾರ ಬಿರುದು ಗೊತ್ತಿಲ್ಲ. ಪೂಜ್ಯಪಾದನು ವ್ಯಾಕರಣಪಂಡಿತನೂ ವೈದ್ಯನೂ ಆಗಿದ್ದ ಕಾರಣ ಅವನ ಉಲ್ಲೇಖವೇ ಇಲ್ಲಿ ಇರಬೇಕು, ಕ್ರಮವಾಗಿ ಶ್ರೀವಿಜಯ ಎಂದರೆ ಸಮಂತಭದ್ರ, ಕವೀಶ್ವರ ಎಂದರೆ ಕವಿಪರಮೇಷ್ಠಿ, ಪಂಡಿತ ಎಂದರೆ ಪೂಜ್ಯಪಾದ ಎಂದು ಶ್ರೀ ಬೇಂದ್ರೆಯವರು ಊಹಿಸಿ-

---

[1] Fleet : I.A. XXXIII, 258 ; ಎ. ವೆಂಕಟರಾವ್, ಎಚ್. ಶೇಷಯ್ಯಂಗಾರ್ (ಕವಿರಾಜಮಾರ್ಗ, ಮದ್ರಾಸ್ ಆವೃತ್ತಿ, ಅವತರಣಿಕೆ)

[2] ದ. ರಾ. ಬೇಂದ್ರೆ : ಸಮಂತಭದ್ರನೇ ಶ್ರೀವಿಜಯನಿರಬಹುದೇ ?
(ಸಾಹಿತ್ಯ ಸಂಶೋಧನ ಪು. ೧೧೯)

ದ್ದಾರೆ.[1] ಈ ಚಮತ್ಕಾರದ ಜೋಡಣೆಯಲ್ಲಿ ಸತ್ಯತೆ ಎಷ್ಟಿದೆ ಎಂಬುದನ್ನು ಬಲ್ಲವರು ಪರಿಕಿಸಬೇಕು, ಆ ಮೂವರು ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿದರೇ ಎಂಬುದನ್ನು ಸಂಶೋಧಿಸಬೇಕು.

ಚಂದ್ರ–ಲೋಕಪಾಲ ಇವರಿಬ್ಬರ ವಿಷಯವಾಗಿ ನಿಚ್ಚಳವಾಗಿ ಏನೂ ತಿಳಿದಿಲ್ಲ. ಚಂದ್ರನೊಬ್ಬನ ಬಗ್ಗೆ ಮುಂದಿನ ಕಾವ್ಯಗಳಲ್ಲಿ ಹಲವು ಉಲ್ಲೇಖಗಳಿವೆ. ಶ್ರೀಧರಾಚಾರ್ಯ (೧೦೫೦) ತನ್ನ 'ಜಾತಕತಿಲಕ'ದಲ್ಲಿ 'ಅಂಬುಜಾರಿ' ಎಂಬ ಪದದಿಂದ ಅವನನ್ನು ಸೂಚಿಸಿದಂತಿದೆ.[2] ಚೌಂಡರಸ (ಸು. ೧೨೦೦) ಪೂರ್ವಕವಿಗಳನ್ನು ಹೊಗಳುವಲ್ಲಿ ಪಂಪ, ರನ್ನ, ರುದ್ರರ ಜೊತೆಗೆ ಒಬ್ಬ ಚಂದ್ರನನ್ನೂ ಹೊಗಳಿದ್ದಾನೆ.[3] ದುರ್ಗಸಿಂಹ (೧೦೩೦), ರುದ್ರಭಟ್ಟ (ಸು. ೧೩೦೦), ಕೇಶಿರಾಜ (ಸು. ೧೨೬೫), ಅರ್ಹದ್ದಾಸ (ಸು. ೧೩೦೦) ಇವರು ಒಬ್ಬ ಚಂದ್ರಭಟ್ಟನನ್ನು ಉಲ್ಲೇಖಿಸಿದ್ದಾರೆ.[4] ೧೦೬೭ರಲ್ಲಿದ್ದ ಚಂದ್ರಭಟ್ಟನೆಂಬ ಕವಿ, ೧೦೪೦ರ ಮದನತಿಲಕದ ಚಂದ್ರರಾಜ ಇವರು ಬೇರೆ ಗ್ರಂಥಕಾರರೆಂಬುದು ಸ್ಪಷ್ಟವಾಗಿದೆ. ಮೇಲಿನ ಉಲ್ಲೇಖಗಳಲ್ಲಿ 'ಕವಿರಾಜಮಾರ್ಗ'ದ ಚಂದ್ರ ಯಾರೆಂಬುದನ್ನು ಕೈಯಿಟ್ಟು ಹೇಳಲಾಗದು. ಅರ್ಹದ್ದಾಸ ಹೇಳಿದ 'ಚಂದಿರಭಟ್ಟ' ಮಳೆಯ ಶಾಸ್ತ್ರವನ್ನು ಕುರಿತು ಬರೆದ ಶಾಸ್ತ್ರಕಾರನೆಂಬುದರಿಂದ ಅವನು ದುರ್ಗಸಿಂಹಾದಿಗಳು ಕವಿಯೆಂದು ಸ್ತುತಿಸಿದ ಚಂದ್ರಭಟ್ಟನಿಗಿಂತ ಬೇರೆಯಾಗಿರಬಹುದು, ಇಲ್ಲವೆ ಕವಿಯಾದ ಚಂದ್ರಭಟ್ಟನು ಶಾಸ್ತ್ರಕಾರನೂ ಆಗಿರಬಹುದು. ಚಂದ್ರಭಟ್ಟ ಹಾಗೂ ಚಂದ್ರ ಇವರು ಬೇರೆ ಕವಿಗಳೆಂದು ಈವರೆಗಿನ ಉಲ್ಲೇಖಗಳಿಂದ ಹೊರಡುವುದಿಲ್ಲ. ಪ್ರಸಿದ್ಧ ಕವಿಗಳೊಂದಿಗೆ ಈ ಎರಡೂ ಹೆಸರುಗಳನ್ನು ಎತ್ತಿ ಹೇಳಿದ್ದರಿಂದ 'ಕವಿರಾಜಮಾರ್ಗ'ದ ಚಂದ್ರನೇ ಉದ್ದಿಷ್ಟನಾಗಿರಬೇಕು. ದುರ್ಗಸಿಂಹ(೧೦೩೦)ನ ಉಲ್ಲೇಖದಿಂದ ಅದಕ್ಕಿಂತ ಹಿಂದೆ ಪ್ರಸಿದ್ಧಿಯನ್ನು ಪಡೆದ ಚಂದ್ರ ಇಲ್ಲವೆ ಚಂದ್ರಭಟ್ಟ ೯ ಇಲ್ಲವೆ ೧೦ನೆಯ ಶ.ದಲ್ಲಿ ಇದ್ದವನಾಗಬೇಕಾಗುತ್ತದೆ. ಅದಕ್ಕಿಂತ ಹಿಂದೆಯೂ ಇದ್ದಿರಬಹುದು. ಈ ಚಂದ್ರಕವಿ ಭಾಗವತಧರ್ಮದ ಬ್ರಾಹ್ಮಣಕಾವ್ಯದ ಪ್ರಾರಂಭಮಾಡಿದನು, ಇವನ ಸ್ಮರಣವನ್ನು ದುರ್ಗಸಿಂಹ ಮೊದಲಾದ ಶೈವ–ವೈಷ್ಣವ ಕವಿಗಳೂ ತಪ್ಪದೆ ಮಾಡಿದ್ದಾರೆ, ಪ್ರಮುಖ ಜೈನಕವಿಗಳು ಮಾಡಿಲ್ಲ, ವೈದಿಕವೆಂದುಕೊಂಡ ಬ್ರಾಹ್ಮಣರು ೫–೬ನೆಯ ಶ.ದಲ್ಲಿಯೆ

---

1 ಅದೇ, ಪು. ೧೧೧.

2 ಕ.ಚ., ಸಂ. ೧, ಪು. ೭೩.

3 ಚೌಂಡರಸ: ಅಭಿನವದಶಕುಮಾರಚರಿತೆ, ೧–೧೨.

4 ದುರ್ಗಸಿಂಹ: ಪಂಚತಂತ್ರ, ೧–೨೩, ರುದ್ರಭಟ್ಟ: ಜಗನ್ನಾಥವಿಜಯ, ೧–೧೦, ಕೇಶಿರಾಜ: ಶಬ್ದಮಣಿದರ್ಪಣ, ಪೀ–೫, ಅರ್ಹದ್ದಾಸ: ರಟ್ಟಮತ (ಕ.ಚ., ಸಂ. ೧, ಪು. ೪೦೧).

ಕನ್ನಡ ಭಾಷೆಯ ಸ್ವೀಕಾರ ಮಾಡಿದರು ಎಂದು ಮುಂತಾಗಿ ಶ್ರೀ ಬೇಂದ್ರೆಯವರು ಹೊಸ ಊಹೆಯನ್ನು ಮಾಡಿದ್ದಾರೆ.[1] ಈ ಊಹೆಯನ್ನು ವಿಮರ್ಶಿಸುವಲ್ಲಿ ಚಂದ್ರ ಇಲ್ಲವೆ ಚಂದ್ರಭಟ್ಟನು ಬ್ರಾಹ್ಮಣಕವಿಯೆಂದೇನೋ ತೋರುತ್ತದೆ. ಆದರೆ ವೈದಿಕ-ಬ್ರಾಹ್ಮಣನೋ ಜೈನಬ್ರಾಹ್ಮಣನೋ ತಿಳಿಯದು. 'ವಿಪ್ರಕುಲೋತ್ತಮ'ನೂ ಜೈನನೂ ಆದ ಶ್ರೀಧರಾಚಾರ್ಯನು ತನ್ನನ್ನು ಹೊಗಳಿಕೊಳ್ಳುವಾಗ 'ಇಳಾದೇವಾನ್ವಯ ಅಬ್ಧಿ **ಅಂಬುಜಾರಿನಿಭಂ**' ಎಂದರೆ ಬ್ರಾಹ್ಮಣವಂಶಸಮುದ್ರಕ್ಕೆ **ಚಂದ್ರ**ನಂತೆ ಇದ್ದವನು ಎನ್ನುತ್ತಾನೆ. ಇದರಿಂದ ಜೈನಬ್ರಾಹ್ಮಣನಾದ ಚಂದ್ರನಿಗೆ ತಾನು ಸಮಾನ ಎಂದು ಹೇಳಿದಂತಾಗಲಿಲ್ಲವೇ? ಅವನ ಇದೇ ಪದ್ಯದಲ್ಲಿ ಸೂಚಿಸಿದ ಉಳಿದೆಲ್ಲರೂ ಪ್ರಾಯಶಃ ಜೈನಕವಿಗಳೇ ಆಗಿದ್ದಾರೆ. ಬ್ರಾಹ್ಮಣ ಎಂಬ ಅಂಶದಲ್ಲಿ ಮಾತ್ರ ಅವನಿಗೂ ಚಂದ್ರನಿಗೂ ಹೋಲಿಕೆಯಿತ್ತೆಂದು ಹೇಳಬಹುದು. ಆದರೆ ಸಂದರ್ಭವು ನಮಗೆ ಹೆಚ್ಚಿನ ಹೋಲಿಕೆಯನ್ನು ಸೂಚಿಸುವಂತೆ ತೋರುತ್ತದೆ. ಶ್ರೀಧರಾಚಾರ್ಯ, ಕೇಶಿರಾಜ ಇವರು ಶಾಸ್ತ್ರಕಾರರಲ್ಲದೆ ಒಳ್ಳೆಯ ಕವಿಗಳೂ ಆಗಿದ್ದರು. ಚಂದ್ರಭಟ್ಟ ವೈದಿಕಬ್ರಾಹ್ಮಣಕವಿಯೆಂದು ತಿಳಿದರೂ ಅವನನ್ನು ಜೈನರಾದ ತಾವು ನುತಿಸಿದ್ದಾರೆ, ಪ್ರಮಾಣವಾಗಿ ಭಾವಿಸಿದ್ದಾರೆ ಎಂಬುದನ್ನು ನೆನೆಯಬೇಕು. ಪ್ರಮುಖ ಜೈನ-ಕವಿಗಳು ಚಂದ್ರನನ್ನು ಉಲ್ಲೇಖಿಸದೆ ಇರುವಂತೆ ಬೇರೆ ಕೆಲವು ಪ್ರಖ್ಯಾತ ಜೈನ-ಕವಿಗಳನ್ನೂ ಉಲ್ಲೇಖಿಸಿಲ್ಲ. ಅವರಲ್ಲಿ ಕೆಲವರು ತಮ್ಮ ಪೂರ್ವಿಕರ ಹೆಸರನ್ನೇ ಹೇಳಿಲ್ಲ. ಈ ಯುಕ್ತಿವಾದದಿಂದ ಯಾವುದೂ ಸಿದ್ಧವಾಗಲಿಕ್ಕಿಲ್ಲ. ಇನ್ನು ದುರ್ಗಸಿಂಹ ಮುಂತಾದ ಬ್ರಾಹ್ಮಣಕವಿಗಳು ಸಾಮಾನ್ಯವಾಗಿ ಜೈನಕವಿಗಳ ಜೊತೆಗೆ ಚಂದ್ರನನ್ನು ಹೊಗಳಿದ್ದಾರೆ. ಅವನು ತಮ್ಮಂತೆ ವೈದಿಕಪರಂಪರೆಯ ಕವಿಯೆಂಬುದನ್ನು ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಇದರಿಂದ ಚಂದ್ರನ ಮತವನ್ನು ನಿರ್ಧಾರವಾಗಿ ಹೇಳುವಂತಿಲ್ಲ. ಎಂದಮೇಲೆ ಬ್ರಾಹ್ಮಣಕಾವ್ಯದ ಉದಯವು ಕ್ರಿ.ಶ. ೫–೬ನೆಯ ಶ.ದಲ್ಲಿ ಆಗಿರ-ಬೇಕೆಂಬುದು ನಮ್ಮ ದೃಷ್ಟಿಯಲ್ಲಿ ನಿರ್ಣಯಕ್ಕೆ ಬಾರದ ವಿಷಯವಾಗುತ್ತದೆ.

'ಕವಿರಾಜಮಾರ್ಗ'ದಲ್ಲಿ ಗ್ರಂಥಕಾರರ ಹೆಸರುಗಳಲ್ಲದೆ ಕೆಲವು ಗ್ರಂಥಗಳಿಂದ ಅವತರಣವಾಗಿ ಎತ್ತಿದ ಲಕ್ಷ್ಯಪದ್ಯಗಳಿವೆ ಎಂಬ ಅಭಿಪ್ರಾಯ ಅಲ್ಲಲ್ಲಿ ವ್ಯಕ್ತವಾಗಿದೆ. ಆ ಅವತರಣಗಳಲ್ಲಿ ಮುಖ್ಯವಾಗಿ ಯಾವುದೋ ಒಂದು ಕನ್ನಡ ರಾಮಾಯಣದಿಂದ ತೆಗೆದುಕೊಂಡುವೆಂದು ಹೇಳಲಾದ ೧೧–೧೨ ಪದ್ಯಗಳಿವೆ.[2] ಇವೆಲ್ಲವೂ ಯಾವ ಸಂಸ್ಕೃತ ಮೂಲದಲ್ಲಿಯೂ ದೊರೆಯದ ಸ್ವತಂತ್ರ ಪದ್ಯಗಳಾಗಿವೆ. ಕೆಲವು ಕಡೆಗೆ

---

1 ದ. ರಾ. ಬೇಂದ್ರೆ: ಜ್ಞಾನೇಶ್ವರಪೂರ್ವಕಾಲೀನ ಕಾನಡೀ ವಾಙ್ಮಯ (ಮ.ಸಾ.ಪ.ಪ., ೭–೪, ಪು. ೬೦)

2 ಕವಿರಾಜಮಾರ್ಗ (೨/೩೮, ४೦, ४೨, ೮೯, ೯೧, ೯೩, ೯೬, ೧೩೦; ३/೧೯೦, ೧೯೧, ೧೯೫).

ಲಕ್ಷಣವು ಕನ್ನಡಕ್ಕೆ ವಿಶಿಷ್ಟವಾಗಿ ಸ್ವತಂತ್ರವಾಗಿರುವಂತೆ ಲಕ್ಷ್ಯವೂ ಸ್ವತಂತ್ರವಾಗಿದೆ. ಹನುಮಂತ ರಾಮುನನ್ನು ಕಂಡ ಸಂದರ್ಭ, ಸೀತೆಯನ್ನು ಅಶೋಕವನದೊಳಗೆ ಕಂಡ ಪ್ರಸಂಗ ಮುಂತಾದುವು ಈ ಪದ್ಯಗಳಲ್ಲಿಯ ವಿಷಯವಾಗಿವೆ. ಸಾಮಾನ್ಯವಾಗಿ ಇವನ್ನೆಲ್ಲ ಹಳೆಯ ಒಂದು ರಾಮಾಯಣಗ್ರಂಥದಿಂದ ಅವತರಿಸಿಕೊಂಡಿರಬಹುದೆನ್ನಲು ಅಡ್ಡಿಯಿಲ್ಲ. ಬೇರೆ ಕೆಲವು ಸ್ವತಂತ್ರ ಲಕ್ಷ್ಯಪದ್ಯಗಳಾಗಿ ಕವಿರಾಜಮಾರ್ಗಕಾರನು ತಾನೇ ಯಾಕೆ ಅವನ್ನು ಬರೆದಿರಬಾರದು ಎಂದು ಕೇಳಬಹುದು. ಈ ಕೇಳಿಕೆ ಸ್ವಾಭಾವಿಕವಾಗಿದೆ. ಕನ್ನಡ ಲಾಕ್ಷಣಿಕರು ಯಾವಾಗಲೂ ಬೇರೆ ಕಾವ್ಯಗಳಿಂದಲೇ ಲಕ್ಷ್ಯಪದ್ಯಗಳನ್ನು ಉದ್ಧರಿಸಿದ್ದಾರೆ ಎನ್ನುವಂತಿಲ್ಲ. ಕವಿರಾಜಮಾರ್ಗಕಾರನು ಮೂಲದ ಭಾಷಾಂತರ, ವ್ಯತ್ಯಾಸಪೂರ್ವಕ ಅನುವಾದ, ವಿಸ್ತಾರಗಳನ್ನು ಮಾಡಿದ್ದಾನೆ. ಅಲ್ಲದೆ ಸ್ವತಂತ್ರ ಹಾಗೂ ಉದ್ಧೃತ ಲಕ್ಷ್ಯಗಳನ್ನು ಕೊಟ್ಟಿದ್ದಾನೆ. ಆದರೆ ರಾಮಾಯಣಕ್ಕೆ ಸಂಬಂಧಪಟ್ಟ ಅನೇಕ ಲಕ್ಷ್ಯಪದ್ಯಗಳಲ್ಲಿ ಸಂಸ್ಕೃತಸಮಾಸಪ್ರಚುರ-ವಾದ ಶೈಲಿಯ ಏಕರೂಪತೆಯಿದೆ, ಕವಿರಾಜಮಾರ್ಗದ ಶೈಲಿಗಿಂತ ಈ ಶೈಲಿ ಭಿನ್ನ-ವಾಗಿ ತೋರುತ್ತದೆ. ಗ್ರಂಥದ ಮಧ್ಯಭಾಗದಿಂದ ಎತ್ತಿಕೊಂಡ ಪದ್ಯಗಳ ಸ್ವರೂಪವೂ ಕೆಲವಕ್ಕೆ ಇದೆ. ಉದಾಹರಣೆಗೆ, ೨–೪೨ರಲ್ಲಿ 'ಜನವಿನುತಂ.....ಇನಿಸಿನಿಸು ನೆನೆನೆನೆದು ....**ಅಂತಿರೆ** ನುಡಿದಂ'. ಸಂದರ್ಭ ತಿಳಿಯದೆ ಈ ಪದ್ಯದ ಸಂಪೂರ್ಣ ಅರ್ಥವಾಗದು. ಆದರೆ ೩ನೆಯ ಪರಿಚ್ಛೇದದಲ್ಲಿ ಮೂರು ಪದ್ಯಗಳು ಮಾತ್ರ ೨ರಲ್ಲಿಯಷ್ಟು ಸಂಸ್ಕೃತ-ಪ್ರಚುರವಾಗಿಲ್ಲ, ವೀರ ಅದ್ಭುತ ರೌದ್ರರಸಗಳ ಉದಾಹರಣೆಗೆಂದು ಕವಿರಾಜಮಾರ್ಗ-ಕಾರನು ಉದ್ದೇಶಪೂರ್ವಕವಾಗಿ ರಚಿಸಿದಂತಿವೆ. ಒಟ್ಟಿನಲ್ಲಿ ಈ ಪದ್ಯಗಳ ಹೆಚ್ಚು ಭಾಗವನ್ನಂತೂ ಜೈನರಾಮಾಯಣವೊಂದರಿಂದ ತೆಗೆದುಕೊಂಡಿರಬೇಕೆನ್ನಲು ೨–೯೩ ರಲ್ಲಿ ಲಕ್ಷ್ಮಣನನ್ನು **ಲಕ್ಷ್ಮೀಧರ** ಎಂಬ ಹೆಸರಿನಿಂದ ಕರೆದುದು ಮುಖ್ಯ ಕಾರಣ-ವಾಗಿದೆ. ಅಲ್ಲದೆ ಅವನನ್ನು ಅದೇ ಪದ್ಯದಲ್ಲಿ '**ರಘುಕುಲಲಲಾಮು**' ಎಂದಿದೆ ಮಾತ್ರವಲ್ಲದೆ ರಾವಣನು ಅವನನ್ನೇ ತಾಗಿ ಕಾದಿದನೆಂಬ ವರ್ಣನೆ ಸಾಭಿಪ್ರಾಯ-ವಾಗಿದೆ. ಜೈನರಾಮಾಯಣದಲ್ಲಿ ಯುದ್ಧಶೂರನಾಗಿ ರಾವಣನನ್ನು ಕೊಂದವನು ರಾಮನಲ್ಲ, ಲಕ್ಷ್ಮಣ. ೨–೩೮, ೪೦ರಲ್ಲಿ 'ಅಣುವ' ಎಂಬುದನ್ನು ಹನುಮಂತನನ್ನು ಕುರಿತು ಬಳಸಿದ್ದು, ೨–೧೩೦ರಲ್ಲಿ 'ತಾರಾದಿವಿಜಯೋದಯಾ' ಎಂಬ ಪ್ರಯೋಗ ಇವೂ ಜೈನರಾಮಾಯಣಕ್ಕೆ ವಿಶಿಷ್ಟವೆಂದು ತಿಳಿಯಲಾಗಿದೆ.* ಇತರ ಪದ್ಯಗಳಲ್ಲಿ ವಾಲ್ಮೀಕಿರಾಮಾಯಣಕ್ಕೂ ಜೈನರಾಮಾಯಣಕ್ಕೂ ಸಮಾನವಾದ ಸಂನಿವೇಶಗಳಿವೆ. ಹಾಗೆ ನೋಡಿದರೆ ೨–೩೮ರಲ್ಲಿ ಇಂದ್ರನಿಗೆ **ಶತಮುಖ** ಎಂದುದು ವ್ಯುತ್ಪತ್ತಿಯಲ್ಲಿ ಜೈನರಾಮಾಯಣಕ್ಕೆ ಸರಿಹೋಗದು. ಇದರಿಂದ ಜೈನರಾಮಾಯಣದ ಪರಂಪರೆ-ಯನ್ನು ಒಟ್ಟಿನಲ್ಲಿ ಅನುಸರಿಸಿಯೂ ಕೆಲಮಟ್ಟಿಗೆ ವಾಲ್ಮೀಕಿರಾಮಾಯಣದ ಪ್ರಭಾವಕ್ಕೆ

* ಈ ಸೂಚನೆಗಾಗಿ ನಾನು ಪ್ರೊ. ಕೆ. ಜಿ. ಕುಂದಣಗಾರರಿಗೆ ಋಣಿಯಾಗಿದ್ದೇನೆ.

ಒಳಗಾದ ಕವಿ ಬರೆದ ಜೈನರಾಮಾಯಣವೊಂದು ಇದ್ದಿರಬಹುದೆಂದು ಭಾಸವಾಗುತ್ತದೆ. ಈ ರಾಮಾಯಣವು ಯಾವಾಗ ಯಾರಿಂದ ರಚಿತವಾಯಿತು, ಅದು ಸಮಗ್ರವಾಗಿ ಕಂದಪದ್ಯದಲ್ಲಿಯೇ ಇದ್ದಿತೋ ಕಂದವೃತ್ತವಚನಗಳುಳ್ಳ ಚಂಪೂ ರೂಪದಲ್ಲಿ ಇದ್ದಿತೋ ಈ ಮುಂತಾದ ಪ್ರಶ್ನೆಗಳಿಗೆ ಯಾವ ಉತ್ತರವೂ ಈಗ ದೊರೆಯುವಂತಿಲ್ಲ. ೨–೩೬ರಲ್ಲಿ ಹರ್ಷನ ರತ್ನಾವಲಿ ನಾಟಕದ ಕಥಾಂಶವಿದೆ. ಅದನ್ನು ನಾಟಕ ಇಲ್ಲವೆ ಕಾವ್ಯರೂಪಕ್ಕೆ ಇಳಿಸಿದ ಕನ್ನಡ ಕೃತಿ ಯಾವುದಾದರೂ ಇದ್ದಿತೇ? ನಮಗೆ ಈಗ ಎನಿಸುವುದೆಂದರೆ ರತ್ನಾವಳಿಯನ್ನೋದಿ ಬಲ್ಲ ಕವಿರಾಜಮಾರ್ಗಕಾರನೇ ಸ್ವತಂತ್ರವಾಗಿ ಅದನ್ನು ರಚಿಸಿರಬಹುದು. ೨–೧೪ರಲ್ಲಿ ಒಬ್ಬ ರಾಜಕನ್ಯೆಯ ಸ್ವಯಂವರಸಂದರ್ಭವುಳ್ಳ ಪದ್ಯವಿದೆ. ಅದನ್ನು ಯಾವುದೋ ಮೊದಲಿನ ಕಾವ್ಯದಿಂದ ಎತ್ತಿರಬೇಕು. ‘ ಚಪಲಧ್ವಜ ’ ಎಂದರೆ ಅರ್ಜುನ ಎಂದಾದರೆ ಅದು ಹಿಂದೆ ಇದ್ದ ಕನ್ನಡ ಭಾರತವೊಂದರಿಂದ ತೆಗೆದುಕೊಂಡ ಪದ್ಯವಾಗಿರಬಹುದು. ಶೃಂಗಾರ, ನಿಸರ್ಗ ಮೊದಲಾದ ವಿಷಯಗಳನ್ನು ಕುರಿತಾದ ಅನೇಕ ಸ್ವತಂತ್ರ ಪದ್ಯಗಳು ಅಲ್ಲಲ್ಲಿ ಕಂಡುಬರುತ್ತವೆ.[1] ಇದಲ್ಲದೆ ರಾಜವರ್ಣನೆಯೊಂದಿಗೆ ರಾಜನೀತಿಯನ್ನೂ ಜೀವನವಿವೇಕವನ್ನೂ ತಿಳಿಹೇಳುವ ಸ್ವತಂತ್ರ ಪದ್ಯಗಳಿವೆ.[2] ಇವುಗಳಲ್ಲಿ ಹಲವು ನಿಶ್ಚಿತವಾಗಿ ಕವಿಕೃತವಾಗಿವೆ. ಉಳಿದವುಗಳಲ್ಲಿ ಕವಿಕೃತವಾದುವು ಯಾವುವು, ಹಳೆಯ ಕನ್ನಡ ಕಾವ್ಯಗಳಿಂದ ತೆಗೆದುಕೊಂಡುವು ಯಾವುವು ಎಂಬುದನ್ನು ನಿರ್ಧರಿಸುವುದು ಸುಲಭವಲ್ಲ. ಆದರೆ ಕವಿರಾಜಮಾರ್ಗವು ಪುರಾಣಕವಿ ಪ್ರಭುಗಳ ಪ್ರಯೋಗಗಳನ್ನು ಬಗೆದುನೋಡಿ ಸಮೆದ ಒಂದು ಕಾವ್ಯವೆಂದು ೨ನೆಯ ಪರಿಚ್ಛೇದದ ಕೊನೆಯ ಪದ್ಯದಲ್ಲಿ ಹೇಳಿದ ಕಾರಣ ಅವನ್ನು ಇದರಲ್ಲಿ ಬಳಸಲಾಗಿದೆ ಎಂಬ ಬಗ್ಗೆ ಸಂಶಯಕ್ಕೆ ಆಸ್ಪದವಿಲ್ಲ. ಈ ಎಲ್ಲ ವಿವೇಚನೆಯಿಂದ ‘ ಕವಿರಾಜಮಾರ್ಗ ’ಕ್ಕಿಂತ ಮೊದಲು ಕನ್ನಡದಲ್ಲಿ ಸಾಕಷ್ಟು ಸಾಹಿತ್ಯಸೃಷ್ಟಿಯಾಗಿತ್ತೆಂದೂ ೪–೫ ಶ.ಗಳ ಹಿಂದಿನಿಂದ ಅದು ಪರಂಪರೆಯಾಗಿ ಬೆಳೆಯುತ್ತಿರಬೇಕೆಂದೂ ಊಹಿಸಲು ಅವಕಾಶವಿದೆ.

---

1 ಕ.ರಾ.ಮಾರ್ಗ: ೧–೫೯, ೬೦, ೮೮, ೮೯, ೯೧, ೯೪, ೧೦೨, ೧೨೪, ೧೩೫–೬, ೧೪೪; ೨–೬೧, ೬೩, ೬೫, ೬೭, ೭೧, ೭೮, ೮೪, ೧೨೦, ೧೨೮–೧೪೨, ೧೪೫–೧೫೨; ೩–೧೩, ೧೪, ೨೧, ೨೨, ೨೬, ೩೪, ೪೫, ೫೦–೫೧, ೫೫–೫೭, ೮೨, ೮೪, ೯೩, ೧೦೫, ೧೧೯, ೧೨೬, ೧೬೬–೮, ೧೭೩, ೧೮೫–೬, ೧೯೨–೩, ೧೯೬–೭–೮, ೨೦೨, ೨೦೩, ೨೦೫.

2 ಅದೇ: ೧–೯೬, ೯೯, ೧೧೫, ೧೧೮, ೧೨೩, ೧೩೦, ೧೩೩, ೧೩೯–೪೦, ೧೪೧; ೨–೭, ೮, ೧೨, ೧೭–೧೮, ೨೧–೨೨, ೨೪, ೨೮, ೩೩, ೪೪, ೫೮, ೭೬, ೮೦, ೧೦೨, ೧೧೦; ೩–೮೨, ೧೦೬, ೧೧೧, ೧೩೦, ೧೩೧, ೧೪೩–೧೫೩, ೧೫೬, ೧೫೮, ೧೬೦, ೧೬೨, ೧೬೩, ೧೭೫–೧೮೨.

'ಕವಿರಾಜಮಾರ್ಗ'ದಲ್ಲಿಯ ಛಂದಸ್ಸು, ಪ್ರಾಸಯೋಜನೆ, ಭಾಷಾಶೈಲಿ ಇವುಗಳ ಸೂಕ್ಷ್ಮವಾದ ಅಭ್ಯಾಸದಿಂದ ಅದಕ್ಕಿಂತ ಮುಂಚೆ ಕನ್ನಡವು ಹಳದಾಗಿ ಬೆಳೆದು ಬಂದು ವರ್ಧಮಾನಸ್ಥಿತಿಯಲ್ಲಿತ್ತೆಂದು ತಿಳಿಯಲು ಎಡೆಯಿದೆ. ಇದರಲ್ಲಿಯ ೩-೧೭೦ರಲ್ಲಿ ವ-ಮಕಾರಗಳ ಪ್ರಾಸವಿದೆ. ಇದು ನೃಪತುಂಗನ ಸ್ವಯಂಕೃತ ಪದ್ಯ ಅಲ್ಲವೆಂದೂ, ಹಳೆಯ ಕೃತಿಯಿಂದ ಉದ್ಧರಿಸಿದ್ದೆಂದೂ' ಶ್ರೀ ಗೋವಿಂದ ಪೈಗಳು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಕಾವ್ಯಾದರ್ಶದ ಮೂಲಪದ್ಯವನ್ನು ಸ್ವಲ್ಪ ವ್ಯತ್ಯಾಸಗೊಳಿಸಿ ಕವಿರಾಜಮಾರ್ಗಕಾರನು ಮಾಡಿದ ಅನುವಾದವಾಗಿರುವ ಸಂಭವ ಹೆಚ್ಚಿದೆ. ಅದೇನೆ ಇರಲಿ, ಶ್ರೀ ಪೈಗಳ ವಾದಸರಣಿಯ ಮೇರೆಗೆ ಪಂಪ-ನಾಗಚಂದ್ರ ಮುಂತಾದವರಲ್ಲಿ ಇದೇ ವ-ಮ ಪ್ರಾಸವುಳ್ಳ ಕ್ವಚಿತ್ಪ್ರಯೋಗಗಳು ದೊರೆತಿವೆ. 'ಕವಿರಾಜಮಾರ್ಗ'ದಲ್ಲಿ ಹೇಳಿದ ಪ್ರಾಸನಿಯಮಗಳಲ್ಲಿ ಇದಕ್ಕೆ ಸ್ಥಾನವಿಲ್ಲ, ಹಿಂದೆಯೂ ಕೂಡ ಇರಲಾರದು. ಹೀಗಿದ್ದರೂ ಇಂಥ ಪ್ರಾಸಪ್ರಯೋಗಗಳು ತೀರ ಹಿಂದಿನ ಒಂದು ಕಾವ್ಯರೂಢಿಯ ಕುರುಹಾಗಿರಬೇಕು. ಕನ್ನಡದಲ್ಲಿ ವ-ಮ ಈ ಅಕ್ಷರಗಳಲ್ಲಿ ರೂಪಸಾದೃಶ್ಯವಿದ್ದಂತೆ ಉಚ್ಚಾರಸಾದೃಶ್ಯವೂ ಇದ್ದಿರಬೇಕು. ಸಂಸ್ಕೃತ-ದಲ್ಲಿ ಇದಿಲ್ಲ. ಸಂಸ್ಕೃತ ಪ್ರಭಾವ ಹೆಚ್ಚಿದಂತೆ ವ-ಮ ಪ್ರಾಸತ್ಯಾಗವು ಹೆಚ್ಚಿರಬೇಕು. ಈ ಉತ್ಕ್ರಾಂತಿಗೆ ಹಲವು ಶತಕಗಳು ಗತಿಸಬೇಕು. ಆದ್ದರಿಂದ ಕ್ರಿ.ಶ. ೬-೭ನೆಯ ಶ.ಗಳಲ್ಲಿ ಅಥವಾ ಅದರ ಮುಂಚಿನಿಂದಲೂ ಕನ್ನಡ ಸಾಹಿತ್ಯವು ಸಮೃದ್ಧವಾಗಿರ-ಬೇಕೆಂದು ಶ್ರೀ ಪೈಯವರು ನಿರ್ಣಯಿಸಿದ್ದಾರೆ.[1] ವ-ಮ ಇವುಗಳಲ್ಲಿ ರೂಪಸಾದೃಶ್ಯ ಅಲ್ಲದೆ ಉಚ್ಚಾರಸಾಮ್ಯ ಇಲ್ಲವೆ ಸಾಮೀಪ್ಯ ಕನ್ನಡದಲ್ಲಿ ಹಿಂದೆ ಇರಬೇಕು, ಇಂದಿಗೂ ಕೆಲಮಟ್ಟಿಗೆ ಇದೆ. ಯಾಕೆಂದರೆ 'ವ'ಕಾರವು ಅನನುನಾಸಿಕವಿದ್ದಂತೆ ಅನು-ನಾಸಿಕವೂ ಆಗಿ ಕೆಲವು ಶಬ್ದಗಳಲ್ಲಿದೆ. ಅನುನಾಸಿಕತೆಯ ಮೂಲಕ ಅದು ಪವರ್ಗದ ಅನುನಾಸಿಕವಾದ ಮಕಾರದ ಹತ್ತಿರಕ್ಕೆ ಹೋಗುತ್ತದೆ. ಈ ಕಾರಣದಿಂದ ವ-ಮ ಪ್ರಾಸಪ್ರಯೋಗಕ್ಕೆ ಅವಕಾಶ ದೊರೆತಿರಬೇಕು. ತೀರ ಹಳೆಯ ಜನಪದಸಾಹಿತ್ಯದಲ್ಲಿ ಅದು ಕಂಡು ಬಂದಿರಬಹುದು. ಅಂತೇ ಅದರ ಪ್ರಭಾವದಿಂದ ಕ್ವಚಿತ್ತಾಗಿ ಕಾವ್ಯ, ಶಾಸನಗಳಲ್ಲಿ ಕವಿಗಳು ಅದನ್ನು ಬಳಸಿದರು. ಪ್ರಾಸನಿಯಮಗಳಲ್ಲಿ ಸ್ಥಾನದೊರೆಯು-ವಷ್ಟು ಅದು ಪ್ರಚುರವಾಗಿರಲಿಲ್ಲ. ಅಚ್ಚಗನ್ನಡದ ಯುಗವೊಂದು ತೀರ ಹಿಂದೆ ಇದ್ದಿತೆಂಬ ಅಭಿಪ್ರಾಯವು ವಾದಗ್ರಸ್ತವಾಗಿದೆ. ಈ ಅಭಿಪ್ರಾಯವು ನಮಗೆ ಸಂಮತ-ವಿಲ್ಲವೆಂಬುದನ್ನು ಹಿಂದೆ ತಿಳಿಸಿದ್ದೇವೆ. ಆದ್ದರಿಂದ ಈ ಪ್ರಾಸವೈಶಿಷ್ಟ್ಯದ ಕಾರಣದಿಂದ ಸಾಹಿತ್ಯದ ಪ್ರಾಚೀನತೆಯನ್ನು ಹಿಂದೊತ್ತುವುದು ಸಾಹಸವಾದೀತು.

---

1 ಗೋವಿಂದ ಪೈ : ಕನ್ನಡ ಸಾಹಿತ್ಯದ ಪ್ರಾಚೀನತೆ

(ಉದಯ ಭಾರತ, ೨-೫, ಪು. ೧೧೧-೧೧೪)

'ಕವಿರಾಜಮಾರ್ಗ'ದಲ್ಲಿ ಬಂದ ವ್ಯಾಕರಣವಿಷಯಗಳಿಂದ ಅದಕ್ಕೆ ಹಿಂದೆ ವ್ಯಾಕರಣಗ್ರಂಥಗಳು, ಅವಕ್ಕೆ ಪೂರ್ವಭಾವಿಯಾಗಿ ಕನ್ನಡಸಾಹಿತ್ಯವು ಇದ್ದಿರಬೇಕು. ಸಂಸ್ಕೃತದಲ್ಲಿ ದೊರೆಯದ ಕೆಲವು ಅಕ್ಷರವೃತ್ತಗಳು ಈ ಗ್ರಂಥದಲ್ಲಿವೆ, ಮುಂದಿನ ಕಾವ್ಯಗಳಲ್ಲಿ ಅವುಗಳ ಪ್ರಯೋಗ ಹೆಚ್ಚಿದೆ. ಇದರಿಂದ ಸಂಸ್ಕೃತದಲ್ಲಿ ವಾಡಿಕೆಯಾದ ವೃತ್ತಗಳನ್ನು ಬಳಸಿದ ಕನ್ನಡ ಕಾವ್ಯದ ಕಾಲವೊಂದು ಆಗಿರಬೇಕು, ವಾಡಿಕೆ ಆಗಿರದ ವೃತ್ತಗಳ ಕಾಲ ಬಳಿಸಂದಿರಬೇಕು. ಕನ್ನಡದಲ್ಲಿ ಗದ್ಯಕಥೆಗಳೂ ಬೆದಂಡೆ–ಚತ್ತಾಣಗಳೂ ಪುರಾತನ ಕಾಲದಿಂದ ಇದ್ದುವೆಂದು ಹೇಳಿದೆ. ಈ ಎಲ್ಲ ಕಾರಣಗಳಿಂದ '೨೦೦ ವರ್ಷಗಳಾದರೂ ಮುಂಚಿನಿಂದ ಕನ್ನಡದಲ್ಲಿ ಉತ್ಕೃಷ್ಟವಾದ ಬಹುಮುಖವಾದ ಸಾಹಿತ್ಯವಿದ್ದಿರಬೇಕು'[1] ಎಂದು ಶ್ರೀ ಗೋವಿಂದ ಪೈಗಳು ಹೇಳಿದ್ದಾರೆ. ಇಲ್ಲಿಯ ಯುಕ್ತಿವಾದ, ನಿರ್ಣಯ ಒಟ್ಟಿನಲ್ಲಿ ಸರಿಯಾಗಿವೆ. ಆದರೆ ವ್ಯಾಕರಣ, ಛಂದಸ್ಸು, ಅಲಂಕಾರ ಇವಕ್ಕೆ ಸಂಬಂಧಿಸಿದ ಕನ್ನಡಗ್ರಂಥಗಳು 'ಕವಿರಾಜಮಾರ್ಗ'ಕ್ಕಿಂತ ಪೂರ್ವದಲ್ಲಿ ಇದ್ದುವೆಂದು ಎದೆತಟ್ಟಿ ಹೇಳುವಂತಿಲ್ಲ. ೯ನೆಯ ಶ.ದಿಂದಲೇ ಅವುಗಳ ಪ್ರಾರಂಭವಾಗಿರಲೂ ಬಹುದು. ಆದರೂ ಊಹೆಗೆ ತುಸು ಮಟ್ಟಿಗೆ ಇಂಬಿದೆ ಎಂಬುದನ್ನು ಒಪ್ಪಬೇಕು. ಶ್ರೀ ಗೋವಿಂದ ಪೈಗಳು ಕವಿರಾಜಮಾರ್ಗ ಪದ್ಯಗಳಿಂದ ಹಿಂದೆ ಅಲಂಕಾರಗ್ರಂಥಗಳಿದ್ದುವು ಎಂದು ಸಾಧಿಸಿದ್ದರೆ, 'ಕನ್ನಡದಲ್ಲಿ ಆವರೆಗೆ ಲಕ್ಷಣಗ್ರಂಥಗಳೇ ಇದ್ದಿಲ್ಲ' ಎಂದು ದಿವಂಗತ ಮುಳಿಯ ತಿಮ್ಮಪ್ಪಯ್ಯನವರು 'ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ' (೧–೪೮) ಎಂಬ ಪದ್ಯದಿಂದ ವಾದಿಸಿದ್ದಾರೆ.[2] ಅಲ್ಲದೆ ಕವಿರಾಜಮಾರ್ಗಕ್ಕೆ ಹಿಂದೆ ಮಾರ್ಗಾನುಸಾರಿಯಾದ ಗದ್ಯಸಾಹಿತ್ಯ ಮತ್ತು ದೇಶ್ಯವಾದ ಪದ್ಯಸಾಹಿತ್ಯ (ಪ್ರಗೀತಿ ಇಲ್ಲವೆ ಪಾಡುಗಬ್ಬ) ಇದ್ದಿತೆಂದೂ ಮಾರ್ಗಾನು-ಸಾರವಾದ ಪದ್ಯಕಾವ್ಯರಚನೆಗೆ ಮಾರ್ಗ ತೋರಿಸಲೆಂದು ಮೊದಲನೆಯ ಲಕ್ಷಣ-ಗ್ರಂಥವಾಗಿ 'ಕವಿರಾಜಮಾರ್ಗ' ಉದಯವಾಯಿತೆಂದೂ ಸಾರಿದ್ದಾರೆ.[3] ಇದು ನಿಜವೇ ಆಗಿದ್ದರೆ 'ಕವಿರಾಜಮಾರ್ಗ'ದಲ್ಲಿ ಉಲ್ಲೇಖಿಸಲಾದ ಪ್ರಸಿದ್ಧ ಪದ್ಯಕಾರರ ಕೃತಿಗಳೆಲ್ಲ ದೇಸಿಗಬ್ಬಗಳೇ ಆಗಿದ್ದುವೇ ಎಂಬ ಪ್ರಶ್ನೆ ಹುಟ್ಟುತ್ತದೆ. ಪೂರ್ವಿಕ ಕಾವ್ಯಗಳಿಂದ ಉದ್ಧೃತವಾದ ಪದ್ಯಗಳ ಗತಿಯೇನು? ಅವು ದೇಶ್ಯವೇ ಮಾರ್ಗವೇ? ಎಂಬ ಪ್ರಶ್ನೆಯನ್ನೂ ಕೇಳಬೇಕಾಗುತ್ತದೆ. 'ಕವಿರಾಜಮಾರ್ಗ'ವು ಮೊದಲನೆಯ ಲಕ್ಷಣಗ್ರಂಥವಾಗಿರಬಹುದು, ಆದರೆ ಅದನ್ನು ಸಿದ್ಧಿಸಲು ಆಧಾರವಾಗಿ ಕೊಟ್ಟ ಪದ್ಯ-ದಿಂದಲ್ಲ; ಅದು ಪ್ರೌಢವಾದ ಗದ್ಯಪದ್ಯ ಕಾವ್ಯಕ್ಕೆ ಮಾರ್ಗದರ್ಶಿಯಾಗಿರುವಂತೆ ದೇಸಿಮಾರ್ಗಗಳ ಪೂರ್ವಪರಂಪರೆಗೆ ಸಾಕ್ಷಿಯೂ ಆಗಿರುತ್ತದೆ ಎಂದು ನಮ್ಮ ಮತ.

---

1 ಗೋವಿಂದ ಪೈ: ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು, ಪು. ೧೦೪–೮)

2 ಮುಳಿಯ ತಿಮ್ಮಪ್ಪಯ್ಯ: ಕವಿರಾಜಮಾರ್ಗವಿವೇಕ, ಪು. ೧೧೫–೬.

3 ಅದೇ, ಪು. ೧೧೫–೧೩೦.

೪. ಇತರ ಗ್ರಂಥಗಳಿಂದ ದೊರೆತ ಆಧಾರಗಳು

'ಕವಿರಾಜಮಾರ್ಗ'ದ ಮುಂದಣ ಕಾಲದಲ್ಲಿಯ ಕೆಲವು ಗ್ರಂಥಗಳಿಂದ ಕೆಲಮಟ್ಟಿಗೆ ಪ್ರಾಚೀನ ಸಾಹಿತ್ಯದ ಸುಳಿವುಹತ್ತುತ್ತದೆ. ಆದಿಪಂಪನು ಪಂಪಭಾರತದ ಕೊನೆಕೊನೆಗೆ '**ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದುವು** ಸಮಸ್ತಭಾರತಮುಂ ಆದಿಪುರಾಣಮಹಾಪ್ರಬಂಧಮುಂ'[1] ಎಂದಿದ್ದಾನೆ. ತನಗಿಂತ ಮುನ್ನಿನ ಕಾವ್ಯ-ಗಳನ್ನು ಪಂಪಭಾರತ, ಆದಿಪುರಾಣಗಳು ಸೋಲಿಸಿ ಮೀರಿದುವು ಎಂಬ ಹೆಮ್ಮೆಮಾತು ಪಂಪ-ಪೂರ್ವವಾಙ್ಮಯಕ್ಕೆ ಸೂಚಿಯಾಗಿದೆ. 'ಕವಿರಾಜಮಾರ್ಗ' ಹಾಗೂ ಪಂಪ-ಕಾವ್ಯ ಈ ನಡುವಿನ ಕಾಲದಲ್ಲಿ ಗುಣನಂದಿ, ೧ನೆಯ ಗುಣವರ್ಮ, ಅಸಗ ಇವರಲ್ಲದೆ ಬೇರೆಯವರಿಂದ ಪದ್ಯಕಾವ್ಯವು ನಿರ್ಮಾಣವಾದಂತಿಲ್ಲ. ಮುನ್ನಿನ ಎಲ್ಲ ಕಬ್ಬ ಎಂದು ಬಹುತೆಯನ್ನು ಸೂಚಿಸುವಾಗ ಪಂಪನು 'ಕವಿರಾಜಮಾರ್ಗ'ಕ್ಕಿಂತ ಹಿಂದಿನ ಕಾವ್ಯ-ಗ್ರಂಥಗಳನ್ನೂ ಮನದಲ್ಲಿ ಇಟ್ಟಿರಬಹುದು. ಆದರೆ ಈ ಪದ್ಯದಿಂದ ಅವನಿಗಿಂತ ಹಿಂದೆ ಕನ್ನಡಭಾರತ ಇಲ್ಲವೆ ಆದಿಪುರಾಣ ಗ್ರಂಥಗಳಿದ್ದುವೆಂಬ ವಿಶೇಷ ಸೂಚನೆ ಮಾತ್ರ ಹೊರಡುವುದಿಲ್ಲ. 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ-ಭಾರತಮಂ ಅಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ, ವರ್ಣಕಂ ಕತೆಯೊಳಡಂ-ಬಡಂಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ'[2] ಎಂಬ ಉಕ್ತಿಯಿಂದ ಪಂಪನಿಗಿಂತ ಮುಂಚೆ ಬೇರೆ ಬಗೆಯಲ್ಲಿ ಬರೆದ ಕನ್ನಡಭಾರತಗಳಿರಬಹುದೆಂಬ ಊಹೆಗೆ ಎಡೆ ದೊರೆಯುತ್ತದೆ. ಇದು ಸರಿಯಾಗಿದ್ದರೆ, 'ಕವಿರಾಜಮಾರ್ಗ'ದ ಕಾಲದಲ್ಲಿ ಇಲ್ಲವೆ ಆ ಹಿಂದೆ ಅಂಥ ಗ್ರಂಥಗಳು ಹುಟ್ಟಿರಬಹುದು. 'ಕವಿರಾಜಮಾರ್ಗ'ದ ತರುವಾಯ ರಚಿತವಾಗಿರಬಹುದಾದ ೧ನೆಯ ಗುಣವರ್ಮನ 'ಹರಿವಂಶ'ವು ಜೈನಸರಣಿಯ ಭಾರತಕಥೆಯನ್ನು ಒಳಗೊಂಡಿರಬಹುದು. ಅದನ್ನೂ ಪಂಪನು ಅರಿತಿರುವ ಸಂಭವ ಇದೆ. ನಾಗಚಂದ್ರ (ಅಭಿನವಪಂಪ) ತನ್ನ ರಾಮಾಯಣದ ಪೀಠಿಕಾಭಾಗದಲ್ಲಿ 'ಉಪದೇಶಂಗೆಯ್ದು ಕಾವ್ಯಚ್ಛಲದಿಂ ಅಖಿಲಧರ್ಮಂಗಳಂ ಲೋಕಮಂ ಧರ್ಮಪಥ-ಪ್ರಸ್ಥಾನದೊಳ್ ಯೋಜಿಸಿ **ಪರಮಪುರಾಣಂಗಳಂ** ಪೇೞ್ದು ಕಲ್ಪಾಂತಪರೀತ-ಖ್ಯಾತಿಯಂ ತಾಳ್ದಿದ **ಪರಮಕವಿಜ್ಯೇಷ್ಠರಾದರ್**'[3] ಎಂದು ಕೈವಾರಿಸಿದ ಕವಿ-ಜ್ಯೇಷ್ಠರು ಸಂಸ್ಕೃತ–ಕನ್ನಡ ವಾಙ್ಮಯದಲ್ಲಿ ಜೈನಪುರಾಣಗಳನ್ನು ಕಾವ್ಯಮಯವಾಗಿ

---

1 ಪಂಪಭಾರತ, ೧೪–೫೯.

2 ಅದೇ, ೧–೧೧.

3 ಪಂಪರಾಮಾಯಣ, ೧–೨೪.

ಬರೆದವರೆಂಬುದು ಸ್ಪಷ್ಟವಾಗಿದೆ. ಅವರಲ್ಲಿ ಸಂಸ್ಕೃತದಲ್ಲಿ ಜಿನಸೇನ-ಗುಣಭದ್ರರಂತೆ ಕನ್ನಡದಲ್ಲಿ ಪಂಪ-ಪೊನ್ನ-ರನ್ನರು ಇದ್ದಾರೆ. ಅದಕ್ಕಿಂತ ಮೊದಲಿನ ಕಾಲದ ಕನ್ನಡ ಪುರಾಣಕಾರರ ಉಲ್ಲೇಖವೂ ಅದರಲ್ಲಿ ಅಡಕವಾಗಿರಬಹುದು. 'ಕವಿರಾಜಮಾರ್ಗ'-ದಲ್ಲಿ ಹೇಳಿದ ಪ್ರಸಿದ್ಧ ಪದ್ಯಕಾರರಲ್ಲಿ ಕೆಲವರು ಇಂಥ ಪುರಾಣಗಳನ್ನು ಬರೆದಿರಲೂ ಬಹುದು.

ಕೆಲವು ಪ್ರಾಚೀನವಾದ ಗ್ರಂಥ ಹಾಗೂ ಗ್ರಂಥಕಾರರ ಸ್ಪಷ್ಟ ಉಲ್ಲೇಖಗಳು ದೊರಕಿವೆ. 'ಚೂಡಾಮಣಿ' ಎಂಬ ಹೆಸರಿನ ತತ್ತ್ವಾರ್ಥಮಹಾಶಾಸ್ತ್ರವ್ಯಾಖ್ಯಾನ-ರೂಪವಾದ (೯೬೦೦೦ ಗ್ರಂಥವುಳ್ಳದು—ಇಲ್ಲಿ ಗ್ರಂಥ ಎಂದರೆ ೩೬ ಅಕ್ಷರಗಳ ಎಣಿಕೆ-ಯುಳ್ಳ ಒಂದು ಮೊತ್ತ) ಗ್ರಂಥವು ದೊರೆಯುತ್ತಿರುವುದರಿಂದ ಕನ್ನಡ ಭಾಷೆ ಶಾಸ್ತ್ರಕ್ಕೆ ಅನುಪಯೋಗಿನಿ ಅಲ್ಲವೆಂದು ವ್ಯಾಕರಣಕಾರನಾದ ಭಟ್ಟಾಕಳಂಕ (೧೬೦೪) ಹೇಳಿ-ದ್ದಾನೆ. ದೇವಚಂದ್ರನ 'ರಾಜಾವಳಿಕಥೆ'(೧೮೩೮)ಯಲ್ಲಿ ೮೪೦೦೦ ಗ್ರಂಥಸಂಖ್ಯೆ-ಯುಳ್ಳ ಚೂಡಾಮಣಿವ್ಯಾಖ್ಯಾನವನ್ನು ತುಂಬಲೂರಾಚಾರ್ಯನು ಕನ್ನಡದಲ್ಲಿ ಮಾಡಿದ-ನೆಂದು ಹೇಳಿದೆ. ಪದಸಂಖ್ಯೆಯಲ್ಲಿ ವ್ಯತ್ಯಾಸವಿದ್ದರೂ ತುಂಬಲೂರಾಚಾರ್ಯನು ಬರೆದ ಚೂಡಾಮಣಿ ವ್ಯಾಖ್ಯಾನವೇ ಭಟ್ಟಾಕಳಂಕ ಹೇಳಿದ್ದು ಎಂದು ತಿಳಿಯಬಹುದು. ಇವನ ಕಾಲ ೭ನೆಯ ಶ.ದ ಮಧ್ಯವೆಂದು ಕವಿಚರಿತಕಾರರು ಜೈನಗುರು ಪಟ್ಟಾವಳಿ-ಯಿಂದ ನಿರ್ಧರಿಸಿದ್ದಾರೆ. ಸಂಸ್ಕೃತ ಕವಿ ದಂಡಿಯಿಂದ ಸ್ತುತವಾದ ಚೂಡಾಮಣಿಯ ಕರ್ತೃ ಶ್ರೀವರ್ಧದೇವ ಮತ್ತು ತುಂಬಲೂರಾಚಾರ್ಯ ಇವರಿಬ್ಬರು ಒಂದೇ ಎಂಬ ಮೊದಲಿನ ಅಭಿಪ್ರಾಯವನ್ನು ಅವರು ಆಮೇಲೆ ತಿದ್ದಿಕೊಂಡರು. ಕನ್ನಡ ಚೂಡಾಮಣಿ ಇದು ವ್ಯಾಖ್ಯಾನಗ್ರಂಥವಾದರೆ ಶ್ರೀವರ್ಧದೇವನ ಚೂಳಾಮಣಿ ತಮಿಳುಕಾವ್ಯ-ವಾಗಿದೆ.[1] ೭ನೆಯ ಶ.ದಷ್ಟೊತ್ತಿಗೆ ಶಾಸ್ತ್ರೀಯ ವಿಷಯವನ್ನು ಕುರಿತು ವ್ಯಾಖ್ಯಾನ-ರೂಪವಾಗಿ ಬರೆದ ಹೆಬ್ಹೊತ್ತಿಗೆ ಕನ್ನಡದಲ್ಲಿ ಇದ್ದಿತೆಂದರೆ ಕನ್ನಡ ನುಡಿ ೧-೨ ಶ.ಗಳಿಂದಲಾದರೂ ಬೆಳೆಯುತ್ತ ಬಂದಿರಬೇಕು. ಅದು ಈಗ ದೊರೆಯದೆ ಇರುವುದು ಸಂಶೋಧಕರಿಗೆ ಒಂದು ಆಹ್ವಾನವೇ ಸರಿ. ಅದು ಎಂದಿಗಾದರೂ ದೊರೆತರೆ ಕನ್ನಡ ಭಾಷೆ-ಸಾಹಿತ್ಯಗಳ ಮೇಲೆ ಅನನ್ಯವಾದ ಬೆಳಕು ಬೀಳಬಹುದು. ತುಂಬಲೂರಾಚಾರ್ಯರ ಕಾಲದಲ್ಲಿಯೇ ಇದ್ದ ಶ್ಯಾಮಕುಂದಾಚಾರ್ಯನು (ಸು. ೬೫೦) ಪ್ರಾಕೃತ, ಸಂಸ್ಕೃತ ಹಾಗೂ ಕರ್ಣಾಟ ಭಾಷೆಯಲ್ಲಿ ಪ್ರಾಭೃತವನ್ನು ರಚಿಸಿದನೆಂದು ತಿಳಿದಿದೆ. ಇವೆರಡೂ ಸಂಗತಿಗಳಿಂದ ಜೈನ ಆಚಾರ್ಯರು ಕನ್ನಡದತ್ತ ಮನಸ್ಸು ಹೊರಳಿಸಿ ಜೈನಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಕ್ರಿ.ಶ. ೭೦೦ರಿಂದಂತೂ ಬರೆಯತೊಡಗಿದರೆಂಬುದು ವಿಶದವಾಗುತ್ತದೆ. ಅಷ್ಟು ಪ್ರಾಚೀನನಲ್ಲದಿದ್ದರೂ 'ಕವಿರಾಜಮಾರ್ಗ'ಕ್ಕೆ ತುಸು

[1] R. Narasimhacharya: History of Kannada Literature, p. 5.

ಹಿಂದಿನ ಕಾಲದಲ್ಲಿ ಸೈಗೊಟ್ಟ ಶಿವಮಾರ (ಸು. ೮೦೦) ಎಂಬ ಗಂಗರಾಜನು ಎಂಟು ಪದ್ಯಗಳಲ್ಲಿ ಗಜಶಾಸ್ತ್ರದ ಮೇಲೆ 'ಗಜಾಷ್ಟಕ'ವೆಂಬುದನ್ನು ಕನ್ನಡದಲ್ಲಿ ಬರೆದಿರಬೇಕೆಂದು ಶಾಸನದಿಂದ ತಿಳಿಯುತ್ತದೆ.[1] ಅವನ ಚರಿತ್ರೆಯಿಂದ ಅವನು ಮಹಾಶೂರನೂ ಅನೇಕಶಾಸ್ತ್ರಪಂಡಿತನೂ ನಾಟ್ಯನಿಪುಣನೂ ತ್ರಿಭಾಷಾಕವಿಯೂ ಆಗಿದ್ದನೆಂದು ತಿಳಿಯುತ್ತದೆ.[2] 'ಕರೇಣುಭೂ' ಯತಿಗಳಿಂದ ವ್ಯಾಖ್ಯಾತವಾದ ರೀತಿಯಲ್ಲಿ ಅವನು ಬರೆದ 'ಗಜಾಷ್ಟಕ'ವು ಪ್ರೌಢಕೃತಿಯೆಂದು ಗಣಿಸಲಾಗಿತ್ತಂತೆ. ಇಷ್ಟೇ ಅಲ್ಲ, ಅದು ಓವನಿಗೆ, ಒನಕೆವಾಡು ಆಗಿ ಜನಪ್ರಿಯವಾಯಿತು.[3] ಇದರಲ್ಲಿ ಆಸ್ಥಾನಕವಿಯೊಬ್ಬನ ಅತಿಸ್ತುತಿಯ ಭಾಗ ಇರಬಹುದು. ಆದರೂ ಶಿವಮಾರನ ಆ ಚಿಕ್ಕ ಅಷ್ಟಕವು ಕವಿತಾಗುಣದಿಂದ ಕೂಡಿದ್ದು ಕನ್ನಡದಲ್ಲಿ ಮೊದಲನೆಯ ಅಷ್ಟಕವಾಯಿತೆಂಬುದು ನಿಜ. ಜನಪದಸಾಹಿತ್ಯದಲ್ಲಿ ಕ್ರಿ.ಶ. ೮ನೆಯ ಶ.ದಲ್ಲಿ ಓವನಿಗೆ, ಒನಕೆವಾಡುಗಳು ಇದ್ದುವೆಂಬುದು ಈ ಸಂದರ್ಭದಿಂದ ತಿಳಿಯುವ ಮಹತ್ವದ ಸಂಗತಿ. ಒನಕೆವಾಡು ಇದು ಕುಟ್ಟುವ ಹಾಡು. ಓವನಿಗೆ ಎಂದರೇನು ? ಓವೀ ಎಂಬ ಪದ್ಯಪ್ರಕಾರವು ಮರಾಠಿಯಲ್ಲಿ ಪ್ರಸಿದ್ಧವಾಗಿದೆ. ೧೨ನೆ ಶ.ದ ಚಾಲುಕ್ಯದೊರೆ ಸೋಮೇಶ್ವರನ 'ಮಾನಸೋಲ್ಲಾಸ'ದಲ್ಲಿ 'ತಥಾ ಮಹಾರಾಷ್ಟ್ರೇಷು ಯೋಷಿದ್ಭಿರ್ **ಓಂವೀ** ಗೇಯಾ ತು **ಕಂಡನೆ** (೫–೨೦೫೨)' ಎಂದಿದೆ. ಕಂಡನ ಎಂದರೆ ಕುಟ್ಟುವಿಕೆ. ಒಂವೀ ಇದು ಕುಟ್ಟುವ ಹಾಡು ಎಂದಾಯಿತು. ಹಾಗಿದ್ದರೆ ಓವನಿಗೆ ಅದೇ ಅರ್ಥವುಳ್ಳದಾಗಿ ಒನಕೆವಾಡಿಗೆ ಸಮಾನಪದವಾಗುತ್ತದೆ. ಆದರೆ ಮರಾಠಿ ಗಾದೆಗಳಲ್ಲಿ 'ಬೀಸುವಾಗ ಓಂವಿಯ ನೆನಪಾಗುತ್ತದೆ' ಎಂದಿದ್ದ ಕಾರಣ ಬೀಸುವ ಹಾಡು ಎಂಬ ಅರ್ಥವೂ ಅದಕ್ಕಿರಬಹುದು. ಓವನಿಗೆ: ಬೀಸುವ ಹಾಡು, ಒನಕೆವಾಡು: ಕುಟ್ಟುವ ಹಾಡು ಎರಡೂ ಸೇರಿ ಬೀಸುವ ಕುಟ್ಟುವ ಹಾಡು ಎಂದು ಅರ್ಥವಾಗುತ್ತಿರಬಹುದು. ಒಂವೀ, ಓವನಿಗೆ ಇವು ಬೀಸುವಾಗ ಕುಟ್ಟುವಾಗ ಹೊರಡುವ ಸಹಜ ಉದ್ಗಾರಗಳಿಂದ ಹುಟ್ಟಿದ ಶಬ್ದಗಳೆಂದು ತೋರುತ್ತದೆ. ಅನಂತರ 'ಕವಿರಾಜಮಾರ್ಗ'ಕ್ಕೆ ಸುಮಾರು ಸಮಕಾಲೀನವಾಗಿ (೮೪೪–೮೮೮) 'ಗುಣಗಾಂಕಿಯಂ' ಎಂಬ ಒಂದು ಕನ್ನಡ ಛಂದೋಗ್ರಂಥವು ರಚಿತವಾಗಿರಬೇಕೆಂದು ತಮಿಳು ಛಂದೋಗ್ರಂಥದಿಂದ ತಿಳಿಯುತ್ತದೆ. ಈ ಗ್ರಂಥ ಉಪಲಬ್ಧವೂ ಇಲ್ಲ, ಇದರ ವಿಷಯವಾಗಿ ಹೆಚ್ಚಿನ ಅಂಶಗಳೂ ತಿಳಿದಿಲ್ಲ. ಇದರಲ್ಲಿ 'ಕವಿ ಒಬ್ಬ ಸ್ತ್ರೀಯನ್ನು ಸಂಬೋಧಿಸಿ ಗ್ರಂಥವನ್ನು ಬರೆದಿರುವಂತೆಯೂ ಇದೇ ರೀತಿಯನ್ನು

---

1 E. C. Vol. VIII NR 35.

2 M. V. Krishna Rao: The Gangas of Talkad, pp. 65–67.

3 E.C. Vol. VIII NR 35: ಏವೇೞ್ವುದೊ ಶಿವಮಾರಮ। ಹೀವಳಯಾಧಿಪನ ಸುಭಗಕವಿತಾಗುಣಮಂ ॥ ಭೂವಳಯದೊಳ್ ಗಜಾಷ್ಟಕ। ಮೋವನಿಗೆಯುಮೊನಕೆವಾಡುಮಾದುದೆ ಪೇೞ್ಗುಂ ॥

ತಮಿಳುಗ್ರಂಥಕಾರನೂ ಅನುಸರಿಸಿರುವಂತೆಯೂ ತಿಳಿಯುತ್ತದೆ'[1] ತನ್ನ 'ಛಂದೋಂಬುಧಿ'ಯಲ್ಲಿ ನಾಗವರ್ಮನು ಇದನ್ನೇ ಮೇಲ್ಪಂಕ್ತಿಯಾಗಿ ಇಟ್ಟುಕೊಂಡಿರಬೇಕೆಂದು ತೋರುತ್ತದೆ. ಸು. ೧೧ನೆಯ ಶ.ದವನಾದ ಜಯಕೀರ್ತಿ ತನ್ನ 'ಛಂದೋನುಶಾಸನ' ಎಂಬ ಸಂಸ್ಕೃತಗ್ರಂಥದಲ್ಲಿ ಕನ್ನಡ ಛಂದಸ್ಸನ್ನು ಕುರಿತು ಲಕ್ಷಣ ಹೇಳುವಾಗ, ಸುಮಾರು ೨೦ ಜನ ಛಂದಶ್ಶಾಸ್ತ್ರಜ್ಞರನ್ನು ಹೆಸರಿಸುತ್ತಾನೆ.[2] ಅವರಲ್ಲಿ ಕೆಲವರು ಪ್ರಾಚೀನರೂ ಕನ್ನಡಗ್ರಂಥಕಾರರೂ ಆಗಿರಬಹುದು. ಕರ್ಣಾಟವಿಷಯ ಭಾಷಾಜಾತಿಯನ್ನು ವಿವರಿಸಿದ ೭ನೆಯ ಅಧಿಕಾರದಲ್ಲಿ 'ಪ್ರಭುಸೇನೀಯ' ಎಂಬ ಗ್ರಂಥಕಾರನ ಹೆಸರು ಬಂದಿದೆ. ಇವನೊಬ್ಬನಾದರೂ ಕನ್ನಡಿಗನಾಗಿರುವ ಸಂಭವವಿದೆ. ಕನ್ನಡಗ್ರಂಥಗಳಲ್ಲಿ ಅಸಗನ ಕರ್ಣಾಟಕುಮಾರಸಂಭವ, ಅಲಂಕಾರ (?), ಕರ್ಣಾಟಮಾಲತೀಮಾಧವ-ಕಾವ್ಯ, ಕರ್ಣಾಟೇಶ್ವರಕಥಾ (ಆರ್ಹತ), ಗೋಗ್ರಹ (ಕಾವ್ಯ ?), ಮಹಾರ್ಹದ್ದೇವ-ತಾಸ್ತವ, ಶೃಂಗಾರಪಿಂಡಕಾವ್ಯ, ಚೂಡಾಮಣಿ ಎಂಬುವನ್ನು ಜಯಕೀರ್ತಿ ಉಲ್ಲೇಖಿಸಿದ್ದಾನೆ. ಅಸಗನು ೯ನೆಯ ಶ.ದ ಕವಿಯೆಂದು ಬೇರೆ ಆಧಾರಗಳಿಂದ ತಿಳಿದಿದೆ. ಉಳಿದ ಗ್ರಂಥಗಳ ಕಾಲನಿರ್ಣಯವಾಗಬೇಕು. ಅವುಗಳಲ್ಲಿ ಯಾವುದಾದರೂ 'ಕವಿರಾಜಮಾರ್ಗ'ಕ್ಕೆ ಹಿಂದಿನ ಕಾಲದಲ್ಲಿ ರಚಿತವಾಗಿರಬಹುದು. 'ಕರ್ಣಾಟಕ-ಛಂದೋಮತ'ವೆಂದು ಜಯಕೀರ್ತಿ ನಾಗವರ್ಮನ 'ಛಂದೋಂಬುಧಿ'ಯನ್ನು ಕುರಿತು ಹೇಳಿರಬಹುದಾಗಿ ತೋರುತ್ತದೆ. 'ಚೂಡಾಮಣಿ' ಸು. ೧೦ನೆಯ ಶ.ದ ಕನ್ನಡ ಕವಿ ಕಂದರ್ಪನ ಗ್ರಂಥವಾಗಿರಬೇಕೆಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ.

'ವಡ್ಡಾರಾಧನೆ' ಎಂಬ ಗದ್ಯಗ್ರಂಥವು ಕನ್ನಡಸಾಹಿತ್ಯದ ಅಪೂರ್ವ ಸಂಪತ್ತಿಯಾಗಿ ದೊರೆತಿದೆ. ಅದರಲ್ಲಿ ಉದ್ಧೃತವಾದ ಸಂಸ್ಕೃತ–ಪ್ರಾಕೃತ ಪದ್ಯಗಳ ಮೂಲವನ್ನು ಶೋಧಿಸಿ, ಭಾಷಾಶೈಲಿಯನ್ನು ಗಮನಿಸಿ, ಅದು ಕ್ರಿ.ಶ. ೯ನೆಯ ಶ.ದ ತರುವಾಯ ಬಹುಶಃ ೧೧ನೆಯ ಶ.ದಲ್ಲಿ ರಚಿತವಾದದ್ದೆಂದು ಡಾ. ಉಪಾಧ್ಯೆಯವರು ಅಭಿಪ್ರಾಯಿಸಿದ್ದಾರೆ. ಕ್ರಿ.ಶ. ೯ನೆಯ ಶತಮಾನದ ತರುವಾಯ, ಪದಪ್ರಯೋಗಗಳ ಆಧಾರದಮೇಲೆ ಬಹುಶಃ ಕ್ರಿ.ಶ. ೯೨೦ರಲ್ಲಿ ಅದು ರಚಿತವಾಗಿರಬಹುದು ಎಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ನಿರ್ಣಯಿಸಿದ್ದಾರೆ. ಅದರಲ್ಲಿ ತೀರ ಹಳೆಯವೆನ್ನಬಹುದಾದ ಕೆಲವು ವಿಶೇಷ ಪ್ರಯೋಗಗಳು ಕಂಡುಬಂದುದರಿಂದಲೂ 'ಕವಿರಾಜಮಾರ್ಗ'ದಲ್ಲಿ ಹೇಳಿದ ಸಂಮಿಶ್ರ ಗದ್ಯಕಥೆಯ ಲಕ್ಷಣಕ್ಕೆ ಅದು ಸರಿಹೋಗುವುದರಿಂದಲೂ ಅದು ಕ್ರಿ.ಶ. ೬ನೆಯ ಶ.ಕ್ಕಿಂತ ಈಚೆಯದಲ್ಲವೆಂದೂ ಅದಕ್ಕೆ ಹಿಂದೆಯೂ

---

1 ಕವಿಚರಿತೆ, ಸಂ. ೧, ಅವತರಣಿಕೆ, ಪು. ೧೨

2 H. D. Velankar : Chandonus'asana and Ancient Kannada Metres (JBBRAS, Vol. 21, New Series, p. 9)

ರಚಿತವಾಗಿರಬೇಕೆಂದೂ ಶ್ರೀ ಗೋವಿಂದ ಪೈಗಳು ಸವಿವರವಾಗಿ ತೋರಿದ್ದಾರೆ.[1] ಅವರ ತೋರಿಕೆ ದಿಟವಾದರೆ ಪ್ರಾಚೀನಗ್ರಂಥಗಳಲ್ಲಿ 'ವಡ್ಡಾರಾಧನೆ' ಮೇಲಾದ ಸ್ಥಾನಕ್ಕೆ ಅರ್ಹವಾಗುತ್ತದೆ. ಆದರೆ ಡಾ. ಉಪಾಧ್ಯೆಯವರು ಮೇಲಿನ ಗಡುವಿಗೆ ಕೊಟ್ಟ ಪ್ರಬಲ ಕಾರಣಗಳನ್ನು ಅಲ್ಲಗಳೆಯುವವರೆಗೆ ಅದನ್ನು ಅತಿಪ್ರಾಚೀನಗೊಳಿಸುವುದು ಸಾಹಸದ ಮಾತೇ ಸರಿ. ಮುಂದೆ ಪ್ರತ್ಯೇಕವಾಗಿ ಈ ಗ್ರಂಥದ ಪರಾಮರ್ಶೆಯನ್ನು ಮಾಡುವಾಗ ಈ ವಿಷಯವನ್ನು ಇನ್ನಿಷ್ಟು ವಿವರವಾಗಿ ಚರ್ಚಿಸಬೇಕೆಂದು ಮಾಡಿದ್ದೇವೆ. ಪ್ರಸಿದ್ಧ ಜೈನಕವಿಗಳು ತಮ್ಮ ಕನ್ನಡಕಾವ್ಯಗಳ ಪೀಠಿಕೆಗಳಲ್ಲಿ ದಕ್ಷಿಣ ಭಾರತದ ಜೈನಚರಿತ್ರೆಯಲ್ಲಿ ವಂದ್ಯರಾದ ಸಮಂತಭದ್ರ, ಪೂಜ್ಯಪಾದ, ಕವಿಪರಮೇಷ್ಠಿಗಳನ್ನು ಅತ್ಯಾದರದಿಂದ ನೆನೆದಿದ್ದಾರೆ. ಅವರು ಕ್ರಿ.ಶ. ೪೦೦ರಿಂದ ೬೦೦ರವರೆಗಿನ ಕಾಲದಲ್ಲಿ ಆಗಿಹೋದ ಮಹಾಪಂಡಿತರು, ತಪಸ್ವಿಗಳು. ಜೈನಶಾಸ್ತ್ರಕ್ಕೆ ತಳಹದಿಯಾದ ಗ್ರಂಥಗಳನ್ನು ಅವರು ಸಂಸ್ಕೃತ-ಪ್ರಾಕೃತಗಳಲ್ಲಿ ಬರೆದಿದ್ದಾರೆ. ಆದರೆ ಕನ್ನಡದಲ್ಲಿ ಬರೆದ ಹಾಗೆ ತಿಳಿದಿಲ್ಲ. ಸಮಂತಭದ್ರನು ಬಯಲುಸೀಮೆಯ ಉಕ್ಕಲಿಯಲ್ಲಿ ಹುಟ್ಟಿ ಮನಗೂಳಿ(ಮಣುವಕಹಳ್ಳಿ)ಯಲ್ಲಿ ತಪಸ್ಸುಮಾಡಿದನೆಂದು ೧೯ನೆಯ ಶ.ದಲ್ಲಿ ಹುಟ್ಟಿದ ದೇವಚಂದ್ರನ 'ರಾಜಾವಳಿಕಥೆ'ಯಲ್ಲಿ ಹೇಳಿದೆ. ಪ್ರಭಾಚಂದ್ರನ ಆರಾಧನಾ-ಕಥಾಕೋಶದಲ್ಲಿ ಅವನು ಕಾಂಚೀನಿವಾಸಿಯೆಂದಿದೆ.[2] ದೇವಚಂದ್ರನ ಆಧಾರಗಳು ಪ್ರಾಚೀನವೂ ನಂಬತಕ್ಕುವೂ ಎಂದಾದರೆ ಮಾತ್ರ ಸಮಂತಭದ್ರನು ಖಂಡಿತವಾಗಿ ಕನ್ನಡಿಗನೆಂದು ಹೇಳಬಹುದು. ಕವಿಪರಮೇಷ್ಠಿಯ ದೇಶವಿಚಾರ ತಿಳಿದಿಲ್ಲ. ಪೂಜ್ಯಪಾದನು ಕರ್ಣಾಟಕದ ಕೊಳ್ಳೇಗಾಲದವನೆಂದು 'ರಾಜಾವಳಿಕಥೆ'-ಯಿಂದ ತಿಳಿಯುತ್ತದೆ. ಅದರಲ್ಲಿಯ ಬಸ್ತಿಪುರದವನೆಂದೂ ತಿಳಿದುಬಂದಿದೆ. ಇವನು ಕನ್ನಡಿಗನಾಗಿರಬಹುದು. ಗಂಗರಾಜನಾದ ದುರ್ವಿನೀತನಿಗೆ ಇವನು ಗುರುವಾಗಿದ್ದನು. ಅಂತೂ ಇವರಲ್ಲಿಬ್ಬರು ಕನ್ನಡಿಗರಾಗಿರಬಹುದೆಂದು ತಿಳಿಯಲು ಆಸ್ಪದವಿದೆ. ಮೂವರೂ ಕನ್ನಡದಲ್ಲಿ ಗ್ರಂಥರಚನೆ ಮಾಡಿದ ಬಗ್ಗೆ ಸ್ಪಷ್ಟವಾದ ಆಧಾರಗಳಿಲ್ಲ. ಸಮಂತಭದ್ರನೇ ಶ್ರೀವಿಜಯನಾಗಿರಬೇಕೆಂಬ ಊಹೆಯನ್ನು ಇನ್ನೂ ಪರಿಶೀಲಿಸಬೇಕಾಗಿದೆ. ಹೀಗಿರಲು ಕನ್ನಡ ಜೈನಕಾವ್ಯಕ್ಕೆ ಸ್ಫೂರ್ತಿಸ್ಥಾನದಲ್ಲಿದ್ದು ಬಹುಶಃ ಕನ್ನಡಿಗರಾದ ಸಂಸ್ಕೃತ-ಪ್ರಾಕೃತ ಗ್ರಂಥಕಾರರೆಂದು ಮಾತ್ರ ಇವರನ್ನು ತಿಳಿದಿರುವುದು ಲೇಸು.

ಕನ್ನಡದಲ್ಲಿ ಪ್ರಾಚೀನ ಸಾಹಿತ್ಯದ ಪ್ರಾರಂಭವು ಬೌದ್ಧರಿಂದ ಆಗಿರಬೇಕೆಂಬ ಊಹೆಯೊಂದನ್ನು ಮಾಡಲಾಗಿದೆ. 'ಬೌದ್ಧರೇ ಕನ್ನಡ ಭಾಷೆಗೆ ಆದಿಕವಿಗಳು;

---

1 ಗೋವಿಂದ ಪೈ: ಕನ್ನಡ ಸಾಹಿತ್ಯದ ಪ್ರಾಚೀನತೆ
(ಮೂರು ಉಪನ್ಯಾಸಗಳು, ಪು. ೧೧೧-೧೨೨)

2 M. Krishnamachariar: History of Classical Sanskrit Literature, p. 324.

ಸು. ಕ್ರಿ.ಶ. ಆದಿಭಾಗದಿಂದಲೂ ಕನ್ನಡ ಭಾಷೆಯಲ್ಲಿ ಗ್ರಂಥರಚನೆಯಾಗುತ್ತಿದ್ದಿರಬೇಕು. ಬೌದ್ಧಮತದ ನಾಶದೊಂದಿಗೆ ಬೌದ್ಧಗ್ರಂಥಗಳೂ ನಾಶವಾದುವು.'[1] ಬೌದ್ಧರು ತಮಿಳಿನಲ್ಲಿ ರಚಿಸಿದ ಕಾವ್ಯಗಳು ಈಗಲೂ ದೊರೆಯುತ್ತವೆ; ಅವರು ಕನ್ನಡದಲ್ಲಿಯೂ ಕಾವ್ಯರಚಿಸಿರಬಹುದೆಂದು ಕೆಲವರಿಗೆ ತೋರುತ್ತದೆ. ಆದರೆ ಕ್ರಿ.ಶ. ೪ನೆಯ ಶ.ದವರೆಗೆ ದಕ್ಷಿಣ ದೇಶದಲ್ಲಿ ಪ್ರಾಕೃತವೇ ವ್ಯವಹಾರಭಾಷೆಯಾಗಿತ್ತೆಂದೂ ಬೌದ್ಧಮತಪ್ರಚಾರಕರು ಅಲ್ಲಿಯ ಜನಕ್ಕೆ ಪ್ರಾಕೃತ ತಿಳಿಯುವುದೆಂದು ಅದರಲ್ಲಿಯೇ ಬೋಧನೆಮಾಡುತ್ತ ಬಂದರೆಂದೂ ಕರ್ನಾಟಕದಲ್ಲಿ ಬೌದ್ಧಮತಪ್ರಚಾರವು ಅಷ್ಟು ಚೆನ್ನಾಗಿ ಆಗದೆ ಅದು ಬಹುಬೇಗ ಕೊನೆಗಂಡಿತೆಂದೂ ಮೇಲಿನದಕ್ಕೆ ಮರುಮಾತಾಗಿ ಹೇಳಲಾಗಿದೆ.[2] ಕ್ರಿ.ಪೂ. ೩ನೆಯ ಶತಕ ಎಂದರೆ ಅಶೋಕನ ಕಾಲದಿಂದ ಬೌದ್ಧಮತಪ್ರಚಾರವು ದಕ್ಷಿಣದಲ್ಲಿ ಆರಂಭವಾಗಿ ಕ್ರಿ.ಶ. ಮೊದಲ ಶತಕದವರೆಗೆ ಪ್ರಭಾವಿಯಾಗಿದ್ದು ಆಮೇಲೆ ಇತರ ಭಾರತದಲ್ಲಿ ಕುಂದಿದಂತೆ ಇಲ್ಲಿಯೂ ಕುಂದುತ್ತ ಹೋಯಿತೆಂಬುದು ಸತ್ಯ. ಬನವಾಸಿಯಲ್ಲಿದ್ದ ವಿಹಾರಗಳು, ಆಮೇಲಿನ ಬೌದ್ಧ ಉಲ್ಲೇಖಗಳು, ೧೧ನೆಯ ಶ.ದವರೆಗಿದ್ದ ಡಂಬಳದ ವಿಹಾರ ಇವು ಬೌದ್ಧವರ್ಚಸ್ಸಿಗೆ ಸಾಕ್ಷಿಯಾಗಿವೆ. ಶಾತವಾಹನ ವಂಶದ ರಾಜರು ಬೌದ್ಧಮತಕ್ಕೆ ತುಂಬ ಆಶ್ರಯವನ್ನು ಕೊಟ್ಟರೆಂದೂ ತಿಳಿಯುತ್ತದೆ. ಆದರೆ ಕನ್ನಡದಲ್ಲಿ ಗ್ರಂಥರಚನೆ ಮಾಡುವ ಪ್ರೇರಣೆ ಸಾಹಿತಿಗಳಲ್ಲದ ಆ ಪ್ರಚಾರಕಸಂನ್ಯಾಸಿಗಳಿಗೆ ದೊರೆತಿರಲಾರದು. ಕನ್ನಡದಲ್ಲಿ ಅವರು ಗ್ರಂಥರಚಿಸಿದ್ದರೆ ಒಂದು ಗ್ರಂಥವೂ ಇಂದು ಉಪಲಬ್ಧವಾಗದೆ ಇರುವುದೇಕೆ ಎಂಬುದು ತಿಳಿಯದು. ಸಂಸ್ಕೃತ–ಪ್ರಾಕೃತದಲ್ಲಿಯೂ ಅವರು ಗ್ರಂಥರಚನೆ ಮಾಡಿದಂತಿಲ್ಲ. ಹೆಚ್ಚಾಗಿ ಅವರು ಪ್ರಾಕೃತ ಭಾಷೆಯಲ್ಲಿದ್ದ ಮತಗ್ರಂಥಗಳ ಆಧಾರದಿಂದ ಬೋಧೆಯನ್ನು ಮಾಡಿರಬಹುದು. ಇದರಿಂದ ದಕ್ಷಿಣದಲ್ಲಿಯ ಜನಕ್ಕೆ ಪ್ರಾಕೃತ ತಿಳಿಯುತ್ತಿತ್ತೆಂದೂ ಅದು ವ್ಯವಹಾರಭಾಷೆಯಾಗಿತ್ತೆಂದೂ ಸಿದ್ಧವಾಗುವುದಿಲ್ಲ. ಪಂಡಿತರಲ್ಲಿ ಸಂಸ್ಕೃತ–ಪ್ರಾಕೃತ ಎರಡನ್ನೂ ಬಲ್ಲವರ ಸಂಖ್ಯೆ ಹೆಚ್ಚಾಗುತ್ತಿರಬೇಕು. ಅಂತೇ ಎರಡೂ ಭಾಷೆಗಳಲ್ಲಿ ಶಾಸನಗಳನ್ನು ಬರೆಯುವ ಸಲುವಳಿ ಉಂಟಾಗಿರಬೇಕು. ಜನಕ್ಕೆ ತಿಳಿಯುವ ಭಾಷೆಯಲ್ಲಿ ಶಾಸನ ಬರೆಯಬೇಕೆಂಬ ತತ್ತ್ವವು ಆಗಿನ್ನೂ ಬೇರೂರಿರಲಿಲ್ಲ.

ಈ ವರೆಗೆ ಕನ್ನಡ ಸಾಹಿತ್ಯೋದಯವು ಯಾವಾಗ ಆಗಿರಬಹುದು, ಅದರ ಪ್ರಾಚೀನತೆಯ ಬಗ್ಗೆ ದೊರೆತ ಪ್ರಮಾಣಗಳು ಯಾವುವು, ಅವುಗಳ ಬಲದಿಂದ ಕಟ್ಟಿದ ಊಹೆಗಳೇನು ಎಂಬುದನ್ನು ವಿಸ್ತಾರವಾಗಿ ನಿರೂಪಿಸಲಾಯಿತು. ಕ್ರಿ.ಶ. ೫–೬ನೆಯ ಶ.ಗಳಿಂದ ಕನ್ನಡದಲ್ಲಿ ಶಿಲಾಶಾಸನಗಳು ದೊರೆಯುತ್ತವೆ, ೭ನೆಯ ಶ.ದಿಂದ ಸಾಹಿತ್ಯ-

---

1 ತಳಕು ವೆಂಕಣ್ಣಯ್ಯ: ಕನ್ನಡದಲ್ಲಿ ಬೌದ್ಧರೂ ಗ್ರಂಥಗಳನ್ನು ಬರೆದಿದ್ದಾರೆಯೇ? (ಪ್ರ.ಕ. ೨–೩)

2 ಕನ್ನಡವಕ್ಕಿ: ಕರ್ಣಾಟಕ ಸಾಹಿತ್ಯ (ಕರ್ಣಾಟಕದ ಕೈಪಿಡಿ, ಪು. ೨೦೫–೭)

ಗುಣವುಳ್ಳ ಪದ್ಯಶಾಸನಗಳು ಹೇರಳವಾಗಿವೆ ಎಂದಲ್ಲದೆ 'ಕವಿರಾಜಮಾರ್ಗ'ಕ್ಕಿಂತ ಹಿಂದೆ ೨೦೦–೩೦೦ ವರ್ಷಗಳಿಂದ ಅಂದರೆ ಕ್ರಿ.ಶ. ೬ನೆಯ ಶ.ದ ದುರ್ವಿನೀತನ ಕಾಲದಿಂದ ಕನ್ನಡದಲ್ಲಿ ಗ್ರಂಥರಚನೆಯಾಗುತ್ತ ಬಂದಿದೆ ಎಂದು ನಿರ್ವಿವಾದವಾಗಿ ತಿಳಿಯಬಹುದು. ದುರ್ವಿನೀತನು ಗಂಗವಂಶದ ಕನ್ನಡರಾಜನು, ಸಂಸ್ಕೃತ–ಕನ್ನಡಗಳಲ್ಲಿ ಗ್ರಂಥಕರ್ತನು. ಅದೇ ವಂಶದ ಶಿವಮಾರನೂ ರಾಜನಾಗಿದ್ದು ಕನ್ನಡದಲ್ಲಿ ಬರೆದವನು. ರಾಷ್ಟ್ರಕೂಟರ ಪ್ರಸಿದ್ಧ ರಾಜ ನೃಪತುಂಗನು 'ಕವಿರಾಜಮಾರ್ಗ'ಕ್ಕೆ ಬೆಂಬಲಿಗನು. ಕ್ರಿ.ಶ. ೬೦೦ರಿಂದ ೯೦೦ರ ವರೆಗಿನ ಈ ಸಂಗತಿಗಳನ್ನು ನೆನೆದಿರಬೇಕು. ಅಂದರೆ ಕನ್ನಡದಲ್ಲಿ ಸಾಹಿತ್ಯೋದಯಕ್ಕೆ ಕಾರಣವೇನಾಯಿತು ಎಂಬುದನ್ನು ಅರಿಯಬಹುದು. ಜನಭಾಷೆಯನ್ನು ಸಾಹಿತ್ಯಭಾಷೆ ಮಾಡುವ ವಿಷಯದಲ್ಲಿ ಕ್ರಿ.ಪೂ.ದಿಂದಲೂ ಕರ್ನಾಟಕದಲ್ಲಿ ಜರುಗಿದ ಘಟನೆಗಳ ಮೂಲಕವಾಗಿ ಕ್ರಮೇಣ ದೃಷ್ಟಿವಿಕಾಸವಾಗುತ್ತ ಒಂದು ಹದಕ್ಕೆ ಬಂದೊಡನೆ ಕನ್ನಡದಲ್ಲಿ ಗ್ರಂಥಸ್ಥವಾದ ಸಾಹಿತ್ಯವು ಉದಯವಾಯಿತು ಎಂದು ನಮಗೆ ತೋರುತ್ತದೆ. 'ಸಂಸ್ಕೃತ' ಎಂಬ ಮರ್ಯಾದಿತ ಅರ್ಥದಲ್ಲಿ ಪ್ರೌಢಸಾಹಿತ್ಯದ ಹಾಗೂ ಮತಗ್ರಂಥದ ವಾಹಕವಾಗಿದ್ದ ಸಂಸ್ಕೃತಭಾಷೆ ತನಗೆ ಮೀಸಲಾಗಿದ್ದ ಸ್ಥಾನವನ್ನು ಬುದ್ಧಮಹಾವೀರರ ಕಾಲದಿಂದ ಪ್ರಾಕೃತಕ್ಕೆ ಸಲ್ಲಿಸಿ ವಿಶಾಲವಾದ ಅರ್ಥದಲ್ಲಿ ಅವನ್ನು ಸಂಸ್ಕೃತಗೊಳಿಸಿತು. ಅಂದಿನಿಂದ ಜನಭಾಷೆಯ ಯುಗ ಆರಂಭವಾಯಿತೆಂದು ತಿಳಿಯಲು ಅಡ್ಡಿಯಿಲ್ಲ. ಅಶೋಕನು ಕರ್ನಾಟಕದ ಮಾಸ್ಕಿ, ಬ್ರಹ್ಮಗಿರಿ, ಕೊಪ್ಪಳಗಳ ಕಲ್ಲುಬಂಡೆಗಳ ಮೇಲೆ ತನ್ನ ಧರ್ಮಶಾಸನಗಳನ್ನು ಪ್ರಾಕೃತದಲ್ಲಿ ಕೊರೆಯಿಸಿ, ಕನ್ನಡದಂಥ 'ಪ್ರಾಕೃತ' ಭಾಷೆಗಳ ವಿಕಾಸಮಂದಿರಕ್ಕೆ ಅಡಿಗಲ್ಲನ್ನೇ ಇರಿಸಿದನು. ಪ್ರಾಕೃತಕ್ಕೆ ದೊರೆತ ಮನ್ನಣೆ ಕನ್ನಡಕ್ಕೆ ದೊರೆಯಲಿರುವ ಮನ್ನಣೆಗೆ ಪೂರ್ವಸೂಚನೆಯೇ ಆಯಿತು. ಆದರೂ ಸಂಪ್ರದಾಯವಾದಿಗಳಾದ ಪಂಡಿತರಲ್ಲಿ ಸಂಸ್ಕೃತವ್ಯಾಮೋಹವೂ ಮಡಿವಂತಿಕೆಯೂ ಬೇಗ ಹೋಗುವಂತಿರಲಿಲ್ಲ. ವೈದಿಕಧರ್ಮ, ಅದರಲ್ಲಿಯೇ ವಿಶಾಲದೃಷ್ಟಿಯುಳ್ಳ ಶೈವ ಹಾಗೂ ವೈಷ್ಣವಭಕ್ತಿಪಂಥಗಳು ಸಂಸ್ಕೃತಕ್ಕೇ ಶರಣುಹೋಗಿದ್ದುವು. ಅವುಗಳಲ್ಲಿ ಭಕ್ತಿಪಂಥಗಳು ಕೆಲಕಾಲದ ಮೇಲೆ ಜನಭಾಷೆಗೆ ಒಲಿಯುವ ಸಂಭವವಿದ್ದಿತಾದರೂ ಕ್ರಿ.ಶ. ಪ್ರಾರಂಭಶತಕಗಳಲ್ಲಿ ಆ ಪ್ರೇರಣೆಗೆ ಅವಕಾಶವಿರಲಿಲ್ಲ. ಇತರ ಮತಪ್ರಭಾವದಿಂದ ಸ್ವಮತರಕ್ಷಣೆಯನ್ನು ಮಾಡಿಕೊಳ್ಳಲು ಹೊಸ ಸಾಧನಗಳನ್ನು ಬಳಸಿಕೊಳ್ಳುವ ಶಕ್ತಿಯುಳ್ಳ ಅಪೂರ್ವ ವ್ಯಕ್ತಿಗಳೂ ಅವುಗಳಲ್ಲಿರಲಿಲ್ಲ. ಭಾಗವತಧರ್ಮವನ್ನು ಸಾರುವ ಬ್ರಾಹ್ಮಣಕಾವ್ಯ ಈ ಕಾಲದಲ್ಲಿ ಹುಟ್ಟಿದೆಯೆಂಬುದಕ್ಕೆ ನಿರ್ದಿಷ್ಟವಾದ ಆಧಾರಗಳಿಲ್ಲ. ಹೆಚ್ಚಿನ ಆಧಾರಗಳು ಸಿಕ್ಕರೆ ಅವರಿಂದಲೂ ಕನ್ನಡಸಾಹಿತ್ಯೋದಯಕ್ಕೆ ನೆರವಾಗಿದೆ ಎನ್ನಬಹುದು. ಮುಖ್ಯವಾಗಿ ಬೌದ್ಧರಿಂದ ದಕ್ಷಿಣದಲ್ಲಿ ಪ್ರಾಕೃತಕ್ಕೆ ದೊರೆತ ಮನ್ನಣೆ, ಆಮೇಲೆ ಜೈನರಿಂದ ಸಂಸ್ಕೃತ–ಪ್ರಾಕೃತಗಳ ಸಹಾಯದಿಂದಲೂ ಸ್ಫೂರ್ತಿಯಿಂದಲೂ ಕನ್ನಡ ಭಾಷೆಗೆ ದೊರೆತ ಗ್ರಾಂಥಿಕಸ್ವರೂಪ ಇವು ಕನ್ನಡಸಾಹಿತ್ಯೋದಯಕ್ಕೆ

ಅರುಣೋದಯದಂತಾದುವು. ಕರ್ನಾಟಕದ ರಾಜರಲ್ಲಿ ಕೆಲವರು ಕನ್ನಡದಲ್ಲಿ ಶಾಸನ ಮತ್ತು ಗ್ರಂಥರಚನೆಗೆ ಪ್ರೋತ್ಸಾಹವನ್ನು ಕೊಟ್ಟುದಲ್ಲದೆ ಸ್ವಂತವಾಗಿ ಗ್ರಂಥಗಳನ್ನು ರಚಿಸಿದರು. ವಿಶೇಷತಃ ಅವರು ಜೈನಮತವನ್ನು ಸ್ವೀಕರಿಸಿಯಾಗಲಿ ಜೈನತತ್ವಕ್ಕೆ ಹಾಗೂ ಮತಾಚಾರ್ಯರಿಗೆ ಮನ್ನಣೆ-ಆಶ್ರಯಗಳನ್ನು ಇತ್ತಾಗಲಿ ಜನಭಾಷೆ ಸಾಹಿತ್ಯಸ್ವರೂಪ ಪಡೆಯುವುದಕ್ಕೆ ಅನುವು ಮಾಡಿಕೊಟ್ಟರು. ಕನ್ನಡಕ್ಕೆ ರಾಜಾಶ್ರ-ಯವೂ ಆಸ್ಥಾನಗೌರವವೂ ದೊರೆಯತೊಡಗಲು ಸಂಪ್ರದಾಯಜಡರಾದ ಪಂಡಿತರೂ ಅದರತ್ತ ಹೊರಳಿದರು. ಜನಭಾಷೆಯಲ್ಲಿ ಗ್ರಂಥರಚನೆ ಮಾಡಬೇಕೆಂಬ, ಅದು ಸಂಸ್ಕೃತವಾಙ್ಮಯಕ್ಕೆ ಸರಿಮಿಗಿಲಾಗಬೇಕೆಂಬ ಹೊಸ ದೃಷ್ಟಿ ಅವರಲ್ಲಿ ತೆರೆಯಿತು. ಧರ್ಮತತ್ವ ಸಂಸ್ಕೃತದಲ್ಲಿಯೇ ಇರಬೇಕೆಂಬ ಭಾವನೆ ಬೌದ್ಧ-ಜೈನರಲ್ಲಿ ಇರಲು ಕಾರಣವಿರಲಿಲ್ಲ. ಯಾಕೆಂದರೆ ಇವರ ಮತಗ್ರಂಥಗಳು ಪಾಲಿ ಮತ್ತು ಅರ್ಧಮಾಗಧಿ ಎಂಬ ಜನಭಾಷೆಯಲ್ಲಿದ್ದುವು. ಅಲ್ಲದೆ ಕೇವಲ ಸಂಸ್ಕೃತ-ಪ್ರಾಕೃತಗಳ ಮೂಲಕವಾಗಿ ಮತಪ್ರಸಾರ ಹಾಗೂ ಮತಾಂತರಹೊಂದಿದವರಲ್ಲಿ ನಿಷ್ಠೆಯ ಜೋಪಾನ ಇವು ಸಾಧ್ಯವಿಲ್ಲವೆಂದು ಬೌದ್ಧರಿಗಿಂತ ಹೆಚ್ಚು ಪ್ರಭಾವಶಾಲಿಯಾಗುತ್ತಿರುವ ಜೈನಮತಾ-ಚಾರ್ಯರು ಬೇಗ ಅರಿತುಕೊಂಡರು. ವೈಶ್ಯ, ಶೂದ್ರ ಈ ಸಮಾಜಗಳಲ್ಲಿ ಹೆಚ್ಚಾಗಿ ಜೈನಮತ ಸ್ವೀಕಾರ ಮಾಡಿದವರು ಕನ್ನಡವೊಂದನ್ನೇ ಬಲ್ಲವರು. ಅವರಲ್ಲಿ ಮತದ ಅರಿವು-ನಂಬಿಕೆಗಳನ್ನು ಹೆಚ್ಚಿಸಲು ಅವರ ನುಡಿಯನ್ನು ಪರಿಷ್ಕರಿಸಿ ಅದರಲ್ಲಿಯೇ ಶಾಸ್ತ್ರ, ವ್ಯಾಖ್ಯಾನ, ಕಥೆ, ಪದ್ಯ ಇವನ್ನು ರಚಿಸುವುದು ಅಗತ್ಯ ಎಂಬುದನ್ನು ಅಂದಿನ ಜೈನಧುರೀಣರು ಅರಿತದ್ದು ಕನ್ನಡಕ್ಕೆ ಭಾಗ್ಯೋದಯವಾಯಿತು. ಚಾತುರ್ವರ್ಣ್ಯ-ವನ್ನು ಇಟ್ಟುಕೊಂಡೂ ಹಿಂಸೆಗೆ ಹಾಗೂ ಹತಾಶವಾದ ದೈವವಾದಕ್ಕೆ ಇಂಬುಗೊಡದೆ ಕರ್ಮವಿಜಯದ, ಆತ್ಮೋದ್ಧಾರದ ತತ್ವವನ್ನು ಬೋಧಿಸಿದ ಜೈನಧರ್ಮವು ಅಂದು ಸಕಾಲಕ್ಕೆ ಕನ್ನಡ ಜನದ ಮನಸೆಳೆಯಿತು. ಉಳಿದ ಧರ್ಮಗಳಿಗಿಂತ ಅದು ವರ್ಚಸ್ವಿ-ಯಾಯಿತು. ಭದ್ರಬಾಹುವಿನ ಕಾಲದಿಂದ ಕ್ರಮಬದ್ಧವಾಗಿ ನಡೆದ ಪ್ರಚಾರ-ಸಂಘಟನೆಗಳು ಹಾಗೂ ಕಾಲಕಾಲಕ್ಕೆ ತಲೆದೋರಿದ ಮಹಾವ್ಯಕ್ತಿಗಳ ಪ್ರತ್ಯಕ್ಷ-ಸಂಪರ್ಕಗಳು ಜೈನಮತವನ್ನು ಕನ್ನಡನಾಡಿನಲ್ಲಿ ಹರಡಲು ನೆರವಾದುವು. ವೈದಿಕ ಇಲ್ಲವೆ ಬೌದ್ಧಮತವು ಕೇವಲ ಸಂಪ್ರದಾಯಮೂಢ ಸ್ಥಿತಿಯಲ್ಲಿದ್ದು ಅಸಾಮಾನ್ಯ ವ್ಯಕ್ತಿಗಳು ತುಂಬಿದ ಚೈತನ್ಯವಿಲ್ಲದೆ ಕಳೆಗುಂದಿತು. ಇದನ್ನೆಲ್ಲ ಮನದಂದರೆ ಕನ್ನಡ ಸಾಹಿತ್ಯೋದಯವು ಕ್ರಿ.ಶ. ಆರಂಭ ಶತಕಗಳಲ್ಲಿ ನಸುಕಿನಂತಾಗಿ ಕ್ರಿ.ಶ. ೫-೬ನೆಯ ಶತಮಾನಗಳಿಂದ ಬೆಳ್ಳಂಬೆಳಕಾಗಿ ೯ನೆಯ ಶತಕದಷ್ಟು ಹೊತ್ತಿಗೆ ಹೊತ್ತುಮೂಡಿ-ದಂತಾಯಿತು. ಅದಕ್ಕೆ ಕಾರಣವೆಂದರೆ ಜೈನಮತಾಚಾರ್ಯರು, ಪಂಡಿತರು ಹಾಗೂ ಪ್ರತಿಭಾಶಾಲಿಗಳಲ್ಲಿ ಕಾಲಪ್ರಭಾವದಿಂದ ಮತ್ತು ರಾಜಪ್ರೇರಣೆಯಿಂದ ಉಂಟಾದ ದೇಶೀಯಭಾಷಾದೃಷ್ಟಿ, ಇಲ್ಲವೆ ಜನಭಾಷಾದೃಷ್ಟಿ. ಇದರಿಂದ ಒಂದು ಕಾಲಕ್ಕೆ ಬರೀ ಮಾತಿನ ಭಾಷೆಯಾದ ಕನ್ನಡವು ಸಾಹಿತ್ಯಸಿಂಹಾಸನವನ್ನೇರಿ ಕನ್ನಡನಾಡಿನ

'ಸಂಸ್ಕೃತ' ಭಾಷೆಯಾಯಿತು. ಕರ್ನಾಟಕದಲ್ಲಿ ರಾಜರು ಮತ್ತು ಬಹುಜನ-ಸಮಾಜದ ಒಕ್ಕಟ್ಟನಿಂದ ಪಂಡಿತವರ್ಗವು ಸಂಸ್ಕೃತಾದಿಗಳ ಮೋಹದಿಂದ ಹೊರಬಿದ್ದು ಕನ್ನಡಕ್ಕೆ ಒಲಿಯಿತೆಂಬ ಅಭಿಪ್ರಾಯವನ್ನು ಹಿಂದೆ ಹೇಳಿದೆ. ಮೇಲಿನ ನಮ್ಮ ವಿವೇಚನೆಯಿಂದ ಈ ಅಭಿಪ್ರಾಯದಲ್ಲಿಯ ಸತ್ಯಾಂಶವನ್ನು ಕಾಣಬಹುದು. ಇಲ್ಲಿ ವಿವರಿಸಬೇಕಾದ ಒಂದೆರಡು ಅಂಶಗಳಿವೆ. ಕರ್ನಾಟಕದಲ್ಲಿ ಸಾಹಿತ್ಯೋದಯಕ್ಕೆ ಕಾರಣರಾದ ರಾಜರು ಜೈನಮತೀಯರು ಇಲ್ಲವೆ ಜೈನತತ್ವಪ್ರಿಯರು ಹಾಗೂ ಸರ್ವಸಹಿಷ್ಣುಗಳು ಆಗಿದ್ದರು. ಹಾಗೂ ಕನ್ನಡಕ್ಕೆ ಒಲಿದ ಪಂಡಿತವರ್ಗ ವೈದಿಕ ಸಂಪ್ರದಾಯಕ್ಕಿಂತ ಅವೈದಿಕ, ಹೆಚ್ಚಾಗಿ ಜೈನಮತೀಯ ಆಗಿತ್ತು. ಈ ತ್ರಿಕೂಟ-ದಲ್ಲಿಯ ಬಹುಜನಸಮಾಜ ಎಂಬುದು ಸ್ವಯಂಜಾಗೃತವಾದ ಘಟಕವಾಗಿರದೆ ತನ್ನ ನಡೆನುಡಿಗಳಿಂದ ಬಲ್ಲವರಲ್ಲಿ ತನಗೆ ಅನುಕೂಲವಾದ, ತನ್ನ ಹಿತಕ್ಕೆ ಸಾಧಕವಾದ ದೃಷ್ಟಿಯನ್ನು ಅರಳಿಸಿದ ಜನಜಂಗುಳಿ ಎನ್ನಬೇಕು. ಇದರಿಂದ ಅದು ಅರಸಿಕ-ವಾಗಿತ್ತೆಂದೂ ಹೊಸ ಪಲ್ಲಟವನ್ನು ಮೆಚ್ಚಲಾರದಷ್ಟು ಮೂಢವಾಗಿತ್ತೆಂದೂ ತಿಳಿಯ-ಕೂಡದು.

ಭಾರತದ ಭಾಷೆಗಳಲ್ಲಿ ಸಂಸ್ಕೃತ ವಾಙ್ಮಯವು ಅತಿ ಪ್ರಾಚೀನವಾದುದು. ಅದರ ತರುವಾಯ ಪ್ರಾಚೀನವಾದ ಸಾಹಿತ್ಯಗಳೆಂದರೆ ತಮಿಳು, ಆಮೇಲೆ ಕನ್ನಡ. ಕನ್ನಡನುಡಿಯ ಬೆಳವಣಿಗೆಗೆ ಕನಿಷ್ಠ ೨೦೦೦ ವರ್ಷಗಳಷ್ಟು ಕಾಲಕ್ರಮಣವಿದ್ದರೆ ಕನ್ನಡ ಸವಿನುಡಿ ಎಂದರೆ ಸಾಹಿತ್ಯಕ್ಕೆ ಕನಿಷ್ಠ ೧೫೦೦ ವರ್ಷಗಳ ಹಳಮೆಯಿರುತ್ತದೆ. ಉಪಲಬ್ಧವಾದ ಗ್ರಂಥದಿಂದ ಎಣಿಸುವುದಾದರೆ ಕನ್ನಡಸಾಹಿತ್ಯವು ಒಂದು ಸಾವಿರಕ್ಕೆ ಮೇಲಾದ ವರ್ಷಗಳ ಹಳತನದಿಂದ ಕೂಡಿದ್ದಾಗಿದೆ. ಈ ಪ್ರಾಚೀನತೆ ಹುಸಿ-ಹೆಮ್ಮೆಗಾಗಿ ಎತ್ತಿಹೇಳಬೇಕಾದ ವಿಷಯವಲ್ಲ. ಕನ್ನಡಸಾಹಿತ್ಯವು ಈ ನಿಡಿದಾದ ದಾರಿಯಲ್ಲಿ ನಡೆದು ಯಾವ ಸಿದ್ಧಿಯನ್ನು ಪಡೆದಿದೆ, ಯಾವುದನ್ನು ಪಡೆಯದೆ ಉಳಿದಿದೆ, ಅದು ಹಾಕಿಕೊಟ್ಟ ಪರಂಪರೆಯೇನು, ಇನ್ನು ಮುಂದಿನ ಸಾಹಿತ್ಯಕ್ಕೆ ಅದು ನೀಡುವ ಬೆಳಕೇನು ಎಂಬುದನ್ನು ಅರಿತು ಮುಂದುವರಿಯಬೇಕು. ಹೀಗೆ ನೋಡಿದಾಗ ಈ ಪ್ರಾಚೀನ ಪರಂಪರೆಯ ವಿಷಯದಲ್ಲಿ ನಾವು ಅಭಿಮಾನ ತಾಳುವುದಲ್ಲದೆ ಇದನ್ನು ಉಳಿಸಿ ಬೆಳೆಸಬೇಕೆಂದೂ ಇದರಿಂದ ಚಿರಂತನ ಸ್ಫೂರ್ತಿ ಪಡೆಯಬೇಕೆಂದೂ ನಮಗೆ ತೋರದೆ ಇರದು.

೫. ಸಾಹಿತ್ಯಚರಿತ್ರೆಯಲ್ಲಿ ವಿಭಾಗಕ್ರಮ

ಕನ್ನಡಸಾಹಿತ್ಯದ ಮುಂದಣ ಚರಿತ್ರೆ ಬಹು ದೀರ್ಘಕಾಲವನ್ನು ಒಳಗೊಂಡಿದೆ, ತರತರದ ರೂಪಗಳನ್ನೂ ಹಲವಾರು ಕೃತಿಗಳನ್ನೂ ಕುರಿತಿದೆ. ಅದರ ಅಭ್ಯಾಸ ಸುಕರವಾಗಲು ವಿಭಾಗಗಳು ಆವಶ್ಯಕ. ವಿಭಾಗವೆಂದಮೇಲೆ ಒಂದು ಕ್ರಮ, ಕ್ರಮಕ್ಕೆ ಒಂದು ತಳಹದಿ, ಒಂದು ತತ್ತ್ವ ಬೇಕು. ಈ ವಿಷಯದಲ್ಲಿ ಸಾಕಷ್ಟು ಮತ-ಭೇದವಾಗಿದೆ. ಕನ್ನಡಸಾಹಿತ್ಯದ ಸ್ವರೂಪ, ಕಾಲಕಾಲದ ವೈಶಿಷ್ಟ್ಯಗಳು ಈ ಬಗ್ಗೆ ಮೂಲಭೂತವಾದ ದೃಷ್ಟಿಭೇದವೂ ತೋರಿದೆ. ಆದ್ದರಿಂದ ಈ ವಿಷಯವನ್ನು ಪರ್ಯಾಲೋಚಿಸಿ ನಮಗೆ ಸಮ್ಮತವಾದ ವಿಭಾಗಕ್ರಮವನ್ನು ಈ ಪ್ರಕರಣದಲ್ಲಿ ನಿರೂಪಿಸುತ್ತೇವೆ.

ಕನ್ನಡಸಾಹಿತ್ಯಚರಿತ್ರೆಗೆ ವಿಪುಲ ಸಾಮಗ್ರಿರೂಪವಾದ ಮೊದಲನೆಯ ಮಹಾ-ಗ್ರಂಥವನ್ನು ಒದಗಿಸಿದವರು ದಿವಂಗತ ಆರ್. ನರಸಿಂಹಾಚಾರ್ಯರು. ತಮ್ಮ 'ಕರ್ಣಾಟಕ ಕವಿಚರಿತೆ'(ಸಂಪುಟ ೧)ಯಲ್ಲಿ ಅವರು ಕನ್ನಡ ಕವಿಗಳನ್ನು ಸ್ಥೂಲವಾಗಿ ಜೈನರು, ವೀರಶೈವರು, ವೈಷ್ಣವರು ಎಂದು ಮೂರು ಪಂಗಡವಾಗಿ ವಿಂಗಡಿಸಿ 'ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಮತದ ಕವಿಗಳು **ವಿಶೇಷವಾಗಿ** ಗ್ರಂಥರಚನೆ ಮಾಡಿ-ದ್ದಾರೆ ಎಂಬ ಅಂಶವನ್ನು ಸ್ಥೂಲವಾಗಿ ತಿಳಿಸುವುದಕ್ಕೋಸ್ಕರ ಈ ರೀತಿಯಾಗಿ ಕಾಲ-ವಿಭಾಗ ಮಾಡಿದೆ. ಇದರಿಂದ ಜೈನರ ಕಾಲದಲ್ಲಿ ಶೈವ–ವೈಷ್ಣವ ಗ್ರಂಥಗಳೂ ಶೈವರ ಕಾಲದಲ್ಲಿ ವೈಷ್ಣವ–ಜೈನ ಗ್ರಂಥಗಳೂ ವೈಷ್ಣವರ ಕಾಲದಲ್ಲಿ ಶೈವ–ಜೈನ ಗ್ರಂಥಗಳೂ ಹುಟ್ಟಲಿಲ್ಲವೆಂದು ತಿಳಿಯಕೂಡದು' ಎಂದು ಸ್ಪಷ್ಟಪಡಿಸಿದ್ದಾರೆ.[1] ಈ ವಿಂಗಡಣೆ ಮುಂದೆ ಬಹುಕಾಲದ ವರೆಗೆ ಪ್ರಚಾರದಲ್ಲಿ ಉಳಿಯಿತು. ಇದಕ್ಕೆ ಒಂದು ತತ್ತ್ವದ ಸ್ವರೂಪವೂ ಬಂದಿತು. ಆಯಾ ಯುಗದಲ್ಲಿ ಪ್ರಭಾವಶಾಲಿಯಾದ ಮತಧರ್ಮಕ್ಕನು-ಸರಿಸಿ ಕಾಲವಿಭಾಗವನ್ನು ಮಾಡಬೇಕೆಂಬುದೇ ಆ ತತ್ತ್ವ. ಅಂತೇ ಸಾಹಿತ್ಯಪ್ರಾರಂಭ-ದಿಂದ ೧೨ನೆಯ ಶ.ದ ಮಧ್ಯದವರೆಗೆ **ಜೈನಯುಗ,** ೧೨ನೆಯ ಶ.ದ ಮಧ್ಯದಿಂದ ೧೫ನೆಯ ಶ.ದ ವರೆಗೆ **ವೀರಶೈವಯುಗ,** ೧೫ನೆಯ ಶ.ದಿಂದ ಮುಂದೆ ೧೯ನೆಯ ಶ.ದ ವರೆಗೆ **ಬ್ರಾಹ್ಮಣಯುಗ** ಹೀಗೆ ಹೇಳಲಾಯಿತು. ಇದನ್ನು ವಿವರಿಸುತ್ತ ಇಂಗ್ಲಿಷಿನಲ್ಲಿ ಕನ್ನಡಸಾಹಿತ್ಯಚರಿತ್ರೆಯನ್ನು ಬರೆದ ಇ. ಪಿ. ರಾಯಿಸರು ಹೇಳಿದ ಮಾತೆಂದರೆ, ಇಡೀ ಸಾಹಿತ್ಯಚರಿತ್ರೆಯನ್ನು ಶಾಖೆಗಳನ್ನು ಬರಮಾಡಿಕೊಂಡು ಹಿಗ್ಗುತ್ತ ಹೋಗುವ ಹೊಳೆಗೆ ಹೋಲಿಸಬಹುದು. ತನ್ನ ಮೊದಲ ಯುಗದಲ್ಲಿ ಅದು ಇತರ ಮಿಶ್ರಣವಿಲ್ಲದ ಜೈನತತ್ತ್ವದ ಪ್ರವಾಹವಾಯಿತು, ಆಮೇಲೆ ಎರಡನೆಯ ಯುಗದಲ್ಲಿ ವೀರಶೈವಪ್ರವಾಹವು ಬಂದು ಅದನ್ನು ಕೂಡಿಕೊಂಡಿತು, ಅವು ಒಂದರೊಳಗೊಂದು

---

1 ಆರ್. ನರಸಿಂಹಾಚಾರ್ಯ: ಕರ್ಣಾಟಕ ಕವಿಚರಿತೆ, ಸಂ. ೧ — ಅವತರಣಿಕೆ, ಪು. ೧೨–೧೩.

ಬೆರೆಯದೆ ಹತ್ತಿರ ಹತ್ತಿರ ಹರಿದುವು. ಮುಂದೆ ಮೂರನೆಯ ಯುಗದಲ್ಲಿ ವೈಷ್ಣವ-ಪ್ರವಾಹವು ಬಂದು ಆ ಎರಡು ಪ್ರವಾಹಗಳನ್ನೂ ಸೇರಿತು. ಧಾರ್ಮಿಕ ಹಿನ್ನೆಲೆಯಲ್ಲಿ ಮಾತ್ರವಲ್ಲದೆ ಸಾಹಿತ್ಯರೂಪಗಳಲ್ಲಿಯೂ ಈ ಯುಗಗಳು ಬೇರೆಬೇರೆಯಾಗಿವೆ. ಜೈನಗ್ರಂಥಗಳು ಸಾಮಾನ್ಯವಾಗಿ ಚಂಪೂರೂಪದಲ್ಲಿವೆ. ವೀರಶೈವಕೃತಿಗಳಲ್ಲಿ ಗದ್ಯ ಹೆಚ್ಚಾಗಿದ್ದು, ಪದ್ಯ ಬಹುಶಃ ಷಟ್ಪದಿ, ತ್ರಿಪದಿ, ರಗಳೆಗಳಲ್ಲಿದೆ. ದೀರ್ಘವಾದ ಬ್ರಾಹ್ಮಣ ಕೃತಿಗಳು ಷಟ್ಪದಿಯಲ್ಲಿದ್ದರೂ ಚಿಕ್ಕವು ಕೀರ್ತನೆಗಳ ರೂಪದಲ್ಲಿವೆ.[1] ಕ್ರಿ.ಶ. ೧೮೭೪ರಷ್ಟು ಹಿಂದೆ ಕಿಟೆಲ್‌ರು ತಮ್ಮ ನಾಗವರ್ಮನ 'ಛಂದೋಂಬುಧಿ'ಯ ಆವೃತ್ತಿಯಲ್ಲಿ 'ಕನ್ನಡ ಸಾಹಿತ್ಯದ ಮೇಲೆ ನಿಬಂಧ'ವೆಂಬುದನ್ನು ಇಂಗ್ಲಿಷಿನಲ್ಲಿ ವಿಸ್ತಾರವಾಗಿ ಬರೆದು ಮತಪರವಾದ ವಿವೇಚನೆಯನ್ನೇ ಮಾಡಿದ್ದಾರೆ. ಅಲ್ಲದೆ ತರುವಾಯ ತಮ್ಮ ಕೋಶದ ಉಪೋದ್ಘಾತದಲ್ಲಿ, ಭಾಷಾದೃಷ್ಟಿಯಿಂದ ಜೈನಯುಗದಲ್ಲಿ ಹಳಗನ್ನಡ, ವೀರಶೈವ-ಯುಗದಲ್ಲಿ ನಡುಗನ್ನಡ, ಬ್ರಾಹ್ಮಣಯುಗದಲ್ಲಿ ಹೊಸಗನ್ನಡ ಪ್ರಮುಖವಾಗಿತ್ತೆಂದು ಹೇಳಿದ್ದಾರೆ. ಈ ರೀತಿಯಾಗಿ ಮತಧರ್ಮ, ಸಾಹಿತ್ಯರೂಪ, ಭಾಷಾವಸ್ಥೆ ಈ ಮೂರರಿಂದಲೂ ಮೇಲ್ಕಾಣಿಸಿದ ಮೂರು ಯುಗಗಳು ಬೇರೆ ಬೇರೆ ಎಂಬ ಪ್ರಘಾತ ಬಿದ್ದಿತು. ಅದರ ವರ್ಚಸ್ಸು ಇಂದಿಗೂ ಉಳಿದಿದೆ. ಭಾಷಾದೃಷ್ಟಿಯನ್ನು ಮುಖ್ಯವಾಗಿ ನೆನಪಿನಲ್ಲಿಟ್ಟು ಮಾಡಲಾದ ಕೆಳಗಿನ ಪ್ರಯತ್ನವನ್ನೂ ಗಮನಿಸಬಹುದು. 'ಕರ್ಣಾಟಕ ಸಾಹಿತ್ಯ ಚರಿತ್ರೆಯನ್ನು ಐದು ಭಾಗ ಮಾಡಬಹುದು: (೧) ಮೂಲಗನ್ನಡ ಕಾಲ—ಕ್ರಿ.ಶ. ೭೫೦ರ ವರೆಗೆ. (೨) ಹಳಗನ್ನಡ ಕಾಲ—೭೫೦–೧೧೫೦ರ ವರೆಗೆ. (೩) ಮಧ್ಯ ಕನ್ನಡ ಕಾಲ—೧೧೫೦–೧೫೦೦ರ ವರೆಗೆ. (೪) ಹೊಸಗನ್ನಡ ಕಾಲ—೧೫೦೦–೧೮೫೦ರ ವರೆಗೆ. (೫) ನವಗನ್ನಡ ಕಾಲ—೧೮೫೦ ಮುಂದೆ.'[2]

ಬರಬರುತ್ತ ಮೇಲಿನ ವಿಚಾರಸರಣಿಗೆ ಪ್ರತಿಕೂಲವಾದ ದನಿಗಳೆದ್ದುವು, ಹೊಸ ಸೂಚನೆಗಳೂ ಮುಂದೆ ಬಂದುವು. ಮೊದಲನೆಯ ಸಲ ಮತಾನುಸಾರವಾದ ಕಾಲ-ವಿಭಾಗವನ್ನು ಪ್ರತಿಭಟಿಸಿದವರು 'ಕನ್ನಡವಕ್ಕಿ' ಎಂಬ ಲೇಖಕರು. ಅವರು ಹೇಳಿ-ದ್ದೆಂದರೆ 'ಈ ವಿಭಾಗಕ್ರಮವು ಅಸಮಂಜಸವಲ್ಲವಾದರೂ ಶುದ್ಧ ಸಾಹಿತ್ಯದೃಷ್ಟಿಯಿಂದ ಅಷ್ಟು ಸಮರ್ಪಕವಾಗಿಲ್ಲ........ಕಾಲ, ದೇಶ, ಕಾರಣ, ನಿಮಿತ್ತಗಳನ್ನು ಲಕ್ಷಿಸಿ, ಕವಿಕರ್ಮಕ್ಕೆ ಮೂಲಕಾರಣವಾದ ಸ್ಫೂರ್ತಿವಿಶೇಷವನ್ನು ಗಮನಿಸಿ, ಕಾವ್ಯಕ್ಕೆ ರಸವೇ ಆತ್ಮವೆಂಬುದನ್ನು ಜ್ಞಾಪಕದಲ್ಲಿಟ್ಟು, ಕರ್ಣಾಟಕ ವಾಙ್ಮಯೇತಿಹಾಸವೆಲ್ಲವನ್ನು (ಕ್ರಿ.ಶ. ೧೦ನೆಯ ಶ.ದಿಂದ) **ಕ್ಷಾತ್ರಯುಗ, ಮತಪ್ರಚಾರಕ ಯುಗ, ಸಾರ್ವ-ಜನಿಕ ಯುಗ** ಮತ್ತು **ಆಧುನಿಕ (ವೈಜ್ಞಾನಿಕ) ಯುಗ**ವೆಂಬುದಾಗಿ ನಾಲ್ಕು ವಿಭಾಗ ಮಾಡುತ್ತೇವೆ.[3] ಕ್ಷಾತ್ರಯುಗದಲ್ಲಿ (೧೦ನೆಯ ಶ.ದಿಂದ ೧೨ನೆಯ ಶ.)

---

1 E. P. Rice: A History of Kanarese Literature, pp. 15-16

2 ಎಂ. ಎ. ದೊರೆಸ್ವಾಮಯ್ಯಂಗಾರ್: ರನ್ನನ ಯುಗ (ರನ್ನಕವಿಪ್ರಶಸ್ತಿ, ಪು. ೨೮)

3 ಕನ್ನಡವಕ್ಕಿ: ಕರ್ಣಾಟಕ ಸಾಹಿತ್ಯ (ಕರ್ಣಾಟಕದ ಕೈಪಿಡಿ, ಪು. ೨೦೯)

ಕವಿಕರ್ಮಕ್ಕೆ ವೀರರಸವೇ ಪ್ರಧಾನವಾದ್ದರಿಂದ ಆ ಯುಗಕ್ಕೆ ಯೋಗ್ಯ ಹೆಸರು ದೊರೆಯಿತು. 'ಹೆಚ್ಚಾಗಿ ಜೈನರೇ ಈ ಕಾಲದಲ್ಲಿ ಗ್ರಂಥರಚನೆಯನ್ನು ಮಾಡಿದರೂ ಈ ವಿಚಾರದಲ್ಲಿ ಬ್ರಾಹ್ಮಣರು ಹಿಂದುಳಿದಿರಲಿಲ್ಲ.....ಕಾವ್ಯ–ಪುರಾಣಗಳಷ್ಟೇ ಅಲ್ಲದೆ ಇತರ ಸಾಹಿತ್ಯಸ್ವರೂಪಗಳೂ ಹುಟ್ಟಿದುವು.'[1] ಮತಪ್ರಚಾರಕ ಯುಗದಲ್ಲಿ (೧೨ನೆಯ ಶ.ದಿಂದ ೧೬ನೆಯ ಶ.ದವರೆಗೆ) ವೈದಿಕಧರ್ಮ ಜೈನಧರ್ಮವನ್ನೆದುರಿಸಿತು, ಆಸ್ತಿಕ ಭಕ್ತಿಪರವಾದ ಹೊಸ ಮತಗಳು ಉದಯವಾದುವು. ಇಂಥ ಸಮಯದಲ್ಲಿ ಹಿಂದಿಗಿಂತ ಹೆಚ್ಚಾಗಿ ಜೈನಪುರಾಣ ಮುಂತಾದ ಗ್ರಂಥಗಳ ಬರೆವಣಿಗೆ ನಡೆಯಿತು. ಪ್ರತಿಯೊಂದು ಮತದವರು ತಮ್ಮ ಮತದ ಮೇಲ್ಮೆಯನ್ನು ತೋರಿಸುವುದಕ್ಕೂ ಪ್ರಚಾರಕ್ಕೂ ಗ್ರಂಥಗಳನ್ನು ರಚಿಸಿದರು. ಸ್ವಮತದ ಶ್ರೇಷ್ಠತೆಯನ್ನು ತೋರಿಸುವುದಲ್ಲದೆ ಪರಮತ-ದೂಷಣೆಯೂ ಪ್ರಬಲವಾಯಿತು. ಎಲ್ಲರಲ್ಲಿ ಭೋಗಾಸಕ್ತಿ ಹೆಚ್ಚಲು ಕಾವ್ಯಗಳಲ್ಲಿ ಶೃಂಗಾರರಸವೇ ಪ್ರಧಾನವಾಯಿತು. ಮೂರನೆಯದಾದ ಸಾರ್ವಜನಿಕ ಯುಗದಲ್ಲಿ (೧೬ನೆಯ ಶ.ದಿಂದ ೧೯ನೆಯ ಶ.ದವರೆಗೆ) ದೇಶದಲ್ಲಿ ಅನಾಯಕತ್ವ, ಸಮಾಜದಲ್ಲಿ ನಿರ್ಜೀವತೆ ಹಬ್ಬಿರುವಾಗ 'ಸಮಾಜದ ಉನ್ನತಿಗೆ ಸುಲಭ ಮಾರ್ಗವನ್ನು ತೋರಿಸಿ ಧರ್ಮವನ್ನು ಸಾರ್ವಜನಿಕವಾಗಿ ಮಾಡುವ ಸದುದ್ದೇಶದಿಂದ ಮಧ್ವಹರಿದಾಸರು ಉದಯಿಸಿದರು.'[2] ಹಿಂದಿನ ಯುಗಗಳಲ್ಲಿ ರಾಜರ ಅಥವಾ ವಿದ್ಯಾಪ್ರೇಮಿಗಳ ಸುತ್ತುಮುತ್ತಲೂ ಸಾಹಿತ್ಯ ಸೃಷ್ಟಿಯಾಗುತ್ತಿತ್ತು, ಜನಸಾಮಾನ್ಯಕ್ಕೂ ಸಾಹಿತ್ಯಕ್ಕೂ ಸಾಮೀಪ್ಯಸಂಬಂಧವಿರಲಿಲ್ಲ. ಎರಡನೆಯ ಯುಗದಲ್ಲಿ ಈ ಸಂಬಂಧವು ಕೊಂಚ ಹೆಚ್ಚಿತು. ಈ ಮೂರನೆಯ ಯುಗದಲ್ಲಿ ಮಾತ್ರ 'ನೂರಾರು ಕವಿಗಳು, ರಾಜರಿಗಲ್ಲ, ತಮ್ಮ ಪೋಷಕರಿಗಲ್ಲ, ಸಮಾಜಕ್ಕೆ, ದೇಶಕ್ಕೆ ನೂರಾರು ಗ್ರಂಥಗಳನ್ನು ಬರೆದರು. ಜನಸಾಮಾನ್ಯಕ್ಕಾಗಿ ಈ ಕಾಲದ ಕವಿಗಳು ಬರೆದರಾದ ಕಾರಣ ಸುಲಭವಾದ, ಸರಳವಾದ ಸರಣಿಯನ್ನನುಸರಿಸಿದರು.'[3] 'ಭಕ್ತಿರಸವೇ ಈ ಕಾಲದ ಸಾಹಿತ್ಯದಲ್ಲಿ ಪ್ರಧಾನರಸವೆಂದಂತಾಯತು.'[4]

ಈ ಹೊಸ ಕ್ರಮವು ಅಭ್ಯಾಸಿಗಳ ವಿಚಾರಶಕ್ತಿಯನ್ನು ಪ್ರಚೋದಿಸಿತು. ಮುಂದಿನ ಚರಿತ್ರಲೇಖಕರು ನವೀನ ಕ್ರಮಗಳನ್ನೂ ಹೆಸರುಗಳನ್ನೂ ಸೂಚಿಸಿದರು. ಆರಂಭಕಾಲ, ಪಂಪನ ಯುಗ, ಸ್ವಾತಂತ್ರ್ಯಯುಗ, ಚಿಕ್ಕದೇವರಾಯರ ಕಾಲ, ಸಂಧಿಕಾಲ ಎಂಬುದಾಗಿ ಒಂದು ಸೂಚನೆ ಮುಂಬಂದಿತು. ಅದರ ಸಮರ್ಥನೆಗಾಗಿ ಹೇಳಿದ್ದರಲ್ಲಿ 'ಯಾವ ಒಂದು ಕಾಲದಲ್ಲಿಯೂ ಒಂದೇ ಮತದವರು ಗ್ರಂಥರಚನೆ

---

1 ಕನ್ನಡವಕ್ಕಿ: ಕರ್ಣಾಟಕ ಸಾಹಿತ್ಯ (ಕರ್ಣಾಟಕದ ಕೈಪಿಡಿ, ಪು. ೨೧೨_೩)

2 ಅದೇ, ಪು. ೨೧೯

3 ಅದೇ, ಪು. ೨೧೯

4 ಅದೇ, ಪು. ೨೨೦

ಮಾಡಿಲ್ಲ. ಆದ್ದರಿಂದ ಈ ವಿಭಾಗಕ್ರಮವನ್ನು ಬಿಟ್ಟು ಆಯಾ ಕಾಲದಲ್ಲಿ ಪ್ರಧಾನರಾದ ಕವಿಗಳ ಹೆಸರನ್ನು ಅಥವಾ ಆಯಾ ಕಾಲದ ಕಾವ್ಯಗಳ ವೈಶಿಷ್ಟ್ಯವನ್ನು ಸೂಚಿಸುವ ಒಂದು ಹೆಸರನ್ನು ಕೊಡಲು ಇಲ್ಲಿ ಯತ್ನಿಸಿದೆ.'[1] ಕ್ರಿ.ಶ. ೯೦೦ರ ವರೆಗೆ ಆರಂಭ ಕಾಲವಾದರೆ, ೯೦೦ರಿಂದ ೧೨೦೦ ಇದು ಚಂಪೂಯುಗ ಅಥವಾ ಪಂಪನ ಯುಗ. ಯಾಕೆಂದರೆ ಪಂಪನೂ ಅವನು ಹಾಕಿಕೊಟ್ಟ ಚಂಪೂ ಮಾರ್ಗವೂ ಈ ಕಾಲದ ಕವಿಗಳಿಗೆ ಮೇಲ್ಪಂಕ್ತಿಯಾದದ್ದು ಕಂಡುಬಂದಿದೆ. ೧೨ನೆಯ ಶ.ದಲ್ಲಿ ಸ್ವಾತಂತ್ರ್ಯ ಯುಗವು ಪ್ರಾರಂಭವಾಯಿತು. 'ಇದುವರೆಗೆ ಕನ್ನಡ ಕವಿಗಳೆಲ್ಲರೂ ಸಂಸ್ಕೃತಸಾಹಿತ್ಯದಿಂದ ಸಾರಸಂಗ್ರಹಕಾರ್ಯದಲ್ಲಿ ತೊಡಗಿದ್ದರು; ಸಂಸ್ಕೃತ ಕವಿಗಳನ್ನು ಅನುಕರಣ ಮಾಡುತ್ತಿದ್ದರು.'[2] ಬಸವಣ್ಣನವರು ಒಂದು ಹೊಸ ಹಾದಿಯನ್ನು ಹಾಕಿಕೊಟ್ಟರು. ಜನಸುಲಭವಾದ ವಚನಗಳೂ ಕನ್ನಡ ಛಂದಸ್ಸಿನ ರಗಳೆ, ಷಟ್ಪದಿಗ್ರಂಥಗಳೂ ತಲೆದೋರಿದುವು. ಇನ್ನುಮುಂದಿನ ಚಿಕ್ಕದೇವರಾಯರ ಕಾಲದಲ್ಲಿ ಆ ಅರಸರ ಪೋಷಣೆಯಿಂದ ಕನ್ನಡಸಾಹಿತ್ಯವು ಮತ್ತೆ ಪಲ್ಲವಿಸಿತೆಂದು ಆ ಹೆಸರಿತ್ತಿದೆ. ಸಂಧಿಕಾಲದಲ್ಲಿ ರಾಜಾಶ್ರಯದಿಂದ ಜನಾಶ್ರಯಕ್ಕೆ, ಹಳೆಯ ಶೈಲಿಯಿಂದ ಹೊಸದಕ್ಕೆ ನಡೆದ ಸಂಕ್ರಮಣವು ಕಂಡುಬಂದಿರುತ್ತದೆ.

ಈ ವಿಷಯದ ಮೇಲೆ ತಮ್ಮ ದೃಷ್ಟಿವಿಶೇಷದ ಬೆಳಕನ್ನು ದಿವಂಗತ ಬಿ. ಎಂ. ಶ್ರೀಕಂಠಯ್ಯನವರು ಬೀರಿದ್ದಾರೆ. ಅವರ ಅಭಿಪ್ರಾಯದಲ್ಲಿ ಕನ್ನಡಸಾಹಿತ್ಯವನ್ನು ಕಾಲ, ಮತ ಇವಕ್ಕೆ ಅನುಸರಿಸಿ ಎರಡು ಬಗೆಯಾಗಿ ವಿಭಾಗ ಮಾಡಬಹುದು. ಕಾಲಕ್ರಮದ ಬಗೆಯಾದರೆ ಭಾಷೆ, ಕಾವ್ಯದ ರೂಪ, ರಾಜವಂಶಗಳು, ಪ್ರಧಾನ ಕವಿಯ ಹೆಸರು ಮುಂತಾದುವನ್ನು ಅನುಸರಿಸಿ ಮಾಡಬಹುದು. ಆದರೆ 'ಈ ವಿಭಾಗದಲ್ಲಿ ಸೌಕರ್ಯವಾಗಲಿ, ಸಾಹಿತ್ಯದೃಷ್ಟಿಯಿಂದ ಒಂದು ಲಕ್ಷಣಸಮನ್ವಯವಾಗಲಿ, ವಿಶೇಷ ಪ್ರಯೋಜನವಾಗಲಿ ಕಾಣಬರುವುದಿಲ್ಲ. ಕನ್ನಡಸಾಹಿತ್ಯವೆಲ್ಲ ಪ್ರಾಯಶಃ ಸಂಸ್ಕೃತಸಾಹಿತ್ಯವನ್ನು ಅವಲಂಬಿಸಿ, ಸಂಪ್ರದಾಯಮಾರ್ಗವನ್ನೇ ಹಿಡಿದು ರಚಿತವಾಗಿರುವುದರಿಂದಲೂ, ಬಹುಮಟ್ಟಿಗೆ ಸಮಾಜದಲ್ಲಿ ಕೂಡ ಕಾಲಕಾಲಕ್ಕೆ ಕಾಲಗುಣ ಬದಲಾಯಿಸದೆ ಒಂದೇ ರೀತಿಯಲ್ಲಿರುವುದರಿಂದಲೂ, ಕಾಲಕ್ಕನುಸಾರವಾಗಿ ಸಾಹಿತ್ಯವಿಭಾಗ ಮಾಡುವುದರಲ್ಲಿ ಅಷ್ಟು ಔಚಿತ್ಯ ತೋರುವುದಿಲ್ಲ.'[3] ಮತದೃಷ್ಟಿಯಿಂದ ನೋಡಿದರೆ, 'ಕನ್ನಡಸಾಹಿತ್ಯದ ಚರಿತ್ರೆಯಲ್ಲಿ ಮೂರು ನಾಲ್ಕು ಘಟ್ಟಗಳು ಅಥವಾ ಚಳವಳಿಗಳು ಚೆನ್ನಾಗಿ ಮೇಲಕ್ಕೆದ್ದು ಕಣ್ಣಿಗೆ ಕಾಣುತ್ತವೆ.'[4] ಮೊದಲು ಜೈನ,

---

1 ಕೆ. ವೆಂಕಟರಾಮಪ್ಪ: ಕನ್ನಡ ಸಾಹಿತ್ಯ (ಪ್ರಚಾರ ಪುಸ್ತಕಮಾಲೆ, ೮, ಪು. ೮)

2 ಅದೇ, ಪು. ೩೩

3 ಬಿ. ಎಂ. ಶ್ರೀಕಂಠಯ್ಯ: ಕನ್ನಡ ಕೈಪಿಡಿ, ಸಂ. ೨ (ಮೈಸೂರು ವಿಶ್ವವಿದ್ಯಾನಿಲಯ), ಪು. ೪೬೭.

4 ಅದೇ, ಪು. ೪೬೭

ಆಮೇಲೆ ವೀರಶೈವ, ಮೂರನೆಯದಾಗಿ ವೈಷ್ಣವ ಇವು ತಲೆದೋರಿದುವು. ‘ ಹೊಳೆ ಬಂದು, ಹೊಳೆ ಇಳಿದು ಹೋದಂತೆ, ಕನ್ನಡಸಾಹಿತ್ಯದಲ್ಲಿ ಈ ರೀತಿಯಲ್ಲಿ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯಗಳು ಒಮ್ಮೆ ಅಭ್ಯುದಯಸ್ಥಿತಿಯಲ್ಲಿಯೂ, ಒಮ್ಮೆ ಕ್ಷೀಣದಶೆಯಲ್ಲಿಯೂ ಇರುತ್ತ, ಹಳೆಯ ನೀರೂ ಹೊಸ ನೀರೂ ಬೆರೆದುಕೊಂಡೇ ಬರುತ್ತಿರುವುವು.’[1] ನಾಲ್ಕನೆಯ ಘಟ್ಟವಾಗಿ ಪಾಶ್ಚಾತ್ಯರ ಸಂಪರ್ಕದಿಂದ ಉಂಟಾದ ಹೊಸ ಸಾಹಿತ್ಯಸೃಷ್ಟಿ. ಒಟ್ಟಿನಲ್ಲಿ ಹೊಳೆಯ ಹೋಲಿಕೆಯನ್ನೆ ಮುಂದುವರಿಸಿ ಅವರು ಹೇಳಿದ್ದಾರೆ: ‘ ಈ ನಾಲ್ಕು ಘಟ್ಟಗಳಲ್ಲಿ ಹರಿದು ಬಂದಿರುವ ನಮ್ಮ ಕನ್ನಡ ಸಾಹಿತ್ಯವನ್ನು, ನಮ್ಮ ಕನ್ನಡನಾಡಿನ ಏರುತಗ್ಗಿನ ಘಟ್ಟಗಳಲ್ಲಿ ನುಗ್ಗಿಬರುವ ಕಾವೇರಿನದಿಗೆ ಹೋಲಿಸಬಹುದು. ಅದರಂತೆಯೇ, ನಮ್ಮ ಸಾಹಿತ್ಯದ ಮೂಲವೂ ಕಾಡಿನಲ್ಲಿ ಅಡಗಿಹೋಗಿದೆ. ಆ ಬಳಿಕ ಉಪನದಿಗಳು ಒಂದೊಂದಾಗಿ ಸೇರುವಂತೆ, ಜೈನಸಾಹಿತ್ಯಪ್ರವಾಹವೂ, ವೀರಶೈವಸಾಹಿತ್ಯಪ್ರವಾಹವೂ, ಬ್ರಾಹ್ಮಣಸಾಹಿತ್ಯಪ್ರವಾಹವೂ, **ಒಂದಾದ ಮೇಲೊಂದು, ಒಂದರ ಕೂಡ ಮತ್ತೊಂದು, ಬಂದು ಮಿಳಿತವಾಗಿ ಮೂರು ಬಣ್ಣದ ನೀರುಳ್ಳ ದೊಡ್ಡ ಹೊಳೆಯಾಗಿದೆ....** ಈ ತತ್ವವನ್ನು ನೆನಪಿನಲ್ಲಿಟ್ಟು ಸಾಹಿತ್ಯಚರಿತ್ರೆಯನ್ನು ಇಲ್ಲಿ ಈ ಪ್ರಕಾರ ವಿಭಾಗ ಮಾಡಿರುತ್ತದೆ: (೧) ಆರಂಭ ಕಾಲ: ೧೦ನೆಯ ಶ.ದವರೆಗೆ. (೨) ಮತಪ್ರಾಬಲ್ಯ ಕಾಲ: ೧೦–೧೯ ಶ.ಗಳು (ಜೈನಕವಿಗಳು: ೧೦ನೆಯ ಶ.ದಿಂದ, ವೀರಶೈವ ಕವಿಗಳು: ೧೨ನೆಯ ಶ.ದಿಂದ, ಬ್ರಾಹ್ಮಣ ಕವಿಗಳು (ಮುಖ್ಯವಾಗಿ): ೧೫ನೆಯ ಶ.ದಿಂದ). (೩) ನವೀನ ಕಾಲ: ೧೯ನೆಯ ಶ.ದಿಂದ.’[2]

ಮೇಲಿನ ಸಂಗ್ರಹದಿಂದ ಮತಾನುಸಾರವಾದ ವಿಭಾಗಕ್ರಮವು ಒಂದಿಲ್ಲೊಂದು ಬಗೆಯಲ್ಲಿ ಅನೇಕರ ಒಪ್ಪಿಗೆಯನ್ನು ಪಡೆದದ್ದು ತಿಳಿಯಬರುತ್ತದೆ. ಕನ್ನಡಸಾಹಿತ್ಯ ಬಹುಭಾಗದಲ್ಲಿ ಮತೀಯ, ಮತಪ್ರಚಾರಕವೆಂಬ ಅಭಿಪ್ರಾಯವೂ ಪ್ರಚಲಿತವಾಗಿದೆ. ನಿಜವಾಗಿ ನೋಡಿದರೆ, ದೊರೆತ ಆಧಾರಗಳ ಸೂಕ್ಷ್ಮವ್ಯಾಸಂಗದಿಂದ ತಿಳಿಯಬೇಕಾದ ಹಿಂದಿನ ಜನಜೀವನ ಹಾಗೂ ಕವಿಜೀವನ ಇವುಗಳ ಸಂಪೂರ್ಣ ಚರಿತ್ರೆ ನಮಗೆ ತಿಳಿದಿಲ್ಲ. ಅಲ್ಲದೆ ಆಧಾರಗಳು ಅಪೇಕ್ಷಿಸಿದಷ್ಟು ಸಮಗ್ರವಾಗಿ ದೊರೆತಿಲ್ಲ ಇಲ್ಲವೆ ದೊರೆಯುವುದು ಸಾಧ್ಯವಿಲ್ಲ ಎಂಬ ಕೊರತೆಯೂ ಕಣ್ಣೊತ್ತಾಗಿದೆ. ಇದ್ದುದರಲ್ಲಿ ಸ್ಥೂಲ ವಿಶಾಲ ಸಂಗತಿಗಳೇ ನಮಗೆ ಸರ್ವಸ್ವವಾಗಿರುತ್ತವೆ. ಅವುಗಳ ಬಲದಿಂದ ಯಾರೇ ಆಗಲಿ ತಮತಮಗೆ ತೋರಿದಂತೆ ಅನುಮಾನ ಮಾಡದೆ ಗತಿಯಿಲ್ಲ. ಆದರೆ ಇದು ಎಂಥ ಪರಿಸ್ಥಿತಿಯಲ್ಲಿಯ ‘ ಅನುಮಾನ ’ ಎಂಬ ಅರಿವು ಅಳಿಯಕೂಡದು. ಹಾಗೂ ಇಂದಿನ ಅಪೇಕ್ಷೆಗಳನ್ನೂ ಮೂಲ್ಯಗಳನ್ನೂ ಹಿಂದಿನ ಜೀವನದ ಮೇಲೆ ಆರೋಪಿಸ-

---

1 ಅದೇ, ಪು. ೪೬೮

2 ಅದೇ, ಪು. ೪೬೯–೭೦

ಬಾರದು. ಈ ದೃಷ್ಟಿಯಿಂದ ಪರೀಕ್ಷಿಸಲಾಗಿ, ಮತಾನುಸಾರವಾದ ವಿಭಾಗಕ್ರಮವು ಸರಿಯಾದ ತಿಳಿವಳಿಕೆಯೊಡನೆ ಅರಿತುಕೊಂಡರೆ ತ್ಯಾಜ್ಯವಲ್ಲ. ಹಳಗಾಲದ ಜೀವನದಲ್ಲಿ ಮತಧರ್ಮಕ್ಕೆ ಮೇಲಾದ ಸ್ಥಾನವಿತ್ತು. ಅಂತೆಯೆ ಕವಿಯ ಹಾಗೂ ಕಾವ್ಯದ ಮೇಲೆ ಅದರ ಪ್ರಭಾವವು ಗಾಢವಾಗಿತ್ತು. ಕಾವ್ಯವಿಷಯ, ವಸ್ತುರಚನೆ, ರಸನಿಷ್ಪತ್ತಿ, ತತ್ವಬೋಧೆ ಈ ಮುಂತಾದ ಅಂಶಗಳಲ್ಲಿ ಕನ್ನಡ ಕವಿಗಳು ಸರ್ವಸಾಮಾನ್ಯವಾಗಿ ತಾವು ಸ್ವೀಕರಿಸಿದ ಮತಧರ್ಮದ ಪ್ರಭಾವಳಯದಲ್ಲಿ ಬೆಳೆದಿದ್ದಾರೆ. ಇದನ್ನರಿಯದೆ ಅವರ ಕೃತಿವಿಮರ್ಶೆಯನ್ನು ಮಾಡಲಾಗದು. ಆದರೆ ಈ ಮಾತನ್ನು ಹೆಚ್ಚು ಎಳೆಯುವುದು ತರವಲ್ಲ. ಕನ್ನಡಸಾಹಿತ್ಯ ಹೆಚ್ಚಾಗಿ ಮತೀಯ ಇಲ್ಲವೆ ಮತಪ್ರಚಾರಕವಾಗಿದೆ ಎಂದರೆ ಸಾಹಿತ್ಯಸತ್ವಕ್ಕಿಂತ ಮತೀಯತೆ ಇಲ್ಲವೆ ಮತಪ್ರಚಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟದೆ ಎಂದಿದ್ದರೆ ಅದು ಸತ್ಯನಿದರ್ಶಕವಾಗದು. ಹಲಕೆಲವರ ರೀತಿ ಇಲ್ಲವೆ ಕೆಲವು ಸಾಹಿತ್ಯಭಾಗಗಳ ಸರಣಿ ಇದರಿಂದ ಒಟ್ಟು ತೀರ್ಮಾನ ಮಾಡಿದಂತಾಗುತ್ತದೆ. ಮತ ಇಲ್ಲವೆ ಧರ್ಮ ಇದನ್ನು ಕಾವ್ಯಧರ್ಮದೊಡನೆ ಮೇಳವಿಸುವ ಅಂದರೆ ಎರಡಕ್ಕೂ ಅಷ್ಟೇ ಬೆಲೆ ಕೊಡುವ ದೃಷ್ಟಿ ಇದು ಇತರ ಭಾರತೀಯಸಾಹಿತ್ಯದಂತೆ ಕನ್ನಡಸಾಹಿತ್ಯದಲ್ಲಿಯೂ ಪ್ರಚುರವಾಗಿದೆ ಎನ್ನಲು ಅಡ್ಡಿಯಿಲ್ಲ. ಇದಲ್ಲದೆ ಹುಟ್ಟಿಬಂದ ಮತವು ಕವಿಮತವನ್ನು ಯಾವಾಗಲೂ ತಿಳಿಸುತ್ತದೆ ಎಂದಾಗಲಿ ಕವಿಮತವು ಮರ್ಯಾದಿತವಾದ ಒಂದು ತತ್ವಪದ್ಧತಿಯಾಗಿದೆ ಎಂದಾಗಲಿ ತಿಳಿಯಬಾರದು. ಕನ್ನಡದ ಹಲವು ಹಿರಿಯ ಕವಿಗಳಲ್ಲಿ ಅವರ ಮತವು ಕಾಲೋಚಿತವಾದ ಹೆಸರು–ವೇಷಗಳನ್ನು ಪಡೆದಿದ್ದರೂ ಅವರ ವಿಶಾಲವಾದ ಜೀವನದರ್ಶನದಿಂದ ಪುನೀತವಾಗಿ ಅದು ತನ್ನ ಬಗೆಯಲ್ಲಿ ಒಂದು ಅಚ್ಚರಿಯ ಸಮನ್ವಯವನ್ನು ತೋರಿದೆ ಎಂಬುದನ್ನೂ ಮರೆಯಕೂಡದು. ಇಂಥ ಸಂದರ್ಭಗಳಲ್ಲಿ ಆಯಾ ಕವಿಗಳನ್ನು ಜೈನ, ವೀರಶೈವ, ಬ್ರಾಹ್ಮಣ ಎಂದು ಮಾತ್ರ ಕರೆದು ನಾವು ಅವರಿಗೆ ಅನ್ಯಾಯಮಾಡುತ್ತೇವೆ.

ಕನ್ನಡಸಾಹಿತ್ಯಚರಿತ್ರೆ ಬರಬರುತ್ತ ವಿವಿಧವೂ ಸಂಕೀರ್ಣವೂ ಆಗುತ್ತ ಹೋಗಿದೆ. ಆದ್ದರಿಂದ ಮತಾನುಸಾರಿಯಾದ ವಿಭಾಗಕ್ರಮದಲ್ಲಿ ಜೈನಯುಗ ಎಂಬುದು ಒಪ್ಪುವಂತೆ ಉಳಿದುವು ಸರಿಹೋಗುವುದಿಲ್ಲ. ಜೈನಯುಗದಲ್ಲಿ ಜೈನಕವಿಗಳೇ ಹೆಚ್ಚಾಗಿದ್ದಾರೆ, ಜೈನತತ್ವವೇ ಪ್ರಮುಖವಾಗಿದೆ; ಚಂಪೂರೂಪ, ಹಳಗನ್ನಡ ಶೈಲಿಗಳು ಪ್ರಧಾನಪಟ್ಟ ಪಡೆದಿವೆ. ಅದೇ ವೀರಶೈವಯುಗದಲ್ಲಿ ಹೀಗೆ ಹೇಳಲು ಬರುವಂತಿಲ್ಲ. ಜೈನ, ಶೈವ ಎರಡೂ ಸಮಪ್ರಧಾನವಾಗಿವೆ; ಇಲ್ಲವೆ ಒಂದೊಂದು ಕಾಲಾವಧಿಯಲ್ಲಿ, ಒಂದೊಂದು ಸೀಮೆಯಲ್ಲಿ ಎರಡೂ ಹೆಚ್ಚಳವನ್ನು ಹೊಂದಿವೆ. ಬ್ರಾಹ್ಮಣವೆನ್ನಬಹುದಾದ ಯುಗದಲ್ಲಿಯಂತೂ ತ್ರಿವೇಣಿಸಂಗಮವಾಗಿದೆ, ಸಂಕೀರ್ಣತೆ ಪರಾಕೋಟಿಯನ್ನು ಮುಟ್ಟಿದೆ. ಈ ಸಂದರ್ಭದಲ್ಲಿ ಸಾಹಿತ್ಯಚರಿತ್ರೆಯನ್ನು ಒಂದು ನದಿಯ ಪ್ರವಾಹಕ್ಕೆ ಹೋಲಿಸಿ ಇ. ಪಿ. ರಾಯಿಸರು ಮಾಡಿದ ವಿವರಣೆ, ಅದೇ ಸಾದೃಶ್ಯವನ್ನು

ಇನ್ನೂ ಸುಂದರವಾಗಿ ವರ್ಣಿಸಿದ ಶ್ರೀಕಂಠಯ್ಯನವರ ವಿವೇಚನೆ ತುಂಬ ಸಮಂಜಸವಾಗಿರುತ್ತವೆ. ಜೈನ, ವೀರಶೈವ, ಬ್ರಾಹ್ಮಣ ಇವು ತಮ್ಮ ತಮ್ಮ ಕಾಲಕ್ಕೆ ಒಂದೊಂದು ಉಪನದಿಯಂತೆ ಕನ್ನಡಸಾಹಿತ್ಯದ ಮಹಾನದಿಯನ್ನು ಸೇರಿ ಒಂದರ ಹೊರತು ಇನ್ನೊಂದು ಎಂದಾಗದೆ ಒಂದರೊಡನೆ ಇನ್ನೊಂದು ಎಂಬಂತೆ ಸಮ್ಮಿಶ್ರಪ್ರವಾಹವಾಗಿ ಹರಿದಿವೆ. ಈ ದೃಷ್ಟಿಯಿಂದ ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಎನ್ನುವುದಕ್ಕಿಂತ ಈ ಮೂರು ಯುಗಗಳನ್ನು ಜೈನ ಪ್ರಾರಂಭ ಯುಗ, ವೀರಶೈವ ಪ್ರಾರಂಭ ಯುಗ, ಬ್ರಾಹ್ಮಣ ಪ್ರಾರಂಭ ಯುಗ ಎಂದು ಕರೆದರೆ ಹೆಚ್ಚು ವಸ್ತುಸ್ಥಿತಿಯ ನಿದರ್ಶಕವಾದೀತು. ಇದರಿಂದ ಉಪಲಬ್ಧ ವಾಙ್ಮಯದ ಚರಿತ್ರೆಯಲ್ಲಿ ಮತಪ್ರವಾಹ ಮತ್ತು ಕಾಲನಿರ್ದೇಶ ಎರಡೂ ಸರಿಹೊಂದುತ್ತವೆ. ಬ್ರಾಹ್ಮಣ ಪ್ರಾರಂಭ ಎಂಬುದಕ್ಕೆ ಕೆಲಮಟ್ಟಿಗೆ ಆಕ್ಷೇಪವೆತ್ತಬಹುದು. ಯಾಕೆಂದರೆ ೧೫ನೆಯ ಶ.ಕ್ಕಿಂತ ಹಿಂದಿನಿಂದಲೇ ಬ್ರಾಹ್ಮಣಗ್ರಂಥಕಾರರು ದೊರೆತಿದ್ದಾರೆ. ಇದು ಒಪ್ಪತಕ್ಕ ಮಾತಾದರೂ ೧೫ನೆಯ ಶ.ದಿಂದಲೇ ಬ್ರಾಹ್ಮಣ ವಾಙ್ಮಯವು ಒತ್ತಾಸೆಯಿಂದಲೂ ವಿಪುಲತೆಯಿಂದಲೂ ನಿರ್ಮಾಣವಾಗಿದೆ ಎಂಬುದನ್ನು ಗಮನಿಸಬೇಕು. ಪ್ರಾರಂಭ ಎಂಬ ಪದದಿಂದ ಆಯಾ ಪ್ರವಾಹಗಳು ನೆರೆಯಾಗಿ ಬಂದು ಮೂಲಪ್ರವಾಹವನ್ನು ಕೂಡಿದ ಕಾಲ ಎಂಬುದಾಗಿ ಅರಿತಿರಬೇಕು. ಪ್ರಾರಂಭದ ಸ್ಥಳದಲ್ಲಿ ಪ್ರವಾಹ ಎಂಬುದನ್ನು ಪ್ರಯೋಗಿಸಿದರೂ ಅಡ್ಡಿಯಿಲ್ಲ. ಈ ಮೂರು ಯುಗಗಳಲ್ಲಿ ಸಾಹಿತ್ಯರೂಪಗಳ ಭಿನ್ನತೆಯನ್ನು ತೋರಿಸುವ ಯತ್ನವಾಗಿದೆ. ಆದರೆ ಮೊದಲನೆಯ ಯುಗದಲ್ಲಿ ಚಂಪುವಿಗೆ ಪ್ರಾಧಾನ್ಯ ಬಂದಂತೆ ಮುಂದಿನ ಯುಗಗಳಲ್ಲಿ ಯಾವೊಂದು ರೂಪವೂ ಪ್ರಧಾನವಾಗಲಿಲ್ಲ. ಹೊಸ ಹೊಸ ರೂಪಗಳ ಜೊತೆಗೆ ಚಂಪೂ ಏರಿಳಿತವಾಗಿ ಇದ್ದೇ ಇದ್ದಿತು. ಎರಡನೆಯ ಯುಗದಲ್ಲಿ ವಚನ, ರಗಳೆ, ಷಟ್ಪದಿಗಳು ಮೊದಲುಗೊಂಡುವು. ಮೂರನೆಯದರಲ್ಲಿ ತ್ರಿಪದಿಸಾಂಗತ್ಯಗಳು ಸಲುವಳಿಯಾದುವು. ಆದರೂ ಮೂರನೆಯದನ್ನು ಸ್ಥೂಲವಾಗಿ ಷಟ್ಪದಿಯುಗ ಎಂದು ಕರೆಯಲಡ್ಡಿಯಿಲ್ಲ. ಆದರೆ ಈ ಯುಗದ ಉತ್ತರಾರ್ಧದಲ್ಲಿ ಅಂದರೆ ಮೈಸೂರೊಡೆಯರ ಕಾಲದಲ್ಲಿ ಚಂಪೂವಿನ ಪುನರುಜ್ಜೀವನವಾಯಿತೆಂಬುದನ್ನು ನೆನೆಯಬೇಕು. ಒಟ್ಟಿನಲ್ಲಿ ಸಾಹಿತ್ಯರೂಪದೃಷ್ಟಿಯಿಂದ ಈ ಯುಗಗಳ ವೈಶಿಷ್ಟ್ಯವನ್ನು ಸೂಚಿಸುವ ಬದಲು ಆ ರೂಪಗಳಲ್ಲಿ ಅಡಕವಾದ ದೃಷ್ಟಿಯ ಭಿನ್ನತೆಯನ್ನು ತೋರಿಸಬೇಕು. ಅಂದರೆ ಜೈನಯುಗದಲ್ಲಿ ಮಾರ್ಗನಿಷ್ಠತೆ (Classical Trend), ವೀರಶೈವಯುಗದಲ್ಲಿ ಮಾರ್ಗದಿಂದ ದೇಸಿಗೆ ಸಂಕ್ರಮಣ (Transition from the Classical to the Popular), ಬ್ರಾಹ್ಮಣಯುಗದಲ್ಲಿ ದೇಸಿನಿಷ್ಠತೆ ಇಲ್ಲವೆ ದೇಸಿಯ ಪ್ರಾಚುರ್ಯ (Popular Trend) ಎಂದು ಹೇಳಬಹುದು. ಈ ವಿಶಾಲ ವಿಭಾಗಗಳಲ್ಲಿ ಒಳತೆರೆಯಾಗಿ ಒಂದು ಪ್ರವೃತ್ತಿಯಿಂದ ಇನ್ನೊಂದಕ್ಕೆ ಕ್ರಿಯೆ-ಪ್ರತಿಕ್ರಿಯೆಗಳಿದ್ದೇ ಇರುತ್ತವೆ ಎಂಬುದನ್ನು ಅಲಕ್ಷಿಸಕೂಡದು. ಭಾಷಾದೃಷ್ಟಿಯಿಂದ ಹಳಗನ್ನಡ, ನಡುಗನ್ನಡ, ಹೊಸಗನ್ನಡ

ಎಂದು ಈ ಯುಗಗಳ ಪ್ರತ್ಯೇಕತೆಯನ್ನು ವರ್ಣಿಸಬಹುದಾದರೂ ಮುಂದುಮುಂದಿನ ಯುಗಗಳಲ್ಲಿ ಸಮ್ಮಿಶ್ರತೆ ಹೆಚ್ಚುವುದೆಂಬುದನ್ನೂ ಭಾಷಾವಸ್ಥೆಗಳ ಸ್ವರೂಪವು ಕಾಲ-ಮರ್ಯಾದೆಯೊಡನೆ ಯಾವಾಗಲೂ ಹೊಂದಲಾರದೆಂಬುದನ್ನೂ ನೆನೆದಿರಬೇಕು.

ಮತಪರವಾದ ವಿಭಾಗಕ್ರಮಕ್ಕೆ ಪರ್ಯಾಯವಾಗಿ ಶುದ್ಧ ಸಾಹಿತ್ಯದೃಷ್ಟಿಯ ಕ್ರಮವಿರುವುದು ಯುಕ್ತವೇ ಆಗಿದೆ. ಆದರೆ ಅದು ಕೊನೆಯವರೆಗೆ ಶುದ್ಧವಾಗಿ ಉಳಿಯಬೇಕು. 'ಕನ್ನಡವಕ್ಕಿ'ಗಳ ವಿಭಜನೆಯಲ್ಲಿ ಗ್ರಾಹ್ಯ ಅಂಶಗಳಿದ್ದರೂ ಅದು ತನ್ನ ಮೂಲದೃಷ್ಟಿಗೆ ಎರವಾಗಿದೆ. ವೀರರಸಪ್ರಧಾನವಾದ ಕ್ಷಾತ್ರಯುಗ ಎಂದು ಮೊದಲನೆಯ ಯುಗವನ್ನು ಕರೆಯುವಾಗ ವೀರರಸದಷ್ಟೇ ಶಾಂತರಸವು ಈ ಯುಗದ ಕೃತಿಗಳಲ್ಲಿ ತನಿಗೊಂಡಿದೆ ಎಂಬುದನ್ನೂ ಮತಧರ್ಮದ ಆವೇಶವು ಕವಿಕರ್ಮಕ್ಕೆ ಸ್ಫೂರ್ತಿಕೊಟ್ಟಿದೆ ಎಂಬುದನ್ನೂ ಧ್ಯಾನಿಸಬೇಕು. ಎರಡನೆಯದನ್ನು 'ಮತ-ಪ್ರಚಾರಕಯುಗ' ಎಂದು ಕರೆದದ್ದರಲ್ಲಿ ಶುದ್ಧಸಾಹಿತ್ಯದೃಷ್ಟಿ ಎಲ್ಲಿದೆ? ಈ ಮೊದಲಿ-ಗಿಂತ ಎರಡನೆಯ ಯುಗದಲ್ಲಿ ಮತಪ್ರಚಾರವು ಹೆಚ್ಚಾಗಿ ನಡೆದಿರಬಹುದು ಎಂದೊಪ್ಪಿದರೂ ಕವಿಕರ್ಮಕ್ಕೆ ಅದೇ ಮುಖ್ಯವಾಗಿ ಸ್ಫೂರ್ತಿಕೊಟ್ಟಿತೆ? ಶರಣರ ವಚನಗಳು, ಹರಿಹರನ ರಗಳೆಗಳು, ರಾಘವಾಂಕನ ಕಾವ್ಯಗಳು ಇವುಗಳ ಸಾರವತ್ತಾದ ಭಾಗವೆಲ್ಲ ಮತಪ್ರಚಾರಕವೆ? ಹಾಗಿದ್ದರೆ ಪಂಪರನ್ನರೂ ಅದನ್ನೇ ಮಾಡಿಲ್ಲವೆ? ಯಾರೋ ಕೆಲವರಲ್ಲಿ, ಯಾವುದೋ ಕೆಲವು ಭಾಗದಲ್ಲಿ ಮತಪ್ರಚಾರದ ಅತಿರೇಕಾಂಶ-ಗಳು ತೋರಿದ್ದರ ಮೇಲಿಂದ ಇಡೀ ಯುಗವನ್ನು ಮತಪ್ರಚಾರಕ ಎನ್ನಬಹುದೆ? ಈ ಕಾಲದಲ್ಲಿ ಭೋಗಾಸಕ್ತಿ ಹೆಚ್ಚಿ ಶೃಂಗಾರರಸವು ಪ್ರಧಾನವಾಯಿತೆಂಬುದು ಇನ್ನೂ ಅರ್ಥವಾಗದ ಮಾತು. ಮತಪ್ರಚಾರಕ ಯುಗದಲ್ಲಿ ಶೃಂಗಾರ ರಸಕ್ಕೆ ಪ್ರಾಧಾನ್ಯ ಬಂದಿತೆಂಬುದು ಆಭಾಸವಾಗಿ ತೋರುತ್ತದೆ. ವೀರಶೈವ ಸಾಹಿತ್ಯ ಈ ಕಾಲದಲ್ಲಿ ಸಂಪನ್ನವೂ ಸಮೃದ್ಧವೂ ಆಗಿದೆ. ಅದರ ಜೀವಾಳ ಶೃಂಗಾರರಸ ಎನ್ನಬಹುದೆ? ಹಲಕೆಲವರ ಶೃಂಗಾರಕಾವ್ಯಗಳಿಂದ ಯುಗಲಕ್ಷಣವನ್ನು ಗುರುತಿಸ-ಬಹುದೆ? ಮೂರನೆಯದಾದ ಸಾರ್ವಜನಿಕ ಯುಗವೆಂಬ ಹೆಸರು ಅತಿವ್ಯಾಪ್ತಿ-ದೋಷದಿಂದ ಕೂಡಿದೆ. ಎರಡನೆಯ ಯುಗದಿಂದಲೆ ಸಾಹಿತ್ಯಕ್ಕೂ ಜನಸಾಮಾನ್ಯಕ್ಕೂ ನೇರವಾದ ಸಂಬಂಧವುಂಟಾಗಿದೆ, ಭಕ್ತಿರಸವು ಪ್ರಧಾನರಸವಾಗಿದೆ. ದಾಸವಾಙ್ಮಯ-ದಿಂದ ಮೂರನೆಯ ಯುಗದಲ್ಲಿ ಸಾಹಿತ್ಯದ 'ಸಾರ್ವಜನಿಕ'ತೆ ಹೆಚ್ಚಿತು. 'ನೂರಾರು ಕವಿಗಳು' ತಮ್ಮ ಆಶ್ರಯದಾತರಿಗಾಗಿ ಬರೆಯದೆ ಸಮಾಜಕ್ಕಾಗಿ 'ನೂರಾರು ಗ್ರಂಥಗಳನ್ನು' ಬರೆದರೆನ್ನುವುದು ಈ ಯುಗದ ಕೇವಲ ವೈಶಿಷ್ಟ್ಯವೆಂದಾಗದು.

ಈ ದಾರಿಯಲ್ಲಿಯ ಇನ್ನೊಂದು ಪ್ರಯತ್ನದಲ್ಲಿ ಮುಖ್ಯವಾದ ಮೂರು ಯುಗಗಳಿಗೆ ಪಂಪನ ಯುಗ, ಸ್ವಾತಂತ್ರ್ಯ ಯುಗ, ಚಿಕ್ಕದೇವರಾಯ ಕಾಲ ಎಂದು ಹೆಸರಿತ್ತಿದೆ. ಒಂದು ಯುಗದಲ್ಲಿ ಪ್ರಧಾನ ಕವಿ, ಇನ್ನೊಂದರಲ್ಲಿ ಪ್ರಮುಖ ಲಕ್ಷಣ

ಇಲ್ಲವೆ ಸಾಹಿತ್ಯದೃಷ್ಟಿ, ಮೂರನೆಯದರಲ್ಲಿ ಪ್ರಧಾನಪೋಷಕ ಹೀಗೆ ವಿಭಾಗಕ್ರಮದ ತಳಹದಿ ಬೇರೆಬೇರೆಯಾಗಿದೆ. ಈ ಬೇರೆತನವು ಅಷ್ಟೇನು ಅನಿವಾರ್ಯವಾಗಿಲ್ಲ. ಪ್ರಧಾನ ಕವಿಯೆಂಬುದೊಂದನ್ನೇ ತಳಹದಿಯಾಗಿಟ್ಟುಕೊಂಡು ಪಂಪಯುಗ, ಬಸವ-ಯುಗ, ಕುಮಾರವ್ಯಾಸಯುಗ, ತಿರುಮಲಾರ್ಯಯುಗ ಎಂದು ವಿಭಾಗ ಮಾಡಬಹುದು. ಆಯಾ ಯುಗದ ಮಾರ್ಗಕವಿ ಇಲ್ಲವೆ ಭಕ್ತಕವಿಗಳಲ್ಲಿ ಹಿರಿಯರಾಗಿ, ಆಯಾ ಯುಗಕ್ಕೆ ಮೊದಲಿಗರಾಗಿ ಅವರವರು ಕನ್ನಡಸಾಹಿತ್ಯಕ್ಕೆ ಅಪೂರ್ವ ಹಾಗೂ ಉಜ್ವಲ-ವಾದ ಕಾಣಿಕೆ ಸಲ್ಲಿಸಿದ್ದಾರೆ, ತಮ್ಮ ತಮ್ಮ ಯುಗದ ಮೇಲೆ ಕೆಲಮಟ್ಟಿನ ಪ್ರಭಾವ ಬೀರಿದ್ದಾರೆ. ಅವರು ಆಯಾ ಮತಧರ್ಮಗಳ ಶ್ರೇಷ್ಠ ಪ್ರತಿನಿಧಿಗಳಾಗಿ ಜೈನ, ವೀರ-ಶೈವ, ವೈಷ್ಣವ, ಶ್ರೀವೈಷ್ಣವ ತತ್ವಪ್ರಣಾಲಿಗಳನ್ನು ತಮ್ಮ ಸಾಹಿತ್ಯರೂಪದಲ್ಲಿ ಪ್ರತಿಪಾದಿಸಿದ್ದಾರೆ. ಈ ರೀತಿಯಲ್ಲಿ ಮುಂದುವರಿದು ಪಂಪ–ರನ್ನ, ಬಸವ–ಹರಿಹರ, ಕುಮಾರವ್ಯಾಸ–ಪುರಂದರದಾಸ, ತಿರುಮಲಾರ್ಯ–ಷಡಕ್ಷರಿ ಹೀಗೆ ಕವಿದ್ವಯದ ಹೆಸರಿ-ನಲ್ಲಿ ಯುಗಗಳನ್ನು ಹೆಸರಿಸಿ ಸಾಹಿತ್ಯಿಕ ಹಾಗು ಇತರ ಪ್ರಭಾವಗಳನ್ನು ಸೂಚಿಸ-ಬಹುದು. ಆಯಾ ಯುಗದಲ್ಲಿ ಆಯಾ ಮಹಾವ್ಯಕ್ತಿಗಳ ಪ್ರಭಾವ ಸಾರ್ವತ್ರಿಕವಾಗಿಲ್ಲ. ಅತ್ಯಂತ ಸಂಕೀರ್ಣವಾದ ಮೂರನೆಯ ಯುಗದಲ್ಲಿಯಂತೂ ಯಾರೊಬ್ಬರ ಪ್ರಭಾವವು ಉಳಿದೆಲ್ಲರ ಮೇಲೆ ಅಥವಾ ಬಹುಜನ ಕವಿಗಳ ಮೇಲೆ ಆಗಿದೆ ಎಂದು ಹೇಳುವಂತಿಲ್ಲ. ಆದರೆ ಒಟ್ಟಿನಲ್ಲಿ ಅವರವರ ಜೀವನದೃಷ್ಟಿ–ಸಾಹಿತ್ಯದೃಷ್ಟಿಗಳ ವರ್ಚಸ್ಸು ಇಲ್ಲವೆ ಸಾಂನಿಧ್ಯ ಬಹುಶಃ ಆಯಾ ಯುಗದಲ್ಲಿ ಕಾಣಬರುತ್ತದೆ ಎಂಬುದನ್ನು ಗಮನಿಸಬೇಕು. ರಾಜವಂಶ ಹಾಗು ರಾಜಪೋಷಕರ ಹೆಸರಿನಲ್ಲಿ ಸಾಹಿತ್ಯಚರಿತ್ರೆಯನ್ನು ಅಭ್ಯಾಸಿಸು-ವುದು ಸಾಧ್ಯವಿದೆಯಾದರೂ ಕಾಲಕ್ರಮದಿಂದ ಯುಗವಿಭಜನೆ ಶಕ್ಯವಿಲ್ಲ.

ಶ್ರೀಕಂಠಯ್ಯನವರು ಕಾಲಕ್ಕನುಸಾರವಾದ ಸಾಹಿತ್ಯವಿಭಾಗದಲ್ಲಿ ಸೌಕರ್ಯ-ವಾಗಲಿ, ಲಕ್ಷಣಸಮನ್ವಯವಾಗಲಿ, ವಿಶೇಷ ಪ್ರಯೋಜನವಾಗಲಿ ಕಾಣಬರುವುದಿಲ್ಲ ಎಂದಿರುವುದು ನಮಗೆ ಅರ್ಥವಾಗಲಿಲ್ಲ. ಅಖಂಡವಾದ ಕಾಲಪ್ರವಾಹವನ್ನೂ ಅದರಲ್ಲಿಯ ವಿವಿಧ ಚಾರಿತ್ರಿಕ ವಿಷಯಗಳನ್ನೂ ಖಂಡಗೊಳಿಸುವುದು ಎಂದಿಗೂ ಕೃತ್ರಿಮವೇ. ಯಾವುದೇ ಕಾಲವಿಭಾಗವು ಎಂದಿಗೂ ನಿರ್ದುಷ್ಟವಾಗದು. ಆದರೂ ಕೆಲವು ಸ್ಥೂಲ–ವಿಶಾಲ ಸಂಗತಿಗಳ ಹಾಗೂ ಪ್ರವೃತ್ತಿಗಳ ಮೇಲಿನಿಂದ ಮಾಡಿದ ಕಾಲವಿಭಾಗದಲ್ಲಿ ಸೌಕರ್ಯವಿದೆ ಎಂದು ನಾವು ನಂಬುತ್ತೇವೆ. ಲಕ್ಷಣಸಮನ್ವಯವೂ ವಿಶೇಷ ಪ್ರಯೋಜನವೂ ನಾವು ಅನುಸರಿಸುವ ಕ್ರಮವನ್ನೂ ತಳಹದಿಯನ್ನೂ ಅವಲಂಬಿಸುತ್ತವೆ. ಕನ್ನಡಸಾಹಿತ್ಯವೆಲ್ಲ ಬಹುಶಃ ಸಂಸ್ಕೃತದ ಅನುಕರಣವಾಗಿದೆ ಎಂದೂ ಬಹುಮಟ್ಟಿಗೆ ಕಾಲಗುಣದಲ್ಲಿ ಬದಲಾವಣೆ ಆಗಿಲ್ಲವೆಂಬುದೂ ಸತ್ಯವಾದ ಮಾತೇ? ಸಂಸ್ಕೃತದ ಅನುಸರಣ ನಿಜ, ಆದರೆ ಅಂಥವಾದ ಅನುಕರಣ ಯಾವಾಗಲೂ ಇಲ್ಲ. ಅಂಧಾನುಕರಣವಿರುದ್ಧವಾಗಿ ಪ್ರತಿಭಟನೆ ಆಗಿದೆ, ಅದರಿಂದ ಹೊಸ ದೃಷ್ಟಿ ಸಮಾಜದಲ್ಲಿಯೂ ಸಾಹಿತ್ಯದಲ್ಲಿಯೂ ತೋರಿದೆ. ಈ ಬದಲಾವಣೆ ಆಗಿರದಿದ್ದರೆ

ಕನ್ನಡಸಾಹಿತ್ಯ ಕಣ್ಣು ಕಟ್ಟಿದ ಕುದುರೆಯಾಗಬಹುದಾಗಿತ್ತು. ಮತಾನುಸಾರವಾದ ವಿಭಾಗಕ್ರಮದ ವಿವೇಚನೆಯಲ್ಲಿ ಬದಲಾವಣೆ ಆಗಿದೆ ಎಂಬುದನ್ನು ಲೇಖಕರು ತಾವೇ ತೋರಿಸಿದ್ದಾರೆ. ಮತಪ್ರಾಬಲ್ಯ ಕಾಲ ಎಂದು ಬಹು ದೊಡ್ಡ ವಿಭಾಗಮಾಡಿ ಅದರಲ್ಲಿ ಉಪವಿಭಾಗಗಳನ್ನು ಅವರು ಮಾಡಿಕೊಂಡಿದ್ದಾರೆ. ಮುಂಚಿನವರು ಮಾಡಿದ ಮತವಿಭಾಗವು ಇಲ್ಲಿ ಕೆಲಮಟ್ಟಿಗೆ ವ್ಯತ್ಯಾಸ ಹೊಂದಿದೆಯಾದರೂ ಅಭಿಪ್ರಾಯವು ಮೂಲತಃ ಒಂದೇ ಎಂಬುದನ್ನು ಗಮನಿಸಬೇಕು.

ಈವರೆಗೆ ಬೇರೆ ಬೇರೆ ವಿಭಾಗಕ್ರಮಗಳನ್ನು ಸಂಗ್ರಹಿಸಿ ಚರ್ಚಿಸಿದ್ದಾಯಿತು. ಅವುಗಳಲ್ಲಿ ಮತಾನುಸಾರವಾದ ವಿಭಾಗಕ್ರಮವು ವಿಶೇಷ ಪದದೊಡನೆ ಸೇರಿಕೊಂಡರೆ ಅದನ್ನು ಅಂಗೀಕರಿಸಲು ಅಡ್ಡಿಯಿಲ್ಲ ಎಂಬ ನಮ್ಮ ಅಭಿಪ್ರಾಯವನ್ನು ಸೂಚಿಸಿದ್ದೇವೆ. ಆದರೂ ಸಾಹಿತ್ಯಚರಿತ್ರೆಯಲ್ಲಿ ಮತತತ್ವಕ್ಕಿಂತ ಕವಿವ್ಯಕ್ತಿ ಹೆಚ್ಚು ಗಣ್ಯನು, ಕವಿ-ಕೃತಿ ಹೆಚ್ಚು ಬೆಲೆಯುಳ್ಳದು. ಒಂದೊಂದು ಕಾಲದಲ್ಲಿ ಅಂಥ ಕವಿವ್ಯಕ್ತಿಗಳೂ ಕೃತಿಗಳೂ ಜನ್ಮತಾಳಿ ಬಹುಮಟ್ಟಿಗೆ ಸಮಾನವಾದ ಒಂದು ಸಾಹಿತ್ಯಿಕ ಬಾಂಧವ್ಯಕ್ಕೆ ಒಳಗಾಗಿರುತ್ತವೆ. ಈ ಬಳಗಕ್ಕೆ ಹಿರಿಯನಾದ ಒಬ್ಬ ಮಾರ್ಗಕವಿ ಇಲ್ಲವೆ ಭಕ್ತಕವಿ ಹಳೆಯದರ ತಿರುಳನ್ನು ತನ್ನಲ್ಲಿ ಅಳವಡಿಸಿಕೊಂಡು ಹೊಸ ದಾರಿಯನ್ನು ಬೆಳಗಿದ್ದಾನೆ, ಆ ಬೆಳಕಿನಲ್ಲಿ ಕೆಲವು ಕವಿಗಳೂ ಭಕ್ತರೂ ನಡೆದಿದ್ದಾರೆ. ಇದನ್ನರಿತು ನಮ್ಮ ಈ ಸಾಹಿತ್ಯಚರಿತ್ರೆಯನ್ನು ವಿಶಾಲವಾಗಿ ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಎಂದು ವಿಭಾಗಿಸಿ ವಿಹಂಗಮದೃಷ್ಟಿಯಿಂದ ಅವಲೋಕಿಸ-ಬೇಕೆಂದು ಮಾಡಿದ್ದೇವೆ. ಪ್ರತಿಯೊಂದು ಯುಗದಲ್ಲಿ ಮುಂದುಮುಂದಿನ ಕಾಲಕ್ಕೆ ಹೋದಂತೆ ಸಮ್ಮಿಶ್ರತೆ ಹೆಚ್ಚುತ್ತದೆ ಎಂಬುದನ್ನು ಅರಿತೂ ಅಭ್ಯಾಸಸೌಕರ್ಯಕ್ಕಾಗಿ ಈ ರೀತಿಯಾಗಿ ವಿಶಾಲ ವಿಭಾಗಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಮೊದಲು ಪಂಪನ ಪೂರ್ವದ ಕಾಲವನ್ನು ಪಂಪಪೂರ್ವಯುಗ ಎಂದು ಸಮೀಕ್ಷೆ ಮಾಡಲಾಗುವುದು. ಮುಂದಿನ ಯುಗಗಳಿಗೆ ಮೇಲೆ ಹೇಳಿರುವಂತೆ ವ್ಯಕ್ತಿಪರವಾದ ಹೆಸರುಗಳನ್ನು ಕೊಡುವುದಾದರೂ ಮಾರ್ಗಯುಗ, ಸಂಕ್ರಮಣಯುಗ, ದೇಸಿಯುಗ ಎಂಬ ಪರ್ಯಾಯ ಪದಗಳನ್ನು ಆಗಾಗ ಬಳಸಿ ಆಯಾ ಯುಗಗಳ ಸಾಹಿತ್ಯಿಕ ಸ್ವರೂಪದ ವೈಶಿಷ್ಟ್ಯಗಳನ್ನು ವಿವೇಚಿಸುತ್ತೇವೆ.

ಪಂಪ ಪೂರ್ವ ಯುಗ

೬. ಈ ಯುಗದ ಕೆಲವು ಕವಿಗಳು

ಈ ಯುಗದಲ್ಲಿ ಕನ್ನಡಸಾಹಿತ್ಯದ ಪ್ರಾರಂಭದಿಂದ ಪಂಪನವರೆಗಿನ ಎಲ್ಲ ಸಾಹಿತ್ಯವೂ ಬರುತ್ತದೆ. 'ಸಾಹಿತ್ಯೋದಯ'ದ ಪ್ರಕರಣದಲ್ಲಿ ಕ್ರಿ.ಶ. ೫ನೆಯ ಶ.ದಿಂದ ೮ನೆಯ ಶ.ದ ಕೊನೆಯ ವರೆಗೆ ಅಂದರೆ 'ಕವಿರಾಜಮಾರ್ಗ'ದ ವರೆಗೆ ನಿರ್ಮಾಣವಾಗಿರಬಹುದಾದ ಸಾಹಿತ್ಯವನ್ನು ಕುರಿತು ನಿರವಿಸಲಾಗಿದೆ. ಇಲ್ಲಿ ಮುಖ್ಯವಾಗಿ 'ಕವಿರಾಜಮಾರ್ಗ' ಹಾಗೂ ಅದರ ಕಾಲದಲ್ಲಿ ಅಂದರೆ ೯ನೆಯ ಶ.ದಲ್ಲಿ ಹುಟ್ಟಿದ ಗ್ರಂಥಗಳ ವಿವೇಚನೆಯಾಗಬೇಕು. ಈ ಯುಗದಲ್ಲಿ 'ಕವಿರಾಜ-ಮಾರ್ಗ'ವೊಂದೇ ಉಪಲಬ್ಧವಾದ ಮತ್ತು ಅನೇಕ ದೃಷ್ಟಿಯಿಂದ ಬೆಲೆಯುಳ್ಳ ಗ್ರಂಥ. ಅದರ ವಿಸ್ತಾರವಾದ ವಿಮರ್ಶೆ ಈ ಸಂದರ್ಭದಲ್ಲಿ ಪ್ರಸ್ತುತವಾಗುತ್ತದೆ. ಮೊದಲು ಶೀರ ಪ್ರಾರಂಭದಿಂದ ಪಂಪಕಾಲದ ವರೆಗೆ ಆಗಿಹೋದ ಗ್ರಂಥಕಾರರನ್ನೂ ಅವರ ಗ್ರಂಥಗಳನ್ನೂ ಕಾಲಕ್ರಮದಲ್ಲಿ ಪಟ್ಟಿಮಾಡಿ, ಆಮೇಲೆ ಈ ಪ್ರಕರಣಕ್ಕೆ ಹೊಸಬ-ರಾಗಿದ್ದವರ ವಿಷಯವನ್ನು ವಿವೇಚಿಸಬೇಕೆಂದು ಮಾಡಿದೆ (ನೋ. ಪು. ೪೬). ಶಾಸನಕಾರರ ವಿಷಯವನ್ನು ಮಾತ್ರ ಇಲ್ಲಿ ಎತ್ತಿಕೊಂಡಿಲ್ಲ. ೧ರಿಂದ ೪, ೭, ೧೧, ೧೨ ಈ ಗ್ರಂಥಕಾರರ ವಿಷಯವು ಹಿಂದೆ ಬಂದದ್ದಾಗಿದೆ.

ಕವಿರಾಜಮಾರ್ಗ ಮತ್ತು ವಡ್ಡಾರಾಧನೆ ಈ ಗ್ರಂಥಗಳನ್ನು ಕುರಿತು ಪ್ರಸ್ತಾಪಿಸುವ ಮೊದಲು ಅಸಗ, ಗುಣನಂದಿ, ಗುಣವರ್ಮ ಇವರ ಬಗ್ಗೆ ತಿಳಿದಷ್ಟು ಸಂಗತಿಗಳನ್ನು ಸಂಗ್ರಹಿಸೋಣ.

ಅಸಗ: ಹತ್ತನೆಯ ಶತಮಾನದಲ್ಲಿ ಆಗಿಹೋದ ಪ್ರಸಿದ್ಧ ಕವಿಯಾದ ಪೊನ್ನನು ತಾನು 'ಕನ್ನಡ ಕವಿತೆಯೊಳ್ ಅಸಗಂಗಂ ನೂರ್ಮಡಿ' (ಶಾಂತಿಪುರಾಣ, ೧-೧೧) ಎಂದಿದ್ದಾನೆ. ಇದರಲ್ಲಿಯ ಅತಿಶಯೋಕ್ತಿ ಹಾಗಿರಲಿ, ಅಸಗನು ಪೊನ್ನನಿಗೆ ಹಿಂದಿನ ಕಾಲದಲ್ಲಿ ಹೆಸರಾದ ಕನ್ನಡ ಕವಿಯಾಗಿರಬೇಕು. ಮುಂದೆ ದುರ್ಗಸಿಂಹ, ನಯಸೇನ ಮೊದಲಾದವರು ಇವನನ್ನು ಹೊಗಳಿದ್ದಾರೆ. ಕೇಶಿರಾಜನು ತನ್ನ ವ್ಯಾಕರಣಗ್ರಂಥದಲ್ಲಿ ಪ್ರಮಾಣಭೂತರಾದ ಕವಿಗಳಲ್ಲಿ ಇವನನ್ನು ಗಣಿಸಿದ್ದಾನೆ. ಇವನ ಕನ್ನಡ ಗ್ರಂಥಗಳಲ್ಲಿ 'ಕರ್ಣಾಟಕುಮಾರಸಂಭವಕಾವ್ಯಂ' ಎಂಬುದನ್ನು ಜಯಕೀರ್ತಿ ತನ್ನ 'ಛಂದೋನುಶಾಸನ'ದಲ್ಲಿ ಉಲ್ಲೇಖಿಸಿದ್ದಾನೆ. ಇದು ಕಾಲಿದಾಸನ 'ಕುಮಾರಸಂಭವ'ದ ಅನುವಾದವಾಗಿರಬಹುದು. ಉಳಿದುವು ಯಾವುವೆಂಬುದು ತಿಳಿದಿಲ್ಲ. ಇವನು ಸಂಸ್ಕೃತದಲ್ಲಿ 'ವರ್ಧಮಾನಚರಿತೆ' ಮತ್ತು 'ಶಾಂತಿಪುರಾಣ'-ಗಳೆಂಬ ಪ್ರೌಢಕಾವ್ಯಗಳನ್ನು ಬರೆದಿದ್ದಾನೆ. ವರ್ಧಮಾನಚರಿತೆಯನ್ನು ಮೌದ್ಗಲ್ಯ

ಗ್ರಂಥಕಾರ	ಕಾಲ	ಮತ	ಗ್ರಂಥ	ಸ್ವರೂಪ
೧. ದುರ್ವಿನೀತ	೬೦೦ (೫೫೦–೬೦೦)	ಜೈನ ?	ಬೃಹತ್ಕಥೆ, ಕಿರಾತಾರ್ಜುನೀಯ ಟೀಕೆ ಸಂಸ್ಕೃತದಲ್ಲಿ (?) ಶಬ್ದಾವತಾರ ಕನ್ನಡದಲ್ಲಿ (?) ವಡ್ಡಕಥೆ ಕನ್ನಡದಲ್ಲಿ (?)	(?) (?)
೨. ತುಂಬಲೂರಾಚಾರ್ಯ	ಸು. ೬೫೦	ಜೈನ	ಚೂಡಾಮಣಿ	ವ್ಯಾಖ್ಯಾನಗ್ರಂಥ
೩. ಶ್ಯಾಮಕುಂದಾಚಾರ್ಯ	ಸು. ೬೫೦	ಜೈನ	ಕನ್ನಡ ‘ಪ್ರಾಭೃತ’ ಇಲ್ಲವೆ ಪರಾಪದ್ಧತಿ	ಶಾಸ್ತ್ರಗ್ರಂಥ
೪. ಸೈಗೊಟ್ಟ ಶಿವಮಾರ	೮೦೦ (೭೮೦–೮೧೨)	ಜೈನ ?	ಶಿವಮಾರ ಮತ	ಗಜಶಾಸ್ತ್ರಗ್ರಂಥ
೫. ‘ಕವಿರಾಜಮಾರ್ಗ’ಕಾರ	೮೫೦ (೮೧೫–೮೭೭)	ಜೈನ	ಕವಿರಾಜಮಾರ್ಗ	ಅಲಂಕಾರಗ್ರಂಥ
೬. ಅಸಗ	೮೫೪	ಜೈನ	ಕರ್ಣಾಟಕುಮಾರಸಂಭವಕಾವ್ಯಂ	—
೭. (?)	೯೦೦ (೮೪೪–೮೮೮)	?	ಗುಣಗಾಂಕಿಯ	ಛಂದೋಗ್ರಂಥ
೮. ಗುಣನಂದಿ	ಸು. ೯೦೦ (?)	ಜೈನ	?	—
೯. ಗುಣವರ್ಮ–೧	೯೦೦ (೯೦೭–೯೨೦)	ಜೈನ	೧. ಹರಿವಂಶ ೨. ಶೂದ್ರಕ	ಚಂಪೂಕಾವ್ಯ ,,
೧೦. ಶಿವಕೋಟ್ಯಾಚಾರ್ಯ	ಸು. ೯೨೫ (?)	ಜೈನ	ವಡ್ಡಾರಾಧನೆ	ಗದ್ಯಕಥೆ
೧೧. ವಿಮಲೋದಯ, ನಾಗಾರ್ಜುನ ಜಯಬಂಧು ಇತ್ಯಾದಿ	?	?	—	ಗದ್ಯ
೧೨. ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಇತ್ಯಾದಿ	?	?	—	ಪದ್ಯ

ಪರ್ವತದಲ್ಲಿರುವ ಸಂಪತ್ ಎಂಬ ಶ್ರಾವಿಕೆಯ ಆಶ್ರಯದಲ್ಲಿ ವಿಕ್ರಮ ಸಂವತ್ಸರ ೯೧೦ ಎಂದರೆ ಕ್ರಿ.ಶ. ೮೫೪ರಲ್ಲಿ ಬರೆದೆನೆಂದು ಹೇಳಿದ್ದಾನೆ. ಅಲ್ಲದೆ ಚೋಡ(ಳ) ದೇಶದಲ್ಲಿ ಶ್ರೀನಾಥನೆಂಬರಸು ಆಳುವಾಗ ವಿರಲಾ ಎಂಬ ಪಟ್ಟಣದಲ್ಲಿ ತಾನು ವಿದ್ಯೆ ಕಲಿತು ಜೈನಧರ್ಮೋಪದೇಶಕವಾದ ಎಂಟು ಗ್ರಂಥಗಳನ್ನು ಬರೆದೆನೆಂದು ತಿಳಿಸಿದ್ದಾನೆ. ಅವನ ಸಂಸ್ಕೃತ-ಕನ್ನಡ ಗ್ರಂಥಗಳೆಲ್ಲ ಈ ಎಂಟರಲ್ಲಿ ಸೇರಿರಬೇಕು. 'ಶ್ರೀ ಅಸಗಭೂಪಕೃತೆ ವರ್ಧಮಾನಚರಿತೆ' ಎಂದು ಹೇಳಿದ ಕಾರಣ ಇವನು ಎಲ್ಲಿಯಾದರೂ ಅರಸಾಗಿರಬೇಕು. ಇವನ ಚರಿತ್ರೆಯ ಕೆಲವು ಸಂಗತಿಗಳು ವರ್ಧಮಾನಚರಿತೆಯಿಂದ ತಿಳಿಯುತ್ತವೆ.[1] ಇವನ ಸಂಸ್ಕೃತ ಶಾಂತಿಪುರಾಣವನ್ನು ಓದಿಯೇ ಪೊನ್ನನು ತನ್ನ ಕನ್ನಡ ಶಾಂತಿಪುರಾಣವನ್ನು ಬರೆದಿರಬಹುದು.[2]

ಗುಣನಂದಿ : ಶ್ರವಣಬೆಳ್ಗೊಳದ ಶಾಸನಗಳಿಂದ ಗುಣನಂದಿ ಪಂಡಿತ ಯತಿಯೊಬ್ಬನು **ಚಾರಿತ್ರಚಕ್ರೇಶ್ವರನೆಂದೂ** ತರ್ಕವ್ಯಾ**ಕರಣಾದಿ**ಶಾಸ್ತ್ರನಿಪುಣನೆಂದೂ **ಸಾಹಿತ್ಯ**ವಿದ್ಯಾ**ಪತಿ**ಯೆಂದೂ ತಿಳಿಯುತ್ತದೆ.[3] ಅವನ ಶಿಷ್ಯನಾದ ದೇವೇಂದ್ರಸೈದ್ಧಾಂತಿಕನೇ ಆದಿಪಂಪನ ಗುರುವಾಗಿರಬೇಕು. ಪಂಪನ ಕಾಲ ೯೪೧ ಎಂದಿದ್ದ ಕಾರಣ ಗುಣನಂದಿಯ ಕಾಲ ಸು. ೯೦೦ ಎಂದೂ ಅವನೇ ಈ ಗುಣನಂದಿಯೆಂದೂ ಕವಿಚರಿತಕಾರರು ನಿರ್ಧರಿಸಿದ್ದಾರೆ. ಆದರೆ ಶಾಸನೋಕ್ತನಾದ ಗುಣನಂದಿ ಸು. ೭೦೦ ಕ್ಕಿಂತ ಹಿಂದೆ ಇದ್ದಿರಬೇಕೆಂದೂ ಈ ಕನ್ನಡ ಕವಿಯಾದ ಗುಣನಂದಿ ಅವನಲ್ಲವೆಂದೂ ಇವನು ಸು. ೧೦೫೦ರಲ್ಲಿದ್ದು ಕನ್ನಡ ಕಾವ್ಯವನ್ನೂ ಬರೆದನೆಂದೂ ಶ್ರೀ. ವೆಂಕಟಸುಬ್ಬಯ್ಯನವರು ಅಭಿಪ್ರಾಯಪಟ್ಟಿದ್ದಾರೆ.[4] ಈ ಅಭಿಪ್ರಾಯವನ್ನು ಪರಿಶೀಲಿಸುವುದು ಅಗತ್ಯ. ತಾತ್ಪೂರ್ತಿಕವಾಗಿ ನಾವು ಕವಿಚರಿತೆಯ ಗ್ರಹಿಕೆಯನ್ನು ಅನುಸರಿಸಿದ್ದೇವೆ.

ಪೂಜ್ಯಪಾದನ ಜೈನೇಂದ್ರವ್ಯಾಕರಣಕ್ಕೆ ಪ್ರಕ್ರಿಯಾವತಾರವೆಂಬ ವ್ಯಾಖ್ಯಾನಗ್ರಂಥವನ್ನು ಇವನು ಸಂಸ್ಕೃತದಲ್ಲಿ ಬರೆದಿದ್ದಾನೆ. ೧೬೦೪ರಲ್ಲಿದ್ದ ಭಟ್ಟಾಕಳಂಕನೆಂಬ ಕನ್ನಡ ವ್ಯಾಕರಣಕಾರನು '**ಭಗವಾನ್ ಗುಣನಂದಿಃ**' ಎಂದಿವನನ್ನು ಆಗಾಗ ಗೌರವಿಸುತ್ತಾನೆ. ಪಂಪನ ಗುರುವಿಗೆ ಗುರುವಾದ ಈ ಗುಣನಂದಿ ಸವ್ಯಸಾಚಿ-

---

1 ವೆಂ. ಬಿ. ಲೋಕಾಪುರ: ಅಸಗ ಕವಿಯ ಪರಿಚಯ (ಜಯಕರ್ನಾಟಕ, ೨೫-೪, ಪು. ೧೮೩)

2 A. N. Upadhye: Asaga and his works (Karnatak Historical Review, Vol. II, No. 1, pp. 42-47)

3 E. C. ಶ್ರವಣಬೆಳ್ಗೊಳ, ೬೬, ೧೧೭, ೧೨೭.

4 ಅ. ವೆಂಕಟಸುಬ್ಬಯ್ಯ: ಕೆಲವು ಕನ್ನಡಕವಿಗಳ ಜೀವನಕಾಲವಿಚಾರ, ಪು. ೨೪೬-೮.

ಯಾಗಿದ್ದು ಕನ್ನಡದಲ್ಲಿಯೂ ಗ್ರಂಥರಚನೆ ಮಾಡಿರಬೇಕು. ಇದಕ್ಕೆ ಆಧಾರವೆಂದರೆ ಸು. ೧೩ನೆಯ ಶ.ದ ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ' ಎಂಬ ಸಂಕಲನ ಗ್ರಂಥದಲ್ಲಿ, ಯಾರು ಯಾರಿಂದ ಪದ್ಯಗಳನ್ನು ಆಯ್ದುಕೊಂಡಿದೆ ಎಂಬಲ್ಲಿ 'ಜನ್ನನ ದೇಸೆ ಪಂಪನ ಗುಣಂ **ಗುಣನಂದಿಯ ತೊಂಡು**........ನೆಲಸಿರ್ಪುವೀ ಸುಕವಿ ಮಲ್ಲನ ಕಾವ್ಯವಿಳಾಸಗೇಹದೊಳ್'[1] ಎಂಬ ಹೇಳಿತವಿದೆ. ಇಲ್ಲಿ ವರ್ಣಿತರಾದವರೆಲ್ಲ ಹೆಸರಾದ ಕನ್ನಡ ಕವಿಗಳು. ಅವರ ಜೊತೆಗೆ ಉಲ್ಲೇಖ ಹೊಂದಿದ ಗುಣನಂದಿ ಕೀರ್ತಿವೆತ್ತ ಕವಿಯಾಗಿರಬೇಕು. ಅವನ ತೊಂಡು ಎಂಬುದು ಅವನ ಔದ್ಧತ್ಯ ಇಲ್ಲವೆ ಆತ್ಮವಿಶ್ವಾಸನಿದರ್ಶಕವಾದ ದರ್ಪ ಎಂದು ಸೂಚಿಸುತ್ತಿರಬಹುದು. 'ಸೂಕ್ತಿಸುಧಾರ್ಣವ'ದಲ್ಲಿ ಉದಾಹೃತವಾದ ಅವನ ಪದ್ಯಗಳಾವುವು ಎಂಬುದು ತಿಳಿದಿಲ್ಲ. ಕೇಶಿರಾಜನು ತನ್ನ ವ್ಯಾಕರಣಗ್ರಂಥದಲ್ಲಿ 'ಸುಮಾರ್ಗಮಿದಜ಼ೊಳೆ ಲಕ್ಷ್ಯಂ' ಎಂದು ಹೇಳಿದ ಪ್ರಮಾಣಪುರುಷರಲ್ಲಿ ಗುಣನಂದಿಯನ್ನು ಹೆಸರಿಸಿದ್ದಾನೆ. ಅಲ್ಲದೆ ಸೂ. ೨೪ರಲ್ಲಿ ಹಿರಿಯರು ಹೇಳಿದ ಪ್ರಯೋಗಗಳಲ್ಲಿ ಒಂದೆಂದು 'ಚುರ್ಚಿದವೋಲ್ ಬಿಸಿಲಳುರೆ ಕಿ | ಮುಟ್ಟ್ಯದ ತಳಿರಂತೆ ನೊಂದು (ಗುಣನಂದಿ)' ಎಂಬ ಅವತರಣಿಕೆಯನ್ನು ಕೊಟ್ಟಿದ್ದಾನೆ. ಇದು ಗುಣನಂದಿಯ ಯಾವುದೋ ಗ್ರಂಥದಿಂದ ಎತ್ತಿದ ಪದ್ಯಭಾಗವೆಂಬುದು ಸ್ಪಷ್ಟವಾಗಿದೆ. ಅಗುಳಿನಿಂದ ಅನ್ನವನ್ನು ಅರಿಯಬಹುದಾದರೆ ಇದರಲ್ಲಿಯ ಹೋಲಿಕೆಯ ಔಚಿತ್ಯ, ಪದರಚನೆಯ ಸಹಜಸಾರ್ಥಕತೆ ಇವು ಗುಣನಂದಿಯ ಕವಿತಾಶಕ್ತಿಯನ್ನು ತಿಳಿಸುತ್ತವೆ. ಸು. ೧೬ನೆಯ ಶ.ದಲ್ಲಿಯ ನಂಜುಂಡ ಕವಿಯೂ ತನ್ನ 'ಕುಮಾರರಾಮುಕಥೆ'ಯಲ್ಲಿ 'ಇಂಪುವಡೆದ ಕವಿತಾರಸಲಹರಿಯ ಸೊಂಪು' ಉಳ್ಳ ಗುಣನಂದಿಯನ್ನು ಹೊಗಳಿದ್ದಾನೆ. ಇವನ ಕನ್ನಡ ಗ್ರಂಥಗಳು ಯಾವುವೆಂಬುದು ಕೂಡ ತಿಳಿದಿಲ್ಲ.

ಗುಣವರ್ಮ-೧: ಗುಣವರ್ಮ ಎಂಬ ಹೆಸರಿನ ಕವಿಗಳು ಇಬ್ಬರಿದ್ದರೆಂದು ತಿಳಿಯಲು ಸ್ಪಷ್ಟವಾದ ಆಧಾರಗಳಿವೆ.[2] ೧೩ನೆಯ ಶ.ದ ಪೂರ್ವಾರ್ಧದವನಾದ ೨ನೆಯ ಗುಣವರ್ಮನು ಪುಷ್ಪದಂತ ಪುರಾಣವನ್ನು ಬರೆದಿದ್ದಾನೆ. ಸು. ೯೦೦ರಲ್ಲಿದ್ದ ೧ನೆಯ ಗುಣವರ್ಮನು ಶೂದ್ರಕ, ಹರಿವಂಶ ಎಂಬ ಗ್ರಂಥಗಳನ್ನು ಬರೆದ ಹಾಗೆ ತಿಳಿಯುತ್ತದೆ. ಈ ಗುಣವರ್ಮನ ಉಲ್ಲೇಖ ಮಾಡಿದವರಲ್ಲಿ ೧೧೧೨ರ ನಯಸೇನನು ಹಳಬನು. ತನ್ನ 'ಧರ್ಮಾಮೃತ'ದಲ್ಲಿ ಅವನು ಅಸಗ, ಪೊನ್ನ ಮೊದಲಾದವರ ಗುಣದೊಡನೆ 'ಗುಣವರ್ಮನ ಜಾಣ್' ತನ್ನ ಕೃತಿಯಲ್ಲಿ ನೆಲಸಲಿ ಎಂದು ಕೋರಿದ್ದಾನೆ. ಇದರಿಂದ ೧ನೆಯ ಗುಣವರ್ಮನು ಹತ್ತನೆಯ ಶತಮಾನದಲ್ಲಿಯ ಹೆಸರಾದ ಕವಿಗಳ ಪಂಕ್ತಿಯಲ್ಲಿ ಸ್ಥಾನಪಡೆದಿದ್ದನೆಂದು ಸಿದ್ಧವಾಗುತ್ತದೆ. ಮುಂದಿ

---

1 ಮಲ್ಲಿಕಾರ್ಜುನ: ಸೂಕ್ತಿಸುಧಾರ್ಣವ, ಪೀಠಿಕಾಪ್ರಕರಣ, ೧-೨೬.

2 ಆರ್. ನರಸಿಂಹಾಚಾರ್ಯ: ಕವಿಚರಿತೆ, ಸಂ. ೧, ಪು. ೩೩.

ಕಾಲದಲ್ಲಿ ರುದ್ರಭಟ್ಟ, ಪಾರ್ಶ್ವಪಂಡಿತ ಮುಂತಾದ ಕವಿಗಳು ಅವನನ್ನು ಹೊಗಳಿ ತಮಗೆ ಮೇಲ್ಪಂಕ್ತಿಯಾಗಿಸಿಕೊಂಡಿದ್ದಾರೆ; ಕೇಶಿರಾಜ, ೨ನೆಯ ನಾಗವರ್ಮರಂಥ ಲಕ್ಷಣಕಾರರು ಪ್ರಮಾಣವಾಗಿ ಗ್ರಹಿಸಿದ್ದಾರೆ; ಮಲ್ಲಿಕಾರ್ಜುನ, ಅಭಿನವವಾದಿ-ವಿದ್ಯಾನಂದರಂಥ ಸಂಕಲನಕಾರರು ಅವನ ಪದ್ಯಗಳನ್ನು ಉದ್ಧೃತಗೊಳಿಸಿದ್ದಾರೆ. ಸಂಕಲಿತವಾದ ಅವನ ಪದ್ಯಗಳಲ್ಲಿ ಗಂಗಚಕ್ರಾಯುಧ, ಕಾಮದ, ಮಹೇಂದ್ರಾಂತಕ ಎಂಬ ಬಿರುದುಗಳುಳ್ಳ ಒಬ್ಬ ಗಂಗರಾಜನ ಪರ್ಯಾಯಸ್ತುತಿ ಬಂದಿದೆ.[1] ಗಂಗ-ವಂಶದಲ್ಲಿ ೯೦೭ರಿಂದ ೯೨೦ರ ವರೆಗೆ ಆಳಿದ ಎರೆಯಪ್ಪನೇ ಈ ರಾಜನೆಂದು ತಿಳಿದು ಬಂದ ಕಾರಣ ೧ನೆಯ ಗುಣವರ್ಮನ ಕಾಲ ಸು. ೯೦೦ ಎಂದು ಊಹಿಸಲಾಗಿದೆ.[2]

ಇವನ ಗ್ರಂಥಗಳು ದೊರೆತಿಲ್ಲ, ಆದರೆ ಅವುಗಳ ಹೆಸರು ದೊರೆತಿವೆ, ಕೆಲವು ಉದ್ಧೃತಿಗಳೂ ದೊರೆತಿವೆ. ಈ ವಿಷಯದಲ್ಲಿ ಇವನು ಗುಣನಂದಿಗಿಂತ ಮೇಲು ಎನ್ನಬಹುದು. ಅಭಿನವವಾದಿವಿದ್ಯಾನಂದನು ತನ್ನ 'ಕಾವ್ಯಸಾರ'ವೆಂಬ ಸಂಕಲನ ಗ್ರಂಥದಲ್ಲಿ ಗುಣವರ್ಮನ 'ಶೂದ್ರಕ'ದಿಂದ ಎತ್ತಿದುವೆಂದು ಹೇಳಿದ ಪದ್ಯಗಳಿವೆ. ಅವುಗಳಲ್ಲಿ ಕೆಲವು ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ'ದಲ್ಲಿಯೂ ಉದಾಹೃತ-ವಾಗಿವೆ. 'ಕಾವ್ಯಸಾರ'ದಲ್ಲಿ 'ಹರಿವಂಶ'ದಿಂದ ತೆಗೆದುಕೊಂಡ ಒಂದು ಪದ್ಯವೂ ಇದೆ. ಆದರೆ 'ಹರಿವಂಶ'ವು ಗುಣವರ್ಮನ ಕೃತಿಯೆಂದು ತಿಳಿಯಲು ಕೇಶಿರಾಜನ 'ಶಬ್ದಮಣಿದರ್ಪಣ'ದಲ್ಲಿ 'ಈಂದ ಪುಲಿಯಾವೊಲಿರ್ದಳ್—ಎಂದು ಗುಣವರ್ಮನ ಹರಿವಂಶಪ್ರಯೋಗಂ' (ಸೂ. ೧೧೮) ಎಂಬ ಹೇಳಿಕೆ, ಪಾರ್ಶ್ವಪಂಡಿತ ಮತ್ತು ೨ನೆಯ ನಾಗವರ್ಮ ಇವರ ಉಕ್ತಿ-ಉದಾಹರಣೆಗಳು ಸಾಕಷ್ಟು ಆಧಾರವಾಗಿವೆ.[3] 'ಕಾವ್ಯಸಾರ'ದಲ್ಲಿ ಬಂದ 'ಶೂದ್ರಕ'ದ ಪದ್ಯಗಳು ೪೧, ಗದ್ಯಭಾಗ ೧, 'ಹರಿವಂಶ' ಪದ್ಯ ೧ ಎಂದಿದ್ದರೆ, ಅವುಗಳಲ್ಲಿ 'ಶೂದ್ರಕ'ದ ೧೧ ಪದ್ಯಗಳು ಮಾತ್ರ 'ಸೂಕ್ತಿಸುಧಾರ್ಣವ'ದಲ್ಲಿ ಉದ್ಧೃತವಾಗಿವೆ.[4] ಕಾಲಕ್ರಮದಲ್ಲಿ ಮೊದಲು 'ಸೂಕ್ತಿ-ಸುಧಾರ್ಣವ' (ಸು. ೧೨೫೦), ಮುಂದೆ 'ಕಾವ್ಯಸಾರ' (ಸು. ೧೫೫೦) ಎಂಬುದನ್ನು ನೆನೆದಿರಬೇಕು.

ಸಂಕಲನಗ್ರಂಥಗಳು ಬೇರೆ ಬೇರೆ ಕವಿಗಳು ಮಾಡಿದ ವಿವಿಧ ವರ್ಣನೆಗಳಿಂದ ಆಯ್ದು ಕಟ್ಟಿದ ಪದ್ಯಮಾಲಿಕೆಗಳಾದ್ದರಿಂದ ಅವುಗಳಲ್ಲಿ ಕಥಾನಕಕ್ಕೆ ಅವಕಾಶವೇ

---

1 ಅಭಿನವವಾದಿವಿದ್ಯಾನಂದ: ಕಾವ್ಯಸಾರ, ಪದ್ಯ ೨೧೫, ೪೩೭, ೫೫೧.

2 M. V. Krishna Rao: The Gangas of Talkad, p. 87.

3 ಆರ್. ನರಸಿಂಹಾಚಾರ್ಯ: ಕವಿಚರಿತೆ, ಸಂ. ೧, ಪು. ೨೪.

4 ಗಂಗರಾಜನಾದ ಎರೆಯಪ್ಪನಿಂದ ನೊಳಂಬ ದೊರೆಯಾದ ಮಹೇಂದ್ರನ ಕೊಲೆ ಯುದ್ಧ ರಂಗದಲ್ಲಿ ಸು. ೮೯೩ರಲ್ಲಿ ಆಯಿತೆಂಬುದರಿಂದ 'ಮಹೇಂದ್ರಾಂತಕ' ಎಂಬ ಅವನ ಬಿರು-ದನ್ನು ಎತ್ತಿ ಹೇಳುವ 'ಶೂದ್ರಕ'ವು ಆ ಕಾಲದನಂತರ ರಚಿತವಾಗಿರಬೇಕೆಂದು ಊಹಿಸ ಬಹುದು. (ನೋ. ಕರ್ಣಾಟಕದ ಅರಸುಮನೆತನಗಳು—ಸಂ. ೧, ಪು. ೧೮೩, ೨೧೩)

ಇಲ್ಲ. ಅಂತೇ ನಾಲ್ವತ್ತಕ್ಕೆ ಮೇಲಾದ ಪದ್ಯಗಳಿಂದಲೂ 'ಶೂದ್ರಕ'ದ ಕಥಾವಸ್ತುವಿನ ಪರಿಚಯವು ಎಳ್ಳಷ್ಟೂ ಆಗದಿದ್ದರೆ ಸೋಜಿಗವಲ್ಲ. ಆದರೂ 'ಶೂದ್ರಕ' ಇದು ಒಂದು ಪ್ರೌಢಚಂಪೂಗ್ರಂಥವಾಗಿತ್ತೆಂಬುದೂ ಅದರಲ್ಲಿ ಕ್ರಮಬದ್ಧವಾದ ಕಥನವಿರಬೇಕೆಂಬುದೂ ಅಲ್ಪ ಆಧಾರದಿಂದಲೂ ತಿಳಿಯುತ್ತದೆ. ಎರಡೂ ಸಂಕಲನಗಳಲ್ಲಿ ಚಂಪೂಕೃತಿಗಳಿಂದಲೇ ಗದ್ಯಪದ್ಯಗಳನ್ನು ಆಯ್ದುಕೊಂಡಿದೆ ಎಂಬ ಸಾಮಾನ್ಯ ಕಾರಣವಲ್ಲದೆ 'ಕಾವ್ಯಸಾರ'ದಲ್ಲಿ 'ಶೂದ್ರಕ'ದಿಂದೆತ್ತಿದ ಗದ್ಯಭಾಗವೂ ಇದೆ ಎಂಬುದು ವಿಶೇಷ ಕಾರಣವಾಗಿದೆ.[1] ಪದ್ಯಗಳೆಲ್ಲ ಕಂದ–ವೃತ್ತಗಳಲ್ಲಿಯೇ ಇರುತ್ತವೆ ಎಂಬುದನ್ನು ಲಕ್ಷಿಸಬೇಕು. 'ಶೂದ್ರಕ' ಹೆಸರು ಸೂಚಿಸುವಂತೆ ಈ ಕಾವ್ಯದಲ್ಲಿ ಆ ಹೆಸರಿನ ಪುರಾಣಪ್ರಸಿದ್ಧ ರಾಜನ ಚರಿತ್ರೆಯಿದ್ದು, ಅದರೊಡನೆ ಹೊಂದಿಕೊಂಡು ಆಶ್ರಯದಾತನಾದ ಗಂಗರಾಜನ ಚರಿತ್ರೆಯೂ ಸ್ತುತಿಯೂ ಇರಬಹುದೆಂದು ತೋರುತ್ತದೆ. ಯಾಕೆಂದರೆ ಪ. ೧೧ರಲ್ಲಿ ಸ್ಪಷ್ಟವಾಗಿ ಶೂದ್ರಕನ ಹೆಸರು ಬಂದಿದ್ದರೆ ಉಳಿದ ೩–೪ ಸಂದರ್ಭಗಳಲ್ಲಿ ಅವನ ಮೇಲೆ ಆರೋಪಿಸಿದ ಗಂಗರಾಜನ ಬಿರುದುಗಳಿರುತ್ತವೆ. ಕಥಾನಕದ ರೀತಿ ಹೀಗಿದ್ದುದು ನಿಜವಾದರೆ, ೧ನೆಯ ಗುಣವರ್ಮನು ನಮಗೆ ತಿಳಿದಮಟ್ಟಿಗೆ ಪಂಪ–ರನ್ನರ ಲೌಕಿಕ ಕಾವ್ಯಗಳ ರಾಜಕೀಯಧ್ವನಿಯುಕ್ತವಾದ ರಚನೆಗೆ ತಳಹದಿಯನ್ನು ಹಾಕಿದನ್ನೆನಬಹುದು.

ಗುಣವರ್ಮನ ಸಂಕಲಿತ ಪದ್ಯಗಳಲ್ಲಿ ಸಮುದ್ರ, ಪುರ, ಸೂರ್ಯ, ಚಂದ್ರ, ಮಾಗಿ, ಕಾನನ, ಬೇಟೆ, ಸ್ತ್ರೀರೂಪ, ಸಂಭೋಗ, ವೇಶ್ಯಾವಾಟ ಮುಂತಾಗಿ ಸಾಂಪ್ರದಾಯಿಕ ವಿಷಯಗಳಿವೆ. ಇವುಗಳಲ್ಲಿ ರಾಜ, ಯುದ್ಧ, ಶೌರ್ಯ ಇವನ್ನು ಕುರಿತ ಪದ್ಯಗಳನ್ನು ಕಣ್ಣಿಕ್ಕಿ ನೋಡಿದರೆ 'ಶೂದ್ರಕ'ವು ತತ್ಕಾಲೀನ ಚರಿತ್ರೆಯನ್ನು ಸೂಚಿಸುವ ವೀರಪ್ರಚುರವಾದ ಕಾವ್ಯವೆಂದು ಭಾಸವಾಗುತ್ತದೆ. ಪ. ೨೧೫ 'ಎರೆದರ್ ಸಂತುಷ್ಟರಾದರ್, ಕದನದೊಳಿದಿರಂ ಮಿಾಱಿ ಮಾಱಾಂತು ನಿಂದಾಂತರಿಭೂಪರ್ ಭಸ್ಮಮಾದರ್........ನರರಾರ್ ನಿನ್ನನ್ನರಿನ್ನೀ ಭುವನಭವನದೊಳ್ ಗಂಗಚಕ್ರಾಯುಧಾಂಕಾ' ಎಂಬುದು ಪ್ರತಿ ವಿವರದಲ್ಲಿ ಪ್ರತಾಪಶಾಲಿಯಾದ ಎರೆಯಪ್ಪನ ಗುಣಗಾನವಾಗಿದೆ. ತನ್ನ ತಂದೆ ಸೋಲಿಸಿದರೂ ಇನ್ನೂ ಸ್ವತಂತ್ರನಾಗಲು ಹವಣಿಸುತ್ತಿದ್ದ ನೊಳಂಬಪಲ್ಲವರ ಮಹೇಂದ್ರನನ್ನು ಎರೆಯಪ್ಪನು ಅತಿರೌದ್ರವಾದ ಯುದ್ಧದಲ್ಲಿ ಕೊಂದನೆಂಬುದು 'ಕದನದೊಳ್ **ಇದಿರಂ** ಮಿಾಱಿ ಮಾಱಾಂತು ನಿಂದಾಂತರಿಭೂಪರ್ **ಭಸ್ಮಮಾದರ್**' ಇದರಿಂದ ಸೂಚಿತವಾಗಿದೆ. ತರುವಾಯ ಗಂಗರಾಜ್ಯದ ಮೇಲೆ ವೀರಮಹೇಂದ್ರನೆಂಬವನು ದಂಡೆತ್ತಿಬರಲು ಎರೆಯಪ್ಪನು ಸಾಮಂತಸಹಿತವಾದ ಸೈನ್ಯ ಕೊಟ್ಟು ಅವನೊಂದಿಗೆ ಕಾದಲೆಂದು ಅಯ್ಯಪನನ್ನು ಕಳುಹಿಸಿದನೆಂದು ತಿಳಿದಿದೆ.[1] ಈ ಸಂಗತಿ ಪ. ೪೧೧ರಲ್ಲಿ ಸೂಚ್ಯವಾಗಿ ಬಂದಿದೆ.

---

1 ಅಭಿನವವಾದಿವಿದ್ಯಾನಂದ: ಕಾವ್ಯಸಾರ, ಗದ್ಯ ೫೨೯.

'ನೀನಿರೆ ಆನೆ ರಿಪುಸೇನೆಗೆ ಸಾಳ್ವೆಂ........ಎಡಗೈಯ ಕೈಯುಗುರೆ ಸಾಲದೆ ನಚ್ಚಿದ ಕೈದುವೇೞ್ಪುದೇ' ಎಂಬುದನ್ನು ಅಯ್ಯಪನು ಎರೆಯಪ್ಪನಿಗೆ ಹೇಳಿದಂತಿದೆ. ಪ. ೫೩೫ರಲ್ಲಿ ವೀರಪಟ್ಟವನ್ನು ಧರಿಸಿ ಕೆಮ್ಮೊಗನಾದ ಕಥಾನಾಯಕನ ಭವ್ಯ ವರ್ಣನೆ ಬಂದಿದೆ. ಹೀಗೆ ಅಲ್ಪಾಂಶಗಳಲ್ಲಿ ಆ ಕಾಲದ ಚರಿತ್ರೆಗೆ ಬೆಳಕಿಂಡಿಯನ್ನು ಒದವಿಸಿದ ಈ ಕಾವ್ಯವು ಸಮಗ್ರವಾಗಿ ದೊರಕಿದ್ದರೆ ಇನ್ನೂ ಹೆಚ್ಚಾಗಿ ಬೆಳಕನ್ನು ಕೆಡವಬಹುದಾಗಿತ್ತು.

ಈ 'ಶೂದ್ರಕ'ದ ಕಾವ್ಯಭಾಗಗಳನ್ನು ವಿಮರ್ಶದೃಷ್ಟಿಯಿಂದ ನೋಡಿದರೆ ಸಾಮಯಿಕ ಹಾಗೂ ಪ್ರೌಢವಾದ ವರ್ಣನಾಶಕ್ತಿ ಎದ್ದುಕಾಣುತ್ತದೆ. ಪಂಪನಿಗಿಂತ ಪೂರ್ವದಲ್ಲಿ ಮಾರ್ಗಕಾವ್ಯವು ಕನ್ನಡ-ಸಂಸ್ಕೃತಗಳ ಶಬ್ದಸಿದ್ಧಿಯನ್ನು ಪಡೆದು ಕವಿಸಮಯ-ಕಲ್ಪನಾಚಮತ್ಕೃತಿಗಳೊಡನೆ ಚೆಲ್ಲವಾಡುತ್ತ ಪಂಡಿತಪ್ರತಿಭೆಯ ಮೂರ್ತಿಯಾಗಿ ತಲೆದೋರಿತ್ತೆಂದು 'ಶೂದ್ರಕ'ವು ಸ್ಪಷ್ಟವಾಗಿ ತಿಳಿಸುತ್ತದೆ. ೬೧೨, ೬೬೫, ೭೪೭, ೮೮೦ ಈ ಮುಂತಾದ ಪದ್ಯಗಳಲ್ಲಿ ಕವಿಯ ಕಲ್ಪನಾಶಕ್ತಿ ಎತ್ತರಕ್ಕೆ ಹೋದರೂ ಡೊಂಬರಾಟಕ್ಕಾಗಿ ಎಂದು ತೋರಬಹುದು. ಅದೇ ಪ. ೬೯೪, ೧೦೫೦ ಇಲ್ಲಿ ಎತ್ತರದೊಡನೆ ಕೊನೆಬಾಳುವ ಘನತೆಯಿದೆ. ಬೆಳಗಪ್ಪ ಜಾವದಲ್ಲಿ ಚಳಿಹತ್ತಲು ಅದನ್ನು ತಡೆಯಲಾರದೆ ಭೂವನಿತೆ ತೊಟ್ಟ ಹೊಸ ಕುಪ್ಪಸದ ಮೇಲಿನ ಸೀವರ್ಮುತ್ತಿನಂತೆ ನೆಲದ ಮೇಲಿನ ಹನಿಗಳು ಇದ್ದುವು (೬೯೪) ಎಂಬುದು ಇವುಗಳಲ್ಲಿ ಒಂದು ತುಂಬ ಮೆಚ್ಚತಕ್ಕ ಭಾವ. ಈ ಗುಣವರ್ಮನ ಶೃಂಗಾರಿಕ ವರ್ಣನೆಗಳಲ್ಲಿ ಉತ್ತಾನವೆನ್ನುವಷ್ಟು ಬಿಚ್ಚುಬಗೆಯಿದೆ. ಶೈಲಿ ಆಗಾಗ ಸಂಸ್ಕೃತಮಯವಾಗಿದೆ. 'ರೌದ್ರಂ ಸಮುದ್ರಂ' ಎಂದು ಕೊನೆಗೊಳ್ಳುವ ಸಮುದ್ರವರ್ಣನೆಯಲ್ಲಿಯಂತೂ ಭೀಕರವಾದ ಶಬ್ದಸಮುದ್ರದ ಹೊರತು ಇನ್ನೇನು ಇಲ್ಲ. ಇಡಿಯ ಕಾವ್ಯವು ನೋಡಲು ದೊರೆಯದೆ ಇದ್ದ ಸಂದರ್ಭದಲ್ಲಿ ಈ ಕವಿಯ ಬಗ್ಗೆ ಕೊನೆಯ ಮಾತೆಂಬುದು ಸಾಧ್ಯವಿಲ್ಲ. ಆದರೂ ದೊರೆತಷ್ಟು 'ಶೂದ್ರಕ'ದ ಭಾಗ ಹಾಗೂ 'ಹರಿವಂಶ'ದ ಆ ಒಂದು ಪದ್ಯ ಇದರಿಂದ ೧ನೆಯ ಗುಣವರ್ಮನು ಪಂಪಪೂರ್ವಯುಗದಲ್ಲಿಯ ಪ್ರೌಢಕವಿಯೆಂದು ಹೇಳಿದರೆ ತಪ್ಪಾಗದು.

1 ನೆ. ಲಕ್ಷ್ಮೀನಾರಾಯಣರಾಯರು, ರಾ. ಸ್ವಾ. ಪಂಚಮುಖಿ: ಕರ್ನಾಟಕದ ಅರಸುಮನೆತನಗಳು, ಸಂ. ೧, ಪು. ೧೮೩.

೭. ಕವಿರಾಜಮಾರ್ಗ

'ಕವಿರಾಜಮಾರ್ಗ'ದಲ್ಲಿ ಸುಪ್ರಸಿದ್ಧ ರಾಷ್ಟ್ರಕೂಟ ದೊರೆಯಾದ ನೃಪತುಂಗನ ಉಲ್ಲೇಖಗಳಿರುವುದರಿಂದ ಅದರ ಕಾಲಾವಧಿ ೮೧೫–೭೭ ಎಂದು ಸುನಿಶ್ಚಿತವಾಗಿದೆ. ೯ನೆಯ ಶ.ದ ಉತ್ತರಾರ್ಧದಲ್ಲಿ ಅದು ರಚಿತವಾಗಿರಬಹುದೆಂದೂ ತೋರುತ್ತದೆ. ರಚನಕಾರನು ಯಾರೆಂಬ ವಿಷಯ ಮಾತ್ರ ತುಂಬ ವಾದಗ್ರಸ್ತವಾಗಿದೆ. ನೃಪತುಂಗನೇ ಅದನ್ನು ರಚಿಸಿದನೆಂದೂ, ನೃಪತುಂಗನ ಆಶ್ರಯದಲ್ಲಿ ಯಾವನೋ ಒಬ್ಬನು ಅದನ್ನು ಬರೆದನೆಂದೂ, ಆ ಯಾವನೋ ಒಬ್ಬನು ಕವೀಶ್ವರನಾಗಿರಬೇಕೆಂದೂ, ಶ್ರೀವಿಜಯನೇ ಆಗಿರಬಹುದೆಂದೂ, ಶ್ರೀವಿಜಯನೆಂಬ ಪೂರ್ವಕವಿ ಬರೆದ 'ಕವಿಮಾರ್ಗ'ವನ್ನು ವಿಸ್ತರಿಸಿ ಕವೀಶ್ವರನೆಂಬ ನೃಪತುಂಗ ಸಭಾಸದನು ತನ್ನ ದೊರೆಯ ಅಭಿಪ್ರಾಯ–ಅನುಮತಿಗಳೊಡನೆ 'ಕವಿರಾಜಮಾರ್ಗ'ವಾಗಿ ರಚಿಸಿದನೆಂದೂ ತರತರದ ಅಭಿಪ್ರಾಯಗಳು ಹುಟ್ಟಿವೆ. ಇವನ್ನೆಲ್ಲ ನಿವೇದಿಸಿ ಸಂಪೂರ್ಣವಾಗಿ ಚರ್ಚಿಸುವುದು ಸಾಧ್ಯವಿಲ್ಲ. ಈ ಪ್ರಶ್ನೆಯನ್ನು ಹಿಂಜಿ ನೋಡಿದರೆ ಸುಮಾರಾಗಿ ಗಟ್ಟಿಯೆಂದು ನಮಗೆ ತೋರುವ ಮಾತುಗಳು ಯಾವುವು, ಊಹೆಗೆ ಮಾತ್ರ ತೋರಬಹುದಾದ ಮಾತುಗಳು ಯಾವುವು ಎಂಬುದನ್ನು ಇಲ್ಲಿ ಅನುಗೊಳಿಸುತ್ತೇವೆ. ಈ ಹಿಂಜಿಕೆಯಲ್ಲಿ ಬೇರೆಯವರ ಅಭಿಪ್ರಾಯಗಳ ಚರ್ಚೆ ಕೆಲಮಟ್ಟಿಗೆ ಬರಬಹುದು.

ಕವಿರಾಜಮಾರ್ಗದ ಕರ್ತೃ

ಇದು ನೃಪತುಂಗರಚಿತವಾದ ಗ್ರಂಥವಲ್ಲ ಎಂಬುದು ಮೊದಲನೆಯ ಗಟ್ಟಿಮಾತು. ಇದರಲ್ಲಿ ಮೊದಲಿನಿಂದ ಕೊನೆಯವರೆಗೆ ಸೂರೆಯಾದ ನೃಪತುಂಗಪ್ರಶಂಸೆ ಇದಕ್ಕೆ ನಿದರ್ಶನವಾಗಿದೆ.[1] ತನ್ನ ಕೃತಿಯಲ್ಲಿ ನೃಪತುಂಗನು ತನ್ನನ್ನೇ ಅಷ್ಟು ಹೊಗಳಿಕೊಳ್ಳುವುದು ಎಷ್ಟು ಅಸಹಜವೋ ಅಷ್ಟು ಆಶ್ರಿತಕವಿಯೊಬ್ಬನು ಹೊಗಳುವುದು ಸಹಜ. ಅಸಹಜತೆಯನ್ನು ಅಲ್ಲಗಳೆದರೆ ಅಂಥ ಆತ್ಮಪ್ರಶಂಸೆಯ ಆರೋಪದಿಂದ ನೃಪತುಂಗನ ವ್ಯಕ್ತಿತ್ವಕ್ಕೆ ಹೆಚ್ಚಿನ ಕುಂದನ್ನು ತಂದಂತಾಗುತ್ತದೆ. ವಿಶೇಷವಾಗಿ ೩ನೆಯ ಪರಿಚ್ಛೇದದ ೨೨೭–೨೩೧ ಈ ಪದ್ಯಗಳನ್ನು ಓದಬೇಕು. ಇನ್ನು, ಪ್ರತಿ ಪರಿಚ್ಛೇದದ ಅಂತ್ಯದಲ್ಲಿ 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗ' ಎಂದಿದೆ. 'ನೃಪತುಂಗದೇವರಚಿತ' ಎಂಬುದು ವಸ್ತುಸ್ಥಿತಿಯಾಗಿದ್ದರೆ ಹಾಗೆ ಹೇಳಲು ಬಾಧಕವೇನಿತ್ತು? ಕವಿಗಳು ತಾವು ಗ್ರಂಥ ಬರೆದು ಆಶ್ರಯ ಕೊಟ್ಟ ರಾಜರ ಹೆಸರಿನಲ್ಲಿ ಅವನ್ನು ಪ್ರಚುರಗೊಳಿಸುವ ಸಂಪ್ರದಾಯವು ಸಂಸ್ಕೃತವಾಙ್ಮಯದಲ್ಲಿತ್ತು. ಅದೇ, ರಾಜನು ತಾನೇ ಗ್ರಂಥ ಬರೆದ ಸಂದರ್ಭದಲ್ಲಿ ತನ್ನಿಂದ ರಚಿತವಾದ ಗ್ರಂಥವೆಂದು ಹೇಳಲು ಆತಂಕ-

---

1 ಕವಿರಾಜಮಾರ್ಗ: ೧/೧, ೨, ೫, ೬ ; ೨/೧೭, ೧೮ ; ೩/೮೨, ೧೦೬, ೧೩೦ (?), ೧೫೬, ೧೬೨, ೧೮೧, ೨೧೮, ೨೧೯–೨೨೦, **೨೨೭–೨೩೧.**

ವೇನಿತ್ತು ? ತಿರುತಿರುಗಿ ‘ **ಅನುಮತ** ’ವೆಂಬ ಪದವೇಕೆ ? ಬೇರೊಬ್ಬನಿಂದ ಬರೆದ ಗ್ರಂಥವು ನೃಪತುಂಗನಿಂದ ಅನುಮತವಾಯಿತು ಅಂದರೆ ಅವನ ಒಪ್ಪಿಗೆ ಪಡೆದು ಆಶ್ರಯಕ್ಕೆ ಅರ್ಹವಾಯಿತು ಎಂದು ಅದರರ್ಥವಿರಬೇಕು. ಈ ಕೊನೆಯ ಮಾತು ಪ್ರಕ್ಷಿಪ್ತವೆಂದು ಸಿದ್ಧವಾದರೆ ಮಾತು ಬೇರೆ. ಗ್ರಂಥದ ತುಂಬ ಅಲ್ಲಲ್ಲಿ ‘ ನೃಪತುಂಗನ ಮತದ ಮೇರೆಗೆ ’ ಎಂಬ ಅಭಿಪ್ರಾಯಗಳು ಬರುತ್ತವೆ.[1] ಈ ತೃತೀಯ ಪುರುಷದ ಹೇಳಿಕೆಯಲ್ಲಿ ಉತ್ತಮಪುರುಷವೇ ಅಡಕವಾಗಿದೆಯೆಂದೂ ನೃಪತುಂಗನೇ ಇದರ ಕರ್ತನೆಂದು ತಿಳಿಯಲು ಇದು ಪ್ರಬಲ ಆಧಾರವೆಂದೂ ಕೆಲವರು ತಿಳಿಯುತ್ತಾರೆ. ಇದನ್ನು ಪರಿಶೋಧಿಸಿದರೆ ಇದರಲ್ಲಿಯ ಅಭಿಪ್ರಾಯಗಳು ಹೆಚ್ಚಾಗಿ ದಂಡಿ ಮುಂತಾದ ಪ್ರಾಚೀನ ಲಾಕ್ಷಣಿಕರ ಅಭಿಪ್ರಾಯಗಳೆಂದು ತಿಳಿಯುತ್ತದೆ. ಉದಾಹರಣೆಗೆ, ‘ ಅತಿಶಯಧವಳೋಕ್ತಿಕ್ರಮದೆ ಗದ್ಯಪದ್ಯಾಖ್ಯಾತಂ ’ (೧–೨೪), ‘ ಶ್ರುತದುಷ್ಟ-ಮರ್ಥದುಷ್ಟಂ....ಕೃತಕೃತ್ಯಮಲ್ಲವಲ್ಲಭಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ ’ (೧–೬೨), ‘ ಸಾರಶ್ರೀನೃಪತುಂಗವಿಚಾರಕ್ರಮಮಾರ್ಗಗಣನೆಯೊಳ್ ಪರಮಾಲಂ-ಕಾರವಿಭಾಗಂ....ಶಬ್ದಾರ್ಥಭೇದದಿಂದೆರಡಕ್ಕುಂ ’ (೨–೨), ‘ ಅತಿಶಯಧವಳಾಧಿಪ-ಮತದಿಂ ಜಾತಿಯೆಂಬಳಂಕಾರಮನಿಂತತಿನಿಪುಣರಱಿಗೆ ’ (೩–೧೧). ಇವುಗಳೆಲ್ಲ ಮೂಲಪದ್ಯಗಳ ಅನುವಾದಗಳಾಗಿವೆ. ಹೊಸ ಅಭಿಪ್ರಾಯವೆಂಬುದು ಇಲ್ಲಿಲ್ಲ. ಇದರಿಂದ ತನ್ನ ಆಶ್ರಯದಾತನಿಗೆ ಆದರವನ್ನು ತೋರಿಸಲೂ, ಅವನ ಅನುಮತಿ-ಯಿಂದ ತಾನು ಬರೆದ ಗ್ರಂಥದಲ್ಲಿಯ ಅನುವಾದಿತ ಅಭಿಪ್ರಾಯವೆಂದು ಸೂಚಿಸಲೂ, ಪಾದಪೂರಕವಾಗಿಯೂ ನೃಪತುಂಗನ ಹೆಸರನ್ನೂ ಗ್ರಂಥಕಾರನು ಬಳಸಿರುವನೆಂಬುದು ಸ್ಪಷ್ಟವಾಗಿದೆ. ಇದಲ್ಲದೆ ನಿಜವಾಗಿಯೂ ನೃಪತುಂಗನ ಸ್ವತಂತ್ರ ಅಭಿಪ್ರಾಯವಿರ-ಬೇಕೆಂದು ಸೂಚಿಸುವ ಹಲಕೆಲವು ಸಂದರ್ಭಗಳಿವೆ.[2] ಇವುಗಳಲ್ಲಿ ದಕ್ಷಿಣೋತ್ತರ-ಮಾರ್ಗಗಳಿಗೆ ಕನ್ನಡ ಉದಾಹರಣೆಗಳನ್ನು ಕೊಟ್ಟು ಅವುಗಳ ಭೇದವನ್ನು ತೋರಿಸಿದ ಪದ್ಯಗಳು (೨/೧೦೧–೧೧೦) ಸಂಪೂರ್ಣ ಸ್ವತಂತ್ರಗಳಾಗಿದ್ದು ‘ ನೀತಿನಿರಂತರಾನು-ಗತವೃತ್ತಿವಿಕಲ್ಪಿತ ’ ಹಾಗೂ ‘ ತದೀಯನಿರ್ಣೀತಿ ’ಯನ್ನು ಅವು ಒಳಗೊಂಡಿವೆ ಎಂದು ಹೇಳಿದೆ. ಇವು ನೃಪತುಂಗನೊಡನಾದ ಚರ್ಚೆಯಲ್ಲಿ ಅವನ ಅನುಮತಿಯನ್ನು ಪಡೆದ ಅಭಿಪ್ರಾಯಗಳಾಗಿರಬಹುದು. ಹಾಗಿರಲಿ ಬಿಡಲಿ, ನೃಪತುಂಗನ ವಿಷಯಕವಾದ ಆದರವನ್ನೂ ಪದ್ಯರಚನೆಯ ಅಗತ್ಯವನ್ನೂ ಮೇಳಮಾಡಿ ಇಂಥಲ್ಲಿ ಗ್ರಂಥಕಾರನು ತನ್ನ ಅಭಿಪ್ರಾಯಗಳನ್ನು ಹಾಗೆ ಭಾಸಮಾಡಿ ಹೇಳಿದ್ದಾನೆ ಎನ್ನಲು ಅಡ್ಡಿಯಿಲ್ಲ.

---

1 ಕವಿರಾಜಮಾರ್ಗ : ೧/೨೪, ೪೪, ೬೨, ೧೪೭, ೧೪೮ ; ೨/೨, ೧೧, ೫೫, ೧೦೦, ೧೦೧ ; ೩/೧, ೧೧, ೯೯, ೧೦೮, ೨೦೮.

2 ಅದೇ : ೧/೪೪, ೧೪೭–೮ ; ೨/೧೧, ೨೯–೩೦, ೪೫, ೧೦೦–೧, ೧೦೨–೧೧೦ ; ೩/೧೦೮.

ಅಂತೂ ಮೂಲದಲ್ಲಿಯ ಹಾಗೂ ಸ್ವತಂತ್ರ ಅಭಿಪ್ರಾಯಗಳಿಗೆ ನೃಪತುಂಗನ ಮತ-ವೆಂಬ ಸ್ವರೂಪ ಕೊಟ್ಟು ಅವನ್ನು ತಿಳಿಸಿರುವನೆಂದು ತೋರುತ್ತದೆ. ನೃಪತುಂಗನೇ ಗ್ರಂಥರಚಯಿತನೆಂಬುದಕ್ಕೆ ಇವು ಆಧಾರವಾಗಲಾರವು.

೧-೧೪೮ರಲ್ಲಿ 'ಅತಿಶಯಧವಳೋರ್ವಿಪ **ಉದಿತ** ಅಳಂಕೃತಿಮತಿನೀತಿ-ನಿರಂತರಪ್ರತೀತ' ಎಂಬುದು ನೃಪತುಂಗ ದೊರೆಯಿಂದ ಉದಯಕ್ಕೆ ಬಂದ ಅಲಂಕಾರ ಗ್ರಂಥವೆಂಬ ಅರ್ಥವನ್ನು ಸೂಚಿಸುತ್ತದೆ. ಇದು ನೃಪತುಂಗಕೃತವೆನ್ನಲು ಆಧಾರ-ವಾಗಿದ್ದಂತೆ ತೋರಬಹುದು. ಆದರೆ ಹಿಂದೆ ಹೇಳಿದ ಮಾತುಗಳೊಡನೆ ಪರಿಕಿಸಲಾಗಿ, ನೃಪತುಂಗನ ಆಶ್ರಯದಲ್ಲಿ ಅವನಿಂದ ಬೆಳಕಿಗೆ ಬಂದ ಗ್ರಂಥವೆಂಬ ವಿವರಣೆ ಹೆಚ್ಚು ಸಮಂಜಸವಾಗಿ ತೋರುತ್ತದೆ. ನೃಪತುಂಗನಲ್ಲದೆ ಬೇರೊಬ್ಬನು ಗ್ರಂಥಕರ್ತನೆನ್ನಲು ಅವನ ಹೆಸರೆತ್ತಿ ಹೇಳಿದ ಒಂದೆರಡು ಪದ್ಯಗಳಲ್ಲಿ ಸ್ಪಷ್ಟವಾಗಿ ಸೂಚನೆಯಿದೆ: 'ಸಾರ-ಶ್ರೀನೃಪತುಂಗವಿಚಾರಕ್ರಮಮಾರ್ಗಗಣನೆಯೊಳ್' ಅಲಂಕಾರಗಳು ಶಬ್ದ, ಅರ್ಥ ಎಂದು ಇಬ್ಬಗೆಯೆಂದು ಹೇಳಿ 'ಶಬ್ದಾಲಂಕಾರಂ ನಿಶ್ಚಿತಮಕ್ಕೆ ಪೇಳ್ವ ಮಾಟ್ಕಿಯೊ-ಳೆನ್ನಾ' (೨-೨, ೩), 'ಅತಿಶಯಧವಳೋಕ್ತಿಕ್ರಮದಿನಱಿ**ಪುವೆಂ** ತದ್ಭವದೊಳ್' (೨-೫೫). ಇಲ್ಲಿ ಎರಡೂ ಪುರುಷಗಳ ಪ್ರಯೋಗದಿಂದ ನೃಪತುಂಗನಲ್ಲದ ವ್ಯಕ್ತಿ ಗ್ರಂಥಕಾರನಾಗಿರಬೇಕೆಂದು ಸ್ಫುಟವಾಗಿ ಧ್ವನಿತವಾಗಿದೆ. 'ನೃಪತುಂಗನ ಮತದಂತೆ ನಾನು ಹೇಳುತ್ತೇನೆ' ಎಂದು ನೃಪತುಂಗನು ಹೇಳಲಾರನು. ೩-೧೧ರಲ್ಲಿಯೂ ಇಂಥ ಉದಾಹರಣೆಯಿದೆ.

ಎರಡನೆಯ ಗಟ್ಟಿಮಾತೆಂದರೆ ಕವಿರಾಜಮಾರ್ಗಕಾರನು ನೃಪತುಂಗಸಭಾಸದ-ನಾಗಿದ್ದು ಅವನಲ್ಲಿ ಅತ್ಯಂತ ಆದರವುಳ್ಳವನು. ಗ್ರಂಥಾರಂಭದ ಎರಡು ಪದ್ಯಗಳಲ್ಲಿ ವಿಷ್ಣುಸ್ತುತಿಯೊಡನೆ ಸ್ಪಷ್ಟಶ್ಲೇಷದಿಂದ ಅವನು ಮನಃಪೂರ್ವಕವಾಗಿ ನೃಪತುಂಗನ ಬಿರುದುಗಳನ್ನು ಸಾರಿ ಕೊಂಡಾಡುತ್ತಾನೆ. '**ಉದಾರನಾ** ನೃಪತುಂಗಂ' ಎಂಬಲ್ಲಿಯ ಭಾವವು ಮರಮರಳಿ ಕಿವಿಯಲ್ಲಾಡಿ ಎದೆವುಗುವಂತೆ ಮುಂದೆಯೂ ಅದನ್ನು ಅನೇಕ ಸಂದರ್ಭಗಳಲ್ಲಿ ತಂದಿದ್ದಾನೆ. ೧/೫, ೬ರಲ್ಲಿ ನೃಪತುಂಗನ ಸಭಾಸದರನ್ನು ವರ್ಣಿಸಿಯೂ ಸಾಲದಾಗಿ ಮುಂದೆ ೩ನೆಯ ಪರಿಚ್ಛೇದದ ಕೊನೆಗೆ ೫-೬ ಪದ್ಯಗಳಲ್ಲಿ (೩/೨೧೯-೨೨೩) ಬಾಯ್ತುಂಬ ಹೊಗಳಿದ್ದಾನೆ, ಮತ್ತಿನ ಐದಾರು ಪದ್ಯಗಳಲ್ಲಿ (೩/೨೨೭-೨೩೧) ನೃಪತುಂಗನನ್ನು ಗೌರವಿಸಿದ್ದಾನೆ. ಕೆಲವು ಲಕ್ಷ್ಯಪದ್ಯಗಳಲ್ಲಿಯೂ ನೃಪತುಂಗಸ್ತುತಿಯಿರಬೇಕೆಂದು ತೋರುತ್ತದೆ.[1] ಇವುಗಳಲ್ಲಿ ನೃಪತಿಯೊಬ್ಬನ

---

1 ಕವಿರಾಜಮಾರ್ಗ: ೧/೯೬, ೯೯, ೧೧೫, ೧೨೩, ೧೩೦, ೧೩೩, ೧೪೦ ; ೨/೭, ೧೭, ೨೧, ೨೪, ೩೩, ೪೪, ೫೮, ೮೦, ೧೦೨ ; ೩/೮೨, ೧೦೬, ೧೩೦, ೧೫೬, ೧೬೨, ೧೬೩, ೧೭೫–೧೮೨, ೨೧೭, ೨೧೪.

ಸಾಮಾನ್ಯ ಪ್ರಸ್ತಾಪವಿರಲೂ ಬಹುದು. ಆದರೆ ನೃಪತುಂಗನ ಬಗೆಗಿದ್ದ ಇವನ ಆದರವನ್ನು ಗಮನಿಸಿದರೆ ಹಾಗೂ ಇವುಗಳ ಪೈಕಿ ೫–೬ ಪದ್ಯಗಳಲ್ಲಿ ನೃಪತುಂಗನ ಬಿರುದುಗಳ ಉಲ್ಲೇಖವಿರುವುದನ್ನು ನೋಡಿದರೆ ಇವು ಪ್ರಾಯಶಃ ನೃಪತುಂಗಪರವಾಗಿರಬೇಕೆಂದು ತೋಚುತ್ತದೆ. ಗ್ರಂಥದ ಕೊನೆಕೊನೆಗೆ ನೃಪತುಂಗಸಭಾಸದನನ್ನು ವರ್ಣಿಸುತ್ತ ತನ್ನನ್ನೆ ವರ್ಣಿಸಿಕೊಂಡಿರಬಹುದೆಂದೂ ತೋರುತ್ತದೆ. ೩/೨೨೩–೪ ಪದ್ಯಗಳ ಸಮಗ್ರಾರ್ಥವು ತಿಳಿಯದಿದ್ದರೂ, ನೃಪತುಂಗಸಭಾಸದನಾದ ತಾನು 'ಕೂಡೆ ಪೇಲ್ದ ನುತಕಾವ್ಯಮಂ' ಎಂದು ತನ್ನ ಗ್ರಂಥಕರ್ತೃತ್ವವನ್ನು ಸೂಚಿಸಿರಬಹುದು. ೩–೨೨೬ರಲ್ಲಿ 'ಪಾರ್ಥಿವಲೋಕನಪ್ಪನೆಂದುಂ ಕವಿ ವರ್ಣಿಕುಂ ಸ್ವಾರ್ಥಚಯಂ ನುತಸರಸ್ವತೀತೀರ್ಥಾವತಾರಮಾರ್ಗನೆಸಕಂ' ಎಂದು ನೃಪತುಂಗನ ಮಾರ್ಗವನ್ನು ಬೇರೆ ಕವಿಯೊಬ್ಬನಾದ ತಾನು ವರ್ಣಿಸುವನೆಂಬ ಅಭಿಪ್ರಾಯವನ್ನು ಹೇಳಿದೆ. ೩–೨೩೧ರಲ್ಲಿ ಕಾವ್ಯರತ್ನಾಕರವನ್ನು ದಾಟಬೇಕಾದರೆ ನೃಪತುಂಗದೇವಮಾರ್ಗದಲ್ಲಿಯ ಬೋಧವೆಂಬ ನಾವೆ ಬೇಕೆಂದು ಹೇಳಿದ್ದನ್ನು ೩–೨೨೬ರಲ್ಲಿಯ ಅರ್ಥದೊಡನೆ ಹೊಂದಿಸಿ ತಿಳಿಯಬೇಕು.

ಮೂರನೆಯದಾಗಿ, ಕವಿರಾಜಮಾರ್ಗಕಾರನು ಜೈನಮತೀಯನೆಂಬುದು ಗಟ್ಟಿಮಾತು. ಗ್ರಂಥದ ತುಂಬ ಇದಕ್ಕೆ ನಿದರ್ಶನಗಳಿವೆ.[1] ಶ್ರುತ, ಪರಮಾಗಮ, ವೀತರಾಗ ಇದರಂಥ ಜೈನಪರಿಭಾಷೆಯ ಪದಗಳನ್ನು ಬಳಸಿದ್ದಲ್ಲದೆ ಅವನು ದಂಡಿಯ ಮೂಲ ಪದ್ಯಗಳನ್ನು ಜೈನಪರವಾಗಿ ಹೊರಳಿಸಿದ್ದಾನೆ. ೧/೩ರ ಸರಸ್ವತಿಸ್ತವನದಲ್ಲಿ ಮೂಲದ 'ಚತುರ್ಮುಖಮುಖಾಂಭೋಜವನಹಂಸವಧೂಃ ಮಮ ಮಾನಸೇ ರಮತಾಂ' ಎಂಬುದು 'ಹಂಸೀಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್' ಎಂದು ಅನುವಾದ ಹೊಂದಿದೆ. ಸರಸ್ವತಿ ಬ್ರಹ್ಮನ ಮುಖವಾಸಿನಿ ಎಂಬ ವೈದಿಕಕಲ್ಪನೆ ಜೈನಸಂಪ್ರದಾಯದಲ್ಲಿಲ್ಲವೆಂದು ಈ ಬಗೆಯ ಪಲ್ಲಟವಾಗಿದೆ. ಹಾಗೇ ೩/೧೮ರಲ್ಲಿ ಮೂಲದಲ್ಲಿಯ 'ಹರಿಪಾದಃ ಶಿರೋಲಗ್ನ' ಇತ್ಯಾದಿ ಪದ್ಯವು ಬದಲಾಗಿ 'ಜಿನಚರಣನಖಾದರ್ಶಂ' ಮುಂತಾದ ಬಗೆಯಲ್ಲಿ ಅನುವಾದಿತವಾಗಿದೆ. ೧/೯೧ರಲ್ಲಿ ವ್ಯವಹಿತ ದೋಷಕ್ಕೆ 'ಮನದೆ ನೆನೆವರ ಕಿಡುಗುಂ ಜಿನಾಧಿಪಾ ನಿನ್ನ ಪಾಪನಿಚಯಂ ಗುಣಮುಂ' ಎಂಬ ಮೂಲಕ್ಕಿಂತ ಬೇರೆಯಾದ ಲಕ್ಷ್ಯಪದ್ಯವಿದೆ. ಅಲ್ಲದೆ ಜೈನ ರಾಮಾಯಣವೊಂದರಿಂದ ಎತ್ತಿಕೊಂಡಂತೆ ತೋರುವ ಹಲವು ಉದಾಹರಣೆಗಳೂ ಇರುತ್ತವೆ.[2] ಅವು ದಂಡಿಯ 'ಕಾವ್ಯಾದರ್ಶ'ದಲ್ಲಿ ಇಲ್ಲ. ಗ್ರಂಥಕ್ಕೆ ಮೊದಲು ವಿಷ್ಣುಸ್ತುತಿಯನ್ನೂ ನೃಪತುಂಗಸ್ತುತಿಯನ್ನೂ ಮೇಳವಿಸಿ ನೃಪತುಂಗನ ಮತವನ್ನು

---

1 ಕವಿರಾಜಮಾರ್ಗ: ೧/೩, ೫, ೯, ೧೯, ೨೮, ೭೯, ೮೮, ೯೧, ೧೦೪, ೧೦೯; ೨/೧೦೮, ೯, ೧೩೫, ೧೫೨ ; ೩/೧೮, ೫೭, ೭೩, ೯೫, ೧೫೮, ೧೭೬, ೧೯೮, ೨೨೩, ೨೨೮.

2 ಅದೇ: ೨/೩೮, ೪೦, ೪೨, ೮೯, ೯೧, ೯೩, ೯೬, ೧೩೦; ೩/೧೯೦, ೧೯೧, ೧೯೫.

ಗ್ರಂಥಕಾರನು ಸೂಚಿಸಿದ್ದಾನೆ, ತನ್ನ ಮತವನ್ನಲ್ಲ. ನೃಪತುಂಗನು ಗ್ರಂಥರಚನೆಯ ಸಮಯಕ್ಕೆ ವಿಷ್ಣುಭಕ್ತನಾಗಿಯೆ ಇದ್ದನೇ ಇಲ್ಲವೆ ಜೈನಮತವನ್ನು ಸ್ವೀಕರಿಸಿದ್ದನೆ ಎಂಬುದು ವಾದಭೂಮಿಗೆ ಸೇರಿದ ವಿಷಯ. ಈ ಗ್ರಂಥದಲ್ಲಿಯ ಪ್ರಮಾಣಗಳಿಂದ ಹೇಳುವುದಾದರೆ, ಅವನು ಜೈನತತ್ವದಲ್ಲಿ ಅತ್ಯಂತ ಆಸ್ಥೆಯುಳ್ಳವನೂ ಜೈನಗ್ರಂಥಕಾರರಿಗೆ ಆಶ್ರಯದಾತನೂ ಆಗಿ ತನ್ನೊಂದು ಪರಿಪಕ್ವ ವಿವೇಕದ ಅವಸ್ಥೆಯಲ್ಲಿ ಇರುವಾಗ ಈ ಗ್ರಂಥವು ರಚಿತವಾಗಿರಬೇಕು. ತನ್ನ ವಿಷ್ಣುಭಕ್ತಿಗೂ ಜೈನಪರತೆಗು ವಿರೋಧವನ್ನು ಕಾಣದ ಔದಾರ್ಯವು ಅವನಲ್ಲಿ ನೆಲೆಗೊಂಡಿರಬೇಕು. 'ಕವಿರಾಜಮಾರ್ಗ'ವು ತನ್ನ ಸ್ವತಂತ್ರ ಪದ್ಯಗಳ ಸ್ಪಷ್ಟ ಹಾಗೂ ಸೂಕ್ಷ್ಮ ಅರ್ಥದಲ್ಲಿ ಈ ಮಾತಿಗೆ ಸಾಕ್ಷಿಯಾಗಿದೆ. ಈ ವರೆಗಿನ ವಿವೇಚನೆಯಿಂದ ನೃಪತುಂಗಸಭಾಸದನೂ ಜೈನಮತೀಯನೂ ಆದೊಬ್ಬ ಪಂಡಿತ ಕವಿ ನೃಪತುಂಗನ ಅನುಮತಿ ಪಡೆದು 'ಕವಿರಾಜಮಾರ್ಗ'ವನ್ನು ಬರೆದನೆಂಬುದು ನಿಚ್ಚಳವಾಗಿರಬೇಕು. ನೃಪತುಂಗನ ಮಾರ್ಗ ಇಲ್ಲಿಯ ಕ್ರಮವೆಂದು ಅಲ್ಲಲ್ಲಿ ಹೇಳಿ ಗ್ರಂಥಕರ್ತೃತ್ವವನ್ನು ಅವನಲ್ಲಿ ಆರೋಪಿಸಿದ್ದು ಆದರಾತಿಶಯದಿಂದ ಮಾಡಿಕೊಂಡ ಆಭಾಸ ಮಾತ್ರ. ಹಲಕೆಲವು ಸೂಚನೆಗಳೂ ಅಭಿಪ್ರಾಯಗಳೂ ವಿದ್ವಾಂಸ-ರಸಿಕನಾದ ಆ ಅರಸನಿಂದ ದೊರೆತಿರಬಹುದು, ಗ್ರಂಥದಲ್ಲಿ ಸ್ಥಾನ ಪಡೆದಿರಬಹುದು. ಗ್ರಂಥರಚನೆ ಮಾತ್ರ ಅರಸನಿಂದ ಆದುದಲ್ಲ.

ಹಾಗಾದರೆ ಗ್ರಂಥಕರ್ತನು ಯಾರು? ಅವನ ಹೆಸರೇನು? ಈ ಪ್ರಶ್ನೆಗೆ ಉತ್ತರವು ಬಹುವಾಗಿ ಊಹೆಯನ್ನು ಅವಲಂಬಿಸಿದೆ. ಎಲ್ಲ ಪ್ರಮಾಣಗಳನ್ನು ಮನದಂದು ತೂಗಿದರೆ, ಶ್ರೀವಿಜಯನು ಕವಿರಾಜಮಾರ್ಗಕಾರನಾಗಿರಬಹುದೆಂದು ನಮ್ಮ ತೋರಿಕೆ. ಪ್ರತಿ ಪರಿಚ್ಛೇದದ ಕೊನೆಯ ಪದ್ಯದಲ್ಲಿ ತಪ್ಪದೆ 'ಶ್ರೀವಿಜಯ' ಎಂಬುದು ಗ್ರಂಥಕರ್ತೃತ್ವವನ್ನು ಸೂಚಿಸುವ ರೀತಿಯಲ್ಲಿ ಬಂದಿದೆ.[1] ೧ನೆಯ ಪರಿಚ್ಛೇದದ ಕೊನೆಗಿದ್ದ 'ಕವಿಪ್ರಕರಂ ಶ್ರೀವಿಜಯಪ್ರಭೂತಮನಿದಂ ಕೆಯ್ಕೊಳ್ವುದೀ ಮಾಟಿಕ್ಕಿಯಿಂ' ಎಂಬುದಂತೂ ಸ್ಪಷ್ಟ ಸೂಚನೆಯಾಗಿದೆ. ಇದರೊಡನೆ 'ಶ್ರೀವಿಜಯರ ಕವಿಮಾರ್ಗಂ' (ಪಂಚತಂತ್ರ, ೧-೨೧) ಎಂದು ೧೦೩೧ರ ದುರ್ಗಸಿಂಹನು ನೊತ್ತಮೊದಲು ಅತಿ ಗೌರವದಿಂದ ಮಾಡಿದ ಉಲ್ಲೇಖ, ತನ್ನ ಪ್ರಮಾಣಪುರುಷರಲ್ಲಿ 'ಶ್ರೀವಿಜಯ' ಎಂಬ ಹೆಸರನ್ನು ಹೇಳಿ ಕೇಶಿರಾಜನು (ಸು. ೧೨೬೦) 'ಕವಿರಾಜಮಾರ್ಗ'ದಿಂದ ಲಕ್ಷ್ಯಗಳನ್ನು ಎತ್ತಿಕೊಂಡದ್ದು ಇವನ್ನು ಗಮನಿಸಬೇಕು. ೧೬೦೪ರಲ್ಲಿದ್ದ ಭಟ್ಟಾಕಳಂಕನು 'ನೃಪತುಂಗ ಗ್ರಂಥ' ಎಂಬುದು ಇವುಗಳ ಮುಂದೆ ಅರ್ವಾಚೀನವಾಗುತ್ತದೆ. ಅವನಿಗೆ ಹಾಗೆ ಭಾಸವಾಗಲು ಗ್ರಂಥದ ತುಂಬ ಕಣ್ಣಿಗೆ ಬೀಳುವ ನೃಪತುಂಗನ ಹೆಸರು-ಬಿರುದುಗಳೂ ಗ್ರಂಥಕರ್ತೃತ್ವದ ಆರೋಪಗಳೂ ಕಾರಣವಾಗಿರಬೇಕು. 'ಶ್ರೀವಿಜಯಪ್ರಭೂತ(ತಿ)' ಇದು ನೃಪತುಂಗನ ಬಿರುದು

---

1 ಕವಿರಾಜಮಾರ್ಗ: ೧-೧೫೦, ೨-೧೫೫, ೩-೨೩೭.

ಆಗಿತ್ತೆಂದೂ ಕೊನೆಯ ಪದ್ಯಗಳು ನೃಪತುಂಗನೇ ಗ್ರಂಥಕರ್ತನೆಂದು ಸಾರುತ್ತಿವೆ-ಯೆಂದೂ ಅಭಿಪ್ರಾಯವೊಂದಿದೆ. ನೃಪತುಂಗನು ಗ್ರಂಥಕರ್ತನಲ್ಲವೆಂಬುದಕ್ಕೆ ಬೇರೆ ಕಾರಣಗಳಿವೆ, ಶ್ರೀವಿಜಯ ಇದು ನೃಪತುಂಗನ ಬಿರುದೆನ್ನಲು ಬೇರೆ ಆಧಾರಗಳಿಲ್ಲ. ಆದ್ದರಿಂದ ಈ ಅಭಿಪ್ರಾಯವು ಯುಕ್ತಿಸಂಮತವಾಗಿಲ್ಲ. ಎರಡನೆಯ ಪರಿಚ್ಛೇದದ ಅಂತ್ಯದ 'ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ' ಎಂಬ ಮಾತೂ ಕವೀಶ್ವರ ಎಂಬ ಅಲ್ಲಲ್ಲಿಯ ನಿರ್ದೇಶವೂ ಕವೀಶ್ವರನು ಗ್ರಂಥಕಾರನೆಂಬ ಅಭಿಪ್ರಾಯಕ್ಕೆ ಎಡೆಮಾಡಿಕೊಟ್ಟವೆ. ಇಡಿಯ ಪದ್ಯವನ್ನು ನಿರುಕಿಸಿದರೆ, ಕವೀಶ್ವರ ಎಂಬ ಹೆಸರು ಅಲ್ಲಿ ಸೂಚಿತವಾಗಿರದೆ ಕವೀಶ್ವರ ಎಂದರೆ ಕವಿಶ್ರೇಷ್ಠನು ಎಂಥವನು ಎಂಬುದನ್ನು ಹೇಳಲಾಗಿದೆ. 'ಶಬ್ದತತ್ವಸಮಯಸ್ಥಿತಿ'ಯನ್ನು ಭಾವಿಸಿ, ಭಾಷೆಯ ಎಲ್ಲ ಮಾತನ್ನು ಅರಿತು, ಪುರಾಣಕವಿಪ್ರಯೋಗಗಳಲ್ಲಿಯ ಸದ್ಗುಣವನ್ನು ಬಗೆದು ನೋಡಿ, 'ಸಮೆದೊಂದು **ಕಾವ್ಯದಿಂ**' ಎಂದರೆ ರಚಿಸಿದ ಒಂದು ಕಾವ್ಯದಿಂದ, 'ಶ್ರೀವಿಜಯನಿಂದುಂಟಾದ ಮುದವನ್ನು ತನಗಾಗಿಸಿದವನೇ ಕವೀಶ್ವರನು' ಎಂದು ಅದರರ್ಥವಿರಬೇಕು. ಕವಿರಾಜಮಾರ್ಗವು ಮುಖ್ಯವಾಗಿ ಕಾವ್ಯವಲ್ಲ ಎಂಬುದರಿಂದ ಕವೀಶ್ವರನು ಅದರ ಕರ್ತೃವೆಂಬುದಾಗಿ ಈ ಪದ್ಯಾಭಿಪ್ರಾಯವು ಇರಲಾರದು. ಕಾವ್ಯದ ಸ್ಥೂಲವಾದ ಅರ್ಥದಲ್ಲಿ ಕವಿರಾಜಮಾರ್ಗವನ್ನೇ ಈ ಪದ್ಯವು ವರ್ಣಿಸಿದೆಯೆಂದು ಇಟ್ಟುಕೊಂಡರೂ ಕೊನೆಯ ಪಾದದ ಅರ್ಥವು ನಾವು ಮಾಡಿದಂತೆ ಇರಬಹುದೆಂದು ತೋರುತ್ತದೆ. ಶ್ರೀವಿಜಯರ 'ಕವಿಮಾರ್ಗ'ವೆಂಬ ಗ್ರಂಥಾಧಾರದಿಂದ ಕವೀಶ್ವರ ಎಂಬ ನೃಪತುಂಗಸಭಾಸದನು ವಿಸ್ತಾರವಾದ 'ಕವಿರಾಜಮಾರ್ಗ'ವನ್ನು ರಚಿಸಿದನೆಂಬ ಅಭಿಪ್ರಾಯಕ್ಕೆ ಪುಷ್ಟಿಕೊಡುವ ಅಂಶಗಳು ಕೆಲವಿದೆ. ಅದರಲ್ಲಿ ಮೇಲಣ ಪದ್ಯವು ಮುಖ್ಯವಾಗಿದೆ. ಆದರೆ ನಾವು ಅರ್ಥವಿಸಿದಂತೆ ಅದಿದ್ದರೆ ಸಾಧಕವಾಗದು. 'ಶ್ರೀ-ವಿಜಯರ ಕವಿಮಾರ್ಗಂ' ಎಂಬಲ್ಲಿ ಕಂದಪದ್ಯದ ಮಾತ್ರಾನುಕೂಲಕ್ಕಾಗಿ ದುರ್ಗ-ಸಿಂಹನು 'ಕವಿರಾಜಮಾರ್ಗ'ವನ್ನು 'ಕವಿಮಾರ್ಗ'ವಾಗಿ ಮೊಟಕಿಸಿರಬಹುದು. 'ಕವಿಮಾರ್ಗ'ವೆಂಬ ಪೂರ್ವಗ್ರಂಥದ ಅಸ್ತಿತ್ವದ ಬಗ್ಗೆ ಬೇರೆ ಪ್ರಬಲ ಆಧಾರಗಳಿಲ್ಲ. ೨-೫೫ರ 'ಅತಿಶಯಧವಳೋಕ್ತಿಕ್ರಮದಿನಱಪುವೆಂ **ತದ್ಭವದೊಳ್**' ಎಂದರೆ 'ಅತಿಶಯಧವಳನಾದ ನೃಪತುಂಗನ ಕ್ರಮದಲ್ಲಿ (ತತ್) ಆ ಕವಿಮಾರ್ಗದಿಂದ (ಭವದೊಳ್) ಹುಟ್ಟಿದ ಈ ಗ್ರಂಥದಲ್ಲಿ ಹೇಳುವೆನು' ಎಂಬ ಅರ್ಥಕಲ್ಪನೆಯಾಗಿದೆ.[1] ಇದರಿಂದ 'ಕವಿಮಾರ್ಗ'ವೆಂಬ ಗ್ರಂಥವು 'ಕವಿರಾಜಮಾರ್ಗ'ಕ್ಕೆ ಆಕರವಾಗಿತ್ತೆಂದು ಊಹೆ. 'ಕವಿಮಾರ್ಗ'ವೆಂಬ ಗ್ರಂಥದ ಉಲ್ಲೇಖವನ್ನು ಎಲ್ಲಿಯೂ ಒಮ್ಮೆಯೂ ಮಾಡದ ಕವೀಶ್ವರನು 'ತದ್ಭವದೊಳ್' ಎಂದು ಇಲ್ಲಿ ಹೇಳಿದ್ದು ನಿಜವಾಗಿದ್ದರೆ

1 ಕವಿರಾಜಮಾರ್ಗ: ಪಿ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್ (ಅವತರಣಿಕೆ, ಪು. viii)

ತತ್ಸಮವಿಲ್ಲದೆ ತದ್ಭವ ಜನಿಸಿದಂತಾಗುವುದಿಲ್ಲವೇ? 'ತದ್ಭವದೊಳ್' ಎಂಬುದರ ಅರ್ಥವೇನೊ ಅಸ್ಫುಟವಾಗಿದೆ. ಏನಿದ್ದರೂ ಮೇಲಿನ ಅರ್ಥವಿರಲಿಕ್ಕಿಲ್ಲ ಎಂದು ನಮ್ಮ ಮತ. 'ಅವನಿಂದ ಉಂಟಾದ ಗ್ರಂಥದಲ್ಲಿ' ಎಂದರೆ 'ಅವನ ಅನುಮತಿಯಿಂದ ನಾನು ಬರೆಯುತ್ತಿರುವ ಗ್ರಂಥದಲ್ಲಿ' ಎಂದು ಅದರಲ್ಲಿ ಅಭಿಪ್ರೇತವಾಗಿರಬಹುದು. ಪದ್ಯಕಾರರಲ್ಲಿ ಶ್ರೀವಿಜಯನನ್ನು ಹೆಸರಿಸಿ ತನ್ನನ್ನೆ ಕವಿರಾಜಮಾರ್ಗಕಾರನು ಸೂಚಿಸಿದಂತಿದೆ. ಸಂಬಂಧಿ ಪದ್ಯದಲ್ಲಿ (೧–೩೩) ತದಾದ್ಯಕಾವ್ಯ ಎಂದರೆ 'ಅವರ ಶ್ರೇಷ್ಠ ಇಲ್ಲವೆ ಉತ್ತಮ ಕಾವ್ಯ' ಎಂದರ್ಥ. ೧–೩೦ರಲ್ಲಿಯ 'ಆದ್ಯ'ಕ್ಕೂ ಇದೇ ಅರ್ಥವಿದೆ. ಇದು ಒಪ್ಪಿತವಾದರೆ ಪದ್ಯಕಾರರಲ್ಲಿ ಸಮಕಾಲೀನರನ್ನೂ ಪೂರ್ವಿಕರನ್ನೂ ಒಟ್ಟು ಸೇರಿಸಲು ಆತಂಕವಿಲ್ಲ. ಬಹುಶಃ ಸಮಕಾಲೀನರಿಂದ ಮೊದಲುಮಾಡಿ ಪ್ರಾಚೀನರ ವರೆಗೆ ಹೆಸರುಗಳನ್ನು ಹೇಳಿರಬೇಕು. ಗದ್ಯಕಾರರಲ್ಲಿಯೂ ವಿಮಲೋದಯನಿಂದ ದುರ್ವಿನೀತನ ವರೆಗೆ ಇದೇ ಕ್ರಮವನ್ನು ಅನುಸರಿಸಿದಂತಿದೆ. ಇಲ್ಲಿ ಉಲ್ಲೇಖಿತನಾದ ಶ್ರೀವಿಜಯನು ಬೇರೆಯವನೆಂದು ಸಿದ್ಧಮಾಡಲು ಪ್ರಮಾಣ ದೊರೆತರೆ ಕವಿರಾಜಮಾರ್ಗಕಾರನು ಇನ್ನೊಬ್ಬ ಶ್ರೀವಿಜಯನೆನ್ನಬೇಕಾಗುತ್ತದೆ. ಅವನು ಸ್ವನಿರ್ದೇಶ ಹಾಗೂ ಆತ್ಮಸ್ತುತಿಗಳನ್ನು ಮಾಡಲಾರನೆಂಬ ಯುಕ್ತಿಪ್ರಮಾಣವು ಸಾಲದು. ೨–೧೪೨ ಚಕ್ರಬಂಧಪದ್ಯದ ವಿವರಣೆಯಿಂದ ನೃಪತುಂಗನ ಸಂಧಾನಮಂತ್ರಿಯಾದ 'ಸಾಮಪ ಜಯಾಟ್ಟ' ಎಂಬ ಹೆಸರಿನ ಶ್ರೀವಿಜಯನು ಕವಿರಾಜಮಾರ್ಗಕರ್ತನೆಂದು ಮುಳಿಯ ತಿಮ್ಮಪ್ಪಯ್ಯನವರು ಅತಿಚತುರವಾಗಿ ಸಾಧಿಸಿದ್ದಾರೆ.[1] ಚಾತುರ್ಯ ಮೆಚ್ಚುವಂಥದಾದರೂ ವಿವರಣೆ ಮನವರಿಕೆಗೆ ಸಾಲದೆಂದು ಯಾರಿಗೇ ಆದರೂ ತೋರಬಹುದು.

ಕವಿರಾಜಮಾರ್ಗದ ಮಹತ್ವ

'ಕವಿರಾಜಮಾರ್ಗ'ವು ಎಲ್ಲ ದೃಷ್ಟಿಯಿಂದ ಕನ್ನಡದ ಆದ್ಯಗ್ರಂಥವಾಗಿದೆ. ಮೊದಲನೆಯ ಉಪಲಬ್ಧಗ್ರಂಥ, ಮೊದಲನೆಯ ಅಲಂಕಾರಗ್ರಂಥ ಎಂದಲ್ಲದೆ ಅದು ವಿಚಾರಸಂಪತ್ತಿಯಿಂದ ಕೂಡಿದ ಬೆಲೆಯುಳ್ಳ ಕೃತಿಯಾಗಿದೆ. ಅಂದಿನಂತೆ ಇಂದಿಗೂ ಮಾರ್ಗದರ್ಶಕವಾಗಿದೆ. ಅದರ ಬೆಲೆಯನ್ನು ಚಾರಿತ್ರಿಕ, ಲಾಕ್ಷಣಿಕ ಇಲ್ಲವೆ ವಿಮರ್ಶವಿಷಯಕ ಹಾಗೂ ವಿವೇಕಪರ ಎಂದು ಮೂರು ಅಂಗದಲ್ಲಿ ಅರಿತುಕೊಳ್ಳಬಹುದು. ಅದು ಚಾಚೂ ತಪ್ಪದೆ ದಂಡಿಯ 'ಕಾವ್ಯಾದರ್ಶ'ದ ಅನುವಾದವಾಗಿದ್ದರೆ ಇಲ್ಲವೆ ಅನುವಾದವಾಗಿಯೂ ಕಿರುಕುಳ ವ್ಯತ್ಯಾಸಗಳನ್ನು ಮಾತ್ರ ಮಾಡಿಕೊಂಡಿದ್ದರೆ ಇಂದಿನ ಮಹತ್ವವು ಅದಕ್ಕೆ ದೊರೆಯುತ್ತಿರಲಿಲ್ಲ. ಉದಾರಚರಿತನಾದ ನೃಪತುಂಗನ ಪ್ರೇರಣೆಯಿಂದಲೂ ಕವಿಯ ಬಹುಮುಖ ಆಸಕ್ತಿಯಿಂದಲೂ ಅದು ಕನ್ನಡಿಗರ ಕೈಪಿಡಿ.

---

1 ಮುಳಿಯ ತಿಮ್ಮಪ್ಪಯ್ಯ: ಕವಿರಾಜಮಾರ್ಗವಿವೇಕ (ಭಾಗ ೧), ಪು. ೮೭–೯೪.

ಯಂತಾಗಿದೆ. ಚಾರಿತ್ರಿಕವಾಗಿ ನೋಡಿದರೆ ಅದರಲ್ಲಿ ನೃಪತುಂಗನ ವ್ಯಕ್ತಿತ್ವಮಹಿಮೆ, ತತ್ಕಾಲೀನ ರಾಜಕೀಯ ಸ್ಥಿತಿ ಇವುಗಳ ಧ್ವನಿತ ಮತ್ತು ಪ್ರಕಟವರ್ಣನೆಗಳು ಬಂದಿವೆ ಮಾತ್ರವಲ್ಲ, ಅಭಿಮಾನಪುರಸ್ಸರವಾಗಿ ಮಾಡಿದ ಕನ್ನಡ ನಾಡುನುಡಿಗಳ ವರ್ಣನೆಯೂ ಬಂದಿದೆ. 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' (೧–೩೬) ಎಂಬಲ್ಲಿಯ ಭೌಗೋಲಿಕ ವಿಸ್ತಾರ, ಅದರೊಳಗಿನ ತಿರುಳ್ಗನ್ನಡದ ಸೀಮೆಗುರುತು (೧–೩೭) ಈ ಸಂಗತಿಗಳು ಇನ್ನೆಲ್ಲಿಯೂ ಆ ಕಾಲದಲ್ಲಿ ದೊರೆಯವು. ಕನ್ನಡನಾಡಿನ ಚರಿತ್ರೆಯ ಚಿತ್ರಕ್ಕೆ ಅವು ಹೊಳಹನ್ನು ಹಾಕಿಕೊಟ್ಟಿವೆ. ಅವು ಇತರ ಆಧಾರಗಳಿಂದ ನಂಬಲರ್ಹವಾದ ಸಂಗತಿಗಳೆಂದು ಚರಿತ್ರ-ಕಾರರು ತೋರಿದ್ದಾರೆ. ಕನ್ನಡನಾಡವರ ಕಾವ್ಯಪ್ರಯೋಗಪರಿಣತಿ, ಜನಸಾಮಾನ್ಯರ ಸಹಜವಿವೇಕ, ದೋಷಖಂಡನದ ಶಕ್ತಿ ಇವನ್ನೂ ಇದರಲ್ಲಿ ವರ್ಣಿಸಲಾಗಿದೆ (೧–೨೮, ೩೯, ೪೦). ೧–೪೨ರಲ್ಲಿ 'ಕನ್ನಡಕ್ಕೆ ನಾಡವರ್ ಒವಜರ್' ಎಂದೂ ೨–೨೮ರಲ್ಲಿ

> 'ಸುಭಟರ್ಕಳ್ ಕವಿಗಳ್ ಸು- |
> ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್ |
> ಅಭಿಮಾನಿಗಳತ್ಯುಗ್ರರ್ |
> ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ||'

ಎಂದೂ ವರ್ಣಿಸಿದೆ. ಆಳವಾಗಿ ನೋಡಿದರೆ, ಕನ್ನಡಸಂಸ್ಕೃತಿಯ ಸದ್ಗುಣಗಳನ್ನು ಈ ಪದ್ಯವು ಸಮರ್ಪಕವಾಗಿ ಸಾರಾಂಶಗೊಳಿಸಿದಂತೆ ತೋರುವುದು. ನುಡಿಯ ದೃಷ್ಟಿಯಿಂದ ಕನ್ನಡ ಗದ್ಯಪದ್ಯಕಾರರು, ಚತ್ತಾಣಬೆದಂಡೆಗಳೆಂಬ ಕಾವ್ಯರೂಪಗಳು, ಬೇರೆ ಬೇರೆ ದೇಸಿಯುಳ್ಳ ಕನ್ನಡಂಗಳು, 'ಪಟಗನ್ನಡ'ವೆಂಬ ಆಗಿನ ಹೇಳಿಕೆ ಈ ಮುಂತಾದ ಚಾರಿತ್ರಿಕ ಸಾಮಗ್ರಿ ದೊರೆಯುತ್ತದೆ. ಕನ್ನಡವ್ಯಾಕರಣಕ್ಕೆ ಸಂಬಂಧ-ಪಟ್ಟ ಕೆಲವು ನಿಯಮಗಳೂ ಪ್ರಯೋಗಗಳೂ ಛಂದಸ್ಸಿಗೆ ಸಂಬಂಧವುಳ್ಳ ಪ್ರಾಸಲಕ್ಷಣ ಹಾಗೂ ವಿಭಾಗಗಳೂ ಬಂದುವಲ್ಲದೆ, 'ಪೂರ್ವಾಚಾರ್ಯರ್ ದೇಸಿಯೆನೆ ನಿಱಿಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್' (೧–೭೫) ಎಂಬ ಮಹತ್ವದ ಸಂಗತಿಯ ನಿವೇದನವಿದೆ. ಸಂಸ್ಕೃತಛಂದೋನಿಯಮದಲ್ಲಿಯ ಯತಿಯನ್ನು ಮೀರಿ ಕನ್ನಡಕ್ಕೆ ವಿಶಿಷ್ಟವಾದ ಖಂಡಪ್ರಾಸವನ್ನು ಪೂರ್ವಾಚಾರ್ಯರು ನಿರಿಸಿದರಂತೆ. ಇದರಂತೆ ಸಂಸ್ಕೃತ ಪದಪ್ರಯೋಗಗಳನ್ನು ಕನ್ನಡದಲ್ಲಿ ತೆಗೆದುಕೊಳ್ಳುವ ವಿಚಾರದಲ್ಲಿ 'ಕವಿರಾಜಮಾರ್ಗ'ವು ಯಾವಾಗಲೂ ಗ್ರಾಹ್ಯವಾಗಬಹುದಾದ ಒಂದು ವಿವೇಕದ ದಾರಿಯನ್ನು ತೋರಿಸಿ ಉಪಕಾರಮಾಡಿರುತ್ತದೆ.

ಲಾಕ್ಷಣಿಕವಾಗಿ ಲಕ್ಷಿಸಿದರೆ, 'ಕವಿರಾಜಮಾರ್ಗ'ವು ಸ್ವತಂತ್ರ ಹಾಗೂ ಪರಿಣತವಾದ ವಿಮರ್ಶನಶಕ್ತಿಯ ಫಲವಾಗಿದೆ. ಅದು ಒಟ್ಟಿನಲ್ಲಿ ಸಂಸ್ಕೃತ ಲಾಕ್ಷಣಿಕ-ರಿಂದ ಸ್ಫೂರ್ತಿಪಡೆದು ವಿಶೇಷವಾಗಿ ದಂಡಿಭಾಮಹರಿಂದ ಉಪಕೃತವಾದುದು ನಿಜ.

ದಂಡಿಯ 'ಕಾವ್ಯಾದರ್ಶ'ವನ್ನು ಅನುವಾದಿಸಿದ್ದೂ ನಿಜ. ಆದರೂ ಅವರ ಸ್ವ
ತೆಗೆ ಬಾಧೆಯಿಲ್ಲ. ಒಂದನೆಯ ಎರಡನೆಯ ಪರಿಚ್ಛೇದಗಳ ಒಟ್ಟು ಪ
ಸುಮಾರು ಮೂರುನಾಲ್ಕಾಂಶದಷ್ಟು ಮೂಲದಿಂದ ಭಿನ್ನವಾಗಿವೆ. ೩ನೆಯ ಪ
ದಲ್ಲಿ 'ಕಾವ್ಯಾದರ್ಶ'ದ ಅನುಸರಣವು ಹೆಚ್ಚಿದೆ. ಇಲ್ಲಿಯೂ ಒಟ್ಟು ೨೩೭ ಪ
ಸು. ೯೮ ಸ್ವತಂತ್ರ ಪದ್ಯಗಳೂ ೨೧ ಮೂಲವ್ಯತ್ಯಾಸವುಳ್ಳ ಪದ್ಯಗಳೂ ಇ
ಅಲಂಕಾರಶಾಸ್ತ್ರಭಾಗದಲ್ಲಿ, ವಿಶೇಷವಾಗಿ ಲಕ್ಷಣನಿರೂಪಣೆಯಲ್ಲಿ ಸಾಮಾ
ದಂಡಿಭಾಮಹರ ಅನುವಾದವಿರುವುದಾದರೂ ಲಕ್ಷ್ಯಪದ್ಯಗಳಲ್ಲಿ ಸ್ವತಂತ್ರ
ಇಲ್ಲವೆ ಉದ್ಧೃತಿಯೂ ಮೂಲವ್ಯತ್ಯಾಸ ಇಲ್ಲವೆ ವಿಸ್ತಾರವೂ ಕಂಡುಬಂದಿವೆ.
ಕಡೆಗೆ ಸಾಹಿತ್ಯದ ಸ್ವರೂಪ, ಪ್ರಯೋಜನ, ತಾರತಮ್ಯ, ಸಾಹಿತ್ಯಕಾರನು
ಬೇಕಾದ ಸಾಧನೆ, ಶೈಲಿಯ ಸಮತೂಕ ಈ ಮುಂತಾದ ಅಂಶಗಳನ್ನು
ಸಮರ್ಪಕವಾದ ಉಕ್ತಿಗಳಿವೆ. ಇವುಗಳಿಂದಲೇ ಗ್ರಂಥಕ್ಕೆ ಬೆಲೆ ಬಂದಿದೆ, ಗ್ರಂ
ನಿಗೆ ಹಿರಿಯ ವಿಮರ್ಶಕನ ಪಟ್ಟ ಸಂದಿದೆ. ಶಾಸ್ತ್ರಕ್ಕೆ ಸಂಬಂಧಿಸಿದ ಸಾಂಪ್ರದಾ
ಭಾಗವಿಷ್ಟೇ ಇದ್ದರೆ ಈ ಕೊಂಡಾಟಕ್ಕೆ ಅವಕಾಶವಿರುತ್ತಿರಲಿಲ್ಲ. ಉದಾಹರ
'ಪಸರಿಸಿದಾ ಬಗೆ ಮನದೊಳ್ ಪೊಸತಾಗೆ ನೆಗಳ್ಚಲಱಿಯನಾ ರಚನೆ
ಬಸನಂ' (೧-೧೨) ಎಂಬಲ್ಲಿ 'ಮನಸ್ಸಿನಲ್ಲಿ ಇಡಿಯಾಗಿ ಪಸರಿಸಿದ ಬಗೆ
ಕಾವ್ಯಭಾವವು ಹೊಸತಾದ ರೂಪತಾಳುವಂತೆ ಕೃತಿರಚನೆ ಮಾಡಿದರೇ ಅದು
ಎಂಬ ಭಾವವಿದೆ.

'ಬಗೆಬಗೆದು ಕೇಳ್ದು ಬುಧರೊಲ-।
ವೊಗೆದಿರೆ ಹೃದಯದೊಳೆ ತಾಳ್ದ ಮಣಿಹಾರಂಬೋಲ್।
ಸೊಗಯಿಸುವ ವಚನವಿರಚನೆ।
ನೆಗೞ್ಗಂ ಭಾವಿಸುವೊಡದಱ ಪೆಂಪತಿಸುಲಭಂ॥ (೧-೧೩)

ಎಂಬ ಪದ್ಯದಲ್ಲಿ ಕಾವ್ಯಕ್ಕೆ ಹೃದ್ಯತೆಯೆ ಒರೆಗಲ್ಲೆಂದೂ ಅದರ ಹಿರಿಮೆಯ
ಅತಿಸುಲಭವೆಂದೂ ಹೇಳಲಾಗಿದೆ. ೧-೨೨ರಲ್ಲಿ ದಂಡಿಭಾಮಹರನ್ನು ಅ
ಶಬ್ದಾರ್ಥ ಅಲಂಕಾರಗಳಿಂದ ಕೂಡಿದ್ದು ಕಾವ್ಯವೆಂದಿದ್ದರೂ ಇಲ್ಲಿಯ
ಕವಿಭಾವತತ್ತ್ವವನ್ನು ಪ್ರತಿಪಾದಿಸಿ ಕವಿರಾಜಮಾರ್ಗಕಾರನ ಸಹೃದಯತೆ
ಹೊರಗೆಡವಿದೆ. ೧।೧೫-೧೭ರಲ್ಲಿ ನಾತಜೀವ, ನೀತಿವಿದ, ಕವಿತಾನಿ
ಪರಮಕವಿವೃಷಭ ಇವರ ತಾರತಮ್ಯದ ವಿವರಣೆ ಕವಿರಾಜಮಾರ್ಗಕಾರನ
ವಿವೇಚನಶಕ್ತಿಗೆ ಸಾಕ್ಷಿಯಾಗಿದೆ. ಶೈಲಿಯಲ್ಲಿ ಕನ್ನಡ-ಸಂಸ್ಕೃತಗಳ ಮಿ
ಹೇಗಿರಬೇಕು ಎಂಬ ವಿಚಾರದಲ್ಲಿ ಇಲ್ಲಿಯ ದೃಷ್ಟಿ ಎಂದಿಗೂ ಒಪ್ಪುವಂಥ
'ಶಕ್ಕದಮುಂ ಪಾಗದಮುಮದಕ್ಕುಂ ಬಗೆದಂತೆ ಸಮಱಿ ಪೇೞಲ್' (೧
'ಸಮಸಂಸ್ಕೃತಂಗಳೊಳ್ ತಳ್ತಿಮರ್ದಿರೆ ಕನ್ನಡವನಱಿದು ಪೇೞ್ಗೆ' (೧

ಟ್ಟಿರ್ದ ಕನ್ನಡಂಗಳೊಳ್ ಅಗಣಿತಗುಣವಿದಿತಸಂಸ್ಕೃತೋಕ್ತಕ್ರಮಮಂ ದೊಂದುಮಾಡಿ' (೧-೫೭) ಎಂದು ಮುಂತಾಗಿ ಹಲವು ಕಡೆಗಳಲ್ಲಿ ಕನ್ನಡನುಡಿಗೆ ದಿಕೆಯಾಗುವಂತೆ, ತಲೆಹೊರೆಯಾಗದಂತೆ, ಅನ್ಯದೇಶ್ಯವನ್ನು ಪ್ರಯೋಗಿಸ- ಂದು ಹೇಳಿದ್ದು ಯೋಗ್ಯವಾಗಿದೆ. ಸಂಸ್ಕೃತ ಅನ್ವಯಗಳನ್ನು ಇದ್ದಹಾಗೆ ಷದಲ್ಲಿ ಬೆರೆಸಿದರೆ 'ಒತ್ತುಂಗರಡೆಯ ಮುದ್ದೆಯ ಜರ್ಜರಧ್ವನಿಗಳವೋಲ್' ೫) ಪರುಷತರವಾಗುವುದೆಂದೂ ಅರಿಸಮಾಸಗಳನ್ನು ಮಾಡಿದರೆ ಸುಡುವ ನಲ್ಲಿ ಮಜ್ಜಿಗೆಯ ಹನಿಗಳನ್ನು ಬೆರಸಿದಂತಾಗುವುದೆಂದೂ (೧-೫೮) ಪರಿಣಾಮ- ಾಗಿ ಹೇಳಿದ್ದನ್ನು ಗಮನಿಸಬೇಕು. ನೆಲಸಿದ ಕಾವ್ಯವೇ ಕಾವ್ಯಕ್ಕೆ ಲಕ್ಷಣವೆಂದು, ಲಿತದೇಸಿಯುಳ್ಳವೆಂದು ಅರಿದಿದ್ದರೂ ಕೆಲವರು ಹಳೆಯ ಪದಗಳನ್ನೇ ಬಳಸಿ ನ್ನಡವನ್ನು ಕೊಲಗೆಡಿಸುತ್ತಾರೆ (೧/೪೮-೫೦) ಎಂಬ ಸೋದಾಹರಣವಾದ ಯಲ್ಲಿ ಕವಿರಾಜಮಾರ್ಗಕಾರನು ಸಾಂಪ್ರದಾಯಿಕ ಜಡತೆಯನ್ನು ಒಪ್ಪದ ಪ್ರವೃತ್ತಿಯವನೆಂಬುದು ತಿಳಿಯುತ್ತದೆ.

'ನುಡಿಗಳೊಡಂಬಡಲ್ ಬಗೆದವೋಲ್ ಬಗೆಯ ಮಿಗಲೀಯದೆ ಬಂದೆ ನಾ-|
ಣ್ಣುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್ |
ತೊಡರದೆ, **ಸಕ್ಕದಂಗಳ ಪದಂ ಪವಣಾಗಿರೆ** ಮೆಲ್ಪುವೆತ್ತು, ದಾಂ-|
ಗುಡಿವಿಡಿಪಂತೆ ಪೇಳ್ಪನಿತು ಪೇಳ್ವುದು ಪೇತಿನಿರಂತರಕ್ರಮಂ||' (೧-೧೪೯)

ಡಿಯ ಪದ್ಯದಲ್ಲಿ ಉತ್ತಮ ಕನ್ನಡ ಶೈಲಿಯ ಆದರ್ಶವನ್ನು ಕವಿರಾಜಮಾರ್ಗ- ನು ವರ್ಣಿಸಿದ್ದಾನೆ. ನುಡಿಗೂ ಬಗೆಗೂ ಒಡಂಬಡುವಿರಬೇಕು, ನಾಣ್ಣುಡಿಯ ು ಬಂದಬೇಕು, ಸಂಸ್ಕೃತದ ಪದಗಳು ಹವಣಾಗಿರಬೇಕು, ಮೆಲ್ಪುವೆತ್ತಿರ- ು ಎಂಬುದನ್ನು 'ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದು' : ಪಂ.ಭಾ.) ಮುಂತಾದ ಪಂಪನ ಪದ್ಯಕ್ಕೆ ಹೋಲಿಸಿದರೆ ದೇಸಿಮಾರ್ಗಗಳ ನ್ವಯವನ್ನು ಇಬ್ಬರಲ್ಲಿಯೂ ಸಮಾನವಾಗಿ ಕಾಣಬಹುದು. ೨-೪, ೫ರಲ್ಲಿ ವೃತ್ತಿ ಇಲ್ಲವೆ ಪದರಚನೆಯ ಔಚಿತ್ಯವನ್ನು ಕುರಿತು ಎಚ್ಚರಿಕೆಯ ಮಾತಿವೆ. ದಲಂಕಾರವನ್ನು ಉದಾಹರಿಸುವಾಗ 'ಶಾಂತಾಧಾರಂ ನವವಿಧವಿಕಲ್ಪಮಾರಸ- ರ್ಗಂ' (೩-೧೮೯) ಎಂಬ ವಿಧಾನವೂ 'ವಿಗತವಿಕಾರಾಕಾರಂ ಸೊಗಯಿಸುಗಂ ರೂಪು ಶಾಂತಾಧಾರಂ' (೩-೧೯೮) ಎಂಬ ಲಕ್ಷ್ಯವೂ ಸ್ವತಂತ್ರವಾಗಿವೆ. ಯಲ್ಲಿ 'ಅಷ್ಟರಸಾಶ್ರಯಾ ರಸವತ್ತಾ ಸ್ಮೃತಾ ಗಿರಾಂ' (೨-೨೯೨) ಎಂದು ೀ ರಸಗಳ ಉಲ್ಲೇಖವಿದೆ. ಕನ್ನಡ ಕವಿಗಳೂ ಲಾಕ್ಷಣಿಕರೂ 'ಕವಿರಾಜ- ರ್ಗ'ದ ಕಾಲದಿಂದಲಾದರೂ ಕಾವ್ಯದಲ್ಲಿ ನವರಸಗಳಿಗೆ ನಿರ್ವಿವಾದವಾದ ಸ್ಥಾನ- ಕೊಟ್ಟಿದ್ದರೆಂಬುದು ತಿಳಿಯುತ್ತದೆ.

'ಧ್ವನಿಯೆಂಬುದಳಂಕಾರಂ |
ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ |
ನೆನೆವುದಿದನಿಂತು ಕಮಳದೊ- |
ಳನಿಮಿಷಯುಗಮೊಪ್ಪಿ ತೋರ್ಪುದಿಂತಿದು ಚೋದ್ಯಂ ||' (೩–೨೦೯)

ಇದು ದಂಡಿಭಾಮಹರಿಬ್ಬರಲ್ಲಿಯೂ ದೊರೆಯದ ಸ್ವತಂತ್ರಪದ್ಯವಾಗಿದೆ. ಪ್ರತ್ಯೇಕವಾಗಿ ಸಹೃದಯರಿಂದ ಕಾವ್ಯಶಾಸ್ತ್ರದಲ್ಲಿ ಸ್ಥಾನಪಡೆಯಲು ಹವಣಿಸುತ್ತಿದ್ದ ಧ್ವನಿತತ್ವವನ್ನು ಕವಿರಾಜಮಾರ್ಗಕಾರನು ಸ್ವಂತಬುದ್ಧಿಯಿಂದ ಅಲಂಕಾರಮಾಲಿಕೆಯಲ್ಲಿ ಸೇರಿಸುವ ಯತ್ನಮಾಡಿರುವಂತೆ ಕಾಣುತ್ತದೆ.[1] ಲಕ್ಷ್ಯಪದ್ಯವನ್ನು ನೋಡಿದರೆ ಮಾತ್ರ ಅಲಂಕಾರವು ರೂಪಕಾತಿಶಯೋಕ್ತಿಯ ಮತ್ತು ವಿರೋಧಾಭಾಸದ ಒಂದು ಪ್ರಕಾರವಾಗಿ ತೋರುವುದು.

ಮೂರನೆಯದಾಗಿ 'ಕವಿರಾಜಮಾರ್ಗ'ದಲ್ಲಿ ವಿವೇಕಪರವಾದ ಭಾಗವು ಅಳತೆಯಲ್ಲಿ ಸ್ವಲ್ಪವಾದರೂ ತೂಕದಲ್ಲಿ ಮಿಗಿಲಾಗಿದೆ. ಅದರಲ್ಲಿ ಗ್ರಂಥಕಾರನ ಹೃದಯವಿಶಾಲತೆಯನ್ನೂ ಪರಿಪಕ್ವ ಬುದ್ಧಿಯನ್ನೂ ಎತ್ತಿತೋರುವ ಜೀವನವಿವೇಕವಿದೆ. ನೃಪತುಂಗನ ಅಭಿಮಾನ, ಔದಾರ್ಯ ಮುಂತಾದ ಗುಣಗಳನ್ನೂ ಕನ್ನಡನಾಡವರ ಸದ್ಗುಣಗಳನ್ನೂ ಕೊಂಡು ಕೊನೆದ ಪದ್ಯಗಳಲ್ಲಿ ಜೊಳ್ಳುಹೊಗಳಿಕೆಯಿರದೆ ಆಳವಾದ ತಿಳಿವಳಿಕೆಯಿದೆ. ೩/೧೪೩–೧೫೩ರಲ್ಲಿಯ ಸ್ವತಂತ್ರ ಲಕ್ಷ್ಯಪದ್ಯಗಳಲ್ಲಿ ಹೇಳಿದ ರಾಜನೀತಿ ತತ್ಕಾಲೀನ ರಾಜಕೀಯವನ್ನೊಳಗೊಂಡು ಎಲ್ಲ ಕಾಲಕ್ಕೆ ಅನ್ವಯಿಸುವ ವ್ಯವಹಾರಜ್ಞಾನವಾಗಿದೆ. 'ಮೊದಲು ತಲೆಸೂಡಿ ಅಂದರೆ ತಲೆಯ ಮೇಲೆ ಏನಾದರೊಂದು ಹಾಕಿಕೊಂಡು ಆಮೇಲೆ ಆ ಕಾರ್ಯದ ಫಲವೇನೆಂದು ಕೇಳುವಾತನು ಮೊದಲು ತಲೆ ಬೋಳಿಸಿ ಆಮೇಲೆ ಯಾವ ದಿವಸವಿದು ಎಂದು ಕೇಳುವ ಗಾವಿಲನಾಗುತ್ತಾನೆ' (೩–೧೪೫), 'ವಿಧಿ ಪ್ರತಿಕೂಲನಾಗಿದ್ದರೆ ಮತನಯವು ಅಂದರೆ ಸಂಮತ ನೀತಿ ಅನುಕೂಲವಾಗಿದ್ದರೂ ಕಾರ್ಯವನ್ನು ಸಾಧಿಸಲಾಗದು. ಹಾಗೆ ಮಾಡಿದರೆ ಸತ್ತವನಿಗೆ ಉಪಕಾರ ಮಾಡಿದಂತೆ ವ್ಯರ್ಥ ಆಯಾಸ' (೩–೧೪೬), 'ಹಗೆಯನ್ನು ಕಿರಿದು ಇದ್ದಾಗಿನಿಂದ ಏಳಿಸಿ ಕೆಡಿಸದಿದ್ದರೆ ಕಾಲದ ಬಲವನ್ನು ತಾಳಿ ಅವನು ಇರಿಯುತ್ತಾನೆ' (೩–೧೫೧), 'ಮಾಡುವವನ ಇಚ್ಛೆಯನ್ನರಿಯದೆ ತನ್ನಿಚ್ಛೆಯಿಂದ ಕೆಲಸವನ್ನು ಹೇಳುವವನು ರೋಗಿಯ ತೆರವನ್ನರಿಯದೆ ಮದ್ದು ಹೇಳುವ ವೈದ್ಯನಂತಾಗುವನು' (೩–೧೫೨) ಈ ಮುಂತಾದುವನ್ನು ಗಮನಿಸಬೇಕು. ಇನ್ನೂ ಮುಂದಿನ ಲಕ್ಷ್ಯಗಳಲ್ಲಿ

---

[1] K. Krishnamoorthy: Germs of the Theory of Dhwani (B. O. R. I. Vol. XXVIII, Parts III–IV, pp. 196–7) ಮತ್ತು ತೀ. ನಂ. ಶ್ರೀಕಂಠಯ್ಯ: ಭಾರತೀಯ ಕಾವ್ಯಮೀಮಾಂಸೆ, ಪರಿಶಿಷ್ಟ, ಪು. ೪೫೮–೪೬೧.

ವೈರಾಗ್ಯ, ಪರಮತಸಹಿಷ್ಣುತೆ, ಕರ್ತವ್ಯನಿಷ್ಠೆ, ಸ್ತುತಿನಿಂದೆಗಳ ಬಗ್ಗೆ ಉದಾಸೀನತೆ ಇವನ್ನು ಭಾವಪೂರ್ಣವಾಗಿ ಬಣ್ಣಿಸಲಾಗಿದೆ. 'ಕಸವರಮೆಂಬುದು ನೆಱೆ ಸೈರಿಸ-ಲಾರ್ಪೊಡೆ ಪರವಿಚಾರಮುಂ ಧರ್ಮಮುಮಂ' (೩–೧೭೭) ಎಂಬಲ್ಲಿ ಪರವಿಚಾರವನ್ನೂ (ಪರ) ಧರ್ಮವನ್ನೂ ನೆರೆ ಸೈರಿಸುವುದೇ ನಿಜವಾದ ಸಂಪತ್ತಿ ಎಂದು ಹೇಳಿದೆ. 'ಪಾೞಿ ನೆಲೆ ನೆಗೞೆ (ಱೆ ?) ಬಾೞ್ವುದು ಬಾೞೆಂಬುದು ನಿಕ್ಕುವಂ' (೩–೧೭೮) ಎಂದರೆ ಕರ್ತವ್ಯ, ಧರ್ಮ ನಿಲ್ಲುವಂತೆ ಮಾಡಿ ಬಾಳುವುದೇ ನಿಜವಾದ ಬಾಳು ಎಂಬ ಭಾವವಿದೆ. 'ನನ್ನ ಬಹಳ ಹಳಿಯುತ್ತಾರೆ, ನೆರೆದೆಲ್ಲರೂ ನನ್ನ ಹೊಗಳುತ್ತಾರೆ ಎಂದು ಅನ್ನದೆ ತನ್ನಲ್ಲಿ ಬಗೆದು ಉಭಯಲೋಕಹಿತದಲ್ಲಿ ತೊಡಗಲಿ; ಜನರು ಹಳಿಯಲಿ ಹೊಗಳಲಿ, ತನಗೇನು ಅದರಿಂದ' (೩–೧೮೦). ಈ ಬಗೆಯ ವಿಚಾರಗಳು ಕವಿರಾಜ-ಮಾರ್ಗಕಾರನ ಪರಿಣತಪ್ರಜ್ಞೆಗೆ ನಿದರ್ಶನವಾಗಿ, ಕನ್ನಡದಲ್ಲಿ ಮೂಡಿದ ಭಾರತೀಯ ಸಂಸ್ಕೃತಿಗೆ ಸಾವಿರ ವರ್ಷದ ಹಿಂದೆ ಹಿಡಿದ ಕನ್ನಡಿಯಂತಾಗಿರುತ್ತವೆ.

'ಕವಿರಾಜಮಾರ್ಗ'ವು ಪ್ರಮುಖವಾಗಿ ಅಲಂಕಾರಗ್ರಂಥ ಎಂದರೆ ಶಾಸ್ತ್ರಕೃತಿ-ಯಾದರೂ ಅದರಲ್ಲಿಯ ಸ್ವತಂತ್ರಭಾಗಗಳನ್ನು ಕಣ್ಣಿಟ್ಟು ನೋಡಿದರೆ ಕವಿತ್ವದಂಶಗಳು ಅದರಲ್ಲಿ ಮಿನುಗಿ ಮನಸೆಳೆಯುತ್ತವೆ. ಗ್ರಂಥದ ತುಂಬ ಸಮುಚಿತವಾದ ಹೋಲಿಕೆಗಳೂ ಸುಂದರ ಚಿತ್ರಗಳೂ ತೆರೆತೆರೆಯಾಗಿ ಬಂದು ಕವಿರಾಜಮಾರ್ಗಕಾರನು ಮೇಲಾದ ಕವಿಯೆಂಬುದನ್ನು ತಿಳಿಸುತ್ತವೆ. ಈವರೆಗಿನ ಎಲ್ಲ ನಿರೂಪಣೆಯಿಂದ 'ಕವಿರಾಜ-ಮಾರ್ಗ'ವು ದಂಡಿಯ ಕಾವ್ಯಾದರ್ಶವನ್ನು ಮಾತ್ರವಲ್ಲ, ಕನ್ನಡ ಜೀವನಸಾರವನ್ನು ಅನುವಾದಮಾಡಿದ 'ಚಿತ್ರಕೃತಿ'ಯೆಂದೂ 'ಶ್ರೀವಿಜಯರ ಕವಿಮಾರ್ಗಂ ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈಯ್ದೀವಿಗೆಯುಂ' ಎಂದು ದುರ್ಗಸಿಂಹನು ಮಾಡಿದ ಪ್ರಶಸ್ತಿ ತುಂಬ ಸಮರ್ಪಕವಾದುದೆಂದೂ ಮನದಟ್ಟಾಗುವುದು.

೮. ವಡ್ಡಾರಾಧನೆ

'ವಡ್ಡಾರಾಧನೆ' ಇದು ಜೈನ ಧಾರ್ಮಿಕ ಕಥೆಗಳ ಸಂಗ್ರಹ. ಗದ್ಯಶೈಲಿಯ ದೃಷ್ಟಿಯಿಂದ ಕನ್ನಡದಲ್ಲಿ ಇದು ಅಪೂರ್ವವಾಗಿದೆ. ಗ್ರಂಥರಚನೆಯ ಕಾಲ, ಗ್ರಂಥಕಾರನ ಹೆಸರು, ಗ್ರಂಥದ ಮೂಲ ಈ ಅಂಶಗಳಲ್ಲಿ ಇದು ನಿರ್ಧಾರವನ್ನು ಕೆಣಕಿ ನಿಂತಿದೆ. 'ವಡ್ಡಾರಾಧನೆ' ಎಂಬುದು ಇದರ ಹೆಸರು ಹೌದೇ ಎಂಬ ವಿಷಯವೂ ವಾದಗ್ರಸ್ತವಾಗಿದೆ. ಇದರ ಅಪೂರ್ವತೆಯನ್ನೂ ಸ್ವಾರಸ್ಯವನ್ನೂ ಲಕ್ಷಿಸಿ ಚಾರಿತ್ರಿಕ ವಿಷಯಗಳನ್ನು ಕೆಲಮಟ್ಟಿಗೆ ವಿಸ್ತಾರವಾಗಿ ಚರ್ಚಿಸುವುದು ಅಗತ್ಯ.

ವಡ್ಡಾರಾಧನೆಯ ಕಾಲ

ಮೊದಲು ಇದರ ಕಾಲವಿಚಾರವನ್ನು ಎತ್ತಿಕೊಳ್ಳೋಣ. ಗ್ರಂಥದಲ್ಲಿ ಎಲ್ಲಿಯೂ ನೇರವಾದ ಕಾಲನಿರ್ದೇಶ ಇಲ್ಲವೆ ಪರ್ಯಾಯವಾಗಿ ಕಾಲವನ್ನು ಸೂಚಿಸುವ ವ್ಯಕ್ತಿನಿರ್ದೇಶ ಎರಡೂ ಇಲ್ಲ. ಬೇರೆ ಒಳಹೊರಗಿನ ಪ್ರಮಾಣಗಳಿಂದ ನಿರ್ಣಯಿಸಬೇಕಾಗಿದೆ. ಕವಿಚರಿತೆಕಾರರು ಪಾಠಕರನ್ನು ಅನುಸರಿಸಿ 'ರೇವಾಕೋಟ್ಯಾಚಾರ್ಯನ ಈ ಗ್ರಂಥ ಸು. ೧೧೮೦ರಲ್ಲಿ ರಚಿತವಾದದ್ದು' ಎಂದು ಹೇಳಿದರು.[1] ಸಮಗ್ರ ಗ್ರಂಥವು ಪ್ರಕಟವಾದಂತೆ ಬೇರೆ ಅಭಿಪ್ರಾಯಗಳು ತಲೆಯೆತ್ತಿದುವು. ಇದು ಭಾಷೆಯ ದೃಷ್ಟಿಯಿಂದ ೧೦ನೆಯ ಶ.ದ ಗ್ರಂಥವೆಂದು ಒಂದು ಅಭಿಪ್ರಾಯವಾಯಿತು. ಅದೇ ದೃಷ್ಟಿಯಿಂದಲೇ ೬ನೆಯ ಶ.ಕ್ಕಿಂತ ಈಚೆಯದಲ್ಲ ಎಂದು ಶ್ರೀ. ಗೋವಿಂದ ಪೈಗಳು ಅಭಿಪ್ರಾಯಪಟ್ಟರು. ಆಮೇಲೆ ೯ನೆಯ ಶ.ದ ತರುವಾಯ ಬಹುಶಃ ೧೧ನೆಯ ಶ.ದಲ್ಲಿ ರಚಿತವಾಗಿರಬಹುದೆಂದು ಶ್ರೀ. ಉಪಾಧ್ಯೆಯವರು ತೋರಿದರು. 'ವಡ್ಡಾರಾಧನೆ'ಗೆ ಅತ್ಯಂತ ಪ್ರಾಚೀನತೆಯನ್ನು ದೊರಕಿಸಿಕೊಟ್ಟ ಶ್ರೀ. ಗೋವಿಂದ ಪೈಗಳ ಅಭಿಪ್ರಾಯವು ಕುತೂಹಲಜನಕವಾಗಿದೆ. ಅವರ ಪ್ರಮಾಣಗಳನ್ನು ಮೊದಲು ಸಂಕ್ಷೇಪಿಸುತ್ತೇವೆ: (೧) ದೀನಾರ, ದಮ್ಮ ಎಂಬ ರೋಮಿಾಯ ಹಾಗೂ ಗ್ರೀಕ್ ನಾಣ್ಯಗಳ ಉಲ್ಲೇಖವು ಈ ಗ್ರಂಥದಲ್ಲಿದೆ. ಈ ನಾಣ್ಯಗಳು ವಿದೇಶೀಯ ಹೆಸರಿನಲ್ಲಿ ಉತ್ತರಾಪಥದಲ್ಲಿ ಚಲಾವಣೆಯಲ್ಲಿದ್ದ ಕಾರಣ ಇದು ಉತ್ತರಾಪಥದ ಯಾವೊಂದು ಪ್ರಾಕೃತಭಾಷೆಯ ಮೂಲಗ್ರಂಥದಿಂದ ಕನ್ನಡಿಸಲ್ಪಟ್ಟುದಾಗಿರಬೇಕು. ಆ ಪ್ರಾಕೃತ ಗ್ರಂಥವು ಕ್ರಿ.ಶ. ೨ನೆಯ ಶತಮಾನ ಇಲ್ಲವೆ ಅದರೀಚೆ ರಚಿತವಾಗಿರಬೇಕು. ಯಾಕೆಂದರೆ ಆ ಮೊದಲು ಆಯಾ ನಾಣ್ಯಗಳು ಬಳಕೆಯಲ್ಲಿರಲಿಲ್ಲ. (೨) ಇದರಲ್ಲಿಯ ಭದ್ರಬಾಹುಭಟ್ಟಾರರ ಕಥೆಯಲ್ಲಿ ಶ್ರವಣಬೆಳ್ಗೊಳವನ್ನು 'ಕಟ್ವಪ್ಪ' ಎಂದು ಕರೆದಿದೆ. ಇದು ಆ ಸ್ಥಳಕ್ಕೆ ಅತಿಪ್ರಾಚೀನವಾದ ಹೆಸರು. ಪ್ರಾಕೃತ 'ವೊಡ್ಡಾರಾಧಣ' ದಲ್ಲಿಯೂ ಇದನ್ನೇ ಹೇಳಿರಬೇಕು. ಶ್ರವಣಬೆಳ್ಗೊಳದ ಶಾಸನಗಳಲ್ಲಿ ಕಟ್ವಪ್ಪನ್ನು

---

1 ಕ.ಚ., ಸಂ. ೧, ಪು ೨೮೨.

‘ಬೆಳ್ಗೊಳ’ ಎಂದು ಕ್ರಿ.ಶ. ೬೫೦ರ ಶಾಸನವೊಂದರಲ್ಲಿ ಮೊದಲು ಹೇಳಲಾಗಿದೆ. ವಡ್ಡಾರಾಧನೆ ಅದಕ್ಕಿಂತ ಹಳೆಯ ಪ್ರಯೋಗವನ್ನು ಬಳಸಿರುವುದರಿಂದ ಅದಕ್ಕೆ ಹಿಂದೆ ರಚಿತವಾದದ್ದೆಂಬುದನ್ನು ತಿಳಿಯಬಹುದು. (೩) ಈ ಗ್ರಂಥದಲ್ಲಿ ‘ಇತರತ್ರ ಕಾಣ-ಬಾರದ, ಅಥವಾ ಬಂದರೂ ಬಹಳ ಹಳೆಯ ಕನ್ನಡಗ್ರಂಥಗಳಲ್ಲಿ ಇಲ್ಲವೆ ಶಾಸನಗಳಲ್ಲಿ ಮಾತ್ರ ದೊರೆವ, ಅತಏವ ಅತಿ ವಿರಳವಾಗಿರುವ, ಈ ಕೆಲವು ವಿಶೇಷ ಪ್ರಯೋಗ-ಗಳಿವೆ: ಕಳ್ಪದ, ಕಲ್ಪಿಸು, ಬಡ್ಡಿಸು, ಬರ್ದರ್–ಬಟ್ಟ್ದೆಂ, ಕೇ (ಧಾತು), ಕೇಳ್ಪಿ, ಲುಂದು, ಕೆಡು (ಬೀಳು ಎಂಬ ಅರ್ಥದಲ್ಲಿ), ತೊಡು–ತೊಟ್ಟು (ಪ್ರಾರಂಭಿಸು ಎಂಬ ಅರ್ಥದಲ್ಲಿ), ಕೊಳ್ (ಕಡಿ-ಕಚ್ಚು ಎಂಬರ್ಥದಲ್ಲಿ), ಇರ್ದು-ಇಟ್ದು, ಪೊರ್ದು-ಪೊಟ್ದು, **ಬುದ್ಧಿಯೊಡೆಯು** ಮುಂತಾದ ವಿವಿಧರೂಪಗಳು, ಮುಚ್ಚೆಪಟ್ಟಂ, ಅನುಭವಿಸುತ್ತ-**ಯಿರೆ**, ಅನುಭವಿಸುತ್ತಿರೆ’ ಇತ್ಯಾದಿ.[1] ಅದರಲ್ಲಿ ದೀರ್ಘಾದೇಶವುಳ್ಳ ನಾಮಪದ–ಕ್ರಿಯಾಪದಗಳು ಕಾಣವೆಂದು ಅದು ಕ್ರಿ.ಶ. ೭೦೦ಕ್ಕಿಂತ ಹಿಂದಿನವೆಂಬ ಶಾಸನ-ಗಳಿಗಿಂತ ಈಚೆಯದೆಂದು ಆಗದು. ಏಕೆಂದರೆ ಆ ಶಾಸನಗಳಲ್ಲಿಯೇ ‘ಮುಡಿಪ್ಪಿದಾರ್’ ಜೊತೆಗೆ ‘ಮುಡಿಪ್ಪಿದರ್’ ಎಂದೂ ಇದೆ. ಆ ಪ್ರಯೋಗವು ಆ ಶಾಸನಗಳ ಶತಮಾನ-ದಲ್ಲಿ ತಕ್ಕಷ್ಟಾದರೂ ನಷ್ಟವಾಗುತ್ತ ಬಂದಿರಬೇಕು. ಅದರ ಮೂಲಪ್ರತಿ ಹಲವು ಸಂಪ್ರತಿಕಾರರ ಕೈಗೆ ಸಿಕ್ಕು ಎಷ್ಟೋ ಮಾರ್ಪಾಡು ಹೊಂದಿರಲೂ ಬೇಕು.

ಶ್ರೀ. ಉಪಾಧ್ಯೆಯವರು ಈ ವಿಷಯದ ಚರ್ಚೆಗೆ ಮಹತ್ವದ ಕಾಣಿಕೆ ಸಲ್ಲಿಸಿ-ದ್ದಾರೆ.[2] ಅವರ ವಿಚಾರಸರಣಿ ಹೀಗಿದೆ: (೧) ವಡ್ಡಾರಾಧನೆಯಲ್ಲಿ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡದಲ್ಲಿಯ ಹಲವು ಅವತರಣಿಕೆಗಳಿದ್ದು, ಅವುಗಳಲ್ಲಿ ಕೆಲವನ್ನು ಮೂಲಪ್ರಾಕೃತ ಗ್ರಂಥದಿಂದ ಎತ್ತಿಕೊಂಡಿರಬಹುದು, ಕೆಲವನ್ನು ಗ್ರಂಥಕಾರನು ತಾನಾಗಿ ಸೇರಿಸಿರಬಹುದು. ಇವುಗಳ ಆಕರಶೋಧನೆ ಕಾಲನಿರ್ಣಯಕ್ಕೆ ಸಹಾಯಕ-ವಾಗಿದೆ. ಶೋಧಿತವಾದ ಹಲವು ಪದ್ಯಗಳು ಶಿವಕೋಟಿಯ ಭಗವತೀ ಆರಾಧನ, ಪ್ರವಚನಸಾರ, ರತ್ನಕರಂಡಕ, ಭರ್ತೃಹರಿಶತಕಗಳು ಇತ್ಯಾದಿಯಿಂದ ಎತ್ತಿದುವಾಗಿವೆ. ಕ್ರಿ.ಶ. ಆರಂಭದಿಂದ ಮುಂದಿನ ಕಾಲದಲ್ಲಿ ಆಯಾ ಗ್ರಂಥಗಳು ರಚಿತವಾದುವು. ವಿಶೇಷವಾಗಿ ೭ನೆಯ ಶ.ದ ಜಟಾಸಿಂಹನಂದಿಯ ವರಾಂಗಚರಿತೆ ಹಾಗೂ ೯ನೆಯ ಶ.ದ ಗುಣಭದ್ರನ ಉತ್ತರಪುರಾಣ ಇವನ್ನು ಗಮನಿಸಬೇಕು. ಇವುಗಳಿಂದ ಆಯ್ದುಕೊಂಡ ಅವತರಣಿಕೆಗಳು ವಡ್ಡಾರಾಧನೆಯಲ್ಲಿ ಇದ್ದಕಾರಣ ಅವು ಇನ್ನೂ ಪ್ರಾಚೀನವೆಂದು ಯಾರಾದರೂ ತೋರಿಸಿ ಕೊಡುವವರೆಗೆ, ‘ವಡ್ಡಾರಾಧನೆ’ ೬ನೆಯ ಶ.ಕ್ಕೆ ಹಿಂದಿನದಾಗದು ಮಾತ್ರವಲ್ಲ, ೯ನೆಯ ಶ.ದ ತರುವಾಯದ್ದಾಗುತ್ತದೆ.

---

1 ಗೋವಿಂದ ಪೈ : ಮೂರು ಉಪನ್ಯಾಸಗಳು, ಪು. ೧೧೫.

2 A. N. Upadhye: Introduction to Brhat Katha-Kosa, pp. 63–72

ಗುಣಭದ್ರನು ಮಹಾಪುರಾಣದಲ್ಲಿಯ ತನ್ನ ರಚನೆಯನ್ನು ಮುಗಿಸಿದ್ದು ಕ್ರಿ.ಶ. ೮೯೮ ಎಂಬುದು ಸ್ಪಷ್ಟವಾಗಿದೆ. 'ವಡ್ಡಾರಾಧನೆ'ಯ ಉಪಲಬ್ಧವಾದ ತೀರ ಹಳೆಯ ಮಾತೃಕೆ ಕ್ರಿ.ಶ. ೧೪೦೩ರ ಕಾಲದ್ದಾಗಿದೆ. ಆದ್ದರಿಂದ ೮೯೮ರಿಂದ ೧೪೦೩ರ ನಡುವಿನ ಗಡುವಿನಲ್ಲಿ ಅದು ರಚಿತವಾಗಿರಬೇಕು. (೨) ಶೈಲಿ ಹಾಗೂ ವ್ಯಾಕರಣಪ್ರಕ್ರಿಯೆಗಳನ್ನು ಕೆಲಮಟ್ಟಿಗೆ ನೋಡಿದರೆ ಇದು ೯೭೮ರ ಚಾವುಂಡರಾಯಪುರಾಣಕ್ಕಿಂತ ಅನಂತರದ್ದೂ ನೋಂಪಿಯ ಕಥೆಗಳಿಗಿಂತ ಮುಂಚಿನದೂ ಆಗಿದೆ. ಇದರಲ್ಲಿ ಎಷ್ಟೋ ಪ್ರಾಚೀನವಾದ ವ್ಯಾಕರಣರೂಪಗಳಿವೆ. ಅವುಗಳಿಂದಲೇ ಇದು ಅತಿಪ್ರಾಚೀನವೆಂದು ಸಾಧಿಸಲಾಗದು. ಪ್ರಾಚೀನರೂಪಗಳ ಪ್ರಯೋಗದಲ್ಲಿ ಗ್ರಂಥಕಾರನಿಗಿದ್ದ ನೈಪುಣ್ಯವನ್ನು ಮಾತ್ರ ಇದು ಸೂಚಿಸುತ್ತಿರಬಹುದು. ಶ್ರೀ. ಗೋವಿಂದ ಪೈಗಳಂತೆ ಕೇವಲ ಇಂಥ ರೂಪಗಳನ್ನು ಕಂಡುಹಿಡಿಯುವುದಕ್ಕಿಂತ ಅವು ಎಲ್ಲಿಯವರೆಗೆ ಪ್ರಚಲಿತವಾಗಿದ್ದುವೆಂಬುದನ್ನು ಅರಿಯಬೇಕು. ಇದರಿಂದ ತಾತ್ಪೂರ್ತಿಕವಾಗಿ ಮೇಲಿನ ಕಾಲಾವಧಿಯನ್ನು ಗೊತ್ತು-ಮಾಡಲು ಬಂದೀತು. ಈ ಗ್ರಂಥದಲ್ಲಿ ಪಕಾರವು ಎಲ್ಲಿಯೂ ಹಕಾರವಾಗದೆ ಇದ್ದಂತಿದೆ. ೧೧ನೆಯ ಶ.ದ ತರುವಾಯ ಕ್ರಮೇಣ ಪಕಾರವು ಹಕಾರವಾಯಿತೆಂದು ಶಾಸನಗಳು ತಿಳಿಸುತ್ತವೆ. ೧೨–೧೩ನೆಯ ಶ.ಗಳಲ್ಲಿ ಇರ್ದ್ದ, ಇರ್ಪೊರ್ ಇವುಗಳಲ್ಲಿಯ ರಕಾರ ಲೋಪವು ಆಗುತ್ತ ನಡೆಯಿತು. 'ಪೊರ್ದಿದೊಂ, ಕಳ್ವೊಂ' ಈ ಮುಂತಾದ ತೀರ ಹಳೆಯ ರೂಪಗಳು ೧೧ನೆಯ ಶ.ದನಂತರ ಅಪರೂಪವಾದುವು. ಅಂತೇ ಕ್ರಿ.ಶ. ೮೯೮ರಿಂದ ೧೪೦೩ರ ಹರವಾದ ಗಡುವಿನಲ್ಲಿ ಬಹುಶಃ ೧೧ನೆಯ ಶ.ದಲ್ಲಿ ಈ ಗ್ರಂಥ-ರಚನೆಯಾಗಿರಬೇಕು.

ಹಳೆಯ ವ್ಯಾಕರಣರೂಪಗಳ ಅಸ್ತಿತ್ವ, 'ಚಾವುಂಡರಾಯಪುರಾಣ'ದ ಶೈಲಿ-ಯೊಡನೆ ಸಾಮ್ಯ, ಹರಿಷೇಣನ ಕಥಾಕೋಶದೊಡನೆ ಕಥಾಸಾಮ್ಯ ಈ ಕಾರಣಗಳಿಂದ ಇದು ಕ್ರಿ.ಶ. ೯೪೦ರಲ್ಲಿ ಬರೆದುದೆಂದು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಮೊದಲು ಅಭಿಪ್ರಾಯಿಸಿದ್ದರು. ಇತ್ತೀಚೆ ಇದೇ ಅಭಿಪ್ರಾಯವನ್ನು ಸ್ವಲ್ಪ ಮಾರ್ಪಡಿಸಿ-ಕೊಂಡಿದ್ದಾರೆ. ಅದು ಹೀಗೆ: ಶ್ರೀ. ಉಪಾಧ್ಯೆ ಅವರ ಪ್ರಕಾರ ಇದು ಕ್ರಿ.ಶ. ೮೯೮ರ ಈಚೆಗೆ ಹುಟ್ಟಿರಬೇಕು. ಆ ಶ್ಲೋಕ ಗುಣಭದ್ರನಿಗಿಂತ ಪ್ರಾಚೀನವೆಂದು ಸ್ಥಾಪಿಸುವ ವರೆಗೆ ಇದೇ ಸರಿಯೆಂದು ಹೇಳಲೇಬೇಕು. ಗುಣಭದ್ರನು ಪ್ರಾಚೀನರಿಂದ ಆಗಾಗ ಶ್ಲೋಕಗಳನ್ನು ಅನುವಾದ ಮಾಡುತ್ತಾನೆಂದು ಕೆಲವರ ಹೇಳಿಕೆ. ಇದನ್ನು ಇನ್ನೂ ಸಂಶೋಧಿಸಬೇಕಾಗಿದೆ. ಸದ್ಯಕ್ಕೆ ಇದರ ಕಾಲ ಕ್ರಿ.ಶ. ೯೦೦–೧೦೭೦ರ ಒಳಗೆ ಇರಬೇಕು. ಶಾಂತಿನಾಥನು ತನ್ನ 'ಸುಕುಮಾರಚರಿತೆ'(೧೦೭೦)ಯಲ್ಲಿ 'ವಡ್ಡಾರಾಧನೆ'ಯಿಂದ ಎತ್ತಿಕೊಂಡ ಭಾಗಗಳಿವೆ. ಇದೊಂದು ವಿಶ್ವಸನೀಯವಾದ ಬಾಹ್ಯಪ್ರಮಾಣ. ೧೦–೧೧ನೆಯ ಶ.ಗಳ ನಡುವಿನ ಕಾಲದಲ್ಲಿ ಇದು ಯಾವಾಗ ರಚಿತವಾಯಿತೆಂಬುವೇ ಮುಖ್ಯ ಪ್ರಶ್ನೆ. ಇದರಲ್ಲಿ ಬರುವ ಪ್ರಯೋಗಗಳ ಆಧಾರದ ಮೇಲೆ ಇದು ಪಂಪನಿ-ಗಿಂತಲೂ ಹಳೆಯದೆಂದು ಹೇಳಬಹುದು. ಬಹುಶಃ ಇದರ ರಚನೆಯ ಕಾಲವು

ಕ್ರಿ.ಶ. ೯೨೦ ಇರಬಹುದು. ಪೂರ್ವದ ಹಳಗನ್ನಡಕ್ಕೆ ವಿಶಿಷ್ಟವಾದ ಪ್ರಯೋಗಗಳು ಈ ಗ್ರಂಥದಲ್ಲಿದ್ದುವೆಂದೂ ಈಚಿನ ಸಂಪ್ರತಿಕಾರರು ಅವನ್ನು ತಿದ್ದಿ ಹಳಗನ್ನಡವಾಗಿಸಿದ್ದಾರೆಂದೂ ಹೇಳಲು ಆಧಾರಗಳುಂಟು. ಸು. ಕ್ರಿ.ಶ. ೮೫೦ರಲ್ಲಿ ರಚಿತವಾದ ಜಿನಸೇನಾಚಾರ್ಯನ 'ಪೂರ್ವಪುರಾಣ'ದ ಪದ್ಯಗಳನ್ನು 'ವಡ್ಡಾರಾಧನೆ'ಯಲ್ಲಿ ಕಾಣಬಹುದಾದ್ದರಿಂದ ಅದು ಸು. ಕ್ರಿ.ಶ. ೮೫೦ಕ್ಕೆ ಹಿಂದೆ ಇರಲಾರದು ಎಂದು ಪ್ರೊ. ಕೆ. ಜಿ. ಕುಂದಣಗಾರರು ಅಭಿಪ್ರಾಯಪಡುತ್ತಾರೆ.

ಈ ಅಭಿಪ್ರಾಯಗಳ ಚರ್ಚೆಯಲ್ಲಿ ಒಂದೆರಡು ಸಾಮಾನ್ಯ ಪ್ರಶ್ನೆಗಳು ಉದ್ಭೂತವಾಗುತ್ತವೆ; ನಿರ್ಣಯಕ್ಕೆ ಬಾಧಕವಾದ ಅಡ್ಡಿಗಳು ಉಪಸ್ಥಿತವಾಗುತ್ತವೆ. ಯಾವೊಂದು ಕಥೆಗೆ ನಿಕಟ ಸಂಬಂಧವಿಲ್ಲದ ಅವತರಣಿಕೆಗಳು ಸಾಮಾನ್ಯೋಕ್ತಿರೂಪದಲ್ಲಿದ್ದರೆ ಅವನ್ನು ಅದೇ ಕಥನಕವಿ ಸೇರಿಸಿರುವನೆಂದು ಹೇಳಬೇಕೇ? ಆ ಮೇಲಿನ ಸಂಪಾದನಕಾರರು ಸೇರಿಸಿರಲಾರರೇ? ಭಾಷಾಶೈಲಿ ಎಂಬುದು ಕಾಲನಿರ್ಣಯದಲ್ಲಿ ಎಷ್ಟು ನಂಬತಕ್ಕ ಪ್ರಮಾಣ? ಸಂಪ್ರತಿಕಾರರ ಕೈವಾಡವು ಸ್ಪಷ್ಟವಾಗಿರುವಾಗ ಈ ಪ್ರಮಾಣವು ಇನ್ನೂ ಅನಿಶ್ಚಿತವಾಗದೇ? ಹಳೆಯ ರೂಪಗಳಿದ್ದ ಮಾತ್ರಕ್ಕೆ ಒಂದು ಗ್ರಂಥವು ಹಳೆಯ ಕಾಲದ್ದೇ? ಈ ಪ್ರಶ್ನೆಗಳನ್ನು ಗಮನಿಸಿದರೆ 'ವಡ್ಡಾರಾಧನೆ'ಯ ಕಾಲನಿರ್ಣಯವು ಸದ್ಯಃಸ್ಥಿತಿಯಲ್ಲಿ ತಾತ್ಪೂರ್ತಿಕವೇ ಹೊರತು ಕೊನೆಯ ಮಾತಾಗಲಾರದು. ಈ ಭೂಮಿಕೆಯನ್ನಿಟ್ಟುಕೊಂಡು ಕೆಳಗಿನ ಅಂಶಗಳನ್ನು ನಿರವಿಸಲಾಗಿದೆ. ಶ್ರೀ. ಉಪಾಧ್ಯೆ ಮತ್ತು ಶ್ರೀ. ಡಿ.ಎಲ್. ನರಸಿಂಹಾಚಾರ್ಯರು ಕಂಡುಹಿಡಿದ ಅಂತರ್ಬಾಹ್ಯ ಪ್ರಮಾಣಗಳಿಂದ ಕ್ರಿ.ಶ. ೯೦೦ ಹಾಗೂ ೧೦೭೦ ಇವು 'ವಡ್ಡಾರಾಧನೆ'ಯ ಕಾಲದ ಕೆಳಗಿನ ಮತ್ತು ಮೇಲಿನ ಗಡುವಾಗುತ್ತವೆ. ಶ್ರೀ. ಗೋವಿಂದ ಪೈಗಳು ತೋರಿದ ಶೈಲಿಪ್ರಮಾಣ ನಿರ್ವಿವಾದವಾಗಿದ್ದರೆ ಕೆಳಗಿನ ಗಡುವನ್ನು ಇನ್ನೂ ಕೆಳಗೆ ಸರಿಸಲು ಶ್ರೀ. ಉಪಾಧ್ಯೆಯವರ ಆಂತರಿಕ ಪ್ರಮಾಣವನ್ನು ಕಡೆಗಣಿಸಬಹುದಾಗಿತ್ತು. ಯಾಕೆಂದರೆ ಆ ಅವತರಣಿಕೆಯನ್ನು ಗುಣಭದ್ರನೇ ತನಗೆ ಪೂರ್ವಿಕರಿಂದ ತೆಗೆದುಕೊಂಡಿರುವ ಇಲ್ಲವೆ 'ವಡ್ಡಾರಾಧನೆ'ಯಲ್ಲಿ ಮುಂದೆ ಯಾರಾದರೂ ಅಳವಡಿಸಿರುವ ಸಂಭವವು ಇಲ್ಲವೆಂದಲ್ಲ. ಆದರೆ ಶೈಲಿಪ್ರಮಾಣ ನಿರ್ವಿವಾದವಾದದ್ದಲ್ಲ. ಸಾಮಾನ್ಯವಾಗಿ ಗ್ರಂಥಕಾರರು ತತ್ಕಾಲೀನ ಶೈಲಿಯನ್ನು ಅನುಸರಿಸುವರಾದರೂ ತಮಗಿಂತ ಹಿಂದಿನ, ತೀರ ಹಿಂದಿನ ಶೈಲಿಯನ್ನು ಹಲಕೆಲವರು ಅನುಸರಿಸಿದ್ದಾರೆ, ಇಲ್ಲವೆ ಅದರ ಕೆಲವು ಪ್ರಯೋಗಗಳನ್ನಾದರೂ ತಮ್ಮ ಶೈಲಿಯಲ್ಲಿ ತಂದುಕೊಂಡಿದ್ದಾರೆ. ತಮ್ಮ ಕೃತಿ ಪ್ರಾಚೀನ, ಪ್ರೌಢವೆಂದು ತೋರಲು ಹೀಗೆ ಮಾಡುವುದುಂಟು. 'ಕಟ್ಬಪ್ಪು' ಎಂಬುದನ್ನು 'ಬೆಳ್ಗೊಳ'ದ ಬದಲು ಬಳಸಿದ್ದು ಸಾಮಾನ್ಯವಾಗಿ ಹಳಮೆಗೆ ಗುರುತು. ಆದರೆ ಕ್ರಿ.ಶ. ಸು. ೭೦೦ರ ಶಾಸನಗಳಲ್ಲಿ ಬೆಳ್ಗೊಳ, ಕಟ್ಬಪ್ಪು ಇವೆರಡೂ ದೊರೆಯುತ್ತವೆ ಎಂಬುದನ್ನೂ ಗಮನಿಸಬೇಕು. ಇಲ್ಲಿ ಹಳಮೆಯ ಗುರುತಾಗಲಿ ಎಂದೇ ಇತರ ಪ್ರಯೋಗಗಳೊಡನೆ ಹೆಚ್ಚು ಪ್ರಾಚೀನವಾದ 'ಕಟ್ಬಪ್ಪು' ಈ ಪದವನ್ನು ಬಳಸಿರು-

ವುದು ಸಾಧ್ಯ. ಅಲ್ಲದೆ ಹಳೆಯ ರೂಪಗಳು ಯಾವೊಂದು ಕಾಲದಲ್ಲಿ ವಿಶೇಷ ಪ್ರಚಾರದಲ್ಲಿದ್ದು ಮುಂದಿನ ಕಾಲದಲ್ಲಿಯೂ ಒಂದು ಅವಧಿಯ ವರೆಗೆ ಅವಶೇಷಗಳಾಗಿ ತಲೆದೋರುತ್ತವೆ. ಹಳೆಯ ರೂಪಗಳ ಜೊತೆಯಲ್ಲಿ ಹೊಸ ರೂಪಗಳೂ ಕಂಡುಬಂದಲ್ಲಿ ಗ್ರಂಥವು ಹಳೆಯ ರೂಪಗಳನ್ನು ಒಳಗೊಂಡ ಹೊಸ ಕಾಲದ ಕೃತಿಯಾಗುತ್ತದೆ. ವಡ್ಡಾರಾಧನೆಯ ಮೂಲ ಹಾಗೂ ಶುದ್ಧಪಾಠವು ಸಂಪೂರ್ಣವಾಗಿ ನಿರ್ಧಾರವಾಗದಂತೆ ಇರುವುದು ಅದರ ಕಾಲವಿಷಯಕವಾದ ನಿಷ್ಕರ್ಷೆಗೆ ದೊಡ್ಡ ಆತಂಕವಾಗಿದೆ. ಒಂದು ಕಡೆ ತೀರ ಹಳೆಯ ಪ್ರಯೋಗಗಳನ್ನು ಅಂದರೆ ಪೂರ್ವದ ಹಳಗನ್ನಡರೂಪಗಳನ್ನು ಹಳಗನ್ನಡಕ್ಕೆ ಸಂಪ್ರತಿಕಾರರು ತಿರುಗಿಸಿರಬಹುದೆಂದು ತೋರಿದರೆ ಇನ್ನೊಂದು ಕಡೆಗೆ ಹಳಗನ್ನಡ ಪ್ರಯೋಗಗಳನ್ನು ಹೊಸಗನ್ನಡಕ್ಕೆ ತಿರುಗಿಸಿರಬಹುದೆಂದು ಅನುಮಾನಿಸಲು ಅವಕಾಶವಿದೆ.

ಇದೆಲ್ಲವನ್ನು ಮನದಂದು ಶೈಲಿಯ ಹೊರತು ಬೇರೆ ಪ್ರಮಾಣವಿಲ್ಲವೆಂಬ ಕಾರಣದಿಂದ, [‘ವಡ್ಡಾರಾಧನೆ’ ಪಂಪನ ಹತ್ತಿರದ ಕಾಲದ್ದಾದರೂ ಪಂಪಪೂರ್ವಯುಗದ ಗ್ರಂಥವಾಗಿರಬೇಕೆಂದೂ ಶ್ರೀ. ಡಿ. ಎಲ್. ನರಸಿಂಹಾಚಾರ್ಯರ ಕಾಲನಿರ್ಣಯವು ಸರಿಯಾದುದಿರಬೇಕೆಂದೂ ನಾವು ಗ್ರಹಿಸಿದ್ದೇವೆ.] ಈ ಗ್ರಹಿಕೆಗೆ ಕಾರಣಗಳಿವು: (೧) ಪೂರ್ವದ ಹಳಗನ್ನಡಕ್ಕೆ ವಿಶಿಷ್ಟವಾದ ಕೆಲವಾದರೂ ಪ್ರಯೋಗಗಳು ತಿರುತಿರುಗಿ ನಿಯತವಾಗಿ ಈ ಗ್ರಂಥದಲ್ಲಿ ಬಂದಿವೆಯಾದರೂ ಬೇರೆ ಕೆಲವು ನಿಯತವಾಗಿ ಬಂದಿಲ್ಲ. ‘ಎಂಬೊನಾನ್’ ಎಂಬ ಕ್ವಚಿತ್ಪ್ರಯೋಗ ಬಿಟ್ಟರೆ ‘ದೇಗುಲಮಾನ್, ಏಱಿದಾರ್, ತಪ್ಪಾದೆ’ ಈ ತೆರದ ದೀರ್ಘೀಕರಣವು ಎಲ್ಲಿಯೂ ಇಲ್ಲ. ಇದರಲ್ಲಿ ಸಂಪ್ರತಿಕಾರರ ಕೈಚಳಕ ಇದೆಯೆನ್ನಬಹುದಾದರೂ ಎಲ್ಲ ಕಡೆಗೆ ಅವರನ್ನು ಹೊಣೆಗಾರರನ್ನಾಗಿ ಮಾಡಲು ಬಾರದು. ಸಪ್ತಮೀ ಪ್ರತ್ಯಯವು ಪೂರ್ವದ ಹಳಗನ್ನಡದಲ್ಲಿ ‘ಉಳ್’ ಎಂಬುದು ಹೆಚ್ಚಾಗಿ ವಾಡಿಕೆಯಾಗಿದೆ. ಇಲ್ಲಿ ‘ಒಳ್, ಒಳಗೆ’ ಇವು ಪ್ರಯುಕ್ತವಾಗಿವೆ (ಭೋಗದೊಳ್, ನೆಲಮನೆಯೊಳಗೆ, ದಿವಸದಿಂದೊಳಗೆ). ‘ಉಳ್’ ಎಂಬುದು ಎಲ್ಲಿಯೂ ಕಾಣದೊರೆಯುವುದಿಲ್ಲ. (೨) ಇಲ್ಲಿ ದೊರೆತ ಹಳೆಯ ಶಬ್ದಗಳೂ ರೂಪಗಳೂ ಗ್ರಂಥವು ಅತಿ ಪ್ರಾಚೀನವಾಗಿರಬಹುದೆಂಬ ಎನಿಸಿಕೆಗೆ ಎಡೆಯನ್ನುಂಟುಮಾಡುತ್ತವೆಂಬುದು ನಿಜ. ಈ ವಿಷಯದಲ್ಲಿ ಶ್ರೀ. ಗೋವಿಂದ ಪೈಗಳು ಮಾಡಿದ ಪೃಥಕ್ಕರಣೆ ಯೋಗ್ಯವೇ ಆಗಿದೆ. ಅದರಿಂದ ಅವರು ಮಾಡಿಕೊಂಡ ಅಭಿಪ್ರಾಯವು ಸಮರ್ಥನೀಯವಿರದಿದ್ದರೂ ಸಹಜವಾಗಿದೆ. ಗ್ರಂಥಕ್ಕೆ ಪ್ರಾಚೀನತೆಯನ್ನು ಕಲ್ಪಿಸಬೇಕೆಂಬ ಉದ್ದೇಶ ಇಲ್ಲವೆ ಪೂರ್ವಗ್ರಹದಿಂದ ಅವರು ಸಾಮಗ್ರಿಯನ್ನು ಕೂಡಿಸಿರುವರೆಂಬ ಶ್ರೀ. ಉಪಾಧ್ಯೆಯವರ ಮಾತನ್ನು ನಾವು ಒಪ್ಪುವುದಿಲ್ಲ. ಆ ಮಾತು ಅನಾವಶ್ಯಕವಾಗಿತ್ತೆಂದು ನಮ್ಮ ಮತ. ಶ್ರೀ. ಗೋವಿಂದ ಪೈಗಳು ಹೇಳಿದಂತೆ ‘ಒಡೆಯ’ ಎಂಬ ಉತ್ತರಪದವುಳ್ಳ ಹಲವಾರು ಪ್ರಯೋಗಗಳನ್ನು ‘ವಡ್ಡಾರಾಧನೆ’ ತೀರ ಸಹಜವಾಗಿ ಉಪಯೋಗಿಸಿದೆ. ಅಪರೂಪವಾಗಿ ಪಂಪಾದಿಗಳಲ್ಲಿ ಇದು ಬಂದಿದೆ. ಕೇಶಿ-

ರಾಜನೂ ಇದಕ್ಕೆ ಮನ್ನಣೆಕೊಟ್ಟಿದ್ದಾನೆ. ಆದರೆ ಯಾವ ಕನ್ನಡಗ್ರಂಥದಲ್ಲಿಯೂ ಇಷ್ಟು ತರತರದಿಂದ ಇಷ್ಟು ಸಹಜವಾಗಿ ಈ ಪ್ರಯೋಗವಿಲ್ಲ. ಪಂಪಪೂರ್ವಯುಗದಲ್ಲಿ ಇದು ಪ್ರಚಾರದಲ್ಲಿರಬಹುದು. 'ಕವಿರಾಜಮಾರ್ಗ'ದಲ್ಲಿ ಹೇಳಲಾದ ಗ್ರಂಥಕಾರರ ಕೃತಿಗಳು ದೊರೆಯದ್ದರಿಂದ ಇದನ್ನು ಒರೆದುನೋಡಲು ಆಧಾರವಿಲ್ಲ. ಶ್ರೀ. ಗೋವಿಂದ ಪೈಗಳು ಉದಾಹರಿಸಿದ ಬೇರೆ ಪ್ರಾಚೀನ ಪ್ರಯೋಗಗಳಲ್ಲಿ 'ಕಳ್ಪದ, ಕಲ್ಪಿಸು (ಕಲ್ಪಿ), ಬಡ್ಡಿಸು, ತೊಟ್ಟು (ತೊಡು), ಕೊಳ (ಕೊಳ್)' ಈ ಬಗೆಯವು ಪಂಪಭಾರತದಲ್ಲಿಯೂ ಮುಂದಿನ ಗ್ರಂಥಗಳಲ್ಲಿಯೂ ದೊರೆಯುತ್ತವೆ. ಆದರೆ 'ಕೇ (ಧಾತು), ಕೇಳ್ಪಿ, ಇಟ್ಬು, ಪೊಟ್ಬು, ಮುಚ್ಚೆಪಟ್ಟಂ' ಈ ಮೊದಲಾದುವು ಕೇವಲ ಪ್ರಾಚೀನವಾಗಿವೆ. ಅವರು ಉದಾಹರಿಸದೆ ಉಳಿದ ಇಂಥ ಪ್ರಯೋಗಗಳಲ್ಲಿ 'ಆದಮಾನುಂ (ಇದು ಹೇರಳವಾಗಿ ಪ್ರಯುಕ್ತವಾಗಿದೆ), ನಾಡ್ಗೆ, ಪೊಟ್ರಿಱನೆ, ಸಂಜೆವಾರಿಸು' ಈ ಮುಂತಾದ ಹಲವು ಶಬ್ದಗಳೂ ರೂಪಗಳೂ ಇರುತ್ತವೆ. ಆದರೆ ಇವುಗಳ ಜೊತೆಗೆ ಪೂರ್ವದ ಹಳಗನ್ನಡದಲ್ಲಿ ಕಾಣದೊರೆಯದ ಹಾಗೂ ನೃಪತುಂಗ-ಪಂಪಾದಿಗಳಲ್ಲಿ ದೊರೆಯುವ ಪ್ರಯೋಗಗಳೂ ಸಾಕಷ್ಟಿವೆ. ಇವುಗಳಲ್ಲಿ ಹಲಕೆಲವು ಸಂಪ್ರತಿಕಾರರ ಕೈಯ ಕೇಡೆನ್ನಬಹುದಾದರೂ ಎಲ್ಲದಕ್ಕೂ ಹಾಗೆನ್ನಲಾಗದು. ಉದಾಹರಣೆಗೆ, 'ಅಪ್ಪೈ, ಇಂತೆಂಬಾ, ಎಯ್ದಿದೆ, ಪೋಲ್ವೆ, ಪೆಂಡತಿಯಪ್ಪಾ, ನೆನೆದಾ, ಅಱುವೋ, ಬಂದಿರಾ' ಈ ವಿಧ್ಯರ್ಥಕ ಮಧ್ಯಮಪುರುಷದ ರೂಪಗಳನ್ನು ನೋಡಬೇಕು. ೞಕಾರವುಳ್ಳ ರೂಪಗಳು ರಕಾರವಾದರೆ ಶೈಲಿ ಪೂರ್ವದ ಹಳಗನ್ನಡದಿಂದ ಹಳಗನ್ನಡ ಮತ್ತು ಹೊಸಗನ್ನಡಗಳಿಗೆ ಪರಿವರ್ತನಹೊಂದಿರುವುದಕ್ಕೆ ಅವು ಗುರುತು. ಅಂಥ ಪ್ರಯೋಗಗಳು 'ಬಿರ್ದು (ಬಿಟ್ಬು), ಬರ್ದಪ್ಪೆನೆ, ಬರ್ದಿ, ಎರ್ದ್ದು, ಬರ್ದುಂಕು, ಅಡ್ಡಬಿರ್ದ, ಅರ್ದು' ಇಲ್ಲಿ ದೊರೆಯುತ್ತವೆ. ಶಬ್ದರೂಪಗಳಲ್ಲಿ 'ಓಜ, ಮಾಡುವ, ಕಾರಣಮಾಗಿ, ಪಿರಿಯದು, ಬಾತಿರ್ಪುವು, ಪಚ್ಚುಗೊಡು, ಕುಂದಬೆ' ಈ ಮೊದಲಾದುವಿವೆ. 'ಕೂಸಂಬೇಡು, ಮದುವೆನಿಲ್, ಇಲ್ಲಿಂತೊಟ್ಟು, ನೀನಾರ್ಗೆ, ಪಾವುಕೊಳ, ಪಂಡಿತಿಕ್ಕೆ' ಇತ್ಯಾದಿಯಲ್ಲದೆ ವಿಧ್ಯರ್ಥದ ರೂಪಗಳು 'ಪಂಪಭಾರತ'ಕ್ಕೆ ಸರಿಸಾಟಿಯಾಗಿವೆ. ಈ ವಿವೇಚನೆಯಿಂದ ಕೇವಲ ಪ್ರಾಚೀನ, ಪ್ರಾಚೀನವಿದ್ದರೂ ಮುಂದೆ ಪ್ರಚಲಿತ ಹಾಗೂ ಅರ್ವಾಚೀನ—ಹೀಗೆ ಮೂರು ಬಗೆಯ ಪ್ರಯೋಗಗಳು 'ವಡ್ಡಾರಾಧನೆ'ಯಲ್ಲಿ ದೊರೆಯುತ್ತವೆ ಎಂದ ಹಾಗಾಯಿತು. ಪ್ರಾಚೀನ ಗ್ರಂಥದಲ್ಲಿ ಮೊದಲಿನೆರಡು ಬಗೆಯ ಪ್ರಯೋಗಗಳು ಇರುತ್ತವೆಯಾದರೂ ತುಲನಾತ್ಮಕವಾಗಿ ಅರ್ವಾಚೀನ ರೂಪಗಳಿರಲಾರವು. ಅದೇ ಅರ್ವಾಚೀನ ಗ್ರಂಥದಲ್ಲಿ ಮೊದಲಿನೆರಡು ಬಗೆಯ ರೂಪಗಳಿರಲು ಸಾಧ್ಯವಿದೆ. ಆದ್ದರಿಂದ ವಡ್ಡಾರಾಧನೆ ಪೂರ್ವದ ಹಳಗನ್ನಡ ಕಾಲದಲ್ಲಿ ರಚಿತವಾಗಿರದೆ ಹಳಗನ್ನಡ ಕಾಲದಲ್ಲಿ ಪಂಪಪೂರ್ವಕಾಲದಲ್ಲಿ ರಚಿತವಾಗಿರಬೇಕೆಂದು ತೋರುತ್ತದೆ. ಪಂಪನಿಗೆ ತೀರ ಸಮೀಪವಾಗಿದ್ದ ಕಾರಣ ಪಂಪನ ಕಾಲವೆಂದು ಹೇಳಲೂ ಬಹುದು. ಆದರೆ ಪಂಪನಿಗಿಂತ ಹಳೆಯ-

ದಾದ, ವೈಶಿಷ್ಟ್ಯಯುತವಾದ ಆದರೂ ಪಂಪನಿಗೆ ಕೆಲವಂಶಗಳಲ್ಲಿ ಸಮಾನವಾದ ಅದರ ಶೈಲಿಯ ಮೂಲಕ ಹಾಗೆ ಎಂದಿದ್ದೇವೆ. ಇಲ್ಲಿ ಒಂದು ಆಕ್ಷೇಪವನ್ನೆತ್ತಬಹುದು. ಸು. ೮ನೆಯ ಶ.ದವರೆಗೆ ಶಾಸನಪ್ರಮಾಣದಿಂದ ಪೂರ್ವದ ಹಳಗನ್ನಡ ಕಾಲವಿತ್ತೆಂದೂ ೯ನೆಯ ಶ.ದಿಂದಲಾದರೂ ಹಳಗನ್ನಡ ಕಾಲವು ಆರಂಭವಾಗಿರಬೇಕೆಂದೂ ೯ನೆಯ ಶ.ದಲ್ಲಿಯ 'ಕವಿರಾಜಮಾರ್ಗ'ವು ಸೂಚಿಸುತ್ತದೆ. ಈ ಗ್ರಂಥದ ಲಕ್ಷ್ಯ-ಲಕ್ಷಣ ಪದ್ಯಗಳಲ್ಲಿ ಪೂರ್ವದ ಹಳಗನ್ನಡದ ಪ್ರಭಾವವು ತೀರ ಕಡಿಮೆಯಾಗಿದೆ. ಹೀಗಿರುವಾಗ ಅದರ ತರುವಾಯ ೧೦ನೆಯ ಶ.ದ ಮೊದಲಲ್ಲಿ ರಚಿತವಾಗಿದ್ದ 'ವಡ್ಡಾರಾಧನೆ'ಯಲ್ಲಿ ಆ ಪ್ರಭಾವವು ಹೆಚ್ಚಾಗಿರಲು ಕಾರಣವಿಲ್ಲ, ಆದರೆ ಹೆಚ್ಚಾಗಿದ್ದುದು ಕಂಡುಬಂದಿದೆ. ಇದಕ್ಕೆ ಉತ್ತರವಿಷ್ಟೆ. ಗ್ರಂಥಸ್ಥವಾದ ಭಾಷೆಯಲ್ಲಿ ಕಾಲಕ್ರಮದಿಂದ ಅವಸ್ಥಾಭೇದಗಳ ಆವಿಷ್ಕಾರವು ಸಾಮಾನ್ಯ ನಿಯಮವಾದರೂ ಅದಕ್ಕೆ ಕೆಲಮಟ್ಟಿನ ಅಪವಾದಗಳಿದ್ದೇ ಇರುತ್ತವೆ. ೧೩ನೆಯ ಶ.ದಲ್ಲಿ ಆಂಡಯ್ಯನ 'ಕಬ್ಬಿಗರಕಾವ'ವು ಅಚ್ಚಗನ್ನಡ ದೃಷ್ಟಿಯಿಂದ ಇಂಥ ಅಪವಾದಭೂತವಾದ ಪ್ರಯೋಗವಾಯಿತು. ನಡುಗನ್ನಡ-ಹೊಸಗನ್ನಡ ಕಾಲಗಳಲ್ಲಿ ಹಳಗನ್ನಡ ಗ್ರಂಥಗಳು ರಚಿತವಾದುವು. 'ವಡ್ಡಾರಾಧನೆ'ಯೂ ಬಹುಶಃ ಇದೇ ಮಾಲಿಕೆಯಲ್ಲಿ ಬರುತ್ತದೆ. ಅದರಲ್ಲಿ ಆಯಾ ಧಾರ್ಮಿಕ ಕಥೆ ಮತ್ತು ಬೋಧನೆಗಳಿಗೆ ಪ್ರಾಚೀನತೆಯ ಸ್ವರೂಪವನ್ನು ಕೊಡಲೆಂದೊ ಗದ್ಯಕಥೆಯ ಜೈನಪರಂಪರೆಯಲ್ಲಿ ಅಂಥ ಶೈಲಿಯ ಪ್ರಘಾತವಿದ್ದಿತೆಂದೊ ಪ್ರಯತ್ನಪೂರ್ವಕವಾಗಿ ಪ್ರಾಚೀನರೂಪಗಳನ್ನು ಬಳಸಿರಬೇಕು. ಅದೇ, ಬರೆವಣಿಗೆಯ ಸಹಜ ಓಘದಲ್ಲಿ ೧೦ನೆಯ ಶ.ದ ಹಳಗನ್ನಡದ ಸರಣಿ ತಲೆಯಿಕ್ಕಿದೆ. 'ಚಾವುಂಡರಾಯಪುರಾಣ'ವನ್ನು ನೋಡಿದರೆ ಕೆಲಮಟ್ಟಿಗೆ ಇದಕ್ಕೆ ನಿದರ್ಶನ ದೊರೆಯಬಹುದು. ಅದು ನಿಃಸಂಶಯವಾಗಿ ೧೦ನೆಯ ಶ.ದ ಗ್ರಂಥವಾದರೂ, ಹಳಗನ್ನಡ ಶೈಲಿಯೇ ಅದರಲ್ಲಿ ಪ್ರಮುಖವಾಗಿದ್ದರೂ, ಪೂರ್ವದ ಹಳಗನ್ನಡದ 'ಬಂದೊಂ, ಅಪ್ಪೊಂ' ಮುಂತಾದ ಕೆಲವು ವಿಶಿಷ್ಟರೂಪಗಳು ಅದರಲ್ಲಿ ಬಿಟ್ಟುಬಿಡದೆ ಬಂದಿವೆ. 'ವಡ್ಡಾರಾಧನೆ'ಯ ತರುವಾಯ ಪಂಪ, ಪೊನ್ನರು ಗ್ರಂಥ ರಚಿಸಿ ಹಳಗನ್ನಡ ಪರಂಪರೆಯನ್ನು ಸ್ಥಿರಗೊಳಿಸಿದಮೇಲೆ 'ಚಾವುಂಡರಾಯಪುರಾಣ'ವು ರಚಿತವಾದ್ದರಿಂದ 'ವಡ್ಡಾರಾಧನೆ'ಯಷ್ಟು ಪ್ರಾಚೀನ ಪ್ರಭಾವಕ್ಕೆ ಅದು ಒಳಗಾಗಲಿಲ್ಲ. 'ವಡ್ಡಾರಾಧನೆ' 'ಚಾವುಂಡರಾಯಪುರಾಣ'ದ ತರುವಾಯದ ಗ್ರಂಥವೆಂದು ಶ್ರೀ. ಉಪಾಧ್ಯೆಯವರು ಶೈಲಿಯ ಆಧಾರದಿಂದ ಹೇಳಿದ್ದಾರೆ. ಅದೇ ಆಧಾರದಿಂದ 'ಚಾವುಂಡರಾಯಪುರಾಣ'ವೇ 'ವಡ್ಡಾರಾಧನೆ'ಯ ತರುವಾಯದ್ದಿರಬಹುದೆಂದು ನಮಗೆ ತೋರುತ್ತದೆ. ಇದಕ್ಕೆ ಕಾರಣವೆಂದರೆ ಪಂಪಾದಿಗಳಿಂದ ಮಾರ್ಗಕಾವ್ಯದ ಭಾಷಾಸ್ವರೂಪವು ಸ್ಥಿರಪಟ್ಟಮೇಲೆ, 'ಚಾವುಂಡರಾಯಪುರಾಣವು' ಅದರ ಪ್ರಭಾವಕ್ಕೆ ಒಳಪಟ್ಟಮೇಲೆ, 'ವಡ್ಡಾರಾಧನೆ' ಹುಟ್ಟಿದ್ದರೆ ಅದು ಈಗಿನಷ್ಟು ಪ್ರಾಚೀನ ವರ್ಚಸ್ಸನ್ನು ತೋರುತ್ತಿರಲಿಲ್ಲ. ೧೧ನೆಯ ಶ.ದಲ್ಲಿಯೂ ಅದರಲ್ಲಿ ಹೇರಳವಾಗಿ ಪ್ರಾಚೀನರೂಪಗಳು ಬರುವ ಸಂಭವವಿತ್ತು. ಆದರೆ ಮೇಲ್ಕಾಣಿಸಿದ ಹಿನ್ನೆಲೆಯಲ್ಲಿ ಈ ಸಂಭವ ಕಡಿಮೆಯಾಗುತ್ತದೆ.

ವಡ್ಡಾರಾಧನೆಯ ಕರ್ತೃ

'ವಡ್ಡಾರಾಧನೆ' ಎಂಬ ಹೆಸರು ಈ ಗ್ರಂಥಕ್ಕೆ ವಾಡಿಕೆಯಾಗಿ ಬಂದಿದೆ. 'ಈ ಪೇಳ್ದ ಪತ್ತೊಂಬತ್ತು ಕಥೆಗಳು। ಶಿವಕೋಟ್ಯಾಚಾರ್ಯರ್ ಪೇಳ್ದ ವೊಡ್ಡಾರಾಧನೆಯ ಕವಚವು ಮಂಗಳಮಹಾಶ್ರೀ।' ಎಂಬ ಸಮಾಪ್ತಿವಾಕ್ಯವು ಒಂದು ಮೂಲಪ್ರತಿಯಲ್ಲಿದೆ. ಇನ್ನೊಂದರಲ್ಲಿ 'ಯಿಾ ಪೇಳ್ದ ಪತ್ತೊಂಬತ್ತು ಕಥೆಯ ರೇವಾ(ಶಿವ)-ಕೋಟ್ಯಾಚಾರ್ಯಪ್ಪೇಳ್ದ ವಡ್ಡಾರಾಧನೆಯ ಕವಚಮೆಂಬಧಿಕಾರಉೂ।' ಎಂದಿದೆ. ಇದರಿಂದಲೇ ಮೇಲಿನ ವಾಡಿಕೆ ಮೊದಲಾಯಿತು. ಆದರೆ ಮೊದಲಿನ ಸಮಾಪ್ತಿ-ವಾಕ್ಯದಿಂದ ಹತ್ತೊಂಬತ್ತು ಕಥೆಗಳು ಎಂಬ ಮಾತು ಬೇರೆ, ವಡ್ಡಾರಾಧನೆಯ ಕವಚ ಎಂಬ ಮಾತು ಬೇರೆಯಾಗಿದ್ದು ಅದು ಪ್ರಾಕೃತದಲ್ಲಿ ಶಿವಕೋಟ್ಯಾಚಾರ್ಯ ಬರೆದ ವಡ್ಡಾರಾಧನೆಯ 'ಕವಚ' ಎಂಬ ಅಧಿಕಾರವನ್ನು ಕುರಿತು ಹೇಳಿದ್ದೆಂದು ಶ್ರೀ. ಉಪಾಧ್ಯೆಯವರು ಪ್ರತಿಪಾದಿಸಿದ್ದಾರೆ. ಇದು ಸರಿಯಾಗಿದ್ದರೆ 'ವಡ್ಡಾರಾಧನೆ' ಕನ್ನಡಗ್ರಂಥದ ಹೆಸರಾಗದು, ಶಿವಕೋಟಿ ಅದರ ಕರ್ತೃವಲ್ಲ. ಬಹಳಾದರೆ ಇದರ ಹೆಸರು 'ವಡ್ಡಾರಾಧನೆ'ಯಾಗಬಹುದು, ಆದರೆ ಕರ್ತೃ ಯಾರೋ ಗೊತ್ತಿಲ್ಲ ಎಂದು ಅವರ ನಿರ್ಣಯ. ಆದರೆ ಮೊದಲಿನ ಸಮಾಪ್ತಿವಾಕ್ಯವನ್ನು ಅವರು ಒಡೆದು ಅರ್ಥವಿಸಿದ ರೀತಿ ನಮಗೆ ಅಷ್ಟು ಸ್ವಾಭಾವಿಕವೆನ್ನಿಸುವುದಿಲ್ಲ. ಹತ್ತೊಂಬತ್ತು ಕಥೆಗಳ ಒಟ್ಟುಹೆಸರಿಗೂ ಕರ್ತೃತ್ವಕ್ಕೂ ಆ ವಾಕ್ಯದಲ್ಲಿ ಸಂಬಂಧವಿರುವಂತಿದೆ. 'ಕವಚ' ಪದಪ್ರಯೋಗದಿಂದ ಅದರ ಅರ್ಥವು ಕ್ಲಿಷ್ಟವಾದದ್ದು ದಿಟ. 'ಕಥೆಗಳು, ಕವಚವು' ಎಂಬ ಸ್ವರಾಂತದಿಂದ ಹೊಸಗನ್ನಡ ಕಾಲದ ಸಂಪ್ರತಿಕಾರರು ಈ ಸಮಾಪ್ತಿವಾಕ್ಯವನ್ನು ಬರೆದಿರಬೇಕು. ಅವರ ಅಭಿಪ್ರಾಯವೆಂದರೆ ಇಲ್ಲಿ ಹೇಳಿದ ಹತ್ತೊಂಬತ್ತು ಕಥೆಗಳು ಶಿವಕೋಟ್ಯಾಚಾರ್ಯರು ಹೇಳಿದ ವೊಡ್ಡಾರಾಧನೆಯ ಕವಚರೂಪವಾಗಿವೆ ಅಂದರೆ ಶ್ರೀ. ಉಪಾಧ್ಯೆಯವರು ವಿವರಿಸಿದಂತೆ ಪರೀಷಹಜಯಕ್ಕಾಗಿ ಕವಚದಂತಿರುವ ಕೆಲವು ಧರ್ಮಬೋಧೆಗಳಂತಿವೆ. ಕಥೆಗಳೆಂದರೆ ಮೂರ್ತಿಮತ್ತಾದ ಬೋಧೆಗಳೇ ಎಂಬ ಸೂಚನೆಯಿರಬೇಕು. ಹೀಗೆ ಕನ್ನಡಗ್ರಂಥ ಹಾಗೂ ಅದರ ಕರ್ತೃ ಇವೆರಡನ್ನೂ ಈ ವಾಕ್ಯ ಸೂಚಿಸುತ್ತಿರಬಹುದು. ಎರಡನೆಯ ಸಮಾಪ್ತಿವಾಕ್ಯವು ಒಂದೇ ವಾಕ್ಯವಾಗಿದ್ದು ಹತ್ತೊಂಬತ್ತು ಕಥೆಗಳ ಹೆಸರು ಮತ್ತು ಕರ್ತೃತ್ವವನ್ನು ಹೆಚ್ಚು ಸ್ಫುಟವಾಗಿ ತಿಳಿಸುತ್ತದೆ. ಶ್ರೀ. ಡಿ. ಎಲ್. ನರಸಿಂಹಾಚಾರ್ಯರ ಪ್ರಕಾರ ಇಬ್ಬರು ಶಿವಕೋಟಿ-ಗಳಿದ್ದಾರೆ—ಸಮಂತಭದ್ರನ ಶಿಷ್ಯ ಒಬ್ಬ, ಭಗವತೀ ಆರಾಧನದ ಕರ್ತೃ ಇನ್ನೊಬ್ಬ. ಎರಡನೆಯವನ ಗ್ರಂಥದಿಂದಲೇ 'ವಡ್ಡಾರಾಧನೆ'ಯ ೧೯ ಕಥೆಗಳ ಸೂಚನೆಗಳು ಬಂದಿರುವುದು. ಮೂರನೆಯ ಶಿವಕೋಟಿಯೊಬ್ಬ ಇದ್ದಿರಬಹುದು, ಇವನೇ ವಡ್ಡಾ-ರಾಧನೆಯ ಕರ್ತೃ ಆಗಿರಬಹುದು. ಸದ್ಯಕ್ಕೆ ಬೇರೆ ಆಧಾರಗಳು ದೊರೆಯುವತನಕ 'ವಡ್ಡಾರಾಧನೆ' ಎಂಬುದು ಇದರ ಹೆಸರು, ಶಿವಕೋಟ್ಯಾಚಾರ್ಯ ಎಂಬುದು ಇದರ ಕರ್ತೃವಿನ ಹೆಸರು ಎಂದು ಹಿಡಿಯಬಹುದಾಗಿದೆ.

ವಡ್ಡಾರಾಧನೆಯ ಕಥನಗುಣ

'ವಡ್ಡಾರಾಧನೆ'ಯ ಕಥೆಗಳು ಎಷ್ಟು ಸಾಂಪ್ರದಾಯಿಕ ಹಾಗೂ ಪ್ರಚಾರಕವಾಗಿದ್ದರೂ ಅವುಗಳಲ್ಲಿ ಒಂದು ಆಕರ್ಷಣೆಯಿದೆ, ವಿಶೇಷ ರುಚಿಯಿದೆ. ಅವುಗಳ ಈ ಗುಣವನ್ನು ವಿಂಗಡಿಸುವಾಗ ಮೂಲ ಆಕರಗಳನ್ನು ಅರಿಯುವುದು ಅಗತ್ಯ. ಹರಿಷೇಣನ 'ಬೃಹತ್‌ಕಥಾಕೋಶ'ದ ಪೀಠಿಕೆಯಲ್ಲಿ ಶ್ರೀ. ಉಪಾಧ್ಯೆಯವರು ಸಮರ್ಪಕವಾಗಿ ಈ ವಿಷಯವನ್ನು ಮಂಡಿಸಿದ್ದಾರೆ. ಅವರ ಹೇಳಿಕೆಯ ಮೇರೆಗೆ ಆರಾಧನೆ ಎಂದರೆ ಜ್ಞಾನ, ದರ್ಶನ, ಚಾರಿತ್ರ್ಯ, ತಪಸ್ಸು ಈ ನಾಲ್ಕು ಜೈನಯತಿಯ ಆದರ್ಶಗಳ ಸ್ಥಿರವಾದ ಸಾಧನೆ, ಮರಣಸಮಯದಲ್ಲಿ ಅಂದರೆ ಸಮಾಧಿಮರಣದಲ್ಲಿ ಆ ಆದರ್ಶಕ್ಕನುಸರಿಸಿ ತೋರುವ ಉಚ್ಚತಮವಾದ ಆಚರಣೆ. ಈ ಯತಿಧರ್ಮವನ್ನು ಬೋಧಿಸುವ ಮತ್ತು ಚರ್ಚಿಸುವ ಗ್ರಂಥಕ್ಕೆ ಸಹ 'ಆರಾಧನೆ' ಎಂದು ಹೆಸರು. ಜೈನವಾಙ್ಮಯದಲ್ಲಿ ದೊರೆವ ಅನೇಕ ಆರಾಧನೆಯ ಗ್ರಂಥಗಳಲ್ಲಿ 'ಭಗವತೀ ಆರಾಧನಾ' ಎಂಬುದು ತುಂಬ ದೊಡ್ಡದಾದ ಪ್ರಾಕೃತಗ್ರಂಥ, ಜೈನಶೌರಸೇನಿಯಲ್ಲಿ ಬರೆದುದು. ಶಿವಾರ್ಯ ಅಥವಾ ಶಿವಕೋಟಿ ಎಂಬ ಇದರ ಲೇಖಕನು ಬಹುಶಃ ಕುಂದಕುಂದಾಚಾರ್ಯರ ಪ್ರಾಚೀನಕಾಲದಲ್ಲಿದ್ದವನು. ಭಗವತೀ ಆರಾಧನೆಯನ್ನು ಕುರಿತು ಹಲವು ವ್ಯಾಖ್ಯಾನಗಳು ಹುಟ್ಟಿವೆ, ಕಥಾಕೋಶಗಳೂ ರಚಿತವಾಗಿವೆ. ಸಮಾಧಿಮರಣದ ಸಮಯದಲ್ಲಿ ಆರಾಧಕನಿಗೆ ಸಂಸಾರನಿರ್ವೇಗವನ್ನುಂಟುಮಾಡುವ ಕಥೆಗಳನ್ನು ಯತಿಗಳು ಹೇಳುತ್ತಿದ್ದರೆಂದು ಮೂಲಗ್ರಂಥವೇ ಹೇಳಿದೆ. ಅದರಲ್ಲಿ ಅಂಥ ಕಥಾಸಾರಾಂಶವುಳ್ಳ ಗಾಥೆಗಳಿವೆ. ಮುಂದಿನ ವ್ಯಾಖ್ಯಾನಕಾರರು ಗಾಥೆಗಳಲ್ಲಿ ಸೂಚಿತವಾದ ಕಥೆಗಳನ್ನು ವಿಸ್ತರಿಸಿದರು, ಕಥಾಕೋಶಕಾರರು ಧರ್ಮನಿರೂಪಣೆಯಿಂದ ಈ ಕಥೆಗಳನ್ನು ಬೇರ್ಪಡಿಸಿಕೊಂಡರು. ಪ್ರಭಾಚಂದ್ರ ಹಾಗೂ ಹರಿಷೇಣ ಇವರ ಕಥಾಕೋಶಗಳು ಈ ರೀತಿಯಲ್ಲಿ ಬೇರ್ಪಟ್ಟು ಸಂಸ್ಕೃತಕ್ಕೆ ಪರಿವರ್ತಿತವಾದುವು. ಕನ್ನಡ 'ವಡ್ಡಾರಾಧನೆ'ಯಲ್ಲಿಯ ೧೯ ಕಥೆಗಳು ಕ್ರಮದಲ್ಲಿಯ ಒಂದು ವ್ಯತ್ಯಾಸ ಬಿಟ್ಟರೆ ಹರಿಷೇಣನ 'ಕಥಾಕೋಶ'ದಲ್ಲಿಯ ಸಂಖ್ಯೆ ೧೨೭–೧೪೫ ಇವಕ್ಕೆ ಸರಿಹೋಲುತ್ತವೆ. ಕೆಲವು ಸಂದರ್ಭಗಳಲ್ಲಿಯಂತೂ 'ವಡ್ಡಾರಾಧನೆ'ಗೂ ಹರಿಷೇಣನ ಪದ್ಯಗಳಿಗೂ ದಟ್ಟವಾದ ಹೋಲಿಕೆ ಕಂಡುಬಂದಿವೆ. ವಿವರಗಳನ್ನು ಪರೀಕ್ಷಿಸಲಾಗಿ, ವೃಷಭಸೇನನ ಕಥೆಯ ಹೊರತಾಗಿ ಉಳಿದೆಲ್ಲ ಕಥೆಗಳು 'ವಡ್ಡಾರಾಧನೆ'ಯಲ್ಲಿ ಹೆಚ್ಚು ದೀರ್ಘವಾಗಿವೆ, ಹರಿಷೇಣನಲ್ಲಿಲ್ಲದ ವಿವರಗಳನ್ನು ಒಳಗೊಂಡಿವೆ. ಕನ್ನಡದಲ್ಲಿ ಸುಕೋಶಲನ ಕಥೆ ಹರಿಷೇಣನ ೧೦೭ನೆಯ ಪದ್ಯದಿಂದ ಆರಂಭವಾಗಿದ್ದು ಮೊದಲಿನ ೧೦೬ ಪದ್ಯಗಳ ಕಥಾಂಶವನ್ನು ಆಮೇಲೆ ಬಿತ್ತರಿಸಿದೆ, ಹಲವು ಕಡೆ ಬೇರೆ ಉಪಕಥೆಗಳು, ಹೆಚ್ಚಿನ ವಿವರಗಳು, ವರ್ಣನೆಗಳು, ಅಂಕಿತನಾಮಗಳಲ್ಲಿ ಕೆಲವು ಭೇದಗಳು 'ವಡ್ಡಾರಾಧನೆ'ಯಲ್ಲಿ ಬಂದಿರುವುದನ್ನು ನೋಡಿದರೆ ಒಂದನ್ನೊಂದು ಕಣ್ಣುಮುಚ್ಚಿ ಅನುಸರಿಸಿದೆ ಎನ್ನಲು ಬರುವಂತಿಲ್ಲ. ಎಲ್ಲ ಅಂಶಗಳ ಪರೀಕ್ಷಣೆಯಿಂದ ಎರಡೂ ಗ್ರಂಥಗಳು

ಸಮಾನವಾದ ಮೂಲವನ್ನು, ಬಹುಶಃ ಭಗವತೀ ಆರಾಧನೆಯ ಪ್ರಾಕೃತ ವ್ಯಾಖ್ಯಾನ ಗ್ರಂಥವೊಂದನ್ನು ಆಧರಿಸಿ ರಚಿತವಾಗಿರಬೇಕೆಂದು ತೋರುತ್ತದೆ. 'ವಡ್ಡಾರಾಧನೆ' ಎಂಬ ಹೆಸರು ಅದರಲ್ಲಿ ಬಂದ ಭಗವತೀ ಆರಾಧನೆಯ ಗಾಥೆಗಳ ವಿವರಣೆ, 'ಆಯಂಬಿಲ, ಜಾವಜ್ಜೀವಂ, ಬೋಲಹಬೋಲಹ' ಮುಂತಾದ ಪ್ರಾಕೃತ-ಪ್ರಯೋಗಗಳು ಕನ್ನಡ ಕಥಾಸಂಗ್ರಹಕ್ಕೆ ಪ್ರಾಕೃತಮೂಲವಿರಬೇಕೆಂಬುದನ್ನು ಸಾರಿ ಹೇಳುತ್ತವೆ.

ಶ್ರೀ. ಉಪಾಧ್ಯೆಯವರ ಈ ಊಹೆ ನಮಗೆ ಸಮಂಜಸವಾಗಿ ತೋರುತ್ತದೆ. 'ವಡ್ಡಾರಾಧನೆ' ಹರಿಷೇಣನ 'ಕಥಾಕೋಶ'ವನ್ನು ಕಥಾನಕದ ಸ್ಥೂಲಸಾಮಗ್ರಿಯಲ್ಲಿ, ಅಲ್ಲಲ್ಲಿಯ ಭಾವ ಮತ್ತು ವಾಕ್ಯಗಳಲ್ಲಿ ನಿಕಟವಾಗಿ ಹೋಲುವುದಾದರೂ ಕಥಾವಿಸ್ತರಣೆಯಲ್ಲಿಯೂ ವ್ಯತ್ಯಾಸದಲ್ಲಿಯೂ ಹಲಕೆಲವು ವಿವರಗಳಲ್ಲಿಯೂ ಬೇರೆತನವನ್ನು ತೋರಿದೆ. ಧಾರ್ಮಿಕ ಮಹತ್ವದ ಸಾಮಗ್ರಿಯಲ್ಲಿ ಮಾರ್ಪಾಡುಮಾಡುವುದು ಅಂದಿನ ಗ್ರಂಥಕಾರರಿಗೆ ಒಪ್ಪಿಗೆಯಾಗತಕ್ಕ ಕಾರ್ಯವಲ್ಲ. ಅಂತೆಯೇ ಬೇರೊಂದು ಮೂಲವು 'ವಡ್ಡಾರಾಧನೆ'ಗೆ ಪ್ರೇರಕವಾಗಿರಬೇಕು, ಅದು ಪ್ರಾಕೃತಗ್ರಂಥವಾಗಿರಬೇಕು. ಅದನ್ನು ಅನುಸರಿಸಿಯೂ 'ವಡ್ಡಾರಾಧನೆ' ಕೇವಲ ತದ್ರೂಪ ಅನುಕರಣವಾಗಿರಲಾರದು ಎಂದು ಹೇಳಲೂ ಅವಕಾಶವಿದೆ. ಮೊದಲನೆಯ ಸುಕುಮಾರಸ್ವಾಮಿಯ ಕಥೆಯನ್ನು ನೋಡಿದರೆ ಈ ಮಾತಿನ ಪ್ರತೀತಿಯಾಗುತ್ತದೆ. ಕಥೆಯ ಮೂಲಸಾಮಗ್ರಿ ಎರಡರಲ್ಲಿ ಒಂದೇ ಆಗಿದ್ದರೂ ವ್ಯತ್ಯಾಸಗಳೂ ವಿಸ್ತರಣೆಗಳೂ ತಲೆದೋರಿವೆ. ನಾಗಶ್ರೀಗೆ ಆಕೆಯ ತಂದೆ ಹೇಳಿದ ಹಿಂಸಕನ ಕಥೆಯಲ್ಲಿ ಒಬ್ಬನ ಕೋಟಿ ಧನ ಕೊಂಡು ಕೇಳಿದರೂ ಕೊಡದೆ ಅವನನ್ನು ಕೊಂದ ಶ್ರೇಷ್ಠಿಪುತ್ರನಿವನು ಎಂದು ಮಾತ್ರ 'ಕಥಾಕೋಶ'ದಲ್ಲಿದ್ದರೆ ಶ್ರೇಷ್ಠಿ ಇಂದ್ರದತ್ತ, ಮಗ ಇಂದ್ರಸೇನ, ಅವನು ಜೂಜಾಡಿ ಅಕ್ಷಧೂರ್ತನೆಂಬವನಿಗೆ ಸಾವಿರ ದೀನಾರ ಸೋತು ಕೊಡಲಾರದೆ ಅವನನ್ನು ಕೊಂದನೆಂಬುದಾಗಿ 'ವಡ್ಡಾರಾಧನೆ'ಯಲ್ಲಿದೆ. ಆಮೇಲೆ ನಾಗಶ್ರೀಗೆ ಹೇಳಿದ ಮುಂದಿನ ಕಥೆಯಲ್ಲಿ ಇನ್ನೂ ಹೆಚ್ಚಿನ ವ್ಯತ್ಯಾಸವಿದೆ. ತಾರಕನೆಂಬ ವಣಿಜನು ಜಯಕರನೆಂಬ ಧನಿಕನ ಧಾನ್ಯವನ್ನು ಮಾಯೆಯಿಂದ ಕದಿಯುತ್ತಿದ್ದನೆಂದೂ ಹಾಗೆ ಮಾಡುವಾಗ ಅವನಿಗೆ ಸಹಾಯಕನಾದ ಚಿತ್ರಕಾರನೊಬ್ಬನು ಗೋಡೆಯ ಮೇಲೆ ತಾನು ಬರೆದ ಕಥೆಯೊಂದನ್ನು ಹೇಳುತ್ತಿದ್ದನೆಂದೂ 'ಕಥಾಕೋಶ'ದಲ್ಲಿದೆ. 'ವಡ್ಡಾರಾಧನೆ'ಯಲ್ಲಿ ವೈನಯಿಕನೆಂಬ ಪುರುಷನು ಕನ್ನೆಯ, ಬಂಟನ, ವೃದ್ಧಸ್ತ್ರೀಯ ಹೀಗೆ ಮೂವರ ಚಿತ್ರಕಥೆಗಳನ್ನು ಪಟದಲ್ಲಿ ತೋರಿ ಹೇಳಿ ಜನರನ್ನು ಮೋಸಗೊಳಿಸಿ ಭತ್ತದ ಕಳವು ಮಾಡುತ್ತಿದ್ದನೆಂದಿದೆ. ಇದರಲ್ಲಿ ಮೊದಲನೆಯ ಕನ್ನೆಯ ಕಥೆಗೂ 'ಕಥಾಕೋಶ'ದಲ್ಲಿಯ ಕಥೆಗೂ ಒಂದು ಮಟ್ಟದವರೆಗೆ ಸ್ಥೂಲವಾದ ಹೋಲಿಕೆಯಿದೆ, ಮುಂದೆ ಕನ್ನೆಯ ಕಥೆ ಉಪಕಥೆಯೊಂದರೊಡನೆ ಬೇರೆಯಾಗಿ ವಿಸ್ತಾರಗೊಳ್ಳುತ್ತದೆ.

ಉಳಿದೆರಡು ಕಥೆಗಳಂತೂ ಹರಿಷೇಣನಲ್ಲಿಲ್ಲ. ಇನ್ನೂ 'ಏಳೆಂಟು ವರುಷದಿಂದೊಳಗೆ' (ಸಪ್ತಾಷ್ಟವರ್ಷಮಧ್ಯೆ), 'ಸಿದ್ಧಕ್ಷೇತ್ರಂಗಳೆಲ್ಲಮಂ ಬಂದಿಸಿ' (ಸಿದ್ಧಕ್ಷೇತ್ರಾಣಿ ಸರ್ವಾಣಿ ವಂದಿತ್ವಾ) ಎಂಬ ಪ್ರಯೋಗಗಳಲ್ಲಿಯೂ ಹಲಕೆಲವು ವಾಕ್ಯಗಳಲ್ಲಿಯೂ 'ವಡ್ಡಾರಾಧನೆ' 'ಕಥಾಕೋಶ'ವನ್ನು ಅನುವಾದಿಸಿದಂತೆ ಕಂಡರೂ ವ್ಯತ್ಯಾಸವುಳ್ಳ ಭಾಗಗಳನ್ನು ನೋಡಿದರೆ ಕಥಾಕೋಶವು ಅದಕ್ಕೆ ಪ್ರತ್ಯಕ್ಷ ಆಕರವಲ್ಲವೆಂಬುದು ಸ್ಪಷ್ಟವಾಗುತ್ತದೆ. ಪ್ರಾಕೃತ ಆಕರವೊಂದಿರಬೇಕೆಂದು ಹಿಂದೆ ಹೇಳಿದೆ. ಅದು ದೊರೆತಿಲ್ಲ. ಎಂದಮೇಲೆ 'ವಡ್ಡಾರಾಧನೆ'ಯನ್ನು ಅದಕ್ಕೆ ಹೋಲಿಸಿ ಅಮೂಲವಾದ ಅಂಶಗಳನ್ನು ನಿಷ್ಕರ್ಷಿಸಲು ಬೇಕಾದ ಸಾಮಗ್ರಿ ಕಣ್ಣೆದಿರು ಇಲ್ಲ. ಒಟ್ಟಿನಲ್ಲಿ ಕಥಾನಕಸಾಮಗ್ರಿಯನ್ನು ಮೂಲದಿಂದ ಎತ್ತಿಕೊಂಡು ಅದನ್ನು ವಿಸ್ತರಿಸಿ ಸ್ವಾರಸ್ಯ-ವಾಗಿ ಹೇಳುವ ಕಥೆಗಾರಿಕೆ 'ವಡ್ಡಾರಾಧನೆ'ಯಲ್ಲಿ ತೋರಿದೆ ಎನ್ನಬಹುದು. ಇದಕ್ಕೆ ಒಂದೆರಡು ದೃಷ್ಟಾಂತಗಳಿವೆ. ಸುಕುಮಾರಸ್ವಾಮಿಯ ಕಥೆಯಲ್ಲಿ, ಅರಸನು ತನ್ನ ಮಂತ್ರಿ ಸಾಯಲು ಅವನ ಇಬ್ಬರೂ ಮಕ್ಕಳನ್ನು ಪ್ರೀತಿಯಿಂದ ಬರಮಾಡಿಕೊಂಡು, ಸ್ನಾನಭೋಜನ ಮಾಡಿಸಿ, ಸಮಾಧಾನ ಹೇಳಿ ಕಳಿಸಿದನಂತೆ. ಕೆಲವು ದಿವಸದಿಂದ ಅವರನ್ನು ಮತ್ತೆ ಕರೆಯಿಸಿ 'ನೀವು ಯಾವ ಓದುಗಳನ್ನು ಬಲ್ಲಿರಿ' ಎಂದು ಬೆಸ-ಗೊಂಡರೆ ಅವರು 'ತಲೆಯಂ ಬಾಗಿ ಮಱುಮಾತುಗುಡದೆ ಕಣ್ಣನೀರಂ ತೀವಿ **ನೆಲನಂ ಬರೆಯುತ್ತಿರೆ'** ಸಭೆಯಲ್ಲಿದ್ದವರೆಲ್ಲ 'ಇವರು ಮೂರ್ಖರು, ಯಾವ ಓದನ್ನೂ ಅರಿಯರು' ಎಂದರಂತೆ. ತಂದೆ ತೀರಿದಮೇಲೆ ಧನ ಕೇಳಲು ದೀನಮಾನಸರಾಗಿ ಅವರಿಬ್ಬರೂ ಅರಸನ ಬಳಿ ಹೋದರೆಂದೂ ಅವರ ವಿತ್ತವನ್ನು ಅವನು ಬಳಗದವರಲ್ಲಿ ಹಂಚಿಕೊಟ್ಟನೆಂದೂ 'ಕಥಾಕೋಶ'ದಲ್ಲಿದೆ. ಪ್ರಾಕೃತಮೂಲದಲ್ಲಿ ಏನಿದೆ ಗೊತ್ತಿಲ್ಲ. ಮೇಲಿನ ವಿಸ್ತರಣೆ, ಸೂಚ್ಯವಾದ ಚಿತ್ರ ಅದರಲ್ಲಿರಲಿಕ್ಕಿಲ್ಲ. ಯಾಕೆಂದರೆ ಅದು ವ್ಯಾಖ್ಯಾನಗ್ರಂಥವಾಗಿದ್ದು ಅದರಲ್ಲಿ ಬಂದ ಕಥೆಗಳು ಸಾರರೂಪವಾಗಿರಬೇಕು. ಇದು ಸರಿಯಾಗಿದ್ದರೆ ಶಿವಕೋಟ್ಯಾಚಾರ್ಯನು ಕತೆಗಾರಿಕೆಯ ಕಲೆಯಲ್ಲಿ ನುರಿತವ-ನೆಂದೂ ಮನುಷ್ಯಸ್ವಭಾವದ ಹಾಗೂ ನಡತೆಯ ಸೂಕ್ಷ್ಮಪರಿಚಯವುಳ್ಳವನೆಂದೂ ತಿಳಿಯಬಹುದು. ತಮಗೆ ವಿದ್ಯಾದಾನಮಾಡಿದ ಸೂರ್ಯಮಿತ್ರ ಗುರು ಚರಿಗೆ ಬಂದರೆ ಅಗ್ನಿಭೂತಿ ಆದರದಿಂದ ವಂದಿಸಿ ವಾಯುಭೂತಿಯಲ್ಲಿಗೆ ಕರೆದೊಯ್ದರೆ ಅವನು ವಂದಿಸದೆ ಅಂದನಂತೆ—'**ಇದೇನು ಒಳ್ಳಿಯುವರಿಗೆ ನನ್ನಿಂದ ನಮಸ್ಕಾರ ಮಾಡಿಸುತ್ತೀ ಹೇಳು.** ಇವರು ಅಶುಚಿಗಳು, ಮಲಗ್ರಸ್ತರು.' ಇದರಲ್ಲಿಯ ಎರಡನೆಯ ವಾಕ್ಯ ಮೂಲಾನುಸಾರಿಯಾಗಿರಬಹುದಾದರೂ ಮೊದಲನೆಯ ವಾಕ್ಯ ಅಮೂಲವೆಂದು ತೋರುತ್ತದೆ. ಶಿವಕೋಟಿಯ ಕತೆಗಾರಿಕೆಯಲ್ಲಿ ಬಹುಭಾಗದ ಸೊಗಸು ಇಂಥ ದೇಸಿಯ ಸಂದರ್ಭೋಚಿತ ಪ್ರಯೋಗದಲ್ಲಿದೆ. ಸುಕುಮಾರಸ್ವಾಮಿಗೆ ಉಂಟಾದ ವೈರಾಗ್ಯದ ವರ್ಣನೆಯಲ್ಲಿ 'ಅಹೋ ಸುರಲೋಕಮೆಂಬಮೃತಸಮುದ್ರದ ನೀರೆಲ್ಲಮಂ ಕುಡಿದು ತಣಿಯದನೀ ಮನುಷ್ಯಭವದ ಸುಖಮೆಂಬ ಪುಲ್ವನಿಯೊಳ್ ಸಿಲ್ಕಿ

ಶಿವಸುಖಮನೆಯ್ದಿಸುವ ಸಚ್ಚಾರಿತ್ರದಿಂ ಬಟ್ಟಿದೆಂ',[1] 'ನಿಸ್ಸಾರಮಪ್ಪ ಭೋಗದೊಳ್ ಸಿಲ್ಕಿ ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂ ಬಱಿದೆ ಕಳೆದೆಂ' ಇಂಥ ವಾಕ್ಯಗಳು ಬಂದು ಶಿವಕೋಟಿ ಹುಟ್ಟುಕಲಾವಿದನೆಂಬುದನ್ನೂ ಮೇಲ್ತರದ ಶೈಲಿಕಾರನೆಂಬುದನ್ನೂ ತಿಳಿಸುತ್ತವೆ. ಉಳಿದೆಲ್ಲ ಕಥೆಗಳಲ್ಲಿ ಇದೇ ಬಗೆಯ ಒಂದೆ ಸಮನಾದ ಕಥನಶಕ್ತಿ ತೋರುತ್ತದೆ. ಶಿವಕೋಟಿ ಮೂಲದ ಸಾಮಗ್ರಿಯನ್ನು ತನ್ನ-ದಾಗಿ ಮಾಡಿಕೊಂಡು ಅದರಲ್ಲಿ ತಲ್ಲೀನನಾಗಿ ಕಥೆ ಹೇಳಿದ ಕಾರಣ 'ವಡ್ಡಾರಾಧನೆ'ಗೆ ವಿಶೇಷ ಆಕರ್ಷಣೆ ಉಂಟಾಗಿದೆ. ಕಥೆಗಳೆಲ್ಲ ಸಾಂಪ್ರದಾಯಿಕ, ನೀತಿಪರ, ವೈರಾಗ್ಯ-ಬೋಧಕವಾಗಿದ್ದರೂ ಕಥಾಸೂತ್ರಗಳು ಒಂದರೊಳಗೊಂದು ಹೆಣೆದುಕೊಂಡು ಜಟಿಲ-ವಾಗಿದ್ದರೂ ಪುನರುಕ್ತಿಗಳು ಹೇರಳವಾಗಿದ್ದರೂ ಕಥೆಗಳ ಸಾರವತ್ತಾದ ಭಾಗವನ್ನು ತಿರುತಿರುಗಿ ಓದಬೇಕೆಂಬ ಆಸೆ ಹುಟ್ಟುತ್ತದೆ. ಇದಕ್ಕೆ ಕಾರಣವೆಂದರೆ ಸನ್ನಿವೇಶ, ಪಾತ್ರ, ಸಂವಾದ ಈ ಎಲ್ಲದರಲ್ಲಿ ಒಟ್ಟುಗೂಡಿ ತೋರಿದಂಥ ಸಜೀವತೆ, ಮಾನ-ವೀಯತೆ. ಮೂಲವನ್ನು ಬಿಟ್ಟು ಸ್ವತಂತ್ರವಾಗಿ ರಚಿಸುವ ಉದ್ದೇಶವಿರದಿದ್ದರೂ ಮೂಲವಿಸ್ತರಣೆಯ ಒಂದು ಸಹಜಕಲೆಯ ಮೂಲಕ 'ವಡ್ಡಾರಾಧನೆ'ಗೆ ಸ್ವತಂತ್ರ ಕೃತಿಯ ಸ್ವಾರಸ್ಯ ಬಂದಿದೆ, ಗದ್ಯಕಥೆಗಳ ವಾಙ್ಮಯದಲ್ಲಿ ಮೇಲಾದ ಸ್ಥಾನಕ್ಕೆ ಅರ್ಹತೆಯನ್ನು ತಂದಿದೆ.

ವಡ್ಡಾರಾಧನೆಯ ಗದ್ಯಶೈಲಿ

'ವಡ್ಡಾರಾಧನೆ'ಯ ಗದ್ಯಶೈಲಿ ಇಡೀ ಕನ್ನಡಸಾಹಿತ್ಯದಲ್ಲಿ ಅಪೂರ್ವವಾಗಿದೆ ಎಂದು ಆರಂಭದಲ್ಲಿ ಹೇಳಿದೆ. ಕಾಲವಿಚಾರದ ಚರ್ಚೆಯಲ್ಲಿ ಈ ಅಪೂರ್ವತೆ ಯಾವುದರಲ್ಲಿದೆ ಎಂಬುದನ್ನು ಕೆಲಮಟ್ಟಿಗೆ ತೋರಿಸಿದ್ದೇವೆ. ಇನ್ನೂ ಕೆಲವು ಮಾತುಗಳನ್ನು ಹೇಳುವುದು ಅವಶ್ಯ. ಸಂಸ್ಕೃತ–ಕನ್ನಡಗಳ ಸರಿಬೆರಕೆ, ದೇಸಿಮಾರ್ಗಗಳ ಸಮನ್ವಯ ಇದು 'ಕವಿರಾಜಮಾರ್ಗ'ಕಾಲದಿಂದಲಂತೂ ಕನ್ನಡಶೈಲಿಯ ಆದರ್ಶ-ವಾಗಿತ್ತು. ಪಂಪನು ಅದನ್ನೇ ತನ್ನ ಗುರಿಯಾಗಿಟ್ಟುಕೊಂಡು ಬಹುಮಟ್ಟಿಗೆ ಯಶಸ್ವಿಯಾದನು. ಆದರೂ ಅವನಲ್ಲಿ ಹಾಗೂ ಮುಂದಿನವರಲ್ಲಿ ಸಮತೂಕ ಯಾವಾಗಲೂ ಉಳಿಯುತ್ತಿರಲಿಲ್ಲ. ಅನಾವಶ್ಯಕ ಪ್ರೌಢಿಮೆ, ಸಂಸ್ಕೃತದ ಆಡಂಬರ, ಕ್ಲಿಷ್ಟತೆಗಳು ನುಗ್ಗಿಬಂದು ಕನ್ನಡದೇಸಿಯ ಕತ್ತುಹಿಸುಕಿದುವು. ಈ ದೃಷ್ಟಿ-ಯಿಂದ 'ವಡ್ಡಾರಾಧನೆ'ಯನ್ನು ನೋಡಿದರೆ ಅದರಲ್ಲಿ ಕನ್ನಡದೇಸಿಗೆ ವಿಶೇಷವಾದ

---

1 ಇದಕ್ಕೆ ಸಮಾನವಾದ ಭಾವವು 'ಎನಿತಾನುಮಂಬುನಿಧಿಗಳ। ನನೇಕ ನಾಕಂಗಳಲ್ಲಿ ಕುಡಿದುಂಪೋಯ್ತಿ ॥ ಲ್ಲೆನಗೆ ನರಭೋಗಮೆಂಬೀ। ಪನಿಪುಲ್ಲಂ ನಕ್ಕೆ ತೃಷ್ಣೆ ಪೇೞ್ ಪೋದಪುದೇ' ಎಂದು ಪಂಪನ ಆದಿಪುರಾಣ(೯–೫೭)ದಲ್ಲಿದೆ. ಎರಡಕ್ಕೂ ಸಮಾನ ಮೂಲವೊಂದಿರಬಹುದು.

ರೀತಿಯಲ್ಲಿ ಪ್ರಾಧಾನ್ಯವನ್ನು ಕೊಟ್ಟ, ಆದರೂ ಸಂಸ್ಕೃತವನ್ನು ತ್ಯಾಗಮಾಡದ ಒಂದು ಸಮನ್ವಯ ಕಂಡುಬರುತ್ತದೆ. ವ್ಯವಹಾರ, ಶಾಸ್ತ್ರದಲ್ಲಿ ಬಂದ ಸಂಸ್ಕೃತಶಬ್ದಗಳನ್ನು ಅದು ಸ್ವೀಕರಿಸಿದೆ, ಹಲವು ಸಲ ಬೇರೆಲ್ಲಿಯೂ ಕಾಣದ ಬಗೆಯಲ್ಲಿ ಅವುಗಳ ತದ್ಭವಗಳನ್ನು ಪ್ರಾಕೃತಪ್ರಭಾವದಿಂದ ತೆಗೆದುಕೊಂಡಿದೆ. ಪ್ರೌಢ ಸಂಸ್ಕೃತಸಮಾಸಗಳನ್ನು ಆಗಾಗ ಉಪಯೋಗಿಸಿದೆ, ಅದೇ ಪಡಿಯಚ್ಚಿನ ವರ್ಣನಪರವಾದ ಪದಗಳನ್ನು ಪುನರುಕ್ತಿಸಿದೆ. ಇದೆಲ್ಲ ಇದ್ದರೂ ಕಥೆಯ ಜೀವಾಳದ ಭಾಗಗಳಲ್ಲಿ ಕನ್ನಡದೇಸಿಗೆ, ಆ ಕಾಲದ ವಿವಿಧವೂ ಪ್ರಭಾವಿಯೂ ಆದ ವಿಶಿಷ್ಟಸಂಪನ್ನ ದೇಸಿಗೆ, ಪಟ್ಟಗಟ್ಟಿದೆ. ಶಿವಕೋಟಿಯ ಕತೆಗಾರಿಕೆಯ ಹಾಗೂ ಶೈಲಿಯ ಮಹಿಮೆ ಇರುವುದೇ ಇದರಲ್ಲಿ. ಯಾವುದೇ ಕಥೆಯಲ್ಲಿಯ ಸಂದರ್ಭವನ್ನೆತ್ತಿ ಪರಿಕಿಸಿದರೆ ಇದು ಎದ್ದುಕಾಣುತ್ತದೆ. ಉದಾ : 'ಕಿಱಿಯಾತಂ ವಾಯುಭೂತಿ ಸೂರ್ಯಮಿತ್ರಂ ಗೆಯ್ದುದೆಲ್ಲಮುಪಕಾರಮೆಂದು ಬಗೆದು ಎಂದಪ್ಪೊಡಂ ಎಮ್ಮ ಮಾವಂ ಬೈಕಂದಿರಿದು ತಂದ ಕೂೞ್ಗೆ ನೆರಮೆಣ್ಣೆಯನಕ್ಕೆ ಉಪ್ಪನಕ್ಕೆ ಕೞಿಯನಕ್ಕೆ ಎಂದಪ್ಪೊಡಂ ಇಕ್ಕಿಯುಂ ಎಱೆಯಿಸಿಯುಮಱಿಯೆಂ, ಕೆಱೆಗೆ ಪೋಗಿ ಮಿಾವಾಗಳ್ ತಲೆಯಂ ಪೂಸಲೆಣ್ಣೆಯಂ ಅಪ್ಪೊಡಂ ಎಱೆಯಿಸಿಯಱಿಯೆಂ, ತಾಂ ದಿವ್ಯಮಪ್ಪ ಆಹಾರಂಗಳಂ ದೆವಸದೆವಸಕ್ಕಂ ಪಲಂಬರ್ ನಂಟರ್ಕ್ಕಳುಂ ಆಳ್ಗಳುಂ ಬೆರಸು ಉಣ್ಗುಂ, ಪರ್ವದಿವಸದೊಳಪ್ಪೊಡಂ ಎಂದಾನುಮಿವರ್ಗೆ ಉಣಲಿಕ್ಕಿಂ ಎಂದು ಅಱಿಯೆಂ, ಪಂಚಮಹಾಪಾತಕನೆಮ್ಮನೇೞೆಂಟುವರುಷಂಬರಂ ಪಗೆವರಂ ಬಗೆವಂತೆ ದಂಡಿಸಿದನೆಂದು ಮನದೊಳ್ ಮುಳಿಸಂ ಭಾವಿಸಿ ಪೊಱಮಟ್ಟು ಪೋದನ್.'[1] ಇದು 'ವಡ್ಡಾರಾಧನೆ'ಯ ಕಥನಕಲೆ ಹಾಗೂ ಗದ್ಯಶೈಲಿ ಎರಡಕ್ಕೂ ಒಳ್ಳೆಯ ಉದಾಹರಣೆಯಾಗಿದೆ. ಶೈಲಿಯೊಂದನ್ನೇ ನೋಡಿದರೆ ಅದರಲ್ಲಿ ಅಚ್ಚಗನ್ನಡದೊಲವು ನಿಚ್ಚಳವಾಗಿದೆ. ವಿರಳವಾಗಿದ್ದ ಸಂಸ್ಕೃತ ಪದಗಳು ಕನ್ನಡದಲ್ಲಿ ಬೆರೆತುಹೋದವುಗಳಾದ ಕಾರಣ ವಿರಸವನ್ನು ಒದವಿಸಿಲ್ಲ. ಹೀಗೆ ಕನ್ನಡದೇಸಿ ಹಳಗನ್ನಡದ ವ್ಯಾಕರಣಪ್ರಕ್ರಿಯೆಯಿಂದ ಮಾರ್ಗವಾಗಿ ನಡುನಡುವೆ ಪೂರ್ವದ ಹಳಗನ್ನಡದ ಪ್ರಯೋಗದಿಂದ ಪ್ರಾಚೀನ ಕಳೆಯಿಂದ ಕೂಡಿ ಇರುವುದೇ ಈ ಗದ್ಯದ ವೈಶಿಷ್ಟ್ಯ. ಸಂವಾದಗಳಲ್ಲಿಯೂ ಇಲ್ಲಿ ದೇಸಿಯ ದಿಗ್ವಿಜಯವಿದೆ. ಅದರಿಂದ ಉಂಟಾಗುವ ಪರಿಣಾಮ ಅನ್ಯಾದೃಶವಾದದ್ದು. ಸವಣನ ಕಡೆ ಹೋಗಿ 'ನಮ್ಮ ಮಗಳಿಗೆ ನಿಮ್ಮ ವ್ರತಗಳನ್ನು ಏಕೆ ಕೊಟ್ಟಿರಿ' ಎಂದು ಬ್ರಾಹ್ಮಣ ಕೇಳಲು ಅವನು 'ನಿಮ್ಮ ಮಗಳಿಗೆ ಏಕೆ, ನಮ್ಮ ಮಗಳಿಗೆ ನಮ್ಮ ವ್ರತಗಳನ್ನು ನಾವು ಕೊಟ್ಟರೆ ನಿನಗೆ ಬೇನೆಮೂಡಿತ್ತೆ'[2] ಎಂದನಂತೆ. ಇಲ್ಲಿ 'ಬೇನೆಮೂಡಿತ್ತೆ' ಎಂಬ ದೇಸಿಯ ಬಳಕೆ ಎಷ್ಟು ಯಥಾರ್ಥವಾಗಿದೆ! ಇಂದಿಗೂ ಅದು 'ಬೇನೆಯಾಯಿತೇ, ಬ್ಯಾನಿ

---

1 ವಡ್ಡಾರಾಧನೆ, ಪು. ೪, ೧೩–೨೧.

2 ವಡ್ಡಾರಾಧನೆ, ಪು. ೨೩–೧.

ಆತೇ' ಎಂಬಲ್ಲಿ ಉಳಿದುಕೊಂಡಿದೆ. ವಿದ್ಯುಚ್ಚೋರನ ಕಥೆಯಲ್ಲಿ ವಿದ್ಯುಚ್ಚೋರನು ಯಮದಂಡನಿಗೆ 'ಹಿಂದೆ ಪೂಣ್ದ ಪ್ರತಿಜ್ಞೆಗಳನ್ನು **ನೆನೆವೆಯೊ ನೆನೆಯೆಯೊ**' ಎನ್ನಲು ಅವನು 'ಒಳ್ಳಿತ್ತಾಗಿ ನೆನೆದೆಂ' ಎನ್ನುವನು. ಮತ್ತೆ ಅವನು 'ಮತ್ತೀಗಳ್ ನೀನೇನ್ ಸತ್ತೆಯೊ ಸಾಯೆಯೊ ಮತ್ತೇನೊ' ಎನ್ನಲು 'ದೇವಾ ನೀಂ ಗೆಲ್ದೆಯಾಂ ಸೋಲ್ತೆನುಂ ಸತ್ತೆನುಂ' ಎಂದು ಒಪ್ಪಿಕೊಂಡನು. ಆ ಸಂವರ್ಭವಿಶೇಷದಲ್ಲಿ ಈ ಹದಿರಿನ ಮಾತು ಸಹಜವಾಗಿ ಸೊಗಸಾಗಿ ತೋರುತ್ತದೆ. ಅಂದಿನಿಂದ ಇಂದಿನವರೆಗೆ ದೇಸಿಯ ಮೂಲಸ್ವರೂಪವು ಒಂದೇ ಎಂಬುದನ್ನು ಸೂಚಿಸುತ್ತದೆ.

ಬೇರೆ ಗ್ರಂಥಗಳಲ್ಲಿ ಅಪರೂಪವಾದ ಕೆಲವು ರೂಪಗಳೂ ಶಬ್ದಗಳೂ ಅಲ್ಲದೆ ಇದರಲ್ಲಿ 'ಗಿಡಿಗಿಡಿಜಂತ್ರಂ ಮಿಳಿಮಿಳಿನೇತ್ರಂ, ಸೊಪ್ಪುನಾರಾಗಿ ಬಡಿ, ಬೈಕಂಗುಳಿ-ಬೇಡು, ಸೂಡೆವೊತ್ತಿಸೆಪಟ್ಟನಂತೆ' ಈ ಬಗೆಯ ಒಳ್ಪನುಡಿಗಳು ಕಂಡುಬರುತ್ತವೆ. ಅವುಗಳಿಂದ ಇಲ್ಲಿಯ ಗದ್ಯವು ಶಕ್ತಿಯುತವೂ ಅರ್ಥವಾಹಿಯೂ ಆಗಿ ತನ್ನ ಬಲವಾದ ಎಳೆತದಿಂದ ಓದುಗನನ್ನು ಮುಂದೆ ಮುಂದೆ ಕರೆದೊಯ್ಯುತ್ತದೆ. ಅದು ಅಲ್ಲಲ್ಲಿ ಚಿತ್ರ-ಗಳನ್ನು ಕೊರೆಯುತ್ತದೆ, ಪಾತ್ರಗಳನ್ನು ಅರಳಿಸುತ್ತದೆ, ಧರ್ಮವನ್ನು ಮನದಲ್ಲಿ ಅಚ್ಚೊತ್ತುವಂತೆ ಸಾರುತ್ತದೆ. ಹೀಗೆ 'ವಡ್ಡಾರಾಧನೆ' ಪಂಪಪೂರ್ವಯುಗದಲ್ಲಿಯ ಮೇಲಾದ ಗದ್ಯಗ್ರಂಥವಲ್ಲದೆ ಇಡಿಯ ಕನ್ನಡಸಾಹಿತ್ಯಚರಿತ್ರೆಯಲ್ಲಿಯೆ ಚಿರಂತನವಾಗಿ ನೆನೆಯತಕ್ಕ ವೈಶಿಷ್ಟ್ಯಪೂರ್ಣವಾದ ಕೃತಿಯಾಗಿದೆ. ಅದೇನು ಮಹೋನ್ನತ ಕಾವ್ಯವಲ್ಲ, ಕಾವ್ಯದ ಮಹತಿಯೆಂಬುದನ್ನು ಅಂಶತಃ ಆದರೂ ತೋರಿದ ಕಾವ್ಯವಲ್ಲ. ಆದರೆ ಅದರಲ್ಲಿಯ ಕತೆಗಾರಿಕೆ ಹಾಗೂ ಮಾತುಗಾರಿಕೆ ಸಾಮಾನ್ಯವಾದುವಲ್ಲ. ಅವನ್ನು ಕನ್ನಡಕ್ಕೆ ನೀಡಿದ ಶಿವಕೋಟಿ ಕನ್ನಡಮಾತಿನ ಜೀವಾಳವನ್ನು ಅರಿತು ಅದನ್ನು ಅಂದವಾಗಿ ಬಳಸಿದ ಗ್ರಂಥಕಾರರಲ್ಲಿ ಮೇಲಾದವನು. ಅವನ ಗ್ರಂಥವು ಇಂದಿಗೂ ಒಂದರ್ಥದಲ್ಲಿ ಮಾದರಿಯಾಗಬಲ್ಲುದು, ಕನ್ನಡನುಡಿಯ ಬೆಳವಣಿಗೆಗೆ ಮುಂದೆಯೂ ನೆರವಾಗಬಲ್ಲುದು.

ಪಂಪಯುಗ

೯. ಈ ಯುಗದ ರೂಪರೇಷೆ

ಆದಿಪಂಪನಿಂದ ಬಸವೇಶ್ವರನ ವರೆಗೆ ಈ ಯುಗದ ಹರವನ್ನು ಇಟ್ಟು ಕಾಲವ್ಯಷ್ಟಿಯಿಂದ ಹತ್ತನೆಯ ಶತಮಾನದ ಪೂರ್ವಾರ್ಧದಿಂದ ಹನ್ನೆರಡನ ರ್ಧದವರೆಗೆ ಇದು ಸಾಗುತ್ತದೆ. ಪಂಪಪೂರ್ವಯುಗದಲ್ಲಿ ಬೆಳೆಯುತ್ತ ಬಂ ಸಾಹಿತ್ಯಸಂಪ್ರದಾಯವು ಪಂಪಯುಗದಲ್ಲಿ ಸ್ಥಿರವಾಗಿ ಕಾಲೂರಿ ತಲೆಯೆತ್ತಿ 'ಕವಿರಾಜಮಾರ್ಗ'ವೊಂದೇ ಆ ಮೊದಲ ಯುಗದ ಉಪಲಬ್ಧ, ಉ ಹೆಚ್ಚಾಗಿ ಉಲ್ಲೇಖಗಳು. ಈ ಯುಗದಲ್ಲಿ ಉಪಲಬ್ಧಗ್ರಂಥಗಳು ಹೆಚ್ಚಾಗಿ ಉಲ್ಲೇಖಗಳು ಕಡಿಮೆಯಾಗಿವೆ. ಹಿಂದಿನ ಯುಗದ ಕಾವ್ಯಶಿಖರಗಳು ಮುಸುಕಿನಲ್ಲಿ ಮರೆಯಾಗಿದ್ದರೆ, ಈ ಯುಗದಲ್ಲಿ ಹಲಕೆಲವು ಎತ್ತರವಾದ ನಿಚ್ಚಳವಾಗಿ ಕಣ್ಣಿಗೆ ಬೀಳುತ್ತವೆ, ನಲಿವನ್ನೂ ಬೆರಗನ್ನೂ ಉಂಟುಮಾ (ಈ ಯುಗದ ಪ್ರಮುಖ ಗ್ರಂಥಕಾರರ ಪಟ್ಟಿಯನ್ನು ೬೯–೭೦ನೆಯ ಕೊಟ್ಟಿದೆ.)

ಈ ಯುಗದಲ್ಲಿ ಕಾಲವ್ಯಷ್ಟಿಯಿಂದ ಚರ್ಚೆಗೆ ಕಾರಣರಾದವರು ಪ ನಾಗವರ್ಮ ಮತ್ತು ನಾಗಚಂದ್ರ ಇವರು. ದುರ್ಗಸಿಂಹ, ಕರ್ಣಪಾರ್ಯ, ಇವರ ಕಾಲಚರ್ಚೆಯೂ ಇದರಲ್ಲಿ ತೊಡಕಿಕೊಂಡಿದೆ. ನಾಗವರ್ಮರು ಎ ಎಂಬ ವಾದವೂ ತಲೆಯೆತ್ತಿದೆ. ನಾಗವರ್ಮಸಮಸ್ಯೆಯನ್ನು ಕೊನೆಯದಾಗಿ ಸಲು ಕಣ್ಣಮುಂದಿನ ಸಾಮಗ್ರಿ ಸಾಲದು. ಇದ್ದ ಸಾಮಗ್ರಿ 'ಛಂದೋಂ ಶುದ್ಧ ಪಾಠದ ಅಭಾವ ಮುಂತಾದ ಕಾರಣಗಳಿಂದ ನಿರ್ಣಯವನ್ನು ಕುಂಠಿ ತ್ತದೆ. ಈ ಸಮಸ್ಯೆಯ ಜಟಿಲತೆಯನ್ನು ತಿಳಿದುಕೊಳ್ಳಬೇಕಾದರೆ ಈವರೆಗಿನ ಯನ್ನೆಲ್ಲ ಓದಿ ನೋಡಬೇಕು.[1–8] ಭಿನ್ನ ಪಕ್ಷಗಳ ಅಭಿಪ್ರಾಯವನ್ನು ಆ

---

1 ಕವಿಚರಿತೆ, ಸಂ. ೧, ಪು. ೫೨–೫೪, ಸಂ. ೩, ಅವತರಣಿಕೆ, ಪು. ೫೪
2 ಎ. ವೆಂಕಟಸುಬ್ಬಯ್ಯ : ಕೆಲವು ಕನ್ನಡ ಕವಿಗಳ ಕಾಲಜೀವನವಿಚಾರ,
3 ಎ. ವೆಂಕಟಸುಬ್ಬಯ್ಯ : ನಾಗವರ್ಮನ ಕೃತಿಗಳು (ಪ್ರ. ಕ. ೧೫–೩)
4 ಗೋವಿಂದ ಪೈ : ನಾಗವರ್ಮರು ಎಷ್ಟು ಮಂದಿ (ಕ. ಸಾ. ಪ. ೨೦–೧, ೨
5 ಸಾ. ಶ್ರೀ. ರಾಜಪುರೋಹಿತ: ನಾಗವರ್ಮನ ಸ್ಥಳ, ಕಾಲ, ಮತಗ (ನಾಗಸ್ವ ಹಣ, ೩
6 ಟಿ. ಎಸ್. ವೆಂಕಣ್ಣಯ್ಯ : ಕರ್ನಾಟಕ ಕಾದಂಬರಿಸಂಗ್ರಹ, ಪೀಠಿಕೆ, ೯
7 ಎ. ವೆಂಕಟರಾವ : ಅಭಿಧಾನ ವಸ್ತುಕೋಶ, ಮುನ್ನುಡಿ, ಪು–೧೬
8 ಚಿನ್ನಕೇಶವಯ್ಯಂಗಾರ : ಹನ್ನೊಂದನೆಯ ಶತಮಾನದ ಕನ್ನಡಸಾಹಿತ್ಯ (ಕ. ಸಾ.

	[ಆದಿಪುರಾಣ ಗ್ರಂ. ರ. ೯೪೧]			೨ ವಿಕ್ರಮಾರ್ಜುನವಿಜಯ [ಪಂಪಭಾರತ]	,,
೨ ಪೊನ್ನ	ಸು. ೯೫೦	,,	ರಾಷ್ಟ್ರಕೂಟ ೩ನೆಯ ಕೃಷ್ಣ	೧ ಶಾಂತಿಪುರಾಣ ೨ ಭುವನೈಕರಾಮಾಭ್ಯುದಯ [ರಾಮಕಥೆ] ೩ ಜಿನಾಕ್ಷರಮಾಲೆ	,, ,, ಕಂದಪದ್ಯ
೩ ಚಾವುಂಡರಾಯ	೯೭೮ [ಗ್ರಂ. ರ. ೯೭೮]	,,	ಗಂಗರಾಚಮಲ್ಲ	೧ ಚಾವುಂಡರಾಯಪುರಾಣ	ಗದ್ಯಗ್ರಂಥ
೪ ನಾಗವರ್ಮ-೧	ಸು. ೯೯೦	ಬ್ರಾಹ್ಮಣ	ರಕ್ಕಸಗಂಗ ? ಚಂದ್ರ	೧ ಛಂದೋಂಬುಧಿ ೨ ಕರ್ನಾಟಕ ಕಾದಂಬರಿ	ಶಾಸ್ತ್ರ [ಪದ್ಯ] ಚಂಪೂಕಾವ್ಯ
೫ ರನ್ನ	೯೯೦ [ಅಜಿತಪುರಾಣ ಗ್ರಂ. ರ. ೯೯೩]	ಜೈನ	ಚಾಲುಕ್ಯ ತೈಲಪ, ಸತ್ಯಾಶ್ರಯ	೧ ಸಾಹಸಭೀಮವಿಜಯ [ಗದಾಯುದ್ಧ] ೨ ಪರಶುರಾಮಚರಿತ ೩ ಚಕ್ರೇಶ್ವರಚರಿತ ೪ ಅಜಿತಪುರಾಣ ೫ ರನ್ನಕಂದ	ಚಂಪು ? ? ಚಂಪು ಕಂದಪದ್ಯ
೬ ಚಾವುಂಡರಾಯ	೧೦೨೪	ಬ್ರಾಹ್ಮಣ		೧ ಲೋಕೋಪಕಾರ	ಕಂದವೃತ್ತ
೭ ದುರ್ಗಸಿಂಹ	೧೦೩೦ [ಗ್ರಂ.ರ. ೧೦೩೧]	ಬ್ರಾಹ್ಮಣ	ಚಾಲುಕ್ಯ ಜಯಸಿಂಹ ಜಗದೇಕಮಲ್ಲ	೧ ಪಂಚತಂತ್ರ	ಚಂಪು [ಗದ್ಯಪ್ರಧಾನ]
೮ ಚಂದ್ರರಾಜ	ಸು. ೧೦೪೦	,,	ಚಾಲುಕ್ಯ ಜಯಸಿಂಹ ಮಹಾಸಾಮಂತರೇಚ	೧ ಮದನತಿಲಕ	ಶಾಸ್ತ್ರ [ಚಂಪು]

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೯ ಶ್ರೀಧರಾಚಾರ್ಯ	೧೦೫೦ [ಗ್ರಂ.ರ. ೧೦೪೯]	ಜೈನ	ಚಾಲುಕ್ಯ ಆಹವಮಲ್ಲ [೧ನೆಯ ಸೋಮೇಶ್ವರ]	೧ ಜಾತಕತಿಲಕ ೨ ಚಂದ್ರಪ್ರಭಚರಿತ	ಶಾಸ್ತ್ರ [ಕಂದವೃತ್ತ] ಚಂಪು ?
೧೦ ಶಾಂತಿನಾಥ	ಸು. ೧೦೭೦	ಜೈನ	ಭುವನೈಕಮಲ್ಲ ಪಸಾಯಿತ ಲಕ್ಷ್ಮನೃಪ	೧ ಸುಕುಮಾರಚರಿತ	ಚಂಪು
೧೧ ನಾಗವರ್ಮಾಚಾರ್ಯ	ಸು. ೧೦೭೦	ಬ್ರಾಹ್ಮಣ	ಭುವನೈಕಮಲ್ಲದಂಡನಾಯಕ ಉದಯಾದಿತ್ಯ	೧ ಚಂದ್ರಚೂಡಾಮಣಿಶತಕ	ಶತಕ [ವೃತ್ತ]
೧೨ ನಾಗಚಂದ್ರ [ಅಭಿನವಪಂಪ]	ಸು. ೧೧೦೦	ಜೈನ	ಹೊಯ್ಸಳ ೧ನೆಯ ಬಲ್ಲಾಳ	೧ ಮಲ್ಲಿನಾಥಪುರಾಣ ೨ ರಾಮಚಂದ್ರಚರಿತಪುರಾಣ [ಪಂಪರಾಮಾಯಣ]	ಚಂಪು ,,
೧೩ ಕಂತಿ	ಸು. ೧೧೦೦ [?]	,,	,,	೧ ಕಂತಿಹಂಪನ ಸಮಸ್ಯೆಗಳು	ಕಂದಪದ್ಯ
೧೪ ನಯಸೇನ	೧೧೦೦ [ಗ್ರಂ. ರ. ೧೧೧೨]	,,		೧ ಧರ್ಮಾಮೃತ	ಚಂಪು [ಗದ್ಯಪ್ರಚುರ]
೧೫ ಬ್ರಹ್ಮಶಿವ	ಸು. ೧೧೫೦	,,		೧ ಸಮಯಪರೀಕ್ಷೆ ೨ ತ್ರೈಲೋಕ್ಯಚೂಡಾಮಣಿ-ಸ್ತೋತ್ರ	ಕಂದವೃತ್ತ ವೃತ್ತ
೧೬ ಕರ್ಣಪಾರ್ಯ	ಸು. ೧೧೫೦	,,	ಲಕ್ಷ್ಮಣರಾಜ	೧ ನೇಮಿನಾಥಪುರಾಣ	ಚಂಪು
೧೭ ನಾಗವರ್ಮ–೨	ಸು. ೧೧೫೦ 1042	,,	ಚಾಲುಕ್ಯ ಜಗದೇಕಮಲ್ಲ	೧ ಭಾಷಾಭೂಷಣ ೨ ಕಾವ್ಯಾವಲೋಕನ ೩ ವಸ್ತುಕೋಶ	ಸೂತ್ರ ಕಂದವೃತ್ತ ,,
೧೮ ಸುಮನೋಬಾಣ	ಸು. ೧೧೫೦	,,	ಹೊಯ್ಸಳ ನರಸಿಂಹ	೧ ಜೈನಪುರಾಣ ?	
೧೯ ಜಗದ್ದಳಸೋಮನಾಥ	ಸು. ೧೧೫೦	,,		೧ ಕರ್ಣಾಟಕ ಕಲ್ಯಾಣಕಾರಕ	ಕಂದವೃತ್ತ

ಬೇಕು. ನಾಗವರ್ಮರಿಬ್ಬರು ಬೇರೆ ಬೇರೆ ಕಾಲಕ್ಕಿದ್ದರು, ಮೂರನೆಯವನೊಬ್ಬನೂ ಇರಬಹುದೆಂಬ ಸಂದೇಹಕ್ಕೆಡೆಯಿದೆ ಎಂದು ಕವಿಚರಿತಕಾರರು ಹೇಳಿದ್ದಾರೆ. ಎಲ್ಲ ಗ್ರಂಥಗಳನ್ನು ಬರೆದ ನಾಗವರ್ಮನೊಬ್ಬನೇ ಇದ್ದನೆಂದು ಶ್ರೀ. ವೆಂಕಟಸುಬ್ಬಯ್ಯನವರು ಸಾಧಿಸಿದ್ದಾರೆ. 'ಛಂದೋಂಬುಧಿ'ಯ ನಾಗವರ್ಮ ಬೇರೆ, 'ಕಾದಂಬರಿ'ಯ ನಾಗವರ್ಮ ಬೇರೆ ಎಂದು ಶ್ರೀ. ಚನ್ನಕೇಶವಯ್ಯಂಗಾರರು ವಾದಿಸಿದರೆ ಅವರಿಬ್ಬರೂ ಒಂದೇ ನಾಗವರ್ಮನೆಂದು ಶ್ರೀ. ರಾಜಪುರೋಹಿತರು ನಿರ್ಣಯಿಸಿದ್ದಾರೆ. ೧೦ನೆಯ ಶ.ದ ಕೊನೆ, ೧೧ನೆಯ ಶ.ದ ಮೊದಲಲ್ಲಿ ಎರಡೂ ಗ್ರಂಥಗಳನ್ನು ರಚಿಸಿದ ೧ನೆಯ ನಾಗವರ್ಮ ಒಬ್ಬನೇ ಎಂದೂ ೧೨ನೆಯ ಶ.ದಲ್ಲಿದ್ದ ೨ನೆಯ ನಾಗವರ್ಮನು ಬೇರೆ ಎಂದೂ ಶ್ರೀ. ಗೋವಿಂದ ಪೈಗಳು ಅಭಿಪ್ರಾಯಪಟ್ಟಿದ್ದಾರೆ.

ಈ ಸಮಸ್ಯೆಯ ವಿಸ್ತಾರವಾದ ವಿವೇಚನೆ ಇಲ್ಲಿ ಸಾಧ್ಯವಿಲ್ಲ. ನಮಗೆ ಒಪ್ಪಿಗೆಯಾದ ಕೆಲವು ಅಂಶಗಳನ್ನು ತಿಳಿಸಬಹುದು. ಇಬ್ಬರು ನಾಗವರ್ಮರಿದ್ದರೆಂಬುದು ಹಲವು ಕಾರಣಗಳಿಂದ ಸಿದ್ಧವಾಗುತ್ತದೆ. ಅವುಗಳಲ್ಲಿ ಪ್ರಬಲ ಕಾರಣವೆಂದರೆ ಮತವಿಚಾರ. 'ಛಂದೋಂಬುಧಿ', 'ಕಾದಂಬರಿ'ಗಳ ನಾಗವರ್ಮನು ವೈದಿಕ ಬ್ರಾಹ್ಮಣನಾದರೆ ವಸ್ತುಕೋಶ ಕಾವ್ಯಾವಲೋಕನಾದಿಗಳ ನಾಗವರ್ಮನು ಜೈನ ಬ್ರಾಹ್ಮಣನಾಗಿದ್ದಾನೆ. ಕನಿಷ್ಠ ಪಕ್ಷಕ್ಕೆ ೧ನೆಯ ನಾಗವರ್ಮನು ವೈದಿಕನೋ ಜೈನನೋ ಎಂಬ ಸಂಶಯಕ್ಕೆಡೆಯಿದ್ದರೆ, ೨ನೆಯ ನಾಗವರ್ಮನು ನಿಸ್ಸಂಶಯವಾಗಿ ಜೈನನೆಂಬುದನ್ನು ಒಪ್ಪಬೇಕು. ೧ನೆಯ ನಾಗವರ್ಮನ ಮತವಿಷಯದಲ್ಲಿ ಸಂಶಯವು ಸಹ 'ಗುರುಗಳ್ ನೆಗಟ್ದ ಜಿತವೀರಸೇನರ್' ಎಂಬ ಒಂದೇ ಒಂದು ತೆಳ್ಳನೆಯ ಆಧಾರದಿಂದ ಉಂಟಾಗಿದ್ದು ಉಳಿದೆಲ್ಲ ಆಧಾರಗಳು ಆ ಸಂಶಯವನ್ನು ನಷ್ಟಗೊಳಿಸುವ ರೀತಿಯಲ್ಲಿವೆ. ಇತರ ಕಾರಣಗಳಲ್ಲಿ ೨ನೆಯ ನಾಗವರ್ಮ ತನಗೆ ಮೊದಲಿಗನಾದ ನಾಗವರ್ಮನೊಬ್ಬನ ಉಲ್ಲೇಖಮಾಡಿದ್ದು, ಇಬ್ಬರ ಬಿರುದುಗಳಲ್ಲಿಯ ಭೇದ, ವಿಶೇಷವಾಗಿ 'ಅಭಿನವಶರ್ಮವರ್ಮ' ಎಂಬ ೨ನೆಯ ನಾಗವರ್ಮನ ಬಿರುದು ೧ನೆಯ ನಾಗವರ್ಮನಲ್ಲಿ ದೊರೆಯದಿದ್ದುದು, ಚಾರಿತ್ರಿಕ ವಿವರಗಳಲ್ಲಿಯ ಭೇದ ಇವನ್ನು ಗಮನಿಸಬೇಕು. ೨ನೆಯ ನಾಗವರ್ಮನು ೧೨ನೆಯ ಶ.ದಲ್ಲಿ ಬಹುಶಃ ಅದರ ಉತ್ತರಾರ್ಧದಲ್ಲಿ ಆಗಿಹೋದನೆಂದು ಗ್ರಹಿಸಬಹುದು. ೧ನೆಯ ನಾಗವರ್ಮನು ಒಬ್ಬನೊ ಇಬ್ಬರೊ ಎಂಬುದು ಸ್ಪಷ್ಟವಾಗದೆ ಅವನ ಕಾಲವಿಚಾರವು ತಿಳಿಯದು, ಆದರೆ ಸ್ಪಷ್ಟವಾಗುವುದು ಸುಲಭವೇನಲ್ಲ. 'ಛಂದೋಂಬುಧಿ' ಹಾಗೂ 'ಕಾದಂಬರಿ'-ಗಳನ್ನು ನಿರುಕಿಸಿದರೆ ಗ್ರಂಥವಿಷಯ, ಪ್ರತಿಪಾದನೆ, ಶೈಲಿ ಮುಂತಾದ್ದರಲ್ಲಿ ಹೋಲಿಕೆಗೆ ಅವಕಾಶವೇ ಇಲ್ಲವೆನ್ನುವಷ್ಟು ಭೇದಗಳು ಎದ್ದು ತೋರಿದರೂ ಸಾಮ್ಯದ ಅಂಶಗಳು ತಿಳಿದಷ್ಟು ಕವಿಚರಿತ್ರೆ ಮತ್ತು ವ್ಯಕ್ತಿಸ್ವರೂಪದಲ್ಲಿ ಅಡಕವಾಗಿವೆ. ಮುಖ್ಯವಾದ ಭೇದವು ಆಶ್ರಯದಾತನಿಂದ ಉಂಟಾಗಿದೆ. ಛಂದೋಂಬುಧಿಯಲ್ಲಿ 'ಅರಸಂ ರಕ್ಕಸಗಂಗಂ' ಆಗಿದ್ದರೆ ಕಾದಂಬರಿಯಲ್ಲಿ 'ಕೃತಿಪತಿ ನರೇಂದ್ರಚಂದ್ರಂ' ಎಂದಿದೆ. ಈ

ಭೇದವನ್ನು ತೊಡೆದುಹಾಕಲು ಛಂದೋಂಬುಧಿಯಲ್ಲಿಯ ಚಾರಿತ್ರಿಕವಾದ ಆ ಎರಡು ಪದ್ಯಗಳು ಕವಿಕೃತವಾಗಿರದೆ ಪ್ರಕ್ಷಿಪ್ತವೆನ್ನಬೇಕಾಗುತ್ತದೆ ಹಾಗೂ ಒಂದರಲ್ಲಿ ಉಲ್ಲೇಖ, ಇನ್ನೊಂದರಲ್ಲಿ ಅನುಲ್ಲೇಖ ಎಂಬುದನ್ನು ಬಾಧಕಯುಕ್ತಿಯಾಗಿ ಬಳಸದೆ ಇರಬೇಕಾಗುತ್ತದೆ. ಇವೆರಡೂ ಅಸಾಧ್ಯವಲ್ಲ. ಶ್ರೀ. ರಾಜಪುರೋಹಿತರು ತೋರಿದಂತೆ ಚಂದ್ರನೆಂದರೆ ಚಾಲುಕ್ಯ ೧ನೆಯ ಸೋಮೇಶ್ವರ(೧೦೪೨-೬೮)ನೆಂದಾದರೆ ಎರಡೂ ಗ್ರಂಥಗಳಲ್ಲಿ ದೊರೆತ ಚಾರಿತ್ರಿಕ ವಿವರಗಳ ಹೊಂದಿಕೆಯಾಗಿ, ಒಬ್ಬನೇ ನಾಗವರ್ಮನು ಅವುಗಳ ಕರ್ತೃವಾಗಿ ೧೧ನೆಯ ಶ.ದ ಮಧ್ಯದಲ್ಲಿ ಬಾಳಿದನೆಂದು ಹೇಳಬಹುದು. ಶ್ರೀ. ಗೋವಿಂದ ಪೈಗಳು ಸೂಚಿಸಿದಂತೆ ಚಂದ್ರನು ಶಿಲಾಹಾರ ಚಂದ್ರನಾದರೆ ೧ನೆಯ ನಾಗವರ್ಮನು ೧೧ನೆಯ ಶ.ದ ಮೊದಲಿನವನಾಗುತ್ತಾನೆ. ಇದೇನೇ ಇದ್ದರೂ, 'ಛಂದೋಂಬುಧಿ', 'ಕಾದಂಬರಿ'ಗಳ ನಾಗವರ್ಮನೊಬ್ಬನೇ ಇರುವ ಸಂಭವವು ಹೆಚ್ಚಾಗಿದೆಯೆಂದು ತಾತ್ಪೂರ್ತಿಕವಾಗಿ ನಮಗೆ ತೋರುತ್ತದೆ.

ನಾಗಚಂದ್ರನ ಕಾಲವಿಚಾರದಲ್ಲಿ ನಾಗವರ್ಮ ಹಾಗೂ ಇತರರ ಕಾಲವಿಚಾರವೂ ಸೇರಿಕೊಂಡಿದೆ, ಮತಭೇದಕ್ಕೆ ಅವಕಾಶವುಂಟಾಗಿದೆ. ಅವನ ಕಾಲ ಸು. ೧೧೦೦ ಎಂದು ಕವಿಚರಿತಕಾರರು, ೧೦೪೦ಕ್ಕೆ ಹಿಂದಿನದೆಂದು ಶ್ರೀ. ವೆಂಕಟಸುಬ್ಬಯ್ಯನವರು, ೧೧೪೦ ಎಂದು ಶ್ರೀ. ಗೋವಿಂದ ಪೈಗಳು ಅಭಿಪ್ರಾಯಪಟ್ಟಿದ್ದಾರೆ. ಇವರೆಲ್ಲರ ಅಭಿಪ್ರಾಯಗಳನ್ನು ಚರ್ಚಿಸಿ ಹೊಸ ಆಧಾರಗಳನ್ನು ಉಲ್ಲೇಖಿಸಿ ನಾಗಚಂದ್ರನು ೧೧೪೦ರಲ್ಲಿ 'ಪಂಪರಾಮಾಯಣ'ವನ್ನು ರಚಿಸಿರಬೇಕೆಂದು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು 'ಪಂಪರಾಮಾಯಣ ಸಂಗ್ರಹ'ದ (೨ನೆಯ ಆವೃತ್ತಿ) ಪೀಠಿಕೆಯಲ್ಲಿ ನಿರ್ಣಯಿಸಿದ್ದಾರೆ. ೧೧ನೆಯ ಶ.ದ ಮೊದಲಿನ ಇಲ್ಲವೆ ನಡುವಿನ ಕಾಲದಲ್ಲಿ ನಾಗಚಂದ್ರನನ್ನು ಇರಿಸುವುದಕ್ಕೆ ಕಾರಣಗಳು ಸಬಲವಾಗಿಲ್ಲ. ೧೧ನೆಯ ಶ.ದ ಕೊನೆಯಿಂದ ೧೨ನೆಯ ಶ.ದ ಮೊದಲಲ್ಲಿ ಅವನು ಜೀವಿಸಿದ್ದು ಗ್ರಂಥಗಳನ್ನು ಬರೆದನೆಂಬುದಕ್ಕೆ ಹೆಚ್ಚು ಆಧಾರಗಳು ಪೋಷಕವಾಗಿವೆ.

೧೦ನೆಯ ಶ.ದಿಂದ ೧೨ನೆಯ ಶ.ದ ಮಧ್ಯದ ವರೆಗಿನ ಕಾಲವು ರಾಜಕೀಯ ಮುಂತಾದ ದೃಷ್ಟಿಯಿಂದ ಉಜ್ವಲವಾದರೂ ಅಸ್ಥಿರವಾದುದು. ಅರಸುಮನೆತನಗಳು, ಮತಗಳು ಈ ಕಾಲದಲ್ಲಿ ಏಳುಬೀಳನ್ನು ಅನುಭವಿಸಿರುತ್ತವೆ. ಆದರೂ ವೀರಸತ್ವವು ಕನ್ನಡನಾಡನ್ನು ಆಕ್ರಮಣದಿಂದ ಕಾಯ್ದುಕೊಂಡು ಬಂದು ಮತಧರ್ಮಗಳಿಗೆ ಉದಾರ ಆಶ್ರಯವನ್ನು ನೀಡಿದ್ದು ಕಂಡುಬಂದಿದೆ. ೮ನೆಯ ಶ.ದಲ್ಲಿ ತಲೆಯೆತ್ತಿ ೯ನೆಯ ಶ.ದಲ್ಲಿ ಹೆಸರುಪಡೆದ ರಾಷ್ಟ್ರಕೂಟ ವಂಶವು ೧೦ನೆಯ ಶ.ದಲ್ಲಿ ದಿಗ್ವಿಜಯವನ್ನು ಹೊಂದಿ ವೈಭವದ ಎತ್ತರವನ್ನು ಮುಟ್ಟಿ ಬೆಳಗುತ್ತಲೆ ಕೆಳಗೆ ಬಿದ್ದಿತು. ಈ ವಂಶದಲ್ಲಿ ಹಿಂದೆ ನೃಪತುಂಗನು ಲೋಕಪ್ರಸಿದ್ಧನಾದಂತೆ ಈಗ ೩ನೆಯ ಕೃಷ್ಣನು ಹೆಸರುವೆತ್ತನು. ಉತ್ತರದ ಚೇದಿ, ದಕ್ಷಿಣದ ಚೋಳ ಮುಂತಾದ ರಾಜರನ್ನು ಗೆದ್ದು ಅವನು ರಾಷ್ಟ್ರಕೂಟ ರಾಜ್ಯದ ಮೇರೆಗಳನ್ನು ಹಿಗ್ಗಲಿಸಿದನು. ಈ ವಿಸ್ತಾರವಾದ ಸಾಮ್ರಾಜ್ಯದ

ಭಾಗಗಳನ್ನು ಮಾಂಡಲಿಕರು ಆಳುತ್ತಿದ್ದರು. ಇವರಲ್ಲಿ ತಳಕಾಡಿನ ಗಂಗರೂ ವೇಮುಲವಾಡದ ಚಾಲುಕ್ಯರೂ ಪ್ರಮುಖರಾಗಿದ್ದು ರಾಷ್ಟ್ರಕೂಟಸಾಮ್ರಾಜ್ಯಕ್ಕೆ ಆಧಾರಸ್ತಂಭವಾಗಿದ್ದರು. ತಮ್ಮ ಶಕ್ತಿಯುಕ್ತಿಗಳಿಂದಲೂ ಆಪ್ತಸಂಬಂಧದ ಸಲುಗೆ-ಯಿಂದಲೂ ಇವರು ಹೆಸರಿಗೆ ಸಾಮಂತರಾದರೂ ಸಾಮ್ರಾಜ್ಯದ ಅಳಿವು-ಉಳಿವುಗಳು ತಮ್ಮ ಕೈಯಲ್ಲಿದ್ದಂತೆ ಮೆರೆಯುವ ಸ್ವತಂತ್ರಪ್ರಭುಗಳಾಗಿದ್ದರು. ಆದಿಪಂಪನ ಪೋಷಕ-ನಾದ ೨ನೆಯ ಅರಿಕೇಸರಿ ರಾಷ್ಟ್ರಕೂಟ ೩ನೆಯ ಕೃಷ್ಣನ ಸಾಮಂತನಾಗಿದ್ದರೂ ಸಮ್ರಾಟನ ಜರುಬಿನಿಂದ ನಡೆಯುತ್ತಿರಬೇಕು. ಜನಕ್ಕೆ ಬೇಡಾದ ಕಾಮುಕ ದೊರೆ-ಯನ್ನು ಕಿತ್ತೊಗೆದು ಬೇರೊಬ್ಬನನ್ನು ರಾಷ್ಟ್ರಕೂಟಚಕ್ರವರ್ತಿಯನ್ನಾಗಿ ಹೋರಾಡಿ ನಿರಿಸಿದ ಶ್ರೇಯಸ್ಸು ಅರಿಕೇಸರಿಯದು. ೧೦ನೆಯ ಶ.ದ ಕೊನೆಗೆ ರಾಷ್ಟ್ರಕೂಟರ ದೌರ್ಬಲ್ಯ ಸಾಧಿಸಿ ಬದಾಮಿಯ ಚಾಲುಕ್ಯರ ವಂಶಜರು ಅವರ ಮೇಲಿನ ಸೇಡು ತೀರಿಸಿ ಸ್ವತಂತ್ರ ರಾಜರಾದರು. ಕಲ್ಯಾಣ ಚಾಲುಕ್ಯವಂಶವು ತಲೆದೋರಿತು. ಚೋಳರ ಹೊಡೆತಕ್ಕೆ ಸಿಕ್ಕು ಗಂಗರಾಜ್ಯವು ನಿಸ್ಸತ್ವವಾಯಿತು. ೧೧ನೆಯ ಶ.ದಿಂದ ರಾಜಕೀಯ ಸಾಮಾಜಿಕ ಜೀವನದಲ್ಲಿ ಹೊಸ ಮನ್ವಂತರವು ಮೊದಲಾಯಿತು. ೧೧ನೆಯ ಹಾಗೂ ೧೨ನೆಯ ಶ.ದಲ್ಲಿ ಎಲ್ಲ ಕಡೆಯಲ್ಲಿ ಯುದ್ಧದ ಮೇಲೆ ಯುದ್ಧಗಳು. ರಾಜಕೀಯ ರಂಗದಲ್ಲಿ ಚಾಲುಕ್ಯರಿಗೂ ಚೋಳರಿಗೂ ಸತತವಾಗಿ ಕಾಳಗಗಳು ನಡೆಯುತ್ತಿದ್ದುವು. ಜಯಶ್ರೀ ಒಮ್ಮೆ ಅವರಿಗೆ, ಒಮ್ಮೆ ಇವರಿಗೆ ಒಲಿಯುತ್ತಿದ್ದಳು. ಒಟ್ಟಿನಲ್ಲಿ ಶೂರಧೀರರಾದ ಚಾಲುಕ್ಯರಾಜರು—ವಿಶೇಷವಾಗಿ ಶಕಪುರುಷನಾದ ೬ನೆಯ ವಿಕ್ರಮಾದಿತ್ಯನು—ಚೋಳರನ್ನು ಹಿಮ್ಮೆಟ್ಟಿಸಿ ಕರ್ನಾಟಕವನ್ನು ಸಂರಕ್ಷಿಸಿದರು.

ಧಾರ್ಮಿಕ ದೃಷ್ಟಿಯಿಂದ ಈ ಯುಗವನ್ನು ನೋಡಿದರೆ ಹಬ್ಬುತ್ತಿರುವ ಜೈನ-ಮತಕ್ಕೆ ಹೊರನಾಡಿನ ಶೈವರಾಜರಿಂದ ಧಕ್ಕೆ ತಗಲಿದರೂ ಒಳನಾಡಿನಲ್ಲಿ ವೈದಿಕ-ಮತಗಳೊಡನೆ ಅದಕ್ಕೆ ಪ್ರೋತ್ಸಾಹವು ದೊರೆಯುತ್ತಲೇ ಇದ್ದಿತು. ೧೦ನೆಯ ಶತಮಾನದಲ್ಲಿ ರಾಷ್ಟ್ರಕೂಟರೂ ಗಂಗರೂ ಜೈನಧರ್ಮಕ್ಕೆ ವಿಶೇಷವಾದ ಪೋಷಕ-ರಾಗಿದ್ದರು. ಈ ಶ.ದ ಕೊನೆಯ ಭಾಗದಲ್ಲಿ ವೀರಚಾವುಂಡರಾಯನಿಂದ ಶ್ರವಣ-ಬೆಳ್ಗೊಳದಲ್ಲಿ ಭವ್ಯವಾದ ಗೊಮ್ಮಟೇಶ್ವರ ಮೂರ್ತಿಯ ಪ್ರತಿಷ್ಠೆಯಾಯಿತು. ಜೈನ-ರಿಗೂ ಇತರರಿಗೂ ಸ್ಫೂರ್ತಿಕೇಂದ್ರವಾದ ಕಲಾನಿರ್ಮಿತಿಯಾಯಿತು. '೧೦ನೆಯ ಶತಮಾನವೆಂದರೆ ಶೈವ-ವೈಷ್ಣವ ಧರ್ಮಗಳ ಪ್ರಸಾರವು ಹೆಚ್ಚಾಗಿ ಜೈನಧರ್ಮವು ಕುಂದಿದ ಕಾಲ'[1] ಎಂಬೊಂದು ಅಭಿಪ್ರಾಯವಿದೆ. ರಾಜಾಶ್ರಯದ ದೃಷ್ಟಿಯಿಂದ ಈ ಶತಮಾನದಲ್ಲಿ ಜೈನಧರ್ಮವು ಕುಂದಿತೆಂದು ಹೇಳಿದರೆ ಸರಿಯಾಗದು. ಶೈವ-ವೈಷ್ಣವ ಧರ್ಮಗಳ ಪ್ರಸಾರವನ್ನು ಮಾಡಿದ ರಾಜರು ಜೈನಧರ್ಮವನ್ನು ಪುರಸ್ಕರಿ-

---

1 ರಾ. ಸ್ವಾ. ಪಂಚಮುಖಿ : ಅರಿಕೇಸರಿಯೂ ಪಂಪನ ಯುಗವೂ
(ಕ.ಸಾ.ಪ., ೩೧-೨, ಪು. ೨೦)

ಸಿದರು. ಪಂಡಿತರಲ್ಲಿ ಮತೀಯ ಸಂಘರ್ಷಗಳೂ ವಾದವಿವಾದಗಳೂ ನಡೆದಿರಬೇಕು. ಜೈನಪ್ರಚಾರಕವಾದ ವಾದಸರಣಿಗೆ ಪುಟದೊರೆತಿರಬೇಕು. ಸೋಮದೇವನ 'ಯಶಸ್ತಿಲಕಚಂಪು' ಇದನ್ನು ತಿಳಿಸುತ್ತದೆ.[1] ೧೧ನೆಯ ಶತಕದಿಂದ ಮಾತ್ರ ಜೈನಧರ್ಮಕ್ಕೆ ಶೈವರಾದ ಚೋಳರಿಂದ ರಾಜಕೀಯ ಆಘಾತಗಳೂ ವೈದಿಕ ಹಾಗೂ ಅವೈದಿಕ ಭಕ್ತಿಪಂಥಗಳಿಂದ ಧಾರ್ಮಿಕ ಒತ್ತಡಗಳೂ ಹೆಚ್ಚುತ್ತ ಸಾಗಿದುವು. ಚಾಲುಕ್ಯರು ತಮ್ಮ ಪ್ರಬಲ ವೈರಿಗಳಾದ ಚೋಳರನ್ನು ತಡೆಗಟ್ಟಿ ಕರ್ನಾಟಕವನ್ನು ಆಕ್ರಮಣದಿಂದ ಮುಕ್ತಮಾಡಿದ್ದಲ್ಲದೆ ಜೈನಧರ್ಮಕ್ಕೆ ಸಂರಕ್ಷಣೆಯನ್ನು ಒದಗಿಸಿದರು. ಆದರೂ ಜೈನಮತೀಯರೇ ಆದ ಗಂಗರಾಜರ ಅವನತಿ ಜೈನಮತಕ್ಕೆ ಬಲವಾದ ಪೆಟ್ಟಾಯಿತು. ಚೋಳರ ನಾಡಿನಿಂದ ಕನ್ನಡನಾಡಿಗೆ ಬಂದ ರಾಮಾನುಜ ಮತದ ಭಕ್ತಿಪ್ರವಾಹವು ಜೈನಪ್ರಸಾರಕ್ಕೆ ತಡೆಯನ್ನೊಡ್ಡಿತು. ಜನಜೀವನದ ಅಂತರಾಳದಲ್ಲಿ ಹುದುಗಿದ ದೈವಭಕ್ತಿ ಜಾಗೃತವಾಗಿ ಜಿನಭಕ್ತಿಯು ಸ್ವರೂಪವನ್ನಾದರೂ ಪಲ್ಲಟಿಸತೊಡಗಿತು ಇಲ್ಲವೆ ಅದಕ್ಕೆ ವಿಮುಖವಾಗಲು ಹತ್ತಿತು. ಈ ಸಂದರ್ಭದಲ್ಲಿ ಶೈವ–ವೈಷ್ಣವ ಧರ್ಮಗಳು ತಮ್ಮ ಕಹಳೆಯನ್ನು ಎತ್ತರದಲ್ಲಿ ಊದುತ್ತ ಹೊರಡಲಾಗಿ ಜೈನಧರ್ಮವು ಸ್ವತ್ವರಕ್ಷಣೆಗಾಗಿ ಇದಿರಾಳಿಯಂತೆ ಹೋರಾಡಬೇಕಾಯಿತು. ಮತೀಯ ಅಸೂಯೆ, ಪರಸ್ಪರ ದೂಷಣೆ ಪಂಡಿತರಲ್ಲಿಯೂ ಗ್ರಂಥಕಾರರಲ್ಲಿಯೂ ಮಿಗಿಲಾಗುತ್ತ ನಡೆದುವು. ೧೩ನೆಯ ಶ.ದ ಮಧ್ಯದವರೆಗೆ ಈ ಬಗೆಯಾಗಿ ಪಂಡಿತರನ್ನು ವಾದದಿಂದಲೂ ಜನತೆಯನ್ನು ಪವಾಡ ಮತ್ತು ವ್ಯಕ್ತಿಮಹಿಮೆಗಳಿಂದಲೂ ವಶೀಕರಿಸಿಕೊಳ್ಳುವ ಪ್ರಯತ್ನವನ್ನು ಜೈನ ಹಾಗೂ ಜೈನೇತರ ಮತಗಳು ಮಾಡಿರಬೇಕು.

ಸಾಮಾಜಿಕ ಜೀವನದಲ್ಲಿ ರಾಜಕೀಯ–ಧಾರ್ಮಿಕ ಸ್ಥಿತ್ಯಂತರಗಳ ಪಡಿನೆಳಲು ಸ್ವಾಭಾವಿಕವಾಗಿ ಮೂಡಿರಬೇಕು. ಆದರೂ ವಿಕೇಂದ್ರೀಕೃತವಾದ ಅಂದಿನ ಜನಜೀವನವು ಒಟ್ಟನಲ್ಲಿ ಸ್ವಸ್ಥವಾಗಿ ಸಾಂಪ್ರದಾಯಿಕವಾಗಿ ನಡೆಯುತ್ತ ಬಂದಿರಬೇಕು. ೧೦, ೧೧ನೆಯ ಶತಕಗಳಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಕಾಲದ ರಾಜ್ಯವೈಭವ, ಸಂಪತ್ತು, ಕಲಾತಿಶಯ ಇವಕ್ಕೆ ಯಾವ ಅಂತಃಕಲಹಗಳೂ ಹೊರಯುದ್ಧಗಳೂ ಬಾಧಕವಾಗಲಿಲ್ಲ. ಇದನ್ನು ೬ನೆಯ ವಿಕ್ರಮಾದಿತ್ಯನ ಕಾಲದ ಚಿತ್ರದಿಂದ ತಿಳಿದುಕೊಳ್ಳಬಹುದು.[2] ೧೧ನೆಯ ಶ.ದಲ್ಲಿ ಮಾತ್ರ ಚೋಳರಾಜನು ರಟ್ಟ ಮತ್ತು ಬೆಳ್ವೊಲನಾಡುಗಳ ಮೇಲೆತ್ತಿಬಂದು ಪುಲಿಗೆರೆ ಮುಂತಾದ ಪಟ್ಟಣಗಳನ್ನು ಸುಲಿದು ಕೆಲವು ಬಸದಿಗಳನ್ನು ಸುಟ್ಟು ಮಾಡಿದ ಹಾವಳಿ ಜೈನಸಮಾಜಕ್ಕೆ ಅತ್ಯಂತ ಭೀತಿ ಮತ್ತು ಅಸ್ಥಿರತೆಯ ವಾತಾವರಣವನ್ನು ಉಂಟುಮಾಡಿರಬೇಕು. ಇದರ

---

1 K. K. Handiqui: Yas'astilaka and Indian Culture.

2 ಬಿಲ್ಹಣ: ವಿಕ್ರಮಾಂಕಚರಿತೆ.

ತೀವ್ರಪ್ರತಿಕ್ರಿಯೆಯ ಭೀತಿ ಇತರ ಸಮಾಜಗಳನ್ನು ಚಿಂತೆಗೆ ಒಳಗುಮಾಡಿರಬೇಕು. ಅಂದಿನ ರಾಜರ ಉದಾರದೃಷ್ಟಿ ಎಲ್ಲ ಈ ಭೀತಿಗಳನ್ನು ಕಳೆಯಿತೆಂಬುದು ಹೆಮ್ಮೆಯ ವಿಷಯವಾಗಿದೆ.

ಈ ಯುಗದ ವೈಶಿಷ್ಟ್ಯಗಳು

ಸಾಹಿತ್ಯದೃಷ್ಟಿಯಿಂದ ಈ ಯುಗವು ಮಾರ್ಗ ಅಥವಾ ಪ್ರೌಢಸಂಪ್ರದಾಯದ ಸ್ಥಿರತೆ ಮತ್ತು ಘನತೆಗಳನ್ನು ತೋರಿ ಬಹುಶಃ ಏಕರೂಪವಾಗಿದೆ. ಆದರೂ ಇದರಲ್ಲಿ ಸಂಪ್ರದಾಯವಿರೋಧದ ಬೀಜಗಳಿವೆ, ಬರಲಿರುವ ಪಲ್ಲಟದ ಗುರುತುಗಳಿವೆ. ಇದರ ವೈಶಿಷ್ಟ್ಯಗಳನ್ನು ಹೀಗೆ ನಿರೂಪಿಸಬಹುದು: (೧) ಈ ಯುಗದಲ್ಲಿ ಹೆಚ್ಚು ಕವಿಗಳು ಜೈನಮತೀಯರು. ಸ್ವತಂತ್ರ ಮಹಾಕಾವ್ಯಗಳನ್ನು ರಚಿಸಿದವರೆಲ್ಲ ಜೈನರು. ಶಾಸನಕವಿ ಇಲ್ಲವೆ ಅನುವಾದಕಾರರಾಗಿ ಬ್ರಾಹ್ಮಣರು ಕೆಲವರಿದ್ದಾರೆ; ಇವರಲ್ಲಿ ಸ್ವತಂತ್ರನಿರ್ಮಿತಿ ಅಪರೂಪವಾಗಿದೆ. ಜೈನರಾದ ಮಲ್ಲಿನಾಥ (೧೦೬೭), ಹರಿಯಣ್ಣ (೧೦೭೫), ದಾಮರಾಜ (೧೦೮೫) ಇವರನ್ನುಳಿದು ಅನೇಕ ಶಾಸನಕವಿಗಳು ಶೈವ-ಬ್ರಾಹ್ಮಣರಾಗಿದ್ದಾರೆ. ಎಲ್ಲರ ಶಾಸನಕಾವ್ಯಗಳಲ್ಲಿ ವೀರಕವಿತ್ವ ಮೈದೋರಿದೆ. (೨) ಕಾವ್ಯವಿಷಯದಲ್ಲಿ ಲೌಕಿಕ ಹಾಗೂ ಧಾರ್ಮಿಕ ಇಲ್ಲವೆ ಆಗಮಿಕ ಎಂಬ ಹಂಚಿಕೆ ನೆಲೆಗೊಂಡಿತು. ಈ ಯುಗದ ಪ್ರಸಿದ್ಧ ಕವಿಗೂ ರತ್ನತ್ರಯರೂ ಆದ ಪಂಪ, ಪೊನ್ನ, ರನ್ನರು ಒಂದು ಲೌಕಿಕ ಇನ್ನೊಂದು ಆಗಮಿಕ ಕಾವ್ಯವನ್ನು ರಚಿಸಿದರು. ಪಂಪ-ಪೂರ್ವಯುಗದಲ್ಲಿಯೇ ಈ ಪದ್ಧತಿ ಮೊದಲಾಗಿರಬೇಕೆಂಬುದಕ್ಕೆ ೧ನೆಯ ಗುಣವರ್ಮನ ಶೂದ್ರಕ (ಲೌಕಿಕ), ಹರಿವಂಶ (ಆಗಮಿಕ) ಈ ಕೃತಿಗಳು ಸಾಕ್ಷಿ. ಲೌಕಿಕಕೃತಿಗಳು ಆಶ್ರಯದಾತರಾಜನ ಚರಿತ್ರೆ, ತತ್ಕಾಲೀನ ರಾಜಕೀಯ ಹಾಗೂ ಇತರ ಜೀವನ ಇವನ್ನು ಸೂಚಿಸುವ ಚಾರಿತ್ರಿಕ ಧ್ವನಿಕಾವ್ಯಗಳಾದುವು. ರಾಮಾಯಣ-ಮಹಾ-ಭಾರತ, ಪುರಾಣಗಳ ಕಥಾವಸ್ತು ಈ ಧ್ವನಿರಮ್ಯತೆಗೆ ಆಧಾರವಾಯಿತು. ನೇರವಾದ ಚರಿತ್ರಕಾವ್ಯಗಳಿಗಿಂತ ಬೇರೆಯಾದ ಈ ಸರಣಿ ಕನ್ನಡ ಹಾಗೂ ಭಾರತೀಯ ಸಾಹಿತ್ಯಕ್ಕೆ ವಿಶಿಷ್ಟವಾದುದು. ಆಗಮಿಕ ಕಾವ್ಯಗಳು ತೀರ್ಥಂಕರರು, ಚಕ್ರವರ್ತಿಗಳು, ಮಹಾಪುರುಷರು ಇವರ ಮಹಾ ಜೀವನಚರಿತ್ರೆಗಳಾಗಿ ಜೈನಧರ್ಮಪ್ರಸಾರಕ್ಕೆ ವಾಹಕಗಳಾದುವು. ಇವುಗಳಿಂದ ಜೈನಪುರಾಣಗಳೆಂಬ ಕಾವ್ಯಪ್ರಕಾರವು ಈ ಯುಗದಲ್ಲಿ ಪ್ರಚುರಗೊಂಡಿತು. (೩) ಚಂಪುವೆಂಬ ಕಾವ್ಯರೂಪವು ಈ ಯುಗದಲ್ಲಿ ತನ್ನ ಕಳಸವನ್ನು ಮುಟ್ಟಿತು, ಪ್ರಮಾಣಸ್ವರೂಪವನ್ನು ಹೊಂದಿತು. ಬರಬರುತ್ತ ಅಂಧಾನುಕರಣಕ್ಕೆ ಅವಕಾಶಕೊಡುವ ಪಡಿಯಚ್ಚಾಗಿಯೂ ಪರಿಣಮಿಸತೊಡಗಿತು. ಚಂಪುವಿನ ಚೆಲುವಾದ ರೂಪದಲ್ಲಿ ಗದ್ಯಪದ್ಯದ ಹಿತವಾದ ಬೆರಕೆ, ದೇಸಿ-ಮಾರ್ಗಗಳ ಸಮನಾದ ಸಂಯೋಗ, ಕವಿಪ್ರತಿಭೆ-ಕವಿಸಮಯಗಳ ಸಮನ್ವಯ ಇವು ತೋರಿದುವು. ಸಂಸ್ಕೃತಮಹಾಕಾವ್ಯದ ಪ್ರಮುಖ ಲಕ್ಷಣಗಳನ್ನು ಒಳಗೊಂಡರೂ ಕಂದವೃತ್ತಗಳ

ವಿಶಿಷ್ಟರೀತಿಯ ಸೇರ್ಪಡೆಯಿಂದಲೂ ರಗಳೆ–ಅಕ್ಕರ–ತ್ರಿಪದಿ ಈ ಜಾನಪದ ಛಂದಸ್ಸಿನ ಪ್ರಕಾರಗಳ ಸಮಾವೇಶದಿಂದಲೂ ಒಟ್ಟುಸ್ವರೂಪದಲ್ಲಿ ಈ ಯುಗದ ಚಂಪು ಕನ್ನಡ-ಚಂಪುವಾಯಿತು, ಸತ್ಕಾವ್ಯ ಹಾಗೂ ಮಹೋನ್ನತ ಕಾವ್ಯಕ್ಕೆ ಪ್ರಭಾವಿಯಾದ ಸಾಧನವಾಯಿತು. ಜೈನಪುರಾಣಗಳ ವಸ್ತುವಿಶೇಷ, ರಸನಿರೂಪಣೆ, ಮತ-ಪ್ರತಿಪಾದನೆ ಇವುಗಳನ್ನೊಳಗೊಂಡ ಚಂಪೂರೂಪವು ಇನ್ನಿಷ್ಟು ವೈಶಿಷ್ಟ್ಯಸಂಪನ್ನ-ವಾಗಿ ಮೆರೆದಿದೆ. (೪) ರಸದೃಷ್ಟಿಯಿಂದ ಈ ಯುಗದ ಕಾವ್ಯಗಳಲ್ಲಿ ನವರಸಗಳೆಲ್ಲ ಬಂದಿವೆಯಾದರೂ ಒಮ್ಮೆ ವೀರ–ರೌದ್ರ, ಒಮ್ಮೆ ಅದ್ಭುತ–ಶಾಂತ ಇವಕ್ಕೆ ಪ್ರಾಮುಖ್ಯ ದೊರೆತಿದೆ. ಲೌಕಿಕ ಕಾವ್ಯಗಳಲ್ಲಿ ಸಾಮಾನ್ಯವಾಗಿ ವೀರರೌದ್ರವೂ ಆಗಮಿಕ ಪುರಾಣಗಳಲ್ಲಿ ಅದ್ಭುತ–ಶಾಂತವೂ ಪ್ರಧಾನವಾಗಿವೆಯೆನ್ನಬಹುದು. ಸಂಸ್ಕೃತ ಮಹಾಕಾವ್ಯದಂತೆ ಶೃಂಗಾರವು ವೀರದ ಸ್ಥಾನದಲ್ಲಿ ತಲೆದೋರಿಲ್ಲ. ಸಂಸ್ಕೃತದಿಂದ ಅನುವಾದಿತವಾದ ನಾಗವರ್ಮನ 'ಕಾದಂಬರಿ' ಮಾತ್ರ ಇದಕ್ಕೆ ಅಪವಾದವಾಗಿದೆ. ಶೃಂಗಾರರಸಕ್ಕೆ ಬೇರೆಬೇರೆ ಕಾವ್ಯಸಂದರ್ಭಗಳಲ್ಲಿ ಪ್ರಾಶಸ್ತ್ಯದೊರೆತಿದ್ದರೂ ಸಮಗ್ರ ಕಾವ್ಯದಲ್ಲಿ ಪ್ರಾಧಾನ್ಯ ದೊರೆತಿಲ್ಲ. ಶಾಸನಕಾವ್ಯದಲ್ಲಿ ವೀರರಸವೇ ವಿಶೇಷವಾಗಿದೆ. 'ಆದಿಪುರಾಣ'ದಂಥ ಕೃತಿಗಳಲ್ಲಿ ಎಂಟು ರಸಕ್ಕೆ ಮುಕುಟವಾಗಿ ಶಾಂತರಸವು ಬಂದು ಜೀವನದ ಸಮ್ಯಕ್ ದೃಷ್ಟಿಯನ್ನು ಅರಳಿಸುತ್ತದೆ. (೫) ಅಲಂಕಾರ, ವರ್ಣನೆ, ಕವಿಸಮಯ, ಶೈಲಿ, ಛಂದಸ್ಸು ಇವುಗಳಲ್ಲಿ ಸಂಸ್ಕೃತ ಕಾವ್ಯಗಳ ಹಾಗೂ ಸಂಸ್ಕೃತ ಭಾಷೆಯ ವರ್ಚಸ್ಸು ಈ ಯುಗದ ಕೃತಿಗಳ ಮೇಲೆ ನಿಬಿಡವಾಗಿದ್ದರೂ ಅವನ್ನು ಸಂಸ್ಕೃತಮಯವೆನ್ನಲಾಗದು. ಕಾಲಮಾನಕ್ಕನುಸರಿಸಿ ಅಪರಿಹಾರ್ಯವಾಗಿದ್ದ ಸಂಸ್ಕೃತಪ್ರಭಾವಗಳನ್ನು ಅಲ್ಲಗಳೆಯದೆ ಯಥೋಚಿತವಾಗಿ ಬಳಸಿ, ಜೊತೆಗೆ ಕನ್ನಡ-ದೇಸಿಯ ಪ್ರಭಾವಕ್ಕೂ ಒಳಗಾಗಲು ಹೆಣಗಿದ ಕವಿಬುದ್ಧಿ ಇಲ್ಲಿ ತೋರುತ್ತದೆ. ದೇಸಿಮಾರ್ಗಗಳ ಸುಂದರ ಸಂಗಮವೆಂದರೆ ಇದೇ. ಕೆಲವು ಸಲ ಸಂಸ್ಕೃತದ ಅನುಕರಣವು ಅತಿಯಾಗಿ ಪ್ರಮಾಣ ಮೀರಿದೆಯೆಂದೂ ಪ್ರತಿಭೆಗೆ ನಿಯಂತ್ರಣ ಹಾಕಿದೆಯೆಂದೂ ಅರಿತಿರಬೇಕು. ಕಥಾರಚನೆ, ವರ್ಣನೆ, ಕಲ್ಪನೆಗಳಲ್ಲಿ ಎಷ್ಟೋ ಸಲ ಯಾಂತ್ರಿಕವೆನ್ನಬಹುದಾದ ಏಕತಾನತೆಯೂ ನಾವೀನ್ಯಶೂನ್ಯತೆಯೂ ತೋರಿವೆ. (೬) ಪ್ರೌಢಕಾವ್ಯಗಳ ಕಥಾಸರಣಿಯು ಮತ್ತು ಭಾಷೆಯ ಪ್ರೌಢಿಮೆಯಿಂದ ಅವುಗಳ ಪರಿಣಾಮ ಮರ್ಯಾದಿತವಾಗಲು, ಇದೇ ಯುಗದಲ್ಲಿ ಸುಲಭ ಹಾಗೂ ಗದ್ಯಪ್ರಚುರ-ವಾದ ಚಂಪುವಿನಲ್ಲಿ ಕಥಾಸಾಹಿತ್ಯ ಮೊದಲಾಗಿದೆ. ದುರ್ಗಸಿಂಹನ 'ಪಂಚತಂತ್ರ' ಹಾಗೂ ನಯಸೇನನ 'ಧರ್ಮಾಮೃತ' ಇದಕ್ಕೆ ಉದಾಹರಣೆಗಳು. ನಯಸೇನನಿಗೆ ಆಯಾ ಕಾಲದ ಪರಿಸ್ಥಿತಿಗೆ ಅನುಸರಿಸಿ ಜೈನಮತವನ್ನು ಜನಸಾಮಾನ್ಯದಲ್ಲಿ ಪ್ರಚಾರಿಸಲು ಇದು ತೀರ ಅಗತ್ಯವೆನಿಸಿರಬೇಕು. ಅಂತೆಯೇ ಪ್ರೌಢ ಕವಿಗಳ ಕೃತಿಗಳಲ್ಲಿಯ 'ಮಿಸುಕದ ಸಕ್ಕದ'ದ ವಿರುದ್ಧ ಬಂಡೆಬ್ಬಿಸಿ ಪೊಸಗನ್ನಡದ ಕಹಳೆ ಊದಿದವನು ಅವನೇ. ಬ್ರಹ್ಮಶಿವನು ಇನ್ನೂ ಮುಂದೆ ಹೋಗಿ ವಿಡಂಬನಕಾರನೂ

ಯೋಧನೂ ಆಗಿ ಸಮಾಜಟೀಕೆಯನ್ನು ಮಾಡುತ್ತ ಸ್ವಮತಪ್ರಸಾರವನ್ನು ಮಾಡಿದನು. (೭) 'ಗದ್ಯಕಥಾ' ಎಂಬುದು 'ವಡ್ಡಾರಾಧನೆ'ಯಲ್ಲಿ ತನ್ನ ಪರಿಣತಿಯನ್ನು ತೋರಿ ಈ ಯುಗದ 'ಚಾವುಂಡರಾಯಪುರಾಣ'ದಲ್ಲಿ ಶೈಲಿಯ ದೃಷ್ಟಿಯಿಂದ ಒಂದು ವಿಶೇಷ ಸ್ವರೂಪವನ್ನು ತೋರಿತು. (೮) ಈ ಕಾಲದ ಕಾವ್ಯಗಳಲ್ಲಿ ಸಂಗೀತನೃತ್ಯನಾಟಕಗಳ ವರ್ಣನೆಯಿದ್ದರೂ ನಾಟಕಸದೃಶವಾದ ದೃಶ್ಯಗಳಿದ್ದರೂ ನಾಟಕಗಳಿಲ್ಲವೆಂಬುದಕ್ಕೆ ಉತ್ತರವಾಗಿ 'ಸೇನುಬೋವ ಮಾದಿಮಯ್ಯ'(೧೦೯೮)ನೆಂಬವನು 'ಕಾವ್ಯನಾಟಕಕಾರ'ನಾಗಿದ್ದನೆಂದು ಶಾಸನವೊಂದರಲ್ಲಿ ಉಲ್ಲೇಖವು ದೊರೆತಿದೆ.[1] ಆದರೆ ಇವನ ನಾಟಕಗಳು ಸಂಸ್ಕೃತದಲ್ಲಿದ್ದುವೋ ಕನ್ನಡದಲ್ಲಿದ್ದುವೋ ಎಂಬುದನ್ನು ತಿಳಿಯಲು ಬೇರೆ ಆಧಾರವಿಲ್ಲ. ದುರ್ಗಸಿಂಹನು ನೆನೆದ ಕನ್ನಮಯ್ಯನು ಬರೆದ 'ಮಾಳವೀಮಾಧವ' ಎಂಬುದು ಭವಭೂತಿಯ 'ಮಾಲತೀಮಾಧವ'ದ ನಾಟಕರೂಪ ಅನುವಾದವಾಗಿದ್ದರೆ ಇದು ಆದ್ಯ ನಾಟಕಗಳಲ್ಲಿ ಒಂದಾಗುತ್ತದೆ. ಇದು ನಾಟಕವೆಂದು ತಿಳಿಯಲು ಬೇರೆ ಆಧಾರಗಳಿಲ್ಲ. (೯) ಈ ಯುಗದಲ್ಲಿಯ ಬ್ರಾಹ್ಮಣ ಗ್ರಂಥಕಾರರು ಸಾಮಾನ್ಯವಾಗಿ ಲೌಕಿಕ ವಿಷಯಗಳನ್ನು ಕುರಿತು ಶಾಸ್ತ್ರ ಇಲ್ಲವೆ ಕಾವ್ಯವನ್ನು ಅದೂ ಹೆಚ್ಚಾಗಿ ಸಂಸ್ಕೃತದಿಂದ ಅನುವಾದಿಸಿ ರಚಿಸಿದ್ದಾರೆ. ಇದಕ್ಕೆ ಅಪವಾದವಾಗಿ ನಾಗವರ್ಮಾಚಾರ್ಯನ 'ಚಂದ್ರಚೂಡಾಮಣಿಶತಕ'ವೊಂದೇ ಸ್ವತಂತ್ರವೂ ತಾತ್ವಿಕವೂ ಆಗಿದ್ದು ಕನ್ನಡ ಸಾಹಿತ್ಯದಲ್ಲಿ ಮೊದಲನೆಯ ಶತಕವಾಗಿದೆ. (೧೦) ಜ್ಯೋತಿಷ್ಯ, ವೈದ್ಯಕ ಈ ಶಾಸ್ತ್ರಗಳಲ್ಲದೆ ಕಾವ್ಯಾಂಗಗಳಾದ ಛಂದಸ್ಸು, ವ್ಯಾಕರಣ, ಅಲಂಕಾರ, ವಸ್ತುಕೋಶ ಇವಕ್ಕೆ ಸಂಬಂಧಿಸಿದ ಪ್ರಥಮ ಗ್ರಂಥಗಳು ಇದೇ ಯುಗದಲ್ಲಿ ಜೈನಗ್ರಂಥಕಾರರಿಂದಲೇ ರಚಿತವಾಗಿವೆ. (೧೧) ಈ ಯುಗದ ಅಂತ್ಯದಲ್ಲಿ ಅಂದರೆ ೧೧ನೆಯ ಶ.ದ ಕೊನೆ ಮತ್ತು ೧೨ನೆಯ ಶ.ದ ಮೊದಲಲ್ಲಿ ೧೨ನೆಯ ಶ.ದ ಮಧ್ಯಕ್ಕೆ ಉದಯವಾಗಲಿರುವ ಬಸವಯುಗದ ನಸುಕಿನಂತೆ ವಚನಸಾಹಿತ್ಯವು ಇದ್ದಿರಬೇಕೆಂದು ತೋರುತ್ತದೆ.

---

1 **ಕವಿಚರಿತೆ, ಸಂ. ೧, ಪು. ೯೯**

೧೦. ರತ್ನತ್ರಯರು

ಪಂಪಯುಗದಲ್ಲಿಯ ಗ್ರಂಥಗಳು ಎಣಿಕೆಗೆ ಸ್ವಲ್ಪವಾದರೂ ಗುಣಗಣನೆಗೆ ಮೇಲಾಗಿವೆ. ಸಾಧಾರಣ ಗುಣವಿದ್ದಲ್ಲಿಯೂ ಒಂದು ಪ್ರೌಢ ಹಾಗೂ ಸ್ಥಿರವಾದ ಕಾವ್ಯಪರಂಪರೆಯ ಸಂಸ್ಕಾರವೂ ತೇಜಸ್ಸೂ ಹೊರಹೊಮ್ಮಿವೆ, ವೈವಿಧ್ಯವೂ ತಲೆದೋರಿದೆ. ಚಾರಿತ್ರಿಕವಾದ ಕ್ರಮದಿಂದ ಅವುಗಳ ಗುಣದೋಷ ವಿಮರ್ಶೆ ಈಗ ಪ್ರಸ್ತುತವಾದುದು. ಇದನ್ನು ಮಾಡುವಾಗ ವಿಸ್ತಾರಕ್ಕಿಂತ ಸಂಗ್ರಹದ ಕಡೆಗೆ ನಮ್ಮ ಗಮನವಿರುವುದೆಂಬುದನ್ನು ನೆನೆದಿರಬೇಕು.

ಪಂಪ

‘ಕವಿರಾಜಮಾರ್ಗ’ವು ಕನ್ನಡಕ್ಕೆ ಮೊದಲನೆಯ ಉಪಲಬ್ಧ ಲಕ್ಷಣಗ್ರಂಥವಾದರೆ ಪಂಪಕೃತಿಗಳು ಮೊದಲನೆಯವಾಗಿ ದೊರೆತ ಕಾವ್ಯಗ್ರಂಥಗಳು. ಅವಕ್ಕೆ ಹಿಂದೆ ಸಮೃದ್ಧವಾಗಿ ಕಾವ್ಯನಿರ್ಮಾಣವಾಗಿರಬೇಕು, ‘ಮಹಾಧ್ವಕೃತಿ’ಗಳೂ ಹುಟ್ಟಿರಬಹುದು. ಅವು ನಮ್ಮ ಕಣ್ಣಮುಂದಿಲ್ಲದ ಕಾರಣ, ಪಂಪನೇ ಆದಿಮಹಾಕವಿಯೆಂದು ಬಿರುದುಪಡೆದಿದ್ದಾನೆ. ‘ಪಂಪನ ಮಹಾಕಾವ್ಯಗಳು ಹುಟ್ಟಿದಮೇಲೆ ಹಿಂದಿನವರ ಕವನಗಳು ಜನರ ಆದರವನ್ನು ಕಳೆದುಕೊಂಡು ಅವರ ಸ್ಮೃತಿಪಥದಿಂದ ದೂರವಾದುವೆಂದು ಕಾಣುತ್ತದೆ’ ಎಂದೂ ‘ಸಂಸ್ಕೃತಸಾಹಿತ್ಯಕ್ಕೆ ವಾಲ್ಮೀಕಿ ಆದಿಕವಿ ಆದಂತೆ ಕನ್ನಡಸಾಹಿತ್ಯಕ್ಕೆ ಪಂಪನೇ ಆದಿಕವಿಯಾದನೆಂದೂ ಊಹಿಸಬಹುದಾಗಿದೆ’ ಎಂದೂ ಒಂದು ಅಭಿಪ್ರಾಯವು ವ್ಯಕ್ತವಾಗಿದೆ.[1] ಕಾಲಪ್ರವಾಹದಲ್ಲಿ ಯಾವುದೋ ತಿಳಿಯದ ಕಾರಣದಿಂದ ಒಳ್ಳೆಯ ಹಾಗೂ ಶ್ರೇಷ್ಠ ಗ್ರಂಥಗಳು ಸಹ ಕೊಚ್ಚಿಹೋಗಬಹುದು. ಬೇರೆ ಶ್ರೇಷ್ಠ ಕೃತಿಗಳ ಪ್ರಭಾವದ ಮೂಲಕವೇ ಹೀಗೆ ಆಯಿತೆಂದು ಹೇಳುವುದು ಯುಕ್ತವಲ್ಲ. ವಾಲ್ಮೀಕಿ ವೈದಿಕವಾಙ್ಮಯದ ತರುವಾಯದ ಸಂಸ್ಕೃತಸಾಹಿತ್ಯಕ್ಕೆ ಇತಿಹಾಸಕಾವ್ಯವನ್ನು ಒದಗಿಸಿದ ಆದಿಕವಿಯೇ ಹೊರತು ಸಂಸ್ಕೃತಕ್ಕೇ ಆದಿಕವಿಯಲ್ಲ. ‘ಕವಿರಾಜಮಾರ್ಗ’ದ ತರುವಾಯದ ಕಾಲದಲ್ಲಿ ಕನ್ನಡಸಾಹಿತ್ಯಕ್ಕೆ ಹಿರಿದಾದ ಇತಿಹಾಸಕಾವ್ಯವನ್ನು ರಚಿಸಿ ಪಂಪನು ಆದಿಕವಿ ಆದನು. ಕನ್ನಡಸಾಹಿತ್ಯಕ್ಕೇ ಅವನು ಆದಿಕವಿಯೆನ್ನಲು ಬರುವಂತಿಲ್ಲ. ಆದಿಮಹಾಕವಿಯೆಂದು ನಮಗೆ ದೊರೆತ ಪ್ರಮಾಣಗಳ ಪರಿಮಿತಿಯಲ್ಲಿ ಹೇಳಲು ಅಭ್ಯಂತರವಿಲ್ಲ. ತಾನಾಗಿ ಹೇಳಿದ ತನ್ನ ಚರಿತ್ರೆಯಿಂದ, ಪಂಪನು ತೋರಿಕೆಯ ವಿರೋಧಗಳನ್ನು ತನ್ನಲ್ಲಿ ಹೊಂದಿಕೆಗೊಳಿಸಿದ ಸಮನ್ವಯಶೀಲನೂ ಸವ್ಯಸಾಚಿಯೂ ಆದ ವ್ಯಕ್ತಿಯಾಗಿದ್ದನೆಂದು ತಿಳಿಯುತ್ತದೆ. ಅವನು ಕವಿಯಾಗಿದ್ದಂತೆ ಕಲಿಯೂ

---

1 ಟಿ. ಎಸ್. ವೆಂಕಣ್ಣಯ್ಯ: ಪಂಪಭಾರತ (ಪಂಪಮಹಾಕವಿ, ಪು. ೧೬೮)

ಆಗಿದ್ದನು. 'ಕವಿತೆ ನೆಗೞ್ತೆಯಂ ನಿಜಿಸೆ ಜೋಳದ ಪಾಟಿ ನಿಜಾಧಿನಾಥನಾಹವದೊಳರಾತಿನಾಯಕರ ಪಟ್ಟನೆ ಪಾಜಿಸೆ....ಏಂ ಕಲಿಯೋ ಸತ್ಕವಿಯೋ ಕವಿತಾಗುಣಾರ್ಣವಂ' (ಪಂ.ಭಾ. ೧೪-೫೦) ಎಂದು ತನ್ನ ಹೊಗಳಿಕೊಂಡಿದ್ದಾನೆ. ಲಕ್ಷ್ಮೀ-ಸರಸ್ವತಿಯರಿಬ್ಬರೂ ಅವನಿಗೆ ಒಲಿದಿದ್ದರು. ಮತದಿಂದ ಅವನು ಜೈನನಾದರೂ ಮನೆತನದ ಪರಂಪರೆಯಿಂದ ವೈದಿಕನಾಗಿದ್ದನು. ಮನೆತನವೆಲ್ಲ ಯಜ್ಞಯಾಗಗಳನ್ನು ಮಾಡಿದ ವೈದಿಕಬ್ರಾಹ್ಮಣರದು. ಅವನ ತಂದೆ ಅಭಿರಾಮದೇವರಾಯನೇ ಮೊಟ್ಟಮೊದಲು ಬ್ರಾಹ್ಮಣಜಾತಿಯನ್ನು ಬಿಡದೆ ಜೈನಧರ್ಮವನ್ನು ಸ್ವೀಕರಿಸಿದನು. ಪಂಪನಲ್ಲಿಯೂ ವೈದಿಕ-ಜೈನ ಈ ಎರಡೂ ಪರಂಪರೆಗಳಲ್ಲಿಯ ಉತ್ತಮ ಸಂಸ್ಕಾರಗಳು ನೆಲೆಗೊಂಡುವು, ಜೊತೆಗೆ ಜೈನಧರ್ಮವೇ ಉತ್ತಮವೆಂಬ ಮನವರಿಕೆಯೂ ದೃಢವಾಯಿತು. 'ಧರ್ಮಾಂತರಹೊಂದಿದರೂ ಧರ್ಮಾಂಧತೆ ಇಲ್ಲಿ ಕವಿಯಲಿಲ್ಲ. ಪಂಪನ ಮನಸ್ಸು ಎರಡೂ ಸಂಸ್ಕೃತಿಗಳ ಸಾರವನ್ನೂ ಒಳಕೊಂಡು ಪುಷ್ಟಿಹೊಂದಿತು, ಉದಾರವಾಯಿತು.'[1] ಅವನ ಹುಟ್ಟೂರು ವೆಂಗಿಮಂಡಲದ ವೆಂಗಿಪಟುವೆಂಬ ಅಗ್ರಹಾರ. ಅವನಿಗೆ ಆಶ್ರಯಕೊಟ್ಟ ಚಾಲುಕ್ಯದೊರೆ ೨ನೆಯ ಅರಿಕೇಸರಿಯ ರಾಜಧಾನಿ ವೆಂಗಿಮಂಡಲದ ಪಶ್ಚಿಮದ ಕಡೆ ಇದ್ದ ಲೆಂಬುಳಪಾಟಕ (ಈಗಿನ ವೇಮುಲವಾಡ). ಆದರೆ ಅವನ ನೆನವೆಲ್ಲ ಬನವಾಸಿದೇಶದಲ್ಲಿ. 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂಬಲ್ಲಿ ಅರ್ಜುನನ ಮೂಲಕ ಪಂಪನೇ ಆಡಿದಂತೆ ತೋರುತ್ತದೆ. ಅವನು ತನ್ನ ಗ್ರಂಥಗಳನ್ನು ಬರೆದದ್ದು ಪುಲಿಗೆರೆಯ ತಿರುಳ್ಗನ್ನಡದಲ್ಲಿ. 'ಪಂಪನು ಎಲ್ಲಿಯೇ ಹುಟ್ಟಿ ಬೆಳೆದಿರಲಿ, ಬನವಾಸಿಯ ಮಲೆನಾಡಿನಲ್ಲಿ ಅವನ ಜೀವಮಾನದ ಸಾರವತ್ತಾದ ಭಾಗ ಕಳೆದಿರಬೇಕು'[2] ಎಂಬ ಮಾತು ಸರಿಯಾಗಿದೆ. ಜೊತೆಗೆ, ಅವನು ಪುಲಿಗೆರೆಯ ಬಯಲುಸೀಮೆಯಲ್ಲಿಯೂ ಜನಜೀವನ, ಜನಭಾಷೆಗಳೊಡನೆ ಒಂದಾಗಿ ಬಾಳಿರಬೇಕು ಎಂಬುದನ್ನು ಸೇರಿಸಬೇಕು.

ಪಂಪನು ತನ್ನೆರಡು ಕೃತಿಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನವಿಜಯ' (ಅಂದರೆ ಪಂಪಭಾರತ) ಇವುಗಳಲ್ಲಿ ಕ್ರಮವಾಗಿ ಆಗಮಿಕ ಅಂದರೆ ಧಾರ್ಮಿಕ ಮತ್ತು ಲೌಕಿಕ ಎಂಬ ಎರಡು ಪ್ರಕಾರಗಳನ್ನು ಉದ್ದೇಶಪೂರ್ವಕವಾಗಿ ಅನುಸರಿಸಿದನು. 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' (ಪಂ.ಭಾ. ೧೪-೬೦) ಎಂದು ಅವನೇ ಹೇಳಿದ್ದಾನೆ. ಎರಡನ್ನೂ ಪ್ರೌಢ ಚಂಪೂಗ್ರಂಥಗಳಾಗಿ ರಚಿಸಿದನು. ಅವುಗಳ ಕಥಾನಕಕ್ಕೆ ಹಿಂದಿನ ಆಕರಗಳನ್ನು ಉಪಯೋಗಿಸಿಕೊಂಡನು. ಹೀಗೆ ಪೂರ್ವಸಾಮಗ್ರಿಯನ್ನು ಬಳಸಿಯೂ ಅಭಿವ್ಯಕ್ತಿಯಲ್ಲಿ ಅಪೂರ್ವವಾದ ಕಾವ್ಯಗಳನ್ನು ನಿರ್ಮಾಣಮಾಡಿದನು. ಅವನ ಉಜ್ವಲ ಪ್ರತಿಭೆ-ಪಾಂಡಿತ್ಯಗಳೊಡನೆ

1 ತೀ. ನಂ. ಶ್ರೀಕಂಠಯ್ಯ: ಪಂಪ, ೩

2 ಅದೇ, ಪು. ೫

ಸಮಗ್ರವಾದ ಜೀವನಾನುಭವ, ವಿಶಾಲದೃಷ್ಟಿ, ಸಮನ್ವಯಬುದ್ಧಿ ಇವು ಬೆರೆತು-ಕೊಂಡು ಕನ್ನಡಮಾರ್ಗಕಾವ್ಯಕ್ಕೆ ಉನ್ನತಶಿಖರಗಳಾದ ಎರಡು ಕೃತಿಗಳನ್ನು ನೀಡಿದುವು. ಅವುಗಳ ಎತ್ತರವು ರಸಿಕರ ಬೆರಗನ್ನು ಬರಮಾಡಿತು. ಮುಂದಿನ ಕವಿಗಳಿಗೆ ಅವು ಮೇಲ್ಪಂಕ್ತಿಯಾಗಿ ಅವರ ಸಾಹಸವನ್ನು ಕೆರಳಿಸಿದುವು. 'ಆನೆ ನಡೆದುದೆ ಬೀದಿಯಲ್ಲವೆ' ಎಂಬಂತೆ ಪಂಪನ ಮಾರ್ಗವೊಂದು ಪಂಪಯುಗದಲ್ಲಿ ರೂಢವಾಯಿತು.

ಪಂಪನ ಆದಿಪುರಾಣ

'ಆದಿಪುರಾಣ'ವು ಪಂಪನ ಆದಿಕೃತಿ ; ಸು. ೪೦ರ ವಯಸ್ಸಿನಲ್ಲಿಯೇ ಅವನು ಪಡೆದ ವಿದ್ವತ್ತೆ–ವಿವೇಕಗಳ ಪ್ರತೀಕವಾದ ಕೃತಿ. ಈ ಗ್ರಂಥದ ಪೀಠಿಕಾಭಾಗದಲ್ಲಿ (೧–೩೫) ತನ್ನ ಆಕರಗಳನ್ನು ಹೇಳಿದ್ದಾನೆ. ಅದರಲ್ಲಿ ಮುಖ್ಯವಾದುದು ಜಿನಸೇನಾ-ಚಾರ್ಯನ ಸಂಸ್ಕೃತ 'ಪೂರ್ವಪುರಾಣ.' ಅಲ್ಲಿಯ ಮೊದಲನೆಯ ತೀರ್ಥಂಕರನ ವಿಸ್ತಾರ-ವಾದ ಚರಿತ್ರೆ ಇಲ್ಲಿಯ ವಿಷಯವಾಗಿದೆ. ಮತನಿಷ್ಠೆಯಿಂದ ತನ್ನ ಕೈಗಳನ್ನು ತಾನೇ ಕಟ್ಟಿಕೊಂಡು ಪಂಪನು ಆಕರವನ್ನು ಯಥಾವತ್ತಾಗಿ ಅನುಕರಿಸಿದ್ದಾನೆ. ಕಥಾವಸ್ತು, ಕಥನಕ್ರಮ, ಭಾವಸಂಪತ್ತಿ, ಮತೀಯತತ್ವಬೋಧೆ ಈ ಎಲ್ಲದರಲ್ಲಿಯೂ 'ಆದಿ-ಪುರಾಣ'ವು 'ಪೂರ್ವಪುರಾಣ'ಕ್ಕೆ ಋಣಿಯಾಗಿದೆ. ಇಷ್ಟು ಪರತಂತ್ರವಾದರೂ ಗ್ರಥನಕೌಶಲ್ಯದಿಂದ ಒಟ್ಟಿನಲ್ಲಿ ಅದು ಸ್ವತಂತ್ರ ಕಳೆಯನ್ನು ಪಡೆದಿರುತ್ತದೆ. ಎರಡೂ ಜೈನಪುರಾಣಗಳು, ಎರಡರಲ್ಲಿಯೂ ಕಾವ್ಯಸತ್ವವಿದೆ. ಆದರೆ 'ಪೂರ್ವಪುರಾಣ'ದಲ್ಲಿ ಕಾವ್ಯಕ್ಕಿಂತ ಪುರಾಣದೃಷ್ಟಿ ಹೆಚ್ಚಾಗಿದೆ, 'ಆದಿಪುರಾಣ'ದಲ್ಲಿ ಪುರಾಣಕ್ಕಿಂತ ಕಾವ್ಯ-ದೃಷ್ಟಿ ಹೆಚ್ಚಾಗಿ ಫಲಿಸಿದೆ. ಒಂದು ಸರಳವಾದ ಪದ್ಯಕಾವ್ಯ, ಇನ್ನೊಂದು ಪ್ರೌಢವಾದ ಚಂಪೂಕಾವ್ಯ. ಒಂದರಲ್ಲಿಯ ಅತಿವಿಸ್ತರ ಇನ್ನೊಂದರಲ್ಲಿ ಮಾಯವಾಗಿದೆ, ಸಂಗ್ರಹ-ದೃಷ್ಟಿ ಬಹುಮಟ್ಟಿಗೆ ಕಂಡುಬಂದಿದೆ. 'ಆದಿಪುರಾಣ'ದಲ್ಲಿ ಅನೇಕಭವ ಇಲ್ಲವೆ ಜನ್ಮಗಳ ಮುಸಿಯಲ್ಲಿ ಅನುಭವದ ಕುದಿಗೊಂಡು ಭೋಗದಿಂದ ತ್ಯಾಗಕ್ಕೆ ತೆರಳಿ, ಕೊನೆಯ ಜನ್ಮದಲ್ಲಿ ವೈರಾಗ್ಯಪರಿಣತಿಯಿಂದ ತಪೋನಿರತನಾಗಿ ಮುಕ್ತಿಯನ್ನೂ ಕೇವಲ-ಜ್ಞಾನವನ್ನೂ ಪಡೆದು ಮೊದಲನೆಯ ತೀರ್ಥಂಕರ ಆದಿದೇವನಾದ ಮನುಜನ ಜನ್ಮ-ಯಾತ್ರೆಯ, ಪರಮಸಿದ್ಧಿಯ ಕಥೆಯಿದೆ. ಇದರ ಭವ್ಯತೆಯನ್ನೂ ಸಮ್ಯಕ್ತ್ವವನ್ನೂ ಅರಿತು ಆತ್ಮೀಕರಿಸಿಕೊಂಡು ಕಾಲತ್ರಯವನ್ನು ನಿಲುಕುವ ಕಲ್ಪನೆಯ ಕುಂಚದಿಂದ ಪಂಪನು ಇದನ್ನು ಚಿತ್ರಿಸಿದ್ದಾನೆ. ಇಲ್ಲಿಯೇ ಅವನ ಗುಣವಿಶೇಷವಿದೆ.

'ನೆಗಱ್ದಾದಿಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ' (ಆ.ಪು. ೧–೩೮) ಎಂದು ಪಂಪನು ಮಾಡಿದ ಘೋಷಣೆ ಬಹುಮಟ್ಟಿಗೆ ಸಾರ್ಥಕ-ವಾಗಿದೆ. ಸಂನಿವೇಶರಚನೆ, ಪಾತ್ರನಿರೂಪಣೆ, ಮತವಿವರಣೆಗಳಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳ ಸಮನ್ವಯವನ್ನು ಸಾಧಿಸಲಾಗಿದೆ. ಆದರೂ ಹದಿನಾರಾಣೆಯ

ಯಶಸ್ಸು ದೊರೆತಿಲ್ಲ. ಪ್ರೌಢಕಾವ್ಯರಚನೆಯ ಪ್ರಥಮಾವೇಶದಲ್ಲಿ ಸಂಸ್ಕೃತಪಾಂಡಿತ್ಯದ ಪ್ರದರ್ಶನ, ನೀರಸವಾದ ವಿವರಣೆಗಳು ತಲೆದೋರಿವೆ. ಇದಕ್ಕೆ ಮಹಾಬಲರಾಜನ ಓಲಗದಲ್ಲಿ ನಡೆದ ತಾತ್ವಿಕವಿವಾದವು ಒಂದು ಒಳ್ಳೆಯ ನಿದರ್ಶನ. ಮೂಲದಲ್ಲಿಯ ಈ ಭಾಗವನ್ನು ಸಂಗ್ರಹಿಸುವಲ್ಲಿ ಕವಿಯ ರಸದೃಷ್ಟಿ ಫಲಿಸಿದಂತೆ ವಿದ್ವತ್ತೆಯೂ ಮೆರೆದಿದೆ. ಚಾರ್ವಾಕದರ್ಶನದ ಸಾರವು 'ಬಾಲ್ಯ್ವನಮಿಂದ್ರಿಯವರ್ಗದಿಚ್ಛೆಯಂ ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು' (೨-೯) ಎಂಬಲ್ಲಿ ಸೊಗಸಾಗಿ ಬಂದಿದೆ. ಆದರೆ ಮುಂದಿನ ವಚನದಲ್ಲಿ ಬಂದಿರುವ ವಿಜ್ಞಾನ-ವಾದ-ನಿರೂಪಣೆ ಅತಿವಿದ್ವತ್ತೆಯಿಂದ ಕೂಡಿದೆ. ಒಂದೊಂದು ತನ್ನ ಹಿಂದಿನ ಭವಗಳಲ್ಲಿ ಭೋಗದ ತರತಮ ಸೋಪಾನಗಳನ್ನೇರುತ್ತ ಪ್ರೇಮದರ್ಶನದಲ್ಲಿ ಮುಂದು-ವರಿಯುತ್ತ ನಡೆದಿರುವ ಪುರುದೇವನ ಚರಿತ್ರೆಯಲ್ಲಿ ಅಲ್ಲಲ್ಲಿ ಚೆಲುವಾದ ರಸಸ್ಥಾನ-ಗಳಿರುತ್ತವೆ. ಎಲ್ಲಕ್ಕಿಂತ ಹೆಚ್ಚು ರಮ್ಯವಾದುದು ಕೊನೆಯ ಜನ್ಮದಲ್ಲಿ ಸುಖದ ತುತ್ತ-ತುದಿಯಲ್ಲಿರುವಾಗ ಅವನು ವೈರಾಗ್ಯಹೊಂದಿದ ಸಂನಿವೇಶ. ಅದೇ ನೀಲಾಂಜನೆಯ ನೃತ್ಯಸಂದರ್ಭ. ಇಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳು ಪಡೆದ ಸಮನ್ವಯವು ಸಂಪೂರ್ಣವಾಗಿದೆ. ಆ ಅಮರನರ್ತಕಿಯ ರೂಪುಬೆಡಗುಗಳ ಮತ್ತು ಕುಣಿತದ ವರ್ಣನೆಯಲ್ಲಿ ಪಂಪನ ಕಲ್ಪನಾಶಕ್ತಿ ಕಾರಂಜಿಯಂತೆ ಪದ್ಯಪದ್ಯದಲ್ಲಿ ಪುಟಿದಿದೆ. ಭೋಗದ ಅತಿಶಯವು ವೈರಾಗ್ಯದ ಅತಿಶಯಕ್ಕೆ ಕಾರಣವಾಯಿತೆಂಬುದನ್ನು ಈ ಸಂನಿವೇಶ ಸೂಚಿಸುತ್ತದೆ.

'ಕೋಟಲೆಱದಿಂದಮೆಸೆವೀ ।
ನಾಟಕಮಂ ತೋಱ ಮಾಣ್ದ ಳಿಲ್ಲಳ್ ಬಗೆಯೊಳ್ ।
ನಾಟುವಿನಮಮರಿ ಸಂಸೃತಿ ।
ನಾಟಕಮುಮನೆನಗೆ ನೆಱೆಯೆ ತೋಱದಳೀಗಳ್ ॥' (೯-೪೫)

ಈ ಭಾವವು ಅರ್ಥಪೂರ್ಣವಾಗಿದೆ. 'ಪೂರ್ವಪುರಾಣದಲ್ಲಿ'ದಲ್ಲಿಯ ಈ ಸಂದರ್ಭ-ವನ್ನು 'ಆದಿಪುರಾಣ'ದ ರಸಸೃಷ್ಟಿಯೊಡನೆ ಹೋಲಿಸಿ ನೋಡಿದರೆ ಪಂಪನ ಅಪೂರ್ವ ಪ್ರತಿಭೆಯನ್ನು ಮನಗಾಣಬಹುದು.[1] ಒಂದರಲ್ಲಿ ಪ್ರಾಚೀನಪುರಾಣದ ಸಾಂಪ್ರ-ದಾಯಿಕ ಬೋಧನೆಯಿದ್ದರೆ ಇನ್ನೊಂದರಲ್ಲಿ ಮಾರ್ಗಕಾವ್ಯದ ರಸಪೂರ್ತಿಯಿದೆ. 'ಆದಿಪುರಾಣ'ದ ಕಥಾವಸ್ತುವಿಗೆ ಅನುಗುಣವಾಗಿ ಪಾತ್ರರಚನೆ ವ್ಯಾಪಕವಾಗಿದೆ. ಆದಿನಾಥನ ವಿಷಯದಲ್ಲಿ ಅದು ರೂಢವಾದ ಅರ್ಥದಲ್ಲಿ ಪಾತ್ರರಚನೆಯೇ ಅಲ್ಲವೆನ್ನ-ಬಹುದು. ಜನ್ಮದಿಂದ ಜನ್ಮಕ್ಕೆ ಬೆಳೆಯುತ್ತ ಬಂದ ಜೀವನ ಜನ್ಮಯಾತ್ರೆಯದು, ಮಾನವನು ಆತ್ಮಿಕವಿಕಾಸದಿಂದ ದೇವನಾದ ಕಥೆಯದು. ಈ ಆದರ್ಶಸಿದ್ಧಿ ಗೃಹೀತ-ವಾದದ್ದಾದರೂ ಸಾಂಪ್ರದಾಯಿಕ ರೀತಿಯಲ್ಲಿಯೂ ಸಾಂಕೇತಿಕವಾದ, ಸಾರ್ವತ್ರಿಕ-

1 ಜಿನಸೇನ: ಪೂರ್ವಪುರಾಣ, ಸಪ್ತದಶಪರ್ವ

ವಾದ ಒಂದು ಬಗೆಯ ಕ್ರಮವಿದೆ, ಸಾಧನೆಯಿದೆ, ವಿಕಾಸವಿದೆ. ಒಂದೊಂದು ಜನ್ಮದ ಚರಿತ್ರೆಯನ್ನು ಮಾತ್ರ ನೋಡಿದರೆ ಸಹ ಲಲಿತಾಂಗ–ಸ್ವಯಂಪ್ರಭೆಯರ ಅತೃಪ್ತ-ಭೋಗ, ಪ್ರಣಯವಿರಹಗಳು, ವಜ್ರಜಂಘ–ಶ್ರೀಮತಿಯರ ಭೋಗತೃಪ್ತಿ, ಸಹ-ಮರಣಗಳು ಉತ್ಕಟರಸಚಿತ್ರವಾಗಿ ಬಂದಿವೆ. ಇಲ್ಲಿಯ ಮಾನವತೆ ಬರಲಿರುವ ಆದಿ-ನಾಥನ ದಿವ್ಯತೆಗೆ, ಸಮ್ಯಕ್ತ್ವಸಿದ್ಧಿಗೆ ಸುಂದರವಾದ ಹಿನ್ನೆಲೆಯನ್ನು ಒದಗಿಸಿರುತ್ತದೆ. ಜೈನಶಾಸ್ತ್ರ, ಪುರಾಣ, ಸಂಪ್ರದಾಯ ಇವುಗಳ ಜಾಲದಲ್ಲಿ ಸಿಕ್ಕಿದ್ದರೂ ಪಂಪನು ಅವುಗಳಿಗೆ ಒಟ್ಟನಲ್ಲಿ ಪರಾಧೀನನಾಗದೆ ಕಲಾವಿದನ ರೀತಿಯಲ್ಲಿ ಅವನ್ನು ಬಳಸಿ-ಕೊಂಡಿದ್ದಾನೆ. ತೀರ್ಥಂಕರನಾಗತಕ್ಕ ಪುರುದೇವನ ಪಂಚಕಲ್ಯಾಣ ಇಲ್ಲವೆ ಜೀವನದ ಐದು ಘಟ್ಟಗಳನ್ನು ಅವನು ನಿರೂಪಿಸಿದ್ದರಲ್ಲಿ ಶುಷ್ಕಶಾಸ್ತ್ರವಿಲ್ಲ, ಶಾಸ್ತ್ರವನ್ನು ಒಳಗೊಂಡು ಅದನ್ನು ಮೀರಿದ ಕಲಾಮಹಿಮೆಯಿದೆ. ಪರಿನಿಷ್ಕ್ರಮಣಕಲ್ಯಾಣ-ಸಂದರ್ಭವು ಇದಕ್ಕೆ ಉತ್ತಮ ನಿದರ್ಶನ. 'ಆದಿಪುರಾಣ'ದ ಇತರ ಪಾತ್ರಗಳಲ್ಲಿ ಆದಿನಾಥನ ಮಕ್ಕಳಾದ ಭರತಚಕ್ರವರ್ತಿ ಮತ್ತು ಬಾಹುಬಲಿ ಇವರನ್ನು ನೆನೆಯು-ವುದು ಅವಶ್ಯ. ಈ ಕಾವ್ಯದ ಉತ್ತರಭಾಗದ ಒಂದು ಆಶ್ವಾಸದಲ್ಲಿ ಮಾತ್ರ ಈ ಚಿತ್ರಣವು ಬಂದಿದ್ದರೂ ಅದರ ಮಹತ್ವವು ಹೆಚ್ಚಿನದಾಗಿದೆ. ಆಧ್ಯಾತ್ಮಿಕ ಸಿದ್ಧಿ ಸಾಧನೆಗಳ ಒಂದು ಮುಖವು ಆದಿನಾಥನ ಚರಿತ್ರೆಯಲ್ಲಿ ತೋರಿದ್ದರೆ ಇನ್ನೊಂದು ಮುಖವು ಅವನ ಮಕ್ಕಳಾದ ಭರತಬಾಹುಬಲಿಗಳ ಚರಿತ್ರೆಯಲ್ಲಿ ತೋ… ಕಥೆಗೆ ಸಮಗ್ರತೆ ಉಂಟಾಗಿದೆ. 'ಆದಿನಾಥನ ಜನ್ಮಾವಳಿಯ ಕಥೆಗಳಲ್ಲಿ ಭೋಗ… ನಿರಾಸವನ್ನು ನೋಡಿದೆವು; ಇನ್ನು ವಿಭವದ ನಿಷ್ಫಲತೆಯನ್ನು ಅವನ ಹಿರಿಯ ಮಗನೂ ಪ್ರಥಮ ಚಕ್ರವರ್ತಿಯೂ ಆದ ಭರತನ ವೃತ್ತಾಂತದಲ್ಲಿ ನೋಡ… ಬೇಕಾಗಿದೆ.'[1] ತುಸು ಬೇರೆಯಾಗಿ ಹೇಳುವುದಾದರೆ, ಆದಿನಾಥನ ಕಥೆಯಲ್ಲಿ ಕಾಮ… ತ್ಯಾಗ, ಭರತನ ಕಥೆಯಲ್ಲಿ ಅಹಂಕಾರತ್ಯಾಗ ಇವು ಸಮ್ಯಕ್ತ್ವಸಿದ್ಧಿಗೆ ಪೂರ್ವಭಾವಿ-ಗಳೆಂದು ತೋರಿಸಲಾಗಿದೆ. ದಿಗ್ವಿಜಯಕ್ಕೆ ಹೊರಟ ಭರತಚಕ್ರಿ ಹೋದಹೋದ… ಗೆಲವುಹೊಂದಿ ಉಬ್ಬಿಹೋಗುತ್ತಾನೆ. ತನ್ನ ಗೆಲವಿನ ಶಾಸನವನ್ನು ವೃಷಭಾಚಲದ… ಬರೆಯಿಸಬೇಕೆನ್ನಲು ಅಲ್ಲಿ ತನ್ನ ಹಿಂದಿನ ಅನೇಕ ಚಕ್ರಿಗಳು ಬರೆಸಿದ ಆತ್ಮಪ್ರಶಂಸೆ-ಯನ್ನು ನೋಡಿದನು. 'ಅಂತವನೊಯ್ಯನೆ ನೋಡಿ ನೋಡಿ ಸೋರ್ದುದು ಕೊ… ಗೊಂಡ ಗರ್ವರಸಂ' (ಆ. ಪು. ೧೩–೭೧). ಅದು ಅವನ ಅಹಂಕಾರಕ್ಕೆ ಮೊದಲನೆಂ… ಆಘಾತ. ಆಮೇಲೆ ಊರಿಗೆ ಮರಳಿ ಬಂದಾಗ ರಾಜಧಾನಿಯ ಬಾಗಿಲಲ್ಲಿ ಅವ… ಚಕ್ರರತ್ನವು ನಿಂತು ಅವನ ತಮ್ಮಂದಿರೇ ಅವನು ಅಧಿರಾಜನೆಂದು ಒಪ್ಪಿಕೊಳ್ಳು… ದಿಲ್ಲವೆಂದು ಸೂಚಿಸಿತು. 'ಅಣ್ಣ, ಹಿರಿಯನೆಂದು ಮನ್ನಿಸಬಹುದು, ಅವನಿಗೆ ಆಳಿಂ… ಯಾಕಿರುವುದು' ಎಂದು ನೂರು ಜನ ತಮ್ಮಂದಿರು ವಿರಕ್ತಿಯಿಂದ ತಂದೆಯ ಬಳಿ…

1 ತೀ. ನಂ. ಶ್ರೀಕಂಠಯ್ಯ: ಪಂಪ, ಪು. ೨೫

ತಪಸ್ಸಿಗೆ ಹೋದರು. ಬಾಹುಬಲಿ ಮಣಿಯಲಿಲ್ಲ. ಅಣ್ಣನೆಂದು ಗೌರವಿಸಬಹುದು, ಆದರೆ ತನಗಿಂತ ಶೂರನೆಂದಲ್ಲ ಎಂಬುದು ಅವನ ವಾದ.

'ಪಿರಿಯಣ್ಣಂಗೆಱಗುವುದೇಂ |
ಪರಿಭವವೇ, ಕೀೞ ನೆತ್ತಿಯೊಳ್ ಬಾಳಂ ನಿ- |
ರ್ನೆರವಮೂಱು ಚಲದಿನೆಱಗಿಸ- |
ಲಿರೆ ಭರತಂಗೆಱಗುವೆಱಕಮುಂಜಮೆಯಲ್ತೇ ||' (ಆ.ಪು. ೧೪-೭೫)

'ಸಂಗರನಿಕಷದೊಳೆಮ್ಮಂದಮುಂ ನೀನೆ ಕಾಣ್ಬೈ' (ಆ.ಪು. ೧೪-೮೨) ಎಂದು ಬಾಹುಬಲಿ ಹೇಳಿಕಳಿಸುತ್ತಾನೆ. ಕೊನೆಗೆ ದೃಷ್ಟಿಯುದ್ಧದಿಂದ ತೊಟ್ಟು ಮಲ್ಲಯುದ್ಧದ ವರೆಗೆ ಇಬ್ಬರೂ ಹೋರಾಡಲು ಬಾಹುಬಲಿಯೇ ಗೆಲ್ಲುತ್ತಾನೆ. ವಿಶ್ವವಿಜಯಿಯಾದ ಭರತನ ಅಹಂಕಾರಕ್ಕೆ ಇದು ವಜ್ರಾಘಾತ. ಆದರೆ ಸೋಜಿಗವೆಂದರೆ ತನ್ನ ಗೆಲವಿನಿಂದ ಉಬ್ಬಿಹೋಗದೆ ಅಣ್ಣನ ರಾಜ್ಯದಾಸೆಗೆ ಮತ್ತು ಅಹಂಕಾರಕ್ಕೆ ತಾನೇ ಹೇಸಿ ಬಾಹುಬಲಿ ವೈರಾಗ್ಯತಾಳುತ್ತಾನೆ, ತಪಸ್ಸಿಗೆ ಹೋಗುತ್ತಾನೆ. ಈ ಉದಾತ್ತ ತ್ಯಾಗದ ಪರಿಣಾಮವು ಭರತನ ಮೇಲೆ ತೀವ್ರವಾಗಿ ಆಗುತ್ತದೆ. ಮುಂದೆ ಕೆಲಕಾಲ ಧರ್ಮದಿಂದ ರಾಜ್ಯವನ್ನಾಳಿ ಅವನೂ ಯತಿದೀಕ್ಷೆಯನ್ನು ತಾಳುತ್ತಾನೆ. ಈ ಸಂನಿವೇಶದಲ್ಲಿ ಮೂಲವನ್ನು ಅನುಸರಿಸಿ ಪಂಪನು ಮಾಡಿದ ಸ್ವಭಾವಚಿತ್ರಣವು ಅವನ ವಿಶಾಲಮನದ ಸಂಸ್ಕೃತಿಗೂ ಉನ್ನತಪ್ರತಿಭೆಗೂ ಸಾಕ್ಷಿಯಾಗಿರುತ್ತದೆ.

'ಆದಿಪುರಾಣ'ವು ಕನ್ನಡದಲ್ಲಿ ಮೊದಲನೆಯ ಜೈನಪುರಾಣವೋ ಹೇಗೆ ಎಂಬುದನ್ನು ಹೇಳಲಾರೆವು. ಶ್ರೀವಿಜಯನ 'ಚಂದ್ರಪ್ರಭಪುರಾಣ' ಯಾವ ಕಾಲದ್ದೆಂಬುದು ನಮಗೆ ತಿಳಿದಿಲ್ಲ. ಅದು ಉಪಲಬ್ಧವಾಗಿಲ್ಲ. ೧ನೆಯ ಗುಣವರ್ಮನ 'ಹರಿವಂಶ' ಮುಂದಿನ ನೇಮಿನಾಥಪುರಾಣಗಳಂತೆ ಇದ್ದಿರಬಹುದು. ಸದ್ಯಕ್ಕೆ 'ಆದಿಪುರಾಣ'ವು ಉಪಲಬ್ಧನಾದ ಮೊದಲನೆಯ ಜೈನಪುರಾಣವೆಂದೂ ತರುವಾಯದ ಪುರಾಣಗಳಿಗೆ ಒಂದು ಹೆದ್ದಾರಿಯನ್ನು ಹಾಕಿಕೊಟ್ಟ ಗ್ರಂಥವೆಂದೂ ಭಾವಿಸಬಹುದು. ಇದರಲ್ಲಿ ಜೈನವೆಂಬ ಸ್ವರೂಪವು ಸ್ಪಷ್ಟವಾಗಿರುವಂತೆ ವಿಶ್ವವ್ಯಾಪಿ ಎಂಬ ಸತ್ವವು ಹುದುಗಿಕೊಂಡಿದೆ. ಪಂಪ ಹೇಳಿದಂತೆ ಕಾವ್ಯಧರ್ಮ, ಧರ್ಮ ಇವುಗಳ ಸಮನ್ವಯವು ಇದರಲ್ಲಿ ಬಹುಶಃ ಸಾಧಿಸಿದೆ. ಇಲ್ಲಿ ಧರ್ಮ ಎಂಬ ಸಾಮಾನ್ಯ ಪದದಲ್ಲಿ ಮತಧರ್ಮ ಮತ್ತು ವಿಶ್ವಧರ್ಮ ಎರಡೂ ಸೇರಿಕೊಂಡಿವೆ. ಶಾಸ್ತ್ರಜಡವಾದ ಭಾಗ, ಸಂಸ್ಕೃತ ಶಬ್ದಾಡಂಬರದ ಭಾಗಗಳನ್ನು ಕಡೆಗಣಿಸಿದರೆ ಇದು ಉತ್ತಮಕಾವ್ಯವೆಂಬುದು ನಿಜ. 'ಆದಿಪುರಾಣದ ಕೆಲವು ನೀರಸವಾದ ಸಂಗತಿಗಳನ್ನೂ ವಿವರಣೆಗಳನ್ನೂ ಬಿಟ್ಟರೆ ಅದೊಂದು ಉತ್ತಮ ಕಾವ್ಯವಾಗುತ್ತದೆ'[1] ಎಂಬ ಅಭಿಪ್ರಾಯವನ್ನೂ 'ಕಾವ್ಯಕಲಾ-

1 ತೀ. ನಂ. ಶ್ರೀಕಂಠಯ್ಯ: ಪಂಪ, ಪು. ೧೫

ದೃಷ್ಟಿಯಿಂದ ಪಂಪಭಾರತಕ್ಕೆ ಹೊಯ್‌ಕಯ್ಯಾಗಿ ನಿಲ್ಲಲಾರದು ಆತನ ಆದಿಪುರಾಣ ಬಹುವಿಷಯಗಳಲ್ಲಿ, ಅನೇಕ ಕಾರಣಗಳಿಂದ. ಆದರೆ ಭವ್ಯತೆಯ ದೃಷ್ಟಿಯಿಂದ ಮಾತ್ರ ಆದಿಪುರಾಣವು ಒಂದೆರಡು ಸಂನಿವೇಶಗಳಲ್ಲಿ ಭಾರತಕ್ಕೂ ಮಿಗಿಲಾಗಿ ಮಹೋನ್ನತವಾಗಿದೆ'[1] ಎಂಬುದನ್ನೂ ಗಮನಿಸಬೇಕು. ಪಂಪನ ಕೃತಿಗಳೆರಡನ್ನೂ ಹೋಲಿಸಲಾಗಿ, 'ಆದಿಪುರಾಣ'ವು 'ಉತ್ತರ' ಕಾವ್ಯ ಮಾತ್ರ, ಉತ್ತಮ ಕಾವ್ಯವಾದ 'ಪಂಪಭಾರತ'ವು ಮುಂದೆ ಸೃಷ್ಟಿಯಾಯಿತೆಂಬುದನ್ನು ನೆನೆದಿರಬೇಕು.

ಪಂಪಭಾರತ

'ವಿಕ್ರಮಾರ್ಜುನವಿಜಯ ಅಥವಾ ಪಂಪಭಾರತ' ಇದು ಪಂಪನ ಎರಡನೆಯ ಮತ್ತು ಹಿರಿಯ ಕೃತಿ. 'ಆದಿಪುರಾಣ'ದಲ್ಲಿ ಜಿನಾಗಮವನ್ನು ಬೆಳಗಿದ ಕವಿ ಇದರಲ್ಲಿ ಲೌಕಿಕವನ್ನು ಬೆಳಗುವೆನೆಂದು ಹೇಳಿದ್ದಾನೆ; ಇದು ಆರು ತಿಂಗಳಲ್ಲಿ, 'ಆದಿಪುರಾಣ'ವು ಮೂರು ತಿಂಗಳಲ್ಲಿ ಸಮಾಪ್ತಿಯಾಯಿತೆನ್ನುತ್ತಾನೆ (ಪಂ.ಭಾ. ೧೪–೬೦). ಒಂದೇ ವರ್ಷದಲ್ಲಿ ಇವೆರಡೂ ಆಯಾ ಅವಧಿಯಲ್ಲಿ ಮುಗಿದಿರಬೇಕೆಂದು ತೋರುವಂತಿದೆ. ಆದರೆ 'ಈ ಎರಡು ಗ್ರಂಥಗಳ ಶೈಲಿಯನ್ನು ಹೋಲಿಸಿದರೆ ಎರಡಕ್ಕೂ ನಡುವೆ ತಕ್ಕಮಟ್ಟಿನ ಕಾಲ ಕಳೆದಿರಬೇಕೆಂದು ಚೆನ್ನಾಗಿ ಗೊತ್ತಾಗುತ್ತದೆ.'[2] ಶೈಲಿಯ ಪ್ರಮಾಣ ಸರಿಯಾದರೂ ನಿರ್ದುಷ್ಟವಲ್ಲ. ಮನುಷ್ಯಸ್ವಭಾವದ ವಿವಿಧ ಅಂಗಗಳ ಗಾಢಪರಿಜ್ಞಾನ, ವಾಸ್ತವ ಇಲ್ಲವೆ ಲೌಕಿಕಜೀವನಪ್ರಜ್ಞೆ, ಒಟ್ಟನಲ್ಲಿ ತೋರಿದ ಪರಿಪಾಕ, ವಿವೇಕ ಇವನ್ನು ನೆನೆದರೆ 'ಆದಿಪುರಾಣ'ದ ತರುವಾಯ ಹಲವು ವರ್ಷಗಳ ಕಾಲವು ಸಂದ ಮೇಲೆ ಪಂಪನು ಭಾರತವನ್ನು ರಚಿಸಿರಬಹುದೆಂದು ಊಹಿಸಬಹುದು. ಆದರೆ ಅಚಿಂತ್ಯಪ್ರತಿಭೆಯ ಆಳವನ್ನು ಯಾರು ಅರಿಯಬಲ್ಲರು? 'ಆದಿಪುರಾಣ'ದಲ್ಲಿ ತೋರಿದ ಧರ್ಮದೃಷ್ಟಿ, ಆದಿನಾಥನ ಜನ್ಮಯಾತ್ರೆಯ ಸಮ್ಯಕ್ತ್ವಕಲ್ಪನೆ, ತಾತ್ವಿಕತೆಗಳು ನಾಲ್ವತ್ತರ ವಯಸ್ಸಿಗೆ ಸಾಮಾನ್ಯವಾಗಿ ಸಾಧ್ಯವೇ? '**ಬೆಳಗುವೆನಿಲ್ಲಿ** ಲೌಕಿಕಮಂ ಅಲ್ಲಿ ಜಿನಾಗಮಮಂ' ಎಂಬ ವಾಕ್ಯದಲ್ಲಿ ಸಮಿಾಪಕಾಲದ ಸೂಚನೆಯಿಲ್ಲವೇ? 'ಆದಿಪುರಾಣ'ವನ್ನು ಬರೆಯುವಂತೆ ಪಳಗಿದ ಶೈಲಿ, ಹದಗೊಂಡ ಪ್ರತಿಭೆ 'ಪಂಪಭಾರತ'ದಲ್ಲಿ ಯಾಕೆ ಅದೇ ವರ್ಷದಲ್ಲಿ ತೋರಿರಬಾರದು?

ಪಂಪನು ವ್ಯಾಸಭಾರತವನ್ನು 'ವಿಕ್ರಮಾರ್ಜುನವಿಜಯ'ವಾಗುವಂತೆ ಕನ್ನಡಿಸಿದ್ದಾನೆ. 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ **ಸಮಸ್ತ ಭಾರತಮನಪೂರ್ವಮಾಗೆ** ಸಲೆ ಪೇಟ್ದ ಕವೀಶ್ವರರಿಲ್ಲ' (೧–೧೧) ಎಂಬಲ್ಲಿ ಸೂಚಿಸಿ-

---

1 ಕೆ. ವಿ. ಪುಟ್ಟಪ್ಪ: ಪಂಪನಲ್ಲಿ ಭವ್ಯತೆ (ಪಂಪಮಹಾಕವಿ, ಪು. ೧೫೯–೬೦)

2 ತೀ. ನಂ. ಶ್ರೀಕಂಠಯ್ಯ: ಪಂಪ, ಪು. ೧೧

ದಂತೆ ಭಾರತಕಥೆಯ ಮುಖ್ಯ ಭಾಗಗಳಲ್ಲಿ ಲಕ್ಷ್ಯವನ್ನು ಕೇಂದ್ರೀಕರಿಸಿ, ಸಮಸ್ತ ಎಂದರೆ ಸಮಗ್ರ ಇಲ್ಲವೆ ಸಂಕ್ಷಿಪ್ತ ಭಾರತವನ್ನು ಹೇಳುವುದು ಪಂಪನ ಉದ್ದೇಶ-ವಾಗಿತ್ತು. ಭಾರತಕಥೆಯ ಜೊತೆಗೆ ತನ್ನ ದೊರೆಯ ಚರಿತ್ರೆಯನ್ನು ಕೂಡಿಸುವುದು ಇನ್ನೊಂದು ಉದ್ದೇಶವಾಗಿತ್ತು. ಅಂತೇ ತನ್ನ ಗ್ರಂಥವನ್ನು **ಸಮಸ್ತ** ಭಾರತವೆಂದು ಕರೆದನೆಂಬುದು ವಿವರಣೆಯ ಚಮತ್ಕೃತಿ ಮಾತ್ರ. 'ವರ್ಣಕಂ ಕತೆಯೊಳೊಡಂ-ಬಡಂಪಡೆಯೆ ಪೇಟ್ವೊಡೆ ಪಂಪನೆ ಪೇಳ್ಗುಂ' ಎಂಬ ಪಂಡಿತರ ಪ್ರಶಂಸೆಯಲ್ಲಿ ಪಂಪನ ಆತ್ಮವಿಶ್ವಾಸವಿದ್ದಂತೆ 'ವ್ಯಾಸಮುನೀಂದ್ರರುಂದ್ರವಚನಾಮೃತವಾರ್ಧಿಯ-ನೀಸುವೆಂ ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ' (೧–೧೩) ಎಂಬಲ್ಲಿ ನೈಜ-ನಮ್ರತೆಯೂ ಇದೆ. ಪಂಪನ ವೈಯಕ್ತಿಕ ಸಂಸ್ಕೃತಿಯಲ್ಲಿ ಸಹಜವಾಗಿರುವ ಸಮ-ನ್ವಯಕ್ಕೆ ಈ ಮಾತುಗಳು ನಿದರ್ಶನವಾಗಿರುತ್ತವೆ.

ಪಂಪನು ವ್ಯಾಸಭಾರತವನ್ನು ಸಂಗ್ರಹಿಸುವಾಗ ತನ್ನ ಉದ್ದೇಶಕ್ಕೆ ಸರಿ-ಹೋಗುವಂತೆ ಎಷ್ಟೋ ಭಾಗಗಳನ್ನು ಬಿಟ್ಟಿದ್ದಾನೆ, ಕೆಲವನ್ನು ಕಿರಿದುಗೊಳಿ-ಸಿದ್ದಾನೆ, ಕೆಲವು ಮಾರ್ಪಾಡುಗಳನ್ನೂ ಮಾಡಿಕೊಂಡಿದ್ದಾನೆ. ಈ ಕಾರ್ಯದಲ್ಲಿ ದಕ್ಷಿಣ ಭಾರತದಲ್ಲಿ ಅಂದು ಪ್ರಚಾರದಲ್ಲಿದ್ದ ಭಾರತದ ಮಾತೃಕೆಗಳು, ಜೈನ-ಭಾರತದ ಕಥೆ, ಸಂಸ್ಕೃತದಲ್ಲಿದ್ದ ಭಾರತಮೂಲವಾದ ಕಾವ್ಯ-ನಾಟಕಗಳು, ಪ್ರಚಲಿತ ಆಖ್ಯಾನಗಳು ಅವನಿಗೆ ಆಕರವಾಗಿರಬೇಕು. ಆಕರದಿಂದ ಹೊರದೆಗೆದ ರತ್ನವನ್ನು ತನ್ನ ಸ್ವತಂತ್ರಪ್ರತಿಭೆಯಿಂದ ಅವನು ಸಂಸ್ಕಾರಗೊಳಿಸಿದ್ದಾನೆ. ತನ್ನ ಸಂಗ್ರಹದೃಷ್ಟಿ, ರಾಜಭಕ್ತಿ ಇವೆರಡಕ್ಕೆ ಮಾತ್ರ ಸ್ವತಂತ್ರಪ್ರತಿಭೆಯೂ ಪರತಂತ್ರ-ವಾಗಿದೆ. ಇದರಿಂದ ಗುಣದೋಷಗಳು ತಲೆದೋರಿವೆ. ರಾಜಭಕ್ತಿಯ ವಿಷಯವನ್ನು ಕೆಲಮಟ್ಟಿಗೆ ವಿವೇಚಿಸುವುದು ಅವಶ್ಯ. ತನ್ನ ದೊರೆಯಾದ ಅರಿಕೇಸರಿಯ ಸ್ತುತಿ ಅವನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತೆಂಬುದನ್ನು ಅವನೇ ಹೇಳಿದ್ದಾನೆ. ಪೀಠಿಕಾಪದ್ಯಗಳಲ್ಲಿ ಅರಿಕೇಸರಿಯ ವಂಶಾವಳಿಯನ್ನು ವರ್ಣಿಸಿ ಅವನ ಶೌರ್ಯ-ವನ್ನು ಕೊಂಡಾಡಿ 'ವೈರಿನರೇಂದ್ರೋದ್ದಾಮದರ್ಪೋದ್ದಳನನೆ **ಕಥಾನಾಯಕಂ ಮಾಡಿ** ಸಂದರ್ಜುನನೊಳ್ ಪೋಲ್ಪೀ **ಕಥಾಭಿತ್ತಿಯ**ನನುನಯದಿಂ ಪೇಲಲೆಂದೆತ್ತಿ-ಕೊಂಡೆಂ' (೧–೫೧) ಎಂದು ಕಥೆಯನ್ನು ಆರಂಭಿಸುತ್ತಾನೆ. 'ಅರಿಕೇಸರಿಯೇ ಈ ಕಾವ್ಯದ ಕಥಾನಾಯಕನು, ಅರ್ಜುನನನ್ನು ಅವನು ಹೋಲುತ್ತಾನೆ, ಅಂತೇ ಅರ್ಜುನನುಳ್ಳ ಭಾರತದ **ಕಥಾಭಿತ್ತಿ**ಯನ್ನು ಎತ್ತಿಕೊಂಡು ಅರಿಕೇಸರಿಯ ಚಿತ್ರ-ವನ್ನು ಅದರಲ್ಲಿ ಬರೆಯಲು ತೊಡಗುತ್ತೇನೆ' ಎಂದು ಪಂಪನ ಆಶಯ. 'ವಿಕ್ರಮಾ-ರ್ಜುನವಿಜಯ'ವೆಂದರೆ ಅರಿಕೇಸರಿಯ ವಿಜಯವೇ. ಅರಿಕೇಸರಿಯ ಬಿರುದುಗಳೆಲ್ಲ ಅರ್ಜುನನ ಬಿರುದುಗಳಾಗಿವೆ. ಅರ್ಜುನನೂ ಅರಿಕೇಸರಿಯಂತೆ 'ಸಾಮಂತ-ಚೂಡಾಮಣಿ'ಯಾಗಿದ್ದಾನೆ. ಹೀಗೆ ಭಾರತದ ಇತಿಹಾಸಕಾವ್ಯವು ಪಂಪನ ಕೈವಾಡ-ದಿಂದ ತತ್ಕಾಲೀನ ಇತಿಹಾಸಗರ್ಭಿತವಾದ ಕಾವ್ಯವೂ ಆಗಿದೆ. ಈ ರಾಜಕೀಯಧ್ವನಿ

ಸ್ವಾರಸ್ಯವಾಗಿ ಬಂದಿರುವುದಾದರೂ ಹಲವು ಕಡೆಗಳಲ್ಲಿ ಔಚಿತ್ಯಭಂಗದಿಂದ, ರಾಜ ಭಕ್ತಿಯ ಅತಿರೇಕದಿಂದ ಹಸಗೆಟ್ಟಿದೆ. ವಿಮರ್ಶಕರು ಇದನ್ನು ವಿಸ್ತಾರವಾಗಿ ತೋರಿದ್ದಾರೆ.[1-2] "ಒಟ್ಟಿನಲ್ಲಿ ಪಂಪನು ತನ್ನ ಕಾವ್ಯಕ್ಕೆ ಅರ್ಜುನನನ್ನು ಕಥಾನಾಯಕನನ್ನಾಗಿ ಮಾಡಿದ್ದರ ಫಲವಾಗಿ ಆತನು ಕಥೆಯಲ್ಲಿ ಮಾಡಿರುವ ವ್ಯತ್ಯಾಸಗಳೂ ಹೆಚ್ಚುಕಡಮೆಗಳೂ ಕಾವ್ಯದೃಷ್ಟಿಯಿಂದ ಪಂಪಭಾರತದ ಗೌರವವನ್ನು, ಅದರ ಬೆಲೆಯನ್ನು ಹೆಚ್ಚಿಸತಕ್ಕವಲ್ಲ. ಅವು ಆ ಕಾವ್ಯದ ಹೊರಮೈಗೆ ಸೇರಿವೆ; ಮೂಲಕಥೆಯ ಬಾಹ್ಯರೂಪವನ್ನು-ಚೌಕಟ್ಟನ್ನು—ಬದಲಾಯಿಸಿವೆ"[3] ಎಂಬ ಅಭಿಪ್ರಾಯವೂ ಹುಟ್ಟಿಕೊಂಡಿದೆ. ಇಷ್ಟು ತೀಕ್ಷ್ಣವಾಗಿ ಪಂಪನ ಕೈವಾಡವನ್ನು ಕುರಿತಾಡಬೇಕೆಂದು ನಮಗೆ ತೋರಿಲ್ಲ. ಅರಿಕೇಸರಿ-ಅರ್ಜುನರ ಅಭೇದದಿಂದಲೂ ಕಥಾನಾಯಕನ ವ್ಯತ್ಯಾಸದಿಂದಲೂ ಆಭಾಸಗಳೂ ಅನೌಚಿತ್ಯಗಳೂ ಉಂಟಾಗಿವೆ, ಜೊತೆಗೆ ಅರ್ಥ ಸ್ವಾರಸ್ಯವೂ ಉಂಟಾಗಿದೆ. ಮಹಾಭಾರತದ ಮುಖ್ಯಕಥೆ ಸಾಗುವಂತೆ ಸಾಗುತ್ತದೆ ಹೆಜ್ಜೆಹೆಜ್ಜೆಗೆ ಪಂಪನ ಅರಿಕೇಸರಿ-ಭಕ್ತಿಯಿಂದ ಅದು ಕೃತಕ ಕಥಾನಕವಾಗುವುದಿಲ್ಲ ಎಂಬುದನ್ನು ಗಮನಿಸಬೇಕು.

ಪಂಪನು ತನ್ನ ಭಾರತದಲ್ಲಿ ಮಾಡಿಕೊಂಡ ಮುಖ್ಯ ವ್ಯತ್ಯಾಸಗಳಲ್ಲಿ ಅರ್ಜುನನ ನಾಯಕತ್ವದೊಡನೆ ಸುಭದ್ರೆಗೆ ದೊರೆತ ಪ್ರಾಶಸ್ತ್ಯವೂ ಒಂದು. ಇದು ಸ್ವಾಭಾವಿಕವಾದರೂ ಇದರ ಪರಿಣಾಮವಾಗಿ ದ್ರೌಪದಿಯ ಸ್ಥಾನವು ಸಂದಿಗ್ಧ ವಾಯಿತು. ವ್ಯಾಸಭಾರತದಲ್ಲಿ ಅವಳಿಗೆ ಪತಿಗಳೈವರು. ಇದು ಸರಿಯಲ್ಲವೆಂದು ಅರ್ಜುನನೊಬ್ಬನಿಗೇ ಪಂಪನು ಅವಳನ್ನು ಮದುವೆಮಾಡಿಸಿದ್ದಾನೆ. ಜೈನಭಾರತದ ವರ್ಚಸ್ಸಿನಿಂದ ಈ ಮಾರ್ಪಾಡು ಆಗಿರಬಹುದು. ಸಮಾಜಪದ್ಧತಿಯಲ್ಲಿಯ ವ್ಯತ್ಯಾಸಕ್ಕೆ ಅನುಸರಿಸಿ, ಲೌಕಿಕವಾದ ತನ್ನ ಕಥೆಯಲ್ಲಿ ಈ ವ್ಯತ್ಯಾಸವನ್ನು ಮಾಡಿದನೆಂಬ ಸೂಚನೆಯೂ ವಿಚಾರಣೀಯವಾಗಿದೆ. ಆದರೆ ಇಬ್ಬರು ಹೆಂಡಂದಿರ ನಡುವೆ ಸಿಕ್ಕಿ ಗೊಂದಲಗೊಂಡ ಗಂಡನಂತೆ ಅರ್ಜುನ ಮತ್ತು ಪಂಪ ಇವರ ಸ್ಥಿತಿಯಾಗಿದೆ. ದ್ಯೂತಪ್ರಸಂಗದಲ್ಲಿ ಅವಮಾನಹೊಂದಿ ಭಾರತಯುದ್ಧಕ್ಕೆ ಕಾರಣಳಾದವಳು ದ್ರೌಪದಿ. 'ಇದುವೆ ಮಹಾಭಾರತಕ್ಕಾದಿಯಾಯ್ತು, ಅಬ್ಜದಳಾಕ್ಷೀ ಪೇಟಿ ಸಾಮಾನ್ಯವೆ ಬಗೆಯೆ ಭವತ್ಕೇಶಪಾಶಪ್ರಪಂಚಂ' (೧೨–೧೫೭) ಎಂದು ಭೀಮನು ಅವಳ ಮಹತ್ವವನ್ನು ಬಣ್ಣಿಸುತ್ತಾನೆ. ಆದರೆ ಯುದ್ಧದಲ್ಲಿ ಗೆದ್ದ ಮೇಲೆ ಪಟ್ಟಮಹಿಷಿ ಆಗುವವಳು ದ್ರೌಪದಿಯಲ್ಲ, ಸುಭದ್ರೆ. ಅಂತೇ 'ಮೊದಲಿಂದ ಕಡೆಯತನಕ ಪಾಂಡವರೊಡನೆ ಪಡಬಾರದ ಕಷ್ಟವನ್ನು ಅನುಭವಿಸಿದವಳು ದ್ರೌಪದಿ. ಸುಖಪಡು

1 ತೀ. ನಂ. ಶ್ರೀಕಂಠಯ್ಯ: ಪಂಪ, ಪು. ೩೧–೩೪

2 ಟಿ. ಎಸ್. ವೆಂಕಣ್ಣಯ್ಯ: ಪಂಪಭಾರತ (ಮಹಾಕವಿಪಂಪ, ಪು. ೧೮೧–೧೮೭)

3 ಅದೇ, ಪು. ೧೮೪

ಕಾಲ ಬಂದಾಗ ಸದ್ದಿಲ್ಲದೆ ಗದ್ದುಗೆ ಏರಿದವಳು ಸುಭದ್ರೆ '[1] ಎಂಬ ಟೀಕೆಗೆ ಎಡೆದೊರೆಯಿತು. ಕೌರವರಿಂದ ಮಾನಭಂಗಹೊಂದಿದ ದ್ರೌಪದಿಯ ಪ್ರತಿಜ್ಞೆಗೆ ದನಿಗೂಡಿಸಿದವನೂ ಕೊನೆಗೆ ಅದನ್ನು ಪೂರ್ತಿಗೊಳಿಸಿದವನೂ ಭೀಮನು, ಅರ್ಜುನನಲ್ಲ. ಆದರೆ ತಮ್ಮನ ಹೆಂಡತಿಗೋಸ್ಕರ ಅಷ್ಟುಮಟ್ಟಿಗೆ ಭೀಮನು ಕ್ರೋಧಾವಿಷ್ಟನಾಗುವುದೆಂದರೆ ಸಹಜತೆಗೆ ಕೊರತೆಯುಂಟಾಗುತ್ತದೆ. ಇದರಲ್ಲಿಯೂ ವಿಸಂಗತಿಯೆಂದರೆ ' ತನ್ನ ತಳೋದರಿ 'ಯೆಂದು ಬೇರೆ ಭೀಮನು ಅವಳನ್ನು ನಡಸಿಕೊಳ್ಳುತ್ತಾನೆ. ಇದೆಲ್ಲವನ್ನು ಕಣ್ಣಿಟ್ಟು ನೋಡಿದರೆ ವ್ಯಾಸಭಾರತದ ಪ್ರಧಾನವಸ್ತುವಿನಲ್ಲಿ ಆನುಷಂಗಿಕವಾದ ವ್ಯತ್ಯಾಸಗಳನ್ನು ಮಾಡದೆ ಅರ್ಜುನನ ನಾಯಕತ್ವ ಮತ್ತು ದ್ರೌಪದಿಯ ಏಕಪತಿತ್ವ ಈ ಬದಲಾವಣೆಗಳನ್ನು ಮಾತ್ರ ಮಾಡಿ ಪಂಪನು ತೊಂದರೆಗೆ ಒಳಗಾದನು. ವಸ್ತುರಚನೆಯಲ್ಲಿ ವಿಸಂಗತಿದೋಷಗಳು ಅಪರಿಹಾರ್ಯವಾಗಿ ಉಳಿದುವು. ಆದರೆ ಕೌರವಪಾಂಡವರ ಯಾದವೀಕಲಹವನ್ನು ಒಂದು ಮಾನವೀಯ ದೃಷ್ಟಿಕೋನದಿಂದ ಚಿತ್ರಿಸಲು ಹೊರಟ ಪಂಪಭಾರತದ ಮೂಲಕಥಾನಕಕ್ಕೆ ಯಾವ ಬಾಧೆಯೂ ಉಂಟಾಗಲಿಲ್ಲ.

' ಪಂಪಭಾರತ 'ದ ಕಟ್ಟಣದಲ್ಲಿ ಒಂದು ಅಪೂರ್ವತೆಯಿದೆ, ಉಜ್ವಲತೆಯಿದೆ. ಅಪರಂಪಾರವಾದ ಮೂಲಮಹಾಭಾರತವನ್ನು ಸಂಗ್ರಹಗೊಳಿಸುವಲ್ಲಿ ಪಂಪನು ಕೇಂದ್ರಕಥಾನಕದ ಮೇಲಿನ ದೃಷ್ಟಿ, ಪ್ರಮುಖಪಾತ್ರಗಳ ಮೇಲಿನ ಗಮನವನ್ನು ಸತತವಾಗಿ ಇಟ್ಟುಕೊಂಡು ಇತರ ವಿಷಯಗಳನ್ನು ತರುವಷ್ಟು ತರತರದ ಪ್ರಮಾಣದಲ್ಲಿ ತಂದಿರುತ್ತಾನೆ. ಅವನ ಕೇಂದ್ರೀಕರಣದ ಕಲೆ, ಪ್ರಮಾಣಜ್ಞಾನ, ಉಜ್ವಲೀಕರಣದ ಶಕ್ತಿ ಇವುಗಳಿಂದ ಒಂದು ' ವಸ್ತುವಿದ್ಯೆ ' ಮೈದೋರಿದೆ. ಕನ್ನಡವಷ್ಟೇ ಏಕೆ, ಸಂಸ್ಕೃತದ ವಾಙ್ಮಯದಲ್ಲಿಯೂ ಭಾರತದ ಈ ಬಗೆಯ ರೂಪಾಂತರ ಅಪರೂಪವಾದುದು. ಒಂದು ಉಪಾಖ್ಯಾನವಿರಲಿ, ಉಪದೇಶವಿರಲಿ, ಮುಖ್ಯಕಥೆಗೆ ಅದರ ಸಂಬಂಧವೆಷ್ಟು ಎಂಬುದನ್ನು ತಟ್ಟನೆ ಗ್ರಹಿಸಿ ಅದಕ್ಕೆ ಅನುಗುಣವಾದ ಸ್ಥಾನವನ್ನು ಕವಿ ಕಲ್ಪಿಸಿಕೊಡುತ್ತಾನೆ, ಆ ಮೇರೆಗೆ ಒಂದು ಪ್ರಭಾವಿಯಾದ ವಚನ ಇಲ್ಲವೆ ಪದ್ಯದಲ್ಲಿ ಅದನ್ನು ಬೆಳಗಿಸಿ ಮುಂದೆ ಸಾಗುತ್ತಾನೆ. ಮಹಾಕವಿಪ್ರತಿಭೆಗೆ ಮಾತ್ರ ಸಹಜವಾದ ಪ್ರಶ್ಬೈಯಿಂದ ಕತೆಯನ್ನು ನಡಸಿಕೊಂಡು ಹೋಗುತ್ತಾನೆ. ಅರ್ಜುನಸುಭದ್ರೆಯರ ಪ್ರಣಯದಂಥ ಅತಿಪ್ರಸಂಗಗಳೂ ಅನಾವಶ್ಯಕ ವರ್ಣನೆಗಳೂ ಬಂದಿಲ್ಲವೆಂತಲ್ಲ. ಆದರೆ ಒಟ್ಟನಲ್ಲಿ ತೋರಿದ ಔಚಿತ್ಯಪ್ರಜ್ಞೆಯಿಂದ ' ಪಂಪಭಾರತ 'ಕ್ಕೆ ಒಂದು ಬಿಗುವು–ಕಸುವು ಬಂದಿದೆ. ಸಂಗ್ರಹವೆಂದು ಸಾರಾಂಶವಾಗಿಲ್ಲ, ಸಂಕ್ಷೇಪವೆಂದು ವಿಕ್ಷೇಪಕ್ಕೆ ಎಡೆಮಾಡಿಲ್ಲ. ಸವೇಗವಾದಲ್ಲಿಯೂ ಸಜೀವವಾದ ಚಿತ್ರಗಳು ಕಣ್ಣೆದಿರು ನಿಲ್ಲುತ್ತವೆ. ಇದಕ್ಕೆ ಕೊಡಬಹುದಾದ ಅನೇಕ ಉದಾಹರಣೆಗಳಲ್ಲಿ ಶಂತನು–ಸತ್ಯವತಿಯರ ಪ್ರಣಯಚಿತ್ರವೊಂದಾಗಿದೆ.

---

[1] ಟಿ. ಎಸ್. ವೆಂಕಣ್ಣಯ್ಯ : ಪಂಪಭಾರತ (ಪಂಪಮಹಾಕವಿ, ಪು. ೧೮೭)

'ಮೃಗಯಾವ್ಯಾಜದಿನೊರ್ಮೆ ಶಂತನು ತೊಲಲ್ತಿರ್ಪಂ ಪಳಂಚಲ್ಕೆ ತ- ।
ನ್ಮೃಗಶಾಬಾಕ್ಷಿಯ ಕಂಪುತಟ್ಟೆ ಮಧುಪಂಬೋಲ್ ಸೋಲ್ತು ಕಂಡೊಲ್ದು ನ- ।
ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು 'ನೀಂ ಬಾ ಪೋಪಂ' ಎಂದಂಗೆ ಮೆ- ।
ಲ್ಲಗೆ ತತ್ಕನ್ಯಕೆ ನಾಣ್ಚಿ 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ ॥' (೧-೭೦)

ಈ ಒಂದೇ ಒಂದು ಪದ್ಯದಲ್ಲಿ ಹಲವಾರು ಪದ್ಯಗಳಲ್ಲಿ ಹರಡಿಕೊಳ್ಳಬಹುದಾದ ಚಿತ್ರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಸಂಗ್ರಹವಾಗಿದೆ. ಆ ಪ್ರಣಯಿಗಳ ಸಂಕ್ಷಿಪ್ತ ಸಂಭಾಷಣೆಯಲ್ಲಿ ತುಂಬಿರುವ ಧ್ವನಿಸ್ವಾರಸ್ಯವು ಯಾವ ವಿಸ್ತಾರದಲ್ಲಿಯೂ ಬರಲಾರದು.

ಮುಖ್ಯ ಕಥಾನಕದ ನಿರೂಪಣೆಯಲ್ಲಿಯಂತೂ ಮಾನವ ಲೋಭ-ಅಸೂಯೆಗಳು ಭ್ರಾತೃಕಲಹದ ದುರಂತದಲ್ಲಿ ಪರಿಣಮಿಸಿದ್ದನ್ನು ಪಂಪನು ಅದ್ಭುತವಾದ ಉತ್ಕಟತೆಯಿಂದ ಬಣ್ಣಿಸಿದ್ದಾನೆ. ಕೆಲಕೆಲವು ಸಂನಿವೇಶಗಳಲ್ಲಿ 'ಮುಗಿಲು ಮುಟ್ಟಿದ ಪೆಂಪು' ಎದ್ದು ಕಾಣುತ್ತದೆ. ಮೂಲದ ವ್ಯತ್ಯಾಸವಿರಲಿ ಬಿಡಲಿ, ಮೂಲದ ಜೀವಾಳವನ್ನು ಎತ್ತಿಕೊಂಡು ಅದನ್ನು ತನ್ನ ಲೌಕಿಕದೃಷ್ಟಿಯಿಂದ ನೋಡಿ ಅಲೌಕಿಕಪ್ರತಿಭೆಯ ಪ್ರಭಾವಬೀರಿ ಅಪರಿಹಾರ್ಯಕಲೆಯ ಉತ್ತಮಿಕೆಯನ್ನು ಅವನು ಸಾಧಿಸಿದ್ದಾನೆ. ದ್ಯೂತಪ್ರಸಂಗ, ದ್ರೌಪದೀಮಾನಭಂಗ, ಭೀಮಪ್ರತಿಜ್ಞೆ ಇವುಳ್ಳ ಕಾವ್ಯಭಾಗಗಳನ್ನು ಓದಿದಷ್ಟು ಈ ಮಾತು ಮನದಟ್ಟಾಗುತ್ತದೆ. ಇಲ್ಲಿ ಮೂಲಭಾರತದಲ್ಲಿರದೆ ಆಮೇಲೆ ಸೇರಿಕೊಂಡಿರಬಹುದಾದ ವಸ್ತ್ರಾಪಹರಣ, ಅಕ್ಷಯಾಂಬರದಾನದ ಸಂಗತಿಗಳನ್ನು ಪಂಪನು ಬಿಟ್ಟಿರುವ ಮೂಲಕ ಕೃಷ್ಣಭಕ್ತಿಯ ಸಂನಿವೇಶ ಕಣ್ಮರೆಯಾಗಿದೆ. ಕುಮಾರವ್ಯಾಸಭಾರತದಲ್ಲಿ ಈ ಸಂನಿವೇಶಕ್ಕೆ ಪ್ರಾಮುಖ್ಯದೊರೆತಿದೆ. ಇದರಿಂದ ಇಬ್ಬರೂ ಭಾರತವನ್ನು ನೋಡುವ ದೃಷ್ಟಿ ಹೇಗೆ ಬೇರೆಯಾಗಿತ್ತೆಂಬುದನ್ನು ಅರಿತುಕೊಳ್ಳಬಹುದು. ಪಂಪನಿಗೆ ಭಾರತವು ಒಂದು ಮಾನವಸಂಘರ್ಷದ ಕಥೆಯಾದರೆ ಕುಮಾರವ್ಯಾಸನಿಗೆ ಅದು ಮಾನವಜೀವನಕ್ಕೆ ಸೂತ್ರಧಾರಕಶಕ್ತಿಯಾದ ಭಗವಲ್ಲೀಲೆಯ ವಿಲಾಸವಾಗಿದೆ. 'ಪಂಪಭಾರತ'ದಲ್ಲಿ ದ್ಯೂತಪ್ರಸಂಗದ ಕಾವು ಏರುತ್ತ ಹೋಗಿ,

'ಕುಡಿವೆಂ ದುಶ್ಶಾಸನೋರಸ್ಥಳಮನಗಲೆ ಪೋೞ್ದದುರ್ಕೆನ್ನೆತ್ತರಂ, ಪೊ- ।
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮನುರುಗದಾಘಾತದಿಂ ನುಚ್ಚುನೂಱಾ- ॥
ಗೊಡೆವೆಂ ತದ್ರತ್ನರಶ್ಮಿಪ್ರಕಟಮುಕುಟಮಂ, ನಂಬು ನಂಬೆನ್ನ ಕಣ್ಣಿಂ ।
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ॥' (೭-೧೩)

ಎಂಬ ಭೀಮನ ಭೀಷಣಪ್ರತಿಜ್ಞೆಯಲ್ಲಿ ಕೊನೆಗೊಳ್ಳುತ್ತದೆ. ಆಮೇಲೆ ಪಾಂಡವರು ವನವಾಸಕ್ಕೆಂದು ಪಟ್ಟಣದಿಂದ ಹೊರಬೀಳುತ್ತಾರೆ. ಅಗ ಪುರಜನರು ಅವರ ಬಗ್ಗೆ

ಮರುಕದಿಂದ ಆಡಿದ ಮಾತುಗಳು ಅತ್ಯಂತ ಸಮಯೋಚಿತವೂ ಹೃದಯಸ್ಪರ್ಶಿಯೂ ಆಗಿವೆ.

‘ ಏದೊರೆಯಂ ಯಮನಂದನ- |
ನೇದೊರೆಯಂ ಭೀಮಸೇನನೇದೊರೆಯಂ ಕಂ- |
ಜೋದರನ ಮೈದುನಂ ತಾ- |
ಮೇದೊರೆಯರಮುಳ್ಗಳವರ್ಗಮಿಾಯಿರವಾಯ್ತೇ ||’ (೭–೧೭)

‘ ಎಂಥಾ ಮನುಷ್ಯರು ಪಾಂಡವರು, ಅವರಿಗೂ ಈ ಗತಿ ಬಂತೇ’ ಎಂದದರ ಸಾರ. ಇಷ್ಟೇ ಅಲ್ಲ, ಅವರು ಭವಿಷ್ಯವನ್ನೂ ಸಾರುತ್ತಾರೆ :

‘ ಜೂದಿನ ಗೆಲ್ಲದೊಳಾದೀ |
ಮೇದಿನಿಯಂ ಕಂಡು ಕಜ್ಜಮಂ ಕಾಣದೆ ದು- |
ರ್ಯೋದನನದೇನದೇಂ ಮರು- |
ಳಾದನೊ **ಬಡಿಗಂಡನಿಲ್ಲ ಪಾಲಂ ಕೆಂಡಂ** ||’ (೭–೧೯)

ಭೀಮ ಪ್ರತಿಜ್ಞೆಯನ್ನು ಘೋಷಿಸುವಾಗ ತಾರಸಪ್ತಕದಲ್ಲಿ ರೌದ್ರ ಆಕ್ರಂದನವನ್ನು ಮಾಡಿದ ಕವಿ ಮರುಕ್ಷಣದಲ್ಲಿಯೇ ಕೆಳಗಿನ ಸಪ್ತಕಕ್ಕೆ ಸರ್ರನೆ ಇಳಿದು ಪುರಜನದ ಸರಳಶೋಕವನ್ನು ಹಾಡಿದ ಬಗೆ ಅವನ ಸರ್ವಂಕಷಪ್ರತಿಭೆಗೆ ನಿದರ್ಶನವಾಗಿದೆ. ಪಾಂಡವರ ವನವಾಸ, ಕೃಷ್ಣಸಂಧಾನ, ಭಾರತಯುದ್ಧಪ್ರಾರಂಭ, ಭೀಷ್ಮರ ಸೇನಾಪತಿ-ಪಟ್ಟ, ಕರ್ಣನ ಸ್ವಾಭಿಮಾನ, ದುರ್ಯೋಧನನ ಛಲಪ್ರಸಂಗ—ಈ ಮೊದಲಾದ ಅನೇಕ ಸಂದರ್ಭಗಳಲ್ಲಿ ಉಜ್ವಲಸಂನಿವೇಶನಿರ್ಮಾಣದ ಶಕ್ತಿಯನ್ನು ಪಂಪನು ಪ್ರಕಟಗೊಳಿಸಿದ್ದಾನೆ. ಇದನ್ನು ನೋಡಿದರೆ ‘ ವಿಕ್ರಮಾರ್ಜುನವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ; ಅಲ್ಲಿಯ ಚಿನ್ನವನ್ನು ಶೋಧಿಸಿ ತಂದು ಹೊಸದಾಗಿ ಎರಕಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ನೂತನ ಪುತ್ಥಳಿ ಅದು ’[1] ಎಂಬ ವಿಮರ್ಶೆಯ ಸತ್ಯತೆ ಪ್ರತೀತವಾಗುತ್ತದೆ.

ಪಂಪನು ಚಿತ್ರಿಸಿದ ಪಾತ್ರಗಳು ಅನೇಕ. ಭಾರತಕಾಲದ ಕತ್ತಲೆಗವಿಯಿಂದ ಅವರೆಲ್ಲ ಎದ್ದು ಹೊರಬರುತ್ತಾರೆ, ಪಂಪಪ್ರತಿಭೆಯ ಬೆಳಕಿನಲ್ಲಿ ಹೊಳೆದು ಜೀವಂತ-ವಾಗಿ ತೋರುತ್ತಾರೆ, ಕೆಲಕೆಲವರು ಮೂಲಕ್ಕಿಂತ ಬೇರೆಯಾದ ಕಳೆಯಲ್ಲಿ ಕಾಣಿಸುತ್ತಾರೆ. ‘ ಚಲದೊಳ್ ದುರ್ಯೋಧನಂ, ನನ್ನಿಯೊಳ್ ಇನತನಯಂ, ಗಂಡಿನೊಳ್ ಭೀಮಸೇನಂ ’ (೧೧–೬೪) ಎಂದು ಮುಂತಾಗಿ ತಾನು ಚಿತ್ರಿಸಿದ ವ್ಯಕ್ತಿಗಳ ಪ್ರಧಾನಗುಣವನ್ನು ಪಂಪನು ಕೊನೆಯಲ್ಲಿ ಹೇಳಿದ್ದಾನೆ. ಆ ಗುಣಗಳು ಅವರಲ್ಲಿ ಪ್ರಧಾನವಾಗಿದ್ದರೂ ಅವರು ಗುಣದ ಬೊಂಬೆಯಲ್ಲ, ಜೀವಂತವ್ಯಕ್ತಿಗಳು

1 ತೀ. ನಂ. ಶ್ರೀಕಂಠಯ್ಯ : ಪಂಪ, ಪು. ೩೬–೩೭

ಎಂಬುದನ್ನು ಅವನು ಅರಿತಿದ್ದಾನೆ. ಅಲ್ಲದೆ ಅವರ ಅನ್ಯೋನ್ಯಸಂಬಂಧದಲ್ಲಿಯ ರಾಗದ್ವೇಷಗಳನ್ನೂ ಸೂಕ್ಷ್ಮಸಂಚಲನಗಳನ್ನೂ ತಿಕ್ಕಾಟ–ಕೂಗಾಟಗಳನ್ನೂ ಆಳ-ವಾಗಿ ಗ್ರಹಿಸಿದ್ದಾನೆ. ಯಾವ ಸಂದರ್ಭದಲ್ಲಿ ಯಾರ ನಡೆನುಡಿ ಹೇಗಿರಬಹುದೆಂಬ ಒಂದು ತೂಕ, ತಿಳಿವು ಅವನಿಗೆ ಸಹಜವಾಗಿ ಬಂದುಬಿಟ್ಟಿದೆ. ಆದುದರಿಂದಲೇ ಅವನ ಪಾತ್ರಪೋಷಣೆ ಸಜೀವವೂ ಸಮರ್ಪಕವೂ ಆಗಿರುತ್ತದೆ. ಮುಖ್ಯವಾಗಿ ಕಥಾನಾಯಕನಾದ ಅರ್ಜುನ, ಪ್ರತೀಕಾರಶೂರನಾದ ಭೀಮ, ಛಲವಂತನಾದ ದುರ್ಯೋಧನ, ನನ್ನಿಕಾರನಾದ ಕರ್ಣ ಇವರನ್ನು ಅವನು ಸಂಪೂರ್ಣವಾಗಿ ಚಿತ್ರಿ-ಸಿದ್ದಾನೆ. ದುರ್ಯೋಧನನ ವಿಷಯದಲ್ಲಿ ಮೂಲದಲ್ಲಿ ಕಾಣದೊರೆಯದ ಉದಾತ್ತೀ-ಕರಣವಾಗಿದೆಯೆಂದು ವಿಮರ್ಶಕರು ಕಂಡುಹಿಡಿದಿದ್ದಾರೆ. ಇದರಲ್ಲಿ ಸತ್ಯಾಂಶವಿದೆ. ಆದರೆ 'ಇಲ್ಲಿಯ ದುರ್ಯೋಧನ ಮಹಾತ್ಮನೂ ಅಲ್ಲ, ಧೀರೋದಾತ್ತನೂ ಅಲ್ಲ. ಅವನು ಮದಮತ್ಸರಲೋಭಗಳಿಂದ ಕೂಡಿದ ರಾಜಸವ್ಯಕ್ತಿ, ಆದರೆ ಸತ್ವಾಂಶವುಳ್ಳ ವೀರಧೀರ, ಪರಿಸ್ಥಿತಿಯೊಡನೆ ಬೆಳೆದ ವ್ಯಕ್ತಿ ಎಂಬುದು ಪಂಪನ ದುರ್ಯೋಧನ-ಕಲ್ಪನೆ'[1] ಎಂದು ನಮ್ಮ ಅಭಿಪ್ರಾಯವಾಗಿದೆ. ದುರ್ಯೋಧನನ ತರುವಾಯ ಕರ್ಣನ ಪಾತ್ರವನ್ನು ಪಂಪನು ಪರಿಣಾಮಕರವಾಗಿ ಚಿತ್ರಿಸಿದ್ದಾನೆ. ಕೆಲವರ ಅಭಿಪ್ರಾಯದಲ್ಲಿ 'ಪಂಪನ ಮನಸ್ಸನ್ನು ಕರ್ಣನು ಸೆಳೆದಷ್ಟು ದುರ್ಯೋಧನನು ಸೆಳೆದಿಲ್ಲ'[2]. ಸತ್ಯತ್ಯಾಗಗಳಿಂದ ಕೂಡಿ ಆದರ್ಶವೀರನಾದ ಕರ್ಣನು ಸತ್ಕುಲದಲ್ಲಿ ಹುಟ್ಟಿಯೂ ಹೀನಕುಲಜನೆಂಬ ಹೀನಾಯಕ್ಕೆ ಗುರಿಯಾಗಿ ಪಟ್ಟ ಪಾಡು ಕರುಳಿರಿಯು-ವಂಥದು. ಕರ್ಣಚರಿತ್ರೆಯಲ್ಲಿ ಒಂದು ಪ್ರಭಾವಿಯಾದ ದುರಂತವಿದೆ. ಅದನ್ನು ಪಂಪನು ಎತ್ತಿತೋರಿದ್ದಾನೆ. 'ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನ-ಮಲ್ತೆ ಭಾರತಂ' ಎಂದು ಕೊನೆಗೆ ಕೊರಳುಬ್ಬಿ ಕೈವಾರಿಸಿದ್ದಾನೆ. 'ಪಂಪಭಾರತ'-ದಲ್ಲಿ ಕೃಷ್ಣನು ವ್ಯಾಸಭಾರತದ ಹಾಗೆ ಪುರುಷೋತ್ತಮನೂ ಶ್ರೀಮನ್ನಾರಾಯಣನೂ ಆಗಿದ್ದು ವಿಶ್ವರೂಪವನ್ನು ತೋರಿಸುತ್ತಾನೆ, ಪಾಂಡವಪಕ್ಷಪಾತವನ್ನು ತೋರುತ್ತಾನೆ, ಅರ್ಜುನನ ಪರಮಮಿತ್ರನಾಗಿರುತ್ತಾನೆ. ಆದರೆ ಪರಮಾತ್ಮ ಎಂಬ ಸ್ವರೂಪಕ್ಕಿಂತ ಸತ್‌ಪಕ್ಷಕ್ಕೆ ಸಹಾಯಕನಾದ ಶೂರ ಮತ್ತು ಚತುರ ಮುತ್ಸದ್ದಿ ಎಂಬ ಅವನ ವ್ಯಕ್ತಿತ್ವವು ಇಲ್ಲಿ ಹೆಚ್ಚಾಗಿ ಎದ್ದುಕಾಣುತ್ತದೆ.

ಪಂಪನ ಶೈಲಿ–ವರ್ಣನೆಗಳಲ್ಲಿ 'ಹಿತಮಿತಮೃದುವಚನ', 'ಕಿರಿದರೊಳು ಪಿರಿದು', ರಸಧ್ವನಿಪ್ರವಣತೆ, ದೇಸಿಯ ಔಚಿತ್ಯ ಮತ್ತು ಸಂಪತ್ತಿ, ನಾದಸೂಕ್ಷ್ಮತೆ ಮುಂತಾದ ಗುಣಗಳನ್ನು ಕಾಣುತ್ತೇವೆ. 'ಪ್ರಸನ್ನಗಂಭೀರವಚನರಚನಚತುರ' ಎಂದು ಅವನು ತನ್ನ ಬಿರುದನ್ನು ಸಾರಿದ್ದಾನೆ. 'ಗಂಭೀರ' ಎಂಬುದು ನಿಜವಾದರೂ

---

1 ರಂ. ಶ್ರೀ. ಮುಗಳಿ: ರನ್ನನ ಕೃತಿರತ್ನ, ಪು. ೭೯

2 ತೀ. ನಂ. ಶ್ರೀಕಂಠಯ್ಯ: ಪಂಪ, ಪು. ೪೧

'ಪ್ರಸನ್ನ' ಎಂಬುದು ಅವನ ಶೈಲಿಯ ಸಂತತ ಲಕ್ಷಣವೆಂದು ತೋರುವುದಿಲ್ಲ. ಅವನ ಬಿಗುವಿನಲ್ಲಿಯೂ ಕೊಂಕಿನಲ್ಲಿಯೂ ಮಾತು ತೊಡರಾಗುವುದುಂಟು. 'ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದು, ಒಂದಿ ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ಪುದು, ತಳ್ತೊಡೆ ಕಾವ್ಯಬಂಧವೊಪ್ಪುಗುಂ' ಎಂಬ ಅವನ ಶೈಲಿಯ ಪ್ರಕ್ರಿಯೆ ಅವನ ಕೃತಿಗಳಿಗೆ ಅನ್ವಯಿಸುತ್ತದೆ. ದೇಸಿಮಾರ್ಗಗಳ ಸುಂದರ-ಸಮನ್ವಯವು ಒಟ್ಟಿನಲ್ಲಿ ಫಲಿಸಿದೆ. ಆಗಾಗ ತಲೆಯಿಕ್ಕುವ ಸಂಸ್ಕೃತದ ಠೀವಿ ಕೆಲವು ಸಲ ಅರ್ಥವಾಹಿಯಾದರೆ ಕೆಲವು ಸಲ ಆಡಂಬರವಾಗುತ್ತದೆ. 'ಪುಲಿಗೆರೆಯ ತಿರುಳ್ಗನ್ನಡ' ಎಂದರೇನು ಎಂಬುದು ಪ್ರಶ್ನೆಯಾಗಿ ಉಳಿಯಬಹುದು. ಆದರೆ ಕನ್ನಡದೇಸಿಯನ್ನು ಅವನೆಷ್ಟು ಆತ್ಮೀಕರಿಸಿಕೊಂಡಿದ್ದನೆಂಬುದನ್ನೂ ಮಾರ್ಗಸಂಸ್ಕಾರದಿಂದ ಅದನ್ನು ಹೇಗೆ ಬೆಳಗಿಸಿದನೆಂಬುದನ್ನೂ ನೋಡಿದರೆ ಅವನ ಅಸಾಧಾರಣಶಕ್ತಿಗೆ ನಿದರ್ಶನ ದೊರೆಯುತ್ತದೆ.

ಪಂಪನು ಮಹಾಕವಿಯೆಂಬುದು ಎಂದಿಗೂ ವಾದಗ್ರಸ್ತವಾಗಿಲ್ಲ. 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿಪಂಪನಾವಗಂ' ಎಂದ ನಾಗರಾಜನೊಡನೆ ದನಿಗೂಡಿಸಿ ಹಿಂದಿನ ಕವಿಗಳು ಹೊಗಳಿದರು. ಇಂದಿನ ವಿಮರ್ಶಕರೂ ಅದನ್ನು ಎತ್ತಿ ಸಾರುತ್ತಿದ್ದಾರೆ. 'ನಾಡೋಜನಾದ ಪಂಪನು ಬರಿಯ ಕವಿ ಮಾತ್ರವೇ ಅಲ್ಲ, ಸಾವಿರ ವರ್ಷಕ್ಕೆ ಹಿಂದಿನ ಕನ್ನಡ ರಾಷ್ಟ್ರೀಯ ಪುರುಷರೊಳಗೂ ಒಬ್ಬನು'[1] ಎಂದು ಮುಳಿಯ ತಿಮ್ಮಪ್ಪಯ್ಯನವರು ನಂಬಿದ್ದಾರೆ. 'ಪಂಪನು ಕನ್ನಡದ ಕಾಳಿದಾಸ'[2] ಎಂದು ಶ್ರೀ. ತೀ. ನಂ. ಶ್ರೀಕಂಠಯ್ಯನವರು ಧೈರ್ಯವಾಗಿ ಹೇಳಿದ್ದಾರೆ. ಪಂಪ-ನಿಗೂ ಕಾಳಿದಾಸನಿಗೂ ಕೆಲವಂಶಗಳಲ್ಲಿ ಸ್ಪಷ್ಟವಾದ ಸಾಮ್ಯವಿದೆ. ಆದರೆ ಇಬ್ಬರ ಸಮನ್ವಯಗಳ ರೀತಿ ಬೇರೆ. ಶೈಲಿಯಲ್ಲಿ ಕಾಳಿದಾಸನ ವೈದರ್ಭಿ ಪಂಪನ ವೈಶಿಷ್ಟ್ಯವೆಂದು ಹೇಳಲಾಗದು. ನಮ್ಮ ದೃಷ್ಟಿಯಲ್ಲಿ ನಾಗಚಂದ್ರ ಮತ್ತು 'ಕಾದಂಬರಿ'ಯ ನಾಗವರ್ಮ ಇವರು ವೈದರ್ಭಿಯ ಶೈಲಿಕಾರರಾಗಿದ್ದಾರೆ. ಪಂಪನಲ್ಲಿ ಭಟ್ಟನಾರಾಯಣನ ಭಾವಾವೇಗ, ಬಾಣನ ಓಜಸ್ವಿತೆಗಳು ಹೆಚ್ಚು ಎದ್ದು-ಕಾಣುತ್ತವೆ.

ರತ್ನತ್ರಯರಲ್ಲಿ ಪೊನ್ನನು ಎರಡನೆಯವನು. ಪಂಪನು ಹೇಳಿರುವಷ್ಟು ಆತ್ಮಚರಿತ್ರೆಯನ್ನು ಅವನು ಹೇಳಿಲ್ಲ, ಪಂಪನಿಗಿಂತ ಮಿಗಿಲಾಗಿ ಆತ್ಮಪ್ರಶಂಸೆಯನ್ನು ಮಾತ್ರ ಅವನು ಮಾಡಿಕೊಂಡಿದ್ದಾನೆ. ಪಂಪನ ವೆಂಗಿವಿಷಯವೇ ಅವನ ನಾಡಾಗಿರಬೇಕು. ಅಲ್ಲಿನ ಪುಂಗನೂರಿನ ನಾಗಮ್ಮಯ್ಯನ ಮಕ್ಕಳಾದ ಮಲ್ಲಪಾರ್ಯ ಮತ್ತು ಪುನ್ನಮಾರ್ಯ ಎಂಬ ಶೂರರು ಅವನಿಂದ 'ಶಾಂತಿಪುರಾಣ'ವನ್ನು

---

1 ಮುಳಿಯ ತಿಮ್ಮಪ್ಪಯ್ಯ: ಪಂಪಮಹಾಕವಿ, ಪು. ೩೯

2 ತೀ. ನಂ. ಶ್ರೀಕಂಠಯ್ಯ: ಪಂಪ, ಪು. ೬೪

ಹೇಳಿಸಿದರು. ಮುಂದೆ ಮಲ್ಲಪ್ಪನ ಮಗಳಾದ ದಾನಶೂರೆ ಅತ್ತಿಮಬ್ಬೆ ಈ ಪುರಾಣದ ಸಾವಿರ ಪ್ರತಿಗಳನ್ನು ಬರೆಯಿಸಿದಳಂತೆ. ಓಲೆಗರಿಯ ಮೇಲೆ ಬರೆಯುವ ಅಂದಿನ ಕಾಲದಲ್ಲಿ ಇದೊಂದು ಅದ್ಭುತಕಾರ್ಯವೇ ಸರಿ. ಪೊನ್ನನ ಕೃತಿಗಳು ಮೂರು: ಶಾಂತಿಪುರಾಣ, ಭುವನೈಕರಾಮಾಭ್ಯುದಯ (ರಾಮಕಥೆ), ಜಿನಾಕ್ಷರಮಾಲೆ. 'ಗತಪ್ರತ್ಯಾಗತ' ಎಂಬ ನಾಲ್ಕನೆಯ ಗ್ರಂಥವನ್ನೂ ಅವನು ಬರೆದಿರಬೇಕೆಂದು ಕವಿಚರಿತಕಾರರು ಊಹಿಸಿದ್ದಾರೆ. ಇದನ್ನು ಸೂಚಿಸುವ ಪದ್ಯ (ಶಾಂ.ಪು. ೧೨-೭೪) ಪೂರ್ತಿಯಾಗಿ ಅರ್ಥವಾಗಿಲ್ಲ. ಹಿಂದಿನ ಪದ್ಯಗಳಲ್ಲಿ 'ಸಕ್ಕದಂ ಕನ್ನಡಮೆಂಬೆರಡುಂ ಕವಿತೆಯ ಬಲ್ಮೆಗೆ ಬೆರಲೆತ್ತಿದನಿಳೆಯೊಳೀ ಕುರುಳ್ಗಳ ಸವಣಂ' (೧೨-೭೦) ಮತ್ತು ಚಕ್ರವರ್ತಿಯಾದ ರಾಷ್ಟ್ರಕೂಟ ಕೃಷ್ಣನು ಕೊಟ್ಟ 'ಉಭಯಚಕ್ರವರ್ತಿ' (೧೨-೭೨) ಎಂಬ ಬಿರುದು ಇವುಗಳ ಉಲ್ಲೇಖವಿದೆ. ಆದ್ದರಿಂದ ಪೊನ್ನನು ಸಂಸ್ಕೃತದಲ್ಲಿಯೂ ಗ್ರಂಥ ಬರೆದಿರಬಹುದು, 'ಗತಪ್ರತ್ಯಾಗತ'ವು ಇವನ ಸಂಸ್ಕೃತ ಗ್ರಂಥವಾಗಿರಬಹುದು. ಇವನ ಬಿರುದುಗಳಲ್ಲಿ ಒಂದಾದ 'ಕುರುಳ್ಗಳ ಸವಣ' ಎಂಬುದು ರಸಿಕನಾದ ಯತಿಯೆಂಬುದಾಗಿ ಇವನ ವ್ಯಕ್ತಿತ್ವವನ್ನು ತಿಳಿಸುತ್ತದೆ.

ಇವನ ಉಪಲಬ್ಧಗ್ರಂಥಗಳೆಂದರೆ 'ಶಾಂತಿಪುರಾಣ' ಮತ್ತು 'ಜಿನಾಕ್ಷರ-ಮಾಲೆ'. ಇದರಲ್ಲಿ ಎರಡನೆಯದು ೩೯ ಕಂದಪದ್ಯಗಳಲ್ಲಿ ಮಾಡಿದ ಜಿನಸ್ತುತಿ. 'ಲೋಕೋತ್ತರಲೌಕಿಕಪರಿಣತಿ ಪುನ್ನಿಗಂಗೆ ಶಾಂತೀಶ್ವರರಾಮಕಥಾಪ್ರಶಸ್ತಿಯಿಂದಾದ ಕೃತಿಗಳಿಂ' (೧೨-೬೫) ಎಂಬುದರಿಂದ ಪೊನ್ನನ ಧಾರ್ಮಿಕಗ್ರಂಥ 'ಶಾಂತಿಪುರಾಣ', ಲೌಕಿಕಗ್ರಂಥ 'ರಾಮಕಥೆ' ಎಂದು ತಿಳಿಯುತ್ತದೆ. ಈ ವಿಷಯದಲ್ಲಿ ಅವನು ಪಂಪನ ಬಟ್ಟೆಯಲ್ಲಿ ನಡೆದಿದ್ದಾನೆ. 'ರಾಮಕಥೆ'ಯಲ್ಲಿ ೧೪ ಆಶ್ವಾಸಗಳುಂಟೆಂದು ಅವಕ್ಕೆ ೧೪ ಲೋಕಗಳ ಬೆಲೆಯೆಂದು ಹೇಳಿದ್ದಾನೆ (೧೨-೬೬). 'ಕಾವ್ಯಾವಲೋಕನ' ಮತ್ತು 'ಶಬ್ದಮಣಿದರ್ಪಣ'ಗಳಲ್ಲಿ ಉದಾಹೃತವಾಗಿರುವ 'ಉದಯಾಸ್ತೋನ್ನತ ಶೈಲ....ಭುವನೈಕರಾಮಮಹಿಪಂಗಕ್ಕುಂ ಪೆಱರ್ಗಕ್ಕುಮೇ' ಎಂಬ ಪದ್ಯ ಹಾಗೂ 'ಶಬ್ದಮಣಿದರ್ಪಣ'ದಲ್ಲಿ ಮಾತ್ರ ಕಂಡುಬಂದಿರುವ 'ಆನೆಯ ಮೇಲೆಯುಮಾಳ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ' ಎಂಬ ಪದ್ಯಭಾಗ ಇವು ಪೊನ್ನನ 'ಭುವನೈಕರಾಮಾಭ್ಯುದಯ' ಇಲ್ಲವೆ 'ರಾಮಕಥೆ'ಯಿಂದ ಎತ್ತಿಕೊಂಡು-ವಾಗಿರಬೇಕೆಂದು ತೋರುತ್ತದೆ.[1] ಶಂಕರಗಂಡ ಎಂಬ ಕೃಷ್ಣರಾಜನ ಸಾಮಂತಾಧಿ-

---

1 'ಶಬ್ದಮಣಿದರ್ಪಣ'ದಲ್ಲಿಯ 'ಜವನೇಱಿದೊಂದು ಜಕ್ಕಂದೊಜಲಿಯಂತೆ ಕಣ್ಗೆಸೆ. ದಿರ್ದುದಿಭಂ ಚಲದಂಕರಾಮನಾ' ಈ ಪದ್ಯಭಾಗವೂ 'ರಾಮಕಥೆ'ಯಿಂದಲೇ ಉದಾಹೃತವಾಗಿರಬಹುದು. ಇನ್ನೂ ಕೆಲವು ಅವತರಣಿಕೆಗಳು ಪೊನ್ನನ ರಾಮ-ಕಥೆಯಿಂದ ಎತ್ತಿದುವಿರಬಹುದೆಂದು ಶ್ರೀ. ಬೇಂದ್ರೆಯವರು ಊಹಿಸಿದ್ದಾರೆ. (ಸೋ.—ಪ್ರ.ಕ., ೧೫-೪)

ಪತಿಗೆ 'ಭುವನೈಕರಾಮ' ಎಂಬ ಬಿರುದಿದ್ದಿತೆಂದು ಶಾಸನದಿಂದ ತಿಳಿಯುತ್ತದೆ. 'ಪೊನ್ನನ 'ರಾಮಕಥೆ'ಯು 'ಭುವನೈಕರಾಮ' ಎಂಬ ಬಿರುದನ್ನು ಪಡೆದಿದ್ದ ಶಂಕರಗಂಡನಿಗೆ ಅಂಕಿತಮಾಡಲ್ಪಟ್ಟ ಒಂದು ಕಾವ್ಯವಿರಬೇಕೆಂದು ತೋರುತ್ತದೆ'[1] ಎಂದೊಂದು ಊಹೆಮಾಡಲಾಗಿದೆ. ಜೊತೆಗೆ 'ಶಂಕರಗಂಡನು ಜೈನನಾಗಿದ್ದರೆ ಪೊನ್ನನು ಹೀಗೆ ಲೌಕಿಕವನ್ನೇ ಪ್ರಧಾನವಾಗಿಟ್ಟುಕೊಂಡು ತನ್ನ 'ಭುವನೈಕ-ರಾಮಾಭ್ಯುದಯ'ವನ್ನು ರಚಿಸುತ್ತಿದ್ದನೇ?'[2] ಎಂಬ ಶಂಕಾಗರ್ಭಿತವಾದ ಪ್ರಶ್ನೆಯೂ ಇದೆ. ಪಂಪನ 'ವಿಕ್ರಮಾರ್ಜುನವಿಜಯ'ದಲ್ಲಿ ಅರಿಕೇಸರಿ ಗೊಜ್ಜಿಗನೊಡನೆ ಹೋರಾಡಿದ ಕಥೆ, ರನ್ನನ 'ಗದಾಯುದ್ಧ'ದಲ್ಲಿ ತೈಲಪಚಾಳುಕ್ಯನಿಗೂ ರಾಜ-ರಾಜೇಂದ್ರ ಚೋಳನಿಗೂ ಆದ ಸಮರಸಂದರ್ಭ, ಇವು ಅಡಕವಾಗಿರುವಂತೆ ಪೊನ್ನನ 'ಭುವನೈಕರಾಮಾಭ್ಯುದಯ'ದಲ್ಲಿ ರಾಷ್ಟ್ರಕೂಟಕೃಷ್ಣನು ತಕ್ಕೋಳದಲ್ಲಿ ಚೋಳ-ರಾಜಾದಿತ್ಯನನ್ನು ಸೋಲಿಸಿದ ವಿಷಯವು ವರ್ಣಿತವಾಗಿರಬೇಕೆಂಬ ಇನ್ನೊಂದು ಊಹೆಮಾಡಲಾಗಿದೆ.[3] 'ಚಕ್ರವರ್ತಿಯಿಂದ ಚಕ್ರವರ್ತಿಯೆಂದು ಬಿರುದುಪಡೆಯ-ಬೇಕಾದರೆ ಅವನನ್ನೇ ಕುರಿತು ಕಾವ್ಯವನ್ನು ಬರೆದಿರಬೇಕು; ಅವನ ಸಾಮಂತನನ್ನು ಕುರಿತಲ್ಲ. ಈ ಊಹೆಯ ಮಾರ್ಗವು ಸರಿಯಾಗಿದ್ದಲ್ಲಿ ಪೊನ್ನನ ರಾಮಕಥಾ-ಪ್ರಶಸ್ತಿಯು ಹೆಚ್ಚು ಇತಿಹಾಸಕಾವ್ಯವಾಗಿ ತೋರುವುದು. ಪುರಾಣದ ಮೊಗವಾಡ ಕಟ್ಟಿಕೊಂಡು ಕುಣಿವ ಇತಿಹಾಸಪಾತ್ರವಲ್ಲ. ಹಾಗಿದ್ದರೆ 'ಭುವನೈಕರಾಮಾ-ಭ್ಯುದಯ'ವು ದೊರೆತಲ್ಲಿ ನಮಗೆ ಬೇರೊಂದು ಬಗೆಯ ಕಾವ್ಯಮಾರ್ಗದ ಗ್ರಂಥವೇ ದೊರೆತಂತಾಗುವುದು.'[4] ಈ ಊಹೆ–ಪ್ರತ್ಯೂಹೆಗಳ ಚರ್ಚೆ ಇಲ್ಲಿ ಸಾಧ್ಯವಿಲ್ಲ. ಎರಡನೆಯ ಊಹೆಯಲ್ಲಿ ಸಮಂಜಸಿಕೆಯಿದೆಯಾದರೂ ರಾಷ್ಟ್ರಕೂಟಕೃಷ್ಣನಿಗೆ 'ಭುವನೈಕರಾಮ'ನೆಂಬ ಬಿರುದಿದ್ದಿತೆಂಬುದಕ್ಕೆ ಸ್ಪಷ್ಟ ಆಧಾರವು ಬೇಕು. ಮೊದಲ-ನೆಯ ಊಹೆಗೆ ಬಲ ಬಂದಿರುವುದು ಅಂಥ ಆಧಾರದಿಂದ. ಇದೇನೆ ಇದ್ದರೂ 'ಭುವನೈಕರಾಮಾಭ್ಯುದಯ'ವು ಪಂಪನ ಲೌಕಿಕವಾದ ಭಾರತದಂತೆ ಪೊನ್ನನ ಲೌಕಿಕರಾಮಾಯಣವಾಗಿರಬೇಕು, ನೇರವಾದ ಇತಿಹಾಸಕಾವ್ಯವಾಗಲಾರದು ಎಂದು ನಮಗೆ ತೋರುತ್ತದೆ. ಹದಿನಾಲ್ಕು ಆಶ್ವಾಸಗಳಲ್ಲಿ ಇತಿಹಾಸಕಾವ್ಯವನ್ನು ಬರೆಯು ವುದು ಅಂದು ಅಸಾಧ್ಯ ಸಂಗತಿ. 'ಲೌಕಿಕಪರಿಣತಿ ರಾಮಕಥಾಪ್ರಶಸ್ತಿಯಿಂದ' ಎಂಬ ಪೊನ್ನನ ಹೇಳಿಕೆ ಇದಕ್ಕೆ ಪುಷ್ಟಿಕೊಡುತ್ತದೆ.

---

1 ಡಿ. ಎಲ್. ನರಸಿಂಹಾಚಾರ್: ಪೊನ್ನನ 'ಭುವನೈಕರಾಮಾಭ್ಯುದಯ' (ಪ್ರ.ಕ., ೧೫–೨, ಪು. ೪)

2 ಅದೇ, ಪು. ೮

3 ದ. ರಾ. ಬೇಂದ್ರೆ: ಪೊನ್ನನ 'ಭುವನೈಕರಾಮಾಭ್ಯುದಯ' (ಪ್ರ.ಕ., ೧೫–೪, ಪು. ೨೯–೩೦)

4 ಅದೇ; ಪು. ೩೫

'ಶಾಂತಿಪುರಾಣ'ವು ೧೬ನೆಯ ತೀರ್ಥಂಕರನಾದ ಶಾಂತಿನಾಥನ ಚರಿತವುಳ್ಳ ಜೈನಪುರಾಣ, ೧೨ ಆಶ್ವಾಸಗಳುಳ್ಳ ಚಂಪೂಗ್ರಂಥ. ತೀರ್ಥಂಕರನ ೧೧ ಪೂರ್ವ ಜನ್ಮಗಳ ಅಂದರೆ ಭವಾವಳಿಯ ವಿಸ್ತಾರವಾದ ನಿರೂಪಣೆ ಇದರ ವೈಶಿಷ್ಟ್ಯವಾಗಿದೆ. ಇದಕ್ಕಾಗಿ ಸುಮಾರು ೯ ಆಶ್ವಾಸಗಳು ಮೀಸಲಾಗಿದ್ದು, ೩ ಆಶ್ವಾಸಗಳಲ್ಲಿ ಮಾತ್ರ ಶಾಂತಿನಾಥನ ಚರಿತ್ರೆ ಬಂದಿದೆ. ಮುಖ್ಯಕಥೆಗೆ ಅಮುಖ್ಯತ್ವವನ್ನು ಕೊಟ್ಟಿರುವುದು ಕಲಾದೃಷ್ಟಿಯಿಂದ ಪ್ರಮಾಣಜ್ಞಾನದ ಅಭಾವವನ್ನು ತೋರಿಸುವುದಾದರೂ ಜೈನ-ಪುರಾಣಗಳಲ್ಲಿ ಭವಾವಳಿಗಿರುವ ಮುಖ್ಯತ್ವವನ್ನು ಎತ್ತಿತೋರಿಸುವುದು ಪೊನ್ನನ ಉದ್ದೇಶವಾಗಿರಬೇಕು.

> 'ಪದದಪ್ಪದೆಯುಂ ಬಗೆ ಬೆದ- |
> ರದೆಯುಂ ಕತೆಕಿಡದೆಯುಂ **ಭವಾವಳಿ ತೊಡಮಾ-** |
> **ಗದೆಯುಂ** ಸವಿತವದೆಯುಮಂ- |
> ಬುದನಿನದನತಂದ್ರನಿಂದ್ರನಾ ಜಿನಚಂದ್ರಂ ||' (೫–೧೦) .

ಎಂಬ ಪದ್ಯದಲ್ಲಿ ಪೊನ್ನನ ಆದರ್ಶಸೂಚನೆಯಿದೆ. ಭವಾವಳಿಯನ್ನು ಅನುಕ್ರಮವಾಗಿ ಹೇಳದೆ ೬ನೆಯ ಭವದ ಅಪರಾಜಿತನಿಂದ ಆರಂಭಿಸಿ ಅವರಿವರಿಂದ ಉಳಿದವುಗಳನ್ನು ಹೇಳಿಸಿದೆ. ಅಪರಾಜಿತಭವದ ಆಯ್ಕೆಯಲ್ಲಿ ಆಕರ್ಷಕವಾದ ಸಂನಿವೇಶರಚನೆಯ ದೃಷ್ಟಿಯಿರಬೇಕು. ಅದರಲ್ಲಿ ರೋಮಾಂಚಕಾರಕವಾದ ಘಟನೆಗಳಿವೆ. ಆದರೂ ಅವುಗಳಿಂದ ಅಂಥ ರಸನಿಷ್ಪತ್ತಿಯಾಗುವುದಿಲ್ಲ. ಇತರ ಭವಾವಳಿಯಲ್ಲಿ ಇಲ್ಲವೆ ಶಾಂತಿನಾಥಚರಿತದಲ್ಲಿ 'ಆದಿಪುರಾಣ'ದಂಥ ಒಂದಾದರೂ ಹೃದಯಸ್ಪರ್ಶಿಯಾದ ಸಂನಿವೇಶವಿಲ್ಲ. ಮೂಲಸಾಮಗ್ರಿಯೇ ಹಾಗಿತ್ತು. ಪೊನ್ನನು ಅದನ್ನು ಬಹುಶಃ ಇದ್ದಂತೆ ಬಳಸಬೇಕಾಗಿತ್ತು. ಆದರೂ ಕೆಲವು ಕಡೆಗೆ ದೊರೆಯಬಹುದಾದ ನಿರ್ಮಾಣ-ಸ್ವಾತಂತ್ರ್ಯವನ್ನು ಅವನು ತೋರಿಲ್ಲ. ಶಾಂತೀಶ್ವರನು ವೈರಾಗ್ಯಹೊಂದಿದ ಸಂದರ್ಭ ತೀರ ನೀರಸವಾಗಿದೆ. ಒಂದು ರಾತ್ರಿ ಸುರತಸುಖದ ಕೊನೆಯಲ್ಲಿ ಅವನು ತನ್ನಷ್ಟಕ್ಕೆ 'ಕೈಕೊಳ್ವೊಡೆ ಆತ್ಮಸುಖಮನೆ ಕೈಕೊಳ್ವುದು ದೇಹಿ, ಧರೆ ಶಾಶ್ವತಮಲ್ತು' (೧೧–೮೭, ೮೮) ಇತ್ಯಾದಿ ಸಾಂಪ್ರದಾಯಿಕ ಮಾತುಗಳನ್ನೆಂದು ಪರಿನಿಷ್ಕ್ರಮಣ-ಕಲ್ಯಾಣಕ್ಕೆ ಅಭಿಮುಖನಾದನಂತೆ. ಒಟ್ಟಿನಲ್ಲಿ 'ಶಾಂತಿಪುರಾಣ'ದಲ್ಲಿ ಕಥಾವಸ್ತು ಎಂಬುದು ಮಧ್ಯಮತರಗತಿಯದು, 'ಆದಿಪುರಾಣ'ದ ಮುಂದೆ ನಿಸ್ತೇಜವಾಗಿ ತೋರುವಂಥದು.

ಪೊನ್ನನ ಗಮನವೆಲ್ಲ ಜೈನಶಾಸ್ತ್ರ ಮತ್ತು ಕಾವ್ಯಶಾಸ್ತ್ರಗಳಿಗೆ ಸಂವಾದಿಯಾಗಿ ತನ್ನ ಗ್ರಂಥ ಪ್ರೌಢವಾಗಬೇಕು ಎಂಬಲ್ಲಿ ತೊಡಗಿದೆ. ಜೈನಪುರಾಣದಲ್ಲಿರಬೇಕಾದ ಎಂಟು ಅವಯವಗಳಿಗೆ ಅವನು ತಪ್ಪದೆ ಇಂಬುಕೊಟ್ಟಿದ್ದಾನೆ. ಭವಾವಳಿಯನ್ನು ಚಿತ್ರಿಸಿದ್ದಾನೆ, ಶಾಸ್ತ್ರಭಾಗಗಳನ್ನು ವಿವರಿಸಿದ್ದಾನೆ, ಕಾವ್ಯಶಾಸ್ತ್ರದೃಷ್ಟಿಯಿಂದ

ಹದಿನೆಂಟು ವರ್ಣನೆಗಳೂ ಒಂಬತ್ತು ರಸಗಳೂ ಬಂದಿವೆ. ಛಂದಸ್ಸು–ಶೈಲಿ–ಅಲಂಕಾರಗಳಿಂದ ಕಾವ್ಯಬಂಧವನ್ನು ಅವನು ಪ್ರೌಢಗೊಳಿಸಿದ್ದಾನೆ. 'ಸಮವೃತ್ತ-ಸಂಧಿಲಕ್ಷಣಸಮನ್ವಿತಂ ಜಾತ್ಯಲಂಕೃತಿಭ್ರಾಜಿತಮುತ್ತಮಕಾವ್ಯಬಂಧದಂತೆ'(೩–೪೬) ಎಂಬ ಹೋಲಿಕೆ ಅವನ ಉತ್ತಮಕಾವ್ಯದ ಲಕ್ಷಣವನ್ನು ಸೂಚಿಸುತ್ತದೆ. ತನ್ನ ಈ ಗ್ರಂಥವು 'ಪುರಾಣಚೂಡಾಮಣಿ' ಎಂದು ತಿರುತಿರುಗಿ ಹೆಮ್ಮೆಯಿಂದ ಹೇಳಿ-ಕೊಳ್ಳುತ್ತಾನೆ.

'ಶಾಂತ ಜಿನಾಂತರದೊಳ್ ಸಲೆ ।
ಶಾಂತಿಪುರಾಣಮೆ **ಪುರಾಣಚೂಡಾಮಣಿಯೆಂ-** ।
ದಿಂತು ಪೆಸರಿಡುಗುಮೇ ಮತಿ- ।
ವಂತಂ ಕವಿಚಕ್ರವರ್ತಿ ಸಮೆದೀ ಕೃತಿಯಂ ॥' (೧೨–೫೬)

ಎಂದು ಧೈರ್ಯವಾಗಿ ಆಡುತ್ತಾನೆ. ಜೈನಪುರಾಣದ ಸಾಂಪ್ರದಾಯಿಕ ಲಕ್ಷಣವನ್ನು ಅತಿನಿಷ್ಠೆಯಿಂದ ಪಾಲಿಸಿ 'ಆದಿಪುರಾಣ'ದಂಥ ಕೃತಿಗಳನ್ನೂ ಹಿಂದೆಹಾಕಿದ್ದಕ್ಕೆ 'ಶಾಂತಿಪುರಾಣ'ವನ್ನು 'ಪುರಾಣಚೂಡಾಮಣಿ' ಎಂದು ಕರೆಯಬಹುದು. ಆದರೆ ಕಾವ್ಯಧರ್ಮ ಮತ್ತು ಧರ್ಮಗಳ ಸಂಯೋಜನೆಯ ದೃಷ್ಟಿಯಿಂದ ಅದು ಶ್ರೇಷ್ಠ-ಪುರಾಣವಲ್ಲವೆಂದು ನಾವು ಧೈರ್ಯವಾಗಿ ಹೇಳಬಹುದು.

'ಶಾಂತಿಪುರಾಣ'ದಲ್ಲಿ ವಸ್ತುರಚನೆ ಸರ್ವಸಾಮಾನ್ಯವಾಗಿದ್ದರೂ ಅದರ ವರ್ಣನೆಗಳಲ್ಲಿ ಸಾಮಯಿಕತೆಯ ಮೋಡದೊಡಲಲ್ಲಿ ಆಗಾಗ ಮಿಂಚುವ ಕಲ್ಪ-ಕತೆಯಿದೆ, ಪ್ರಸನ್ನತೆಯಿದೆ, ಮೃದುಬಂಧವಿದೆ. ಈ ಕಾವ್ಯಗುಣಗಳು ಎತ್ತರಕ್ಕೆ ಸಹ ಒಮ್ಮೊಮ್ಮೆ ಹೋಗುತ್ತವೆ. ಈ ಪುರಾಣದಲ್ಲಿಯ ಶಾಸ್ತ್ರ–ಸಂಪ್ರದಾಯಜಡವಾದ ಭಾಗಗಳನ್ನು ಓದುವಾಗ ಬರುವ ಬೇಸರನ್ನು ಅವು ಕಳೆಯುತ್ತವೆ, ಪೊನ್ನನ ಕವಿತಾ-ಶಕ್ತಿಯ ಬಗ್ಗೆ ನಮ್ಮ ಆದರವನ್ನು ಹೆಚ್ಚಿಸುತ್ತವೆ. ಕಮಲದಿಂದ ಕಮಲಕ್ಕೆ ಭ್ರಮರ-ಗಳು ಹಾರುವಾಗ 'ಮಧುವುಂ ಮನೋಭವನುಮಟ್ಟಿಯೊಳಾಡುವ ಪೊನ್ನಬಟ್ಟ-ನೊರ್ಮೊದಲೆ ಮನೋಜಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದಮಂ' (೧–೫೮) ಹೋಲಿದುವಂತೆ. ವಸಂತವರ್ಣನೆಯಲ್ಲಿ ಭ್ರಮರಗಳು 'ಮದನಂ ಮಸಿ-ಯೊಳ್ ಬರೆದಿಟ್ಟ ತನ್ನತಕ್ಕಿನ ಪೆಸರಕ್ಕರಂಗಳೆನಿಸಿರ್ದುವು' (೭–೧೨೫).

'ಶಿವಸುಖಮನಱಿಯದೀ ಮಾ- ।
ನವಸುಖದ ನಿಮಿತ್ತದಿಂ ತಪಂಗೆಯ್ವವರೊ- ।
ಪ್ಪುವ ಮಾಣಿಕಮಂ ತೌಡಿಂ- ।
ಗವಯವದಿಂ ಮಾಱುಗುಡುವ ಮರುಳಂ ಪೋಲ್ಗುಂ ॥' (೧೧–೯೧)

ಪೂರ್ವಕಾವ್ಯದ, ವಿಶೇಷವಾಗಿ ಕಾಳಿದಾಸನ ಕಾವ್ಯನಾಟಕಗಳ ಪ್ರಭಾವವು ಪೊನ್ನನಲ್ಲಿ ದಟ್ಟವಾಗಿದೆ. ೫ನೆಯ ಆಶ್ವಾಸದ ಜ್ಯೋತಿಃಪ್ರಭೆಯ ಸ್ವಯಂವರವರ್ಣನೆಯಲ್ಲಿ ಕಾಳಿದಾಸನ 'ರಘುವಂಶ'ದಲ್ಲಿಯ ಇಂದುಮತೀಸ್ವಯಂವರವರ್ಣನೆಯ ಹಲವು ಪದ್ಯಗಳನ್ನು ಇದ್ದಕ್ಕಿದ್ದಂತೆ ಅವನು ಅನುವಾದಿಸಿದ್ದಾನೆ.[1] ಮುಂದೆ ಶಾಂತೀಶ್ವರನ ದಿಗ್ವಿಜಯವರ್ಣನೆಯಲ್ಲಿ ರಘುಮಹಾರಾಜನ ಜೈತ್ರಯಾತ್ರೆಯನ್ನು ಅನುಸರಿಸುತ್ತಾನೆ. ಹೀಗಿದ್ದು 'ಸಕ್ಕದದೊಳ್ ಮುನ್ನುಳ್ಳ ಕಾಳಿದಾಸಂಗಂ ನಾಲ್ವಡಿ ರಚನೆಯೊಳ್ ಕುರುಳ್ಗಳ ಸವಣಂ' (೧–೧೧), 'ಪೆಱಂಗಿನಿಸೆಡೆಗುಡದ **ಅಸಹಾಯಕವೀಶ್ವರಂ** ಕುರುಳ್ಗಳ ಸವಣಂ' (೧೨–೭೫) ಎಂದಿರುವುದು ಧಾರ್ಷ್ಟ್ಯದ ಮಾತು. ತನ್ನ ಸಂಸ್ಕೃತಗ್ರಂಥಗಳಲ್ಲಿ ಕಾಳಿದಾಸನನ್ನು ಮೀರಿದ್ದೇನೆ ಎಂದು ಪೊನ್ನನ ಅಭಿಪ್ರಾಯ ಇದ್ದರೆ ಆ ಗ್ರಂಥ ದೊರೆಯುವವರೆಗೆ ಏನನ್ನೂ ಹೇಳಲಾರೆವು. ಆದರೆ 'ಅಸಹಾಯ-ಕವೀಶ್ವರ' ಎಂಬ ವಿಶೇಷಣಕ್ಕೆ ಏನೆನ್ನಬೇಕು? ಪೊನ್ನನ ಯೋಗ್ಯತೆ ಮೇಲಾದರೂ ಆತ್ಮಸ್ತುತಿಯ ಆವೇಶದಲ್ಲಿ ಅವನು ತೂಕತಪ್ಪುತ್ತಾನೆ ಎಂದು ಹೇಳಬೇಕಾಗುತ್ತದೆ. 'ಶಾಂತಿಪುರಾಣ'ವು ಪ್ರೌಢವಾದ ಜೈನಪುರಾಣಗಳಲ್ಲಿ ಒಂದೆಂಬುದು ದಿಟವಾದುದು. ಆದರೆ ಅದು ಪೊನ್ನನ ಉತ್ತಮ ಕಾವ್ಯವಲ್ಲ. 'ಪಂಡಿತರುಂ ಮೂರ್ಖರುಮೆಕ್ಕೆಯಿಂ ಪೊಗೞ್ಗೆ' (೧–೮) ಕಾವ್ಯ ಹೇಳುವ ಪುಣ್ಯ ತನಗೇ ಇರುವುದೆಂದು ಅವನು ಹೇಳಿದ್ದಾನೆ. ಅವನ 'ಶಾಂತಿಪುರಾಣ'ವು ಶ್ರೇಷ್ಠಕೃತಿಯೆಂದು ಹೊಗಳುವವರು ಪಂಡಿತರಾದರೂ ಇರಬೇಕು, ಮೂರ್ಖರಾದರೂ ಇರಬೇಕು!

ಪೊನ್ನ ತಾನು ಮಹಾಕವಿಯೆಂದು ಹೇಳಿಕೊಳ್ಳುತ್ತಾನೆ. ಕವಿಚಕ್ರವರ್ತಿ ಎಂಬ ಬಿರುದು ಅವನಿಗೆ ಸಿಕ್ಕಿದೆ. 'ಶಾಂತಿಪುರಾಣ'ದಲ್ಲಿ ಅಸಾಮಾನ್ಯ ಕವಿತಾಶಕ್ತಿಯ ಸುಳುಹನ್ನು ಕ್ವಚಿತ್ತಾಗಿ ಕಾಣುತ್ತೇವೆ. ಆದರೆ ಅವನ ಇನ್ನೊಂದು ಗ್ರಂಥವು ದೊರೆತಿಲ್ಲವಾದಕಾರಣ ನಿರ್ಣಯಾತ್ಮಕವಾಗಿ ಏನನ್ನೂ ಹೇಳಲಾಗದು. 'ಶಾಂತಿ-ಪುರಾಣ'ದ ಮಟ್ಟಿಗೆ 'ಆದಿಪುರಾಣ'ದೊಡನೆ ಹೋಲಿಸಿ ಹೇಳುವುದಾದರೆ, ಪೊನ್ನನು ಮತಧರ್ಮ ಮತ್ತು ಪಂಡಿತಕಾವ್ಯಧರ್ಮ ಇವುಗಳ ಸಂಯೋಜನೆಯಲ್ಲಿ ಮಾತ್ರ ಯಶಸ್ವಿಯಾಗಿದ್ದಾನೆ, ಪಂಪನು ಧರ್ಮ ಮತ್ತು ಉತ್ತಮಕಾವ್ಯಧರ್ಮ ಇವುಗಳ ಮೇಳವಿಕೆಯಲ್ಲಿ ಬಹುಮಟ್ಟಿಗೆ ಜಯಶೀಲನಾಗಿದ್ದಾನೆ ಎಂದು ಹೇಳಬಹುದು. ಪಂಪನ ಕಾವ್ಯದಲ್ಲಿ ಸಂಪ್ರದಾಯನಿಷ್ಠೆ, ನೀರಸನಿರೂಪಣೆ ಇವನ್ನು ಮೀರಿ ಭವ್ಯಜೀವನದೃಷ್ಟಿ ಮತ್ತು ಮಹಾಕಾವ್ಯದ ಸತ್ವ ಗೆದ್ದು ನಿಲ್ಲುತ್ತವೆ. ಪೊನ್ನನ ಕವಿತಾಶಕ್ತಿ ಅವುಗಳ ಭಾರದ ಬುಡದಲ್ಲಿ ಆಗಾಗ ತಲೆಯೆತ್ತಿದರೂ ಕುಸಿಬಿದ್ದಿರುವುದೇ ಹೆಚ್ಚು.

---

1 ಡಿ. ಎಲ್. ನರಸಿಂಹಾಚಾರ್: ಪೊನ್ನನೂ ಕಾಳಿದಾಸನೂ (ಪ್ರ.ಕ., ೧೨–೨)

ರನ್ನ

ರತ್ನತ್ರಯರಲ್ಲಿ ಮೂರನೆಯವನು ಕವಿರತ್ನ ಅಂದರೆ ರನ್ನ.

'ಕವಿಜನದೊಳ್ ರತ್ನತ್ರಯ|
ಪವಿತ್ರಮೆನೆ ನೆಗಲ್ದ ಪಂಪನುಂ ಪೊನ್ನಿಗನುಂ|
ಕವಿರತ್ನನುಮಿಾಮೂವರ್|
ಕವಿಗಳ್ ಜಿನಸಮಯದೀಪಕರ್ ಪೆಱರೊಳರೆ||' (ಅ.ಪು. ೧೨-೩೭)

ಎಂದು ಪಂಪ, ಪೊನ್ನ, ತಾನು ಈ ಮೂವರು ರತ್ನತ್ರಯರೆಂದು ಹೆಮ್ಮೆಯಿಂದ ಹೇಳಿಕೊಂಡವನು ರನ್ನನೇ. ಈ ಹೆಮ್ಮೆ—ಒಣಹೆಮ್ಮೆಯಲ್ಲ, ಸ್ವಂತದ ಹಿರಿಮೆಯನ್ನರಿತು ಹೇಳಿಕೊಳ್ಳುವ ಗುಣ—ರನ್ನನ ಮನಃಪ್ರಕೃತಿಗೆ ಸಹಜವಾದದ್ದು. ತನ್ನ ಚರಿತ್ರೆಯನ್ನು ಪಂಪನಿಗಿಂತಲೂ ಬಿತ್ತರವಾಗಿ ಅವನು ಹೇಳಿದ್ದಾನೆ. ಅವನ ತಾಯಿತಂದೆ, ಇಬ್ಬರು ಹೆಂಡಿರು, ಮಕ್ಕಳು ಇವರ ಹೆಸರುಗಳನ್ನು ಸಹ ನಮಗೆ ತಿಳಿಸಿದ್ದಾನೆ. ಮುದುವೊಳಲು ಅಂದರೆ ಇಂದಿನ ಮುಧೋಳದಲ್ಲಿ ಜೈನಮತದ ಬಳೆಗಾರರ ಕುಲದಲ್ಲಿ ಹುಟ್ಟಿ ತನ್ನ ಸಂಕಲ್ಪಸಾಮರ್ಥ್ಯದಿಂದ ವಿದ್ಯಾಬುದ್ಧಿಯನ್ನು ಗಳಿಸಿಕೊಂಡು ಮಹಾಕೃತಿಯೊಂದರ ನಿರ್ಮಾಣಕ್ಕೆ ಸಿದ್ಧನಾದ ಪ್ರತಿಭಾಶಾಲಿಯವನು. ಅವನಿಗೆ ಗಂಗಮಂಡಲದಲ್ಲಿ ಅಜಿತಸೇನಾಚಾರ್ಯನು ಗುರುವಾಗಿ ದೊರೆತನು, ಚಾವುಂಡರಾಯನು ಪೋಷಕನಾದನು. ಅಲ್ಲಿಂದ ಮರಳಿ ತನ್ನ ನಾಡಿಗೆ ಬಂದು ಚಾಲುಕ್ಯರಾಜರ ಆಶ್ರಯದಲ್ಲಿ ಅವನು ನಿಂತನು, ಚಕ್ರವರ್ತಿಯಾದ ಸತ್ಯಾಶ್ರಯ ಅಥವಾ ಇಱುವಬೆಡಂಗನನ್ನು ತನ್ನ 'ಗದಾಯುದ್ಧ' ಕಾವ್ಯದ ನಾಯಕನನ್ನಾಗಿ ಮಾಡಿಕೊಂಡನು. ರನ್ನನಲ್ಲಿ ಪ್ರತಿಕೂಲಪರಿಸ್ಥಿತಿಯೊಡನೆ ಹೋರಾಡಿ ಊರ್ಜಿತಸ್ಥಿತಿಗೆ ಬಂದ ಧೀರನ ಆತ್ಮಪ್ರತ್ಯಯವಿದೆ, ಮೇರೆವರಿಯುವ ಉತ್ಸಾಹವಿದೆ, ಮುಚ್ಚುಮರೆಯಿಲ್ಲದ ಸಿಡಿಲುನುಡಿಯಿದೆ. ಅವನ ಕೃತಿಗಳ ಪರೀಕ್ಷಣೆಯಲ್ಲಿ ಈ ಅವನ ವ್ಯಕ್ತಿತ್ವದ ಕೆಲವಂಶಗಳನ್ನು ತಿಳಿದಿರುವುದು ಅವಶ್ಯ.

ನಮಗೆ ದೊರೆತ ರನ್ನನ ಗ್ರಂಥಗಳು ಎರಡು: ಗದಾಯುದ್ಧ ಅಥವಾ ಸಾಹಸಭೀಮವಿಜಯ ಮತ್ತು ಅಜಿತಪುರಾಣ. ಪರಶುರಾಮಚರಿತ, ಚಕ್ರೇಶ್ವರಚರಿತ, ಅಜಿತತೀರ್ಥೇಶ್ವರಚರಿತ — ಈ ಮೂರು ತನ್ನ ಕೃತಿಗಳೆಂದು 'ಅಜಿತಪುರಾಣ'ದ ಕೊನೆಗೆ ಹೇಳಿದ್ದಾನೆ (೧೨-೪೨). ಇಲ್ಲಿ 'ಗದಾಯುದ್ಧ'ದ ಹೆಸರಿಲ್ಲ. ಚಕ್ರೇಶ್ವರಚರಿತವೇ 'ಗದಾಯುದ್ಧ'ದ ಇನ್ನೊಂದು ಹೆಸರಾಗಿರಬಹುದೆಂದು ಕೆಲವರ ತರ್ಕ. 'ಪರಶುರಾಮಚರಿತ'ವು ಸಮರಪರಶುರಾಮನೆಂಬ ಬಿರುದುಳ್ಳ ಚಾವುಂಡರಾಯನ ವಿಷಯಕವಾದ ಗ್ರಂಥವಾಗಿರಬಹುದೆಂದು ಒಂದು ಊಹೆ. ಇದೆಲ್ಲ ಸರಿಯಾಗಿದ್ದರೆ ತನ್ನ ಪೋಷಕರಾದ ಚಾವುಂಡರಾಯ, ಸತ್ಯಾಶ್ರಯ, ಅತ್ತಿಮಬ್ಬೆ ಈ ಮೂವರ

ಸ್ತುತಿ ಮತ್ತು ಸಂತುಷ್ಟಿಗಾಗಿ ಮೂರು ಗ್ರಂಥಗಳನ್ನು ರಚಿಸಿ 'ರತ್ನತ್ರಯ'ಗಳೆಂದು ಅವನ್ನು ಕರೆದಿರಬೇಕೆಂದು ಅನುಮಾನಿಸಬಹುದು. ಆದರೆ 'ಚಕ್ರೇಶ್ವರಚರಿತ' ಎಂದರೆ 'ಗದಾಯುದ್ಧ'ವಲ್ಲ, ಬೇರೆ ಗ್ರಂಥವೆನ್ನುವವರೂ ಇದ್ದಾರೆ. 'ಅಜಿತಪುರಾಣ'ದಲ್ಲಿ 'ಗದಾಯುದ್ಧ'ದ ಉಲ್ಲೇಖವಿಲ್ಲದ ಕಾರಣ 'ರನ್ನರಿಬ್ಬರೇ?' ಎಂಬ ವಾದವೂ ನಡೆದಿದೆ. ದೊರೆತ ಗ್ರಂಥಗಳಲ್ಲಿ 'ಅಜಿತಪುರಾಣ'ದ ರಚನೆಯ ಕಾಲ ಕ್ರಿ.ಶ. ೯೯೩, ಆಗ ರನ್ನನ ವಯಸ್ಸು ೪೪ ಆಗಿತ್ತು. 'ಗದಾಯುದ್ಧ'ದ ಕಾಲ ಸಂದಿಗ್ಧವಾಗಿದೆ. ಅದನ್ನು ಹೇಳಿದ ಪದ್ಯದ ಅರ್ಥ ಸ್ಫುಟವಾಗಿಲ್ಲ. ಅದು ಪ್ರಕ್ಷಿಪ್ತವಾಗಿರಬಹುದೆಂಬ ಅಭಿಪ್ರಾಯವೂ ಇದೆ. ಆ ಪದ್ಯದ ಒಂದು ಅರ್ಥ-ಕಲ್ಪನೆಯ ಮೇರೆಗೆ ಕ್ರಿ.ಶ. ೯೮೨ 'ಗದಾಯುದ್ಧ' ರಚನೆಯ ಕಾಲವಾಗುತ್ತದೆ. ಅದು ಪ್ರಕ್ಷಿಪ್ತವೆನ್ನುವವರ ಅಭಿಪ್ರಾಯದಲ್ಲಿ ಸತ್ಯಾಶ್ರಯ ಚಕ್ರವರ್ತಿಯಾಗಿರುವ ಕಾಲದಲ್ಲಿ ಎಂದರೆ ಸು. ೧೦೦೮ರಲ್ಲಿ ಆ ಗ್ರಂಥ ಹುಟ್ಟಿರಬೇಕು.[1] 'ಗ್ರಂಥದ ವೀರರಸವನ್ನೂ ಉತ್ಕೃಷ್ಟಕವಿತಾಶಕ್ತಿಯನ್ನೂ ನೋಡಿದರೆ ಕವಿ ೩೩ ವರ್ಷದ ರನ್ನನೇ ಎಂದು ಊಹಿಸಬೇಕಾಗುತ್ತದೆ'[2] ಎಂದು ಬಿ. ಎಂ. ಶ್ರೀಕಂಠಯ್ಯನವರು ೯೮೨ರ ಕಾಲವನ್ನು ಸಮರ್ಥಿಸುವ ಒಲವು ತೋರಿದ್ದಾರೆ. ಆದರೂ ಅವರಿಗೆ ಸಂದೇಹವು ಉಳಿದಿದೆ. ಪಂಪನ 'ಆದಿಪುರಾಣ'ವಾದಮೇಲೆ ಭಾರತವು ನಿರ್ಮಿತವಾಯಿತು. ಅದರಲ್ಲಿಯೂ ವೀರರಸವಿದೆ, ಉತ್ಕೃಷ್ಟಕವಿತಾಶಕ್ತಿಯಿದೆ. ೪೦ರ ಹತ್ತಿರ ಇಲ್ಲವೆ ಮೇಲೆ ವಯಸ್ಸಾದ ಕವಿ ಅದನ್ನು ಬರೆಯಲಿಲ್ಲವೇ? ಸಾಮಾನ್ಯವಾಗಿ ಬೇರೆ ಆಧಾರ-ಗಳಿಲ್ಲದಿರುವಾಗ ಅನುಭವದ ಮತ್ತು ಪ್ರತಿಭೆಯ ಪರಿಪಕ್ವತೆಯಿಂದ ಯಾವುದು ಮೊದಲು, ಯಾವುದು ಆಮೇಲೆ ಎಂಬುದನ್ನು ಊಹಿಸುವುದು ತಪ್ಪಲ್ಲ. ಈ ದೃಷ್ಟಿ-ಯಿಂದ 'ಅಜಿತಪುರಾಣ'ದ ತರುವಾಯ 'ಗದಾಯುದ್ಧ'ವು ರಚಿತವಾಗಿರಬೇಕೆಂದು ನಮಗೆ ತೋರುತ್ತದೆ. ಚಾರಿತ್ರಿಕ ಸಂಗತಿಗಳೂ ಇದಕ್ಕೆ ಬೆಂಬಲಕೊಡುತ್ತವೆ. ಆದರೆ ಇದಮಿತ್ಥಂ ಎಂಬ ತೀರ್ಮಾನವು ಸಾಧ್ಯವಿಲ್ಲ.

'ಅಜಿತಪುರಾಣ'ದಲ್ಲಿ ೨ನೆಯ ತೀರ್ಥಂಕರನಾದ ಅಜಿತಸ್ವಾಮಿಯ ಮತ್ತು ೨ನೆಯ ಚಕ್ರವರ್ತಿಯಾದ ಸಗರನ ಚರಿತ್ರೆಯುಳ್ಳ ಜೈನಪುರಾಣವಿದೆ. ಇದನ್ನು 'ದಾನಚಿಂತಾಮಣಿ'ಯಾದ ಅತ್ತಿಮಬ್ಬೆ ಹೇಳಿಸಿದಳೆಂದು ರನ್ನ ಹೇಳಿದ್ದಾನೆ. ಅವಳ ಆದರ್ಶ ಚಾರಿತ್ರ್ಯವನ್ನು ಪೀಠಿಕಾಭಾಗದಲ್ಲಿ ಬಾಯ್ತುಂಬ ಹೊಗಳಿದ್ದಾನೆ. ಅವಳ ಗುಣಗಳನ್ನು ಲಕ್ಕುಂಡಿಯ ಶಿಲಾಶಾಸನದಲ್ಲಿಯೂ ಅವನೇ ಬಣ್ಣಿಸಿರಬಹುದೆಂದು

---

1 ಎಂ. ಎ. ದೊರೆಸ್ವಾಮಿ ಅಯ್ಯಂಗಾರ್: ರನ್ನನ ಯುಗ (ರನ್ನಕವಿಪ್ರಶಸ್ತಿ, ಪು. ೧೬-೨೦); ವೆಂ. ಬಿ. ಲೋಕಾಪುರ: ಗದಾಯುದ್ಧದ ಕಾಲನಿರ್ಣಯ (ಕ.ಸಾ.ಪ., ೨೪-೨, ಜ.ಕ., ೧೭-೭)

2 ಬಿ. ಎಂ. ಶ್ರೀಕಂಠಯ್ಯ: ಕನ್ನಡ ಕೈಪಿಡಿ, ಸಂಪುಟ ೨, ಪು. ೫೮೯

ತೋರುತ್ತದೆ. ಈ ಪುರಾಣದ ಒಂದು ವೈಶಿಷ್ಟ್ಯವೆಂದರೆ ಇದರಲ್ಲಿ ಭವಾವಳಿಯ ತೊಡಕಿಲ್ಲ. ಅಜಿತಸ್ವಾಮಿಯ ಹಿಂದಿನ ಒಂದು ಭವದ ಕಥೆ ಮಾತ್ರ ಇದರಲ್ಲಿದೆ. 'ಶಾಂತಿಪುರಾಣ'ದ ಪ್ರಮಾಣಜ್ಞಾನದ ಅಭಾವ ಇದರಲ್ಲಿಲ್ಲವೆಂಬುದು ಸಮಾಧಾನದ ಸಂಗತಿಯಾದರೂ 'ಆದಿಪುರಾಣ'ದ ಭವಾವಳಿಯ ಭವ್ಯಚಿತ್ರವು ಇಲ್ಲಿ ದೊರೆಯು-ತ್ತಿಲ್ಲವೆಂದು ಮಿಡುಕಬೇಕಾಗುತ್ತದೆ. ಇದರಲ್ಲಿ ಅಜಿತಸ್ವಾಮಿಯ ಚರಿತವು ಸಾಂಪ್ರ-ದಾಯಿಕ ರೀತಿಯಲ್ಲಿ ಪಂಚಕಲ್ಯಾಣಗಳ ವಿಸ್ತೃತ ವರ್ಣನೆಯಾಗಿ ಬಂದಿರುವುದರಿಂದ, ಹೃದ್ಯವಾದ ಹಾಗೂ ಜೀವನಸ್ಪರ್ಶಿಯಾದ ಸಂನಿವೇಶಗಳೂ ಪಾತ್ರಗಳೂ ಇಲ್ಲದೆ ಇರುವುದರಿಂದ, ಪ್ರತಿಭೆಯ ರಭಸವಿದ್ದರೂ ಇದು ಸಾಕಷ್ಟು ಪರಿಣಾಮಕಾರಿಯಾಗದ ಪುರಾಣವಾಗಿದೆ. ಇದನ್ನು ಬರೆಯುವಲ್ಲಿ ರನ್ನನು ತನ್ನ ವಿಶಿಷ್ಟವಾದ ಉತ್ಸಾಹ, ತಾದಾತ್ಮ್ಯಗಳನ್ನೂ ಕಲ್ಪಕತೆಯನ್ನೂ ತುಂಬಿಕೆಯಿಂದ ಬಳಸಿದ್ದಾನೆ. ವೈರಾಗ್ಯ-ಭಾವವರ್ಣನೆ, ಜಿನಶಿಶುವಿನ ಜನ್ಮಾಭಿಷೇಕ, ಆ ಸಮಯದ ನಾಟ್ಯಗೀತ, ಪರಿ-ನಿಷ್ಕ್ರಮಣ ಈ ಮುಂತಾದ ಸಂದರ್ಭಗಳಲ್ಲಿಯೂ ರೂಪದ, ನಿಸರ್ಗದ ವರ್ಣನಾ-ವಸರಗಳಲ್ಲಿಯೂ ಅವನ ಪ್ರತಿಭೆ ಉಕ್ಕಿ ಉಕ್ಕಿ ಹೊರಸೂಸಿದೆ. ವೈರಾಗ್ಯವರ್ಣನೆಯ ವಿಸ್ತಾರದಲ್ಲಿ ವೈರಾಗ್ಯವನ್ನು ಸ್ವಾರಸ್ಯಗೊಳಿಸುವ ನಾಟ್ಯಗುಣವಿದೆ. ಆದರೂ ಈ ವೈರಾಗ್ಯ ಕೆಲಮಟ್ಟಿಗೆ ಪರಪ್ರತ್ಯಯ, ನಾಟಕೀಯ, ನೀತಿಪ್ರವಣ ಎಂದೂ ತೋರುತ್ತದೆ. ಜನ್ಮಾಭಿಷೇಕದಲ್ಲಿ ಅವನು ಸಂಪೂರ್ಣ ತಾದಾತ್ಮ್ಯಹೊಂದಿದ್ದಾನೆ. ಅವನ ಹರ್ಷಾತಿಶಯವು ಫಲಿಸಿದೆ, ಕಲ್ಪನೆ ಕುಡಿವರಿದಿದೆ. ಇದಕ್ಕೆ ಉದಾಹರಣೆಯಾದ ಪದ್ಯಗಳಲ್ಲಿ,

'ಎಮೆ ಮಱೆಯಾದಪುದಿಕ್ಕುವ |
ಚಮರರುಹಂ ತನ್ನ ಕಣ್ಗೆ ಮಱೆಯಾದಪುದೆಂ- |
ದೆಮೆಯಿಕ್ಕದೆ ಚಾಮರಮಿ- |
ಕ್ಕಿ ಮಾಣ್ಬುದಂ ಪಾರ್ದು ಪಾರ್ದು ಮಗನನೆ ನೋೞ್ಕುಂ ||' (೫-೫೨)

ಇದನ್ನೋದಬಹುದು. ಇಡಿಯ ಕಾವ್ಯದಲ್ಲಿ ಮಾನವತೆಯ ಅಂಶದಿಂದ ಹೃದಯ-ಸ್ಪರ್ಶಿಯಾದ ಭಾಗವೆಂದರೆ ಅಜಿತಸ್ವಾಮಿ ವಿರಕ್ತಿಹೊಂದಿ ತನ್ನವರನ್ನು ಬಿಟ್ಟು ತಪಸ್ಸಿಗೆ ಹೋದಾಗಿನ ದೃಶ್ಯ. ಸಾಮಾನ್ಯವಾಗಿ ವಿಮರ್ಶಕರು ಇದನ್ನು ಎತ್ತಿ ತೋರಿಸಿದಂತಿಲ್ಲ. ಅವನು ಹೋದರೆ 'ಮದುವೆಗಳುಪಿದ ಮನೆಯಂದದಿನಿರ್ದುದ-ಯೋಧ್ಯಾನಗರಂ' (೬-೯೦). 'ರಸಮಿಲ್ಲದ ಕೃತಿ'ಯಂತೆ ಆಯಿತು (ಇಲ್ಲಿ ರನ್ನನ ರಸನಿಷ್ಠೆ ಸೂಚಿತವಾಗಿದೆ). 'ಅವನಿಲ್ಲದೆ ನಾವೇನು ಮಾಡೋಣ?' ಎಂದು ಅರಸಿ-ಯರು ವಿಲಾಪಮಾಡುತ್ತಾರೆ. 'ಬಿಡಿಮಾ ದೀಪದ ರಾಜಹಂಸೆಗಳಂ' ಎಂದು ಮುಂತಾಗಿ ಹಲಬುತ್ತಾರೆ. 'ಲಲಿತಲತಾಲಯಂಗಳಿರ........ವಿಯೋಗಮಾದುದು ನಿಮಗಮೆಮಗಂ' (೬-೧೧೧), 'ಎಲೆ ಪರಪುಷ್ಟ ಕೇಳಲೆ ಮಧುವ್ರತ ಕೇಳ್........

ನೆನೆಯುತಿರ್ಪುದು ಕೂರ್ಪುದು ಸೈರಿಸಿರ್ಪುದಗ್ಗಲಿಸಿದ ನಲ್ಮೆ ತ(ಕ?)ಣ್ಮಲಿಯೆ ಬೆನ್ನ ಪೋದಪೆಮೆಮ್ಮ ಸಾಮಿಯಾ' (೬–೧೧೨) ಎಂದು ಆರ್ತವಾಗಿ ಕೂಗಿಕೊಳ್ಳುತ್ತಾ ಇಲ್ಲಿಯ ಶೋಕವು ಅಜಿತಸ್ವಾಮಿಯ ದೃಢವೈರಾಗ್ಯದ ಹಿನ್ನೆಲೆಯಲ್ಲಿ ಹೆಚ್ಚಾ ಕರುಳನ್ನು ಇರಿಯುತ್ತದೆ. ಒಟ್ಟನಲ್ಲಿ 'ಅಜಿತಪುರಾಣ'ವು ರನ್ನನ ರಸಸೃಷ್ಟಿಗೆ ಸಂಚಕಾ ವಾಗಿದೆ. ಅದರಲ್ಲಿ ಆಶೋತ್ತರವಿದೆ, ಸಿದ್ಧಿಯಿಲ್ಲ. ಅವನು ಜೈನಶಾಸ್ತ್ರ, ನಾಟ್ಯಶಾಸ್ತ್ರ ಅಲಂಕಾರಶಾಸ್ತ್ರ ಇವುಗಳ ತನ್ನ ಗಾಢವ್ಯಾಸಂಗವನ್ನು 'ಅಜಿತಪುರಾಣ'ದ ಪ್ರದರ್ಶನಗೊಳಿಸಲು ಹೋಗಿದ್ದಾನೆ, ಕವಿಸಮಯದ ಬೆನ್ನುಹತ್ತಿದ್ದಾನೆ. ವರ್ಣನೆ ಹುಚ್ಚು ತಲೆಗೇರಿದೆ. ಇವನ್ನೆಲ್ಲ ಕಣ್ಣಿಟ್ಟು ನೋಡಿದರೆ ಪ್ರತಿಭೆಯೊಡನೆ ಅವ ನಡೆಸಿದ ಪ್ರಥಮ ಪ್ರಣಯಾವೇಶದ ಗುರುತೆಂಬಂತೆ ಈ ಕಾವ್ಯ ತೋರುತ್ತದೆ.

'ಎನಿತುಂಟಾಗಮವರ್ಣನ- |
ಮನಿತುಮನೊಳಕೊಂಡು ಸಕಲಭವ್ಯಜನಂಗ- |
ಳ್ಗನುರಾಗಮನೊಡರಿಸಿದಪು- |
ದೆನಿಪ ಪುರಾಣಂ **ಪುರಾಣತಿಲಕಮಿದಲ್ತೇ** ||' (೧–೭೯)

ಹೀಗೆ ಅಜಿತಪುರಾಣವು 'ಪುರಾಣತಿಲಕ'ವೆಂದೂ 'ಪುರಾಣಚೂಡಾಮಣಿ'ಯೆಂದ ರನ್ನನು ಸೂಚಿಸುತ್ತಾನೆ. 'ಆದಿಪುರಾಣ', 'ಶಾಂತಿಪುರಾಣ', 'ಅಜಿತಪುರಾಣ ಗಳ ರೇಖೆಗೆ ಬೇರೆ ಪುರಾಣಗಳು ಬರಲಾರವು ಎನ್ನುತ್ತಾನೆ (೧೨–೩೬). ಇದರ ಅವನ ಆತ್ಮವಿಶ್ವಾಸದ ಅತಿರೇಕವಿದೆಯೇ ಹೊರತು ಸಮಂಜಸವಾದ ಆತ್ಮಸ್ತುತಿಯಿ ಮೂವರೂ ಉನ್ನತಪ್ರತಿಭೆಯುಳ್ಳವರು, ಅವರ ಈ ಮೂರೂ ಪುರಾಣಗಳಲ್ಲಿ ಸಮಾ ವಾದ ಪ್ರೌಢಿಮೆಯಿದೆ. ಆದರೂ 'ಆದಿಪುರಾಣ'ದ ತೂಕವು ಉಳಿದೆರಡಕ್ಕೆ ಬಾರದ ಎಲ್ಲ ದೃಷ್ಟಿಯಿಂದ 'ಆದಿಪುರಾಣ'ವೇ ಪುರಾಣತಿಲಕವೆನ್ನಿಸಿಕೊಳ್ಳಲು ಅರ್ಹವಾಗಿ

'ಗದಾಯುದ್ಧ'ವು ರನ್ನನ 'ಕೃತಿರತ್ನ'. 'ಅಜಿತಪುರಾಣ'ವು ಆಗಮಿ ವಾದರೆ ಇದು ಲೌಕಿಕಕಾವ್ಯ. ಇದರಲ್ಲಿ ವ್ಯಾಸಭಾರತದ ಗದಾಸೌಪ್ತಿಕಪರ್ವಗಳಲ್ಲಿ ಕಥಾನಕವು ಸ್ವತಂತ್ರಸಂಪೂರ್ಣಕೃತಿಯ ಸ್ವರೂಪತಾಳಿದೆ. 'ಪಂಪಭಾರತ' ಇದಕ್ಕೆ ನೇರವಾಗಿ ಪ್ರೇರಣೆಯನ್ನೊದಗಿಸಿರಬೇಕು. ಅದರ ೧೩ನೆಯ ಆಶ್ವಾಸದಲ್ಲಿ ಭಾರತಯುದ್ಧದ ಅಂತ್ಯದೃಶ್ಯ ರನ್ನನ ಪ್ರತಿಭೆಯನ್ನು ಎಚ್ಚರಿಸಿದೆ, ಎಳೆದುಕೊಂ ಹೋಗಿದೆ. ಹಲಕೆಲವು ಭಾವಗಳನ್ನೂ ಮಾತುಗಳನ್ನೂ ಪಂಪನಿಂದ ಅವನು ತೆಗೆದು ಕೊಂಡಿದ್ದಾನೆ. ಕೆಲವಕ್ಕೆ ತನ್ನ ಮೆರುಗನ್ನು ಕೊಟ್ಟಿದ್ದಾನೆ. ಭಾಸನ 'ಊರುಭಂಗ ಭಟ್ಟನಾರಾಯಣನ 'ವೇಣೀಸಂಹಾರ' ಇವುಗಳಿಂದ ಸಂನಿವೇಶಗಳೂ ಕಲ್ಪನೆಗಳ ಎರವಲಾಗಿ ಬಂದಿವೆ, ಒಟ್ಟಿನ ನಾಟಕೀಯತೆಗೆ ಪುಟಕೊಟ್ಟಿವೆ. ಇವನ್ನು ಹಾಗೆ ಇತರ ಪ್ರಭಾವಗಳನ್ನು ಸ್ವೀಕರಿಸಿಯೂ ರನ್ನನು ಸ್ವತಂತ್ರ, ಉಜ್ವಲ ಕೃತಿಯನ ರಚಿಸಿರುವನೆಂಬುದನ್ನು 'ಗದಾಯುದ್ಧ'ದ ಕಥಾವಸ್ತುವಿನ ಕೂಲಂಕಷವಾ

ಸಮೀಕ್ಷೆಯಿಂದ ತಿಳಿಯಬಹುದು. 'ಮೂಲ ವಿವಿಧ ಸಾಮಗ್ರಿಗಳ ವಿವಿಧ ಸಂಯೋಜನೆಯ ಮೂಲಕವಾಗಿ ಫಲಿಸಿದ ಏಕಮುಖ ಕಲಾಕೃತಿಯ ಸ್ವಂತಿಕೆ ಹಾಗೂ ಸಾಮರಸ್ಯದಲ್ಲಿ ರನ್ನನ ಮಹೋನ್ನತಿ ತಲೆಯೆತ್ತಿದೆ. ಅಂತೂ ಮೂಲ ಸ್ವೀಕರಿಸಿಯೂ ಅದಕ್ಕೆ ಕೊಟ್ಟ ಚಿನ್ನದ ಸ್ವತಂತ್ರಲೇಪದಿಂದ ಬಂದ ಅಚ್ಚರಿಯ ಹೊಳಪು, ಕೇವಲ ಸ್ವತಂತ್ರನಿರ್ಮಾಣಕ್ಕಿಂತ ಪೂರ್ವಕಥೆಯ ಪುನರ್ನಿರ್ಮಾಣಮೂಲಕವಾದ ಉತ್ತಮ ಕಲಾವಂತಿಕೆ, ಪರಾಕೋಟಿಯ ಸಂನಿವೇಶಸೃಷ್ಟಿ, ಪಾತ್ರಪ್ರಕಾಶನಕ್ಕೆ ಸಾಧಕವಾಗಿ ಬಂದ ವಸ್ತುರಚನೆ ಈ ಮುಂತಾದ ಗುಣಗಳಿಂದ 'ಗದಾಯುದ್ಧ'ದ ವಸ್ತುರಚನೆ ಭವ್ಯಸುಂದರವಾಗಿದೆ. ಅದರ ಘನತೆಗೆ ದೃಶ್ಯಕಾವ್ಯದ ಸ್ವರೂಪವು ಇನ್ನಿಷ್ಟು ಸೊಗಸನ್ನು ತಂದೊಡ್ಡಿದೆ.'[1]

ಪಂಪನು ಅರಿಕೇಸರಿಯನ್ನು ತನ್ನ ಭಾರತದ ನಾಯಕನನ್ನಾಗಿ ಮಾಡಿ ಅರ್ಜುನನೊಡನೆ ಒಂದುಗೊಳಿಸಿ ಹೊಗಳಿದಂತೆ ರನ್ನನು ಸತ್ಯಾಶ್ರಯನನ್ನು 'ಗದಾಯುದ್ಧ'ದ ನಾಯಕನನ್ನಾಗಿ ಮಾಡಿ ಭೀಮನೊಡನೆ ಒಂದುಮಾಡಿ ಹೊಗಳಿದ್ದಾನೆ. ಪಂಪನದು 'ವಿಕ್ರಮಾರ್ಜುನವಿಜಯ'ವಾದರೆ ರನ್ನನದು 'ಸಾಹಸಭೀಮವಿಜಯ'. ಪಂಪನು ಕೊನೆಗೆ ಅರ್ಜುನನಿಗೆ ಪಟ್ಟಗಟ್ಟಿದರೆ ರನ್ನನು ಭೀಮನಿಗೆ ಪಟ್ಟಗಟ್ಟುತ್ತಾನೆ. ಪಂಪನಂತೆ ರಾಜಭಕ್ತಿಯ ಉತ್ಸಾಹದಲ್ಲಿ ರನ್ನನು ಭೀಮನಿಗೆ ಸಲ್ಲದ ವಂಶಾವಳಿಯನ್ನು ತಲೆಗೆ ಕಟ್ಟಿ ಅಭೇದಸ್ವಾರಸ್ಯವನ್ನು ಕೆಡಿಸಿರುವುದುಂಟು. ಆದರೆ ಒಟ್ಟಿನ ಬಂಧದಲ್ಲಿ ಪಂಪನಿಗಿಂತ ರನ್ನನಿಗೆ ಈ ವಿಷಯದಲ್ಲಿ ಹೆಚ್ಚಿನ ಔಚಿತ್ಯವು ಸಾಧಿಸಿದೆ. ಯಾಕೆಂದರೆ ಪ್ರತಿಜ್ಞಾಪೂರ್ತಿಯನ್ನು ಮಾಡಿದ ಭೀಮನು ಪಟ್ಟಬಂಧಗೌರವಕ್ಕೆ ಅನಿವಾರ್ಯವಾಗಿ ಅರ್ಹತೆಪಡೆಯುತ್ತಾನೆ, ದ್ರೌಪದಿಯ ವೇಣೀಸಂಹಾರಕ್ಕೂ ತಕ್ಕವನಾಗುತ್ತಾನೆ. ಭಾರತಾಂತ್ಯದ ಕಥೆಯ ಕಟ್ಟಡದಲ್ಲಿ ತತ್ಕಾಲೀನ ಚರಿತ್ರೆ ಒಳಪದರಾಗಿ ಸೇರಿಕೊಂಡಿದೆ. ಭೀಮನೂ ಸತ್ಯಾಶ್ರಯನೂ ಕೂಡಿಯೆ ತಂತಮ್ಮ ಹರಿಬವನ್ನು ಪೂರೈಸಿ ಮೆರೆಯುತ್ತಾರೆ. 'ಪಂಪಭಾರತ'ದಷ್ಟು ಗಾತ್ರಮಹಿಮೆ 'ಗದಾಯುದ್ಧ'ಕ್ಕೆ ಇಲ್ಲವಾದರೂ ಮಧ್ಯಗಾತ್ರವುಳ್ಳ ದೃಶ್ಯಕಾವ್ಯದ ಏಕಮುಖತೆ ಅದಕ್ಕಿದೆ, ಜೊತೆಗೆ ಹಿನ್ನೋಟದಿಂದ ಪೂರ್ವಕಥೆಯ ಮುಖ್ಯಘಟನೆಗಳ ನಿವೇದನೆಯಿದೆ.

'ಒಳಪೊಕ್ಕು ನೋಡೆ ಭಾರತ- ।
ದೊಳಗಣ ಕಥೆಯೆಲ್ಲಮಿಾ ಗದಾಯುದ್ಧದೊಳಂ- ।
ತೊಳಕೊಂಡಿತ್ತೆನೆ ಸಿಂಹಾ- ।
ವಳೋಕನಕ್ರಮದಿನಜುಂಪಿದಂ ಕವಿರತ್ನಂ ॥' (೧-೪೫)

ಎಂಬಲ್ಲಿ ಹೇಳಿದ ಸಿಂಹಾವಲೋಕನಕ್ರಮವು ಒಮ್ಮೊಮ್ಮೆ ಕೃತಕವೂ ಬುದ್ಧಿಪುರಸ್ಸರವೂ ಆಗಿ ಕಂಡರೂ ಒಟ್ಟಿನಲ್ಲಿ ಯಶಸ್ವಿಯಾಗಿದೆ.

1 ರಂ. ಶ್ರೀ. ಮುಗಳಿ : ರನ್ನನ ಕೃತಿರತ್ನ, ಪು. ೨೯-೩೦

'ಗದಾಯುದ್ಧ'ದ ಗುಣವಿಶೇಷವೆಲ್ಲ ಅದರ ಅದ್ಭುತನಾಟ್ಯನಿರ್ಮಾಣದಲ್ಲಿದೆ. ಶ್ರೀಯವರ ನಾಟಕವು ಇದಕ್ಕೆ ಸಾಕ್ಷಿ. ಏನೂ ಮಾರ್ಪುಮಾಡದೆ ಸಹ ಈಗಿದ್ದಂ ಈ ಕಾವ್ಯವನ್ನು ಸ್ಥಿತಿ–ಗತಿಪರವಾದ ೯–೧೦ ದೃಶ್ಯಗಳಾಗಿ ವಿಭಜಿಸಬಹುದು. ಪ್ರತಿ ಯೊಂದು ದೃಶ್ಯದಲ್ಲಿಯೂ ಸಂವಾದದಲ್ಲಿಯೂ ಹುಟ್ಟುನಾಟಕಕಾರನ ಕೈವಾಡ ಕಂಡು ಬರುತ್ತಿದೆ. ಉದಾಹರಣೆಗೆ, ಮೊದಲನೆಯ ದೃಶ್ಯದಲ್ಲಿ ದ್ರೌಪದಿಯ ಪ್ರಚೋ ದನೆಯಿಂದ ಕೆರಳಿದ ಭೀಮನು ಆಡಿದ ಕಿಡಿನುಡಿಗಳಲ್ಲಿ ಏರೇರುತ್ತ ಹೋಗುವ ರೌದ್ರವಿದೆ, ಅಭಿನಯದಿಂದ ತಟ್ಟನೆ ಎದೆತಟ್ಟುವ ಶಕ್ತಿಯಿದೆ. 'ಕುರುನಂದನರಂ ಕೊಂದೆಂ। ಕುರುಶಾಬಾನುಜನ ನೆತ್ತರಂ ಕುಡಿದೆಂ' (೧–೬೯, ೭೦) ಮುಂತಾದ್ದನ್ನು ನೋಡಬೇಕು. ಇದರಂತೆ ಧೃತರಾಷ್ಟ್ರ–ಗಾಂಧಾರಿಯರು ದುರ್ಯೋಧನನನ್ನು ಕಾಣಲು ಬಂದಾಗ ಧೃತರಾಷ್ಟ್ರನು 'ಯಮಸುತನಿಂಬುಕೆಯ್ವನೆಮಗಿನ್ನುವೊಡಂಬಡು ಕಂದ' (೩–೮೫) ಎಂದು ಮುಂತಾಗಿ ಅಲ್ಪರಿದು ಬೇಡಿದರೆ, ಗಾಂಧಾರಿ

> 'ಸಮರವ್ಯಾಪಾರಂ ಮಾ-।
> ಣ್ದು ಮಗನೆ ನಿಜಶಿಬಿರದತ್ತ ಬಿಜಯಂಗೆಯ್ ಸ-॥
> ತ್ತ ಮಗಂದಿರ್ಸತ್ತರ್ ನೀ-।
> ನೆಮಗುಳ್ಳೊಡೆ ಸಾಲ್ವುದವರನಿಂ ತಂದಪೆವೇ॥' (೪–೩)

ಈ ಮುಂತಾಗಿ ಸಹಜದೇಸಿಯಲ್ಲಿ ಕೇಳಿಕೊಳ್ಳುತ್ತಾಳೆ. ಅದಕ್ಕೆ ಉತ್ತರವಾಗಿ ದುರ್ಯೋಧನ ಆಡಿದ ಮಾತೆಂದರೆ

> 'ಸಾದಿಸುವೆಂ ಫಲ್ಗುಣನಂ।
> ಸಾದಿಸುವೆಂ ಪವನಸುತನ ಬಸಿಱಂ ಹಾ! ಕ-।
> ರ್ಣಾ! ದುಶ್ಶಾಸನಾ! ತೆಗೆವೆಂ।
> ನಿರ್ದೋಷಿಗಳಿಕ್ಕೆ, ಯಮಜನೊಳ್ಪುದುವಾೞೆಂ॥' (೪–೧೦)[1]

ದುರ್ಯೋಧನನ ಪಾತ್ರಕಲ್ಪನೆಗೆ ನೂರು ಮಾತಿಗಿಂತ ಈ ಮಾತೊಂದು ಸಾಕು. ಇದರ ಅಭಿನೇಯತೆಯನ್ನು ಗಮನಿಸಬೇಕು, ಕರ್ಣ ದುಶ್ಶಾಸನರನ್ನು ಕುರಿತ ಉದ್ಗಾರವನ್ನು ಪರೀಕ್ಷಿಸಬೇಕು. ಈ ದೃಶ್ಯವೆಲ್ಲ ನಾಟ್ಯಪೂರ್ಣವಾಗಿದೆ, ಕರುಣ ವೀರರಸಗಳ ಸಂಗಮವಾಗಿದೆ. 'ಗದಾಯುದ್ಧ'ದ ತುಂಬ ಈ ಬಗೆಯ ಸಂನಿವೇಶ ಸಂವಾದಗಳು ಸೂರೆಯಾಗಿವೆ. ''ಶಕ್ತಿ'ಗೆ ಎರಡನೆಯದಾಗಿ ನಾಟಕೀಯತೆ ಯಿಂದಲೇ ಅಥವಾ 'ಶಕ್ತಿ'ಸಮನ್ವಿತವಾದ ನಾಟಕೀಯತೆಯಿಂದಲೇ ರನ್ನ ವರಕವಿ

---

1 ಸಾದಿಸುವೆಂ ಫಲ್ಗುಣ[ನಿಂ]। ಸಾದಿಸುವೆಂ ಪವನಸುತನ ಬಸಿಱಂ ಹಾ ಕ॥ ಣಾ ದುಶ್ಶಾಸನ ತೆಗೆವೆಂ। ನಿರ್ದೋಷಿ ಬೞಿಕ್ಕೆ ಯಮಜನೊಳ್ ಪುದುವಾೞ್ವೆಂ (ಪಾಠಾಂತರ) ತೀ. ನಂ. ಶ್ರೀಕಂಠಯ್ಯ : ಸಂ. ಗದಾಯುದ್ಧಸಂಗ್ರಹ, ೪–೧೭.

ಚಿರಕವಿ ಮತ್ತು ಮಹಾಕವಿಯಾಗಿ ನಿಂತಿದ್ದಾನೆ' ಎಂದು ಶ್ರೀ. ಪುಟ್ಟಪ್ಪನವರು ಹೇಳಿದ್ದು ಯಥಾರ್ಥವಾಗಿದೆ. ಆದರೆ 'ನಾಟಕರೂಪದಲ್ಲಿಯೆ ಜನ್ಮಧಾರಣೆಮಾಡಲು ಕವಿಮನೋಗರ್ಭದಲ್ಲಿ ಹವಣಿಸುತ್ತಿದ್ದ ಗದಾಯುದ್ಧವಸ್ತುವಿನ ಮೊದಲ ಮೆಯ್ ಅನಂತರದ ಅದರ ಕಾವ್ಯರೂಪದ ಹೇರೊಡಲಲ್ಲಿ ಅಡಗಿತೆ ವಿನಾ ಅಳಿಯಲಿಲ್ಲ'[1] ಎಂಬ ಅವರ ಅನುಮಾನವು 'ಗದಾಯುದ್ಧ'ದಲ್ಲಿ ಎದ್ದು ತೋರುವ ನಾಟ್ಯಗುಣವನ್ನು ನೆನೆದು ಕಲ್ಪಿಸಿದ ಅಂತಃಕರಣಪ್ರಮಾಣದಿಂದ ಮಾತ್ರ ನಿಷ್ಪನ್ನವಾಗಿದೆ. ಹಾಗೆ ನೋಡಿದರೆ ರಾಘವಾಂಕನ 'ಹರಿಶ್ಚಂದ್ರಕಾವ್ಯ'ದಂಥ ನಾಟ್ಯಪ್ರಧಾನಗ್ರಂಥಗಳನ್ನು ಕುರಿತು ಅದನ್ನೇ ಹೇಳಬೇಕಾಗುತ್ತದೆ. ನಮಗೆ ತೋರುವಂತೆ ಶ್ರಾವ್ಯಕಾವ್ಯಗಳನ್ನು ಬರೆಯುವ ಉದ್ದೇಶದಿಂದ ಹೊರಟು ರನ್ನನಂಥ ಕವಿಗಳು ನಾಟ್ಯದ ಹುಟ್ಟುಗುಣ-ವನ್ನು ಬಚ್ಚಿಡಲಾರದೆ ದೃಶ್ಯಕಾವ್ಯದ ಜೀವಾಳವನ್ನು ತಮ್ಮ ರಚನೆಯಲ್ಲಿ ಅಳವಡಿ-ಸಿದರು.

ಈ ಕಾವ್ಯದಲ್ಲಿಯ ಪಾತ್ರಗಳಲ್ಲಿ ಭೀಮ, ದುರ್ಯೋಧನ, ದ್ರೌಪದಿ ಇವರು ಮುಖ್ಯರು. ದುರ್ಯೋಧನನೇ ಇದರ ನಾಯಕನೆಂದೂ ವೀರವೇ ಇದರ ಪ್ರಮುಖ ರಸವೆಂದೂ ಅನೇಕ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.[2] ಭೀಮನು ಇದರ ನಾಯಕನು, ರೌದ್ರವು ಮುಖ್ಯರಸವೆಂಬ ಅಭಿಪ್ರಾಯವೂ ವ್ಯಕ್ತವಾಗಿದೆ.[3] ಎರಡ-ನೆಯ ಅಭಿಪ್ರಾಯವೇ ನಮಗೆ ಹೆಚ್ಚು ಸಂಮತವಾಗಿದೆ. ಭೀಮನು ನಾಯಕ, ದುರ್ಯೋಧನನು ಪ್ರತಿನಾಯಕ, ಒಂದು ಬಗೆಯ ವೀರರೌದ್ರ ಇಲ್ಲಿಯ ಮುಖ್ಯರಸ ಎಂದು ನಾವು ವಿಸ್ತಾರವಾಗಿ ಬೇರೆಡೆಗೆ ಪ್ರತಿಪಾದಿಸಿದ್ದೇವೆ.[4] ರನ್ನನು ಚಿತ್ರಿಸಿದ ಭೀಮ–ದುರ್ಯೋಧನರು ಎಂಬ ವಿಷಯವೂ ಅಲ್ಲಿ ಚರ್ಚಿಸಲಾಗಿದೆ. 'ರನ್ನನ ದುರ್ಯೋಧನನು ಮಹಾನುಭಾವ'[5] ಎಂಬ ನಿರ್ಣಯವು 'ರನ್ನಕವಿಪ್ರಶಸ್ತಿ'ಯ ಪ್ರಕಟನ ಕಾಲದಿಂದಲೂ ಹಲವು ವಿಮರ್ಶಕರಲ್ಲಿ ದೃಢಮೂಲವಾಗಿದೆ. 'ಭೀಮನನ್ನು ಇಳಿಸಿಲ್ಲ, ಆದರೆ ದುರ್ಯೋಧನನನ್ನು ಏರಿಸಿರುವನು, ಘನತೆಗೊಯ್ದಿರುವನು'[6] ಎಂದು ಬಿ. ಎಂ. ಶ್ರೀಕಂಠಯ್ಯನವರು ಸೊಗಸಾದ ಕಿರುನುಡಿಯಲ್ಲಿ ಹೇಳಿದ್ದಾರೆ. ಒಂದರ್ಥದಲ್ಲಿ ಇದು ನಮಗೆ ಸಂಮತವಾಗಿದೆ. ಎಲ್ಲವನ್ನೂ ಹಿಂಜಿ ನೋಡಲಾಗಿ 'ದುರ್ಯೋಧನ ದೊಡ್ಡ ವೀರನೂ ತೇಜಸ್ವಿಯೂ ಮಾನಿಯೂ ಎಂಬುದನ್ನು ರನ್ನ

---

1 ಕೆ. ವಿ. ಪುಟ್ಟಪ್ಪ : 'ಶಕ್ತಿಕವಿ' ರನ್ನ (ಪ್ರ.ಕ., ೩೧–೩, ೪, ಪು. ೮)

2 ಬೇರೆ ಬೇರೆ ಲೇಖಕರು : ರನ್ನಕವಿಪ್ರಶಸ್ತಿ

3 ದ. ರಾ. ಬೇಂದ್ರೆ : ಸಾಹಿತ್ಯಸಂಶೋಧನ, ಪು. ೮೦–೧೦೦

4 ರಂ. ಶ್ರೀ. ಮುಗಳಿ : ರನ್ನನ ಕೃತಿರತ್ನ (ಪ್ರಕರಣ ೨–೩)

5 ಎನ್. ಅನಂತರಂಗಾಚಾರ್ : ಕವಿರನ್ನ, ಪು. ೪೨

6 ಬಿ. ಎಂ. ಶ್ರೀಕಂಠಯ್ಯ : ಕನ್ನಡ ಕೈಪಿಡಿ, ಸಂ. ೨, ಪು. ೫೯೯

ಬಾಯ್ತುಂಬ ಹೊಗಳಿದ್ದರೂ ಅವನ ದುಷ್ಪ್ರವೃತ್ತಿಗಳಿಂದಲೂ ದುರ್ನಡತೆಯಿಂದಲೂ ತನ್ನ ನಾಶಕ್ಕೆ ತಾನೇ ಕಾರಣನಾದನೆಂಬುದನ್ನು ಅವನು ತೋರಿಸಿದ್ದಾನೆ....ಗುಣತ್ರಯದ ಪರಿಭಾಷೆಯಲ್ಲಿ ಹೇಳುವುದಾದರೆ, ಭೀಮದುರ್ಯೋಧನ ಇಬ್ಬರೂ ರಜಃಪ್ರಧಾನ ವ್ಯಕ್ತಿಗಳು. ಆದರೆ ಭೀಮ ಸತ್ವನಿಷ್ಠನಾದ ರಾಜಸಿಕನಾದರೆ ದುರ್ಯೋಧನ ಸತ್ವಾಂಶಮಾತ್ರವುಳ್ಳ ರಾಜಸಿಕ. ಇಬ್ಬರೂ ತಮಸ್ಸಿಗೆ, ರೌದ್ರಕ್ಕೆ ಇಳಿಯಬಹುದು. ಆದರೆ ಭೀಮನ ತಮಸ್ಸು ಅವನ ಸತ್ವನಿಷ್ಠೆಯ ಮೂಲಕ ಸತ್ಪ್ರೇರಿತ, ಸತ್ಫಲಪರ್ಯವಸಾಯಿಯಾದುದು. ದುರ್ಯೋಧನನ ಸತ್ವಾಂಶ ಸಾಕಷ್ಟು ಪ್ರಬಲವಾಗಿಲ್ಲದ ಮೂಲಕ ಅವನ ತಮಸ್ಸು ದುಷ್ಪ್ರೇರಿತವೂ ದುರ್ದಮ್ಯವೂ ಆಗಿ ಅವನ ನಾಶಕ್ಕೆ ಕಾರಣವಾಗುವುದು. ರನ್ನನ ಪಾತ್ರಪ್ರಜ್ಞೆಯಲ್ಲಿ ಈ ಬಗೆಯ ತಿಳಿವು ಪರಂಪರೆಯಿಂದ ಬಂದು ಸಾಫಲ್ಯಹೊಂದಿದೆ.'[1]

'ಗದಾಯುದ್ಧ'ವು 'ಪಂಪಭಾರತ'ಕ್ಕಿಂತ ಗಾತ್ರದಲ್ಲಿ ಸಣ್ಣದಾದರೂ ಅದರಂತೆ ಮಹಾಕೃತಿಯೆಂದು ಮೆರೆದಿದೆ. ಪಂಪನಿಂದ ಉಪಕೃತನಾದ ರನ್ನನು ತನ್ನ ಈ ಕೃತಿಯಲ್ಲಿ ಹಾಗೇಕೆ ಹೇಳಿಲ್ಲ ಎಂಬ ಪ್ರಶ್ನೆ ಹುಟ್ಟಿದೆ. 'ಅಜಿತಪುರಾಣ'ದ ಕೊನೆಯಲ್ಲಿ ಪಂಪನ 'ವಾಗ್ವಿಭವೋನ್ನತಿ'ಯನ್ನೂ 'ಆದಿಪುರಾಣ'ದ ಹಿರಿಮೆಯನ್ನೂ ರನ್ನನು ಕೊಂಡಾಡಿದ್ದಾನೆ. ತಾನು, ಪಂಪ ಇಬ್ಬರೇ ಕವಿಗಳೆಂದು ಸಾರಿ 'ಗುಣಕೆ ಮಚ್ಚರಮುಂಟೇ' ಎಂದಿದ್ದಾನೆ. ಇದರಲ್ಲಿ ಆತ್ಮಪ್ರೌಢಿಮೆಯಿದ್ದರೂ ಪಂಪನ ಬಗ್ಗೆ ಅತಿಶಯ ಗೌರವವೂ ಇದೆ. ಇದನ್ನು ನೆನೆದು 'ಗದಾಯುದ್ಧ'ದಲ್ಲಿಯ ಅನುಲ್ಲೇಖವು ಸರಿಯಲ್ಲವೆಂದರೂ ಅದನ್ನು ಅಲಕ್ಷಿಸಬೇಕು. ಪಂಪನಿಂದ ಪ್ರೇರಣೆಹೊಂದಿದರೂ ಅವನ ವಿಷಯದಲ್ಲಿ ಗೌರವವಿದ್ದರೂ ಅವನಿಗೆ ತಾನು ಪ್ರತಿಭೆಯಲ್ಲಿ ಸಮಾನನೆಂಬ ವೃತ್ತಿ ರನ್ನನಲ್ಲಿದ್ದಿತು. ಈ ಯುಗದ ಉಳಿದ ಗ್ರಂಥಕಾರರಿಗಿಂತ ಹೆಚ್ಚಾಗಿ ರನ್ನನು ಪಂಪನ ಪ್ರಭಾವಕ್ಕೆ ಒಳಪಟ್ಟವನಾದರೂ ತನ್ನದೇ ಆದ ವ್ಯಕ್ತಿತ್ವವುಳ್ಳವನು, ಪಂಪನಿಗೆ ಸರಿಸಾಟಿಯಾದ ಪ್ರತಿಭೆಯುಳ್ಳವನು. ಧಾರ್ಮಿಕ–ಲೌಕಿಕ ಎಂಬ ಕಾವ್ಯರಚನೆ, ಕಾವ್ಯವಿಷಯಗಳಲ್ಲಿಯ ಸಾಮ್ಯ, ಲೌಕಿಕದಲ್ಲಿಯ ಚಾರಿತ್ರಿಕಧ್ವನಿ ಈ ಮುಂತಾದ್ದರಲ್ಲಿ ಅವನು ಪಂಪನಿಗೆ ಋಣಿಯಾಗಿದ್ದರೂ ಅವನ ಮನೋಧರ್ಮದಲ್ಲಿ ಪಂಪನ ಸಮನ್ವಯ, ಸಮತೂಕವಿಲ್ಲ. ಆವೇಶ, ದುಡುಕುಗಳು ಹೆಚ್ಚು. ಪಂಪನಲ್ಲಿ ಆಗಾಗ ಕ್ಲಿಷ್ಟತೆ–ಬಿಗುವುಗಳು ತೋರಬಹುದು, ರನ್ನನದೆಲ್ಲ ಬಿಚ್ಚುಮಾತು. 'ಗೂಡಾರದ ಕವಿ' ಅವನಿಗೆ ಸೇರುವುದಿಲ್ಲ. ನಾಟಕೀಯತೆಯಲ್ಲಿ ರನ್ನನು ಪಂಪನಿಗಿಂತಲೂ ಒಂದು ಕೈ ಮೇಲು. ಈ ಭಿನ್ನಮನೋಧರ್ಮದಿಂದಲೋ ಏನೋ ಅವರಿಬ್ಬರಲ್ಲಿ ಗುರುಶಿಷ್ಯತ್ವದ ಭಾವವಿಲ್ಲ, ಸಮಾನಸ್ಕಂಧತೆಯ ವೃತ್ತಿಯಿದೆ. ಇದೇನೇ ಇರಲಿ, ತನಗೆ ಪ್ರೇರಕವಾದ ಪಂಪಭಾರತದ ಪಡಿನೆಳಲಾಗದೆ 'ಗದಾಯುದ್ಧ'ವು ಸ್ವತಂತ್ರಕೃತಿ-

1 ರಂ. ಶ್ರೀ. ಮುಗಳಿ: ರನ್ನನ ಕೃತಿರತ್ನ, ಪು. ೧೧೮_೯

ಯಾದುದು ಕನ್ನಡಸಾಹಿತ್ಯಚರಿತ್ರೆಯಲ್ಲಿ ಒಂದು ಪವಾಡವೇ ಸರಿ. ಸ್ಥೂಲದೃಷ್ಟಿಗೆ ಅದರಲ್ಲಿ ಕೃತಿಚೌರ್ಯ, ಸೂಕ್ಷ್ಮವಿಮರ್ಶೆಗೆ ಕೃತಿರತ್ನ ತೋರುವುದು.

೧೧. ೧೦–೧೧ನೆಯ ಶ.ಗಳ ಇತರ ಪ್ರಮುಖರು

ಚಾವುಂಡರಾಯ

ಚಾವುಂಡರಾಯನು ಹತ್ತನೆಯ ಶತಮಾನದ ವೀರಪರಂಪರೆಗೆ ಅನುಸರಿಸಿ ಪಂಪನಂತೆ ಕವಿ ಹಾಗೂ ಕಲಿ ಎರಡೂ ಆಗಿದ್ದ ಸವ್ಯಸಾಚಿ. ಗಂಗದೊರೆ ರಾಚಮಲ್ಲನ ಮಂತ್ರಿ ಮತ್ತು ಸೇನಾಪತಿಯಾಗಿ ಅನೇಕ ಯುದ್ಧಗಳಲ್ಲಿ ಗೆಲವು ಪಡೆದು ಬಿರುದು ಮೆರೆದು, ಶ್ರವಣಬೆಳ್ಗೊಳದಲ್ಲಿ ಗೊಮ್ಮಟೇಶ್ವರ ಮೂರ್ತಿಯನ್ನು ನಿಲ್ಲಿಸಿದವನು, ಶೌರ್ಯಕ್ಕಾಗಿ 'ವೀರಮಾರ್ತಾಂಡದೇವ', ಚಾರಿತ್ರ್ಯ ಮತ್ತು ಮತಾಭಿಮಾನಕ್ಕಾಗಿ 'ಸಮ್ಯಕ್ತ್ವರತ್ನಾಕರ' ಎಂದು ಕರೆಯಿಸಿಕೊಂಡವನು. ಪಂಪನ 'ಆದಿಪುರಾಣ'ದ ತರುವಾಯ ಸುಮಾರು ೩೭ ವರ್ಷಗಳ ಮೇಲೆ ಇವನ 'ಚಾವುಂಡರಾಯಪುರಾಣ' ರಚಿತವಾಗಿದೆ. ಪಂಪನನ್ನು ಇವನು ಅರಿತಿರಬೇಕು, 'ಆದಿಪುರಾಣ'ವನ್ನು ನೋಡಿರಬೇಕು. ಕೆಲಮಟ್ಟಿಗೆ ಅವನ ಪ್ರಭಾವಕ್ಕೆ ಇವನು ಒಳಪಟ್ಟಂತಿದೆ.[1] 'ಆದಿಪುರಾಣ'ದ ವಿಷಯವೂ ಚಾವುಂಡರಾಯಪುರಾಣದ ಪ್ರಥಮ ಭಾಗದ ವಿಷಯವೂ ಒಂದೇ. ಮೂಲ ಆಕರವೂ ಅದೇ. ಆದರೆ ಇಬ್ಬರ ರೀತಿ ಬೇರೆ, ದೃಷ್ಟಿ ಬೇರೆ. ಬಹುಶಃ ಪ್ರೌಢವೂ ಪಂಡಿತಗಮ್ಯವೂ ಆದ ಪಂಪನ 'ಆದಿಪುರಾಣ'ಕ್ಕಿಂತ ಸುಲಭವೂ ಸಕಲ ಗ್ರಾಹ್ಯವೂ ಆದ ಆದಿನಾಥ ಮುಂತಾದ ತೀರ್ಥಂಕರರ ಚರಿತೆಗಳನ್ನು ಬರೆಯಲು ಚಾವುಂಡರಾಯನು ತೊಡಗಿರಬೇಕು. ಗದ್ಯದಲ್ಲಿಯೇ ಹೆಚ್ಚಾಗಿ ಬರೆದಿರಲು ಇದೇ ಕಾರಣವೆಂದು ತೋರುತ್ತದೆ. ಆದರೆ ಪಂಪನ ಅಸಾಧಾರಣವಾದ ಕವಿತಾಶಕ್ತಿಯಾಗಲಿ ಭಾಷಾಶಕ್ತಿಯಾಗಲಿ ಚಾವುಂಡರಾಯನಲ್ಲಿ ಕಾಣುವುದಿಲ್ಲ.

ಚಾವುಂಡರಾಯನು 'ತ್ರಿಷಷ್ಟಿಲಕ್ಷಣಮಹಾಪುರಾಣ'ವೆಂದು ತನ್ನ ಗ್ರಂಥವನ್ನು ಕರೆದಿದ್ದಾನೆ. ೨೪ ತೀರ್ಥಂಕರರು ಮೊದಲಾದ ೬೩ ಶಲಾಕಪುರುಷರ ಚರಿತೆ ಇದರ ವಿಷಯ. ಇದಕ್ಕೆ ಮೂಲವಾಗಿ ಜೈನಪರಂಪರೆಯಲ್ಲಿ ಗ್ರಂಥಗಳಿದ್ದುವು.

---

1 ಚಾ.ಪು. ಪು. ೪೯ರಲ್ಲಿಯ 'ತನ್ನೆರಡು ಕಣ್ಗಳೊಳಂ ನೋಡಿ ತಣಿಯದೆ ಸೌಧರ್ಮೇಂದ್ರಂ ಸಹಸ್ರಾಕ್ಷನಾಗಿ' ಇದು ಪಂಪನ ಆ.ಪು. ೭–೧೦೬ರ ಅನುವಾದವಾಗಿದೆ. ಸಂಸ್ಕೃತ ಪೂರ್ವಪುರಾಣದಲ್ಲಿ ಈ ಕಲ್ಪನೆಯಿಲ್ಲ. ಹಾಗೇ 'ಕರ್ಮದ ಬೇರಂ ಪಱಿವಂತೆ' ಪು. ೫೪ ಇದನ್ನು ಆ.ಪು. ೯–೭೭ರೊಡನೆ ಹೋಲಿಸಬೇಕು.

ಮುಖ್ಯವಾಗಿ ಚಾವುಂಡರಾಯನು ಜಿನಸೇನ–ಗುಣಭದ್ರರ ಸಂಸ್ಕೃತಮಹಾಪುರಾಣ-ವನ್ನೇ ತನ್ನ ಆಕರವನ್ನಾಗಿ ಸ್ವೀಕರಿಸಿದ್ದಾನೆ. ಅದನ್ನು ಸಾಧ್ಯವಾದಷ್ಟು ಸುಲಭವಾಗಿ ಸಂಕ್ಷೇಪವಾಗಿ ಗದ್ಯರೂಪದಲ್ಲಿ ನಿರೂಪಿಸುವುದು ಅವನ ಹೇತುವಾಗಿತ್ತು. ಆದರೂ ಅವನ ಆದಿಪುರಾಣವು ಸಂಕ್ಷೇಪದಲ್ಲಿಯೂ ವಿಸ್ತಾರವಾಗಿದೆ, ಉಳಿದವುಗಳಲ್ಲಿ ಅತಿ-ಸಂಕ್ಷೇಪವಾಗಿರುವುದೇ ಹೆಚ್ಚು. ಮಹಾಪುರಾಣವು ಜೈನಸಂಪ್ರದಾಯದಲ್ಲಿ ಪವಿತ್ರ-ವಾದ ಧರ್ಮಗ್ರಂಥಗಳಲ್ಲೊಂದು. ಚಾವುಂಡರಾಯನು ಈ ಪವಿತ್ರ ಭಾವನೆಯಿಂದ ಎಲ್ಲಿಯೂ ಸ್ವಾತಂತ್ರ್ಯವಹಿಸದೆ ಮೂಲದಲ್ಲಿಯ ಮುಖ್ಯ ಚರಿತ್ರಾಂಶ ಹಾಗೂ ಮತಾಂಶಗಳನ್ನು ಅನುವಾದವೆಂದು ತೋರದಂತೆ ಕುಶಲವಾಗಿ ಸಂಗ್ರಹಿಸಿದ್ದಾನೆ. ಮೂಲದಲ್ಲಿಯ ವಿಸ್ತಾರವಾದ ಕಾವ್ಯಮಯವಾದ ವರ್ಣನೆಗಳನ್ನು ಮೆಚ್ಚಿದರೂ ಮೋಹಿಸಿ ನಿಲ್ಲದೆ ದಾಟಿ ಹೋಗಿದ್ದಾನೆ. ಈ ಸಂಯಮ ಮತ್ತು ಸಂಯೋಜನೆಗಳಲ್ಲಿ ಅವನ ಗುಣವು ತೋರಿದೆ. ತನ್ನ ವಿಶಿಷ್ಟದೃಷ್ಟಿಯ ಮೂಲಕ ಸ್ವತಂತ್ರಪ್ರತಿಭೆಗೆ ಅವನು ಹೆಚ್ಚಾಗಿ ಅವಕಾಶವನ್ನು ಕಲ್ಪಿಸಿಕೊಂಡಿಲ್ಲ. ಅವನ ದೃಷ್ಟಿ ಪ್ರಧಾನವಾಗಿ ಮತ-ಪ್ರಸಾರಕ ಹಾಗೂ ಶಾಸ್ತ್ರನಿಷ್ಠ, ಸೌಂದರ್ಯನಿಷ್ಠವಲ್ಲ. ಚರಿತ್ರೆಯಲ್ಲಿ, ತತ್ವನಿರೂಪಣೆ-ಯಲ್ಲಿ ಒಬ್ಬ ಶಾಸ್ತ್ರೀಯ ಲೇಖಕನ ಚೊಕ್ಕಟತನದಿಂದ ಅತ್ಯಾವಶ್ಯಕವಾದ ಅಂಶಗಳನ್ನು ಎತ್ತಿಹೇಳಿ ಅವನು ಹಿಂದೆ ಮುಂದೆ ನೋಡದೆ ಮುಂದೆ ಸಾಗುತ್ತಾನೆ; ಮತಜ್ಞಾನಕ್ಕೆ ಅಗತ್ಯವೆಂದಲ್ಲಿ ಅಷ್ಟೇ ನಿಷ್ಠುರವಾಗಿ ನೀರಸ ವಿಷಯಗಳನ್ನು ಬಿತ್ತರಿಸುತ್ತಾನೆ. ಆದರೂ ಅವನ ತೀರ ತುಸುವಾದ ಪದ್ಯಗಳನ್ನೂ ಗದ್ಯದಲ್ಲಿ ಕ್ವಚಿತ್ತಾಗಿ ಮಿನುಗುವ ಮಾತುಗಳನ್ನೂ ಕಣ್ಣಿಕ್ಕಿ ನೋಡಿದರೆ ಅವನ ಸಹಜವಾದ ಕಾವ್ಯಯೋಗ್ಯತೆ ತಿಳಿಯುತ್ತದೆ. ಚರಿತ್ರೆ, ಮತಾಂಶ, ಕಲ್ಪನೆಗಳಲ್ಲಿ ಮಾತ್ರ ಜಿನಸೇನ, ಗುಣಭದ್ರ, ಪಂಪ ಇವರ ಪ್ರಭಾವವೇ ಹೆದ್ದಟ್ಟಾಗಿದೆ.

ಮುಖ್ಯತಃ ಗದ್ಯಶೈಲಿಗಾಗಿ 'ಚಾವುಂಡರಾಯಪುರಾಣ'ವು ಗಣ್ಯವಾಗಿದೆ. ಉಪಲಬ್ಧವಾದ ಮೊದಲನೆಯ ಗದ್ಯಗ್ರಂಥವೆಂದು ಅದರ ಖ್ಯಾತಿ. 'ವಡ್ಡಾರಾಧನೆ' ದೊರೆತಮೇಲೆ 'ಚಾವುಂಡರಾಯಪುರಾಣ'ಕ್ಕಿಂತ ಅದು ಅತಿಪ್ರಾಚೀನವೆಂದಾಗಲಿ ಅದಕ್ಕಿಂತ ಅರ್ಧಶತಕದಷ್ಟಾದರೂ ಪ್ರಾಚೀನವೆಂದಾಗಲಿ ಅಭಿಪ್ರಾಯಗಳು ಹುಟ್ಟಿವೆ. 'ವಡ್ಡಾರಾಧನೆ' ಬಹುಶಃ ೧೧ನೆಯ ಶ.ದ್ದೆಂಬ ಅಭಿಪ್ರಾಯದ ಮೇರೆಗೆ ಅದು 'ಚಾವುಂಡರಾಯಪುರಾಣ'ಕ್ಕೆ ಅರ್ವಾಚೀನವಾಗುತ್ತದೆ. ನಮಗೆ ತೋರುವ ಮಟ್ಟಿಗೆ ಭಾಷೆಯ ದೃಷ್ಟಿಯಿಂದ 'ವಡ್ಡಾರಾಧನೆ' ಪಂಪನ ಕಾಲಕ್ಕೆ ಹತ್ತಿರದ್ದಾಗುತ್ತದೆ, ಅಂತೇ 'ಚಾವುಂಡರಾಯಪುರಾಣ'ಕ್ಕಿಂತ ಹಳೆಯದು. ಆದ್ದರಿಂದ 'ಚಾವುಂಡ-ರಾಯಪುರಾಣ'ಕ್ಕೆ, ದೊರೆಯದ ಹಾಗೂ ದೊರೆತ ಗದ್ಯಗ್ರಂಥಗಳಲ್ಲಿ ಮೊದಲನೆಯ-ದೆಂಬ ಬಿರುದು ಸಲ್ಲದು. ಇದರಿಂದ ಅದರ ವಿಶಿಷ್ಟತೆಗೆ ಕುಂದೇನೂ ಇಲ್ಲ. ಐವಾರು ಶತಕಗಳಿಂದಾದರೂ ಕನ್ನಡದಲ್ಲಿ ವಿಪುಲವಾಗಿ ಬೆಳೆದುಬರುತ್ತಿದ್ದ ಕಥಾಗದ್ಯ ಮತ್ತು ಶಾಸ್ತ್ರಗದ್ಯ ಇವುಗಳ ಮೇಳವಿಕೆಯಲ್ಲಿ ಅದು ವಿಶಿಷ್ಟವಾಗಿದೆ. ಕಥಾಗದ್ಯದ ಸಹಜ

ಓಘ, ಬಳಕೆಮಾತಿನ ಸೊಗಸು ಇವುಗಳ ಜೊತೆಗೆ ಶಾಸ್ತ್ರಗದ್ಯದ ಅಚ್ಚುಕಟ್ಟು, ಚೊಕ್ಕತನ ಇವು ಸೇರಿಕೊಂಡು 'ಚಾವುಂಡರಾಯಪುರಾಣ'ದ ಬರೆವಣಿಗೆಗೆ ಜನಸುಲಭವಾದರೂ ಶಾಸ್ತ್ರಶುದ್ಧವಾದ ನಡಿಗೆಯ ಬೆಡಗನ್ನು ನೀಡಿರುತ್ತವೆ. ಆಗಾಗ ಈ ಮಿಶ್ರಶೈಲಿಯ ಸಮತೆಯನ್ನು ಕದಡಿಸಲು ಅತಿಸಂಸ್ಕೃತಪ್ರಯೋಗಗಳೂ ಚಿಕ್ಕ ವಾಕ್ಯಗಳೊಡನೆ ಉದ್ದನ್ನವಾಕ್ಯಗಳೂ ಬೇಸರುತರುವ ಪುನರುಕ್ತಿಗಳೂ ಹಣೆಯಿಕ್ಕಿವೆ. ಪೂರ್ವದ ಹಳಗನ್ನಡದ ಕೆಲವು ವ್ಯಾಕರಣವಿಶೇಷಗಳು ಹಳಮೆಯ ಪರಿಣಾಮು-ಬೀರುವುದಕ್ಕೆಂಬಂತೆ ನಿಯತವಾಗಿ ನೆಲಸಿವೆ. ಇದರಲ್ಲಿ ಚಂಪೂಗ್ರಂಥಗಳಲ್ಲಿಯ ಗದ್ಯದ ಅಲಂಕಾರ-ಆಡಂಬರಗಳಿಲ್ಲ, ಕೇವಲ ಕಥಾಗದ್ಯದ ದೇಸಿಯ ಸಂಪತ್ತಿಯಿಲ್ಲ. ಆದರೆ ತನ್ನೊಂದು ಸರಳಲಾಲಿತ್ಯ, ಗಂಭೀರಗತಿಗಳಲ್ಲಿ ಈ ಗದ್ಯ ತನ್ನ ಸಾಹಿತ್ಯ-ಗುಣವನ್ನು ವಿಪುಲವಾಗಿ ತೋರಿಸಿದೆ. ಒಟ್ಟಿನಲ್ಲಿ 'ಚಾವುಂಡರಾಯಪುರಾಣ'ವು ವಿಷಯ ಹಾಗೂ ವಿನ್ಯಾಸಗಳಲ್ಲಿ ಅಸ್ವತಂತ್ರವಾದರೂ ಹಳಗನ್ನಡ ಗದ್ಯಶೈಲಿಯಲ್ಲಿ ತನ್ನದೇ ಒಂದು ಮಾದರಿಯಾಗಿ ಮೆರೆದಿದೆ. ಅದರ ಸ್ವರೂಪವನ್ನು ಗಂಭೀರ, ಧಾರಾಳ, ಚೊಕ್ಕಟ ಎಂಬ ಮೂರು ಮಾತುಗಳಲ್ಲಿ ಅಡಕಗೊಳಿಸಿ ಹೇಳಬಹುದು. ಹೀಗೆ ಕನ್ನಡಸಾಹಿತ್ಯದಲ್ಲಿ ಕಥನಕವಿಗಿಂತ ಮೇಲಾದ ಗದ್ಯಕಾರನೆಂದು ಚಾವುಂಡ-ರಾಯನ ಸ್ಥಾನವು ಏರ್ಪಟ್ಟಿದೆ.

೧ನೆಯ ನಾಗವರ್ಮ

೧ನೆಯ ನಾಗವರ್ಮನು ಹತ್ತನೆಯ ಶತಮಾನದ ತುತ್ತತುದಿಯಲ್ಲಿ ಬಾಳಿರ-ಬಹುದಾದ ಗ್ರಂಥಕಾರನು. 'ಕರ್ಣಾಟಕ ಕಾದಂಬರಿ' ನಿರ್ವಿವಾದವಾಗಿ ಅವನ ಗ್ರಂಥ. ಛಂದೋಂಬುಧಿಯೂ ಅವನದೇ ಆಗಿರಬಹುದು. ಈ ಗ್ರಹಿಕೆಯಿಂದ ಇಲ್ಲಿ ವಿವೇಚಿಸಲಾಗಿದೆ. ಪಂಪ-ಚಾವುಂಡರಾಯರಂತೆ ನಾಗವರ್ಮನು ಯುದ್ಧವೀರ-ನೆಂಬುದು ಎರಡೂ ಗ್ರಂಥಗಳಿಂದ ತಿಳಿಯುತ್ತದೆ. ಪಂಪನಂತೆ ಇವನು ವೆಂಗಿ-ಮಂಡಳದ ವೆಂಗಿಪಳುವಿನ ಬ್ರಾಹ್ಮಣವಂಶದವನು. ಪಂಪನ ತಂದೆ ಜೈನಮತವನ್ನು ಸ್ವೀಕರಿಸಿದ್ದರಿಂದ ಪಂಪನು ಜೈನಬ್ರಾಹ್ಮಣನಾದನು. ಚಾವುಂಡರಾಯನು ಬ್ರಹ್ಮ-ಕ್ಷತ್ರಿಯ ವಂಶದಲ್ಲಿ ಹುಟ್ಟಿದನು. ಈ ಕೆಲವು ಚಾರಿತ್ರಿಕ ಸಾಮ್ಯಗಳನ್ನು ನೋಡಿದರೆ ಈ ಶತಮಾನದ ಹೆಚ್ಚು ಕವಿಗಳಲ್ಲಿ ಬ್ರಹ್ಮಕ್ಷತ್ರದ ಸಂಮಿಲನವು ಕಂಡುಬರುತ್ತದೆ. ವಂಶವಿಷಯವೇನೇ ಇದ್ದರೂ, ಶಾಂತ ಹಾಗೂ ವೀರಗಳ ಸಮುದಾಯಸ್ಥಾಯಿ ಇಂಥ ಕವಿಗಳ ವ್ಯಕ್ತಿತ್ವದಲ್ಲಿ ತಲೆದೋರಿದೆ. ಪಂಪ-ಪೊನ್ನ-ರನ್ನ ಈ ರತ್ನತ್ರಯರು ಈ ಕವಿಮಂಡಲಕ್ಕೆ ಕಿರೀಟರತ್ನವೇ ಆಗಿದ್ದಾರೆ. ನಾಗವರ್ಮನು ವ್ಯಕ್ತಿತ್ವದಲ್ಲಿ ಇವರಂತೆ ಆಗಿದ್ದರೂ ಗ್ರಂಥವಿಷಯ ಮತ್ತು ಮನೋಭೂಮಿಕೆಯಲ್ಲಿ ಇವರಿಗಿಂತ ಬೇರೆಯಾಗಿ ಒಂದು ಛಂದಶ್ಶಾಸ್ತ್ರದ ಗ್ರಂಥವನ್ನು, ಇನ್ನೊಂದು ಅನುವಾದಗ್ರಂಥವನ್ನು ರಚಿಸಿದ್ದಾನೆ. ಅವನ ವೈದಿಕಸಂಪ್ರದಾಯದೃಷ್ಟಿ ಈ ಮಾರ್ಪಾಡಿಗೆ ಕಾರಣವಾಗಿರ-

ಬೇಕು. ಧಾರ್ಮಿಕ ವಿಷಯವನ್ನು ಆರಿಸಿ ಕನ್ನಡದಲ್ಲಿ ಗ್ರಂಥ ಬರೆಯಲು ಅವನ ಮನಸ್ಸೊಪ್ಪದೆ ಹೋದಕಾರಣ ಕೇವಲ ಲೌಕಿಕವಿಷಯಕ್ಕೆ ಅವನು ಕೈಹಾಕಿರಬೇಕು.

'ಛಂದೋಂಬುಧಿ' ಕನ್ನಡದಲ್ಲಿ ಮೊದಲನೆಯ ಛಂದಶ್ಶಾಸ್ತ್ರಪರವಾದ ಗ್ರಂಥ. 'ಗುಣಗಾಂಕಿಯಂ' ಎಂಬುದಾಗಿ ತಮಿಳುಕವಿ ಉಲ್ಲೇಖಮಾಡಿದ ಛಂದೋಗ್ರಂಥವು ಕವಿಚರಿತಕಾರರು ಊಹಿಸಿದಂತೆ ೯ನೆಯ ಶ.ದ್ದಾದರೆ ಅದು ಅದಕ್ಕಿಂತ ಮೊದಲನೆಯದಾಗುತ್ತದೆ. 'ಕವಿರಾಜಮಾರ್ಗ'ದಲ್ಲಿ ಅಡಕವಾದ ಛಂದಸ್ಸಂಬಂಧಿಯಾದ ವಿಷಯಗಳು ಹಾಗೂ ಕನ್ನಡದ ಪೂರ್ವಾಚಾರ್ಯರು ಖಂಡಪ್ರಾಸವನ್ನು ನಿರಿಸಿದ್ದರ ನಿರ್ದೇಶ ಇವನ್ನು ನೋಡಿದರೆ ಅದಕ್ಕಿಂತ ಬಹುಪೂರ್ವದಲ್ಲಿ ಛಂದೋಗ್ರಂಥಗಳಾದರೂ ಇರಬೇಕು ಇಲ್ಲವೆ ಛಂದಸ್ಸೂತ್ರಗಳಾದರೂ ಏರ್ಪಟ್ಟಿರಬೇಕು. 'ಛಂದೋಂಬುಧಿ'-ಯಲ್ಲಿ 'ಕರ್ಣಾಟಕವಿಷಯಜಾತಿ' ಎಂಬುದನ್ನು ಪ್ರತ್ಯೇಕ ವಿಭಾಗವಾಗಿ ನಾಗವರ್ಮನು ನಿರೂಪಿಸಿದ್ದಾನೆ. ಪಿಂಗಳನನ್ನೊ ಬೇರೆಯವರನ್ನೊ ಸಂಸ್ಕೃತಛಂದಸ್ಸಿನ ವಿಭಾಗದಲ್ಲಿ ಅನುಸರಿಸಿದಂತೆ ಕನ್ನಡಛಂದಸ್ಸಿನ ವಿಭಾಗದಲ್ಲಿಯೂ ಅವನು ಪೂರ್ವಿಕರನ್ನು ಅನುಸರಿಸಿರಬಹುದು. ಸು. ೧೧ನೆಯ ಶ.ದ ಜಯಕೀರ್ತಿಯ 'ಛಂದೋನುಶಾಸನ'ವೂ ಇಂಥ ಪೂರ್ವಪರಂಪರೆಯನ್ನು ಸೂಚಿಸುತ್ತದೆ.[1] ಅಂತೂ 'ಛಂದೋಂಬುಧಿ' ಉಪಲಬ್ಧವಾದ ಮೊದಲನೆಯ ಛಂದೋಗ್ರಂಥವೆಂದರೆ ಹೆಚ್ಚು ಯುಕ್ತವಾದುದು. ಇದರಲ್ಲಿ ಆತ್ಮವರ್ಣನೆ ಮಾಡಿದ ಪದ್ಯಗಳಿಂದ, ಮೊದಲು ಕೊನೆಗಳಿಂದ, ನಾಗವರ್ಮನು ಶಾಸ್ತ್ರಕಾರನಲ್ಲದೆ ಸತ್ಕವಿಯೂ ಇದ್ದನೆಂದು ತಿಳಿಯುತ್ತದೆ. ಕವಿರಾಜಹಂಸ ಎಂಬ ಬಿರುದು ಇದನ್ನೇ ಸಾರುತ್ತದೆ. ಆದರೆ ಶಾಸ್ತ್ರಕ್ಕೆ ಸಾಹಿತ್ಯದ ಸೊಗಸನ್ನು ತಂದುಕೊಡಬೇಕೆಂದು ಅವನು ಛಂದಸ್ಸನ್ನು ತನ್ನ ಸತಿಗೆ ಬಣ್ಣಿಸಿದ ಕ್ರಮದಲ್ಲಿ ಔಚಿತ್ಯವಾಗಲಿ ಸ್ವಾರಸ್ಯವಾಗಲಿ ತೋರಲಿಲ್ಲ. ಅವಳನ್ನು ಕುರಿತ ಸಂಬೋಧನೆಗಳು ಪದ್ಯಪೂರಕಗಳಾಗಿವೆ ಮಾತ್ರ. ಲಕ್ಷಣಪದ್ಯವನ್ನೇ ಲಕ್ಷ್ಯವಾಗಿ ಹೇಳಿದ ನೀರಸತೆಯಿಂದ ಆ ಸತಿ ಇನ್ನಿಷ್ಟು ಕಂಟಳಿಸುವಂತಾಗಿದೆ. ಶಾಸ್ತ್ರದೃಷ್ಟಿಯಿಂದ ಸರ್ವವಿಷಯಭಾಷಾಜಾತಿ ಹಾಗೂ ಕರ್ಣಾಟಕವಿಷಯಜಾತಿ ಎಂಬ ವರ್ಗೀಕರಣವೂ ಕನ್ನಡಛಂದಸ್ಸಿನ ಸ್ವರೂಪ ಹಾಗೂ ಪ್ರಭೇದಗಳ ವಿವರಣೆಯೂ ಸಂಕ್ಷಿಪ್ತವಾಗಿದ್ದರೂ ವ್ಯಾಸಂಗಿಗಳಿಗೆ ಉಪಯುಕ್ತವಾಗಿದೆ. ಪಾಠದೋಷಗಳ ಮೂಲಕ ಹಾಗೂ ಅನುಪೂರ್ವಿಯ ಅರಿವಿಲ್ಲದ ಮೂಲಕ ಇಡೀ ಗ್ರಂಥದ ಮೌಲಿಕತೆಯನ್ನು ಅಳಿಯಲು ಸಾಧ್ಯವಿಲ್ಲ.

'ಕರ್ಣಾಟಕಕಾದಂಬರಿ' ಇದು ಬಾಣನ ಸಂಸ್ಕೃತ ಕಾದಂಬರಿಯ ಕನ್ನಡ ಪರಿವರ್ತನ. ಸಂಸ್ಕೃತದಲ್ಲಿಯ ಉತ್ತಮ ಸಾಹಿತ್ಯಗ್ರಂಥವೊಂದನ್ನು ಕನ್ನಡಿಸಬೇಕು

---

1 H. D. Velankar: Chhandonushasana of Jayakirti and Ancient Kannada Metres (JBBRAS 21 New Series, p. 9)

ಎಂಬ ಉದ್ದೇಶದಿಂದ ನಾಗವರ್ಮನು ಈ ಪರಿವರ್ತನವನ್ನು ಮಾಡಿದ್ದಾನೆ. ಈ ದಾರಿಯಲ್ಲಿ ನಮಗೆ ತಿಳಿದಮಟ್ಟಿಗೆ ಇವನೇ ಮೊದಲಿಗನು. ಬಾಣಕವಿಯ ಬಗ್ಗೆ ಆದರ, ಕಾದಂಬರೀಕಥೆಯ ವಿಷಯದಲ್ಲಿ ಪ್ರಶಂಸೆ ಇವು ಅವನನ್ನು ಈ ಕೆಲಸಕ್ಕೆ ಎಳೆದಿರಬೇಕು. ಜೊತೆಗೆ ಪಂಪನು ಬೆಳಗಿಸಿದ ಲೌಕಿಕಗ್ರಂಥಸರಣಿಯನ್ನು ತಾನೂ ಅನುಸರಿಸಿ ತನ್ನ ನರಪತಿಯಾದ ಚಂದ್ರನ ವರ್ಣನೆಯನ್ನು ಚಂದ್ರಾಪೀಡಸಾದೃಶ್ಯ-ದಿಂದ ಮಾಡುವುದು ಅವನಿಗೆ ಇಷ್ಟವಾಗಿತ್ತು. ಅವನ ದೊರೆ ಚಂದ್ರನಾರು ಎಂಬುದನ್ನು ಕುರಿತು ಏಕಮತವಿಲ್ಲ, ಹಲವು ಊಹೆಗಳು ಹುಟ್ಟಿವೆ. ಆದರೆ ಚಂದ್ರಾಪೀಡನ ಮೂಲಕ ಅವನ ಸಾಮಾನ್ಯ ಸ್ತುತಿ ಮಾಡಿದ ಕಾರಣ ಅಷ್ಟುಮಟ್ಟಿಗೆ ಈ ಪರಿವರ್ತನ-ಗ್ರಂಥದಲ್ಲಿ ಚಾರಿತ್ರಿಕ ಅಂಶವಿದೆಯೆನ್ನಬಹುದು. ಚಾರಿತ್ರಿಕತೆಯನ್ನು ಇನ್ನೂ ಹೆಚ್ಚಾಗಿ ತರಲು ಪ್ರಯತ್ನಮಾಡಿದಂತಿಲ್ಲ. ಅದಕ್ಕಾಗಿ ಮೂಲವನ್ನು ಬದಲಿಸಲು ಹವಣಿಸಿಲ್ಲ. ಇದ್ದ ಮೂಲಕಥೆಯನ್ನೇ ಹೇಳಿರುವುದರಲ್ಲಿ ಚಂದ್ರಾಪೀಡಚರಿತ್ರೆಯ ಮುಖಾಂತರವಾಗಿ ತನ್ನ ಅರಸನ ದೂರದೇಶದಲ್ಲಿಯ ಪ್ರಣಯ, ಕ್ಷಣಿಕಭಂಗ, ಪುನರ್ಮಿಲನ ಇವನ್ನು ಸೂಚಿಸುವ ಹೇತುವಿದೆಯೋ ಹೇಗೆ ಯಾರು ಬಲ್ಲರು ?

ಬಾಣಕಾದಂಬರಿ ಸಂಸ್ಕೃತ ಗದ್ಯವಾಙ್ಮಯದಲ್ಲಿ ಬೆರಗುಗೊಳಿಸುವ ಶಿಖರ-ವೊಂದು. ಅದರಲ್ಲಿ ಭಾರತೀಯ ಸಂಸ್ಕೃತಿ–ನಾಗರಿಕತೆಗಳ ಹಿನ್ನೆಲೆಯಲ್ಲಿ ಮೂಡಿದ ಉದಾತ್ತಶೃಂಗಾರದ, ಉನ್ನತಪ್ರೇಮದ ಸ್ವಪ್ನಚಿತ್ರವಿದೆ. ಜನ್ಮಾಂತರಗಳ ಜಟಿಲವಾದ ಕಥಾನಕ, ಶಬ್ದಾರ್ಥಚಮತ್ಕೃತಿಗಳಿಂದ ಇಡಿಕಿರಿದ ವರ್ಣನೆ, ವಿವಿಧ ವಿಲಾಸದಿಂದ ಮುಗಿಯದೆ ಮುಂಬರಿಯುವ ಗದ್ಯಶೈಲಿ ಇವು ಇರುವ ಕಾದಂಬರಿಯನ್ನು ಸಹನೆಯಿಂದ ಓದಿ ತಿಳಿಯುವುದೇ ಕಷ್ಟ. ಅದರ ಅನುವಾದಕನಿಗಂತೂ ಎಂಟೆದೆಯೂ ಸಾಲದು. ನಾಗವರ್ಮನು ಈ ಸಾಹಸಕ್ಕೆ ಕೈಯಿಕ್ಕಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ. ಉಭಯಭಾಷೆಗಳ ಗಾಢಪ್ರಭುತ್ವದೊಂದಿಗೆ ರಸದೃಷ್ಟಿ, ಔಚಿತ್ಯಪರಿಜ್ಞಾನಗಳು ಅವನಲ್ಲಿ ಇದ್ದುದು ಅವನ ಯಶಸ್ಸಿಗೆ ಕಾರಣವಾಯಿತು. ಸಂಪೂರ್ಣ ಗದ್ಯದಲ್ಲಿದ್ದ ಮೂಲವನ್ನು ಗದ್ಯಪದ್ಯಮಿಶ್ರವಾದ ಚಂಪೂರೂಪಕ್ಕೆ ತಿರುಗಿಸಬೇಕೆಂದು ಅವನು ಮಾಡಿದ ಹಂಚಿಕೆ ತುಂಬ ಯೋಗ್ಯವಾಗಿ ಪರಿಣಮಿಸಿತು. ಅದರಲ್ಲಿಯೂ ಸಮಾಸ-ಮಯವಾದ ಬಾಣನ ಗದ್ಯಬಾಣಾವಳಿಯನ್ನು ಪರಿವರ್ತನಕಾರನು ಇದುರಿಸಿ ನಿಲ್ಲಲಾರನು. ಇದ್ದಂತೆ ಅವನ್ನಿಟ್ಟು ಕನ್ನಡಪ್ರತ್ಯಯಗಳಿಂದ ಕೊನೆಗೊಳಿಸಬೇಕು ಇಲ್ಲವೆ ಕೃತಕವಾಗಿ ಕನ್ನಡಿಸಬೇಕು. ರೂಪಾಂತರದಿಂದ ಈ ಬಿಕ್ಕಟ್ಟು ಇಲ್ಲದಾಯಿತು. ರೂಪಾಂತರದ ಮೂಲಕ ಪರಿವರ್ತನವು ಮೂಲದಿಂದ ದೂರ ಹೋಗಬಾರದೆಂದೂ ಭಾಷಾಪಾಂತರಬುದ್ಧಿಯ ಮೂಲಕ ಮೂಲಕ್ಕೆ ತೀರ ಹತ್ತಿರ ಬರಬಾರದೆಂದೂ ನಾಗವರ್ಮನು ಒಂದು ನಡುದಾರಿಯನ್ನು ಹಿಡಿದು ಪರಿವರ್ತನಕಲೆಗೆ ಮಾದರಿ-ಯನ್ನು ನಿರ್ಮಿಸಿಕೊಟ್ಟಿದ್ದಾನೆ. ಮೂಲದ ಕಥಾನಕಸಾರ, ಪಾತ್ರಗಳ ಜೀವಾಳ, ವರ್ಣನೆಗಳ ಸ್ವಾರಸ್ಯ ಇವುಗಳಿಗೆ ಒಟ್ಟಿನಲ್ಲಿ ಕುಂದು ಬರದಂತೆ, ಮೂಲವನ್ನು

ಮನಸ್ಸಿನಲ್ಲಿಟ್ಟು ತಾನೇ ರಚಿಸಿದಂತೆ ಸಲೀಲವಾಗಿ ಬರೆದಿದ್ದಾನೆ. ಇದರಿಂದ ಅನುಕೃತಿಯೂ ಸ್ವತಂತ್ರ ಕೃತಿಯಾಗಿದೆ. ತನಗೆ ತೋರಿದಂತೆ ಮೂಲದ ಕೆಲವು ಭಾಗಗಳನ್ನು ಬಿಟ್ಟಿದ್ದಾನೆ, ಕೆಲವನ್ನು ಸಂಗ್ರಹಿಸಿದ್ದಾನೆ, ಬೇರೆ ಕೆಲವನ್ನು ಮೂಲದ ಆಧಾರದಿಂದ ಬೆಳಸಿದ್ದಾನೆ. ಇಷ್ಟೇ ಯಾಕೆ, ಕೆಲವು ಕಡೆಗೆ ಉತ್ತಮ ಪರಿವರ್ತನಕಾರನ ಹಾಗೆ ಮೂಲಕ್ಕಿಂತ ಸೊಗಸಾದ ಭಾವಗಳನ್ನೂ ಕಲ್ಪಿಸಿದ್ದಾನೆ, ಪದಲಾಲಿತ್ಯವನ್ನೂ ಸಾಧಿಸಿದ್ದಾನೆ.[1] ಅವನು ಬಿಟ್ಟ ವರ್ಣನೆಗಳಲ್ಲಿ ಸಾಮಾನ್ಯವಾಗಿ ಅವನ ಔಚಿತ್ಯದೃಷ್ಟಿ ಫಲಿಸಿದೆ. ಆದರೆ ಮೂಲದಲ್ಲಿಯ ಸುಂದರವಾದ ಹಲವು ಭಾವಗಳ ನಿರಾಕರಣವು ಸರಿಯಾಗಿಲ್ಲ. ಪದ್ಯದ ನಿರ್ಬಂಧಕ್ಕೊಳಗಾಗಿ ಅವನು ಹೀಗೆ ಮಾಡಿರಬಹುದಾದರೂ ಅದೊಂದು ಕೊರತೆಯೆಂಬುದು ದಿಟ. ಅವನ ಭಾಷೆ ಪ್ರಸನ್ನಗಂಭೀರವಾದ, ಸರಳವಾದ ಹಳಗನ್ನಡವಾಗಿದ್ದು ಕನ್ನಡದೇಸಿಯ ಕಳೆ ಅದರಲ್ಲಿ ಎದ್ದು ಕಾಣುತ್ತದೆ. ಪಂಪನ ಮಾರ್ಗದೇಸಿಗಳ ಸುಂದರಸಮನ್ವಯವನ್ನು ಸಾಧಿಸಿದವರಲ್ಲಿ ನಾಗವರ್ಮನು ಒಬ್ಬನು. ಕೆಲವು ಸಲ ಮೂಲ ಸಮಾಸಗಳ ವ್ಯಾಮೋಹಕ್ಕೆ ಒಳಗಾಗಿ ಇದ್ದಂತೆ ಇಟ್ಟಿರಬಹುದು, ಮೂಲಕ್ಕಿಂತ ಮಿಗಿಲಾದ ಸಂಸ್ಕೃತಾವೇಶವನ್ನು ತೋರಿರಬಹುದು. ಅವನ ಏಕರೂಪವಾದ ಶೈಲಿಗೆ ಇಂಥ ಗದ್ಯಪದ್ಯಗಳು ಒಮ್ಮೊಮ್ಮೆ ಬಾಧಕವಾಗಿವೆ. ಒಟ್ಟಿನಲ್ಲಿ ಮಾತ್ರ ಕಂದವೃತ್ತ, ಗದ್ಯವಚನ ಈ ಎಲ್ಲದರಲ್ಲಿ ಒಂದೇ ಹದ, ಹಗುರುಳ್ಳ ಪಳಗಿದ ಶೈಲಿಯಿದೆ. ಕನ್ನಡಸಾಹಿತ್ಯದಲ್ಲಿ 'ಕಾದಂಬರಿ'ಯಷ್ಟು ಮೇಲಾದ ಪರಿವರ್ತನವು ಇನ್ನೊಂದಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಇಷ್ಟಾದರೂ ಈ ಪರಿವರ್ತನವು ಬಾಣಕಾದಂಬರಿಯ ಅದ್ಭುತ ಪಾಂಡಿತ್ಯಪ್ರತಿಭೆಗಳ ಅವಿಚ್ಛಿನ್ನ ಪ್ರವಾಹದ ದರ್ಶನವನ್ನು ಮಾಡಿಕೊಟ್ಟಿಲ್ಲ ಎಂದರೆ ತಪ್ಪಾಗದು. ಆದರೆ ಯಾವ ಪರಿವರ್ತನವೂ ಇದನ್ನು ಮಾಡಿಕೊಡುವ ಕಷ್ಟವನ್ನು ನೆನೆದರೆ ಇದು ಅಪರಿಹಾರ್ಯವಾದ ವೈಗುಣ್ಯವಾಗುತ್ತದೆ. ಬಾಣವಾಣಿ ಧೋಧೋ ಎಂದು ಸುರಿಯುವ ಮೋಡವಾದರೆ ನಾಗವರ್ಮನ ಕಲೆ ಆ ಮೋಡ ಸುರಿದ ಮಳೆನೀರನ್ನು ಕೆರೆಯಲ್ಲಿ ಹಿಡಿದು ಕಂದವೃತ್ತವಚನಗಳ ಮಡಿಗಳಲ್ಲಿ ಹರಿಬಿಡುವ ತೋಟಿಗನ ಕೈವಾಡವಾಗಿದೆ. ಮೂಲದ ಸ್ವಚ್ಛಂದಗತಿ ಇಲ್ಲಿ ನಿಯತಗತಿಯಾಗಿದೆ. ಮೂಲದ ಬೆರಗು ಇಲ್ಲಿ ಕಡಿಮೆಯಾಗಿರಬಹುದು, ಆದರೆ ಮೂಲಕ್ಕೆ ಇನ್ನೊಂದು ಮಾಟವನ್ನು ಒದವಿಸಿದ ಹೊಸ ಬೆರಗು ಮಾತ್ರ ತಲೆದೋರಿದೆ. ಅಂತೇ ನಾಗವರ್ಮಕಾದಂಬರಿ

---

1 ಕರ್ಣಾಟಕ ಕಾದಂಬರಿ, ಉತ್ತರಭಾಗ, ಪ. ೪, ೧೩.

ರಮಣೀರತ್ನಮನಾಗಳೆ। ಎಮೆಯಿಕ್ಕದೆ ನೋಳ್ಪ ಬಯಕೆಯಿಂ ಪಡೆವರೊ ತಾ-
ಮೆಮೆಯಿಕ್ಕದ ಕಣ್ಗಳನೆನ। **ಲೆನೆಮೆಯಿಕ್ಕದೆ** ನೋಡುತಿರ್ದುದಬಲಾನೀಕಂ ॥ ೪
ತೊಳಗುವ ಕರ್ಣಾಭರಣಂ। ಗಳಿನಿಳಿದ ಮಯೂಖಮಾಲೆ ಲಾವಣ್ಯರಸೋ-॥
ಜ್ವಳಮೃದುಮೃಣಾಳಲತೆಯೆನ। ಲೆಳೆಯಳ ನಳಿತೋಳ್ಗಳಿಂ ಮನಂಗೊಳಿಸಿದುವೋ
॥ ೧೩

ಅನುವಾದವಾಗಿಯೂ ಸ್ವತಂತ್ರಕೃತಿಯ ಸತ್ವವುಳ್ಳುದಾಗಿ ಕನ್ನಡಸಾಹಿತ್ಯದ ಚಿರಂತನ ಗ್ರಂಥಗಳಲ್ಲಿ ಒಂದಾಗಿದೆ.

ದುರ್ಗಸಿಂಹ

ದುರ್ಗಸಿಂಹ ಮತ್ತು ಬೇರೆ ಹಲವರಿಂದ ಉಲ್ಲೇಖಿಸಲಾದ ಗಜಾಂಕುಶ, ಮನಸಿಜ, ಚಂದ್ರಭಟ್ಟ ಈ ಕವಿಗಳು ೧೦ನೆಯ ಶ.ದ ಕೊನೆ ಹಾಗೂ ೧೧ನೆಯ ಶ.ದ ಮೊದಲಲ್ಲಿ ಆಗಿಹೋಗಿರಬಹುದು, ಅದಕ್ಕಿಂತ ಮುಂಚೆಯೂ ಇದ್ದಿರಬಹುದು. ಇವರ ಗ್ರಂಥಗಳು ದೊರೆತಿಲ್ಲ, ಯಾವೆಂದು ತಿಳಿದಿಲ್ಲ. ಆದರೆ ಒಬ್ಬಿಬ್ಬರ ಗ್ರಂಥವಿಷಯವನ್ನು ಊಹಿಸಲು ಎಡೆಯುಂಟು. ಇವರು ಒಳ್ಳೆಯ ಕವಿಗಳೆಂಬುದನ್ನೂ ಸ್ತುತಿಯ ಧಾಟಿಯಿಂದ ತಿಳಿಯಬಹುದು. ದುರ್ಗಸಿಂಹನು ಮಾತ್ರ ಈ ಪಟ್ಟಿಗೆ ಸೇರಲಿಲ್ಲ; ಅವನ 'ಪಂಚತಂತ್ರ' ಜನಪ್ರಿಯವಾಗಿ ಉಳಿದುಕೊಂಡು ಬಂದಿದೆ. ೧೧ನೆಯ ಶ.ದ ಮೊದಲರ್ಧದಲ್ಲಿ ಚಾಲುಕ್ಯರಾಜ ಜಗದೇಕಮಲ್ಲ ಜಯಸಿಂಹನ ಬಳಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿ ಪಂಪಾದಿಗಳಂತೆ ಸವ್ಯಸಾಚಿಯಾದ ಕವಿ ಇವನು. ಮೇಲಾಗಿ 'ಪರಮಾತ್ಮಂ ಪರಮೇಶ್ವರಂ, ಮುರಹರಂ ದೈವಂ, ಮಹಾಯೋಗಿಗಳ್ ಗುರುಗಳ್ ಶಂಕರಭಟ್ಟರ್'[1] ಎಂದು ಅವನು ಹೇಳಿದಂತೆ ಸ್ಮಾರ್ತಭಾಗವತ ಸಂಪ್ರದಾಯದ ಪಂಡಿತಕುಲದಲ್ಲಿ ಹುಟ್ಟಿ ಬೆಳೆದವನಾಗಿ ತನ್ನೂರಾದ ಸಯ್ಯಡಿಯಲ್ಲಿ ಹರಿಹರಭವನಗಳನ್ನು ಕಟ್ಟಿಸಿದವನು. ಗುಣಾಢ್ಯನು ಪೈಶಾಚಕಭಾಷೆಯಲ್ಲಿ ಬೃಹತ್ಕಥೆಗಳನ್ನು ಹೇಳಿದನು. ಆ ಕಥಾಸಮುದ್ರದಲ್ಲಿಯ ಪಂಚರತ್ನಗಳಾದ ಐದು ಕಥೆಗಳನ್ನಾಯ್ದುಕೊಂಡು ವಸುಭಾಗಭಟ್ಟನು ಪಂಚತಂತ್ರವೆಂದು ಹೆಸರಿಟ್ಟು ಹೇಳಿದನು. ಈ ವಸುಭಾಗಭಟ್ಟಕೃತಿಯನ್ನು ಕನ್ನಡದಲ್ಲಿ 'ಪೊಸತಾಗಿರೆ ವಿರಚಿಸುವೆಂ' ಎಂದು ದುರ್ಗಸಿಂಹ ಹೇಳಿದ್ದಾನೆ. ಸಂಸ್ಕೃತದಲ್ಲಿ ವಿಷ್ಣುಶರ್ಮನ ಪಂಚತಂತ್ರವೊಂದು ಹೆಸರಾಗಿದೆ. ವಸುಭಾಗಭಟ್ಟನ ಇನ್ನೊಂದು ಪಂಚತಂತ್ರವಿತ್ತೆಂಬ ಮೊದಲ ತಿಳಿವು ಈ ಕನ್ನಡಗ್ರಂಥದಿಂದ ಒದವಿತು. ಈ ದೃಷ್ಟಿಯಿಂದ ಇದಕ್ಕೆ ಭಾರತೀಯ ಮಹತ್ವವಿದೆ. ತರುವಾಯದ ಸಂಶೋಧನೆಗಳಿಂದ ತಿಳಿದ ಮೇರೆಗೆ ಜಾವಾದ್ವೀಪದಲ್ಲಿ ವಸುಭಾಗಭಟ್ಟಪರಂಪರೆಯ ಪಂಚತಂತ್ರಗಳು ಮೂರು ಇದ್ದು ಅವುಗಳಲ್ಲಿ ಎರಡು ಪದ್ಯದಲ್ಲಿಯೂ ಒಂದು ಗದ್ಯದಲ್ಲಿಯೂ ಇವೆ. ದುರ್ಗಸಿಂಹನದು ಮಾತ್ರ ಗದ್ಯಪದ್ಯಮಿಶ್ರಿತವಾಗಿದೆ. ವಿಷ್ಣುಶರ್ಮನ ಪಂಚತಂತ್ರದ ಎಷ್ಟೋ ಪಾಠಭೇದಗಳಿದ್ದರೂ ಅದು ಉಪಲಬ್ಧವಿದೆ. ವಸುಭಾಗಭಟ್ಟನದು ಉಪಲಬ್ಧವಾಗಿಲ್ಲ. ಅದನ್ನು ಆಕರವೆಂದು ಒಪ್ಪಿಕೊಂಡ ಅನುಕೃತಿಗಳಿಂದ ಮೂಲಕೃತಿಯನ್ನು ಅನುಮಿಸಬೇಕಾಗಿದೆ. ಸಾಮಾನ್ಯವಾಗಿ ವಿಷ್ಣುಶರ್ಮನಿಂದ ಭಿನ್ನವಾದ ಅಂಶಗಳಲ್ಲಿ ದುರ್ಗಸಿಂಹನ ಪಂಚತಂತ್ರವು ವಸುಭಾಗ-

---

೧ ದುರ್ಗಸಿಂಹ: ಪಂಚತಂತ್ರ, ಪು. ೧೨, ಪದ್ಯ ೫.

ಭಟ್ಟನ ಕೃತಿಯ ಸ್ವರೂಪವನ್ನು ತಿಳಿಸುತ್ತದೆ ಎನ್ನಬಹುದು. ಆದರೆ ವಸುಭಾಗನ ಕೃತಿಯನ್ನು ಕನ್ನಡಿಸುವಾಗ ಅವನು ತಂದಿರುವ ಹೊಸತಾವುದು ಎಂಬುದನ್ನು ತಿಳಿಯುವುದು ಕಷ್ಟ. ಇದರಿಂದ ಕಥಾನಕವಿಮರ್ಶೆ ಅನಿಶ್ಚಿತವಾದರೆ ತಪ್ಪಲ್ಲ. ವಿಷ್ಣು-ಶರ್ಮನ ಪಂಚತಂತ್ರದಲ್ಲಿ ಕಾಣದ ಕೆಲವು ಕತೆಗಳು ದುರ್ಗಸಿಂಹನಲ್ಲಿವೆ. ಇವು ವಸುಭಾಗಕೃತಿಯಿಂದ ಎತ್ತಿಕೊಂಡುವಾಗಿರಬೇಕು. ಎರಡನೆಯ ಮಹತ್ವದ ಸಂಗತಿ-ಯೆಂದರೆ ವಿಷ್ಣುಶರ್ಮನಲ್ಲಿ ಕಾಣದೊರೆಯದ ಜೈನಮತತತ್ವಗಳೂ ಪಾರಿಭಾಷಿಕ ಪದಗಳೂ ದುರ್ಗಸಿಂಹನಲ್ಲಿವೆ. ಅವುಗಳಿಂದ ಸಾಮಾನ್ಯವಾಗಿ ವೈದಿಕಧರ್ಮಪರವಾದ ಪಂಚತಂತ್ರದ ಕಥಾಸ್ವರೂಪವು ಅಲ್ಲಲ್ಲಿ ಮಾರ್ಪಟ್ಟಿದೆ. ಇದರಿಂದ ವಸುಭಾಗಭಟ್ಟನ ಪಂಚತಂತ್ರವು ಅಂಶತಃ ಆದರೂ ಜೈನಧರ್ಮಪರವಾಗಿತ್ತೆಂದು ತಿಳಿಯಲು ಸಾಕಷ್ಟು ಅವಕಾಶವಿದೆ. ವಿಶೇಷವಾಗಿ ಮೊದಲ ತಂತ್ರದಲ್ಲಿ ಪಿಂಗಳಕನೆಂಬ ಸಿಂಹಕ್ಕೆ ಸಂಜೀವಕನೆಂಬ ಎತ್ತು ಮಾಡಿದ ಉಪದೇಶ ಮತ್ತು ಅದರ ಪರಿಣಾಮವುಳ್ಳ ಭಾಗವನ್ನು ಓದಿದರೆ ಇದು ಸ್ಪಷ್ಟವಾಗುತ್ತದೆ.[1] ಇದು ನಿಜವಾದರೆ ವೈದಿಕನಾದ ದುರ್ಗಸಿಂಹನು ಜೈನಸಂಪ್ರದಾಯ ಪ್ರಭಾವವುಳ್ಳ ಪಂಚತಂತ್ರವನ್ನು ಕನ್ನಡಿಸಲು ಪ್ರವೃತ್ತನಾದದ್ದೇಕೆ? ಅವನ ಆಶ್ರಯದಾತನು ಸಹ ಜೈನಮತೀಯನಿರಲಿಲ್ಲ. ಇದಕ್ಕೆ ಅಂದಿನ ಕರ್ನಾಟಕದಲ್ಲಿಯ ಜೈನಪ್ರಭಾವವೇ ಕಾರಣವಿರಬೇಕೆಂಬ ಊಹೆಯಿದೆ. ಜೊತೆಗೆ, ಅವನಿಗೆ ದೊರೆತುದು ವಸುಭಾಗಭಟ್ಟನ ಪಂಚತಂತ್ರವೊಂದೇ ಇರಬಹುದು. ಯಾಕೆಂದರೆ ವಿಷ್ಣುಶರ್ಮನ ಹೆಸರನ್ನು ಅವನು ಹೇಳಿಯೇ ಇಲ್ಲ. ಇದಲ್ಲದೆ ವಸುಭಾಗಭಟ್ಟನ ಪಂಚತಂತ್ರ ಕೆಲವಂಶಗಳಲ್ಲಿ ಜೈನ–ವೈದಿಕ ಅಂಶಗಳ ಸಮನ್ವಯ-ವನ್ನು ಸಾಧಿಸಿದೆ. ಇಲ್ಲಿ ವಸುಭಾಗಭಟ್ಟನ ತರುವಾಯದ ಕಾಲದಲ್ಲಿಯ ಸಮನ್ವಯ-ವನ್ನು ಒಳಗೊಂಡ ಪಾಠಭೇದವು ದುರ್ಗಸಿಂಹನಿಗೆ ಆಕರವಾಗಿರಬಹುದೇ ಇಲ್ಲವೆ ದುರ್ಗಸಿಂಹನೇ ಈ ಸಮನ್ವಯಸಾಧಕನಾಗಿರಬಹುದೇ ಎಂಬ ಪ್ರಶ್ನೆಗೆ ಎಡೆಯಿದೆ. ನಾವು ಸದ್ಯಕ್ಕೆ ವಸುಭಾಗಭಟ್ಟನೇ ಅದನ್ನು ಮಾಡಿರಬೇಕೆಂದು ಗ್ರಹಿಸಿದ್ದೇವೆ. ಬ್ರಾಹ್ಮಣರು ವಿಧಿಪೂರ್ವಕವಾಗಿ ವಿಹಿತಕರ್ಮವೆಂದು ಪ್ರಾಣಿವಧೆ ಮಾಡುವರಲ್ಲದೆ ವೃಥಾ ವಧೆಮಾಡುವುದಿಲ್ಲವೆಂದು ಅವರ ಆಚಾರಧರ್ಮದ ಸಮರ್ಥನೆ ಇಲ್ಲಿದ್ದುದು ಗಮನಿಸತಕ್ಕುದಾಗಿದೆ.[2] ಇದರಿಂದ ಜೈನಮತ ವೈದಿಕಬ್ರಾಹ್ಮಣಮತಕ್ಕೆ ಸಮೀಪ-ಸಂಬಂಧಿಯೆಂದರ್ಥವಾಗದು. ಯಾವ ಕಾಲದಲ್ಲಿಯೂ ಎಲ್ಲ ಮತಗಳನ್ನು ಉದಾರ-ದೃಷ್ಟಿಯಿಂದ ನೋಡುವ ಸಮಗ್ರದೃಷ್ಟಿಯ ವ್ಯಕ್ತಿಗಳಿರುತ್ತಾರೆ. ವಸುಭಾಗಭಟ್ಟನು ಅಂಥವನಾಗಿರಬೇಕು. ದುರ್ಗಸಿಂಹನು ಭಾಗವತಧರ್ಮೀಯನಾದ ಕಾರಣ ವಸುಭಾಗಪರಂಪರೆಯನ್ನು ಮೆಚ್ಚಿ ತನ್ನ ಗ್ರಂಥದಲ್ಲಿ ಅಳವಡಿಸಿರಬೇಕು.

---

1 ದುರ್ಗಸಿಂಹ: ಪಂಚತಂತ್ರ, ಪು. ೬೦–೬೧.

2 ಅದೇ, ಪು. ೬೨.

ಕಥೆ–ನೀತಿಗಳಲ್ಲಿ ದುರ್ಗಸಿಂಹನು ಒಟ್ಟಿನಲ್ಲಿ ಮೂಲವನ್ನು ನಿಷ್ಠೆಯಿಂದ ಅನುಸರಿಸಿದಂತಿದೆ. ಆದರೂ ಹಲವು ಕಡೆಗೆ ವರ್ಣನ–ಕಥನಗಳಲ್ಲಿ ವಿಸ್ತರಣೆಯ ಕಲೆಯನ್ನು ತೋರಿದ್ದಾನೆ. ಪ್ರೌಢಚಂಪೂಕಾವ್ಯದ ರೀತಿಯಲ್ಲಿ ವರ್ಣನಾತ್ಮಕ ಗದ್ಯಪದ್ಯಗಳನ್ನು ಸ್ವಂತವಾಗಿ ರಚಿಸಿದ್ದಾನೆ. ಇಂಥಲ್ಲಿ ಅವನ ಪ್ರೌಢಕವಿತ್ವ, ಚಿತ್ರಶಕ್ತಿಗಳು ತೋರುತ್ತವೆ. ಒಳ್ಳೆಯ ಅನುವಾದಕನ ವ್ಯುತ್ಪತ್ತಿ–ಪ್ರತಿಭೆಗಳು ದುರ್ಗಸಿಂಹನಲ್ಲಿವೆಯಾದರೂ ೧ನೆಯ ನಾಗವರ್ಮನ ಶಕ್ತಿವಿಶೇಷವಾಗಲಿ ಮೇಲಾದ ಕವಿಯ ಸ್ವತಂತ್ರಸ್ಫೂರ್ತಿಯಾಗಲಿ ಅವನಲ್ಲಿ ಇಲ್ಲವೆನ್ನಬೇಕು.

'ಪಂಚತಂತ್ರ'ದ ಕಾವ್ಯರೂಪವು ವಿಚಾರಣೀಯವಾಗಿದೆ. ಗದ್ಯಪದ್ಯಮಿಶ್ರವಾಗಿದ್ದು ಪಂಪಾದಿಗಳ ಪ್ರೌಢಚಂಪುವಿಗೆ ಹತ್ತಿರವಾಗಿದ್ದರೂ ಗದ್ಯದ ಹೆಚ್ಚಳ ಹಾಗೂ ಸರಳತೆಗಳಿಂದಲೂ ಅನೇಕ ಕಥೆಗಳನ್ನು ನೀತಿಶಾಸ್ತ್ರಪ್ರವಚನಕ್ಕಾಗಿ ವಿಶೇಷ ಕ್ರಮದಲ್ಲಿ ಪೋಣಿಸಿದ್ದರಿಂದಲೂ ಚಂಪುವಿಗಿಂತ ಅದು ಬೇರೆಯಾಗಿದೆ. ಪಶುಪಕ್ಷಿಸಂಬಂಧವಾದ ಸಾಂಕೇತಿಕ ಕಥೆಗಳಿಂದಲೂ ಅದರ ಅಂತರಂಗವು ಭಿನ್ನವಾಗಿದೆ. 'ಪೊಸತಾಗಿರೆ ವಿರಚಿಸುವೆಂ' ಎಂದು ದುರ್ಗಸಿಂಹನು ಹೇಳಿದ್ದರಲ್ಲಿಯ 'ಪೊಸತು' ಇದೇ ಆಗಿರಬೇಕು. ಮೂಲ ಆಕರವನ್ನು ಕಥಾಂಶ, ನೀತಿನಿಯಮಗಳಲ್ಲಿ ಅನುಸರಿಸಿಯೂ ಪ್ರೌಢ–ಸರಳ ಹಾಗೂ ಗದ್ಯಪದ್ಯಮಿಶ್ರವಾದ ಚಂಪೂಸರಣಿಯನ್ನು ಅವನು ನವೀನವಾಗಿ ಬಳಸಿದ್ದಾನೆ. ಹೀಗಾಗಿ ಕನ್ನಡಸಾಹಿತ್ಯಪರಂಪರೆಯಲ್ಲಿದ್ದ ಪ್ರೌಢಚಂಪು ಮತ್ತು ಗದ್ಯಕಥೆ ಇವುಗಳ ಸಂಮಿಶ್ರಣವು ತಲೆದೋರಿತು. 'ವಡ್ಡಾರಾಧನೆ', 'ಚಾವುಂಡರಾಯಪುರಾಣ'ಗಳಲ್ಲಿಯ ಗದ್ಯಪ್ರಾಚುರ್ಯದ ಬದಲು ಈ ಸಂಮಿಶ್ರರೂಪವು ಬಂದು ನಯಸೇನನ 'ಧರ್ಮಾಮೃತ'ದಂಥ ಕೃತಿಗಳಿಗೆ ದಾರಿ ತೋರಿದಂತಾಯಿತು. ಪಂಚತಂತ್ರದ ಸ್ವರೂಪದಲ್ಲಿಯಂತೆ ಭಾಷಾಶೈಲಿಯಲ್ಲಿಯೂ ಈ ಮಿಶ್ರಣವಿದೆ. ಒಟ್ಟಿನಲ್ಲಿ ಕನ್ನಡದೇಸಿಯತ್ತ ಒಲವು ಹೆಚ್ಚಿದೆಯಾದರೂ ಗದ್ಯಭಾಗದಲ್ಲಿ, ವಿಶೇಷವಾಗಿ ವೃತ್ತಗಳಲ್ಲಿ ಪ್ರೌಢವಾದ ಸಂಸ್ಕೃತಪ್ರಚುರವಾದ ಶೈಲಿ, ಕಥಾಭಾಗದಲ್ಲಿ ಸರಳವಾದ ಜನೋಕ್ತಿಪ್ರಚುರವಾದ ಶೈಲಿ ಇವು ಕಂಡುಬರುತ್ತವೆ. ಮಾರ್ಗದೇಸಿಗಳ ಈ ಮಿಶ್ರಣದಲ್ಲಿ ದುರ್ಗಸಿಂಹನ ಒಂದು ವಿಶೇಷ ಪ್ರಯೋಗವಿದೆ ಎಂದು ಮೆಚ್ಚಬಹುದು. ಆದರೆ ಅದರಲ್ಲಿಯ ವಿಷಮತೆಯನ್ನು ಅಲ್ಲಗಳೆಯುವಂತಿಲ್ಲ. ನಾಗವರ್ಮನ 'ಕಾದಂಬರಿ' ಸಂಸ್ಕೃತ ಸಾಹಿತ್ಯದ ಒಂದು ವಿದಗ್ಧಕೃತಿಯನ್ನು ಕನ್ನಡಕ್ಕೆ ನೀಡಿದರೆ ದುರ್ಗಸಿಂಹನ ಪಂಚತಂತ್ರವು ಜನಪ್ರಿಯ ಹಾಗೂ ನೀತಿಬೋಧಕವಾದ ಸಂಸ್ಕೃತ ಗ್ರಂಥವೊಂದನ್ನು ಸಮರ್ಪಕವಾಗಿ ಕನ್ನಡಿಸಿಕೊಟ್ಟಿದೆ. ಕನ್ನಡ ಅನುವಾದಕಾರರಲ್ಲಿ ದುರ್ಗಸಿಂಹನು ಮಧ್ಯಮ ತರಗತಿಯ ಮನ್ನಣೆಯ ಸ್ಥಾನಕ್ಕೆ ತಕ್ಕವನು.

ಚಂದ್ರರಾಜ ಮತ್ತು ಇತರರು

ದುರ್ಗಸಿಂಹನಂತೆ ೧೧ನೆಯ ಶ.ದ ಪೂರ್ವಾರ್ಧದಲ್ಲಿ ಅದೇ ಚಾಲು ಜಯಸಿಂಹನ ಕಾಲದಲ್ಲಿ (೧೦೧೨–೪೨) ಚಂದ್ರರಾಜನು ಜೀವಿಸಿದನು. ಇವನಿ ಆಶ್ರಯಕೊಟ್ಟ ಮಹಾಸಾಮಂತನು ಮಾಚನಲ್ಲ, ರೇಚಭೂಪನೆಂದು ಒಂದ ಮೂಲಪ್ರತಿಯಿಂದ ತಿಳಿಯುತ್ತದೆ. ಇವನು 'ಮದನತಿಲಕ' ಎಂಬ ಕಾಮಶಾಸ್ತ್ರ ಗ್ರಂಥವನ್ನು ಬರೆದಿದ್ದಾನೆ. ಇದು ಅನುವಾದವೆನ್ನುವುದಕ್ಕಿಂತ ಸಂಕಲನಗ್ರಂಥವೆನ್ನ ಬಹುದು. 'ಆಗಮಲೌಕಿಕವಿರೋಧಮಂ ಕಳೆದು ಸಾರಾಂಶಮಂ ಕೊಂಡು **ಪಲ ಮತಂಗಳನೊಂದುಮಾಡಿ**' ಬರೆದುದಾಗಿ ಅವನು ಹೇಳಿದ್ದಾನೆ. ಶಾಸ್ತ್ರದೃಷ್ಟಿಯಿಂ ಪೂರ್ವಕೃತಿಗಳ ಸಾರಗ್ರಹಣ, ಸಂಯೋಜನೆ ಇದರಲ್ಲಿವೆ. ರಚನೆಯ ದೃಷ್ಟಿಯಿಂ ಇದು ಚಿತ್ರಕವಿತಾಪ್ರಧಾನವಾದ ಚಂಪುವಾಗಿದೆ. ಇದರಲ್ಲಿ 'ನಾನಾಚ್ಛಂ ಅಯ್ನೂರು ಗದ್ಯಪದ್ಯ' ಇರುವುದಾಗಿ ಅವನು ತಿಳಿಸಿದ್ದಾನೆ. ಕನ್ನಡಛಂದಸ್ಸಿ ಅಭ್ಯಾಸದಲ್ಲಿ ಇವನು ಬಳಸಿದ ತ್ರಿಪದಿ, ಷಟ್ಪದಿ ಮುಂತಾದ ರೂಪಗಳಿಗೆ ಮಹ ಉಂಟಾಗಿದೆ. ಬೇರೆ ಬೇರೆ ಕವಿಗಳು ಮತ್ತು ಶಾಸ್ತ್ರಕಾರರು ತಂತಮ್ಮ ಚಂಪುವಿ ಪಡಿಯಚ್ಚಿನಲ್ಲಿ ಹೇಗೆ ಗ್ರಂಥವಿಷಯವನ್ನು ಎರಕಹೊಯ್ಯುತ್ತಿದ್ದರೆಂಬುದನ್ನು ಇಲ್ಲ ಕಾಣಬಹುದು. ಹೆಸರಿಗೆ ಒಂದೇ ಪ್ರಕಾರವಾದ ಚಂಪುವಿನ ವೈವಿಧ್ಯವನ್ನು ಇದರಿಂ ಅರಿತುಕೊಳ್ಳಬಹುದಾಗಿದೆ. ಇದರ ಶೈಲಿ ಆ ಕಾಲದ ಹಳಗನ್ನಡವಾದರೂ 'ಮುನಿ ನುತಮನೆ ಪೇಟ್ದನೆಸೆಯೆ **ಪೊಸಗನ್ನಡದಿಂ**' ಎಂದವನು ಹೇಳಿಕೊಂಡದ್ದೇಕೆ ಎಂ ಪ್ರಶ್ನೆ ಹುಟ್ಟುತ್ತದೆ. ಹಳಗನ್ನಡವನ್ನು ಬಿಟ್ಟು ಅವನು ಹೊಸಗನ್ನಡದಲ್ಲಿ ಬರೆದಿ ಬಹುದು ಎಂಬ ಕವಿಚರಿತಕಾರರ ಹೇಳಿಕೆ ಚಮತ್ಕಾರವಾಗಿದೆ. ತಾವು ನೋ ಉದಾಹರಿಸಿದ ಗ್ರಂಥದ ಶೈಲಿಯನ್ನು ಅವರು ಗುರುತಿಸದೆ ಹೋದರೆ? ನಾವು ನೋಡಿ ಮೂಲಪ್ರತಿಗಳಲ್ಲಿ ಪ್ರಥಮೆಯ ಬಿಂದುಲೋಪ (ರೇಚನೃಪ), ಸ್ವರಾಂತನಾಮಪ (ಎಡೆಯೊಳು, ಅಮುಳ್ಗಳು, ಆವಳು) ಹಾಗು ಱಟಕುಳ ಭೇದದ ಉಪೇಕ್ಷೆ ಮುಂತಾ ಕೆಲವು ಹಳಗನ್ನಡಕ್ಕೆ ಸಲ್ಲದ ಲಕ್ಷಣಗಳು ಕ್ವಚಿತ್ತಾಗಿ ಕಂಡುಬಂದಿವೆ. ಇದರಿಂ ೧೦–೧೧ನೆಯ ಶ.ಗಳಲ್ಲಿ ಹಳಗನ್ನಡವು ಅಂದಿನ ಜನಭಾಷೆಯ ಕೆಲಕೆಲವು ರೂ ಗಳನ್ನು ಸ್ವೀಕರಿಸಲು ತೊಡಗಿತ್ತು ಎಂದು ಮಾತ್ರ ಹೇಳಬಹುದು. ಇದಕ್ಕೆ ಶಾಸ ಪ್ರಮಾಣವೂ ಪುಷ್ಟಿದಾಯಕವಾಗಿದೆ. 'ಪೊಸಗನ್ನಡ' ಎಂಬ ಪ್ರಯೋಗವನ ಮೊದಲನೆಯ ಸಲವೇ ಇಷ್ಟು ಪ್ರಮುಖವಾಗಿ ಚಂದ್ರರಾಜನು ಬಳಸಿದ್ದೇಕೆ? ಹೊ ಗನ್ನಡವೆಂಬ ಭಾಷೆಯ ಅವಸ್ಥೆಯ ಪುರಸ್ಕರ್ತನಾಗಿ ಅವನು ತನ್ನ ಗ್ರಂಥವನ ಬರೆದಂತಿಲ್ಲ. ಕಾಮಶಾಸ್ತ್ರವನ್ನೂ ಚಿತ್ರಕವಿತ್ವವನ್ನೂ ಕನ್ನಡನುಡಿಯಲ್ಲಿ ಹಾಗೂ ಅನೇ ಕನ್ನಡ ಛಂದೋರೂಪಗಳಲ್ಲಿ ನಿರೂಪಿಸಿದ್ದಕ್ಕೆ 'ಪೊಸಗನ್ನಡ' ಎಂದವನು ಹೇಳಿ ಬಹುದೇ? 'ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯನೆಂದು' ಮುಂತಾ

ನಯಸೇನನು 'ಮಿಸುಕದ ಸಕ್ಕದ'ದ ಬಗ್ಗೆ ಮಾಡಿದ ಕಟುಟೀಕೆ ಚಂದ್ರರಾಜನ ಪೊಸಗನ್ನಡವನ್ನು ಕುರಿತು ಹೊಮ್ಮಿದರೆ ನಮ್ಮ ಊಹೆ ಕೆಲಮಟ್ಟಿಗೆ ಸರಿಯಾಗುತ್ತದೆ. ಚಂದ್ರರಾಜನ ದೃಷ್ಟಿಯಲ್ಲಿ ಪೊಸಗನ್ನಡ ಎಂಬುದು ವ್ಯಾಕರಣರೂಪಗಳಿಗಿಂತ ಶಬ್ದಕೋಶಕ್ಕೆ ಸಂಬಂಧಪಟ್ಟುದಾಗಿರಬೇಕು.

ಚಂದ್ರರಾಜನು ಮೊದಲಿಗನಾಗಿ ಕನ್ನಡಕ್ಕೆ ಕಾಮಶಾಸ್ತ್ರವನ್ನು ಒದಗಿಸಿದಂತೆ ೧೧ನೆಯ ಶ.ದ ಮಧ್ಯದಲ್ಲಿದ್ದ ಶ್ರೀಧರಾಚಾರ್ಯನು 'ಜಾತಕತಿಲಕ' ಎಂಬ ಮೊದಲನೆಯ ಕನ್ನಡ ಜ್ಯೋತಿಷ್ಯಗ್ರಂಥವನ್ನು ರಚಿಸಿದ್ದಾನೆ. 'ಚಂದ್ರಪ್ರಭಚರಿತೆ'ಯೆಂಬ ಜೈನಪುರಾಣಕಾವ್ಯವನ್ನು ಅವನು ಬರೆದಿರುವುದಾಗಿ ತಿಳಿಯುತ್ತದೆ. ಆದರೆ ಅದು ಉಪಲಬ್ಧವಿಲ್ಲ. 'ಜಾತಕತಿಲಕ'ವು ಕಂದವೃತ್ತಗಳಲ್ಲಿದ್ದು 'ಸಕಲಾಚಾರಮತಾಂತಸ್ಸಾರಂ, ಹೃದಯಂಗಮಮಂ, ಅನ್ಯಶಾಸ್ತ್ರನಿರಪೇಕ್ಷಂ' ಎಂದು ಅದನ್ನು ಬಣ್ಣಿಸಲಾಗಿದೆ. 'ಮದನತಿಲಕ'ದಂತೆ ಈ 'ಜಾತಕತಿಲಕ'ವೂ ಸಂಕಲನರೂಪವಾಗಿದ್ದು ಕೆಲವು ಸ್ವತಂತ್ರ ವಿಷಯಗಳನ್ನು ಒಳಗೊಂಡಿರಬಹುದು. ಶಾಸ್ತ್ರಗ್ರಂಥಗಳಲ್ಲಿಯ ಈ ಸಂಯೋಜಕತೆ ಹಾಗೂ ಹೃದಯಂಗಮತೆ ಈ ಗುಣಗಳಿಂದ ಕನ್ನಡಶಾಸ್ತ್ರಕಾರರು ಮೆಚ್ಚಿಗೆಗೆ ಪಾತ್ರರಾಗಿದ್ದಾರೆ. ಶಾಸ್ತ್ರ ಹಾಗೂ ಕಾವ್ಯ ಇವುಗಳ ಮೇಳವಿಕೆ ಇವರ ಬರೆವಣಿಗೆಯಲ್ಲಿ ಸ್ಫುಟವಾಗಿದೆ. ಶ್ರೀಧರಚಾರ್ಯನ ಶೈಲಿಯ ಮೇಲೆ ಆದಿಪಂಪನ ವರ್ಚಸ್ಸು ಬಿದ್ದಿರಬಹುದೆಂದು ತೋರುತ್ತದೆ.

೧೧ನೆಯ ಶ.ದ ಉತ್ತರಾರ್ಧದಲ್ಲಿ ಪ್ರೌಢಕಾವ್ಯಪರಂಪರೆಯನ್ನು ಮುಂದರಿಸಿದವರಲ್ಲಿ ಶಾಂತಿನಾಥನು ಒಬ್ಬನು. ಅವನು ಚಾಲುಕ್ಯಭುವನೈಕಮಲ್ಲನ (೧೦೬೮–೭೬) ಪಸಯಿತನಾದ ಲಕ್ಷ್ಮನೃಪನ ಕೈಕೆಳಗೆ ಮಂತ್ರಿಯಾಗಿದ್ದನು. ಮತ್ತೆ ಇಲ್ಲಿ ಪಂಪನ ಬಹುಮುಖವ್ಯಕ್ತಿತ್ವದ ಮುಂಬರಿವು ಕಾಣುತ್ತದೆ. ಇವನು 'ಸುಕುಮಾರಚರಿತ' ಎಂಬ ತನ್ನ ಚಂಪೂಗ್ರಂಥದಲ್ಲಿ ಜೈನಕಥಾಪರಂಪರೆಯಲ್ಲಿದ್ದ ಸುಕುಮಾರನ ಚರಿತ್ರವನ್ನು ಬರೆದಿದ್ದಾನೆ, ತೀರ್ಥಂಕರರ ಹಾಗೂ ಚಕ್ರವರ್ತಿಗಳ ಚರಿತಪುರಾಣಗಳನ್ನು ಮಾತ್ರ ಚಂಪುವಿನಲ್ಲಿ ಬರೆಯುತ್ತಿದ್ದ ಸಂಪ್ರದಾಯವನ್ನು ಮೊದಲನೆಯ ಸಲ ಬದಲಿಸಿದ್ದಾನೆ. ಕಥಾವಿಷಯ ಮತ್ತು ರೀತಿ ಧಾರ್ಮಿಕವಾಗಿವೆ, ಹೆಚ್ಚಾಗಿ ಮೂಲದ ಅನುಸಾರಿಯಾಗಿವೆ. ಕವಿತ್ವ ಸಹಜಪ್ರಸನ್ನವಾಗಿದೆ, ಶೈಲಿ ಧಾರಾಳವಾಗಿದೆ. ಪ್ರೌಢಿಮೆಯಿಂದ ಸರಳಸೌಂದರ್ಯಕ್ಕೆ ತಿರುಗುತ್ತಿದ್ದ ಚಂಪೂರೂಪಕ್ಕೆ ಇಲ್ಲಿಯೊಂದು ಮಾದರಿ ಇದೆ. ಮಹಾಕವೀಂದ್ರ, ಸಹಜಕವೀಶ್ವರ ಎಂಬ ಆತ್ಮಪ್ರಶಂಸೆ ಮಾತ್ರ ಸತ್ಯವಾದಿಯಾಗಿಲ್ಲ. 'ಸಹಜ ಕವಿ, ಚತುರ ಕವಿ' ಎಂಬ ಹೊಗಳಿಕೆ ಯಥಾರ್ಥವಾಗಿದೆ. 'ವಡ್ಡಾರಾಧನೆ'ಯ ಛಾಯೆ ಇವನ ಗ್ರಂಥದ ಮೇಲೆ ಬಿದ್ದಿರುವ ಕಾರಣ, ಅದರ ಕಾಲನಿರ್ಣಯಕ್ಕೆ ತುಂಬ ಸಹಾಯವಾಗಿದೆ.[1]

---

1 ಈ ಅಂಶವನ್ನು ಸೂಚಿಸಿದ ಶ್ರೀ ಡಿ. ಎಲ್. ನರಸಿಂಹಾಚಾರ್ಯರಿಗೆ ನಾನು ತುಂಬ ಕೃತಜ್ಞನಾಗಿರುತ್ತೇನೆ.

ಸುಮಾರು ಇದೇ ಕಾಲದಲ್ಲಿದ್ದ ನಾಗವರ್ಮನು 'ಚಂದ್ರಚೂಡಾಮಣಿಶತ ಇಲ್ಲವೆ ಜ್ಞಾನಸಾರ' ಎಂಬುದನ್ನು ಬರೆದಿದ್ದಾನೆ. ಇವನು ಉದಯಾದಿತ್ಯನ ಸಂಧಿ ವಿಗ್ರಹಿಯಾಗಿದ್ದನೆಂದು ಈ ಶತಕದಲ್ಲಿ ಹೇಳಿದೆ. ಚಾಲುಕ್ಯಭುವನೈಕಮಲ್ಲನ (೧೦೬೯-೧೦೭೬) ಹಿರಿಯ ಸಂಧಿವಿಗ್ರಹಿಯಾದ ಉದಯಾದಿತ್ಯನೊಬ್ಬನ ಕಾಲದ ಅದ್ವೈತಿನಾಗವರ್ಮಾಚಾರ್ಯನೆಂಬವನು ಇದ್ದನೆಂದೂ ಅವನೇ ಇವನೆಂದು ಕವಿಚರಿತಕಾರರು ಊಹಿಸಿದ್ದಾರೆ. ಇದು ಸರಿಯಾದುದಲ್ಲವೆಂದು ಡಾ. ವೆಂಕಟ ಸುಬ್ಬಯ್ಯನವರು ವಾದಿಸಿದ್ದಾರೆ. ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕು ಸದ್ಯದ ಮಟ್ಟಿಗೆ ಶಾಸನದಲ್ಲಿ ವರ್ಣಿತನಾದ ಅದ್ವೈತಿನಾಗವರ್ಮಾಚಾರ್ಯನೆ ಈ ವೈರಾಗ್ಯಬೋಧಕವಾದ ಶತಕವನ್ನು ಬರೆದಿರುವ ಸಂಭವ ಹೆಚ್ಚಾಗಿದೆ ಎನ್ನಲ ಅಡ್ಡಿಯಿಲ್ಲ. ಕನ್ನಡದಲ್ಲಿ ಇದು ಮೊದಲನೆಯ ಶತಕವಾಗಿದೆ. ಅಲ್ಲದೆ, ಈವರೆ ಲೌಕಿಕ ಅನುವಾದಗ್ರಂಥಗಳನ್ನು ಮಾತ್ರ ಬ್ರಾಹ್ಮಣಕವಿಗಳು ರಚಿಸುತ್ತಿದ್ದರು ಧಾರ್ಮಿಕ-ತಾತ್ವಿಕ ವಿಷಯವನ್ನು ಕುರಿತು ಚಿಕ್ಕದಾದರೂ ಇದೇ ಮೊದಲನೆಯ ಕೃತಿಯಾಗಿದೆ.

ಇಲ್ಲಿಯವರೆಗೆ ೧೦-೧೧ನೆಯ ಶತಮಾನಗಳ ಪ್ರಮುಖ ಗ್ರಂಥಕಾರರ ಸಮೀಕ್ಷೆ ಯಾಯಿತು. ೧೦ನೆಯ ಶತಮಾನವನ್ನು ಕನ್ನಡಸಾಹಿತ್ಯದ ಸುವರ್ಣಯುಗವೆಂದ ಕರೆಯಲಾಗಿದೆ. ಉಜ್ವಲಪ್ರತಿಭೆಯ ಇಬ್ಬರು ಮಹಾಕವಿಗಳು ಈ ಯುಗದ ಹುಟ್ಟಿ ಚಂಪೂಕಾವ್ಯದ ಸಂಪ್ರದಾಯವನ್ನು ಬೆಳಗಿಸಿದರು, ಮಹೋನ್ನತವಾದ ಎರಡ ಮೂರು ಕೃತಿಗಳನ್ನು ಕನ್ನಡಕ್ಕೆ ನೀಡಿದರು. ಜೈನಪುರಾಣಗಳ ವಿಶಿಷ್ಟ ತಂತ್ರವೊಂದ ರೂಢವಾಯಿತು. ಅಂದಿನ ಜೀವನದಲ್ಲಿಯ ವೀರಶ್ರೀ ಮತ್ತು ಧರ್ಮಭಾವನೆಗಳ ಕಾವ್ಯದಲ್ಲಿ ಅಗ್ಗಳವಾಗಿ ಮೂಡಿದುವು. ೧೧ನೆಯ ಶತಮಾನಕ್ಕೆ ಬಂದೊಡನೆ ಈ ಉಜ್ವಲತೆ ಕಾಣದಾಗಿ ಸಾಧಾರಣಗುಣವು ತಲೆದೋರುತ್ತದೆ. ಇದರಿಂದ ೧೧ನೆಯ ಶತಮಾನವು ಒಂದು ಬರಡಾದ ಕಾಲವೆಂದು ತಿಳಿಯುವುದುಂಟು. ಸಾಹಿತ್ಯಚರಿತ್ರೆಯ ಏರಿಳಿತಗಳು ಇದ್ದೇ ಇರುತ್ತವೆ. ಇದಕ್ಕೆ ಕಾಲಮಾನಪರಿಸ್ಥಿತಿಯೂ ಪ್ರತಿಭಾಲಕ್ಷ್ಮಿಯ ಚಂಚಲಕೃಪಾದೃಷ್ಟಿಯೂ ಕಾರಣವಾಗಿರುತ್ತವೆ. ೧೧ನೆಯ ಶತಕದ ವಿವೇಚನೆಯ ಒಬ್ಬ ವಿದ್ವಾಂಸರು 'ಜೈನಸಾಹಿತ್ಯವು ತಾತ್ಕಾಲಿಕವಾಗಿ ಅವನತಿಹೊಂದಿದ ಕಾಲದ ಬ್ರಾಹ್ಮಣಸಾಹಿತ್ಯವು ತಲೆದೋರಿ ಕನ್ನಡಸಾಹಿತ್ಯಪ್ರವಾಹಕ್ಕೆ ಒದಗಬಹುದಾಗಿದ ತಡೆಗಟ್ಟನ್ನು ತಪ್ಪಿಸಿತು'[1] ಎಂದಿದ್ದಾರೆ. ಹಾಗೂ ೧೧ನೆಯ ಶ.ದ ಬ್ರಾಹ್ಮಣಕವಿಗಳ ವೈದಿಕಧರ್ಮಪ್ರಚಾರವನ್ನೇ ಮುಖ್ಯೋದ್ದೇಶವಾಗಿಟ್ಟುಕೊಳ್ಳದೆ 'ಜನಸಾಮಾನ್ಯ ಲೌಕಿಕ ಜ್ಞಾನವಿಕಾಸಕ್ಕೂ ಮನೋರಂಜನೆಗೂ ಯೋಗ್ಯವಾದ ಗ್ರಂಥಗಳನ್ನ

1 ಎಚ್. ಚೆನ್ನಕೇಶವಯ್ಯಂಗಾರ್: ಹನ್ನೊಂದನೆಯ ಶತಮಾನದ ಕನ್ನಡ ಸಾಹಿ (ಕ.ಸಾ.ಪ., ೧೪-೩, ಪು. ೧೭೪)

ರಚಿಸಿದರು'[1] ಎಂದು ವಿವರಿಸಿದ್ದಾರೆ. ಅರ್ಧಸತ್ಯಗಳ ಆಧಾರದಿಂದ ಮಾಡಿದ ಅರ್ಥವಾದದಂತೆ ಇದು ಕಾಣುತ್ತದೆ. ಜೈನಸಮಾಜಕ್ಕೆ ಚೋಳರಾಜರ ಉಪಟಳ-ದಿಂದ ಕೆಲಕಾಲ ತೊಂದರೆಯಾದುದೇನೋ ನಿಜ. ಅಷ್ಟುಮಟ್ಟಿಗೆ ಜೈನಧರ್ಮ ಮತ್ತು ಸಾಹಿತ್ಯಗಳಿಗೆ ಅಡ್ಡಿ–ಆತಂಕಗಳು ಉಂಟಾದುವು. ಆದರೆ ಜೈನಸಾಹಿತ್ಯಕ್ಕೆ ರಾಜಾ-ಶ್ರಯವು ನಿಲ್ಲಲಿಲ್ಲ. ಜೈನಗ್ರಂಥಕಾರರು ತಮ್ಮ ಶಕ್ತಿ–ಪ್ರವೃತ್ತಿಗಳಿಗನುಗುಣವಾಗಿ ಗ್ರಂಥರಚನೆ ಮಾಡಿದ್ದಾರೆ. ಈ ಶತಮಾನದಲ್ಲಿ ತಲೆದೋರಿದ ಬ್ರಾಹ್ಮಣಸಾಹಿತ್ಯಕ್ಕೆ ಒಂದು ನಿಶ್ಚಿತವಾದ ಉದ್ದೇಶವಿತ್ತೆನ್ನಲು ಬಾರದು. ಹಾಗೆ ನೋಡಿದರೆ ಕನ್ನಡದಲ್ಲಿ ಸಾಹಿತ್ಯ ನಿರ್ಮಿಸುವ ವಿಷಯದಲ್ಲಿ ಬ್ರಾಹ್ಮಣಕವಿಗಳು ಅಷ್ಟು ಶ್ರದ್ಧೆ ಮತ್ತು ಆತುರ-ವನ್ನು ಆಗ ತೋರುತ್ತಿರಲಿಲ್ಲ. ಅವರು ವ್ಯಕ್ತಿಶಃ ಮೊದಲಿಟ್ಟ ಹೆಜ್ಜೆ ಲೌಕಿಕ ಮತ್ತು ಅನುವಾದಿತ ಕೃತಿಗಳ ರೂಪದಲ್ಲಿದೆ. ಶಾಸ್ತ್ರ ಇರಲಿ, ಕಾವ್ಯ ಇರಲಿ, ಸಂಸ್ಕೃತದಲ್ಲಿಯ ಒಳ್ಳೆಯ ಗ್ರಂಥಗಳನ್ನು ಕನ್ನಡಿಸಬೇಕೆಂದೂ ಧಾರ್ಮಿಕ ಗ್ರಂಥರಚನೆಗೆ ಕೈಹಾಕಿ ಅಪವಾದಕ್ಕೆ ಗುರಿಯಾಗಬಾರದೆಂದೂ ಅವರಿಗೆ ತೋರಿದ್ದರೆ ಅದು ಸ್ವಾಭಾವಿಕ-ವಾದುದು. ದುರ್ಗಸಿಂಹನ 'ಪಂಚತಂತ್ರ'ವೊಂದರಲ್ಲಿ ಕೆಲಮಟ್ಟಿಗೆ ಜನಸಾಮಾನ್ಯದ ಬೋಧನೆ ಮತ್ತು ಮನೋರಂಜನೆಯ ದೃಷ್ಟಿ ಕಾಣಬಹುದು. ನಾಗವರ್ಮನ 'ಕಾದಂಬರಿ', ಚಂದ್ರರಾಜನ 'ಮದನತಿಲಕ' ಇವುಗಳಲ್ಲಿ ಅದೆಷ್ಟುಮಟ್ಟಿಗಿದೆ? ೧೧ನೆಯ ಶ.ವು ೧೦ನೆಯ ಶ.ದಷ್ಟು ಉಜ್ವಲವಲ್ಲ, ಆದರೆ ಅದು ಬರಡಲ್ಲ. ೧೦ನೆಯ ಶ.ದ ಪರಂಪರೆಯನ್ನು ಮುಂದರಿಸಿಯೂ ಅದರ ಅತಿಪ್ರೌಢಿಮೆಯನ್ನು ಸರಳತೆಗೆ ಇಳಿಸಲು ಎಳಸಿದ ಮಧ್ಯಮಗುಣದ ಕಾಲವದು. ಈ ಕಾರ್ಯವನ್ನು ಜೈನರು ಬ್ರಾಹ್ಮಣರು ಇಬ್ಬರೂ ಮಾಡಿದ್ದಾರೆ.

---

1 ಅದೇ, ಪು. ೧೭೫

೧೨. ನಾಗಚಂದ್ರ ಮತ್ತು ಸಮಕಾಲೀನರು

ನಾಗಚಂದ್ರನು ೧೧ನೆಯ ಶ.ದ ಕೊನೆ ಮತ್ತು ೧೨ನೆಯ ಶ.ದ ಮೊದಲಲ್ಲಿ ಬಾಳಿದ ಪ್ರಸಿದ್ಧ ಕವಿ. ತನ್ನ ವಿಷಯವಾಗಿ ಅವನು ಹೇಳಿದ್ದು ತೀರ ಸ್ವಲ್ಪ. ಅದರಿಂದ ಅವನ ಚರಿತ್ರೆ ತಿಳಿಯದು. ಅವನ ವ್ಯಕ್ತಿತ್ವದ ಚಿತ್ರವೊಂದು ಮೂಡುತ್ತದೆ. ಅವನು ಜೈನಮತದಲ್ಲಿ ಅತ್ಯಂತ ನಿಷ್ಠೆಯುಳ್ಳ ಜಿನಭಕ್ತ, ಗುರುಭಕ್ತನಾಗಿದ್ದನು. ಬೇರೆ ಆಧಾರಗಳಿಂದ ಚಾಲುಕ್ಯರಾಜರಿಂದಲೂ ಹೊಯ್ಸಳ ರಾಜರಿಂದಲೂ ಅವನು ಸನ್ಮಾನಪಡೆದನೆಂದು ಊಹಿಸುವಂತಿದೆ. ಅವನು 'ವಿಜಯಪುರಕ್ಕಲಂಕರಣಮಾಗಿರೆ' (ಮ.ಪು. ೧೪–೫೭) ಮಲ್ಲಿಜಿನೇಂದ್ರಗೃಹವನ್ನು ಕಟ್ಟಿಸಿದನು. ಹೆಸರಾದ ವಿಜಾಪುರವೇ ಅವನ ಊರಾಗಿರಬೇಕು. 'ಬನವಾಸಿದೇಶದ ಪಡುಗಡಿಯ ಕಡಲದಂಡೆಯಲ್ಲಿ ತಾನೆ ಇರುವ ಯಾವೊಂದು ಊರಿನವನಾಗಿರಬೇಕು'[1] ಎಂಬ ಅಭಿಪ್ರಾಯಕ್ಕೆ ಶ್ರೀ. ಗೋವಿಂದ ಪೈಗಳು ಕೊಟ್ಟ ಆಧಾರಗಳು ಬಲಿಷ್ಠವಾಗಿಲ್ಲ.

ಮಲ್ಲಿನಾಥಪುರಾಣ, ರಾಮಚಂದ್ರಚರಿತಪುರಾಣ ಅಥವಾ ಪಂಪರಾಮಾಯಣ ಎಂದು ಎರಡು ಇವನ ಗ್ರಂಥಗಳು. ಜಿನಮುನಿತನಯ, ಜಿನಾಕ್ಷರಮಾಲೆ ಎಂಬ ಗ್ರಂಥಗಳೂ ಇವನಿಂದ ರಚಿತವಾದುವೆಂದು ಆಧುನಿಕ ಕವಿಯಾದ ದೇವಚಂದ್ರ (ಕಾಲ ೧೮೩೮) ಹೇಳಿದ್ದಾನೆ. 'ಜಿನಮುನಿತನಯ' ಇದು 'ಕವಿನೂತನನಾಗಚಂದ್ರ' ಎಂಬ ಬೇರೊಬ್ಬ ಸಾಧಾರಣ ಕವಿಯಿಂದ ಬರೆದುದಾಗಿರಬೇಕೆಂದು ಕವಿಚರಿತಕಾರರ ಅಭಿಪ್ರಾಯ. 'ಜಿನಾಕ್ಷರಮಾಲೆ' ಪೊನ್ನನ ಹೆಸರಿನಲ್ಲಿ ಒಂದಿದೆ. ಇನ್ನೊಂದರ ವಿಷಯ ತಿಳಿದಿಲ್ಲ. 'ಮಲ್ಲಿನಾಥಪುರಾಣ'ವು ಬಹುಶಃ ನಾಗಚಂದ್ರನ ಮೊದಲನೆಯ ಕೃತಿಯಾಗಿದೆ. ಇದರಲ್ಲಿ ೧೯ನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತವಿದೆ.

ಎಂದನುರಾಗದಿಂ ಪೊಗೞ್ದು ಭವ್ಯಜನಂ ಕಿಱಿದೀ ಕಥಾಪರಿ- |
ಸ್ಪಂದಮಿದಂ ನಿಮಿರ್ಚೆ ಕವಿತಾರಸಮಂ ನೆಱೆ ಪೇೞ್ದರಿಲ್ಲ ಮು- |
ನ್ನೆಂದು ಮಹಾಕವೀಶ್ವರರೊಳೊರ್ವರುಮೆಂದೊಡೆ ಪೇಳಲಾಂ ಮನಂ- |
ದಂದೆನದಲ್ಲದೆನ್ನಳವೆ **ಮಲ್ಲಿಜಿನೇಂದ್ರಮಹಾಪುರಾಣಮಂ** || (೧–೪೫)

ಎಂದು ಕವಿ ಹೇಳಿರುವಂತೆ ಈ ಪುರಾಣದ ಕಥೆ ಚಿಕ್ಕದಾಗಿದ್ದು ನಿರೂಪಣೆಯು ೧೪ ಆಶ್ವಾಸಗಳ ವಿಸ್ತಾರಗೊಂಡಿದೆ. ಈ ಅರ್ಥದಲ್ಲಿ ಇದು 'ಮಹಾಪುರಾಣ'ವೇ. ವೈಶ್ರವಣನೆಂಬ ಅರಸನು ಅತ್ಯಂತ ಸುಖೋಪಭೋಗವನ್ನು ಹೊಂದಿರುವಾಗ

---

1 ಗೋವಿಂದ ಪೈ : ನಾಗಚಂದ್ರನ ಕಾಲನಿರ್ಣಯ (ಅಭಿನವಪಂಪ, ಪು. ೩೬)

'ಸಿಡಿಲೆಂಬ ಜವನ ಕೊಡಲಿಯ |
ಕಡುವೊಯ್ಲಿಂ ನೆಗೆದ ಬೇರ್ಗಳೊಡನೆ ನೆಲಂ ಬಾ- |
ಯ್ವಿಡೆ ಬೆಟ್ಟು ಕೆಡೆವ ತೆಜದಿಂ |
ಕೆಡೆದಾಲಮನಿದಿರೊಳವನಿಪಾಳಂ ಕಂಡಂ ||' (೯-೫೫)

ಅಂದರೆ ಸಿಡಿಲಿನ ಹೊಡೆತಕ್ಕೆ ಬೇರುವೆರಸು ಬಿದ್ದ ಆಲದ ಮರವನ್ನು ಕಂಡನು. ಆಗ 'ವಿಸ್ಮಯಮೆ ತನಗೆ ವೈರಾಗ್ಯರಸಕ್ಕೆ ಸೇತುವಾಗೆ' (೯-೫೮ ವ) ಸಂಸಾರದ ಅನಿತ್ಯತೆಯನ್ನು ಅರಿತನು. ಮಗನಿಗೆ ರಾಜ್ಯವನ್ನೊಪ್ಪಿಸಿ ನಾಗಯತಿಗಳಿಂದ ಧರ್ಮ ಕೇಳಿ ತಪೋನಿರತನಾದನು, ಕಾಲಾಂತರದಲ್ಲಿ ಅಹಮಿಂದ್ರನಾದನು. ಎರಡನೆಯ ಜನ್ಮದಲ್ಲಿ ಮಲ್ಲಿನಾಥನಾಗಿ ಹುಟ್ಟಿ ಕೌಮಾರ್ಯದಲ್ಲಿಯೇ ವೈರಾಗ್ಯಪಡೆದು ಪರಿನಿಷ್ಕ್ರಮಣವನ್ನು ಮಾಡಿ ಕೇವಲಜ್ಞಾನಿಯಾಗಿ ತೀರ್ಥಂಕರನಾದನು. ಈ ತೆಳ್ಳನೆಯ ಚರಿತೆಯನ್ನು ವರ್ಣನೆಗಳಿಂದ ವಿಸ್ತರಿಸಿ ಭೋಗತ್ಯಾಗಗಳ ದ್ವಿವಿಧ ಚಿತ್ರಗಳಲ್ಲಿ ಪ್ರಕರ್ಷದ ಬಣ್ಣತುಂಬಿ ನಾಗಚಂದ್ರನು ಘನವಾದ ಯಶಸ್ಸು ಪಡೆದಿದ್ದಾನೆ. ಸೇವಗೆಯನ್ನು ಎಳೆದೆಳೆದು ಆ ಕೈಯಿಂದ ಈ ಕೈಗೆ ಹಾಕಿದಂತೆ ಶೈಲಿಯ ನಯವನ್ನು ಸಾಧಿಸಿದ್ದಾನೆ. ಕನ್ನಡಕಾವ್ಯಗಳಲ್ಲಿ ಕಥಾಂಶವು ತೀರ ಸ್ವಲ್ಪವಾಗಿದ್ದು ಮಹಾಕಾವ್ಯದ ಮಟ್ಟಕ್ಕೆ ಹತ್ತಿರ ಸುಳಿಯುವ ಪ್ರೌಢಸರಣಿಯನ್ನು ಕೆಲವು ಕೃತಿಗಳಲ್ಲಿ ಕಾಣುತ್ತೇವೆ. ಅಂಥ ಕೃತಿಗಳಲ್ಲಿ 'ಮಲ್ಲಿನಾಥಪುರಾಣ'ವೂ ಒಂದು. ಇದರಲ್ಲಿ ಕವಿತೆಯ ಯೌವನವೈಭವವಿದೆ, ಪರಿಣತವಯದ ಪರಿಪಾಕವಿಲ್ಲ. ಆದರೂ ಇದರಲ್ಲಿ ವಸ್ತುರಚನೆಯ ವಾಸ್ತುಸೌಂದರ್ಯವಿದೆ. 'ಮಲ್ಲಿನಾಥನ ಎರಡು ಜನ್ಮದ ಚರಿತ್ರೆ ಒಂದು ಮಹಾಜನ್ಮದ ಪೂರ್ವೋತ್ತರಭಾಗಗಳಾಗುವಂತೆ ನಾಗಚಂದ್ರನು ಜಾಣ್ಮೆಯಿಂದ ಸಂಧಿಸಿರುವನು........ಸಮಗ್ರ ವಸ್ತುವಿನ ಸಮ್ಯಕ್ ಸೌಂದರ್ಯದಲ್ಲಿ ದೃಷ್ಟಿಯಿಟ್ಟು ಪ್ರತ್ಯಂಗಗಳನ್ನೂ ಅನುಗೊಳಿಸುವ ಜಾಣ್ಮೆಯು ಮಲ್ಲಿನಾಥಪುರಾಣದಲ್ಲಿಯೂ ಕಾಣುವುದು.'[1] ಈ ಕಾವ್ಯದಲ್ಲಿಯ ಕಲ್ಪಕತೆ-ಶೈಲಿಗಳು ಸಾಮಾನ್ಯವಾಗಿ ಒಂದು ಮೇಲ್ಮೆಯನ್ನು ತೋರುತ್ತವೆ, ಅಲ್ಲಲ್ಲಿ ಉಜ್ವಲವಾಗುತ್ತವೆ. ರಾಜಧಾನಿಯ ವಿಲಾಸಿನಿಯರನ್ನು ಬಣ್ಣಿಸುತ್ತ 'ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲ ಕಣ್ಣಿಂ ಸ್ಮರಂ ನಂದೆ ಪೊಯ್ದಂ' (೨-೫೬) ಎಂದು ಕವಿ ಉಸುರುತ್ತಾನೆ. ಕಾಮನನ್ನು ಹಣೆಯ ಕಣ್ಣಿನಿಂದ ಶಿವನು ಸುಟ್ಟನೆಂದು ಪುರಾಣಕಥೆ. ಆದರೆ ಈ ಪುರಾಣದ ವೇಶ್ಯಾವಾಟದಲ್ಲಿ ಕಾಮನೇ ಶಿವನ ಹಣೆಗಣ್ಣನ್ನು ನಂದುವಂತೆ ಹೊಯ್ದನಂತೆ! ಭೋಗಸಾಮಗ್ರಿಯನ್ನೆಲ್ಲ ಅನುಭವಿಸಿದ ಅರಸನಿಗೆ ಗಾಳಿಗೆ ಬಿದ್ದ ಆಲದ ಮರವು ಅನಿತ್ಯಸಂಸಾರದ ಸಂಕೇತವಾಗಿ ವೈರಾಗ್ಯ ಹುಟ್ಟಿಸಿತು. ಆಮೇಲಿನ ಬೆಳಗು ತಪೋವನದಂತೆ ಆಯಿತಂತೆ.

---

1 ದ. ರಾ. ಬೇಂದ್ರೆ : ನಾಗಚಂದ್ರನ ಮಲ್ಲಿನಾಥಪುರಾಣ (ಅಭಿನವಪಂಪ, ಪು. ೨೦-೨೧)

'ಮೂಡಣಸಂಜೆ ಕೆಂದಳಿರ ಕಾವಣದಂತಿರೆ ಚಂದ್ರಮಂಡಳಂ |
ಬಾಡಿದ ಮಾಘವೀಮಧುರಮಂಜರಿಯಂತಿರೆ ತಾರಕಾಳಿ ನೀ- |
ರೋಡಿ ಕಟಿಲ್ದು ಬೀೞ್ವ ಕಳಿವೂಗೆಣೆಯಾಗಿರೆ ತಣ್ಣನಪ್ಪೆಲರ್ |
ತೀಡೆ ತಪೋವನಂಬೊಲತಿಪಾವನಮಾಯ್ತು ನಭಂ ಪ್ರಭಾತದೊಳ್ ||'
(೧೦-೧೫)

ಮುಂದೆ ಮಾಡಿದ ಅರ್ಹತ್‌ಸ್ತುತಿಯಲ್ಲಿ,

'ನಿನಗೆ ರಸವೊಂದೆ ಶಾಂತಮೆ |
ಜಿನೇಂದ್ರ ಮನಮಾರಸಾಂಬುನಿಧಿಯೊಳಗವಗಾ- |
ಹನಮಿರ್ದು ಮಿಕ್ಕರಸಮಂ |
ಕನಸಿನೊಳಂ ನೆನೆಯದಂತು ಮಾಡೆನಗರ್ಹಾ ||' (೧೦-೧೨)

ಎಂಬ ಪದ್ಯ ಅರ್ಥಪೂರ್ಣವಾಗಿದೆ. ಜೈನಪುರಾಣಗಳಲ್ಲಿ ಪರ್ಯವಸಾಯಿಯಾಗಿ ಬರುವ ಶಾಂತರಸಕ್ಕೆ ಸೂತ್ರದಂತಾಗಿದೆ. 'ಆದಿಪುರಾಣ'ದ ಭವ್ಯತೆ ಇದರಲ್ಲಿ ಗೋಚರವಾಗುತ್ತಿದೆಯಾದರೂ ಸಜೀವ ಸಂನಿವೇಶ ಮತ್ತು ಪಾತ್ರಪೋಷಣೆಗಳಿಂದ ಇದು ಅರಳಿಕೊಂಡು ನಿಂತಿಲ್ಲ. ಆದ್ದರಿಂದ ಇದು 'ಮಹಾಪುರಾಣ'ವಾಗಲಾರದು, ಮಹಾಕಾವ್ಯವೂ ಅಲ್ಲ; ಮಹಾಕಾವ್ಯದ ಸತ್ವವುಳ್ಳ ಸತ್ಕಾವ್ಯವೆಂದು ಇದನ್ನು ಕರೆಯಬಹುದು.

'ರಾಮಚಂದ್ರಚರಿತಪುರಾಣ'ವು ಕನ್ನಡದಲ್ಲಿ ಉಪಲಬ್ಧವಾದ ಮೊದಲನೆಯ ಜೈನರಾಮಾಯಣ, ನಾಗಚಂದ್ರನ ಎರಡನೆಯ ಮತ್ತು ಹೆಚ್ಚು ಪರಿಪಕ್ವವಾದ ಕೃತಿ. 'ಉಪದೇಶಂಗೆಯ್ದು ಕಾವ್ಯಚ್ಛಲದಿನಖಿಲಧರ್ಮಂಗಳಂ ಲೋಕಮಂ ಧರ್ಮಪಥಪ್ರಸ್ಥಾನ-ದೊಳ್ ಯೋಜಿಸಿ ಪರಮಪುರಾಣಂಗಳಂ' (೧-೨೮) ಹೇಳಿದ ಕವಿಜ್ಯೇಷ್ಠರನ್ನು ವಂದಿಸಿ ನಾಗಚಂದ್ರನು ತನ್ನ ಆದರ್ಶವೂ ತತ್ಸಮಾನವೆಂದು ಸೂಚಿಸಿದ್ದಾನೆ. 'ಉದಾತ್ತರಾಘವಂ ನಾಯಕನಾಗೆ ವಿಶ್ರುತವೆನಿಪ್ಪುದು........ವಿಷಯಮೊಪ್ಪದೊಡಾ-ವುದುಮೊಪ್ಪಲಾರ್ಕುಮೇ' (೧-೩೭) ಎಂಬಲ್ಲಿ ವಿಷಯಕ್ಕೆ—ಉದಾತ್ತಕಥೆ ಮತ್ತು ನಾಯಕನ ಮುಖಾಂತರವಾಗಿ ಧರ್ಮವನ್ನು ಬೋಧಿಸುವ ವಿಷಯಕ್ಕೆ—ಅವನು ಮಹತ್ವ ಕೊಟ್ಟಿದ್ದಾನೆ. ಜೈನಸಂಪ್ರದಾಯದ ರಾಮಾಯಣವನ್ನು '**ಅಪೂರ್ವ-ಮೆನೆ** ರಾಮಕಥೆಯನಭಿವರ್ಣಿಸುವೆಂ' (೧-೪೦) ಎಂದೂ ಹೇಳಿದ್ದಾನೆ. ಈ ಅಪೂರ್ವತೆ ವಾಲ್ಮೀಕಿರಾಮಾಯಣ ಮುಂತಾದ ಬೇರೆ ರಾಮಾಯಣಗಳಿಗಿಂತ ಭಿನ್ನವಾದದ್ದರಲ್ಲಿಯೂ ಜೈನರಾಮಾಯಣದ ನಿರೂಪಣೆಯಲ್ಲಿ ತೋರಿಸಿದ ಕೆಲಮಟ್ಟಿನ ನವೀನತೆಯಲ್ಲಿಯೂ ಇರುತ್ತದೆ. ವಿಮಲಸೂರಿ ಮತ್ತು ಗುಣಭದ್ರ ಎಂಬ ಇಬ್ಬರಿಂದ ಪ್ರಚಲಿತವಾದ ಎರಡು ಜೈನರಾಮಾಯಣದ ಸಂಪ್ರದಾಯಗಳಿದ್ದುವು. ಅವುಗಳಲ್ಲಿ

'ಪಉಮಚರಿಯ'(ಪದ್ಮಚರಿತ)ವೆಂಬ ಹೆಸರಿನಲ್ಲಿ ರಾಮಕಥೆಯನ್ನು ಪ್ರಾಕೃತದಲ್ಲಿ ಹೇಳಿದ ವಿಮಲಸೂರಿಯ ಸಂಪ್ರದಾಯವನ್ನು ನಾಗಚಂದ್ರನು ದಟ್ಟವಾಗಿ ಅನುಸರಿಸಿದ್ದಾನೆ. ಇದೇ ಸಂಪ್ರದಾಯವನ್ನು ಸಂಸ್ಕೃತದಲ್ಲಿ ಅತಿಪ್ರಾಚೀನವಾಗಿ ಮೂಡಿಸಿದವನು ರವಿಷೇಣನು. ಇವನ ಪ್ರಭಾವಕ್ಕೂ ನಾಗಚಂದ್ರನು ಒಳಗಾಗಿದ್ದಾನೆ. 'ಪಿರಿದೆನಿಸಿರ್ದ ರಾಮಕಥೆಯಂ ಕಿಱಿದಾಗಿರೆ' (೧೬-೯೭) ಕೃತಿ ಹೇಳುವ ಶಕ್ತಿ ತನಗುಂಟೆಂದು ಅವನು ಹೇಳಿಕೊಂಡಿದ್ದಾನೆ. ರಾಮಕಥೆಯ ಸಂಗ್ರಹ-ಸಂಕ್ಷೇಪ ಅವನ ಉದ್ದೇಶವಾಗಿತ್ತು. ಮೂಲದೃಷ್ಟಿಯಿಂದ ಸಂಗ್ರಹವಾದರೂ ತನ್ನಷ್ಟಕ್ಕೆ ಈ ಕಾವ್ಯ ತುಂಬ ವಿಸ್ತಾರವಾಗಿದೆ. ತನಗೆ ರಸಸ್ಥಾನಗಳೆಂದು ತೋರಿದಲ್ಲಿ, ಧರ್ಮಬೋಧಕವೆಂದು ತಿಳಿದಲ್ಲಿ ಬಿತ್ತರಿಸಲು ಕವಿ ಹಿಂದೆ ಮುಂದೆ ನೋಡಿಲ್ಲ. ತನ್ನ ಸಂಗ್ರಹಕಾರ್ಯದಲ್ಲಿ ವಿಮಲಸೂರಿಯಲ್ಲಿದ್ದ ನೀರಸಭಾಗಗಳನ್ನು ಬಹುವಾಗಿ ಬಿಟ್ಟಿದ್ದಾನೆ. ಬಿಟ್ಟದ್ದರಲ್ಲಿ ವಂಶವೃತ್ತಾಂತ, ಜನ್ಮಾಂತರಕಥೆ, ಧರ್ಮೋಪದೇಶಗಳು ಬರುತ್ತವೆ. 'ಪ್ರಕೃತ ಮೂಲದೊಡನೆ ಹೋಲಿಸಿ ನೋಡಿದರೆ ನಾಗಚಂದ್ರನು ಕೊಟ್ಟಿರುವ ಸಂಗ್ರಹ ಹತ್ತರಲ್ಲಿ ಒಂದು ಪಾಲು ಕೂಡ ಆಗಿಲ್ಲ........ಯಾವುದನ್ನು ಬಿಡಬೇಕು, ಯಾವುದನ್ನು ಮಿತವಾಗಿ ಹೇಳಬೇಕು, ಯಾವುದನ್ನು ವಿಸ್ತರಿಸಬೇಕು ಎಂಬ ಪ್ರಮಾಣಜ್ಞಾನವು ನಾಗಚಂದ್ರನಲ್ಲಿ ಬಹುಮಟ್ಟಿಗೆ ಇದೆ.'[1] ಮೂಲದಲ್ಲಿರುವ ಉಪಾಖ್ಯಾನಗಳಿಗೆ ನಾಗಚಂದ್ರನಲ್ಲಿ ಸ್ಥಾನಪಲ್ಲಟವಾದದ್ದಕ್ಕೆ ರಾವಣನ ವೃತ್ತಾಂತವೊಂದು ನಿದರ್ಶನ. ಇದು ಮೂಲದಲ್ಲಿ ಆರಂಭದಲ್ಲಿಯೇ ಬಂದಿದೆ, ನಾಗಚಂದ್ರನಲ್ಲಿ ಒಂದು ಸಂದರ್ಭದಲ್ಲಿ ಹಿಂಗತೆಯಾಗಿ ಹೇಳಲಾಗಿದೆ. ಇದು ಸರಿಯಲ್ಲ, ಯಾಕೆಂದರೆ ದಶರಥನಿಗೆ ನಾರದನಿಂದ ರಾವಣನ ಮರಣಭವಿಷ್ಯ ತಿಳಿದಾಗ ಅವನು ಉದಾತ್ತನಾದ ಪುರುಷಪ್ರವರನೆಂದು ಗೊತ್ತಿರುವುದಿಲ್ಲ ಎಂಬ ಟೀಕೆ ಬಂದಿದೆ. ನಮಗೆ ತೋರುವಂತೆ ಸ್ಥಾನಪಲ್ಲಟವೇನೊ ಕಲಾಯುತವಾಗಿದೆ, ಆದರೆ ದಶರಥ ನಾರದರ ಸಂದರ್ಭದಲ್ಲಿ ರಾವಣನು ಉದಾತ್ತನೆಂಬುದನ್ನು ಸೂಚಿಸುವ ಮಾತು ಇರಬೇಕಾಗಿತ್ತು. ಹೀಗಾಗಿದ್ದರೆ ರಾಮಾಯಣದ ಮೊದಲಿಗೆ ರಾವಣನ ದೀರ್ಘವೃತ್ತಾಂತವನ್ನು ತರುವ ಅಗತ್ಯ ತಪ್ಪುತ್ತಿತ್ತು. ಮೇಲಾಗಿ ಜೈನರಾಮಾಯಣದ ರಾವಣನು ಬೇರೆ ಎಂಬ ಕಲ್ಪನೆಯೂ ಉಂಟಾಗುತ್ತಿತ್ತು. ಮುಂದಿನ ಭಾಗದಲ್ಲಿ ಕುತೂಹಲವನ್ನು ಪೂರ್ಣವಾಗಿ ಸಂತೈಸುವ ರಾವಣನ ಸಮಗ್ರಚರಿತ್ರೆ ಬಂದರೆ ತಪ್ಪಿಲ್ಲ. ಒಟ್ಟಿನಲ್ಲಿ 'ಕೆಲವು ಸಣ್ಣ ಸಣ್ಣ ಮಾರ್ಪಾಟುಗಳನ್ನು ನಾಗಚಂದ್ರನು ಮೂಲಕಥೆಯಲ್ಲಿ ಮಾಡಿಕೊಂಡಿದ್ದಾನೆ. ಇವನ್ನು ಬಿಟ್ಟರೆ ವಿಮಲಸೂರಿಯ ಜಾಡನ್ನೇ ಚಾಚೂ ತಪ್ಪದೆ ಅವನು ಹಿಡಿದಿದ್ದಾನೆ.....ಉತ್ಕೃಷ್ಟ ಕಲೆಯಿಂದ ತುಂಬಿದ ಮಾರ್ಪಾಟುಗಳಾವುವೂ ಅವನ ಕಾವ್ಯದಲ್ಲಿ ಕಂಡುಬರುವುದಿಲ್ಲ ....ಮೂಲ ಜೈನರಾಮಾಯಣದ ಸಂಪ್ರದಾಯ ನಾಗಚಂದ್ರನಲ್ಲಿ ಪೂರ್ತಿಯಾಗಿ ಪ್ರತಿ-

---

1 ಡಿ. ಎಲ್. ನರಸಿಂಹಾಚಾರ್ : ಪಂಪರಾಮಾಯಣಸಂಗ್ರಹ, ಪೀಠಿಕೆ, ಪು. lxv

ಫಲಿಸಿದೆ '[1] ಈ ಮಾತನ್ನು ಕಂಡುಹಿಡಿಯುವುದಕ್ಕೆ ಮುಂಚೆ ಪಂಪರಾಮಾಯಣದ ಅಪೂರ್ವತೆ ಎದ್ದುಕಾಣುತ್ತಿತ್ತು, ವಾಲ್ಮೀಕಿರಾಮಾಯಣದಿಂದ ಭಿನ್ನವಾದ ಅಂಶಗಳಲ್ಲಿ ಅವನಿಗೆ ಸಂದ ಶ್ರೇಯಸ್ಸು ಮಿಗಿಲಾಗಿತ್ತು. ಈಗ ವಿಮರ್ಶೆಗೆ ಹೊಸ ನಿಲುಕಡೆ ಬಂದಿದೆ. ವಿಮಲಸೂರಿಯನ್ನು ಇಷ್ಟುಮಟ್ಟಿಗೆ ಅನುಸರಿಸಿದ ನಾಗಚಂದ್ರನು ಒಳ್ಳೆಯ ಅನುವಾದಕಾರನೆಂದು ತಿಳಿಯುವಂತಾಗಿದೆ. ಬಾಣಕಾದಂಬರಿಯನ್ನು ಕನ್ನಡಿಸಿದ ನಾಗವರ್ಮನಿಗೂ ಇವನಿಗೂ ಏನು ಭೇದ ಎಂದೆನ್ನಿಸಬಹುದು. ಸ್ಥೂಲವಾಗಿ ಇದು ನಿಜವಾದರೂ ಭೇದವಿದೆಯೆಂಬುದನ್ನು ಕಾಣಬಹುದು. ನಾಗಚಂದ್ರನು ಮೂಲನಿಷ್ಠೆಯುಳ್ಳ ಸಂಗ್ರಹಕಾರ, ಆದರೆ ಸ್ವಂತ ಪ್ರತಿಭೆಯ ಪರುಷದಿಂದ ಹಾಗೂ ಶೈಲಿಯ ವಿಶಿಷ್ಟಪಾಕದಿಂದ ಮೂಲಕ್ಕೂ ಮಿರುಗುಕೊಟ್ಟಿರುವ ಸಮರ್ಥಕಲಾವಿದನು. ನಾಗವರ್ಮನು ಬಹುಮಟ್ಟಿಗೆ ಅನುವಾದಮಾಡಲು ಹೊರಟು ಅದೇ ಭೂಮಿಕೆಯನ್ನು ವಹಿಸಿ ತೋರಿದನು. ಅವನು ಮೂಲದ ಅಂತರಂಗಕ್ಕಿಂತ ಬಹಿರಂಗದ ನಿರೂಪಣೆಯಲ್ಲಿ ತನ್ನ ಶೈಲಿಯ ಪ್ರಭಾವ ಬೀರಿದನು.

ಪಂಪರಾಮಾಯಣದ ಪಾತ್ರಗಳೆಲ್ಲ ವಿಮಲಸೂರಿಯ ಪಡಿಯಚ್ಚುಗಳಾಗಿವೆ. ಅಲ್ಲಿಯ ಗುಣದೋಷಗಳೆಲ್ಲವೂ ಇಲ್ಲಿ ಇಳಿದುಬಂದಿವೆ. ಜೈನಸಂಪ್ರದಾಯಕ್ಕೆ ಅನುಸರಿಸಿ ರಾಮನು ಹಿಂಸೆಯನ್ನು ಮಾಡಲಾರದ ಚರಮದೇಹಧಾರಿ. ಲಕ್ಷ್ಮಣನು ಹಿಂಸೆಮಾಡಬಲ್ಲನು. ಅಂತೇ ಅವನೇ ಕೊನೆಗೆ ರಾವಣನನ್ನು ಕೊಲ್ಲುತ್ತಾನೆ, ಅದಕ್ಕಾಗಿ ನರಕಭಾಗಿಯಾಗುತ್ತಾನೆ, ಮುಂದೆ ಮುಕ್ತಿಯೋಗ್ಯನಾಗುತ್ತಾನೆ. ಇದರಿಂದ ಕಥಾನಕ ಮತ್ತು ಪಾತ್ರಚಿತ್ರಣದಲ್ಲಿ ಒದವಿ ಬಂದ ಆಭಾಸಗಳನ್ನು ನಾಗಚಂದ್ರನು ತಿದ್ದಿಕೊಳ್ಳಲು ಹೋಗಿಲ್ಲ. ಅವನ ರಾಮನು ಅಕ್ಷತ್ರಿಯನಂತೆ ನಡೆಯುತ್ತಾನೆ ಆದರೆ ಕಥೆಯಲ್ಲಿ ಪ್ರಾಧಾನ್ಯವನ್ನು ಪಡೆಯುತ್ತಾನೆ. ಅನೇಕ ಯುದ್ಧಗಳಲ್ಲಿ ಗೆದ್ದು ಹಲವು ಸುಂದರಿಯರನ್ನು ಮದುವೆಯಾದ ಲಕ್ಷ್ಮಣನು ಹಿಂದೆ ಬೀಳುತ್ತಾನೆ. ಸೀತೆಯ ಪಾತ್ರವು ಏಕತಾನವಾಗಿ ಸುಂದರವಾಗಿದೆ. ವಾಲ್ಮೀಕಿರಾಮಾಯಣದಂತೆ ಅಚಲಪತಿವ್ರತೆಯೆಂಬ ಅವಳ ಚಿತ್ರವು ಇಲ್ಲಿಯೂ ಸೊಗಸುತ್ತದೆ. ಅಲ್ಲಲ್ಲಿ ಅವಳ ಬಾಯಲ್ಲಿ ಮಾತು ಹೆಚ್ಚಿದ್ದರೂ ಒಟ್ಟಿನ ನಿರೂಪಣೆ ಯಶಸ್ವಿಯಾಗಿದೆ. ಮಂಡೋದರಿ ಮಾತ್ರ ರಾವಣನಲ್ಲಿ ಭಕ್ತಿಯನ್ನು ತೋರಿಸಲೆಂದು ಸೀತೆಯ ಮನವೊಲಿಸಹೋಗಿ ಅಧಃಪಾತವನ್ನು ಹೊಂದುತ್ತಾಳೆ.

ರಾವಣನ ಪಾತ್ರವು 'ಪಂಪರಾಮಾಯಣ'ದಲ್ಲಿ ಮುಖ್ಯವಾದುದು. ರಾವಣನು ಉದಾತ್ತ ಮತ್ತು ಸದ್ಗುಣಿಯಾದ ವ್ಯಕ್ತಿ; ಆದರೆ ದುರ್ವಿಧಿವಶದಿಂದ ಸೀತೆಯನ್ನು ಕಾಮಿಸಿದನು, ವಶಪಡಿಸಿಕೊಳ್ಳಬೇಕೆಂದು ಎಲ್ಲ ಪ್ರಯತ್ನ ಮಾಡಿದನು, ಅವಳ ಪತಿಭಕ್ತಿಯನ್ನು ನೋಡಿ ಪಶ್ಚಾತ್ತಾಪದಿಂದ ಪುನೀತನಾದನು. ವಿಮಲಸೂರಿಯ

---

1 ಡಿ. ಎಲ್. ನರಸಿಂಹಾಚಾರ್: ಪಂಪರಾಮಾಯಣಸಂಗ್ರಹ, ಪೀಠಿಕೆ, ಪು. lxxiv

ಈ ಪಾತ್ರಕಲ್ಪನೆಯನ್ನು ನಾಗಚಂದ್ರನು ತನ್ನದಾಗಿ ಮಾಡಿಕೊಂಡು ಅದರ ನಿರ್ವಚನಮಾಡಿದ್ದಾನೆ. ‘ ಇವನ ಚಿತ್ರ ಮೂಲಕೃತಿಯನ್ನು ಬಲುಮಟ್ಟಿಗೆ ಹೋಲುತ್ತದೆ. ಆದರೆ ಅದರಲ್ಲಿ ಮೂಲದಲ್ಲಿರುವಷ್ಟು ಸೌಂದರ್ಯವಿಲ್ಲ, ಗಾಂಭೀರ್ಯವಿಲ್ಲ, ದುರಂತತೆಯ ಬೃಹತ್ಪ್ರಮಾಣವಿಲ್ಲ. ತುಪ್ಪದ ಹನಿ ಅಲ್ಲಲ್ಲಿ ಹತ್ತಿದ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಆ ಚಿತ್ರವಿದೆ. ಆದರೂ ಮನೋಹರವಾಗಿದೆ ’[1] ಎಂದು ಒಂದು ತೀರ್ಮಾನವಾಗಿದೆ. ನಾಗಚಂದ್ರನು ರಾವಣನ ಉದಾತ್ತತೆಗೆ ವಿಸಂಗತವಾಗುವಂತೆ ಅವನ ಮುಖಕ್ಕೆ ಮಸಿಬಳಿಯುವ ಮಾತುಗಳನ್ನು ಅಲ್ಲಲ್ಲಿ ಬಳಸಿದ್ದಾನೆ. ಅದರಿಂದ ಮೂಲದ ಸೌಂದರ್ಯ ಕೆಲಮಟ್ಟಿಗೆ ಕುಂದಿದೆ ಎಂಬುದು ದಿಟ. ಅವನಲ್ಲಿ ನೀತಿ, ಧರ್ಮಗಳನ್ನು ಎತ್ತಿಹಿಡಿಯುವ ಮೂಲ್ಯಪ್ರಜ್ಞೆಯಿದೆ. ಅದು ಇಂಥ ಸಂದರ್ಭಗಳಲ್ಲಿ ತೂಕತಪ್ಪಿ ಕಲಾವಿದನಾದ ನಾಗಚಂದ್ರನನ್ನು ಜಾರಿಸಿಬಿಡುತ್ತದೆ. ಮೂಲದ ಗಾಂಭೀರ್ಯವಿಲ್ಲ ಎಂಬ ಆರೋಪವನ್ನು ಚರ್ಚಿಸಬೇಕು. ವಿಶೇಷವಾಗಿ ರಾವಣನು ಸೀತೆಯ ವ್ಯಾಮೋಹದಿಂದ ವಿವಶನಾಗಿ ಹೇಗಾದರೂ ಅವಳನ್ನು ವಶೀಕರಿಸಬೇಕೆಂಬ ಪ್ರೇಮೋನ್ಮಾದದ ಆವೇಶದಲ್ಲಿದ್ದಾಗ ತನ್ನ ಸೌಖ್ಯಸಾಮ್ರಾಜ್ಯದ ವಿಲೋಭನಗಳನ್ನೆಲ್ಲ ಅವಳ ಮುಂದೆ ಒಡ್ಡಿ ಆಡಿದ ಮಾತುಗಳಲ್ಲಿ ಕಾಮುಕತೆಯ ಘೋರ ಸತ್ಯವಿದೆ. ಮೂಲದಲ್ಲಿದ್ದ ಗಾಂಭೀರ್ಯವನ್ನು ನಾಗಚಂದ್ರನು ಕಣ್ಣುಮುಚ್ಚಿ ಸ್ವೀಕರಿಸದಿದ್ದುದು ಒಳ್ಳೆಯದಾಯಿತು. ರಾವಣನು ದುರಂತನಾಯಕನಾಗಿ ವಿಮಲಸೂರಿಯಂತೆ ‘ ಪಂಪರಾಮಾಯಣ ’ದಲ್ಲಿ ತಲೆದೋರುತ್ತಾನೆ. ಎಲ್ಲಿಯೋ ಒಂದೆರಡು ಕಡೆಗೆ ಅವನನ್ನು ಪಾಣ್ಬ, ಪಾತಕಿಯೆಂದ ಮಾತ್ರಕ್ಕೆ ದುರಂತತೆಯಲ್ಲಿ ಅಷ್ಟು ಮಟ್ಟಿಗೆ ಕೊರತೆಯಾಯಿತೆಂದು ನಮಗೆ ತೋರುವುದಿಲ್ಲ. ವಿಮಲಸೂರಿಯಲ್ಲಿ ಆಗಲಿ, ನಾಗಚಂದ್ರನಲ್ಲಿ ಆಗಲಿ, ರಾವಣನ ದುರಂತತೆಗೆ ಪರಿಣಾಮರಮಣೀಯವಾದ ಕರುಣಸ್ವರೂಪವಿದೆ. ಯಾಕೆಂದರೆ ಅವನು ಮರಣಹೊಂದಿದರೂ ಪಶ್ಚಾತ್ತಾಪದಿಂದ ಪುನೀತನಾಗುತ್ತಾನೆ, ದುರಂತತೆಗೆ ಕಾರಣವಾದ ವ್ಯಾಮೋಹದಿಂದ ಮುಕ್ತನಾಗುತ್ತಾನೆ. ಈ ಅರ್ಥದಲ್ಲಿ ದುರಂತತೆಯ ಬೃಹತ್ಪ್ರಮಾಣಕ್ಕೆ ಇಬ್ಬರಲ್ಲಿಯೂ ಅವಕಾಶವೆಲ್ಲಿದೆ? ಇನ್ನೊಂದು ದೃಷ್ಟಿಯಲ್ಲಿ ‘ ಜೈನರ ನೀತಿಪ್ರಧಾನಸಂಸ್ಕೃತಿಯಲ್ಲಿ ಬೆಳೆದ ನಾಗಚಂದ್ರನಿಗೆ ದುರಂತರಾವಣನನ್ನು ತೋರಿಸಿ ಮಾನವದೌರ್ಬಲ್ಯದ ಬಗ್ಗೆ ಕರುಣೆ ಹುಟ್ಟಿಸುವುದಿರಲಿಲ್ಲ, ಚಕ್ರವರ್ತಿಗಳೆಂಬ ಗರ್ವದಲ್ಲಿ ಅಸದಾಗ್ರಹವನ್ನೇ ಮುಂದುವರಿಸುವವರ ದೌರಾತ್ಮ್ಯವನ್ನು ಖಂಡಿಸಿ ಅವರ ದಾರುಣಮರಣದಿಂದ ಭಯವನ್ನು ಹುಟ್ಟಿಸುವುದಾಗಿತ್ತು.’[2] ಹಾಗಿದ್ದರೆ ರಾವಣನಲ್ಲಿ ಪಶ್ಚಾತ್ತಾಪವನ್ನೇಕೆ ಹುಟ್ಟಿಸಲಾಯಿತು? ಉದಾತ್ತನಾದ

---

1 ಡಿ. ಎಲ್. ನರಸಿಂಹಾಚಾರ್ : ಪಂಪರಾಮಾಯಣಸಂಗ್ರಹ, ಪೀಠಿಕೆ lxiv (ಮೊದಲನೆಯ ಮುದ್ರಣ)

2 ದ. ರಾ. ಬೇಂದ್ರೆ : ಪಂಪರಾಮಾಯಣಸಂಗ್ರಹ ವಿಮರ್ಶೆ (ಪ್ರ.ಕ., ೧೯-೧, ಪು. ೧೦೧)

ವ್ಯಕ್ತಿ ಒಂದು ವ್ಯಾಮೋಹಕ್ಕೆ ಹೇಗೊ ವಶವಾಗಿ ಕಡೆಗೆ ಅದರಿಂದ ಹೊರಬಿದ್ದನೆಂಬುದೇ ರಾವಣನ ಒಟ್ಟು ಚಿತ್ರವಲ್ಲವೇ? ಕಿಡಿ ಮಸಿಯಾದ ಅವನ ವ್ಯಾಮೋಹಕಥೆ ದುರಂತ-ವಲ್ಲವೇ? ಅದರಿಂದ ಕರುಣೆ–ಸಹಾನುಭೂತಿಗಳು ಹುಟ್ಟಿದರೂ ಅವು ನೈತಿಕ ಮೂಲ್ಯಗಳನ್ನು ಮೇಲೆಕೆಳಗು ಮಾಡಬೇಕಾಗಿಲ್ಲ.

ನಾಗಚಂದ್ರನು ತನ್ನನ್ನು 'ಅಭಿನವಪಂಪ'ನೆಂದು ಕರೆದುಕೊಂಡಿದ್ದಾನೆ. ಅದು ಅವನಿಗೆ ದೊರೆತ ಗೌರವಸೂಚಕವಾದ ಬಿರುದಾಗಿರಬಹುದು. ಪಂಪನು ಲೌಕಿಕ, ಧಾರ್ಮಿಕ ಎಂದೆರಡು ಗ್ರಂಥ ಬರೆದರೆ ನಾಗಚಂದ್ರನು ಎರಡೂ ಧಾರ್ಮಿಕ ಗ್ರಂಥಗಳನ್ನೇ ಬರೆದನು. ಪಂಪನದು ಲೌಕಿಕಭಾರತ, ನಾಗಚಂದ್ರನದು ಜೈನ-ರಾಮಾಯಣ. ಇಬ್ಬರ ಪ್ರತಿಪಾದನೆ–ಶೈಲಿಗಳಲ್ಲಿ ಭೇದವಿದೆ. ಪಂಪನಲ್ಲಿ ಬಿಗುವು, ಕ್ಲಿಷ್ಟತೆಗಳಿದ್ದರೆ ನಾಗಚಂದ್ರನಲ್ಲಿ ಅರ್ಥವ್ಯಕ್ತಿ–ಮೃದೂಕ್ತಿಗಳಿವೆ.

'ಪದರಚನೆ ಸಜ್ಜನಶ್ರವ-।
ಣದೊಳಂಚೆಯ ತುಪ್ಪುಳಿಂಚೆಯಂ ತೀವಿದವೊಲ್ ।
ಮೃದುವೆನೆ ಪೊಸಬಗೆ ರಸಭಾ-।
ವದೊಳೋಕುಳಿಯಾಡೆ ಪೇಲ್ದನಭಿನವಪಂಪಂ ॥' (೧–೪೨ ಮ.ಪು.)

ಎಂಬ ಅವನ ಶ್ಲಾಘನೆ ಸಾರ್ಥಕವಾಗಿದೆ. ಆದರೂ ಪಂಪನ ಅಸಾಧಾರಣ ಯೋಗ್ಯತೆ-ಯನ್ನು ಅವನು ಪಡೆದವನಾಗಿದ್ದನು. ಪಂಪನಂತೆ ಸಂಗ್ರಹಕಾರನ ಜಾಣ್ಮೆಯನ್ನೂ ತೋರಿದನು. ಆದರೆ ಅವನ ಎರಡೂ ಗ್ರಂಥಗಳು ಪಂಪನ ಕೃತಿಗಳಂತೆ ಮಹಾಕಾವ್ಯ-ಗಳಲ್ಲ. 'ಮಲ್ಲಿನಾಥಪುರಾಣ'ಕ್ಕಿಂತ 'ಪಂಪರಾಮಾಯಣ'ದಲ್ಲಿ ಮಹಾಕಾವ್ಯದ ಉನ್ನತಿ–ಉತ್ಕಟತೆಗಳು ಹೆಚ್ಚು ತೋರಿವೆ. ಆದರೂ ಒಟ್ಟುನೋಟದಲ್ಲಿ 'ಪಂಪ-ರಾಮಾಯಣ'ವು ಮಹಾಕವಿಯೋಗ್ಯತೆಯುಳ್ಳ ಕವಿಯ ಸತ್ಕಾವ್ಯವೆಂದು ನಮಗೆ ತೋರುತ್ತದೆ.

ನಾಗಚಂದ್ರನ ಸಮಕಾಲೀನರಾದವರಲ್ಲಿ ಕಂತಿಯೆಂಬ ಕವಯಿತ್ರಿಯ ಹೆಸರು ಬರುತ್ತದೆ. ೧೬ನೆಯ ಶ.ದ ಬಾಹುಬಲಿ ತನ್ನ 'ನಾಗಕುಮಾರಚರಿತೆ'ಯಲ್ಲಿ 'ಅಭಿನವವಾಗ್ದೇವಿ'ಯಾದ ಈ ಕಂತಿಕೆಯನ್ನು ನೆನೆದಿದ್ದಾನೆ. ದೇವಚಂದ್ರನು ತನ್ನ 'ರಾಜಾವಳೀ ಕಥೆ'ಯಲ್ಲಿ (೧೮೩೮) ಇವಳ ಚರಿತ್ರೆಯನ್ನು ಹೇಳಿದ್ದಾನೆ. ಅದರಲ್ಲಿ 'ದೋರರಾಯನ ಆಸ್ಥಾನದ ಕನ್ನಡಸಂಸ್ಕೃತಮಹಾಕವಿಗಧಿಪಂ ಪಂಪಕವಿಯಂ ಕಳುಹಲ್ ಆತಂ ಬಂದು ವಿದ್ಯೆಯಿಂ ಸಾವಿರ ಪ್ರಶ್ನೆಯಂ ಕೇಳಲ್ ಉತ್ತರಮಂ ಕುಡಲ್ ಆಕೆಯಂ ರಾಜಸಭೆಗೆಯ್ದಿಸೆ ವಿದ್ವತ್ಸಮೂಹದೊಳ್ **ಅಧಿಕಕವೀಶ್ವರಿ-ಯಾದಳ್**' ಎಂದಿದೆ. ಇದನ್ನು ಸಮರ್ಥಿಸುವಂತೆ 'ಕಂತಿಹಂಪನ ಸಮಸ್ಯೆಗಳು' ಎಂಬ ಕೆಲವು ಪದ್ಯಗಳು ದೊರೆತಿವೆ. ನಾಗಚಂದ್ರನು ತನ್ನ ಗ್ರಂಥಗಳಲ್ಲಿ ಇವಳ

ವಿಷಯ ಹೇಳಿಲ್ಲ. ೧೬ನೆಯ ಶ.ದ ವರೆಗೆ ಯಾರೂ ಹೇಳಿಲ್ಲ. ಬಾಹುಬಲಿ, ದೇವಚಂದ್ರ ಹಾಗೂ ಸಮಸ್ಯಾಪದ್ಯಗಳು ಇವು ಮೂರು ನಂಬಿಕೆಗೆ ಅನರ್ಹವಾದ ಕಾರಣ ಕಂತಿಯೆಂಬ ಕಬ್ಬಿಗಿತಿ ಇದ್ದಳೆಂಬುದಕ್ಕೆ ದೋಷರಹಿತವಾದ ಬೇರೆ ಆಧಾರ-ವಿಲ್ಲದೆ ನಂಬುವುದಕ್ಕಾಗದು ಎಂದು ಶ್ರೀ. ವೆಂಕಟಸುಬ್ಬಯ್ಯನವರು ಅಭಿಪ್ರಾಯಿಸಿ-ದ್ದಾರೆ.[1] ಇದರ ಜೊತೆಗೆ 'ಕಂತಿಪಂಪನ ಸಮಸ್ಯೆಗಳು' ಎಂದು ಪ್ರಕಟವಾದ ಪದ್ಯಗಳನ್ನು ನೋಡಿದರೆ ಅವುಗಳ ಶೈಲಿ ನಾಗಚಂದ್ರನ ಕಾಲದ ಹಳಗನ್ನಡವಾಗಿರದೆ ಹೊಸಗನ್ನಡದ ಒಂದು ಬಗೆಯಾಗಿರುವಂತೆ ತೋರುತ್ತದೆ. ತರುವಾಯದ ಪ್ರತಿಕಾರರು ಕೆಲವನ್ನು ಹೊಸಗನ್ನಡಕ್ಕೆ ತಿರುಗಿಸಿರಬಹುದೆಂಬುದನ್ನು ಕವಿಚರಿತೆಯಲ್ಲಿ ಕೊಟ್ಟ ಪದ್ಯಗಳಿಗೆ ಹೋಲಿಸಿ ಹೇಳಬಹುದು. ಈ ಸಮಾಧಾನವು ಕೂಡ ಕೆಲವು ಪದ್ಯಗಳಿಗೆ ಸರಿಹೋಗದು. ಇದನ್ನೆಲ್ಲ ಲಕ್ಷಿಸಿದರೆ ಕಂತಿಯ ಕತೆ ಸುಳ್ಳಿನ ಕಂತೆಯೆ ಇರಬಹುದೇ ಎಂಬ ಸಂಶಯಕ್ಕೆ ಎಡೆಯಿದೆ. ಅವಳವೆಂಬ ಸಮಸ್ಯಾಪೂರ್ತಿಯ ಪದ್ಯಗಳಲ್ಲಿ ಚಮತ್ಕೃತಿಯಿದೆ, ಪದ್ಯರಚನೆಯ ಸೌಲಭ್ಯವಿದೆ. ಕವಿತ್ವದ ಅಭಿವ್ಯಕ್ತಿಗೆ ಅಲ್ಲಿ ಅವಕಾಶವೇ ಇಲ್ಲ. ಅಭಿನವಪಂಪನ ಸಮಸಾಮಯಿಕಳಾಗಿ ಅವಳಿದ್ದುದೇ ನಿಜವಿದ್ದರೆ ಕನ್ನಡ ಕವಯಿತ್ರಿ ಇಲ್ಲವೆ ಪದ್ಯಲೇಖಿಕೆಯರಲ್ಲಿ ಅವಳು ಮೊದಲಗಿತ್ತಿಯಾಗುತ್ತಾಳೆ. ಅವಳ ಅಸ್ತಿತ್ವದ ಬಗ್ಗೆ ನಿರ್ಣಯಾತ್ಮಕವಾಗಿ ಏನನ್ನೂ ಹೇಳುವಂತಿಲ್ಲ. ಆದರೂ ೧೬ನೆಯ ಶತಕಕ್ಕೆ ಮುಂಚೆ ಬಾಹುಬಲಿಗೆ ಪೂರ್ವಿಕಳಾಗಿ ಕಂತಿ(ಕೆ) ಎಂಬ ಕವಯಿತ್ರಿ ಆಗಿಹೋಗಿರಬಹುದು. ಅಭಿನವಪಂಪ, ದೋರರಾಯ ಇವರ ಹೆಸರಿನ ಸಂಬಂಧ ಚಾರಿತ್ರಿಕ ಸತ್ಯವಾಗದೆ ಹೋಗಿದ್ದರೂ ಅವಳ ಅಸ್ತಿತ್ವವೇ ಕಲ್ಪಿತವಾದುದೆನ್ನುವುದು ಸಮರ್ಪಕವಾಗಲಿಕ್ಕಿಲ್ಲ. ಎಂಥ ದಂತಕಥೆಗಳಲ್ಲಿಯೂ ಒಮ್ಮೊಮ್ಮೆ ಸತ್ಯಾಂಶವಿರುತ್ತದೆ ಎಂಬುದನ್ನು ಕೂಲಂಕಷವಾದ ಶೋಧನೆಗಳು ಸಿದ್ಧಮಾಡಿವೆ.

ನಯಸೇನ

೧೨ನೆಯ ಶ.ದ ಮೊದಲ ಭಾಗದಲ್ಲಿ ನಯಸೇನನೆಂಬ ವ್ಯಕ್ತಿವಿಶೇಷವುಳ್ಳ ಕವಿ ಆಗಿಹೋದನು. ನರೇಂದ್ರಸೇನಮುನಿಪನನ್ನು ತನ್ನ ಗುರು ಮಾಡಿಕೊಂಡು ಮುಳ-ಗುಂದದಲ್ಲಿದ್ದು ಧರ್ಮಚಿಂತನೆ, ಮತಪ್ರಸಾರ ಇದಕ್ಕಾಗಿ ಆಯುಷ್ಯವನ್ನು ಮೀಸ-ಲಾಗಿಸಿದ ಪಂಡಿತಮುನಿ ಇವನು. 'ರಾಜಪೂಜ್ಯಂ' ಎಂಬುದರಿಂದ ರಾಜಮರ್ಯಾದೆ ಇವನಿಗೆ ದೊರೆತಿರಬೇಕು. ಅಲ್ಲದೆ ತುಂಬ ಜನಪ್ರಿಯನೂ ಆಗಿರಬೇಕು. ಇವನ ಗ್ರಂಥವಾದ 'ಧರ್ಮಾಮೃತ'ವು ಜೈನಮತಾಚಾರದಲ್ಲಿ ೧೪ ಮಹಾರತ್ನಗಳೆಂದು ಹೆಸರಾದ ಗುಣವ್ರತಗಳಲ್ಲಿ ಒಂದೊಂದನ್ನು ಆಚರಿಸಿ ಸದ್ಗತಿಯನ್ನೈದಿದ ೧೪ ಮಹಾ-ಪುರುಷರ ಕಥೆಗಳನ್ನು ೧೪ ಆಶ್ವಾಸಗಳಲ್ಲಿ ನಿರೂಪಿಸಿದೆ. ಕನ್ನಡಚಂಪು ವಿಷಯ,

---

[1] ಎ. ವೆಂಕಟಸುಬ್ಬಯ್ಯ: ಕೆಲವು ಕನ್ನಡಕವಿಗಳ ಕಾಲಜೀವನವಿಚಾರ, ಪು. ೨೪೯–೨೫೯.

ವಿನ್ಯಾಸ ಎರಡರಲ್ಲಿ ಜನಸಂಮುಖವೂ ದೇಸಿಸಂಪನ್ನವೂ ಆದದ್ದು ಈ ಗ್ರಂಥದಲ್ಲಿದೆ. ಶಾಂತಿನಾಥನ 'ಸುಕುಮಾರಚರಿತೆ' ಮೊದಲುಮಾಡಿದ ಧೋರಣೆ ಇಲ್ಲಿ ಮುಂದುವರಿದಿದೆ, ತನ್ನೊಂದು ವಿಶೇಷತೆಯಿಂದ ಕೂಡಿದೆ. ಜೈನಪುರಾಣಗಳು ಈವರೆಗೆ ತೀರ್ಥಂಕರ–ಚಕ್ರವರ್ತಿಗಳಂಥ ಮಹಾಪುರುಷರ ಚರಿತ್ರೆಗಳನ್ನು ಪ್ರೌಢಮಹಾಕಾವ್ಯದ ನೆಲೆಗೇರಿಸಿ ನಿರವಿಸಿದುವು. ಆದರಿಂದ ಜನತೆಯಲ್ಲಿ ಅವುಗಳ ಮೂಲಕ ಧರ್ಮಪ್ರಸಾರವು ಕಷ್ಟಸಾಧ್ಯವಾಯಿತು. ವೈದಿಕಪುರಾಣಗಳಲ್ಲಿದ್ದ ಸುಲಭತೆಯ ದೃಷ್ಟಿಯನ್ನು ಅನುಸರಿಸುವುದು ಆ ಕಾಲದಲ್ಲಿ ಅಗತ್ಯವಾಗಿತ್ತು. ಜನತೆಗಾಗಿ ಬರೆದ ಮೊದಲನೆಯ ಜೈನಪುರಾಣ ಎಂಬ ಬಿರುದು 'ಧರ್ಮಾಮೃತ'ಕ್ಕೆ ಸಲ್ಲುತ್ತದೆ. ಒಂದೊಂದು ಆಶ್ವಾಸದಲ್ಲಿ ಒಂದೊಂದು ಕತೆಯಿದ್ದ ಕಾರಣ ಇದರಲ್ಲಿ ವಸ್ತುವಿನ ಐಕ್ಯವಿಲ್ಲ. ಇದಕ್ಕೆ ಒಂದು ಕಥಾಸಂಗ್ರಹದ ಸ್ವರೂಪವಿರುತ್ತದೆ. ಜಿನಮತದಲ್ಲಿ ಎಷ್ಟು ಸಾರವೋ ಅದೆಲ್ಲವೂ ಈ ಕೃತಿಯಲ್ಲಿ '**ಲೇಸಾಗಿ** ತೋರ್ಪುದು' ಎಂದೂ 'ಪೇಳ್ದೆ ಪ್ರ**ಜಾಯ್ತೆ** ಧರ್ಮಾಮೃತಮಂ' ಎಂದೂ ನಯಸೇನ ಹೇಳಿದ್ದರಲ್ಲಿ ಅವನ ಕಲಾದೃಷ್ಟಿ ಹಾಗೂ ಜನತಾದೃಷ್ಟಿ ಎರಡೂ ಸೂಚಿತವಾಗಿವೆ. ಪರಂಪರೆಯಿಂದ ಬಂದ ಕತೆಗಳನ್ನು ಅವನು ಹಿಗ್ಗಲಿಸಿ ಸೊಗಸಾಗಿ ಹೇಳಲು ಹೆಣಗಿದ್ದಾನೆ. ಸಂನಿವೇಶ, ಪಾತ್ರ, ಶೈಲಿ ಇವುಗಳಲ್ಲಿ ತನ್ನೆರಡೂ ದೃಷ್ಟಿಗಳನ್ನು ಅರಳಿಸಿದ್ದಾನೆ. ಜಾನಪದ ಕತೆಗಾರನ ಕಥನಕೌಶಲ್ಯ, ವಿಡಂಬಕಹಾಸ್ಯ, ಜನಜೀವನಪ್ರಜ್ಞೆ ಇವನ್ನು ಅವನ ಕಥೆಗಳು ಎತ್ತಿತೋರುತ್ತವೆ. ಆದರೂ ಗ್ರಂಥ ಮುಖ್ಯವಾಗಿ **ಧರ್ಮಾ**ಮೃತ, ಅಂತೇ ಅನೇಕ ಕಡೆಗೆ ಇಲ್ಲಿಯ ಕಥನಕಲೆಯ ಮೇಲೆ ಮತೀಯತೆಯ, ಧರ್ಮಪ್ರಚಾರದ ಅಚ್ಚು ಮೂಡಿದೆ, ಸ್ವಾಭಾವಿಕತೆ ಕಡಿಮೆಯಾಗಿದೆ. 'ಜೈನಪುರಾಣಗಳ ವರ್ಣನಾವಿಪುಲವಾದ ಮಂದಗತಿಯ ಸಂವಿಧಾನದ ಬದಲು ಸವೇಗವಾದ ಸುಲಭಕಥನವು ಧರ್ಮಾಮೃತದಲ್ಲಿದೆ. ಇಷ್ಟೇ, ವರ್ಣನೆಗಳ ಸ್ಥಳದಲ್ಲಿ ಒಮ್ಮೊಮ್ಮೆ ಹೋಲಿಕೆಗಳ ಹೊಳೆ ಎಲ್ಲೆಮೀರಿಯೂ ಹರಿಯುತ್ತದೆ, ಕಥಾಗತಿಯನ್ನು ತಡೆಯುತ್ತದೆ.'[1] ಇದೇ ಹೇಳಿದಂತೆ ನಯಸೇನನ ಬರೆವಣಿಗೆಯ ಗುಣವಿಶೇಷವೆಂದರೆ ಕಥೆಯನ್ನು ಹೇಳುಹೇಳುತ್ತಲೆ ರಾಶಿರಾಶಿಯಾಗಿ ಅವನು ತೂರುವ ಸಾದೃಶ್ಯಮಾಲಿಕೆ. 'ಈ ದೇಶ್ಯಚಂಪುವಿನ ಗದ್ಯಪದ್ಯದಲ್ಲಿ ಸಂದಿಗೊಂದಿಯಲ್ಲಿ ಸುಳಿದಾಡುತ್ತಿರುವುದು ಇದೇ ಅಲಂಕಾರ, ಇದೇ ರಸರೀತಿ. ಇಲ್ಲಿ ಜಾನಪದಮನಸ್ಸನ್ನು ಸೆರೆಹಿಡಿಯುವ ನಿತ್ಯಾನುಭವದ ಹೋಲಿಕೆಗಳು ಜನದ ಬಳಕೆಯ ಮಾತಿನಲ್ಲಿ ಸೂರೆಯಾಗಿವೆ.'[2] 'ಈ ಸರಪಣಿಯಂತೆ ಸಾಲುಹಿಡಿದು ಬರುವ ಉಪಮೆಯಲ್ಲಿ ಕೆಲವು ಸಲ ಔಚಿತ್ಯವಿದೆ, ರುಚಿಯಿದೆ, ನಗೆಯಿದೆ. ಆದರೆ ಕೆಲವು ಸಲ ಪ್ರಮಾಣಮೀರಿದ ದೀರ್ಘತೆ, ವಾಚಾಲತೆಗಳೂ ತೋರಿವೆ. ಕಾವ್ಯ-

---

1 ರಂ. ಶ್ರೀ. ಮುಗಳಿ: ನಯಸೇನನ ಧರ್ಮಾಮೃತ (ಜೀವನ, ೨–೫, ಪು. ೩೧೦)

2 ಅದೇ, ಪು. ೩೧೧

ಕಲ್ಪನೆಯ ಅಪೂರ್ವ ಉಜ್ವಲತೆಯಂತೂ ತೀರ ಕಡಿಮೆ.' 'ಹೀಗೆ ನಯಸೇನನ ವಿಶಿಷ್ಟವಾದ ಸಾದೃಶ್ಯಮಾಲಿಕೆ ಅವನ ಕಾವ್ಯಶಕ್ತಿಯ ಪರಿಮಿತವನ್ನು ತೋರಿಸಿದರೂ ಅದರಲ್ಲಿ ವ್ಯಕ್ತವಾದ ಅವನ ಜನಜೀವನದ ಆಳವಾದ ಅರಿವು ಒಂದೆಸಮನಾಗಿದೆ. ನಯಸೇನನ ಕಥೆಗಳಲ್ಲಿ ನಮ್ಮನ್ನು ಮೋಹಿಸುವ ಪ್ರಬಲವಾದ ಅಂಶವೆಂದರೆ ಅಲ್ಲಿ ದೊರೆಯುವ ಜನಜೀವನದ ಚಿತ್ರ.'[1] ಮುನಿಯಾದವನ ಈ ಲೋಕವ್ಯವಹಾರಜ್ಞಾನ ಅಚ್ಚರಿಯ ಸಂಗತಿಯೇ ಸರಿ.

'ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ' ಇದು ನಯಸೇನನ ಶೈಲಿಯ ಆದರ್ಶ. 'ಮಿಸುಕದ ಸಕ್ಕದ'ವನ್ನು ಇಕ್ಕುವವರನ್ನು ಕಡೆಗಣಿಸಿ 'ಸುದ್ದಗನ್ನಡ'ದಲ್ಲಿ ಬರೆಯಬೇಕೆಂದು ಅವನು ಸೂಚಿಸಿದ್ದಾನೆ. ಮಾರ್ಗದ ಸಂಸ್ಕಾರಹೊಂದಿದ ದೇಸಿಯ ಸಂಪತ್ತಿ ಹಾಗೂ ಸಂಸ್ಕೃತಬಹಿಷ್ಕಾರವಿಲ್ಲದಿದ್ದರೂ ಬಹುಮಟ್ಟಿಗೆ ಶುದ್ಧವಾದ ಕನ್ನಡ ಇವನ್ನು ಅವನ ಗ್ರಂಥದಲ್ಲಿ ಅವನ ಆದರ್ಶಕ್ಕನುಗುಣವಾಗಿ ಕಾಣುತ್ತೇವೆ. ಹೀಗಿದ್ದರೂ ಹಲಕೆಲವು ಪದ್ಯಗಳಲ್ಲಿ ಅವನು ಸಹ ಅನಾವಶ್ಯಕವಾಗಿ 'ಮಿಸುಕದ ಸಕ್ಕದ'ವನ್ನು ಬಳಸಿ ತನ್ನ ಆರೋಪಕ್ಕೆ ತಾನೇ ಗುರಿಯಾಗಿದ್ದಾನೆ. 'ಅವನ ಒಟ್ಟುಬರಹದಲ್ಲಿ ಅಚ್ಚಗನ್ನಡದ ಹೊಗರು ಹೆಚ್ಚಿದೆ ಎಂಬ ಬಗ್ಗೆ ಸಂಶಯವಿಲ್ಲ.'[2] ಪಂಪಯುಗದಲ್ಲಿ ಪಂಡಿತರಿಗಾಗಿ ಮಾತ್ರ ಸಾಹಿತ್ಯ ನಿರ್ಮಾಣವಾಯಿತು ಎಂಬುದರ ಸತ್ಯಾಸತ್ಯತೆ ಇಲ್ಲಿ ಪ್ರಸ್ತುತವಲ್ಲ. ಅದು ಸತ್ಯವಿದ್ದರೂ ನಯಸೇನನು ಇದಕ್ಕೆ ಅಪವಾದವಾಗಿದ್ದಾನೆ ಎಂಬುವನ್ನು ಗಮನಿಸಬೇಕು. 'ಜನತೆಯ ಕವಿಗಳೆಂದು ಹೆಸರಾದ ಕನ್ನಡ ಕಲೋಪಾಸಕರಲ್ಲಿ ನಯಸೇನನು ತೀರ ಎತ್ತರದಲ್ಲಿ ಅಲ್ಲದಿದ್ದರೂ ಎದ್ದು ಕಾಣುವ ನೆಲೆಯಲ್ಲಿ ಕೂಡಬಲ್ಲ 'ನಿರುಪಮಸಹಜಕವಿ'ಯಾಗಿದ್ದಾನೆ.'[3]

ನಯಸೇನನಿಗೆ ಹೆಚ್ಚುಕಡಿಮೆ ಸಮಕಾಲೀನರಾಗಿ ಇದ್ದವರೆಂದರೆ ಕನ್ನಡಕ್ಕೆ ಮೊದಲನೆಯ ಸ್ತುತಿಪರವಾದ ಅಷ್ಟಕವನ್ನು ನೀಡಿದ 'ಚಂದ್ರನಾಥಾಷ್ಟಕ'ದ ಮೌಕ್ತಿಕಕವಿ (ಸು. ೧೧೨೫), ಮೊದಲನೆಯ ಗೋವೈದ್ಯಗ್ರಂಥವನ್ನು ಬರೆದ ಕೀರ್ತಿವರ್ಮನೆಂಬ ದೊರೆ (ಸು. ೧೧೦೦) ಇವರು. ಈ ಕಾಲದಲ್ಲಿ ಮತೀಯ ಘರ್ಷಣೆ ಎಷ್ಟಾಗಿತ್ತೆಂಬುದನ್ನು ಅರಿಯುವುದಕ್ಕೆ ಮೌಕ್ತಿಕಕವಿ ಚಂದ್ರನಾಥನನ್ನು ಕುರಿತು ಮಾಡಿದ ಭಕ್ತಿಪರವಾದ ಪ್ರಾರ್ಥನೆಯಲ್ಲಿಯೂ ಬಂದಿರುವ 'ಕುಮತೋಗ್ರಗ್ರೀಷ್ಮತಪ್ತಂಗಿದು ಹಿಮಕರಬಿಂಬಂ........ಕುಶ್ರುತಾಗಮದುರ್ಮಂತ್ರಂಗೆ ನಿನ್ನಾಕೃತಿಯಿದಮೃತಬೀಜಾಂಕುರಂ ಚಂದ್ರನಾಥಾ ॥' ಎಂಬ ಪದ್ಯವನ್ನು ಓದಬೇಕು.

---

1 ಅದೇ, ಪು. ೩೧೨

2 ,, ಪು. ೩೧೫

3 ,, ಪು. ೩೧೬

ಬ್ರಹ್ಮಶಿವ

೧೨ನೆಯ ಶ.ದ ಮಧ್ಯದಲ್ಲಿದ್ದಿರಬಹುದಾದ ಗಣ್ಯಕವಿ ಬ್ರಹ್ಮಶಿವ ಎಂಬವನು. ಚಾಲುಕ್ಯತ್ರೈಲೋಕ್ಯಮಲ್ಲ ಸುತಕೀರ್ತಿವರ್ಮನನ್ನು ಇವನು ಸ್ತುತಿಸಿದ ಕಾರಣ ಇವನ ಕಾಲ ಸು. ೧೧೦೦ ಎಂದು ಕವಿಚರಿತಕಾರರು ತೀರ್ಮಾನಿಸಿದ್ದಾರೆ. ಆದರೆ ೧೧೬೫ರವನಾದ 'ಅಗ್ಗಳದೇವನ ಕೆಳೆಯಂ' ಎಂದಿವನು ಹೇಳಿಕೊಂಡಿದ್ದರಿಂದ ೧೨ನೆಯ ಶ.ದ ಉತ್ತರಾರ್ಧದವನೆಂದು ಇನ್ನೊಂದು ಅಭಿಪ್ರಾಯವಿದೆ.[1] ಇದಕ್ಕೆ ಪುಷ್ಟಿಕೊಡುವ ಬೇರೆ ಪ್ರಮಾಣಗಳೂ ಇರುತ್ತವೆ. ನಮಗೆ ತೋರುವ ಮಟ್ಟಿಗೆ ಎರಡನ್ನೂ ಮೇಳವಿಸಿ ೧೨ನೆಯ ಶ.ದ ಮಧ್ಯವೇ ಇವನ ಆಯುಷ್ಯದ ಮುಖ್ಯಭಾಗ-ವೆನ್ನಬಹುದು. ಇವನು ಲಿಂಗಿಗಳ ಉಲ್ಲೇಖಮಾಡಿದ್ದಾನೆ, ಮಾಹೇಶ್ವರಧರ್ಮದಲ್ಲಿ ಒಳ್ಪುಗಾಣದೆ ಜಿನಧರ್ಮವನ್ನು ಮರಳಿ ಸ್ವೀಕರಿಸಿದೆನೆನ್ನುತ್ತಾನೆ. ಇದರಿಂದ ವೀರಶೈವಮತೋದಯದ ತರುವಾಯದವನು ಎಂದು ತೋರಬಹುದು. ಆದರೆ ವೀರಶೈವ ಎಂಬ ಪದವೆಲ್ಲಿಯೂ ಬಂದಿಲ್ಲ, ಅದಕ್ಕೆ ವಿಶಿಷ್ಟವಾದ ಸ್ಪಷ್ಟ ಉಲ್ಲೇಖಗಳೂ ಇಲ್ಲ. ವೀರಶೈವಕ್ಕೆ ಪೂರ್ವಭಾವಿಯಾಗಿ ಇದ್ದ ಶೈವಮತವನ್ನು ಅವನು ಅವಲಂಬಿಸಿ ಆಮೇಲೆ ಜೈನನಾಗಿರಬಹುದು. ತೀವ್ರಪ್ರಚಾರ, ಮತಾಂತರ ಇದು ೧೨ನೆಯ ಶ.ದ ಪೂರ್ವಾರ್ಧದಲ್ಲಿ ನಡೆದಿತ್ತೆನ್ನಲು ಆಧಾರಗಳಿವೆ. ಮತಾಂತರಹೊಂದಿದವನ ನಿಷ್ಠೆ ಅಧಿಕವೆಂದು ಹೇಳುತ್ತಾರೆ. ಬ್ರಹ್ಮಶಿವನು ಮತಾಂತರದಿಂದ ಮರಳಿ ಸ್ವಮತಕ್ಕೆ ಪರಿವರ್ತನವಾದಕಾರಣ ಅವನ ನಿಷ್ಠೆ ಅಧಿಕತರವಾಗಿದೆ, ಜೊತೆಗೆ ಅನ್ಯಮತ-ದೂಷಣೆ ಅಧಿಕತಮವಾಗಿದೆ. ವೇದಸ್ಮೃತಿಪುರಾಣ ಹಾಗೂ ಶೈವಾದಿಮತತತ್ವ-ಸಂಪ್ರದಾಯ ಇವುಗಳ ಗಾಢ ಅಭ್ಯಾಸವನ್ನು ಮಾಡಿ ಅದರ ಅಸಾರತೆಯನ್ನು ಅವನು ಅರಿತಿದ್ದಾನೆ. ಅವನ ಸ್ವಮತನಿಷ್ಠೆ ಹಾಗೂ ಅನ್ಯಮತವಿಡಂಬನೆ ಇವು ಒಂದು ಬೌದ್ಧಿಕಭೂಮಿಕೆಯ ಮೇಲೆ ನಿಂತಿವೆ. ಕೇವಲ ಭಾವನೆಗಿಂತ ಬುದ್ಧಿಗೆ ಮನವರಿಕೆ-ಯಾಗಿ ಅವನು ಟೀಕೆಗೆ ಪ್ರವೃತ್ತನಾಗಿದ್ದಾನೆ. ಇದಕ್ಕೆ ನಿದರ್ಶನವಾಗಿ

'ಜಿನಮಾರ್ಗಂ ಬಿಡದೆ ಅನ್ಯಮಾರ್ಗಮಂ ಅದೇಂ ಪೇಟ್ ದೂಷಣಂಗೆಯ್ದು ದು- |
ರ್ಜನನಾದಂ ಕರಂ ಎನ್ಗೆ ಮೆಚ್ಚದವರ್ಗಳ್, ಮಧ್ಯಸ್ಥರಾರಯ್ಯೆ, ಪಾ- |
ವಿನ ಪಲ್ಲೊಳ್ ವಿಷಮುಂಟು, ಕಿಚ್ಚು ಸುಡುಗುಂ, ನಂಜು ಅಟ್ಕಿದು ಎಂಬಂತೆ ಪೇ- |
ಟ್ದನಿದಂ ವಸ್ತುವಿಚಾರಂ ಈತೆಱನಿದಂ ತ್ರೈಲೋಕ್ಯಚೂಡಾಮಣೀ ||'

ಈ ಪದ್ಯವನ್ನು ನೋಡಬೇಕು. ಇವನ ಗ್ರಂಥ 'ತ್ರೈಲೋಕ್ಯಚೂಡಾಮಣಿ' ಎಂಬ ಸ್ತೋತ್ರ ಹಾಗೂ 'ಸಮಯಪರೀಕ್ಷೆ' ಎಂಬ ತಾತ್ವಿಕ ಪದ್ಯಗ್ರಂಥ. 'ತ್ರೈಲೋಕ್ಯ-ಚೂಡಾಮಣಿ'ಯಲ್ಲಿ ೩೬ ವೃತ್ತಗಳಿವೆ, 'ಛತ್ತೀಸರತ್ನಮಾಲೆ' ಎಂಬ ಇನ್ನೊಂದು

1 ಎಚ್. ದೇವೀರಪ್ಪ : ಬ್ರಹ್ಮಶಿವನ ಕಾಲವಿಚಾರ (ಪ್ರ.ಕ., ೨೪–೪)

ಹೆಸರೂ ಇದನ್ನೇ ಸೂಚಿಸುತ್ತದೆ. ಜಿನಸ್ತುತಿ ಇದರ ಮುಖ್ಯ ಉದ್ದೇಶವಾದರೂ ಬಹುಭಾಗದಲ್ಲಿ ಅನ್ಯದೇವತಾನಿಂದೆ, ಅನ್ಯಮತವಿಡಂಬನೆ ಇವು ಪ್ರಮುಖವಾಗಿವೆ. ಒಂದು ದೃಷ್ಟಿಯಿಂದ ಕವಿಯ ಉದ್ದೇಶಕ್ಕೆ ಇದು ಅನುಗುಣವಾಗಿಯೇ ಇದೆ. ಭಕ್ತಿ-ಪ್ರಧಾನವಾದ ಕವನಕ್ಕಿಂತ ಇದು ವಿಡಂಬನಕಾವ್ಯದ ಸ್ವರೂಪ ಪಡೆದಿದೆ. 'ಮತಿ ನಿಮ್ಮಂ ನೆನೆಗುಂ ವಚಃಪ್ರತತಿ ನಿಮ್ಮಂ ಬಣ್ಣಿಕುಂ' ಈ ಮುಂತಾದ ತೀರ ಸ್ವಲ್ಪ ಪದ್ಯಗಳಲ್ಲಿ ಭಕ್ತಿಭಾವವು ವ್ಯಕ್ತವಾಗಿದೆ. ಉಳಿದದ್ದೆಲ್ಲ ಗದ್ಯದಲ್ಲಿರಬಹುದಾದ ವಾದ-ಸರಣಿ, ಪದ್ಯರೂಪತಾಳಿದಂಥ ವಿಡಂಬನೆ. ವಿತಂಡವಾದಿ ಮತ್ತು ವಿಡಂಬನಕಾರ ಎಂಬ ತನ್ನ ಸ್ವಭಾವಧರ್ಮವನ್ನು ಇಲ್ಲಿ ಬ್ರಹ್ಮಶಿವನು ತೋರಿಸಿದ್ದಾನೆ.

ಅವನ 'ಸಮಯಪರೀಕ್ಷೆ' ಕಂದವೃತ್ತಗಳ ಕೇವಲ ಪದ್ಯರೂಪವಾಗಿದ್ದು ೧೫ ಅಧಿಕಾರಗಳುಳ್ಳ ವಿಸ್ತಾರವಾದ ಗ್ರಂಥ. ಛಂದಸ್ಸಿನಲ್ಲಿ ಹೇಗೊ ಹಾಗೆ ವಿಷಯ ಮತ್ತು ನಿರೂಪಣೆಯಲ್ಲಿಯೂ ಇದು ಚಂಪೂಮಾರ್ಗದಿಂದ ಭಿನ್ನವಾಗಿದೆ. ಸುಸ್ಪಷ್ಟ ವಾಗಿ ಇದು ಮತಪ್ರಚಾರಕ ಗ್ರಂಥ. ಇತರ ಮತ, ಪುರಾಣಗಳಲ್ಲಿ ಹಾಗೂ ಲೋಕಾಚರಣೆಯಲ್ಲಿದ್ದ ದೋಷಗಳನ್ನು ತೋರಿಸಿ, ಜೈನಮತವೇ ಸರ್ವಶ್ರೇಷ್ಠವೆಂದು ಇದರಲ್ಲಿ ತೋರಲಾಗಿದೆ. ಗ್ರಂಥದಲ್ಲಿ ಕಥಾನಕವಿಲ್ಲ, ಪಾತ್ರಸೃಷ್ಟಿಯಿಲ್ಲ. ನವರಸವಿಲ್ಲ, ಅಷ್ಟಾದಶವರ್ಣನೆಯಿಲ್ಲ. ಕಥೆಯೆಲ್ಲ ಜೈನಮತದ್ದು, ಜನಸಾಮಾನ್ಯರೆ ಪಾತ್ರಗಳು. ವಿಡಂಬನೆಯಲ್ಲಿಯೇ ಇದರ ನವರಸ. ಅಪಹಾಸ್ಯವೇ ಇಲ್ಲಿಯ ಸ್ಥಾಯಿ. ಅನ್ಯ-ಮತಜನದ ಮೂಢನಂಬಿಕೆಗಳೇ ಅಷ್ಟಾದಶವರ್ಣನೆ. ಹೀಗೆ 'ಸಮಯಪರೀಕ್ಷೆ' ಕನ್ನಡಕ್ಕೆ ಅಪೂರ್ವವಾದ ತಾತ್ವಿಕವಿಡಂಬಕ ಕಾವ್ಯವಾಗಿದ್ದು ತನ್ನ ಮಿತಿಯಲ್ಲಿ ನೇರ-ವಾದ, ತತ್ಕಾಲೀನವಾದ ಜನಜೀವನಚಿತ್ರವನ್ನೂ ಒಳಗೊಂಡಿದೆ. ಇದರಲ್ಲಿಯ ವಿಷಯ ಗಳಾದ (೧) ಪರಮಾತ್ಮಸ್ವರೂಪ (೨) ಅನಾದ್ಯನಿಧನಜಿನಧರ್ಮವರ್ಣನ (೩) ಪರಮಾ-ಗಮವರ್ಣನ (೪) ಸಮ್ಯಕ್ತ್ವನಿರೂಪಣ (೫) ಪರಮಾರ್ಹತವ್ರತವ್ಯಾವರ್ಣನ (೬) ಶೌಚವ್ರತವರ್ಣನ (೭) ತಪೋಧನಸ್ವರೂಪವರ್ಣನ (೮) ಆಪ್ತಸ್ವರೂಪವರ್ಣನ (೯) **ದೇವತಾಮೂಢಸ್ವರೂಪ** (೧೦) ಆಗಮಸ್ವರೂಪವರ್ಣನ (೧೧) **ವೈದಿಕ-ವಿಡಂಬನ** (೧೨) **ಲೋಕಮೂಢಸ್ವರೂಪ** (೧೩) **ಕುದೃಷ್ಟಿಲಕ್ಷಣ** (೧೪) **ಕುಲಿಂಗಿಕುಚಾರಿತ್ರನಿರೂಪಣ** (೧೫) ಜೈನಧರ್ಮವ್ಯಾವರ್ಣನ ಇವನ್ನು ಲಕ್ಷಿಸಿದರೆ ಮೇಲೆ ನಿರ್ದೇಶಿಸಿದ ಇದರ ಸ್ವರೂಪವನ್ನು ಅರಿತುಕೊಳ್ಳಬಹುದು. ಇದರ ವಿಡಂಬನೆ ಹಾಗೂ ಟೀಕೆ ಕಟುವಾಗಿವೆ, ಮತೀಯ ಪಕ್ಷಪಾತ ಹಾಗೂ ಅಸಹನೆಯು ಗುರುತಾಗಿವೆ. ಆದರೂ ಅವಕ್ಕೆ ಹಲವು ಸಲ ಹಗುರಾದ ನಗೆಯ ಲೇಪವಿದೆ, ಅದರಿಂದ ಅವು ಸಹ್ಯವಾಗುತ್ತವೆ. ಇದಕ್ಕೆ ಉದಾಹರಣೆಯಾಗಿ 'ತನ್ನ ಒಡಲಿನ ಅರ್ಧಭಾಗವನ್ನು ಶಂಭು ಕಾಂತೆಗೆ ಕೊಟ್ಟನು, ಶಂಭುಗೆ ತನ್ನೊಡಲಿನ ಅರ್ಧವನ್ನು ಪಾರ್ವತಿ ಕೊಟ್ಟಳು. ಮಿಕ್ಕ ಎರಡು ಅರ್ಧಗಳನ್ನು ಅವರು ಯಾರಿಗೆ ಕೊಟ್ಟರು ಹೇಳಿ!' ಎಂಬ ಪದ್ಯಭಾವವನ್ನು ನೋಡಬೇಕು. ಕನ್ನಡಕಾವ್ಯಗಳಲ್ಲಿ

ಜನಜೀವನದ ಚಿತ್ರ ನೇರವಾಗಿ ದೊರೆಯುವುದು ವಿರಳ. ಆದರೆ ಈ ಗ್ರಂಥ ವಿಡಂಬನಾತ್ಮಕ ಭಾಗದಲ್ಲಿ ಜನರ ಮೂಢನಂಬಿಕೆಗಳ ಮತ್ತು ಆಚಾರಪದ್ಧತಿಗ ವರ್ಣನೆ ಬಂದಿದೆ. ಉದಾಹರಣೆಗೆ 'ಬೆನಕನಿಗೆ ಇಕ್ಕಿದರೆ, ಭೂತಸಿಕಾಯ ಒಯ್ದು ಬಲಿಯನ್ನು ಸೂಸಿದರೆ, ಮನೆದೈವಕ್ಕೆ ಇಕ್ಕಿದರೆ ಬೆಳಸು ಘನವಾಗದು ನಿಯತವಾಗಿ ಅದು ಪುಣ್ಯವಶವಾದುದು. ಮಾರಜ್ಜಿ, ಮಸಣವಾಸಿನಿ, ಬೀ ಮೈಲಾರನೆಂಬವರ ನೋಂಪಿಗಳಲ್ಲಿ ಹಾರುವರನ್ನೂ ಹೊಲೆಯರನ್ನೂ ಒಂದೇ ಸಮ ನಾಗಿ ಮುಟ್ಟಬಹುದೆಂದು ಹಾರುವರು ಹೇಳುತ್ತಾರೆ. ಲಿಂಗಕ್ಕೆ ಎರಗುವುದು ಹಾರುವನಿಗೆ ಎಲೆಯೆರಡು, ಅಡಕೆಯೊಂದನು ಈವುದು ಇದೇ ಧರ್ಮ; ವ್ರತಗುಣ ಚಾರಿತ್ರಗಳು ಒಂದಿನಿಸು ಇಲ್ಲ ಶೈವರಿಗೆಲ್ಲ' ಹೀಗೆ ಟೀಕೆಮಾಡಿ ಜಿನಧರ್ಮ ಶ್ರೇಷ್ಠತೆಯನ್ನು ವರ್ಣಿಸುತ್ತ 'ಉತ್ತಮಚಾರಿತ್ರಮೆಲ್ಲಿತಲ್ಲಿಯೆ ಧರ್ಮಂ' ಎಂ ಸನಾತನಸತ್ಯವನ್ನು ಬ್ರಹ್ಮಶಿವನು ಸಾರಿದ್ದಾನೆ. ಅವನ ಈ ಗ್ರಂಥ ವೈಶಿಷ್ಟ್ಯ ಪೂರ್ಣವಾಗಿದೆ, ಸಾಹಿತ್ಯದೃಷ್ಟಿಯಿಂದ ಆದ್ಯವಿಡಂಬನಕಾವ್ಯವೆಂದು ಸ್ತುತ್ಯವಾಗಿದೆ ನಯಸೇನನಲ್ಲಿದ್ದ ವಿಡಂಬನಶಕ್ತಿ ಬ್ರಹ್ಮಶಿವನಲ್ಲಿ ಇನ್ನೂ ಹರಿತಾಗಿ ತೋರಿದೆ ಆದರೆ '**ಮಹಾಕವಿ** ಬ್ರಹ್ಮಶಿವ' ಎಂದವನು ಮಾಡಿಕೊಂಡ ಆತ್ಮಪ್ರಶಂಸೆ ಮಾತ್ರ ಗಂಭೀರವಾಗಿದ್ದರೆ ಅದು ವಿಡಂಬನೆಗೆ ವಿಷಯವಾಗಬಹುದಾಗಿದೆ! ಮಹಾಕ ಇಷ್ಟುಮಟ್ಟಿಗೆ ಪಕ್ಷಪಾತಿಯೂ ಪ್ರಚಾರಕನೂ ಆದರೆ ಅವನು ಸಮಗ್ರಜೀವನ ದೃಷ್ಟಿಯಿಂದ ದೂರವಾಗುತ್ತಾನೆ ಎಂಬುದನ್ನು ನೆನೆಯಬೇಕು.

೧೨ನೆಯ ಶ.ದ ಪೂರ್ವಾರ್ಧದಲ್ಲಿದ್ದ ಇನ್ನೊಬ್ಬ ಕವಿ ಕರ್ಣಪಾರ್ಯ. ಈ ಹೆಸರಿ ಕವಿಗಳು ಒಬ್ಬರಿಗಿಂತ ಹೆಚ್ಚಿದ್ದರೆಂದು ತಿಳಿಯುತ್ತದೆ. ಈ ಕರ್ಣಪಾರ್ಯನಿಂ 'ನೇಮಿನಾಥಪುರಾಣ'ವನ್ನು ಶಿಲಾಹಾರ ವಿಜಯಾದಿತ್ಯರಾಜನ ಮಂತ್ರಿ ಲಕ್ಷ್ಮ(ಣ)ನ ಬರೆಯಿಸಿದನು. 'ನೇಮಿನಾಥಪುರಾಣ'ವು ಹರಿವಂಶ-ಕುರುವಂಶ-ನೇಮಿತೀರ್ಥಂಕ ಚರಿತ್ರ ಈ ಮೂರರ ಮುಪ್ಪುರಿಯಾಗಿದೆ. ಕೃಷ್ಣ–ಕೌರವ–ಪಾಂಡವರು ಇವರ ಕಥೆ ಗಳೊಡನೆ ಒಬ್ಬ ತೀರ್ಥಂಕರನ ಪುರಾಣವು ಜೈನಸಂಪ್ರದಾಯದಲ್ಲಿ ಸೇರಿಕೊಂಡಿದೆ ಅದನ್ನೇ ಅನುಸರಿಸಿ ಜೈನಪುರಾಣದ ಚಂಪೂ ಪದ್ಧತಿಯ ದಾರಿಯಲ್ಲಿ ಕರ್ಣಪಾರ್ಯನ ಇದನ್ನು ರಚಿಸಿದ್ದಾನೆ. ಇದಕ್ಕೆ ಆಕರವಾಗಿ ಸಂಸ್ಕೃತದಲ್ಲಿ ಗುಣಭದ್ರನ 'ಉತ್ತ ಪುರಾಣ', ಕನ್ನಡದಲ್ಲಿ 'ಚಾವುಂಡರಾಯಪುರಾಣ' ಇಂಥವನ್ನು ಅವನು ಬಳಸಿರಬೇಕು ಇಲ್ಲಿಯ ಕಥಾನಕವು ಸಾಮಾನ್ಯವಾಗಿ ಮೂಲಾನುಸಾರಿಯಾದರೂ ವಿವರಗಳ ಮಾರ್ಪಾಟುಗಳಿವೆ. ಇವನ್ನು ನಮಗೆ ಗೊತ್ತಿರದ ಮೂಲವೊಂದರಿಂದ ಅವನ ಸ್ವೀಕರಿಸಿರಬಹುದು, ತಾನೇ ಸಹ ಮಾಡಿರಬಹುದು. ಜೈನಪುರಾಣದ ಎಲ್ಲಾ ಲಕ್ಷಣ ಗಳು ಉಂಟು, ಅದರಿಂದ ಕಾವ್ಯತ್ವಕ್ಕೆ ಸಮನಿಸುವ ಅವಲಕ್ಷಣವೂ ಉಂಟು. ಆದ ಕಥೆ ದೊಡ್ಡದಾಗಿದ್ದ ಕಾರಣ ಅದಕ್ಕೆ ವೇಗಬಂದಿದೆ, ವರ್ಣನೆಗೆ ಅವಕಾಶ ಕಡಿಮೆ ಯಾಗಿದೆ. ಇದು ಜೈನಪುರಾಣಗಳಲ್ಲಿ ಸಾಮಾನ್ಯವಾಗಿ ಕಾಣದೊರೆಯದ ಗುಣ

ವಿಶೇಷ. ಕಥೆಗೆ ವೇಗವಿದೆಯೆಂದು ಕತೆಗಾರಿಕೆ ಮೇಲ್ತರಗತಿಯದಲ್ಲ. ಅದಕ್ಕೆ ರುಚಿಯಿಲ್ಲ, ಕಲೆಯ ಕುಸುರಿಲ್ಲ. ಭಾಗವತ-ಭಾರತದಂಥ ಕಥೆಗಳನ್ನು ನಿರೂಪಿಸುವಾಗ ಅಲ್ಲಿಯ ವಿವಿಧ ವ್ಯಕ್ತಿಗಳ ಜೀವಂತ, ಉಜ್ವಲ ಚಿತ್ರವಿಲ್ಲ. ಶೈಲಿಯ ದೃಷ್ಟಿಯಿಂದ ಶಾಂತಿನಾಥ, ನಯಸೇನ ಮುಂತಾದವರಲ್ಲಿ ಕಂಡು ಬಂದ ಸರಳಚಂಪುವಿನ ಮುನ್ನಡೆ ಇದೆ. ಆದರೆ ಸರಣಿ ಒಂದೆಸನುನಾಗಿಲ್ಲ. ಒಮ್ಮೆ ಕೃತಕ ಪ್ರೌಢಿ, ಇನ್ನೊಮ್ಮೆ ಸಪ್ಪೆಯಾದ ಸರಳತೆ ತೋರಿವೆ. ಒಟ್ಟಿನಲ್ಲಿ 'ನೇಮಿನಾಥಪುರಾಣ'ವು ಜೈನಪುರಾಣದ ಹಾಗೂ ಪ್ರೌಢಕಾವ್ಯದ ಸಾಂಪ್ರದಾಯಿಕ ಲಕ್ಷಣಗಳನ್ನು ಬಹುಮಟ್ಟಿಗೆ ಒಳಗೊಂಡಿದ್ದರೂ ಗುಣದಲ್ಲಿ ಸಾಧಾರಣ ಕಾವ್ಯವೆಂದು ಹೇಳಬೇಕಾಗುತ್ತದೆ. ಈ ಯುಗದ ಹಿರಿಯ ಕವಿಗಳಾದ ಪಂಪ-ರನ್ನರಿಂದ ಸ್ಫೂರ್ತಿಹೊಂದಿಯೂ ಅವರ ಯೋಗ್ಯತೆಯಿಲ್ಲದೆ ಕರ್ಣಪಾರ್ಯನು ತನ್ನ ಶಕ್ತಿಗನುಸಾರವಾದ ಸಿದ್ಧಿಯನ್ನು ಪಡೆದಿದ್ದಾನೆ. ಆದರೆ ಅವರು ಹಾಕಿಕೊಟ್ಟ ದಾರಿಯಲ್ಲಿ ಅತ್ಯಂತ ಭಕ್ತಿಯಿಂದ ಅಡಿಯಿಟ್ಟ ಸಾಧಾರಣಕವಿ ಹೇಗೆ ಬಾಹ್ಯಾಂಗದಲ್ಲಿ ಒಂದು ತಕ್ಕಮಟ್ಟಿನ ಸಂಸ್ಕಾರವುಳ್ಳ ಕೃತಿಯನ್ನು ರಚಿಸಬಹುದು ಎಂಬುದಕ್ಕೆ ಈ 'ನೇಮಿನಾಥಪುರಾಣ'ವು ನಿದರ್ಶನವಾಗಿದೆ.

೧೨ನೆಯ ಶ.ದ ಮಧ್ಯದಿಂದ ಉತ್ತರಾರ್ಧದಲ್ಲಿಯೂ ಬಹುಕಾಲ ಬಾಳಿದ ಕವಿ-ಶಾಸ್ತ್ರಕಾರನೆಂದರೆ ೨ನೆಯ ನಾಗವರ್ಮನು. ಚಾಲುಕ್ಯರಾಜನಲ್ಲಿ ಕಟಕೋಪಾಧ್ಯಾಯನೂ ಜನ್ನಕವಿಗೆ ಉಪಾಧ್ಯಾಯನೂ ಆಗಿದ್ದನೆಂದು ಇವನ ಖ್ಯಾತಿ. ಕನ್ನಡಕಾವ್ಯಾಭ್ಯಾಸಂಗಕ್ಕೆ ಸಹಾಯಕವಾದ ವ್ಯಾಕರಣ, ಅಲಂಕಾರ, ಕೋಶ, ಛಂದಸ್ಸು ಇವಕ್ಕೆ ಸಂಬಂಧಿಸಿದ ಶಬ್ದಸ್ಮೃತಿ, ಭಾಷಾಭೂಷಣ, ಕಾವ್ಯಾವಲೋಕನ, ವಸ್ತುಕೋಶ, ಛಂದೋವಿಚಿತಿ (?) ಗ್ರಂಥಗಳನ್ನು ಬರೆದಿದ್ದಾನೆ. ವ್ಯುತ್ಪತ್ತಿಸಾಧಕವಾದ ಸಮಗ್ರ ಗ್ರಂಥಗಳನ್ನು ಕನ್ನಡಕ್ಕೆ ಒದವಿಸಿದ ಅಪೂರ್ವ ಶ್ರೇಯಸ್ಸು ಇವನಿಗೆ ಸಲ್ಲುತ್ತದೆ. ಕವಿರಾಜಮಾರ್ಗಕಾರನು ಬರೀ ಅಲಂಕಾರಶಾಸ್ತ್ರಕ್ಕೆ, ೧ನೆಯ ನಾಗವರ್ಮನು ಬರೀ ಛಂದಸ್ಸಿಗೆ ಆದ್ಯರಾಗಿ ಹೋದರು. ಆದರೆ ಕಾವ್ಯಾಂಗಪರವಾದ ಸಮಗ್ರ ಗ್ರಂಥರಚನೆಗೆ, ವಿಶೇಷವಾಗಿ ವ್ಯಾಕರಣಶಾಸ್ತ್ರಕ್ಕೆ ೨ನೆಯ ನಾಗವರ್ಮನೇ ಮೊದಲಿಗನು. ಈ ಗ್ರಂಥಗಳಲ್ಲಿ ಶಾಸ್ತ್ರಪಾಂಡಿತ್ಯ, ಸಂಕಲನಕೌಶಲ್ಯ, ಪ್ರಯೋಗನಿಪುಣತೆಯ ಜೊತೆಗೆ ಒಂದು ಸೂಕ್ಷ್ಮವಾದ ರಸಗ್ರಹಣಶಕ್ತಿ, ಸಮನ್ವಯದೃಷ್ಟಿಗಳಿರುತ್ತವೆ. ಈ ನಾಗವರ್ಮನು ಅನುಕರಣಶೀಲನಾದ ಜಡಬುದ್ಧಿಯ ಪಂಡಿತನಾಗಿರದೆ ವಿವೇಚಕಶಕ್ತಿಯುಳ್ಳ ವಿದ್ವಾಂಸನೂ ವಿಮರ್ಶಕನೂ ಆಗಿದ್ದನು. ಜನ್ನನು ಇವನ ಹೆಸರನ್ನು 'ಜಿನೇಂದ್ರಪುರಾಣಕರ್ತೃ'ಗಳ ಜೊತೆಗೆ ಸೇರಿಸಿದ ಕಾರಣ ಇವನು ಒಂದು ಜಿನಪುರಾಣವನ್ನು ಬರೆದಿರಬೇಕು. ಇವನು ಕಾವ್ಯನಿರ್ಮಾಣಶಕ್ತಿಯುಳ್ಳವನಾಗಿರಬೇಕೆಂದು ಇವನ ಉಪಲಬ್ಧಗ್ರಂಥಗಳಿಂದ ಊಹಿಸಬಹುದಾದ್ದರಿಂದ ಜನ್ನನ ಹೇಳಿಕೆ ಯಥಾರ್ಥವಾಗಿರಬಹುದು.

ಪಂಪಯುಗದ ಚಾರಿತ್ರಿಕ ಸಮೀಕ್ಷೆಯನ್ನು ಮಾಡುತ್ತ ಹಲವು ಗ್ರಂಥಕಾರ ವಿಮರ್ಶೆಯನ್ನು ಈವರೆಗೆ ಮಾಡಿದ್ದಾಯಿತು. ಪಂಪಯುಗವೆಂಬ ಹೆಸರನ್ನು ಬಹು ಮಟ್ಟಿಗೆ ಸಾರ್ಥಕಗೊಳಿಸುವಂತೆ, ಆ ಮಹಾಕವಿ ಬೆಳಗಿಸಿದ ಪ್ರೌಢಚಂಪೂಕಾವ್ಯ ಪರಂಪರೆ ಈ ಯುಗದಲ್ಲಿ ಕುಡಿವರಿಯಿತು, ತರತರವಾಗಿ ಹೂಬಿಟ್ಟಿತು. ಲೌಕಿಕ ಧಾರ್ಮಿಕ ಎಂಬ ದ್ವಿವಿಧ ಕೃತಿರಚನೆಯೂ ಕೆಲವರಿಗೆ ಮೇಲ್ಪಂಕ್ತಿಯಾಯಿತು. ಅಲ್ಲದೆ ಪಂಪನ ಕಥಾವಸ್ತು, ಕಾವ್ಯಭಾವ, ದೇಸಿಮಾರ್ಗಗಳ ಸಂಗಮ, ಮುಗಿಲುಮುಟ್ಟಿದ ಪೆಂಪು ಇವುಗಳಿಂದ ಅನೇಕರು ತಂತಮ್ಮ ರೀತಿಯಲ್ಲಿ ಸ್ಫೂರ್ತಿಹೊಂದಿದರು. ಚಂಪೂ ಪದ್ಧತಿ ಜೈನಪುರಾಣದಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಶಾಂತಿರಸಪ್ರಧಾನವಾದ ಸ್ವರೂಪ ವನ್ನು ಪಡೆಯಿತು. ಅದರ ಪ್ರೌಢಿಮೆ ಬರಬರುತ್ತ ಸರಳಲಾಲಿತ್ಯಕ್ಕೆ ಇಳಿಯುತ್ತ ಜನಸಂಮುಖವಾಗತೊಡಗಿತು. ಈ ಯುಗವೆಲ್ಲ ಸಂಸ್ಕೃತಪ್ರಚುರ, ಚರ್ವಿತಚರ್ವಣ ವುಳ್ಳದು ಎಂಬ ಆರೋಪ ಸುಪ್ರಸಿದ್ಧವಾಗಿದೆ. ಮತಸಂಪ್ರದಾಯ, ಕವಿಸಮಯ ಇವುಗಳ ಸಂಕೋಲೆಗಳಿಂದ ಸಾಧಾರಣಕವಿಯಿಂದ ಮಹಾಕವಿಯವರೆಗೆ ಯಾರೂ ಮುಕ್ತರಾಗಲಿಲ್ಲವೆಂಬುದು ಒಟ್ಟಿನಲ್ಲಿ ದಿಟವೇ. ಆದರೂ ಸಹೃದಯರು ಈ ಯುಗ ದಲ್ಲಿಯ ವೈವಿಧ್ಯವನ್ನೂ ವಿಲಾಸವನ್ನೂ ಅರಿತು ಮೆಚ್ಚದೆ ಇರಲಾರರು. ಬರಲಿರುವ ಯುಗದಲ್ಲಿ ತೋರುವ ಸ್ವಾತಂತ್ರ್ಯ, ನವೀನ ಪ್ರಯೋಗಬುದ್ಧಿ, ಕ್ರಾಂತದೃಷ್ಟಿ ಇವುಗಳ ಬೀಜಗಳನ್ನು ಈ ಯುಗದಲ್ಲಿ ಕಾಣಬಹುದು.

ಬಸವಯುಗ

೧೩. ಈ ಯುಗದ ರೂಪರೇಷೆಗಳು

ಬಸವೇಶ್ವರನಿಂದ ಕುಮಾರವ್ಯಾಸನ ವರೆಗೆ ಅಂದರೆ ೧೨ನೆಯ ಶ.ದ ಮಧ್ಯದಿಂದ ೧೫ನೆಯ ಶ.ದ ವರೆಗೆ ಈ ಯುಗದ ಹರವಿದೆ. ಅನೇಕ ದೃಷ್ಟಿಯಿಂದ ಈ ಯುಗಕ್ಕೆ ವೈವಿಧ್ಯವಿದೆ, ವೈಶಿಷ್ಟ್ಯವಿದೆ. ಈವರೆಗೆ ಜೀವನ ಮತ್ತು ಸಾಹಿತ್ಯಗಳು ಹೆಚ್ಚಾಗಿ ಪರಂಪರಾಗತವಾಗಿದ್ದುವು, ರೂಢಿ ಎಂಬ ಸ್ಥಾಯಿಗೆ ವ್ಯತ್ಯಾಸವು ಸಂಚಾರಿಯಾಗಿತ್ತು. ಈ ಯುಗದಲ್ಲಿ ವ್ಯತ್ಯಾಸವೆಂಬ ಸ್ಥಾಯಿಗೆ ರೂಢಿ ಸಂಚಾರಿಯಾದಂತಾಯಿತು. ಧಾರ್ಮಿಕ-ಸಾಮಾಜಿಕ ಜೀವನದಲ್ಲಿ ಮೂಲಭೂತವಾದ ವ್ಯತ್ಯಾಸಗಳು, ಅದಕ್ಕೆ ವಿರೋಧಕವಾದ ಪ್ರತಿಕ್ರಿಯೆಗಳು, ಸಂಘರ್ಷ-ಸಾಮರಸ್ಯಗಳು ತಲೆದೋರಿ ಕನ್ನಡ ಸಾಹಿತ್ಯದ ಮೇಲೆ ಆಳವಾದ ವರ್ಚಸ್ಸು ಬೀರಿದುವು. ಹೊಸ ಬಗೆಯ ಆಧ್ಯಾತ್ಮಿಕ ತೇಜಸ್ಸು, ಧಾರ್ಮಿಕಶ್ರದ್ಧೆ, ಪ್ರಯೋಗಬುದ್ಧಿಗಳು ಕಂಡುಬಂದುವು. ಪಂಡಿತಕವಿಗಳ ಜೊತೆಗೆ ಅನೇಕ ಅಧ್ಯಾತ್ಮಿಗಳೂ ಅನುಭಾವಿಗಳೂ ಸಾಹಿತ್ಯನಿರ್ಮಾತರಾದರು. ಈ ಹೊಸ ನಿರ್ಮಾತೃಗಳ ನೆರವಿಗೆ ಭಕ್ತಿಭಾಂಡಾರಿಯೂ ಯುಗಪುರುಷನೂ ಆದ ಬಸವೇಶ್ವರನು ಮುಂದಾಳುವಾದನು. (ಈ ಯುಗದ ಪ್ರಮುಖ ಗ್ರಂಥಕಾರರ ಪಟ್ಟಿಯನ್ನು ೧೪೪-೧೪೭ ಈ ಪುಟಗಳಲ್ಲಿ ಕೊಟ್ಟಿದೆ.)

ಈ ಯುಗದ ಪ್ರಮುಖ ಗ್ರಂಥಕಾರರು

ಈ ಯುಗದಲ್ಲಿ ಹರಿಹರ, ರಾಘವಾಂಕ, ಪದ್ಮರಸ ಈ ಮೂವರ ಕಾಲವಿಚಾರವು ಹೆಚ್ಚಿನ ಚರ್ಚೆಗೆ ಅವಕಾಶವನ್ನುಂಟುಮಾಡಿದೆ. ಸೋಮರಾಜ, ಮಲ್ಲಿಕಾರ್ಜುನ ಇವರ ಕಾಲವಿಚಾರವನ್ನು ಕೆಲಮಟ್ಟಿಗೆ ಅದು ಅವಲಂಬಿಸಿಕೊಂಡಿದೆ, ಬೇರೆ ಚಾರಿತ್ರಿಕ ಸಂಗತಿಗಳೂ ಅದರಲ್ಲಿ ಅಡಕವಾಗಿವೆ. ಈ ಸಂದರ್ಭದಲ್ಲಿ ಕಣ್ಣಮುಂದಿರುವ ಸಾಮಗ್ರಿ ಮತ್ತು ವ್ಯಕ್ತವಾದ ಅಭಿಪ್ರಾಯಗಳನ್ನು ತೂಗಿ ನೋಡಲಾಗಿ, ಈ ಮೂವರು ನಿಶ್ಚಿತವಾಗಿ ೧೨ನೆಯ ಶ.ದ ಮಧ್ಯದಿಂದ ೧೩ನೆಯ ಶ.ದ ಮಧ್ಯದ ನಡುವಿನ ಕಾಲದಲ್ಲಿ ಆಗಿಹೋದರೆಂದೂ ಬಹುಶಃ ೧೨ನೆಯ ಶ.ದ ಕೊನೆ ಹಾಗೂ ೧೩ನೆಯ ಶ.ದ ಮೊದಲ ದಶಕಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿ ಕೀರ್ತಿಗಳಿಸಿದರೆಂದೂ ಹೇಳಲು ಯಾವ ಅಭ್ಯಂತರವಿಲ್ಲ. ಕವಿಚರಿತಕಾರರು ಸು. ೧೧೬೫ ಎಂದು ಇವರಿಗೆ ಕೊಟ್ಟ ಕಾಲವು ಗ್ರಾಹ್ಯವಾಗುವಂತಿಲ್ಲ. ಯಾಕೆಂದರೆ ಹರಿಹರನು ತನ್ನ ರಗಳೆಯೊಂದರಲ್ಲಿ ಚಿತ್ರಿಸಿದ ಏಕಾಂತರಾಮಯ್ಯನು ಸು. ೧೧೮೦ರ ವರೆಗಾದರೂ ಜೀವಿಸಿರಬಹುದೆಂದು ತಿಳಿಯಲು ಆಧಾರವಿದೆ. ಅಲ್ಲದೆ ಅವನು ಬಸವಣ್ಣ ಮೊದಲಾದ ಶರಣರ ಕಾಲಕ್ಕೆ ಅಷ್ಟು ಹತ್ತಿರದವನಾಗಿರದೆ ಕನಿಷ್ಠ ಎರಡು ಮೂರು ದಶಕಗಳಷ್ಟು ಮುಂದಿನವನೆಂದು ಅವನ ರಗಳೆಗಳ ಚಾರಿತ್ರಿಕ ಸರಣಿಯಿಂದ ತೋರುತ್ತದೆ. ಮಲ್ಲಿಕಾರ್ಜುನ-ಕೇಶಿರಾಜರು ೧೩ನೆಯ ಶ.ದ ಉತ್ತರಾರ್ಧದವರಾಗಿದ್ದು ತಮ್ಮ ಗ್ರಂಥಗಳಲ್ಲಿ ಹರಿಹರನಿಂದ

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೧ ಪ್ರಭುದೇವ (ಅಲ್ಲಮ)	ಸು. ೧೧೬೦	ವೀರಶೈವ		೧ ಷಟ್ಸ್ಥಲಜ್ಞಾನಚಾರಿತ್ರ ಹಾಗೂ ಬೇರೆ ವಚನಗಳು	ವಚನಗದ್ಯ
				೨ ಮಂತ್ರಗೋಪ್ಯ	ಪದ
೨ ಸಕಲೇಶಮಾದರಸ	ಸು. ೧೧೬೦	ವೀರಶೈವ		೧ ವಚನಗಳು	ವಚನಗದ್ಯ
೩ ಬಸವೇಶ್ವರ	ಸು. ೧೧೬೦	ವೀರಶೈವ		೧ ಷಟ್ಸ್ಥಲವಚನ ಹಾಗೂ ಬೇರೆ ವಚನಗಳು	,,
				೨ ಕಾಲಜ್ಞಾನವಚನ ೩ ಮಂತ್ರಗೋಪ್ಯ	ಪದ
೪ ಚೆನ್ನಬಸವ	ಸು. ೧೧೬೦	ವೀರಶೈವ		೧ ಷಟ್ಸ್ಥಲವಚನ ಹಾಗೂ ಬೇರೆ ವಚನಗಳು	ವಚನಗದ್ಯ
				೨ ಕರಣಹಸುಗೆ	ವ್ಯಾಖ್ಯಾನಗದ್ಯ
				೩ ಮಿಶ್ರಾರ್ಪಣ	,,
				೪ ಮಂತ್ರಗೋಪ್ಯ	ಪದ
				೫ ಕಾಲಜ್ಞಾನ	,,
				೬ ರುದ್ರಭಾರತದ ಸೃಷ್ಟಿ	ವ್ಯಾಖ್ಯಾನಗದ್ಯ
೫ ಸಿದ್ಧರಾಮ	ಸು. ೧೧೬೦	ವೀರಶೈವ		೧ ವಚನಗಳು	ವಚನಗದ್ಯ
				೨ ಮಿಶ್ರಸ್ತೋತ್ರದ ತ್ರಿವಿಧಿ	ಪದ್ಯ
				೩ ಬಸವಸ್ತೋತ್ರ ತ್ರಿವಿಧಿ	ತ್ರಿಪದಿ
				೪ ಅಷ್ಟಾವರಣಸ್ತೋತ್ರ ತ್ರಿವಿಧಿ	,,
				೫ ಕಾಲಜ್ಞಾನ	ವಚನ
				೬ ಮಂತ್ರಗೋಪ್ಯ	ಪದ ?

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೬ ಮಹಾದೇವಿಯಕ್ಕ	ಸು. ೧೧೫೦	ವೀರಶೈವ		೧ ವಚನಗಳು	ವಚನಗದ್ಯ
				೨ ಯೋಗಾಂಗತ್ರಿವಿಧಿ	ತ್ರಿಪದಿ
				೩ ಸೃಷ್ಟಿಯ ವಚನ	ವ್ಯಾಖ್ಯಾನಗದ್ಯ
				೪ ಅಕ್ಕಗಳ ಪೀಠಿಕೆ	?
೭ ಮಲ್ಲಿಕಾರ್ಜುನ ಪಂಡಿತಾರಾಧ್ಯ	ಸು. ೧೧೬೦	ವೀರಶೈವ		೧ ವಚನಗಳು	ವಚನಗದ್ಯ
				೨ ಗಣಸಹಸ್ರನಾಮ	ನಾಮಾವಳಿ
				೩ ಇಷ್ಟಲಿಂಗಸ್ತೋತ್ರ	?
				೪ ಬಸವಗೀತ	ಪದ
೮ ಹರಿಹರ	ಸು. ೧೨೦೦	ವೀರಶೈವ		೧ ಗಿರಿಜಾಕಲ್ಯಾಣ	ಚಂಪು
				೨ ಪಂಪಾಶತಕ	ವೃತ್ತ
				೩ ರಕ್ಷಾಶತಕ	,,
				೪ ಮುಡಿಗೆಯ ಅಷ್ಟಕ	,,
				೫ ಶಿವಗಣದ ರಗಳೆಗಳು	ರಗಳೆ
೯ ಕೆರೆಯ ಪದ್ಮರಸ	ಸು. ೧೨೦೦	ವೀರಶೈವ		೧ ದೀಕ್ಷಾಬೋಧೆ	ರಗಳೆ_ಕೇವಲ ಪದ್ಯ
೧೦ ರಾಘವಾಂಕ	ಸು. ೧೨೨೫	ವೀರಶೈವ		೧ ಹರಿಶ್ಚಂದ್ರಕಾವ್ಯ	ವಾರ್ಧಕಷಟ್ಪದಿ
				೨ ಸಿದ್ಧರಾಮಪುರಾಣ	,,
				೩ ವೀರೇಶ್ವರಚರಿತೆ	ಉದ್ದಂಡಷಟ್ಪದಿ
				೪ ಶರಭಚಾರಿತ್ರ	?
				೫ ಹರಿಹರ ಮಹತ್ವ	?
೧೧ ನೇಮಿಚಂದ್ರ	ಸು. ೧೨೦೦	ಜೈನ	ಲಕ್ಷ್ಮೀಧರ	೧ ಲೀಲಾವತಿ ೨ ನೇಮಿನಾಥಪುರಾಣ	ಚಂಪು

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೧೨ ರುದ್ರಭಟ್ಟ	ಸು. ೧೨೦೦	ಬ್ರಾಹ್ಮಣ	ವೀರಬಲ್ಲಾಳ	೧ ಜಗನ್ನಾಥವಿಜಯ	ಚಂಪು
೧೩ ಅಗ್ಗಳ	ಸು. ೧೨೦೦ (ಗ್ರಂ.ರ: ೧೧೮೯)	ಜೈನ		೧ ಚಂದ್ರಪ್ರಭಪುರಾಣ	,,
೧೪ ಪಾಲ್ಕುರಿಕೆ ಸೋಮನಾಥ	ಸು. ೧೨೦೦	ವೀರಶೈವ		೧ ಶೀಲಸಂಪಾದನೆ	ವಚನ ಪ್ರಕಾರ
				೨ ಸೋಮೇಶ್ವರಶತಕ ?	ವೃತ್ತ
				೩ ಸಹಸ್ರಗಣನಾಮ	ನಾಮಾವಳಿ + ಪದ್ಯ
				೪ ಪಂಚರತ್ನ	ವೃತ್ತ
				೫ ಸದ್ಗುರು ರಗಳೆ	ರಗಳೆ–ಕೇವಲ ಪದ್ಯ
				೬ ಚೆನ್ನಬಸವಸ್ತೋತ್ರ	,,
				೭ ಶರಣಬಸವ ರಗಳೆ	,,
೧೫ ಆಚಣ್ಣ	ಸು. ೧೨೦೦	ಜೈನ	ರೇಚಣಚಮೂಪ	೧ ವರ್ಧಮಾನಪುರಾಣ	ಚಂಪು
				೨ ಶ್ರೀಪದಾಶೀತಿ	ಕಂದಪದ್ಯ
೧೬ ಕವಿಕಾಮ	ಸು. ೧೨೦೦	ಶೈವ		೧ ಶೃಂಗಾರರತ್ನಾಕರ ೨ ಸ್ತನಶತಕ ?	ಕಂದವೃತ್ತ
೧೭ ಬಂಧುವರ್ಮ	ಸು. ೧೨೦೦	ಜೈನ		೧ ಹರಿವಂಶಾಭ್ಯುದಯ	ಚಂಪು
				೨ ಜೀವಸಂಬೋಧನೆ	ಕಂದವೃತ್ತ
೧೮ ದೇವಕವಿ	ಸು. ೧೨೨೫	ಬ್ರಾಹ್ಮಣ	ಚಿಕ್ಕರಾಜಚಮೂಪ	೧ ಕುಸುಮಾವಳಿ	ಚಂಪು
೧೯ ಪಾರ್ಶ್ವಪಂಡಿತ	ಸು. ೧೨೨೫ (ಗ್ರಂ.ರ: ೧೨೨೨)	ಜೈನ	ರಟ್ಟಕಾರ್ತವೀರ್ಯ	೧ ಪಾರ್ಶ್ವನಾಥಪುರಾಣ	,,
೨೦ ಜನ್ನ	ಸು. ೧೨೨೫ (ಗ್ರಂ.ರ: ೧೨೦೯, ೧೨೩೦)	ಜೈನ	ವೀರಬಲ್ಲಾಳ ನರಸಿಂಹ	೧ ಅನಂತನಾಥಪುರಾಣ	,,
				೨ ಯಶೋಧರಚರಿತೆ	ಕಂದವೃತ್ತ
೨೧ ಸೋಮರಾಜ	ಸು. ೧೨೨೫ (ಗ್ರಂ.ರ: ೧೨೨೨?)	ವೀರಶೈವ		೧ ಶೃಂಗಾರಸಾರೆ (ಉದ್ಭಟಕಾವ್ಯ)	(ಕಂದ ಹೆಚ್ಚು) ಚಂಪು

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೨೨ ೨ನೆಯ ಗುಣವರ್ಮ	ಸು. ೧೨೨೫	ಜೈನ	ಕಾರ್ತವೀರ್ಯ	೧ ಪುಷ್ಪದಂತಪುರಾಣ	ಚಂಪು
೨೩ ಕಮಲಭವ	ಸು. ೧೨೨೫	ಜೈನ	ಸಿಂಹಣ ?	೧ ಶಾಂತೀಶ್ವರಪುರಾಣ	,,
೨೪ ಆಂಡಯ್ಯ	ಸು. ೧೨೨೫	ಜೈನ	ಕಾವ ?	೧ ಕಬ್ಬಿಗರಕಾವ	,,
೨೫ ಮಲ್ಲಿಕಾರ್ಜುನ	ಸು. ೧೨೫೦	ಜೈನ	ವೀರಸೋಮೇಶ್ವರ	೧ ಸೂಕ್ತಿಸುಧಾರ್ಣವ	ಕಂದವೃತ್ತ
೨೬ ಮಹಾಬಲಕವಿ	ಸು. ೧೨೫೦ (ಗ್ರಂ.ರ: ೧೨೫೪)	ಜೈನ		೧ ನೇಮಿನಾಥಪುರಾಣ	ಚಂಪು
೨೭ ಕೇಶಿರಾಜ	ಸು. ೧೨೭೫	ಜೈನ ?		೧ ಶಬ್ದಮಣಿದರ್ಪಣ	ಕಂದಪದ್ಯ
೨೮ ಕುಮುದೇಂದು	ಸು. ೧೨೭೫	ಜೈನ		೧ ಕುಮುದೇಂದುರಾಮಾಯಣ	ಎಲ್ಲ ಜಾತಿಯ ಷಟ್ಪದಿ
೨೯ ನರಹರಿತೀರ್ಥ	ಸು. ೧೨೭೫	ಬ್ರಾಹ್ಮಣ		೧ ಕೀರ್ತನೆಗಳು	ಪದ
೩೦ ರಟ್ಟಕವಿ(ಅರ್ಹದ್ದಾಸ)	ಸು. ೧೩೦೦	ಜೈನ		೧ ರಟ್ಟಮತ [ಅಕ್ಕರ-ತ್ರಿಪದಿ]	ಕಂದವೃತ್ತ ರಗಳೆ
೩೧ ಚೌಂಡರಸ	ಸು. ೧೩೦೦	ಬ್ರಾಹ್ಮಣ		೧ ಅಭಿನವದಶಕುಮಾರಚರಿತೆ ೨ ನಳಚರಿತ್ರೆ	ಚಂಪು ,,
೩೨ ಹಸ್ತಿಮಲ್ಲ	ಸು. ೧೩೦೦	ಜೈನ		೧ ಪೂರ್ವಪುರಾಣ	ಗದ್ಯ
೩೩ ನಾಗರಾಜ	ಸು. ೧೩೫೦ (ಗ್ರಂ.ರ: ೧೩೩೧)	ಜೈನ		೧ ಪುಣ್ಯಾಸ್ರವ	ಚಂಪು
೩೪ ವೃತ್ತವಿಲಾಸ	ಸು. ೧೩೫೦	ಜೈನ		೧ ಧರ್ಮಪರೀಕ್ಷೆ ೨ ಶಾಸ್ತ್ರಸಾರ	೧ ಚಂಪು
೩೫ ಮಂಗರಾಜ-೧	ಸು. ೧೩೫೦	ಜೈನ	ಹರಿಹರ ೧	೧ ಖಗೇಂದ್ರಮಣಿದರ್ಪಣ	ಕಂದವೃತ್ತ
೩೬ ಭೀಮಕವಿ	ಸು. ೧೪೦೦ (ಗ್ರಂ.ರ: ೧೩೬೯)	ವೀರಶೈವ		೧ ಬಸವಪುರಾಣ ೨ ಭೀಮಕವೀಶ್ವರ ರಗಳೆ	ಭಾಮಿನೀಷಟ್ಪದಿ ರಗಳೆ-ಪದ್ಯ
೩೭ ಮಧುರ	ಸು. ೧೪೦೦	ಜೈನ	ಮುದ್ದದಂಡೇಶ	೧ ಧರ್ಮನಾಥಪುರಾಣ ೨ ಗೊಮ್ಮಟಸ್ತುತಿಯಷ್ಟಕ	ಚಂಪು ವೃತ್ತ
೩೮ ಪದ್ಮಣಾಂಕ	ಸು. ೧೪೦೦	ವೀರಶೈವ		೧ ಪದ್ಮರಾಜಪುರಾಣ	ವಾರ್ಧಕಷಟ್ಪದಿ
೩೯ ಆಯತವರ್ಮ	ಸು. ೧೪೦೦	ಜೈನ		೧ ಕನ್ನಡರತ್ನಕರಂಡಕ	ಚಂಪು

ಉದ್ಧೃತಿಗಳನ್ನು ತೆಗೆದುಕೊಂಡಿದ್ದಾರೆ. ಹೀಗಿರುವಾಗ ಹರಿಹರಾದಿಗಳು ಅವರಿಗಿಂತ ಪೂರ್ವಿಕರೆಂಬುದು ಸ್ವಯಂಸಿದ್ಧವಾಗುತ್ತದೆ. ಸೋಮರಾಜನ ಕಾಲವು ೧೩ನೆಯ ಶ.ದ ಮೊದಲೊ ೧೫ನೆಯ ಶ.ದ ಮೊದಲೊ ಎಂಬುದು ವಾದಗ್ರಸ್ತವಾಗಿದೆ. ಗ್ರಂಥರಚನೆಯ ಕಾಲವನ್ನು ಅವನು ನಿರ್ದಿಷ್ಟಗೊಳಿಸಿಯೂ ವಾದಕ್ಕೆ ಎಡೆದೊರೆಯಿತು ಎಂಬುದು ಸೋಜಿಗವೇ. ಹರಿಹರನ ಕಾಲವಿಚಾರದಲ್ಲಿ ವಾದಗ್ರಸ್ತವಾದ ಸೋಮರಾಜನ ಕಾಲವನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ಒಳ್ಳೆಯದು. ಪ್ರತ್ಯೇಕವಾಗಿ ಅವನ ಕಾಲವು ೧೨೨೫ ಎಂದು ನಾವು ತಾತ್ಪೂರ್ತಿಕವಾಗಿ ಸ್ವೀಕರಿಸಿದ್ದೇವೆ. ಆದ್ದರಿಂದ ಸೋಮರಾಜನು ಸ್ತುತಿಸಿರುವ ಪಾಲ್ಕುರಿಕೆ ಸೋಮನಾಥನ ಕಾಲವನ್ನು ಸು. ೧೨೦೦ ಎಂದು ಕೊಡಲಾಗಿದೆ. ಪಾಲ್ಕುರಿಕೆ ಸೋಮನಾಥನ ಕಾಲ ಸು. ೧೩೦೫, ಸೋಮೇಶ್ವರ ಶತಕವನ್ನು ಬರೆದ ಪುಲಿಗೆರೆ ಸೋಮನಾಥನ ಕಾಲ ಸು. ೧೩೦೦ ಎಂದು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.[1] ಸೋಮರಾಜನ ಕಾಲ ಸು. ೧೫೨೨ ಎಂಬ ಶ್ರೀ. ವೆಂಕಟಸುಬ್ಬಯ್ಯನವರ ಅಭಿಪ್ರಾಯವನ್ನೂ ಅವರು ಸ್ವೀಕರಿಸಿದ್ದಾರೆ. ಈ ಅಭಿಪ್ರಾಯಗಳಿಗೆ ಕೊಟ್ಟ ಆಧಾರಗಳು ನಿರ್ವಿವಾದವೆಂದು ನಮಗೆ ತೋರಲಿಲ್ಲ. ಹರಿಹರ-ಪದ್ಮರಸರು ರಾಘವಾಂಕನಿಗಿಂತ ಹತ್ತಿಪ್ಪತ್ತು ವರುಷ ಹಿರಿಯರಾಗಿ ೧೨ನೆಯ ಶ.ದ ಹಿಂದುಮುಂದೆ ತಮ್ಮ ಗ್ರಂಥಗಳನ್ನು ಬರೆದರೆಂದೂ ರಾಘವಾಂಕನು ೧೨ನೆಯ ಶ.ದಿಂದ ಈಚೆ ಗ್ರಂಥ ಬರೆದನೆಂದೂ ಸಂಶೋಧಕರು ಹೇಳಿದ ಮಾತು ಒಪ್ಪತಕ್ಕುದಾಗಿದೆ. ವಿಸ್ತಾರವಾದ ವಿವೇಚನೆಯನ್ನು ಇಲ್ಲಿ ಮಾಡುವ ಉದ್ದೇಶವಿಲ್ಲ. ಶಿಶುಮಾಯಣನ ಕಾಲವನ್ನು (?) ೧೨೩೩ ಎಂದು ಪ್ರಶ್ನಚಿಹ್ನದೊಡನೆ ಕವಿಚರಿತಕಾರರು ಕೊಟ್ಟಿದ್ದಾರೆ. ಗ್ರಂಥಸ್ಥವಾದ ಬೇರೆ ಪ್ರಮಾಣಗಳನ್ನು ನೋಡಿದರೆ ಅವನು ೧೫ನೆಯ ಶತಮಾನದವನಿರಬೇಕೆಂಬ ಊಹೆ ಬಲಪಡುತ್ತದೆ. ಅಂತೇ ಈ ಯುಗದಲ್ಲಿ ಅವನನ್ನು ಉಲ್ಲೇಖಿಸಿಲ್ಲ. 'ವೃತ್ತವಿಲಾಸ'ನು ೧೨ನೆಯ ಶ.ದ ಮಧ್ಯದವನೆಂದು ಮೊದಲು ಹೇಳಿದ ಕವಿಚರಿತಕಾರರು ಅವನು ೧೪ನೆಯ ಶ.ದ ಮಧ್ಯದಲ್ಲಿದ್ದವನೆಂಬ ಶ್ರೀ. ವೆಂಕಟಸುಬ್ಬಯ್ಯನವರ ಅಭಿಮತವನ್ನು ಆಮೇಲೆ ಸ್ವೀಕರಿಸಿದರು. ಇದನ್ನು ನೆನೆದು ಅವನನ್ನು ಈ ಎರಡನೆಯ ಯುಗದಲ್ಲಿ ಸೇರ್ಪಡಿಸಲಾಗಿದೆ.

೧೨ನೆಯ ಶ.ದ ಮಧ್ಯದಿಂದ ೧೫ನೆಯ ಶ.ದ ವರೆಗಿನ ಈ ಯುಗದಲ್ಲಿ ರಾಜ್ಯಸಾಮ್ರಾಜ್ಯಗಳ ಉದಯಾಸ್ತಗಳೂ ಯುದ್ಧಕೋಲಾಹಲಗಳೂ ಮಾತ್ರವಲ್ಲದೆ ಜನಜೀವನವನ್ನೇ ಅಲ್ಲಾಡಿಸಿ ಹೊಸ ಪಲ್ಲಟಗಳನ್ನು ಬರಮಾಡಿದ ರಾಜಕೀಯ-ಧಾರ್ಮಿಕ ಸ್ಥಿತ್ಯಂತರಗಳು ತಲೆದೋರಿದುವು, ಅಂದಂದಿನ ಕಲೆ-ವಾಙ್ಮಯಗಳ ಮೇಲೆ

೧ ಡಿ. ಎಲ್. ನರಸಿಂಹಾಚಾರ್: ಕೆಲವು ರಗಳೆಯ ಕವಿಗಳು (ಪ್ರ.ಕ., ೧೭-೪, ಪು. ೧೩-೧೪)

ತೀವ್ರಪ್ರಭಾವವನ್ನು ಬೀರಿದುವು. ಶಾಸನಾದಿ ಚಾರಿತ್ರಿಕಸಾಮಗ್ರಿಯಲ್ಲಿ ಅವುಗಳ ಕಥಾವಿವರಗಳು ಸುಪ್ತವಾಗಿದ್ದ ಕಾರಣ ಪರಿಚಿತವಾದ ಪ್ರಮುಖ ಅಂಶಗಳನ್ನು ಮಾತ್ರ ನಾವು ತಿಳಿದಿದ್ದೇವೆ. ಕಲ್ಯಾಣ ಚಾಲುಕ್ಯ ವಂಶದ ವೈಭವವು ೬ನೆಯ ವಿಕ್ರಮಾದಿತ್ಯ ಮತ್ತು ೩ನೆಯ ಸೋಮೇಶ್ವರ ಇವರಲ್ಲಿ ಕೊನೆಮುಟ್ಟಿ ೧೨ನೆಯ ಶ.ದ ಮಧ್ಯಕಾಲಕ್ಕೆ ಇಳಿಮೊಗವಾಯಿತು. ಕೈಲಾಗದ ೩ನೆಯ ತೈಲಪನನ್ನು ಹೆಸರಿಗೆ ಅರಸನನ್ನಾಗಿರಿಸಿ ಕಲಚುರ್ಯ ವಂಶದ ಬಿಜ್ಜಳನು ರಾಜ್ಯಸೂತ್ರಗಳನ್ನೆಲ್ಲ ವಹಿಸಿಕೊಂಡನು. ಬರಬರುತ್ತ ಮಹಾಮಂಡಳೇಶ್ವರನಾಗಿದ್ದವನು 'ನಿಜಭುಜಬಲಚಕ್ರವರ್ತಿ'ಯಾದನು. ದತ್ತುಬಂದ ಹಾಗೆ ಚಾಲುಕ್ಯಸಾಮ್ರಾಜ್ಯದ ಸತ್ತೆಪ್ರತಿಷ್ಠೆಗಳೆಲ್ಲ ಬಿಜ್ಜಳನವಾದುವು. ೨೦-೨೫ ವರ್ಷಗಳ ಅವನ ಆಳಿಕೆ ರಾಜಕೀಯವಾಗಿ ಅವಿಶೇಷವಾದರೂ ಧಾರ್ಮಿಕವಾಗಿ ಅಸಾಮಾನ್ಯವೇ ಆಯಿತು. ಇತ್ತ ದಕ್ಷಿಣ ಕರ್ನಾಟಕದಲ್ಲಿ ವಿಷ್ಣುವರ್ಧನನ ಕಾಲದಿಂದ ಸ್ವತಂತ್ರರಾದ ಹೊಯ್ಸಳರು ಪ್ರಬಲರಾಗಿ ರಾಜ್ಯವಿಸ್ತಾರಕ್ಕೆ ಕೈಹಾಕಿದ್ದರು. ಒಂದು ಸಾಮ್ರಾಜ್ಯದ ಏಕಚ್ಛತ್ರದ ಸ್ಥಳದಲ್ಲಿ ಸ್ವತಂತ್ರರಾಜ್ಯಗಳ ಭಿನ್ನಸತ್ತೆಗಳು ತಲೆಯೆತ್ತತೊಡಗಿದುವು. ಅಲ್ಪಕಾಲಿಕವಾದ ಕಲಚುರ್ಯ ರಾಜ್ಯವು ಕಣ್ಮರೆಯಾಗುವಷ್ಟರಲ್ಲಿ ಉತ್ತರದಲ್ಲಿ ಯಾದವರೂ ದಕ್ಷಿಣದಲ್ಲಿ ಹೊಯ್ಸಳರೂ ಪ್ರಬಲಿಸುತ್ತ ಬಂದು ಒಬ್ಬರನ್ನೊಬ್ಬರು ಸೋಲಿಸಿ ಹಿಮ್ಮೆಟ್ಟಿಸುತ್ತ ಕರ್ನಾಟಕದ ರಾಜಕೀಯ ದೌರ್ಬಲ್ಯಕ್ಕೆ ಕಾರಣರಾದರು. ೧೩ನೆಯ ಶತಮಾನವೆಂದರೆ ಹೊಯ್ಸಳ-ಯಾದವರ ಹೋರಾಟದಲ್ಲಿ ನಾಡಿನ ಒಕ್ಕಟ್ಟೂ ದಕ್ಕೂ ಕಡಿಮೆಗೊಂಡ ಕಾಲವಾಯಿತು. ಇದೇ ಸಂಧಿಸಾಧಿಸಿ ೧೩ನೆಯ ಶ.ದ ಕೊನೆಯಿಂದ ಮಹಮ್ಮದೀಯರ ದಾಳಿಯ ತೆರೆಗಳು ಕರ್ನಾಟಕದ ಮೇಲೆ ನುಗ್ಗಿದುವು. ಮೊದಲು ಅಲ್ಲಾವುದ್ದೀನ್ ಆಮೇಲೆ ಮಲಿಕ್‌ಕಾಫರ್ ಇವರು ದಾಳಿಮಾಡಿ ಯಾದವ-ಹೊಯ್ಸಳರಿಬ್ಬರನ್ನೂ ಹಣ್ಣುಮಾಡಿ ದಿಲ್ಲಿಯ ಪ್ರಭುತ್ವಕ್ಕೆ ಮಾಂಡಳಿಕರನ್ನಾಗಿ ಮಾಡಿದರು. ಹೋದಹೋದಲ್ಲಿ ಕ್ರೂರ ಹಿಂಸೆಯ ಕೃತ್ಯಗಳಿಂದ, ಪವಿತ್ರಸ್ಥಳಗಳ ವಿನಾಶದಿಂದ ನಾಡಿನ ಜನಸಾಮಾನ್ಯದಲ್ಲಿ ಹಾಹಾಕಾರವನ್ನುಂಟುಮಾಡಿದರು. ಕರ್ನಾಟಕದ ಕ್ಷತ್ರಿಯ ಬಲವು ಈ ತಾಮಸೀ ಶಕ್ತಿಯ ಮುಂದೆ ಹತಾಶವಾಗಿ ಕೈಯೂರಿತು, ದಕ್ಷಿಣದ ಸಂಸ್ಕೃತಿಗೇ ಗಂಡಾಂತರ ಒದಗಿತು. ಈ ಗ್ಲಾನಿಸಮಯದಲ್ಲಿ ನಾಡಿನ ಸುದೈವದಿಂದಲೂ ಶ್ರೀ ವಿದ್ಯಾರಣ್ಯರ ಪ್ರೇರಣೆಯಿಂದಲೂ ಹೊಯ್ಸಳ ದೊರೆಗಳ ಚಾತುರ್ಯದಿಂದಲೂ ವಿಜಯನಗರದಲ್ಲಿ ಸಂಗಮವಂಶದ ರಾಜ್ಯವು ೧೪ನೆಯ ಶ.ದ ಮೊದಲಲ್ಲಿ ಸ್ಥಾಪನೆಯಾಗಿ ಜನತೆಯ ವಿಲಕ್ಷಣವಾದ ಚೈತನ್ಯಬಲದಿಂದ ಬೇಗಬೇಗನೆ ಬೆಳೆದು ದಕ್ಷಿಣ ಭರತಖಂಡಕ್ಕೆ ಅಭೇದ್ಯವಾದ ಶಕ್ತಿಕೇಂದ್ರವಾಗಿ ಪರಿಣಮಿಸಿತು; ೧೫ನೆಯ ಶತಕ ಬರುವಷ್ಟರಲ್ಲಿ ಮಹಮ್ಮದೀಯ ವೈರಿಗಳನ್ನು ತಡೆಗಟ್ಟಿ ಜನಜೀವನವನ್ನು ಸಂಘಟಿಸಿ ಎಲ್ಲ ಮತಸಂಘಗಳಿಗೂ ಕಲೆ-ವಾಙ್ಮಯಗಳಿಗೂ ಆಶ್ರಯಸ್ಥಾನವಾದ ವಿಜಯಸಾಮ್ರಾಜ್ಯವಾಯಿತು.

ಈ ರಾಜಕೀಯ ಹಿನ್ನೆಲೆಯಲ್ಲಿ ಜನಜೀವನವು ಏಳುಬೀಳುಗಳನ್ನು ಅನುಭವಿಸುತ್ತಲಿರಬೇಕು. ಚಾಲುಕ್ಯರ ಏರಿಕೆಯ ಕಾಲದಲ್ಲಿ ಅದು ಸುಸ್ಥಿತಿಯ ಏಣಿಯನ್ನು ಏರಿ ಪರಕೀಯರ ದಾಳಿಯಿಂದ ಇಳಿದಿಳಿದು ಮತ್ತೆ ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಸಂಪತ್ತಿ, ರಸಿಕತೆ, ಸೋದರಭಾವಗಳಲ್ಲಿ ಮಿಗಿಲಾದ ಏರಿಕೆಯನ್ನು ಪಡೆದಿರಬೇಕು. ಧಾರ್ಮಿಕ-ಸಾಮಾಜಿಕ ಜೀವನದಲ್ಲಿ ಹೊಸ ಮತಪಂಥಗಳ ಉದಯದಿಂದಲೂ ಮಹಮ್ಮದೀಯರ ಅಭಿಯೋಗದಿಂದಲೂ ಜನತೆಯಲ್ಲಿ ಹೊಸ ಶ್ರದ್ಧೆಶಕ್ತಿಗಳೂ ಭಯಭೀತಿಗಳೂ ಉಂಟಾದುವು. ೧೨ನೆಯ ಶತಕದ ಮಧ್ಯಕ್ಕೆ ಧಾರ್ಮಿಕ ಪರಂಪರೆಗಳಲ್ಲಿ ಒಂದಾದ ಜೈನಮತವು ಹಿಂದಿನ ಉತ್ಕರ್ಷಕ್ಕೆ ಹೊರತಾಗಿ ಇದ್ದುದನ್ನು ಕಾಯ್ದುಕೊಳ್ಳುವುದರಲ್ಲಿತ್ತು, ಅದಕ್ಕೆ ಪ್ರತಿಕ್ರಿಯೆಯಾಗಿ ತಲೆಯೆತ್ತುತ್ತಿರುವ ದೈವಭಕ್ತಿಪ್ರಧಾನವಾದ ಮತಗಳ ಆಕರ್ಷಣೆಯನ್ನು ತರುಬಲು ಶಕ್ತಿ ಸಾಲದಾಗಿತ್ತು. ವೈದಿಕಮತಗಳು ಶುಷ್ಕ ಆಚಾರಧರ್ಮದ ಬೆನ್ನುಹತ್ತಿದ್ದುವು. ಅದರಿಂದ ತೋರಿದ ಡಾಂಭಿಕತೆ, ಹೆಚ್ಚುಕಡಿಮೆಯೆಂಬ ಭಾವನೆ, ಅಂಧವಿಶ್ವಾಸದ ಆಧಾರದಿಂದ ನಡೆಸಿದ ಸುಲಿಗೆ ಇವಕ್ಕೆ ಒಂದು ದಾರುಣವಾದ ಪ್ರತಿಭಟನೆ ಗುಡುಗುಹಾಕುತ್ತಿರಬೇಕು. ನವೀನ ಸಾಹಸಬುದ್ಧಿಯಿಂದ ಸಮಾಜಕ್ಕೆ ದಾರಿತೋರಿ ಕೆಡುಕನ್ನು ತಿದ್ದುವ ಮಹಾವ್ಯಕ್ತಿಗಳ ಉದಯಕ್ಕೆ ಇದು ಯೋಗ್ಯ ಸಮಯವಾಯಿತು. ಬಸವೇಶ್ವರ, ಪ್ರಭುದೇವ, ಸಿದ್ಧರಾಮರಂಥ ಶಿವಶರಣರನ್ನು 'ಕಲ್ಯಾಣ'ಪಥಕ್ಕೆ ಕರೆಯುವ ಕಹಳೆಯನ್ನು ಕಾಲವೂದಿದಂತಾಯಿತು. ನಾಡಿನಲ್ಲಿ ಆಗ ಅನೇಕ ಶೈವಪಂಥಗಳಿದ್ದುವು. ಕರ್ನಾಟಕದಲ್ಲಿ ವೈದಿಕವಾದ ಆರಾಧ್ಯಶೈವವಿತ್ತು, ಆಗಮನಿಷ್ಠವಾದ ಪಾಶುಪತವಿತ್ತು. ಕಾಶ್ಮೀರ, ತಮಿಳು, ತೆಲುಗುನಾಡುಗಳಲ್ಲಿಯೂ ಶೈವಪ್ರಭೇದಗಳಿದ್ದುವು. ಶಿವಶರಣರು ಅವುಗಳ ಸಾರವನ್ನು ಸ್ವೀಕರಿಸಿ ವೀರಶೈವ ಎಂಬುದಾಗಿ ಮೆಲ್ಲನೆ ಹರಡುತ್ತಿದ್ದ ಸ್ವತಂತ್ರಮಾರ್ಗವನ್ನು ಸಾಮಾಜಿಕ ಧಾರ್ಮಿಕ ಕ್ರಾಂತಿಗೆ ತಳಹದಿಯನ್ನಾಗಿ ಮಾಡಿಕೊಂಡರು. ವೀರಶೈವಮತದ ಸ್ಥಾಪನೆ-ಉದ್ಧಾರ ಇಲ್ಲವೆ ಅನ್ಯಮತಗಳ ಉಚ್ಚಾಟನೆ ಇದು ಅವರ ಹಿರಿಯ ಗಮ್ಯವಾಗಿರಲಿಲ್ಲ. ಮಾನವಪ್ರೇಮ, ನೀತಿನಿಷ್ಠೆ, ಶಿವಭಕ್ತಿ, ಸಮಾನಭಾವ ಇವುಗಳನ್ನು ಹೆಚ್ಚೆಂದು ತಿಳಿದು ನಡೆಯುವ ಸಮಾನವ್ಯಕ್ತಿಗಳ ಹೊಸ ಸಮಾಜವ್ಯವಸ್ಥೆ, ಅದಕ್ಕೆ ಮಾದರಿಯಾಗಿ ಎತ್ತರದ ಶರಣಮಾರ್ಗದಲ್ಲಿರುವ ದಿವ್ಯಜೀವಿಗಳ ಅನುಭಾವಗೋಷ್ಠಿ—ಇದು ಅವರ ಹಿರಿಗನಸಾಗಿತ್ತು. ಇದನ್ನು ನಡೆನುಡಿಯಲ್ಲಿ ಅವರು ತೋರಿದರು. ಆದರೆ ಇದನ್ನು ದಕ್ಕಿಸಲಾಗದ ಸಾಂಪ್ರದಾಯಿಕ ಸಮಾಜವು ನುಂಗಿದ ಅಮೃತವನ್ನು ಉಗುಳಿದಂತೆ ಮತ್ತೆ ತನ್ನ ದಾರಿಹಿಡಿಯಿತು. ಕೆಲಕಾಲ ಶರಣಮಾರ್ಗವು ಹಿಮ್ಮೆಟ್ಟಿದಂತಾಯಿತು. ಮಹಮ್ಮದೀಯರ ಆಘಾತಕ್ಕೆ ಸಿಲುಕಿದ ಜನಸಾಮಾನ್ಯವು ಕಂಗೆಟ್ಟುಹೋದರೂ ಪೂರ್ವಪುಣ್ಯದಿಂದ ಮತ್ತೆ ಜಾಗೃತವಾಗಿ ವಿಜಯನಗರದ ಏಕಚ್ಛತ್ರದ ಕೆಳಗೆ ನೆರೆಯಿತು. ವೈದಿಕ, ಜೈನ, ವೀರಶೈವ ಎಲ್ಲ ಮತಪಂಥಗಳು ಒಟ್ಟಿನಲ್ಲಿ ಹೊಸ

ಸಮನ್ವಯ ಮತ್ತು ಸಾಮರಸ್ಯಗಳ ದಾರಿಯಲ್ಲಿ ಅಡಿಯಿಟ್ಟುವು. ಮುಸ್ಲಿಂ ಪ್ರಭಾವವೂ ಈ ಒಟ್ಟುಹೆಣಿಕೆಯಲ್ಲಿ ಸೇರಿಕೊಳ್ಳತೊಡಗಿತು. ವೈವಿಧ್ಯದಲ್ಲಿ ಐಕ್ಯವನ್ನು ತನ್ನ ಬಗೆಯಲ್ಲಿ ಕನ್ನಡಸಂಸ್ಕೃತಿ ಸಾಧಿಸಿ ತೋರಿಸಿತು.

ಈ ಯುಗದ ವೈಶಿಷ್ಟ್ಯಗಳು

ಕನ್ನಡಸಾಹಿತ್ಯವು ಮಾರ್ಗದಿಂದ ದೇಸಿಗೆ ಸಂಕ್ರಮಣಹೊಂದಿದ ಯುಗವೆಂದು ಇದನ್ನು ಕರೆಯಬಹುದು. ಮಾರ್ಗಕಾವ್ಯದ ಪ್ರಭಾವಗಳು ಈ ಯುಗದ ಮೇಲೆ ಮೂಡಿದ್ದರೂ ದೇಸಿಗೆ ವಿಶಿಷ್ಟವಾದ ಸ್ವಾತಂತ್ರ್ಯವು ವಿಷಯ, ಛಂದಸ್ಸು, ಭಾಷೆಗಳಲ್ಲಿ ತಲೆದೋರಿದೆ. ಅಂತೇ ಸ್ವಾತಂತ್ರ್ಯಯುಗವೆಂದು ಇದನ್ನು ಕೆಲವರು ಕರೆದಿರುವು-ದುಂಟು. (೧) ವಚನವೆಂಬ ಸಾಹಿತ್ಯರೂಪದ ಉದಯ ಹಾಗೂ ವೈವಿಧ್ಯಯುತ-ವಾದ ಅದರ ನಿರ್ಮಾಣಸಂಪತ್ತಿ ಇದು ಈ ಯುಗದ ಪ್ರಥಮ ವೈಶಿಷ್ಟ್ಯವಾಗಿದೆ. ವಚನವೆಂಬುದು ಭಾವಗೀತ ಲಕ್ಷಣದಿಂದ ಕೂಡಿದ ಅನುಭಾವಗದ್ಯವೇ ಸರಿ. ಇದರಲ್ಲಿ ಶಿವಶರಣರು ಅಂತರಂಗದ ಆಳವಾದ ಅನುಭವಕ್ಕೆ ಕನ್ನಡಿ ಹಿಡಿದಿದ್ದಾರೆ, ನಿರ್ಭಯವಾದ ಆತ್ಮನಿರೀಕ್ಷಣೆಯನ್ನೂ ಮಾಡಿದ್ದಾರೆ. ನೀತಿ, ಮತ, ತತ್ವ, ಅನು-ಭಾವಗಳಲ್ಲಿ ಉಗಮಹೊಂದಿಯೂ ವಚನಗಳು ಸಾಮಾನ್ಯವಾಗಿ ಸಾಹಿತ್ಯಗುಣದಿಂದ ಕೂಡಿವೆ, ಕೆಲವು ಸಲ ಘನತೆಗೆ ವೀಳ್ಯವೆತ್ತಿವೆ. (೨) ರಗಳೆ, ತ್ರಿಪದಿ, ಷಟ್ಪದಿ ಈ ಅಚ್ಚಗನ್ನಡ ಛಂದೋರೂಪಗಳಲ್ಲಿ ಗ್ರಂಥರಚನೆ ಮೊದಲಾಯಿತು. ಇವನ್ನು ಚಂಪೂಕಾವ್ಯಗಳಲ್ಲಿ ಆಗಾಗ ಬಳಸುತ್ತಿದ್ದರು. ಆದರೆ ಕಂದವೃತ್ತಗಳ ತ್ಯಾಗಮಾಡಿ ಇವನ್ನೇ ಒಂದೊಂದಾಗಿ ಈ ಯುಗದಲ್ಲಿ ಮಾತ್ರ ಸ್ವೀಕರಿಸಲಾಯಿತು. ವಚನ-ಕಾರರು ತ್ರಿಪದಿಗೆ, ಹರಿಹರರಾಘವಾಂಕರು ರಗಳೆ–ಷಟ್ಪದಿಗಳಿಗೆ ಅನುಕ್ರಮದಿಂದ ಮೊದಲಿಗರಾದರು. ರಗಳೆಗಿಂತ ಷಟ್ಪದಿ ತನ್ನ ಆರು ಪ್ರಕಾರಗಳಲ್ಲಿ, ವಿಶೇಷವಾಗಿ ವಾರ್ಧಕ–ಭಾಮಿನಿಗಳಲ್ಲಿ ಹೆಚ್ಚು ಪ್ರಚಾರದಲ್ಲಿ ಬರತೊಡಗಿತು. (೩) ಕಾಲಜ್ಞಾನ, ಬಿರುದಿನ ಮತ್ತು ನೀತಿಯ ಪದ್ಯ, ವ್ಯಾಖ್ಯಾನಗದ್ಯ, ಸೀಸಪದ್ಯ, ನಾಮಾವಳಿ ಈ ಬಗೆಯ ಲಘುರಚನೆಗಳು ಹೇರಳವಾದುವು. ಅವುಗಳ ಸಾಹಿತ್ಯಯೋಗ್ಯತೆಗಿಂತ ಮತೀಯ ಮಹತ್ವ ಮಿಕ್ಕಿತು. (೪) ಚಂಪೂಕಾವ್ಯಗಳೂ ಕಂದವೃತ್ತದ ಕೃತಿಗಳೂ ಸಾಮಾನ್ಯವಾಗಿ ೧೩–೧೪ನೆಯ ಶ.ಗಳಲ್ಲಿ ಜೈನಕವಿಗಳಿಂದ ರಚಿತವಾದುವು. ಕ್ವಚಿತ್ತಾಗಿ ವೀರಶೈವ–ಬ್ರಾಹ್ಮಣಗ್ರಂಥಕಾರರೂ ಇಂಥ ಮಾರ್ಗಕೃತಿಗಳನ್ನು ನಿರ್ಮಿಸಿ-ದರು. ಇವುಗಳಲ್ಲಿ ಹರಿಹರನ 'ಗಿರಿಜಾಕಲ್ಯಾಣ', ಸೋಮರಾಜನ 'ಶೃಂಗಾರ-ಸಾರ', ರುದ್ರಭಟ್ಟನ 'ಜಗನ್ನಾಥವಿಜಯ', ಚೌಂಡರಸನ 'ಅಭಿನವದಶಕುಮಾರ-ಚರಿತೆ' ಇವು ಪ್ರಮುಖವಾಗಿವೆ. (೫) ಗ್ರಂಥವಿಷಯವು ವೀರಶೈವಕವಿಗಳಲ್ಲಿ ಶಿವಲೀಲೆಗಳು, ಶಿವಶರಣರ ಚರಿತ್ರೆಗಳು ಎಂಬುದಕ್ಕೆ ಕಟ್ಟುನಿಟ್ಟಾಗಿ ಮರ್ಯಾದಿತ-ವಾಯಿತು. ಈ ಪರಂಪರೆ ಮುಂದಿನ ಯುಗದಲ್ಲಿಯೂ ಸಾಗಿದೆ. ಜೈನರಲ್ಲಿ

ತೀರ್ಥಂಕರಪುರಾಣ, ಬ್ರಾಹ್ಮಣರಲ್ಲಿ ವಿಷ್ಣುಪುರಾಣ ಇವುಗಳು ಕಥಾವಿಷಯಕ್ಕೆ ಆಕರವಾದುವು. ಜೊತೆಗೆ, 'ಜೀವಸಂಬೋಧನೆ', 'ಧರ್ಮಪರೀಕ್ಷೆ', 'ರತ್ನ-ಕರಂಡಕ' ಈ ಚಂಪುಗಳಲ್ಲಿ ಕಥೆಯ ವೇಷವಿಲ್ಲದ ತತ್ವಪ್ರತಿಪಾದನೆ, 'ಯಶೋಧರ-ಚರಿತೆ'ಯಲ್ಲಿ ಕಥೆಯ ಮೂಲಕವಾಗಿ ಬೋಧಿಸಿದ ತತ್ವ, 'ಕಬ್ಬಿಗರಕಾವ'ದಲ್ಲಿ ಸಾಂಕೇತಿಕವಾದ ಕಾಲ್ಪನಿಕ ಕಥಾನಕ ಈ ವೈವಿಧ್ಯವನ್ನು ಜೈನಗ್ರಂಥಗಳಲ್ಲಿ ನೋಡಬಹುದು. (೬) ಕಾವ್ಯರೂಪಗಳು ನಿರ್ಬಂಧವಾಗಿ ಒಂದೊಂದು ಮತಕ್ಕೆ ಸಂಬಂಧಪಟ್ಟುವೆಂಬುದು ಅಯುಕ್ತವಾದರೂ ಜೈನಕವಿಗಳಲ್ಲಿ ಚಂಪುವಿನ ವಾಡಿಕೆ, ವೀರಶೈವರಲ್ಲಿ ರಗಳೆಷಟ್ಪದಿಗಳ ವಾಡಿಕೆ ಉಂಟಾಗಿತ್ತು. ಈ ವಾಡಿಕೆಯನ್ನು ಮೀರಿ ಅನ್ಯೋನ್ಯ ಸ್ವೀಕಾರ ಮಾಡಿದ ಬಗ್ಗೆ ಈ ಯುಗದಲ್ಲಿ ನಿದರ್ಶನಗಳು ಮೊದಲಾದುವು. ವೀರಶೈವಕವಿಗಳಲ್ಲಿ ಕೆಲವರು ಚಂಪುರೂಪದಲ್ಲಿ ಬರೆದರು. ಕುಮುದೇಂದುವಿನಂಥ ಜೈನರು ಎಲ್ಲ ಬಗೆಯ ಷಟ್ಪದಿಯಲ್ಲಿ ಬರೆದರು. ಈ ಕೊಳುಕೊಡೆ ಮುಂದಿನ ಯುಗದಲ್ಲಿ ಇನ್ನೂ ಹೆಚ್ಚಿದೆ. (೭) ಭಾಷಾಶೈಲಿಯಲ್ಲಿ ಈ ಯುಗದ ಸಂಕ್ರಮಣಾ-ವಸ್ಥೆಯ ನಿದರ್ಶನವು ಸ್ಪಷ್ಟವಾಗಿದೆ. ಹಳಗನ್ನಡದಿಂದ ಹೊಸಗನ್ನಡಕ್ಕೆ ಪರಿರ್ತನೆ-ಹೊಂದುತ್ತಿರುವ ಕಾಲದ ಪ್ರಾಯೋಗಿಕ ಶೈಲಿಯ ಸಂಕೀರ್ಣತೆ–ವೈವಿಧ್ಯಗಳು ಈ ಯುಗದ ನಡುಗನ್ನಡದಲ್ಲಿ ತೋರಿವೆ. ವಚನ, ರಗಳೆ, ಷಟ್ಪದಿಗಳಲ್ಲಿ ನಡುಗನ್ನಡದ ತರತರವನ್ನು ಕಾಣಬಹುದು. ಚಂಪೂಕಾವ್ಯಗಳಲ್ಲಿ ಪಂಪಯುಗದ ಪ್ರೌಢಶೈಲಿಯೇ ಮುಂದರಿದಿದೆಯಾದರೂ ಹಲವರಲ್ಲಿ ಲಾಲಿತ್ಯ–ಪ್ರಸನ್ನತೆಗಳು ಹೆಚ್ಚಿವೆ; ವ್ಯಾಕರಣ-ರೂಪಗಳ ಬಿಗುವು ಸಡಿಲುತ್ತ ಸಾಗಿದೆ. (೮) ಕನ್ನಡ ವರ್ಣಮಾಲೆಯಲ್ಲಿದ್ದ ಱೞಾಕ್ಷರವು ಉಚ್ಚಾರದಲ್ಲಿಯೂ ಬರವಣಿಗೆಯಲ್ಲಿಯೂ ಲೋಪಹೊಂದಿರಬೇಕೆಂಬ ಸೂಚನೆ ಈ ಯುಗದಲ್ಲಿ ದೊರೆಯುತ್ತದೆ. ಱೞಕುಳಕ್ಷಳಗಳಲ್ಲಿಯ ಭೇದವನ್ನು, ವಿಶೇಷವಾಗಿ ಪ್ರಾಸವಿಷಯದಲ್ಲಿಯ ಭೇದವನ್ನು ತಾನು ಪಾಲಿಸುವುದಿಲ್ಲವೆಂದು ಹರಿಹರನು ಹೇಳಿದನು. ಈ ವಿಷಯದಲ್ಲಿ ಅವನು ಅನೇಕ ಕವಿಗಳಿಗೆ ಮಾರ್ಗದರ್ಶಿ-ಯಾದನು. (೯) ರಸದೃಷ್ಟಿಯಿಂದ ಈ ಯುಗದಲ್ಲಿ ಭಕ್ತಿರಸವು ಉಕ್ಕಂದವಾಗಿ ಹರಿಯಿತು. ಜೊತೆಗೆ ಅದ್ಭುತವೂ ಮೆರೆಯಿತು. ವೀರ–ಶಾಂತಗಳು ಜೈನಕೃತಿ-ಗಳಲ್ಲಿಯೆ ಹೆಚ್ಚಾಗಿ ಆವಿಷ್ಕಾರಹೊಂದಿದುವು. ಶೃಂಗಾರರಸವೊಂದನ್ನೇ ಪ್ರತಿ-ಪಾದಿಸಿದ 'ಲೀಲಾವತಿ' ಉದಯವಾಯಿತು. (೧೦) ಲೌಕಿಕ ಮತ್ತು ಶಾಸ್ತ್ರೀಯ ಗ್ರಂಥಗಳನ್ನು ವೀರಶೈವರು ಸಾಮಾನ್ಯವಾಗಿ ಬರೆಯಲಿಲ್ಲ. ಆದೇ ತಾತ್ವಿಕ, ಅನುಭಾವಿಕ ಕೃತಿಗಳನ್ನು ರಚಿಸಿದರು. ಪಂಡಿತ ಕವಿಗಳ ಜೊತೆಗೆ ಅಧ್ಯಾತ್ಮಿ, ಅನುಭಾವಿ ಕವಿಗಳ ಹೊಸ ಪರಂಪರೆಯೊಂದು ಮೊಳೆಯಿತು. (೧೧) ಮೊದಲನೆಯ ಸಂಕಲನಗ್ರಂಥವಾದ 'ಸೂಕ್ತಿಸುಧಾರ್ಣವ'ವೂ ಮೊದಲನೆಯ ವಿಸ್ತೃತ ವ್ಯಾಕರಣ-ಗ್ರಂಥವಾದ 'ಶಬ್ದಮಣಿದರ್ಪಣ'ವೂ ಈ ಯುಗದಲ್ಲಿ ರಚಿತವಾದುವು. ಸರ್ವ-ಮತೀಯ ಕವಿಗಳಿಗೆ ಇವು ಪ್ರಮಾಣಗ್ರಂಥಗಳಾದುವು. (೧೨) ಕಥನಪರಂಪರೆಯಲ್ಲಿ

'ಧರ್ಮಾಮೃತ'ದ ದಾರಿಯನ್ನು ತುಳಿದ ಜೈನಕಥೆಗಳು 'ಪುಣ್ಯಾಸ್ರವ'ದಲ್ಲಿಯೂ ಲೌಕಿಕಕಥೆಗಳು 'ಅಭಿನವದಶಕುಮಾರಚರಿತೆ'ಯಲ್ಲಿಯೂ ನಿರೂಪಿತವಾದುವು.

೧೪. ವಚನವಾಙ್ಮಯ—(ಆದ್ಯವಚನಕಾರರು)

ದೇವರದಾಸಿಮಯ್ಯ

ಈ ಯುಗದ ವಿಶಿಷ್ಟರೂಪವಾದ ವಚನವು ಬಸವೇಶ್ವರನಿಗಿಂತ ಮುಂಚೆ ಪ್ರಚಾರದಲ್ಲಿದ್ದು ಬಸವೇಶ್ವರ ಮುಂತಾದವರಿಂದ ಪರಿಣತಾವಸ್ಥೆಯನ್ನೂ ಪ್ರಚುರತೆ-ಯನ್ನೂ ಪಡೆಯಿತು. ದೇವರ ಇಲ್ಲವೆ ಜೇಡರದಾಸಿಮಯ್ಯ, ಶಂಕರದಾಸಿಮಯ್ಯ ಇವರಿಬ್ಬರೂ ಸಮಕಾಲೀನರಾಗಿ ಚಾಲುಕ್ಯಜಯಸಿಂಹನ (೧೦೧೫-೪೨) ಕಾಲದಲ್ಲಿ ಇದ್ದವರೆಂದು ಹರಿಹರ, ಭೀಮಕವಿ ಇವರ ಗ್ರಂಥಗಳಿಂದ ತಿಳಿಯುತ್ತದೆ. ಸುಮಾರು ೧೧೮೦ರಲ್ಲಿದ್ದ ಬ್ರಹ್ಮಶಿವನು ತನ್ನ 'ಸಮಯಪರೀಕ್ಷೆ'ಯಲ್ಲಿ ಜೇಡರದಾಸಿಯ ಹೆಸರನ್ನು ಹೇಳಿದ್ದಾನೆ. ಬಸವೇಶ್ವರನ ವಚನಗಳಲ್ಲಿ ದೇವರದಾಸಿಮಯ್ಯನ ಉಲ್ಲೇಖವು ಬಂದ ಬಗೆಯನ್ನು ನೋಡಿದರೆ ಅವನು ಬಸವನಿಗೆ ಪೂರ್ವಕಾಲೀನನೆಂಬ ಸಂಗತಿಗೆ ಬೆಂಬಲ ದೊರೆಯುತ್ತದೆ. '**ಆದ್ಯರ ವಚನವಿರಲು** ಬೇರೆ ಬಾವಿಯ ತೋಡಿ ಉಪ್ಪುನೀರ ಸವಿದಂತಾಯಿತ್ತಯ್ಯಾ ಎನ್ನ ಯುಕ್ತಿ. ನಿಮ್ಮ **ವಚನಂಗಳ** ಕೇಳದೆ ಅನ್ಯಪುರಾಣಗಳ ಕೇಳಿ ಕೆಟ್ಟೆನಯ್ಯಾ ಕೂಡಲಸಂಗಮದೇವಾ' ಎಂಬ ಅವನ ವಚನವೂ ವಚನಗಳ ಪೂರ್ವಪರಂಪರೆಯನ್ನು ಸೂಚಿಸುತ್ತದೆ. ಆದರೆ 'ಜೇಡರ-ದಾಸಿಯೂ ದೇವರದಾಸಿಯೂ ಒಬ್ಬನೇ ಮನುಷ್ಯನಿರಬಹುದೆಂದೂ ಆ ಮನುಷ್ಯನು ೧೨ನೆಯ ಶ.ದ ಉತ್ತರಾರ್ಧದಲ್ಲಿ ಬಸವಣ್ಣನವರ ಜೀವಿತಕಾಲದಲ್ಲಿ ಬದುಕಿದ್ದಿರಬಹು-ದೆಂದೂ ನಾವು ಅಭಿಪ್ರಾಯಪಡುತ್ತೇವೆ' ಎಂದು ಶ್ರೀ ಎಂ. ಆರ್. ಶ್ರೀನಿವಾಸ-ಮೂರ್ತಿಯವರು ಹೇಳಿದ್ದಾರೆ.[1] ಈ ಅಭಿಪ್ರಾಯಕ್ಕೆ ಕಾರಣವೆಂದರೆ ಕ್ರಿ.ಶ. ೧೨೦೦ರ ಅರಸಿಯಕೆರೆಯ ಶಾಸನದಲ್ಲಿ 'ಜೇಡರದಾಸಿಮಯ್ಯನ ಮಗ ಕಾಟಿಗೌಡ'ನ ಪ್ರಸ್ತಾಪ ಬಂದಿದೆ, ಅಲ್ಲದೆ 'ಶೂನ್ಯಸಂಪಾದನೆ'ಯಲ್ಲಿ ಅಲ್ಲಮಪ್ರಭುವಿನ ಸ್ತೋತ್ರಮಾಡಿದವರಲ್ಲಿ ಶಂಕರದಾಸಿಮಯ್ಯನೂ ಒಬ್ಬನಾಗಿದ್ದಾನೆ. ಎರಡನೆಯ ಕಾರಣವನ್ನು ಅಷ್ಟು ಒಪ್ಪುವಂತಿಲ್ಲ. ಯಾಕೆಂದರೆ 'ಶೂನ್ಯಸಂಪಾದನೆ'ಯಲ್ಲಿಯ ಆ ಸ್ತೋತ್ರವಚನಗಳು ಪ್ರಕ್ಷಿಪ್ತವಾಗಿರಬಹುದು. ಮೊದಲನೆಯ ಕಾರಣವು ವಿಚಾರಣೀಯವಾಗಿದೆ. ಆದರೆ

---

1 ಎಂ. ಆರ್. ಶ್ರೀನಿವಾಸಮೂರ್ತಿ: ಭಕ್ತಿಭಾಂಡಾರಿ ಬಸವಣ್ಣನವರು, ಪರಿಶಿಷ್ಟ ೨, ಪು. ೧೩೧.

ಚಾಲುಕ್ಯಜಯಸಿಂಹರಾಯನ ಕಾಲದಲ್ಲಿ ಅವರಿಬ್ಬರೂ ಇದ್ದರೆಂಬುದನ್ನು ಸುಲಭವಾಗಿ ಅಲ್ಲಗಳೆಯುವಂತಿಲ್ಲ. ಇದಕ್ಕೆ ಹೆಚ್ಚು ಬೆಲೆ ಕೊಡುವುದು ಯುಕ್ತವಾದ್ದರಿಂದ ಕಾಟಿಗೌಡನ ತಂದೆ ಬೇರೆ ಜೇಡರದಾಸಿಮಯ್ಯನಿರಬಹುದೆಂದು ಗ್ರಹಿಸಬೇಕಾಗುತ್ತದೆ. ಬಸವೇಶ್ವರನಿಗಿಂತ ನೂರು ವರ್ಷ ಮುಂಚಿನಿಂದ ಜೇಡರದಾಸಿಮಯ್ಯ, ಶಂಕರದಾಸಿಮಯ್ಯನಂಥ ಶಿವಶರಣರು ಹುಟ್ಟಿ ಚಾರಿತ್ರ್ಯದಿಂದಲೂ ವಾದವಿಜಯಗಳಿಂದಲೂ ವೀರಶೈವಧರ್ಮವನ್ನು ಬೆಳೆಸುತ್ತಿದ್ದರೆನ್ನಲು ಅಡ್ಡಿಯಿಲ್ಲ. ಅವರಿಂದ ವಚನಗಳ ರಚನೆಯೂ ನಡೆಯಿತು. ಹೀಗೆ ಬಸವಕಾಲೀನವಾದ ಕ್ರಾಂತಿಗೆ ಹಿನ್ನೆಲೆಯೊಂದು ಅಣಿಯಾಯಿತು ; ವಚನವಾಙ್ಮಯಕ್ಕೆ ಒಂದು ತಳಹದಿ, ಒಂದು ಪರಂಪರೆ ದೊರೆಯಿತು. ಅದು ವಿರಳವಾಗಿತ್ತೇ ಹೇರಳವಾಗಿತ್ತೇ ಎಂಬುದು ಸ್ಫುಟವಾಗಿ ತಿಳಿಯದು. ಆದರೂ 'ನಿಮ್ಮ ಶರಣರ ಸೂಳ್ನುಡಿ',[1] 'ಮೃಡಶರಣರ ನುಡಿಗಡಣ' ಎಂಬ ಮಾತುಗಳು ದೇವರದಾಸಿಮಯ್ಯನ ವಚನಗಳಲ್ಲಿ ಬಂದಿರುವುದನ್ನು ನೋಡಿದರೆ ಅವನಿಗಿಂತ ಹಿಂದಿನಿಂದಲೂ ವಚನವಾಙ್ಮಯವು ಪ್ರಚಾರದಲ್ಲಿರಬಹುದೆಂಬ ಅನುಮಾನಕ್ಕೆ ಎಡೆಯಿದೆ. ಇಷ್ಟೇ ಅಲ್ಲದೆ ಅವನು ತನ್ನ ವಚನವೊಂದರಲ್ಲಿ (ನಂ. ೫೦) ಡೋಹರ ಕಕ್ಕ, ಮಾದರ ಚೆನ್ನ ಮುಂತಾದ ಹಲವರನ್ನು ನೆನಸಿದ್ದಾನೆ. ಇವರು ಅವನ ಸಮಕಾಲೀನರಾಗಲಿ ಅವನಿಗಿಂತ ಪ್ರಾಚೀನರಾಗಲಿ ಇರಬಹುದು. ಡೋಹರ ಕಕ್ಕ, ಮಾದರ ಚೆನ್ನ, ಕೆಂಭಾವಿಯ ಭೋಗಣ್ಣ ಇವರು ವಚನಗಳನ್ನು ಬರೆದಿರುವರೆಂದು ತಿಳಿದಿದೆ.[2]

ದೇವರದಾಸಿಮಯ್ಯನ ವಚನಗಳು ೧೫೦ರ ವರೆಗೆ ಉಪಲಬ್ಧವಾಗಿ ಪ್ರಸಿದ್ಧವಾಗಿವೆ. ಅವುಗಳಲ್ಲಿ ಉತ್ಕಟವಾದ ವೀರಶೈವನಿಷ್ಠೆ, ನಿಷ್ಠುರವಾದ ಸ್ಪಷ್ಟವಾಕ್ಯತೆ, ಮಾರ್ಮಿಕವಾದ ಸಂಕ್ಷಿಪ್ತಶೈಲಿ, ಉಚಿತ ದೃಷ್ಟಾಂತಗಳ ಸಂಪತ್ತಿ ಈ ಗುಣಗಳು ಎದ್ದುಕಾಣುತ್ತವೆ. ಬಸವಣ್ಣನ ಕಾಲದ ವಚನಕಾರರಿಗೆ ಮುಂದೆ ಸ್ಫೂರ್ತಿಕೊಟ್ಟ ವಚನಪರಂಪರೆ ಯಾವ ರೀತಿಯಾಗಿತ್ತೆಂಬುದಕ್ಕೆ ಅವು ಮಾದರಿಯಾಗಿವೆ. ಶರಣರ ವಚನಗಳ ಮಹಿಮೆಯನ್ನು ಹೇಳುವಾಗ 'ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ', 'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥಾ' ಎಂಬ ಉತ್ಕಟವಾದ

---

1 'ಸೂಳ್ನುಡಿ' ಎಂದರೆ ಸಂಭಾಷಣೆ, ಪ್ರತ್ಯುಕ್ತಿ ಅಂದರೆ ಮಾತಿಗೆ ಉತ್ತರವಾಗಿ ಮಾತು, 'ವಚನ' ಎಂದು ಅರ್ಥವಲ್ಲ ಎಂಬುದಾಗಿ ಕೆಲವರು ಹೇಳುವುದುಂಟು. 'ಶೂನ್ಯಸಂಪಾದನೆ'ಯಿಂದ ತಿಳಿಯುವ ಮೇರೆಗೆ ಅನೇಕ ವಚನಗಳು ಸಂಭಾಷಣೆ, ಪ್ರತ್ಯುಕ್ತಿಗಳ ಸ್ವರೂಪವುಳ್ಳುವು ಆಗಿರುತ್ತವೆ. ಆದ್ದರಿಂದ 'ಸೂಳ್ನುಡಿ'ಗೆ 'ವಚನ' ಎಂಬ ರೂಢಾರ್ಥವೂ ಬಂದಿರಬೇಕು.

2 ಡಿ. ಎಲ್. ನರಸಿಂಹಾಚಾರ್ : ಕೆಲವರು ವಚನಕಾರರು – ೧ (ಪ್ರ.ಕ., ೧೯–೧, ಪು. ೧೦–೧೧)

ನುಡಿಗಳಿವೆ. 'ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ?', 'ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ?' ಎಂಬ ಕಿರುನುಡಿಯ ಸಾದೃಶ್ಯಗಳಿವೆ. 'ಬರುಶಠಗನ ಭಕ್ತಿ ದಿಟವೆಂದು ನಚ್ಚಲು ಬೇಡ. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು', 'ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ ಕೊಯಿದುಂಬ ಕ್ರೂರಕರ್ಮಿಗಳನೆ ಶಿವಭಕ್ತರೆನ್ನಬಹುದೆ?'— ಇಂಥ ವಾಕ್ಯಗಳಲ್ಲಿ ಖಂಡಿತವಾದ ಜನಜೀವನವಿಮರ್ಶೆಯಿದೆ. 'ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ ಅಮೃತದೊಳಗಣ ರುಚಿಯ ನಾಲಗೆಯ ತುದಿಯಲ್ಲಿ ಅರಿವನ ಚೇತನದಂತೆ ನಿಲವಿಲ್ಲದೆ ರೂಪಕಳೆಯಲ್ಲಿ ವೇಧಿಸುವವನ ಪರಿ ರಾಮನಾಥಾ'—ಇಂಥ ವಚನಗಳಲ್ಲಿ ಅನುಭಾವದ ಅನನ್ಯತೆಯಿದೆ. ಇವನ ಅನೇಕ ವಚನಗಳಲ್ಲಿ ಅಧ್ಯಾತ್ಮವು ಸಾಹಿತ್ಯಗುಣದಿಂದ ಕೂಡಿ ಅಭಿವ್ಯಕ್ತವಾಗಿದೆ. ಆದರೂ ವಿಡಂಬನೆಯ ಅತಿಕಟುತೆ, ಮಾತಿನ ಒರಟುತನ ಇವು ಆಗಾಗ ತಲೆಯಿಕ್ಕಿವೆ. ವಚನಗದ್ಯಕ್ಕೆ ಬೇಕಾದ ಸೂಕ್ಷ್ಮ ಲಯ–ನಯಗಳ ಕೊರತೆಯೂ ಇದೆ. ಈ ದಾರಿಯಲ್ಲಿ ಹೆಚ್ಚಿನ ಪರಿಣತಿಯನ್ನು ಮುಂದಿನ ವಚನಕಾರರಲ್ಲಿ ಕಾಣಬಹುದು. 'ದೇವರದಾಸಿಮಯ್ಯನ ವಚನಗಳು ಸಾಹಿತ್ಯದೃಷ್ಟಿಯಿಂದ ಬಹು ಉತ್ತಮವಾದ ವರ್ಗಕ್ಕೆ ಸೇರತಕ್ಕುವಾಗಿವೆ'[1] ಎಂಬುದು ಅತ್ಯುಕ್ತಿಯೆಂದು ನಮಗೆ ತೋರುತ್ತದೆ.

ಶಂಕರದಾಸಿಮಯ್ಯನ ವಚನಗಳು ಸಾಕಷ್ಟು ಪ್ರಮಾಣದಲ್ಲಿ ಈ ವರೆಗೆ ದೊರೆತಿಲ್ಲ. 'ಶೂನ್ಯಸಂಪಾದನೆ'ಯಲ್ಲಿ 'ನಿಜಗುರುಶಂಕರದೇವಾ' ಎಂಬ ಅಂಕಿತದ ಎರಡು ವಚನಗಳಿದ್ದು ಅವು ಶಂಕರದಾಸಿಮಯ್ಯನ ವಚನಗಳೆಂದು ಹೇಳುವುದುಂಟು. ಆದರೆ ಚಾರಿತ್ರಿಕ ದೃಷ್ಟಿಯಿಂದ ನೋಡಿದರೆ ಅವು ಪ್ರಕ್ಷಿಪ್ತವಾಗಿರುವ ಸಂಭವವು ಹೆಚ್ಚಿದೆ. ವೀರಶಂಕರದಾಸಿಮಯ್ಯಗಳ ವಚನವೆಂಬುದಾಗಿ ಒಂದೇ ಒಂದು ಉದ್ದ ವಚನವು ಉಪಲಬ್ಧವಾಗಿದೆ.[2] ಶಂಕರದಾಸಿಯೇ ವೀರಶಂಕರದಾಸಿಯೆಂಬುದು ಸಿದ್ಧವಾದರೆ ಈ ವಚನವನ್ನು ಅವಗಾಹನೆಗೆ ತೆಗೆದುಕೊಳ್ಳಬಹುದು. ಕುಲಶ್ರೇಷ್ಠತೆಯ ವಾದವನ್ನು ಉದ್ದಾನುದ್ದವಾದ ವಾದಸರಣಿಯಲ್ಲಿ ಹೊಡೆದುಹಾಕುವ ಈ ವಚನವು ದೇವರದಾಸಿಮಯ್ಯನ, ಇಷ್ಟೇಕೆ ಬಸವೇಶ್ವರನ ಕಾಲದ್ದೂ ಅಲ್ಲವೆಂದು ತೋರುತ್ತದೆ. ಇದರಲ್ಲಿ ಟೀಕೆಗೆ ಗುರಿಯಾದ ಧಾರ್ಮಿಕ ಸಂಪ್ರದಾಯಗಳೂ ಇದರ ಭಾಷಾಶೈಲಿಯೂ ವಿಶೇಷವಾಗಿ 'ಬಾಸ್ಕಳಗೆಡೆವುತ್ತಿಪ್ಪಿರಿ' ಎಂಬ ಪ್ರಯೋಗದ ಮೇಲಿನ ಮರಾಠಿ ವರ್ಚಸ್ಸೂ ಈ ಅನಿಸಿಕೆಗೆ ಬೆಂಬಲಕೊಡುತ್ತವೆ.

---

1 ಡಿ. ಎಲ್. ನರಸಿಂಹಾಚಾರ್: ಕೆಲವರು ವಚನಕಾರರು – ೧ (ಪ್ರ.ಕ., ೧೯–೧, ಪು. ೧೬)

2 ಶಂಕರದಾಸಿಮಯ್ಯಪುರಾಣ: ಸಂ. ವೀ. ಬ. ಹಾಲಭಾವಿ (ಪ್ರಸ್ತಾವನೆ, ಪು. ೩೬–೪೦)

'ಮೆರೆಮಿಂಡಯ್ಯ' ಎಂಬ ವಚನಕಾರನು ಸುಮಾರು ೧೧೦೦ರಲ್ಲಿದ್ದನೆಂದು ಕವಿಚರಿತಕಾರರು ಹೇಳಿದ್ದಾರೆ. ಆದರೆ ಈ ಕಾಲಸೂಚನೆಗೆ ಅವರು ಕಾರಣ ಕೊಟ್ಟಿಲ್ಲ. ಇವನು ಮೆರೆಮಿಂಡನಾರ್ ಎಂಬ ಸು. ೮ನೆಯ ಶ.ದ ತಮಿಳುನಾಡಿನ ಶಿವಭಕ್ತನಲ್ಲವೆಂದು ಅವರೇ ಒಪ್ಪಿಕೊಂಡಿದ್ದಾರೆ. ಇವನ ಕಾಲನಿರ್ಣಯವಾಗುವ ವರೆಗೆ ಬಸವ-ಪೂರ್ವಕಾಲೀನನೆಂದು ಇವನನ್ನು ಭಾವಿಸುವುದು ತಪ್ಪು. ಅಂತೇ ಇವನವೆಂದು ದೊರೆತ ೧೦೧ ವಚನಗಳ ವಿವೇಚನೆ ಅಪ್ರಸ್ತುತವಾಗಿದೆ.

ಕೊಂಡಗೂಳಿ ಕೇಶಿರಾಜನು ಸು. ೧೧೬೦ರಲ್ಲಿದ್ದ ವಚನಕಾರನೆಂದು 'ಕವಿಚರಿತೆ' ಯಲ್ಲಿದೆ. ಆದರೆ ಅವನು ದೇವರದಾಸಿಮಯ್ಯ, ಶಂಕರದಾಸಿಮಯ್ಯ ಇವರೊಡನೆ ವೀರಶೈವಸಾಹಿತ್ಯಕ್ಕೆ ಮೊದಲಿಗನೆಂಬ ಅಭಿಪ್ರಾಯವೊಂದಿದೆ. 'ಛಂದೋಬದ್ಧವಾದ ಕವಿತೆಗಳನ್ನು ಬರೆದವರಲ್ಲಿ ಕೇಶಿರಾಜ ದಂಡನಾಯಕನು ಮೊದಲಿನ ಲಿಂಗವಂತ ಕವಿ ಎಂದು ಹೇಳಬಹುದು'[1] ಎಂದೂ ಹೇಳಲಾಗಿದೆ. ಕೇಶಿರಾಜನು ದೇವರದಾಸಿ-ಮಯ್ಯನ ಸಮಕಾಲೀನನು ಎಂಬುದಕ್ಕೆ ನಿರ್ವಿವಾದ ಆಧಾರವಿನ್ನೂ ದೊರೆತಿಲ್ಲ. ಬಸವೇಶ್ವರನ ಸಮಕಾಲೀನನೆಂದು ಸದ್ಯಕ್ಕೆ ಭಾವಿಸಿದರೆ ಛಂದೋಬದ್ಧವಾದ ಕವಿತೆ-ಗಳನ್ನು, ವಿಶೇಷವಾಗಿ ಕಂದಪದ್ಯವನ್ನು ಬರೆದವರಲ್ಲಿ ಅವನು ಮೊದಲನೆಯ ಲಿಂಗವಂತ ಕವಿಯೆಂದು ಹೇಳಬಹುದು. ಹರಿಹರ-ರಾಘವಾಂಕರು ಅವನನ್ನು ನೆನೆದಿರುವ ಕಾರಣ, ಅವರಿಗಿಂತ ಅವನು ಪ್ರಾಚೀನನೆಂಬುದು ಸ್ಪಷ್ಟವಾಗಿದೆ.

ಸಕಲೇಶಮಾದರಸ

ಬಸವೇಶ್ವರನ ಸಮಕಾಲೀನರೆ ಆದರೂ ಅವನಿಗಿಂತ ಹಿರಿಯರಾದ ವಚನಕಾರ-ರಲ್ಲಿ ಸಕಲೇಶಮಾದರಸನೊಬ್ಬನು. ಬಸವಪುರಾಣ, ಪದ್ಮರಾಜಪುರಾಣಗಳಿಂದ ತಿಳಿದ ಅವನ ಚರಿತ್ರೆಯಲ್ಲಿ ಅವನ ತಂದೆ ಇಲ್ಲವೆ ಗುರುವಾದ ಮಲ್ಲರಸನು ಶ್ರೀಶೈಲದಲ್ಲಿ ಇರಲು ಅಲ್ಲಿಗೆ ಅವನು ವಿರಕ್ತಿಹೊಂದಿ ಹೋಗಿ ಗುರುಕೃಪೆಯನ್ನು ಬಯಸಿದಾಗ 'ಕಲ್ಯಾಣದಲ್ಲಿ ಬಸವನ ಬಳಿ ಕೆಲವು ಕಾಲ ಇದ್ದು ಬಾ' ಎಂದು ಮಲ್ಲರಸನು ಹೇಳಿದನಂತೆ, ಆ ಮೇರೆಗೆ ಅವನು ಕಲ್ಯಾಣಕ್ಕೆ ಹೋದನಂತೆ. ಈ ಸಂದರ್ಭದಲ್ಲಿ,

'ವರಶಿವಾಚಾರಾಬ್ಧಿ ವರ್ಧಿಸು- ।
ತಿರೆ ಚರಿಸವೇಳ್ಕಳಿಯೊಳಿತ್ತಲು ।
ನಿರುತದಿಂದೈವತ್ತು ವರುಷಂಗಳಿಗೆ ನಿನಗಿಂತು ॥
ಬರವಿದೇಳ್ನೂರ್ ವತ್ಸರಂಗಳು ।
ಚರಿಸಿದವು ಬಳಿಕಿನ್ನು ನಾವೇ ।
ಬರಿಸಿಕೊಂಬೆವು ನಿನ್ನನೊಸೆದೈವತ್ತು ವರ್ಷಕ್ಕೆ ॥' (ಬ.ಪು. ೨೦-೩೦)

1 ಬಿ. ಶಿವಮೂರ್ತಿಶಾಸ್ತ್ರಿ : ವೀರಶೈವಸಾಹಿತ್ಯ ಮತ್ತು ಇತಿಹಾಸ, ಪು. ೬.

'ಇನ್ನುಂ ಧರಣಿಯೊಳೈವತ್ತು ಬರಿಸದ ವರ್ತ- |
ನಂ ನೆರೆವುದದನೆಮ್ಮ ಬಸವಾದಿಗಳ್ ಭಕ್ತಿ- |
ಯಂ ನಿಲಿಸಲೆಂದು ಕಲ್ಯಾಣದೊಳ್
ಬಂದಿರ್ಪರವರೊಡನೆ ಕಳೆಯೆಂದೆನೇ ||' (ಪ.ಪು. ೨-೨೨)

ಎಂಬ ಅವತರಣಿಕೆಗಳನ್ನು ನೋಡಿದರೆ ಬಸವನ ಬಳಿ ಐವತ್ತು ವರ್ಷಗಳ ಕಾಲ ಹೋಗಿರಬೇಕೆಂದು ಮಾದರಸನಿಗೆ ಮಲ್ಲರಸನ ಆದೇಶವಾಯಿತೆಂಬುದು ಸ್ಪಷ್ಟ-ವಾಗುತ್ತದೆ. 'ಇನ್ನು ೫೦ ವರ್ಷಗಳ ಮೇಲೆ ಶಿವಭಕ್ತಿಯನ್ನು ನೆಲೆಗೊಳಿಸಲು ಬಸವಾದಿಗಳು ಕಲ್ಯಾಣಪಟ್ಟಣದಲ್ಲಿ ಬರುವರು'[1] ಎಂಬುದನ್ನು ಅವು ತಿಳಿಸುವುದಿಲ್ಲ. 'ಬಸವನೆಂಬ ಪ್ರಮಥನೊರ್ಬನು....ವಸುಮತಿಗೆ **ಬಂದಿರ್ಪನು**' (ಬ.ಪು. ೨೦-೪೯), 'ಬಸವಾದಿಗಳ್....**ಬಂದಿರ್ಪರ್**' (ಪ.ಪು. ೨-೨೨) ಇವುಗಳಲ್ಲಿಯ ವರ್ತಮಾನ-ಕ್ರಿಯಾರೂಪವು ಬಸವಾದಿಗಳು ಮಾದರಸನಿಗೆ ಸಮಕಾಲೀನರು ಎಂಬುದನ್ನು ಸೂಚಿಸುತ್ತದೆ. ಅವನ ೬೨, ೭೮ ಈ ವಚನಗಳಲ್ಲಿ ಅನುಮಿಷ, ಬಸವಣ್ಣ, ಪ್ರಭುದೇವ, ಅಜಗಣ್ಣ ಇವರ ಉಲ್ಲೇಖ ಬಂದುದೂ ಇದಕ್ಕೆ ಪೋಷಕವಾಗಿದೆ. ಮಾದರಸನು ಅನೇಕ ವರ್ಷಗಳವರೆಗೆ ರಾಜ್ಯವಾಳಿ ಆಮೇಲೆ ವೈರಾಗ್ಯತಾಳಿ ಶ್ರೀಶೈಲಕ್ಕೆ ಹೋದ-ನೆಂಬುದರಿಂದ ಅವನು ವಯಸ್ಸಿನಿಂದ ಹಿರಿಯನಾಗಿರಬೇಕೆಂದು ತಿಳಿಯಬಹುದಾಗಿದೆ. ಈವರೆಗೆ ಉಪಲಬ್ಧವಾದ ಇವನ ವಚನಗಳು ೮೮ ಇರುತ್ತವೆ. ಶರಣರ ವಚನಗಳಲ್ಲಿ ಸಾಮಾನ್ಯವಾಗಿ ಗೋಚರವಾಗುವ ಲಕ್ಷಣಗಳು ಇದರಲ್ಲಿವೆ. ಅಲ್ಲದೆ, ಜೇಡರ-ದಾಸಿಮಯ್ಯನಿಗಿಂತಲೂ ಹೆಚ್ಚಾದ ಸಾಹಿತ್ಯರೀತಿಯ ಸವಿ ಮತ್ತು ನಯಗಳು ಇಲ್ಲಿ ತಲೆದೋರಿವೆ. ಬಸವಣ್ಣನಲ್ಲಿ ಹಿರಿಗುಣವಾಗಿದ್ದ ಆತ್ಮಪರೀಕ್ಷಣ, ಸ್ಪಷ್ಟೋಕ್ತಿಗಳನ್ನು 'ಜನಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ!........ತನುವಿನ ಮೇಲೆ ಬ್ರಹ್ಮಚರ್ಯತ್ವವಳವಟ್ಟರೇನು ಮನದ ಮೇಲೆ ಬ್ರಹ್ಮಚರ್ಯತ್ವವಳವಡದನ್ನಕ್ಕ?.... ಮೆಳೆಯ ಮೇಲೆ ಕಲ್ಲನಿಕ್ಕಿ ಮೆಳೆ ಭಕ್ತನಾಗಬಲ್ಲುದೆ?....ಅನ್ನವನಿಕ್ಕಿ ಹಿರಣ್ಯವ ಕೊಟ್ಟರೆ ಜಗವೆಲ್ಲ ಹೊಗಳುವುದು' ಮಾದರಸನ ಇಂಥ ವಚನಗಳಲ್ಲಿ ಕಾಣಬಹುದು. ಭಕ್ತಿಯ ಉತ್ಕಟತೆ, ನಮ್ರತೆ, ವಿರಕ್ತಿಗಳನ್ನು 'ಜಂಗಮಲಿಂಗಕ್ಕೆ ಅರ್ಥಪ್ರಾಣಾಭಿ-ಮಾನವ ಬಿಟ್ಟು ಅಹಂಕಾರವಿಲ್ಲದಂಥ ಪುರಾತನರ ಮನೆಯ ಬಚ್ಚಲ ಬಾಲಹುಳುವಾಗಿ ಹುಟ್ಟಿಸಯ್ಯ ಸಕಳೇಶ್ವರಾ, ...ನೀನೆನ್ನನೊಲ್ಲದಿದ್ದರೆ ನಾನಾರ ಸಾರಿ ಬದುಕುವೆ-ನಯ್ಯಾ?' ಎಂಬ ವಚನಗಳು ಅರಿಪುತ್ತವೆ. ಷಟ್ಸ್ಥಲಸೋಪಾನವನ್ನು ಏರುತ್ತ ಮಾದರಸನು ಅನುಭಾವದ ಎತ್ತರವನ್ನು ಅನುಭವಿಸಿದ್ದನೆಂಬುದಕ್ಕೆ 'ಜ್ಯೋತಿಯ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ! ಸಾಗರವ ಮುಟ್ಟಿದ ನದಿಗಳೆಲ್ಲ

---

1 ಫ. ಗು. ಹಳಕಟ್ಟಿ: ಸಕಲೇಶಮಾದರಸನ ವಚನಗಳು, ಪ್ರಸ್ತಾವನೆ, ಪು. ೩.

ಸಾಗರವಪ್ಪಯ್ಯಾ!' ಈ ಮುಂತಾದ ವಚನಗಳು ಸಾಕ್ಷಿಯಾಗಿವೆ. 'ದಯದಿಂದ ಬಿಟ್ಟು ಧರ್ಮವಿಲ್ಲ' ಎಂಬಂಥ ಸೂತ್ರಬದ್ಧ ವಚನಗಳಲ್ಲಿ ಬಸವೇಶ್ವರನ ವಚನಗಳ ಸಮಿಾಪದ ಹೋಲಿಕೆ ಬಂದಿದೆ. ಕೆಲವು ವಚನಗಳು ತತ್ವನೀತಿಗಳ ಸರಳನಿರೂಪಣೆ-ಯಾಗಿವೆ, ಸಾಹಿತ್ಯದೃಷ್ಟಿಯಿಂದ ಅವಕ್ಕೆ ಮಹತ್ವವಿಲ್ಲ. ಆದರೆ ಇನ್ನುಳಿದ ವಚನ-ಗಳಲ್ಲಿ ಸಾಹಿತ್ಯಮನೋಧರ್ಮವುಳ್ಳ ಅನುಭಾವಿಯ ಸಹಜಸುಂದರವಾದ ಅಭಿವ್ಯಕ್ತಿ-ಯಿದೆ, ಮಾರ್ಮಿಕವಾದ ಜಾಣ್ನುಡಿಯಿದೆ. ಬಸವಣ್ಣ ಮುಂತಾದ ವಚನಕಾರರಿಂದ ಮುಂದೆ ಬರಲಿರುವ ಸಂಪತ್ತಿಗೆ ಸಂಚಕಾರವು ಮಾದರಸನಲ್ಲಿದೆ.

ಪ್ರಭುದೇವ

ಪ್ರಭುದೇವ ಇಲ್ಲವೆ ಅಲ್ಲಮಪ್ರಭು ಬಸವಣ್ಣನಿಗೆ ಹಿರಿಯನು ಮಾತ್ರವಲ್ಲ. ಈ ಕಾಲದ ಶರಣರಲ್ಲಿಯೇ ಶ್ರೇಷ್ಠವ್ಯಕ್ತಿಯಾಗಿದ್ದನು. ದಕ್ಷಿಣಕರ್ನಾಟಕದ ಬಳ್ಳಿ-ಗಾವೆಯ ಬಳ್ಳಿಗೆ ಒಮ್ಮಿಂದೊಮ್ಮೆ ಅರಳಿದ ಹೂವಾಗಿ ವೈರಾಗ್ಯಜ್ಞಾನಗಳಲ್ಲಿ ಪರಿಣತ-ಪ್ರಜ್ಞನಾಗಿ ಶಿವಾದ್ವೈತದ ಮೂರ್ತಿಯಾಗಿ ಅವನು ತಲೆದೋರಿದನು, ಅಂದಿನ ಸಾಧಕರ, ಸಿದ್ಧರ ಎಲ್ಲರ ಮೇಲೆ ತನ್ನ ಆಳವಾದ ಪ್ರಭಾವ ಬೀರಿದನು. ಮತಪಂಥಗಳ ಸ್ಥೂಲ-ಸೂಕ್ಷ್ಮ ಬಲೆಗಳಿಗೆ ಅವನು ಒಳಗಾಗಲಿಲ್ಲ. ವೀರಶೈವಸಿದ್ಧಾಂತದ ಸಾರವನ್ನೇ ತನ್ನ ಇರವಿನಲ್ಲಿ ನಿರಿಸಿ, ಶರಣಮಾರ್ಗಕ್ಕೆ ಗುರುವಾದನು. ಅನುಭವಮಂಟಪದ ಅಧ್ಯಕ್ಷನಾದನು, ಶೂನ್ಯಸಿಂಹಾಸನದ ದೊರೆಯಾದನು. ಆದರೂ ಯಾವ ಕಟ್ಟಿಗೂ ಅವನು ಒಳಪಡಲಿಲ್ಲ. ಎಲ್ಲ ಮಾರ್ಗಗಳ, ವ್ಯಕ್ತಿಗಳ ಗುಣಾಂಶವನ್ನು ಅವನು ಮೆಚ್ಚಿದನು, ಅವಗುಣಗಳನ್ನು ಕೆಡೆನುಡಿದನು. ವೀರಶೈವಸಹಿತವಾಗಿ ಎಲ್ಲ ಸಂಪ್ರದಾಯಗಳು ಅವನ ನಿಷ್ಠುರವಿಮರ್ಶೆಗೆ ಗುರಿಯಾದುವು. ಆ ನಿಷ್ಠುರತೆ ಜ್ಞಾನಿಯ, ಸತ್ಯಪ್ರೇಮಿಯ ಶುದ್ಧಬುದ್ಧಿಯಿಂದ, ಸೂಕ್ಷ್ಮದೃಷ್ಟಿಯಿಂದ ಉಂಟಾ-ದುದು, ಅಂತೇ ಅದಕ್ಕೆ ಎಲ್ಲರೂ ತಲೆಬಾಗುತ್ತಿದ್ದರು. ಪ್ರಭುದೇವನ ವ್ಯಕ್ತಿತ್ವ ಮತ್ತು ವಚನರಚನೆ ಕನ್ನಡವಾಙ್ಮಯಕ್ಕಲ್ಲದೆ ಭಾರತೀಯ ಹಾಗೂ ಜಾಗತಿಕ-ಸಾಹಿತ್ಯಕ್ಕೆ ಅಸಾಧಾರಣವಾದ ತೇಜಸ್ಸುಳ್ಳ ಕಾಣಿಕೆಯಾಗಿರುತ್ತವೆ.

ಅವನ ವಚನಗಳ ಬಹುಭಾಗವು ಅಧ್ಯಾತ್ಮಮಾರ್ಗಿಗಳಿಗೂ ಸುಲಭಗ್ರಾಹ್ಯವಲ್ಲ. ಅನುಭಾವದ ಆಳದಿಂದ, ಜ್ಞಾನದ ಶಿಖರದಿಂದ ಉಸುರಿದ ಆ ಮಾತು ಆಡಿದ ಮಾತಲ್ಲ. 'ಮಾತೆಂಬುದು ಜ್ಯೋತಿರ್ಲಿಂಗ' ಎಂಬುದನ್ನು ಅದರ ಸಾರವು ಸಾರ್ಥಕಪಡಿಸುತ್ತದೆ. ಆತ್ಮಜ್ಞಾನ-ಆನಂದಗಳು ಮಾತಿಗೆ ನಿಲುಕದ ಅನುಭವ-ವಿಷಯಗಳು ಎಂಬುದನ್ನು ಅರಿತೂ ಪ್ರಭುದೇವನು ಬೆರಗಿನ ನುಡಿ, ಬೆಡಗಿನ ವಚನಗಳಲ್ಲಿ ಅನುಭಾವದ ನಿರಾಕಾರವನ್ನು ನಿಲುಕುವಷ್ಟು ಮಾತಿನಲ್ಲಿ ಸಾಕಾರ-ಗೊಳಿಸಿದ್ದಾನೆ. ಅವನಿಗೇ ಸಾಧ್ಯವಾದ ಘನತೆಯದು. 'ನಿಮ್ಮ ನಿಲವ ಅನುಭವ-

ಸುಖಿ ಬಲ್ಲ' (೪-೨),[1] 'ಅರಿಯಬಾರದ ಘನವನರಿದವರು ಅರಿಯದಂತಿರ್ಪರು ಗುಹೇಶ್ವರಾ' (೧೭೬-೫೨), 'ಘನವ ಮನಕಂಡು ಅದನೊಂದು ಮಾತಿಂಗೆ ತಂದು ನುಡಿದರೆ ಅದಕದೆ ಕಿರಿದು ನೋಡಾ' (೩೦೩-೫೧), 'ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ ಅಕಟಕಟ ಶಬ್ದದ ಲಜ್ಜೆಯ ನೋಡಾ. ಗುಹೇಶ್ವರನರಿಯದ ಅನುಭವಗಳೆಲ್ಲರ ತರಕಟಗಾಡಿತ್ತು' (೧೩೨-೯೧) ಹೀಗೆ ಅನುಭಾವದ ಅನಿರ್ವಚನೀಯತೆಯನ್ನು ಹೇಳಿದಾತನು 'ತಲೆಯಿಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ. ಅನಲಂಗೆ ಅಂಗವಿಲ್ಲದಂಗನೆ ಸತಿಯಾಗಿಪ್ಪಳು. ಇವರಿಬ್ಬರ ಬಸಿರಲ್ಲಿ ಹುಟ್ಟಿದಳೆಮ್ಮ ತಾಯಿ. ನಾ ಹುಟ್ಟಿ ತಾಯ ಕೈವಿಡಿದು ಸಂಗವ ಮಾಡಿ ನಿರ್ದೋಷಿಯಾದೆನು ಕಾಣಾ ಗುಹೇಶ್ವರಾ' (೯-೯) ಈ ಬಗೆಯ ಬೆಡಗಿನ ವಚನಗಳಲ್ಲಿ ಸೂಕ್ಷ್ಮಕ್ಕೆ ಪ್ರತೀಕಗಳ ಚಿತ್ರ ತೊಡಿಸಿದ್ದಾನೆ. ಇಲ್ಲಿ ತೋರುವ ಅಸಂಗತಿಗಳೂ ವಿರೋಧಾಭಾಸಗಳೂ ವಿವರಣೆಯಿಂದ ಇಲ್ಲದಾಗುತ್ತವೆ. ಗುಹೇಶ್ವರನ ಅಂಕಿತವುಳ್ಳ ಪ್ರಭುವಿಗೆ ಈ 'ಗುಹ್ಯಾತ್ ಗುಹ್ಯತರಂ' ಉಕ್ತಿ ಸಹಜವಾದರೂ ಸಾಹಿತ್ಯದೃಷ್ಟಿಯಿಂದ ಇಲ್ಲಿಯ ಗೂಢತೆ ಸ್ವಾರಸ್ಯಗ್ರಹಣಕ್ಕೆ ಕೆಲವು ಸಲ ಬಾಧಕ-ವಾಗುತ್ತದೆ. ಪ್ರತೀಕಗಳ ಅನಿಶ್ಚಿತಿ ಇದಕ್ಕೆ ಮುಖ್ಯ ಕಾರಣ. ಇನ್ನು ಕೆಲವು ವಚನಗಳಲ್ಲಿ ಹೇಳಿತವು ಅತಿಸಂಕ್ಷಿಪ್ತವೂ ಸೂತ್ರಬದ್ಧವೂ ಆಗಿದ್ದು ತಿಳಿದ ಓದುಗನಿಗೆ ಸಹ ಅಸ್ಪಷ್ಟವಾಗುತ್ತದೆ. ಉದಾ. 'ಕಾಯದ ಮೊದಲಿಂಗೆ ಬೀಜವಾವುದೆಂದರಿಯದೀ ಲೋಕ. ಇಂದ್ರಿಯಗಳು ಬೀಜವಲ್ಲ. ಆ ಕಳಾಭೇದವಲ್ಲ. **ಸ್ವಪ್ನ ಬಂದೆರಗಿತ್ತಲ್ಲಾ.** ಇದಾವಂಗೂ ಶುದ್ಧಸುಯಿಧಾನವಲ್ಲ' (೧೧-೨೨). ಇಲ್ಲಿ 'ಸ್ವಪ್ನ ಬಂದೆರಗಿತ್ತಲ್ಲಾ' ಎಂದರೆ 'ದೇಹಭಾವ ಉದಯವಾಯಿತ್ತು' ಎಂಬ ವಿಶೇಷಾರ್ಥವು ವಿವರಣೆಯಿಂದ ಮಾತ್ರ ತಿಳಿಯಬಲ್ಲುದು. ಪ್ರಭುದೇವನ ಜ್ಞಾನಪರಿಣತಪ್ರಭೆಗೆ ಈ ಮಿಂಚುವೇಗದ ಶೈಲಿ ತೀರ ಸ್ವಾಭಾವಿಕ. ಸೂಕ್ಷ್ಮವಿರುವಷ್ಟು ಪ್ರಸನ್ನವೂ ರಮ್ಯವೂ ಆದ ವಚನಗಳು ಕೆಲವಿರುತ್ತವೆ. ಉದಾ: 'ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಿಹೆ-ನೆಂದರೆ ಸಿಕ್ಕದೆಂಬ ಬಳಲಿಕೆಯ ನೋಡಾ' (೩೬-೫೧), 'ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವರಯ್ಯಾ. ಬಯಲು ಬೆತ್ತಲೆ ಇರ್ದ್ದರೆ ಏನನುಡಿಸುವರಯ್ಯಾ. ಭಕ್ತನು ಭವಿಯಾದಡೆ ಅದೇನನುಪಮಿಸುವನಯ್ಯಾ ಗುಹೇಶ್ವರಾ' (೬೬-೧೯೯), 'ಮುಗಿಲ ಬಣ್ಣದ ಪಕ್ಷಿ, ಮಗನ ಕೈಯರಗಿಳಿ ಗಗನಕೋಲಂಬಿನಲ್ಲಿ ಸ್ವಪ್ನದ ಹುಲವನು ತೆಗೆದೆಚ್ಚವನಾರೋ' (೨೬-೩೪), ಈ ವಚನಗಳನ್ನು ನೋಡಬೇಕು. ಎಲ್ಲ ಕಡೆಗೆ ಅಲ್ಲಮಪ್ರಭುವಿನ ಅನೂನವ್ಯಕ್ತಿತ್ವವು ಉಜ್ವಲ ಕಿರಣದಂತೆ ಕಣ್ಣು

1 ಪ್ರಭುದೇವರ ವಚನಗಳು. ಇಲ್ಲಿ ಮತ್ತು ಮುಂದೆ ಉದಾಹರಿಸಲಾದ ವಚನಗಳ ಕೊನೆಗೆ ಕೊಟ್ಟ ಅಂಕಿಗಳಲ್ಲಿ ಮೊದಲನೆಯದು ಆಯಾ ವಚನಗ್ರಂಥದ ಪುಟವನ್ನೂ ಎರಡನೆ ಯದು ವಚನಸಂಖ್ಯೆಯನ್ನೂ ತಿಳಿಸುತ್ತದೆ.

ಕೋರೈಸುತ್ತದೆ. ನಾವು ಸುಲಭವಾಗಿ ಒಪ್ಪಿದ ಮಾತುಗಳನ್ನು ಅಲ್ಲಗಳೆಯುತ್ತದೆ, ಅರಿಯದ ಮಾತುಗಳನ್ನು ಅರಿಪುತ್ತದೆ, ನಮ್ಮ ನಡೆನುಡಿಗಳಲ್ಲಿಯ ವಿರೋಧಗಳನ್ನು ನಿರ್ಭಯವಾಗಿ ಎತ್ತಿತೋರುತ್ತದೆ, ಅಜ್ಞಾನ-ಅಹಂಕಾರಗಳಿಗೆ ಸಿಡಿಲಿನೇಟಾಗುತ್ತದೆ. ಯಾಕೆಂದರೆ ಅದು ಜ್ಞಾನಿಯ ಅಧಿಕಾರವಾಣಿ. ಅದರಲ್ಲಿ ಹೋರಾಟವಿಲ್ಲ, ಏಳುಬೀಳುಗಳಿಲ್ಲ. ಆದರೆ ಆತ್ಮವಿಶ್ವಾಸವುಳ್ಳ ವಿನಯವಿದೆ, ಉಪಕಾರಭಾವವಿದೆ. ಉದಾ: 'ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ....ಗುಹೇಶ್ವರಾ ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ' (೫೩-೮೫) 'ಲಿಂಗಾನುಭವಿಗಳ ಸಂಗದಿಂದಾನು ಕಣ್ದೆರೆದೆನು ಕಾಣಾ ಗುಹೇಶ್ವರಾ' (೫೮-೯೪). 'ನಿನಗೆ ನೀ ಗುರುವಲ್ಲದೆ ನಿನ್ನಿಂದಧಿಕವಪ್ಪ ಗುರುವುಂಟೇ',[1] 'ತನ್ನ ತಾನರಿದರೆ ನುಡಿ ಎಲ್ಲ ಪರತತ್ವ ನೋಡಾ'[2] ಎಂಬ ತರದ ವಚನಗಳಲ್ಲಿ ಜ್ಞಾನ ಮಾರ್ಗಿಯ ಬಿರುದುವಾಕ್ಯವಿದೆ. ಅಲ್ಲಮನು ತನ್ನ ವಚನಗಳಲ್ಲಿ ಬಗೆಬಗೆಯಾಗಿ ಇದನ್ನು ವಿವರಿಸಿದ್ದಾನೆ. ಬದುಕಿದಾಗಲೇ ಮುಕ್ತಿಯೆಂಬುದನ್ನು 'ಸತ್ತ ಬಳಿಕ ಮುಕ್ತಿಯ ಹಡೆದಿಹೆನೆಂದು ಪೂಜಿಸಹೋದರೆ ಆ ದೇವರೇನು ಕೊಡುವರೋ? ಸಾಯದೆ ನೋಯದೆ ಸ್ವತಂತ್ರನಾಗಿ ಸಂದುಭೇದವಿಲ್ಲದಿರ್ಪ ಗುಹೇಶ್ವರ ನಿಮ್ಮ ಶರಣ' (೬೬-೧೧೦) ಇಂಥ ವಚನಗಳು ಸಾರಿ ಹೇಳುತ್ತವೆ. ಪ್ರಭುದೇವನ ಜ್ಞಾನಸಿದ್ಧವಾದ, ಮತಾತೀತವಾದ ಸ್ವಚ್ಛಂದ ಮತ್ತು ವಿಶಾಲವ್ಯಕ್ತಿತ್ವದ ಪಡಿ ನೆಳಲನ್ನು ಕೆಳಗಣ ವಚನಗಳು ಕೆಲಮಟ್ಟಿಗೆ ಮೂಡಿಸುತ್ತವೆ: 'ಕಾಮವ ಸುಟ್ಟು ಹೋಮವನರುಹಿ, ತ್ರಿಪುರಸಂಹಾರದ ಕೀಲನರಿಯಬಲ್ಲರೆ, ಯೋಗಿಯಾದಡೇನು? ಭೋಗಿಯಾದಡೇನು? ಶೈವನಾದಡೇನು? ಸನ್ಯಾಸಿಯಾದಡೇನು? ಅಶನವ ತೊರೆದಾತ, ವ್ಯಸನವ ಮರೆದಾತ—ಗುಹೇಶ್ವರಲಿಂಗದಲ್ಲಿ ಅವರು ಹಿರಿಯರೆಂಬೆನು' (೧೬೫-೨೪), 'ನಾನು ಘನ, ತಾನು ಘನವೆಂಬ ಹಿರಿಯರುಂಟೆ? ಜಗದೊಳಗೆ ಹಿರಿಯರ ಹಿರಿತನದಿಂದೇನಾಯ್ತು? ಹಿರಿದು ಕಿರಿದೆಂಬ ಶಬ್ದವಡಗಿದರೆ ಆತನೆ ಶರಣ ಗುಹೇಶ್ವರಾ' (೧೬೬-೨೫), 'ಬಿರುಗಾಳಿ ಬೀಸಿ ಮರ ಮುರಿಯುವಂತೆ ಸುಳುಹ ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು. ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು. ಸುಳಿದಡೆ ನೆಟ್ಟನೆ ಭಕ್ತನಾಗಿ ನಿಲಬೇಕು' (೧೬೭-೨೯), 'ಲೋಕದ ನಚ್ಚುಮಚ್ಚು ಬಿಟ್ಟು ನಿಶ್ಚಿಂತವಾಯಿತ್ತು. ಏನು ಹತ್ತಿ ತೆಂದರಿಯೆನಯ್ಯಾ! ಏನು ಹೊತ್ತಿತೆಂದರಿಯೆನಯ್ಯಾ! ಗುಹೇಶ್ವರನೆಂಬ ಗ್ರಹವೆನ್ನ ಕೊಂಡಿತ್ತಾಗಿ ನಾನೇನೆಂಬುದನರಿಯೆನಯ್ಯಾ!' (೧೯೭-೯೫),'ಹಿಂದಣ ಅನಂತವನು ಮುಂದಣ ಅನಂತವನು ಒಂದೇ ದಿನ ಒಳಕೊಂಡಿತ್ತು ನೋಡಾ' (೨೧೧-೧೨೫)

---

1 ಶೂನ್ಯಸಂಪಾದನೆ, ಪು. ೨೯-೨೪

2 ಅದೇ, ಪು. ೩೧-೩೦

'ನಾ ದೇವನಲ್ಲದೆ ನೀ ದೇವನೇ? ನೀ ದೇವನಾದರೆ ಎನ್ನನೇಕೆ ಸಲಹೆ? ಆರೈದು ಒಂದು ಕುಡಿತೆ ನೀರನೆರೆವೆ. ಹಸಿದಾಗ ಒಂದು ತುತ್ತು ಓಗರವನಿಕ್ಕುವೆ. ನಾ ದೇವ ಕಾಣಾ ಗುಹೇಶ್ವರಾ' (೨೬೫–೨೪೮), 'ನಿಜವನರಿದ ನಿಶ್ಚಿಂತನೆ, ಮರಣವ ಗೆಲಿದ ಮಹಂತನೆ, ಘನ ಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ, ಬಯಲ ಒದಗಿದ ಭರಿತನೆ, ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ' (೩೦೫–೩೨). ಇಂಥ ಘನತರವಾದ ವ್ಯಕ್ತಿತ್ವದಿಂದ ಇದ್ದುದಿದ್ದಹಾಗೆ ಹೊಮ್ಮಿದ ಉಸಿರೇ ಮಹೋನ್ನತ ವಚನಸಾಹಿತ್ಯವಾಯಿತು.

ಪ್ರಭುದೇವನು ಹೋದಹೋದಲ್ಲಿ ತನ್ನ ಜ್ಞಾನಪ್ರಭೆಯನ್ನು ಬೀರಿದನು, ಭೀತಿಸಂಕೋಚಗಳಿಲ್ಲದೆ ಲೋಕವಿಮರ್ಶೆ ಮಾಡಿದನು. ಕಲ್ಯಾಣದ ಅನುಭವ-ಮಂಟಪದ ಶರಣರು ಸಹ ಅವನ ಕಡುಟೀಕೆಗೆ ಗುರಿಯಾದರು. ತಿಳಿದವರು ನೋಯಲಿಲ್ಲ, ತಮ್ಮ ತಿಳಿವನ್ನು ಹೆಚ್ಚಿಸಿಕೊಂಡರು. ಅವನ ವಚನಗಳಲ್ಲಿ ಕರ್ಮಿ-ಗಳಿಗೆ, ಮತನಿಷ್ಠರಿಗೆ ಆಘಾತವುಂಟುಮಾಡುವ ಅದೆಷ್ಟೋ ಮಾತುಗಳಿವೆ. ಆದರೆ ಅವೆಲ್ಲ ಅಂತಿಮಸತ್ಯದ ಸವಿಯನ್ನು ಉಣ್ಣಿಸುವ ಕಹಿಗುಳಿಗೆಗಳು. ಉದಾಹರಣೆಗೆ, 'ಆಚಾರವನರಿಯದೆ, ವಿಭವವಳಿಯದೆ, ಕೋಪವಡಗದೆ, ತಾಪ ಮುರಿಯದೆ, ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ ನಾನು ಮರುಗುವೆ ಕಾಣಾ ಗುಹೇ-ಶ್ವರಾ' (೫೬–೯೦), 'ಒಳಗೆ ತೊಳೆಯಲರಿಯದೆ ಹೊರಗೆ ತೊಳೆದು ಕುಡಿವುತ್ತಿರ್ದ-ರಯ್ಯಾ! ಪಾದೋದಕಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತಿದ್ದಾರೆ ಗುಹೇಶ್ವರಾ' (೮೬–೫), 'ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದರೆ ಆನು ಬೆರಗಾದೆನಯ್ಯಾ. ನಿಚ್ಚಕ್ಕೆ ನಿಚ್ಚ ಅರ್ಚನೆಯ ಮಾಡಿಸಿ ಭೋಗವ ಮಾಡುವವರ ಕಂಡು ನಾನು ಬೆರಗಾದೆನು' (೯೧–೩), 'ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗವಾಯಿತ್ತು. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಉಳಿ ಮುಟ್ಟದ ಲಿಂಗವ ಮನ ಮುಟ್ಟಬಲ್ಲುದೆ ಗುಹೇಶ್ವರಾ' (೧೦೨–೩೪), 'ಕಲ್ಲು ದೇವರೆಂದು ಪೂಜಿಸುವರು. ಆಗದು ಕಾಣಿರೋ. ಅಗಡಿಗ-ರಾದಿರಲ್ಲಾ! ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ' (೧೦೩–೩೭), 'ದೇಹದೊಳಗೆ ದೇವಾಲಯವಿರ್ದು ಮತ್ತೆ ಬೇರೆ ದೇವಾಲಯವೇಕೆ? ಎರಡಕ್ಕೆ ಹೇಳಲಿಲ್ಲಯ್ಯಾ. ಗುಹೇಶ್ವರಾ ನೀನು ಕಲ್ಲಾದರೆ ನಾನೇನಪ್ಪೆನು?' (೧೦೬–೪೦), 'ವೇದವೆಂಬುದು ಓದಿನ ಮಾತು. ಶಾಸ್ತ್ರ-ವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ. ಭಕ್ತಿಯೆಂಬುದು ತೋರಿ ಉಂಬ ಲಾಭ. ಗುಹೇಶ್ವರನೆಂಬುದು ಮೀರಿದ ಘನವು' (೨೨೫–೧೫೫), 'ಭಸ್ಮವ ಹೂಸಿ ಬತ್ತಲೆ ಇದ್ದರೇನು ಬ್ರಹ್ಮಚಾರಿಯೆ? ಅಶನವನುಂಡು ವ್ಯಸನವ ಮರೆದಡೇನು ಬ್ರಹ್ಮಚಾರಿಯೆ? ಭಾವ ಬತ್ತಲೆ ಇದ್ದು ಮನವು ಗಂಭೀರವಾದರೆ ಅದು ಸಹಜನಿರ್ವಾಣ ಕಾಣಾ

ಗುಹೇಶ್ವರಾ ?' ಹೀಗೆ ಇಲ್ಲಿ ಆತ್ಮೋದ್ಧಾರಕ್ಕೆ ಪ್ರೇರಕವಾದ ವಚನಗಳಿವೆ, ಜೊತೆಗೆ ನಿಜವಾದ ಭಕ್ತಿ-ಜ್ಞಾನ-ಮುಕ್ತಿಗಳನ್ನು ಕುರಿತು ಸಹಜ ಉಕ್ತಿಗಳಿವೆ. ಚುಚ್ಚಿಯೂ ಮೆಚ್ಚಾಗುವ ಇಲ್ಲಿಯ ವಿಡಂಬನೆಯ ರೀತಿ ವಿಲಕ್ಷಣವಾಗಿದೆ.

'ಕವಿಚರಿತೆ'ಯ ಪ್ರಕಾರ ಪ್ರಭುದೇವನ ಕೃತಿಗಳಲ್ಲಿ 'ಶೂನ್ಯಸಂಪಾದನೆ'ಯ ಹೆಸರು ಬಂದಿದೆ. ಆದರೆ ಇದು ಪ್ರಭುದೇವನ ಮತ್ತು ಇತರರ ವಚನಗಳ ಸುತ್ತು ಹೆಣೆದ ಸಂವಾದಪದ್ಧತಿಯ ಗ್ರಂಥ. ಇದರ ಹೆಣಿಕೆಯನ್ನು ಮಾಡಿದ ಸಂಪಾದನಕಾರ ೧೫-೧೬ನೆಯ ಶ.ದ ಗೂಳೂರು ಸಿದ್ಧವೀರಣಾಚಾರ್ಯನು. ಇವನ ಸಂಪಾದನೆಯಲ್ಲಿ ನಾವೀನ್ಯವಿದೆ, ಸ್ವತಂತ್ರನಿರ್ಮಾಣವಿದೆ. ಅಂತೆಯೆ ಇವನು ಅಳವಡಿಸಿದ ಕೆಲವು ವಚನಗಳು ವಚನಕಾರರವೇ ಸ್ವಯಂಕೃತವೇ ಎಂಬ ಸಂಶಯ ಹುಟ್ಟುತ್ತದೆ. ಈ ವಿಷಯದಲ್ಲಿ ಸಂಶೋಧನೆಯಾಗಬೇಕು, ಇದರಲ್ಲಿ ದೊರೆತ ಚಾರಿತ್ರಿಕ ಸಾಮಗ್ರಿಯನ್ನು ಒರೆದು ನೋಡಬೇಕು. ಒಟ್ಟಿನಲ್ಲಿ ಇದು ಕನ್ನಡಕ್ಕೆ ಅಪೂರ್ವವಾದ ಉಜ್ವಲವಾದ ಗ್ರಂಥ. ಪ್ಲೇಟೊನ ಸಂಭಾಷಣೆಗಳಿಗೆ ಸಮಾನವಾದರೂ ಶಿವಾನುಭಾವಗೋಷ್ಠಿಯ ಮೂಲಕ ವಿಶಿಷ್ಟವಾಗಿದೆ. ಪ್ರಭುದೇವನೇ ಈ ಗ್ರಂಥದಲ್ಲಿಯ ಪ್ರಮುಖ ವ್ಯಕ್ತಿ. ಅವನು ನಡೆಸಿದ ಸಂವಾದಗಳಲ್ಲಿ ಅವನ ಹಾಗೂ ಇತರ ಶರಣರ ಸಾಧನ-ಸಿದ್ಧಿಗಳೂ ಮನೋಧರ್ಮಗಳೂ ಅಚ್ಚೊತ್ತಿದಂತೆ ಮೂಡಿರುತ್ತವೆ. ಸಂಪಾದನೆಯ ದೃಷ್ಟಿಯಿಂದ ಈ ಗ್ರಂಥ ೧೨ನೆಯ ಶ.ದ್ದಲ್ಲವಾದರೂ ಪ್ರಭುದೇವನ ವಚನಗಳಿಂದ ಬಹುಮಟ್ಟಿಗೆ ಕೂಡಿದ ಕೃತಿವಿಶೇಷವೆಂದು ಇಲ್ಲಿ ಇದನ್ನು ಪ್ರಸ್ತಾಪಿಸಲಾಗಿದೆ. ಇಲ್ಲಿಯ ವಚನಗಳನ್ನು ಕುರಿತು 'ಇಲ್ಲಿಯ ಕರ್ಕಶವಾದ ತರ್ಕ, ಸಹಜವಕ್ರವಾದ ಬೆಡಗು, ಹುಟ್ಟುಗನ್ನಡದ ವಿಡಾಯ, ಧೀರವಿಚಾರ, ಆಧ್ಯಾತ್ಮಸಾಹಸದ ಹಾಸ್ಯ, ಮಾತಿನ ಸುಳಿವುಗಳಲ್ಲಿ ಜ್ಯೋತಿಯ ಹೊಳಹನ್ನು ಹುಟ್ಟಿಸುವ ಶಿಲ್ಪ, ಸರಸಸಜ್ಜನಿಕೆ'[1] ಎಂದು ಶ್ರೀ. ದ. ರಾ. ಬೇಂದ್ರೆಯವರು ಮಾಡಿದ ವರ್ಣನೆಯನ್ನು ಗಮನಿಸಬೇಕು.

---

[1] ದ. ರಾ. ಬೇಂದ್ರೆ: ಪ್ರಭುಲಿಂಗಲೀಲೆ—ವಿಮರ್ಶೆ (ಸಾಹಿತ್ಯಸಂಶೋಧನೆ, ಪು. ೧೫೧)

೧೫. ಬಸವೇಶ್ವರ ಮತ್ತು ಇತರ ವಚನಕಾರರು

ಪ್ರಭುದೇವನು ಹಿರಿಯ ಜ್ಞಾನಿಯಾದರೆ ಬಸವೇಶ್ವರನು ಹಿರಿಯ ಭಕ್ತ. ಬೇರೆ ಬೇರೆಯಾಗಿ ಬೆಳೆದು ಎತ್ತರದಲ್ಲಿ ಬೆರೆತ ಮರಗಳಂತೆ ಅವರು ಕೂಡಿಕೊಂಡರು. ಬಸವೇಶ್ವರನು ಕ್ರಾಂತಿಕಾರಕವಾದ ಒಂದು ಮಾರ್ಗದ, ಮತದ ಸಂಘಟನಕಾರನಾದನು. ಅವನ ಭಕ್ತಿ-ಕರ್ಮಗಳು ಸಂಘಟನೆಯ ಭರದಲ್ಲಿ ದೂಷಿತವಾಗಬಾರದೆಂದು ಪ್ರಭುದೇವನು ತನ್ನ ಜ್ಞಾನ-ವಿರಕ್ತಿಗಳ ಒರೆಗಲ್ಲನ್ನು ಒದವಿಸಿದನು. ಪ್ರಭುದೇವನ ಜ್ಞಾನದೆತ್ತರವು ಲೋಕಜೀವನದಿಂದ ಅಲಿಪ್ತವಾಗಕೂಡದೆಂದು ಬಸವೇಶ್ವರನು ಅವನಿಗೆ ನಾಯಕಪದವಿಯನ್ನಿತ್ತನು. ಬಸವಣ್ಣನ ವ್ಯಕ್ತಿತ್ವ ಎಷ್ಟು ಹಿರಿಯದೋ ಅಷ್ಟು ಮಾನವೀಯ. ಅದರ ಸ್ಪಂದನವನ್ನೂ ಹೋರಾಟವನ್ನೂ ನಾವು ಅರ್ಥಮಾಡಿಕೊಂಡು ಅನುಭವಿಸಬಲ್ಲೆವು. ಅವನ ಆರ್ತಭಕ್ತಿ, ಕರ್ಮಜೀವನದ ತೊಡಕು, ಸಮಾಜದೂಷಣೆ ಎಲ್ಲವೂ ಒಂದು ಬೆಳೆಯುತ್ತಲಿರುವ, ಪ್ರತಿಕೂಲಪರಿಸ್ಥಿತಿಯೊಡನೆ ಹೋರುತ್ತ ಏರುತ್ತಲಿರುವ, ಮಹಾಜೀವನದ ಸಹಜರಮ್ಯವಾದ ಅಭಿವ್ಯಕ್ತಿ. ಈ ಸೂತ್ರವನ್ನು ಮನದಂದು ಅವನ ವಚನಗಳನ್ನು ಓದಿದರೆ ಅವನ ವಿಕಾಸಶೀಲವಾದ ಮಹಾವ್ಯಕ್ತಿತ್ವ, ಅದನ್ನು ಪರಿಪರಿಯಾಗಿ ಒಡಮೂಡಿಸಿದ ವಚನಸಂಪತ್ತಿ ಇವನ್ನು ಅರಿತುಕೊಳ್ಳಬಹುದು. ಎಲ್ಲ ವಚನಕಾರರಿಗಿಂತ ಹೆಚ್ಚಾಗಿ ಅವನಲ್ಲಿ ನಿಸ್ಸಂಕೋಚವಾದ ಅಂತರ್ನಿರೀಕ್ಷಣೆಯ ಪ್ರವೃತ್ತಿಯಿದೆ. ಸಂಸಾರಹೇಯಸ್ಥಳದಲ್ಲಿಯ ಅನೇಕ ವಚನಗಳು ಇದಕ್ಕೆ ಸಾಕ್ಷಿ. ಇಲ್ಲಿ ಸಂಸಾರವಿರಕ್ತಿ ಮಾತ್ರವಲ್ಲ, ಅತ್ಯಂತವಾದ ಆತ್ಮದೂಷಣೆಯಿದ್ದಂತಿದೆ; 'ಬೆದಕದಿರು. ಬೆದಕಿದರೆ ಹುರುಳಿಲ್ಲ—ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ. ವಿಚಾರಿಸಿದರೆ ಏನು ಹುರುಳಿಲ್ಲವಯ್ಯಾ' (೫-೨೨, ೨೩)........'ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ, ತಿಳಿಯಲೀಯದು, ಎಚ್ಚರಲೀಯದು' (೮-೪೪)........ 'ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು ದೆಸೆದೆಸೆಗೆ ಬಾಯ ಬಿಡುತ್ತಿದ್ದೆನಯ್ಯ' ಇಂಥ ವಚನಗಳನ್ನು ನೋಡಿ 'ಅವರ ವಚನಗಳು ಬರೀ ನಟನೆಯಲ್ಲ, ಅವು ಅಂತರಂಗಸ್ಫುರಿತ ಸ್ವೈಸರ್ಗಿಕ ಭಾವಗಳು....ಬಸವಣ್ಣನವರ ಆತ್ಮವೃತ್ತವು ಪ್ರಬಲವಾದೊಂದು ಮನೋಯುದ್ಧದ ಚರಿತ್ರೆಯಾಗಿರುತ್ತದೆ'[1] ಎಂದು ಕೆಲವು ವಿಮರ್ಶಕರು ತಿಳಿಯುವುದು ಸಹಜ. ಮಹಾಪುರುಷರು ಸಹ ಮಾನವರಾಗಿ ಹುಟ್ಟಿ ಬೆಳೆದು ಅತಿಮಾನವರಾಗಿ ಮೆರೆಯುತ್ತಾರೆ. ಅವರವರು ಬೆಳೆಯುವ ಬಗೆ ಬೇರೆ, ಬಣ್ಣಿಸುವ ಬಗೆ ಬೇರೆ. ಇದನ್ನೊಪ್ಪಿಯೂ 'ಏನೂ ಹುರುಳಿಲ್ಲ, ಪ್ರಳಯದ ಕಸ' ಎಂಬ

---

1 ಎಂ. ಆರ್. ಶ್ರೀನಿವಾಸಮೂರ್ತಿ: ಭಕ್ತಿಭಾಂಡಾರಿ ಬಸವಣ್ಣನವರು, ಪು. ೧೪, ೧೫.

ಉಕ್ತಿಗಳಿಗೆ ಅರ್ಥವೇನು? ಎಂದು ಕೇಳಬಹುದು. ಅದು ಅಸತ್ಯವಾದರೆ ನಟನೆ, ಸತ್ಯವಾದರೆ ಸ್ವಂತದ ಅವಹೇಳನೆ. ಮಹಾವ್ಯಕ್ತಿಗಳು ತಮ್ಮ ಕಣ್ಣಮುಂದಿನ ಹಿರಿಯ ಗುರಿಯನ್ನು ನೆನೆದು ತಮ್ಮ ಅಂದಂದಿನ ಕೊರತೆಗಳನ್ನು ಅತಿಶಯೋಕ್ತಿಯಲ್ಲಿ ಕಂಡು ಆಡಿಕೊಳ್ಳುತ್ತಾರೆ. ಅವರ ಆತ್ಮದೂಷಣೆ ಸಾಮಾನ್ಯ ಮನುಷ್ಯನ ಆತ್ಮ-ದೂಷಣೆಗಿಂತ ಭಿನ್ನ. ಬಸವಣ್ಣನ ಹಾಗೂ ಬೇರೆ ಶರಣರ ವಚನಗಳನ್ನು ವಿಮರ್ಶಿಸುವಾಗ ಈ ವ್ಯಕ್ತಿತ್ವನಿಷ್ಠವಾದ ನಿರ್ವಚನವನ್ನು ಮಾಡಬೇಕು. ಅವುಗಳಲ್ಲಿ ಆಧ್ಯಾತ್ಮಿಕ ಭಾವಗೀತೆಯ ಸತ್ವವಿದೆಯೆಂಬುದನ್ನು ಕಾಣಬೇಕು.

ಆರ್ತಭಕ್ತಿಯಿಂದ ಮುಂದರಿದು ಬಸವಣ್ಣನು ಭಕ್ತಿಯಲ್ಲಿ ಪರಿಣತನಾದನು. ಮಂತ್ರಿಯೂ ಮತೋದ್ಧಾರಕನೂ ಆಗಿ ಕಾರ್ಯಪ್ರವಾಹದಲ್ಲಿ ಈಸುಬಿದ್ದ ಅವನಿಗೆ ತೆರೆತೆರೆಯಾಗಿ ತೊಂದರೆಗಳು ಬಂದಿರಬೇಕು. ಪರಿಣತಭಕ್ತಿಯ ಸಮರ್ಪಣಭಾವ, ನಿರ್ಭೀತಿ–ನಿಶ್ಚಿಂತೆಗಳಿಂದ ಅವನ್ನವನು ಇದಿರಿಸಿದನು: 'ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು. ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯಾ' (೨೬–೫೬), 'ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ ಕೂಡಲಸಂಗಮ-ದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ' (೭೩–೮), 'ಎನ್ನ ಕಾಯವ ದಂಡಿಗೆಯ ಮಾಡಯ್ಯಾ! ಎನ್ನ ಶಿರವ ಸೋರೆಯ ಮಾಡಯ್ಯಾ! ಎನ್ನ ನರವ ತಂತಿಯ ಮಾಡಯ್ಯಾ! ಎನ್ನ ಬೆರಳ ಕಡ್ಡಿಯ ಮಾಡಯ್ಯಾ! ಬತ್ತೀಸರಾಗವ ಹಾಡಯ್ಯಾ! ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ!' (೭೪–೧೫) ಈ ಕೊನೆಯೆರಡು ವಚನಗಳು ಚಿಕ್ಕವಾದರೂ ಸ್ವಯಂಪೂರ್ಣ ಭಾವಗೀತೆಯಾಗಿ ಭಕ್ತಿಭಾವದ ಪರಿಣತಿಯನ್ನು ರಸರೂಪಕ್ಕೆ ಇಳಿಸಿವೆ, ವಚನಸಾಹಿತ್ಯದ ಹಿರಿಮೆಗೆ ನಿದರ್ಶನವಾಗಿವೆ. 'ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನಮಗೀಗಲೆ ಬರಲಿ. ಇದಕಾರಂಜುವರು?' (೧೦೬–೬), 'ಜೋಳವಾಳಿಯವ ನಾನಲ್ಲವಯ್ಯ....ಮರಣವೇ ಮಹಾನವಮಿ' (೧೦೬–೮) ಇಂಥ ವಚನಗಳಲ್ಲಿ ಬಸವಣ್ಣನ ಭಕ್ತಿಪ್ರೇರಿತವಾದ ನಿರ್ಭಯವೃತ್ತಿಯಿದೆ. ವ್ಯಕ್ತಿತ್ವದ ಘನತೆಯಿಂದ ಹೊರಹೊಮ್ಮಿದ ಮಾತು ಒಮ್ಮೆ ಸರಳವಾಗಿ ಒಮ್ಮೆ ಸೂತ್ರಬದ್ಧವಾಗಿ ಘನತೆಯ ಪದವಿಗೇರುತ್ತದೆ. ಭಕ್ತಿಸ್ಥಲದಿಂದ ಪ್ರಾಣಲಿಂಗ ಮುಂತಾದ ಸ್ಥಲಗಳನ್ನು ಏರುತ್ತ ಬಸವಣ್ಣನು ಐಕ್ಯಸ್ಥಳದಲ್ಲಿ ನೆಲೆನಿಂತನು. ಅವನ ಈ ನೆಲೆಯನ್ನು 'ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ, ತನು ಕರಗಿ ನೆರೆವ ಸುಖವ ನಾನೇನೆಂಬೆ?' (೧೩೦–೪), 'ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿದ್ದೆನಯ್ಯ! ಕೂಡಲಸಂಗಯ್ಯನೆಂಬ ಮಹಾಬೆಳಗಿನ ಬೆಳಗಿನೊಳಗಿರ್ದೆನೆಂಬ ಶಬ್ದ ಮುಗ್ಧ-ವಾದುದೇನೆಂಬೆನಯ್ಯಾ?' (೧೪೭–೮) ಇಂಥ ವಚನಗಳು ತಿಳಿಸುತ್ತವೆ. ಅಂತರಂಗನಿರೀಕ್ಷಣೆಯ ಚಿತ್ರ ತಿಳಿಗನ್ನಡಿಯಲ್ಲಿ ಮೂಡಿದಷ್ಟು ನಿಚ್ಚಳವಾದಂತೆ

ಬಸವಣ್ಣನ ವಚನಗಳಲ್ಲಿ ಬಹಿರಂಗಸಮೀಕ್ಷಣೆಯೂ ಸುಸ್ಪಷ್ಟವಾಗಿದೆ. ಪ್ರಚಲಿತ ಸಮಾಜದ ಕುಂದುಕೊರತೆಗಳನ್ನು ಅವು ನಿರ್ದಾಕ್ಷಿಣ್ಯವಾಗಿ ತೋರಿಸಿಕೊಟ್ಟಿವೆ, ಹೊಸ ಸಮಾಜವ್ಯವಸ್ಥೆಯ ಸೂತ್ರಗಳನ್ನು ಸಾರಿರುತ್ತವೆ. ವಿಡಂಬನೆ, ಉಪದೇಶ ಇಲ್ಲಿ ಸಾಹಿತ್ಯಗುಣದಿಂದ ಕೂಡಿವೆ. ಕೆಲವು ಕಡೆಗೆ ಮಾತ್ರ ಮಾತು ಬಿರುಸಾಗಿದೆ ಇಲ್ಲವೆ ತೀರ ಸರಳವಾಗಿದೆ. 'ಭಕ್ತರ ಕಂಡರೆ ಬೋಳರಪ್ಪಿರಯ್ಯ! ಸವಣರ ಕಂಡರೆ ಬತ್ತಲೆಯಪ್ಪಿರಯ್ಯ! ಹಾರುವರ ಕಂಡರೆ ಹರಿನಾಮವೆಂಬಿರಯ್ಯ! ಅವರವರ ಕಂಡರೆ, ಅವರವರಂತೆ! ಸೂಳೆಗೆ ಹುಟ್ಟಿದವರ ತೋರದಿರಯ್ಯ! ಕೂಡಲಸಂಗಮದೇವರ ಪೂಜಿಸಿ ಅನ್ಯದೈವಂಗಳಿಗೆರಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳಿಗೇನೆಂಬೆನಯ್ಯ?' (೧೬-೧೫), 'ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದ ಮೇಲೇಸು ಕಾಲ ಬದುಕುವನೋ? ಕೆಡೆ ಒಡಲ ನೆಚ್ಚಿ ಕಡುಹುಸಿಯನೆ ಹುಸಿದು ಒಡಲ ಹೊರೆವವರ ಕೂಡಲಸಂಗಮದೇವಯ್ಯನವರನೊಲ್ಲ ಕಾಣಿರಣ್ಣ' (೨೦-೧೭), 'ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು. ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ. ಉಂಬ ಜಂಗಮ ಬಂದರೆ ನಡೆ ಎಂಬರು. ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ (೪೯-೮೧), ಕೊಲ್ಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ. ಕುಲವೇನೊ, ಅವಂದಿರ ಕುಲವೇನೋ? ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು' (೮೯-೬೪).

ಈ ಸಮಾಜಟೀಕೆ ಅಲ್ಲಲ್ಲಿ ಕಟುವಾಗಿದೆ ನಿಜ. ಆದರೆ ಅದು ಸಾತ್ವಿಕಸಂತಾಪದಿಂದ ಪ್ರೇರಿತವಾದುದು, ಎಲ್ಲರನ್ನೂ ಕುರಿತುದು. ವೈದಿಕರು-ಅವೈದಿಕರು, ಭವಿಗಳು-ಭಕ್ತರು ಯಾರೇ ಇರಲಿ ಅವರಲ್ಲಿಯ ಹುಸಿ-ಮೋಸಗಳನ್ನು ಅದು ಬಯಲಿಗೆಳೆಯುತ್ತದೆ. ಯಾವೊಂದು ವ್ಯಕ್ತಿಯ ಇಲ್ಲವೆ ಗುಂಪಿನ ದ್ವೇಷವಲ್ಲ, ಆದರೆ ಅನ್ಯಾಯ-ವೈಷಮ್ಯಗಳಿಂದ ಕೂಡಿದ ಅಂದಿನ ಸಮಾಜವ್ಯವಸ್ಥೆಯ ಬಗ್ಗೆ ತಾತ್ಸಾರ ಅದಕ್ಕೆ ಸ್ಥಾಯಿ. ಒಂದೊಂದು ಮಾತಿನಲ್ಲಿ ಅನಾವಶ್ಯಕವಾದ ಅಸಹನೆ, ನಿಷ್ಠುರತೆ ತೋರಿರಬಹುದು. ಆಯಾ ಪರಿಸ್ಥಿತಿಯಲ್ಲಿ ಅದು ಅಪರಿಹಾರ್ಯವಾಗಿರಬಹುದು. ಸಮಗ್ರವ್ಯಕ್ತಿತ್ವದಲ್ಲಿಯ ವಿಶಾಲತೆ-ಮಾರ್ದವಗಳನ್ನು ನೆನೆದು ಅವನ್ನು ಅರ್ಥವಿಸಬೇಕು. ಬಸವಣ್ಣನ ಉಪದೇಶಪರವಚನಗಳಲ್ಲಿ ಸರ್ವಸಮಾನತೆ, ಭೂತದಯೆ, ನೀತಿನಿಷ್ಠೆ, ಶಿವಭಕ್ತಿ ಇವನ್ನು ಕಳಕಳಿಯಿಂದ ತಿಳಿಸಿ ಹೇಳುವ ನವೀನಸ್ಫೂರ್ತಿಯಿದೆ. 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ' (೧೯-೧೧), ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ! ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ' (೨೪-೪೨), 'ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ. ಸತ್ಯವ ನುಡಿವುದೇ ದೇವಲೋಕ.

ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ' (೩೬-೧೨೫), 'ದಯವಿಲ್ಲದ ಧರ್ಮವಾವುದಯ್ಯ? ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ!' (೩೭-೧೩೩).

ಸಾಹಿತ್ಯದೃಷ್ಟಿಯಿಂದ ಈ ವಚನಗಳಲ್ಲಿಯ ಗುಣಾತಿಶಯವನ್ನು ಮೇಲೆ ಸೂಚಿಸಿದೆ. ಪ್ರತ್ಯೇಕವಾಗಿ ನೋಡಿದರೂ ಅವುಗಳ ಸಹಜಸ್ಫೂರ್ತವಾದ ಚಿತ್ರಶಕ್ತಿ, ಶಬ್ದಶಕ್ತಿ ಅಚ್ಚರಿಗೊಳಿಸುವಂಥವು. 'ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ' (೪೦-೨೨) ಇಂಥಲ್ಲಿ ಸಹಜಪ್ರತಿಭೆಯ ಸಾಕ್ಷಾತ್ಕಾರವಿದೆ. ಹಲವು ವಚನಗಳು ಅಂತಃಪ್ರಜ್ಞೆಯ, ಅನುಭಾವದ ಶಿಖರದಿಂದ ಕೆಳಗಿಳಿದು ಶ್ರುತಿಯ ಶಕ್ತಿ-ಕಾಂತಿಗಳನ್ನು ತೋರಿವೆ. ಅನೇಕ ವಚನಗಳಲ್ಲಿ ಲೋಕಸಂಮುಖದೃಷ್ಟಿಯ ಮೂಲಕ ಜನಜೀವನದಿಂದೆತ್ತಿದ ದೃಷ್ಟಾಂತಗಳು, ಗಾದೆಗಳು, ಪಡೆಮಾತುಗಳು ಇವುಗಳ ಸೂರೆಯಾಗಿದೆ. ಅಧ್ಯಾತ್ಮ, ನೀತಿ ಇವುಗಳ ಸೂಕ್ಷ್ಮವೆಲ್ಲ ಈ ತಂತ್ರದಿಂದ ಸುಲಭವೇದ್ಯವಾಗಿದೆ: '**ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ** ಬಲುಹಾಗಬಲ್ಲುದೆ?' (೧೪-೪), '**ಸಗಣಿಯ ಬೆನಕಂಗೆ ಸಂಪಿಗೆಯ**ರಳಿನಲ್ಲಿ ಪೂಜಿಸಿದರೆ **ರಂಜನೆ**ಯಲ್ಲದೆ ಅದರ **ಗಂಜಳ** ಬಿಡದಣ್ಣ' (೧೪-೫) ಇಲ್ಲಿಯ ಲೌಕಿಕದೃಷ್ಟಾಂತವನ್ನೂ ಸಹಜಪ್ರಾಸದ ಲಾಲಿತ್ಯವನ್ನೂ ನಿರುಕಿಸಬೇಕು. ಕಾವ್ಯಶೀಲವಾದ ವಚನಗದ್ಯವು ಕೆಲವು ಸಲ ಪದ್ಯಗಂಧಿಯಾಗುತ್ತದೆ. ಆದರೆ ಅಪ್ರಯತ್ನದ ಉಕ್ತಿಯಾದ ಕಾರಣ ಕೆಲವು ಸಲ ಅತಿ ಸರಳವಾಗುತ್ತದೆ. ದೀಪಕಾಲಂಕಾರದ ರೀತಿಯಲ್ಲಿ ಹಲವು ಕಡೆಗೆ ದೃಷ್ಟಾಂತಮಾಲಿಕೆ ಬರುವುದುಂಟು: 'ಕರಿ ಘನ, ಅಂಕುಶ ಕಿರಿದೆನ್ನಬಹುದೇ? ಗಿರಿ ಘನ ವಜ್ರ ಕಿರಿದೆನ್ನಬಹುದೇ? ತಮಂಧ ಘನ ಜ್ಯೋತಿ ಕಿರಿದೆನ್ನಬಹುದೇ?' (೨-೫). ಪ್ರಭುದೇವನ ವಚನಗಳಂತೆ ಹೇರಳವಾಗಿ ಅಲ್ಲದಿದ್ದರೂ ಕ್ವಚಿತ್ತಾಗಿ ಇಲ್ಲಿ ಬೆಡಗಿನ ವಚನದ ಕ್ಲಿಷ್ಟತೆ ತೋರಿದೆ (೪-೧೦). ಸಾಮಾನ್ಯವಾಗಿ ಬಸವೇಶ್ವರನ ವಚನಗಳು ಪ್ರಸನ್ನಲಲಿತವಾಗಿವೆ, ಹೃದಯಸ್ಪರ್ಶಿಯಾಗಿವೆ. ಅವು ವೀರಶೈವಧರ್ಮದ ಹಾಗೂ ವಿಶ್ವಧರ್ಮದ ಕನ್ನಡಿಯಾಗಿದ್ದು ಕನ್ನಡಸಾಹಿತ್ಯಕ್ಕೆ ವಿಶೇಷ ಕಾಂತಿಯನ್ನು ಉಂಟುಮಾಡಿವೆ.

ಮಹಾದೇವಿಯಕ್ಕ

ಮಹಾದೇವಿಯಕ್ಕನು ವ್ಯಕ್ತಿವೈಶಿಷ್ಟ್ಯದಿಂದಲೂ ವಚನಮಹಿಮೆಯಿಂದಲೂ ಮೇಲಾದ ಶಿವಶರಣೆ. ನಮಗೆ ತಿಳಿದ ಮಟ್ಟಿಗೆ ಕನ್ನಡಸಾಹಿತ್ಯಪ್ರಪಂಚಕ್ಕೆ ಅವಳೇ ಮೊದಲನೆಯ ಕವಯಿತ್ರಿ. ಕಂತಿ ದಂತಕಥೆಯ ನಿರ್ಮಿತಿ ಅಲ್ಲವೆಂದಾದರೂ ಅವಳದು ಚತುರಕವಿತೆ, ಅನುಭವಜನ್ಯವಾದ ಹೃದಯಗೀತವಲ್ಲ. ಅಧ್ಯಾತ್ಮ ಮತ್ತು ಗದ್ಯಕವಿತ್ವ ಇವುಗಳ ಸಂಮಿಳನಕ್ಕಾದರೂ ಅಕ್ಕಮಹಾದೇವಿ ಮೊದಲಿಗಿತಿ. ಅವಳ ಚರಿತ್ರೆ, ಕೃತಿಗಳಿಂದ ಆಧ್ಯಾತ್ಮಿಕ ಸಾಹಸ ಮತ್ತು ಸಿದ್ಧಿಯ ಅನ್ಯತರವ್ಯತೆ

ಕಣ್ಣುಕಟ್ಟುವಂತ್ರವೆ. ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು ಲಗ್ನಸಂಸ್ಥೆಯನ್ನು ಅತಿಗಳೆದು ಚೆನ್ನಮಲ್ಲಿಕಾರ್ಜುನನೆಂಬ ಲೋಕಪತಿಯನ್ನೇ ಪತಿಯಾಗಿ ವರಿಸಿ ಅವಳು ಮಾಡಿದ ಉಗ್ರಸಾಧನೆ, ಪಡೆದ ಸಿದ್ಧಿ ಆಶ್ಚರ್ಯಕರ-ವಾದುವು. ಸತಿಪತಿಭಾವದಲ್ಲಿ ಅವಳು ಹೇಗೆ ಪ್ರಗತಿಹೊಂದುತ್ತ ಪರಿಣತಳಾದ-ಳೆಂಬುದನ್ನು ಸಂಸಾರಹೇಯ, ವಿಕಳಾವಸ್ಥೆ, ಸತಿಪತಿಭಾವ ಇವಕ್ಕೆ ಸಂಬಂಧಿಸಿದ ವಚನಗಳಿಂದ ತಿಳಿಯಬಹುದು: 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ, ಮನಬಂದುದ ಬಯಸಿ ಬೇವುತ್ತಿ-ದ್ದೇನೆ' (೨-೧), 'ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದಡೆ ಮಾಣು, ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ' (೧೬-೧), 'ಕಳವಳದ ಮನವು ತಲೆ-ಕೆಳಗಾದುದವ್ವಾ! ಸುಳಿದು ಬೀಸುವ ಗಾಳಿ ಉರಿಯಾಯಿತವ್ವಾ! ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ. ಹೊಳಲುಸುಂಕಿಗನಂತೆ ತೊಳಲುತ್ತಿಹೆನವ್ವಾ!' (೪೦-೩), 'ಅಳಿಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮ-ನೆಲ್ಲರನು ಒಂದು ಬೇಡುವೆನು. ಎನ್ನೊಡೆಯ ಚನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ' (೪೧-೬), 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ-ಕಾಲ ತಪಸಿದ್ದೆ ನೋಡಾ....' (೮-೫), 'ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ ಆಲಿಕಲ್ಲ ಹಸೆಯ ಹಾಸಿ ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು' (೯-೭), 'ಸಾವಿಲ್ಲದ ಕೇಡಿಲ್ಲದ ಚಲುವಂಗಾನೊಲಿದೆ ಅವ್ವ....ಈ ಸಾವ ಕೆಡುವ ಗಂಡರ-ನೊಯ್ದು ಒಲೆಯೊಳಗಿಕ್ಕು' (೨೦-೭) ಇಂಥ ಹಲವಾರು ವಚನಗಳಲ್ಲಿ ಅಧ್ಯಾತ್ಮ-ಶೃಂಗಾರದ ಅಸದೃಶವಾದ ಸ್ಥಾಯಿಭಾವವು ತನ್ನ ಎಲ್ಲ ಸಂಚಾರಿಗಳೊಡನೆ ಕೂಡಿ ಬಂದು ಮಾರ್ಗಕಾವ್ಯದಲ್ಲಿಯ ಲೌಕಿಕಶೃಂಗಾರದ ಅದೆಅದೆತನದಿಂದ ಆಸತ್ತ ಚಿತ್ತಕ್ಕೆ ನವೀನ ರಸದ ಸವಿಯನ್ನುಣಿಸುತ್ತದೆ. ಅಕ್ಕನ ಜ್ಞಾನಭಕ್ತಿಗಳ ಬಲದಿಂದ ಉಂಟಾದ ನಿಶ್ಚಿಂತೆ-ನಿರ್ಭೀತಿ-ಮಾನಸಿಕ ಧೈರ್ಯಗಳು ವಿಲಕ್ಷಣವಾದುವು. ಅವುಗಳಿಂದ ದೊರೆಯುವ ಸ್ಫೂರ್ತಿ ಮೇಲಾದುದು. ಅವಳ ಸುಪ್ರಸಿದ್ಧವಾದ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ, ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ, ಸಂತೆಯಲ್ಲೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ, ಲೋಕದಲ್ಲಿ ಹುಟ್ಟಿ ಬಂದ ಬಳಿಕ ಸ್ತುತಿನಿಂದೆಗಳು ಬಂದಡೆ ಕೋಪವ ತಾಳದೆ ಸಮಾಧಾನಿಯಾಗಿರಬೇಕು' ಈ ವಚನವು ಶಕ್ತಿಶಾಲಿ-ಯಾದ ಚಿಕ್ಕ ಭಾವಗೀತೆಯಾಗಿದ್ದು ಚಿರಂತನಸ್ಫೂರ್ತಿಯ ಚಿಲುಮೆಯಾಗಿದೆ. ಅದರ ಜೊತೆಗೆ, 'ಹಸಿವಾದೊಡೆ ಭಿಕ್ಷಾನ್ನಗಳುಂಟು. ತೃಷೆಯಾದೊಡೆ ಕೆರೆಹಳ್ಳಭಾವಿ-ಗಳುಂಟು. ಶಯನಕ್ಕೆ ಹಾಳುದೇಗುಲಗಳುಂಟು. ಚನ್ನಮಲ್ಲಿಕಾರ್ಜುನಯ್ಯ

ಆತ್ಮಸಂಗಾತಕ್ಕೆ ನೀನುಂಟು. ಆರೂ ಇಲ್ಲದವಳೆಂದು ಅಳಿಲು(ಅಳಲು ?)ಗೊಳಬೇಡ ಕಂಡೆಯ. ಏನು ಮಾಡಿದರೆಯೂ ನಾನಂಜುವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು. ಸುರಿಗೆಯ ಮೇಲೊರಗಿ ನಾನಿಹೆನು........ಕಿಡಿಕಿಡಿ ಕೆದರಿದಡೆ ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದುಬಿದ್ದರೆ ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು. ಚನ್ನಮಲ್ಲಿಕಾರ್ಜುನಯ್ಯ ಶಿರ ಹರಿದುಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು' (೨೯-೩, ೯, ೫) ಈ ವಚನಗಳಲ್ಲಿ ಅವಳ ಅದ್ಭುತ ಧೈರ್ಯವನ್ನು ಮನಗಾಣಬಹುದು. ಇಂಥ ವಚನಗಳಲ್ಲಿಯ ಸಾಹಿತ್ಯಗುಣವು ಒಮ್ಮೊಮ್ಮೆ ವ್ಯಕ್ತಿತ್ವದ ಘನತೆಯಿಂದ ಉಂಟಾದುದು, ಒಮ್ಮೊಮ್ಮೆ ವ್ಯಕ್ತಿತ್ವ ಮತ್ತು ಸಾಹಿತ್ಯ ಇವುಗಳ ಸಮರಸದಿಂದ ಉಂಟಾದುದು ಎಂಬುದನ್ನು ನೆನೆಯಬೇಕು. ಸಮಾಜವಿಮರ್ಶೆ, ಬೋಧನೆಯ ವಚನಗಳು ಅಕ್ಕನಲ್ಲಿ ಪ್ರಭುದೇವ-ಬಸವಣ್ಣರಂತೆ ಹೆಚ್ಚಾಗಿಲ್ಲ. ಆದರೆ ಇದ್ದವುಗಳಲ್ಲಿ ಶರಣಮಾರ್ಗದ ಸುವಿಶಾಲದೃಷ್ಟಿ, ಸ್ಪಷ್ಟವಾಕ್ಯತೆ ತೋರಿಬಂದಿವೆ. ಅವಳ ವಚನಗಳಲ್ಲಿ ನಯಭಯಗಳ ಕೊರತೆ ಕಂಡುಬಂದರೂ ಒಟ್ಟಿನಲ್ಲಿ ರಸಸ್ಯಂದಿಯಾದ, ಆಗಾಗ ಘನತೆಯ ಕಳಸ ಮುಟ್ಟಿದ, ನಿರ್ಮಾಣವಿದೆ. ವಚನಗಳ ಹೊರತಾಗಿ ತ್ರಿಪದಿಯಲ್ಲಿ ರಚಿತವಾದ ಅವಳ 'ಯೋಗಾಂಗತ್ರಿವಿಧಿ' ಎಂಬ ಚಿಕ್ಕ ಕೃತಿಯಿದೆ. ಇದರ ೬೭ ತ್ರಿಪದಿಗಳಲ್ಲಿ ತಾತ್ವಿಕವಿಷಯದ ಜೊತೆಗೆ ವೈಯಕ್ತಿಕವಾದ ಅಂಶಗಳೂ ಇವೆ. ತಾತ್ವಿಕವಿಷಯವನ್ನು ಕೆಲವು ಸಲ ಸರಳ-ವಾಗಿಯೂ ಹಲವು ಸಲ ಬೆಡಗಿನ ವಚನದ ಮಾದರಿಯಲ್ಲಿಯೂ ನಿರೂಪಿಸಲಾಗಿದೆ. ಅಕ್ಕನ ಅನುಭಾವದ ಸ್ಪಷ್ಟಚಿತ್ರವು 'ಕೋಟಿರವಿಶಶಿಗಳ್ಗೆ ಮಿಾಟಾದ ಪ್ರಭೆ ಬಂದು। ನಾಟಿತು ಎನ್ನ ಮನದೊಳಗದರಿಂದ। ದಾಟಿದೆನೊ ಭವದ ಕೊಳಗಳ' (೧೪), 'ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ। ಸುರಿವ ಅಮೃತವನು ಸವಿದುಂಡ ಕಾರಣ ತೊರೆದೆನೊ ಜನನಮರಣವ' (೨೦) ಎಂಬ ವೈಯಕ್ತಿಕ ವಚನ-ಗಳಲ್ಲಿ ಲಭಿಸುತ್ತದೆ. 'ಉಟ್ಟ ಸೀರೆಯ ಸೆಳೆದು ಕೊಟ್ಟ (ತೊಟ್ಟ?) ತೊಡಿಗೆಯ ಹರಿದು। ಬಿಟ್ಟೆನೋ ನಾನು ಬಿಡುಮುಡಿಯ ಎಲೆ ದೇವ। ಕೊಟ್ಟೆನೊ ಎನ್ನ ತನುಮನವ' (೪೨) ಈ ತರದ ವಚನಗಳಲ್ಲಿ ಅವಳ ಜೀವನಚರಿತ್ರೆಯ ಅರಿವಿಗೆ ಸಹಾಯಕವಾದ ಸಾಮಗ್ರಿಯಿದೆ. ಒಟ್ಟಿನಲ್ಲಿ 'ಯೋಗಾಂಗತ್ರಿವಿಧಿ' ಚಿಕ್ಕದಾದರೂ ಅಕ್ಕನ ಅನುಭಾವಸಂಪತ್ತಿಯನ್ನು ಸಹಜಸಾಹಿತ್ಯರೂಪಕ್ಕೆ ತಂದ ಚೆಲುವಾದ ಕೃತಿ. ಅವಳ ತತ್ವಸಂಗ್ರಹಶಕ್ತಿ, ಗುರುಭಕ್ತಿ ಇಲ್ಲಿ ಎದ್ದುಕಾಣುತ್ತವೆ. ತ್ರಿಪದಿಯ ಛಂದಸ್ಸು ಸಲೀಲವಾಗಿ ಅವಳ ನಾಲಿಗೆಯ ಮೇಲೆ ಲಾಸ್ಯವಾಡಿದೆ. ಅಂಶಗಣದ ಲಕ್ಷಣವುಳ್ಳು-ದಾದರೂ ಮಾತ್ರಾಗಣದತ್ತ ತಿರುಗಿ ಅದು ಸಾಕಷ್ಟು ಮುಂಬರಿದಿದೆ ಎಂಬುದಕ್ಕೆ 'ಯೋಗಾಂಗತ್ರಿವಿಧಿ' ಸಾಕ್ಷಿಯಾಗಿದೆ.

ಚೆನ್ನಬಸವೇಶ್ವರ

ಚೆನ್ನಬಸವೇಶ್ವರನು ಬಸವೇಶ್ವರನ ಸೋದರಳಿಯ, 'ಮಹಾಜ್ಞಾನಿ' ಎಂದು ಅಲ್ಲಮಪ್ರಭುವಿನಿಂದ ಹೊಗಳಿಸಿಕೊಂಡ ಶರಣ. ಜ್ಞಾನನಿಷ್ಠೆ, ಖಂಡಿತವಾದಗಳಲ್ಲಿ ಅವನು ಅಲ್ಲಮನನ್ನು ಹೋಲಿದರೂ ಅವನಿಗೊಂದು ವ್ಯಕ್ತಿವಿಶೇಷವಿದೆ. ಅವನು ಅಲ್ಲಮನಂತೆ ಸಂಘಟನೆಯ ನಿಯತಕ್ರಿಯೆಯನ್ನೊಲ್ಲದ ಜಂಗಮನಲ್ಲ, ಮತ-ಪ್ರಸಾರವನ್ನು ಕೈಕೊಂಡ 'ಕ್ರಿಯಾಜ್ಞಾನಿ'. ಅಂತೇ ಅವನು ಷಟ್ಸ್ಥಲಸಿದ್ಧಾಂತಕ್ಕೆ ಸರಿಯಾದ ತಳಹದಿಯನ್ನು ಹಾಕಿ ಅದರ ಸೃಷ್ಟಿಶಾಸ್ತ್ರ, ಮನಶ್ಶಾಸ್ತ್ರಗಳನ್ನು ವಿಸ್ತಾರ-ವಾಗಿ ವರ್ಣಿಸಿದನು. ಅವನ 'ಕರಣಹಸುಗೆ' ಇದಕ್ಕೆ ಸಾಕ್ಷಿಯಾಗಿದೆ. ಅವನ ವಚನಗಳಲ್ಲಿ ಕೆಲವು ತುಂಬ ದೀರ್ಘವಾಗಿವೆ. ಸಿದ್ಧಾಂತವಿವರಣೆಯ, ಮತಪ್ರಸಾರದ ದೃಷ್ಟಿ ಅವುಗಳಲ್ಲಿದ್ದು ಶೈಲಿಯಲ್ಲಿ ಹೃದ್ಯತೆ ಕಡಿಮೆಯಾಗಿದೆ. ಅಲ್ಲಲ್ಲಿ ಪ್ರಚಾರಕ ಆವೇಶವು ಅನ್ಯದೈವತನಿಂದೆಯಲ್ಲಿಯೂ ದಾಂಭಿಕರ ನಿಷ್ಠುರ ಟೀಕೆಯಲ್ಲಿಯೂ ತಲೆದೋರಿದೆ. ಮೂಲತಃ ಸಾಹಿತ್ಯಸತ್ವವು ಬಸವಣ್ಣನ ವಚನಗಳಂತೆ ಇಲ್ಲಿಯೂ ಹೇರಳವಾಗಿದೆ. ಉದಾ: 'ಬಟ್ಟಬಯಲೆಲ್ಲ ಗಟ್ಟಿಗೊಂಡೊಡೆ ಸ್ವರ್ಗಮರ್ತ್ಯ-ಪಾತಾಳಕ್ಕೆ ಠಾವಿನ್ನೆಲ್ಲಿಹುದೊ? ಮೇಘಜಲವೆಲ್ಲ ಮುತ್ತಾದಡೆ, ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಹುದೊ' (೨೦-೪), 'ಕಬ್ಬುನದ ಶುನಕನ ತಂದು ಪರುಷವ ಮುಟ್ಟಿಸ-ಲೊಡನೆ ಹೊನ್ನಶುನಕನಪ್ಪುದಲ್ಲದೆ ಪರುಷವಾಗಲರಿಯದು ನೋಡಾ' (೩-೩). ಪ್ರಭುದೇವನಂತೆ ಅವನ ವಚನಗಳಲ್ಲಿ ಬೆರಗುಗೊಳಿಸುವ ಸೂತ್ರಬದ್ಧತೆ ಆಗಾಗ ತೋರುತ್ತದೆ: 'ಒಡಲುಗೊಂಡು ಒಡಲುವಿಡಿಯದೆ ಒಡಲಿಲ್ಲದ ನಿಜವ ಬೆರಸೆಲವೋ' (ಇದೇ ಷಟ್ಸ್ಥಲಸಾಧನೆ ಎಂದರ್ಥ). ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿ-ಯವರು ಹೇಳಿದಂತೆ 'ಪಾದರಸದಂತೆ, ಮಿಂಚಿನಂತೆ, ಆತನ ಪ್ರತಿಭೆ'.[1] ಆದರೂ ಬಸವೇಶ್ವರ-ಪ್ರಭುದೇವರ ವಚನಗಳಲ್ಲಿಯ ಸಾಹಿತ್ಯಸಂಬಂಧಿಯಾದ ಘನತೆ ಇವನಲ್ಲಿ ಗೋಚರವಾದುದು ಕಡಿಮೆ.

ಸಿದ್ಧರಾಮ

ಸಿದ್ಧರಾಮನು ಯೋಗಿಯೂ ಕರ್ಮಿಯೂ ಆಗಿದ್ದು ಪ್ರಭುದೇವ-ಚೆನ್ನ-ಬಸವಾದಿಗಳ ಅನುಗ್ರಹದಿಂದ ಜ್ಞಾನಿಯಾದನು, ಕರ್ಮಯೋಗಿಯಾದನು. ಅವನ ವಚನಗಳಲ್ಲಿ ಈ ಅವನ ವ್ಯಕ್ತಿತ್ವದ ವಿಕಾಸವು ಕಂಡುಬರುತ್ತದೆ. 'ಭಕ್ತನಾದರೆ ಬಸವಣ್ಣನಾಗಬೇಕು. ಜಂಗಮನಾದರೆ ಪ್ರಭುವಿನಂತಾಗಬೇಕು. ಭೋಗಿಯಾದರೆ ನಮ್ಮ ಗುರುಚನ್ನಬಸವಣ್ಣನಂತಾಗಬೇಕು. ಯೋಗಿಯಾದರೆ ನನ್ನಂತಾಗಬೇಕು' (೭೭) ಈ ಬಗೆಯ ವಚನಗಳಲ್ಲಿ ತನ್ನ ಮತ್ತು ಇತರರ ಗುಣವಿಶೇಷಗಳನ್ನು ಅವನು

---

1 ಎಂ. ಆರ್. ಶ್ರೀನಿವಾಸಮೂರ್ತಿ: ವಚನಧರ್ಮಸಾರ, ಪು. ೬೯.

ತಿಳಿಸಿದ್ದಾನೆ, ಚೆನ್ನಬಸವಣ್ಣನು ತನ್ನ ಗುರುವೆಂದು ಮನಮುಟ್ಟಿ ಹೊಗಳಿದ್ದಾನೆ. ಕೆರೆ–ಗುಡಿಗಳನ್ನು ಕಟ್ಟಿಸುವುದರಲ್ಲಿ ಒಂದು ಕಾಲಕ್ಕೆ ಧನ್ಯತೆಯನ್ನು ಬಯಸಿದ ಅವನು (ವಚನ ೨೩೨) 'ಕಲ್ಲಿನಲ್ಲಿ ವಲ್ಲಭನಿದ್ದಾನೆಂದು ಅಲ್ಲಾಡುತ್ತಾರೆ ನೋಡಾ ಅಲ್ಲಯ್ಯ........ಈ ಹೊಲ್ಲ ಮನುಜರು ಕಲ್ಲಿನಲ್ಲುಂಟು ಮಣ್ಣಿನಲ್ಲಿಲ್ಲವೆಂದೆಂಬರೆ ಅಂತರ್ಯಾಮಿಪರಿಪೂರ್ಣತ್ವ ಭಂಗವಹುದಯ್ಯ' (೮೩೬) ಎಂಬ ಜ್ಞಾನದ ನೆಲೆಯನ್ನು ಮುಟ್ಟಿದನು. 'ಕಾಯ ಧರಿಸಿದವ ನವನೀತ ರೋಮದಂತಿರಬೇಕು. ಮುಕುರದಲ್ಲಿಯ ಪ್ರತಿಬಿಂಬದಂತಿರಬೇಕು. ಬೆಟ್ಟದಲ್ಲಿಯ ಕಾಡಗಿಚ್ಚಿನಂತಿರಬೇಕು. ಆಷಾಢದಲ್ಲಿಯ ಚಂಡಮಾರುತನಂತಿರಬೇಕು. ಸರ್ವರಲ್ಲಿ ಸರ್ವರಂತಾಗಿರಬೇಕು' (೩೫೭) ಎಂದು ಕರ್ಮಯೋಗದ ಕೌಶಲ್ಯವನ್ನು ಅರಿತುಕೊಂಡನು. ಅವನ ಚರಿತ್ರೆ, ಅನುಭವ-ಸಂಪತ್ತಿ, ವ್ಯಕ್ತಿವಿಕಾಸ ಇವಕ್ಕೆ ನಿದರ್ಶನವಾಗಿ ಅವನ ವಚನಗಳು ಸಾಹಿತ್ಯಗುಣದಿಂದ ಕಂಗೊಳಿಸುತ್ತವೆ. ಭಕ್ತನ ಉತ್ಕಟತೆ–ಕಲ್ಪಕತೆಗಳು 'ಅನಂತಕೋಟಿ ದೇವರೆಲ್ಲರು ತಂಡತಂಡದಲ್ಲಿ ಪ್ರಣಾಮಂಗೈಯಲು ಅವರ ಮಕುಟಸಂಘಟ್ಟ ರಜ ಉದುರಲಿಕ್ಕೆ ಅಲ್ಲಿ ರಜತಗಿರಿಗಳಾದವು ಕಪಿಲಸಿದ್ಧಮಲ್ಲಿಕಾರ್ಜುನ ನಿಮ್ಮ ಮುಂದೆ' (೯೧) ಎಂಬ ತರದ ವಚನಗಳಲ್ಲಿ ತೋರಿವೆ. ಬಸವಣ್ಣ ಮುಂತಾದ ಪ್ರಮುಖರ ಪ್ರಭಾವವು ಇವನ ಜೀವನ ಮತ್ತು ವಚನಗಳ ಮೇಲಾಗಿದ್ದರೂ ಒಂದು ಸ್ವತಂತ್ರವಾದ, ಮೇಲಾದ ಶಕ್ತಿ ಇವನಲ್ಲಿ ಮೈದೋರಿದೆ ಎಂಬುದು ಒಪ್ಪತಕ್ಕ ವಿಷಯವಾಗಿದೆ.

ಇನ್ನೂ ಅನೇಕ ಶರಣ–ಶರಣೆಯರು ಈ ಕಾಲದಲ್ಲಿ ಆಗಿಹೋದರು. ಅವರಲ್ಲಿ ಅರಸರು, ಮಂತ್ರಿಗಳು, ಕರಣಿಕರು, ಪಂಡಿತರು ಸ್ವಲ್ಪ ಪ್ರಮಾಣದಲ್ಲಿದ್ದರೆ ಅಶಿಕ್ಷಿತ-ರಾದರೂ ಆಧ್ಯಾತ್ಮಿಕಸಾಧಕರೂ ಜೀವನಸಂಸ್ಕೃತಿಸಂಪನ್ನರೂ ಆದ ಸಾಮಾನ್ಯರು ಹೆಚ್ಚು ಪ್ರಮಾಣದಲ್ಲಿದ್ದರು. 'ಕಾಯಕವೇ ಕೈಲಾಸ' ಎಂಬುದನ್ನು ಉದಾಹರಿಸು-ವಂತೆ ಬೇರೆ ಬೇರೆ ಉದ್ಯೋಗಗಳಲ್ಲಿ ಆತ್ಮಪ್ರೀತಿಯಿಂದ ತೊಡಗಿ, ಮೇಲು–ಕೀಳು ಎಂಬ ಭಾವನೆಯಿಂದ ಅವರು ದೂರವಾಗಿದ್ದರು. ಅಂಬಿಗರ ಚೌಡಯ್ಯ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಮಡಿವಳ ಮಾಚಯ್ಯ ಈ ಹೆಸರುಗಳು ಅವರವರ ಕಾಯಕವನ್ನು ಸೂಚಿಸುತ್ತವೆ. ಅನುಭವಮಂಟಪದಲ್ಲಿ ಇವರಿಗೆಲ್ಲ ಸಮಾನ-ಭೂಮಿಕೆಯ ಮೇಲೆ ಸ್ವಾಗತ ದೊರೆಯಿತು. ಅಕ್ಕಮಹಾದೇವಿಯಲ್ಲದೆ, ಮೋಳಿಗೆಯ ಮಾರಯ್ಯನ ಹೆಂಡತಿ ಮಹಾದೇವಿ, ಬಿಜ್ಜಳದೇವಿ, ಕಾಳವ್ವೆ, ನೀಲಮ್ಮ ಈ ಮೊದ-ಲಾದ ಶರಣೆಯರೂ ಅಲ್ಲಿ ಅಷ್ಟೇ ಮನ್ನಣೆಪಡೆದರು. ೨೦೦ರ ಮೇಲೆ ವಚನಕಾರರ ಹೆಸರುಗಳೂ ಅಂಕಿತಗಳೂ ದೊರೆತಿವೆ. ಇವರ ಕಾಲ–ದೇಶ, ವಚನರಚನೆ ಈ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆಯಾದರೂ ೧೨ನೆಯ ಶ.ದ ಮಧ್ಯವು ಕರ್ನಾಟಕದ ಆಧ್ಯಾತ್ಮಿಕಜೀವನದಲ್ಲಿ ಒಂದು ಅಪೂರ್ವವಾದ ಸುಗ್ಗಿಯ ಕಾಲವಾಗಿತ್ತೆಂಬುದು ನಿರ್ವಿವಾದವಾದ ಸಂಗತಿ. ಇವರ ವಚನಗಳಲ್ಲಿ ವೈರಾಗ್ಯ, ಭಕ್ತಿ, ಅನುಭಾವ, ವೀರಶೈವತತ್ವ, ಆಚಾರಧರ್ಮ, ಡಾಂಭಿಕ ಸಮಾಜದ ಟೀಕೆ, ಶರಣಸ್ತುತಿ ಈ

ಯಂತಾದ ವಿಷಯಗಳು ಬಸವಾದಿಪ್ರಮುಖರ ಬಗೆಯಲ್ಲಿ ಬಂದಿವೆ. ಕೆಲವು ಕಡೆ ನುಕರಣವಿರಬಹುದು, ಕೇವಲ ಛಾಯೆಯಿರಬಹುದು, ಒಮ್ಮೊಮ್ಮೆ ಸಾಹಿತ್ಯದ ಂಶ ಕಡಿಮೆಯಾಗಿರಬಹುದು. ಆದರೆ ಬಹುಶಃ ಎಲ್ಲ ವಚನಗಳು ಸ್ವಾನುಭವದಿಂದ, ್ಯಂತ ತಪಶ್ಚರ್ಯೆಯ ಕುದಿಯಿಂದ ಉಕ್ಕಿದುವು ಎಂಬುದು ದಿಟ. ಆ ಮಾತಿನ ೇಜಸ್ಸಿನಿಂದ, ಕಿರಿದರಲ್ಲಿಯ ಹಿರಿಮೆಯಿಂದ ಇದನ್ನು ಊಹಿಸಬಹುದು. ಉದಾ: ತನು ನಿರ್ವಾಣ, ಮನ ಸಂಸಾರ; ಮಾತು ಬ್ರಹ್ಮ, ನೀತಿ ಅಧಮ; ಅದೇತಱ ಜೀವು ಘಾತುಕನ ಕೈಯ ಕತ್ತಿಯಂತೆ' (ಮಡಿವಳ ಮಾಚಯ್ಯ), 'ಗಂಗಾನದಿ-ಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ? ಚಂದನವಿದ್ದಂತೆ ದುರ್ಗಂಧವ ಮೈಯಲ್ಲಿ ೂಸುವರೆ? ಸುರಭಿ ಮನೆಯಲ್ಲಿ ಕಱೆಯುತ್ತಿರೆ ಹರಿವರೆ ಸೊಣಗನ ಹಾಲಿಂಗೆ' ಸೊಡ್ಡಳ ಬಾಚರಸ), 'ಭಕ್ತರಿಗೆ ಬಡತನವುಂಟೆ? ಸತ್ಯರಿಗೆ ಕರ್ಮವುಂಟೆ? ಿತ್ತಮುಟ್ಟಿ ಸೇವೆಯ ಮಾಡುವ ಭಕ್ತಂಗೆ ಮರ್ತ್ಯಕೈಲಾಸವೆಂಬುದುಂಟೆ?' ಆಯ್ದಕ್ಕಿಯ ಮಾರಯ್ಯ) ಇಂಥ ವಚನಗಳಲ್ಲಿ ಅಪರೂಪವಾಗಿ ಒಂದು ಉಜ್ವಲ-ಾವಗೀತೆಯ ಸ್ವಯಂಪೂರ್ಣತೆ ಬೆಳಗುತ್ತದೆ. ಉದಾ: 'ಬಟ್ಟೆಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನನು ಹುಲಿ, ಕಾಡುಗಿಚ್ಚು, ರಕ್ಕಸಿ, ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಟ್ಟಿಬರುತ್ತಿರಲು, ಅವಂ ಕಂಡು ಭಯದಿಂದ ಹೋಗಲು ದಿಕ್ಕುತೋರದೆ ಹಾಳು-ಾವಿಯಂ ಕಂಡು ತಲೆಯೂರಿ ಬೀಳುವಲ್ಲಿ ಹಾವ ಕಂಡು ಬೀಳಲಮ್ಮದೆ ಇಲಿ ಡಿದ ಬಳ್ಳಿಯಂ ಹಿಡಿದು ನಿಲ್ಲಲು, ಜೇನುಹುಳು ಮೈನೂರುವಾಗ ಮೂಗಿನ ುದಿಯಲೊಂದು ಹನಿ ಮಧುಬಿಂದು ಬೀಳಲಾಗಿ ಆ ಮಧುವಂ ಕಂಡು ಹಿರಿದಪ್ಪ ುಃಖವನೆಲ್ಲವ ಸೈರಿಸಿ ನಾಲಗೆಯಲ್ಲಿ ಆ ಮಧುವ ಸೇವಿಸುವನಂತೆ ಈ ಸಂಸಾರ-ಸುಖವ ವಿಚಾರಿಸಿ ನೋಡಿದಡೆ ದುಃಖದಾಗರವು' (ಸಿಮ್ಮಲಿಗೆಯ ಚೆನ್ನಯ್ಯ) ೀಗೆ ಜನಜೀವನದಿಂದೆತ್ತಿಕೊಂಡ, ಜನಹೃದಯವನ್ನು ತಟ್ಟುವ, ಲೌಕಿಕ ಕಥೆ, ಾದೆ, ಒಳ್ಪನುಡಿಗಳಿಂದ ಅನುಭಾವದ ಆಳವನ್ನೂ ನವಸಮಾಜನೀತಿಯನ್ನೂ ಸಹಜಸುಂದರವಾಗಿ ವೆಗ್ಗಳವಾಗಿ ನಿರೂಪಿಸಿದ್ದರಲ್ಲಿಯೇ ವಚನಗಳ ವೈಶಿಷ್ಟ್ಯವಿದೆ, ಾಫಲ್ಯವಿದೆ.

ವಚನಗಳ ಸಾಮಾನ್ಯಸ್ವರೂಪ

ವಚನಗಳನ್ನು ವಚನಕಾರರು ಬರೆದರೆನ್ನಬಹುದೇ? ಬರೆದರೆ ಹೇಗೆ, ಯಾವಾಗ ಬರೆದರು? ಅವನ್ನು ಹಾಡುತ್ತಿದ್ದರೇ? ಹೇಳುತ್ತಿದ್ದರೇ? ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಖಚಿತವಾದ ಆಧಾರಗಳಿಲ್ಲ. ವಚನಕಾರರಲ್ಲಿ ಹಲವರು 'ಅಕ್ಷರ-ಜ್ಞಾನಿ'ಗಳಾಗಿದ್ದರೂ ಅಕ್ಕರಿಗರಾಗಿರಲಿಲ್ಲ. ಅವರು ತಮ್ಮ ವಚನಗಳನ್ನು ಬರೆದಿರಲಾರರು, ಬರೆಯಲು ಪ್ರೇರಿಸಿರಬೇಕು. ಅನುಭವಮಂಟಪದಲ್ಲಿ ಯಾರಾದರೂ

ಒಬ್ಬಿಬ್ಬರು ಬರೆದುಕೊಳ್ಳುವ ಕಾಯಕದವರಿದ್ದಿರಬಹುದು. ಕೆಲವು ಸಲ ಸರ್ವಜ್ಞ ವಚನಗಳಂತೆ ವಚನಗಳನ್ನು ಕೇಳಿದವರು ಮೆಚ್ಚಿದ ನಾಲಿಗೆಯ ಮೇಲೆ ಬರೆದು ಕೊಂಡು ಒಬ್ಬರಿಂದೊಬ್ಬರಿಗೆ ಸಾಗಿಸಿರಬೇಕು, ಮುಂದೊಮ್ಮೆ ಅವು ಬರೆಹ ಒಳಪಟ್ಟಿರಬೇಕು. ಸುವಿದ್ಯರಾದ ಬಸವಣ್ಣನಂಥವರು ತಮ್ಮ ಬಹುಸಂಖ್ಯ ವಚನ ಗಳನ್ನು ತಾವಾಗಿ ಓಲೆಗರಿಗಳಲ್ಲಿ ದಿನಚರಿಯ ಹಾಗೆ ಬರೆದಿಡುತ್ತಿರಬಹುದೆಂದು ತೋರುತ್ತದೆ. ಆದರೆ ಅಲ್ಲಮಪ್ರಭು ಗಾಳಿಯ ಮೇಲೆಯೇ ತನ್ನ ಗರಿಗಳನ್ನು ತೂರುವ ಸ್ವಭಾವದವನೆಂದೂ ತೋರುತ್ತದೆ. ಒಂದು ಅನುಭವಪ್ರಸಂಗದ ಸಂವಾದಸಂದರ್ಭದಲ್ಲಿ ಸಹಜವಾಗಿ ಸೊಮ್ಮುತ್ತ ಬಂದ ವಚನಗಳು ಕುಳಿತುಕೊಂಡು ಬರೆದುವಲ್ಲ ಎಂಬುದನ್ನು ತಿಳಿಸಲು ನಿದರ್ಶನಗಳಿರುತ್ತವೆ. ಒಟ್ಟಿನಲ್ಲಿ ವಚನಗಳ ಕೃತಿಗಿಂತ ಶ್ರುತಿಯ ಲಕ್ಷಣವಿದೆ, ಮೂಲದಲ್ಲಿ ಬರೆದರು ಎನ್ನುವುದಕ್ಕಿಂತ ಒರೆದರು ಎಂದರೆ ಲೇಸು. ಪ್ರತ್ಯಕ್ಷವಾಗಿ ಹೇಗೆ ಯಾವಾಗ ಯಾರು ಬರೆದರೆಂಬುದು ಊಹೆಯ ವಿಷಯವೇ ಸರಿ. ಶ್ರೀ. ಹಳಕಟ್ಟಿಯವರು ಹೇಳುವಂತೆ ವಚನಗಳ ರಚನೆಯ ಕಾಲಕ್ಕೆ ನಿರ್ದಿಷ್ಟ ಕ್ರಮವಿರಲಿಲ್ಲ, ಸ್ಫೂರ್ತಿಬಂದಂತೆ ಅವನ್ನು ರಚಿಸ ಲಾಯಿತು. ಮುಂದಿನ ಕಾಲದಲ್ಲಿ ಅವಕ್ಕೆ ವಿಷಯಾನುಸಾರ, ಸ್ಥಲಾನುಸಾರ ಇಲ್ಲವೆ ಬೇರೆ ಕ್ರಮವನ್ನು ಸಂಪಾದನಕಾರರು ತಂತಮ್ಮ ರೀತಿಯಲ್ಲಿ ಉಂಟುಮಾಡಿ ಕೊಂಡರು. ಇಂದು ದೊರೆಯುವ ಮಾತೃಕೆಗಳನ್ನೆಲ್ಲ ಶೋಧಿಸಿ ವಚನಗಳ ಮೂಲ ಪಾಠಗಳನ್ನು ಗೊತ್ತುಮಾಡಬೇಕಾಗಿದೆ, ಅವುಗಳ ಕರ್ತೃತ್ವವನ್ನು ನಿರ್ಧರಿಸ ಬೇಕಾಗಿದೆ.

ವಚನಗಳನ್ನು ಹಾಡುವ ಧಾಟಿಯಲ್ಲಿ ಬರೆದರೇ? ಹಾಡುತ್ತಿದ್ದರೇ? ಎಂಬು ದಕ್ಕೆ ಕೆಲಮಟ್ಟಿಗೆ ಆಧಾರಗಳಿವೆ. ಬಸವಣ್ಣನು 'ತಾಳಮಾನ ಸರಸ ನಾನರಿಯೆ ವಜೆಬಜಾವಣೆಯ ಲೆಕ್ಕವನರಿಯೆ, ಅಮೃತಗಣದೇವಗಣವನರಿಯೆ, ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ **ಆನು ಒಲಿದಂತೆ ಹಾಡುವೆ** ಎಂದಿದ್ದಾನೆ. ಅವನ 'ಎನ್ನ ಶಿರವ ಸೋರೆಯ ಮಾಡಯ್ಯ!....ಬತ್ತೀಸರಾಗ **ಹಾಡಯ್ಯ**' ಎಂಬ ವಚನದಲ್ಲಿಯೂ ಸಂಗೀತದ ರೂಪಕವಿದೆ. 'ಅರುವತ್ತೆಂಟು ಸಹಸ್ರ ವಚನಗಳ **ಹಾಡಿ ಹಾಡಿ** ಸೋತಿತೆನ್ನ ಮನ ನೋಡಯ್ಯ!' (೬೭) ಎಂದು ಸಿದ್ಧರಾಮನೂ ಹೇಳಿದ್ದಾನೆ. 'ಅತಿಜಡರೆನಿಪ್ಪ ಮಾನವರನಿನ್ನೇನೆಂಬೆ....ಎಂದು **ಹಾಡಿದನೊಂದು ಗುರುವಚನವ**' (೩-೩೭) ಎಂದು 'ಸಿದ್ಧರಾಮಚಾರಿತ್ರ'ದಲ್ಲಿಯೂ ಇದೆ. ಹರಿಹರನು 'ಬಸವರಾಜನ ಗೀತದೊಳು, **ಗೀತಮಂ ಪಾಡೆ**' ಎಂದು ಮುಂತಾಗಿ ತನ್ನ ಬಸವರಾಜದೇವರ ರಗಳೆ, ಮಹಾದೇವಿಯಕ್ಕನ ರಗಳೆಗಳಲ್ಲಿ ಹೇಳುವಾಗ ಅವರವರ ಉಪಲಬ್ಧವಚನಗಳನ್ನು ಅನುವಾದಿಸಿದ್ದಾನೆ. ಎಂ. ಆರ್. ಶ್ರೀಯವರು ಪ್ರಾರ್ಥನೆ, ಆತ್ಮಪರಿಶೋಧನೆ, ಸ್ತೋತ್ರರೂಪವಾಗಿದ್ದುವು ಗೀತ ಜಾತಿಗೆ ಸೇರಿದ ವಚನಗಳೆಂದೂ ಅವುಗಳ ಮೂಲರೂಪ ನಮಗೆ ಈಗ ತಿಳಿ

ಎಂದೂ ಅಭಿಪ್ರಾಯಿಸುತ್ತಾರೆ.[1] 'ವಚನಗಳಲ್ಲಿ ಕೆಲಕೆಲವಾದರೂ ಹಾಡುವುದಕ್ಕೆ ಬರುತ್ತಿದ್ದಿರಬೇಕು. ಕೆಲವು ವಚನಗಳನ್ನು ಗಣಗಳಾಗಿ ವಿಂಗಡಿಸಲೂ ಬಹುದಾಗಿದೆ' ಎಂದೂ ಹೇಳಿದ್ದಾರೆ.[2] 'ಈಗ ವಚನವೆಂದು ಕರೆಯಿಸಿಕೊಳ್ಳುತ್ತಿರುವವುಗಳಲ್ಲಿ ಕೆಲವಾದರೂ ಮೊದಲಿಗೆ ಸಲಕ್ಷಣವಾದ ಹಾಡುಗಳಾಗಿದ್ದಂತೆಯೇ ತೋರುತ್ತದೆ' ಎಂದು ಅಕ್ಕಮಹಾದೇವಿಯ 'ಪಚ್ಚೆಯ ನೆಲಗಟ್ಟು' ಇತ್ಯಾದಿ ವಚನವು ಹಲಗೆಯ ದೇವರ ಶೂನ್ಯಸಂಪಾದನೆಯಲ್ಲಿ ಕಾಂಬೋದಿರಾಗದ ಹಾಡಿನ ರೂಪದಲ್ಲಿದ್ದುದನ್ನು ಶ್ರೀ. ತೀ. ನಂ. ಶ್ರೀಕಂಠಯ್ಯನವರು ಎತ್ತಿತೋರಿದ್ದಾರೆ. 'ಇದನ್ನು ಮೊದಲು ಹಾಡಾಗಿಯೇ ಕಟ್ಟಿದಳೆಂದು ಕಾಣುತ್ತದೆ. ಅಲ್ಲಿಂದೀಚೆಗೆ ಅದು ಸಾಮಾನ್ಯವಚನಗಳೊಡನೆ ಬೆರೆದು ಹೋಗಿರಬೇಕು'[3] ಎಂದೂ ಹೇಳಿದ್ದಾರೆ. ನಮಗೆ ಇಲ್ಲಿ ಕ್ರಮವಿಪರ್ಯಾಸವಾದಂತೆ ತೋರುತ್ತದೆ. ಮೊದಲು ವಚನವಾಗಿದ್ದುದನ್ನು ಆಮೇಲಿನ ಸಂಪಾದನಕಾರರು ಹಾಡಿನ ರೂಪಕ್ಕೆ ಇಳಿಸಿಕೊಂಡಿರಬೇಕು. ವಚನಗಳು ಯಾವುವೇ ಆಗಲಿ ಗೀತಜಾತಿಗೆ ಸೇರಿದವುಗಳಲ್ಲ, ಅವು ಸೂಕ್ಷ್ಮಸ್ವಚ್ಛಂದಲಯದ ಗದ್ಯ ಕವನಗಳು. ಅವುಗಳಲ್ಲಿ ಭಾವಗೀತೆಯ ಮೂಲಪ್ರೇರಣೆಯಿದೆ, ಆದರೆ ನಿಯತ ಛಂದಸ್ಸಿನ ಇಲ್ಲವೆ ತಾಳಲಯದ ಯೋಜನೆಯಿಲ್ಲ. '**ಆನು ಒಲಿದಂತೆ ಹಾಡುವೆ**' ಎಂಬ ಬಸವಣ್ಣನ ಮಾತಿನಲ್ಲಿಯೇ ಅವುಗಳ ಸ್ವಚ್ಛಂದತೆಯ ಸೂಚನೆಯಿದೆ. ವಚನಕಾರರನೇಕರಿಗೆ ಸಂಗೀತಜ್ಞಾನವಿರಬಹುದು. ಹಾಡುಗಳನ್ನು ಕೆಲವರು ಪ್ರತ್ಯೇಕವಾಗಿ ರಚಿಸಿದ್ದಾರೆ. ಉದಾ: ಬಸವಣ್ಣನ ಕಾಲಜ್ಞಾನವಚನ, ಮಂತ್ರಗೋಪ್ಯ; ಚೆನ್ನಬಸವನ ಪದಮಂತ್ರಗೋಪ್ಯ, ಮಂತ್ರಗೋಪ್ಯ; ಪ್ರಭುದೇವನ ಮಂತ್ರಗೋಪ್ಯ ಇತ್ಯಾದಿ. ಕೆಲವರು ತ್ರಿಪದಿ–ಕಂದಗಳಲ್ಲಿ ಪದ್ಯಗಳನ್ನೂ ಬರೆದಿದ್ದಾರೆ. ಉದಾ: ಮಹಾದೇವಿಯಕ್ಕನ ಯೋಗಾಂಗತ್ರಿವಿಧಿ, ಸಿದ್ಧರಾಮನ ಮೂರು ತ್ರಿವಿಧಿಗಳು, ಕೊಂಡಗೊಳಿ ಕೇಶಿರಾಜನ ಷಡಕ್ಷರಕಂದ ಮುಂತಾಗಿ. ವಚನಗಳ ಲಯವು ಪದ್ಯಗಳ ಗಣಾಭಾಸ ಇಲ್ಲವೆ ಸಂಗೀತದ ತಾಳಲಯದ ಆಭಾಸವನ್ನು ಉಂಟುಮಾಡುವುದು. ಅಂತೇ ಪದ್ಯದಂತೆ ಅವನ್ನು ಒಮ್ಮೊಮ್ಮೆ ಹೇಳಬಹುದು, ಗೀತದಂತೆ ಹಾಡಿಕೊಳ್ಳಲೂ ಬಹುದು. ಆದರೆ ತಾಳಲಯಕ್ಕನುಸರಿಸಿ ಹಾಡುವುದಕ್ಕೆಂದು ಅವನ್ನು ರಚಿಸಿಲ್ಲ. ಗಮಕಪದ್ಧತಿಯ ಮೇರೆಗೆ ಸರಾಗವಾಗಿ ಅವುಗಳ ವಿಶಿಷ್ಟಲಯದಲ್ಲಿ ಹಾಡಿಕೊಳ್ಳುವ ಪದ್ಧತಿಯಿರಬೇಕು. ಹರಿಹರನು ಈ ಅರ್ಥದಲ್ಲಿಯೆ 'ಗೀತಮಂ

---

1 ಎಂ. ಆರ್. ಶ್ರೀನಿವಾಸಮೂರ್ತಿ: ವಚನಧರ್ಮಸಾರ, ಪು. ೨೧೯

2 ,, ,, ,, ಪು. ೨೨೧

3 ತೀ. ನಂ. ಶ್ರೀಕಂಠಯ್ಯ: ಮಹಾದೇವಿಯಕ್ಕನ ಕೆಲವು ವಚನಗಳು (ಕಾವ್ಯಸಮೀಕ್ಷೆ, ಪು. ೧೨೬–೭)

ಪಾಡೆ' ಎಂದು ಹೇಳಿರಬೇಕು. ಈ ಸಂದರ್ಭದಲ್ಲಿ ಶ್ರೀ. ಬಸವನಾಳರು ಹೇ ಮಾತುಗಳು ಸರಿಯೆಂದು ತೋರುತ್ತವೆ: 'ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗ ಗದ್ಯಪದ್ಯದ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ; ಪದ್ಯದ ಕ್ರಮಬ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ. ಹಲವು ವಚನಗಳಲ್ಲಿ ಈ ಲ ಛಂದೋಗತಿಗೆ ಬಹು ಸಮೀಪವರ್ತಿಯಾಗಿರುವುದರಿಂದ ಅಂತಹ ವಚನಗಳ ಹೆಚ್ಚು ವ್ಯತ್ಯಾಸಮಾಡದೆ ಸರಾಗವಾಗಿ ಹಾಡಲು ಅನುಕೂಲವಾಗುವುದು ಕಂ ಬರುತ್ತಿದೆ.'[1]

ಒಟ್ಟಾಗಿ ಎಲ್ಲ ವಚನಗಳನ್ನು ಮನದಂದು ಅವುಗಳ ಸಾಹಿತ್ಯಲಕ್ಷಣ ಮತ ಭಾಷೆಯ ವೈಶಿಷ್ಟ್ಯವನ್ನು ಅರಿತುಕೊಳ್ಳಬಹುದು. ಒಂದು ಮಾತಿನಲ್ಲಿ ಹೇಳುವು ಆದರೆ ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವಗದ್ಯದಲ್ಲಿ ಉಸುರ ಆಧ್ಯಾತ್ಮಿಕ ಭಾವಗೀತೆಗಳು. ಜಗತ್ತಿನ ಸಾಹಿತ್ಯದಲ್ಲಿ ಇವುಗಳನ್ನು ಹೋಲುವ ರೂ ಕಡಿಮೆ, ಕನ್ನಡದಲ್ಲಿಯಂತೂ ಅಪೂರ್ವ. ಗದ್ಯಕಾವ್ಯ, ಚಿಂತನಪರಗದ್ಯ, ಭಾ ಗೀತೆಯ ಅಂಶಸ್ಪೃಷ್ಟವಾದ ಗದ್ಯ ಇವು ಬಾಯ್‌ಬಲ್, ಕೆಂಪಿಸ್, ಮಾರ್ಕ ಆರೇಲಿಯಸ್ ಇವರಲ್ಲಿ ಕಂಡುಬಂದಿದೆಯಾದರೂ ವಚನಗಳ ಅನುಭಾವಗ ಅಪರೂಪವಾಗಿದೆ. ವಿಷಯ-ಶೈಲಿ ಎರಡೂ ದೃಷ್ಟಿಯಿಂದ ಇದರ ವೈಶಿಷ್ಟ್ಯದರ್ಶ ವಾದ ಲಕ್ಷಣಗಳನ್ನು ಹೀಗೆ ಗುರುತಿಸಬಹುದು: (೧) ಅನುಭವದ ಗಾ ಸೂಕ್ಷ್ಮತೆಯೊಡನೆ ಉಕ್ತಿಯ ಸಹಜತೆ, ಅಲಂಕಾರ ರಮ್ಯತೆ; (೨) ಲೌಕಿ ದೃಷ್ಟಾಂತಗಳ, ಗಾದೆಮಾತು-ಒಳ್ನುಡಿಗಳ ಮಾಲಿಕೆ; (೩) ಸಹಜಸ್ಫೂರ್ತ ವಾದ ಸಾಂಕೇತಿಕತೆ ಹಾಗೂ ತಾತ್ವಿಕಶ್ಲೇಷ; (೪) ಇಷ್ಟದೇವತೆಯಿದಿರಿನಲ್ಲಿ ಭಕ್ತಿ ನಮ್ರವಾದ ಪ್ರಾಂಜಲವಾದ ಅಂತರಂಗನಿರೀಕ್ಷಣೆ; (೫) ಸ್ವಂತದ ಕಾಯಕಗಳ ಅನುಗುಣವಾದ ಹೋಲಿಕೆಗಳಿಂದ ಪರಮಾರ್ಥದ ವಿವರಣೆ; (೬) ಸಂಬೋಧನ ರೂಪವಾದ ತಂತಮ್ಮ ಅಂಕಿತಗಳಿಂದ ಪ್ರತಿಯೊಂದು ವಚನದ ಮುಕ್ತಾಯ (೭) ಸ್ವಾಭಾವಿಕ ಲಾಲಿತ್ಯ-ಮಾರ್ದವ; ಕ್ವಚಿತ್ತಾದ ಪಾರುಷ್ಯ, ಸಾತ್ವಿಕಸಂತಾ ಕಟುಟೀಕೆ; (೮) ಹಳಗನ್ನಡವು ಹೊಸಗನ್ನಡವಾಗಿ ರೂಪಾಂತರವಾಗುತ್ತಿರು ಸಂಧಿಕಾಲದ ನಡುಗನ್ನಡ ಶೈಲಿ, ಮಾರ್ಗದೇಸಿಗಳ ಸಮನ್ವಯಪ್ರಯೋಗ (೯) ಪ್ರಾಯೋಗಿಕತೆಯ ಮೂಲಕ ಹಳಗನ್ನಡಕ್ಕೆ ಒಪ್ಪದ ವ್ಯಾಕರಣದೋಷಗಳ ಪ್ರಯೋಗದೋಷಗಳು; (೧೦) ಹಳಗನ್ನಡ-ಹೊಸಗನ್ನಡ ಎರಡರಲ್ಲಿಯೂ ಕಾ ದೊರೆಯದ ಹಲಕೆಲವು ನಡುಗನ್ನಡ ಪದಗಳು (ಉದಾ: ಎನ್ನುವ(ನು), ಹುಟ್ಟಿ ಐದುಗೆ, ಮಾಬುದು, ಕಬ್ಬುನ, ವಂಶಾವಳಿಯಲು).

---

1 ಶಿ. ಶಿ. ಬಸವನಾಳ: ಬಸವಣ್ಣನವರ ಷಟ್‌ಸ್ಥಲದ ವಚನಗಳು (ಪ್ರಸ್ತಾವನೆ, ಪು. xxvi

ವಚನ ಸಾಹಿತ್ಯವೇ ಶಾಸ್ತ್ರವೇ? ಇಲ್ಲವೆ ಎರಡೂ ಆಗಿರುವುದೇ? ಸಾಹಿತ್ಯದಲ್ಲಿ ಶಾಸ್ತ್ರವಿರಬಹುದು, ಶಾಸ್ತ್ರವನ್ನು ಸಾಹಿತ್ಯವಾಗಿಸಿ ಹೇಳಬಹುದು. ಅವೇನು ಯಾವಾಗಲೂ ಪ್ರತ್ಯೇಕವಾದ ಪದಗಳಲ್ಲ. ವಚನ ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು. ಸ್ವಾನುಭವಮೂಲತೆ, ಹೃದಯವಂತಿಕೆ, ಸೌಂದರ್ಯದೃಷ್ಟಿ ಇವುಗಳ ಮೂಲಕ ವಚನ ಸಾಹಿತ್ಯವೆಂಬುದು ಸತ್ಯ. ಒಂದು ನಿಶ್ಚಿತದರ್ಶನ, ಸಿದ್ಧಾಂತ ಆಚಾರಧರ್ಮ ಇವುಗಳ ಮೂಲಕ ವಚನ ಶಾಸ್ತ್ರವೂ ನಿಜ. ಆದರೂ ಮುಖ್ಯವಾಗಿ ವಚನ ಸಾಹಿತ್ಯ, ಮೇಲ್ತರಗತಿಯ ಸಾಹಿತ್ಯ. ಪಾಂಡಿತ್ಯ-ಪ್ರತಿಭೆಗಳ ಸಂಯೋಗದಿಂದ ಉಂಟಾದ ಗ್ರಥನಸಾಹಿತ್ಯವಲ್ಲ, ಅನುಭಾವಿಗಳ ಆತ್ಮಮಥನದಿಂದ ಹೊರಹೊಮ್ಮಿದ ಮಥನಸಾಹಿತ್ಯ. 'ವಚನಗಳಲ್ಲಿ ರಸಭಾವ ಅಲಂಕಾರಗಳೂ, ಉದಾತ್ತ ಧ್ಯೇಯವೂ ಇರುವುದರಿಂದ ಅವು ಉತ್ತಮಸಾಹಿತ್ಯವೆಂದು ಧಾರಾಳವಾಗಿ ಹೇಳಬಹುದು. ವಚನಗಳು ನಮ್ಮ ಕನ್ನಡಸಾಹಿತ್ಯದ ಉಪನಿಷತ್ತುಗಳು. ಆ ಕವಿಗಳು ನಮ್ಮ ಕನ್ನಡನಾಡಿನ ರಸಋಷಿಗಳು. ಆ ರಸಋಷಿಗಳ ಉಪದೇಶಸಾರ: ಸಾಹಿತ್ಯವೇ ದರ್ಶನ, ದರ್ಶನವೇ ಸಾಹಿತ್ಯ! ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ![1] ಎಂದು ಎಂ. ಆರ್. ಶ್ರೀಯವರು ತಮ್ಮ 'ವಚನಧರ್ಮಸಾರ'ವನ್ನು ಕೊನೆಗಾಣಿಸಿದ್ದಾರೆ. ವಚನಗಳಲ್ಲಿ ಎಲ್ಲವೂ ಉತ್ತಮಸಾಹಿತ್ಯಪದವಿಗೆ ಅರ್ಹವೆಂದು ಯಾರೂ ಹೇಳಲಾರರು. ಆದರೆ ಉತ್ತಮಸಾಹಿತ್ಯಕ್ಕೆ ಅವಶ್ಯವಾದ ವ್ಯಕ್ತಿತ್ವಮಹಿಮೆ, ಜೀವನಸಿದ್ಧಿ ವಚನಕಾರರಲ್ಲಿರುವುದೆಂಬುದನ್ನು ಎಲ್ಲರೂ ಒಪ್ಪಬಹುದು. ಉಪನಿಷತ್ತುಗಳಿಗೆ ಹೋಲುವ ಉಕ್ತಿಗಳು ವಚನದಲ್ಲಿ ಬಂದಿವೆ ಮಾತ್ರವಲ್ಲ, ಉಪನಿಷತ್ಕಾರರ ಆತ್ಮಾನುಭವ, ದೃಷ್ಟಿವೈಶಾಲ್ಯ, ಸತ್ಯಧರ್ಮದರ್ಶನ ವಚನಕಾರರಲ್ಲಿವೆ. ಜೊತೆಗೆ ಉಪನಿಷತ್ತಿನಲ್ಲಿ ಇಲ್ಲದ ತತ್ವಪ್ರಣಾಲಿ, ಸಮಾಜನೀತಿ, ಆಚಾರಧರ್ಮಗಳೂ ಅವುಗಳನ್ನು ಕನ್ನಡಿಸುವುದಕ್ಕೆ ಹೊರಟ ಭಾಷೆಯ ಜನಸಂಮುಖಸ್ವರೂಪಗಳೂ ವಚನಗಳಲ್ಲಿವೆ. ನಾಗಚಂದ್ರನು ಹೇಳಿದ 'ಜನತಾಂತರ್ದೃಷ್ಟಿ' ಎಂಬ ಸಾಹಿತ್ಯದ ಸಾಮಾನ್ಯಲಕ್ಷಣವು ವಚನವಾಙ್ಮಯಕ್ಕೆ ವಿಶೇಷವಾಗಿ ಸರಿಹೋಗುತ್ತದೆ.

ವೀರಶೈವಮತಪ್ರಸಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಶಿವಲೆಂಕಮಂಚಣ್ಣ, ಶ್ರೀಪತಿಪಂಡಿತ, ಮಲ್ಲಿಕಾರ್ಜುನಪಂಡಿತ ಈ ಪಂಡಿತತ್ರಯರನ್ನು ಇಲ್ಲಿ ನೆನೆಯಬೇಕು. ಇವರು ಬಸವಣ್ಣನ ಸಮಕಾಲೀನರೆಂದು ಗ್ರಹಿಕೆಯಿದೆ. ಶಿವಲೆಂಕಮಂಚಣ್ಣ-ಮಲಿಕಾರ್ಜುನರು ಕನ್ನಡದಲ್ಲಿ ವಚನಗಳನ್ನು ಬರೆದಿದ್ದಾರೆ. ಶ್ರೀಪತಿಪಂಡಿತನು ಸಂಸ್ಕೃತದಲ್ಲಿ ಬ್ರಹ್ಮಸೂತ್ರಗಳಿಗೆ ಶ್ರೀಕರಭಾಷ್ಯವನ್ನು ಬರೆದನು, ಕನ್ನಡದಲ್ಲಿ ಏನನ್ನೂ ಬರೆದಂತಿಲ್ಲ. ರೇವಣ, ಮರುಳಸಿದ್ಧ, ಏಕೋರಾಮಿತಂದೆ, ಪಂಡಿತಾರಾಧ್ಯ, ವಿಶ್ವೇಶ್ವರ— ಈ ಐವರು ವೀರಶೈವ ಆಚಾರ್ಯಪಂಚಕವೆಂದು ಹೆಸರಾಗಿದ್ದಾರೆ. ಇವರಲ್ಲಿ

---

1 ಎಂ. ಆರ್. ಶ್ರೀನಿವಾಸಮೂರ್ತಿ: ವಚನಧರ್ಮಸಾರ, ಪು. ೨೩೪.

ಕೆಲವರು ಬಸವನಿಗೆ ಪೂರ್ವಿಕರು, ಕೆಲವರು ಅವನಿಗೆ ಸಮಕಾಲೀನರೂ ಆಗಿದ್ದಾರೆ. ಇವರಲ್ಲಿ ಪಂಡಿತಾರಾಧ್ಯ, ಏಕೋರಾಮಿತಂದೆ, ಮರುಳಸಿದ್ಧ ಇವರು ಬರೆ... ವಚನಗಳು ದೊರೆತಿವೆ.

೧೬. ಹರಿಹರ

ಶರಣಜೀವನ ಮತ್ತು ವಚನಸಾಹಿತ್ಯಗಳು ಒಂದು ಮಹಾಪೂರದಂತೆ ಬಂದಿಳಿ... ಮೇಲೆ ಅದರ ನೆನವಿನಿಂದ ಸ್ಫುರಣಹೊಂದಿ ಸಾಹಿತ್ಯನಿರ್ಮಾಣ ಮಾಡಿದವರ... ಹರಿಹರ, ರಾಘವಾಂಕ, ಪದ್ಮರಸ ಈ ಮೂವರು ಮುಖ್ಯರು. ಇವರಲ್ಲಿ ಹರಿಹರನ... ಹಿರಿಯ ಭಕ್ತಕವಿ, ಮೇಲಾದ ಶಿವಕವಿ. ಇವನೆಲ್ಲ ಕೃತಿಗಳಲ್ಲಿ ಭಕ್ತಿಪೂರ್ಣವಾದ... ಭಾವನಿರ್ಭರವಾದ ಸಮಗ್ರವ್ಯಕ್ತಿತ್ವವೊಂದು ಎದ್ದುಕಾಣುತ್ತದೆ. ಪಾಂಡಿತ್ಯ-ಪ್ರತಿಭೆಗ... ರೆಕ್ಕೆಗಳನ್ನು ಬಿದಿರಿ, ಭಕ್ತಹೃದಯವನ್ನು ತೆರೆದು ದಣಿವಿಲ್ಲದೆ ಹಾಡುತ್ತ ಹಾರು... ಹಕ್ಕಿಯಂತೆ ಇವನು ತೋರುತ್ತಾನೆ. ಈ ವ್ಯಕ್ತಿತ್ವದಲ್ಲಿ ಸಮಗ್ರತೆಯಿದೆ, ಸಮತೋ... ವಿಲ್ಲ; ಉತ್ಸಾಹವಿದೆ, ನಿಗ್ರಹವಿಲ್ಲ. ಇದರಲ್ಲಿಯೆ ಇದರ ಸೊಗಸಿದೆ. ಇವನ ದೊರೆ... ಗ್ರಂಥಗಳೆಂದರೆ ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾಕಲ್ಯಾ... ಮತ್ತು 'ಶಿವಗಣದ ರಗಳೆಗಳು'. ಇವುಗಳ ರಚನೆಯ ಕ್ರಮದ ಬಗ್ಗೆ ಚರ್ಚೆ ನಡದಿ... ಬಹುಶಃ ಇಂದಿನ ಎಲ್ಲ ಅಭ್ಯಾಸಿಗಳು ಒಪ್ಪುವಂತೆ ಮೊದಲಿನ ನಾಲ್ಕು ಗ್ರಂಥಗ... ಅದರಲ್ಲಿಯೂ 'ಗಿರಿಜಾಕಲ್ಯಾಣ'ವು ಹರಿಹರನ ಕಾವ್ಯನಿರ್ಮಾಣದ ಮೊದಲ ಹಂತದ... ಹುಟ್ಟಿದುವೆಂದೂ ಶಿವಶರಣರ ರಗಳೆಗಳು ಎರಡನೆಯ ಹಂತದಲ್ಲಿ ಹುಟ್ಟಿದುವೆಂದ... ಸ್ಥೂಲವಾಗಿ ಹೇಳಬಹುದು. ರಗಳೆಯಲ್ಲಿ ಕೆಲವು ಮೊದಲನೆಯ ಹಂತದಲ್ಲಿ ಹುಟ್ಟಿ... ಬಹುದು ಎಂಬುದನ್ನೂ ಇಲ್ಲಿ ಲಕ್ಷಿಸಬೇಕು. 'ರಗಳೆಯ ಕವಿ' ಎಂಬ ಪರಿಹಾಸ... ಬಿರುದು ಸಂಪ್ರದಾಯಮೂಢರಿಂದ ದೊರೆತದ್ದು ನಿಜವಿರಬಹುದು, ಆದರೆ ಅದರಿಂ... ಸೂಚಿತವಾದ ರಚನಾಕ್ರಮವು ನಿಜವಲ್ಲ.

ಹರಿಹರನ ಎರಡೂ ಶತಕಗಳು ನೇರವಾದ ಆತ್ಮಕಥನವಾಗಿವೆ. ಅವನ... ಹಂಪೆಯ ವಿರೂಪಾಕ್ಷನಲ್ಲಿ ತಳೆದ ಭಕ್ತಿ ಭಾವಾವೇಶವಾಗಿ ವೀರನಿಷ್ಠೆಯಾಗಿ ಅವುಗಳ... ಹೊರಹೊಮ್ಮಿದೆ. ಸಂಸಾರಭಾರ, ರಾಜಸೇವೆ ಇವರಿಂದ ಮುಕ್ತನಾಗಿ ಅವನ... ಭಕ್ತಿಜೀವನಕ್ಕೆ ತನ್ನನ್ನು ಮೀಸಲು ಮಾಡಿದ್ದರ ಸೂಚನೆಯೂ ಅಲ್ಲಿದೆ (ಪದ್ಯ ೧... ೨೩, ೭೨, ೮೭, ೮೮—ಪಂಪಾಶತಕ). ಅವನ ಭಕ್ತಿ ಅಶ್ರು, ಪುಳಕ, ಸ್ವೇದದಂ... ಸಾತ್ವಿಕಭಾವಗಳಲ್ಲಿ ಅಭಿವ್ಯಕ್ತವಾದ 'ಅನುಭಾವ' ಭಕ್ತಿಯೆಂಬುದನ್ನು 'ತೆ... ಮಸಗಲ್ ಸುಖಾಶ್ರು' ಮೊದಲಾಗಿ 'ಮದೀಶ **ನಿಜಭಕ್ತಿತರಂಗಿಣಿ** ಮಾಜುತ...

ಬ್ಬರಂಬರಿವುತುಮೆನ್ನ ಮೇಲೆ ಮಡುಗುಟ್ಟುವುದೆಂದೆಲೆ ಹಂಪೆಯೊಳ್ಳನೇ' ಎಂದು ಮುಗಿಯುವ ಪದ್ಯದಲ್ಲಿ ನೋಡಬಹುದು(ಪ. ೬-ಪಂ.ಶ.). ಈ ಭಕ್ತಿರಸದ ಉತ್ಕಟತೆ-ತನ್ಮಯತೆಗಳನ್ನು, ಕೊರಗು-ಕಳವಳಗಳನ್ನು ಉದ್ಗಾರ-ಪುನರುಕ್ತಿಗಳಿಂದ ವಿಶಿಷ್ಟ-ವಾದ ಶೈಲಿಯಲ್ಲಿ ಹರಿಹರನು ವ್ಯಕ್ತಪಡಿಸಿದ್ದಾನೆ. ಇಲ್ಲಿ ತೋರಿದ ಅವನ ವ್ಯಕ್ತಿ-ವಿಶಿಷ್ಟ ಶೈಲಿ ಅವನ ಎಲ್ಲ ಕೃತಿಗಳಲ್ಲಿ ಏಕತಾನವಾಗಿ ಮೆರೆದಿದೆ. ಸಾಹಿತ್ಯದೃಷ್ಟಿ-ಯಿಂದ ಈ ಶತಕಗಳು ಕಲ್ಪನಾಶಕ್ತಿಗಿಂತ ಭಾವಶಕ್ತಿಯಿಂದ, ವಿಶಿಷ್ಟಸಹಜಶೈಲಿಯಿಂದ ರಮ್ಯವಾಗಿವೆ, ಭಾವಗೀತೆಯ ಸತ್ವವನ್ನು ಪಡೆದಿವೆ. ಇಲ್ಲಿ ತತ್ವವಿದೆ, ಮತೀಯ ಅಭಿನಿವೇಶವಿದೆ, ಆದರೆ ನೀರಸವಾದ ಭಾವನಿರೂಪಣೆಯೆಲ್ಲಿಯೂ ಇಲ್ಲ. ಪಂ.ಶ.ದ ಪದ್ಯ ೮೧-೮೨ರಲ್ಲಿ ಒಂದು ಪ್ರತಿಜ್ಞೆ, ಒಂದು ಬೋಧನೆಯಿರುತ್ತದೆ. 'ಪೊಗಟೆಂ ಮಿಕ್ಕಿನ ಚಕ್ರಪಾಣಿಸರಸೀಜೋದ್ಭೂತಸಂಕ್ರಂದನಾದಿಗಳಂ............ಈಶ್ವರಂಗೆಯ್ದೆ ನಾಲಗೆಯಂ ಮಾಜುಂದೆಂ'....'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ.... ಅನವರತಂ ಪೊಗಟ್ಟು ಕೆಡಬೇಡೆಲೆ ಮಾನವ ನೀನಹರ್ನಿಶಂ ನೆನೆ ಪೊಗಟರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ.' ಇವು ಹರಿಹರನ ಸಾಹಿತ್ಯದ ಉದ್ದೇಶ-ವಿಷಯಗಳನ್ನು ಸಾರಿದುವಲ್ಲದೆ ವೀರಶೈವಸಾಹಿತ್ಯಕ್ಕೆ ಹೊಸ ದಿಶೆಯನ್ನೇ ತೋರಿಸಿ ಕೊಟ್ಟುವು. ಷಟ್ಸ್ಥಲಸಿದ್ಧಾಂತದಲ್ಲಿಯ ಮಾಹೇಶ್ವರಸ್ಥಲದ ಭಕ್ತಿ ಹರಿಹರನ ಜೀವ-ಜೀವಾಳದಲ್ಲಿ ನೆಲೆನಿಂತು ಕನ್ನಡಸಾಹಿತ್ಯದ ಒಂದು ದೊಡ್ಡ ಪ್ರವಾಹಕ್ಕೆ ದಿಕ್ಕು ತೋರಿದ್ದು ವ್ಯಕ್ತಿತ್ವಮಹಿಮೆಯೆ ಸರಿ. ನಾಗವರ್ಮಾಚಾರ್ಯನ 'ವೈರಾಗ್ಯ-ಶತಕದ'ದ ತರುವಾಯ ಕನ್ನಡಕ್ಕೆ ಇವೇ ಶತಕಗಳು ದೊರೆತಿವೆ. ವೀರಶೈವಸಾಹಿತ್ಯ-ಕ್ಕಂತೂ ಇವು ಮೊದಲಿನವು. 'ಪಂಪಾಶತಕ', 'ರಕ್ಷಾಶತಕ' ಇವೆರಡರಲ್ಲಿ ಅದೇ ಉತ್ಕಟಭಕ್ತಿಯಿದ್ದರೂ ಹರಿಹರನ ಮನಸ್ಸಿನ ಪಕ್ವತೆ 'ರಕ್ಷಾಶತಕ'ದಲ್ಲಿ ಹೆಚ್ಚಾಗಿ ತೋರಿದೆ. 'ಮುಡಿಗೆಯ ಅಷ್ಟಕ'ವು ಕ್ಷಕಾರಪ್ರಸಾದ ೮ ವೃತ್ತಗಳಲ್ಲಿ ವಿರೂಪಾಕ್ಷ-ದೇವನ ಸರ್ವಶ್ರೇಷ್ಠತೆಯನ್ನು ಸಾರುವ ಹಾಗೂ ಹರಿಹರನ ಪವಾಡವೊಂದನ್ನು ಸೂಚಿಸುವ ಕವಿತೆ. ಶತಕಗಳಲ್ಲಿಯ ಭಾವಾವೇಶಕ್ಕಿಂತ ಇಲ್ಲಿ ಆತ್ಮಪ್ರತ್ಯಯವು ಹೆಚ್ಚಾಗಿ ತೋರಿದೆ. ಮೌಕ್ತಿಕಕವಿಯ ಚಂದ್ರನಾಥಾಷ್ಟಕ ಸು. ೧೧೨೦ರದ್ದು ಎಂಬುದು ಖಚಿತವಾದರೆ ಕನ್ನಡದಲ್ಲಿ ಇದು ಎರಡನೆಯ ಅಷ್ಟಕವಾಗುತ್ತದೆ.

'ಗಿರಿಜಾಕಲ್ಯಾಣ'ವು ಹರಿಹರನ ವೈಶಿಷ್ಟ್ಯಯುತವಾದ ಚಂಪೂಗ್ರಂಥ, ಪ್ರೌಢಕಾವ್ಯಪರಂಪರೆಗೆ ಅವನ ನಲ್ಗಾಣಿಕೆ. 'ಕಾವ್ಯಂ ತಾನಿದು ನವರಸಸೇವ್ಯಂ' (೧-೧೪), 'ಪೊಸತಿದು ಪಾವನಮಿದು' (೧-೧೫), 'ಹರಿಹರನ ಕಾವ್ಯಮಖಿಳ-ಸೇವ್ಯಂ ನವ್ಯಂ' (೧-೧೭) ಹೀಗೆ ಅವನಿದನ್ನು ಹೊಗಳಿದ್ದಾನೆ. ಕಥಾವಿಷಯ, ವಸ್ತುರಚನೆ, ವರ್ಣನೆ, ಶೈಲಿ ಇವುಗಳಲ್ಲಿ ಪೂರ್ವಪರಂಪರೆಯ ಅಂಶಗಳನ್ನು ಸ್ವೀಕರಿಸಿ ಸ್ವತಂತ್ರವಾದ ಕೆಲವನ್ನು ಸೇರಿಸಿ ವ್ಯಕ್ತಿತ್ವದ ಪ್ರಕ್ರಿಯೆಯಿಂದ ಅವಕ್ಕೆ ಕೊಟ್ಟ ಹುದುವಿನಲ್ಲಿ, ಮೆರುಗಿನಲ್ಲಿ ಈ ಗ್ರಂಥದ ಹೊಸತನವಿದೆ. ಈ ವರೆಗಿನ

ಕನ್ನಡ ಚಂಪೂಕಾವ್ಯಗಳಲ್ಲಿ ಕಾಣದೊರೆಯದ ಕಥಾವಿಷಯವು ಇದರಲ್ಲಿದೆ. ಶೈವ-ಪುರಾಣ-ಕಾವ್ಯಗಳಲ್ಲಿ ವರ್ಣಿತವಾದ ಶಿವಪಾರ್ವತಿಯರ ಮದುವೆ ಎಂಬುದು ಆ ವಿಷಯ. ಇದರಲ್ಲಿ ಪಾರ್ವತಿಯ ಜನನದಿಂದ ವಿವಾಹದವರೆಗೆ ನಡೆದ ಸಂಗತಿಗಳನ್ನು ನಿರೂಪಿಸುತ್ತ ಅವಳ ಪಾತ್ರವನ್ನು ತಾನು ಕಂಡಂತೆ ಬಿಡಿಬಿಡಿಸಿ ಚಿತ್ರಿಸುವುದರಲ್ಲಿ ಹರಿಹರನು ಮಗ್ನನಾಗಿದ್ದಾನೆ. ಕಥಾನಾಯಿಕೆಯಾದ ಗಿರಿಜೆಯ ಮೇಲೆ ಅವನ ಗಮನವು ಕೇಂದ್ರಿತವಾದ ಕಾರಣ 'ಗಿರಿಜಾಕಲ್ಯಾಣ'ವೆಂಬ ಹೆಸರು ಸಾರ್ಥಕ-ವಾಯಿತು. ಇದರ ಸ್ಥೂಲವಾದ ಕಥಾಂಶಗಳನ್ನು ಪುರಾಣಗಳಿಂದ ಇವನು ತೆಗೆದು-ಕೊಂಡಿರಬೇಕು. ಕಾಲಿದಾಸನ 'ಕುಮಾರಸಂಭವ'ವೂ ತನ್ನ ಪ್ರಭಾವ ಬೀರಿದಂತೆ ಕಾಣುತ್ತದೆ. ಆದರೆ ಅದು 'ಕುಮಾರಸಂಭವ', ಇದು 'ಗಿರಿಜಾಕಲ್ಯಾಣ'. ಹೆಸರಿನ ವ್ಯತ್ಯಾಸದಲ್ಲಿಯೇ ಇಬ್ಬರ ದೃಷ್ಟಿವ್ಯತ್ಯಾಸವಿದೆ. ಮೂಲದಲ್ಲಿ ಹರಿಹರನು ಮಾಡಿಕೊಂಡ ಮಾರ್ಪಾಡುಗಳಲ್ಲಿ ಬೃಹಸ್ಪತಿಯ ದೌತ್ಯ, ವಿಷ್ಣುವಿನಿಂದ ಕಾಮನ ಮನವೊಲಿಸುವಿಕೆ, ವಟುವೇಷದ ಶಿವನನ್ನು ಕುಪಿತಳಾದ ಗಿರಿಜೆ ವಿಭೂತಿಯಿಂದ ಹೊಡೆಯುವುದು ಇವು ಮಹತ್ವದವು. ಕೊನೆಯದಂತೂ ಯಾವ ಮೂಲದಲ್ಲಿಯೂ ಇಲ್ಲದೆ ಹೊಸ ಕಲ್ಪನೆ-ಯಾಗಿ ಗಿರಿಜೆಯ ಪಾತ್ರವಿಶೇಷವನ್ನು ಚೆನ್ನಾಗಿ ಪ್ರಕಾಶಿಸುತ್ತದೆ. ಮೊದಲಿನದರಲ್ಲಿ ಬೃಹಸ್ಪತಿಯ ಪಾತ್ರಕ್ಕೆ ಕವಿ ಬಹಳ ಅನ್ಯಾಯಮಾಡಿದ್ದಾನೆ ಎಂಬ ಆಕ್ಷೇಪಣೆಯಿದೆ.[1] ಬಹಳ ಅನ್ಯಾಯವೆಂದು ತಿಳಿಯದಿದ್ದರೂ ಕಾಮನ ಪ್ರತಾಪವರ್ಣನೆಯ ರಭಸದಲ್ಲಿ, ಬೃಹಸ್ಪತಿಯ ಚಿತ್ರಣವು ತೂಕತಪ್ಪಿದೆ ಎಂದೊಪ್ಪಬೇಕು. ಇದೇ ರೀತಿ ವಿಷ್ಣು-ಕಾಮರ ಸಂವಾದದಲ್ಲಿ ನಯವು ಕಡಿಮೆಯಾಗಿದೆ, ವಿಸಂಗತಿಯೂ ತೋರಿದೆ. ಆದರೂ ಕೊನೆಗೆ ಅದು ಪಡೆದ ತಿರುಪು ಮೆಚ್ಚುವಂತಿದೆ. ಕಾವ್ಯದ ಮೊದಲಿನಿಂದ ಕೊನೆಯ-ವರೆಗೆ ವರ್ಣನೆಯ ಮೇಲೆ ವರ್ಣನೆಗಳು ಬಂದಿರುವುದರಿಂದ ಕಥಾಗತಿ ಮಂದ-ವಾಗುತ್ತದೆ. ಪೂರ್ವಾರ್ಧಕಿಂತ ಉತ್ತರಾರ್ಧದಲ್ಲಿ ಕಥೆಯ ಓಟ ಹೆಚ್ಚುವುದು, ವರ್ಣನೆಗಳಿಗೂ ಸಂದರ್ಭೌಚಿತ್ಯ ಬರುವುದು. ಸವೇಗವಾದ ಕಥನಕಲೆ ಹರಿಹರನ ಹುಟ್ಟುಗುಣವೆಂಬುದಕ್ಕೆ ಇಲ್ಲಿ ನಿದರ್ಶನವಿದೆ. ಜೊತೆಗೆ ಸಂತೋಷ-ಸಂಭ್ರಮ, ಭಕ್ತಿ-ವೀರಗಳ ಸಂದರ್ಭ ಬಂದಾಗ ಈ ಕಲೆ ಅತ್ಯಂತ ಸಹಜ-ಸಮೃದ್ಧವಾಗುತ್ತದೆ; ಕವಿಯ ಎಲ್ಲ ಶಕ್ತಿಗಳು ಕಾವುಗೊಂಡು ನಿರ್ಮಾಣದ ಎತ್ತರಕ್ಕೆ ಹಾತೊರೆಯುತ್ತವೆ.

'ಗಿರಿಜಾಕಲ್ಯಾಣ' ಶಿವಲೀಲೆಯ, ದೇವಾಸುರ ಸಂಘರ್ಷದ ದೈವೀಕಥೆ. ಒಂದರ್ಥದಲ್ಲಿ ಇದು ಸಾಂಕೇತಿಕಾರ್ಥವುಳ್ಳ ರೂಪಕವೂ ಹೌದು. ಮಾನವಪಾತ್ರಗಳ ನಿರೀಕ್ಷೆ ಇಲ್ಲಿರಬೇಕಾಗಿಲ್ಲ. ಆದರೆ ಗಿರಿಜೆ ಮಾನವ ಅಂಶಗಳಿಂದ ಕೂಡಿದ ದೈವೀ-ಪಾತ್ರವಾಗಿದ್ದಾಳೆ. ಪರ್ವತರಾಜನ ಮಗಳಾಗಿ ಹುಟ್ಟಿ ದೈವೀಸೌಂದರ್ಯ-ತಪಶ್ಶಕ್ತಿ-ಗಳುಳ್ಳವಳಾದರೂ ಶಿವಭಕ್ತಿತನ್ಮಯಳಾದರೂ ಮಾನವಸಹಜವಾದ ಸ್ವಾಭಿಮಾನ-

---

[1] ಡಿ. ಎಲ್. ನರಸಿಂಹಾಚಾರ್: ಹಂಪೆಯ ಹರಿಹರ, ಪು. ೨೧.

ಕ್ರೋಧ–ಛಲಗಳನ್ನು ಪ್ರಖರವಾಗಿ ತೋರಿಸುತ್ತಾಳೆ. 'ಭವಾನಿ ಮಾನಿ' (೯–೧೦೮) ಎಂದು ಹರಿಹರನು ಅವಳಿಗೆ ಕೊಟ್ಟ ವಿಶೇಷಣವು ಯಥಾರ್ಥವಾಗಿದೆ. ಈ ಮಾನಿತ್ವದ ನಿರೂಪಣೆಗಾಗಿಯೆ ವಸ್ತುರಚನೆ ಆದಂತಿದೆ. ಶಿವನಿದ್ದಲ್ಲಿಯೆ ತಾನು ಬಂದು ಪೂಜಿಸಿದರೆ ಕಣ್ಮರೆಯಾದನು', 'ಅದಱಿಂದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ' (೮–೮೫) ಎಂದು ಗಿರಿಜೆ ಛಲದಿಂದ ಹೇಳುತ್ತಾಳೆ, 'ನಿಕೃಷ್ಟಾತ್ಮ' (೮–೮೪) ಎಂದು ಅವನನ್ನು ಹೀಗಳೆಯುತ್ತಾಳೆ. ಮುಂದೆ ಅವಳು ಉಗ್ರತಪಸ್ಸನ್ನು ಮಾಡಿ ಅವನನ್ನು ಒಲಿಸಲು, ವಟುವೇಷದಲ್ಲಿ ಅವನು ಬಂದಾಗ ಕನಲಿದ್ದುದು ಅವಳ ಮಾನವೀಯತೆಗೆ ಸಾಕ್ಷಿಯಾಗಿದೆ. ಗಿರಿಜೆಯ ತಾಯಿ–ತಂದೆ, ನಾರದ, ಬೃಹಸ್ಪತಿ, ಕಾಮ, ರತಿ ಇವರೆಲ್ಲರಲ್ಲಿ ಹರಿಹರನು ಲೌಕಿಕಪಾತ್ರಗಳ ಮಿತಿ–ಮರ್ಯಾದೆಗಳನ್ನು ಅಲ್ಲಲ್ಲಿ ವರ್ಣಿಸಿದ್ದಾನೆ. ಶಿವ–ಪಾರ್ವತಿಯರ ಲಗ್ನ ಸಮಾರಂಭದ ವರ್ಣನೆಯಂತೂ ವಿವರಗಳಲ್ಲಿ ಶೈವಸಂಪ್ರದಾಯದ ಮದುವೆಯ ವರ್ಣನೆಯಾಗಿದೆ. ಒಟ್ಟಿನಲ್ಲಿ 'ಗಿರಿಜಾಕಲ್ಯಾಣ'ವು ಮಹಾಕವಿಯ ಸತ್ಕಾವ್ಯ, ಮಹಾಕಾವ್ಯವಲ್ಲ. ಈ ತೀರ್ಮಾನಕ್ಕೆ ಕಾರಣಗಳೆಂದರೆ : (೧) ಮಾರ್ಗ-ಕಾವ್ಯದ ಸಂಪ್ರದಾಯಶರಣತೆ ಮತ್ತು ಸ್ವಂತ ಪ್ರತಿಭೆಯ ನವೀನತೆ ಇವುಗಳ ಸಂಘರ್ಷದಿಂದ ಈ ಕೃತಿಯಲ್ಲಿ ಅಪಕ್ವತೆ, ಅಸಂಗತಿಗಳು ತಲೆದೋರಿವೆ. ಅಷ್ಟಾದಶ-ವರ್ಣನೆಗಳ ವ್ಯಾಮೋಹಕ್ಕೆ ಕವಿ ಒಳಗಾಗಿದ್ದಾನೆ. ಅವುಗಳ ಸಂದರ್ಭೌಚಿತ್ಯವನ್ನು ಯಾವಾಗಲೂ ಗಮನಿಸಿಲ್ಲ. ವಿಷಯ ನವೀನ, ಭಾವ ಶಿವಪರ, ಆದರೆ ವರ್ಣನೆ ಸಂಪ್ರದಾಯಶರಣವಾಗಿದೆ. ವೇಶ್ಯಾವಾಟಿಯನ್ನು ನೋಡಲು ಪರ್ವತರಾಜನೊಡನೆ ನಾರದನೂ ಹೋದುದು ಇದರಿಂದ ನಿಷ್ಪನ್ನವಾದ ಅಸಂಗತಿಗಳಲ್ಲಿ ಒಂದು (ಆ. ೪–೧೦೨ ವ–ದಿಂದ ಕೊನೆ). (೨) ಪಾತ್ರಗಳ ದಿವ್ಯ–ಮಾನವ ಅಂಶಗಳ ಮೇಳವಿಕೆಯಲ್ಲಿ ಹೊಂದಿಕೆ ಕಡಿಮೆಯಾಗಿದೆ. ಶಿವನ ಅರ್ಧಾಂಗಿಯೂ ಆದಿಶಕ್ತಿಯೂ ಆದ ಗಿರಿಜೆ ಬಾಲ್ಯದಿಂದಲೂ ಶಿವಮಯಳಾಗಿದ್ದು ಆಮೇಲೆ ತೋರಿದ ವ್ಯಕ್ತಿಮಹತ್ವದಲ್ಲಿ ದಿವ್ಯತೆ–ಮಾನವತೆಗಳ ಅತಿರೇಕದ ತುದಿಗಳನ್ನು ಒಮ್ಮೊಮ್ಮೆ ತೋರುತ್ತಾಳೆ. (೩) ಗಿರಿಜಾ-ಕಲ್ಯಾಣವೇ ಇದರ ಮುಖ್ಯವಿಷಯವಾದರೂ ತಾರಕಾಸುರಸಂಹಾರಕನಾದ ಕುಮಾರ-ಜನ್ಮಸೂಚನೆಯೂ ಇಲ್ಲದೆ ಈ ಕೃತಿ ಅಪೂರ್ಣವಾಗಿದೆ. ಆದರೆ ಗಿರಿಜೆಯ ಪಾತ್ರ-ಕಲ್ಪನೆಗನುಗುಣವಾದ ಕಥಾರಚನೆ, ಕಾಮದಹನ, ರತಿವಿಲಾಪ, ವಟುವೇಷಸಂದರ್ಭ ಈ ಮುಂತಾದ್ದರ ರಸೋತ್ಕಟ ನಿರೂಪಣೆ, ನಿರರ್ಗಳವಾದ ವ್ಯಕ್ತಿವಿಶಿಷ್ಟವಾದ ಶೈಲಿ, ಅಸಾಧಾರಣ ಕಲ್ಪಕತೆ, ಶಿವಕವಿತ್ವವುಳ್ಳ ಪ್ರಸನ್ನಲಲಿತ ಚಂಪುವಿನ ಹೊಸ ನಿರ್ಮಾಣ ಈ ಗುಣಗಳಿಂದ ಹರಿಹರನು ಮಹಾಕವಿತ್ವವನ್ನು ತೋರ್ಪಡಿಸಿದ್ದಾನೆ, ರಗಳೆಗಳ ಮೇಲ್ಮೆಗೆ ಮುನ್ನರಿಕೆಯನ್ನು ಕೊಟ್ಟಿದ್ದಾನೆಂಬುದು ನಿಸ್ಸಂಶಯ.

'ಶಿವಗಣದ ರಗಳೆಗಳು' ಹರಿಹರನ ವ್ಯಕ್ತಿತ್ವಸಿದ್ಧಿಯ ಪತಾಕೆಗಳು. ಅವುಗಳ ಎತ್ತರ–ಸೊಬಗು ಬೇರೆಬೇರೆಯಾದರೂ ಒಂದೇ ವ್ಯಕ್ತಿತ್ವದ ಪರಿಪಾಕದಲ್ಲಿ ಅವುಗಳ ಮೂಲ ಆಧಾರವಿದೆ. ಅವುಗಳ ಕಥಾವಸ್ತು ಭಿನ್ನವಾದರೂ ಕಾವ್ಯರೂಪ, ವರ್ಣನೆ–

ಶೈಲಿಗಳಲ್ಲಿ ಒಂದೇ ಪ್ರತಿಭೆಯ ಕೈವಾಡವಿದೆ, ಹರಿಹರನ ಕೃತಿಯೆಂದು ಹೆಸರು ಹೇಳದೆ ಸಹ ಗುರುತಿಸಲು ಬರುವಷ್ಟು ಅದು ನಿಚ್ಚಳವಾಗಿದೆ. ಈ ರಗಳೆಗಳೆಷ್ಟು ಎಂಬುದು ಖಚಿತವಾಗಿ ತಿಳಿದಿಲ್ಲ. ಉಪಲಬ್ಧವಾದ ಸಂಗ್ರಹಗಳನ್ನು ನೋಡಿದರೆ ೧೦೬ರ ವರೆಗೆ ಇವು ಇರಬಹುದೆಂದು ತೋರಿದೆ.[1] ಸಾಮಾನ್ಯವಾಗಿ ಪ್ರತಿಯೊಂದೂ ಒಬ್ಬ ಶಿವಭಕ್ತನ ಚರಿತೆ. ಕೆಲವು ತೀರ ಚಿಕ್ಕವು, ಕೆಲವು ಮಧ್ಯಮ, ಕೆಲವು ದೊಡ್ಡವಾಗಿವೆ. ೬೩ ಪುರಾತನರ ಅಂದರೆ ಪೆರಿಯಪುರಾಣದಲ್ಲಿ ಹೇಳಿದ ತಮಿಳುನಾಡಿನ ಶಿವಭಕ್ತರ ಕಥೆಗಳು, ಬೇರೆ ಶಿವಭಕ್ತರ ಕಥೆಗಳು, ವೀರಶೈವ ಶರಣರ ಚರಿತ್ರೆಗಳು ಇವಲ್ಲದೆ ಪುಷ್ಪರಗಳೆ ಮುಂತಾಗಿ ಚರಿತ್ರವಲ್ಲದ ವಿಷಯವುಳ್ಳವು ಹೀಗೆ ಈ ರಗಳೆಗಳಿರುತ್ತವೆ. ವಿವಿಧ ಲಯದಿಂದ ಕೂಡಿದ ರಗಳೆಯನ್ನು ವರ್ಣಕಗಳಿಗಾಗಿ ಪಂಪಾದಿಕವಿಗಳು ವಿರಳವಾಗಿ ಬಳಸಿದ್ದರು. ಹರಿಹರನು ಕಥೆ, ವರ್ಣನೆ ಮುಂತಾದ ಅಖಂಡವಾಹಿನಿಗೆ ರಗಳೆಯನ್ನು ಮೊತ್ತಮೊದಲಿಗನಾಗಿ ಬಳಸಿದನು. ಆದಿ–ಅಂತ್ಯ ಪ್ರಾಸ, ಮಾತ್ರಾನಿಯಮ, ಪಾದಸಂಖ್ಯೆಯ ಅನಿಯಮ ಇವೆಲ್ಲ ಕೂಡಿದ ರಗಳೆ ಇಲ್ಲವೆ ರಘಟಾಬಂಧವು ಅವನ ಅನಿರ್ಬಂಧವಾದ, ಲಯಬದ್ಧವಾದ ಕಾವ್ಯವಿಹಾರಕ್ಕೆ ಯೋಗ್ಯವಾಹಕವಾಯಿತು. ಕೆಲವು ಉದ್ದನ್ನ ರಗಳೆಯ ಕೃತಿಗಳಲ್ಲಿ ವೈವಿಧ್ಯಕ್ಕಾಗಿ ಒಂದು ಸ್ಥಲಪದ್ಯ, ಇನ್ನೊಂದು ಗದ್ಯ ಹೀಗೆ ರಗಳೆಯ ಚಂಪೂಪ್ರಕಾರವನ್ನು ಅವನು ನಿರ್ಮಿಸಿಕೊಂಡನು. ರಗಳೆಗಳೆಲ್ಲ ಹೆಚ್ಚಾಗಿ ಶಿವಭಕ್ತರ ಚರಿತ್ರೆಗಳು, ಆನುಪೂರ್ವಿಯಿಂದ ಬಂದ ಕಥೆಗಳು. ಹಾಗೆ ನೋಡಿದರೆ ಅವು ಬೇಸರು ತರುವ ರಗಳೆಗಳೇ ಆಗಬಹುದಾಗಿತ್ತು. ಅಲ್ಲಲ್ಲಿ ಹಾಗೆ ತೋರಲು ಅವಕಾಶವಿದೆ. ಒಟ್ಟಿನಲ್ಲಿ ಮಾತ್ರ ಅವನ ಭಕ್ತಪ್ರಕೃತಿಯ ಪ್ರಭಾವದಿಂದ, ಸಹಜಪ್ರತಿಭೆಯ ಪ್ರಸಾದದಿಂದ ಅವು ಜೀವಂತ, ಉಜ್ವಲ ಚಿತ್ರಗಳಾಗಿವೆ. ಮೂಲಕಥೆಯ ಲೋಹವನ್ನು ತನ್ನ ಕಲ್ಪನೆಯ ಸ್ಪರ್ಶದಿಂದ ಸುವರ್ಣವಾಗಿಸಿ ಕಾವ್ಯಾತ್ಮಚರಿತೆಗಳ (Poetic biography) ರಾಶಿಯನ್ನೇ ಅವನು ಕನ್ನಡಕ್ಕೆ ನೀಡಿದ್ದಾನೆ. ಕೇವಲ ಚರಿತ್ರೆ ಇಲ್ಲವೆ ಕೇವಲ ಕಾವ್ಯ ಅವುಗಳಲ್ಲಿಲ್ಲ. ಗುಣದೃಷ್ಟಿಯಿಂದ ಈ ರಗಳೆಗಳು ಹೆಚ್ಚುಕಡಿಮೆಯಾಗಿವೆ. ಅವುಗಳಲ್ಲಿ ‘ ಬಸವರಾಜದೇವರ ರಗಳೆ ’ ಹರಿಹರನ ಶ್ರೇಷ್ಠ ಕೃತಿ, ಅಲ್ಪಗಾತ್ರದಲ್ಲಿದ್ದ ಮಹಾಕೃತಿ. ಬಸವಣ್ಣನ ಬಾಹ್ಯಚರಿತ್ರೆಗಿಂತ ಅಂತರಂಗಚರಿತೆ ಅಂದರೆ ಭಕ್ತಿಜೀವನದ ರಸಚಿತ್ರವನ್ನು ಹರಿಹರನು ಅದರಲ್ಲಿ ಸಂಪೂರ್ಣ ತನ್ಮಯನಾಗಿ ಕೊಟ್ಟಿದ್ದಾನೆ. ಬಸವಣ್ಣನ ವ್ಯಕ್ತಿತ್ವಕ್ಕೂ ಅವನದಕ್ಕೂ ಅತ್ಯಂತ ಸಾಮ್ಯವಿರಬೇಕು. ‘ ಬಸವರಾಜದೇವರ ರಗಳೆ ’ಯ ೩ನೆಯ ಸ್ಥಲದಲ್ಲಿ ಪೂಜೆಗೆ ಹೂ ಕೊಯ್ಯುವ ಸಂದರ್ಭವರ್ಣನೆಯನ್ನು ಅವನ ಪುಷ್ಪರಗಳೆಯೊಡನೆ ಹೋಲಿಸಿದರೆ ಇದು ತಿಳಿಯುವಂತಿದೆ. ಎರಡರಲ್ಲಿಯೂ ಅದೇ ಭಕ್ತಿಪಾರವಶ್ಯ, ಅದೇ ಸಂಭ್ರಮ. ‘ ಅಳಿಯೆಜಗದನಿಲನಲುಗದ ರವಿಕರಂ

---

[1] ಸ. ಸ. ಮಾಳವಾಡ: ಹರಿಹರನ ರಗಳೆಯಲ್ಲಿ ಜೀವನದರ್ಶನ, ಪು. ೧೦–೧೬.

ಪುಗದ' (ಬ.ದೇ. ರಗಳೆ, ೩-೧೯) ಎಂಬ ಪಾದವೂ ಕೂಡ ಎರಡರಲ್ಲಿ ಅದೇ ಆಗಿದೆ. 'ಬಸವರಾಜದೇವರ ರಗಳೆ'ಯ ಅನೇಕ ಸಂನಿವೇಶ-ಸಂವಾದ-ವರ್ಣನೆ-ಗಳಲ್ಲಿ ಏಕತಾನವಾದ ಭಾವನಿರ್ಭರತೆ, ಭವ್ಯಕಲ್ಪಕತೆ, ವಾಕ್ಸಹಜತೆಗಳು ಒಡ-ಮೂಡಿರುತ್ತವೆ. ಉದಾಹರಣೆಗೆ, ೩ನೆಯ ಸ್ಥಲದಲ್ಲಿಯ ಶಿವಪೂಜೆ, ೪ರಲ್ಲಿಯ ಗುರುಕಾರುಣ್ಯ ಈ ಸಂದರ್ಭಗಳನ್ನು ನೋಡಬಹುದು. ಹರಿಹರನ ಉತ್ಸಾಹ-ಪೂರ್ಣವಾದ ವ್ಯಕ್ತಿತ್ವದ ಮೂಲಕ ಕ್ವಚಿತ್ತಾಗಿ ವರ್ಣನೆ ಮಿತಿಮೀರಿರಬಹುದು, ಮಾತು ಮಿಕ್ಕಿರಬಹುದು. ಈ ದೋಷದ ಕಪ್ಪು ಕಲೆಯಿಂದ ಅವನ ಗುಣಾತಿಶಯವು ಇನ್ನಷ್ಟು ಬೆಳಗುತ್ತದೆ.

'ನಂಬಿಯಣ್ಣನ ರಗಳೆ' 'ಬಸವರಾಜದೇವರ ರಗಳೆ'ಯಷ್ಟೇ ಪ್ರಭಾವಿಯಾದ ಕೃತಿಯಾದರೂ ಒಟ್ಟುಪರಿಣಾಮದಲ್ಲಿ ಮಹಾಕೃತಿಯಲ್ಲವೆಂದು ನಮ್ಮ ಮತ. ಅದರಲ್ಲಿ ಶೃಂಗಾರ-ಭಕ್ತಿಗಳ ಸಂಮಿಶ್ರಚಿತ್ರವು ಉಜ್ವಲವಾಗಿದೆ, ಕಲ್ಪನೆ ಎತ್ತರಕ್ಕೆ ಹಾರಿದೆ. ಆದರೆ ಮೂಲಕಥೆಗೆ ಕಟ್ಟುಬಿದ್ದು ಹರಿಹರನು ಬಿಡಿಸಿದ ನಂಬಿಯಣ್ಣನ ವ್ಯಕ್ತಿತ್ವದ ಚಿತ್ರ ಬಸವಣ್ಣನ ಚಿತ್ರದಷ್ಟು ಸಮಗ್ರತೆಯಿಂದ ಕೂಡಿಲ್ಲ, ಸಂಪೂರ್ಣ-ಹೃದ್ಯವಾಗಿಲ್ಲ. ಅವನು ಪರವೆ-ಸಂಕಿಲೆಯರಿಬ್ಬರಲ್ಲಿಯೂ ತೋರಿದ ಪ್ರಣಯವು ಈಶ್ವರನ ಆಜ್ಞೆಗೆ ಅನುಗುಣ, ಉತ್ಕಟವಾಗಿದ್ದರೂ ಮನುಷ್ಯಜೀವನದ ಉಚ್ಚ-ಮೂಲ್ಯಗಳಿಗೆ ವಿರುದ್ಧವಾಗುತ್ತದೆ. ಹೀಗಾಗಿ ಆ ಪಾತ್ರದ ಉದಾತ್ತತೆಗೆ ಕುಂದು-ಬಂದಿದೆ. ಅವನ ಚಂಚಲಶೃಂಗಾರ, ಸ್ಥಿರಭಕ್ತಿಗಳ ಸಮನ್ವಯವಿಲ್ಲದೆ ಹೋಗುತ್ತದೆ. ಬಸವಣ್ಣನ ಭಕ್ತಿಸ್ಥಾಯಿ ಸಂಚಾರಿಪವಾಡಗಳಿಂದ ಪೋಷಿತವಾಗುತ್ತ ಹೋಗಿ ಸಮಗ್ರರಸತ್ವವನ್ನು ಹೊಂದಿದ್ದರೆ ನಂಬಿಯಣ್ಣನಲ್ಲಿ ಅದು ಪೋಷಣೆ ಹೊಂದದೆ ಅಸಮಗ್ರವಾಗಿದೆ. 'ಬ.ದೇ. ರಗಳೆ'ಯ ಕಥೆ ಅಪೂರ್ಣವಾಗಿ ದೊರೆತಿದ್ದರೂ ವ್ಯಕ್ತಿಚಿತ್ರ ಪೂರ್ಣ, ಸಮಗ್ರ. ನಂಬಿಯಣ್ಣನ ಕಥೆ ಪೂರ್ಣವಾಗಿದ್ದರೂ ವ್ಯಕ್ತಿಚಿತ್ರ ಅಪೂರ್ಣ, ಅಸಮಗ್ರ. ಹೀಗಿದ್ದರೂ ಇದರಲ್ಲಿ ಪ್ರಥಮದರ್ಶನಪ್ರಣಯ, ರತಿಕ್ರೀಡೆಯಂಥ ಶೃಂಗಾರಿಕಸಂದರ್ಭಗಳನ್ನೂ ವೃದ್ಧಮಾಹೇಶ್ವರನ ಹಾಸ್ಯಪ್ರಧಾನ ಸಂನಿವೇಶವನ್ನೂ ಹರಿಹರನು ಮಹಾಕವಿಯೋಗ್ಯವಾಗಿ ಚಿತ್ರಿಸಿದ್ದಾನೆ. ಇಲ್ಲಿಯ ಗದ್ಯಶೈಲಿ ಪದ್ಯಕ್ಕಿಂತ ಮಿಗಿಲಾದ ಶಕ್ತಿಯನ್ನೂ ಕಾಂತಿಯನ್ನೂ ಪಡೆದಿದೆ.

ಇನ್ನುಳಿದ ರಗಳೆಗಳಲ್ಲಿ ಕಥನಕಲೆಯ ದೃಷ್ಟಿಯಿಂದ 'ತಿರುನೀಲಕಂಠರ ರಗಳೆ', 'ಮಹಾದೇವಿಯಕ್ಕನ ರಗಳೆ'ಯಂತೆ ಕೆಲವು ಮೆಚ್ಚಿಗೆಯಾಗುತ್ತವೆ. ವ್ಯಕ್ತಿ-ಮಹಿಮೆಯ ದೃಷ್ಟಿಯಿಂದ 'ಪ್ರಭುದೇವರ ರಗಳೆ' 'ರೇವಣಸಿದ್ಧೇಶ್ವರ ರಗಳೆ'-ಯಂಥವು ಮನಸೆಳೆಯುತ್ತವೆ. 'ಮಲುಹಣನ ರಗಳೆ'ಯಲ್ಲಿ ಕಾಮವು ಪಶ್ಚಾತ್ತಾಪ-ಪುನೀತವಾಗಿ ಭಕ್ತಿಯಲ್ಲಿ ಪರ್ಯವಸಾನಗೊಂಡದ್ದರ ರಸೋತ್ಕಟನಿರೂಪಣೆ ಅರ್ಥ-ಪೂರ್ಣವಾಗಿ ಬಂದಿದೆ. 'ಗುಂಡಯ್ಯನ ರಗಳೆ' ಚಿಕ್ಕದಾದರೂ ಅದರಲ್ಲಿಯ ರುದ್ರನಾಟ್ಯದ ವರ್ಣನೆ ಭವ್ಯಸೌಂದರ್ಯವನ್ನು ತಾಳಿದೆ. ಹಲವು ರಗಳೆಯ

ಕಥೆಗಳಲ್ಲಿ ಅಸಂಭವ-ಅಸಂಗತಿಗಳಿವೆ, ಮತೀಯ ಅಸಹನೆಯ ಗುರುತುಗಳಿವೆ. ಹರಿಹರನು ಮೂಲವನ್ನು ಪ್ರಮುಖ ಕಥಾಂಶಗಳಲ್ಲಿ ಭಕ್ತಿಯಿಂದ ಅನುಸರಿಸಿದ ಕಾರಣ ಅವನ್ನು ತಿದ್ದುವ ಸ್ವಾತಂತ್ರ್ಯ ಅವನಿಗಿರಲಿಲ್ಲ. ಅವನ ಪ್ರಕೃತಿಗೂ ಅದು ಇಷ್ಟವಾಗಿರಲಿಲ್ಲ. ಅವನೆಲ್ಲ ಕೃತಿಗಳಲ್ಲಿ ಭಕ್ತಿನಿರ್ಭರವಾದ, ಉತ್ಸಾಹಪೂರ್ಣವಾದ ಒಂದು ವ್ಯಕ್ತಿತ್ವವು ಹೊರಹೊಮ್ಮಿದೆ. ಅವನ ಕಲ್ಪನೆಗಳಲ್ಲಿ ಒಂದು ವಿಶೇಷವಾದ ಶಿವದೃಷ್ಟಿ ಸರ್ವತೋಮುಖವಾಗಿದೆ, 'ಶಿವಕವಿ' ಎಂಬ ಬಿರುದನ್ನು ಸಾರ್ಥಕಗೊಳಿಸಿದೆ. ಅವನ ಶೈಲಿಯಲ್ಲಿ ಪ್ರೀತಿ-ಸಂತೋಷಸೂಚಕವಾದ ಕ್ರಿಯಾಪದಗಳ ಮಾಲಿಕೆ, ಉದ್ಗಾರ-ಸ್ವರಾನುಕರಣಗಳ ವೆಗ್ಗಳ, ಪುನರುಕ್ತಿಗಳ ಹೇರಳ, ಒಂದು ಮಾತನ್ನು ಹಲವು ತರದಿಂದ ಹೇಳಿಯೂ ದಣಿಯದ ಪದಪುಂಜ ಇವನ್ನು ಎಲ್ಲ ಕಡೆಗೆ ಗುರುತಿಸಬಹುದು. ಗದ್ಯಪದ್ಯವೆರಡರಲ್ಲಿಯೂ ವಾಣಿ ಸಹಜಸಂಪನ್ನವಾಗಿ ನೆರೆಬಂದ ತೊರೆಯಾಗಿ ಹರಿಯುತ್ತದೆ. ಅದರಲ್ಲಿ ತೇಲುವ ಕಸಕಡ್ಡಿಗಳಂತೆ ದೋಷಗಳಿದ್ದರೂ ಅವು ಕಣ್ಣೊತ್ತುವುದಿಲ್ಲ, ಅವುಗಳಿಂದ ಒಮ್ಮೊಮ್ಮೆ ಕಳೆಯೇರುತ್ತದೆ.

ಹರಿಹರನು ಕನ್ನಡದ ಮಹಾಕವಿಗಳಲ್ಲಿ ಒಬ್ಬ ; ವಿಶೇಷವಾಗಿ ವ್ಯಕ್ತಿತ್ವಸಂಪತ್ತಿಯನ್ನು ಪಡೆದು ಸಾಹಿತ್ಯಸಂಪತ್ತಿಯಲ್ಲಿ ಅದನ್ನು ಪಡಿಮೂಡಿಸಿದ ಮಹಾಕವಿಯವನು. ಬಸವೇಶ್ವರನೂ ಉಳಿದ ಶರಣರೂ ಬೆಳಗಿಸಿದ ಕ್ರಾಂತಿಯ ದಾರಿಯಲ್ಲಿ ನಡೆದು ಅವನು ತನ್ನ ಪ್ರಾತಿಭಸೃಷ್ಟಿಯಿಂದ ಹರಿಹರಮಾರ್ಗ ಎಂಬುದನ್ನು ನಿರ್ಮಾಣಮಾಡಿದನು.

೧೭. ರಾಘವಾಂಕ-ಪದ್ಮರಸರು

ಹರಿಹರನು 'ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷಸಾಕ್ಷಾತ್ **ಸುಪುತ್ರ**'ನಾದರೆ ರಾಘವಾಂಕನು 'ಚತುರಕವಿರಾಯ ಹಂಪೆಯ ಹರೀಶ್ವರನ **ವರಸುತನು**', ಹರಿಹರಮಾರ್ಗದಲ್ಲಿ ಅಡಿಯಿಟ್ಟ ಮೊದಲನೆಯ ಪಟ್ಟಶಿಷ್ಯನು. ಹರಿಹರನ ಸೋದರಳಿಯನಾಗಿ ಅವನಿಂದ ಓದು ಹೇಳಿಸಿಕೊಂಡು ದೀಕ್ಷೆಪಡೆದು ರಾಘವಾಂಕನು ಪಂಡಿತನಾದನು, ಭಕ್ತನಾದನು. ಒಳ್ಳೆಯ ಶಿಷ್ಯನಂತೆ ಗುರು ತೋರಿದ ದಾರಿಯಲ್ಲಿ ತನ್ನ ವಿಶಿಷ್ಟವಾದ ನಡಿಗೆಯಿಂದ ನಡೆದನು. 'ಹಂಪೆಯರಸನ ಪೊಗಳ್ವ ನಾಲಗೆಯೊಳ್ ಅನ್ಯದೈವವ ಭವಿಗಳಂ ಕೀರ್ತಿಸಿದೆನಾದೊಡೆ ಮನಸಿ-ಜಾರಿಯ ಭಕ್ತನಲ್ಲ' (೧-೩೨) ಹ.ಕಾ. ಎಂಬ ಅವನ ಬಿರುದು ಹರಿಹರಮಾರ್ಗದ ಗುರುತು. ಕಾವ್ಯದ ಗೊತ್ತುಗುರಿ, ವಿಷಯ, ಶೈಲಿ ಈ ಬಗೆಗೆ ಅವನಿಗೆ ಹರಿಹರ-ನಿಂದ ಸ್ಫೂರ್ತಿದೊರೆತಿದೆಯಾದರೂ ಕಾವ್ಯರೂಪ, ಕಥಾವಸ್ತು, ನಿರೂಪಣಪದ್ಧತಿ ಇದರಲ್ಲಿ ಅವನು ಸ್ವತಂತ್ರನಾಗಿ ಮೆರೆದಿದ್ದಾನೆ. ಪಂಡಿತನಾದರೂ ಹರಿಹರನಂತೆ ಅವನು ಚಂಪುವಿನ ಮೋಹಕ್ಕೆ ಒಮ್ಮೆಯೂ ಒಳಗಾಗಲಿಲ್ಲ, ಷಟ್ಪದಿಯಲ್ಲಿಯೇ ಒಚ್ಚತವಾಗಿ ತನ್ನೆಲ್ಲ ಕೃತಿಗಳನ್ನು ರಚಿಸಿದನು. ಹರಿಹರನ ಪ್ರಕೃತಿಯಲ್ಲಿದ್ದ ಮಹೋತ್ಸಾಹ ರಾಘವಾಂಕನಲ್ಲಿ ಕ್ರಮೇಣ ಸಂಯಮದ ಕಡಿವಾಣಕ್ಕೆ ಒಳಪಡುತ್ತ ಬಂದಿದೆ. ಹರಿಹರನ ಉತ್ತಮಿಕೆಯಲ್ಲಿ ಅವನ ಕೃತಿ ರಸಾವೇಶದ ಹುಚ್ಚುಹೊಳೆ-ಯಾದರೆ ರಾಘವಾಂಕನಲ್ಲಿ ಅದು ಮೆಲ್ನಡೆಯ ಸೂಸುಹೊಳೆಯಾಗಿದೆ. ಅವನ ಆರು ಕೃತಿಗಳಲ್ಲಿ 'ಸೋಮನಾಥಚರಿತೆ', 'ವೀರೇಶಚರಿತೆ', 'ಸಿದ್ಧರಾಮಪುರಾಣ', 'ಹರಿಶ್ಚಂದ್ರಚಾರಿತ್ರ' ಇವು ನಾಲ್ಕು ಉಪಲಬ್ಧ ಮತ್ತು ಪ್ರಕಟಿತ ಗ್ರಂಥಗಳು. 'ಶರಭಚಾರಿತ್ರ' ದೊರೆತಿದೆ, ಪ್ರಕಟವಾಗಿಲ್ಲ. 'ಹರಿಹರಮಹತ್ವ' ಈವರೆಗೆ ದೊರೆತಿಲ್ಲ. 'ದೇವಾಂಗದಾಸಿಮಯ್ಯನ ಪುರಾಣ'ವೆಂಬ ಸಾಂಗತ್ಯಗ್ರಂಥವೊಂದು ದೊರೆತಿದ್ದು, 'ವಿರಚಿಸಿದನು ಹಂಪೆಯ ಹರದೇವನ ವರಸುತ ರಾಘವಾಂಕನುರೆ" (೨-೧೨) ಎಂದು ಅದರಲ್ಲಿ ಹೇಳಿದೆ. ಇದು ರಾಘವಾಂಕನದಾಗಿರದೆ ಮುಂದಿನ ಕಾಲದ ಯಾವನೋ ಒಬ್ಬ ಕವಿ ತಾನು ಬರೆದು ರಾಘವಾಂಕನ ತಲೆಗೆ ಕಟ್ಟಿರಬೇಕೆಂಬ ಅಭಿಪ್ರಾಯವೊಂದಿದೆ.[1] ರಾಘವಾಂಕನೇ ಬರೆದಿರುವ ಸಂಭವವಿದೆ, ಸದ್ಯಕ್ಕೆ ನಿಶ್ಚಯಾತ್ಮಕವಾಗಿ ಹೇಳಲಾಗದು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.[2] ಗ್ರಂಥವು ಸಂಪೂರ್ಣವಾಗಿ ನೋಡಲು ದೊರೆಯುವವರೆಗೆ ನಿಷ್ಕರ್ಷೆ ಸಾಧ್ಯವಿಲ್ಲ. ರಾಘ-

---

1 ಡಿ. ಎಲ್. ನರಸಿಂಹಾಚಾರ್: ಸಿದ್ಧರಾಮಪುರಾಣ, ಮುನ್ನುಡಿ, ಪು. xiii, xiv.

2 ಆರ್. ಸಿ. ಹಿರೇಮಠ: ಮಹಾಕವಿರಾಘವಾಂಕ, ಪು. ೪೭-೫೦.

ವಾಂಕನು ಸಾಂಗತ್ಯಗ್ರಂಥವನ್ನು ಬರೆದಿರಲಾರನೆಂದು ಹೇಳುವಂತಿಲ್ಲ. ನವೀನ ಪ್ರಯೋಗಬುದ್ಧಿ ಅವನಲ್ಲಿದೆ, ಅಚ್ಚಗನ್ನಡ ಛಂದಸ್ಸಿನತ್ತ ಒಲವಿದೆ. ಆದರೂ ಉದಾಹೃತಪದ್ಯಗಳನ್ನು ನೋಡಿದರೆ ಶೈಲಿ ರಾಘವಾಂಕನಿಗಿಂತ ಮುಂದಿನ ಕಾಲದ ಹೊಸಗನ್ನಡವೆಂದು ಭಾಸವಾಗುತ್ತದೆ. ಆದರೆ ಬೇರೊಬ್ಬ ಕವಿ ಬರೆದಿದ್ದರೆ ರಾಘವಾಂಕನ ತಲೆಗೇಕೆ ಕಟ್ಟಬೇಕಾಗಿತ್ತು ಎಂಬುದು ಗೂಢವಾಗಿ ಉಳಿಯುತ್ತದೆ. ಸು. ೧೭೬೮ರ ನಾರಸಿಂಹನು ತನ್ನ 'ಅನುಭವಶಿಖಾಮಣಿ'ಯನ್ನು 'ಹರಿಹರಾತ್ಮಜ ರಾಘವಾಂಕನು ಹರುಷದಿಂ ಶರಷಟ್ಪದಿಯಲಿ ಮಾಡಿರಲು ನೋಡಿ' (೧-೫೨) ಅದರ ಆಧಾರದ ಮೇಲೆ ಬರೆದೆನೆನ್ನುತ್ತಾನೆ. ಇದರಿಂದ ರಾಘವಾಂಕನು ಶರಷಟ್ಪದಿಯಲ್ಲಿ ಒಂದು ಗ್ರಂಥ ಬರೆದಿರಬಹುದು. ಅದು ಅವನ ಚರಿತ್ರಕಾರ ಸಿದ್ಧನಂಜೇಶನಿಗೆ ಗೊತ್ತಿರಲಿಲ್ಲ. ಗೊತ್ತಿರದಿದ್ದರೂ ಗ್ರಂಥವಿರಲಿಲ್ಲ ಎನ್ನಲಿಕ್ಕಾಗದು. ತೆಲುಗಿನಲ್ಲಿ ಬರೆದ ಒಂದು ನಳಚರಿತ್ರೆಯ ಕರ್ತೃ ರಾಘವಾಂಕನೆಂದಿದೆ. ಆದರೆ ತೆಲುಗಿನಲ್ಲಿ ರಾಘವಾಂಕನು ಅಷ್ಟು ಸಮರ್ಥನಾಗಿದ್ದನೆಂದು ತಿಳಿಯಲು ಆಧಾರಗಳಿಲ್ಲ. 'ಉಭಯಕವಿಕಮಲರವಿ' ಎಂಬ ಅವನ ಬಿರುದು ಕನ್ನಡ-ಸಂಸ್ಕೃತಗಳಲ್ಲಿಯ ಪ್ರಾವೀಣ್ಯವನ್ನು ಸೂಚಿಸುತ್ತಿರಬೇಕು. ಹರಿಹರನ ವಿಷಯದಲ್ಲಿ 'ರಗಳೆಯ ಕವಿ' ಕಥೆಯಿದ್ದಂತೆ ರಾಘವಾಂಕನ ಬಗ್ಗೆಯೂ ಒಂದು ಕಥೆಯುದೆ. ಅವನು 'ಹರಿಶ್ಚಂದ್ರಕಾವ್ಯ'ವನ್ನು ಮೊದಲು ಬರೆದು ನರಸ್ತುತಿಮಾಡಲಾಗಿ ಹರಿಹರನು ಕೋಪಿಸಿ ಹೊಡೆಯಲು ಐದು ಹಲ್ಲುಗಳುದುರಿದುವು. ಮುಂದೆ ಐದು ಶೈವಕೃತಿಗಳನ್ನು ಬರೆದಮೇಲೆ ಹರಿಹರನು ಮರಳಿ ಆ ಹಲ್ಲುಗಳನ್ನು ಕೊಟ್ಟನಂತೆ. ೧೬೫೦ರಲ್ಲಿ ಅಂದರೆ ಸು. ೪೦೦ ವರ್ಷಗಳಾದ ಮೇಲೆ ಸಿದ್ಧನಂಜೇಶನು ಹೇಳಿದ ಈ ಹಲ್ಲಿನ ಕಥೆ ದಂತಕಥೆಯೇ ಆಗಿರಬೇಕು! ಆದರೂ 'ಹರಿಶ್ಚಂದ್ರಕಾವ್ಯ'ದ ಸುಸ್ಪಷ್ಟಪ್ರಭಾವವು 'ಸೋಮನಾಥಚರಿತೆ'ಯಲ್ಲಿ ಕಾಣುವುದರಿಂದ ಇದರಲ್ಲಿ ತಥ್ಯಾಂಶವಿರಬಹುದು. ಹರಿಶ್ಚಂದ್ರ ಶಿವಭಕ್ತನಾದರೂ ಶಿವಗಣದಲ್ಲಿ ಒಬ್ಬನಲ್ಲ. ಅವನ ಚರಿತೆಯ ನಿರೂಪಣೆಯೆಂದರೆ ನರಸ್ತುತಿಯೆಂದು ರಭಸಪ್ರಕೃತಿಯ ಹರಿಹರನು ಹಲ್ಲುಗಳೆಯುವಂತೆ ಹೊಡೆಯದಿದ್ದರೂ ಹೀಗಳೆದಿರಬಹುದು, ಅದಕ್ಕೆ ಪ್ರತಿಕ್ರಿಯೆಯಾಗಿ ರಾಘವಾಂಕನು 'ಶೈವಕೃತಿಪಂಚಕ'ವನ್ನು ಬರೆದಿರಬಹುದು. ಸೋಮನಾಥಚರಿತೆ, ಸಿದ್ಧರಾಮಚಾರಿತ್ರ, ಹರಿಶ್ಚಂದ್ರಕಾವ್ಯ ಇವುಗಳಲ್ಲಿ ಮತಾಂಶ-ಕಾವ್ಯಾಂಶಗಳ ಹೆಚ್ಚುಕಡಿಮೆಯನ್ನು ಪೃಥಕ್ಕರಿಸಿ ಈ ಕ್ರಮದಿಂದ ಇವು ರಚಿತವಾಗಿರಬೇಕೆಂಬ ಅಭಿಪ್ರಾಯವೊಂದಿದೆ.[1] ಕವಿಯ ಆತ್ಮವಿಕಾಸವನ್ನು ತೋರಿಸುವ ಆದರ್ಶ, ವ್ಯಕ್ತಿತ್ವ, ಶೈಲಿ ಇವುಗಳ ಅಂತಸ್ಥಪ್ರಮಾಣದಿಂದ ಸೋಮನಾಥಚರಿತೆ, ವೀರೇಶಚರಿತೆ, ಸಿದ್ಧರಾಮಪುರಾಣ,

1 ಎ. ಆರ್. ಕೃಷ್ಣಶಾಸ್ತ್ರಿ: ಹರಿಶ್ಚಂದ್ರಕಾವ್ಯಸಂಗ್ರಹ, ಉಪೋದ್ಘಾತ, ಪು. xiv, xv, xvi.

ಹರಿಶ್ಚಂದ್ರಕಾವ್ಯ ಈ ಕ್ರಮದಲ್ಲಿ ಗ್ರಂಥರಚನೆಯಾಗಿರಬೇಕೆಂದೂ, ಮಿಕ್ಕ ಕಾವ್ಯ-
ಗಳನ್ನು ಈ ಮಧ್ಯೆ ರಚಿಸಿರಬಹುದೆಂದೂ ಮೇಲಿನದಕ್ಕೆ ಪೋಷಕವಾದ ಅಭಿಪ್ರಾಯವು
ವ್ಯಕ್ತವಾಗಿದೆ.[1]

'ಸೋಮನಾಥಚರಿತೆ' ಇದು ನಿಜವಾಗಿ ಆದಯ್ಯನ ಚರಿತೆ; ಸೌರಾಷ್ಟ್ರದ
ಶಿವಭಕ್ತನಾದ ಆದಯ್ಯನು ಪುಲಿಗೆರೆಗೆ ಬಂದು ಸೌರಾಷ್ಟ್ರದ ಸೋಮನಾಥನನ್ನು ಅಲ್ಲಿ
ಪ್ರತಿಷ್ಠೆಮಾಡಿ ಪವಾಡಗಳನ್ನು ಮೆರೆದು ಜೈನರನ್ನು ಶಿವಭಕ್ತರನ್ನಾಗಿ ಮಾಡಿದ ಕಥೆ.
ಹರಿಹರನ 'ಆದಯ್ಯನ ರಗಳೆ'ಯಿಂದ ಇದಕ್ಕೆ ಸ್ಫೂರ್ತಿದೊರೆತಿರುವುದಾದರೂ ಇದು
ಅದರ ಷಟ್ಪದಿರೂಪವಾದ ಅನುವಾದವಲ್ಲ. ಕಥಾರಂಭದಿಂದಲೂ ಹೊಸ ಸಂನಿವೇಶ-
ಗಳು ಅಲ್ಲಲ್ಲಿ ಮಿನುಗುತ್ತವೆ. ಕಥಾನಕವು ಆದಯ್ಯನ ಚಾರಿತ್ರ್ಯವನ್ನು ಎತ್ತಿ-
ತೋರಿಸುವ ಸಂದರ್ಭಗಳಲ್ಲಿ ಶಕ್ತಿಯುತವಾಗಿದೆ. ಆದರೆ ಕನ್ನಡಕವಿಗಳ ಅಷ್ಟಾದಶ-
ವರ್ಣನೆಯ ಗೀಳು ಬಿಟ್ಟಿಲ್ಲ. ಪ್ರಮಾಣಜ್ಞಾನ, ಔಚಿತ್ಯದೃಷ್ಟಿ ಇವು ಕೈಬಿಟ್ಟಿವೆ.
ಕಥಾವಸ್ತುವಿನಲ್ಲಿ ಒಂದು ಹೊಂದಿಕೆ, ಕಟ್ಟಣವಿಲ್ಲ. ಆದಯ್ಯನು ಸೌರಾಷ್ಟ್ರದಿಂದ
ಪುಲಿಗೆರೆಗೆ ಹೊರಟಾಗ ಮದುವೆಯ ಹೆಂಡತಿಯನ್ನು ನೆನೆಯುವುದಿಲ್ಲ; ಪುಲಿಗೆರೆಗೆ
ಹೋದ ಮೇಲಂತೂ ಪದ್ಮಾವತಿಯ ಕೂಡ ಪ್ರಣಯದಲ್ಲಿ ಮರೆತೇ ಬಿಡುತ್ತಾನೆ.
ಪದ್ಮಾವತಿ ಜೈನಳೆಂಬುದನ್ನು ಪ್ರಣಯಸಮಾಧಿಯ ಒಂದೆರಡು ತಿಂಗಳ ಬಿಗುಹಿನಿಂದ
ಹೊರಬಿದ್ದಮೇಲೆ ಅರಿಯುತ್ತಾನೆ, ಆಮೇಲೆ ಅವಳನ್ನು ಮೃಡಭಕ್ತೆಯಾಗಿಸುತ್ತಾನೆ.
ಪಾತ್ರಪೋಷಣೆಯಲ್ಲಿ ಕುಂದುಕೊರತೆ, ವರ್ಣನೆಗಳಲ್ಲಿ ಸಾಂಪ್ರದಾಯಿಕತೆ, ಶೈಲಿಯಲ್ಲಿ
ವಿಷಮತೆ ಇವೆಲ್ಲ ಇದ್ದರೂ ಆದಯ್ಯನ ಮಾಹೇಶ್ವರಭಕ್ತಿ, ಏಕನಿಷ್ಠೆ, ಕಷ್ಟಸಹನೆ-
ಗಳನ್ನು ಕವಿ ಸುಂದರವಾಗಿ ವರ್ಣಿಸಿದ್ದಾನೆ. ಅವನ ಸತ್ವಪರೀಕ್ಷೆಯ ಪ್ರಸಂಗದಲ್ಲಿ
ಯತಿಗೂ ಅವನಿಗೂ ನಡೆದ ಸಂಭಾಷಣೆ ರಾಘವಾಂಕನ ಸಂವಾದರಚನೆಯ ಶಕ್ತಿಗೆ
ಒಳ್ಳೆಯ ನಿದರ್ಶನವಾಗಿದೆ. ವರ್ಣನೆಗಳಲ್ಲಿ ಅವನ ಕಲ್ಪನಾಶಕ್ತಿ, ಶೈಲಿಗಳು ಸಹಜ
ಉತ್ಕಟದ ಸೀಮೆಯಲ್ಲಿ ಕಾಲಿಟ್ಟಿವೆ. ಒಟ್ಟಿನಲ್ಲಿ 'ಸೋಮನಾಥಚರಿತೆ' ಪ್ರಥಮ
ಕೃತಿ ಇರಲಿ ಬಿಡಲಿ, ಅಪರಿಪೂರ್ಣ ಕೃತಿ ಎಂದೆನ್ನಬಹುದು.

'ವೀರೇಶಚರಿತೆ' ೧೨೭ ಪದ್ಯ, ೨ ಸಂಧಿಗಳ ಚಿಕ್ಕ ಕಾವ್ಯ. ಇದರಲ್ಲಿ ಶಿವನ
ಕೋಪದಿಂದ ಹುಟ್ಟಿದ ವೀರಭದ್ರನು ದಕ್ಷನ ಯಜ್ಞವನ್ನು ನಾಶಮಾಡಿದ ಕಥೆಯಿದೆ.
ದಕ್ಷ, ದಧೀಚಿ, ಶಿವ, ಪಾರ್ವತಿ ಇವರೆಲ್ಲರ ಕ್ರೋಧ ಸ್ಥಾಯಿಯಾದ ರೌದ್ರರಸ
ತಾನೇ ಒಂದಾಗಿ ಇಲ್ಲಿ ತೋರಿದೆ. ಕಥಾರಚನೆಯ ಮೇಲೆ ಹರಿಹರನ 'ವೀರಭದ್ರ-
ದೇವರ ರಗಳೆ'ಯ ಪ್ರಭಾವವಾಗಿದ್ದರೂ ಇದು ಅದರ ಪ್ರತಿಚ್ಛಾಯೆಯಲ್ಲ.
'ವೀರಭದ್ರದೇವರ ರಗಳೆ'ಯಲ್ಲಿ ಶಿವನ ಸಭೆ ಸಂಗೀತದ ರಾಗರಸದಲ್ಲಿ ಮುಳುಗಿದಾಗ
ದಕ್ಷನು ಬಂದು ನಿಲ್ಲಲು ಕರೆಗೊರಲನು ಅವನನ್ನು ನೋಡದೆ ತನ್ನ ಸುಖದಲ್ಲಿ ಮುಳುಗಿ

---

1 ಆರ್. ಸಿ. ಹಿರೇಮಠ: ಮಹಾಕವಿರಾಘವಾಂಕ, ಪು. ೫೮-೨.

ನಿಲ್ಲುತ್ತಾನೆ. ಆಗ ಅಳಿಯ ತನ್ನನ್ನು ಮನ್ನಿಸಲಿಲ್ಲವೆಂದು ದಕ್ಷ ಮುಳಿದು ಹೊರಡುತ್ತಾನೆ. ಇಲ್ಲಿ, ಎಲ್ಲ ರಾಜರು, ದೇವತೆಗಳಿಂದ ಸನ್ಮಾನಹೊಂದಿದ ತಾನು ಶಿವನಿಂದ ವಂದಿಸಿಕೊಳ್ಳಬೇಕೆಂಬ ಆಸಕ್ತಿಯಿಂದ ದಕ್ಷನು ಅವನ ಸಭೆಗೆ ಹೋಗುತ್ತಾನೆ, ವಂದನೆ ಪಡೆಯದೆ ಕೋಪಿಸುತ್ತಾನೆ. ದಕ್ಷನು ಬಂದುದು ಗೊತ್ತಿದ್ದೂ ಶಿವನು ಮನ್ನಿಸಲಿಲ್ಲ. 'ಘನತೂರ್ಯತ್ರಯಮಂ ನೋಡುವ ಭರದಿಂ ದಕ್ಷನನಭವಂ ಮನ್ನಿಸಮರೆದನೆನಿಪ್ಪುದು ಪುಸಿ' (ವೀ.ಚ. ೧-೨೧) ಎಂಬಲ್ಲಿ ಹರಿಹರನ 'ಕರೆಗೊರಲನವನನೀಕ್ಷಿಸದೆ ಸುಖದಿಂದೆ ನಿಲೆ' (೧೩.೨) ಎಂಬುದಕ್ಕೆ ರಾಘವಾಂಕನ ಪ್ರತಿಕ್ರಿಯೆಯಿರಬೇಕು. ದಕ್ಷನ ನಿತಾಂತಕ್ರೋಧ ಮುಂದಿನ ಅನಾಹುತಗಳಿಗೆಲ್ಲ ಕಾರಣವಾಯಿತು. ಅದು ಕಥಾವಸ್ತುವಿನ ತಳಹದಿಯಾಗಿದ್ದ ಕಾರಣ ಅಲಕ್ಷ್ಯದ ಅವಮಾನಕ್ಕಿಂತ ಬುದ್ಧಿಪುರಸ್ಸರವಾದ ಅವಮರ್ಯಾದೆಯಿಂದ ಪ್ರಜ್ವಲಿಸಿತೆಂದು ರಾಘವಾಂಕನು ಮಾಡಿಕೊಂಡ ಮಾರ್ಪು ಯೋಗ್ಯವಾಗಿದೆ. ಅವನು ಮಾಡಿದ ಬೇರೆ ಮಾರ್ಪಾಟುಗಳಲ್ಲಿ ಹರಿಹರನ ದಾಕ್ಷಾಯಣಿ ಶಿವನು ಬೇಡವೆಂದರೂ ತಂದೆಯ ಯಾಗಕ್ಕೆ ಹೋಗುತ್ತಾಳೆ, ರಾಘವಾಂಕನಲ್ಲಿ ಅವಳು ಶಿವನ ಒಪ್ಪಿಗೆಪಡೆದು ದಕ್ಷನನ್ನು ಶಿಕ್ಷಿಸುವ ಆವೇಶದಿಂದ ಹೊರಡುತ್ತಾಳೆ. ಹೀಗೆ 'ವೀರೇಶಚರಿತೆ'ಯ ಕಥಾರಚನೆಯಲ್ಲಿ ರೌದ್ರರಸವನ್ನು ಏರೇರಾಗಿ ತೋರಿಸುವ ನೂತನತೆಯಿದೆ, ತೀವ್ರಗತಿಯಿದೆ. ನಾಲ್ಕು ಮಾತ್ರೆಯ ಉದ್ದಂಡ ಷಟ್ಪದಿ, ಉರುಬಿನ ಶೈಲಿ ಅದಕ್ಕೆ ಅನುಗುಣವಾಗಿಯೂ ಬಂದಿವೆ. ಇದೊಂದು 'ಆದರ್ಶಕಥನಕಾವ್ಯ'ವೆಂದೂ 'ಮೇಲ್ತರಗತಿಯ ಭವ್ಯಕಾವ್ಯ'ವೆಂದೂ 'ಅಲ್ಲಿಯ ಸಂನಿವೇಶಗಳು ಭವ್ಯ, ಪಾತ್ರಗಳು ಭವ್ಯ, ಅವುಗಳ ನುಡಿ ಭವ್ಯ, ನಡೆ ಭವ್ಯ, ಕೊನೆಗೆ ಕವಿಯ ಶೈಲಿಯೂ ಭವ್ಯ'[1] ಎಂದು ಶ್ರೀ. ಆರ್. ಸಿ. ಹಿರೇಮಠರು ಅಭಿಪ್ರಾಯಪಟ್ಟಿದ್ದಾರೆ. ಭವ್ಯತೆಯ ರಸಾನುಭವ ಕೆಲಮಟ್ಟಿಗೆ ಈ ಕೃತಿಯಿಂದ ಉಂಟಾಗುವುದು ನಿಜ. ಶಿವನ ವಂದನೆಯನ್ನು ಬಯಸಿದ ದಕ್ಷನು 'ಕೆಂಡದ ತೊಡಿಗೆಗೆ ಮನವಿಟ್ಟರಗಿನ ಪುತ್ಥಳಿ'(೧-೨೦)ಯಂತಾದನಂತೆ. ೨-೯, ೧೦, ೨೦-೨೨ರಲ್ಲಿ ವೀರೇಶನ ರೌದ್ರಮೂರ್ತಿಯ ಚಿತ್ರ ಭವ್ಯವಾಗಿದೆ. ಕೃತಿಯ ತುಂಬ ಬಿರುಗಾಳಿಯ ರಭಸದಿಂದ ಕಲ್ಪನೆಗಳೂ ಕಿಡಿನುಡಿಗಳೂ ತೂರಿಕೊಂಡಿವೆ. ಒಟ್ಟಿನಲ್ಲಿ 'ಮೇಲ್ತರಗತಿಯ ಕಾವ್ಯ' ಎಂದು ಹೇಳಬಹುದಾದರೂ ಆದರ್ಶಕಥನಕಾವ್ಯ ಇಲ್ಲವೆ ಶ್ರೇಷ್ಠಕೃತಿ ಎಂದಿದನ್ನು ಕರೆಯುವುದು ಅತ್ಯುಕ್ತಿಯಾಗುತ್ತದೆ. ಅದರಲ್ಲಿಯ ಭವ್ಯತೆಗೆ ಉದಾತ್ತತೆಯ ಜೋಡಿಲ್ಲ, ಆವೇಶಕ್ಕೆ ವಿವೇಚನೆಯ ಬೆಂಬಲ ಸಾಲದು. ಶಕ್ತಿಮದಾಂಧ ದಕ್ಷ, ಸರ್ವಶಕ್ತ ಶಿವ ಇವರ ಒಂದು ಧ್ವನಿರಮ್ಯಕಥೆಯಾಗುವುದರ ಬದಲು ಇದು ಇತರ ದೇವತೆಗಳಿಂದ ಶಿವನ ಶ್ರೇಷ್ಠತೆಯನ್ನು ಸಾರುವ ಕಥೆಯಾಗಿ ಪರಿಣಮಿಸಿದೆ. ಮತೀಯದೃಷ್ಟಿಯಿಂದ ಇದು ಸಹಜ, ಆದರೆ ಉತ್ತಮಕಾವ್ಯ-

---

1 ಆರ್. ಸಿ. ಹಿರೇಮಠ: ಮಹಾಕವಿರಾಘವಾಂಕ, ಪು. ೭೪, ೭೮, ೮೦.

ೃಷ್ಟಿಯಿಂದ ಗೌಣ. 'ಶಿವಭಕ್ತರ್ಗೆ ಶಿವಂಗೆ ಆಂ ಮಾಱಿದ ಮತಿಯೊಳ್ ಮರೆದು ಜಗಿಜಹರಿಗಿರಿಸುರಪತಿಗಿರಿಪತಿ ಮೊದಲಾದ ಉಡುಕುಳಿದೇವರನು ಅವನೀಶರು ೊದಲೆನಿಸಿದ ಭವಿಗಳನು ತುತಿಸಿದೆನಾದೊಡೆ ಸಲೆಶಿವದ್ರೂಷಕ ನಾನು' (೧-೯) ಂದು ಹರಿಹರನಂತೆ ಬಿರುದನ್ನು ಹೊತ್ತ 'ಶಿವಕವಿ' ರಾಘವಾಂಕನು ಈ ಕಾವ್ಯದಲ್ಲಿ ದನ್ನು ಸಾರ್ಥಕಗೊಳಿಸಿದ್ದಾನೆ. ಈ ಸಾರ್ಥಕ್ಯದ ಅತಿರೇಕದಲ್ಲಿಯೆ ಕಲಾದೃಷ್ಟಿ- ುಂದ ಕೊರತೆಯುಂಟಾಗಿದೆ. 'ಮಿಾಸಲುಗವಿತೆ' ಎಂದು ಇದಕ್ಕೆ ಇದೇ ಪದ್ಯದಲ್ಲಿ ರೆದಿರುವುದು ಉದ್ದಂಡಷಟ್ಪದಿಯ ಹೊಸಪ್ರಯೋಗದಲ್ಲಿ ವೀರೇಶನ ರುದ್ರಕಥೆಯನ್ನು ೊಂದಿಸಿ ಹೇಳಿದ ನವೀನತೆಯನ್ನು ಕುರಿತೆಂದು ತೋರುತ್ತದೆ. 'ರಾಘವಾಂಕ- ಾರಿತ್ರ'ದಲ್ಲಿ ಸಿದ್ಧನಂಜೇಶನು ಇದನ್ನು ಸ್ಪಷ್ಟಪಡಿಸಿದ್ದಾನೆ.

'ಸಿದ್ಧರಾಮಚಾರಿತ್ರ'ವು ೯ ಸಂಧಿಗಳುಳ್ಳ ದೊಡ್ಡ ಕಾವ್ಯ. ಸೊನ್ನಲಿಗೆಯ ದ್ಧರಾಮನ ಚಾರಿತ್ರ ಇದರ ವಿಷಯ. 'ಜಗದ ಗುರು ಸಿದ್ಧರಾಮನಾಥಂ ನುಜನಲ್ಲ, ಕಾರಣರುದ್ರ' (೧-೭), 'ಎವೆಯಿಕ್ಕದುಸಿರಿಕ್ಕದುಣ್ಣದ ಜಿತೇಂದ್ರಿ- ುತ್ವವ ತಳೆದ ನಿರ್ಮಾಯನೆನಿಸುವ ಶಿವಜ್ಞಾನಿ' (೧-೨೭), 'ಬಯಲು ಲಿದಾಕಾರವಾದಂತಿಹ ಮಹಾಂತ' (೨-೫೦) ಹೀಗೆ ಕವಿ ಸಿದ್ಧರಾಮನನ್ನು ರ್ಣಿಸಿದ್ದಾನೆ. ಅವನ ಜನನ, ಬಾಲ್ಯ, ಸಿದ್ಧಿ, ಕಾರ್ಯ ಎಲ್ಲವೂ ಲೋಕವಿಲಕ್ಷಣ- ಾಗಿದೆ. ಅವನು ವಿಶ್ವಕುಟುಂಬಿಯಾಗಿ ಕೆರೆ-ಗುಡಿ-ತೋಟಗಳನ್ನು ರಚಿಸುತ್ತ ಾತಕಿಗಳನ್ನೂ ನಾರಕಿಗಳನ್ನೂ ಉದ್ಧರಿಸುತ್ತ ಬಾಳಿದ ಪವಾಡಪುರುಷನೆಂಬ ರಿತ್ರೆ ಈ ಕೃತಿಯಲ್ಲಿ ಬಂದಿದೆ. ಸಿದ್ಧರಾಮನು ವಿಶ್ವಪ್ರೇಮಿಯೂ ಕರ್ಮ- ೋಗಿಯೂ ಆಗಿದ್ದನೆಂಬ ಚಾರಿತ್ರಿಕಸತ್ಯದ ತಳಹದಿಯ ಮೇಲೆ ನಿಲ್ಲಿಸಿದ ಅತಿ- ಯೋಕ್ತಿಯ ಸುವರ್ಣಮಂದಿರದಂತೆ ಇದು ಭಾಸವಾಗುತ್ತದೆ. ಅವನ ವಚನಗಳಲ್ಲಿ ಂಡು ಬರುವ ವಿಕಾಸಶೀಲವ್ಯಕ್ತಿತ್ವಕ್ಕೆ ಇಲ್ಲಿ ಅವಕಾಶವಿಲ್ಲ. ರಾಘವಾಂಕನ ಹೀತವನ್ನೊಪ್ಪಿಕೊಂಡು ನೋಡಿದರೆ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಮೊದಲ ಂಧಿಗಳಲ್ಲಿ ಇದು 'ಸೊಗಸಿನ ಸುಗ್ಗಿ, ರಸದ ಮಡು'ವಾಗಿದೆ, 'ಸುಳಿವ ಶಾಸನ'- ೆನಿಸುವ 'ಸತ್ಕೃತಿ'ಯೂ ಆಗಿದೆ. ಮಗು ಸಿದ್ಧರಾಮನನ್ನು ಕಳೆದುಕೊಂಡು ೆಲಬುತ್ತಿರುವ ತಾಯಿಯ ಕರುಣ, ತಾಯಿಯಂತಿದ್ದ ಮಲ್ಲಿನಾಥನನ್ನು ಅರಸುತ್ತಲಿದ್ದ ದ್ಧರಾಮನ ಭಕ್ತಿ ಇವೆರಡೂ ರಸದ ಮೇಲೆ ರಸವಾಗಿ ಹರಿದು ಬಂದು 'ಕಥಾರಸದ ಹರಿಯನು' ತೋರಿ ತನ್ಮಯಗೊಳಿಸುತ್ತವೆ. ಮುಂದೆ ಹಲವಾರು ಪವಾಡಗಳೂ ದಕ್ಕೆ ಸಂಬಂಧಿಸಿದ ಉಪಕಥೆಗಳೂ ಸೇರಿಕೊಂಡು ಇದನ್ನು 'ಪುಣ್ಯಕಾವ್ಯ'- ನ್ನಾಗಿ ಮಾಡಿರುತ್ತವೆ, ಆದರೆ 'ಕಥಾರಸದ ಲಹರಿ'ಯನ್ನು ತಡೆದಿರುತ್ತವೆ. ಾಘವಾಂಕನ ಕಥನಕಲೆ ಪಳಗುತ್ತ ಸಾಗಿದೆ ಎಂಬುದಕ್ಕೆ ಈ ಕಾವ್ಯ ಸಾಕ್ಷಿಯಾಗಿದೆ. ಟ್ಪದಿಯನ್ನೂ ಕನ್ನಡನುಡಿಯನ್ನೂ ಅವನು ಮಿದಿದು ಹದಗೊಳಿಸಿದ್ದಾನೆ. ಅಷ್ಟಾದಶಸ್ಥಲವ ಪೊಗಳಲೇಕೆ ಅಗ್ಗದ ಸಮರ್ಥಕವಿಗೆ' ಎಂದರೂ ಆರಂಭಕ್ಕೆ

ಸಮುದ್ರವರ್ಣನೆಯ ಸಂಪ್ರದಾಯ ಬಿಡಲಾರ, ಬೇರೆ ವರ್ಣನೆಗಳನ್ನೂ ತಂದಿದ್ದಾ
ಆದರೆ ಅವು ಹಿತಮಿತವಾಗಿವೆ. ಕಾವ್ಯಕಲ್ಪನೆಗಳು ಕೆಲವು ಕಡೆಗೆ ಅಸಾಧಾರ
ವಾಗಿವೆ.[1] 'ಇದೊಂದು ಉತ್ತಮಕಾವ್ಯವೂ ಆಗಿದೆ, ಆದರ್ಶಪುರಾಣವೂ ಆಗಿದೆ
'ಮಾನವ್ಯದ ಮಂದಾರವನ್ನರಳಿಸಿದ ಮಹಾಕಾವ್ಯ; ವಸ್ತು, ರೂಪ, ಸತ್ವ
ದೃಷ್ಟಿಯಿಂದಲೂ ಕ್ರಾಂತಿಯನ್ನೊಳಗೊಂಡ ಸ್ವತಂತ್ರಕಾವ್ಯ; ಕನ್ನಡಸಾಹಿ
ದಲ್ಲಿಯೇ ಉನ್ನತಸ್ಥಾನವನ್ನಲಂಕರಿಸಿದ ಶ್ರೇಷ್ಠತರಗತಿಯ ಕಲಾಕೃತಿ'[2] ಎಂ
ಶ್ರೀ. ಆರ್. ಸಿ. ಹಿರೇಮಠರು ತೀರ್ಮಾನಿಸಿದ್ದಾರೆ. ರಾಘವಾಂಕನ ಅತಿಶಯೊ
ಕ್ತಿಯ ಸುವರ್ಣಮಂದಿರಕ್ಕೆ ಕಳಸವಿಟ್ಟಂತಿದೆ ಈ ಸ್ತುತಿ. ಪುರಾಣಲಕ್ಷಣದ ಚ
ಅಂತಿರಲಿ, ವಿಶಿಷ್ಟಮತಸಂಬಂಧಿಯಾದ ಚರಿತೆ, ದಂತಕಥೆ, ತತ್ವ, ಸಂಪ್ರದಾ
ಇವುಗಳಿಗೆಲ್ಲ ಪುರಾಣದಲ್ಲಿ ಅವಕಾಶವಿರುತ್ತದೆ. ಪುರಾಣವು ಕಾವ್ಯವಾದಾಗ ಕಾವ್
ನಿಯಮಗಳಿಗೆ ಅದು ಒಳಪಡಬೇಕು. ಅಂದರೆ ಒಂದು ಕಥಾಸೂತ್ರದ ಸು
ಮತೀಯವಿಷಯಗಳ ಹೆಣಿಕೆ ಸುಸಂಬದ್ಧವಾಗಿ ಸ್ವಾರಸ್ಯವಾಗಿ ಬರಬೇಕು.
ದೃಷ್ಟಿಯಿಂದ 'ಸಿದ್ಧರಾಮಚಾರಿತ್ರ'ವು ಮೇಲ್ತರಗತಿಯ ಪುರಾಣಕಾವ್ಯವಾಗಿ
ಆದರೆ ಪಂಪನ ಆದಿಪುರಾಣ, ಗದುಗಿನ ಭಾರತ ಇವು ಯಾವುದಕ್ಕೂ ಸಾಧ್ಯವಾ
ಆದರ್ಶಪುರಾಣಸಿದ್ಧಿಯನ್ನು ಇದು ಪಡೆದಿದೆ ಎನ್ನುವುದು ಧಾರ್ಷ್ಟ್ಯದ ಮಾ
'ಶ್ರೇಷ್ಠತರಗತಿಯ ಕಲಾಕೃತಿ' ಎನ್ನುವುದಕ್ಕಿಂತ 'ಅಗ್ಗದ ಸಮರ್ಥಕವಿ
ಸತ್ಕೃತಿ' ಎನ್ನುವುದು ನಮಗೆ ಸಮಂಜಸವೆನಿಸುತ್ತದೆ. ಶ್ರೇಷ್ಠಕೃತಿಯ ಕಲ್ಪಕ
ನುಡಿಬಲ್ಮೆಗಳು ಇದರಲ್ಲಿ ಸುವ್ಯಕ್ತವಾಗಿವೆಯಾದರೂ, ಚಾರಿತ್ರದ, ವ್ಯಕ್ತಿತ್
ಎತ್ತರವನ್ನು ಬಿತ್ತರಿಸುವ ಕವಿತಾಶಕ್ತಿ ಪವಾಡಗಳ ನೂಕುನುಗ್ಗಲಿನಲ್ಲಿ ಚಲವಿ
ವಾಗಿದೆ ಎಂಬುದೇ ನಮ್ಮ ಈ ಅಭಿಪ್ರಾಯಕ್ಕೆ ಮುಖ್ಯಕಾರಣ.

ರಾಘವಾಂಕನ ಕಾವ್ಯಸಿದ್ಧಿಯ ಹೆಗ್ಗುರುತೆಂದರೆ 'ಹರಿಶ್ಚಂದ್ರಕಾವ್ಯ'. ಅ
ಶಕ್ತಿವಿಶೇಷಗಳೆಲ್ಲ ಇದರಲ್ಲಿ ತನಿಗೊಂಡು ಮೇಳಗೊಂಡಿವೆ, ಮತೀಯ ಅಭಿನಿವೇ
ಗಳೆಲ್ಲ ಸೌಂದರ್ಯಪ್ರಜ್ಞೆಯ ಮುಂದೆ ಹತಬಲವಾಗಿವೆ. 'ಈ ಕೃತಿಗೆ ಪ್ರತಿಯಿ
(೧-೧೩), 'ತೊಡಗಿದೆನೀ ಮಹಾಕೃತಿಯ' (೧-೧೪) ಎಂಬ ಕವಿಯ ಸಾ
ಇದರಲ್ಲಿ ಸತ್ಯವಾಗಿದೆ. 'ಇದಱೊಳಗೊಂದು ಕುಂದಿಲ್ಲ' (೧-೧೩) ಎಂದು ಮಾ
ಹೇಳಬಾರದು. 'ಪರರೊಡವೆಯಂ ಕೊಂಡು ಕೃತಿಯ ಪೇಟದ ಭಾಷೆ' (೧-೧
'ಪೊಸಕಾವ್ಯಕನ್ಯಕೆ' (೧-೩೩) ಈ ಬಗೆಯ ಉಕ್ತಿಗಳಿಂದ ಇದರ ಸ್ವಂತಿಕೆಯೇ

---

1 ಸಿದ್ಧರಾಮಚಾರಿತ್ರ: ೧-೧೪, ೪೮, ೪೯, ೫೦; ೨-೮, ೨೦, ೪೭; ೪-೨
೭-೨೭, ೩೯, ೪೪; ೮-೩೪, ೭೫, ೭೭.

2 ಆರ್. ಸಿ. ಹಿರೇಮಠ: ಮಹಾಕವಿರಾಘವಾಂಕ, ಪು. ೧೦೧, ೧೦೩.

ಹೊಸತನವೆಲ್ಲಿ ಎಂಬ ಪ್ರಶ್ನೆಗಳೇಳುತ್ತವೆ. ಹರಿಶ್ಚಂದ್ರನ ಕಥೆ ವೇದಪುರಾಣಕಾವ್ಯ-ಗಳಲ್ಲಿ ಸುಪ್ರಸಿದ್ಧವಾದುದು. 'ಈ ಕಥಾಬೀಜವೀಬೀಜಮುಂ ಬಿತ್ತಿ ಬೆಳಸಿದಪೆನೀ-ಕಾವ್ಯವೃಕ್ಷವಂ' (೧-೧೮) ಎಂದು ಅವನೇ ಹೇಳಿದಂತೆ ಪೂರ್ವಪರಂಪರೆಯಿಂದ ಕಥಾಬೀಜವನ್ನು ಎತ್ತಿತಂದು ತನ್ನ ಕಾವ್ಯವೃಕ್ಷವನ್ನು ಬೆಳಸಿದ್ದಾನೆ. ಪೂರ್ವಕಥೆಯ ಅಪೂರ್ವನಿರೂಪಣೆಯಲ್ಲಿ 'ಹರಿಶ್ಚಂದ್ರಕಾವ್ಯ'ದ ಹೊಸತನವಿರುತ್ತದೆ. ರಾಘವಾಂಕ-ನಿಗಿಂತ ಹಿಂದಿನ ಎಲ್ಲ ಆಕರಗಳೊಡನೆ ಇದರ ಸಂವಿಧಾನವನ್ನು ಹೋಲಿಸಿದರೆ ಭಾರತೀಯಸಾಹಿತ್ಯದಲ್ಲಿಯೇ ಕಾಣದೊರೆಯದ ನೂತನ ಸಂನಿವೇಶಸೃಷ್ಟಿ, ಕೃತಿಬಂಧ ಇಲ್ಲಿ ಇದೆ ಎಂಬುದು ಹೆಮ್ಮೆಯ ಸಂಗತಿ. ಹರಿಶ್ಚಂದ್ರಕಥೆಯ ಮನವರಿಕೆಗೆ 'ಹರಿಶ್ಚಂದ್ರನನ್ನು ವಿಶ್ವಾಮಿತ್ರನು ಅಷ್ಟುಮಟ್ಟಿಗೆ ಕಾಡಲು ಯಾಕೆ ಮನದಂದನು, ವಿಶ್ವಾಮಿತ್ರನಿಗೆ ಹರಿಶ್ಚಂದ್ರನು ರಾಜ್ಯವನ್ನು ಕೊಡುವ ಪ್ರಸಂಗವೇಕೆ ಬಂದಿತು, ತನ್ನನ್ನೂ ತನ್ನವರನ್ನೂ ಮಾರಿಕೊಂಡನೇಕೆ?'—ಈ ಪ್ರಶ್ನೆಗಳಿಗೆ ಸಮರ್ಪಕವಾದ ಕಲಾಮಯವಾದ ಉತ್ತರವು ದೊರೆಯಬೇಕು. ಹಿಂದಿನಿಂದ ಪಡೆದ ಸಂನಿವೇಶಗಳ ನವೀನ ನಿರೂಪಣೆಯಿಂದಾಗಲಿ ನವೀನ ಸಂನಿವೇಶಗಳ ನಿರ್ಮಾಣದಿಂದಾಗಲಿ ರಾಘವಾಂಕನು ಇದಕ್ಕೆ ಉತ್ತರ ಕೊಟ್ಟಿದ್ದಾನೆ, ಕಲಾತಿಶಯವನ್ನು ಮೆರೆದಿದ್ದಾನೆ. ಮೊದಲನೆಯದಕ್ಕೆ ವಸಿಷ್ಠ–ವಿಶ್ವಾಮಿತ್ರರ ಸಂದರ್ಭ, ಎರಡನೆಯದಕ್ಕೆ ಹರಿಶ್ಚಂದ್ರ–ಹೊಲತಿಯರ ಸಂದರ್ಭ ಉತ್ತಮ ಉದಾಹರಣೆಯಾಗಿವೆ. ಎಲ್ಲ ಕಡೆಗೆ ಅವನ ನಾಟ್ಯಪ್ರತಿಭೆ ಅದ್ಭುತರಮ್ಯವಾಗಿ ಬೆಳಗಿದೆ. 'ಹರಿಶ್ಚಂದ್ರಕಾವ್ಯ' ಮೂಲಸತ್ವದಲ್ಲಿ ಒಂದು ಅತ್ಯಂತ ಪ್ರಭಾವಿಯಾದ ನಾಟಕವಾಗಿದೆ ಎಂಬುದು ತೀರ ದಿಟ. ರುದ್ರ-ನಾಟಕವೆಂದು ಅದನ್ನು ಕೆಲವರು ಕರೆಯಬಹುದು. ಒಟ್ಟುರೂಪದಲ್ಲಿ ನೋಡಿದರೆ ಅದು ರುದ್ರ ಅಂಶಗಳುಳ್ಳ ಭದ್ರನಾಟಕವೇ ಸರಿ. ವಸ್ತುರಚನೆ, ಪಾತ್ರಪೋಷಣೆ, ರಸನಿರೂಪಣೆ, ಸಂವಾದರಚನೆ, ವರ್ಣನೆ ಯಾವ ಮುಗ್ಗುಲಿನಿಂದ ನೋಡಿದರೂ ಈ ಕೃತಿ ಘನತೆಯನ್ನು ಹೊರಹೊಮ್ಮಿಸುತ್ತದೆ. ಇದೇ 'ಕಡೆತನಕ ಬಂದ ಲೇಸು'. ಎಡೆವಾಯ್ದು ಬಂದ ತಪ್ಪುಗಳೂ ಇವೆ. ಖಲನಾಯಕನಂತಿದ್ದ ವಿಶ್ವಾಮಿತ್ರನು ಕೊನೆಗೆ ಪರಿವರ್ತನಹೊಂದಿದ್ದು ಆಕಸ್ಮಿಕವಾಗಿದೆ. ಮೊದಲಿನಿಂದ 'ಕಡಮುಳಿದರಂತೆ ತೋರಿಸಿ' ಅವನು ಕಾಡಿದ್ದು ನಿಜವಾದರೆ ಅವನ ದ್ವೇಷರೋಷಗಳೆಲ್ಲ ಆಭಾಸ-ವಾಗುತ್ತವೆ. ಹರಿಶ್ಚಂದ್ರನ ಉದಾತ್ತ ಸತ್ಯಸಂಧಪಾತ್ರದಲ್ಲಿ ಹೊಂದಿಕೊಳ್ಳದ ಹಳೆಯ ಪದರುಗಳೂ ರೀತಿನಡತೆಗಳೂ ತಲೆದೋರಿವೆ. ಪ್ರಜೆಗಳ ಪೀಡೆಯನ್ನು ಪರಿಹರಿಸಲು ಬೇಟೆಗೆ ಹೊರಡುವ ಮುನ್ನಾದಿನ ರಾತ್ರಿ ಅವನು ಸೂಳೆಗೇರಿಯಲ್ಲಿ ಸಂಚರಿಸುತ್ತಾನೆ. ೭೮ ಪದ್ಯಗಳ ಒಂದು ಸ್ಥಲವೇ ಇದಕ್ಕೆ ಮೀಸಲಾಗಿದೆ. ಇಂಥ ಸಂಪ್ರದಾಯಶರಣ ವರ್ಣನೆಗಳಿಂದ ಕಾವ್ಯವು ಅಲ್ಲಲ್ಲಿ 'ಜಾಬಾಳ'ವಾಗಿದೆ, ಪಾತ್ರ ಬಾಧಿತವಾಗಿದೆ. ಶೈಲಿಯೂ ಪ್ರಾಸಮೋಹ, ಶಬ್ದಜಾಲದಲ್ಲಿ ಆಗಾಗ ಸಿಲುಕಿ-ಕೊಂಡಿದೆ. ಒಟ್ಟಿನಲ್ಲಿ 'ಹರಿಶ್ಚಂದ್ರಕಾವ್ಯ' ರಾಘವಾಂಕನ ಮಹಾಕೃತಿ, ಅವನ

ಧಾರ್ಮಿಕತೆಯನ್ನು ಮೀರಿಬಂದ ಅಲೌಕಿಕವಾದ ಲೌಕಿಕಕಾವ್ಯ, ಕನ್ನಡಕ್ಕೆ ಹಾ
ಭಾರತೀಯವಾಙ್ಮಯಕ್ಕೆ ಅವನ ವಿರಳವಾದ ಕೊಡಿಗೆ. ತನ್ನುಳಿದ ಕೃತಿಗಳಲ್ಲಿ ಅಂ
ರೂಪವಾಗಿ ಪ್ರಕಟಿಸಿದ ಮಹಾಕವಿತ್ವವನ್ನು ಈ ಮಹಾಕೃತಿಯಲ್ಲಿ ರಾಘವಾಂಕ
ಬಹುಮಟ್ಟಿಗೆ ಸಮಗ್ರವಾಗಿ ತೋರ್ಪಡಿಸಿದ್ದಾನೆ. ಹರಿಹರನಿಗಿಂತ ಒಂದು ತೂ
ಮಿಗಿಲಾಗಿಯೇ ಇಲ್ಲಿ ಅವನ ಸಿದ್ಧಿಯಿದೆ. ಯಾಕೆಂದರೆ ಹರಿಹರನ ಮಹೋತ್ಸಾಹ
ಇಲ್ಲಿ ನಿಯಂತ್ರಣವುಂಟಾಗಿದ್ದು ಕಲಾವಂತಿಕೆ, ನಾಟಕೀಯತೆಗಳು ಸೇರಿಕೊಂಡಿ
ಶಿಷ್ಯನಿಂದ ಗುರುವಿಗೆ ಪರಾಜಯವಾಗಿದೆ ನಿಜ. ಆದರೂ ಹರಿಹರನ ಎಂಥ ಕೃ
ಯಲ್ಲಿಯೂ ಸೂಸುವ ಪ್ರತಿಭೆಯ ಪರಮಾಶ್ಚರ್ಯ, ಸಹಜವಾಣಿಯ ಓಘ ಇ
ರಾಘವಾಂಕನಲ್ಲಿಲ್ಲ. ಹೀಗೆ ನೋಡಿದರೆ ರಾಘವಾಂಕನಿಗಿಂತ ಹರಿಹರನು ಮೇಲಾ
ಮಹಾಕವಿ, ಮಹಾಕವಿಯ ಗುರು.

ರಾಘವಾಂಕನ ಶೈಲಿಯ ಮೇಲೆ ಮಾರ್ಗಕಾವ್ಯದ ಮತ್ತು ಹರಿಹರಮಾರ್ಗ
ಪರಿಣಾಮಗಳಾಗಿದ್ದರೂ ಅದು ಶಯ್ಯೆ, ಪಾಕಗಳಲ್ಲಿ ವಿಶಿಷ್ಟಕಾಂತಿಯುಳ್ಳದಾಗಿ
ಮಾರ್ಗಕಾವ್ಯದ ಅಲಂಕಾರಮೋಹ, ಸಂಸ್ಕೃತವ್ಯಾಮೋಹಗಳು ಒಮ್ಮೊಮ್ಮೆ
ಹರಿಹರನ ಉದ್ಗಾರ-ಪುನರುಕ್ತಿಗಳು ಒಮ್ಮೊಮ್ಮೆ ಈ ಶೈಲಿಯಲ್ಲಿ ಹಣಿಯಿಕ್ಕಿದ
ಪ್ರಸನ್ನ, ಪ್ರವಾಹಿ, ಸಂಯತವಾದ ಸ್ವರೂಪವೇ ಇದರ ಮೂಲರೂಪ. ಇದ
ನಾಟಕೀಯಸಂವಾದ, ಅಭಿನೇಯ ಪದವಿನ್ಯಾಸ, ರಂಗಸೂಚನೆಯಂಥ ಚಿತ್ರ
ನಿರ್ಮಾಣ ಇವುಗಳಿಂದ ನಾಟ್ಯಗುಣವು ಸಂಪನ್ನವಾಗಿ ಪ್ರಕಟವಾಗಿದೆ. ಹರಿಹ
ಗದ್ಯಶೈಲಿಯನ್ನು ಆಗಾಗ ರಾಘವಾಂಕನು ಪದ್ಯದಲ್ಲಿ ಅಳವಡಿಸಿರುವನೇ ಹೊರ
ಗದ್ಯವನ್ನೆಲ್ಲಿಯೂ ಬರೆದಿಲ್ಲ. ಪದ್ಯಪ್ರವಣವಾದ ಪ್ರಕೃತಿಯವನದು. ತಾಳ-ಲ
ನಾದ ಗುಣ ಇವುಗಳಲ್ಲಿ ಅವನ ಶೈಲಿ ಪರಿಣತವಾಗಿದೆ. ನಡುಗನ್ನಡದ ಸಂಮಿಶ್ರ
ರೂಪಗಳಿಗೂ ಅದು ಎಡೆಕೊಟ್ಟಿದೆ. ಅಚ್ಚಗನ್ನಡದತ್ತ ಅವನ ಒಲವು ಹೆಚ್ಚು. 'ಪ
ಜೋಡಣೆಯು ದೈವೀಪ್ರೇರಿತವಿನ್ಯಾಸವನ್ನಾಗಲಿ ಅಸಾಧ್ಯ ಸಂಗೀತವೈಭವವನ್ನಾಗ
ಪ್ರಕಟಿಸದಿದ್ದರೂ ಕಲಾಯುಕ್ತವಾಗಿ ಪರಿಣಾಮರಮಣೀಯವಾಗಿದೆ....ಚಂಪೂಕವಿಗ
ಬಿಕ್ಕಟ್ಟಿಗೂ ಷಟ್ಪದಿಕಾರರ ಸಡಿಲಕ್ಕೂ ನಡುವಣ ವಾಗ್ಝರಿ ರಾಘವಾಂಕನ
ಇಷ್ಟ....ಒಟ್ಟಿನಲ್ಲಿ, ರಾಘವಾಂಕನ ಶೈಲಿ ಐವತ್ತಕ್ಕೆ ಏಳದೆ ಐದಕ್ಕೆ ಇಳಿಯದೆ ತನ್ನ
ಆದ ಒಂದು ಸತ್ವಪ್ರಮುಖವಾಗಿರುವುದರಿಂದ ಆನಂದದಾಯಕ, ಸರ್ವಜನಾದ
ಣೀಯ, ಸಾರ್ಥಕ'[1] ಎಂದು ಶ್ರೀ. ಎಸ್. ವಿ. ರಂಗಣ್ಣನವರು ಅಭಿಪ್ರಾಯಪಟ್ಟಿ
ದ್ದಾರೆ. ಮಹಾಶೈಲಿಯ ಲಕ್ಷಣಗಳೆನಿಸಿದ ಧ್ವನಿ, ದೈವೀಪ್ರೇರಣೆಯ ಪದಪ್ರಯೋ
ತೇಜಸ್ಸಿನ ವೈಖರಿ ಇವೆಲ್ಲ ರಾಘವಾಂಕನ ಶೈಲಿಯಲ್ಲಿ ತುಂಬಿ ತುಳುಕುತ್ತಿರುವವೆಂದ
ಅವನದು ಪ್ರಥಮಶ್ರೇಣಿಯ ಮೇಲ್ತರಗತಿಯ ಶೈಲಿಯೆಂದೂ ಶ್ರೀ. ಆರ್.

---

1 ಎಸ್. ವಿ. ರಂಗಣ್ಣ : ಶೈಲಿ, ಪು. ೧೧೭, ೧೧೯.

ಹಿರೇಮಠರು ತಮ್ಮ ಮತವನ್ನು ವ್ಯಕ್ತಪಡಿಸಿದ್ದಾರೆ.[1] ನಮಗೆ ತೋರಿದ ಮಟ್ಟಿಗೆ, ರಾಘವಾಂಕನ ಶೈಲಿ ಕಥನಕವಿಯ, ನಾಟಕಕಾರನ ಶ್ರೇಷ್ಠಗುಣಗಳನ್ನು ಮಾಗಿದ ಕೃತಿ ಇಲ್ಲವೆ ಕೃತಿಭಾಗಗಳಲ್ಲಿ ತೋರಿದೆ. 'ಹರಿಶ್ಚಂದ್ರಕಾವ್ಯ'ದ ಬಹುಭಾಗವು ಇದಕ್ಕೆ ನಿದರ್ಶನ. ಮೊದಲಿನ ಅಭಿಪ್ರಾಯವು ರಾಘವಾಂಕನ ಇತರ ಕೃತಿಗಳಿಗೆ ಕೆಲಮಟ್ಟಿಗೆ ಅನ್ವಯಿಸಬಹುದಾದರೆ 'ಹರಿಶ್ಚಂದ್ರಕಾವ್ಯ'ಕ್ಕೆ ಎರಡನೆಯ ಅಭಿಪ್ರಾಯವು ಅನ್ವಯಿಸುತ್ತದೆ. ಮಧ್ಯಶೈಲಿಯ ಉಪಾಸಕ, ಮಧ್ಯಮತರಗತಿಯ ಶೈಲಿಕಾರ ಇದರಲ್ಲಿ ಭೇದಮಾಡಿದರೆ ಒಳ್ಳೆಯದು.

ರಾಘವಾಂಕನು ಷಟ್ಪದಿಗ್ರಂಥಕಾರರರಲ್ಲಿ ಮೊದಲಿಗನೆಂಬುದನ್ನು ವಿಮರ್ಶಕರು ಹೇಳಿದ್ದಾರೆ. ಅವನಿಗಿಂತ ಮುಂಚೆ ಷಟ್ಪದಿಯ (ವಿಶೇಷವಾಗಿ ಶರಷಟ್ಪದಿ) ಬಿಡಿಪದ್ಯಗಳು ಕಾವ್ಯ, ಶಾಸ್ತ್ರಗ್ರಂಥಗಳಲ್ಲಿ ಪ್ರಯೋಗವಾಗಿದ್ದುವು. ಸು. ೧೧೬೦ರವನೆಂದು ಕವಿಚರಿತಕಾರರು ಹೇಳಿರುವ ಚಿಕ್ಕಯ್ಯ ಎಂಬ ವಚನಕಾರನು ಉಳಿಯುಮೇಶ್ವರಲಿಂಗವೆಂಬ ಅಂಕಿತದಲ್ಲಿ ಬರೆದ ಒಂದು ವಾರ್ಧಕಷಟ್ಪದಿ ದೊರೆತಿದೆ.[2] ಸದ್ಯಕ್ಕೆ ವಾರ್ಧಕಷಟ್ಪದಿಯಲ್ಲಿ ರಾಘವಾಂಕನೇ ಮೊದಲ ಗ್ರಂಥಕಾರನೆನ್ನಬಹುದು. ಇವನ ಕಾಲದಲ್ಲಿಯೇ ಷಟ್ಪದಿಗ್ರಂಥಗಳ ರಚನೆ ಬೇರೆಯವರಿಂದಲೂ ಆಗಿರಬೇಕೆಂಬುದಕ್ಕೆ ೧೨೨೪ರಲ್ಲಿ ಹುಟ್ಟಿದ ದಾವಣಗೆರೆಯ ಶಾಸನದಲ್ಲಿ 'ಆರ್ ಹರಿ (ರ?) ಚಾರಿತ್ರಮನೊಲ್ದು **ಷಟ್ಪದದೆ** ಪೇಳ್ದಿರ್ ನಿನ್ನವೋಲ್' ಎಂಬ ವಾಕ್ಯವಿದೆ. ಪೋಲಾಳ್ವ ದಂಡನಾಥನು ಷಟ್ಪದಿಯಲ್ಲಿ ಹರಿಚಾರಿತ್ರವನ್ನು ಬರೆದ ವಿಷಯ ೧೨೨೪ರಲ್ಲಿ ಪ್ರಸಿದ್ಧವಾಗಿರಬೇಕಾದರೆ ಹತ್ತಿಪ್ಪತ್ತು ವರ್ಷಗಳ ಹಿಂದಿನಿಂದಲೆ ಅದು ರಚಿತವಾಗಿರಬಹುದು, ಅವನಿಗೂ ಹಿಂದೆ ಒಂದು ಪರಂಪರೆ ಇದ್ದಿರಬಹುದು. ೧೧–೧೨ನೆಯ ಶತಕಗಳಲ್ಲಿ ಜೈನ–ವೀರಶೈವರಲ್ಲಿ ಪ್ರಾರಂಭವಾದ ಜನಸಂಮುಖ ಸಾಹಿತ್ಯವು ಹೊಸ ಹೊಸ ಪ್ರಯೋಗಗಳಿಗೆ ಅನುವುಮಾಡಿತು. ಅದರ ಫಲವೇ ರಗಳೆ, ತ್ರಿಪದಿ, ಷಟ್ಪದಿಗಳಲ್ಲಿ ಸಮಗ್ರಗ್ರಂಥಗಳ ಉದಯ. ರಾಘವಾಂಕನು ತನ್ನ ಮೂರು ಗ್ರಂಥಗಳಲ್ಲಿ ವಾರ್ಧಕವನ್ನೂ ಒಂದರಲ್ಲಿ ಉದ್ದಂಡವನ್ನೂ ಬಳಸಿದ್ದಾನೆ. ನಾಲ್ಕರಲ್ಲಿಯೂ ದೀರ್ಘಷಟ್ಪದಿಗೆ ಅವನ ಮನಸೋತಿದೆ. ರಗಳೆ ಹರಿಹರನ ಕವಿಪ್ರಕೃತಿಗೆ ಸರಿಹೋಗುವ ಛಂದಸ್ಸಾದಂತೆ ಷಟ್ಪದಿ ರಾಘವಾಂಕನ ಕಾವ್ಯವೃತ್ತಿಗೆ ಹೊಂದಿಕೊಳ್ಳುವ ವಾಹಕವಾಯಿತು. ವಿಸ್ತಾರವಾದ ಸಾವಧಾನವಾದ ಕಥನ, ಎಕ್ಕೆಕ್ಕೆಯಾಗಿ ಬರುವ ಕಲ್ಪನೆ, ತರತರದಿಂದ ಬಣ್ಣಿಸುವ ಮಾತಿನ ಜಾಣತನ, ನಾಟಕಯೋಗ್ಯವಾದ ಸಂಭಾಷಣ ಇವುಗಳ ಅಭಿವ್ಯಕ್ತಿಗೆ ವಾರ್ಧಕಷಟ್ಪದಿ ರಾಘವಾಂಕನಿಗೆ ಉತ್ತಮಸಾಧನವಾಗಿ ಪರಿಣಮಿಸಿತು.

---

1 ಆರ್. ಸಿ. ಹಿರೇಮಠ: ಮಹಾಕವಿರಾಘವಾಂಕ, ಪು. ೨೪೬.

2 ಕವಿಚರಿತೆ, ಸಂ. ೪, ಪು. ೪೪೯.

ಮುಂದಿನ ಕವಿಗಳನೇಕರು ಇದನ್ನರಿತು ರಾಘವಾಂಕನ ಮಾರ್ಗದಲ್ಲಿ ಅಡಿಯಿಟ್ಟರು
ರಗಳೆಯ ರಭಸವು ಹರಿಹರನ ಹೊರತಾಗಿ ಇತರರಿಗೆ ಹೆಚ್ಚಾಗಿ ಸಾಧಿಸಲಿಲ್ಲ
ವೀರೇಶಚರಿತೆಯ 'ಉದ್ದಂಡಷಟ್ಪದಿ' ನಾಲ್ಕು ಮಾತ್ರೆಯ ಗುಣಗಳ ಮೂಲ
ರೌದ್ರಚಿತ್ರಣಕ್ಕೆ ವಾರ್ಧಕಕ್ಕಿಂತ ಯೋಗ್ಯವಾದ ಛಂದಸ್ಸಾಯಿತು. ಆದರೆ ಪ್ರತಿ
ಚರಣದಲ್ಲಿ ವಿಷಮಗುಣಗಳು ಬಂದಿರುವ ಮೂಲಕ ತಾಳದ ಗಣನೆಗೆ ಇದು ಒಡಂ
ಬಡದೆಂದೂ ಆದ್ದರಿಂದ ಇದು ಶುದ್ಧಷಟ್ಪದಿಯಲ್ಲವೆಂದೂ ಶ್ರೀ. ಗೋವಿಂದ ಪೈಗಳ
ಅಭಿಪ್ರಾಯಿಸಿದ್ದಾರೆ.[1] ಇದು ವಿಚಾರಣೀಯ ವಿಷಯವಾದರೂ ನವೀನಪ್ರಯೋಗ
ವೆಂಬ ದೃಷ್ಟಿಯಿಂದ ಇದನ್ನು ಮೆಚ್ಚಬೇಕು, ವಿಶೇಷವಾಗಿ ಭಾವರಸ-ಛಂದಃಶೈಲಿಗ
ಸಮರಸದ ಸಾಧನೆಯನ್ನು ಕೊಂಡಾಡಬೇಕು. ರಾಘವಾಂಕನು ಯಶಸ್ವಿಯಾ
ಪ್ರಯೋಗಕಾರ, ಧೈರ್ಯಶಾಲಿಯೆಂಬುದನ್ನು ಅವನ ಛಂದಸ್ಸಿನ ಅಭ್ಯಾಸದಿಂ
ಮನಗಾಣಬಹುದು. ಪ್ರೌಢಕಾವ್ಯದಲ್ಲಿ ಪಂಡಿತನಾಗಿ ಅದರ ಸಂಸ್ಕಾರಗಳನ್
ಅಳವಡಿಸಿಕೊಂಡವನಾದರೂ ಶಿವಶರಣರ, ವಿಶೇಷವಾಗಿ ಹರಿಹರನ ಪ್ರಭಾವಕ್ಕೆ
ಒಳಗಾದವನಾಗಿಯೂ ಅವನು ತನ್ನವೇ ಆದ ಕೃತಿಗಳನ್ನು ರಚಿಸಿದನು. ಕ್ರಾಂತಿ
ಕಾರಕ, ಕ್ರಾಂತಿಪ್ರಮುಖ ಎನ್ನುವುದಕ್ಕಿಂತ ಅವನನ್ನು ಕ್ರಾಂತದೃಷ್ಟಿಯುಳ್ಳ ಶಿ
ಎನ್ನುವುದು ಹೆಚ್ಚು ವಿಹಿತ. ಪ್ರಭಾವಹೊಂದಿಯೂ ಸ್ವಪ್ರತಾಪವನ್ನು ಮೆರೆದ
ಗುರುಭಕ್ತಿಯಲ್ಲಿ ವ್ಯಕ್ತಿತ್ವವನ್ನು ಕಳೆದುಕೊಳ್ಳದ, ಉತ್ತಮ ಶಿಷ್ಯ, ಹಿರಿಯ ಕ
ಅವನು.

ಬಸವಣ್ಣನವರ ತರುವಾಯದ ಪೀಳಿಗೆಯ ಪಂಡಿತತ್ರಯದಲ್ಲಿ ರಾಘವಾಂಕ
ಹರಿಹರರ ಜೊತೆಗೆ ಕೆರೆಯ ಪದ್ಮರಸನೂ ಬರುತ್ತಾನೆ. ಇವನ ಚರಿತ್ರೆ ಪದ್ಮಣಾಂ
(ಸು. ೧೩೮೫) ಬರೆದ 'ಪದ್ಮರಾಜಪುರಾಣ'ದಿಂದ ತಿಳಿದಿದೆ. ಇವನು ಸಕಲೇಶ
ಮಾದರಸನ ಮೊಮ್ಮಗನೆಂದೂ ಹೊಯ್ಸಳನರಸಿಂಹಬಲ್ಲಾಳನಲ್ಲಿ ದಂಡೇಶನ
ಮಂತ್ರಿಯೂ ಆಗಿದ್ದನೆಂದು ತಿಳಿಯುತ್ತದೆ. ಬೇಲೂರಲ್ಲಿ ಒಂದು ಕೆರೆಯನ
ಕಟ್ಟಿಸಿದ್ದರಿಂದ ಇವನು ಕೆರೆಯ ಪದ್ಮರಸನಾದನು. ಸಂಸ್ಕೃತದಲ್ಲಿ 'ಸಾನಂದ
ಚರಿತ್ರೆ'ಯನ್ನು ರಚಿಸಿ ತ್ರಿಭುವನತಾತನನ್ನು ವಾದದಲ್ಲಿ ಜಯಿಸಿದನು. ಕನ್ನಡದ
'ದೀಕ್ಷಾಬೋಧೆ' ಎಂಬ ಇವನ ಗ್ರಂಥವು ಪ್ರಾಯಶಃ ರಗಳೆಯ ರೂಪದಲ್ಲಿದ
೩ ಸ್ಥಲ, ೩೮೫ ಪದ್ಯಗಳುಳ್ಳದಾಗಿದೆ. 'ಇದರಲ್ಲಿ ವೀರಶೈವದೀಕ್ಷೆಯನ್ನು ಕೈಕೊಳ್ಳು
ವುದಕ್ಕೆ ಬೇಕಾದ ವಿಷಯಗಳು ಗುರುಶಿಷ್ಯಸಂವಾದರೂಪವಾಗಿ ವಿವರಿಸಲ್ಪಟ್ಟಿವೆ'
ಹರಿಹರನು ಬಹುವಾಗಿ ಬಳಸಿದ ಲಲಿತರಗಳೆಯನ್ನು ಪದ್ಮರಸನು ಕಥನದ ಬದಲ
ತತ್ವನಿರೂಪಣೆಗೆ ಬಳಸಿದ್ದಾನೆ. ಬರೆವಣಿಗೆಯಲ್ಲಿ ಪ್ರಸಾದವಿದೆ, ಪ್ರವಾಹವಿದೆ

1 ಗೋವಿಂದ ಪೈ : ಮುಂಬಯಿ ಸಾಹಿತ್ಯಸಮ್ಮೇಲನದ (೧೯೫೦) ಅಧ್ಯಕ್ಷಭಾಷಣ, ಪು. ೮,

2 ಕವಿಚರಿತೆ, ಸಂ. ೧, ಪು. ೨೪೭.

ಹೆಚ್ಚಿನ ಕವಿತಾಶಕ್ತಿಗೆ ನಿದರ್ಶನವಿಲ್ಲ. ಕೇವಲ ತಾತ್ವಿಕಗ್ರಂಥದಿಂದ ಅದನ್ನು ಬಯಸುವಂತಿಲ್ಲ. ಭಕ್ತಿಯ ಆರ್ತತೆ, ಆವೇಶಗಳನ್ನು ವರ್ಣಿಸುವಲ್ಲಿ, ಪರತತ್ವ-ಸ್ವರೂಪ ಹೇಳುವಲ್ಲಿ ಸಹಜಕವಿತೆ ಹೊಮ್ಮಿದೆ. ಪದ್ಮರಸನು ಪಡೆದ ಅನುಭಾವವನ್ನು ಕೆಳಗಿನ ಸಾಲುಗಳು ಸಾರುತ್ತವೆ: 'ಸರ್ವಾಂಗದೊಳು ಸರ್ವಮಯನಾದೆ ಸದ್ಗುರುವೆ। ಸರ್ವಚೇತನಕೆ ಚೇತನವಾದೆ ಸದ್ಗುರುವೆ। ಇನ್ನಂಜೆನಂಜೆ ಗೆದ್ದೆಂಗೆದ್ದೆ ಶ್ರೀಗುರುವೆ' ಇಂತು ಅನುಭಾವಿ-ತಾತ್ವಿಕ ಕವಿಗಳಲ್ಲಿ ಅವನಿಗೆ ಮೇಲಾದ ಸ್ಥಾನವಿದೆ.

೧೮. ನೇಮಿ-ರುದ್ರರು ಮತ್ತು ಇತರರು

ನೇಮಿಚಂದ್ರ

ವೀರಶೈವ ಸಾಹಿತ್ಯದ ಹೊಸ ಪ್ರವಾಹವು ಮೊದಲಿನ ಮಾರ್ಗಕಾವ್ಯದ ಪ್ರವಾಹವನ್ನು ತಡೆಯಲಿಲ್ಲ, ಒಡಗೂಡಿ ಮುಂದರಿಯಿತು ಎಂಬುದಕ್ಕೆ ಈ ಯುಗದ ಅನೇಕ ಕವಿಗಳು ಸಾಕ್ಷಿಯಾಗಿದ್ದಾರೆ. ಅವರಲ್ಲಿ ಹರಿಹರ-ರಾಘವಾಂಕರಿಗೆ ಸುಮಾರು ಸಮಕಾಲೀನರಾದ ನೇಮಿಚಂದ್ರ-ರುದ್ರಭಟ್ಟರು ಇವರಿಬ್ಬರು ಪ್ರಖ್ಯಾತರು. ಈ ನಾಲ್ವರ ಕಾಲ ೧೨ನೆಯ ಶ.ದ ಕೊನೆ, ೧೩ನೆಯ ಶ.ದ ಮೊದಲು ಎಂಬುದು ನಿಶ್ಚಿತ. ಆದರೆ ನೇಮಿ-ರುದ್ರರ ಗ್ರಂಥಗಳು ಹರಿಹರ-ರಾಘವಾಂಕರ ಕೆಲವು ಗ್ರಂಥಗಳಿಗಿಂತ ಸ್ವಲ್ಪ ಮುಂಚೆ ರಚಿತವಾಗಿರಬಹುದು ಎಂದು ತಿಳಿಯಲು ಆಸ್ಪದವಿದೆ. ಖಚಿತವಾಗಿ ಹೇಳಲು ಆಧಾರಗಳಿಲ್ಲ. ನೇಮಿಚಂದ್ರ 'ಸಾರಸ್ವತಪಾರ'ನಾದ ಮಹಾಪಂಡಿತ, ಶೃಂಗಾರಪ್ರಿಯ. ತನ್ನ 'ಲೀಲಾವತಿಪ್ರಬಂಧ'ವನ್ನು ರಟ್ಟರಾಜ ಲಕ್ಷ್ಮಣದೇವನ ಆಶ್ರಯದಲ್ಲಿ, 'ನೇಮಿನಾಥಪುರಾಣ'ವನ್ನು ಹೊಯ್ಸಳ ವೀರಬಲ್ಲಾಳನ ಮಹಾ-ಪ್ರಧಾನ ಪದ್ಮನಾಭನ ಪ್ರೇರಣೆಯಿಂದ ಅವನು ಬರೆದನು. 'ಲೀಲಾವತಿ'ಯೆ ಅವನ ಪ್ರಥಮ ಕೃತಿಯಾಗಿರಬೇಕು. ಇದು ೧೪ ಆಶ್ವಾಸಗಳಲ್ಲಿ ಶೃಂಗಾರರಸವೊಂದನ್ನೇ ನಿರೂಪಿಸಿದ ಚಂಪೂಕಾವ್ಯ. 'ಶೃಂಗಾರಮಂ ಕಾವ್ಯಬಂಧನದೊಳ್ ತಾಂ ಸೆಱೆಗೆಯ್ದ ಮೆಯ್ಮೆಯೊಳಿವಂ **ಶೃಂಗಾರಕಾರಾಗೃಹಂ**' (೧-೮೧) ಎಂದು ಕವಿ ತನ್ನ ಬಣ್ಣಿಸಿ-ಕೊಂಡಿದ್ದಾನೆ. ಕನಸಿನಲ್ಲಿ ಬೇರೆಬೇರೆಯಾಗಿ ಒಬ್ಬೊಬ್ಬರನ್ನು ಕಂಡು ಒಲಿದ ನಲ್ಲನಲ್ಲೆಯರು ಕೂಡಿ ಅಗಲಿ ಮತ್ತೆ ಕೂಡಿದುದೇ 'ಲೀಲಾವತಿ'ಯ ಪ್ರಣಯ-ರಮ್ಯಕಥೆ. ಭಾರತೀಯ ಕಥಾಪರಂಪರೆಯಲ್ಲಿದ್ದ ಈ ಕಥಾರೀತಿ ಸುಬಂಧುವಿನ 'ವಾಸವದತ್ತೆ'ಯೆಂಬ ಸಂಸ್ಕೃತ ಗದ್ಯಕಾವ್ಯವಾಯಿತು, ಅದರಿಂದಲೇ ಸ್ಫೂರ್ತಿಗೊಂಡು ಇಲ್ಲಿ ಚಂಪೂಕಾವ್ಯವಾಗಿದೆ. ಕಥೆಯನ್ನು ನಿಮಿತ್ತಮಾಡಿ ವರ್ಣನೆಯ ಪ್ರಸ್ಥ-ಬೆಳೆಸುವ ವೈಖರಿ ಸಂಸ್ಕೃತಕವಿಗಳಿಂದ, ವಿಶೇಷವಾಗಿ ಬಾಣ-ಸುಬಂಧುಗಳಿಂದ,

ಕನ್ನಡಕವಿಗಳಿಗೆ ಬಂದುದು. ಬಹುಶಃ ಅದರ ಅತಿರೇಕ ಸುಬಂಧುವಿನ ಮೂಲ
ನೇಮಿಚಂದ್ರನಲ್ಲಿ ವ್ಯಕ್ತವಾಗಿದೆ. ವರ್ಣನೆಗಳಲ್ಲಿಯ ಶ್ಲೇಷೋಪಮೆ, ವಿರೋಧಾಭಾಸ
ಶಬ್ದಚ್ಛಲ ಮುಂತಾದ ಬಗೆ, ಕಲ್ಪನೆಗಳ ಕೆಲಮಟ್ಟಿನ ಸಾಮ್ಯ ಇವನ್ನು ಕಣ್ಣಿಟ
ನೋಡಿದರೆ ನೇಮಿಗೆ ಸುಬಂಧುವೇ ಪ್ರೇರಕನೆಂಬುದು ಸ್ಪಷ್ಟವಾಗುತ್ತದೆ. ಹೆಸರುಗ
ನಸುಮಾರ್ಪನ್ನು ಬಿಟ್ಟರೆ ಪೂರ್ವಾರ್ಧದಲ್ಲಿ ಕಥೆಯೆಲ್ಲ ಅದೇ. ಉತ್ತರಾರ್ಧದ
ವ್ಯತ್ಯಾಸಗಳಾಗಿವೆ. ಮುಖ್ಯವಾಗಿ ಸುಬಂಧುವಿನ ವಾಸವದತ್ತೆ ಶಿಲಾಪ್ರತಿಮೆಯಾ
ಕಂದರ್ಪಕೇತುವಿನ ಸ್ಪರ್ಶದಿಂದ ಆಮೇಲೆ ಜೀವಿಸುತ್ತಾಳೆ, ನೇಮಿಯ ಲೀಲಾವ
ಬಳ್ಳಿಯಾಗಿ ಕಂದರ್ಪದೇವನ ಅಪ್ಪುಗೆಯಿಂದ ಮೊದಲಿನಂತಾಗುತ್ತಾಳೆ. 'ಲೀಲಾವತಿ
ಪ್ರಬಂಧ'ದ ಕಥಾವಸ್ತುವಿನ ಮೇಲೆ ಬಾಣಾಸುರಾಖ್ಯಾನ, ಸ್ವಪ್ನವಾಸವದತ್ತ
ಬಾಣಕಾದಂಬರಿ, ವಿಕ್ರಮೋರ್ವಶೀಯ ಇವುಗಳ ಪರಿಣಾಮವಾಗಿದೆಯೆಂದ
ಶ್ರೀ. ಕುಂದಣಗಾರರು ಅಭಿಪ್ರಾಯಪಟ್ಟಿದ್ದಾರೆ.[1] ಇದು ನಿಜವಾಗಿರಬಹುದು. ಆದ
ಈ ಆಕರಗಳಿಗೂ ಮೂಲವಾಗಿ ಭಾರತೀಯ ಕಥನಸಾಮಗ್ರಿಯಿತ್ತೆಂಬುದನ್ನು
ನೆನೆಯಬೇಕು. ನೇಮಿಚಂದ್ರನು ತನ್ನ ಕಥೆಗೆ ಸಾಧ್ಯವಾದಲ್ಲಿ ಜೈನವಲನವನ್ನು
ಕೊಡುವ ಪ್ರಯತ್ನ ಮಾಡಿದ್ದಾನೆ, ಒಂದೆರಡು ನವೀನ ಕಥಾಂಶಗಳನ್ನು
ಸೇರಿಸಿದ್ದಾನೆ. ಉದಾಹರಣೆಗೆ, ಲೀಲಾವತಿಯ ಕನಸುಗಂಡು ಎಚ್ಚತ್ತ ಕಂದರ್ಪ
ದೇವನು ಜಿನಾಲಯಕ್ಕೆ ಹೋಗಿ ಕೈಮುಗಿದು ಜಿನಸ್ತುತಿ ಮಾಡುತ್ತಾನೆ (೩/೮೬–೯೩)
ಕಥಾವಸ್ತು ಎಂಬುದಕ್ಕೆ ಈ ಕೃತಿಯಲ್ಲಿ ಮಹತ್ವ ಕಡಿಮೆ. ಕಥೆಯ ತೆಳುಹಂದರವನ್ನು
ಬಾಗಿಸುವಷ್ಟು ಜೋಲುಬಿದ್ದ ವರ್ಣನೆಗಳೇ ಮುಖ್ಯ ವಸ್ತುವಾಗಿವೆ. ಸಾಂಪ್ರ
ದಾಯಿಕವಾಗಿ ಸಮುದ್ರವರ್ಣನೆಯಿಂದ ಮೊದಲಾಗದಿದ್ದರೂ ಉಳಿದೆಲ್ಲ ವರ್ಣನೆಗಳ
ಬಂದಿದ್ದು ಒಮ್ಮೊಮ್ಮೆ ಒಂದೊಂದು ಆಶ್ವಾಸವನ್ನು ಆಕ್ರಮಿಸುವಷ್ಟು ನಿಡಿದಾಗಿವೆ
ಸ್ಥಾಯಿಯಾದ ರತಿಗೆ ಪೋಷಕವಾಗಿ ಕೆಲವಿದ್ದರೆ ಕೆಲವು ವಿಸಂಗತವಾಗಿಯೂ ಇವೆ
ಕಥಾಭಾಗದಲ್ಲಿ ಅದ್ಭುತರಮ್ಯಪ್ರಣಯದ ಸಾಮಯಿಕನಿರೂಪಣೆಯಿದ್ದರೂ ಅಲ್ಲ
ಸಂನಿವೇಶಕ್ಕೆ, ಸ್ವಭಾವಕ್ಕೆ ಉಚಿತವಾದ ರಸಚಿತ್ರಗಳಿವೆ. ಲೀಲಾವತಿಯನ್ನು ಕನಸಿನ
ಕಂಡು ಎಚ್ಚತ್ತಮೇಲೂ ಕನಸಿನಲ್ಲಿಯೇ ಇದ್ದಂತೆ ವರ್ತಿಸಿದ ಕಂದರ್ಪದೇವನ ಚಿತ್ರ
ಹೃದ್ಯವಾಗಿದೆ (೩/೬೪–೬೭). ವರ್ಣನೆಗಳಲ್ಲಿ ಸುಬಂಧು ಮುಂತಾದವರ ಪ್ರಭಾವವಿದೆ
ಆದರೂ 'ಲೀಲಾವತಿ' ಅನುವಾದವಲ್ಲ, ಅನುಕರಣವಲ್ಲ. ಸ್ವತಂತ್ರಕಾವ್ಯಭಾವಗಳ
ಕಲ್ಪನೆಗಳೂ ಇದರಲ್ಲಿ ಹೇರಳವಾಗಿವೆ. ಕಲ್ಪನಾಚಮತ್ಕೃತಿಯಲ್ಲಿ, ಶಬ್ದಸಂಪತ್ತಿಯ
ನೇಮಿಯದು ಮೇಲುಗೈ. 'ಸ್ತ್ರೀರೂಪಮೆ ರೂಪಂ ಶೃಂಗಾರಮೆ ರಸಂ' (೧೨/೮
ಎಂಬ ಪ್ರತಿಜ್ಞೆಗನುಸರಿಸಿ ಶೃಂಗಾರಮಯವಾದ ಕಾವ್ಯವನ್ನು ರಚಿಸಿ ನೇಮಿ

---

1 ಕೆ. ಜಿ. ಕುಂದಣಗಾರ: ನೇಮಿಚಂದ್ರ (ರಾಜಾರಾಮಿಯನ್ ಕನ್ನಡ ವಿಭಾಗ, ಸಂಪುಟ ೨೩–೨, ೩, ಪು. ೧೧)

ವೈಶಿಷ್ಟ್ಯವನ್ನು ಮೆರೆದಿದ್ದಾನೆ. ಈ ಕಾವ್ಯದಲ್ಲಿ ಕಲ್ಪನಾಶಕ್ತಿಯ ಎತ್ತರವಿದೆ, ಸೂಕ್ಷ್ಮನಿರೀಕ್ಷಣ ಶಕ್ತಿಯಿದೆ; ಆದರೂ ಇದು ತೃಪ್ತಿಕರವಾದ ಸಮಗ್ರಕೃತಿಯಲ್ಲ, ಹೆಚ್ಚೆಂದರೆ ಸತ್ಕೃತಿಯಾಗಿದೆ. ಕಥೆಯ ಸಾಮಯಿಕತೆ–ಅಸಂಬದ್ಧತೆ, ವರ್ಣನಾ-ಭಾಗಗಳ ಅತಿವಿಸ್ತರ–ವಿಸಂಗತಿ ಇವೆಲ್ಲ ಕೂಡಿ ಕಾವ್ಯದ ಸಮಗ್ರಸೌಂದರ್ಯಕ್ಕೆ ಬಾಧೆತಂದಿವೆ.

ನೇಮಿಚಂದ್ರನ ಎರಡನೆಯ ಚಂಪೂಕಾವ್ಯ 'ನೇಮಿನಾಥಪುರಾಣ'. 'ಜಿನ-ಸಮಯದೀಪಕ'ನಾದ ನಾನು 'ಜಿನಕಥೆಯೊಳ್ ಸಂದಿಸಿ ವಸುದೇವಾಚ್ಯುತ-ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ'(೧-೪೦) ಎಂದಿದ್ದಾನೆ. 'ನೇಮಿಪುರಾಣ'-ದಲ್ಲಿ ಅಡಕವಾದ ಹರಿವಂಶ–ಕುರುವಂಶ ಚರಿತ್ರೆ, ಮುಖ್ಯವಾಗಿ ಕೃಷ್ಣಕಥೆ—ಇದರಿಂದ ತನ್ನ ಜೈನನಿಷ್ಠೆ, ತನ್ನ ಪ್ರೇರಕನಾದ ಪದ್ಮನಾಭನ ವಿಷ್ಣುಭಕ್ತಿ ಎರಡಕ್ಕೂ ಅವಸರ ದೊರೆಯುವುದೆಂದು ಈ ವಿಷಯವನ್ನು ಅವನು ಆಯ್ದುಕೊಂಡಿರಬೇಕು. ಕೃಷ್ಣನ ಲೀಲೆ, ಕಂಸವಧೆ ಇವುಗಳ ವಿಸ್ತಾರವಾದ ವಿವರಣೆಗೆ ಅವನು ಕೊಟ್ಟ ಪ್ರಾಧಾನ್ಯವನ್ನು ಗಮನಿಸಬೇಕು. ಉಪಲಬ್ಧವಾದ ಭಾಗವು ಕಂಸವಧೆ(೮ನೇ ಆಶ್ವಾಸ)ಗೆ ನಿಂತು-ಹೋಗಿದ್ದರೂ ಅವನು ಬರೆದ ಗ್ರಂಥ ಸಂಪೂರ್ಣವಾಗಿರಬೇಕು. ಕನ್ನಡದಲ್ಲಿ 'ಚಾವುಂಡರಾಯಪುರಾಣ', ಕರ್ಣಪಾರ್ಯನ 'ನೇಮಿನಾಥಪುರಾಣ' ಇವು ಇವನಿಗಿಂತ ಮೊದಲು ಇದೇ ವಿಷಯವನ್ನು ಕುರಿತಿವೆ. ಇವನು ಸಂಸ್ಕೃತ–ಪ್ರಾಕೃತ ಆಕರಗಳನ್ನು ನೋಡಿರಬಹುದಾದರೂ ಹೆಚ್ಚಾಗಿ 'ಚಾವುಂಡರಾಯಪುರಾಣ'ವನ್ನೇ ಅನುಸರಿಸಿ-ದಂತಿದೆ. ಅಲ್ಲಿಯ ಕೆಲವು ವಿವರಗಳನ್ನು ಬಿಟ್ಟು, ಬದಲಿಸಿಕೊಂಡು, ಕೃಷ್ಣಚರಿತ್ರೆಗೆ ಪ್ರಾಮುಖ್ಯಕೊಟ್ಟು ಸ್ವತಂತ್ರಪ್ರಜ್ಞೆಯನ್ನು ತೋರಿಸಿದ್ದಾನೆ. ಜೈನಪುರಾಣಗಳಲ್ಲಿ ಸಾಮಾನ್ಯವಾಗಿರುವ ಭವಾವಳಿಯ ಕ್ಲಿಷ್ಟತೆ, ಮತಪ್ರಚಾರದ ನೀರಸತೆ ಈಗಿದ್ದ ಭಾಗದಲ್ಲಿಲ್ಲ. ಪಾತ್ರಗಳಲ್ಲಿ ಜೀವಕಳೆ ತುಂಬಿ, ಸಂನಿವೇಶಗಳನ್ನು ಸಮುಕಟ್ಟಿ ರಸ-ಮಯವಾಗಿ ಕಥೆಯನ್ನು ನಿರೂಪಿಸಿದ್ದಾನೆ. ಇಲ್ಲಿಯ ಕೃಷ್ಣ ಕರ್ಣಪಾರ್ಯ–ಚಾವುಂಡ-ರಾಯರ ಕೃತಿಗಳಲ್ಲಿಯಂತೆ ದೇವತಾಸಹಾಯದಿಂದ ಬೆಳೆದ ಎಳಕನಾದ ವ್ಯಕ್ತಿ ಆಗಿರದೆ ಸ್ವಾರ್ಜಿತಯಶ, ಅಸಹಾಯಶೂರನಾಗಿದ್ದಾನೆ. ೮ನೆಯ ಆಶ್ವಾಸದಲ್ಲಿ ಅವನು ಕಂಸವಧೆಯನ್ನು ಮಾಡಿದ ಸಂದರ್ಭವನ್ನು ಕವಿ ರಸೋತ್ಕಟವಾಗಿ ಬಣ್ಣಿಸಿದ್ದಾನೆ. ಯಾವ ಮಹಾಕವಿಯ ಹಿರಿಯ ಬರೆವಣಿಗೆಯೊಡನೆಯೂ ಈ ಭಾಗವನ್ನು ಸರಿದೂಗಿ ನೋಡಬಹುದು. ಇಲ್ಲಿ ಬರುವ ವ್ಯಕ್ತಿಗಳು ನಿರ್ಜೀವ ಗೊಂಬೆಗಳಲ್ಲ, ಸಾಮಾನ್ಯ ಮನುಷ್ಯರು. ವಸುದೇವ–ಕೃಷ್ಣರು ಕಾರಣಪುರುಷರಾದರೂ ಅತಿಮಾನುಷಪರಿವೇಷ-ದಲ್ಲಿ ಮುಚ್ಚಿಹೋಗಿಲ್ಲ. ವಸುದೇವ ಕೇವಲ ವಿಲಾಸಿಯಲ್ಲ, ವೀರ–ಔದಾರ್ಯಗಳು ಅವನಲ್ಲುಂಟು. ಕಂಸ ಕೇವಲ ದುರುಳುತನದ ಸಂಕೇತವಲ್ಲ, ಅವನಲ್ಲಿ ಭಯ, ಸ್ನೇಹ, ಗುರುಭಕ್ತಿಗಳಿವೆ. 'ಲೀಲಾವತಿ'ಯ ಪಾತ್ರಗಳ ಗೊಂಬೆತನಕ್ಕೆ ಈ ಜೀವಂತಿಕೆ ವಿಸದೃಶವಾಗಿದೆ. ವರ್ಣನೆಯಲ್ಲಿಯೂ ಅಷ್ಟೆ. ವರ್ಣನಪ್ರೀತಿ ಇಲ್ಲಿಯೂ ಇದೆ

ಆದರೆ ಅದು ಮಿತವಾಗಿದೆ, ಸಂದರ್ಭೋಚಿತವಾಗಿದೆ. ಕೇವಲ ವಾಕ್‌ಚಾತುರ್ಯ-ಕ್ಕಾಗಿ ಇಲ್ಲವೆ ಅಲಂಕಾರಕ್ಕಾಗಿ ವರ್ಣನೆ ತೊಡಗಿಲ್ಲ. ಯಾವ ವರ್ಣನೆಯಲ್ಲಿಯೂ ನಿರೀಕ್ಷಣಶಕ್ತಿ, ಕಲ್ಪನೋನ್ನತಿ, ಭಾವಾವೇಶ ಬೆರೆಯದೆ ಇಲ್ಲ. ಪದಪ್ರಯೋಗ-ಕುಶಲತೆಯೂ ಅದಕ್ಕೆ ಸೇರಿ ಅದು ಹೃದ್ಯತರವಾಗುತ್ತದೆ. ಸ್ವಭಾವೋಕ್ತಿ, ಅತಿ-ಶಯೋಕ್ತಿ ಇವೆರಡರಲ್ಲಿಯೂ ನೇಮಿ ನಿಪುಣ. ಆದರೆ ಚಮತ್ಕೃತಿಯ ಬೆನ್ನುಹತ್ತಿ ಅವನ ಕಲ್ಪನೆ ಕೆಲವು ಸಲ ಎತ್ತರವನ್ನು ಕಳೆದುಕೊಳ್ಳುತ್ತದೆ. ಅದು ಪಾಂಡಿತ್ಯ-ಪ್ರಚುರ, ಕೃತಕವಾಗುತ್ತದೆ. ಅಂತೇ ಈ ಕಾವ್ಯದಲ್ಲಿ ಮಹಾಕಾವ್ಯದ ಸತ್ವವಿದ್ದರೂ ಮಹಾಕಾವ್ಯದ ಸಿದ್ಧಿಯಿಲ್ಲ. ಮೇಲಿನ ತರಗತಿಯ ಸತ್ಕಾವ್ಯವೆಂದು ಇದನ್ನು ಕರೆಯಬಹುದು.

ಮಧುರಕವಿ 'ನೇಮಿಜನ್ನಮರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್' ಎಂಬಲ್ಲಿ ಸತ್ಯಾಂಶವಿದೆಯಾದರೂ ನೇಮಿಯ ಮಟ್ಟಿಗೆ ಅದು ಅತ್ಯುಕ್ತಿ. ಪಂಪ-ರನ್ನರ ಸೀಮೆಯನ್ನು ಅವನು ಮುಟ್ಟಲಿಲ್ಲ, ಸೀಮೆಯ ಸನಿಯಕ್ಕೆ ಇದ್ದರೂ ಅಲ್ಲಿ ನಿಲ್ಲಲಿಲ್ಲ. ವರ್ಣನಾಸಕ್ತಿ ಕಡಿಮೆಯಾಗಿ, ಪ್ರಮಾಣಜ್ಞಾನ ಹೆಚ್ಚಾಗಿ ಜೀವನದರ್ಶನ ಗಂಭೀರವಾಗಿದ್ದರೆ ನೇಮಿ ಮಹಾಕವಿಯಾಗುತ್ತಿದ್ದನು. ಕಲ್ಪನಾಸಂಪತ್ತಿ, ವಾಕ್-ಸಂಪತ್ತಿಗಳಿಗೆ ಗಂಭೀರದರ್ಶನದ, ಔಚಿತ್ಯಪ್ರಜ್ಞೆಯ ಜೋಡಿಲ್ಲದೆ ಮಹಾಕವಿತ್ವದ ಪಟ್ಟ ದೊರೆಯದು ಎಂಬುದಕ್ಕೆ ನೇಮಿಯಂತೆ ಬೇರೆ ಹಲವು ಕನ್ನಡ ಕವಿಗಳು ನಿದರ್ಶನವಾಗಿದ್ದಾರೆ.

ರುದ್ರಭಟ್ಟ

ನೇಮಿಯಂತೆ ವೀರಬಲ್ಲಾಳನ ಆಳಿಕೆಯಲ್ಲಿ ಆಗಿಹೋದ ಇನ್ನೊಬ್ಬ ಕವಿ ಎಂದರೆ ರುದ್ರಭಟ್ಟ. ನೇಮಿಯಿಂದ ವೀರಬಲ್ಲಾಳನ ಮಹಾಪ್ರಧಾನನಾದ ಪದ್ಮ-ನಾಭನು ಜೈನಪುರಾಣವನ್ನು ಬರೆಸಿದನು, ಅವನ ಇನ್ನೊಬ್ಬ ಮಂತ್ರಿಯೂ ಪಂಡಿತನೂ ಆದ ಚಂದ್ರಮೌಳಿ ರುದ್ರನು ಬರೆದ ವಿಷ್ಣುಪುರಾಣಕಥೆಯನ್ನು ಕೊಂಡಾಡಿದನು. ಅದೇ 'ಜಗನ್ನಾಥವಿಜಯ'ವೆಂಬ ಗ್ರಂಥ. 'ರಸಕಳಿಕೆ' ಎಂಬ ಇನ್ನೊಂದು ರಸ-ಶಾಸ್ತ್ರವನ್ನು ಕುರಿತ ಅವನ ಗ್ರಂಥ ದೊರೆತಿಲ್ಲ.[1] ಜಗನ್ನಾಥವಿಜಯದಲ್ಲಿ 'ಕೃಷ್ಣ-ಕಥೆ'ಯನ್ನು ಹೇಳೆಂದು ಬುಧರು ಹೇಳಲು 'ಕಾವ್ಯಸಮಾಧಿಯಿಂ ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ ನಿರ್ಮಳತತ್ತ್ವಬೋಧಮುದ್ಯೋತಿಪುದೆಂಬುದಂ

---

1 ಮದ್ರಾಸ ಪ್ರಾಚ್ಯಕೋಶಾಗಾರದಲ್ಲಿ ರಸಕಳಿಕೆ ಎಂಬ ಸಂಸ್ಕೃತ ಅಲಂಕಾರಗ್ರಂಥವು ದೊರೆತಿದೆ. ಅದೇ ಇದಾಗಿದ್ದರೆ ರುದ್ರಭಟ್ಟನ ರಸಕಳಿಕೆ ಕನ್ನಡಗ್ರಂಥವಲ್ಲ ಎಂದಾಗುತ್ತದೆ. ನೋ.—ಅವತರಣಿಕೆ, ರಸರತ್ನಾಕರ, ಪು. xv (ಮದ್ರಾಸ ವಿಶ್ವವಿದ್ಯಾನಿಲಯ ಪ್ರಕಟನೆ).

ಬಯಸಿ ಪೇಟಲೊಡರ್ಚಿದೆನೀ ಪ್ರಬಂಧಮಂ' (೧-೧೭) ಎಂದು ಕವಿ ಹೇಳಿದ್ದಾನೆ. ಇದರಿಂದ ಕೃಷ್ಣಚರಿತೆಯ ಬಿತ್ತರಣೆ, ತನ್ಮೂಲಕ ಹೊಳೆಯುವ 'ನಿರ್ಮಳತತ್ವ-ಬೋಧ' ಎಂದರೆ ಭಕ್ತಿಮಾರ್ಗವಾಗಿ ಜ್ಞಾನಪ್ರಾಪ್ತಿ ಇದು ಗ್ರಂಥರಚನೆಯ ಉದ್ದೇಶವೆಂದು ತಿಳಿಯುತ್ತದೆ. ಜೊತೆಗೆ ಸಂಸ್ಕೃತ, ಕನ್ನಡ-ಪ್ರೌಢಕಾವ್ಯಗಳ ಪರಂಪರೆಯಲ್ಲಿ ತನ್ನ ಪಾಂಡಿತ್ಯ-ಪ್ರತಿಭೆಗಳ ಫಲವಾದ ಕೃತಿಯೊಂದನ್ನು ಸೇರಿಸ-ಬೇಕೆಂಬ ಉತ್ಸಾಹವೂ ಇದೆ. ಈ ಕಾವ್ಯಕ್ಕೆ ಮುಖ್ಯ ಆಕರ 'ವಿಷ್ಣುಪುರಾಣ'ದ ೫, ೬ನೆಯ ಅಂಶಗಳಲ್ಲಿ ದೊರಕುವ ಕೃಷ್ಣಚರಿತೆ. ಭಾರತ-ಭಾಗವತಗಳಲ್ಲಿಯ ಪ್ರಸ್ತುತ ಭಾಗಗಳ ಪ್ರಭಾವವೂ ಆಗಿರಬೇಕು. 'ವಿಷ್ಣುಪುರಾಣ'ದ ಸರಣಿ ಹೆಚ್ಚಾಗಿ ಸರಳಕಥನದ್ದಾದರೆ 'ಜಗನ್ನಾಥವಿಜಯ'ದ ರೀತಿ ವಿಸ್ತಾರವಾದ ಪ್ರೌಢಕಾವ್ಯದ್ದು. ಕೃಷ್ಣಜನ್ಮದಿಂದ ಸಾಲ್ವವಧೆಯವರೆಗೆ ೧೮ ಆಶ್ವಾಸಗಳಲ್ಲಿ ಈ ಕಥೆ ಹರಡಿದೆ. ಕವಿ 'ವಿಷ್ಣುಪುರಾಣ'ವನ್ನು ಕಥಾಂಶದಲ್ಲಿ ಅನುಸರಿಸಿರುವುದೇ ಹೆಚ್ಚು. ಆದರೆ ಪ್ರೌಢವಾದ ವಿಸ್ತರಣೆಯಲ್ಲಿ ಅವನದೇ ಕೈವಾಡವಿದೆ. ಹೀಗೆ ಮಾಡುವಾಗ ರಸಾವೇಶಭರದಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿದ್ದಾನೆ. ಅವುಗಳಲ್ಲಿ ಕುವಲಯಾಪೀಡವೆಂಬ ಆನೆಯನ್ನು ಕೊಂದು ಕೃಷ್ಣಬಲರಾಮರು ಎತ್ತರದ ಪೀಠದಲ್ಲಿ ಕುಳಿತಿದ್ದ ಕಂಸನಿಗೆ ಆನೆಯ ಹಲ್ಲುಗಳನ್ನು ತೂರಿ ಕೊಟ್ಟು 'ಈಯೆರಡೆ ದಂತಮಿವಂ ಪಿಡಿ ಕಂಸ ನಿನ್ನ ಭಂಡಾರದೊಳಿಕ್ಕಿಸು' ಎಂದಾಡಿದ ಮಾತು ಸೊಗಸಾಗಿದೆ. ಚಿಕ್ಕಬಾಲಕರ ಈ ಉದ್ಧತ ಪ್ರತಾಪದಿಂದ ಕಂಸನು ಕಂಗನೆ ಕನಲ್ದುದು ಸಹಜವೇ. ಇಡೀ ಸಂನಿವೇಶ ರಸ-ವತ್ತಾಗಿದೆ. ಹೀಗೆ ಎತ್ತಿಕೊಂಡ ಸಂನಿವೇಶಗಳನ್ನು ಪ್ರಭಾವಿಯಾಗಿ ಹಾತಾಳಿಸುವ ಹಿಡಿತ, ಅವಶ್ಯವಾದ ಗತಿಪ್ರಜ್ಞೆ, ಪಾತ್ರದರ್ಶನ ಇವು ರುದ್ರಭಟ್ಟನಲ್ಲಿವೆ. ಭಕ್ತಿರಸದ ಸಂದರ್ಭಗಳಲ್ಲಿ ಅವನ ಪ್ರತಿಭೆ ಕಾವುಗೊಳ್ಳುತ್ತದೆ, ಆಗ ಅಕ್ರೂರನಿಂದ ಮಾಡಿಸಿದಂತೆ ಸುದೀರ್ಘವಾದ ವಿಷ್ಣುಜಯಗಾನವನ್ನು ಮಾಡಿಸುತ್ತಾನೆ (೫-೧೧೩). ಇಂಥಲ್ಲಿ ಒಮ್ಮೊಮ್ಮೆ ಕಾವ್ಯಗುಣಕ್ಕಿಂತ ಭಕ್ತಿಭಾವಕ್ಕೆ ಪ್ರಾಮುಖ್ಯಬರುತ್ತದೆ. ಹದಿನೆಂಟು ವರ್ಣನೆಗಳ ವ್ಯಾಮೋಹದಿಂದ ಅವನು ಮುಕ್ತನಾಗಿಲ್ಲ. ಅವನ್ನೆಲ್ಲ ತರುವ ಹವ್ಯಾಸ-ದಲ್ಲಿ ಔಚಿತ್ಯಕ್ಕೆ ಎರವಾಗಿದ್ದಾನೆ, ಆದರೂ 'ಲೀಲಾವತಿ'ಯ ಬೇಸರುಗೊಳಿಸುವ ಸುದೀರ್ಘತೆಯಿಲ್ಲ. ಕಾವ್ಯಕಲ್ಪನೆಗಳಲ್ಲಿ ಸಂಸ್ಕೃತ-ಕನ್ನಡ ಕವಿಗಳಿಂದ ಬಹುವಾಗಿ ಅವನು ಉಪಕೃತನಾಗಿರುವನಾದರೂ ಅವನ ಸ್ವತಂತ್ರರೂಪಕಶಕ್ತಿ ಭವ್ಯವೂ ಸಂಪನ್ನವೂ ಆಗಿದೆ. ಈ ಕೃತಿಗೆ ವಿಷ್ಣುಭಕ್ತಿಯೆ ಸ್ಥಾಯಿ, ಇದಕ್ಕೆ ಸತತಪೋಷಕ-ವಾಗಿರುವುದು ಅದ್ಭುತರಸ. ಕೃಷ್ಣಲೀಲೆಗಳ ಮಾಲಿಕೆ ಇದರಲ್ಲಿದ್ದರೂ ಕೃಷ್ಣ-ವಿಷ್ಣುಸಾಮ್ಯದಿಂದ ತೋರಿದ ಭಕ್ತಿಭಾವದ ಏಕಾಗ್ರತೆ ಇದಕ್ಕೆ ಏಕಸೂತ್ರವನ್ನೂ ಸ್ವಾರಸ್ಯವನ್ನೂ ಉಂಟುಮಾಡಿದೆ. 'ಕಾವ್ಯಸಮಾಧಿ' ಎಂದು ರುದ್ರ ಹೇಳಿದ್ದರ ಅರ್ಥವಿದು. ಅಲ್ಲಲ್ಲಿ ಭಕ್ತಿ ಜ್ಞಾನದಲ್ಲಿ ಪರಿಣಮಿಸಿದೆ ಎಂಬುದಕ್ಕೆ ದೃಷ್ಟಾಂತಗಳಿವೆ. ರಾಸಲೀಲೆಯ ರಮ್ಯಸಂನಿವೇಶದಲ್ಲಿ 'ರಸಭಾವಸಂಸ್ಥಾನಕನೃತ್ಯಂ ಆ ಪರತತ್ವ-

ಸುಖಕ್ಕೆಣೆಯಾಗಿ ತೋಱಿತ್' ಎಂಬುದನ್ನೂ ಅಕ್ರೂರನ ಕೃಷ್ಣಸಾಕ್ಷಾತ್ಕಾರವನ್ನೂ ನೋಡಬಹುದು. ಕವಿ ಇಟ್ಟುಕೊಂಡ ಮಹೋದ್ದೇಶವು ಏಕತಾನವಾಗಿ ಅಲ್ಲದಿದ್ದರೂ ನೈಜವಾಗಿ ಸಫಲವಾಗಿದೆ; ಕಾವ್ಯಸಮಾಧಿಯಿಂದ ಕೃಷ್ಣಧ್ಯಾನ, ಅದರಿಂದ ತತ್ತ್ವ-ಬೋಧ ಉಂಟಾಗಿರುವುದು ಕವಿವ್ಯಕ್ತಿತ್ವದ ಹಾಗೂ ಕೃತಿಯ ಗುಣಾತಿಶಯಕ್ಕೆ ಗುರುತಾಗಿದೆ. ಆದರೆ ಸಮಯಶರಣ ವರ್ಣನೆಗಳಿಂದಲೂ ಪ್ರೌಢಿಮೆ–ಪಾಂಡಿತ್ಯಗಳ ಪ್ರದರ್ಶನದಿಂದಲೂ ಸಮಾಧಿಭಂಗವಾಗಿರುವುದೂ ಉಂಟು. ಅಂತೇ 'ಜಗನ್ನಾಥ-ವಿಜಯ'ವು ಮಹಾಕೃತಿಯಾಗಿಲ್ಲ. ರುದ್ರಭಟ್ಟನು ಸ್ಮಾರ್ತ ವೈದಿಕಬ್ರಾಹ್ಮಣ, ಅಲ್ಲದೆ ಹರಿಹರರಲ್ಲಿ ಭೇದವನ್ನು ಮನ್ನಿಸದ ಭಾಗವತಸಂಪ್ರದಾಯಿ. ವಿಶಾಲವಾದ ಭಾಗವತದೃಷ್ಟಿ, ಉಪನಿಷದ್ದರ್ಶನ ಅವನ ಕಾವ್ಯದಲ್ಲಿ ಹೆಜ್ಜೆಹೆಜ್ಜೆಗೆ ಮೂಡಿಬಂದಿವೆ.

> 'ಜಗಮಂ ನುಂಗುವ ಶೂಲಿ ನೀನೆ ಜಗಮಂ ಮಾೞ್ಪಬ್ಜಜಂ ನೀನೆ ತ- |
> ಜ್ಜಗಮಂ ರಕ್ಷಿಪ ವಿಷ್ಣು ನೀನೆ ಜಗಮುಂ ಪೋ ನೀನೆ ಸರ್ವೇಶ ಸ- |
> ರ್ವಗ ಸರ್ವಾತ್ಮಕ ಸರ್ವಭೂತಮಯ ನಿನ್ನಿಂ ಭಿನ್ನವಾಗಿರ್ಪ ವ- |
> ಸ್ತುಗಳಿಲ್ಲ ಈ ರಿಪು ಭಿನ್ನನಾದನಿದು ಚಿತ್ರಂ ಪದ್ಮಪತ್ರಾಂಬಕಾ ||' (೫–೪೯)

ಈ ಪದ್ಯದಲ್ಲಿ ರುದ್ರಭಟ್ಟನ ದರ್ಶನ ಮತ್ತು ಕಲ್ಪನಾಚಮತ್ಕೃತಿ ಏಕಜೀವವಾಗಿ ಬಂದಿವೆ. ಬಾಣಾಸುರಸಂದರ್ಭದಲ್ಲಿ ಶಿವನು ವಿಷ್ಣುವನ್ನು ಕುರಿತು 'ದ್ವಯಭಾವಂ ನಮಗಿಲ್ಲ ಬಲ್ಲವರೆ ನಾನುಂ ನೀನುಂ ಈ ಮಾತ....ಏಕಮೂರ್ತಿಯೆ ಮೂರ್ತಿತ್ರಯ-ವಾಯ್ತು' (೧೪–೬೬) ಎಂದು ಹೇಳಿದ್ದಾನೆ. ವೈದಿಕಸಂಪ್ರದಾಯದ ಬ್ರಾಹ್ಮಣ ಕವಿಗಳು ಕನ್ನಡಕ್ಕೆ ತಡವಾಗಿ ಒಲಿದರು. ೧೧ನೆಯ ಶ.ದಿಂದ ಕಣ್ಣಿಗೆ ಬೀಳುವ ನಾಗವರ್ಮ, ದುರ್ಗಸಿಂಹ, ಚಂದ್ರರಾಜರು ಲೌಕಿಕ ಅನುವಾದಗ್ರಂಥಗಳನ್ನು ಬರೆದದ್ದು ಆಕಸ್ಮಿಕವಾಗಿರಲಾರದು. ಧಾರ್ಮಿಕವಿಷಯಗಳನ್ನು ಕುರಿತು ಕನ್ನಡದಲ್ಲಿ ಬರೆಯಬಹುದೇ ಎಂಬ ಶಂಕೆ ಅವರ ಮನದಲ್ಲಿ ಅವಿತಿರಬೇಕು. ನಾಗವರ್ಮಾಚಾರ್ಯನು ಮಾತ್ರ ತಾತ್ವಿಕವಾದ ವೈರಾಗ್ಯಶತಕವನ್ನು ರಚಿಸಿದನು. ಅವನ ತರುವಾಯ ವಿಷ್ಣು-ಪುರಾಣದ ಆಧಾರದ ಮೇಲೆ ಭಕ್ತಿಪ್ರಧಾನವಾದ ಒಂದು ಧಾರ್ಮಿಕ ಕಥನಕಾವ್ಯವನ್ನು ರುದ್ರಭಟ್ಟನೇ ಮೊದಲಿಗನಾಗಿ ಬರೆದನು. ಈ ದೃಷ್ಟಿಯಿಂದ ಅವನದು ಒಂದು ಸಾಹಸವೇ; ಆ ಕಾಲದಲ್ಲಿ ಒಂದು ಕ್ರಾಂತಿಯೆಂದೇ ತೋರಿರಬಹುದು. '**ಪೊಸತೆನೆ** ಪೇೞ್ವ ತಿರ್ದುವ ಅಱುವು' (೧–೧೫) ಅವನಲ್ಲಿದ್ದುದು ನಿಜ. ಹೀಗೆ ಒಂದು ಆತ್ಮ-ವಿಶ್ವಾಸದಿಂದ ಹೊರಟು ಕೃತಿಯ ಕೊನೆಗೆ 'ರುದ್ರಭಟ್ಟಕೃತಿ ವೈಷ್ಣವಕಾವ್ಯರಸಾ-ರ್ಣವಂ ತುಳುಂಕಾಡುಗೆ ಭೂಮಿ ನಿಲ್ವಿನಂ' ಎಂದವನು ಸಾರಿದ್ದಾನೆ. ಜೈನ–ವೀರ-ಶೈವ ಕವಿಗಳ ಸಾಧನೆಯಿಂದ ಪ್ರಾಪ್ತವಾದ ಕನ್ನಡದಿಗ್ವಿಜಯಕ್ಕೆ ಈ ರುದ್ರಭಟ್ಟಕೃತಿ ಸಾಕ್ಷಿ. ಇದು 'ವೈಷ್ಣವಕಾವ್ಯರಸಾರ್ಣವ' ಎಂಬುದು ಸರಿ, ಶೈವಕಾವ್ಯರಸಾರ್ಣವವೂ

ಹೌದು. ಯಾಕೆಂದರೆ ರುದ್ರನಿಗೆ ಇಬ್ಬರಲ್ಲಿಯೂ ಭೇದವಿಲ್ಲ. ಇಂಥ ವಿಶಾಲ-ದೃಷ್ಟಿಯುಳ್ಳ ಮೇಲಾದ ಭಕ್ತಿಕಾವ್ಯವನ್ನು ರಚಿಸಿ ಕನ್ನಡ ಸತ್ಕವಿಗಳ ಸಭಾಮಂಟಪ-ದಲ್ಲಿ ಅವನು ಮನ್ನಣೆಯ ಸ್ಥಾನಕ್ಕೆ ಅರ್ಹತೆಯನ್ನು ಪಡೆದಿದ್ದಾನೆ.

ನೇಮಿ-ರುದ್ರರಿಬ್ಬರೂ ವೀರಬಲ್ಲಾಳನ ಆಸ್ಥಾನದಲ್ಲಿದ್ದ ಪಂಡಿತಕವಿಗಳು. ಅವರು ಭಿನ್ನಮತೀಯರಾದರೂ ಕವಿತ್ವಧರ್ಮದಿಂದ ಅನ್ಯೋನ್ಯರಾಗಿರಬೇಕು. ಅವರಲ್ಲಿಯ ಸಾಮ್ಯಭೇದಗಳನ್ನು ಗಮನಿಸಬಹುದು. ಮೂಲ ಆಕರ, ಕಥನದೃಷ್ಟಿ ಬೇರೆಯಾದರೂ ಇಬ್ಬರೂ ಕೃಷ್ಣಕಥೆಯನ್ನು ಬರೆದಿದ್ದಾರೆ. ಗೋವರ್ಧನೋದ್ಧರಣ-ದಿಂದ ಕಂಸವಧೆಯವರೆಗಿನ ಕಥಾನಕವು ಇಬ್ಬರ ಕೃತಿಗಳಲ್ಲಿ ಭಿನ್ನನಿರೂಪಣೆಹೊಂದಿ ಬಂದಿದೆ. ಅಕ್ರೂರದರ್ಶನದಂಥ ಭಾಗಗಳನ್ನು ರುದ್ರನು ವಿಸ್ತರಿಸಿದ್ದಾನೆ, ನೇಮಿ ಬಿಟ್ಟುಕೊಟ್ಟಿದ್ದಾನೆ. ಏಕೆಂದರೆ ರುದ್ರನು ವಿಷ್ಣುಭಕ್ತಿಪ್ರಿಯ, ನೇಮಿಗೆ ಅಂಥ ಭಕ್ತಿ ಬೇಕಾಗಿಲ್ಲ. ಮಳೆಗಾಲದ ಮತ್ತು ಇತರ ವರ್ಣನೆಗಳನ್ನು ನೋಡಿದರೆ ಇಬ್ಬರಲ್ಲಿಯ ಸಾಮ್ಯಭೇದವು ಎದ್ದುಕಾಣುತ್ತದೆ. 'ಕಾರೆಂಬ ಮಾರದ್ವಿಪಂ' (ಜಗನ್ನಾಥ-ವಿಜಯ, ೪-೨೨) ಎಂದೊಬ್ಬನು ವರ್ಣಿಸಿದರೆ 'ಕಾರೆಂಬ ಗೋಪಾಳಕಂ' (ನೇಮಿ-ನಾಥಪುರಾಣ, ೮-೪) ಎಂದು ಇನ್ನೊಬ್ಬನು ಬಣ್ಣಿಸಿದ್ದಾನೆ. ಅಲಂಕಾರವದೇ ಆದರೂ, ಭವ್ಯತೆ ಸಮಾನವಾದರೂ, ಕಲ್ಪನೆ ಬೇರೆ. ಇಬ್ಬರ ಸೆಣಸಾಟ ನೋಡು-ವಂತಿದೆ. 'ಮಹಾಂಭೋನಿರ್ಝರಂ ಝುಲ್ಲರಿವೊಲಿರೆ' (೪-೮೯) ಎಂದು ರುದ್ರ-ನೆಂದರೆ 'ಝುಲ್ಲರಿವೊಲ್ ಝುಲ್ಲನೆ ಸೂಸಿ ನಿರ್ಝರಜಲಂ ಬಿಟ್ಟಿರ್ಪಿನಿಂ' (೮-೧೧) ಎಂದು ಗೋವರ್ಧನಪ್ರಸಂಗದಲ್ಲಿ ಕೊಡೆಯಂತೆ ಪರ್ವತ ಎತ್ತಿದ್ದನ್ನು ನೇಮಿ ಸಮಾನವಾಗಿ ಹೋಲಿಸಿದ್ದಾನೆ. ಸ್ವತಂತ್ರ ಉನ್ನತಕಲ್ಪನೆಗಳನ್ನು ಉತ್ಪ್ರೇಕ್ಷೆ, ರೂಪಕ, ಅತಿಶಯೋಕ್ತಿ ಈ ಶ್ರೇಷ್ಠ ಅಲಂಕಾರಗಳಲ್ಲಿ ಎರಕ ಹೊಯ್ಯುವುದರಲ್ಲಿ ಇಬ್ಬರೂ ಸಮಾನ ಯೋಗ್ಯತೆಯವರು. ಒಮ್ಮೆ ಒಬ್ಬನ ಕಲ್ಪನೆ ಸುಂದರವಾದರೆ, ಇನ್ನೊಮ್ಮೆ ಇನ್ನೊಬ್ಬನದು ಸೊಗಸುತ್ತದೆ. ಸ್ವಭಾವೋಕ್ತಿಯಲ್ಲಿ ಮಾತ್ರ ರುದ್ರನಿಗಿಂತ ನೇಮಿ ಸಮರ್ಥನು. ಇಬ್ಬರೂ ಚತುರವಿದಗ್ಧಕವಿಗಳು. ಇಬ್ಬರ ಶೈಲಿಯಲ್ಲಿ ಸಂಸ್ಕೃತ-ಪ್ರೌಢಿಮೆಯ ಮುದ್ರೆಯಿದೆ, ಅಚ್ಚಗನ್ನಡದೇಸಿಯ ಅಚ್ಚಿದೆ. ಚಂಪೂ ರಚನೆಯಲ್ಲಿ ಇಬ್ಬರೂ ಬಲ್ಲಿದರು. ಆದರೆ ನೇಮಿಗಿಂತ ರುದ್ರನಲ್ಲಿ ಪ್ರಸಾದಗುಣ, ಲಾಲಿತ್ಯ ಹೆಚ್ಚಿದೆ. ನೇಮಿ ಶೃಂಗಾರರಸಪ್ರಿಯ, ರುದ್ರ ಭಕ್ತಿರಸಪ್ರಿಯ. ಇಬ್ಬರಲ್ಲಿಯೂ ಉತ್ತಮಕವಿಯ ಮೂಲಶಕ್ತಿಯಿದೆ, ಉತ್ತಮಕಾವ್ಯದ ಸಿದ್ಧಿಯಿಲ್ಲ.

೧೨ನೆಯ ಶ.ದ ಕೊನೆ ಮತ್ತು ೧೩ನೆಯ ಶ.ದ ಮೊದಲಿನ ಚಿಕ್ಕ ಗಡುವಿನಲ್ಲಿ ಹಲವು ಸಾಧಾರಣಕವಿಗಳು ತಲೆದೋರಿ ಪ್ರೌಢ ಇಲ್ಲವೆ ಸಂಕ್ರಮಣಕಾವ್ಯದ ಅನುಕರಣ ಮಾಡಿದರು. ಅವರಲ್ಲಿ ಕೆರೆಯ ಪದ್ಮರಸನ ಮಗನಾದ ಕುಮಾರಪದ್ಮರಸ ಒಬ್ಬನು. ಶರಣಕವಿ ಎಂಬ ಹೆಸರುಪಡೆದು ಇವನು 'ಸಾನಂದಚರಿತ್ರೆ' ಎಂಬ

ಗ್ರಂಥ ಬರೆದನು. ಇದರಲ್ಲಿ ಪಂಚಾಕ್ಷರೀಮಹಿಮೆಯಿಂದ ನಾರಕಿಗಳಿಗೆ ಸದ್ಗತಿಯನ್ನುಂಟುಮಾಡಿದ ಸಾನಂದನ ಚರಿತ್ರೆ ಸ್ಕಾಂದಪುರಾಣದಿಂದ ಕನ್ನಡದಲ್ಲಿ ಅನುವಾದಿಸಲಾಗಿದೆ. ನಾನಾ ಷಟ್ಪದಿಗಳಲ್ಲಿ ಇದನ್ನು ಬರೆದಿದ್ದರೂ ಕುಸುಮಷಟ್ಪದಿ ವಿಶೇಷವಾಗಿದೆ, ೨ ರಗಳೆಗಳೂ ಇವೆ ಎಂದು ಕವಿಚರಿತಕಾರರು, 'ಸಾನಂದಚರಿತ್ರೆ'-ಯಲ್ಲಿ ಕುಸುಭಾಮಿನೀಷಟ್ಪದಿಗಳನ್ನು ಮಾತ್ರ ಬಳಸಿದೆ ಎಂದು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಹೇಳಿದ್ದಾರೆ.[1] ಹೀಗೆ ಹರಿಹರ-ರಾಘವಾಂಕರಿಬ್ಬರ ಪರಂಪರೆ ಮುಂಬರಿದಿದೆ, ರಾಘವಾಂಕ ಬಳಸದ ಇತರ ಷಟ್ಪದಿಗಳೂ ಇಲ್ಲಿ ಬಂದಿವೆ. ಸಂಕ್ರಮಣಯುಗದ ಗತಿಶೀಲತೆಯ ಗುರುತಿದು. ಬೊಪ್ಪಣಪಂಡಿತ ಇಲ್ಲವೆ ಸುಜನೋತ್ತಂಸ ಎಂಬ ಕವಿ 'ಗೊಮ್ಮಟಸ್ತುತಿ'ಯನ್ನು ೨೭ ವೃತ್ತಗಳಲ್ಲಿ, 'ನಿರ್ವಾಣಲಕ್ಷ್ಮೀಪತಿನಕ್ಷತ್ರಮಾಲಿಕೆ'ಯನ್ನು ೨೮ ವೃತ್ತಗಳಲ್ಲಿ ಹಾಗೂ ನೀತಿಕಂದಗಳನ್ನು ಬರೆದಿದ್ದಾನೆ. ಇವನು ಜೈನಕವಿಯಾಗಿದ್ದು ಜೈನತತ್ವಕ್ಕೆ ಅನುಸರಿಸಿ ಪದ್ಯಗಳನ್ನು ಬರೆದಿದ್ದರೂ ಒಂದು ಬಗೆಯ ಸರ್ವಸಂಗ್ರಹದೃಷ್ಟಿ, ವ್ಯವಹಾರವಿವೇಕ ಇವನ ಬರೆವಣಿಗೆಯಲ್ಲಿದೆ. ಉದಾ :

'ಪರಮೇಶಂ ಪರಮೇಷ್ಠಿ ಶಂಭು ಅಭವಂ ಬ್ರಹ್ಮಂ ಶಿವಂ ಶಂಕರಂ।
ಸ್ಮರಸಂಹಾರಕನಚ್ಯುತಂ ಮುರಹರಂ ಬುದ್ಧಂ ಜಿನಂ ವಿಷ್ಣು ವೇ-।
ದರಹಸ್ಯಂ ಪ್ರಭು ಶುದ್ಧನೆಂದು ನೆಗಳ್ದಂತಪ್ಪ ನಾಮಾಳಿಯಂ।
ಪರಮಾರ್ಥಂ ಕ(ತ?)ಳೆದರ್ಥಮಪ್ಪುದೆ ವಲಂ ನಿರ್ವಾಣಲಕ್ಷ್ಮೀಪತೀ॥'

ಎಂಬ ಪದ್ಯ ನೋಡಬೇಕು.

ಇಂಗಳೇಶ್ವರದ ಅಗ್ಗಳನು 'ಜನಮತಶ್ರೀಕೋಶವೇಶ್ಮಾಗ್ರಗಳಂ' (೧-೫೨) ಆಗಿ 'ಚಂದ್ರಪ್ರಭಪುರಾಣ'ವನ್ನು ರಚಿಸಿ 'ನಾನಾರಸಮಿರ್ಪ ವಸ್ತುಕೃತಿಯಂ' (೧-೫೧) ಹೇಳಿದ್ದಾನೆ. 'ಅಗ್ಗಳಗಣ್ಣಂ ತೋರ್ಪನಗ್ಗಳಂ ನೃಪಸಭೆಯೊಳ್' (೧-೫೭) ಎಂದಕಾರಣ ಇವನಿಗೆ ನೃಪಸಭೆಯಲ್ಲಿ ಮಾನಮರ್ಯಾದೆಯಾಗಿರಬೇಕು. ೧೬ ಆಶ್ವಾಸಗಳ ಇವನ ಗ್ರಂಥ ೮ನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತವಾಗಿದೆ. ಶ್ರೀವಿಜಯನು ಇಲ್ಲವೆ ಶ್ರೀಧರಾಚಾರ್ಯನು ಬರೆದ ಚಂದ್ರಪ್ರಭಚರಿತವು ದೊರೆತಿಲ್ಲವಾದ್ದರಿಂದ ಇದೇ ಉಪಲಬ್ಧ ಚರಿತ್ರೆಗಳಲ್ಲಿ ಮೊದಲನೆಯದು. ಜೈನಪುರಾಣದ ಸುಪ್ರತಿಷ್ಠಿತವಾದ ಪರಂಪರೆಯಲ್ಲಿ ಬರೆಯಲಾದ ಮಧ್ಯಮಗುಣದ ಕಾವ್ಯವಿದು. ಜೈನಸಮಯ, ಕಾವ್ಯಸಮಯ ಇವುಗಳ ತೀವ್ರಪ್ರಭಾವಕ್ಕೆ ಒಳಗಾಗಿ ಕಟ್ಟಿನಿಟ್ಟಾದ ದಾರಿಯಲ್ಲಿ ಕವಿ ಸಾಗಿದ್ದಾನೆ. ರಾಜಮಾರ್ಗದಲ್ಲಿ ಸುಶೋಭಿತವಾಗಿ ಯಾವ

---

1 ಡಿ. ಎಲ್. ನರಸಿಂಹಾಚಾರ್ : ಕುಮುದೇಂದುರಾಮಾಯಣವಿಚಾರ (ಕ.ಸಾ.ಪ., ೨೪-೩, ಪು. ೨೨೫)

ನಡೆದರೂ ರಾಜಶೀವಿಯನ್ನು ತೋರುವಂತೆ ಇಂಥ ಕೃತಿಗಳ ರೀತಿಯಾಗುತ್ತದೆ. ಸ್ವತಂತ್ರಪ್ರತಿಭೆ ಆಗಾಗ ಬೆಳಗಿದರೂ ಸಮಯಶರಣತೆಯಲ್ಲಿ ಅದು ಕಣ್ಮರೆಯಾಗುತ್ತದೆ. ಅಗ್ಗಳನ ಕಲ್ಪನಾಶಕ್ತಿಯಲ್ಲಿ ಅಗ್ಗಳಿಕೆಯಿದೆ, 'ಮೋಹನಮಗ್ಗಳ ನಿನ್ನಯ ವಾಕ್ಪ್ರಗುಂಫನಂ' (೧-೫೯) ಎನ್ನುವಂತೆ ಶೈಲಿಯ ಮೋಹಕತೆಯಿದೆ. ಆದರೂ 'ನೆಗಟ್ಟುದೀ ಕೃತಿರತ್ನಂ' (೧೬-೮೭), 'ಅಗ್ಗಳಂಗೆ ಅಗ್ಗಳರೊಳರೇ' ಎಂಬ ಪ್ರಶಂಸೆ ಅವಾಸ್ತವವೆಂದು ತೋರುತ್ತದೆ.

ಪಾಲ್ಕುರಿಕೆ ಸೋಮನಾಥನು ಈ ಯುಗದ ಪ್ರಸಿದ್ಧ ವೀರಶೈವಕವಿಗಳಲ್ಲಿ ಒಬ್ಬನು. ತೆಲುಗುನಾಡಿನಲ್ಲಿ ಹುಟ್ಟಿ ಕನ್ನಡನಾಡಿನ ಧರ್ಮದವನಾಗಿ ಎರಡೂ ಭಾಷೆಗಳಲ್ಲಿ ಇವನು ಗ್ರಂಥ ಬರೆದಿದ್ದಾನೆ. ಇವನ 'ಬಸವಪುರಾಣ'ವೆಂಬ ತೆಲುಗು ಗ್ರಂಥವನ್ನು ಮುಂದೆ ಭೀಮಕವಿ ಕನ್ನಡಿಸಿದನು. ಕನ್ನಡದಲ್ಲಿ ರಗಳೆಗಳು, ವಚನಗಳು, ಶೀಲಸಂಪಾದನೆ ಮುಂತಾಗಿ ಇವನ ಗ್ರಂಥಗಳಿವೆ. 'ತತ್ವವಿದ್ಯಾಕಲಾಪ' ಎಂಬ ಬಿರುದಿಗೆ ಅನುಗುಣವಾಗಿ ಮತತತ್ವದ ಪ್ರತಿಪಾದನೆಗೆ ಇವನ ಕವಿತೆ ಮೀಸಲಾಗಿದೆ. ಸದ್ಗುರುರಗಳೆ, ಗಂಗೋತ್ಪತ್ತಿಯ ರಗಳೆ ಮುಂತಾದ್ದರಲ್ಲಿ ಹರಿಹರನ ರಗಳೆಯ ಮಾರ್ಗವನ್ನು ಇವನು ಮುಂದರಿಸಿದ್ದಾನೆ; ಆದರೆ ಆ ಓಜಸ್ಸು, ಓಘ ಇಲ್ಲ. ಇವನ 'ಸಹಸ್ರಗಣನಾಮ'ದಲ್ಲಿ ಸಾಹಿತ್ಯಾಂಶವಿಲ್ಲ, ನಾಮಾವಳಿರೂಪವಾದ ಚಾರಿತ್ರಿಕ ಸಾಮಗ್ರಿಯಿದೆ. 'ಸೋಮೇಶ್ವರಶತಕ' ಇವನ ಕೃತಿಯೆಂಬ ಗ್ರಹಿಕೆ ತಪ್ಪೆಂದು ತೋರುತ್ತದೆ. ಈ ಶತಕದ ಕರ್ತೃ ಪುಲಿಗೆರೆಯವನಾಗಿರಬೇಕು. ಇದರ ಶೈಲಿ, ವ್ಯಾಕರಣಪ್ರಕ್ರಿಯೆಗಳನ್ನು ನೋಡಿದರೆ ೧೪ನೆಯ ಶ.ದಲ್ಲಿ ಇದು ರಚಿತವಾಗಿರಬೇಕೆಂಬ ಊಹೆ ಬಲಪಡುತ್ತದೆ. ೧೨-೧೩ನೆಯ ಶ.ಗಳಲ್ಲಿಯೆ ಹಳಗನ್ನಡದ ಬಿಗುವು ಸಡಿಲುತ್ತ ಬಂದಿರುವುದಾದರೂ ಈ ಶತಕದಲ್ಲಿರುವಷ್ಟು ಸಡಿಲು ಹುಟ್ಟಿರಲಿಲ್ಲ. ಕೆಲವು ಪದಪ್ರಯೋಗಗಳೂ ಪಾಲ್ಕುರಿಕೆ ಸೋಮನ ಕಾಲದವು ಆಗಲಾರವು. ಈ ಶತಕಕಾರನು ಹಳೆಯ ಶೈಲಿಯನ್ನು ಅನುಕರಿಸಲು ಹೋಗಿ ಛಂದಸ್ಸಿನ ಹಿಡಿತ ಸಾಲದೆ, ವ್ಯಾಕರಣದೋಷಗಳನ್ನು ಲೆಕ್ಕಿಸದೆ, ಹಳೆಯ ಹೊಸ ಪ್ರಯೋಗಗಳನ್ನು ಬೆರಸಿ ಒಂದು ಮಿಶ್ರಶೈಲಿಯನ್ನು ಬಳಸಿದ್ದಾನೆ. ಈ ಶತಕದಲ್ಲಿ ಸಂಸ್ಕೃತಸುಭಾಷಿತಗಳ ಛಾಯಾನುವಾದವಿದ್ದಂತೆ ಸ್ವತಂತ್ರವಾದ ಲೋಕಾನುಭವ, ಧರ್ಮವಿವೇಕ, ಮಾರ್ಮಿಕತೆ, ಕವಿತ್ವಶಕ್ತಿ ಇವು ಮೆಚ್ಚುವಂತಿವೆ. ಆದರೆ ಇದರ ಗುಣದೋಷಗಳಿಗೆ ಪಾಲ್ಕುರಿಕೆ ಸೋಮನು ಭಾಗಿಯಲ್ಲ.

೧೩ನೆಯ ಶ.ದ ಮೊದಲಲ್ಲಿದ್ದ ಪುಲಿಗೆರೆಯ ಆಚಣ್ಣನು ರೇಚಣಚಮೂಪನ ಇಷ್ಟಾನುಸಾರವಾಗಿ 'ವರ್ಧಮಾನಪುರಾಣ'ವನ್ನು ಬರೆದನು, ೨೪ನೆಯ ತೀರ್ಥಂಕರನ ಚರಿತ್ರೆಯನ್ನು ಕುರಿತು ಕನ್ನಡದಲ್ಲಿ ಇದೇ ಮೊದಲನೆಯ ಪ್ರತ್ಯೇಕ ಗ್ರಂಥ. ಇವನ ತಂದೆಯಾದ ಕೇಶವರಾಜ ಮತ್ತು ತಿಕ್ಕಣಚಾವಣರು ಸೇರಿ ಇದನ್ನು ಉಪಕ್ರಮಿಸಿ-

ದ್ದರು. ದೈವನಿಯೋಗದಿಂದ ಅದು ನಿಂತುಹೋಗಲು ಆಚಣ್ಣನು ೧೬ ಆಶ್ವಾಸಗಳಾಗಿ ಅದನ್ನು ಬರೆದು ಪೂರೈಸಿದನು. 'ಜಿನಮುನಿಯಾಚಣ್ಣ', 'ವಾಣೀವಲ್ಲಭ' ಎಂದು ಮುಂತಾಗಿ ತನ್ನನ್ನು ಹೊಗಳಿಕೊಂಡಿದ್ದಾನೆ. ಪಾರ್ಶ್ವನು 'ಜೈನಾಗಮ-ಗರ್ಭ, ಪ್ರಸನ್ನಗುಣ' ಎಂದು ಇವನನ್ನು ನುತಿಸಿ, ನವರಸದಲ್ಲಿ ಇತರ ರಸಕ್ಕೆ ಅವಕಾಶಕೊಡದೆ ಶಾಂತರಸಕ್ಕೆ ಪ್ರಾಶಸ್ತ್ಯಕೊಟ್ಟು 'ಪೃಥುಹೃದಯನಾದನೆಂತಾ-ಚಣ್ಣಂ' ಎಂದು ಹೇಳಿದ್ದಾನೆ. ಪ್ರಾಸಯಮಕಾದಿಶಬ್ದಾಲಂಕಾರಗಳಿಂದ ಇವನ ಗ್ರಂಥವು ಪ್ರೌಢವಾಗಿದೆ, ಪಾಂಡಿತ್ಯಪ್ರಚುರವಾಗಿದೆ. ಪಂಪರನ್ನರಿಂದ ಮೂಲ ಪ್ರೇರಣೆಯನ್ನು ಪಡೆದರೂ ಅಗ್ಗಳನ ತೂಕಕ್ಕೆ ಬರುವ ನಡುಬಗೆಯಲ್ಲಿ ಇವನು ಜೈನಪುರಾಣವನ್ನು ರಚಿಸಿದ್ದಾನೆ, ಅಗ್ಗಳನಿಗಿಂತ ಹೆಚ್ಚಾಗಿಯೆ ಶಬ್ದಾಲಂಕಾರದ ವಿದಗ್ಧತೆಯನ್ನು ತೋರಿಸಿದ್ದಾನೆ. 'ಜೈನಪುರಾಣದ ಈ ವಿದಗ್ಧಪರಂಪರೆ ಹಲವರಿಂದ ಮುನ್ನಡೆಯಿತೆಂಬುದನ್ನು ಮುಂದೆ ಕಾಣಬಹುದು. ಆದರೆ ಜನಸಂಮುಖತೆಯ ದೃಷ್ಟಿ ಬೆಳೆಯುತ್ತ ಹೋದಂತೆ ಈ ಪರಂಪರೆ ಹಿಂಜರಿಯಿತು. 'ಶ್ರೀಪದಾಶೀತಿ' ಎಂಬ ಆಚಣ್ಣನ ಇನ್ನೊಂದು ಕೃತಿಯಲ್ಲಿ ಪಂಚನಮಸ್ಕಾರದ ಮಹಿಮೆಯನ್ನು ಹೇಳುವ ೯೪ ಕಂದಗಳಿರುತ್ತವೆ. ಇದೇ ಕಾಲದವನಾದ ಕವಿಕಾಮನು 'ಶೃಂಗಾರ-ರತ್ನಾಕರ'ವೆಂಬ ರಸಶಾಸ್ತ್ರವಿಷಯಕವಾದ ಗ್ರಂಥವನ್ನು ಬರೆದಿದ್ದಾನೆ. ಅಂತಸ್ಥ-ಪ್ರಮಾಣಗಳನ್ನು ನೋಡಲಾಗಿ ಇವನು ಶಿವಭಕ್ತನಾದ ಬ್ರಾಹ್ಮಣಕವಿಯಾಗಿರ-ಬೇಕೆಂದು ತೋರುತ್ತದೆ. 'ವಿವಿಧಭೂಭೃದ್ದ್ವಾರಿ ಸಂಭಾವಿತಾಸ್ಪದದಿಂ' (೧-೧೦) ಎಂಬುದರಿಂದ ಅನೇಕ ರಾಜರಿಂದ ಇವನು ಮನ್ನಣೆಹೊಂದಿರಬೇಕು. ಇವನ ಈ ಗ್ರಂಥದಲ್ಲಿ ಸಾಮಾನ್ಯವಾಗಿ 'ಭಾವರಸಪ್ರಪಂಚ', ವಿಶೇಷವಾಗಿ ಶೃಂಗಾರರಸ ಇವುಗಳನ್ನು ಸಂಸ್ಕೃತರಸಶಾಸ್ತ್ರದ ನಿಕಟಪ್ರಭಾವದಿಂದ ನಿರೂಪಿಸಲಾಗಿದೆ. ರಸಶಾಸ್ತ್ರ-ವನ್ನು ಕುರಿತು ಕನ್ನಡದಲ್ಲಿ ಇದೇ ಮೊದಲನೆಯ ಪ್ರತ್ಯೇಕಗ್ರಂಥವಾಗಿದೆ. ಶಾಸ್ತ್ರ-ದೃಷ್ಟಿಯಿಂದ ಇದು ಬಹುಮಟ್ಟಿಗೆ ಪರತಂತ್ರವೇ ಆದರೂ ಯಾವೊಂದು ಗ್ರಂಥದ ತದ್ರೂಪವಾದ ಅನುವಾದವಲ್ಲ. ಅಂತಃಕರಣಚತುಷ್ಟಯದ ವಿವರಣೆ, ಅದರಿಂದ ಉಂಟಾಗುವ ರಸೋತ್ಪತ್ತಿಯ ವಿವೇಚನೆ (೧/೨೬, ೨೯) ಇದರಲ್ಲಿ ಅವನ ವೇಧಕ-ಬುದ್ಧಿ ಕಾಣುವಂತಿದೆ. ಶಾಂತರಸವು 'ಚೈರಂತನರಸಕಾರಶಾಸ್ತ್ರಸಂಮತಮಲ್ಲಂ', ಆದ್ದರಿಂದ ಅದನ್ನು ಕವಿಮುಖ್ಯರರಿದು ಬೆರಸಲಿ ಎಂದೂ 'ರಸಮೆ ಮೊದಲ್ ಕವಿತೆಗೆ' ಎಂದೂ ಅವನು ಹೇಳಿದ್ದರಲ್ಲಿ ಕನ್ನಡಕವಿಗಳ ಮತ್ತು ಲಾಕ್ಷಣಿಕರ ವಿಚಾರ-ಪರಂಪರೆಯ ಕುರುಹಿದೆ. ಕವಿಕಾಮನು 'ಮದನಾಗಮಸೂತ್ರಧಾರಿ'ಯೆಂದೂ 'ವಾಗ್ದೇವೀಲಬ್ಧವರಪ್ರಸಾದವಿಭವಂ' (೪/೯೦, ೯೧) ಎಂದೂ ತನ್ನನ್ನು ಬಣ್ಣಿಸಿ-ಕೊಂಡಿದ್ದಾನೆ. ಅವನ ಲಕ್ಷ್ಯಲಕ್ಷಣ ಪದ್ಯಗಳಲ್ಲಿ ಸಹಜಕವಿತ್ವವಿದೆ, ಲಲಿತಶೈಲಿ-ಯಿದೆ, ಶಾಸ್ತ್ರಜ್ಞಾನವಿದೆ. ಇದಕ್ಕೆ ಮೇಲಾದ ಸ್ತುತಿಯೆಲ್ಲ ಅತಿರಂಜಿತವೆನ್ನಬೇಕು. ಅವನೇ ಸೊಗಸಾಗಿ ಹೇಳಿದಂತೆ 'ಜಗದೊಳ್ ಸಂನಿದವಾದ ನಾಟ್ನುಡಿಗಳಂ

ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ, ಚಿತ್ರದೊಳ್ ಒಱಲ್ದು ಇರ್ದ-ರ್ಥಮಂ ಕೂಡೆ ನಾಲಗೆಯಿಂ ರಂಜಿಸುವೊಂದು ಬಿನ್ನಣಂ' ಇವೆರಡೂ ಗುಣಗಳು ಅವನಲ್ಲಿವೆಯೆಂದು ಒಪ್ಪಬೇಕು.

'ವೈಶ್ಯೋತ್ತಮ'ನೆಂಬುದರ ಹೊರತಾಗಿ ತನ್ನ ಬಗ್ಗೆ ಇನ್ನೇನನ್ನೂ ಹೇಳದ ಬಂಧುವರ್ಮನು 'ಹರಿವಂಶಾಭ್ಯುದಯ', 'ಜೀವಸಂಬೋಧನೆ' ಈ ಎರಡು ಗ್ರಂಥಗಳನ್ನು ಬರೆದಿದ್ದಾನೆ. 'ಹರಿವಂಶಾಭ್ಯುದಯ'ವು ನೇಮಿನಾಥನ ಚರಿತೆ-ಯನ್ನು ೧೪ ಆಶ್ವಾಸಗಳಲ್ಲಿ ಹೇಳಿದ ಚಂಪೂಕಾವ್ಯ. ೨-೩ ಕವಿಗಳು ಕನ್ನಡದಲ್ಲಿ ಈ ವಿಷಯವನ್ನು ಕುರಿತು ಪ್ರೌಢಕಾವ್ಯಗಳನ್ನು ಬರೆದಿದ್ದರು. ಆದ್ದರಿಂದ ವಿಷಯ, ಕಾವ್ಯರೂಪ, ಶೈಲಿ ಯಾವುದರಲ್ಲಿಯೂ ಇಲ್ಲಿ ಹೊಸತನವಿಲ್ಲ. ಚರ್ವಿತಚರ್ವಣವೇ ಆದಂತಿದೆ. ಆದರೂ ಕವಿಯ ಕಲ್ಪಕತೆ, ಲಾಲಿತ್ಯ ಸ್ತುತ್ಯವಾಗಿವೆ. 'ಜೀವ-ಸಂಬೋಧನೆ' ಮಾತ್ರ ಹಲವು ದೃಷ್ಟಿಯಿಂದ ಸ್ವತಂತ್ರ ನಿರ್ಮಾಣವೆನ್ನಿಸಿಕೊಳ್ಳು-ವಂತಿದೆ. ಇದರಲ್ಲಿ ಜೈನಮತದಲ್ಲಿಯ ದ್ವಾದಶ ಅನುಪ್ರೇಕ್ಷೆಗಳನ್ನು ಪ್ರೌಢವಾದ ಕಾವ್ಯರೂಪದಲ್ಲಿ ಆದರೂ ಜನಪ್ರಿಯಸರಣಿಯಲ್ಲಿ ನಿರೂಪಿಸಲಾಗಿದೆ. ಸ್ಥೂಲವಾಗಿ ಚಂಪೂರೂಪವನ್ನು ಸ್ವೀಕರಿಸಿದ್ದರೂ ಪ್ರತಿಯೊಂದು ಅಧಿಕಾರದಲ್ಲಿ ಒಂದು ಕಂದ-ವೃತ್ತ, ಆಮೇಲೆ ಒಂದು ಗದ್ಯ, ಕೊನೆಕೊನೆಗೆ ಒಂದು ರಗಳೆ ಈ ಅನುಕ್ರಮವು ನವೀನವಾಗಿದೆ. ಜೈನತತ್ವವನ್ನು ಪ್ರವಚನಕಾರನಂತೆ ವಿವರಿಸಿ ಕೀರ್ತನಕಾರನಂತೆ ಕಥೆಯಿಂದ ಅದನ್ನು ಉದಾಹರಿಸಿ ಹೇಳುವ ರೀತಿ ಪ್ರೌಢಕಾವ್ಯಮಾರ್ಗದಲ್ಲಿ ಹೊಸದಾಗಿದೆ. ನಯಸೇನನ 'ಧರ್ಮಾಮೃತ'ದಲ್ಲಿ ಕಥೆಗೆ ಪ್ರಾಮುಖ್ಯ ಬಂದಿದ್ದು ತತ್ವನಿರೂಪಣೆ ಗೌಣವಾಗಿದೆ. ಬ್ರಹ್ಮಶಿವನ 'ಸಮಯಪರೀಕ್ಷೆ'ಯಲ್ಲಿ ತತ್ವನಿರೂಪಣೆ, ವಿಡಂಬನೆಗಳು ಪ್ರಮುಖವಾಗಿವೆ. ತೀರ್ಥಂಕರಪುರಾಣಗಳಂತೂ ಮಹಾಪುರುಷ-ಜೀವನ, ಅದಕ್ಕೆ ಹಿನ್ನೆಲೆಯಾದ ಭವಾವಳಿ, ಮುನ್ನೆಲೆಯ ಪಂಚಕಲ್ಯಾಣಗಳಲ್ಲಿ ತೊಡಗಿದ್ದು ಅಲ್ಲಲ್ಲಿ ತತ್ವವನ್ನು ವಿವರಿಸುತ್ತವೆ.

'ಅಱಿವಿಲ್ಲದೆ ತಕ್ಕೆಡೆಯೊಳ್ ।
ತರಿಸಲ್ಲದೆ ತೊಡರ್ದು ನಮೆವ ಜೀವಕ್ಕೆಲ್ಲಂ ।
ನೆರೆಯೆ ಹಿತಮೆಂದು ಬಗೆದಿದ- ।
ನಱಿಪುವೆನಱಿವಂತು ಜೀವಸಂಬೋಧನೆಯಂ ॥'

ಎಂಬ ಬಂಧುವರ್ಮನ ಉದ್ದೇಶವು ಬಹುಮಟ್ಟಿಗೆ ನೆರವೇರಿದೆ. ಇದು ಮತೀಯ-ಗ್ರಂಥ, ಆದರೂ ವಿಷಯವಿನ್ಯಾಸ ರುಚಿಕರವಾಗಿದೆ. ಲೌಕಿಕವಾದ ಹೋಲಿಕೆ, ಗಾದೆಮಾತು, ಪಡೆನುಡಿಗಳನ್ನು ಸಮುಚಿತವಾಗಿ ಕವಿ ಬಳಸಿದ್ದಾನೆ. ನಯಸೇನನ ಹಾಗೆ ಅವುಗಳ ದುಂದುಗಾರಿಕೆಯಿಲ್ಲ. ಶೈಲಿಯಲ್ಲಿ ಅಚ್ಚಗನ್ನಡದ ಒಲವು ನಿಚ್ಚಳ-ವಾಗಿವೆ, ಪ್ರೌಢಿಮೆಯಲ್ಲಿ ಪ್ರಸನ್ನತೆಗೆ ಒಟ್ಟಿನಲ್ಲಿ ಕುಂದು ತಗಲಿಲ್ಲ.

೧೩ನೆಯ ಶ.ದ ಆರಂಭದಲ್ಲಿ ಜನ್ನನಿಗೆ ಹೆಚ್ಚು ಸಮೀಪಕಾಲದಲ್ಲಿ ಹುಟ್ಟಿದು ದೆಂದರೆ 'ಕುಸುಮಾವಳಿ'ಯೆಂಬ ಪ್ರಣಯರಮ್ಯ ಚಂಪೂಕಾವ್ಯ. ಇದರ ಕರ್ತೃವಿನ ಹೆಸರು ಸ್ಪಷ್ಟವಾಗಿ ಎಲ್ಲಿಯೂ ಉಲ್ಲೇಖವಾಗಿಲ್ಲ. ೧೫ನೆಯ ಆ.ದಲ್ಲಿಯ 'ಕವಿಕಮಳಜಸೂಕ್ತಿಸುಧಾರ್ಣವಸೋಮಂ **ದೇವಕವಿ**' ಎಂಬ ಉಕ್ತಿಯ ಮೇಲಿಂದ 'ದೇವಕವಿ' ಎಂದಿವನ ಹೆಸರೆಂದು ಊಹಿಸಲಾಗಿದೆ. ಈ ಊಹೆ ಸರಿಯೆಂದು ತೋರುತ್ತದೆ. ಆದರೆ ತನಗೆ ಆಶ್ರಯದಾತನಾದ ಚಿಕ್ಕರಾಜಚಮೂಪನನ್ನು ಪೀಠಿಕೆ ಯಲ್ಲಿ ಹೊಗಳಿದ ತರುವಾಯದಲ್ಲಿಯೆ

'ಮನಮಂ ಸತ್ವಾಕುಳ ಶ್ರೀಗುರವುನಚಳಿತಶ್ರೀಗೆ ಹಸ್ತಾಬ್ಜಮಂ ಪಾ- |
ವನದಾ(ನ)ಶ್ರೀಗೆ ದೋರ್ಮಂಡಲಮನುರುಜಯಶ್ರೀಗೆ ತಾನಿಂಬುಗೊಟ್ಟೊ-
ರ್ಬನವಾದಾವದ್ಯಶಃಶ್ರೀಗೆಡೆಗೊಡದೆ ದಿಶಾರೂಢಿಯಂ ಮಾಡಿಯುಂ **ಪೆಂ-** |
ಪೆನೆ(ಪೆಂಪಿನೆ?)ಯುಸುರ್ದಂ ಸಮಂತು ಕುಸುಮಾವಳಿಯೆಂಬ
ಮಹಾಪ್ರಬಂಧಮಂ ||

ಎಂದು ಕವಿ ಹೇಳಿದ್ದಾನೆ. ಈ ಪದ್ಯದಲ್ಲಿ ವರ್ಣಿತನಾದವನು ಅದೇ ಚಮೂಪನಾಗಿದ್ದ ಕಾರಣ ಅವನೇ ಕುಸುಮಾವಳಿಯನ್ನು ಬರೆದಿರಬಹುದೇ ಎಂಬ ಪ್ರಶ್ನೆಯೇಳುತ್ತದೆ. ನಮಗೆ ತೋರುವಂತೆ ಅವನೇ ಕರ್ತೃವೆಂಬ ಆಭಾಸವನ್ನು ಹುಟ್ಟಿಸುವ ಉದ್ದೇಶವಿರ ಬೇಕು. ತನ್ನ ಸ್ವಂತ ಹೆಸರನ್ನು ಮುಂದೆ ಒಂದು ಶ್ಲೇಷೋಪಮೆಯಲ್ಲಿ ಸೂಚಿಸಿದ್ದು ಇದಕ್ಕೆ ಗಮಕವಾಗಿದೆ. 'ಕುಸುಮಾವಳಿ' ಕನ್ನಡಕ್ಕೆ ಎರಡನೆಯ 'ಲೀಲಾವತಿ'ಯೆ ಸರಿ. ಅದೇ ಪ್ರಣಯಕಥೆ ಇಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಮೈದೋರಿದೆ. 'ಲೀಲಾವತಿ'ಯಲ್ಲಿ ಸ್ವಪ್ನದರ್ಶನದಿಂದ ಉಂಟಾಗಿದ್ದರೆ ಇಲ್ಲಿ ಚಿತ್ರದರ್ಶನದಿಂದ ಪ್ರಥಮಪ್ರಣಯವು ಉಂಟಾಗಿದೆ. ಕಥಾನಕದ ಮೇಲೆ ಸುಬಂಧುವಿನ 'ವಾಸವ ದತ್ತೆ'ಯ ಪ್ರಭಾವವೂ ಆಗಿದೆ. 'ಲೀಲಾವತಿ' ಬಳ್ಳಿಯಾಗಿ ಮಾರ್ಪಟ್ಟಿದ್ದ ಸುಬಂಧುವಿನ ಪ್ರಭಾವದಿಂದ ಇಲ್ಲಿಯ 'ಕುಸುಮಾವಳಿ' ಅಮೃತಶಿಲಾಪ್ರತಿಮೆ ಯಾಗಿದ್ದಾಳೆ. ಕಥನಕ್ರಮ, ವಿವರಗಳಲ್ಲಿ ಕೆಲಮಟ್ಟಿನ ಸ್ವಂತಿಕೆಯಿದೆ. ಉಳಿದೆಲ್ಲ ಅಂಶಗಳಲ್ಲಿ ಕಾವ್ಯವು ಮಧ್ಯಮಗುಣದ ಸಾಂಪ್ರದಾಯಿಕ ಕಾವ್ಯದ ಮಾದರಿ ಸ್ವಭಾವೋಕ್ತಿ, ಚಮತ್ಕೃತಿ, ನಿರರ್ಗಳ ಬಂಧ ಇವೆಲ್ಲಕ್ಕೂ ಕಾವ್ಯದಲ್ಲಿ ಬೇಕಾದಷ್ಟು ನಿದರ್ಶನಗಳಿವೆ.

ಜನ್ನನಿಗೆ ಸಮಕಾಲೀನನಾದ **ಪಾರ್ಶ್ವಪಂಡಿತನು** ಕ್ರಿ.ಶ. ೧೨೨೨ರಲ್ಲಿ 'ಪಾರ್ಶ್ವನಾಥಪುರಾಣ'ವೆಂಬ ಚಂಪೂಕಾವ್ಯವನ್ನು ಬರೆದನು. ರಟ್ಟವಂಶದ ೪ನೆಯ ಕಾರ್ತವೀರ್ಯರಾಜನ ಆಸ್ಥಾನಕವಿಯಾಗಿ 'ಕವಿಕುಳತಿಳಕ' ಎಂದು ಬಿರುದುಪಡೆದ ೨೩ನೆಯ ತೀರ್ಥಂಕರನಾದ ಪಾರ್ಶ್ವನಾಥನ ಚರಿತೆಯನ್ನು ಕನ್ನಡಕ್ಕೆ ಮೊದಲನೆಯ

ವಾಗಿ ಒದವಿಸಿದನು. 'ಪಂಪನ ಸುಣ್ಪುವೆತ್ತ ನುಡಿ ಪೊನ್ನನ ಬಿನ್ನಣದೋಜೆ.... ಪರಿಕಿಪ್ಪೊಡೆ ಈ ಕೃತಿಯೊಳುಂಟು' ಎಂದು ತನ್ನ ಮೇಲಿನ ಜೈನಚಂಪೂಪರಂಪರೆಯ ಧರ್ಚಸ್ಸನ್ನು ಅವನು ಒಪ್ಪಿಕೊಂಡಿದ್ದಾನೆ. ಈ ಕಾವ್ಯದ ಕಥನಸರಣಿಯಲ್ಲಿ ನಾಗ-ಚಂದ್ರನ ಪ್ರಸಾದಗುಣವಿದೆ, ಪರಿಶುದ್ಧತೆಯಿದೆ. ಈ ಅರ್ಥದಲ್ಲಿ 'ಒಗಂಟುವೇಳ್ವ ಕವಿಯುಂ ಕವಿಯೇ' ಎಂಬಲ್ಲಿಯ ದೃಷ್ಟಿ ಸಫಲವಾಗಿದೆ. ಆದರೆ ವರ್ಣನೆಗಳಲ್ಲಿ ಸಂಸ್ಕೃತಪ್ರಚುರತೆ, ಅಲಂಕಾರಗಳ ವಿದಗ್ಧತೆ, ಶೈಲಿಯ ಪ್ರೌಢತೆ ಇವು ಅವನ ಆ ಪ್ರಶ್ನೆಯನ್ನು ಅವನಿಗೆ ಕೇಳಲು ನಮ್ಮನ್ನು ಪ್ರೇರಿಸುತ್ತವೆ. ಪಾರ್ಶ್ವನು ಒಳ್ಳೆಯ ಪಂಡಿತಕವಿ. 'ಕವಿಕುಳತಿಳಕ' ಎಂಬುದು ಮಾತ್ರ ಭಟ್ಟಂಗಿಬಿರುದು.

೧೯. ಜನ್ನ

ಆದಿಪಂಪನಂತೆ ಸರ್ವಂಕಷವಾದ ಮತ್ತು ಪ್ರಫುಲ್ಲವಾದ ವ್ಯಕ್ತಿತ್ವವುಳ್ಳವನು ಈ ಯುಗದ ಜನ್ನನು. ಸುಮನೋಬಾಣನು ಇವನ ತಂದೆ, ೨ನೆಯ ನಾಗವರ್ಮನು ಉಪಾಧ್ಯಾಯನು, ಮಲ್ಲಿಕಾರ್ಜುನ ಭಾವ, ಕೇಶಿರಾಜ ಸೋದರಳಿಯ—ಇಂಥ ಬಾಂಧವ್ಯದ ಪರಿಸರದಲ್ಲಿ ಬೆಳೆದು ಹೊಯ್ಸಳನರಸಿಂಹನೋಲಗದಲ್ಲಿ 'ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ' (೧–೫೬ ಅ.ಪು.) ಆಗಿ 'ನಾಟ್ಯಪ್ರಭು-ಜನಾರ್ದನದೇವ' ಎಂದು ಬಿರುದಾಂತ ಸವ್ಯಸಾಚಿ; 'ಮನ್ನಿಸಿ ಬಲ್ಲಾಳಂ ಕುಡೆ। ಜನ್ನಂ ಕವಿಚಕ್ರವರ್ತಿವೆಸರಂ ಪಡೆದಂ' (೧–೨೧ ಯ.ಚ.) ಎಂಬಲ್ಲಿ ಹೇಳಿದಂತೆ ವೀರಬಲ್ಲಾಳನಿಂದ ಕವಿಚಕ್ರವರ್ತಿ ಎಂಬ ಹೆಸರನ್ನು ಪಡೆದವನು. ಇವನ ಧರ್ಮ-ಗುರುಗಳು ರಾಮಚಂದ್ರದೇವಮುನೀಂದ್ರರು. 'ಚತುರ್ವಿಧಪಂಡಿತ' (೧–೧೮ ಯ.ಚ.), 'ನವವೈಯಾಕರಣಂ ತರ್ಕವಿನೋದಂ ಭರತಸುರತ ಶಾಸ್ತ್ರವಿಳಾಸಂ' (೧–೧೯ ಯ.ಚ.) ಎಂದು ತನ್ನನ್ನು ಕೈವಾರಿಸಿದ್ದಾನೆ. 'ಚದುರನಿಧಿ ಚಲದ ನೆಲೆ ಚಾಗದ ಸಾಗರಂ ಅಣ್ಮನಾಗರಂ' (೧–೨೦ ಯ.ಚ.) ಎಂದೂ ಹೇಳಿಕೊಂಡಿದ್ದಾನೆ. 'ತಾನಿತ್ತ ಕೆಯ್ಯಲ್ಲದೆ ಒಡ್ಡಿದ ಕೆಯ್ಯಲ್ಲದ ಪೆಂಪು' (೧೪–೮೦ ಅ.ಪು.) ಎಂದೂ ಹೇಳಿದ್ದಾನೆ. ಇದಕ್ಕನುಗುಣವಾಗಿ ಜೈನಮಂದಿರಗಳನ್ನು ಅವನು ಕಟ್ಟಿಸಿದ್ದಾನೆ. ಈ ಆತ್ಮನಿವೇದನದಲ್ಲಿ ಅತಿಶಯೋಕ್ತಿಯ ಅಂಶವಿರಬಹುದಾದರೂ ಒಟ್ಟಿನಲ್ಲಿ ಜನ್ನನದು ತುಂಬುಬಾಳು, ವಿವಿಧಶಕ್ತಿಗಳಿಂದ ಸಮೃದ್ಧವಾದ ತೃಪ್ತಜೀವನವೆಂದು ಊಹಿಸಲು ಅಡ್ಡಿಯಿಲ್ಲ. ಮೊದಮೊದಲು ಹಲವು ಶಾಸನಗಳನ್ನು ಬರೆದು ಆಮೇಲೆ 'ಯಶೋಧರಚರಿತೆ'ಯನ್ನು ೧೨೦೯ರಲ್ಲಿ, 'ಅನಂತನಾಥಪುರಾಣ'ವನ್ನು ೧೨೩೦ರಲ್ಲಿ ಬರೆದು ಮುಗಿಸಿದನು. 'ಅನುಭವಮುಕುರ' ಎಂಬ ವಿವಿಧ ವೃತ್ತಗಳಲ್ಲಿಯ ಲಘು-ಕಾವ್ಯದಲ್ಲಿ ರತಿಲೀಲೆಗೆ ಸಂಬಂಧಿಸಿದ ವಿಷಯಗಳನ್ನು ವರ್ಣಿಸಿದ್ದಾನೆ. 'ಸ್ಮರತಂತ್ರ'

ಎಂಬುದು ಇದೇ ಎಂದೂ ಇದು ಉಪಲಬ್ಧವಾಗಿದೆಯೆಂದೂ ಅಭಿಪ್ರಾಯ ವ್ಯಕ್ತವಾಗಿದೆ.[1]

'ಯಶೋಧರಚರಿತೆ' ಸು. ೩೧೦ ಪದ್ಯಗಳನ್ನು ನಾಲ್ಕು ಅವತಾರಗಳಲ್ಲಿ ಹಂಚಿಕೊಂಡು ಸಣ್ಣ ಗಾತ್ರದ ಕಾವ್ಯ. ಪ್ರತಿಯವತಾರದ ಕೊನೆಯ ಕೆಲವು ವೃತ್ತ ಗಳನ್ನುಳಿದು ಸು. ೩೦೦ ಕಂದಪದ್ಯಗಳಿವೆ. ಈ ಕಾವ್ಯದ ಪಡಿಯಚ್ಚು ಕನ್ನಡಕ್ಕೆ ಹೊಸದು. 'ಕವಿರಾಜಮಾರ್ಗ'ದಲ್ಲಿಯ 'ಬೆದಂಡೆಗಬ್ಬ', 'ಕಾವ್ಯಾವಲೋಕನ' ದಲ್ಲಿಯ 'ಮೆಲ್ವಾಡು' ಇವುಗಳಲ್ಲಿ ಭೇದವನ್ನು ಕಡೆಗಣಿಸಿ ಸಮಾನವಾದ ಲಕ್ಷಣ ಗಳನ್ನು ಮನದಂದರೆ, 'ಯಶೋಧರಚರಿತೆ' ಅವಕ್ಕೆ ಸಮಿಾಪವೆಂದು ತೋರಿದರೂ ಸಮಾನವಲ್ಲ. ಅವುಗಳಲ್ಲಿ ಇಲ್ಲಿಯ ಕಂದಭೂಯಿಷ್ಠತೆಯಿಲ್ಲ. ಅವುಗಳಲ್ಲಿದ್ದ ಜಾ ಇಲ್ಲಿಲ್ಲ. ಈ ಪರಿಮಿತ ಮತ್ತು ನವೀನ ರೂಪದಲ್ಲಿ ಜನ್ನನು ಜೈನಪರಂಪರೆಯಲ್ಲಿ ರೂಢಮೂಲವಾದ ಕಥೆಯನ್ನು ಹೇಳಿದ್ದಾನೆ. ತನ್ನ 'ಸರಸಪದಪದ್ಧತಿಯೊಳ್' ಸಂಸ್ಕೃತ, ಪ್ರಾಕೃತ, ಕನ್ನಡಗಳಲ್ಲಿ ಈ ಕೃತಿಮಾಡಿದವರು ಕೈಗೊಡಲಿ ಎಂದು ಬೇಡಿದ್ದಾನೆ(೧–೫). 'ಇತಿಹಾಸವೆಂಬ ವಿಮಳಾಮೃತ ವಾರ್ಧಿಯೊಳೊಗೆದ ಕಲ್ಪ ಕುಜದಂತೆ ರಸಾನ್ವಿತಮಾದೀ ಕೃತಿ' (೧–೨೫) ಎಂದು ಎದೆತಟ್ಟಿಕೊಂಡಿದ್ದಾನೆ. ಉಪಲಬ್ಧ ಆಕರಗಳನ್ನು ಪರಿಕಿಸಿದರೆ ಸಂಸ್ಕೃತ–ಪ್ರಾಕೃತಮೂಲಗಳು ತಿಳಿದಿವೆ. ಕನ್ನಡದ್ದು ದೊರೆತಿಲ್ಲ. ಜನ್ನನ ತರುವಾಯದ ಕನ್ನಡ ಯಶೋಧರಚರಿತೆಗಳು ದೊರೆತಿವೆ. ಜನ್ನನಿಗೆ ಮುಂಚಿತವಾದುದು ದೊರೆಯದೆ ಈ ಕಾವ್ಯದ ತುಲನಾತ್ಮಕ ವಿಮರ್ಶೆ ಅಪೂರ್ಣವಾಗಿ ತೋರಿದರೆ ತಪ್ಪಲ್ಲ. ದೊರೆತ ಆಕರಗಳಲ್ಲಿ ವಾದಿರಾಜನ ಸಂಸ್ಕೃತ ಯಶೋಧರಚರಿತೆ ಈ ಕೃತಿಗೆ ಪ್ರತ್ಯಕ್ಷಮೂಲವೆಂದು ಸದ್ಯಕ್ಕೆ ತಿಳಿಯ ಬಹುದು. ಯಶೋಧರರಾಜನ ಹೆಂಡತಿ ಅಮೃತಮತಿ ಅರಮನೆಯ ಮಾವುತನ ಹಾಡು ಕೇಳಿ ಮನಸೋತು ಅವನ ನಲ್ಲೆಯಾದುದು ಈ ಕಥೆಯ ವಿಷಬೀಜ. ಇದು ಹೆಮ್ಮರವಾಗಿ ಬೆಳೆದು ಸಂಕಲ್ಪಹಿಂಸೆಯ ಫಲವಾಗಿ ಯಶೋಧರ ಮತ್ತು ಅವನ ತಾಯಿ ಚಂದ್ರಮತಿಯರು ಅನೇಕ ಜನ್ಮಗಳಲ್ಲಿ ಪಶುಪಕ್ಷಿಗಳಾಗುತ್ತಾರೆ, ಕೊನೆಯ ಜನ್ಮದಲ್ಲಿ ಅಹಿಂಸೆಯ ವ್ರತತೊಟ್ಟು ಯಶೋಧರನ ಮಗನಾದ ಯಶೋಮತಿಯ ಹೊಟ್ಟೆಯಲ್ಲಿ ಅಭಯರುಚಿ–ಅಭಯಮತಿಗಳಾಗಿ ಹುಟ್ಟಿ ಬಾಲ್ಯದಲ್ಲಿಯೆ ಜೈನದೀಕ್ಷೆ ವಹಿಸುತ್ತಾರೆ, ಅಮೃತಮತಿ ನರಕ ಸೇರುತ್ತಾಳೆ. ಚಂಡಮಾರಿಗೆ ಪ್ರಾಣಬಲಿಯನ್ನು ಕೊಡುತ್ತಿದ್ದ ಮಾರಿದತ್ತರಾಜನು ಬಲಿಗೆಂದೊಡ್ಡಿದ ಅಭಯರುಚಿ–ಅಭಯಮತಿಯರು ಹೇಳಿದ ಮೇಲಿನ ಕಥೆಯಿಂದ ಮನಸ್ಸು ತಿರುಗಿ ಹಿಂಸೆಯನ್ನು ತೊರೆದು ದೀಕ್ಷೆವಹಿಸು ತ್ತಾನೆ, ಸದ್ಗತಿಯನ್ನು ಹೊಂದುತ್ತಾನೆ. ಹಿಂಸೆಯ ದುಷ್ಫಲ, ಅಹಿಂಸೆಯ ಸತ್ಫಲ ವನ್ನು ಎತ್ತಿ ತೋರಿ ಜೀವದಯೆಯ ಮಹತ್ವವನ್ನು ತಿಳಿಸಿಕೊಡುವ ಜೈನಧಾರ್ಮಿ

---

1 ತೀ. ನಂ. ಶ್ರೀಕಂಠಯ್ಯ: ಕಾವ್ಯಸಮಿಾಕ್ಷೆ, ಪು. ೫೬.

ಕಥೆಯಿದು. ಮತಪರಂಪರೆಯಲ್ಲಿ ರೂಢವಾದ ಈ ಕಥೆಯನ್ನು ಜನ್ನನು ಇದ್ದಂತೆ ಸ್ವೀಕರಿಸಿದ್ದಾನೆ. ಆದರೆ ಅದನ್ನು ನಿರೂಪಿಸುವಲ್ಲಿ ತನ್ನ ದೃಷ್ಟಿವಿಶೇಷವನ್ನೂ ಕಲ್ಪನಾವಿಲಾಸವನ್ನೂ ಮೆರೆದಿದ್ದಾನೆ. ವಾದಿರಾಜನ ಸಂಸ್ಕೃತಮೂಲವನ್ನು ಅನುಸರಿಸಿಯೂ ಅನುಕರಿಸಿಲ್ಲ, ತನ್ನ ಕಲೆಯ ಕುಂಚದಿಂದ ಮೂಲದ ಕಾಂತಿಯನ್ನು ಹೆಚ್ಚಿಸಿದ್ದಾನೆ. 'ಒಟ್ಟಿನಲ್ಲಿ ಜನ್ನನ ಕನ್ನಡಕೃತಿ ಸಂಸ್ಕೃತಕೃತಿಯ ಸರಳಾನುವಾದ ಎನ್ನಬಹುದು.'[1] ಸರಳಾನುವಾದವೆನ್ನುವುದಕ್ಕಿಂತ ವಿರಳಾನುವಾದ, ಉಜ್ವಲವಾದ ಪ್ರತಿರೂಪಣವೆನ್ನುವುದು ಲೇಸು. 'ಜನ್ನನ ಕೃತಿ ವಾದಿರಾಜನ ಕೃತಿಯ ಅನುವಾದವೆಂದ ಮಾತ್ರಕ್ಕೆ ಕನ್ನಡದ್ದು ಸಂಸ್ಕೃತದ ಪಡಿಯಚ್ಚೆಂದಲ್ಲ; ಕನ್ನಡಕವಿಯ ಕೈವಾಡವಿಲ್ಲವೆಂದಲ್ಲ. ಜನ್ನಕವಿ ಎಡೆಯರಿತು ಕೆಲವನ್ನು ಹಿಗ್ಗಿಸಿದ್ದಾನೆ, ಕೆಲವನ್ನು ಅಡಕಿಸಿದ್ದಾನೆ. ಮೂಲದಲ್ಲಿ ಅನಗತ್ಯವೆಂದು ತೋರಿದ ಒಂದೆರಡು ಅಂಶಗಳನ್ನು ಬಿಟ್ಟಿದ್ದಾನೆ. ಭಾವಪುಷ್ಟಿಗಾಗಿಯೂ, ಅರ್ಥಪ್ರಸಾದಕ್ಕಾಗಿಯೂ ಮೂಲದಲ್ಲಿಲ್ಲದ್ದನ್ನು ಹೊಸದಾಗಿ ಸೇರಿಸಿದ್ದಾನೆ.'[2] ಇದು ಸರಿಯಾದುದೇ. ಆದರೆ ಈ ಬಗೆಯ ಅನುವಾದಕ್ಕೆ ಪ್ರೇರಕತತ್ವವಾಗಿ ಇದ್ದುದು ಮೂಲವನ್ನು ಉತ್ಕಟವಾದ ರಸಚಿತ್ರವಾಗಿಸಿ ತೋರಿಸಬೇಕೆಂಬ ಉನ್ನತವಾದ ಸೌಂದರ್ಯಪ್ರಜ್ಞೆ, ಸೂಕ್ಷ್ಮವಾದ ಔಚಿತ್ಯದೃಷ್ಟಿ. ಇಲ್ಲದಿದ್ದರೆ ಈ ಕಥೆ ನೀತಿಬೋಧಕವಾದ ಸಾಧಾರಣಕಲೆಯ ಮತೀಯಕಥೆಯಾಗುತ್ತಿತ್ತು. ಇದಿದ್ದ ಮೂಲಕವೇ ಇದು ನೀತಿಯನ್ನು ಬೋಧಿಸಿದರೂ ಅಸಾಧಾರಣಕಲೆಯ ಮತೀಯ ಮತ್ತು ಮತಾತೀತ ಕಥೆಯಾಗಿದೆ. ಜನ್ನನ ಕೈವಾಡಕ್ಕೆ ಉದಾಹರಣೆಯಾಗಿ ಒಂದೆರಡನ್ನು ನೋಡಬಹುದು. ತಾನೊಲಿದ ಮಾವುತನು ಅತ್ಯಂತ ಕುರೂಪಿಯೆಂದು ಗೊತ್ತಾದರೂ 'ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್' (ಯ.ಚ. ೨-೪೨) ಎಂದು ಅಮೃತಮತಿ ಸಾರುತ್ತಾಳೆ. ಮೂಲಕ್ಕನುಸರಿಸಿ 'ಇಂದೆನಗಾತನೆ ಕುಲದೈವಂ ಕಾಮದೇವನಿಂದ್ರಂ ಚಂದ್ರಂ' (೨-೪೩) ಎಂದು ಹೇಳಿದ್ದರೂ ಮೇಲಿನದು ಮಾತ್ರ ಮೂಲದಲ್ಲಿಲ್ಲ. 'ಒಲಿದವನೇ ಚೆಲುವನು' ಎಂಬ ಭಾವದೊಡನೆ 'ಚೆಲುವಿಕೆಯಿಲ್ಲದಿರುವುದೇ ಒಲಿದವನಿಗೆ ಲೇಸು' ಎಂಬ ಭಾವಕ್ಕೆ ಹೋಗಿ ಮುಟ್ಟಿದ ಅಮೃತಮತಿ ಎಷ್ಟು ಗಾಢಮೋಹದಿಂದ ಕೂಡಿದ್ದಳೆಂಬುದನ್ನು ಇಲ್ಲಿ ಕಾಣುತ್ತೇವೆ. ಯಶೋಧರನು ತಿಳಿಯದೆ ಬೆಂಬತ್ತಿಹೋಗಿ ಅವಳ ಬೇಟವನ್ನು ನೋಡಿ ಕೊಲ್ಲಲೆತ್ತಿದ ಕತ್ತಿಯನ್ನು ಹಿಂದೆಗೆದು ಬಂದ ಸಂನಿವೇಶವು ಮೂಲದಂತೆ ಇದ್ದರೂ ಅದರ ನಿರೂಪಣೆಯಲ್ಲಿ ಜನ್ನನ ಕಲಾದೃಷ್ಟಿ ಫಲಿಸಿದೆ. 'ತ್ವಂ ಜೀವಿತವ್ಯಂ ಮಮ ಯಾವದಾಯುಃ ಅನಾದರಸ್ತ್ವಯ್ಯಥ ಕಿಂ ಮಮ ಸ್ಯಾತ್' ಎಂಬ ಮೂಲವನ್ನು ಅನುವಾದಿಸುತ್ತ 'ನಿನ್ನುಮಂ ಬಿಡೊಡೆ ಸಾವವಳೆನಗೆ ಮಿಕ್ಕಗಂಡರ್

---

1 ಕೆ. ವಿ. ರಾಘವಾಚಾರ್: ಯಶೋಧರಚರಿತೆಯ ಸಂಗ್ರಹದ ಪೀಠಿಕೆ, ಪು. ೩೫.

2 ಅದೇ, ಪು. ೩೬.

ಸವಸೋದರರೆಂದು ತಿಳಿಪಿದಳ್ ನಂಬುಗೆಯಂ' (೨-೫೨) ಎಂದು ಜನ್ನನು ಬರೆದಿದ್ದಾನೆ. ಇದರಲ್ಲಿ ಎಂಥ ನಾಟ್ಯಮಯವಾದ ವ್ಯಂಗ್ಯವಿದೆ! ಮಾಡಿಕೊಂಡ ಗಂಡನ ಕಿವಿಯಲ್ಲಿ ಕಾದ ಸೀಸನ್ನು ಸುರಿಯುವಂಥ, ಜಾರಿ ಜಾರೆಯಾದ ಹೆಂಡತಿಯ ಬಾಯಲ್ಲಿ ಸಹಜವಾಗಿ ಬಂದಂಥ ನುಡಿಕಿಡಿಯಿದು! 'ಆಗಳ್ ಬಾಳ್ ನಿಮಿರ್ದುದು ತೋಳ್ ತೂಗಿದುದು ಮನಂ ಕನಲ್ದುದು ಇರ್ವರುಮಂ ಎರಡೊಬ್ಬಾಗಂ ಮಾಡಲ್, ಧೃತಿ ಬಂದಾಗಳೆ ಮಾಣೆಂಬ ತೆಱದೆ ಪೇಸಿದನರಸಂ' (೨-೫೩). ಈ ಪದ್ಯದಲ್ಲಿಯ ಕ್ರೋಧರಸ, ಅದನ್ನು ತಡೆದ ಧೃತಿ ಅಡಕವಾದ ಚಿತ್ರವಾಗಿ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತವೆ. ಅಂತೇ 'ಜನ್ನನು ತನ್ನ ಕಾವ್ಯದ ಪ್ರತಿಯೊಂದು ಪದ್ಯವನ್ನೂ ವಾದಿರಾಜನ ಕಾವ್ಯದ ಪದ್ಯಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದರೂ ತಾನು ಮುಟ್ಟಿದುದೆಲ್ಲವನ್ನೂ ಚಿನ್ನವನ್ನಾಗಿ ಮಾಡಿರುವನು'[1] ಎಂಬ ಹೇಳಿಕೆ ಯಥಾರ್ಥವಾಗಿದೆ.

ಕಾವ್ಯಧರ್ಮ ಮತ್ತು ಧರ್ಮವನ್ನು ಸಮನ್ವಯಗೊಳಿಸಬೇಕೆಂಬ ಹಂಬಲು ಆದಿಪಂಪನಿಂದ ಮೊದಲಾಗಿ ಕನ್ನಡಸಾಹಿತ್ಯದಲ್ಲಿ ಮುಂದೆಲ್ಲ ಪ್ರಕಟವಾಗಿದೆ. ಸಮನ್ವಯಸಿದ್ಧಿ ಬೇರೆ ಬೇರೆಯಾಗಿದ್ದರೂ ಹಂಬಲೊಂದೇ. ಜನ್ನನು ತನ್ನ 'ಯಶೋಧರಚರಿತೆ'ಯಲ್ಲಿ ಈ ಸಿದ್ಧಿಯನ್ನು ಬಹುಮಟ್ಟಿಗೆ ಪಡೆದಿದ್ದಾನೆ. ಕಾವ್ಯಧರ್ಮವನ್ನು ನಿಷ್ಠೆಯಿಂದ ಪಾಲಿಸಿ ಜೈನಧರ್ಮದ ತತ್ವವನ್ನು ಬೋಧಿಸಿದ್ದಾನೆ, ವಿಶ್ವಧರ್ಮದ ರಹಸ್ಯವನ್ನು ಸೂಚಿಸಿದ್ದಾನೆ. ಈ ಹೇಳಿಕೆಯ ಸತ್ಯತೆಯನ್ನು ಕೆಣಕುವ ಸಂಶಯಗಳು ಇಲ್ಲದಿಲ್ಲ. ಈ ಕಥಾನಕದ ದುರಂತಪರಂಪರೆಗೆ ಕಾರಣವಾದುದು ಅಮೃತಮತಿಯ ಕುರುಡುಮೋಹ. ಆದರೆ 'ಒಂದು ಗಳಿಗೆಯ ಗಾನಕ್ಕೆ ಬಲಿಬೀಳುವಷ್ಟು ಹಗುರವಾಗಿತ್ತೆ ಅವಳ ನಿಡುಬಾಳಿನೊಲವು?'[2] ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಸಂದರ್ಭದಲ್ಲಿ ಬೇಕಾಗಿದ್ದ ಮಾನಸಿಕವಿಶ್ಲೇಷಣವು ಸ್ಫುಟವಾಗಿಲ್ಲವೆಂಬುದು ನಿಜ. ಆದರೆ ಈ ಕಥೆಯನ್ನು ಇಡಿಯಾಗಿ ಜನ್ನನು ನೋಡಿದ ದೃಷ್ಟಿಯನ್ನು ಅರಿತುಕೊಂಡರೆ ಅದನ್ನು ನಾವು ಅರ್ಥಮಾಡಿಕೊಳ್ಳಬಹುದು. ಕಾಮವೆಂಬುದು ಅದಮ್ಯವಾದ ಶಕ್ತಿ, ಅದ್ಭುತವೇಗದಿಂದ ಆಕ್ರಮಿಸುವ ಶಕ್ತಿ. ಅದಕ್ಕೆ ದುರ್ವಿಧಿಯ ಸಹಾಯವೊಂದು ದೊರೆತರೆ ಬೇಕಾದ ಅನಾಹುತವನ್ನದು ಎಸಗಬಲ್ಲುದು. ಅಂತೇ ಅಮೃತಮತಿ ಎರಡು ಶಕ್ತಿಗಳ ಸುಂಟರಗಾಳಿಯಲ್ಲಿ ಸಿಕ್ಕಿದ ತರಗೆಲೆಯಾದಳು. ಆಮೇಲೆ ಅವಳ ದುಷ್ಕಾಮವೇ ಅವಳ ತರ್ಕವಾಯಿತು. ಹೀಗೆ ಜನ್ನನ ಆಶಯವಿರಬೇಕೆಂಬುದನ್ನು 'ಮನಸಿಜನ ಮಾಯೆ ವಿಧಿವಿಲಸನದ ನೆರಂಬಡೆಯೆ ಕೊಂದ

---

1 ಡಿ. ಎಲ್. ನರಸಿಂಹಾಚಾರ್: ಜನ್ನನೂ ವಾದಿರಾಜನೂ (ಕ.ಸಾ.ಪ., ೧೫-೪, ಪು. ೨೯೮.)

2 ಕೆ. ವಿ. ರಾಘವಾಚಾರ್: ಯಶೋಧರಚರಿತೆ ಸಂಗ್ರಹ, ಪೀಠಿಕೆ, ಪು. ೪೭.

ಕೂಗದೆ ನರರಂ' (೨–೬೧) ಎಂಬ ಮಾರ್ಮಿಕವಾದ ಅವನ ಉಕ್ತಿಯಿಂದ ಊಹಿಸಬಹುದು. ಇಷ್ಟಾದರೂ ಈ ಕಥಾಭಾಗದ ವಿಷಯದಲ್ಲಿ ಅತೃಪ್ತಿ ಉಳಿದರೆ ಅದು ಸಹಜ. ಜನ್ನನು ವಿದ್ಯುದ್ವೇಗದ ಕಥನತಂತ್ರವನ್ನು ಅನುಸರಿಸಿದ್ದ ಕಾರಣ ಇನ್ನಿಷ್ಟು ಮನವರಿಕೆಯಾಗುವಂತೆ ಈ ಭಾಗವನ್ನು ಚಿತ್ರಿಸಿಲ್ಲವೆಂಬುದನ್ನು ಒಪ್ಪಬೇಕು. ಇದರಂತೆ ತಾಯಿಯ ಮಾತನ್ನು ಕೇಳಿ ಹಿಟ್ಟಿನ ಕೋಳಿಯ ಬಲಿಕೊಡಲು ಯಶೋಧರನು ಕೊನೆಗೆ ಅಣಿಯಾಗುತ್ತಾನೆ. ಅದರಿಂದಲೇ ತಾಯಿಮಕ್ಕಳ ಜನ್ಮಾಂತರ ಕರ್ಮಭೋಗಕ್ಕೆ ಬೀಜಬಿತ್ತಿದಂತಾಯಿತು. ಇಲ್ಲಿಯೂ ಅದೇ ಮಾಯೆ.

'ಅಮೃತಮತಿಯೆಂಬ ಪಾತಕಿ- |
ಯ ಮಾಯೆ ಬನವಾಯ್ತು, ಚಂದ್ರಮತಿಮಾತೆಯ ಮಾ- |
ತೆಮಗೆ ಬಲೆಯಾಯ್ತು, ಹಿಂಸನ- |
ಮನೋಘಶರವಾಯ್ತು, **ಕೆಡೆದುದಾತ್ಮಕುರಂಗಂ** ||' (೩–೨೮)

ಎಂದು ಸಾಭಿಪ್ರಾಯವಾಗಿ ಜನ್ನನು ಹೇಳಿದ್ದಾನೆ. ಅಮೃತಮತಿಯ ಶತಮುಖವಾದ ಅಧಃಪಾತ, ಯಶೋಧರನ ಸಂಯಮ, ಉದಾತ್ತತೆ, ಧರ್ಮಸಂಕಟ, ದೌರ್ಬಲ್ಯ, ಯಶೋಮತಿಯ ಸಂಪ್ರದಾಯಮೂಢತೆ ಈ ಮನುಷ್ಯಸ್ವಭಾವದ ಏಳುಬೀಳುಗಳನ್ನು ಸಮರ್ಪಕವಾಗಿ ಚಿತ್ರಿಸುತ್ತ ಅವನು ತೀವ್ರವಾಗಿ ಮನವರಿಕೆಯಾಗುವ ಕತೆಯನ್ನು ಸರಸರನೆ ಹೆಣೆದಿದ್ದಾನೆ. ಉತ್ತರಭಾಗದಲ್ಲಿ ಭವಾವಳಿಯನ್ನು ನಂಬಲು ಜೈನಧರ್ಮಕ್ಕೆ ಮೊರೆಹೋಗಬೇಕಾದರೂ ಮಾನಸಿಕ ಹಿಂಸೆಗೆ ವಿಧಿಯ ದಂಡನೆಯೆಂದು ನಾವು ಒಂದು ಕ್ಷಣ ಅದನ್ನು ಒಪ್ಪುತ್ತೇವೆ, ಜಾತಿಸ್ಮರತೆಯ ಮುನಿಸುಮರುಕಗಳನ್ನು ಮೆಚ್ಚುತ್ತೇವೆ. ಜನ್ಮಾಂತರದ ಅನುಭವದಿಂದ ಪುನೀತನಾದ ಯಶೋಧರನು ಅಭಯರುಚಿಯಾಗಿ ಹುಟ್ಟಿ ತನ್ನ ಕತೆಯನ್ನೇ ಹೇಳುವಾಗ ಸಾಕ್ಷಿಭಾವದಿಂದ ಕೊಡುವ ರಸಚಿತ್ರ, ಮಾಡುವ ತತ್ವಪ್ರಖ್ಯೆ ಅರ್ಥವತ್ತಾಗಿವೆ. ವಿಮರ್ಶಕರು ತೋರಿದಂತೆ 'ರತಿರಹಸ್ಯವನ್ನು ಬಣಿಸುವುದಕ್ಕಿಂತಲೂ ಪ್ರಣಯಸಮಸ್ಯೆಯನ್ನು ಬಿಡಿಸುವುದರ ಕಡೆಗೆ ಅವನ ಆಸಕ್ತಿ ಹೆಚ್ಚು. ಅದೇ ಅವನ ವೈಶಿಷ್ಟ್ಯ—ಅವನ ಕಾವ್ಯದ ಸತ್ವ.'[1] ಮನುಷ್ಯಸ್ವಭಾವ, ವಿಧಿವಿಲಾಸ, ಧರ್ಮತತ್ವ ಇವೆಲ್ಲಕ್ಕೂ ಸರಿಹೋಗುವಂತೆ 'ಯಶೋಧರಚರಿತೆ'ಯಲ್ಲಿ ಜನ್ನನು ಉಜ್ವಲವಾದ ರೀತಿಯಲ್ಲಿ ಪ್ರಣಯಸಮಸ್ಯೆಯೊಂದನ್ನು ಚಿತ್ರಿಸಿ ಹಿಂಸೆ–ಅಹಿಂಸೆಗಳ ಪರಿಣಾಮವನ್ನು ನಿರೂಪಿಸಿದ್ದಾನೆ, ಕಾಂತಾಸಂಮಿತಿಯಿಂದ ಉಪದೇಶಮಾಡಿದ್ದಾನೆ.

---

1 ತೀ. ನಂ. ಶ್ರೀಕಂಠಯ್ಯ : ಜನ್ನನ ಕಾವ್ಯಗಳಲ್ಲಿ ಪ್ರಣಯನಿರೂಪಣೆ
(ಕಾವ್ಯಸಮೀಕ್ಷೆ, ಪು. ೫೮)

ಕಥನ, ಪಾತ್ರಚಿತ್ರಣ, ಪೃಥಕ್ಕರಣ, ಇವುಗಳ ಜೊತೆಗೆ ಸೂಕ್ಷ್ಮಸಂಪನ್ನವಾ ರೂಪಕಶಕ್ತಿ ಮತ್ತು ಶಬ್ದಶಕ್ತಿಗಳು 'ಯಶೋಧರಚರಿತೆ'ಗೆ ಮಹಾಕೃತಿಯ ಪಟ್ಟ ಗಟ್ಟಲು ಕೈಗೊಟ್ಟಿವೆ. ಮೊದಲಿನಿಂದ ಕೊನೆಯವರೆಗೆ ಈ ಶಕ್ತಿಗಳು ಜನ್ನ ಉಜ್ವಲಪ್ರತಿಭೆಗೆ ಸಾಕ್ಷಿಯಾಗಿ ಬಂದಿವೆ. ದೇವಿಯ ಜಾತ್ರೆಯಲ್ಲಿ,

'ಸಿಸಿರಮನೆ ಪಿಡಿದು ಪರಕೆಗೆ |
ಬಸಂತನಲರ್ವೋದ ಮಾವಿನಡಿಮಂಚಿಕೆಯೊಳ್ |
ಕುಸುರಿದಱಿದಡಗಿನಂತೆವೊ- |
ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್ ||' (೧–೩೭)

ಇಲ್ಲಿ ವಸಂತವರ್ಣನೆಯಲ್ಲಿ ಜಾತ್ರೆಯ ಭೀಕರಚಿತ್ರವೂ ಬೆರೆತುಕೊಂಡಿದೆ. ಜನ್ನ ಕಲ್ಪಕತೆ ಎಷ್ಟು ಸೂಕ್ಷ್ಮವೋ ಅಷ್ಟು ಚಮತ್ಕೃತಿಪೂರ್ಣವಾಗಿರುತ್ತದೆ. ಒಮ್ಮೊಮ್ಮೆ ಅದು ಶುಷ್ಕಚಮತ್ಕೃತಿಯಾಗಬಹುದು, ಆದರೆ ಅದು ಅದರ ಸ್ಥಿರಲಕ್ಷಣವಲ್ಲ. 'ವಾರಿಯ ಬೀರರ್....ಪಾಪದ ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ' (೧–೫೫) ಇದ್ದರಂತೆ. ಮಾವತಿಗನ 'ನುಣ್ದನಿ ನಿದ್ರೆಗೆ ಕತಕಬೀಜಮಾಯ್ತೆನೆ ಮೃಗಲೋಚನ ತಿಳಿದಾಲಿಸಿ ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್' (೧–೨೮). 'ತಲೆಯಿಂ ಕುಕ್ಕೂಕೂಯೆಂಬುಲಿ ನೆಗೆದುದು ಕೂಗಿ ಕರೆವ ದುರಿತಂಗಳ ಬಲ್ಲುಲಿ- ಯೆನೆ' (೩–೨೫). ಹೀಗೆ ದಣಿಯದೆ ಸೋಲದೆ ಬಂದ ರೂಪಕಶಕ್ತಿ ಗ್ರಂಥಾಂತ್ಯ- ದಲ್ಲಿಯೂ 'ಪರಮಜಿನೇಂದ್ರಶಾಸನವಸಂತದೊಳ್ ಈ ಕೃತಿಕೋಕಿಲಸ್ವನಂ' (೪–೮೬) ಎಂದುಸುರಿ ನಮ್ಮಲ್ಲಿ ಮೆಚ್ಚಿಗೆಯ ಮಾರ್ದನಿಯನ್ನು ಹುಟ್ಟಿಸುತ್ತದೆ. ಕಥನವೇಗದಿಂದಲೂ ಬಂಧದ ಬಿಗುಹಿನಿಂದಲೂ ಶೈಲಿ ಆಗಾಗ ಕ್ಲಿಷ್ಟವಾಗಿದ್ದರೂ ಕನ್ನಡದೇಸಿಯ ವೆಗ್ಗಳದಿಂದ ಕೂಡಿದೆ. ಸಮಯೋಚಿತವಾಗಿ 'ದೂದವಿ ನೀನೆನ್ನ **ಕೊಂದೆ**' ಎಂಬ ಸರಳಪ್ರಯೋಗಗಳ ಧ್ವನಿಸ್ವಾರಸ್ಯವನ್ನೂ 'ಕಾಲ್ ಮಱೆಯಿಸು ವುದು ಟೊಂಕಮುಱಿದ ಕತ್ತೆಯ ಕಾಲಂ' ಎಂಬ ಗ್ರಾಮ್ಯರೂಪಗಳ ಸವಿಯನ್ನೂ ಒಳಗೊಂಡಿದೆ.

'ಅನಂತನಾಥಪುರಾಣ'ವು ೧೪ ಆಶ್ವಾಸಗಳುಳ್ಳ ೧೪ನೆಯ ತೀರ್ಥಂಕರನ ಚರಿತಪುರಾಣ, ಪಂಪಾದಿಗಳಿಂದ ಬೆಳೆದು ಬಂದ ಜೈನಪುರಾಣಮಂದಿರಕ್ಕೆ ಜನ್ನನ ಜಿನಮೂರ್ತಿರೂಪವಾದ ಕಾಣಿಕೆ. ಸಂಸ್ಕೃತ ಉತ್ತರಪುರಾಣ, ಕನ್ನಡ ಚಾವುಂಡ- ರಾಯಪುರಾಣದ ತೀರ ಸ್ವಲ್ಪವಾದ ಆಕರಗಳಿಂದ ಸ್ಫೂರ್ತಿಹೊಂದಿ ಇಷ್ಟು ವಿಸ್ತಾರ- ವಾದ ಪುರಾಣವನ್ನು ಜನ್ನ ರಚಿಸಿದ್ದಾನೆ. ಚಂಪೂಕಾವ್ಯದ ಅಷ್ಟಾದಶವರ್ಣನೆಯ ಪ್ರೌಢಿ, ಜೈನಪುರಾಣದ ಅಷ್ಟಾಂಗರೂಢಿ ಇವುಗಳಿಂದ ಈ ಕಾವ್ಯ ಉದ್ದಕ್ಕೂ ಹೇಳಿಕೊಳ್ಳುವಂಥ ಕಥೆಯಿಲ್ಲದೆ ಬೆಳೆದುಕೊಂಡಿದೆ. ಅನಂತಜಿನನ ಪಂಚಕಲ್ಯಾಣಗಳ ಪರಿವಿಡಿ ಭವ್ಯವಾಗಿದ್ದರೂ ಸಾಂಪ್ರದಾಯಿಕವಾಗಿದ್ದ ಕಾರಣ ಅದಕ್ಕೆ ನವೀನರುಚಿ-

ಯಿಲ್ಲ. ನಡುನಡುವೆ ತೂರಿಬರುವ ವರ್ಣನೆಗಳಲ್ಲಿ ಜನ್ನನ 'ಕವಿತಾಪ್ರೌಢತ್ತುಂಗ-ಸಂಪತ್ತಿ' (೧-೬೨) ಕಣ್ಣು ಸೆಳೆದರೂ ಮತೀಯಕೋಶದಂತೆ ಬಿತ್ತರಿಸಿದ ವಿವರಗಳಿಂದ ಆಸಕ್ತಿ ಕುಗ್ಗುತ್ತದೆ. ಕಥೆಯಿಲ್ಲವೆಂದು ಮುಖ್ಯವಿಷಯಕ್ಕೆ ಸಂಬಂಧಿಸಿ ಹೇಳಬಹು-ದಾದರೂ ಸಂದರ್ಭವಶವಾಗಿ ಬಂದ ಚಂಡಶಾಸನನ ದುರಂತಕಥೆಯನ್ನು ಕುರಿತಲ್ಲ. 'ಅನಂತನಾಥಪುರಾಣ'ದ ಮಹಾರಣ್ಯದಲ್ಲಿ ಇದೊಂದು ಚೆಲುವಿನ ಕೊಳ್ಳ. ಗೆಳೆಯ-ನಾದ ವಸುಷೇಣನ ಚೆಲುವ ಹೆಂಡತಿಯನ್ನು ಅವನಲ್ಲಿ ಅತಿಥಿಯಾಗಿ ಹೋದಾಗ ಮೋಹಿಸಿ ಅವಳನ್ನು ಚಂಡಶಾಸನನು ಮೋಸದಿಂದ ಕರೆದೊಯ್ಯುತ್ತಾನೆ. ತರತರದಿಂದ ಅವಳನ್ನು ಒಲಿಸಿಕೊಳ್ಳಲು ಹವಣಿಸುತ್ತ ವಸುಷೇಣನ ತರಿದ ತಲೆಯನ್ನು ಮೋಡಿ-ಕಾರನಿಂದ ದೊರಕಿಸಿ ತೋರಿಸುತ್ತಾನೆ. ಅದನ್ನು ನೋಡಿ ಅವಳು ಸಾಯುತ್ತಾಳೆ, ಅವಳನ್ನಪ್ಪಿ ಅವನು ಸಾಯುತ್ತಾನೆ. ಅವನೊಡನೆ ಕಾಳಗಕ್ಕೆ ಬಂದ ವಸುಷೇಣನು ಇದನ್ನರಿತು ಪ್ರಪಂಚಕ್ಕೆ ಹೇಸಿ ತಪಸ್ಸಿಗೆ ಹೊರಡುತ್ತಾನೆ. ಈ ಕಥಾಭಾಗದಲ್ಲಿ ಜನ್ನನು ತನ್ನ ಉನ್ನತಶಕ್ತಿಯನ್ನು ತೋರಿದ್ದಾನೆ. ಪುರಾಣಕಾವ್ಯದ ಪ್ರೌಢಾ-ವೇಶದಲ್ಲಿಯ ಸಂಸ್ಕೃತಪ್ರಚುರಶೈಲಿ, ಅಲಂಕಾರವಿದಗ್ಧತೆ ಈ ಭಾಗವನ್ನೂ ಆವರಿಸಿವೆಯಾದರೂ ಸಂನಿವೇಶನಿರ್ಮಾಣ, ಪಾತ್ರವಿಕಾಸ, ದುರಂತದರ್ಶನಗಳಲ್ಲಿ ಪ್ರಣಯಸಮಸ್ಯೆಯ ಪುರುಷಮುಖವನ್ನು ತೋರಿಸುವ ಉಜ್ವಲಕೃತಿಯಾಗಿ ಇದು ಪರಿಣಮಿಸಿದೆ. 'ಯಶೋಧರಚರಿತೆ'ಯಲ್ಲಿಯ ಸೂಕ್ಷ್ಮವಿವೇಚನೆ, ರೂಪಕಸಂಪತ್ತಿ ಇಲ್ಲಿ ಔಚಿತ್ಯದೃಷ್ಟಿಯೊಡನೆ ಬೆರೆತುಕೊಂಡಿವೆ. ಸುನಂದೆ ಚಂಡಶಾಸನನ ಕೈಯಲ್ಲಿ ಸಿಕ್ಕು ಸಿಟ್ಟುಬೆಂಕಿಯಾಗಿ 'ಬೂತೆ ಪಾಟ್ಕನೆಯೊಳ್ ನಾಯ್ ಘೃತಭಾಂಡಮಂ ತೆಗೆವವೊಲ್ ಕಳ್ದೊಯ್ವುದು ಆಳ್ವಾಟಿಯೇ' (೧೧-೪೭) ಎನ್ನುತ್ತಾಳೆ. ವಿಧಿವಿಲಸನದ ಅರಿವು ಇಲ್ಲಿಯೂ ಮೂಡಿದೆ. 'ಬಿದಿಯೆಂಬ ಮದಗಜಂ ನೃಪಸದನ ಸರೋವರದೊಳೆ-(ಳೆ)ಟಿದು ಸೆಳೆತಂದು ವನಾಂತದೊಳಿಕ್ಕಿದ ಬಾಳಮೃಣಾಳದವೊಲ್' (೧೧-೮೭) ಸತಿ ಸುನಂದೆ ಕೊರಗಿದಳಂತೆ. ಮನಸಿಜನ ಮಾಯೆ ಮತ್ತು ವಿಧಿವಿಲಸನದ ಗೆಳೆತನದಿಂದ ಉಂಟಾಗುವ ಅನಾಹುತವನ್ನು 'ಸ್ಮರನೊಳ್ ದಾಯಿಗನಾಗಿ ಬೆಂದ ವಿಧಿಯೊಂದಂ ಮಾಡಿದಂ' (೧೨-೭) ಎಂಬಲ್ಲಿ ಹೇಳಿದೆ. 'ಹೃದಯದೊಳಿರ್ದ ವಲ್ಲಭನನಾಕ್ಷಣ ಭೀತಿಯಿನೀಕ್ಷಿಪಂತೆ ಮುಚ್ಚಿದುವಲರ್ಗಣ್' (೧೨-೭) ಎಂದು ಮುಂತಾದ ಪದ್ಯದಲ್ಲಿ ಸುನಂದೆಯ ಮರಣಚಿತ್ರ ಹೃದಯವಿದಾರಕವಾಗಿದೆ. ಪೀಠಿಕಾ-ಭಾಗದಲ್ಲಿ,

'ಅರಿದಿದು ಬಾಳಬಟ್ಟೆ ಪರಮಾಗಮಮಲ್ಲದೆ ಜಾರಚೋರವೀ- ।
ರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಱಿಕೆಯ್ವ ಚರ್ಚೆಯ- ।
ಲ್ಲ ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆಱೆಯಲ್ಕೆ ಪೇೞ್ದಪೆಂ ।
ಚರಿತಪುರಾಣಮಂ ಬಱಿದೆ ಪೇೞ್ದಪನೆಂದೊಡೆ ತಿರ್ದುವಪ್ಪುದೇ ॥' (೧-೩೭)

ಎಂದು ಜನ್ನನು ಆಧ್ಯತೆಯಿಂದ ಹೇಳಿಕೊಂಡಿದ್ದಾನೆ. ಆದರೆ ವಿಧಿವಿಲಾಸವು ಅವನನ್ನೂ ಬಿಡಲಿಲ್ಲ. 'ನಿಯತಿಯನಾರ್ ಮಿಾಱಿದಪರ್' ಎಂದವನೇ ಹೇಳಿದಂತೆ ಈ ಪುರಾಣದಲ್ಲಿ ಜಾರನಾದ ಚಂಡಶಾಸನನ ಕಥೆ ಸೇರಿಕೊಂಡಿತು. ಅವನ ಕೊನೆಯ ಬಲಿದಾನದಿಂದ ಉತ್ಕಟಪ್ರೇಮಕ್ಕೆ ನಿದರ್ಶನದೊರೆತರೂ ಜಾರತನದ ಆರೋಪದಿಂದ ಅವನನ್ನು ಮುಕ್ತಗೊಳಿಸಲಾರದು. ದ ಂ ಡಿ ಯ 'ದಶಕುಮಾರಚರಿತೆ'ಯನ್ನು ಮೂದಲಿಸಿ ಜನ್ನನು ತಾನೇ ತನ್ನ ಮೂದಲಿಕೆಗೆ ಗುರಿಯಾದನು. ವದತೋವ್ಯಾಘಾತ-ವಾದರೂ ಚಿಂತೆಯಿಲ್ಲ, ಕನ್ನಡಕ್ಕೆ ಒಂದು ಪ್ರಭಾವಿಯಾದ ದುರಂತಚಿತ್ರ ದೊರೆಯಿತು, ಜನ್ನನ ಕೀರ್ತಿಗೆ ಕಳಸವಿಟ್ಟಿತು. 'ಅರುಹನ ಮೂರ್ತಿಯಂತೆ ನಿರಾಭರಣವು ಮೆರೆಯು-ವಂತೆ ಹೇಳುತ್ತೇನೆ' ಎಂಬ ಅವನ ಪ್ರತಿಜ್ಞೆಯೂ ನಿರ್ವಹಣೆಹೊಂದಿಲ್ಲ. ಸತ್ಕಾವ್ಯದ ಸಹಜ ಅಲಂಕಾರಗಳಂತಿರಲಿ, ಪ್ರೌಢಕಾವ್ಯದ ಸಾಮಯಿಕವರ್ಣನೆಗಳಿಂದಲೂ ವಿದಗ್ಧ ಅಲಂಕಾರಗಳಿಂದಲೂ ಅನಂತಜಿನಮೂರ್ತಿ ಮುಚ್ಚಿಹೋದಂತಾಗಿದೆ. 'ಶಾಸ್ತ್ರೋಕ್ತವಾದ ಮಹಾಕಾವ್ಯದ ಲಕ್ಷಣಗಳೆಲ್ಲವೂ ತುಂಬಿ ತುಳುಕುತ್ತಿರುವುದರಿಂದ ಅದು ಮಹಾಕಾವ್ಯ'[1] ಎಂಬುದರ ಅರ್ಥವೆಂದರೆ 'ಅನಂತನಾಥಪುರಾಣ'ವು ಶಾಸ್ತ್ರೋಕ್ತವಾದ 'ಮಹಾಕಾವ್ಯ', ನಿಜವಾಗಿ ಅದು ಮಹಾಕವಿ ಜನ್ನನ ಪ್ರೌಢ-ಪಂಡಿತಕಾವ್ಯ, ಪರಿಣತವಯಸ್ಸಿನಲ್ಲಿ ಬರೆದರೂ ಪರಿಪಕ್ವಕೃತಿಯಲ್ಲ. ಚಂಡಶಾಸನ-ಕಥೆಯಷ್ಟು ಕಲಾತಿಶಯದಿಂದ ಕೂಡಿದ್ದರೂ ಅದು ಅದರ ಅಲ್ಪಭಾಗ ಮಾತ್ರ. 'ಪದವಿನ್ಯಾಸದೊಳ್ **ಪದವಿಲಾಸಂ,** ಸೊಂಪುವೆತ್ತಿರ್ದ ಕಾವ್ಯದ ಮೈಯೊಳ್ **ಸಮುದಾಯಶೋಭೆ'** (೧–೮) ಎಂಬಲ್ಲಿ ಜನ್ನ ಬಣ್ಣಿಸಿದ ಪದವಿಲಾಸ, ಸಮು-ದಾಯಶೋಭೆ ಎರಡೂ 'ಯಶೋಧರಚರಿತೆ'ಯಲ್ಲಿವೆ. 'ಅನಂತನಾಥಪುರಾಣ'ದಲ್ಲಿ ಉದ್ದಾಮಪಾಂಡಿತ್ಯ–ಕವಿತ್ವಗಳಿಗೆ ನೆರವಾಗಿ ಪದವಿಲಾಸವಿದೆ, ಸಮುದಾಯಶೋಭೆ-ಯಿಲ್ಲ. ಕಾಲಪ್ರಭಾವದಿಂದ ಸಂಪ್ರದಾಯಶರಣನಾಗಿ ಶೃಂಗಾರವನ್ನು ವರ್ಣಿಸಿದರೂ ಅದರ ಜೊತೆಗೆ ಕ್ರಾಂತಿಕಾರಕವಾದ ರೀತಿಯಲ್ಲಿ ಅದಮ್ಯಕಾಮದ, ಧರ್ಮವಿರುದ್ಧ-ಪ್ರಣಯದ ಸ್ತ್ರೀಮುಖ, ಪುರುಷಮುಖಗಳನ್ನು ಉಜ್ವಲವಾಗಿ ಚಿತ್ರಿಸಿ ಜನ್ನನು ಕನ್ನಡಕ್ಕೆ ಸ್ವಂತಕಾಣಿಕೆ ಸಲ್ಲಿಸಿದ್ದಾನೆ.[2]

---

1 ಕೆ. ವಿ. ರಾಘವಾಚಾರ್: ಯಶೋಧರಚರಿತೆ ಸಂಗ್ರಹ, ಪೀಠಿಕೆ, ಪು. ೨೭.

2 ತೀ. ನಂ. ಶ್ರೀಕಂಠಯ್ಯ: ಕಾವ್ಯಸಮೀಕ್ಷೆ, ಪು. ೫೫–೭೯. (ಈ ವಿಷಯದ ಸಮ-ರ್ಪಕವಾದ ವಿವೇಚನೆಯನ್ನು ಶ್ರೀ. ತೀ. ನಂ. ಶ್ರೀಯವರ 'ಜನ್ನನ ಕಾವ್ಯಗಳಲ್ಲಿ ಪ್ರಣಯನಿರೂಪಣೆ' ಎಂಬ ಇಲ್ಲಿಯ ಲೇಖನದಲ್ಲಿ ನೋಡಬಹುದು.)

೨೦. ಈ ಯುಗದ ಇತರರು (೧)

೧೩ನೆಯ ಶ.ದವನೆಂದು ತತ್ಪೂರ್ತವಾಗಿ ನಾವು ಗ್ರಹಿಸಿದ ಸೋಮರಾಜನು ಹರಿಹರಮಾರ್ಗದ ಚಂಪೂಕಾವ್ಯವನ್ನು 'ಶೃಂಗಾರಸಾರ' ಇಲ್ಲವೆ 'ಉದ್ಭಟಕಾವ್ಯ'-ದಲ್ಲಿ ಒದವಿಸಿದ್ದಾನೆ. ಉದ್ಭಟನೆಂಬ ರಾಜನು ಶಿವನನ್ನೊಲಿಸಿ ತನ್ನ ನಗರವನ್ನೆಲ್ಲಾ ಕರೆದುಕೊಂಡು ಕೈಲಾಸಕ್ಕೆ ಹೋದನೆಂಬ ಈ ಕಥೆ ಹರಿಹರನ 'ಉದ್ಭಟರಗಳೆ'ಯಿಂದ ಪ್ರೇರಿತವಾಗಿ ಅವನ 'ಗಿರಿಜಾಕಲ್ಯಾಣ'ಕ್ಕೆ ವಿಶಿಷ್ಟವಾದ ಚಂಪೂರೂಪದಲ್ಲಿ ಮೈವೆತ್ತಿದೆ. ಪ್ರೌಢಕಾವ್ಯದ ಸಾಮಯಿಕವರ್ಣನೆಗಳಿಂದ ಇಡಿಕಿರಿದ ೧೨ ಆಶ್ವಾಸಗಳ ಕಾವ್ಯದಲ್ಲಿ ೧೧ನೆಯ ಆಶ್ವಾಸದಿಂದಲೇ ಮುಖ್ಯ ಕಥಾಂಶವು ಮೊದಲಾಗುತ್ತದೆ. ಹರಿಹರನ ಚಂಪುವಿನ ಓಟ-ನಯ ಇಲ್ಲಿ ಕೆಲಮಟ್ಟಿಗೆ ಸಾಧಿಸಿವೆ. ಅವನ ಕಾವು, ರಭಸಗಳಿಲ್ಲ. ಕಂದವೃತ್ತವಚನಗಳ ನಡುನಡುವೆ ಏಳೆಂಟು ಕಡೆಗಳಲ್ಲಿ ವಿಧವಿಧದ ರಗಳೆ_ತ್ರಿಪದಿಗಳು ಬಂದಿರುವುದು ಈ ಚಂಪುವಿನ ವಿಶೇಷ. ಸೋಮರಾಜನೇ ಹೇಳಿದಂತೆ ಇದು 'ಸತ್ಕೃತಿ', 'ಬಲ್ಲವರೀಕೃತಿಯಂ ತಪ್ಪಲ್ಲೆಂದೊಡೆ ಸಾಕು' (೧-೧೭) ಎನ್ನುವಂತಿದೆ. ಆದರೆ 'ಕವಿಯಲ್ಲಂ ಶಾಸ್ತ್ರಿಯಲ್ಲಂ ವಿಪುಳಬುಧನುಮಲ್ಲಂ' (೧೨-೧೪೩) ಎಂಬುದು ಅತಿವಿನಯವಾಗಿ ತೋರುತ್ತದೆ. ಹರಿಹರನ ಪ್ರಭಾವ ಕಾವ್ಯರೂಪ-ವಿಷಯಗಳಲ್ಲಿ ಆದರೆ ಅಲ್ಲಮನ ಪ್ರಭಾವ ಸೋಮರಾಜನ ಇಡಿಯ ವ್ಯಕ್ತಿತ್ವವನ್ನು ರೂಪಿಸಿ 'ಪರಮಜ್ಞಾನಿ'ಯನ್ನಾಗಿ ಮಾಡಿದೆ.

'ಶಿವನೆಂದುತ್ತಮಶೈವರಂಬುರುಹನೇತ್ರಂಗೆತ್ತು ತಾಂ ವೈಷ್ಣವರ್ ।
ಹವಿರನ್ನಪ್ರಿಯನೆಂದು ಭೂಮಿದಿವಿಜರ್ ಜೈನರ್ಜಿನಂಗೆತ್ತು ತ- ।
ಮ್ಮವನೆಂದರ್ಚಿಸಲೊಲ್ದು ಸರ್ವಮುಖದಿಂದಂ ಪೂಜೆಗೊಂಡಾವಗಂ ।
ಸುವಿಲಾಸಂಬಡೆದೊಪ್ಪುವಲ್ಲಮನೆ ಬೆಚ್ಚಿರ್ಕೆನ್ನ ಚಿತ್ತಾಬ್ಜದೊಳ್ ॥' (೧-೧೦)

ಎಂದು ಅಲ್ಲಮಪ್ರಭುವನ್ನು ಸೋಮನು ಪರಮಾತ್ಮಸ್ವರೂಪನೆಂದು ಬಣ್ಣಿಸಿದ್ದಾನೆ, ತನ್ನ ದೃಷ್ಟಿಯನ್ನು ವಿಶಾಲಗೊಳಿಸಿದ್ದಾನೆ. 'ಗುರುವಲ್ಲಮಾಂಕನಾಮಸ್ಮರಣ-ಮನೊಂದೊಂದು ನೆವದೊಳಭಿನುತಿಗೈವೆಂ' (೧-೨೯) ಎಂದು ಗುರುಭಕ್ತಿಯನ್ನು ತೋರಿದ್ದಾನೆ. 'ಅಲ್ಲಮಪ್ರಭುವಿನೊಲ್ಮೆಯಿಂ ಈ ಕಮನೀಯ ಕಾವ್ಯಮಂ.... ಉಸಿರ್ದೆಂ' (೧೨-೪೪) ಎಂದೂ ಕೊನೆಗೆ ಹೇಳಿದ್ದಾನೆ.

೧೨, ೧೩ನೆಯ ಶತಕಗಳಲ್ಲಿಯ ಪಲ್ಲಟವು ಮಾರ್ಗಕಾವ್ಯರಚನೆಯನ್ನು ನಿರೋಧಿಸಲಿಲ್ಲ, ಅದರಲ್ಲಿಯೇ ಕೆಲಮಟ್ಟಿನ ವೈವಿಧ್ಯವನ್ನೂ ಸರಳತೆಯನ್ನೂ ಉಂಟುಮಾಡಿತೆಂದು ಈವರೆಗೆ ನೋಡಿದ್ದೇವೆ. ಈ ಯುಗದ ಕೊನೆಯವರೆಗಿನ ಮಾರ್ಗಕಾವ್ಯಗಳು ಸಹ ಈ ಮಾತಿಗೆ ನಿದರ್ಶನವಾಗಿದೆ. ೨ನೆಯ ಗುಣವರ್ಮ, ಕಮಲಭವ, ಮಹಾಬಲ, ಮಧುರ ಇವರು ಚಂಪುವಿನ ಹಾಕಿಕೊಟ್ಟ ದಾರಿಯಲ್ಲಿ

ಜೈನತೀರ್ಥಂಕರಪುರಾಣಗಳನ್ನು ಬರೆದಿದ್ದಾರೆ. ಆದರೆ ಅವುಗಳಲ್ಲಿ ಮೊದಲಿನ ತೇಜಸ್ಸಿಲ್ಲ, ಶಾಸ್ತ್ರೋಕ್ತವಾದ ಓಜಸ್ಸಿದೆ ಮಾತ್ರ. ೨ನೆಯ ಗುಣವರ್ಮನು 'ಕತೆ ಕಿಱಿದಾದೊಡಂ' (೧-೪೩) ನಾಯಕನು ಉನ್ನತನೆಂದು ೧೪ ಆಶ್ವಾಸಗಳವರೆಗೆ ಹಿಗ್ಗಲಿಸಿ 'ಜಿನಕಥಾವಿಸ್ತಾರಮಮಂ ಸಾರಮಮಂ' (೧-೬೭) ಆದ ಪುಷ್ಪದಂತಪುರಾಣ-ವನ್ನು ಬರೆದಿದ್ದಾನೆ. 'ಮೃದುಪದಬಂಧನುಂ ಸುರುಚಿರಾರ್ಥಮುಂ....' (೧-೪೦) ತನ್ನ 'ನೂತ್ನಕಾವ್ಯ'ದಲ್ಲಿರುವುದೆಂದು ಹೇಳಿದಂತೆ ಪದಲಾಲಿತ್ಯವನ್ನೂ ಪ್ರಸನ್ನತೆ-ಯನ್ನೂ ಸಾಧಿಸಿದ್ದು ನಿಜ. ಆದರೆ ಕಥಾವಿಷಯನಾದ ತೀರ್ಥಂಕರನ ಹೊರತಾಗಿ ಇದರಲ್ಲಿ ಅಂಥ ನೂತ್ನತೆಯಿಲ್ಲ. ತೀರ ಕಿರಿದೂ ಸಾಂಪ್ರದಾಯಿಕವೂ ಆದ ಕತೆಯನ್ನು ಅತಿ ದೊಡ್ಡದು ಮಾಡಲು ಹದಿನೆಂಟು ವರ್ಣನೆಯ ಹಂದರವು ಬೇಕಾಯಿತು, ಪ್ರೌಢ-ಕಾವ್ಯದ ಪರಿಕರವೆಲ್ಲ ಹರಿದು ಬಂದಿತು. ಸತ್ವ-ರೀತಿ ಎಲ್ಲವೂ ಸಾಧಾರಣಪಂಡಿತ-ಕಾವ್ಯದ್ದು. ಇವನ 'ಚಂದ್ರನಾಥಾಷ್ಟಕ'ವು ಚಿಕ್ಕದಾದರೂ ಹೃದ್ಯವಾದ ಭಕ್ತಿಭಾವ-ವನ್ನು ಗಂಭೀರಶೈಲಿಯಲ್ಲಿ ವ್ಯಕ್ತಮಾಡಿದೆ.

ಕಮಲಭವನು ಪೊನ್ನನ ತರುವಾಯ ಎರಡನೆಯದಾಗಿ 'ಶಾಂತೀಶ್ವರ-ಪುರಾಣ'ವನ್ನು ಬರೆದನು. ೧೬ನೆಯ ತೀರ್ಥಂಕರನನ್ನು ಕುರಿತೆಂದೋ ಏನೋ ೧೬ ಆಶ್ವಾಸಗಳಾಗಿ ರಚಿಸಿದನು. ಇದರಲ್ಲಿ 'ಪುರಾಣಚೂಡಾಮಣಿ'ಯೆಂದು ಹೆಸರಾದ 'ಶಾಂತಿಪುರಾಣ'ವನ್ನು ರಚಿಸಿದ ಪೊನ್ನನಿಗಿಂತ ಹೆಚ್ಚಿನ ಕಥನ ಮತ್ತು ವರ್ಣನವಿಸ್ತಾರವನ್ನು ಕಮಲಭವನು ತಂದಿದ್ದಾನೆ. ಪುರಾಣಕಾವ್ಯದ ಲಕ್ಷಣಗಳೆಲ್ಲ ಪರಿಪೂರ್ಣವಾಗಿವೆ. ಹೀಗೆ ಬಿದಿರಿನ ಮೆಳೆ ಉದ್ದಕ್ಕೆ ಬೆಳೆದಿದೆ, ಕಬ್ಬಿನ ಸವಿ ಕಡಿಮೆಯಾಗಿದೆ. ಇಲ್ಲಿ ಪಾಂಡಿತ್ಯವಿದೆ, ಕವಿಸಮಯವಿದೆ, ಸುಂದರಕಲ್ಪಕತೆಯಿದೆ, ಉಕ್ತಿವೈಚಿತ್ರ್ಯವಿದೆ. ಆದರೆ 'ಸಮುದಾಯಶೋಭೆ'ಯಿಲ್ಲ, ರಸನಿರ್ಭರತೆಯಿಲ್ಲ. ಮಹಾಬಲಕವಿ ಇಷ್ಟೇ ಆಶ್ವಾಸಗಳಲ್ಲಿ ಇದೇ ವೈಖರಿಯಲ್ಲಿ 'ನೇಮಿನಾಥಪುರಾಣ'-ವನ್ನು ರಚಿಸಿದ್ದಾನೆ. 'ಕೃತಿವೇಟ್ಟು ತತ್ಕೃತಿಚಮತ್ಕೃತಿಯಂ ಪಡೆವಂ ಮಹಾ-ಬಲಂ' ಎಂಬ ಕವಿಯ ಆತ್ಮಪ್ರಶಂಸೆ ನಮ್ಮ ವಿಮರ್ಶೆಯೂ ಆಗಬಹುದು. ಇದರಲ್ಲಿ ಹರಿವಂಶ-ಕುರುವಂಶಕಥೆಯಿದ್ದ ಮೂಲಕ ಸಂನಿವೇಶರಚನೆಗೂ ಪಾತ್ರನಿರೂಪಣೆಗೂ ಅವಕಾಶದೊರೆತಿದೆ. ಆದರೆ ಇದರಲ್ಲಿ ಹೊಸತನವು ಕ್ವಚಿತ್ತಾಗಿರಬಹುದೆಂದು ತೋರುತ್ತದೆ. ೧೪ನೆಯ ಶ.ದ ಉತ್ತರಾರ್ಧದಲ್ಲಿದ್ದ ಮಧುರನು 'ಧರ್ಮನಾಥ-ಪುರಾಣ'ವನ್ನೂ 'ಗೊಮ್ಮಟಾಷ್ಟಕ'ವನ್ನೂ ಬರೆದು ಈ ಯುಗದ ಜೈನಪುರಾಣ-ಕಾರರಲ್ಲಿ ಕೊನೆಯವನಾದನು. ಮುಂದಿನ ಯುಗದಲ್ಲಿ ಸಹ ಜೈನಚಂಪೂಪುರಾಣವು ಅಪರೂಪವಾಯಿತೆಂಬ ಕಾರಣದಿಂದ, ಮಧುರನು ಒಂದು ಮೈಲಿಗಲ್ಲೆಂದು ತಿಳಿಯಲು ಅಡ್ಡಿಯಿಲ್ಲ. 'ಧರ್ಮನಾಥಪುರಾಣ'ವು ೧೫ನೆಯ ತೀರ್ಥಂಕರನನ್ನು ಕುರಿತು ಮೊದಲನೆಯ ಪುರಾಣ. ಆಶ್ವಾಸಗಳೆಷ್ಟು ತಿಳಿದಿಲ್ಲ. 'ಕವಿತೆಗೆ ಕಣ್ಣೆಲೆಯಾದುದು ಕಲಾವಿಲಾಸನ ಕಾವ್ಯಂ', 'ಆದಿಪುರಾಣಂಗಳ್ ಪಲವಾದುವೆನಲ್ ಮತ್ತೆ ಮಧುರ-

ಕವಿತಾರಸಮುತ್ಪಾದಿಸೆ' ಎಂದು 'ಮಧುರಕವೀಂದ್ರ'ನು ತನ್ನ ತಮ್ಮಟಿಯನ್ನು ಬಾರಿಸಿಕೊಂಡಿದ್ದಾನೆ. ಉದಾಹೃತ ಭಾಗವನ್ನು ನೋಡಿದರೆ ಪ್ರೌಢಕಾವ್ಯದ ಗುಣಾವಗುಣಗಳೆಲ್ಲ ಎದ್ದು ಕಾಣುತ್ತವೆ. ಅಲ್ಲಲ್ಲಿ ಮಧುರನ ಕಲ್ಪನೆಯ ಮಾಧುರ್ಯ ತಲೆದೋರಿದೆ. ಉದಾಹರಣೆಗೆ,

'ಬಿಡದುಗುವ ಸೊನೆಯ ಸೋನೆಯ ।
ಕಡುಗೆಸಱಿೊಳ್ ಸಿಲ್ಕಿ, ಬಂದ ಮಾವಿನ ಕೆಯ್ಯಂ ।
ಪಿಡಿದಲ್ಲಿ ಮೆಲ್ಲಮೆಲ್ಲನೆ ।
ನಡೆವುದು ಕಣ್ಗುರುಡನಂತಿರುಪವನಪವನಂ ॥'

ಆಂಡಯ್ಯ

ಚಂಪೂರೂಪವನ್ನು ಮೇಲಿನ ಕವಿಗಳಂತೆ ಬಳಸಿಯೂ ಕಥಾವಸ್ತು-ಭಾಷಾ-ಶೈಲಿಗಳಲ್ಲಿ ತನ್ನತನವನ್ನು ತೋರಿಸಿದವನು ಆಂಡಯ್ಯನು. ಅವನ ಒಂದೇ ಆದ 'ಕಬ್ಬಿಗರ ಕಾವ'ವೆಂಬ ಕಾವ್ಯದಲ್ಲಿ ಜಿನಕಥೆಯಿಲ್ಲ, ಲೌಕಿಕಕಥೆಯಿಲ್ಲ. ಆದರೆ ಲೋಕಜೀವನಕ್ಕೆ ಪ್ರೇರಕಶಕ್ತಿಯಾದ ಕಾಮ, ಅವನನ್ನು ಮೀರಿದ ಜೈನಮುನಿ, ಅವನಿಂದ ಗೆಲ್ಲಲಾದ ಆದರೂ ಅವನಿಗೆ ಶಾಪಕೊಟ್ಟ ಶಿವ ಈ ಮೂವರನ್ನೂ ಒಳಗೊಂಡ ಒಂದು ವಿಶಿಷ್ಟ ಧ್ವನಿಯುಕ್ತ ಕಾವ್ಯವನ್ನು ಆಂಡಯ್ಯನು ಬರೆದಿದ್ದಾನೆ, ಲೌಕಿಕ-ಆಗಮಿಕ ಎರಡನ್ನೂ ಒಂದುಗೂಡಿಸಿದ್ದಾನೆ. ತನ್ನ ಪರಿವಾರದ ಚಂದ್ರನನ್ನು ಅಪಹರಿಸಿಕೊಂಡೊಯ್ದು ಶಿವನು ಸಂಧಾನದಿಂದ ತಿರುಗಿ ಕೊಡದೆ ಹೋಗಲು ಅವನ ಮೇಲೆ ದಂಡೆತ್ತಿಹೋಗಿ ಕಾಮನು ಅವನನ್ನು ಸೋಲಿಸಿ ಅರೆಹೆಣ್ಣುಮಾಡುತ್ತಾನೆ, ಅವನ ಶಾಪದಿಂದ ಕೆಲವು ಕಾಲ ತಾನು ಯಾರೂ ಅರಿಯದಂತೆ ಇರುತ್ತಾನೆ. ಶಿವ-ನೊಡನೆ ಕಾಳಗಕ್ಕೆ ಹೊರಟಾಗ ದಾರಿಯಲ್ಲಿ ಕಂಡ ಸವಣನನ್ನು ದಂಡಿಸಲು ಹೋಗಿ ತಾನೇ ಗದಗದ ನಡುಗಿ ಅವನಿಗೆ ದಂಡನಮಸ್ಕಾರ ಹಾಕುತ್ತಾನೆ. ಈ ಕಥೆಗೆ ಯಾವುದೇ ಒಂದು ಮೂಲ ಆಕರವಿದ್ದಂತಿಲ್ಲ. ವೈದಿಕ-ಜೈನಪರಂಪರೆಯಲ್ಲಿಯ ಹಲವು ಅಂಶಗಳು ಸುಸಂಗತವಾದ ಕನಸಿನಲ್ಲಿ ಬೆರೆತ ಹಾಗೆ ಇಲ್ಲಿ ಬೆರೆತುಕೊಂಡಿವೆ. ಸಾಮಾನ್ಯವಾಗಿ ಕಾಮನಿಂದ ಶಿವನ ಗೆಲವು, ಆದರೆ ಸವಣನ ಮುಂದೆ ಕಾಮನ ಸೋಲು ಎಂಬುದನ್ನು ಸ್ಥಾಪಿಸಲು ಕತೆಯನ್ನು ಕಟ್ಟಿದೆ. ಚಂದ್ರನ ಅಪಹರಣವು ಕಲಹಬೀಜವಾಯಿತೆಂಬ ಕಥಾಂಶವು ಭಾರತೀಯ ಸಾಹಿತ್ಯಕ್ಕೇ ಸೊಗಸಾದ ಹೊಸ ಕಲ್ಪನೆಯಾಗಿದೆ. ಚಮತ್ಕೃತಿಯುಳ್ಳ ಕೃತಿಗೆ ಅನುಗುಣವಾಗಿ ಇನ್ನೂ ಅನೇಕ ವಿವರಗಳಲ್ಲಿ ಹೊಸತನವಿದೆ. ಒಟ್ಟಿನ ಸಂವಿಧಾನದಲ್ಲಿ ಮೊದಲಿನ ವರ್ಣನೆಯ ಮಂದ-ಗತಿ ತೊಲಗಿ ಮುಂದೆ ತ್ವರೆ, ಸೊಬಗು ಹೆಚ್ಚುತ್ತವೆ; ಆದರೂ ತಾತ್ವಿಕ-ರಾಜಕೀಯ-

ಧ್ವನಿಗಳ ಮಿಶ್ರಹೇತುವಿನಿಂದ ಕತೆ ಹೊಯ್ದಾಡಿ ಹೇಗೋ ಮುಗಿದಿದೆ. ಅರೆವೆಣ್ಣಾಗಿ ಸೋತ ಶಿವನಿಂದಲೂ ಶಾಪಕೊಡಿಸಿ ಗೆದ್ದ ಕಾಮನ ಗೆಲವನ್ನು ಕುಂದಿಸಿದ ಬಗೆಯಲ್ಲಿ ಈ ಹೊಯ್ದಾಟ ಸ್ಫುಟವಾಗಿದೆ. ರಾಜಕೀಯವಾಗಿ ತನ್ನ ಆಶ್ರಯದಾತನಾದ ಕದಂಬಕಾಮನ ಸಂಮಿಶ್ರಚರಿತೆಯನ್ನು ಇದರಲ್ಲಿ ಸೂಚಿಸುವ ಉದ್ದೇಶವಿರಬೇಕೆಂದು ಊಹಿಸಲಾಗಿದೆ. ಈ ಊಹೆಯ ಸಂಭವನೀಯತೆಯನ್ನು ಅಲ್ಲಗಳೆಯುವಂತಿಲ್ಲ. ತಾತ್ವಿಕವಾಗಿ ಕಾಮತತ್ವದ ವಿಜಯ, ಕಾವನ ಗೆಲ್ಲ ಇದರಲ್ಲಿ ಅಭಿಪ್ರೇತವಾಗಿದೆ. ಶ್ರೀ. ಬೇಂದ್ರೆಯವರು ಹೇಳುವಂತೆ 'ಕಾಮ–ರತಿ ; ಶ್ರವಣ–ವಿರಕ್ತಿ ; ಶಿವ–ಶಕ್ತಿ —ಈ ತ್ರಿಕೂಟದ್ವಂದ್ವದ ಕಾವ್ಯವು ಕಬ್ಬಿಗರ ಕಾವದಲ್ಲಿ ನಿರೂಪಿತವಾಗಿದೆ........ಈ ಕಾವ್ಯದಲ್ಲಿ ಕಾಮನ ಗೆಲವು ಕಾವ್ಯತತ್ವ ; ಶಿವನ ಗೆಲವು ಸೃಷ್ಟಿತತ್ವ ; ಶ್ರವಣನ ವಿರಕ್ತಿ ಮುಕ್ತಿತತ್ವ '[1] ಎಂದೂ ಇರಬಹುದು. ನಮ್ಮ ಮಟ್ಟಿಗೆ ಕಾಮ, ಶ್ರವಣ ಇವರ ವಿಷಯವಾದ ತಾತ್ವಿಕಧ್ವನಿ ನಿಚ್ಚಳವಾಗಿದೆ, ಆದರೆ ಶಿವನ ವಿಷಯಕವಾದ ಧ್ವನಿ ತತ್ಕಾಲೀನ ರಾಜಕೀಯದಿಂದ ವಿಕೃತವಾದಂತಿದೆ. ಆಂಡಯ್ಯನ ಮುಖ್ಯವಾದ ವೈಶಿಷ್ಟ್ಯವೆಂದರೆ ಭಾಷಾಶೈಲಿಯದು. ತನ್ನ ಮೊದಲಿಗರು ಯಾರೂ ಮಾಡದ ಸಾಹಸವನ್ನು ಅವನು ಮಾಡಿದನು. ಸಂಸ್ಕೃತ ಬೆರಸದೆ ಕನ್ನಡದಲ್ಲಿ ಬರೆಯುವುದು ಸಾಧ್ಯವೆಂದು ತೋರಿಸಲು 'ಅಚ್ಚಗನ್ನಡಂ ಬಿಗಿವೊಂದಿರೆ' ಕಬ್ಬಿಗರನ್ನು ಕಾಯಬಲ್ಲ 'ಕಬ್ಬಿಗರ ಕಾವ'ವನ್ನು ಬರೆದನು. ಈ ಅಚ್ಚಗನ್ನಡದಲ್ಲಿ ಸಂಸ್ಕೃತವು ತದ್ಭವರೂಪವಾಗಿ ಬಂದಿದ್ದರೂ ಶೈಲಿಯ ಒಟ್ಟುರೂಪದಲ್ಲಿಯ ದೇಸಿಪ್ರಚುರತೆಯನ್ನೂ ಸಹಜಸುಂದರತೆಯನ್ನೂ ಮನಸಾರೆ ಮೆಚ್ಚಬೇಕು. ಮುಂದೆ ಆಂಡಯ್ಯನ ಪ್ರಭಾವವು ಕೆಲವರ ಮೇಲೆ ಅಂಶತಃ ಆಯಿತಾದರೂ ಯಾರೂ ಅವನ ಮಾರ್ಗವನ್ನು ಅನುಸರಿಸಲಿಲ್ಲ. ಅವನ ಕೃತಿ ಬರೀ ಚಮತ್ಕೃತಿಯಲ್ಲ, ಕಾವ್ಯದೃಷ್ಟಿಯಿಂದ ಶೈಲಿಯ ದೃಷ್ಟಿಯಿಂದ ಮೆಚ್ಚತಕ್ಕ ಸತ್ಕೃತಿಯಾಗಿದೆ. ಗಾತ್ರದಲ್ಲಿ ಖಂಡಕಾವ್ಯದಷ್ಟು ಚಿಕ್ಕದಲ್ಲ, ಮಹಾಕಾವ್ಯದಷ್ಟು ದೊಡ್ಡದಲ್ಲ ಎಂಬ ಮಧ್ಯಮಸ್ವರೂಪವು ಅದಕ್ಕಿದೆ. ಗುಣದಲ್ಲಿ ಸಹ ಅದೇ ಮಧ್ಯಮಿಕೆ ಇರುವುದು. ಆದರೆ ಉತ್ತಮಿಕೆಯ ಅಂಶಗಳು ಆಂಡಯ್ಯನ ಸ್ವತಂತ್ರವೂ ಉನ್ನತವೂ ಆದ ಕಲ್ಪನಾಶಕ್ತಿಯಲ್ಲಿ ವ್ಯಕ್ತವಾಗಿವೆ.

ಈ ಯುಗದಲ್ಲಿ ವಚನಗದ್ಯ, ಚಂಪೂಗದ್ಯ ಹೇರಳವಾಗಿದ್ದರೂ ಕೇವಲ ಗದ್ಯಗ್ರಂಥಗಳು ಹೆಚ್ಚಾಗಿಲ್ಲ. ಹಸ್ತಿಮಲ್ಲನ 'ಪೂರ್ವಪುರಾಣ'ವೊಂದೇ ಇತ್ತೀಚೆ ಉಪಲಬ್ಧವಾಗಿ ಪ್ರಕಟವಾಗಿದೆ. ಹಸ್ತಿಮಲ್ಲನು 'ಉಭಯಭಾಷಾಚಕ್ರವರ್ತಿ'-ಯಾಗಿ ಸಂಸ್ಕೃತದಲ್ಲಿಯೂ ಕಾವ್ಯನಾಟಕಗಳನ್ನು ಬರೆದಿದ್ದಾನೆ. ಇವನ ಕಾಲ ಸು. ೧೩೦೦ ಎಂದು ಊಹಿಸಲಾಗಿದೆ. ಪಂಪನ 'ಆದಿಪುರಾಣ'ವನ್ನೇ ಬಹುಮಟ್ಟಿಗೆ ಅನುಸರಿಸಿ ಈ ಚಿಕ್ಕ ಗ್ರಂಥವನ್ನು ಬರೆಯಲಾಗಿದೆ. ಇದರ ಗದ್ಯಶೈಲಿಯ ಮೇಲೆ

---

1 ದ. ರಾ. ಬೇಂದ್ರೆ: ಆಂಡಯ್ಯ, ಮುನ್ನುಡಿ, ಪು. ೩, ೪.

ಬಹುಶಃ 'ಚಾವುಂಡರಾಯಪುರಾಣ'ದ ಪ್ರಭಾವದಿಂದ ತೋರಿದ ಅಚ್ಚಗನ್ನಡದ ಚೊಕ್ಕುತನವಿದೆ, ಸರಳವಾದ ನೀರಸವೆನಿಸಬಹುದಾದ ಕಥನವಿದೆ.

ಈ ಯುಗದಲ್ಲಿ ಶಾಸ್ತ್ರಕವಿಗಳೆನ್ನಿಸಿಕೊಂಡ ಕೆಲವರು ೧೩-೧೪ ಶ.ಗಳಲ್ಲಿ ಜೀವಿಸಿ ಕನ್ನಡಕ್ಕೆ ಚಿರಂತನವಾದ ಬೆಲೆಯುಳ್ಳ ಶಾಸ್ತ್ರಗ್ರಂಥಗಳನ್ನೂ ಶಾಸ್ತ್ರಪ್ರಧಾನ-ವಾದ ಕಾವ್ಯಗಳನ್ನೂ ನೀಡಿದ್ದಾರೆ. ಇವರೆಲ್ಲರೂ ಬಹುಶಃ ಜೈನರು. ಮಲ್ಲಿಕಾರ್ಜುನ, ಕೇಶಿರಾಜ, ರಟ್ಟಕವಿ, ನಾಗರಾಜ, ಮಂಗರಾಜ-೧, ವೃತ್ತವಿಲಾಸ, ಆಯತವರ್ಮ ಈ ಮೊದಲಾದವರು ಈ ವರ್ಗದಲ್ಲಿ ಬರುತ್ತಾರೆ. ಮಲ್ಲಿಕಾರ್ಜುನನು ಕನ್ನಡಕ್ಕೆ ಮೊದಲನೆಯ ಸಂಕಲನಗ್ರಂಥವಾದ 'ಸೂಕ್ತಿಸುಧಾರ್ಣವ'ವನ್ನು ಒದಗಿಸಿಕೊಟ್ಟನು. ಇದರಲ್ಲಿ ಹದಿನೆಂಟು ವರ್ಣನೆಗಳಿಗೆ ಸಂಬಂಧವಾದ ಸಾವಿರಾರು ಪದ್ಯಗಳನ್ನು ಹಿಂದಿನ ಮಾರ್ಗಕಾವ್ಯಗಳಿಂದ ಸಂಕಲನಮಾಡಲಾಗಿದೆ. ಅಂದಿನ ಕಾಲದ ಸಾಹಿತ್ಯವ್ಯಾಸಂಗಿ-ಗಳಿಗೆ ಉಪಯುಕ್ತವಾದ ಸಂಕಲನವು ಇಂದಿಗೂ ಉಪಯುಕ್ತವಾಗಿದೆ. ತುಲನಾತ್ಮಕ ವಿಮರ್ಶೆಗೂ ಇದರ ಪ್ರಯೋಜನವಿದೆ. ಸಂಕಲನ ಪರಿಶ್ರಮದ ಕೆಲಸ ಮಾತ್ರವಲ್ಲ, ಆಯ್ಕೆಯಲ್ಲಿ ಉಚಿತನಿರ್ಣಯಶಕ್ತಿಯನ್ನು ಒರೆಗೆ ಹಚ್ಚುವ ಕಾರ್ಯ. ಅಂತೇ ಅಪ್ರತ್ಯಕ್ಷವಾಗಿ ವಿಮರ್ಶೆಯ ದೃಷ್ಟಿ ಇಲ್ಲಿರುತ್ತದೆ. ತಾನು ಹೇಳಿದಂತೆ 'ಚದುರರ ಮೆಚ್ಚು ಭಾವುಕರ ಕೈಪಿಡಿ....ಅಕ್ಕರಿಗರಾಭರಣಂ' ಆಗುವಂತೆ ಇದನ್ನು ಮಲ್ಲಿ-ಕಾರ್ಜುನನು ಸಂಯೋಜಿಸಿದ್ದಾನೆ. ಅವನು 'ಸರಸಕವೀಶ'(೧-೮)ನಾಗಿರುವ-ನೆಂಬುದಕ್ಕೆ ಸ್ವತಂತ್ರಕಾವ್ಯದ ಪ್ರಮಾಣವಿಲ್ಲದಿದ್ದರೂ ಪೀಠಿಕಾಪದ್ಯರಚನೆಯಲ್ಲಿಯೂ ಸಂಕಲನದಲ್ಲಿಯೂ ಪ್ರಮಾಣವಿದೆ. ಅವನು ಮತದಿಂದ ಜೈನನೆಂಬ ಗ್ರಹಿಕೆಯನ್ನು ಕೆಲವರು ಅಲ್ಲಗಳೆದಿದ್ದಾರೆ. ಇದಕ್ಕೆ ಕಾರಣವೆಂದರೆ ಇವನು ಜೈನನೆನ್ನಲು ಪ್ರಬಲ-ವಾದ ಆಂತರಪ್ರಮಾಣಗಳಿಲ್ಲ, ಜೊತೆಗೆ ವೈದಿಕನಾಗಿರಬೇಕೆಂಬುದಕ್ಕೆ ಚಿದಾನಂದ-ಬುಧ, ಯೋಗಿಪ್ರವರ ಎಂಬ ಅವನ ಹೆಸರು-ಬಿರುದುಗಳೂ ಸಾಕ್ಷಿಯಾಗಿವೆ. ಬಸರಾಳುಶಾಸನದ ಕರ್ತೃ ಅವನೇ ಎಂದು ತೋರುವುದರಿಂದ ಇನ್ನಿಷ್ಟು ಇದಕ್ಕೆ ಪುಷ್ಟಿದೊರೆತಿದೆ. ನಮಗೆ ತೋರುವುದೆಂದರೆ ಜನ್ನ-ಕೇಶಿರಾಜರು ಜೈನರೆಂಬುದು ನಿಶ್ಚಿತವಿರುವಾಗ ಅವರೊಡನೆ ತೀರ ಹತ್ತಿರದ ಹತ್ತುಗಡೆಯಿದ್ದ ಮಲ್ಲಿಕಾರ್ಜುನನು ಜೈನನಿರಬೇಕೆಂದು ತಿಳಿಯುವುದು ಯುಕ್ತ. ತಂದೆಮಕ್ಕಳು ಬೇರೆ ಮತದವರಿರ-ಬಹುದು, ಆದರೆ ಹಾಗೆನ್ನಲು ಇಲ್ಲಿ ಸ್ಪಷ್ಟವಾದ ಆಧಾರಗಳಿವೆಯೆ? ಯೋಗಿಪ್ರವರ, ಚಿದಾನಂದ ಈ ಪದಗಳನ್ನು ವೈದಿಕರು ಹೇಗೋ ಹಾಗೇ ಜೈನರೂ ಉಪಯೋಗಿಸ-ಬಹುದು. ಜಿನನನ್ನು ಕುರಿತು 'ಚಿದಂಬರಪುರುಷ' ಎಂದು ಕರೆದಿಲ್ಲವೇ? 'ಭರತೇಶವೈಭವಕಾರ'ನಾದ ರತ್ನಾಕರವರ್ಣಿ ಜೈನನಾಗಿಯೂ ಯೋಗಿಯಾಗಿರಲಿಲ್ಲವೇ? ತನ್ನ ಗ್ರಂಥದಲ್ಲಿ ಯೋಗವಿಚಾರವನ್ನು ಪ್ರಸ್ತಾಪಿಸಿಲ್ಲವೇ? ಮಲ್ಲಿಕಾರ್ಜುನಸುತನಾದ ಕೇಶಿರಾಜನು 'ಶಬ್ದಮಣಿದರ್ಪಣ'ವೆಂಬ ವಿಸ್ತಾರವಾದ ಪ್ರಮಾಣಭೂತವಾದ ಹಳಗನ್ನಡವ್ಯಾಕರಣಗ್ರಂಥವನ್ನು ಕಂದಪದ್ಯಗಳಲ್ಲಿ ಬರೆದನು.

ಅವನು ನಾಗವರ್ಮನ 'ಶಬ್ದಸ್ಮೃತಿ'ಯಿಂದ ಕೆಲವು ಲಕ್ಷಣ-ಲಕ್ಷ್ಯಪದ್ಯಗಳನ್ನು ತೆಗೆದುಕೊಂಡಿದ್ದರೂ ಅನೇಕ ಹೊಸ ಸೂತ್ರಗಳನ್ನು ಕಲ್ಪಿಸಿದ್ದಾನೆ, ಉಚಿತಪ್ರಯೋಗ-ಗಳನ್ನು ಹೇರಳವಾಗಿ ಸಂಗ್ರಹಿಸಿದ್ದಾನೆ. ಸೂತ್ರವೃತ್ತಿ ಅವನದೇ ಆಗಿದೆ, ಅಪಭ್ರಂಶ-ಪ್ರಕರಣವೆಲ್ಲವೂ ಅವನ ಸ್ವತಂತ್ರ ರಚನೆ. ಮಾರ್ಗಕಾವ್ಯದ ಪ್ರಯೋಗಗಳಲ್ಲಿ ನಂಬುಗೆಯಿಟ್ಟು ಸ್ಥಿತಿಪ್ರಿಯಶಾಸ್ತ್ರಕಾರನಾಗಿ ಅವನು ಒಟ್ಟನಲ್ಲಿ ತೋರಿದರೂ ೧೧-೧೨ನೆಯ ಶ.ಗಳಲ್ಲಿಯ ಕನ್ನಡನುಡಿಯ ಸಂಕ್ರಮಣಾವಸ್ಥೆಯನ್ನರಿತು ನವೀನ-ಪ್ರಯೋಗಗಳಿಗೆ ಕೆಲವು ಸಲ ಮನ್ನಣೆಕೊಟ್ಟದ್ದಾನೆ. ಅವನ ವ್ಯಾಕರಣಸೂತ್ರ-ರೂಪವಾದ ಕಂದರಚನೆ ಬಹುಮಟ್ಟಿಗೆ ಅಕ್ಲಿಷ್ಟವೂ ರುಚಿಕರವೂ ಆಗಿದೆ. ಅವನ ಪ್ರಯೋಗಗಳ ಆಯ್ಕೆ ಅವನ ಸರಸಕವಿತ್ವಕ್ಕೆ ಸಾಕ್ಷಿಯಾಗಿದೆ. 'ಮನದೊಳ್ ದಯವಿಲ್ಲದವನ ಕಣ್ಣೇಂ ಪುಣ್ಣೇಂ, ಪ್ರಾಯಂ ಕೂಸಾದೊಡಭಿಪ್ರಾಯಂ ಕೂಸಕ್ಕುಮೆ' ಇಂಥ ಹಲವಾರನ್ನು ನೆನೆಯಬಹುದು. 'ಸಿರಿಗೀಕ್ಷಿಪ ರಸಚಿತ್ರಂ ಸರಸತಿಗೆರಡನೆಯ ಬೀಣೆ' ಎಂದು 'ಶಬ್ದಮಣಿದರ್ಪಣ'ವನ್ನು ಬುಧರು ವರ್ಣಿಸಿದ್ದರಲ್ಲಿ ಅರ್ಥವಿದೆ. ವ್ಯಾಕರಣಶಾಸ್ತ್ರವು ಇಲ್ಲಿ ಶುಷ್ಕವೂ ಆಗಿಲ್ಲ, ಶಿಥಿಲ ಇಲ್ಲವೆ ವಾಚಾಲವೂ ಆಗಿಲ್ಲ. ಶಾಸ್ತ್ರಕವಿಯ ಉತ್ತಮ ಯೋಗ್ಯತೆ ಕೇಶಿರಾಜನಲ್ಲಿದೆ. ಅವನ 'ಚೋಳಪಾಲಕ-ಚರಿತ', 'ಸುಭದ್ರಾಹರಣ', 'ಪ್ರಬೋಧಚಂದ್ರ', 'ಕಿರಾತ' ಈ ಕೃತಿಗಳು ದೊರೆಯದಿದ್ದುದು ಕನ್ನಡಸಾಹಿತ್ಯಕ್ಕೆ ದೊಡ್ಡ ನಷ್ಟವೇ ಸರಿ. ಕೆಲವರು ಊಹಿಸಿದಂತೆ 'ಪ್ರಬೋಧಚಂದ್ರ'ವು ನಾಟಕವಾಗಿದ್ದರೆ ನಷ್ಟವು ಇಮ್ಮಡಿಸುತ್ತದೆ.

ಇನ್ನುಳಿದ ಶಾಸ್ತ್ರಕಾರರಲ್ಲಿ ಸಮುದಾಯದ ಮಾಘಣಂದಿ 'ಶಾಸ್ತ್ರಸಾರ-ಸಮುಚ್ಚಯ', 'ಪದಾರ್ಥಸಾರ'ಗಳಿಗೆ ಕನ್ನಡ ಟೀಕೆಯನ್ನು ಶಾಸ್ತ್ರಗದ್ಯದಲ್ಲಿ ಬರೆದಿದ್ದಾನೆ, ಬಾಳಚಂದ್ರಪಂಡಿತನು 'ದ್ರವ್ಯಸಂಗ್ರಹ ಸೂತ್ರ'ಕ್ಕೆ ಟೀಕೆಯನ್ನು ಬರೆದಿದ್ದಾನೆ. ರಟ್ಟಕವಿ ಅಥವಾ ಅರ್ಹದ್ದಾಸನು 'ರಟ್ಟಮತ'ವೆಂಬ ಗ್ರಂಥದಲ್ಲಿ ಮಳೆಯ ಕುರುಹು ಮುಂತಾಗಿ ವರ್ಷಾಶಾಸ್ತ್ರಕ್ಕೆ ಸಂಬಂಧಿಸಿದ ಹಲವು ವಿಚಾರಗಳನ್ನು ಪೂರ್ವಶಾಸ್ತ್ರ, ಸ್ವಾನುಭವಗಳ ಆಧಾರದಿಂದ ಹೇಳಿದ್ದಾನೆ. ಇದರಲ್ಲಿ ವೃತ್ತ, ಕಂದಗಳಲ್ಲದೆ ರಗಳೆ, ಅಕ್ಕರೆ, ತ್ರಿಪದಿಗಳೂ ಸೇರಿಕೊಂಡಿವೆ. 'ಕಂದಂಗಳ್ ಪಲ-ವಾಗಿರೆ ಸುಂದರವೃತ್ತಂಗಳಕ್ಕರಂ ಚವುಪದಿ ಮತ್ತಂ ದಲ್ಗೀತಿಕೆ ತಿವದಿಗಳಂದಬೆತ್ತೆ-ಸೆಯೆ ಪೇಟ್ದೊಡದು ಚತ್ತಾಣಂ' (ಕ.ಮಾ. ೧-೩೫) ಎಂಬ ಚತ್ತಾಣದ ಲಕ್ಷಣಕ್ಕೆ ಇದು ಸರಿಹೋಗುವಂತಿದೆ. ೧ನೆಯ ಮಂಗರಾಜನು 'ಖಗೇಂದ್ರಮಣಿದರ್ಪಣ'ವೆಂಬ ವಿಷವೈದ್ಯಗ್ರಂಥವನ್ನು ಕಂದವೃತ್ತರೂಪವಾಗಿ ಬರೆದಿದ್ದಾನೆ, ಕ್ವಚಿತ್ತಾಗಿ ವಿವರಣೆಯ ಗದ್ಯವನ್ನೂ ಸೇರಿಸಿದ್ದಾನೆ. ಇದರಿಂದ ಚಂಪೂರೂಪದಲ್ಲಿ ಶಾಸ್ತ್ರಗ್ರಂಥವನ್ನು ಬರೆಯುವ ಪ್ರಥೆ ಮುಂಬರಿದಿದೆ. ೧೧ನೆಯ ಶ.ದ ಚಂದ್ರರಾಜನು ತನ್ನ 'ಮದನ-ತಿಲಕ'ವನ್ನು ಮೊದಲು ಹೀಗೆ ಚಂಪುವಿನಲ್ಲಿ ಬರೆದನು. 'ಖಗೇಂದ್ರಮಣಿದರ್ಪಣ'-

ನಲ್ಲಿ ಗ್ರಂಥವಿಷಯದ ಸಮರ್ಥನೆಗಾಗಿ ಪ್ರೌಢಕಾವ್ಯಗಳಲ್ಲಿಯ ವರ್ಣನಾವಿಷಯಗಳ ವಿಡಂಬನೆ ಚೆನ್ನಾಗಿ ಬಂದಿದೆ.

'ಮರನಂ ಗಾಳಿಯ ಧೂಳಿಯಂ ರಜನಿಯಂ ನೀರಾಟವಮಂ ಬೇಟವಮಂ।
ಸುರೆಯಂ ಸೂಟಿಯರಂ ವಿಟಾಟವಿಕರಂ ಕೊಂಡಾಡಿ ಬೆಂಡಾಗದೀ।
ಧರೆಯೊಳ್ ಸರ್ವಜನೋಪಕಾರಮೆನಲೀ ಮಂತ್ರೌಷಧೀವ್ರಾತಮಂ।
ನಿರುತಂ ಭಾವಿಸಿ ಪೇಲ್ದ ಮಾನವನೆ ತಾಂ ದೇವಂ ಧರಾಚಕ್ರದೊಳ್॥'

(೧–೬೩)

ವರ್ಣನೆಗಳ ಅದೇಅದೇತನದಿಂದ ಹಿಂದೆಯೂ ಬೇಸರು ಹುಟ್ಟಿತ್ತೆಂಬುದು ಇಲ್ಲಿ ತಿಳಿಯುತ್ತದೆ. ಆದರೆ ಮಂತ್ರೌಷಧೀಗ್ರಂಥವನ್ನು ಬರೆದ ಮಾನವನೆ ದೇವನೆಂದು ಹೊಗಳಿಕೊಂಡ ಮಂಗರಸನು ತನ್ನನ್ನೂ ವಿಡಂಬಿಸಿಕೊಂಡಿದ್ದಾನೆ. 'ಪಲವು ಮತ-ತತ್ವದೊಳಾನಜೀವನಿತಂ' (೧–೬೬) ಹೇಳುವುದಾಗಿ ಅಂದಿದ್ದಾನೆ. ಬರೆವಣಿಗೆಯಲ್ಲಿ ಕವಿತಾರಚನೆಯ ನೈಪುಣ್ಯ, ಕಲ್ಪನಾಶಕ್ತಿ ಕಂಡುಬರುತ್ತವೆ. ಶಾಸ್ತ್ರಜ್ಞಾನ, ಅನುಭವಗಳನ್ನು ಪ್ರೌಢವಾದರೂ ಸುಲಭವೇದ್ಯವಾದ ಪದ್ಯದಲ್ಲಿ ನಿರೂಪಿಸುವ ಶಾಸ್ತ್ರ-ಕವಿಯ ಶಕ್ತಿ ಇಲ್ಲಿ ಎದ್ದು ಕಾಣುತ್ತದೆ.

ಜೈನಮತತತ್ವಗಳನ್ನು ಕಥೆಯ ಮೂಲಕವಾಗಿ ಇಲ್ಲವೆ ನೇರವಾಗಿ ಸುಲಭ ಚಂಪೂರೂಪದಲ್ಲಿ ಹೇಳಿದ ಕೆಲವು ಕವಿಗಳಿದ್ದಾರೆ. 'ಧರ್ಮಾಮೃತ'ದ ನಯಸೇನನ ಪರಂಪರೆಯನ್ನು ಅವರು ಮುಂದುವರಿಸಿದ್ದಾರೆ. ಅವರಲ್ಲಿ ವೃತ್ತವಿಲಾಸನು 'ಧರ್ಮ-ಪರೀಕ್ಷೆ'ಯೆಂಬ ಗ್ರಂಥದಲ್ಲಿ ಸಂಸ್ಕೃತದಲ್ಲಿಯ ಆ ಹೆಸರಿನ ಗ್ರಂಥವನ್ನು 'ಎಲ್ಲರಜೀ-ವಂತುಟು ಕನ್ನಡದಿಂ ಪೇಟ್ದೆಂ' ಎನ್ನುತ್ತಾನೆ. ಪ್ರೌಢಚಂಪೂಕಾವ್ಯದ ಸರಣಿ-ಯನ್ನು ಬಿಡದಿದ್ದರೂ ಮತಪ್ರಚಾರದೃಷ್ಟಿಯಿಂದ ಅದು ಎಲ್ಲರರಿವಂತೆ ಸುಲಭವಾಗಿರ-ಬೇಕೆಂಬ ದೃಷ್ಟಿ ಜೈನಕವಿಗಳಲ್ಲಿ ಬೆಳೆಯಿತೆಂಬುದಕ್ಕೆ ಇದು ನಿದರ್ಶನವಾಗಿದೆ. ಜೈನತತ್ವದ ಉತ್ಕೃಷ್ಟತೆಯನ್ನು ಪ್ರಕಟಿಸುವ ಕಥೆಗಳು ಇದರಲ್ಲಿವೆ.

'ನೆಲನಗಲಕೆ ತೀವಿದ ಕ-।
ಟ್ಟಲೆಯಂ ಕಳೆಯಲ್ಕೆ ಗಗನತಳದೊಳ್ ಪಲವುಂ।
ಬೆಳಗಂಡಿಗಳಂ ಸಮೆದಂ।
ಜಳಜಜನೆನೆ ತೊಳಗಿ ಬೆಳಗಿದುವು ಭಗಣಂಗಳ್॥'

ಸಂಬಂಧ ಪದ್ಯಗಳಲ್ಲಿ ವೃತ್ತವಿಲಾಸನ ಪ್ರೌಢಕಲ್ಪನೆಯನ್ನೂ ಸುಲಭರಚನೆಯನ್ನೂ ಕೂಡಿ ಕಾಣಬಹುದು. ವೃತ್ತವಿಲಾಸನಂತೆ ೧೦ನೆಯ ಶ.ದ ಮಧ್ಯದಲ್ಲಿದ್ದ ನಾಗರಾಜನು ತನ್ನ 'ಪುಣ್ಯಾಸ್ರವ'ವೆಂಬ ಚಂಪೂಗ್ರಂಥದಲ್ಲಿ ಜೈನಗೃಹಸ್ಥಧರ್ಮವನ್ನು ವಿವರಿಸಿ ಒಂದೊಂದು ಗುಣದಲ್ಲಿ ಪ್ರಸಿದ್ಧಿಪಡೆದ ೫೨ ಪುರಾಣಪುರುಷರ ಕಥೆಗಳನ್ನು

Note

Note
Sameness

ಹೇಳಿದ್ದಾನೆ. ಇದೂ ಸಂಸ್ಕೃತದಿಂದ ಕನ್ನಡಿಸಲಾದ ಗ್ರಂಥ. 'ನಾಗೇಂದ್ರ ನಿಜಕವಿತೆಯ ಕನ್ನಡದ ನುಡಿಯ ಬೆಡಗಿನ ಗಡಣಂ' ಸಕ್ಕರೆಯ ಸಿರಿಯಂ ಎಂದು ಕವಿ ಆತ್ಮಸ್ತುತಿಮಾಡಿದ್ದಾನೆ. ವೃತ್ತವಿಲಾಸನ ಹಾಗೆ ಇವನ ದೃಷ್ಟಿ, ವಿಷಯ ಶೈಲಿಗಳು ತೋರುತ್ತವೆ. ಸು. ೧೪೦೦ರ ಆಯತವರ್ಮನು 'ಕನ್ನಡರತ್ನಕರಂಡಕ ಎಂಬ ತನ್ನ ಚಿಕ್ಕ ಗ್ರಂಥದಲ್ಲಿ ಜೈನಮತಕ್ಕೆ ಮುಖ್ಯವಾದ ರತ್ನತ್ರಯವನ್ನು ವಿವರಿ ದ್ದಾನೆ. ಚಂಪೂರೂಪದಲ್ಲಿ ನೇರವಾಗಿ ತತ್ವವಿವರಣೆಯನ್ನು ಮಾಡಿದ ಮೊದಲನೆ ಗ್ರಂಥವಿದು.

ಮಾರ್ಗಕಾವ್ಯದ ವ್ಯಾಮೋಹವು ಈ ಯುಗದಲ್ಲಿ ಕಡಿಮೆಯಾಗುತ್ತ ಬಂದಿ ತೆಂಬುದು ಜೈನಕವಿಗಳು ಸಹ ಷಟ್ಪದಿಗ್ರಂಥಗಳನ್ನು ಬರೆಯತೊಡಗಿದರೆಂಬುದರಿಂ ತಿಳಿಯುತ್ತದೆ. ಇದಕ್ಕೆ ಉದಾಹರಣೆಯೆಂದರೆ ಕುಮುದೇಂದು. ಕುಮುದೇಂದು ಮುನಿ ೧೩ನೆಯ ಶ.ದ ಉತ್ತರಾರ್ಧವನಾಗಿ ಜೈನಸಂಪ್ರದಾಯಕ್ಕೆ ಅನುಸರಿ 'ಕುಮುದೇಂದುರಾಮಾಯಣ'ವನ್ನು ವಿವಿಧ ಷಟ್ಪದಿಗಳಲ್ಲಿ ಬರೆದನು. ಇದ ಅಸಮಗ್ರವಾಗಿ ದೊರೆತಿದೆ, ಅದರಲ್ಲಿಯೂ ೧-೮ ಸಂಧಿಗಳ ೧ ಭಾಗ ಪ್ರಕಟವಾಗಿದ ಇದರಲ್ಲಿಯ ರಾಮಾಯಣಕಥೆ ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದ್ದು, ಅಂತ ಪಂಪರಾಮಾಯಣವನ್ನು ಇದು ಮುಕ್ಕಾಲು ಪಾಲು ಅನುಸರಿಸಿದೆ. ಕೆಲ ಮಾರ್ಪಾಡುಗಳು ಕಥನಸ್ವಾರಸ್ಯಕ್ಕಾಗಿ ಮಾಡಿಕೊಂಡವಾಗಿರುತ್ತವೆ. ಮುಖ್ಯವಾ ಈ ಗ್ರಂಥದ ಮಹತ್ವವು ಇದರ ಛಂದೋವೈವಿಧ್ಯದಲ್ಲಿದೆ. ಪ್ರತಿಯೊಂದು ಸಂ ಷಟ್ಪದಿಯ ಒಂದೊಂದು ಪ್ರಕಾರದಲ್ಲಿದ್ದು ಒಂದೊಂದು ರಾಗದ ಸೂಚನೆಯನ ಒಳಗೊಂಡಿದೆ. ಷಟ್ಪದಿಯು ಅದೇ ಪ್ರಕಾರವಿದ್ದಲ್ಲಿಯೂ ರಾಗ ಬೇರೆಯಾಗಿ ಎರಡು ಸಂಧಿಗಳಿಗೆ ತಾಳವನ್ನೂ ಹೇಳಲಾಗಿದೆ. ಕೆಲವು ಸಂಧಿಗಳಲ್ಲಿ ರಾಗನಿರ್ದೇ ದೊಡನೆ ರಗಳೆಗಳೂ ಬಂದಿವೆ. ಇನ್ನೂ ವಿಶೇಷವೆಂದರೆ ಪರಿವರ್ಧಿನಿ ಷಟ್ಪದಿ ಆರನೆಯ ಪಾದಗಳಲ್ಲಿ ಇರಬೇಕಾದುದಕ್ಕಿಂತ ಒಂದು ಗಣ ಹೆಚ್ಚಾಗಿದೆ ಇಲ್ಲವೆ ಅರ್ಧ ಗಣ ಹೆಚ್ಚಾಗಿ ಆಂತರಿಕಯತಿ-ಪ್ರಾಸಗಳನ್ನು ಒಮ್ಮೆ ಬಳಸಿದೆ, ಒಮ್ಮೆ ಬಿಟ್ಟ ಒಟ್ಟಿನಲ್ಲಿ ಛಂದಸ್ಸಿನಲ್ಲಿ ಶೈಥಿಲ್ಯದ ಪ್ರವೃತ್ತಿ ಹೆಚ್ಚಾಗಿ ಕಾಣುತ್ತದೆ. ಇದನ ನೋಡಿದರೆ ಸಂಗೀತದ ಪ್ರಭಾವದಿಂದ ಕುಮುದೇಂದುವಿನ ಪದ್ಯರಚನೆಗೆ ಗುಣದೋಷ ವೆರಡೂ ಉಂಟಾದಂತೆ ಭಾಸವಾಗುತ್ತದೆ. ಇವನಿಗಿಂತ ಮೊದಲು ಕುಮಾರಪದ್ಮರಸ ನಾನಾಷಟ್ಪದಿಗಳಲ್ಲಿ ಬರೆದಿದ್ದಾನೆ, ಆದರೆ ವೈವಿಧ್ಯ ಮತ್ತು ಸಂಗೀತಪ್ರಭಾವಿತವಾ ಪ್ರಯೋಗಬುದ್ಧಿ ಇವನಿಗೇ ವಿಶಿಷ್ಟವಾದುದು. ೭ ಇಲ್ಲವೆ ೭½ ಗಣ ಇದು ೮ ಗಣ ಸಮೀಪವಾಗಿದ್ದ ಕಾರಣ ೪ ಗಣಗಳ ತಾಳದ ಆವರ್ತನಕ್ಕೆ ಹೆಚ್ಚು ಸರಿಹೋಗಬಹ ದೆಂದು ಕೊನೆಯ ಚರಣದಲ್ಲಿ ಕುಮುದೇಂದು ತನ್ನ ಸ್ವತಂತ್ರಪ್ರಯೋಗಮಾಡಿ ಬಹುದೆಂದು ನಮಗೆ ತೋರುತ್ತದೆ. ಮೃದುಪದಭಾವ, ಅರ್ಥ, ರಸ, ಗುಣ ಅಲಂಕಾರಗಳನ್ನು ಬಯಸಿ ಇವನು ಗ್ರಂಥರಚಿಸಿದ್ದಾನೆ. ಬಯಕೆಗೆ ಅನುಗುಣವಾ

ಹಾಡುಗಬ್ಬದಲ್ಲಿಯೂ ಪ್ರೌಢಕಾವ್ಯದ ಲಕ್ಷಣಗಳನ್ನು ತಂದಿದ್ದಾನೆ, ಹಳೆಯ-ಹೊಸ ಶೈಲಿಗಳ ಮಿಶ್ರಣವನ್ನೂ ಮಾಡಿದ್ದಾನೆ. ವರ್ಣಕದಲ್ಲಿ ವಸ್ತುಕದ ಪ್ರೌಢಿಮೆಯನ್ನು ಮೆರೆಯುವ ಈ ಒಲವು ಇನ್ನುಮುಂದೆ ಅನೇಕರಲ್ಲಿ ಕಂಡು ಬರುತ್ತದೆ. 'ಕವಿರಾಜ-ಶಿಖಾಮಣಿ' ಎಂಬ ಇವನ ಬಿರುದು ಉಳಿದನೇಕರ ಬಿರುದಿನಂತೆ ಶ್ಲಾಘನೆಯ ರೀತಿ ಅಷ್ಟೆ. 'ಮತ್ಕೃತಿ ಮಾಡುವುದು ಚಮತ್ಕೃತಿಯಂ' (ಪೀ. ೪೨) ಎಂಬುದು ಮಾತ್ರ ನಿಜ. ರಾಘವಾಂಕನ 'ಹರಿಶ್ಚಂದ್ರಕಾವ್ಯ'ವನ್ನು ಇವನು ಓದಿರಬೇಕೆಂದು ಪೀ. ೪೭ ಮುಂ. ಪದ್ಯಗಳಿಂದ ಅನುಮಾನಿಸಲು ಬರುವಂತಿದೆ.

೨೧. ಈ ಯುಗದ ಇತರರು (೨)

ಮಾರ್ಗದಿಂದ ದೇಸಿಯತ್ತ ಮೊಗದಿರುವಿ ವೀರಶೈವರೂ ಜೈನರೂ ಈ ಯುಗ-ದಲ್ಲಿ ವಾಙ್ಮಯನಿರ್ಮಾಣಮಾಡಿದಂತೆ ೧೪ನೆಯ ಶ.ದಿಂದ ಮುಂದೆ ವೈದಿಕರೂ ಮಾಡಿದ್ದಾರೆ. ಲೌಕಿಕಗ್ರಂಥಗಳ ರಚನೆಯ ಅನಂತರ ಕನ್ನಡದಲ್ಲಿ ಧಾರ್ಮಿಕ ಗ್ರಂಥಗಳ ರಚನೆಗೆ ರುದ್ರಭಟ್ಟನು ಮೊದಲು ಕೈಯಿಕ್ಕಿದನು, ಆದರೆ ಮಾರ್ಗಕಾವ್ಯದ ಪದ್ಧತಿಯನ್ನು ಬಿಡಲಿಲ್ಲ. ೧೪ನೆಯ ಶ.ದಿಂದ ಮುಂದೆ ವಿಷಯ-ಪದ್ಧತಿಗಳೆರಡ-ರಲ್ಲಿಯೂ ದೇಸಿತನವು ಕಂಡು ಬಂದಿದೆ. ಇದಕ್ಕೆ ಮುಖ್ಯನಿದರ್ಶನ ದಾಸವಾಙ್ಮಯದ್ದು. ದಾಸಕೂಟಸಂಸ್ಥೆಯ ಪರಾಮರ್ಶೆಯನ್ನು ಮುಂದೆ ಮಾಡಲಿದ್ದೇವೆ. ಈಗ ದಾಸ-ವಾಙ್ಮಯದ ಪ್ರಾರಂಭವು ಕನ್ನಡದಲ್ಲಿ ಎಂದಾಯಿತೆಂಬುದು ಪ್ರಸ್ತುತವಾಗಿದೆ. ಅಚಲಾನಂದದಾಸರೆಂಬವರು ಕ್ರಿ.ಶ. ೮೭೫ರಲ್ಲಿ ಅಂದರೆ ೯ನೆಯ ಶ.ದಲ್ಲಿದ್ದು ಉಗಾಭೋಗ, ಹಾಡುಗಳನ್ನು ಬರೆದರೆಂದೂ 'ದಾಸಸಾಹಿತ್ಯರಚನೆಗೆ ಮೊದಲಿಗರು' ಎಂದೂ ಶ್ರೀ. ಬೇಲೂರು ಕೇಶವದಾಸರು ಅಭಿಪ್ರಾಯಪಟ್ಟಿದ್ದಾರೆ.[1] ಅವನಿಗೆ ವಿಟ್ಠಲನು ಪ್ರತ್ಯಕ್ಷನಾದ ಕಾಲವನ್ನು ಸೂಚಿಸುವ ಸಂಸ್ಕೃತಪದ್ಯವೊಂದರ ಆಧಾರದ ಮೇಲೆ ಅವನ ಕಾಲವನ್ನು ಅಷ್ಟು ಹಿಂದೆ ಒಯ್ಯಲಾಗಿದೆ. ಆದರೆ ದಾಸಸಾಹಿತ್ಯದ ಉಳಿದೆಲ್ಲ ಅಭ್ಯಾಸಿಗಳ ಅಭಿಪ್ರಾಯದಲ್ಲಿ ಅಚಲಾನಂದನು ಅಷ್ಟು ಪ್ರಾಚೀನನಲ್ಲ. ಇಷ್ಟೇ ಅಲ್ಲ, ಅವನು ಮಧ್ವಾಚಾರ್ಯರ ಉಲ್ಲೇಖಮಾಡಿದ್ದರಿಂದ ಅವರ ತರುವಾಯ-ದವನು, ಬಹುಶಃ ೧೬ನೆಯ ಶ.ದಲ್ಲಿದ್ದವನು.[2] 'ಭಾಷೆಯ ಸ್ವರೂಪದಿಂದಲೂ ವಿಚಾರ-

---

1 ಬೇಲೂರು ಕೇಶವದಾಸರು : ಹರಿದಾಸ ಸಾಹಿತ್ಯ, ಪು. ೬-೭,
ಕರ್ಣಾಟಕ ಭಕ್ತವಿಜಯ, ಭಾಗ ೧, ಪು. ೭-೧೨.

2 'ಕೇಳೊ ಜೀವನೆ ನೀ ಮಧ್ವಮತವನನುಸರಿಸಿ ಶ್ರೀ-
ಲೋಲನಂಘ್ರಿಗಳ ನೆನೆದು ಸುಖಿಸೊ'
—(೧೭ ನುಡಿಗಳ ಪದದ ಪಲ್ಲವಿ)—ಅಚಲಾನಂದ.

ಶಬ್ದಪ್ರಯೋಗಗಳ ಸಾಮ್ಯದಿಂದಲೂ ಅವರು ಪುರಂದರದಾಸರಿಗಿಂತ ಇತ್ತೀಚಿನವ ರೆಂದು ತಿಳಿಯಬೇಕಾಗುತ್ತದೆ.[1] ಈ ಅಭಿಪ್ರಾಯವು ಸರಿಯೆಂದು ತೋರುತ್ತದೆ ಆ ಸಂಸ್ಕೃತಪದ್ಯವು ಅರ್ವಾಚೀನಕಾಲವನ್ನಾದರೂ ಸೂಚಿಸುತ್ತಿರಬೇಕು ಇಲ್ಲ ಪ್ರಾಚೀನತೆಯ ಆಭಾಸಕ್ಕಾಗಿ ರಚಿಸಲ್ಪಟ್ಟಿರಬೇಕು. ಈಗ ತಿಳಿದಮಟ್ಟಿಗೆ ದಾಸ ಸಾಹಿತ್ಯಕ್ಕೆ ಮೊದಲಿಗನೆಂದರೆ ನರಹರಿತೀರ್ಥನು. ಇವನು ಮಧ್ವಾಚಾರ್ಯ ತರುವಾಯ ಮೂರನೆಯವನಾಗಿ ಪೀಠಕ್ಕೆ ಗುರುವಾದನು. ೧೩ನೆಯ ಶ.ದ ಕೊನೆ ೧೪ನೆಯ ಶ.ದ ಮೊದಲಲ್ಲಿ ಜೀವಿಸಿದನು. ಸಂನ್ಯಾಸಿಯಾಗುವ ಮುಂಚೆ ಇವನ ಒರಿಸ್ಸಾ ದೇಶದ ಅರಸರಲ್ಲಿ ಅಧಿಕಾರಿಯಾಗಿದ್ದನೆಂದೂ ವ್ಯವಹಾರನಿಪುಣನಾಗಿದ್ದ ನೆಂದೂ ತಿಳಿಯುತ್ತದೆ. ಆ ದೇಶವನ್ನು ಕೆಲವು ಕಾಲ ಆಳಿದ ಹಾಗೆಯೂ ತಿಳಿಯು ತ್ತದೆ. ರಘುಕುಲತಿಲಕ ಎಂಬ ಅಂಕಿತದಿಂದ ಇವನು ಬರೆದ ಹಾಡುಗಳಲ್ಲಿ ಎರಡ ಮಾತ್ರ ಉಳಿದಿವೆ: 'ಎಂತು ಮರುಳಾದೆ', 'ಹರಿಯೇ ಇದು ಸರಿಯೇ'. ಮೊದಲ ಹಾಡಿನಲ್ಲಿ 'ಮಾತಿನಲ್ಲಿ ಹರಿದಾಸತನ। ನೀತಿಯಲ್ಲಿ ಪ್ರಭುದಾಸತನ', 'ಶ್ರೀ ಕಾಂತನ ಸೇವೆಗೆ ಅನುಮಾನ। ಭೂಕಾಂತನ ಸೇವೆಗೆ ಸುಮ್ಮಾನ' ಎಂಬ ಮಾತುಗಳ ಅವನ ರಾಜಸೇವೆಯನ್ನು ಸೂಚಿಸುತ್ತವೆ. ದೊರೆತ ಹಾಡುಗಳಲ್ಲಿ ಗುಣವಿಶೇಷವೇನೂ ಇಲ್ಲ. ಭಾಷೆಯೂ ನಯರಹಿತವಾಗಿದೆ. ಅದರಲ್ಲಿ ತೀರ ಅರ್ವಾಚೀನ, ಅಶುದ್ಧ ವೆನ್ನುವ ರೂಪಗಳು ಹಾಡುಗಾರರ ಬಾಯಲ್ಲಿ ಹಾಗೆ ಆಗಿರಬಹುದು. ಇಲ್ಲ ಮಾತಿನ ಭಾಷೆಗೆ ಸಮೀಪವಾಗಿಯೇ ಹಾಡುಕಟ್ಟುವ ದಾಸಕೂಟದ ಪರಂಪರೆ ನರಹರಿತೀರ್ಥನಿಂದಲೇ ಮೊದಲಾಗಿರಬಹುದು.

ಚೌಂಡರಸ

ಬ್ರಾಹ್ಮಣಕವಿಗಳಲ್ಲಿ ರುದ್ರಭಟ್ಟನು ಧಾರ್ಮಿಕ ಕಥೆಯನ್ನು ವಸ್ತುಕಕಾವ್ಯವಾಗಿ ಮೊದಲು ಬರೆದರೆ ಚೌಂಡರಸನು ಲೌಕಿಕಕಥೆಯನ್ನೇ ಮುಖ್ಯವಾಗಿ ನಿರೂಪಿಸುತ್ತ ಧಾರ್ಮಿಕ ಅಂಶದ ವಿಚಿತ್ರ ಮಿಶ್ರಣವನ್ನು ಮೊದಲುಮಾಡಿದನು. 'ಕಾದಂಬರಿ'ಯ ನಾಗವರ್ಮ, 'ಪಂಚತಂತ್ರ'ದ ದುರ್ಗಸಿಂಹನ ಹಾಗೆ ಇವನು ಸಂಸ್ಕೃತಗ್ರಂಥದ ಅನುವಾದವನ್ನು ಪ್ರೌಢಕಾವ್ಯಸರಣಿಯಲ್ಲಿ ಮಾಡಿದನು; ವಿಶೇಷವಾಗಿ ನಾಗ ವರ್ಮನು 'ಕಾದಂಬರಿ'ಯ ಗದ್ಯವನ್ನು ಚಂಪುವಿಗೆ ತಿರುಗಿಸಿದಂತೆ ಇವನು 'ದಶಕುಮಾರಚರಿತೆ'ಯ ಗದ್ಯಕ್ಕೆ ಚಂಪೂರೂಪ ಕೊಟ್ಟನು. ಪಂಪ, ರನ್ನ (ಪೊನ್ನ ?), ಚಂದ್ರ, ರುದ್ರ ಇವರನ್ನು ಇವನು ನೆನೆದ ಕಾರಣ ೧೨ನೆಯ ಶ.ದನಂತರ ದವನೆಂದು ತಿಳಿದರೂ ಯಾವ ಕಾಲದಲ್ಲಿದ್ದನೆಂದು ನಿರ್ಧರಿಸಲು ಆಧಾರವು ದೊರೆತಿಲ್ಲ ಎಂದು ಕವಿಚರಿತಕಾರರು ಹೇಳಿದ್ದಾರೆ, ಸು. ೧೩೦೦ರಲ್ಲಿರಬಹುದೆಂದು ಊಹಿಸಿದ್ದಾರೆ

---

1 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೫೨.

ಪಂಡರಾಪುರದ ವಿಟ್ಠಲನ ಭಕ್ತನೆಂಬುದು ಗ್ರಂಥದಿಂದ ಸ್ಪಷ್ಟವಾಗಿ ತಿಳಿಯುತ್ತದೆ. 'ಪಂಡರೀರಾಯನ**ಭಂಗ ವಿಟ್ಠ**ಲಂ' ಎಂದು ಮೊದಲ ಪದ್ಯದಲ್ಲಿಯೇ ಇದೆ. ಅಭಂಗ ಎಂಬುದು ಮರಾಠಿಯಲ್ಲಿ ಪದ್ಯದ ಒಂದು ಧಾಟಿಗೆ ಹೆಸರು. 'ಅಭಂಗಗಳಿಂದ ಸ್ತುತನಾದ ವಿಟ್ಠಲ' ಎಂಬರ್ಥವು ಸರಿಯಾದರೆ ೧೩ನೆಯ ಶ.ದಲ್ಲಿಯೇ ಚೌಂಡರಸನು ಇದ್ದಿರಬೇಕು. ೮–೬೧ರಲ್ಲಿಯ ಸಿಂಹಣದೊರೆಯ ಉಲ್ಲೇಖವೂ ಇದಕ್ಕೆ ಪುಷ್ಟಿಕೊಡುವಂತಿದೆ. ತಾನು 'ಮನೋಹರಪ್ರಚುರಶಿಷ್ಯ' ಎಂದೂ 'ವಿಟ್ಠಲ-ಪದಾಂಭೋಜಾತಭೃಂಗ'ನೆಂದೂ ಹೇಳಿಕೊಂಡಿದ್ದಾನೆ. ಇವನು ಪಂಡರಾಪುರ-ದವನಾದರೂ ಆಗಿರಬೇಕು ಇಲ್ಲವೆ ಅಲ್ಲಿ ಕೆಲಕಾಲ ವಾಸಮಾಡಿದವನಾದರೂ ಆಗಿರ-ಬೇಕು. 'ದೊರಕಿದ ಶಬ್ದದಿಂ ನೆಗಟ್ದಿ ಕಾವ್ಯಮನೆನ್ನಱಿವಂತು ಪೇೞ್ದಿಂ' (೧–೧೫) ಎಂದೂ

'ಸಕಲಾಂತರ್ಯಾಮಿ ಜೀವಪ್ರಕರವಿವಿಧಚೈತನ್ಯರೂಪಂ ಜಗದ್ವ್ಯಾ-।
ಪಕಭಾವಂ ವಿಷ್ಣುವೆಂದಾಗಮತತಿ ಸತತಂ ಸಾರ್ವಸಂಬಂಧದಿಂ ಕೌ-।
ತುಕದಿಂದಾವಾವುದಂ ಬಣ್ಣಿಸಿದೊಡದು ಹರಿಸ್ತೋತ್ರಮೆಂದೀಗಳೀ ಚಿ-।
ತ್ರಕಥಾವಿಸ್ತಾರಮಂ ಬಣ್ಣಿಸಲೊಡರಿಸಿದೆಂ ಸತ್ಕವಿಶ್ರೇಣಿ ಮೆಚ್ಚಲ್ ॥' (೧–೧೬)

ಎಂದೂ ಹೇಳಿದ್ದಾನೆ. ಮುಂದಿನ ಪದ್ಯದಲ್ಲಿ ದಂಡಿ ಬರೆದ 'ದಶಕುಮಾರಚರಿತೆ'-ಯನ್ನು 'ಆಂ ಪ್ರಸಿದ್ಧಿಯವತಾರಾಕಾರಮಂ ತಾಳ್ದಿ ಸದ್ವಿದಿತಂ ರಂಗದೊಳಾಡಿ ತೋರ್ಪ ತೆಱದಿಂ ಪೇೞ್ವೆಂ ಸುಕರ್ಣಾಟದಿಂ' (೧–೧೭) ಎಂದು ಹೇಳಿದೆ. ಇದನ್ನೆಲ್ಲ ನೋಡಿದರೆ ಲೌಕಿಕವಾದ, ಅದರಲ್ಲಿಯೂ ಜಾರಚೋರರ ಸಾಹಸಚಿತ್ರವುಳ್ಳ ಕಥೆಯನ್ನು ಅನುವಾದಿಸುವಲ್ಲಿ ಒಂದು ಧಾರ್ಮಿಕ ಇಲ್ಲವೆ ಆಧ್ಯಾತ್ಮಿಕಸಮಾಧಾನ-ವನ್ನು ಹೊಂದುವ ಪ್ರಯತ್ನವು ಇಲ್ಲಿ ಕಾಣುತ್ತದೆ. 'ಎಲ್ಲ ಜೀವರಲ್ಲಿ ದೇವರಿದ್ದಕಾರಣ, ಯಾವುದನ್ನು ಬಣ್ಣಿಸಿದರೂ ಅದು ಹರಿಸ್ತೋತ್ರ' ಎಂಬ ಸಮರ್ಥನೆ ವಿಚಿತ್ರವೇ ಆಗಿದೆ. ಪಂಡರಾಪುರ ಹಾಗೂ ವಿಟ್ಠಲದೇವರನ್ನು ಬಣ್ಣಿಸಲು 'ದಶಕುಮಾರ ಚರಿತೆ'ಯ ಅನುವಾದದಲ್ಲಿ ಸ್ವಕಲ್ಪಿತವನ್ನು ಅನುಗೊಳಿಸುವುದು ಸಾಧ್ಯ ಎಂಬ ಕಾರಣದಿಂದ ಅದನ್ನು ಆರಿಸಿಕೊಂಡು ಆಮೇಲೆ ಸ್ವಂತದ ಭಕ್ತಿಭಾವನೆಗೆ ಸರಿ-ಹೋಗುವಂತೆ ಕವಿ ಅದರ ಸಮರ್ಥನೆ ಮಾಡಿಕೊಂಡಂತೆ ತೋರುತ್ತದೆ.

'ಅಭಿನವದಶಕುಮಾರಚರಿತೆ' ದಂಡಿಯ ಗದ್ಯಕಾವ್ಯದ ಚಂಪೂರೂಪ-ದಲ್ಲಿಯ ಪ್ರೌಢ, ಆದರೂ ಬಹುಮಟ್ಟಿಗೆ ಸರಳವಾದ ಅನುವಾದವಾಗಿದೆ, ತದ್ರೂಪ-ಭಾಷಾಂತರವಲ್ಲ. ಮುಖ್ಯಕಥಾನಕವು ಯಥಾಮೂಲವಾದರೂ ವರ್ಣನೆಗಳಲ್ಲಿ ಮೂಲದಲ್ಲಿಲ್ಲದ ವಿಸ್ತಾರ, ಸ್ವತಂತ್ರಕಲ್ಪನೆಗಳು ಬಂದಿವೆ. ಒಮ್ಮೊಮ್ಮೆ ಮೂಲ-ತ್ಯಾಗ ಇಲ್ಲವೆ ವ್ಯತ್ಯಾಸವು ತಲೆದೋರಿದೆ. ಮುಖ್ಯವಾದ ವ್ಯತ್ಯಾಸವೆಂದರೆ ೧೪ನೆಯ ಆಶ್ವಾಸದ ವಿಶ್ರುತನ ಕಥೆಯಲ್ಲಿ ಪಂಡರಾಪುರಕ್ಕೆ ಅವನು ಹೋಗಿ ಆ ಪುಣ್ಯಕ್ಷೇತ್ರದ

ಮತ್ತು ವಿಟ್ಠಲನ ಭಕ್ತಿಪೂರ್ವಕವಾದ ವರ್ಣನೆಯನ್ನು ಮಾಡಿದ್ದು. ಈ ಆಶ್ವಾಸದಲ್ಲಿ ವಿಶ್ರುತನನ್ನು ನಿಮಿತ್ತಮಾಡಿಕೊಂಡು ಚೌಂಡರಸನು ತನ್ನ ಇಷ್ಟದೇವತೆಯ ಸ್ತುತಿಗೆ ಅವಕಾಶವನ್ನು ಕಲ್ಪಿಸಿಕೊಂಡಿದ್ದಾನೆ. ಒಂದು ಪಡ್ಡಳಿಯಲ್ಲಿಯೂ ಅಷ್ಟಕದಲ್ಲಿಯೂ ವಿಟ್ಠಲನನ್ನು ಬಾಯ್ತುಂಬ ಹೊಗಳಿದ್ದಾನೆ.

‘ ಪುಲಕಂಗಳ್ ಮೆಯ್ಯೊಳ್ ಅಕ್ಷಿದ್ವಯದೊಳ್ ಅಸುರಜಿನ್ಮೂರ್ತಿ
ಜಿಹ್ವಾಗ್ರದೊಳ್ ನಿ- |
ರ್ಮಲನಾಮಂ ಭಾಳದೊಳ್ ಸಂಪುಟಕರಮೆನಸುಂ ಚಿತ್ತದೊಳ್ ಭಕ್ತಿಭಾವಂ |
ನೆಲಸಲ್ ಮದ್ಭಾಗ್ಯಸಂವೃದ್ಧಿಗೆ ಮಿಗೆ ನಲಿಯುತ್ತುಂ ಮನಃಪ್ರೀತಿಯಿಂ ವಿ- |
ಟ್ಠಲನಂ ಕಂಡಾರ್ತದಿಂ ಮೆಲ್ಲಡಿಗೆಱಗಿ ಕೃತಾರ್ಥಾತ್ಮನಾದೆಂ ನೃಪಾಲಾ ‖ ’
(೧೪–೧೭)

ಇಂಥ ಪದ್ಯಗಳಲ್ಲಿ ಚೌಂಡರಸನ ಆತ್ಮೀಯ ಅನುಭವವೇ ವರ್ಣಿತವಾದಂತಿದೆ. ವಿಟ್ಠಲಾಷ್ಟಕದಲ್ಲಿಯ ‘ ಶ್ರೀಗೆ ನಿರಂತರಂ ಬಯಸಿ ದುರ್ಜನರಂ ಸಲೆ ಸೇವೆಗೆಯ್ದು ’ ಮುಂತಾದ ಉಲ್ಲೇಖಗಳು ಅವನ ಆತ್ಮಚರಿತೆಯನ್ನು ಸೂಚಿಸುವಂತಿವೆ. ಹೃದಯ-ಸರೋಜದಲ್ಲಿ ವಿಟ್ಠಲಮೂರ್ತಿಯನ್ನಿಟ್ಟು ನಾಮಬಲದಿಂದ ಪಾಪ ಗೆದ್ದು ‘ ವೈಷ್ಣವ-ಬಂಧುಸಮೂಹಸಂಗದಿಂ ಸದಮಳಬೋಧೆಯಂ ತಿಳಿದು ಸತ್ಪಥಮಂ ಮಿಗೆ ಕಂಡೆನು-ರ್ವಿಪಾ ’ (ವಿ–೮) ಎಂಬುದು ಕವಿಯ ಆತ್ಮನಿವೇದನವಿದ್ದಂತಿದೆ. ಅನುವಾದದಲ್ಲಿ ನಾಗವರ್ಮನ ‘ ಕಾದಂಬರಿ ’ಯ ಸಮತೂಕದ ಪ್ರೌಢಿಮೆ ಇಲ್ಲವೆ ಲಾಲಿತ್ಯವಿಲ್ಲ. ಆದರೆ ಪ್ರೌಢಿಮೆಯನ್ನು ಪಡೆಯಬಯಸಿ ಸರಳತೆಯ ಸಹಜಪ್ರವೃತ್ತಿಗೆ ವಶವಾದ ಸರಣಿಯಿದೆ. ಹಳಗನ್ನಡರೂಪಗಳೊಡನೆ ಹೊಸ ರೂಪಗಳು ನುಸುಳಿಕೊಂಡಿವೆ. ಚೌಂಡರಸನ ಕವಿತಾಶಕ್ತಿ ಮಧ್ಯಮವಾದುದು. ಕಥನಕಲೆಯಲ್ಲಿ ಸಹಜಗತಿಯಿದೆ. ಅವನ ‘ ಅಭಿನವದಶಕುಮಾರಚರಿತೆ ’ ಮೂಲರೂಪವನ್ನು ಬದಲಿಸಿದ ಒಳ್ಳೆಯ ಅನುವಾದವೆಂದು ಹೇಳಬಹುದು. ಆದರೆ ಉದ್ದೇಶಮಿಶ್ರಣದಿಂದ ಅದು ಏಕಾಗ್ರತೆ-ಯನ್ನು ಕಳೆದುಕೊಂಡಿದೆ. ಅವನ ‘ ನಳಚರಿತ್ರೆ ’ ಎಂಬ ಇನ್ನೊಂದು ಚಂಪೂಕೃತಿ ಸಾಂಪ್ರದಾಯಿಕ ಪ್ರೌಢಸರಣಿಯಲ್ಲಿ ಹೇಳಿದ ನಳದಮಯಂತೀಕಥಾನಕವನ್ನು ಒಳಗೊಂಡಿದೆ.

ಈ ಯುಗದಲ್ಲಿ ಶಾಸ್ತ್ರಕಾರರಾದ ಕೆಲವು ಬ್ರಾಹ್ಮಣಕವಿಗಳಾಗಿ ಹೋದರು. ಅವರಲ್ಲಿ ೧೪ನೆಯ ಶ.ದ ಕೊನೆಯ ಅಭಿನವಮಂಗರಾಜನು ‘ ಅಭಿನವನಿಘಂಟು ’ ವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಹರಿಚಾರಿತ್ರವನ್ನು ಬರೆದ ಪೋಲಾಳ್ವ ದಂಡನಾಥನ ತರುವಾಯ ಇದು ಬ್ರಾಹ್ಮಣಗ್ರಂಥಕಾರನ ಎರಡನೆಯ ಷಟ್ಪದಿಗ್ರಂಥ. ಉಪಲಬ್ಧವಾದ್ದರಲ್ಲಿ ಇದೇ ಮೊದಲನೆಯದು. ಇದರಲ್ಲಿ ಸಂಸ್ಕೃತಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಹೇಳಿದೆ. ಸುಮಾರು ಇದೇ ಕಾಲದ ಕವಿಮಲ್ಲನು ಮನ್ಮಥ

ವಿಜಯವೆಂಬ ಕಾಮಶಾಸ್ತ್ರವಿಷಯವಾದ ಚಂಪುವನ್ನು ರಚಿಸಿದ್ದಾನೆ. ಶೃಂಗಾರ-ಸಾರಕೋವಿದರು ಅದನ್ನು ಆದರಿಸುವರೆಂದೂ ತಾನು 'ಲಕ್ಷಣಕವಿವರ'ನೆಂದೂ ಹೇಳಿಕೊಂಡಿದ್ದಾನೆ. ಚಂದ್ರರಾಜನ 'ಮದನತಿಲಕ'ದ ಅನಂತರ ಇದು ಎರಡನೆಯು-ದಾಗುತ್ತದೆ. ಇದೇ ಕಾಲದ ಅಭಿನವಚಂದ್ರನು ಅಶ್ವಶಾಸ್ತ್ರವನ್ನು ಪ್ರಾಯಿಕವಾಗಿ ಕಂದಗಳಾದ ಪದ್ಯಗಳಲ್ಲಿ ಬರೆದಿದ್ದಾನೆ. 'ಕನ್ನಡಕವಿ ನಿಜಕವಿತೆಯ ಬಿನ್ನಣಮಂ ಮೆಱೆವುದರಿದೆ ಪದ್ಯದೊಳ್' ಎಂದು ತಾನು ಗ್ರಂಥವನ್ನು ಬರೆದುದಾಗಿ ಹೇಳಿದ್ದಾನೆ.

ಭೀಮಕವಿ

೧೪ನೆಯ ಶ.ದ ಉತ್ತರಾರ್ಧದಲ್ಲಿ ಭೀಮಕವಿ 'ಬಸವಪುರಾಣ'ವನ್ನು ಬರೆದು ರಾಘವಾಂಕನಿಂದ ಮೊದಲಾದ ಚಾರಿತ್ರಿಕ ಷಟ್ಪದಿ ಗ್ರಂಥಗಳ ಸಂಪ್ರದಾಯವನ್ನು ಮುಂಬರಿಸಿದನು. 'ಭೀಮಕವೀಶ್ವರರ ರಗಳೆ', 'ಭೃಂಗಿದಂಡಕ'ಗಳನ್ನೂ ಇವನು ಬರೆದಂತೆ ತಿಳಿಯುತ್ತದೆ. 'ಬಸವಪುರಾಣ'ವು ಪಾಲ್ಕುರಿಕೆ ಸೋಮನಾಥನ 'ತೆಲುಗು ಬಸವಪುರಾಣ'ದ ಅನುವಾದವೆಂಬುದನ್ನು

'ಅಸಮಲಿಂಗೈಕ್ಯಾನುಭಾವ ।
ಪ್ರಸರಮತಿ ಕವಿಸೋಮನಾಥಂ ।
ರಸಮೊಸರೆ ಮುನ್ನುಸುರ್ದುದನೆ ಕನ್ನಡಿಸಿ ಪೇಳೆಂದು ॥
ಎಸೆವ ಬಸವಪುರಾಣಮಂ ಪಸ- ।
ರಿಸುವ ನಿರ್ಮಳಬೋಧೆಯಂ ಕರು- ।
ಣಿಸಿದ ಕಾರಣವೆನಗೆ ಪಿರಿದಾಯಾಸವಿನ್ನಿಲ್ಲ ॥ (೧–೧೬)

ಎಂಬುದರಿಂದ ತಿಳಿಯುತ್ತದೆ. ಶಿವಯೋಗನಿದ್ರೆಯಲ್ಲಿರುವಾಗ ಪಾಲ್ಕುರಿಕೆ ಸೋಮನೂ ಅನಘದೇವಾರ್ಯನೂ ಕನಸಿನಲ್ಲಿ ಬಂದು 'ನಾವು ರಚಿಸುವೆವು ಬಸವಕಥಾವಿಸರಮಂ ಬರೆದುಕೊ' (೧–೧೫) ಎಂದು ಭರವಸೆಯನ್ನು ಕೊಟ್ಟರಂತೆ. 'ವಸ್ತುಕವರ್ಣಕಂಗಳ ನೆರಪಿ ಹರಗಣಂಗಳನ್ನೈದೆ ಕೀರ್ತಿಸಿದ' (೧–೧೧) ಹರಿಹರರಾಘವಾಂಕರ ಕೃಪೆಯಿಂದ ಇದನ್ನು ರಚಿಸುವುದಾಗಿ ಕವಿ ಹೇಳಿದ್ದಾನೆ. ಸೋಮನ 'ಬಸವಪುರಾಣ'ವನ್ನು ಚಾರಿತ್ರಿಕಸಾಮಗ್ರಿ, ಕಥನಕ್ರಮ, ಪವಾಡಗಳ ಮಾಲಿಕೆ, ಇತರ ಭಕ್ತರ ಚರಿತ್ರೆ ಈ ಮುಂತಾದ ಎಲ್ಲ ಅಂಶಗಳಲ್ಲಿ ಇದು ಕನ್ನಡಿಸಿದೆ ಎಂಬುದು ಸ್ಪಷ್ಟ. ಆದರೂ ಭೀಮನ ಸಹಜಕಥನಕಲೆ ಇಲ್ಲಿ ಆವಿಷ್ಕಾರಹೊಂದಿದೆ. 'ಎರಡನೆಯ ಮುಕ್ಕಣ್ಣ ಬಸವಣ್ಣ'ನ ಚರಿತ್ರೆಯನ್ನು ಹೇಳುವಲ್ಲಿ ಸ್ವಯಂಸ್ಫೂರ್ತವಾಗಿ ಉಕ್ತಿ–ಉತ್ಸಾಹಗಳು ಎದ್ದು ಕಾಣುತ್ತವೆ. ಹರಿಹರನ 'ಬಸವರಾಜದೇವರ ರಗಳೆ'ಯನಂತರ ಇದು ಎರಡನೆಯ ಬಸವಚರಿತ್ರೆ. ಹರಿಹರನ ಕೃತಿಯ ಶ್ರೇಷ್ಠತೆ ಇದರಲ್ಲಿಲ್ಲ. ಯಾಕೆಂದರೆ

ಅದು ಚರಿತ್ರಕಾವ್ಯ, ಇದು ಪುರಾಣಕಾವ್ಯ. ಅದರಲ್ಲಿ ಬಸವಣ್ಣನವರ ವ್ಯಕ್ತಿತ್ವಚಿತ್ರ ಪ್ರಮುಖವಾಗಿದೆ, ಇದರಲ್ಲಿ ಬಸವಣ್ಣನವರ ಕಾರ್ಯದ ಇಲ್ಲವೆ ಪವಾಡಗಳ ವರ್ಣನೆ ಪ್ರಧಾನವಾಗಿದೆ. ಷಟ್ಪದಿಯಲ್ಲಿ ಬರೆದರೂ ಪ್ರೌಢಕಾವ್ಯದ ಅಲಂಕಾರ–ಚಮತ್ಕೃತಿಗಳ ಹಂಬಲಿಕೆ ಭೀಮನನ್ನು ಆವರಿಸಿದೆ.

‘ ಸರಸಮೃದುತರಯಮಕಗಮಕವಿ- |
ಸರಸಮಾಸಪ್ರಾಸದೇಶೀ- |
ಸರಣಿ ಶಬ್ದಾರ್ಥೋಪಮಾಚಾತುರ್ಯಮಾಧುರ್ಯ ||
ಸರಳಪದಶಯ್ಯಾದೃಢವ್ಯಾ- |
ಕರಣಯುತಲಾಲಿತ್ಯ ನಿಯಮಾ- |
ಕ್ಷರಸಲಕ್ಷಣಭಾವಮಾಗಿರೆ ರಚಿಸುವೆಂ ಕೃತಿಯ ||’ (೧–೧೯)

ಈ ಅವನ ಶೈಲಿಯ ಧ್ಯೇಯವನ್ನು ಅವನು ತನ್ನ ಮುಂದಿರಿಸಿಕೊಂಡಿದ್ದಾನೆ. ‘ ವಸ್ತುಕದ ಮುಂದೆ ವಿಳಾಸಮೇ ಸಾಮಾನ್ಯವರ್ಣಕವೀಕವಿತೆಯೆಂದು ಓಸರಿಸದಿರಿ ’ (೧–೨೧) ಎಂದು ಓದುಗರನ್ನು ಕೇಳಿದ್ದಾನೆ. ಈ ಬಗೆಯಲ್ಲಿ ದೇಸಿಗಬ್ಬದಲ್ಲಿಯೂ ಮಾರ್ಗ-ಲಕ್ಷಣವನ್ನು ಇರಿಸುವ ಸಂಪ್ರದಾಯವೊಂದು ಮುಂದೆ ಬೆಳೆದಿದೆ. ಅದಕ್ಕೆ ಮೊದಲಿಗ-ರಲ್ಲಿ ಭೀಮನು ಒಬ್ಬನಾಗಿದ್ದಾನೆ. ಅವನ ಶೈಲಿಯಲ್ಲಿ ಧಾರಾಳತೆ ಇದೆ, ಮಾರ್ದವ–ಮಾಧುರ್ಯಗಳಿವೆ. ಪಾಂಡಿತ್ಯದ ಆವೇಶವು ಆಗಾಗ ಅವನನ್ನು ಆಕ್ರಮಿಸಿದರೂ ಪುರಾಣಕಾರಕವಿಯ ಸಹಜಸುಂದರ ರೀತಿಯಲ್ಲಿ ಅವನು ಕಥೆಯನ್ನು ಸಾಗಿಸಿ-ಕೊಂಡು ಹೋಗುತ್ತಾನೆ. ಭಾಮಿನೀಷಟ್ಪದಿಯಲ್ಲಿ ಸಮಗ್ರವಾಗಿ ಬರೆದ ಮೊದಲನೆಯ ಗ್ರಂಥವೆಂದರೆ ಅವನ ಈ ‘ ಬಸವಪುರಾಣ ’. ಈ ದೃಷ್ಟಿಯಿಂದ ನೋಡಿದರೆ ಮೂರನೆಯ ಯುಗದ ಭಾಮಿನೀಷಟ್ಪದಿಕಾರರಿಗೆ ಪೂರ್ವಭಾವಿಯಾಗಿ ಬಂದ ಅವನು ಭಾಮಿನಿಯ ಸಹಜಲಾಲಿತ್ಯಕ್ಕೆ ಮಾರ್ಗದರ್ಶಿಯಾಗಿದ್ದಾನೆ. ಅದರಲ್ಲಿ ಸೂಕ್ಷ್ಮಲಯ, ವಿವಿಧ ಶಕ್ತಿಗಳನ್ನು ತುಂಬುವ ಕಾರ್ಯ ಮುಂದಿನವರಿಗೆ ಮೀಸಲಾಯಿತು.

ಪದ್ಮಣಾಂಕ

ಈ ಯುಗದ ಕೊನೆಯ ಷಟ್ಪದಿಕಾರ ಮತ್ತು ಚರಿತ್ರಕಾರನೆಂದರೆ ಪದ್ಮಣಾಂಕನು. ಇವನು ‘ ಪದ್ಮರಾಜಪುರಾಣ ’ವನ್ನು ವಾರ್ಧಕಷಟ್ಪದಿಯಲ್ಲಿ ಬರೆದಿದ್ದಾನೆ. ಇದು ಕೆರೆಯ ಪದ್ಮರಸನ ಚರಿತ್ರ. ಆನುಷಂಗಿಕವಾಗಿ ೫ನೆಯ ಸಂಧಿಯಲ್ಲಿ ಹರಿಹರ-ಚರಿತ್ರವೂ ಇದರಲ್ಲಿ ಬಂದಿದೆ. ಪದ್ಮಣಾಂಕನು ತಾನು ಪದ್ಮರಸನಿಂದ ಎಂಟನೆಯ ತಲೆಯವನೆಂದು ಹೇಳಿಕೊಂಡಿದ್ದಾನೆ. ಇದರಿಂದ ಅವನು ಬರೆದುದು ತನ್ನ ಹಿರಿಯ ಪೂರ್ವಜನೊಬ್ಬನ ಚರಿತ್ರೆಯಾಗಿದೆ. ಭೀಮಕವಿಯಂತೆ ಪ್ರೌಢವೂ ಸಲಕ್ಷಣವೂ

ಅವ ಕಾವ್ಯವನ್ನು ಬರೆಯುಬೇಕೆಂಬುದು ಇವನ ಗುರಿಯಾಗಿದೆ. 'ಉತ್ತಮಲಕ್ಷಣ-ಮರಿವ ಚತುರರೀಕೃತಿಗೊಲಿಯರೆ' (೧-೩೬), 'ಸರಸತ್ವದಿಂ ಸಲಕ್ಷಣದಿಂ ಬೆಡಗಿನಿಂ ....ಅಲಂಕಾರದಿಂ.......ನಿರುಪಮಮೃದೂಕ್ತಿಯಿಂ ಪ್ರೌಢಿಯಿಂ....ಈ ಕೃತಿಯುವತಿ ಕೋವಿದರನೇಂ ಸೋಲಿಸದೆ ಬಿಡುವಳೆ' (೧-೪೦) ಎಂಬ ಅವನ ಉಕ್ತಿಗಳನ್ನು ನೋಡಬೇಕು. ಭೀಮಕವಿಯಲ್ಲಿ ಮಾರ್ದವ-ಲಾಲಿತ್ಯಗಳು ಸಾಧಿಸಿದಂತೆ ಇವನಿಗೆ ಸಾಧಿಸಿಲ್ಲ. ಇವನಲ್ಲಿ ಅತಿಪ್ರೌಢಿ, ಸಂಸ್ಕೃತಪ್ರಾಚುರ್ಯ ಇದರ ಹಾವಳಿ ಹೆಚ್ಚಿದೆ. ಹಲವು ಕಡೆಗೆ ಇದು ತುಂಬ ಕ್ಲಿಷ್ಟವಾಗಿದೆ. ದೇಸಿಯಲ್ಲಿ ಮಾರ್ಗ ಬೆರೆತುಕೊಳ್ಳುವುದರ ಪ್ರತಿಯಾಗಿ ದೇಸಿಯ ಮೇಲೆ ಮಾರ್ಗದ ಅತಿಕ್ರಮಣವಾಗಿದೆ. ಹೀಗಾಗಿ ಶೈಲಿಗೆ ಆಭಾಸವುಂಟಾಗಿದೆ. ಷಟ್ಪದಿಯ ರೂಪದಲ್ಲಿ ಕಠಿಣಕ್ಲಿಷ್ಟವಾದ ಸಮಾಸಬಹುಲವಾದ ಗೌಡೀಶೈಲಿಯನ್ನು ಬಳಸಿದರೆ ಏನಾಗುತ್ತದೆ ಎಂಬುದಕ್ಕೆ ಇವನ ಕೆಲವು ಪದ್ಯಗಳು ದೃಷ್ಟಾಂತವಾಗಬಹುದು. ಉದಾ:

'ಬಭ್ರುಸದ್ದೃಷ್ಟ್ಯ ಚಿತ್ತಭ್ರಾಂತಿಕೃಲ್ಲುಠ- |
ತ್ಪ್ರಭ್ರಾಜಿತೋದ್ಯತ್ಕುಭ್ರಮಿತಘೃಣಿಚಯಾ- |
ದಭ್ರಸ್ಫುಲಿಂಗಮಿವ ವಿಭ್ರಮವಿಭೃತ್ ಖಡ್ಗಶುಭ್ರದಕ್ಷಕರಾಕ್ಷತಾ ||
ಬಭ್ರುವರ್ಣಜಟೋತ್ಕಟಾಭ್ರೇಷತತ್ಪರಾ- |
ತ್ತಭ್ರಮರಸಾಂದ್ರ ಸಾಂಭೋಭ್ರನಿಭಗಳಭವ- |
ಶ್ವಭ್ರಗಂ ದಕ್ಷಾಧ್ವರಭ್ರಂಶಕಾವಮಾಂ ಬಭ್ರನುತ ವೀರಭದ್ರ ||' (೧-೭)

ಇದೆಲ್ಲವೂ ಸುಲಭವಾಗಿ ಅರ್ಥವಾಗದ ಸಂಸ್ಕೃತವಾಗಿದೆ. ಇಂಥ ಪದ್ಯಗಳು ವಿರಳ-ವಾಗಿದ್ದರೂ ಒಟ್ಟಿನ ರೀತಿಯಲ್ಲಿ ಈ ಪ್ರವೃತ್ತಿ ಕಂಡು ಬರುತ್ತದೆ. ಸಂಸ್ಕೃತವಾಕ್ಯ, ಅವತರಣಿಕೆಗಳನ್ನು ಪುರಾಣೋಪನಿಷತ್ತುಗಳಿಂದ ಎತ್ತಿ ಷಟ್ಪದಿಯಲ್ಲಿ ಹೆಣೆಯು-ಲಾಗಿದೆ. ಹೀಗೆ ಪಾಂಡಿತ್ಯಚಮತ್ಕೃತಿಗಳ ಜೋಡಣೆ ಇದ್ದರೂ, ಪದ್ಮಣಾಂಕನಲ್ಲಿ ಕಥನಕವಿಯ ಶಕ್ತಿಯಿದೆ, ಅಚ್ಚಗನ್ನಡದ ಅರಿವಿದೆ. 'ಏನಾನುಮೊಂದೆರಡು ತಾಣ-ದೊಳಗೊಂದಿದ ರಸಾನಂದದಿಂ ಮರವೆಯಿಂ ಜಾಡ್ಯಭಾವದಿಂದೀ**ನವ್ಯದಿವ್ಯಕೃತಿ-ಯೊಳ್** ದೋಷಮಿರ್ದೊಡಂ'(೧-೪೩) ಅದನ್ನು ಗಮನಿಸಬಾರದೆಂದು ರಾಘವಾಂಕನ ರೀತಿಯಲ್ಲಿ ಅವನು ಹೇಳಿದ್ದಾನೆ. 'ನವ್ಯದಿವ್ಯಕೃತಿ' ಇಲ್ಲವೆ 'ಅಖಿಳಶಾಸ್ತ್ರಸಾರ' (೧೩-೬೯) ಎಂಬ ವಿಶೇಷಣಗಳು 'ಪದ್ಮರಾಜಪುರಾಣ'ದ ಅತಿಸ್ತುತಿಯಾಗುತ್ತವೆ ಎಂಬುದನ್ನು ನೆನೆಯಬೇಕು. ಚರಿತ್ರವಿಷಯನಾದ ವ್ಯಕ್ತಿ ಮಹಾವ್ಯಕ್ತಿಯಾಗಿದ್ದರೂ ಅವನನ್ನು ಕುರಿತು ಬರೆದ ಚರಿತ್ರೆ ತನ್ನ ಕಾವ್ಯಗುಣದಿಂದಲ್ಲದೆ 'ಮಹಾಚರಿತ'ವಾಗ-ಲಾರದು.

ಇಲ್ಲಿಸುವರೆಗೆ ಈ ಯುಗದ ಗ್ರಂಥಕಾರರ ಮತ್ತು ಗ್ರಂಥಗಳ ಸಮೀಕ್ಷೆಯನ್ನು ಮಾಡಿದಂತಾಯಿತು. ಮೊದಲಿನ ಯುಗಕ್ಕೆ ಸ್ಥೂಲವಾದ ಮಾರ್ಗಕಾವ್ಯದ ಏಕಮುಖತೆ-

ಯಿದೆ. ಆದರೆ ಈ ಯುಗದಲ್ಲಿ ಭಿನ್ನ ಭಿನ್ನ ಪ್ರವಾಹಗಳು ಕೂಡಿ ಹರಿದ ಕಾರಣ ಇದಕ್ಕೆ ಸಂಮಿಶ್ರತೆಯಿದೆ. ಹೀಗಿದ್ದರೂ ಕ್ರಾಂತದೃಷ್ಟಿ ಈ ಯುಗದ ಮೊದಲಲ್ಲಿ ಮಿಂಚಿತು. ಆಮೇಲೆ ಕಂಚುಮಿಂಚಾದಂತೆ ಕಂಡರೂ ಅದರ ಝುಳ ತಾಗದೆ ಇದ್ದವರು ಕಡಿಮೆ. ವಿಷಯ–ರೂಪ–ಭಾಷೆಗಳಲ್ಲಿ ಸ್ವಾತಂತ್ರ್ಯ, ನವೀನಪ್ರಯೋಗಗಳಲ್ಲಿ ಆಸಕ್ತಿ ಹೆಚ್ಚಾಗಿ ಕಾಣುತ್ತದೆ. ವಚನ–ಷಟ್ಪದಿಗಳ ವಾಙ್ಮಯವು ಈ ಯುಗದ ಹಿರಿಯ ಸೊತ್ತು. ಮುಂದೆ ಮಾರ್ಗಕಾವ್ಯವು ದೇಸಿಯೊಡನೆ ಬೆಳೆದಿದೆ, ಆದರೆ ಅದರಲ್ಲಿಯೂ ದೇಸಿಯ ವರ್ಚಸ್ಸು ಮೂಡದೆ ಇಲ್ಲ. ಬಸವಯುಗ ಎಂದಿದಕ್ಕೆ ಹೆಸರಿಡುವುದು ಬಸವೇಶ್ವರನ ಪ್ರಭಾವ-ವನ್ನಲ್ಲದೆ ಕ್ರಾಂತದೃಷ್ಟಿಯ ಸರ್ವಸಾಮಾನ್ಯವಾದ ಪ್ರಭಾವವನ್ನು ಸೂಚಿಸುವುದಕ್ಕೆಂದು ತಿಳಿಯಬೇಕು. 'ಸಂಕ್ರಮಣಯುಗ' ಎಂದೂ ಇದನ್ನು ಕರೆಯಬಹುದು. ಈ ಯುಗದ ನವೀನ ಪ್ರೇರಣೆಗಳ ಅಂಕಿತಕ್ಕೆ ಒಳಗಾಗದ ಒಳ್ಳೆಯ ಕೃತಿಗಳು ಹುಟ್ಟಿವೆ. ಅವುಗಳಲ್ಲಿ ಒಂದೆರಡು ಮಹಾಕೃತಿಗಳೂ ಆಗಿವೆ. ಇದನ್ನೂ ನಾವು ನೆನೆದಿರಬೇಕು. ಒಂದೊಂದು ಶತಮಾನವನ್ನು ಎತ್ತಿ ಅದರ ವಿಶೇಷವನ್ನು ಹೇಳುವುದು ಇಂದಿನ ಅಭ್ಯಾಸಪದ್ಧತಿ-ಯಲ್ಲಿ ವಾಡಿಕೆಯಾಗಿದೆ. ಆದರೆ ಅದರ ಇತಿಮಿತಿಗಳ ಅರಿವು ಮಾತ್ರ ಇರಬೇಕು. 'ಹತ್ತನೆಯ ಶತಮಾನವನ್ನು ನಾವು ಉದ್ದಾಮಕವಿಗಳ ಕಾಲವೆಂದು ಕರೆಯ-ಬಹುದಾದರೆ ಸಂಖ್ಯಾದೃಷ್ಟಿಯಿಂದ, ನವೀನ ಪ್ರಯೋಗಗಳ ದೃಷ್ಟಿಯಿಂದ ಹಾಗೂ ಜನಜೀವನದ ಮೇಲೆ ಅದರಿಂದುಂಟಾದ ಜಾಗೃತಿಯ ಮೇಲಿಂದ ಹನ್ನೆರಡನೆಯ ಶತಮಾನವನ್ನು ನಾವು ಸಾಹಿತ್ಯವು ಸಾರ್ಥಕತೆಯನ್ನು ಪಡೆದ ಕಾಲವೆಂದು ಹೇಳ-ಬಹುದಾಗಿದೆ'[1] ಎಂದು ಶ್ರೀ. ಮಾಳವಾಡರು ಹೇಳಿದ್ದಾರೆ. ೧೨ನೆಯ ಶತಮಾನವು ವಚನವಾಙ್ಮಯದ ಹಿರಿಮೆಯಿಂದ ಕನ್ನಡಸಾಹಿತ್ಯಕ್ಕೆ ಅಪೂರ್ವಕಾಂತಿಯನ್ನು ಬೀರಿದೆ ಎಂಬುದು ದಿಟ. ಆದರೆ ಅದರಿಂದ ಸಾಹಿತ್ಯವು ಸಾರ್ಥಕತೆ ಪಡೆದ ಕಾಲವೆಂದು ಈ ಶತಮಾನವನ್ನು ಮಾತ್ರ ಕರೆಯಬಹುದೇ? ೧೦ನೆಯ ಶ.ದಲ್ಲಿಯೂ ಕನ್ನಡ-ಸಾಹಿತ್ಯವು ಶ್ರೇಷ್ಠವಾದ ಮಾರ್ಗಕಾವ್ಯಗಳಿಂದ ಸಾರ್ಥಕತೆಯನ್ನು ಪಡೆದಿದೆ. ಸಾರ್ಥಕತೆಯೆಂಬುದು ಸಂಖ್ಯೆ, ನವೀನಪ್ರಯೋಗ, ಜನಜೀವನದಲ್ಲುಂಟಾದ ಜಾಗೃತಿ ಇಷ್ಟನ್ನೇ ಅವಲಂಬಿಸಿಲ್ಲ. ಒಮ್ಮೊಮ್ಮೆ ಇವಿಷ್ಟು ಮಾತ್ರ ಇರುವುದರಿಂದ ಸಾಹಿತ್ಯ ಸಾರ್ಥಕವಾಗದೆ ಹೋಗಬಹುದು. ಸಾಹಿತ್ಯಕ್ಕೆ ಇರುವ ಎರಡು ಮುಖಗಳಲ್ಲಿ ಮಾರ್ಗದ ಮೇಲ್ಮೆಯನ್ನು ಹತ್ತನೆಯ ಶತಮಾನದಲ್ಲಿಯೂ ದೇಸಿಯ ಮಹಿಮೆಯನ್ನು ಹನ್ನೆರಡರಲ್ಲಿಯೂ ಕಾಣುತ್ತೇವೆ. ಎರಡೂ ಶತಮಾನಗಳಲ್ಲಿ ಸಾಹಿತ್ಯವು ಸಾರ್ಥಕ-ವಾಗಿದೆ. ಇಲ್ಲಿ ಮುಖ್ಯವಾಗಿ ಅವುಗಳಲ್ಲಿಯ ಉತ್ತಮಾಂಶಗಳನ್ನು ಅನುಲಕ್ಷಿಸಿ ಈ ಮಾತನ್ನು ಹೇಳಿದೆ.

---

1 ಸ. ಸ. ಮಾಳವಾಡ: ಕರ್ನಾಟಕಸಾಹಿತ್ಯಸಂಸ್ಕೃತಿದರ್ಶನ, ಪು. ೮೮

‘ ಹದಿಮೂರನೆಯ ಶತಮಾನವು ಪ್ರತಿಕ್ರಿಯೆಯ ಕಾಲವಾಗಿದೆ. ಹನ್ನೆರಡನೆಯ ಶತಮಾನದ ಸಾಹಿತ್ಯಚರಿತ್ರೆಯಲ್ಲಿಯ ಶಕ್ತಿವಿಶೇಷಗಳ ಪ್ರತಿಕ್ರಿಯೆಯು ಹದಿಮೂರನೆಯ ಶತಮಾನದಲ್ಲಿ ಕಂಡುಬರುತ್ತದೆ. ಹನ್ನೆರಡನೆಯ ಶತಮಾನದ ಕೊನೆಗೆ ಸ್ವಲ್ಪಮಟ್ಟಿಗೆ ತೋರಿದ ಜೈನರ ಪುನರುತ್ಥಾನವು ಹದಿಮೂರನೆಯ ಶತಮಾನದ ತುಂಬ ವ್ಯಾಪಿಸಿದೆ ’[1] ಎಂದು ಹೇಳಿ ‘ ಈ ಶತಮಾನವು ಜೈನರ ಪುನರುತ್ಥಾನದ ಕಾಲವಷ್ಟೇ ಅಲ್ಲ, ಅವರ ಪ್ರಾಬಲ್ಯದ ಕಾಲವೆಂದು ಒಪ್ಪಬೇಕಾಗುತ್ತದೆ ’[2] ಎಂದೂ ಶ್ರೀ. ಮಾಳವಾಡರು ಸಮಾರೋಪಮಾಡಿದ್ದಾರೆ. ಕ್ರಿಯೆ–ಪ್ರತಿಕ್ರಿಯೆಗಳೆಷ್ಟು ಸಹಜವೋ ಸಮಕಾಲೀನವಾದ ಭಿನ್ನಕ್ರಿಯೆಗಳೂ ಅಷ್ಟೇ ಸಹಜ. ೧೨–೧೩ನೆಯ ಶತಕಗಳ ಸಾಹಿತ್ಯಚರಿತ್ರೆಯನ್ನು ಅವಲೋಕಿಸುವಾಗ ಎರಡನ್ನೂ ನೆನೆಯಬೇಕು. ಏರಿಕೆಯಲ್ಲಿದ್ದ ಜೈನಮತ ಮತ್ತು ವಾಙ್ಮಯಗಳಿಗೆ ೧೧ನೆಯ ಶ.ದಲ್ಲಿ ಆಘಾತಗಳು ಉಂಟಾಗಲು, ಪ್ರಚಾರಕರ ಆವೇಶವು ೧೧ನೆಯ ಶ.ದಿಂದ ೧೨ನೆಯ ಶ.ದ ಮಧ್ಯದವರೆಗಿನ ಜೈನಗ್ರಂಥಕಾರರಲ್ಲಿ ಹೆಚ್ಚಿದಂತೆ ಕಾಣುತ್ತದೆ. ನಯಸೇನ, ಬ್ರಹ್ಮಶಿವ ಇವರ ಕಥನರೀತಿ, ವಾದಸರಣಿ, ವಿಡಂಬನೆ, ದೇಸಿಯೊಲವು ಇದರಿಂದ ಇದನ್ನು ಅರಿತುಕೊಳ್ಳಬಹುದು. ೧೨ನೆಯ ಶ.ದ ಮಧ್ಯದಲ್ಲಿ ಕರ್ಣಪಾರ್ಯ, ೨ನೆಯ ನಾಗವರ್ಮ ಮುಂತಾದ ಜೈನಗ್ರಂಥಕಾರರು ಆಗಿಹೋದರು. ಅವರಿಗೆ ರಾಜಾಶ್ರಯವೂ ದೊರೆಯಿತು. ೧೨ನೆಯ ಶ.ದ ಉತ್ತರಾರ್ಧದಲ್ಲಿ ಹಾಗೂ ೧೩ನೆಯ ಶ.ದ ಮೊದಲಲ್ಲಿ ನೇಮಿಚಂದ್ರ, ಅಗ್ಗಳ, ಆಚಣ್ಣ ಮೊದಲಾದವರು ಇದ್ದರು, ಇವರಿಗೂ ರಾಜಾಶ್ರಯವಿತ್ತು. ಆದ್ದರಿಂದ ‘ ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ವೀರಶೈವಕವಿಗಳನೇಕರು ಹೆಚ್ಚಾಗಿ ಸಾಹಿತ್ಯನಿರ್ಮಾಣ ಮಾಡಿದ್ದರಿಂದ ಜೈನಕವಿಗಳು ಹಿಮ್ಮೆಟ್ಟಬೇಕಾಯಿತು. ಮೊದಲಿಗೆ ಅವರಿಗೆ ದೊರೆಯುತ್ತಿದ್ದ ರಾಜಾಶ್ರಯವೂ ಕಡಿಮೆಯಾಯಿತು ’[3] ಎಂಬುದು ಸತ್ಯಸಂಗತಿಯಲ್ಲ. ಆದರೆ ೧೨ನೆಯ ಶ.ದ ವೀರಶೈವ ಆಂದೋಲನದಿಂದ ಜೈನಮತ ಮತ್ತು ಸಮಾಜಕ್ಕೆ ಬಲವಾದ ಪೆಟ್ಟುಬಿದ್ದಿತೆಂಬುದು ನಿಜ. ಆ ಆಂದೋಲನವು ಕಲ್ಯಾಣದಲ್ಲಿಯ ಆಕಸ್ಮಿಕವಾದ ಘಟನೆಗಳಿಂದ ಒಡೆದು ಹೋಗದೆ ಇದ್ದರೆ, ಅದರ ಸಂಘಟನೆ ಅವ್ಯಾಹತವಾಗಿ ಸಾಗಿದ್ದರೆ ಇನ್ನೂ ಹೆಚ್ಚಾದ ಪರಿಣಾಮವು ಇಡೀ ಕರ್ನಾಟಕದ ಮೇಲೆ ಆಗಬಹುದಾಗಿತ್ತು. ಅಂದಿನ ವೀರಶೈವಸಾಹಿತ್ಯವು ಜನಾಶ್ರಯವನ್ನು ಪಡೆದು ಬೆಳೆಯಿತು. ಆದ್ದರಿಂದ ರಾಜಾಶ್ರಯವನ್ನು ಪಡೆಯುತ್ತಿದ್ದ ಜೈನ ಇಲ್ಲವೆ ಬ್ರಾಹ್ಮಣಸಾಹಿತ್ಯಕ್ಕೆ ಅದು ಪ್ರತಿಸ್ಪರ್ಧಿಯಾಗುವ

---

1 ಸ. ಸ. ಮಾಳವಾಡ: ಕರ್ನಾಟಕಸಾಹಿತ್ಯಸಂಸ್ಕೃತಿದರ್ಶನ, ಪು. ೮೮

2 ಅದೇ, ಪು. ೯೯

3 ಅದೇ, ಪು. ೮೮

ಕಾರಣವೇ ಇರಲಿಲ್ಲ. ೧೩ನೆಯ ಶತಮಾನದಲ್ಲಿ ೧೨ನೆಯ ಶ.ದ ಶಕ್ತಿವಿಶೇಷಗಳ ಪ್ರತಿಕ್ರಿಯೆ ಸ್ವಲ್ಪಮಟ್ಟಿಗೆ ಆಗಿರುವುದು ನಿಜವಾದರೂ ಈ ಶತಮಾನವು ಪ್ರತಿಕ್ರಿಯೆಯ ಇಲ್ಲವೆ ಜೈನಪುನರುತ್ಥಾನದ ಕಾಲವೆಂದು ಹೇಳಲಾಗದು. ಪುನರುತ್ಥಾನಕ್ಕಿಂತ ಸಮರ್ಥವಾದ ಮುಂದುವರಿತದ ಕಾಲವೆಂದು ಹೇಳಬಹುದು. ಪ್ರತಿಕ್ರಿಯೆ ಸ್ವಮತದ ಶ್ರೇಷ್ಠತೆಯನ್ನು ತೋರಿಸಲು ಹೆಣಗಿದ ನೇರವಾದ ಇಲ್ಲವೆ ಸೂಚ್ಯವಾದ ಕಾವ್ಯ, ಶಾಸ್ತ್ರಗ್ರಂಥಗಳಲ್ಲಿಯೂ ಷಟ್ಪದಿರೂಪಸ್ವೀಕಾರದಲ್ಲಿಯೂ ಕಂಡು ಬಂದಿದೆ. ಆದರೆ ಎಂದಿನಂತೆ ಚಂಪೂಕಾವ್ಯದ ರೀತಿಯಲ್ಲಿ ಹುಟ್ಟಿದ ಜೈನಬ್ರಾಹ್ಮಣ ಪುರಾಣಗಳೂ, ಕಥನಕಾವ್ಯಗಳೂ ಕಣ್ಣುತುಂಬಿ ನಿಲ್ಲುತ್ತವೆ; ೧೨ನೆಯ ಶ.ದ ಘಟನೆಗಳು ನಡೆದಿರ-ಲಿಲ್ಲವೇನೊ ಎನ್ನುವಂತೆ ೧೦ನೆಯ ಶ.ದ ಪ್ರೌಢಪರಂಪರೆಯನ್ನು ೧೩ನೆಯ ಶ.ದ ಸಾಹಿತ್ಯ ಮುಂದುವರಿಸಿರುತ್ತದೆ. ಜನ್ನನು ಈ ಶತಮಾನದ ಹಿರಿಯ ಪ್ರಾತಿನಿಧಿಕ ಕವಿಯಾಗಿ ಮೆರೆಯುತ್ತಾನೆ. ಆದ್ದರಿಂದ ೧೨–೧೩ನೆಯ ಶ.ಗಳಲ್ಲಿ ದೇಸಿಮಾರ್ಗದ ಶಕ್ತಿಪ್ರವಾಹಗಳು ಹತ್ತಿರ ಹತ್ತಿರ ಆದರೂ ಬೇರೆ ಬೇರೆಯಾಗಿ ಹರಿದಿರುತ್ತವೆ.

ಹದಿಮೂರನೆಯ ಶತಮಾನದ ಕೆಲವು ವಿಶೇಷಲಕ್ಷಣಗಳನ್ನು ಹೇಳುತ್ತ ಶ್ರೀ. ಡಿ. ಕೆ. ಭೀಮಸೇನರಾಯರು ಹೀಗೆ ಹೇಳಿದ್ದಾರೆ: ‘ವೀರಶೈವಮತವು ೧೨ನೆಯ ಶತಮಾನದಲ್ಲಿಯೇ ಅಷ್ಟು ಪ್ರಾಬಲ್ಯಕ್ಕೆ ಬಂದಿದ್ದರೂ ಈ ಮತದ ಕವಿಯೊಬ್ಬನೂ ಕಾಣದೆ ಇದ್ದುದು ಚಮತ್ಕಾರವಾಗಿದೆ. ಈ ಶತಮಾನದಲ್ಲಿದ್ದರೆಂದು ಹೇಳಲ್ಪಡುವ ಕೆಲವು ಕವಿಗಳ ಕಾಲವೇ ಇನ್ನೂ ಸಂದಿಗ್ಧವಾಗಿದೆ’[1]. ಸೋಮರಾಜ, ಹರಿಹರ, ರಾಘವಾಂಕ, ಕೆರೆಯಪದ್ಮರಸ ಇವರನ್ನು ಕುರಿತು ಅವರ ಕೊನೆಯ ವಾಕ್ಯವಿದು. ಸೋಮರಾಜನ ಕಾಲವಿಚಾರ ಸಂದಿಗ್ಧವೆಂದು ಒಪ್ಪಿದರೂ ಹರಿಹರಾದಿಗಳ ಕಾಲವು ೧೨ನೆಯ ಶ.ದ ಕೊನೆ ಹಾಗೂ ೧೩ನೆಯ ಶ.ದ ಮೊದಲರ್ಧವೆಂದು ಇಂದು ಬಹು-ಮಟ್ಟಿಗೆ ಸ್ವೀಕೃತವಾಗಿದೆ. ಆದ್ದರಿಂದ ವೀರಶೈವಕವಿಯೊಬ್ಬನೂ ೧೩ನೆಯ ಶ.ದಲ್ಲಿ ಕಾಣುವುದಿಲ್ಲ ಎಂದು ಹೇಳಲಾಗದು. ಕುಮಾರಪದ್ಮರಸ, ಪಾಲ್ಕುರಿಕೆ ಸೋಮನಾಥ ಮತ್ತು ಬೇರೆ ರಗಳೆಯ ಕವಿಗಳೂ ಈ ಕಾಲದಲ್ಲಿದ್ದರು. ವಚನಕಾರರು ಮಾತ್ರ ಯಾರೂ ಈಗ ತಿಳಿದ ಮಟ್ಟಿಗೆ ಇಲ್ಲವೆನ್ನಬಹುದು. ‘ವೀರಶೈವಗ್ರಂಥಕಾರರು ತಮ್ಮ ಕೃತಿಗಳನ್ನು ರೂಢಿಯಲ್ಲಿದ್ದ ಚಂಪೂರೂಪದಲ್ಲಿ ಬರೆಯಲಿಲ್ಲ. ವಚನಗಳಲ್ಲಿಯೊ, ಷಟ್ಪದಿಗಳಲ್ಲಿಯೊ, ಬರಿಯ ರಗಳೆಗಳಲ್ಲಿಯೋ ಬರೆಯುತ್ತಿದ್ದುದರಿಂದ ಪಂಡಿತರಲ್ಲಿ ಇವರ ಕೃತಿಗಳಿಗೆ ಮಾನ್ಯತೆ ಸಿಕ್ಕಲಿಲ್ಲ. ತಮ್ಮ ಕೃತಿಗಳು ಅಷ್ಟು ಆದರಣೀಯವಾಗ-ದಿರುವಾಗ ಇನ್ನುಮುಂದೆ ನವೀನಕೃತಿ ರಚನೆಮಾಡುವುದರಿಂದ ಪ್ರಯೋಜನವಿಲ್ಲ-ವೆಂದು ತಿಳಿದು ಈ ಮತೀಯರು ಈ ಶತಮಾನದಲ್ಲಿ ಗ್ರಂಥರಚನೆಮಾಡಲಿಲ್ಲವೆಂದು

---

1 ಡಿ. ಕೆ. ಭೀಮಸೇನರಾವ್: ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರ-ಮಹಾರಾಷ್ಟ್ರಸಾಹಿತ್ಯಾವಲೋಕನ, ಪು. ೬೭

ಊಹಿಸಲು ಅವಕಾಶವಿದೆ'[1] ಎಂದೂ ಅದೇ ಲೇಖಕರು ಬರೆದಿದ್ದಾರೆ. ೧೨ನೆಯ ಶ.ದಲ್ಲಿ ವೀರಶೈವ ಪ್ರಾಬಲ್ಯದಿಂದ ಜೈನಸಾಹಿತ್ಯವು ಹಿಮ್ಮೆಟ್ಟಿತೆಂಬುದು ಹೇಗೆ ಸರಿಯಲ್ಲವೋ ಹಾಗೆ ೧೩ನೆಯ ಶ.ದಲ್ಲಿ ಜೈನಪ್ರಾಬಲ್ಯದಿಂದ ವೀರಶೈವಸಾಹಿತ್ಯವು ಕುಗ್ಗಿತು ಎಂಬುದು ದಿಟವಲ್ಲ. ಅದ್ಭುತವಾದ ವೇಗ ಮತ್ತು ಕಾಂತಿಯಿಂದ ಬೆಳಗಿದ ಶರಣಸಾಹಿತ್ಯವು ಸಾಮಾಜಿಕ ಕ್ರಾಂತಿಯ ಪ್ರಯೋಗದಲ್ಲಿ ಒಂದು ಸ್ಫೋಟವನ್ನು ಅನುಭವಿಸಿ ಕೆಲಮಟ್ಟಿಗೆ ಚೆದರಬೇಕಾಯಿತು. ಹರಿಹರ ಮೊದಲಾದವರು ವ್ಯಕ್ತಿಶಃ ೧೩ನೆಯ ಶ.ದಲ್ಲಿ ಅದನ್ನು ಉಜ್ವಲವಾಗಿ ಬೆಳಗಿಸಿದರು. ಆದರೂ ೧೨ನೆಯ ಶ.ದಲ್ಲಿಯ ಸಾಮೂಹಿಕಶಕ್ತಿ ಮತ್ತೆ ತಲೆಯೆತ್ತಲು ಕೆಲಕಾಲ ಬೇಕಾಯಿತು. ೧೩ನೆಯ ಶ.ದ ಕೊನೆ, ೧೪ನೆಯ ಶ.ದ ಮೊದಲಲ್ಲಿ ನಡೆದ ಮುಹಮ್ಮದೀಯರ ಅಭಿಯೋಗ ಮುಂತಾದ ರಾಜಕೀಯ ಘಟನೆಗಳ ತರುವಾಯದಲ್ಲಿ ವಿಜಯನಗರಸಾಮ್ರಾಜ್ಯ ಸ್ಥಾಪನೆಯಾಗಿ ಅದು ಸ್ಥಿರವಾಗುವವರೆಗೆ ಅಂದರೆ ಸುಮಾರು ೧೫ನೆಯ ಶ.ದ ಆರಂಭದವರೆಗೆ ವೀರಶೈವಪುನರುಜ್ಜೀವನವು ತಡೆಯಬೇಕಾಯಿತು. ಆದ್ದರಿಂದ ವೀರಶೈವಸಾಹಿತ್ಯವು ಪಂಡಿತಮಾನ್ಯತೆಯ ಅಭಾವದಿಂದ ಸೊರಗಿತೆನ್ನುವುದಕ್ಕಿಂತ ಅದಕ್ಕೆ ಕೆಲಕಾಲದ ಸಂವರಣೆ ಅವಶ್ಯವಾಗಿತ್ತು ಎಂಬುದು ಹೆಚ್ಚು ಸಯುಕ್ತಿಕವಾದುದು.

---

1 ಡಿ. ಕೆ. ಭೀಮಸೇನರಾವ್: ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರ. ಮಹಾರಾಷ್ಟ್ರಸಾಹಿತ್ಯಾವಲೋಕನ, ಪು. ೬೮

ಕುಮಾರವ್ಯಾಸ ಯುಗ

೨೨. ಈ ಯುಗದ ರೂಪರೇಷೆ

೧೫ನೆಯ ಶತಕದಿಂದ ೧೯ನೆಯ ಶ.ದ ಕೊನೆಯವರೆಗೆ ಅಂದರೆ ಆಧುನಿ ಕಾಲದವರೆಗೆ ಈ ಯುಗದ ವಿಸ್ತಾರವಿದೆ. ಎಲ್ಲ ಮತದ ಎಲ್ಲ ಪ್ರಕಾರಗಳ ಗ್ರಂಥ ರಚನೆಯ ಮೂಲಕ ಇದು ಮೊದಲಿನ ಯುಗಗಳಿಗಿಂತ ಹೆಚ್ಚು ಸಂಮಿಶ್ರವಾಗಿದೆ ಇದನ್ನು ಒಂದು ಯುಗವೆಂದು ಇಲ್ಲಿ ಕಲ್ಪಿಸಲಾಗಿದೆ. ಇದನ್ನು ಎರಡು ಕಾಲಖಂಡ ಗಳಲ್ಲಿ ವಿಭಜಿಸುವುದು ಸಾಧ್ಯವಿದೆ. ಆದರೆ ಒಟ್ಟಿನಲ್ಲಿ ಇದು ದೇಸಿನಿಷ್ಠವಾದ ಇಲ್ಲ ದೇಸಿಪ್ರಚುರವಾದ ಯುಗವಾಗಿದ್ದ ಕಾರಣ ಇದನ್ನು ಒಂದು ಯುಗವೆಂದು ಇಲ್ಲಿ ಕಲ್ಪಿಸಲಾಗಿದೆ. ಷಟ್ಪದಿ, ಸಾಂಗತ್ಯ, ತ್ರಿಪದಿ, ಕೀರ್ತನೆ ಇವುಗಳ ಪ್ರಸಾರವು ಈ ಯುಗದಲ್ಲಿ ಹೆಚ್ಚಿದೆ, ಚಂಪೂರೂಪವು ಮತ್ತೆ ತಲೆಯೆತ್ತಿದೆ. ವಿಜಯನಗರದ ರಾಯರ ಮತ್ತು ಮೈಸೂರಿನ ಒಡೆಯರ ವಿಶಾಲವಾದ ಛತ್ರದಲ್ಲಿ, ಬೇರೆ ಬೇ ಮಾಂಡಳಿಕರ ಆಶ್ರಯದಲ್ಲಿ ಈ ಯುಗದ ವಾಙ್ಮಯವು ಬೆಳೆದುಕೊಂಡು ಬಂದಿದೆ ಕುಮಾರವ್ಯಾಸನು ಈ ಯುಗದ ಪ್ರಾರಂಭಕಾಲದ ಮಹಾಕವಿಯಾಗಿ ಇದರ ದೇಸಿ ನಿಷ್ಠತೆಯ ಶ್ರೇಷ್ಠಪ್ರತಿನಿಧಿಯಾಗಿದ್ದಾನೆ, ತನ್ನ ಮುಂದಿನ ಕವಿಗಳಲ್ಲಿ ಕೆಲವರ ಮೇಲೆ ತನ್ನ ದರ್ಶನದ ಮತ್ತು ದೇಸಿನಿಷ್ಠೆಯ ಪ್ರಭಾವವನ್ನು ಬೀರಿದ್ದಾನೆ. (ಈ ಯುಗದ ಪ್ರಮುಖ ಗ್ರಂಥಕಾರರ ಪಟ್ಟಿಯನ್ನು ೨೩೩-೨೪೦ ಈ ಪುಟಗಳಲ್ಲಿ ಕೊಟ್ಟಿದೆ.)

ಈ ಯುಗದ ಪ್ರಮುಖ ಗ್ರಂಥಕಾರರು

ಈ ಯುಗದಲ್ಲಿ ಹಲವರ ಕಾಲವು ಚರ್ಚಾಸ್ಪದವಾಗಿದೆ. ಇವರಲ್ಲಿ ಕುಮಾರ ವ್ಯಾಸನ ಕಾಲವನ್ನು ಕವಿಚರಿತಕಾರರು ಸು. ೧೪೩೦ ಎಂದಿದ್ದರೆ, ಶ್ರೀ. ರಾಜ ಪುರೋಹಿತರು ಸು. ೧೫೩೦ ಎಂದು ಸಾಧಿಸಿದ್ದಾರೆ. ೧೩ನೆಯ ಶ.ದ ಪೂರ್ವಾರ್ಧ ವೆಂದು ಶ್ರೀ. ಗೋವಿಂದ ಪೈಗಳು ತೀರ್ಮಾನಿಸಿದ್ದಾರೆ. ಕೊನೆಯದು ದಿಟವಾದ ಕುಮಾರವ್ಯಾಸನು ಈ ಯುಗದಿಂದ ಹಿಂದಿನ ಯುಗಕ್ಕೆ ಸರಿಯಬೇಕಾಗುತ್ತದೆ ಮೂರನೆಯ ಯುಗಕ್ಕೆ ಕುಮಾರವ್ಯಾಸ ಯುಗವೆಂಬ ಹೆಸರೂ ನಿರರ್ಥಕವಾಗುತ್ತದೆ ಉಪಲಬ್ಧಪ್ರಮಾಣಗಳನ್ನು ನಿರೀಕ್ಷಿಸಿದರೆ ಖಚಿತವಾದ ನಿರ್ಣಯವು ಸುಲಭವಲ್ಲ ಎಂದು ತೋರುತ್ತದೆ. ಸರ್ವಸಾಧಾರಣವಾಗಿ ಮೇಲಿನ ಮತ್ತು ಕೆಳಗಿನ ಗಡುವು ಗಳನ್ನು ಗೊತ್ತುಪಡಿಸಬಹುದು. ೧೬ನೆಯ ಶ.ದ ಶಿಲಾಶಾಸನದಲ್ಲಿ ಕುಮಾರವ್ಯಾಸ ಉಲ್ಲೇಖ, ಕೃಷ್ಣದೇವರಾಯನ ಕಾಲದ ತಿಮ್ಮಣ್ಣಕವಿಯ ಭಾರತದಲ್ಲಿ ಕವಿ ಮತ್ತು ಕಾವ್ಯ ಇವೆರಡರ ಸ್ಪಷ್ಟ ಉಲ್ಲೇಖ ಇವುಗಳಿಂದ ಕುಮಾರವ್ಯಾಸನ ಕಾಲದ ಮೇಲ್ಗಡುವು ೧೫ನೆಯ ಶ.ದ ಕೊನೆ ಇಲ್ಲವೆ ೧೬ನೆಯ ಶ.ದ ಮೊದಲು ಎಂದಾಗುತ್ತದೆ. ಕೃಷ್ಣ

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೧ ಕುಮಾರವ್ಯಾಸ	ಸು. ೧೪೦೦	ಬ್ರಾಹ್ಮಣ		೧ ಕನ್ನಡಭಾರತ (ಮೊದಲ ಹತ್ತು ಪರ್ವಗಳು)	ಭಾಮಿನೀ ಷಟ್ಪದಿ
ನರಹರಿ ತೀರ್ಥ	ಸು.1300			೨ ಐರಾವತ ?	
೨ ದೇವರಾಜ	ಸು. ೧೪೦೦	ಶೈವ-ರಾಜವಂಶೀಯ		೧ ಸೊಬಗಿನ ಸೋನೆ	ಸಾಂಗತ್ಯ
				೨ ಅಮರುಕ	ಪರಿವರ್ಧಿನಿ ಷಟ್ಪದಿ
೩ ಭಾಸ್ಕರ	೧೪೨೫ (ಗ್ರಂ.ರ: ೧೪೨೪)	ಜೈನ		೧ ಜೀವಂಧರಚರಿತೆ	ಭಾಮಿನೀ ಷಟ್ಪದಿ
೪ ಲಕ್ಕಣ್ಣ ದಂಡೇಶ	ಸು. ೧೪೨೫	ವೀರಶೈವ	ಪ್ರೌಢದೇವರಾಯ	೧ ಶಿವತತ್ವಚಿಂತಾಮಣಿ	ವಾರ್ಧಕ ಷಟ್ಪದಿ
೫ ಮಗ್ಗೆಯ ಮಾಯಿದೇವ	ಸು. ೧೪೩೦	ವೀರಶೈವ	ಪ್ರೌಢದೇವರಾಯ	೧ ಅನುಭವಸೂತ್ರ	ಗದ್ಯ
				೨ ಶತಕತ್ರಯ	ವೃತ್ತ
				೩ ಪ್ರಭುಗೀತೆ	ಹಾಡು
				೪ ಏಕೋತ್ತರಶತಸ್ಥಲದ ಷಟ್ಪದಿ	ಷಟ್ಪದಿ
				೫ ಮಗ್ಗೆಯ ಮಾಯಿದೇವ ವಚನ	ವಚನ
				೬ ಷಟ್ಸ್ಥಲಗದ್ಯ	ಗದ್ಯ
೬ ಚಾಮರಸ	ಸು. ೧೪೩೦	ವೀರಶೈವ	?	೧ ಪ್ರಭುಲಿಂಗಲೀಲೆ	ಭಾಮಿನೀ ಷಟ್ಪದಿ
೭ ಗುರುಬಸವ	ಸು. ೧೪೩೦	ವೀರಶೈವ	ಪ್ರೌಢದೇವರಾಯ	೧ ಶಿವಯೋಗಾಂಗಭೂಷಣ	ಪರಿವರ್ಧಿನಿ ಷಟ್ಪದಿ
				೨ ಸದ್ಗುರುರಹಸ್ಯ	ಭಾಮಿನೀ ಷಟ್ಪದಿ
				೩ ಕಲ್ಯಾಣೇಶ್ವರ	ಪರಿವರ್ಧಿನಿ ಷಟ್ಪದಿ

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
				೪ ಸ್ವರೂಪಾಮೃತ	ಭಾಮಿನೀ ಷಟ್ಪದಿ
				೫ ವೃಷಭಗೀತೆ	ಭೋಗಷಟ್ಪದಿ
				೬ ಅವಧೂತಗೀತೆ	ಹಾಡು
				೭ ಮನೋವಿಜಯಕಾವ್ಯ	ಕುಸುಮ ಷಟ್ಪದಿ
೮ ಚಂದ್ರಕವಿ	ಸು. ೧೪೩೦	ವೀರಶೈವ	ಪ್ರೌಢದೇವರಾಯ	೧ ವಿರೂಪಾಕ್ಷಾಸ್ಥಾನ	ಚಂಪು
				೨ ಗುರುಮೂರ್ತಿಶಂಕರಶತಕ	ವೃತ್ತ
೯ ಕಲ್ಯಾಣಕೀರ್ತಿ	೧೪೪೦ (ಗ್ರಂ.ರ: ೧೪೩೯)	ಜೈನ	ಪಾಂಡ್ಯರಾಯ	೧ ಜ್ಞಾನಚಂದ್ರಾಭ್ಯುದಯ	ವಾ. ಭಾ. ಪ. ಷಟ್ಪದಿ
				೨ ಕಾಮನ ಕಥೆ	ಸಾಂಗತ್ಯ
				೩ ಅನುಪ್ರೇಕ್ಷೆ	ಪದ್ಯ-ಅಕ್ಷರವೃತ್ತ ?
				೪ ಜಿನಸ್ತುತಿ	ಕಂದ
				೫ ತತ್ವಭೇದಾಷ್ಟಕ	ವೃತ್ತ
೧೦ ವಿಜಯಣ್ಣ	೧೪೫೦ (ಗ್ರಂ.ರ: ೧೪೪೮)	ಜೈನ	ದೇವರಾಜ	೧ ದ್ವಾದಶಾನುಪ್ರೇಕ್ಷೆ	ಸಾಂಗತ್ಯ (ಕಂದವೃತ್ತಗಳು)
೧೧ ಬೊಮ್ಮರಸ	ಸು. ೧೪೫೦	ವೀರಶೈವ		೧ ಸೌಂದರಪುರಾಣ	ವಾರ್ಧಕ ಷಟ್ಪದಿ
೧೨ ತೋಂಟದ ಸಿದ್ಧೇಶ್ವರ	ಸು. ೧೪೭೦	ವೀರಶೈವ	ವಿರೂಪಾಕ್ಷ (೧೪೬೭–೭೮)	೧ ಷಟ್ಸ್ಥಲಜ್ಞಾನಸಾರಾಮೃತ	ವಚನ
೧೩ ಗುಬ್ಬಿಯ ಮಲ್ಲಣ್ಣ	ಸು. ೧೪೭೫	ವೀರಶೈವ		೧ ಗಣಭಾಷ್ಯರತ್ನಮಾಲೆ	ವಚನ
				೨ ವಾತುಲತಂತ್ರಟೀಕೆ	ಶಾಸ್ತ್ರಗದ್ಯ
೧೪ ಸ್ವತಂತ್ರಸಿದ್ಧಲಿಂಗೇಶ್ವರ	ಸು. ೧೪೮೦	ವೀರಶೈವ		೧ ಸ್ವತಂತ್ರಸಿದ್ಧಲಿಂಗೇಶ್ವರವಚನ	ವಚನ

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೧೫ ತೆರಕಣಾಂಬಿ ಬೊಮ್ಮರಸ	ಸು. ೧೪೮೫	ಜೈನ		೧ ಸನತ್ಕುಮಾರಚರಿತೆ	ಭಾಮಿನೀ ಷಟ್ಪದಿ
				೨ ಜೀವಂಧರಸಾಂಗತ್ಯ	ಸಾಂಗತ್ಯ
೧೬ ಚತುರ್ಮುಖ ಬೊಮ್ಮರಸ	ಸು. ೧೫೦೦	ವೀರಶೈವ		೧ ರೇವಣಸಿದ್ಧೇಶ್ವರಪುರಾಣ	ವಾರ್ಧಕ ಷಟ್ಪದಿ
೧೭ ಕುಮಾರವಾಲ್ಮೀಕಿ	ಸು. ೧೫೦೦	ಬ್ರಾಹ್ಮಣ		೧ ತೊರವೆರಾಮಾಯಣ	ಭಾಮಿನೀ ಷಟ್ಪದಿ
				೨ ಮೈರಾವಣನ ಕಾಳಗ	,,
೧೮ ಶಿಶುಮಾಯಣ	ಸು. ೧೫೦೦	ಜೈನ		೧ ತ್ರಿಪುರದಹನಸಾಂಗತ್ಯ }	ಸಾಂಗತ್ಯ
				೨ ಅಂಜನಾಚರಿತ್ರೆ }	
೧೯ ಸಿಂಗಿರಾಜ	ಸು. ೧೫೦೦	ವೀರಶೈವ		೧ ಮಲಬಸವರಾಜಚಾರಿತ್ರ	ವಾರ್ಧಕ ಷಟ್ಪದಿ
೨೦ ಶ್ರೀಪಾದರಾಯ	ಸು. ೧೫೦೦	ಬ್ರಾಹ್ಮಣ	ಸಾಳುವನರಸಿಂಗ	೧ ಕೀರ್ತನೆಗಳು	ಹಾಡು
೨೧ ನಿಜಗುಣಶಿವಯೋಗಿ	ಸು. ೧೫೦೦	ವೀರಶೈವ		೧ ಅನುಭವಸಾರ	ತ್ರಿಪದಿ
				೨ ಅರುವತ್ತುಮೂವರ ತ್ರಿಪದಿ	,,
				೩ ಕೈವಲ್ಯಪದ್ಧತಿ	ಹಾಡು
				೪ ಪರಮಾನುಭವಬೋಧೆ	ಸಾಂಗತ್ಯ
				೫ ಪರಮಾರ್ಥಗೀತೆ	ಲಲಿತರಗಳೆ
				೬ ಪರಮಾರ್ಥಪ್ರಕಾಶಿಕೆ	ಗದ್ಯ
				೭ ವಿವೇಕಚಿಂತಾಮಣಿ	,,
೨೨ ಸುರಂಗಕವಿ	ಸು. ೧೫೦೦	ವೀರಶೈವ		೧ ತ್ರಿಷಷ್ಟಿಪುರಾತನಚರಿತ್ರೆ	ಚಂಪು

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೨೩ ೩ನೆಯ ಮಂಗರಸ	೧೫೧೦ (ಗ್ರಂ.ರ: ೧೫೦೮)	ಜೈನ	ಚೆಂಗಾಳ್ವನೃಪ	೧ ಜಯನೃಪಕಾವ್ಯ	ಪರಿವರ್ಧಿನಿ ಷಟ್ಪದಿ
				೨ ಪ್ರಭಂಜನಚರಿತೆ	ಸಾಂಗತ್ಯ
				೩ ಶ್ರೀಪಾಲಚರಿತೆ	,,
				೪ ನೇಮಿಜಿನೇಶಸಂಗತಿ	,,
				೫ ಸಮ್ಯಕ್ತ್ವಕೌಮುದಿ	ವಾರ್ಧಕ ಷಟ್ಪದಿ
				೬ ಸೂಪಶಾಸ್ತ್ರ	,,
೨೪ ತಿಮ್ಮಣ್ಣಕವಿ	ಸು. ೧೫೧೦	ಬ್ರಾಹ್ಮಣ	ಕೃಷ್ಣದೇವರಾಯ	೧ ಕೃಷ್ಣರಾಜಭಾರತ	ಭಾಮಿನೀ ಷಟ್ಪದಿ
೨೫ ಗುಬ್ಬಿಯ ಮಲ್ಲಣಾರ್ಯ	೧೫೨೦ (ಗ್ರಂ.ರ: ೧೫೧೩, ೧೫೩೦)	ವೀರಶೈವ		೧ ಭಾವಚಿಂತಾರತ್ನ	ವಾರ್ಧಕ ಷಟ್ಪದಿ
				೨ ವೀರಶೈವಾಮೃತಪುರಾಣ	,,
೨೬ ನಂಜುಂಡ	ಸು. ೧೫೨೫	ವೀರಶೈವ	ನಂಜರಾಜ (೧೫೦೨–೩೩)	೧ ಕುಮಾರರಾಮಕಥೆ	ಸಾಂಗತ್ಯ (ನಡುವೆ ಷಟ್ಪದಿ)
೨೭ ವ್ಯಾಸರಾಯ	ಸು. ೧೫೨೫	ಬ್ರಾಹ್ಮಣ	ಕೃಷ್ಣದೇವರಾಯ	೧ ಕೀರ್ತನೆಗಳು	ಹಾಡು
೨೮ ಚಾಟುವಿಠಲನಾಥ (?)	ಸು. ೧೫೩೦	ಬ್ರಾಹ್ಮಣ	ಕೃಷ್ಣರಾಯ, ಅಚ್ಯುತರಾಯ	೧ ಭಾಗವತ	ಭಾಮಿನೀ ಷಟ್ಪದಿ
				೨ ಭಾರತ (ಕೆಲಭಾಗ)	,,
೨೯ ಅಭಿನವವಾದಿವಿದ್ಯಾನಂದ	ಸು. ೧೫೫೦	ಜೈನ	ಕೃಷ್ಣದೇವರಾಯ	೧ ಕಾವ್ಯಸಾರ	ಕಂದವೃತ್ತ
೩೦ ಪುರಂದರದಾಸ	ಸು. ೧೫೫೦	ಬ್ರಾಹ್ಮಣ		೧ ಕೀರ್ತನೆಗಳು	ಹಾಡು
೩೧ ಕನಕದಾಸ	ಸು. ೧೫೫೦	ಬೇಡ		೧ ಕೀರ್ತನೆಗಳು	ಹಾಡು

				೩ ರಾಮಧಾನ್ಯಚರಿತ್ರೆ	ಭಾಮಿನೀ ಷಟ್ಪದಿ
				೪ ನಳಚರಿತ್ರೆ	,,
				೫ ಹರಿಭಕ್ತಿಸಾರ	,,
೩೨ ಸಾಳ್ವ	ಸು. ೧೫೫೦	ಜೈನ	ಸಾಳ್ವಮಲ್ಲ	೧ ಸಾಳ್ವಭಾರತ	ಭಾಮಿನೀ ಷಟ್ಪದಿ
				೨ ರಸರತ್ನಾಕರ	ಕಂದವೃತ್ತ ವಚನ
				೩ ವೈದ್ಯಸಾಂಗತ್ಯ	ಸಾಂಗತ್ಯ
				೪ ಶಾರದಾವಿಲಾಸ	?
೩೩ ಲಕ್ಷ್ಮೀಶ	ಸು. ೧೫೫೦	ಬ್ರಾಹ್ಮಣ		೧ ಜೈಮಿನಿಭಾರತ	ವಾರ್ಧಕ ಷಟ್ಪದಿ
೩೪ ರತ್ನಾಕರವರ್ಣಿ	೧೫೬೦ (ಗ್ರಂ.ರ: ೧೫೫೭) ತ್ರಿಲೋಕಶತಕ	ಜೈನ		೧ ಭರತೇಶವೈಭವ	ಸಾಂಗತ್ಯ
				೨ ತ್ರಿಲೋಕಶತಕ	ಕಂದ
				೩ ಹಾಡುಗಳು (ಅಣ್ಣಗಳ ಪದ)	ಹಾಡು
೩೫ ವಾದಿರಾಜ	ಸು. ೧೫೭೦	ಬ್ರಾಹ್ಮಣ		೧ ಕೀರ್ತನೆಗಳು	ಹಾಡು
				೨ ವೈಕುಂಠವರ್ಣನೆ	ಸಾಂಗತ್ಯ, ಹಾಡು
				೩ ಸ್ವಪ್ನಗದ್ಯ	ಭಾಮಿನೀ ಷಟ್ಪದಿ
				೪ ಲಕ್ಷ್ಮೀಯ ಶೋಭಾನೆ	ಹಾಡು
೩೬ ವಿರೂಪಾಕ್ಷಪಂಡಿತ	೧೫೮೫ (ಗ್ರಂ.ರ: ೧೫೮೪)	ವೀರಶೈವ		೧ ಚೆನ್ನಬಸವಪುರಾಣ	ವಾರ್ಧಕ ಷಟ್ಪದಿ

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೩೭ ಭಟ್ಟಾಕಳಂಕ	೧೬೦೦ (ಗ್ರಂ.ರ: ೧೬೦೪)	ಜೈನ	ಶ್ರೀರಂಗರಾಜ	೧ ಶಬ್ದಾನುಶಾಸನ	ಸಂಸ್ಕೃತ-ಸೂತ್ರವೃತ್ತಿ
೩೮ ಗೋವಿಂದವೈದ್ಯ (ಭಾರತಿನಂಜ)	೧೬೫೦ (ಗ್ರಂ.ರ: ೧೬೪೮)	ಬ್ರಾಹ್ಮಣ	ನಂಜರಾಜೇಂದ್ರ	೧ ಕಂಠೀರವನರಸರಾಜವಿಜಯ	ಸಾಂಗತ್ಯ
೩೯ ಗೋಪಕವಿ (ಗೋವಿಂದ)	೧೬೦೦ (ಗ್ರಂ.ರ: ೧೫೮೧)	ಬ್ರಾಹ್ಮಣ		೧ ನಂದಿಮಾಹಾತ್ಮ್ಯ	ವಾರ್ಧಕ ಷಟ್ಪದಿ
				೨ ಚಿತ್ರಭಾರತ	,,
೪೦ ನಾಗರಸ	ಸು. ೧೬೫೦ ?	ಬ್ರಾಹ್ಮಣ		೧ ಕನ್ನಡಭಗವದ್ಗೀತೆ	ಭಾಮಿನೀ ಷಟ್ಪದಿ
೪೧ ಷಡಕ್ಷರದೇವ	೧೬೫೦ (ಗ್ರಂ.ರ: ೧೬೫೫, ೧೬೭೭)	ವೀರಶೈವ		೧ ರಾಜಶೇಖರವಿಲಾಸ	ಚಂಪು
				೨ ಬಸವರಾಜವಿಜಯ	,,
				೩ ಶಬರಶಂಕರವಿಲಾಸ	,,
				೪ ವೀರಭದ್ರದಂಡಕ	
೪೨ ಚಿಕದೇವರಾಜ	೧೭೦೦ (೧೬೭೨–೧೭೦೪)	ವೈಷ್ಣವ	ಅರಸು	೧ ಚಿಕದೇವರಾಜಬಿನ್ನಪ ?	ಗದ್ಯ
				೨ ಗೀತಗೋಪಾಲ ?	ಹಾಡು
				೩ ಭಾಗವತ	ಗದ್ಯಟೀಕೆ
				೪ ಶೇಷಧರ್ಮ	,,
				೫ ಭಾರತ	ಟೀಕೆ
೪೩ ತಿರುಮಲಾರ್ಯ	೧೭೦೦ (೧೬೪೫–೧೭೦೬)	ಬ್ರಾಹ್ಮಣ	ಚಿಕದೇವರಾಯ	೧ ಅಪ್ರತಿಮವೀರಚರಿತ	ಗದ್ಯ, ಕಂದವೃತ್ತ
				೨ ಚಿಕದೇವರಾಯವಿಜಯ	ಚಂಪು

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
				೩ ಚಿಕದೇವರಾಯವಂಶಾವಳಿ	ಗದ್ಯ
				೪ ಚಿಕದೇವರಾಜಶತಕ	ವೃತ್ತ
೪೪ ಚಿಕುಪಾಧ್ಯಾಯ	೧೭೦೦ (ಗ್ರಂ.ರ: ೧೬೭೨)	ಬ್ರಾಹ್ಮಣ	ಚಿಕದೇವರಾಜ	೯ ದಿವ್ಯಸೂರಿಚರಿತ್ರೆ ಮುಂ. (೩೦ರ ಮೇಲೆ)	ಚಂಪು
೪೫ ರಂಗನಾಥ	ಸು. ೧೬೭೫	ಬ್ರಾಹ್ಮಣ		೧ ಅನುಭವಾಮೃತ	ಭಾಮಿನೀ ಷಟ್ಪದಿ
೪೬ ಸಿಂಗರಾರ್ಯ	ಸು. ೧೭೦೦	ಬ್ರಾಹ್ಮಣ	ಚಿಕದೇವರಾಜ	೧ ಮಿತ್ರವಿಂದಾಗೋವಿಂದ	ನಾಟಕ
೪೭ ಹೊನ್ನಮ್ಮ	ಸು. ೧೭೦೦	?	ಚಿಕದೇವರಾಜ	೧ ಹದಿಬದೆಯ ಧರ್ಮ	ಸಾಂಗತ್ಯ
೪೮ ಸರ್ವಜ್ಞ	ಸು. ೧೬೦೦	ವೀರಶೈವ		೧ ವಚನಗಳು	ತ್ರಿಪದಿ
೪೯ ನಿರಾಲಂಬಶರಣ	ಸು. ೧೭೦೦	ವೀರಶೈವ		೧ ಅಖಂಡೇಶ್ವರವಚನ	ವಚನ
೫೦ ಚಿದಾನಂದಾವಧೂತ	ಸು. ೧೭೦೦	ಬ್ರಾಹ್ಮಣ		೧ ಜ್ಞಾನಸಿಂಧು	ಭಾಮಿನೀ ಷಟ್ಪದಿ
೫೧ ಹೆಳವನಕಟ್ಟೆ ಗಿರಿಯಮ್ಮ	ಸು. ೧೭೫೦	ಬ್ರಾಹ್ಮಣ		೧ ಚಂದ್ರಹಾಸಕಥೆ	ಸಾಂಗತ್ಯ
				೨ ಸೀತಾಕಲ್ಯಾಣ	ಹಾಡು
				೩ ಬ್ರಹ್ಮಕೊರವಂಜಿ	,,
				೪ ಹಾಡುಗಳು	,,
೫೨ ಲಿಂಗಣ್ಣ	ಸು. ೧೭೫೦	ವೀರಶೈವ		೧ ಕೆಳದಿನೃಪವಿಜಯ	ಚಂಪು

ಗ್ರಂಥಕಾರ	ಕಾಲ	ಮತ	ಆಶ್ರಯ	ಗ್ರಂಥ	ಸ್ವರೂಪ
೫೩ ಜಗನ್ನಾಥದಾಸ	೧೭೭೫ (೧೭೨೮–೧೮೦೯)	ಬ್ರಾಹ್ಮಣ		೧ ಹರಿಕಥಾಮೃತಸಾರ	ಭಾಮಿನೀ ಷಟ್ಪದಿ
				೨ ಕೀರ್ತನೆಗಳು	ಹಾಡು
				೩ ತತ್ವಸುವ್ವಾಲಿ	?
೫೪ ದೇವಚಂದ್ರ	೧೮೦೦ (೧೭೭೦–೧೮೪೧)	ಜೈನ	೩ ಕೃಷ್ಣರಾಜ	೧ ರಾಮಕಥಾವತಾರ	ಚಂಪು
				೨ ರಾಜಾವಳೀಕಥೆ	ಗದ್ಯ
೫೫ ಮುಮ್ಮಡಿ ಕೃಷ್ಣರಾಜ	೧೮೫೦ (೧೭೯೪–೧೮೬೮)		ಅರಸು	೧ ಅಖಂಡಕಾವೇರಿಮಾಹಾತ್ಮ್ಯ ಮುಂ. ೫೦ ಗ್ರಂಥಗಳು	ಗದ್ಯ
೫೬ ಕೆಂಪುನಾರಾಯಣ	೧೮೫೦ (ಗ್ರಂ.ರ: ೧೮೨೩)	ಬ್ರಾಹ್ಮಣ	೩ ಕೃಷ್ಣರಾಜ	೧ ಮುದ್ರಾಮಂಜೂಷ	ಗದ್ಯ
೫೭ ಅಳಿಯ ಲಿಂಗರಾಜ	೧೮೫೦ (೧೮೨೩–೧೮೭೪)		ಅರಸು	೧ ಅಂಗದ ಸಂಧಾನ ಮುಂ. ೪೭ ಗ್ರಂಥಗಳು	ಚಂಪು, ಷಟ್ಪದಿ, ಸಾಂಗತ್ಯ ಮುಂ.
೫೮ ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ)	೧೯೦೦ (೧೮೬೯–೧೯೦೧)	ಬ್ರಾಹ್ಮಣ		೧ ರಾಮಪಟ್ಟಾಭಿಷೇಕ	ವಾರ್ಧಕ ಷಟ್ಪದಿ
				೨ ಅದ್ಭುತರಾಮಾಯಣ	ಗದ್ಯ
				೩ ರಾಮಾಶ್ವಮೇಧ	,,

ದೇವರಾಯ ಕಾಲದವನಾದ ಕನಕದಾಸನು ತನ್ನ ‘ ಮೋಹನತರಂಗಿಣಿ ’(೧–೧೭)-ಯಲ್ಲಿ ಕುಮಾರವ್ಯಾಸ, ಕುಮಾರವಾಲ್ಮೀಕಿಗಳನ್ನು ಹೆಸರೆತ್ತದೆಯೂ ಸೂಚಿಸಿದ ಕಾರಣ, ೧೬ನೆಯ ಶ.ದ ಉತ್ತರಾರ್ಧದಲ್ಲಿ ಇವರಿಬ್ಬರೂ ಇರುವ ಸಂಭವ ಕಡಿಮೆ-ಯಾಗುತ್ತದೆ. ಕುಮಾರವಾಲ್ಮೀಕಿ ಕುಮಾರವ್ಯಾಸನ ಉಲ್ಲೇಖಮಾಡಿದ್ದರಿಂದ ಈ ಗಡುವು ಇನ್ನೂ ಕೆಳಗೆ ಸರಿಯುತ್ತದೆ. ಇದನ್ನು ಮತ್ತೂ ಕೆಳಗೆ ಒಯ್ಯಬಹುದಾದ ಪ್ರಮಾಣವೊಂದು ದೊರೆತಿದೆ. ಅದೆಂದರೆ ಭಾಸ್ಕರನ ‘ ಜೀವಂಧರಚರಿತೆ ’.

ಕ್ರಿ.ಶ. ೧೪೨೩-೨೪ರಲ್ಲಿ ತನ್ನ ಗ್ರಂಥವನ್ನು ರಚಿಸಿದೆನೆಂದು ಹೇಳಿದ ಭಾಸ್ಕರನು ಕುಮಾರವ್ಯಾಸಭಾರತದಿಂದ ಕಾವ್ಯಭಾವಗಳನ್ನು ಒಂದೆರಡು ಕಡೆಗಳಲ್ಲಿಯಾದರೂ ಎರವಲಾಗಿ ತೆಗೆದುಕೊಂಡಂತಿದೆ,[1] ಕುಮಾರವ್ಯಾಸನಿಗೆ ವಿಶಿಷ್ಟವಾದ ಪದಪ್ರಯೋಗ-ಗಳನ್ನೂ ಅಲ್ಲಲ್ಲಿ ಬಳಸಿದ್ದಾನೆ. ಈ ಕಾವ್ಯಋಣ ಖಂಡಿತವಾದರೆ ೧೪ನೆಯ ಶ.ದ ಕೊನೆ ಅಥವಾ ೧೫ನೆಯ ಶ.ದ ಮೊದಲಲ್ಲಿ ಮೇಲಿನ ಗಡುವನ್ನು ಇರಿಸಬೇಕಾಗುತ್ತದೆ. ಭಾಸ್ಕರನು ಅನುಕರಣಪ್ರಿಯ ಸಾಧಾರಣಕವಿಯಾಗಿದ್ದ ಕಾರಣ, ಅವನೇ ಕುಮಾರ-ವ್ಯಾಸನಿಂದ ಉಪಕೃತನಾಗಿರುವ ಸಂಭವವು ಹೆಚ್ಚಿದೆ. ಕುಮಾರವಾಲ್ಮೀಕಿಯ ಕಾಲವನ್ನು ನಿರ್ಣಯಿಸಲು ಸ್ವತಂತ್ರ ಆಧಾರಗಳು ದೊರೆತಿದ್ದರೆ ಮೇಲಿನ ಎಲ್ಲೆಯನ್ನು ಗೊತ್ತುಪಡಿಸಲು ನೆರವಾಗುತ್ತಿತ್ತು. ಆದರೆ ಅವನ ಕಾಲವೇ ಕುಮಾರವ್ಯಾಸನ ಕಾಲನಿರ್ಣಯವನ್ನು ಈವರೆಗೆ ನೆಮ್ಮಿಕೊಂಡಿದೆ. ತನಗಿಂತ ಮುಂಚಿನ ಯಾವ ಕನ್ನಡಕವಿಗಳನ್ನೂ ಕುಮಾರವ್ಯಾಸನು ನೆನೆದಿಲ್ಲ. ಆದರೆ ಸೇವುಣ (ಸಾಹಣ), ಹೊಯ್ಸಳ (ಸಮುದ್ರಹೋಸಲ) ಈ ರಾಜವಂಶಗಳ ಉಲ್ಲೇಖದಿಂದ ಅವನು ೧೧–೧೨ನೆಯ ಶತಕದ ತರುವಾಯದವನೆಂಬುದು ತಿಳಿಯುತ್ತದೆ. ಹೀಗೆ ಸುಮಾರು ೧೩ನೆಯ ಶತಕವು ಕೆಳಗಿನ ಗಡುವಾದರೆ ೧೫ನೆಯ ಶತಕವು ಮೇಲಿನ ಗಡುವೆಂದು ಗ್ರಹಿಸಬಹುದು. ೧೩ನೆಯ ಶ.ದ ಪೂರ್ವಾರ್ಧದಲ್ಲಿ ಅವನನ್ನಿರಿಸಲು ಶ್ರೀ. ಗೋವಿಂದ ಪೈಗಳು ಕೊಟ್ಟ ಆಧಾರಗಳು ನಿರ್ವಿವಾದವೆಂದು ನಮಗೆ ತೋರುವುದಿಲ್ಲ. ಕುಮಾರವ್ಯಾಸನು ಮಾಡಿದ ‘ ಬುದ್ಧಲಿಂಗಿಗಳು ’ (ಆದಿಪರ್ವ, ೨೮–೨೪) ಎಂಬ ಉಲ್ಲೇಖದಲ್ಲಿಯ ಬೌದ್ಧರು ಕರ್ನಾಟಕದಲ್ಲಿ ಅವನಿಗೆ ಸಮಕಾಲೀನರಾಗಿಯೇ ಇರಬೇಕೆಂದು ಹೊರಡುವುದಿಲ್ಲ. ಒಂದು ಕಾಲಕ್ಕೆ ಆಗಿಹೋದವರನ್ನೂ ಕವಿ ಉಲ್ಲೇಖಿಸಬಹುದು. ಮಹಾಭಾರತಕಾಲದಲ್ಲಿ ಇದ್ದವರಲ್ಲದೆ ತರುವಾಯ ಕಾಲದವ-ರನ್ನೂ ದೇಶಕಾಲವಿರುದ್ಧವಾದರೂ ಕವಿ ಉಲ್ಲೇಖಿಸುತ್ತಾನೆ. ಅವರು ಸಮಕಾಲೀನ-

---

1 ಭಾಸ್ಕರ: ಜೀವಂಧರಚರಿತೆ ೪_೮೧ (ಕು.ವ್ಯಾ.ಭಾರತ—ದ್ರೋಣಪರ್ವ, ೭–೩೦)
,, ,, ೮_೧೦ (,, ಆದಿಪರ್ವ, ೨೯–೧೦)
,, ,, ೮_೨೭ } ,, ,, ೨೯–೨೧ }
,, ,, ೧೬_೫೫ } ,, ವಿರಾಟಪರ್ವ, ೩–೮ }
,, ,, ೧೭–೩೫ }

ರಿರಬಹುದು, ಪೂರ್ವಕಾಲೀನರಿರಬಹುದು. ಬೌದ್ಧರನ್ನು ಅರಿತಿರಬೇಕಾದರೆ ಕವಿ ೧೪ನೆಯ ಶ.ಕ್ಕೆ ಮುಂಚಿನವನಾಗಿಯೆ ಇರಬೇಕೆಂದಿಲ್ಲ. 'ಲಿಂಗಿಗಳು' ಎಂದರೆ ಲಿಂಗಾಯತ ಇಲ್ಲವೆ ವೀರಶೈವರೆಂದು ಭಾವಿಸಿದರೂ ಕವಿಕಾಲದ ಕೆಳಗಡುವನ್ನು ಗೊತ್ತುಪಡಿಸಲು ಬಂದೀತಲ್ಲದೆ ಕಾಲನಿರ್ಣಯವಾಗಲಾರದು. ಬಲ್ಲಾಳದಡ್ಡಿ, ಬಲ್ಲಾಳನಾಥ, ಅಶನಿಸಂನಾಹ ಎಂಬ ಪದಪ್ರಯೋಗಗಳಿಂದಲೂ ಶ್ರೀ. ಪೈಗಳು ಕೊಟ್ಟ ಅರ್ಥವು ಸರಿಯಾಗಿದ್ದರೆ ಇದೇ ಮಾತು ಹೊರಡುತ್ತದೆ. ಮುಖ್ಯವಾಗಿ ಕನ್ನಡಭಾರತದಲ್ಲಿ ಬಂದಿರುವ ಮರಾಠೀಶಬ್ದ, ವ್ಯಾಕರಣಲಕ್ಷಣಗಳಿಂದ ಕವಿಯ ಕಾಲ ೧೩ನೆಯ ಶ.ದ ಪೂರ್ವಾರ್ಧವಾಗಿರಬೇಕೆಂದು ಶ್ರೀ. ಪೈಗಳು ತೀರ್ಮಾನಿಸಿದ್ದಾರೆ.[1] ಕವಿಯ ಪ್ರಾಂತವಾದ ಗದುಗು ದೇವಗಿರಿಯ ಸೇಉಣರ ಕೈಸೇರಿದಂದಿನಿಂದ ಮರಾಠಿಯ ಪ್ರಚಾರವು ಹೆಚ್ಚಾಗುತ್ತಿರಬೇಕು, ಆದರೆ 'ಈತನ ಕಾಲದಲ್ಲಿ ಗದುಗು ಸೇವುಣರ ಕೈಸೇರಿ ಹೆಚ್ಚಾದರೆ ೧೦–೨೦ ವರ್ಷಗಳಾಗಿರಬೇಕಷ್ಟೇ'[2] ಎಂದವರು ಹೇಳಿದ್ದಾರೆ. ಇಷ್ಟು ಸ್ವಲ್ಪ ವರ್ಷಗಳಲ್ಲಿ ಜನಭಾಷೆಯ ಮೇಲೆ ಮತ್ತು ಕುಮಾರವ್ಯಾಸನ ಶೈಲಿಯ ಮೇಲೆ ಮರಾಠಿಯ ಪ್ರಭಾವವು ಅಷ್ಟುಮಟ್ಟಿಗೆ ಆಯಿತೆನ್ನುವುದು ನಂಬುವುದು ಕಷ್ಟ. ಕಾಲವಿಚಾರದಲ್ಲಿ ಭಾಷಾಶೈಲಿಯ ಪ್ರಮಾಣ ಪೂರಕವಾಗಬಹುದೇ ಹೊರತು ನಿರ್ಣಾಯಕವಾಗಲಾರದು. ಆದರೂ ಅದೊಂದನ್ನೇ ಗಮನಿಸಬಹುದಾದರೆ, ಸೇವುಣರ ಕಾಲದಿಂದ ವಿಜಯನಗರ ಕಾಲದ ಕೆಲಭಾಗದವರೆಗೆ ಸೈನಿಕರು, ಗಜಶಿಕ್ಷಕರು, ಕರಣಿಕರು ಮುಂತಾದವರ ಮೂಲಕ ಮರಾಠಿ, ಅರಬಿ, ಪಾರಸಿ ಶಬ್ದಗಳ ಆಯಾತವು ಗದುಗು ಸೀಮೆಯಲ್ಲಿ ಹೆಚ್ಚಿ ಸಾಕಷ್ಟು ರೂಢವಾಗಲು ನೂರರ ಮೇಲೆ ವರ್ಷಗಳು ಸಂದಿರಬೇಕೆಂದೂ ೧೪ನೆಯ ಶ.ದ ಉತ್ತರಾರ್ಧವು ಕುಮಾರವ್ಯಾಸನ ಭಾಷಾಶೈಲಿಯ ಕೆಳಗಡುವಿರಬಹುದೆಂದೂ ನಮಗೆ ತೋರುತ್ತದೆ. 'ರಾವುತು' ಮುಂತಾದ್ದರಲ್ಲಿಯ ಉಕಾರವು ಮೂಲತಃ ಕನ್ನಡಪ್ರತ್ಯಯವಾಗಿ 'ಜ್ಞಾನೇಶ್ವರಿ'ಯಲ್ಲಿ ಅಂದಿನ ಮರಾಠಿಯ ಪ್ರತಿಬಿಂಬವಾಗಿ ಸೇರಿತು. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದು ನೆಲಸಿದ ಸೈನಿಕರು, ರಾವುತಮಾವುತರ ಬಾಯಲ್ಲಿಯೂ ಅದೂ ನೆಲಸಿರಬಹುದು. ವಿಜಯನಗರಕಾಲದಲ್ಲಿಯೂ ಅವರು ಇದ್ದಿರಬಹುದು. ಆದ್ದರಿಂದ ಅದರ ಪ್ರಯೋಗಮಾತ್ರದಿಂದ ಕುಮಾರವ್ಯಾಸನು ೧೩ನೆಯ ಶ.ದವನಾಗಬೇಕಿಲ್ಲ. ಪೌಜು ಶಬ್ದವನ್ನು ಕುಮಾರವ್ಯಾಸನು ಬಳಸಿಲ್ಲ, ತುರುಕರ ಹಾವಳಿಯ ಉಲ್ಲೇಖಮಾಡಿಲ್ಲ ಎಂಬ 'ಇಲ್ಲ' ಸ್ವರೂಪದ ಆಧಾರಗಳಿಂದ ಏನೂ ನಿಷ್ಪತ್ತಿಯಾಗದು. ೧೩ನೆಯ ಶ.ದ ಮೊದಲಿನಲ್ಲಿ ಇದ್ದವನಾದರೆ ಅವನು ೧೨ನೆಯ

---

1 ಗೋವಿಂದ ಪೈ: ಕುಮಾರವ್ಯಾಸನ ಕಾಲವಿಚಾರ (ಕುಮಾರವ್ಯಾಸಪ್ರಶಸ್ತಿ, ಪು. ೮–೧೦)

2 ಅದೇ, ಪು. ೨೦–೨೧

ಶ.ವಲ್ಲಿಯ ರಾಜಕೀಯ-ಧಾರ್ಮಿಕ ಕ್ರಾಂತಿಯ ಉಲ್ಲೇಖವನ್ನೇಕೆ ಮಾಡಲಿಲ್ಲ ಎಂದೂ ಕೇಳಬಹುದಲ್ಲವೇ?

ಕುಮಾರವ್ಯಾಸನ ಕಾಲವು ಸು. ೧೪೩೦ ಎಂದು ನಿರ್ಧರಿಸುವಾಗ, ೧೭-೧೮ನೆಯ ಶ.ಗಳಲ್ಲಿ ರಚಿತವಾದ ಚರಿತ್ರಗ್ರಂಥಗಳಲ್ಲಿಯ ದಂತಕಥೆಗಳನ್ನು ಕವಿಚರಿತೆಕಾರರು ಇತಿಹಾಸವೆಂದು ಭಾವಿಸಿದ್ದಾರೆ. ಅದರಿಂದ ಪ್ರೌಢದೇವರಾಯನ (೧೪೧೯-೪೬) ಕಾಲದಲ್ಲಿ ಕುಮಾರವ್ಯಾಸ-ಚಾಮರಸರು ಸಮಕಾಲವರ್ತಿಗಳೆಂದು ಹೇಳಿದ್ದಾರೆ. ಇದರಲ್ಲಿ ಸತ್ಯಾಂಶವಿರಬಹುದಾದರೂ ಸ್ವತಂತ್ರಪ್ರಮಾಣವೆಂದು ಇದನ್ನು ಗ್ರಹಿಸಲಾಗದು. ಹಾಗೆ ನೋಡಿದರೆ, ಇನ್ನೊಂದು ವೀರಶೈವಸಂಪ್ರದಾಯದಂತೆ ಕುಮಾರವ್ಯಾಸ-ರಾಘವಾಂಕರನ್ನು ಸಮಕಾಲೀನರೆನ್ನಬೇಕಾಗುತ್ತದೆ. ತಿಮ್ಮಣ್ಣಕವಿಯನ್ನು ಕುರಿತು ಕೃಷ್ಣದೇವರಾಯನು (೧೫೦೯-೧೫೩೦) 'ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ ಭಾರತದ ಉಳಿದ ಪರ್ವಗಳ ನೀ ಸಕಲಜನ ಮೆಚ್ಚುವಂತೆ ಹೇಳು' ಎಂದು ಹೇಳಿದ್ದರಿಂದ, ಕೃಷ್ಣದೇವರಾಯನ ಹೇಳಿಕೆಯ ಮೇರೆಗೆ ಮೊದಲು ಕುಮಾರವ್ಯಾಸನು ದಶಪರ್ವಗಳನ್ನು ರಚಿಸಿ ನಿರ್ಯಾಣಹೊಂದಲು, ಉಳಿದ ಪರ್ವಗಳನ್ನು ಬರೆದು ಮುಗಿಸಲು ಆ ದೊರೆ ತಿಮ್ಮಣ್ಣನಿಗೆ ಹೇಳಿರಬೇಕು; ಅಂತೆಯೆ 'ತಿಳಿಯಹೇಳುವೆ ಕೃಷ್ಣಕಥೆಯನು....**ಕೃಷ್ಣ ಮೆಚ್ಚಲಿಕೆ**' (ಆದಿಪರ್ವ, ೧-೬೫) ಎಂಬಲ್ಲಿ ಶ್ಲೇಷದಿಂದ ಕೃಷ್ಣದೇವರಾಯನನ್ನು ಕುಮಾರವ್ಯಾಸನು ಸೂಚಿಸಿದ್ದಾನೆ ಎಂದು ಮುಂತಾಗಿ ಶ್ರೀ. ರಾಜಪುರೋಹಿತರು ವಾದಿಸಿದ್ದಾರೆ.[1] ಕನ್ನಡಭಾರತದಲ್ಲಿ ಕೃಷ್ಣಪಾತ್ರ ಬಂದಾಗ ಹಲವೆಡೆಗಳಲ್ಲಿ ತಂದ 'ಕೃಷ್ಣರಾಯ' ಎಂಬ ಪ್ರಯೋಗವು ಇದಕ್ಕೆ ಪೋಷಕವೆಂದು ತೋರಬಹುದು. ಜೊತೆಗೆ ಪುರಂದರದಾಸರ ಒಂದೆರಡು ಸುಳಾದಿಗಳಲ್ಲಿ ಕುಮಾರವ್ಯಾಸನು ಅವರ ಮನೆಗೆ ಬಂದಿದ್ದನೆಂದು ಆದರಪೂರ್ವಕವಾಗಿ ಸೂಚಿಸಲಾಗಿದೆ, ಸ್ಪಷ್ಟವಾಗಿ ಅವನ ಮತ್ತು ಅವನ ಗ್ರಂಥದ ಉಲ್ಲೇಖಮಾಡಲಾಗಿದೆ.[2] ('ವೀರನಾರಾಯಣ ನೀ ಕವಿಯೆನಿಸಿಕೊಂಡೆ, ಕುಮಾರವ್ಯಾಸಗೊಲಿದು ಕನ್ನಡಿಸಿದೆ ಭಾರತವ') ಪುರಂದರದಾಸರು ಕೃಷ್ಣದೇವರಾಯನ ಸಮಕಾಲೀನರಾದ್ದರಿಂದ ಮೇಲಿನ ವಾದಕ್ಕೆ ಈ ಆಧಾರವೂ ಬಲವನ್ನೀಯಬಹುದು. ಅಲ್ಲದೆ ಕೋಳಿವಾಡದ ಗೌಡಮನೆತನದಲ್ಲಿ ದೊರೆತ ಲೆಕ್ಕದ ಪುಸ್ತಕದಲ್ಲಿ ಕುಮಾರವ್ಯಾಸನ ವಂಶಾವಳಿ ಬಂದಿದ್ದು ಅದೂ ೧೫-೧೬ನೆಯ ಶ.ದ ತೀರ್ಮಾನಕ್ಕೆ ಬೆಂಬಲಕೊಡುವಂತಿದೆ.

---

1 ನಾ. ಶ್ರೀ. ರಾಜಪುರೋಹಿತ: ಕುಮಾರವ್ಯಾಸನ ಕಾಲಮತಗಳ ನಿರ್ಣಯ (ಕ.ಸಾ.ಪ., ೧೯-೧, ಪು. ೨೫)

2 ಪುರಂದರದಾಸರು ಮತ್ತು ಕರ್ನಾಟಕ ಶ್ರೀಹರಿದಾಸಪರಂಪರೆ—ಪ್ರಕಟನೆ ೧-೨, (ವರದೇಂದ್ರ ಹರಿದಾಸ ಸಾಹಿತ್ಯಮಂಡಲ) ಸುಳಾದಿ ೧೮, ಪು. ೭೭-೮

ಬೇಲೂರು ಕೇಶವದಾಸರು: ಕರ್ನಾಟಕ ಭಕ್ತವಿಜಯ, ಭಾಗ ೧, ಪು. ೨೮೩-೪

ಯಾಕೆಂದರೆ ವಂಶದ ಮೂಲಪುರುಷನಾದ ಚಿನ್ನದ ಕೈ ಮಾಧವರಸನು ಸಾಳುವ ನರಸಿಂಗರಾಜ(೧೪೮೬–೯೨)ನಲ್ಲಿ ದಂಡಾಳುವಾಗಿದ್ದನಂತೆ.[1] ವೀರನಾರಣಯ್ಯ ಇಲ್ಲವೆ ಕುಮಾರವ್ಯಾಸನು ಅವನ ಮರಿಮಗನೆಂದ ಮೇಲೆ ಸು. ೧೫೫೦ ಅವನ ಕಾಲವಾಗು- ತ್ತದೆ. ಶ್ರೀ. ರಾಜಪುರೋಹಿತರು ಹೇಳುವಂತೆ ನೋಡಿದರೆ ಕುಮಾರವ್ಯಾಸನು ೧೫೧೩ರಲ್ಲಿ ಕೃಷ್ಣದೇವರಾಯನ ಗಜಸೇನಾಧಿಪತಿಯಾಗಿದ್ದನು, ಏಕೆಂದರೆ ಕೋಳಿ- ವಾಡದಲ್ಲಿಯ ಒಂದು ಶಾಸನದ ಮೇರೆಗೆ ೧೫೬೩ರಲ್ಲಿ ಕುಮಾರವ್ಯಾಸನ ಮೊಮ್ಮಗನು **ಆನೆಯ** ದೇವಪ್ಪಯ್ಯನಾಗಿದ್ದನೆಂದು ಹೇಳಿದೆ. ಈ ಎರಡರಲ್ಲಿ ಸ್ವಲ್ಪಕಾಲವ್ಯತ್ಯಾಸ- ವನ್ನು ಅಲಕ್ಷಿಸಬಹುದು. ಇವೆರಡಕ್ಕೂ ಪ್ರತಿಯಾಗಿ ವಂಶಾವಳಿಯ ಆಧಾರದಿಂದಲೇ ಕುಮಾರವ್ಯಾಸನ ಕಾಲವು ೧೪೨೫–೫೫ ಎಂದೊಬ್ಬರು ನಿರ್ಣಯಿಸಿದ್ದಾರೆ. ಇದಕ್ಕೆ ಕಾರಣವೆಂದರೆ ಕುಮಾರವ್ಯಾಸನ ತಂದೆಯಾದ ಲಕ್ಷ್ಮಣದೇವ(ಲಕ್ಕರಸಯ್ಯ)ನು ೧ನೆಯ ದೇವರಾಯ(೧೪೦೬–೨೨)ನಲ್ಲಿ ಮಂತ್ರಿಯಾಗಿದ್ದನು ಎಂದು ಊಹಿಸಲು ಬರುವಂತಿದೆ.[2]

ಈ ಎಲ್ಲ ಆಧಾರಗಳು ಭಾಸ್ಕರನ 'ಜೀವಂಧಚರಚರಿತೆ'ಯ ಆಧಾರವು ತಿಳಿಯುವುದಕ್ಕಿಂತ ಮುಂಚಿನವು. ೧೪೨೪ರಲ್ಲಿ ಗ್ರಂಥರಚನೆ ಮಾಡಿದ ಭಾಸ್ಕರನ ಮೇಲೆ ಕುಮಾರವ್ಯಾಸನ ಪ್ರಭಾವವಾಗಿರುವುದು ಖಚಿತವೆಂದಾದರೆ ಕುಮಾರವ್ಯಾಸನು ೧೫ನೆಯ ಶ.ದ ಉತ್ತರಾರ್ಧ ಇಲ್ಲವೆ ೧೬ನೆಯ ಶ.ದ ಪೂರ್ವಾರ್ಧದಲ್ಲಿ ಜೀವಿಸಿದ್ದ- ನೆಂಬುದು ಸಾಧ್ಯವಿಲ್ಲ. ಕುಮಾರವ್ಯಾಸ ಹಾಗೂ ಭಾಸ್ಕರ ಇಬ್ಬರಿಗೂ ಮೂಲಪ್ರೇರಕ- ವಾದ ಇನ್ನೊಂದು ಗ್ರಂಥವಿರಬಹುದು. ಹಾಗೆ ತಿಳಿದುಕೊಳ್ಳಲು ಕೆಲಮಟ್ಟಿಗೆ ಅವಕಾಶವಿದೆ. ಆದರೆ 'ತರುಣಿಯರಿಗಾಸತಿಯ ರೂಪನು ಧರಿಸಿ **ಬಟಿಲದು ಚಿತ್ರ** ದೇಹದಿ ಚರಿಸಿ ನೊಗ್ಗದು ನೋಟ' (ಜೀವಂಧರಚರಿತೆ, ೪–೧೦) ಮುಂತಾದ ಭಾಸ್ಕರನ ಪದ್ಯ 'ಹೊರೆಯ ಸಖಿಯರ ನೋಟ ವೈಯಲಿ ಹರಿದು **ಬಳಲದ ಚಿತ್ತ**ವೀಕೆಯ ಧರಿಸಿ ಕುಸಿಯದು' (ಆದಿಪರ್ವ, ೨೯–೧೦) ಎಂಬ ಕುಮಾರವ್ಯಾಸನ ಪದ್ಯದಿಂದ ಪ್ರಭಾವಿತವಾಗಿರಬೇಕೆಂದು ಹೇಳದೆ ಗತಿಯಿಲ್ಲ. ಎಲ್ಲ ಅಂಶಗಳನ್ನು ಮನದಂದು ಸದ್ಯದ ಮಟ್ಟಿಗೆ ಕುಮಾರವ್ಯಾಸನ ಕಾಲವು ೧೪ನೆಯ ಶ.ದ ಉತ್ತರಾರ್ಧ ಹಾಗೂ ೧೫ನೆಯ ಶ.ದ ಪೂರ್ವಾರ್ಧದಲ್ಲಿರಬಹುದೆಂದು ನಾವು ತಿಳಿಯುತ್ತೇವೆ. ಇದಕ್ಕನುಸರಿಸಿ ಸು. ೧೪೦೦ ಎಂದವನ ಕಾಲವನ್ನು ಕೊಡಲಾಗಿದೆ. ೧೩ನೆಯ ಶ. ಮೊದಲ ಭಾಗವೆಂಬುದು ಮಾತ್ರ ನಮಗೆ ಒಪ್ಪಿಗೆಯಾಗಿಲ್ಲ.

---

1 ಜೋಶಿ ಶಂಕರಭಟ್ಟ : ಕೋಳಿವಾಡಗೌಡರ ಕುಲವೃತ್ತಾಂತ (ಜೀವನ, ೪–೧, ಪು. ೪೬–೪

2 ಶ. ಕ. ಕೋಳಿವಾಡ: ಕೋಳಿವಾಡಗೌಡರ ಕುಲವೃತ್ತಾಂತ (ಶಾರದೆ, ೩–೪), ಕುಮಾರವ್ಯಾಸಪ್ರಶಸ್ತಿ, ಪು. ೨೨–

ಚಾಮರಸನ ಕಾಲವು ಸು. ೧೪೪೦ ಎಂಬುದು ಸರಿಯೆಂದು ತೋರುತ್ತದೆ. ಪ್ರೌಢದೇವರಾಯ(೧೪೧೯-೪೬)ನ ಕಾಲದಲ್ಲಿದ್ದವರೆಂದು ಎಣಿಸಲಾದ ನೂರೊಂದು ವಿರಕ್ತರಲ್ಲಿ ಅವನ ಹೆಸರಿರುವುದು ಇದಕ್ಕೆ ಮುಖ್ಯ ಕಾರಣ. ಕುಮಾರವ್ಯಾಸನ ಕಾಲದೊಡನೆ ಇವನ ಕಾಲವನ್ನು ತಳಕುಹಾಕಬೇಕಾಗಿಲ್ಲ. ಇಬ್ಬರ ಆಪ್ತಸಂಬಂಧ ಮತ್ತು ಸಾಹಿತ್ಯಸ್ಪರ್ಧೆ ಬಹುಶಃ ಕಪೋಲಕಲ್ಪಿತವಾಗಿವೆ. ಆದರೂ ಅವರು ಹತ್ತಿರ ಹತ್ತಿರದ ಕಾಲದವರಾಗಿರಬೇಕೆಂದು '**ಸತ್ತವರ ಕಥೆಯೆಲ್ಲ** ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲ್ಕುವರ ಸೀಮೆಯ ಹೊಲಬು ತಾನಲ್ಲ' (ಪ್ರ.ಲೀ., ೧-೧೫) ಎಂಬ ಚಾಮರಸನ ಸೂಚ್ಯವಾದ ಉಕ್ತಿಯಿಂದ ಊಹಿಸುವಂತಿದೆ. ಇದು ನಿಜವಾದರೆ ಕುಮಾರವ್ಯಾಸಭಾರತ ರಚನೆಯಾದ ಮೇಲೆ ಚಾಮರಸನು ತನ್ನ 'ಪ್ರಭುಲಿಂಗಲೀಲೆ'ಯನ್ನು ಬರೆದಿರಬಹುದು. 'ಸತ್ತವರ ಕಥೆ'ಯ ಪ್ರಸ್ತಾಪವು ಅದೃಶ್ಯಕವಿಯ 'ಪ್ರೌಢರಾಯನ ಕಾವ್ಯ'ದಲ್ಲಿ ಬಂದಿರುವುದನ್ನು ನೆನೆಯಬೇಕು. ಚಾಮರಸನು ಸಾಮಾನ್ಯವಾಗಿ ತನ್ನ ಕಾವ್ಯವಿಷಯವನ್ನು ಕುರಿತು ಹೇಳಿದ್ದನ್ನು ಅದೃಶ್ಯಕವಿ ಕುಮಾರವ್ಯಾಸಭಾರತಕ್ಕೆ ಅನ್ವಯಿಸಿ ಕತೆಕಟ್ಟಿರುವ ಸಂಭವವೂ ಇದೆ.

ಸೋಮರಾಜನಂತೆ ಗ್ರಂಥರಚನೆಯ ಕಾಲವನ್ನು ಹೇಳಿಯೂ ಹೇಳದಂತೆ ವಾದಕ್ಕೆಡೆಯಾದವನು ಶಿಶುಮಾಯಣನು. ತನ್ನ ತ್ರಿಪುರದಹನಸಾಂಗತ್ಯವು 'ಶಕ-ವರ್ಷದ ಸಾವಿರದ ನೂಱಱೊಳುತ್ಸಕಲವಾದಾಱುವತ್ಸರದ' ಪುತ್ರವರ್ಷ ಮಾಘಶುದ್ಧ ಪಾಡ್ಯದ ದಿನದಲ್ಲಿ ಆಯಿತೆಂದು ಹೇಳಿದ್ದಾನೆ. ಇದರಿಂದ ೧೨೨೫ ಇವನ ಕಾಲ-ವಾಗಿರಬಹುದೇನೊ ಎಂದು ಕವಿಚರಿತೆಕಾರರು ಸಂದೇಹಪೂರ್ವಕವಾಗಿ ಸೂಚಿಸಿ-ದ್ದಾರೆ. ವೆಂಕಟಸುಬ್ಬಯ್ಯನವರು ಈ ಪದ್ಯದ ಆಧಾರಬಲದಿಂದ ಕಾಲನಿರ್ಣಯ ಅಸಾಧ್ಯವೆಂದು, ಅಂಜನಾಚರಿತ್ರೆಯಲ್ಲಿ ಶಿಶುಮಾಯಣನು ಸ್ತುತಿಸಿರುವ ಜೈನ-ಗುರುಗಳ ಹೆಸರಿನ ಆಧಾರದಿಂದ ಇವನು ೧೬ನೆಯ ಶ.ದವನೆಂದು ಊಹಿಸಿದ್ದಾರೆ.[1] ಶ್ರೀ. ಗೋವಿಂದ ಪೈಗಳು ಈ ವಿಷಯವನ್ನು ಚರ್ಚಿಸಿ ಶಿಶುಮಾಯಣನು ೧೪೭೨ರಲ್ಲಿ ತನ್ನ 'ತ್ರಿಪುರದಹನ'ವನ್ನು ಬರೆದು ಮುಗಿಸಿದನೆಂದು ಅಭಿಪ್ರಾಯಪಟ್ಟಿದ್ದಾರೆ.[2] ಅವರ ನಿದರ್ಶನಕ್ಕೆ ಎಲ್ಲ ಆಧಾರಗಳು ಆಗ ಬಂದಿರಲಿಲ್ಲ. ಅವನ್ನು ನೋಡಿದರೆ ಅವರ ಅಭಿಪ್ರಾಯಕ್ಕೆ ಪುಷ್ಟಿದೊರೆಯುತ್ತದೆ. ಶಿಶುಮಾಯಣನು ತನ್ನ 'ಅಂಜನಾ-ಚರಿತ್ರೆ'ಯ 'ಉತ್ತರದೇಶದೊಳಗೆ **ಸುರತ್ರಾಣನ** ಪತ್ತಣವನು (ವಾದ ?) **ಬಿದಿರೆ-ಯೊಳು** ‖ ಕರ್ತಾರನಲ್ಲದುಳಿದ ದೈವವಿಲ್ಲೆಂದು ಮತ್ತರಾಗಿರುತಿಹರಲ್ಲಿ (ಪೀ. ೪೬) ಎಂಬ ಪದ್ಯದಲ್ಲಿ ಮಾಡಿದ ಬಿದಿರೆಯ ಸುಲ್ತಾನರ ಉಲ್ಲೇಖದಿಂದ ಅವನು ೧೫ನೆಯ

---

1 ವೆಂಕಟಸುಬ್ಬಯ್ಯನವರು: ಕೆಲವು ಕನ್ನಡಕವಿಗಳ ಜೀವನಕಾಲವಿಚಾರ, ಪು. ೨೨೮-೩೧

2 ಗೋವಿಂದ ಪೈ: ಶಿಶುಮಾಯಣನ ಕಾಲವಿಚಾರ (ಸ್ವದೇಶಾಭಿಮಾನಿ, ರಜತೋತ್ಸವದ ಸಂಚಿಕೆ, ಪು. ೨೫-೨೬.)

ಶ.ಕ್ಕಿಂತ ಮುಂದೆ ಅಂದರೆ ೧೫ನೆಯ ಶ.ದ ಕೊನೆಗೆ ಬಹಮ್ಮನೀರಾಜ್ಯಗಳ ಸ್ಥಾಪನೆಯಾದ ಮೇಲಿನ ಕಾಲದವನೆಂಬುದು ನಿಶ್ಚಿತವಾಗುತ್ತದೆ. ಜೊತೆಗೆ ಅವನ ಶೈಲಿಯಲ್ಲಿ ಹೊಸಗನ್ನಡ ಹೆಚ್ಚಳವುಳ್ಳ ಪ್ರವೃತ್ತಿಗಳು, ಪೌಜು ಮುಂತಾದ ಶಬ್ದಪ್ರಯೋಗಗಳು ಅವನು ೧೫ನೆಯ ಶ.ದ ಗ್ರಂಥಕಾರನಾಗಿರಬೇಕೆಂದು ಸೂಚಿಸುತ್ತವೆ. ಇದಕ್ಕೆ ಅನುಸರಿಸಿ ಅವನ ಕಾಲಸೂಚಕಪದ್ಯವನ್ನು 'ಶಕವರ್ಷದೆ ಸಾವಿರದ **ನಾಲ್ಕು** ನೂಱಱೊಳು' ಎಂದು ತಿದ್ದಿದರೆ ಅದು ಸರಿಯಾದ ಪಾಠವಾದೀತು ಇಲ್ಲವೆ ಅದಕ್ಕೆ ಹತ್ತಿರವಾದೀತು. ಈಗಿದ್ದಂತೆ 'ನಾಲ್ಕು' ಇಲ್ಲದ ಮೊದಲ ಪಾದವಾದ 'ಶಕವರ್ಷದ ಸಾವಿರದ ನೂಱಱೊಳು' ಇದರಲ್ಲಿ ಸಾಂಗತ್ಯದ ನಾಲ್ಕು ಗುಣಗಳನ್ನು ಪಡೆಯಲು ತುಂಬ ಕೃತ್ರಿಮವಾದ ಎಳೆದಾಟವನ್ನು ಮಾಡಬೇಕಾಗುತ್ತದೆ. 'ಶಕವರ್ಷ(ದ) ಸಾವಿರದ **ನಾನೂರರೊಳ್**' ಎಂಬ ಪಾಠವು ಮೂಡುಬಿದರೆಯ ಮೂಲಪ್ರತಿಯಲ್ಲಿದ್ದಂತೆ 'ಕನ್ನಡ ಸಹಕಾರಿ'ಯಲ್ಲಿ ಪ್ರಕಟಿತವಾದುದನ್ನು ಇಲ್ಲಿ ಗಮನಿಸಬೇಕು.

ನಿಜಗುಣಶಿವಯೋಗಿಯ ಕಾಲವು ಸು. ೧೫೦೦ ಎಂದು ಕವಿಚರಿತೆಯಲ್ಲಿದೆ. ೧೭ನೆಯ ಶ.ದ ಮಧ್ಯದ ಷಡಕ್ಷರಿ ಅವನ ಉಲ್ಲೇಖ ಮಾಡಿದ ಕಾರಣ ಮೇಲಿನ ಕಾಲಮರ್ಯಾದೆ ತಿಳಿಯುತ್ತದೆ. ಕೆಳಗಿನ ಎಲ್ಲೆ ಸು. ೧೬೫೦ ಎಂದು ಕವಿಚರಿತೆಕಾರರು ಹೇಳಿದ್ದಾರೆ. ಯಾಕೆಂದರೆ ನಿಜಗುಣಶಿವಯೋಗಿ ಉಲ್ಲೇಖಮಾಡಿದ ಅಮಲಾನಂದನು ೧೩ನೆಯ ಶ.ದ ಮಧ್ಯದವನು. ಆದರೆ 'ವಿವೇಕಚಿಂತಾಮಣಿ'ಯ ಪ್ರಾಚೀನ ತಾಳೆವೋಲೆಗಳಲ್ಲಿ ಅಮಲಾನಂದನ ಕಲ್ಪತರುವಿನ ಉಲ್ಲೇಖವಿಲ್ಲವೆಂದೂ ಆಮೇಲೆ ಅದನ್ನು ಸೇರಿಸಿರಬೇಕೆಂದೂ ಶ್ರೀ. ಬಿ. ಶಿವಮೂರ್ತಿಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ.[1] ಅಲ್ಲದೆ ನಾಗಚಂದ್ರ, ನೇಮಿಚಂದ್ರ, ಅಗ್ಗಳ ಮೊದಲಾದ ಕನ್ನಡಕವಿಗಳ ಹಾಗೂ ರೇವಣಸಿದ್ಧ ಮುಂತಾದ ವೀರಶೈವ ಆಚಾರ್ಯರು ಇವರ ಉಲ್ಲೇಖದಿಂದ ನಿಜಗುಣಶಿವಯೋಗಿ ೧೨ನೆಯ ಶ.ದಿಂದ ಈಚೆಯವನೆಂದೂ ಬಸವೇಶ್ವರನಿಗಿಂತ ಕೊಂಚ ಈಚಿನವನಾಗಿರಬೇಕೆಂದೂ ಊಹಿಸಿದ್ದಾರೆ.[2] 'ವಿದ್ಯಾರಣ್ಯರ ಪಂಚದಶಿ ಮತ್ತು ಜೀವನ್ಮುಕ್ತಿವಿವೇಕ ಈ ಗ್ರಂಥಗಳನ್ನು ನಿಜಗುಣಶಿವಯೋಗಿಗಳು ನೋಡಿದ್ದರು ಎಂಬುದರಲ್ಲಿ ಸಂದೇಹವಿಲ್ಲ'[3] ಎಂದು ಶ್ರೀ. ಬೇಂದ್ರೆಯವರು ಹೇಳಿದ್ದು ದಿಟವಾದರೆ ನಿಜಗುಣಶಿವಯೋಗಿ ೧೪ನೆಯ ಶ.ದ ತರುವಾಯದವನಾಗುತ್ತಾನೆ. ೧೩-೧೪ನೆಯ ಶ.ದಿಂದ ೧೭ನೆಯ ಶ.ದ ನಡುವೆ ಎಂದು ಅವನ ಕಾಲವನ್ನು ಹೇಳಬಹುದೇ ಹೊರತು ಸು. ೧೫೦೦ ಎಂಬುದು ತಾತ್ಪೂರ್ತಿಕ ಊಹೆ.

1–2 ಬಿ. ಶಿವಮೂರ್ತಿಶಾಸ್ತ್ರಿ: ಶ್ರೀ ನಿಜಗುಣಶಿವಯೋಗಿ (ಶರಣಸಾಹಿತ್ಯ ೧-೧, ಪು. ೩೫-೬)

3 ದ. ರಾ. ಬೇಂದ್ರೆ: ಕನ್ನಡದ ಧಾರ್ಮಿಕಸಂಸ್ಕೃತಿ (ವಾಗ್ಭೂಷಣ, ಹೊಸ ಸಂ. ೧-೩,೪ ಪು. ೧೧)

ಲಕ್ಷ್ಮೀಶನ ಕಾಲವೂ ಭಿನ್ನಾಭಿಪ್ರಾಯಗಳಿಗೆ ಎಡೆಕೊಟ್ಟಿದೆ. ಅವನು ಸು. ೧೭೦೦ಕ್ಕೆ ಈಚೆಯವನಲ್ಲವೆಂದೂ ಸು. ೧೬೫೦ರಲ್ಲಿದ್ದವನೆಂದೂ ಕವಿಚರಿತೆಕಾರರು ಅಭಿಪ್ರಾಯಿಸಿದ್ದಾರೆ. ಅವನು ೧೩೦೦ರಿಂದ ೧೪೦೫ರೊಳಗಣ ಕಾಲದಲ್ಲಿ ಜೀವಿಸಿರಬೇಕೆಂದು ಶ್ರೀ. ಗೋವಿಂದ ಪೈಗಳು ನಿರ್ಣಯಿಸಿದ್ದಾರೆ. ೧೫೨೦ರಲ್ಲಿ ಲಕ್ಷ್ಮೀಶನು ಜೈಮಿನಿಭಾರತವನ್ನು ರಚಿಸಿ ಮುಗಿಸಿದನೆಂದು ಶ್ರೀ. ರಾಜಪುರೋಹಿತರು ತೋರಿಸಿದ್ದಾರೆ (ಕ.ಸಾ.ಪ., ೮–೪). ಸು. ೧೬೦೦ಕ್ಕಿಂತ ಹಿಂದಿನವನೆಂಬುದು ನಿರ್ವಿವಾದ, ಎಷ್ಟು ಹಿಂದೆ ಎಂಬುದನ್ನು ನಿರ್ಧರಿಸಲು ಸಾಕಾದಷ್ಟು ಆಧಾರಗಳಿಲ್ಲವೆಂದು ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಹೇಳಿದ್ದಾರೆ. ಮೇಲಿನ ಗಡುವನ್ನು ಖಚಿತಗೊಳಿಸುವ ದೃಷ್ಟಿಯಿಂದ ಹೊಸದಾಗಿ ತಿಳಿದ ಸಂಗತಿಯೆಂದರೆ ಗೋವಿಂದಕವಿಯ 'ಚಿತ್ರಭಾರತ'ದ ಕಾಲನಿರ್ದೇಶ. ೧೫೮೧ರಲ್ಲಿ ಅದು ರಚಿತವಾಯಿತೆಂದು ತಿಳಿಯುತ್ತದೆ.[1] ಲಕ್ಷ್ಮೀಶನನ್ನು ಗೋವಿಂದಕವಿ ನೆನೆದಿದ್ದ ಕಾರಣ ಲಕ್ಷ್ಮೀಶನು ೧೬ನೆಯ ಶ.ದ ಉತ್ತರಾರ್ಧದಲ್ಲಿ ಸಾಕಷ್ಟು ಪ್ರಸಿದ್ಧಿಪಡೆದಿದ್ದನೆಂದು ಹೇಳಬಹುದು. ಆದ್ದರಿಂದ ೧೭ನೆಯ ಶ.ದಲ್ಲಿ ಬರೆಯಲಾದ 'ಕನ್ನಡಕುವಲಯಾನಂದ'ದ ಆಧಾರವು ಅನಾವಶ್ಯಕವಾಗಿದೆ. ೧೬ನೆಯ ಶ.ಕ್ಕೆ ಮುಂಚೆ ಲಕ್ಷ್ಮೀಶನು ಯಾವಾಗ ಜೀವಿಸಿದ್ದನೆಂಬುದು ಸದ್ಯಕ್ಕೆ ಅನಿರ್ಣೀತವಾಗಿ ಉಳಿಯುವ ಸಂಭವವಿದೆ. ೧೫೧೩ರ ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನ'ದಲ್ಲಿಯ ನವಗ್ರಹಕಲ್ಪನೆ, ಸು. ೧೪೫೦ರ ಬೊಮ್ಮರಸನ 'ಸೌಂದರಪುರಾಣ'ದಲ್ಲಿಯ ಆದ್ಯಕ್ಷರ ಪ್ರಾಸಯೋಜನೆ ಇವು ಲಕ್ಷ್ಮೀಶನ 'ಜೈಮಿನಿಭಾರತ'ದ ಪ್ರಭಾವಸೂಚಕವಾಗಿವೆ; ಅಲ್ಲದೆ 'ಜೈಮಿನಿಭಾರತ'ದ ಹಳೆಯ ಕೆಲವು ಪ್ರತಿಗಳ ಕಾಲ ೧೫೩೦, ೧೪೧೫ ಎಂದಿರುವುದು, ಫೌಜು ಎಂಬ ಅರಬಿ ಶಬ್ದಪ್ರಯೋಗ, 'ಲಿಂಗಮಿಲ್ಲದ ಪೀಠ' ಎಂಬುದರಿಂದ ಸೂಚಿತವಾಗುವ ತುರುಕರ ಹಾವಳಿ ಇವುಗಳಿಂದ ೧೩೦೦ಕ್ಕಿಂತ ಮುಂಚೆ 'ಜೈಮಿನಿಭಾರತ' ಹುಟ್ಟಿರಲಾರದು—ಈ ಎಲ್ಲ ಆಧಾರಗಳ ಬಲದಿಂದ ೧೩೦೦–೧೪೧೫ ರೊಳಗಣ ಕಾಲದಲ್ಲಿ ಲಕ್ಷ್ಮೀಶನು ಜೀವಿಸಿರಬೇಕೆಂದು ಶ್ರೀ. ಗೋವಿಂದ ಪೈಗಳು ನಿರ್ಧರಿಸಿದ್ದಾರೆ.[2] ವಿಜಯನಗರದ ೧ನೆಯ ಹರಿಹರನಿಗೆ ಅವನು ಸಮಸಾಮಯಿಕನೆಂದೂ ತರ್ಕಿಸಿದ್ದಾರೆ.[3] ಈ ಆಧಾರಗಳಲ್ಲಿ ಮಲ್ಲಣಾರ್ಯ ಮತ್ತು ಬೊಮ್ಮರಸನ ಭಾವ–ಪ್ರಾಸಸಾಮ್ಯದ ಆಧಾರವು ಮನವರಿಕೆಯಾಗುವಂತಿಲ್ಲ. ಪ್ರತಿಗಳ ಕಾಲವಿಚಾರವು ತುಂಬ ವಾದಗ್ರಸ್ತವಾಗಿದೆ. ಕೆಳಗಿನ ಗಡುವನ್ನು ಗೊತ್ತುಪಡಿಸಲು ಶ್ರೀ. ಪೈಗಳು ಕೊಟ್ಟ ಆಧಾರವು ಯೋಗ್ಯವೆಂದು ತೋರುತ್ತದೆ. ಆದ್ದರಿಂದ

---

1 ದ. ರಾ. ಬೇಂದ್ರೆ: ಚಿತ್ರಭಾರತ (ಸಾಹಿತ್ಯಸಂಶೋಧನ), ಜೀವನ ೨–೨, ಪು. ೧೨೨

2 ಗೋವಿಂದ ಪೈ: ಲಕ್ಷ್ಮೀಶ ಕವಿಯ ಕಾಲ (ಕವಿಲಕ್ಷ್ಮೀಶ, ಪು. ೮೬)

3 ಅದೇ, ಪು. ೯೬

೧೩–೧೪ನೆಯ ಶ.ದಿಂದ ೧೬ನೆಯ ಶ.ದೊಳಗಣ ಕಾಲದಲ್ಲಿ ಲಕ್ಷ್ಮೀಶನ ಕಾಲಾವಧಿಯನ್ನು ನಿರ್ವಿವಾದವಾಗಿ ಇಟ್ಟುಕೊಳ್ಳಬಹುದು. ಸು. ೧೫೫೦ ಎಂದು ನಾವು ತಾತ್ಪೂರ್ತಿಕವಾಗಿ ಗ್ರಹಿಸಿದ್ದಕ್ಕೆ ಕಾರಣವೆಂದರೆ ಅದಕ್ಕಿಂತ ತರುವಾಯ ಅವನು ಇದ್ದಿರಲಾರನೆಂಬುದು.

೧೫ನೆಯ ಶ.ದಿಂದ ೧೯ನೆಯ ಶ.ದ ಕೊನೆಯ ವರೆಗಿನ ಐದು ಶತಮಾನಗಳ ಕಾಲವು ಅತಿವಿಸ್ತರವಾಗಿದೆ, ವಿವಿಧ ಘಟನೆಗಳಿಂದ ಜಟಿಲವಾಗಿದೆ. ಈ ಕಾಲದಲ್ಲಿ ಕರ್ನಾಟಕವು ಉಳಿದ ದಕ್ಷಿಣಭಾರತದೊಡನೆ ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಹಿಂದೆಂದೂ ಕಾಣದ ಉನ್ನತಿಯ ಶಿಖರವನ್ನೇರಿತು, ಹಿಂದೆಂದೂ ತೋರದ ಅವನತಿಯ ಕಂದರದಲ್ಲಿಳಿಯಿತು. ೧೪ನೆಯ ಶ.ದಲ್ಲಿ ಉದಯಹೊಂದಿದ ವಿಜಯನಗರಸಾಮ್ರಾಜ್ಯವು ೧೫ನೆಯ ಶ.ದಿಂದ ೧೬ನೆಯ ಶ.ದ ಮಧ್ಯದ ವರೆಗೆ ಸಂಗಮ, ಸಾಳುವ, ತುಳುವ, ಅರವೀಡು ಈ ನಾಲ್ಕು ಅಂಶಗಳ ಕೈಯಿಂದ ಕೈಗೆ ಹೋಗಿ ಹೊರಹಗೆ, ಒಳಜಗಳಗಳ ಕಾರಣದಿಂದ ಕಾಲಕಾಲಕ್ಕೆ ಹತಬಲವಾದರೂ ಹತಾಶವಾಗದೆ ದಕ್ಷಿಣಭಾರತಕ್ಕೆ ಉಜ್ವಲವಾದ ಪ್ರಭುತ್ವಶಕ್ತಿಯ ಕೇಂದ್ರವಾಗಿತ್ತು. ಬುಕ್ಕರಾಯ, ಪ್ರೌಢದೇವರಾಯ, ಕೃಷ್ಣದೇವರಾಯ, ರಾಮರಾಯನಂಥ ಶೂರರೂ ಮುತ್ಸದ್ದಿಗಳೂ ಆದ ಅರಸರು ಅದರ ಏಳಿಕೆಗೆ ಕಾರಣರಾದರು. ೧೬ನೆಯ ಶ.ದ ಮೊದಲಲ್ಲಿ ಮೆರೆದ ಕೃಷ್ಣದೇವರಾಯನಂತೂ ಅವರಲ್ಲಿ ಶ್ರೇಷ್ಠನಾಗಿ ಅಂದಿನ ಭಾರತದ ಪ್ರಖ್ಯಾತ ರಾಜನೆಂದು ಕರೆಯಿಸಿಕೊಂಡನು. ಪರದೇಶದ ಪ್ರವಾಸಿಗಳ ಮತ್ತು ವ್ಯಾಪಾರಿಗಳ ಕಣ್ಣುಕುಕ್ಕಿಸುವಂಥ ರಾಜಧಾನಿ, ಸಂಪತ್ತಿ, ಸೈನ್ಯ, ಸೌಖ್ಯಸಾಮಗ್ರಿ ಇವುಗಳಿಂದ ವಿಜಯನಗರಸಾಮ್ರಾಜ್ಯವೆಂದರೆ ದಂತಕಥೆಯಲ್ಲಿಯ ಒಂದು ರೋಮಾಂಚಕಾರಿ ಸ್ವಪ್ನವು ಮೂರ್ತರೂಪತಾಳಿದಂತಾಯಿತು. ರಕ್ಕಸತಂಗಡಗಿಯ ಕಾಳಗದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಈ ಸ್ವಪ್ನವು ಕ್ಷಣದಲ್ಲಿ ಒಡೆದುಹೋಯಿತು. ಮಹಮ್ಮದೀಯ ವಿಘಾತಶಕ್ತಿಗಳನ್ನೂ ಅಂತಃಕಲಹದ ಪ್ರಬಲಪ್ರವೃತ್ತಿಗಳನ್ನೂ ತಡೆಗಟ್ಟದ ಸಾಮ್ರಾಜ್ಯಶಕ್ತಿ ನಷ್ಟವಾಗಿ ನಿರಂಕುಶತ್ವವು ತಲೆಯೆತ್ತಿತು ; ಸಂಯೋಜಕವೂ ಸಂರಕ್ಷಕವೂ ಆದ ಏಕಪ್ರಭುತ್ವದ ಸ್ಥಾನದಲ್ಲಿ ದಕ್ಷಿಣಭಾರತದಲ್ಲೆಲ್ಲ ವಿಘಟನಕಾರಿಯಾದ ಸಂಕುಚಿತಸ್ವಾರ್ಥಪರವಾದ ಶಕ್ತಿಗಳು ತಲೆದೋರಿದುವು. ೧೯ನೆಯ ಶ.ದ ಕೊನೆಯವರೆಗೆ ಅನ್ಯೋನ್ಯಕಲಹದಿಂದ, ಅಲ್ಪಲಾಭಬುದ್ಧಿಯಿಂದ ಬ್ರಿಟಿಶರ ಕುಟಿಲತಂತ್ರಕ್ಕೆ ಒಳಗಾಗಿ ಕರ್ನಾಟಕದ ದೊರೆಗಳು ಸ್ವತ್ವವನ್ನು ಕಳೆದುಕೊಂಡರು, ನಾಡಿನ ಬಹುಭಾಗವನ್ನು ಪರಕೀಯರ ಆಧಿಪತ್ಯಕ್ಕೆ ಬಿಟ್ಟುಕೊಟ್ಟರು. ಸುದೈವದಿಂದ ಮೈಸೂರು ರಾಜ್ಯವು ವಿಜಯನಗರದ ರತ್ನಸಿಂಹಾಸನವನ್ನೂ ಕನ್ನಡಸಂಸ್ಕೃತಿಪರಂಪರೆಯನ್ನೂ ಕಾಯ್ದುಕೊಂಡು ಬಂದಿತು. ಮೈಸೂರಿನ ಒಡೆಯರಲ್ಲಿ ರಾಜನೃಪ, ಕಂಠೀರವನರಸರಾಜ, ಚಿಕ್ಕದೇವರಾಜ ಇವರು ತಮ್ಮ ಶೌರ್ಯ–ಸಾಹಸಗಳಿಂದಲೂ ಮುತ್ಸದ್ದಿತನದಿಂದಲೂ ದಕ್ಷಿಣಕರ್ನಾಟಕವನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಂಡರು, ಕನ್ನಡಸಾಹಿತ್ಯಸಂಸ್ಕೃತಿ-

ಗಳನ್ನು ಪೋಷಿಸಿದರು. ಮುಸ್ಲಿಂ-ಮರಾಠಾ ಪರಾಕ್ರಮ, ಬ್ರಿಟಿಶ್ ಪ್ರಭುತ್ವ ಇವು-ಗಳಿಂದ ಆಗಾಗ ಮೈಸೂರು ಆಧಿಪತ್ಯಕ್ಕೆ ಬಂದ ಕುತ್ತುಗಳು ಅಂಥಿಂಥವಲ್ಲ. ಆದರೆ ಅವನ್ನು ಕನ್ನಡಕಲಿತನವು ಹಿಮ್ಮೆಟ್ಟಿಸಿತು. ಹೈದರ-ಟೀಪುವಿನಂಥ ಸ್ವಧರ್ಮಾಭಿ-ಮಾನಿಗಳು ಮೈಸೂರು ರಾಜ್ಯವನ್ನು ಆಳಿದರೂ ಅವರು ವಿಶಾಲವಾದ ಕನ್ನಡಧರ್ಮಕ್ಕೆ ಬಹುಶಃ ಹೊಂದಿಕೊಂಡರು, ವಿದೇಶೀಯರಂತೆ ವಿನಾಶಪರರಾಗಲಿಲ್ಲ. ೧೮ನೆಯ ಶ.ದ ಕೊನೆಯಷ್ಟುಹೊತ್ತಿಗೆ ಮೈಸೂರು ರಾಜ್ಯವೊಂದನ್ನು ಬಿಟ್ಟರೆ ಉಳಿದರ್ಧ ಕರ್ನಾಟಕವು ಹೆಚ್ಚಾಗಿ ಬ್ರಿಟಿಶರ ವಶವಾಗಿತ್ತು, ಇನ್ನುಳಿದ ಭಾಗವು ಹಲವಾರು ತುಂಡುಗಳಾಗಿ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಹಾಗೂ ನಿಜಾಮರಾಜ್ಯದಲ್ಲಿ ಹರಿಹಂಚಾಗಿತ್ತು.

೧೪ನೆಯ ಶ.ದಿಂದ ಮುಂದೆ ಕರ್ನಾಟಕದ ಜನಜೀವನವು ತನ್ನ ಅದ್ಭುತವಾದ ಸಾಮರ್ಥ್ಯವನ್ನೂ ಅತ್ಯಂತವಾದ ದೌರ್ಬಲ್ಯವನ್ನೂ ತುತ್ತತುದಿಯಲ್ಲಿ ತೋರಿಸಿದೆ. ಅದನ್ನು ಅರಿತುಕೊಂಡರೆ ಅಂದಿನ ಸಾಹಿತ್ಯಕ್ಕೆ ಸರಿಯಾದ ಹಿನ್ನೆಲೆಯನ್ನು ಅರಿಯ-ಬಹುದು, ಸಾಹಿತ್ಯದಲ್ಲಿ ಮೂಡಿದ ಅದರ ಪಡಿನೆಳಲನ್ನು ಗುರುತಿಸಬಹುದು. ಅಲ್ಲದೆ ಕನ್ನಡಸಂಸ್ಕೃತಿಯ ಗುಣದೋಷಗಳ ನಿದಾನದಿಂದ ಇಂದು ಮಾಡಬೇಕಾದ ಚಿಕಿತ್ಸೆಯ ಸ್ವರೂಪವನ್ನೂ ಕಂಡುಹಿಡಿಯಬಹುದು. ೧೪ನೆಯ ಶ.ಕ್ಕಿಂತ ಹಿಂದೆ ಜನಜೀವನ-ವನ್ನು ತಿಳಿಯಲು ಶಾಸನ-ಗ್ರಂಥಗಳ ಆಕರಗಳು ಮಾತ್ರ ಇದ್ದರೆ ೧೪ನೆಯ ಶ.ದಿಂದ ಮುಂದೆ ಅವುಗಳ ಜೊತೆಗೆ ವಿದೇಶೀಯ ಪ್ರವಾಸಿಕರ ಮತ್ತು ವ್ಯಾಪಾರಿಗಳ ವರ್ಣನೆ-ಗಳೂ ಚರಿತ್ರಲೇಖಕರ ಬಖೈರುಗಳೂ ದೊರೆಯುತ್ತವೆ. ವಿಜಯನಗರಕಾಲದಲ್ಲಿ ದೊರೆಯುವ ವಿಪುಲಸಾಮಗ್ರಿಯಿಂದ ಕನ್ನಡರಾಜರ ಮತ್ತು ಪ್ರಜೆಗಳ ಶೌರ್ಯ, ಸಂಘಟನಶಕ್ತಿ, ಸರ್ವಧರ್ಮಪ್ರೇಮ, ಉಪಕಾರಬುದ್ಧಿ, ರಸಿಕತೆ ಇವನ್ನು ತಿಳಿದು-ಕೊಳ್ಳುವಂತೆ ಪರಿಸ್ಥಿತಿಯೊಡನೆ ಬದಲಾಗದ ಅವರ ಸ್ಥಿತಿಪ್ರಿಯತೆ, ಅಂಧವಾದ ವ್ಯಕ್ತಿ-ಪೂಜೆ, ಲೋಭಪೂರ್ವಕವಾದ ಅಂತಃಕಲಹ-ಅನೈಕ್ಯ, ಭೋಗಾತಿರೇಕ ಈ ಮುಂತಾದ ದೌರ್ಬಲ್ಯದರ್ಶಕ ದೋಷಗಳನ್ನೂ ತಿಳಿಯಬಹುದು. ವಿಜಯನಗರಸಾಮ್ರಾಜ್ಯದಲ್ಲಿ ಇವೆರಡೂ ಸಂಮಿಶ್ರವಾಗಿ ತೋರಿದುವು. ಆದರೆ ಇವುಗಳಲ್ಲಿಯ ಗುಣಭಾಗವು ಬಲಿಷ್ಠವಾದಾಗ ಸಾಮ್ರಾಜ್ಯವೂ ಕನ್ನಡಸಂಸ್ಕೃತಿಯೂ ಮುಗಿಲೆತ್ತರಕ್ಕೆ ಏರಿದುವು, ದೋಷಭಾಗವು ಪ್ರಬಲವಾಗಲು ಅವೆರಡು ತೀರ ಕೆಳಗಿಳಿದುವು. ತನ್ನ ಉತ್ತಮಿಕೆ-ಯಲ್ಲಿ ವಿಜಯನಗರವು ದಕ್ಷಿಣಭಾರತದ ಕನ್ನಡ, ತಮಿಳು, ತೆಲುಗು ಮುಂತಾಗಿ ಎಲ್ಲ ಭಾಷೆಗಳ ಹಾಗೂ ಶೈವ, ವೈಷ್ಣವ, ವೀರಶೈವ, ಜೈನ, ಮುಸ್ಲಿಂ ಮುಂತಾದ ಎಲ್ಲ ಮತಗಳ ಆಶ್ರಯಸ್ಥಾನವಾಯಿತು. ಸಮಗ್ರಭಾರತದ ಪೂರ್ವಪರಂಪರೆಯಲ್ಲಿಯ ವೈದಿಕಧರ್ಮವನ್ನು ಅದು ಎತ್ತಿಹಿಡಿಯಿತು. ಕನ್ನಡಿಗರ ಸಮನ್ವಯಬುದ್ಧಿ ಈ ಕಾಲದಲ್ಲಿ ಕಳಸಕ್ಕೆ ಮುಟ್ಟಿತು. ೧೩೬೮ರಲ್ಲಿ ಜೈನರಿಗೂ ಶ್ರೀವೈಷ್ಣವರಿಗೂ ಉಂಟಾದ ತಿಕ್ಕಾಟದಲ್ಲಿ ಬುಕ್ಕರಾಯನು ನಡುವಾಗಿ ಎರಡೂ ಪಂಗಡದವರಲ್ಲಿ ಮಾಡಿದ ಒಡಂಬಡಿಕೆ ಬರೀ ರಾಜನೀತಿಯನ್ನಲ್ಲ, ಕನ್ನಡಸಂಸ್ಕೃತಿಯ ತಿರುಳಾದ ಜೀವನನೀತಿಯನ್ನು ಸಾರಿ

ಹೇಳುವ ಘೋಷಣೆಯಾಗಿದೆ. ವಿಜಯನಗರದ ತರುವಾಯ ಕನ್ನಡಸಂಸ್ಕೃತಿಯ ದೋಷಗಳು ಪ್ರಧಾನವಾಗಿ, ನಾಡಿಗೆ ಒಂದು ಬಗೆಯ ಸಾಂಸ್ಕೃತಿಕ ಅನಾರೋಗ್ಯವು ಉಂಟಾಯಿತು. ಮೈಸೂರೊಂದರಲ್ಲಿ ದೃಷ್ಟಿ ಸಂಕುಚಿತವಾದರೂ ಕನ್ನಡಿಗರ ಶಕ್ತಿ ಕುಂಠಿತವಾಗಲಿಲ್ಲ, ಸಾಹಿತ್ಯ–ಕಲೆಗಳು ರಾಜಾಶ್ರಯದಲ್ಲಿ ಬೆಳೆಯುತ್ತ ಬಂದುವು. ಕೆಳದಿ ಮುಂತಾದ ಸಣ್ಣ ರಾಜ್ಯಗಳಲ್ಲಿಯೂ ಕನ್ನಡಪ್ರತಿಭೆ ಬೆಳಗಿತು. ಉತ್ತರ-ಕರ್ನಾಟಕದ ಬಹುಭಾಗದಲ್ಲಿ ಮಾತ್ರ ಕವಿದ ಕತ್ತಲೆ ಇನ್ನೂ ಸಂಪೂರ್ಣವಾಗಿ ನಷ್ಟವಾಗಿಲ್ಲ. ೧೮–೧೯ನೆಯ ಶ.ಗಳಲ್ಲಿ ಉಜ್ವಲವಾದ ಸಾಹಿತ್ಯನಿರ್ಮಾಣದ ಅಭಾವ ಮತ್ತು ೨೦ನೆಯ ಶ.ದಲ್ಲಿಯೂ ತಡವಾಗಿ ತಡವರಿಸಿ ಕಾಲಿಟ್ಟ ಹೊಸ ಸಾಹಿತ್ಯದ ಮುಂದಗತಿ ಇವಕ್ಕೆ, ಇನ್ನೂರು ವರ್ಷಗಳ ಮೇಲಿನ ಕಾಲದಲ್ಲಿ ಕನ್ನಡ ಜನಜೀವನವು ದಿಙ್ಮೂಢವೂ ಅಗತಿಕವೂ ಆತ್ಮಪ್ರಜ್ಞೆಯಿಲ್ಲದುದೂ ಆಗಿ ಬಾಳಿದ್ದೇ ಮುಖ್ಯ ಕಾರಣವಾಗಿದೆ.

ಈ ಯುಗದ ವೈಶಿಷ್ಟ್ಯಗಳು

ಪಂಪಯುಗವು ಮಾರ್ಗ ಇಲ್ಲವೆ ಪ್ರೌಢಕಾವ್ಯದಿಂದ ಪ್ರಚುರವೆಂದು ಕಂಡೆವು. ಬಸವಯುಗದಲ್ಲಿ ಮಾರ್ಗದಿಂದ ದೇಸಿಗೆ ಸಂಕ್ರಮಣವಾಗುತ್ತಿರುವುದನ್ನು ಅರಿತೆವು. ಮೂರನೆಯ ಕುಮಾರವ್ಯಾಸಯುಗವು ದೇಸಿಪ್ರಚುರವೆಂದು ಕರೆಯಿಸಿಕೊಳ್ಳಲು ಯೋಗ್ಯವಾಗಿದೆ. ಈ ಯುಗದ ಕಾಲವಿಸ್ತಾರವು ಮೊದಲಿನ ಯುಗಗಳಿಗಿಂತ ಇಮ್ಮಡಿ-ಯಾಗಿದೆ. ಸಾಹಿತ್ಯನಿರ್ಮಿತಿಯೂ ಸಂಕೀರ್ಣವಾಗಿದೆ. ಯಾವೊಂದೇ ತಲೆಪಟ್ಟಿ-ಯಿಂದ ಇದನ್ನು ಗುರುತಿಸುವುದು ಕಷ್ಟ. ಎಲ್ಲ ಮತದವರೂ ಹಳೆಯ ಹೊಸ ವಿಷಯ–ರೂಪ–ಶೈಲಿಗಳನ್ನು ಬಳಸಿ ಬರೆದಿದ್ದಾರೆ. ಸಂಕೀರ್ಣತೆಯೇ ಈ ಯುಗದ ವೈಶಿಷ್ಟ್ಯವೆನ್ನುವಂತೆ ಪರಿಸ್ಥಿತಿಯಿದೆ. ಅಲ್ಲದೆ ರಾಜಾಶ್ರಯದ ದೃಷ್ಟಿಯಿಂದ ವಿಜಯನಗರದ ರಾಯರು, ಮೈಸೂರಿನ ಒಡೆಯರು ಹಾಗೂ ಕಿರುದೊರೆಗಳು ಇವರೆಲ್ಲರ ಆಶ್ರಯದಲ್ಲಿ ಮತ್ತು ಪ್ರೇರಣೆಯಿಂದ ಕನ್ನಡಸಾಹಿತ್ಯವು ಅನೇಕಮುಖವಾಗಿ ಈ ಯುಗದಲ್ಲಿ ಹೊಮ್ಮಿದೆ. ಇಷ್ಟಿದ್ದರೂ ಸಹ ಚಾರಿತ್ರಿಕವಾಗಿ ಸ್ಥೂಲಮಾನದಿಂದ ನೋಡಿದರೆ ದೇಸಿಯ ಮುಖ್ಯ ತತ್ವಗಳಾದ ಅಭಿವ್ಯಕ್ತಿಯ ಸ್ವಾತಂತ್ರ್ಯ ಮತ್ತು ಜನತಾ-ದೃಷ್ಟಿ ಇವು ಈ ಯುಗದಲ್ಲಿ ಹೆಚ್ಚು ಪ್ರಮಾಣದಲ್ಲಿ ತೋರಿದ್ದು ಬಹುಶಃ ಎಲ್ಲ ಗ್ರಂಥಕಾರರ ಮೇಲೆ ದೃಢವಾದ ಪರಿಣಾಮವನ್ನು ಉಂಟುಮಾಡಿವೆ, ೧೯ನೆಯ ಶ.ದ ಕೊನೆ ಮತ್ತು ೨೦ನೆಯ ಶ.ದಲ್ಲಿ ಉದಯವಾದ ಹೊಸ ಸಾಹಿತ್ಯಕ್ಕೆ ಹಿನ್ನೆಲೆಯನ್ನು ಕಲ್ಪಿಸಿಕೊಟ್ಟಿವೆ. ಇದನ್ನು ನೆನೆದು ಕೆಲವು ವೈಶಿಷ್ಟ್ಯಗಳನ್ನು ಹೀಗೆ ಹೇಳಬಹುದು:

(೧) ಈ ಯುಗದಲ್ಲಿಯೆ ಬ್ರಾಹ್ಮಣ ಇಲ್ಲವೆ ಭಾಗವತವಾಙ್ಮಯವು ವಿಪುಲ-ವಾಗಿ ಬೆಳೆದಿದೆ. ಮೊದಲಿನ ಮೀನಮೇಷವೃತ್ತಿಯನ್ನು ತೊರೆದು ಅದು ಕನ್ನಡವಲ್ಲಿ

ಶ್ರದ್ಧೆಯನ್ನು ಬಲಪಡಿಸಿಕೊಂಡು ಜನಸಂಮುಖವಾಗಿ ಮುಂದರಿದಿದೆ. ಕುಮಾರವ್ಯಾಸನು ಈ ದೇಸಿನಿಷ್ಠೆಗೆ ಮೊದಲಿಗನಾದ ಮಹಾಕವಿಯಾಗಿ ತನ್ನ ಭಾರತದಲ್ಲಿ ಅದಕ್ಕೆ ದೃಷ್ಟಾಂತವನ್ನು ಅದ್ಭುತವಾಗಿ ಒದಗಿಸಿದನು. ಅವನ ಪ್ರತ್ಯಕ್ಷ-ಅಪ್ರತ್ಯಕ್ಷ ಪ್ರಭಾವದಿಂದ ಅನೇಕ ಭಾಗವತಕವಿಗಳು ಮುಂಬಂದು ರಾಮಾಯಣ, ಭಾರತ, ಭಾಗವತ ಮುಂತಾದ ಪುರಾಣಗಳು ಇವನ್ನು ಕನ್ನಡಿಸುತ್ತ ತಮ್ಮ ದರ್ಶನಕ್ಕೆ ಮೂರ್ತಸ್ವರೂಪಕೊಟ್ಟರು; ಹಾಗೆ ಮಾಡುವಲ್ಲಿ ಸಾಮಾನ್ಯವಾಗಿ ಷಟ್ಪದಿ, ಸಾಂಗತ್ಯ ಈ ರೂಪಗಳನ್ನು ಬಳಸಿಕೊಂಡರು. (೨) ಭಾಗವತಸಾಹಿತ್ಯದ ಒಂದು ವಿಶಿಷ್ಟ-ಶಾಖೆಯಾಗಿ ಹಿಂದಿನ ಯುಗದಲ್ಲಿ ಮೊಳೆತ ದಾಸವಾಙ್ಮಯವು ಈ ಯುಗದಲ್ಲಿ ಸಮೃದ್ಧವಾಗಿ ಬೆಳೆಯಿತು, ಸ್ಥಿರವಾದ ಪರಂಪರೆಯುಳ್ಳ ದಾಸಕೂಟವೆಂಬ ಒಂದು ಸಂಸ್ಥೆ, ಜನಸಂಸ್ಕಾರಕವಾದ ಒಂದು ಆಂದೋಲನ ಎಂಬ ಸ್ವರೂಪತಾಳಿತು. ಅದು ಮಾಧ್ವತತ್ವ ಮತ್ತು ಆಚಾರಧರ್ಮವನ್ನು ಕನ್ನಡದಲ್ಲಿ ಪ್ರಚಾರಿಸಿತು, ಅದಕ್ಕಿಂತ ಹೆಚ್ಚಾಗಿ ವಿಶಾಲವಾದ ಭಾಗವತಮನೋಧರ್ಮವನ್ನೂ ಸಾಮಾಜಿಕನೀತಿಯನ್ನೂ ಬೋಧಿಸಿತು. ಪದ, ಸುಳಾದಿ, ಉಗಾಭೋಗ ಈ ರೂಪಗಳಲ್ಲಿ ಅದು ಹೊರಹೊಮ್ಮಿ ಕರ್ನಾಟಕಸಂಗೀತವನ್ನು ಜನಪ್ರಿಯಗೊಳಿಸಿತು, ಶಾಸ್ತ್ರವನ್ನು ಕಲೆಯ ರಂಜಕತೆಗೆ ಇಳಿಸಿತು. (೩) ಕನ್ನಡದಲ್ಲಿ ಶ್ರೀವೈಷ್ಣವ ಮತ-ತತ್ವ ಮತ್ತು ಸಂಪ್ರದಾಯಗಳನ್ನು ತಿಳಿಸಿ ಹೇಳುವ ಪ್ರೌಢ ಮತ್ತು ಸುಲಭಸಾಹಿತ್ಯವು ಈ ಯುಗದ ಉತ್ತರಾರ್ಧದಲ್ಲಿ ಸ್ವಲ್ಪು ಕವಿಗಳಿಂದ ಬಹಳವಾಗಿ ದೊರೆಯಿತು. (೪) ಈ ಯುಗದಲ್ಲಿ ವೀರಶೈವ ವಾಙ್ಮಯದ ಪುನರುಜ್ಜೀವನವು ಬಹು ದೊಡ್ಡ ಪ್ರಮಾಣದಲ್ಲಿ ನಡೆಯಿತು. ೧೩ನೆಯ ಶ.ದಂತೆ ಹೇರಳವಾದ ವಚನಕಾರರು ಈಗ ಉದಯವಾಗಲಿಲ್ಲ, ಆದರೆ ಹಲಕೆಲವ-ರಾದರೂ ಆಗಾಗ ಬೆಳ್ಳಿಯಂತೆ ಹೊಳೆದರು. ಮುಖ್ಯವಾಗಿ ವಚನಗಳ ಸಂಕಲನ, ಸಂಪಾದನೆ, ಟೀಕೆ-ಟಿಪ್ಪಣಿ ಈ ಮೊದಲಾದ ವಿಧಾಯಕ ಮತ್ತು ವಿವರಣಾತ್ಮಕ ಕಾರ್ಯವು ಹೆಚ್ಚಾಯಿತು. ಜೊತೆಗೆ ಶಿವಶರಣರ ಮತ್ತು ಶೈವಕವಿಗಳ ಚರಿತ್ರಗ್ರಂಥ-ಗಳು, ಅವುಗಳೊಡನೆ ಮಿಶ್ರವಾಗಿ ಇಲ್ಲವೆ ಬೇರೆಯಾಗಿ ವೀರಶೈವ ವಿಶ್ವಕೋಶವೆನ್ನಿಸಿ-ಕೊಳ್ಳುವ ಬಹುವಿಷಯಗರ್ಭಿತಗ್ರಂಥಗಳು, ಕಾಲಜ್ಞಾನ, ಶತಕಗಳು ಈ ಮೊದಲಾದ ಗ್ರಂಥರಾಶಿ ನಿರ್ಮಾಣವಾಯಿತು. (೫) ಜೈನಕವಿಗಳು ದೇಸೀಯ ದಿಕ್ಕಿನತ್ತ ಬೀಸುವ ಗಾಳಿಯನ್ನರಿತು ತಮ್ಮ ಸಾಹಿತ್ಯರಥವನ್ನು ಅತ್ತ ಸಾಗಿಸಿದರು. ತೀರ್ಥಂಕರಚರಿತೆಗಳು ಹಾಗೂ ಇತರ ಜೈನಸಾಂಪ್ರದಾಯಿಕವಿಷಯಗಳು ಜನಸುಲಭವಾದ ಷಟ್ಪದಿ-ಸಾಂಗತ್ಯಗಳಲ್ಲಿ ನೆಲೆನಿಂತುವು. ಅಲ್ಲದೆ ಶೈವ-ವೈಷ್ಣವ ಭಕ್ತಿಪ್ರಭಾವವು ಸಹ ಜೈನ-ಗ್ರಂಥಕಾರರ ಮೇಲೆ ಆಯಿತೆಂದು ಕಂಡುಬರುತ್ತದೆ. (೬) ಚಂಪುವಿನ ಅಸ್ತ ಮತ್ತು ಮೈಸೂರೊಡಯರ ಕಾಲದಲ್ಲಿ ಅದರ ಪುನರುದಯ ಇದು ಯುಗದ ದೇಸಿಪ್ರಾಚುರ್ಯಕ್ಕೆ ನಿದರ್ಶನವಾದಂತೆ ಇದರ ಸಂಕೀರ್ಣತೆಗೆ ಸಾಕ್ಷಿಯಾಗಿದೆ. ಚಂಪೂರೂಪದ ಬಳಕೆ ತೀರ ಕಡಿಮೆಯಾಯಿತು. ಈ ಯುಗದ ಕೊನೆಯ ಭಾಗದಲ್ಲಿದ್ದ ದೇವಚಂದ್ರನನ್ನು

ಬಿಟ್ಟರೆ ಯಾವ ಜೈನಕವಿಯೂ ಚಂಪುವಿನತ್ತ ಹೋಗಲಿಲ್ಲ. ಅಭಿನವವಾದಿವಿದ್ಯಾನಂದನ 'ಕಾವ್ಯಸಾರ'ವು ಕೇವಲ ಸಂಕಲನಗ್ರಂಥ. ೧೭ನೆಯ ಶ.ದವರೆಗೆ ಚಂಪುವಿನಲ್ಲಿ ಕೆಲಮಟ್ಟಿಗೆ ವೀರಶೈವಕವಿಗಳು ಗ್ರಂಥ ರಚಿಸಿದರು, ಮುಂದೆ ಅದರ ಪುನರುಜ್ಜೀವನಪ್ರಯತ್ನದಲ್ಲಿ ಶ್ರೀವೈಷ್ಣವರೊಡನೆ ಅವರು ಸಹಕರಿಸಿದರು. (೭) ಷಟ್ಪದಿಯೇ ಈ ಯುಗದ ಪ್ರಧಾನಕಾವ್ಯರೂಪವಾಯಿತು. ಅದರಲ್ಲಿಯೂ ಭಾಮಿನಿ, ತರುವಾಯ ವಾರ್ಧಕ ಇವು ಹೆಚ್ಚು ಲೋಕಪ್ರಿಯವಾದುವು. ಎಲ್ಲ ಮತಪರಂಪರೆಯ ಎಲ್ಲ ವಿಷಯಗಳು ಷಟ್ಪದಿಯಲ್ಲಿ ವಿಶೇಷಪ್ರಮಾಣದಲ್ಲಿ ಪ್ರತಿಪಾದಿತವಾದದ್ದನ್ನು ನೋಡಿದರೆ ಈ ಯುಗಕ್ಕೆ ಸ್ಥೂಲವಾಗಿ **ಷಟ್ಪದಿಯುಗ** ಎನ್ನಲು ಅಡ್ಡಿಯಿಲ್ಲ. ಷಟ್ಪದಿಯಲ್ಲಿಯೇ ಕುಮಾರವ್ಯಾಸನ 'ಭಾರತ', ಚಾಮರಸನ 'ಪ್ರಭುಲಿಂಗಲೀಲೆ', ಲಕ್ಷ್ಮೀಶನ 'ಜೈಮಿನಿಭಾರತ', ವಿರೂಪಾಕ್ಷನ 'ಚೆನ್ನಬಸವಪುರಾಣ' ಈ ಬಗೆಯ ಗಣ್ಯ ಗ್ರಂಥಗಳು ಹುಟ್ಟಿವೆ. ಮತತತ್ತ್ವವನ್ನು ಲೌಕಿಕದೃಷ್ಟಾಂತಗಳಿಂದಲೂ ಸುಲಭಶೈಲಿಯಿಂದಲೂ ಪ್ರಚಾರಗೊಳಿಸಿದ 'ಅನುಭವಾಮೃತ', 'ಹರಿಕಥಾಮೃತಸಾರ'ದಂಥ ಗ್ರಂಥಗಳು ಷಟ್ಪದಿಯನ್ನು ಸಾರ್ಥಕಗೊಳಿಸಿವೆ. ಕ್ರಿಯೆಗೆ ಪ್ರತಿಕ್ರಿಯೆಯೆಂಬಂತೆ ಷಟ್ಪದಿಗೆ ಮಾರ್ಗದೀಕ್ಷೆಯನ್ನು ಕೊಟ್ಟು ಪ್ರೌಢಗೊಳಿಸುವ ಪ್ರಯತ್ನಗಳೂ ಆಗಿವೆ. (೮) ದೇಶ್ಯಛಂದಸ್ಸಿನ ಇತರ ರೂಪಗಳಲ್ಲಿ ಸಾಂಗತ್ಯವು ಬಹುಶಃ ಇದೇ ಯುಗದಲ್ಲಿ ಸಾಹಿತ್ಯಮಂದಿರವನ್ನು ಪ್ರವೇಶಿಸಿ ಏರೇರುತ್ತಹೋಗಿ ರತ್ನಾಕರವರ್ಣಿಯ 'ಭರತೇಶವೈಭವ'ದಲ್ಲಿ ಕಳಸವನ್ನು ಮುಟ್ಟಿತು. ಬರಿಯೊಂದು ಜನತೆಯ ಹಾಡಿನ ಮಟ್ಟ ಈ ಸಿದ್ಧಿಗೆ ಸಂದುದು ಈ ಯುಗದಲ್ಲಿಯ ದೇಸಿದಿಗ್ವಿಜಯಕ್ಕೆ ಒಂದು ಹೆಗ್ಗುರುತೆನ್ನಬಹುದು. (೯) ಇದೇ ಯುಗದಲ್ಲಿ ನೇರವಾಗಿ ತತ್ಕಾಲೀನ ಇತಿಹಾಸವನ್ನು ನಿರೂಪಿಸುವ ಚಾರಿತ್ರಿಕಗ್ರಂಥಗಳು ಜನ್ಮತಾಳಿವೆ. ಪಂಪಯುಗ ಇಲ್ಲವೆ ಬಸವಯುಗದ ಚಾರಿತ್ರಿಕಧ್ವನಿಕಾವ್ಯಗಳಿಗಿಂತ ಇವುಗಳ ರೀತಿ ಬೇರೆ. (೧೦) ಈ ಯುಗದಲ್ಲಿ ಪದ್ಯವೇ ಹೆಚ್ಚಾಗಿದ್ದರೂ ಬರಬರುತ್ತ ಗದ್ಯದತ್ತ ಒಲವು ಬೆಳೆಯುತ್ತ ಬಂದಿದೆ. 'ಚಿಕದೇವರಾಯವಂಶಾವಳಿ', 'ರಾಜಾವಳೀಕಥೆ', 'ಮುದ್ರಾಮಂಜೂಷ', 'ರಾಮಾಶ್ವಮೇಧ' ಈ ಗದ್ಯಗ್ರಂಥಗಳಲ್ಲಿ ಗದ್ಯದ ಬೆಳೆವಣಿಗೆಯನ್ನು ಗುರುತಿಸಬಹುದು. 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ' ಎಂಬ ಮುದ್ದಣನ ಸೂತ್ರದಲ್ಲಿ ಗದ್ಯವನ್ನೇ ಹೆಚ್ಚಾಗಿ ಬಯಸುವ ಹೊಸಗನ್ನಡ ವಾಚಕನ ಒಂದು ಪ್ರತಿಕ್ರಿಯೆಯನ್ನು ಕಾಣಬಹುದು.

೨೩. ಕುಮಾರವ್ಯಾಸ

ಈ ಯುಗಕ್ಕೆ ಮೊದಲಿಗನಾದ ಕುಮಾರವ್ಯಾಸನು ಕನ್ನಡಕ್ಕೆ ತಲೆಮಣಿಯಾದ ಕವಿಗಳಲ್ಲಿ ಒಬ್ಬನು. ಅವನ ಚರಿತ್ರೆ ಬಹುಶಃ ಕಣ್ಮರೆಯಾಗಿದ್ದರೂ ಅವನ ಕೃತಿ ನಮ್ಮ ಕಣ್ಣಮುಂದಿದೆ. ಅದೇ ಹತ್ತು ಪರ್ವಗಳಲ್ಲಿರುವ 'ಕನ್ನಡಭಾರತ' ಇಲ್ಲವೆ 'ಗದುಗಿನ ಭಾರತ'. ಹತ್ತು ಪರ್ವಗಳ ಈ ಒಂದು ಕೃತಿ ಹತ್ತು ದಿಕ್ಕುಗಳಲ್ಲಿ ಹರಡಿದ ವಿಶ್ವದಂತೆ ವಿಶಾಲವಾಗಿದೆ, ಪೂರ್ಣವಾಗಿದೆ. ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಹತ್ತು ಪರ್ವಗಳನ್ನು ಮಾತ್ರ ಒಳಗೊಂಡ ಈ ಹೊತ್ತಗೆ ಅಪೂರ್ಣವೆಂದು ತೋರಬಹುದು. ಪೂರ್ಣಗೊಳಿಸುವುದಾಗದೆ ಕವಿ ಕಾಲವಾದನೆಂದು ಕೆಲವರ ತಿಳಿವಳಿಕೆಯಿದೆ. ಮುಂದೆ ತಿಮ್ಮಣ್ಣ ಕವಿ ಕೃಷ್ಣದೇವರಾಯನ ಇಚ್ಛೆಯಂತೆ ಉಳಿದ ಪರ್ವಗಳನ್ನು ರಚಿಸಿ ಗ್ರಂಥ ಪೂರ್ತಿಮಾಡಿದನೆಂದು ತಿಳಿದಿದೆ. ಆದರೆ ಗದಾಪರ್ವದ ಕೊನೆಗೆ ತನ್ನ ಗ್ರಂಥವನ್ನು ಮುಗಿಸುವುದೇ ಕುಮಾರವ್ಯಾಸನ ಉದ್ದೇಶವಾಗಿರಬೇಕೆಂದು ಕೊನೆಯ ಪದ್ಯಗಳಿಂದ ಸೂಚಿತವಾಗುತ್ತದೆ. ಇಲ್ಲವಾದರೆ ಮುಕ್ತಾಯದಲ್ಲಿರಬೇಕಾದ ಗ್ರಂಥಸ್ತುತಿ–ಫಲಶ್ರುತಿಗಳಿಗೆ ಅರ್ಥವಿಲ್ಲದೆ ಹೋಗಬಹುದು.

ಕುಮಾರವ್ಯಾಸನು 'ಐರಾವತ'ವೆಂಬ ೮ ಸಂಧಿಗಳ ಕಾವ್ಯವನ್ನು ಬರೆದನೆಂಬ ಪ್ರತೀತಿಯಿದೆ. ಇದರ ಹಸ್ತಲಿಖಿತ ಪ್ರತಿಗಳ ಕೊನೆಯಲ್ಲಿ ಬರುವ ಗದುಗಿನ ವೀರನಾರಾಯಣನ ಅಂಕಿತವು ಈ ಪ್ರತೀತಿಯನ್ನುಂಟುಮಾಡಿದೆ. 'ಇದಲ್ಲದೆ ಭಾಷೆ, ವಿಚಾರ, ಶೈಲಿ ಮತ್ತು ಶಬ್ದಸಂಗ್ರಹ ಇವೆಲ್ಲವುಗಳನ್ನು ಕರ್ನಾಟಕಮಹಾಭಾರತದೊಂದಿಗೆ ಹೋಲಿಸಿ ನೋಡಿದರೆ ಐರಾವತದ ಕರ್ತನು ಕುಮಾರವ್ಯಾಸನೇ ಇರಬೇಕು ಎಂದು ಸ್ಪಷ್ಟವಾಗುತ್ತದೆ'[1] ಎಂದು ಹೇಳಲಾಗಿದೆ. ಕುಮಾರವ್ಯಾಸನು ಈ ಕಾವ್ಯದ ಕರ್ತೃವಾಗಿರಲಾರನೆಂದೂ ಬೇರೊಬ್ಬ ತರುವಾಯದ ಸಾಧಾರಣಕವಿ ಕುಮಾರವ್ಯಾಸನ ಆದಿಪರ್ವದ 'ಐರಾವತ' ಭಾಗವನ್ನು ತನಗೆ ತೋರಿದಂತೆ ವಿಸ್ತರಿಸಿ ಬರೆದಿರಬಹುದೆಂದೂ ನಮಗೆ ತೋರುತ್ತದೆ. ಏಕೆಂದರೆ ಭಾವ–ಭಾಷೆಗಳಲ್ಲಿ ಕುಮಾರವ್ಯಾಸನ ಉಜ್ವಲತೆ, ಸಹಜತೆಗಳ ಅನುಭೂತಿ ಇದರಲ್ಲಿ ಆಗುವುದಿಲ್ಲ.

ಸಮಗ್ರಭಾರತವನ್ನು ಆದಿಪಂಪನ ತರುವಾಯ ನಿರೂಪಿಸಿದವನೆಂದರೆ ಕುಮಾರವ್ಯಾಸನು. ಇಲ್ಲಿ ಸಮಗ್ರಭಾರತ ಎಂದರೆ ವ್ಯಾಸಭಾರತದಲ್ಲಿದ್ದುದೆಲ್ಲ ಎಂದಲ್ಲ, ಕಥಾನಕದೃಷ್ಟಿಯಿಂದ ಪ್ರಮುಖವಾದದ್ದು. ಆದಿಯಿಂದ ಗದಾಪರ್ವದ ಅಂತ್ಯದವರೆಗೆ ಇದರ ಹರವಿದೆ. ಕುಮಾರವ್ಯಾಸನು ಈ ಭಾರತಕಥೆಯನ್ನು ಹೇಳಿದ ಬಗೆಯೇನು, ಅದರ ಸವಿಯೇನು ಎಂಬುದನ್ನು ಅರಿಯಬೇಕು; ಪಂಪನ ಬಗೆಗೆ ಹೋಲಿಸಿ ನೋಡ-

---

1 ರಾ. ಸ್ವಾ. ಪಂಚಮುಖಿ: ಐರಾವತ, ಉಪೋದ್ಘಾತ, ಪು. ೫

ಬೇಕು. ಪೀಠಿಕಾಪದ್ಯಗಳಲ್ಲಿ 'ಕೃತಿಯು ಸತ್ಕರ್ಣಾಟಕದ ಭಾರತಕ್ಕೆ **ಮಂಜುಳ-ಮಂಜರಿಯು** ಮಹಾಕೃತಿಗೆ ನಾಯಕನಾದ ಗದುಗಿನ ವೀರನಾರಾಯಣ' (೧–೧೩), 'ತಿಳಿಯಹೇಳುವೆ **ಕೃಷ್ಣಕಥೆಯನು**' (೧–೨೫) ಎಂದು ಹೇಳಿರುವುದಲ್ಲದೆ 'ಕುಮಾರವ್ಯಾಸಭಾರತ', 'ಭಾರತಕಥೆ'ಯೆಂದೂ ಕವಿ ಇದನ್ನು ಕರೆದಿದ್ದಾನೆ. ಇದರಿಂದ ಇದರ ಕಥಾರಚನೆಯಲ್ಲಿ ಸುಂದರವಾದ ಬಂಧದೃಷ್ಟಿ ಮತ್ತು ಇದರ ದರ್ಶನದಲ್ಲಿ ಭಾಗವತದೃಷ್ಟಿ ಇರುತ್ತವೆಂದು ತಿಳಿಯುತ್ತದೆ. ಈ ಎರಡೂ ದೃಷ್ಟಿಗಳ ಸಮನ್ವಯದಲ್ಲಿ ಕುಮಾರವ್ಯಾಸಭಾರತದೃಷ್ಟಿಯು ಮೂಲವಿದೆ. ಮಹಾಭಾರತದಲ್ಲಿ ಇರುವ ಮಾನಜೀವನದ ಜಟಿಲಕಥೆಯನ್ನು ಕಲಾಮಯವಾಗಿ ಚಿತ್ರಿಸುತ್ತಲೆ ಅದಕ್ಕೆ ಪ್ರೇರಕ-ತಾರಕವಾಗಿರುವ ಭ ಗ ವ ತ್ ಶ ಕ್ತಿ ಯ ಲೀಲೆಯನ್ನೂ ಮಹಿಮೆಯನ್ನೂ ಬಾಯ್ತುಂಬ ಬಣ್ಣಿಸಬೇಕೆಂಬುದರಲ್ಲಿ ಆ ಸಮನ್ವಯವಿದೆ, ಕುಮಾರವ್ಯಾಸನ ವಿಶಿಷ್ಟವಾದ ಸಮ್ಯಕ್‌ದರ್ಶನವಿದೆ. ಅವನ ಕಥಾರಚನೆಯ ಗುಣಾವಗುಣಗಳನ್ನು ಅಳೆಯುವಾಗ ಇದನ್ನು ಮೊದಲು ತಿಳಿದಿರಬೇಕು. ವ್ಯಾಸಭಾರತವನ್ನು ಓದಿ ಹಲವು ಸಲ ಪಾರಾಯಣಮಾಡಿ ಅದನ್ನು ಆತ್ಮಸಾತ್‌ಮಾಡಿಕೊಂಡು ಅದರ ಚಿತ್ರಗಳನ್ನೂ ಭಾವರಸಗಳನ್ನೂ ಕಣ್ಣಮುಂದೆ ಬೇಡಿದಾಗ ತಂದುಕೊಳ್ಳುವಷ್ಟು ಕುಮಾರವ್ಯಾಸನು ಭಾರತ-ತನ್ಮಯನಾಗಿರಬೇಕು. ಯೋಗಸಾಧನೆಯ ಬಲದಿಂದ ಮನಸ್ಸಿನ ಮೇಲಣ ಅಂತಃಪ್ರಜ್ಞೆಯನ್ನೂ ದೈವಕೃಪೆಯನ್ನೂ ಪಡೆದವನಾಗಿರಬೇಕು. ಕವಿತ್ವ–ಪಾಂಡಿತ್ಯ-ಗಳ ಕೃಷಿಯಿಂದ ಕಾವ್ಯರಚನೆಯ ಸಲಕರಣೆಗಳನ್ನೆಲ್ಲ ಸಹಜಸೊತ್ತಾಗಿಸಿಕೊಂಡಿರ-ಬೇಕು. ಅವನ 'ಮಹಾಕೃತಿ' ಈ ಎಲ್ಲದರ ಫಲವಾಗಿ ಹೊರಹೊಮ್ಮಿದೆ.

ಕುಮಾರವ್ಯಾಸಭಾರತವು ವ್ಯಾಸಭಾರತವನ್ನು ಎಷ್ಟುಮಟ್ಟಿಗೆ ಅನುಸರಿಸಿದೆ? ಯಾವ ಮಾರ್ಪಾಟುಗಳನ್ನು ಮಾಡಿಕೊಂಡಿದೆ? ಅವುಗಳಿಂದ ಉಂಟಾದ ಸ್ವಾರಸ್ಯ-ವೇನು? ಎಂಬ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡುವುದಕ್ಕೆ ಸಂಶೋಧನಸಾಮಗ್ರಿ ಸಾಲದು. ಎರಡೂ ಭಾರತಗಳಲ್ಲಿ ಅನೇಕ ಪ್ರಕ್ಷೇಪಗಳಾಗಿವೆ. ಯಾವುದು ಮೂಲ, ಯಾವುದು ಪ್ರಕ್ಷಿಪ್ತ ಎಂಬುದನ್ನು ನಿರ್ಣಯಿಸುವುದು ಕಷ್ಟ. ಈ ವಿಷಯದಲ್ಲಿ ಸಂಶೋಧನೆ ಶಾಸ್ತ್ರಶುದ್ಧವಾಗಿ ನಡೆಯುತ್ತಿದೆ. ಅದರ ಫಲಗಳಿನ್ನೂ ಸಂಪೂರ್ಣವಾಗಿ ಲಭಿಸಿಲ್ಲ. ಸದ್ಯಕ್ಕೆ ಸ್ಥೂಲಮಾನದಿಂದ ಕೆಲವು ಅನುಮಾನಗಳನ್ನು ಮಾಡಬಹುದು. ಸಾಮಾನ್ಯವಾಗಿ ಕೃಷ್ಣನೆಂದರೆ ಪರಮಾತ್ಮನೆಂಬ ಭಾಗವತದೃಷ್ಟಿ-ಯಿಂದ ರೂಪುಗೊಂಡು ವಿಸ್ತಾರವಾಗಿ ಬೆಳೆದು ತನ್ನ ಕಾಲದಲ್ಲಿ ಪ್ರಚಲಿತವಾದ ಮಹಾಭಾರತದ ಕಥೆಯನ್ನು ಅಂದರೆ ದಕ್ಷಿಣಭಾರತದಲ್ಲಿ ಪ್ರಚಾರದಲ್ಲಿದ್ದ ಆವೃತ್ತಿ-ಯನ್ನು ಕುಮಾರವ್ಯಾಸನು ಮುಖ್ಯವಾಗಿ ಅನುಸರಿಸಿರಬೇಕು. ಅದರಲ್ಲಿಯೂ ದೊರೆಯದ ಅಂಶಗಳನ್ನು ತನಗೆ ಹಿಂದಿನ ಸಂಸ್ಕೃತ–ಕನ್ನಡಕಾವ್ಯ ಮತ್ತು ಭಗವದ್ಭಕ್ತರ ಕಥನಪರಂಪರೆಗಳಿಂದ ಎತ್ತಿಕೊಂಡಿರಬೇಕು. ಸ್ವಂತವಾಗಿಯೂ ಕೆಲವು ಕಡೆಗೆ ಕಲ್ಪಿಸಿರಬಹುದು. ಒಟ್ಟಿನಲ್ಲಿ ಮಹಾಭಾರತದ ಪ್ರತಿಪರ್ವದ ಪ್ರಮುಖಭಾಗಗಳನ್ನು

ಕುಮಾರವ್ಯಾಸಭಾರತವು ಕನ್ನಡಿಸಿದೆ. ಕನ್ನಡಿಸುವ ಪ್ರಕ್ರಿಯೆಯಲ್ಲಿ ಸಂಕೋಚ-ವಿಸ್ತಾರಗಳಾಗಿವೆ, ಮೂಲತ್ಯಾಗ ಇಲ್ಲವೆ ವ್ಯತ್ಯಾಸಗಳಾಗಿವೆ. ಅದರಿಂದ ಕನ್ನಡ-ಭಾರತವು ವ್ಯಾಸಭಾರತದ ಸರಳಾನುವಾದವಲ್ಲ, ಸ್ವತಂತ್ರಕಳೆಯುಳ್ಳ ಪ್ರತಿನಿರ್ಮಾಣ. ಅದರ ಸ್ವಾತಂತ್ರ್ಯ ಇಲ್ಲವೆ ವೈಶಿಷ್ಟ್ಯ ಮೂಲದಿಂದ ಭಿನ್ನವಾಗಿರುವ ಅಂಶಗಳಿಗಿಂತ ಮೂಲವನ್ನು ಅನುಸರಿಸಿಯೂ ಅದರ ಉನ್ಮೀಲನದಲ್ಲಿ ತೋರಿದ ಕವಿಪ್ರತಿಭೆಯು ಮತ್ತು ಭಕ್ತಿದರ್ಶನದ ಪರಮಸೀಮೆಯಲ್ಲಿದೆ, ಕನ್ನಡದೇಸಿಯ ಸಹಜಸಂಪತ್ತಿಯಲ್ಲಿದೆ.

ಉದಾಹರಣೆಗೆ ಕೆಲವು ಸಂನಿವೇಶಗಳನ್ನು ಅವಲೋಕಿಸಬಹುದು. ಆದಿಪರ್ವ-ದಲ್ಲಿ ಪಾಂಡುಮರಣಪ್ರಸಂಗವು ಹೃದಯಸ್ಪರ್ಶಿಯಾದ ಭಾಗ. ಇದನ್ನು ಚಿತ್ರಿಸುವಲ್ಲಿ ಕುಮಾರವ್ಯಾಸನು ಮೂಲವನ್ನು ಇದ್ದಂತೆ ಎತ್ತಿಕೊಂಡಿದ್ದಾನೆ, ಎತ್ತಿದ್ದನ್ನು ಉಚಿತ ಉದ್ದೀಪನ, ಭಾವಪುಷ್ಟಿಯಿಂದ ರಸವತ್ತಾಗಿಸಿದ್ದಾನೆ. ಮೂಲದಲ್ಲಿಲ್ಲದ ಒಂದೆರಡು ಅಂಶಗಳೇನೊ ಇವೆ. ‘ ಹೂವಿನಲಿ ಸರ್ವಾಂಗಶೃಂಗಾರದ ವಿಳಾಸದಲಿ ’ (೧೬–೧೧) ಎಂಬ ವಿವರ ಮೂಲದಲ್ಲಿಲ್ಲ. ಇದಕ್ಕೆ ‘ ಪಂಪಭಾರತ ’ದ ‘ ವನಕುಸುಮಂಗಳಂ ಬಗೆಗೆ ವಂದುವನಲ್ತುಯೊಳಾಯ್ದು ಕೊಯ್ದು ’ (೨–೧೬) ಮುಂತಾದ ಪದ್ಯವು ಸ್ಫೂರ್ತಿಕೊಟ್ಟಿರಬಹುದು. ‘ ವಿಷಕನ್ನಿಕೆಯನೆನ್ನನು ಮುಟ್ಟಿದೈ ’ (ಕು.ವ್ಯಾ.ಭಾ., ೧೬–೫೮) ಇದು ‘ ವಿಷವಲ್ಲಿಯನಪ್ಪಿದಂತೆ ’ (ಪಂ.ಭಾ., ೨–೧೮ವ) ಎಂಬುದನ್ನು ನೆನಪಿಸುತ್ತದೆ. ಮೂಲಧಲ್ಲಿ ಸಂಗ್ರಹವೂ ಸಪ್ಪೆಯೂ ಆದ ಈ ಪ್ರಸಂಗವು ಇಲ್ಲಿ ಸಾಕಷ್ಟು ವಿಸ್ತೃತ ಮತ್ತು ಸರಸವಾಗಿದೆ. ‘ ಕುಸುಮಮಯಸಮಯ ’ದ ವರ್ಣನೆ ಸಾಮಯಿಕವಾಗಿದ್ದರೂ ಸಾರ್ಥಕವಾಗಿದ್ದು ಉತ್ಕಟವಾದ ಉದ್ದೀಪನವನ್ನು ಒದವಿಸಿದೆ. ‘ ಭಾಸುರವಸಂತನೃಪಾಲ ನಡೆದನು ಪಾಂಡುವಿನ ಮೇಲೆ ’ (೧೬–೭) ಎಂಬುದರ ಔಚಿತ್ಯವನ್ನು ಗಮನಿಸಬೇಕು. ಪಾಂಡುವಿನ ಕಾಮಬಾಧೆಯಲ್ಲಿ ಅವನ ವಿವೇಕ ಕ್ರಮೇಣ ನಷ್ಟವಾಯಿತೆಂಬುದನ್ನು ‘ ಪ್ರಜ್ಞಾಸಾಗರಂಗಳು ಮಧ್ಯಕಟಿಜಾನ್ವಂಘ್ರಿ-ಮಿತವಾಯ್ತು ’ (೧೬–೧೨) ಎಂಬುದು ಸಹಜರೂಪಕವಾಗಿ ತಿಳಿಸುತ್ತದೆ. ಮುಂದಣ ದುರಂತದ ಚಿತ್ರ ಕರುಳನ್ನು ಹಿಂಡುತ್ತದೆ. ಆದರೂ ‘ ಕನ್ನಡಭಾರತದಲ್ಲಿ ಈ ಸಂದರ್ಭವು ಉಜ್ವಲವಾದ, ಸರ್ವಾಂಗಪೂರ್ಣವಾದ ಒಂದು ಬಿಡಿವಜ್ರದಂತೆ ಹೊಳೆಯುತ್ತದೆ....ಈ ಸಂದರ್ಭವನ್ನು ಚಿತ್ರಿಸುವುದರಲ್ಲಿ ನಾರಣಪ್ಪನು ಪ್ರಕಟಿಸಿರುವ ಕಲಾಪರಿಣತಿಯನ್ನು ಎಷ್ಟು ಶ್ಲಾಘಿಸಿದರೂ ತೀರದು ’[1] ಎಂಬ ಹೊಗಳಿಕೆ ಹೆಚ್ಚೆಂದು ತೋರುತ್ತದೆ. ಇಲ್ಲಿಯ ಸ್ವಾರಸ್ಯವನ್ನು ಅಲ್ಲಗಳೆಯುವಂತಿಲ್ಲ, ಆದರೆ ಕುಮಾರ-ವ್ಯಾಸನ ಕಲಾಪರಿಣತಿಗೆ ಇದು ಉದಾಹರಣೆಯಲ್ಲ. ಸಾಮಾನ್ಯವಾಗಿ ಮೂಲಾನು-ವಾದವನ್ನು ಸಾವಧಾನವಾಗಿ ಮಾಡಿರುವ ಆದಿಪರ್ವದ ಪ್ರವಾಹದಲ್ಲಿ ಉಬ್ಬೆದ್ದು

---

1 ತೀ. ನಂ. ಶ್ರೀಕಂಠಯ್ಯ : ಕನ್ನಡಭಾರತದಲ್ಲಿ ಶೃಂಗಾರದ ಸಂನಿವೇಶಗಳು, ಪು. ೨೯೮, ೩೦೦ (ಕುಮಾರವ್ಯಾಸಪ್ರಶಸ್ತಿ)

ಮೆರೆದ ತೆರೆ ಇದೊಂದು. ಇನ್ನೂ ಮುಂದೆ ಬರಲಿರುವ ಬೆಟ್ಟದೆರೆಗಳಿಗೆ ಪೂರ್ವ ಸೂಚಿಯಿದ್ದಂತೆ.

ಸಭಾಪರ್ವದಲ್ಲಿ ಅವಶ್ಯವಾದ ಉಪಾಖ್ಯಾನಗಳನ್ನು ಸಂಗ್ರಹಿಸುವಲ್ಲಿ ಸಂಯವ ವಿದ್ದರೆ ನಾರದನೀತಿ, ಕೃಷ್ಣಮಾಹಾತ್ಮ್ಯಗಳ ವರ್ಣನೆಯಲ್ಲಿ ಬೇಸರುತರುವ ಬಿತ್ತರವಿ ದ್ಯೂತಪರ್ವ, ಅದರಲ್ಲಿಯೂ ದ್ರೌಪದೀಮಾನಭಂಗದ ಸಂದರ್ಭವು ಕುಮಾರವ್ಯಾಸ ಭಾರತದ ಉನ್ನತಶಿಖರಗಳಲ್ಲಿ ಒಂದು. ಮೂಲದಿಂದ ಸ್ಫೂರ್ತಿಹೊಂದಿಯೂ ಅದನ ಮೀರಿದ ಮೇಲ್ಮೆ ಅದರಲ್ಲಿದೆ. ಈ ಮೇಲ್ಮೆಗೆ ಮುಖ್ಯಕಾರಣ ಅಸತ್ಯ-ಅನ್ಯಾಯ ಗಳನ್ನು ಕಂಡು ಕೆರಳಿ ಸಿಡಿದೇಳುವ ಕುಮಾರವ್ಯಾಸನ ವೀರವ್ಯಕ್ತಿತ್ವ, ಅದ್ಭುತವಾ ಸಕಲಶಕ್ತಿಯುತವಾದ ಕವಿತ್ವ. ಸಂನಿವೇಶ, ಸಂವಾದಗಳು ಮೂಲಾನುಸಾ ಯಾದರೂ ಮೂಲಕ್ಕಿಂತ ಹೆಚ್ಚು ಪರಿಸ್ಫುಟ, ಭಾವತಪ್ತ, ಕಲ್ಪನಾರಮ್ಯವಾಗುತ್ತ ಆಯಾ ವ್ಯಕ್ತಿಗಳು ಒಂದೊಂದು ಮಾತಿನಲ್ಲಿ ಮೂರ್ತಿಗೊಂಡು ಇದಿರುನಿಲ್ಲುತ್ತ ಈ ಜೀವಂತಿಕೆ, ಕಲ್ಪಕತೆಗಳಿಂದ ಸಂನಿವೇಶವು ತನ್ನದೊಂದು ಸ್ವತಂತ್ರವಿಶ್ವವ ನಮ್ಮ ಮುಂದೆ ಪಸರಿಸುತ್ತದೆ. ತಾನು ಪುಷ್ಪವತಿಯೆಂದು ದ್ರೌಪದಿ ಹೇಳಿದ್ದ ದುಶ್ಶಾಸನನು 'ನೀ ಪುಷ್ಪವತಿಯಾಗಲ್ಲಿ ಫಲವತಿಯಾಗು ನಡೆ ಕುರುರಾಜಭವನದಲ್ (೧೫-೬೬) ಎಂದ ಮಾತು ಅಸಭ್ಯವಾದರೂ ಆ ಸಂದರ್ಭದಲ್ಲಿ ಆ ಪಾತ್ರಕ್ಕೆ ತಿ ಯೋಗ್ಯವಾಗುತ್ತದೆ. ಶೈಲಿಯ ಒರಟುತನ ಇಂಥಲ್ಲಿ ಸಾರ್ಥಕವಾಗುತ್ತದೆ. ಭೀವ ಅರ್ಜುನರು ದ್ರೌಪದಿಯ ದುಃಸ್ಥಿತಿಯನ್ನು ಕಂಡು 'ಮನದೊಳಗೆ ಕೌರವನ ಕರುಳ ತನಿರಕುತದಲ್ಲಿ ಕುದಿಸಿದರು' (೧೫-೭೬) ಎಂಬುದು ತನ್ನ ಉತ್ಕಟಚಿತ್ರದ ಮೂ ಅವರ ಸುಪ್ತಸಂತಾಪದ ಪರಮಾವಧಿಯನ್ನು ಎತ್ತಿತೋರುತ್ತದೆ. ದುಶ್ಶಾಸನ ದ್ರೌಪದಿಯ ಸೆರಗನ್ನು ಹಿಡಿಯಲು ಅವಳು ಕಂಬನಿಗರೆಯುತ್ತ ಪತಿಗಳ ಕಡೆ ನೋ ಆಮೇಲೆ ಭೀಷ್ಮ ಮುಂತಾಗಿ ಎಲ್ಲರನ್ನೂ ಕುರಿತು ಮೊರೆಯಿಟ್ಟಳು. ಕೊನೆಗೆ ಕೃಷ್ಣ ಮರೆಹೊಕ್ಕಳು (೧೫/೧೦೬-೧೧೨). ಮೂಲದಲ್ಲಿ ಆ ದುಷ್ಟನು ಸೀರೆಗೆ ಕೈಯಿ ದೊಡನೆ ದ್ರೌಪದಿ ಕೃಷ್ಣನನ್ನು ನೆನೆದಳು ಎಂದಿದೆ (ಆಕೃಷ್ಯಮಾಣೇ ವಸನೇ ದ್ರೌಪ ಕೃಷ್ಣಮುಸ್ಮರತ್—ದ್ಯೂತ. ೯೦-೪೨). ಈ ಮಾರ್ಪಾಡು ತುಂಬ ಸಹಜವೂ ಕರು ಪೋಷಕವೂ ಆಗಿದೆ. ಮೂಲದಲ್ಲಿ ಮೊಟಕಾದ ಸಾಂಪ್ರದಾಯಿಕವಾದ ಕೃಷ್ಣಸ್ತು ಇಲ್ಲಿ ಹೃದ್ಯವಾದ ಕರುಳಿನ ಕೂಗಾಗಿದೆ. ಈ ಮೊದಲು ಕುಮಾರವ್ಯಾಸನ ವೀ ವ್ಯಕ್ತಿತ್ವವು ಪ್ರಕಟಗೊಂಡಂತೆ ಇಲ್ಲಿ ಅವನ ಭಕ್ತಜೀವನವು ಅರಳಿದೆ. ತರುವಾ ದ್ರೌಪದಿಯನ್ನು ತೊತ್ತುಗಳ ಮನೆಗೆ ಅಟ್ಟಬೇಕೆಂದು ಕೌರವರು ಹಿಡಿದೆಳೆಯುವ ಆಕೆಯ ಹಲುಬನ್ನು ಕೇಳಿ ಭೀಮನು ಅತ್ಯಂತ ರೋಷದಿಂದ ಪ್ರತಿಜ್ಞೆಮಾ ಸಂದರ್ಭವು ರುದ್ರಬೀಭತ್ಸಗಳ ಯುತಿಯಿಂದ ಉತ್ಕಟತಮವಾಗಿದೆ. ವ್ಯಾಸಭಾರತ ಹೋಲಿಸಲಾಗಿ ಅಲ್ಲಿದ್ದ ಮೂಲಸಾಮಗ್ರಿಯನ್ನು ಬಳಸಿಯೂ ಮುಗಿಲೆತ್ತರ ಮುಟ್ಟುವಂತೆ ಕುಮಾರವ್ಯಾಸನು ಅದನ್ನು ಬೆಳೆಸಿದ ವೈಖರಿ ತಿಳಿಯುತ್ತದೆ. ಹಿ

ಮಾಡುವಾಗ ಒಂದೆರಡು ಕಡೆ ರಸಪೋಷಕವಾದ ನವೀನ ಅಂಶಗಳು ಬಂದಿವೆ. ಸಭೆಯಲ್ಲಿ ತನ್ನ ಭಂಗಬಡಿಸಿದವನ ಕರುಳದಂಡೆಯನ್ನು ಮುಡಿದು ಆಮೇಲೆ ತುರುಬುಕಟ್ಟುವೆನೆಂದು ಸಾರಿದ ದ್ರೌಪದಿಗೆ ಅದನ್ನು ನಡೆಸಿಕೊಡುವುದಾಗಿ ಭೀಮ ವ್ರತತೊಡುತ್ತಾನೆ (ಸಭಾ. ೧೬–೪೬). ವ್ಯಾಸಭಾರತದಲ್ಲಿ ಕಾಣದೊರೆಯದ ಈ ಭಾವವು ಪಂಪಭಾರತ(೧–೧೦, ೧೨)ದಲ್ಲಿ ದೊರೆಯುತ್ತದೆ. ಅದರಿಂದ ಕುಮಾರವ್ಯಾಸನು ಪ್ರೇರಣೆಹೊಂದಿರಬಹುದು. ಮುಂದೆ

‘ ತರುಣಿ ದುಶ್ಯಾಸನನ ನೊರೆನೆ- ।
ತ್ತರಲಿ ನಾದುವೆ ನಿನ್ನ ಮಂಡೆಯ ।
ಕರುಳ ಬಾಚುವೆನಿವನ ದಂತದ ಹಣಿಗೆಯಲಿ ಖಳನ ॥
ಕರುಳದಂಡೆಯ ಮುಡಿಸಿ ಶಾಕಿನಿ- ।
ಯರನು ಕರೆಯಿಸಿ ನಿನ್ನ ಕಯ್ಯಲಿ ।
ಧುರದೊಳಗೆ ಬಾಯಿನವ ಕೊಡಿಸುವೆನಬಲೆ ಕೇಳೆಂದ ॥’ (೧೬–೪೮)

ಎಂಬಲ್ಲಿಯ ಭಾವವು ವ್ಯಾಸಭಾರತದಲ್ಲಿಲ್ಲ. ಪಂಪಭಾರತದಲ್ಲಿಯೂ ಈ ಸಂದರ್ಭದಲ್ಲಿಲ್ಲ; ಮುಂದೆ ವೈರಿವಧೆಯನಂತರ ೧೨ನೆಯ ಆಶ್ವಾಸದಲ್ಲಿ ‘ ಪಲ್ಲಪಣಿಗೆಯಿಂ ಬಾರ್ಚಿ ’ ಎಂದು ಬಂದಿದೆ.

ಈ ರೀತಿಯಾಗಿ ಇನ್ನುಳಿದ ಪರ್ವಗಳಲ್ಲಿ ಹೇರಳವಾದ ದೃಷ್ಟಾಂತಗಳನ್ನು ಕೊಡಬಹುದು : ಅರಣ್ಯಪರ್ವದಲ್ಲಿ ಘೋಷಯಾತ್ರೆ, ವಿರಾಟದಲ್ಲಿ ಕೀಚಕಪ್ರಸಂಗ ಮತ್ತು ಉತ್ತರಗೋಗ್ರಹಣ, ಉದ್ಯೋಗದಲ್ಲಿ ಕೃಷ್ಣಸಂಧಾನ ಮತ್ತು ಕರ್ಣಬುದ್ಧಿಭೇದ ಮುಂತಾಗಿ. ಉದ್ಯೋಗಪರ್ವದಲ್ಲಿ ಕವಿ ಮಾಡಿಕೊಂಡಿರುವ ಕೆಲವು ಬದಲಾವಣೆಗಳನ್ನು ಗಮನಿಸುವುದು ಅವಶ್ಯ. ಮೂಲದಲ್ಲಿ ತಂದೆ–ಹಿರಿಯರ ಅಪ್ಪಣೆಯಂತೆ ದುರ್ಯೋಧನನು ತೋರಿಕೆಗಾದರೂ ಸಂಧಾನಕ್ಕೆ ಬರುತ್ತಿರುವ ಕೃಷ್ಣನ ಸ್ವಾಗತಕ್ಕೆ ದಾರಿಯಲ್ಲಿ ಸಭಾಮಂಡಪಗಳನ್ನು ಮಾಡಿಸುತ್ತಾನೆ, ಅವನ್ನು ಕಣ್ಣೆತ್ತಿ ನೋಡದೆ ಕೃಷ್ಣ ಸಾಗುತ್ತಾನೆ. ಅವನನ್ನು ಕಟ್ಟಿಹಾಕಬೇಕೆಂದು ಕೌರವನು ಹಂಚಿಕೆಹಾಕುತ್ತಾನೆ. ಕೃಷ್ಣನು ಧೃತರಾಷ್ಟ್ರಭವನಕ್ಕೆ ಹೋಗಿ ಅವನ ಪೂಜೆ ಸ್ವೀಕರಿಸಿ ವಿದುರನ ಮನೆಗೆ ಹೋಗುವನು. ಕುಮಾರವ್ಯಾಸನಲ್ಲಿ ಎಲ್ಲ ಸ್ವಾಗತದ ಸಿದ್ಧತೆ ಧೃತರಾಷ್ಟ್ರನ ಹೇಳಿಕೆಯಂತೆ ಆಗುತ್ತದೆ. ದುರ್ಯೋಧನನು ಅದರಲ್ಲಿ ಸೇರಿಕೊಳ್ಳದೆ ಕೃಷ್ಣನನ್ನು ಬಿಗಿದು ಕೆಡಹುವೆನೆನ್ನುವನು. ಕೃಷ್ಣನು ಬಂದ ಕೂಡಲೆ ಎಲ್ಲ ಮನೆಗಳನ್ನು ದಾಟಿ ‘ ವರಭಾಗವತವಿದುರನ ಮನೆಗೆ ನಡೆತರುತಿರ್ದನು ’ (೮–೪). ಇದರಲ್ಲಿ ದುರ್ಯೋಧನಪಾತ್ರಕ್ಕೆ ಪ್ರಕಟದುಷ್ಟತನದ ಸ್ವರೂಪಬಂದಿದೆ. ಕೃಷ್ಣನ ಭಕ್ತಪ್ರಿಯತೆ ಸುವ್ಯಕ್ತವಾಗಿದೆ. ಮುಂದೆ ವಿದುರನ ಮನೆಗೆ ಹೋಗಿ ಕರ್ಣ–ದುರ್ಯೋಧನರು ಕೃಷ್ಣನನ್ನು

ಸಭೆಗೆ ಆದರದಿಂದ ತರುವರೆಂದು ವ್ಯಾಸಭಾರತದಲ್ಲಿದ್ದರೆ ಇಲ್ಲಿ ದುರ್ಯೋಧನನು ಸಿಂಹಾಸನವನ್ನು ಬಿಟ್ಟು ಕೂಡ ಏಳುವುದಿಲ್ಲ. ಕೃಷ್ಣನು ಉಂಗುಟದ ತುದಿಯಿಂದ ಭೂಮಿಯನ್ನು ಒತ್ತಲು ಅವನ ಚರಣದಲ್ಲಿ ದುರ್ಯೋಧನನು ಬಂದು ಬೀಳುತ್ತಾನೆ. ಈ ಸಂನಿವೇಶವನ್ನು ಭಾಸನ 'ದೂತವಾಕ್ಯ' ನಾಟಕದಿಂದ ತೆಗೆದುಕೊಂಡಿರಬಹು-ದೆಂಬ ಸೂಚನೆಮಾಡಲಾಗಿದೆ. ಮಹಾಭಾರತವು ತಾಳಿದ ಭಾಗವತಸ್ವರೂಪವು ಲೋಕಪ್ರಿಯವಾಗಿ ಶ್ರುತಿಪರಂಪರೆಯಲ್ಲಿದ್ದು ಕುಮಾರವ್ಯಾಸನಿಗೆ ಪ್ರೇರಣೆಕೊಟ್ಟಿರುವ ಸಂಭವವೂ ಇದೆ. ಮುಖ್ಯವಾಗಿ ಕುಮಾರವ್ಯಾಸನು ಈ ಎಲ್ಲ ಬದಲಾವಣೆಗಳಿಂದ ಮತ್ತು ತನ್ನ ವಿಶಿಷ್ಟನಿರೂಪಣೆಯಿಂದ ವ್ಯಾಸಭಾರತಕ್ಕಿಂತಲೂ ಮುಂದೆ ಹೋಗಿ ತನ್ನ ಭಾಗವತಪ್ರಜ್ಞೆಯ ಮತ್ತು ಕಲಾಪ್ರಜ್ಞೆಯ ಸಾರ್ಥಕ್ಯವನ್ನು ಸಾಧಿಸಿದ್ದಾನೆ. ಈ ಸಂದರ್ಭದಲ್ಲಿ ಕೃಷ್ಣ–ವಿದುರ–ದುರ್ಯೋಧನ ಇವರ ಚಿತ್ರಣದಲ್ಲಿ ಪರಮಾತ್ಮ-ಭಕ್ತ–ಅಹಂಕಾರಿಜೀವ ಇವರ ಚಿತ್ರಣವುಳ್ಳ ಸಾರ್ವತ್ರಿಕವಾದ ಸಾಂಕೇತಿಕಧ್ವನಿ ಹೊರಪಡುವಂತೆ ರಸಾನುಭವವುಂಟಾಗುತ್ತದೆ. ಇದೇ ಪರ್ವದಲ್ಲಿ ಮೂಲಭಾರತ-ದಲ್ಲಿಲ್ಲದ ಆದರೆ ಕುಮಾರವ್ಯಾಸನಲ್ಲಿರುವ ಒಂದೆರಡು ಸಂನಿವೇಶಗಳು ಪಂಪಭಾರತ-ದಿಂದ ಎತ್ತಿದುವಾಗಿರಬೇಕೆಂದು ವಿಮರ್ಶಕರು ಹೇಳಿದ್ದಾರೆ. ಅವೆಂದರೆ ಸಂಧಿಯ ಮಾತುಕತೆಯಲ್ಲಿ ತೊತ್ತಿನ ಮಗ ವಿದುರನೆಂದು ದುರ್ಯೋಧನ ಮಾಡಿದ ಹೀಯಾಳಿಕೆಗೆ ವಿದುರ ತನ್ನ ಬಿಲ್ಲನ್ನು ಮುರಿದುದು, ಕುಂತಿಯು ಕರ್ಣನನ್ನು ಕಾಣಲು ಬಂದಾಗ ಗಂಗಾದೇವಿ ಬಂದು ತನ್ನ ಕೈಯೆಡೆಯಾದ ಕರ್ಣನನ್ನು ಅವಳಿಗೆ ಒಪ್ಪಿಸಿದುದು. ಪಂಪ–ಕುಮಾರವ್ಯಾಸರ ನುಡಿಗಳು ಸಹ ಈ ಸಂದರ್ಭದಲ್ಲಿ ಸರಿಹೋಲುತ್ತವೆ. ಇದರಿಂದ ಕುಮಾರವ್ಯಾಸನು ಹಳಗನ್ನಡಕಾವ್ಯದ, ವಿಶೇಷವಾಗಿ ಪಂಪಭಾರತದ ವ್ಯಾಸಂಗಮಾಡಿದ್ದನೆಂಬುದು ಸೂಚಿತವಾಗುತ್ತದೆ. ಈ ಹೋಲಿಕೆಗಳು ಆಕಸ್ಮಿಕ-ವೆಂದೂ ತೀರ ಸ್ವಲ್ಪವೆಂದೂ ಸಮಾನ ಆಕರದಿಂದ ತೆಗೆದುಕೊಂಡವಾಗಿರಬಹುದೆಂದೂ ಹೇಳಬಹುದೇ ? ಇನ್ನಿತರ ಪರ್ವಗಳಲ್ಲಿಯ ಹೋಲಿಕೆಗಳನ್ನು ಲಕ್ಷಿಸಿದರೆ ಅವು ಆಕಸ್ಮಿಕ ಇಲ್ಲವೆ ತೀರ ಸ್ವಲ್ಪವೆಂದು ತೋರಲಾರವು. 'ಕರ್ಣಪರ್ವ'ದಲ್ಲಿ ಇದಕ್ಕೆ ಸ್ಪಷ್ಟ-ನಿದರ್ಶನಗಳು ದೊರೆಯುತ್ತವೆ.[1]

ಕುಮಾರವ್ಯಾಸನ ಸಂವಿಧಾನದಲ್ಲಿ ಏಕಸೂತ್ರತೆ ಎದ್ದು ಕಾಣುತ್ತದೆ. ಅದಕ್ಕೆ ಕೃಷ್ಣನ ಪ್ರಾಮುಖ್ಯ ಕಾರಣ. 'ಕೃಷ್ಣನಿಂದ ಭಾರತಕ್ಕೆ ಆದಿಮಧ್ಯಮುಕ್ತಾಯ.... ಕನ್ನಡಭಾರತದ ಎಲ್ಲ ಮಜಲುಗಳಲ್ಲಿಯೂ ಕೃಷ್ಣನ ಕೈವಾಡವೇ ಕೈವಾಡ, ವಿರಾಟ-ಪರ್ವದ ವಿನಾ.'[2] ಮಹಾಭಾರತದ ಪ್ರಧಾನಕಥೆಯನ್ನು ನಿರುಕಿಸಿದರೆ ಅಣ್ಣತಮ್ಮಂದಿರ

---

1 ಪಾನ್ಯಂ ಸುಂದರಶಾಸ್ತ್ರಿ : ಕನ್ನಡಭಾರತಕ್ಕೂ ಸಂಸ್ಕೃತಭಾರತಕ್ಕೂ ಇರುವ ಸಂಬಂಧ (ಕುಮಾರವ್ಯಾಸಪ್ರಶಸ್ತಿ, ಪು. ೧೨೪–೧೩೯)

2 ಎಸ್. ವಿ. ರಂಗಣ್ಣ : ಕುಮಾರವ್ಯಾಸ, ಪು. ೩೬, ೩೮

ಅಸೂಯೆಯಲ್ಲಿ ಹೊತ್ತಿಕೊಂಡು ದ್ವೇಷದಲ್ಲಿ ಬೆಳೆದು ಯಾದವೀಕಲಹದ ಬೇಗೆಯಾಗಿ ಹಬ್ಬಿದ ಮಾನವ ದುರಂತಚಿತ್ರವು ಕಣ್ಣೆದಿರು ಕಟ್ಟುತ್ತದೆ. ಅದರಲ್ಲಿ ಕೃಷ್ಣನಿಗೆ ಪ್ರಾಧಾನ್ಯ ಬರಲೇಬೇಕೆಂದಿಲ್ಲ. ಆದರೆ ಭಾಗವತದೃಷ್ಟಿಯ ನಿರೂಪಣೆಯಿಂದ ಕುಮಾರ-ವ್ಯಾಸಭಾರತವು ಕೃಷ್ಣಮೂಲ, ಕೃಷ್ಣಮಯವಾಗಿದೆ ಎಂಬುದು ನಿಜ. ಮಾನವ-ದೃಷ್ಟಿಯಿಂದ ನೋಡಿದಾಗ ಸಂವಿಧಾನಕ್ಕೆ ಬಂದಿರುವ ಈ ಬಣ್ಣವು ಅವಾಸ್ತವ ಆರೋಪವೆಂದು ತೋರಬಹುದು. ಆದರೆ ಜಟಿಲವಾದ ಜೀವನವು ಮಾನವ–ಅತಿಮಾನವಶಕ್ತಿಗಳ ಸಂಮಿಶ್ರಲೀಲೆಯೆಂಬ ಸಮಗ್ರಸತ್ಯದ ದರ್ಶನವನ್ನು ಕುಮಾರ-ವ್ಯಾಸಭಾರತವು ಪ್ರತೀಕಗೊಳಿಸುತ್ತದೆ. ಇದನ್ನರಿತಾಗಲೆ ಅದರ ರಸಾನುಭವವು ಸಮರ್ಪಕವಾಗುತ್ತದೆ. ಕೃಷ್ಣನ ತರುವಾಯ ಕೃಷ್ಣದ್ವೈಪಾಯನರಾದ ವೇದವ್ಯಾಸರು ಮಹಾಭಾರತಕಥಾನಕದಲ್ಲಿ ಮೊದಲಿಂದಲೂ ಪ್ರಮುಖಪಾತ್ರವನ್ನು ವಹಿಸುತ್ತ ಬಂದಿದ್ದಾರೆ ಎಂಬುದನ್ನು ನೆನೆಯಬೇಕು. ಪರಮಾತ್ಮಪ್ರಶಂಸೆ, ನೀತಿಬೋಧೆ ಇವುಗಳ ಅತಿರೇಕ ಕನ್ನಡಭಾರತದ ಕಥಾವಸ್ತುವಿಗೆ ಆಗಾಗ ಕೊರತೆಯುಂಟುಮಾಡಿದೆ ಎಂಬುದು ನಿಜ. ಇದಕ್ಕೆ ಕವಿಯ ಭಕ್ತಿನಿರ್ಭರತೆ, ಬೋಧನೆಯ ಹವ್ಯಾಸ ಕಾರಣ-ವಾದಂತೆ ಮೂಲಭಾರತದ ಭಾಗವತ ನೈತಿಕ ಭಾಗಗಳೂ ಕಾರಣವಾಗಿವೆ. ಕೃತಿ-ಬಂಧವನ್ನು ಸಮಗ್ರವಾಗಿ ನೋಡಿದರೆ ವ್ಯಾಸಭಾರತದ ನಿಷ್ಠಾಯುತವಾದ ಅನುಸರಣದ ಮೂಲಕ ಅದರ ಗುಣದೋಷಗಳು ಇಲ್ಲಿಯೂ ಹಣಿಕಿವೆ. ರಸೋತ್ಕಟವಾದ ಕೆಲವು ಸಂದರ್ಭಗಳಲ್ಲಿ ಮಾತ್ರ ನಾಟ್ಯಪೂರ್ಣಸಂನಿವೇಶರಚನೆ, ಪಾತ್ರಪ್ರಜ್ಞೆ, ಸಮುಚಿತ-ಶೈಲಿ–ವರ್ಣನೆಗಳಿಂದ ಗತಕಾಲದ ಚಿತ್ರಗಳು ವರ್ತಮಾನಕಾಲದವಾಗಿ ಮನವರಿಕೆ-ಯನ್ನು ಉಂಟುಮಾಡುತ್ತವೆ, ಬಂಧವು ಉತ್ತಮಿಕೆಯನ್ನು ತೋರುತ್ತದೆ. ಆದರೆ ಒಟ್ಟಿನ ಹೆಣಿಕೆಯಲ್ಲಿ ಸಡಿಲುಗಳೂ ಬಿರುಕುಗಳೂ ತೋರದಿಲ್ಲ. ವ್ಯಾಸಭಾರತದಲ್ಲಿಯ ಕಥನದೋಷಗಳನ್ನು ತಿದ್ದಿಕೊಂಡು ನವೀನಸೃಷ್ಟಿಯನ್ನು ರಚಿಸುವ ದೃಷ್ಟಿ ಕುಮಾರ-ವ್ಯಾಸನಲ್ಲಿಲ್ಲ. ಅಂತೇ ಅನುದ್ಯೂತಪರ್ವದಲ್ಲಿ, ಒಮ್ಮೆ ದ್ಯೂತವಾಡಿ ಸೋತು ವಂಚನೆಗೆ ಗುರಿಯಾದ ಮತ್ತು ಅವಮಾನಹೊಂದಿದ ಯುಧಿಷ್ಠಿರನು ಮತ್ತೆ ಜೂಜಾಡಲು ಬಂದು ಅತಿದುರ್ಬಲವಾದ ಸಾತ್ವಿಕತೆಯನ್ನು ಪ್ರಕಟಗೊಳಿಸಿದ್ದಾನೆ. ಪಾತ್ರವಿಸಂಗತಿಯ ಮೂಲಕ ಕಥಾನಕದಲ್ಲಿಯೂ ಹೀಗೆ ವಿಸಂಗತಿಗಳುಂಟಾಗಿವೆ. ಆದರೂ ಸಹ ಮಹಾರಣ್ಯದಂತೆ ಆಖ್ಯಾನ – ಉಪಾಖ್ಯಾನ – ನೀತಿ – ತತ್ವಗಳಿಂದ ನಿಬಿಡವಾದ ಮಹಾಭಾರತವನ್ನು ಸಂಗ್ರಹಗೊಳಿಸುವಲ್ಲಿ ರಸದ ಮೇಲೆ ಮತ್ತು ವ್ಯಕ್ತಿಗಳ ಮೇಲೆ ಮುಖ್ಯ ಗಮನವಿಟ್ಟು 'ಪ್ರತಿಪರ್ವರಸೋದಯ'ವಾದ ಕನ್ನಡ-ಭಾರತವನ್ನು ಕುಮಾರವ್ಯಾಸನು ಒದಗಿಸಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಪಂಪನಿಗೂ ಅವನಿಗೂ ಹೋಲಿಸಿದರೆ ಪ್ರತಿಭೆಯ ಉನ್ನತಿ ಸಮಾನವಾದರೂ ಇಬ್ಬರ ದೃಷ್ಟಿ, ತಂತ್ರ, ಶೈಲಿ ಬೇರೆಯಾದುವು. ಪಂಪನ ದೃಷ್ಟಿಯಲ್ಲಿ ಭಾರತವು ಬಹುಶಃ ಒಂದು ಮಾನವೀಯ ಸಂಘರ್ಷದ ಚಿತ್ರವಾಗಿದೆ. ಕುಮಾರವ್ಯಾಸನು ಮಾನವೀ-

ಯತೆಯನ್ನು ಅಲ್ಲಗಳೆಯದೆ ಅದಕ್ಕೆ ಪ್ರೇರಕವಾದ ದೈವೀಶಕ್ತಿಯ ಲೀಲೆಯನ್ನು ಬಣ್ಣಿಸಿದ್ದಾನೆ. ಅವರವರ ಮತಶ್ರದ್ಧೆಯೂ ಈ ಭೇದಕ್ಕೆ ಕಾರಣವಾಯಿತು. ಪಂಪನ ತಂತ್ರ ಮಾರ್ಗಕಾವ್ಯದ್ದು, ಕುಮಾರವ್ಯಾಸನದು ದೇಸಿಯದು. ತಮ್ಮ ತಂತ್ರಕ್ಕೆ ಅನುಸರಿಸಿ ಇಬ್ಬರೂ ಅಪೂರ್ವಸಿದ್ಧಿಯನ್ನು ಪಡೆದರು. ಶೈಲಿಗೂ ಈ ಮಾತು ಸರಿಹೋಗುತ್ತದೆ. ಇಬ್ಬರೂ ಮಹಾಭಾರತವನ್ನು ಸಂಗ್ರಹಗೊಳಿಸಿರುವರಾದರೂ 'ಕಥೆಯನ್ನು ಹಿಗ್ಗಿಸಿ ಹಿಗ್ಗಿಸಿ ಹೇಳುವುದು ನಾರಣಪ್ಪನ ಹುಟ್ಟುಗುಣ; ದೊಡ್ಡ ಕಥೆಯನ್ನು ಸಂಕ್ಷೇಪಿಸುವುದು ಪಂಪನ ಹುಟ್ಟುಗುಣ'[1] ಎಂಬುದು ದಿಟ.

ಕುಮಾರವ್ಯಾಸಭಾರತವು ಯಾವ ಪ್ರಕಾರಕ್ಕೆ ಸೇರುವ ಗ್ರಂಥವೆಂದು ಕೇಳಲಾಗಿದೆ. ಅದು ಕಾವ್ಯವೇ ಪುರಾಣವೇ? ಮೂಲಭಾರತವು ಇತಿಹಾಸಕಾವ್ಯವಾಗಿದ್ದು ಪುರಾಣವಲ್ಲ, ಪುರಾಣಲಕ್ಷಣಗಳು ಅಲ್ಲಲ್ಲಿ ಆನುಷಂಗಿಕವಾಗಿ ಬಂದಿವೆ ಮಾತ್ರ; ಎಂದಮೇಲೆ ಕನ್ನಡಭಾರತವು ಅದೇ ಲಕ್ಷಣಕ್ಕೆ ಒಳಪಡುತ್ತದೆ, ಪಂಪಭಾರತದಂತೆ ಅದು ಶ್ರೇಷ್ಠಕಾವ್ಯ ಎಂದು ಅಭಿಪ್ರಾಯ ವ್ಯಕ್ತವಾಗಿದೆ.[2] ಈ ಅಭಿಪ್ರಾಯವು ವಾದಗ್ರಸ್ತವಾಗಿರುವ ಅಗತ್ಯವಿಲ್ಲ. ಆದರೆ ಮುಖ್ಯತಃ ಕಾವ್ಯವಾದ ಕುಮಾರವ್ಯಾಸಭಾರತದಲ್ಲಿ ಇತಿಹಾಸ, ಆಖ್ಯಾಯಿಕೆ, ನೀತಿತತ್ವಗಳು ಮೂಲಭಾರತದಂತೆ ಸೇರಿಕೊಂಡಿವೆಯೆಂದೂ ಇದರಿಂದ ಕಾವ್ಯಕ್ಕಿಂತ ಇದಕ್ಕೆ ಕೆಲವು ಸಲ ಮಹತ್ವಬಂದಿದೆಯೆಂಬುದನ್ನೂ ಅರಿಯಬೇಕು. ಸಾಂಪ್ರದಾಯಿಕಪುರಾಣದ ಲಕ್ಷಣಗಳೇನೆ ಇರಲಿ, ಕಥನಮೂಲಕವಾಗಿ ಭಾಗವತದರ್ಶನವನ್ನು ಜನಸುಲಭರೀತಿಯಲ್ಲಿ ನಿರೂಪಿಸಿದ ಕಾರಣ ಕುಮಾರವ್ಯಾಸಭಾರತವು ಪುರಾಣಕಾವ್ಯವಾಗಿದೆ ಎಂದು ಹೇಳಿದರೆ ತಪ್ಪಲ್ಲ.

ಕಥಾರಚನೆಗಿಂತಲೂ ಮಿಗಿಲಾಗಿ ಪಾತ್ರನಿರೂಪಣೆಯಲ್ಲಿ ಕುಮಾರವ್ಯಾಸನು ಘನತೆಯನ್ನು ಮೆರೆದಿದ್ದಾನೆ. ಅವೇ ಮಹಾಭಾರತದ ಪಾತ್ರಗಳು ಅವನ ಕೃತಿರಂಗದಲ್ಲಿ ಕಾಲಿಟ್ಟು ಜೀವಂತವ್ಯಕ್ತಿಗಳಾಗಿ ಸಾಮಾನ್ಯರಿಗೂ ಗುರುತಿನವರಾಗಿ ಬಿಡುತ್ತಾರೆ. ಮೂಲದಿಂದ ಅವರೇನು ಬೇರೆಯವರಲ್ಲ. ಆದರೆ ಮೂಲದಲ್ಲಿ ಎದ್ದುಕಾಣದ ಅವರ ವ್ಯಕ್ತಿತ್ವವು ಇಲ್ಲಿ 'ಹುಬೇಹುಬಾಗಿ' ರೂಪತಾಳುತ್ತದೆ. ಈ ಕೃತಿರಂಗಕ್ಕೆ ಅಂದರೆ ಭಾರತನಾಟಕಕ್ಕೆ ಕೃಷ್ಣನೇ ಸೂತ್ರಧಾರನೆಂದು 'ಕೃಷ್ಣಕಥೆ'ಯೆಂಬ ಕವಿ ಕೊಟ್ಟ ಹೆಸರಿಂದಲೆ ತಿಳಿಯುತ್ತದೆ. ವ್ಯಾಸ, ಪಂಪ, ಕುಮಾರವ್ಯಾಸರನ್ನು ಹೋಲಿಸಿ ವಿಮರ್ಶಕರು ಕುಮಾರವ್ಯಾಸಭಾರತದಲ್ಲಿ ಕೃಷ್ಣನಿಗೆ ದೊರೆತ ಅಪೂರ್ವಸ್ಥಾನವನ್ನು ಗುರುತಿಸಿದ್ದಾರೆ. 'ಆತನೇ ಮಹಾಭಾರತಕ್ಕೆ ಸೂತ್ರಧಾರ; **ಕಥೆಯ ಒಬ್ಬನೇ ನಾಯಕ;** ಎಲ್ಲ ಚೈತನ್ಯಕ್ಕೂ ಮೂಲ, ಎಲ್ಲರ ಪ್ರವೃತ್ತಿಗಳಿಗೂ ಕಾರಣ; ಎಲ್ಲ

---

1 ಎಲ್. ಗುಂಡಪ್ಪ: ಪಂಪ–ನಾರಣಪ್ಪ (ಕುಮಾರವ್ಯಾಸಪ್ರಶಸ್ತಿ, ಪು. ೧೫೧)

2 ಉಗ್ರಾಣ ಮಂಗೇಶರಾವ್: ಕನ್ನಡಭಾರತವು ಮುಖ್ಯವಾಗಿ ಕಾವ್ಯವೇ ಅಥವಾ ಪುರಾಣವೇ (ಕುಮಾರವ್ಯಾಸಪ್ರಶಸ್ತಿ, ಪು. ೧೦೭–೧೨೩)

ಪ್ರಯತ್ನಗಳ ಗುರಿ; ಎಲ್ಲ ಆಸೆಗಳ ನೆಲೆ. **ಅವನಿಲ್ಲದೆ ಭಾರತವಿಲ್ಲ.**'[1] ಯಾವುದೇ ಕಾವ್ಯದ ನಾಯಕನಾಗುವವನ ಲಕ್ಷಣಗಳೇನು ಎಂಬ ಬಗೆಗೆ ಸಾಂಪ್ರದಾಯಿಕ ವಿಮರ್ಶೆಯ ವಿಚಾರಗಳನ್ನು ಬದಿಗಿಟ್ಟರೂ, ಕೃಷ್ಣನು ಈ ಕಾವ್ಯದ ನಾಯಕನಾಗಿರ-ಬೇಕಾದರೆ ಅವನಲ್ಲಿರುವ ಅಂಥ ಲಕ್ಷಣವೇನು, ಅದು ಇತರ ಕಾವ್ಯಗಳಿಗೆ ಅನ್ವಯಿಸು-ತ್ತದೆಯೆ ಎಂಬುದನ್ನು ತಿಳಿಯುವುದು ಅವಶ್ಯ. ಮೇಲಿನ ಅವತರಣಿಕೆಯಲ್ಲಿ ಸೂಚಿತ-ವಾದಂತೆ ಕೃಷ್ಣನೇ ಭಾರತಕ್ಕೆ ಪ್ರೇರಕ–ಚಾಲಕಶಕ್ತಿಯಾಗಿದ್ದ ಕಾರಣ ಅವನೊಬ್ಬನೇ ನಾಯಕನೆಂದಾಗುತ್ತದೆ. ಈ ಲಕ್ಷಣವನ್ನು ಇತರ ಸಂಸ್ಕೃತ–ಕನ್ನಡ ಕಾವ್ಯಗಳಿಗೆ ಹಾಗೂ ಇಂಗ್ಲಿಷ್ ವಾಙ್ಮಯಕ್ಕೆ ವಿಶೇಷವಾಗಿ ಶೆಕ್ಸಪಿಯರನ ನಾಟಕಗಳಿಗೆ ಅನ್ವಯ-ಗೊಳಿಸಿದರೆ ಕೃಷ್ಣನಂಥ ಪಾತ್ರವಿಲ್ಲದಲ್ಲಿ, ಭಾಗವತದೃಷ್ಟಿ ಇಲ್ಲದಲ್ಲಿ ಇದು ಸರಿಹೋಗ-ಲಾರದು. ಬಹುಶಃ ಎಲ್ಲ ಕೃತಿಗಳಲ್ಲಿ ಮಾನವವ್ಯಕ್ತಿಗಳು ನಾಯಕರಾಗಿರುತ್ತಾರೆ. ಅವರಿಗೆ ಬೆಂಬಲವಾದ ಇಲ್ಲವೆ ವಿರೋಧವಾದ ದೈವವು ಪ್ರಭಾವಿಯಾದರೂ ಹಿನ್ನೆಲೆ-ಯಲ್ಲಿರುತ್ತದೆ. ಕನ್ನಡಭಾರತದಲ್ಲಿ ದೈವವು ಮುನ್ನೆಲೆಗೆ ಬಂದು ಮನುಷ್ಯಾವತಾರ ತಾಳಿದೆ, ಮಾನವವ್ಯಕ್ತಿಗಳು ಸ್ವಭಾವಕ್ಕನುಸರಿಸಿ ನಡೆಯುತ್ತಿದ್ದರೂ ಅದರ ಅಂತಿಮ-ನಿಯಂತ್ರಣಕ್ಕೆ ಒಳಪಟ್ಟಂತೆ ಕಾಣುತ್ತಾರೆ. ಆದ್ದರಿಂದ ಕೃಷ್ಣನ ನಾಯಕತ್ವವು ಇತರ ಕಾವ್ಯಗಳ ಲಕ್ಷಣಕ್ಕೆ ಒಳಪಡದೆ ವಿಲಕ್ಷಣವಾಗಿದೆ. ವಾಡಿಕೆಯ ಅರ್ಥದಲ್ಲಿ ಅವನನ್ನು ಕಾವ್ಯನಾಯಕನೆನ್ನದೆ ಕಾವ್ಯಚಾಲಕನಾದ ದಿವ್ಯಮಾನುಷ ಅಥವಾ ಮನುಷ್ಯರೂಪದಲ್ಲಿಯ ದೇವನೆಂದು ಕರೆಯುವುದು ಹೆಚ್ಚು ಯುಕ್ತ. ಕಥಾನಕ-ದೃಷ್ಟಿಯಿಂದ ಧರ್ಮರಾಜನನ್ನು ಕಾವ್ಯನಾಯಕನೆಂದು ಪರಿಗ್ರಹಿಸಬಹುದು.

ಕೃಷ್ಣಪಾತ್ರದ ವಿವರಣೆ ಕೆಲವರಿಂದ ಸಾಕಷ್ಟು ಆಗಿದೆ. ಆದರೆ ಅವನಲ್ಲಿ ತೋರುವ ದ್ವಿವಿಧವ್ಯಕ್ತಿತ್ವವನ್ನು ಕುರಿತು ಅನೇಕರಿಗೆ ಸಮಾಧಾನವಿಲ್ಲ. ಪಂಪ–ರನ್ನರಂಥ ಕೆಲವು ಕವಿಗಳು ಅವನ ವೈರಿಗಳ ಮುಖಾಂತರ ಅವನ ನಿಂದೆಯನ್ನು ಮಾಡಿಸಿದ್ದಾರೆ. 'ಕೃಷ್ಣಕಾರಸ್ಥಾನ' ಎಂಬ ರೂಢವಾದ ಪದವು ಅವನು ಕುಟಿಲ-ಕಾರಸ್ಥಾನಿ ಎಂಬುದನ್ನು ಸೂಚಿಸುತ್ತದೆ. ಒಮ್ಮೆ ಮುತ್ಸದ್ದಿ–ಕಾರಸ್ಥಾನಿ ಎಂದು ತೋರಿದರೆ ಇನ್ನೊಮ್ಮೆ ಕರುಣಾಳು, ಆಪದ್ಬಂಧು, ಧರ್ಮರಕ್ಷಕನೆಂದು ಅವನು ತೋರುತ್ತಾನೆ. ಈ ವಿಸಂಗತಿಯನ್ನು ಕುಮಾರವ್ಯಾಸನಲ್ಲಿಯೂ ಕಾಣುತ್ತೇವೆ. ಇದನ್ನು ಅರ್ಥವಿಸುವಾಗ 'ದುಷ್ಟಶಿಕ್ಷಣಕ್ಕೂ ಭಕ್ತೋದ್ಧರಣಕ್ಕೂ ಎಲ್ಲ ಮಾರ್ಗಗಳೂ ಸರಿಯೆ ಎಂದು ಆತನು ಸಮಯವನ್ನು ಸಾಧಿಸುವನು' ಎನ್ನುವುದು ಮುಗಿಯುತ್ತಲೆ 'ಅವನ ಉದ್ದೇಶವನ್ನು ಅಳೆಯುವುದಾಗಲಿ ತೂಗುವುದಾಗಲಿ ನಮಗೆ ಹೇಗೆ ಸಂದೀತು!'[2] ಎಂದು ವಿಮರ್ಶಕರು ಕೈಚೆಲ್ಲುತ್ತಾರೆ. ಅಂತೂ ಸ್ಥೂಲವಾದ ಇಲ್ಲವೆ

---

1 ವಿ. ಸೀ. : ಭಾರತಗಳ ಶ್ರೀಕೃಷ್ಣ (ಕುಮಾರವ್ಯಾಸಪ್ರಶಸ್ತಿ, ಪು. ೧೮೩)

2 ವಿ. ಸೀ. : ಭಾರತಗಳ ಶ್ರೀಕೃಷ್ಣ (ಕುಮಾರವ್ಯಾಸಪ್ರಶಸ್ತಿ, ಪು. ೧೬೫)

ಶುಷ್ಕತರ್ಕದಿಂದ ಪರಿಮಿತವಾದ ಮನಸ್ಸಿಗೆ ಕೃಷ್ಣಪಾತ್ರ ವಿರೋಧಗಳ ಕಗ್ಗಂಟು; ಸೂಕ್ಷ್ಮವಾದ ತಿಳಿವಳಿಕೆಯುಳ್ಳ ಇಲ್ಲವೆ ಭಕ್ತಿಪ್ರವಣವಾದ ಚಿತ್ತಕ್ಕೆ ಅದು ಅರ್ಥವಾದರೂ ಆಗದ ಒಗಟು. ಒಗಟಾಗಿ ಉಳಿದರೂ ಸರಿ, ಎರಡನೆಯ ಮನಃಪ್ರಕೃತಿಗೇ ಕುಮಾರವ್ಯಾಸನ ಕೃಷ್ಣನ ಹತ್ತಿರಕ್ಕೆ ಬರುವ ಅರ್ಹತೆಯಿದೆ. ಸಾಮಾನ್ಯವಾಗಿ ಅವನು ದಯಾನಿಧಿಯಾದರೂ ಅಧರ್ಮವನ್ನು ಇದಿರಿಸುವ ಧರ್ಮಮೂರ್ತಿಯಾಗಿ ನಿಷ್ಠುರನಾಗುತ್ತಾನೆ, ಚತುರಮುತ್ಸದ್ದಿಯಾಗುತ್ತಾನೆ. ಅಧರ್ಮವನ್ನು ಗೆದ್ದು ಧರ್ಮವು ನೆಲೆಗೊಳ್ಳಬೇಕಾದರೆ ಧರ್ಮರಾಜನ ದುರ್ಬಲಸಾತ್ವಿಕತೆಯಿಂದಲ್ಲ, ಕೃಷ್ಣನ ಸಮರ್ಥವಾದ ಸತ್ವನಿಷ್ಠವಾದ ರಾಜಸಧರ್ಮದಿಂದ ಎಂದು ಮಹಾಭಾರತವು ಸಾರಿದ್ದನ್ನು ಕುಮಾರವ್ಯಾಸನು ಎತ್ತಿತೋರಿದ್ದಾನೆ. ಹೀಗೆ ಮಾಡುವಾಗ ಅವನಿಂದ ಅಲ್ಲಲ್ಲಿ ಅತಿರೇಕಗಳಾಗಿರಬಹುದು. ಆದರೆ ಅದರಿಂದ ಕೃಷ್ಣನ ಸಮಗ್ರಪಾತ್ರದರ್ಶನದಲ್ಲಿ ಲೋಪವಿರುವುದೆಂದು ತಿಳಿಯಲಾಗದು.

ಇತರ ಪಾತ್ರಗಳಲ್ಲಿ ಭೀಮ, ದ್ರೌಪದಿ ಇವರು ಕುಮಾರವ್ಯಾಸನ ವೀರಪ್ರತಿಭೆಯ ಗಂಭೀರ ಅಂಗದ ಮತ್ತು ಉತ್ತರಕುಮಾರನು ಹಾಸ್ಯಪರ ಅಂಗದ ಶ್ರೇಷ್ಠನಿರ್ಮಿತಿಗಳಾಗಿದ್ದಾರೆ, ಎಲ್ಲರ ಕೊಂಡಾಟಕ್ಕೆ ಪಾತ್ರರಾಗಿದ್ದಾರೆ. 'ನಾರಣಪ್ಪ ಮಹಾಕವಿ ಎನ್ನುವುದಕ್ಕೆ ಅವನ ಭೀಮಪಾತ್ರವೊಂದು ಸಾಕ್ಷಿ'[1] ಎಂದೊಬ್ಬರು ಹೇಳಿದರೆ, 'ದ್ರೌಪದಿಯು ಸದ್ಗುಣಭರಿತಳಾಗಿ ಸರ್ವಾದರಣೀಯಳೆನಿಸಿರುವ ಅದ್ಭುತವ್ಯಕ್ತಿ. ಅವಳನ್ನು ಹೀಗೆ ವಾಚಕರೆದುರಿಗೆ ನಿಲ್ಲಿಸಿರುವ ಕುಮಾರವ್ಯಾಸನು ಮಹಾಕವಿಯೆನ್ನಲು ಲೇಶವೂ ಸಂಶಯವಿಲ್ಲ'[2] ಎಂದು ಇನ್ನೊಬ್ಬರು, 'ಕುಮಾರವ್ಯಾಸನ ಉತ್ತರನು ಕನ್ನಡಸಾಹಿತ್ಯದಲ್ಲಿ ಅದ್ವಿತೀಯನಾಗಿದ್ದಾನೆ; ಉತ್ತರನು ಅಪೂರ್ವ'[3] ಎಂದು ಇನ್ನೂ ಒಬ್ಬರು ಹೇಳಿದ್ದಾರೆ. ಭೀಮನು ವೀರದ ಪುರುಷರೂಪ, ದ್ರೌಪದಿ ಅದರ ಸ್ತ್ರೀರೂಪ. ರೌದ್ರ–ಬೀಭತ್ಸ–ಅದ್ಭುತಗಳು ಅವರ ಪ್ರಕೃತಿಗೆ ಹತ್ತಿರವಾಗಿವೆ. ಉತ್ತರಕುಮಾರನು 'ವಾಚಿವೀರ್ಯ'ದ ಪ್ರತೀಕ. ಹೀಗೆ ಇವರು ಒಂದು ಗುಣದ ಇಲ್ಲವೆ ರಸದ ಸಾಕಾರಮೂರ್ತಿಯಂತಿದ್ದರೂ ಇವರನ್ನು ಚಿತ್ರಿಸುವಲ್ಲಿ ಸಜೀವಮನುಷ್ಯವ್ಯಕ್ತಿಗಳಂತೆ ಇವರ ಓರೆಕೋರೆಗಳನ್ನೂ ಗುಣಾವಗುಣಗಳನ್ನೂ ಸೂಕ್ಷ್ಮವಾದ ಔಚಿತ್ಯಪ್ರಜ್ಞೆಯಿಂದ ಕವಿ ನಿರೂಪಿಸಿದ್ದಾನೆ, ತನ್ನ ಪ್ರತಿಭೆಯ ಸಾರವನ್ನು ಈ ಪಾತ್ರನಿರ್ಮಾಣದಲ್ಲಿ ಎರಕಹೊಯ್ದಿದ್ದಾನೆ. ಇನ್ನಿತರ ಪಾತ್ರಗಳಲ್ಲಿ ಕೌರವಪಕ್ಷದವರಾದ ದುರ್ಯೋಧನ

---

1 ಎಸ್. ವಿ. ರಂಗಣ್ಣ: ಕುಮಾರವ್ಯಾಸ, ಪು. ೫.

2 ಸಿ. ಕೆ. ವೆಂಕಟರಾಮಯ್ಯ: ಕುಮಾರವ್ಯಾಸನು ಚಿತ್ರಿಸಿರುವ ದ್ರೌಪದಿಯ ಪಾತ್ರ (ಕುಮಾರವ್ಯಾಸಪ್ರಶಸ್ತಿ, ಪು. ೨೦೨)

3 ದ. ರಾ. ಬೇಂದ್ರೆ: ಕುಮಾರವ್ಯಾಸನ ಉತ್ತರಕುಮಾರ (ಕುಮಾರವ್ಯಾಸಪ್ರಶಸ್ತಿ, ಪು. ೨೭೦)

ದುಶ್ಶಾಸನ ಶಕುನಿ ಕರ್ಣರು ಖಲಚತುಷ್ಟಯವೆಂದು ಹೆಸರುಗೊಂಡು ಮೂಲಭಾರತದ ಪಡಿಯಚ್ಚಾಗಿದ್ದಾರೆ. ಇವರಲ್ಲಿ ದುರ್ಯೋಧನನು ಕೇವಲ ಖಲನಲ್ಲ. ಕರ್ಣನೂ ಜಟಿಲಪಾತ್ರ. ದುರ್ಯೋಧನನು 'ಛಡಾಳಛಲ'ದವನೂ ಮಾನಿಯೂ ತೇಜಸ್ವಿಯೂ ಆದ ವೀರನೆಂದು ವ್ಯಾಸಭಾರತವು ಬಿಡಿಸಿದ ಚಿತ್ರವನ್ನು ಕುಮಾರವ್ಯಾಸನು ಇನ್ನಿಷ್ಟು ತೀವ್ರಗೊಳಿಸಿ ತೋರಿದ್ದಾನೆ. ದ್ಯೂತಪರ್ವದಲ್ಲಿ ಅವನ ದುಷ್ಟತನ-ಕೀಳುತನಗಳು ಕಳಸವುಟ್ಟಿವೆ. ದ್ವೇಷಾಸೂಯೆಗಳಿಂದಲೂ ದುರಹಂಕಾರದಿಂದಲೂ ಅವನು ದುಮುದುಮು ಉರಿಯುತ್ತಾನೆ. ಗದಾಪರ್ವದಲ್ಲಿ ಅವನು ಹತಾಶನಾಗಿ ಕಂಬನಿಗರೆದರೂ,

'ಖಾತಿ ಕಂದದು ಮನದ ಧೈರ್ಯದ ।
ಧಾತು ಕುಂದದು ಲಜ್ಜೆಯಭಿಮತ ।
ಜಾತಿಗೆಡದು ವಿರೋಧಬಿಡದು ಯುಧಿಷ್ಠಿರಾದ್ಯರಲಿ ॥
ಏತಕಿದು ನಿನ್ನೀ ಪ್ರಳಾಪ ವಿ- ।
ಧೂತರಿಪು ಕುರುರಾಯನೆಂಬೀ ।
ಖ್ಯಾತಿಯಲ್ಲದೆ ಬೇಱೆ ರಾಜ್ಯವನೊಲ್ಲೆ ನಾನೆಂದ ॥'

(ಗದಾ. ೩-೩೩)

ಎಂಬಲ್ಲಿ ಅವನ ವೀರಲಕ್ಷಣವು ಪ್ರಕಟವಾಗಿದೆ. 'ನೆಲಕಿಱುವೆನೆಂದು ಬಗೆದಿರೆ ಚಲಕಿಱುವೆಂ' (೫-೪೭ ಗದಾಯುದ್ಧ) ಎಂದು ರನ್ನನ ದುರ್ಯೋಧನ ಹೇಳಿದ ಸರಣಿಯಲ್ಲಿ ಈ ಮಾತಿದೆ. ಕುಮಾರವ್ಯಾಸನು ಪಂಪರನ್ನರಂತೆ ದುರ್ಯೋಧನನು ಮಹಾಸತ್ವಶಾಲಿ ಎಂದರೆ ಹೆಚ್ಚಿನ ವೀರಧೀರ ಎಂದು ತೋರಿಸಿದ್ದರೂ ಮಹಾನುಭಾವ, ಧೀರೋದಾತ್ತ ಎಂದು ತೋರಿಸುವ ಗೊಡವೆಗೆ ಹೋಗಿಲ್ಲ. ಇದರಿಂದ ಪಾತ್ರದ ಒಟ್ಟುಸ್ವರೂಪದಲ್ಲಿ ಬಹುಮಟ್ಟಿಗೆ ಹೊಂದಿಕೆ ಉಳಿದುಕೊಂಡು ಬಂದಿದೆ. ಧೃತರಾಷ್ಟ್ರ ಗಾಂಧಾರಿಯರು ದುರ್ಬಲ ತಂದೆತಾಯಿಗಳಿಗೆ ಮಾದರಿಯಾಗಿದ್ದಾರೆ. ಹುಟ್ಟನಿಂದ ಕಾಣದ ಕಣ್ಣು, ಬೇಕೆಂದು ಕಟ್ಟಿದ ಕಣ್ಣು ಇವುಗಳ ಜೋಡೆಂದರೆ ಅವರ ಜೋಡಾದ ಸ್ವಭಾವಚಿತ್ರ. ಒಂದು ಮೋಹದ ಕುರುಡು, ಇನ್ನೊಂದು ಸತ್ಯದ ಕಡೆಗೆ ನೋಡಿಯೂ ನೋಡದ ಕುರುಡು. ಇದರಿಂದ ಅವರು ಮಕ್ಕಳ ದುರುದುಂಬಿತನಕ್ಕೆ ಎಡೆಕೊಟ್ಟು ಕುಟುಂಬವಿನಾಶಕ್ಕೆ ಕಾರಣರಾಗುತ್ತಾರೆ. ಅವರ ಹೊಯ್ದಾಟವನ್ನೂ ವಿವಶತೆಯನ್ನೂ ಕುಮಾರವ್ಯಾಸನು ಸಮರ್ಪಕವಾಗಿ ಚಿತ್ರಿಸಿದ್ದಾನೆ. ಪಾಂಡವರ ಹಿರಿಯನಾದ ಯುಧಿಷ್ಠಿರನು ಯುದ್ಧದಲ್ಲಿ, ಧರ್ಮದಲ್ಲಿ ಸ್ಥಿರನಾದರೂ ಅವನ ಸತ್ವಗುಣವು ಹಲವು ಸಲ ದುಷ್ಟಶಕ್ತಿಗಳಿಗೆ ವಶವಾದ ದೌರ್ಬಲ್ಯವಾಗಿಯೂ ನಿಷ್ಕ್ರಿಯೆಯಾಗಿಯೂ ಪರಿಣಮಿಸುತ್ತದೆ. ಅದೇ ಘೋಷಯಾತ್ರೆಯಂಥ ಸಂದರ್ಭಗಳಲ್ಲಿ ಉದಾತ್ತ-ಸಂಸ್ಕೃತಿಯ ಘೋಷಣೆಯಾಗುತ್ತದೆ.

ಮುಖ್ಯವಾಗಿ ಚರ್ಚಿಸಬೇಕಾದ ಪಾತ್ರ ಕರ್ಣನದು. ನಿಜವಾಗಿ ಪಾಂಡವ ಹಿರಿಯಣ್ಣ ಅವನು. ಆದರೆ ತಾಯಿ ಕುಂತಿಯ ಸಮಾಜಭೀತಿಯಿಂದ ಸೂತಪುತ್ರನಾ ದುರ್ಯೋಧನನಿಂದ ಅಂಗರಾಜನಾಗಿ ಅವನ ಪಕ್ಷಕ್ಕೆ ಸೇರಿದನು. ತಮ್ಮಂದಿರೊಡ ಯುದ್ಧವಾಡಿ ಅವರಲ್ಲಿ ಒಬ್ಬನಿಂದ ಸಾವುಪಡೆದನು. ಅವನ ದುರಂತಚರಿತ್ರೆಯನ ಮೆಚ್ಚಿದ ಪಂಪನು 'ಕರ್ಣನಿಂದ ಭಾರತವು ಕರ್ಣರಸಾಯನವಾಯಿತು' ಎಂ ಸಾರಿ ಅವನ ಸತ್ಯ-ತ್ಯಾಗಾದಿಗುಣಗಳನ್ನು ಬಾಯ್ತುಂಬ ಹೊಗಳಿದನು. ಕುಮಾ ವ್ಯಾಸನು ಒಂದು ಕಡೆ ವ್ಯಾಸ, ಇನ್ನೊಂದು ಕಡೆ ಪಂಪ ಇವರಿಬ್ಬರ ಪ್ರಭಾವಕ ಒಳಗಾಗಿ ಭಾಗವತಪರಂಪರೆಯಲ್ಲಿಯ ಕರ್ಣನ ಕೃಷ್ಣಭಕ್ತಿಯನ್ನೂ ಬೆರೆಸಿ ಒಂ ಸಂಮಿಶ್ರಪಾತ್ರವನ್ನು ನಿರ್ಮಿಸಿದನು. ಅದರ ಒಟ್ಟುನೋಟದಲ್ಲಿ ಒಂದುತನವನ ಕಾಣುವುದು ಕಷ್ಟವಾಗಿದೆ. ದ್ಯೂತಪರ್ವದಲ್ಲಿ 'ಖಲಚತುಷ್ಟಯ'ದಲ್ಲಿ ಒಬ್ಬನಾ ಕಪಟದ್ಯೂತಕ್ಕೆ ಪ್ರೇರಕನೂ ದ್ರೌಪದೀಮಾನಭಂಗಕ್ಕೆ ಪ್ರಚೋದಕನೂ ಆ ಕರ್ಣನು ಉದ್ಯೋಗಪರ್ವದಲ್ಲಿ ಸತ್ಯವಂತಿಕೆ, ಸ್ವಾಮಿನಿಷ್ಠೆಗಳನ್ನು ತೋರಿಸುತ್ತಾ ದುಷ್ಟರಲ್ಲಿ ನಿಷ್ಠೆ ಸಹಜ, ಆದರೆ ಸತ್ಯವಂತಿಕೆ ಹೃದಯಪರಿವರ್ತನವಾಗದೆ ಸಹಜವೇ ಬೇರೊಂದು ದೃಷ್ಟಿಯಿಂದ ವಿಮರ್ಶಕರೊಬ್ಬರು ಕರ್ಣಪಾತ್ರದ ವಿಸಂಗತಿಯನ ತೋರಿದ್ದಾರೆ. ದುರ್ಯೋಧನನಲ್ಲಿ ಅತ್ಯಂತ ನಿಷ್ಠೆಯುಳ್ಳ ಕರ್ಣನು ಯುದ್ಧದ ಪಾಂಡವರ ನೋಯಿಸಲಾರೆನೆಂದೂ ಬಿಟ್ಟ ಬಾಣವನ್ನು ಮತ್ತೆ ಬಿಡುವುದಿಲ್ಲೆಂದ ಕೃಷ್ಣ-ಕುಂತಿಯರಿಗೆ ವಚನಕೊಟ್ಟು ಅದರಂತೆ ನಡೆಯುತ್ತಾನೆ. ಇದರಿಂದ ಅವ 'ಕೃತಜ್ಞ, ಪ್ರಾಮಾಣಿಕ'ನೆಂದು ಹೇಳುವುದಕ್ಕಾದೀತೇ ? 'ಕರ್ಣನು ತಾನು ಏ ಮಾಡುತ್ತಿರುವೆನೆಂಬ ಆಮೂಲಾಗ್ರವಿಚಾರಿಯಾಗಿರದೆ ಗೊಂದಲಬಡಕ ಹಾ ಎಲ್ಲರನ್ನೂ ತಣಿಸುವ ವ್ಯಕ್ತಿಯಾಗಿತ್ತೆನ್ನಬೇಕು.'[1] ಅವನಲ್ಲಿ ತೂಕ-ತಾರತಮ್ಯಗ ಕಡಿಮೆ ; ಅವನು ಎಬಡನಾಗಿ ತೋರುತ್ತಾನೆ. ಕುಮಾರವ್ಯಾಸನಲ್ಲಿ ಸಾಹಿತ್ಯ ದೃಷ್ಟಿಗಿಂತ ಭಕ್ತಿಮಾರ್ಗದ ದೈವಿಕಭಾವನೆಯೆ ಕಂಡುಬರುತ್ತದೆ, ಆದ್ದರಿಂದ ಸುಸಂ ಪಾತ್ರರಚನೆಯನ್ನು ಅಪೇಕ್ಷಿಸುವುದೇ ಸರಿಯಾಗಲಾರದು. ಈ ಮುಂದೆ ಪಂ ಮತ್ತು ವ್ಯಾಸನ ಕರ್ಣನೊಡನೆ ಹೋಲಿಸಿ ಪಂಪ-ಕುಮಾರವ್ಯಾಸರಿಗಿಂತ ವ್ಯಾಸನ ಚಿತ್ರವು ಹೆಚ್ಚು ಸುಸಂಗತವಾಗಿದೆಯೆಂದು ಆ ವಿಮರ್ಶಕರು ಬಿತ್ತ ತೋರಿದ್ದಾರೆ. ಕೃಷ್ಣ-ಕುಂತಿಯರ ಭೆಟ್ಟಿಯ ಕಾಲದಿಂದ ಕರ್ಣನು ಸಂಘರ್ ಸುಳಿಗೆ ಸಿಕ್ಕು ಸ್ವಾಮಿನಿಷ್ಠೆಯನ್ನೂ ತೋರಿದನು, ಬಂಧುಪ್ರೇಮವನ್ನೂ ಮೆರೆದ ಸಮಾನಕರ್ತವ್ಯಗಳ ಕರೆ ಒಮ್ಮೆಲೆ ಕೇಳಿಬರಲು ಧರ್ಮಸಂಕಟದಲ್ಲಿ ಸಿಲುಕಿದ ಎ ಗಟ್ಟಿಗರೂ ಒಂದು ಕ್ಷಣವಾದರೂ ಗೊಂದಲಬಡಕರೂ ಎಬಡರೂ ಆಗುತ್ತಾ ಪಾತ್ರವಿಸಂಗತಿಯನ್ನು ಅಳೆಯುವಾಗ ಜೀವನದ ಜಟಿಲತೆಯನ್ನು ನೆನೆದಿರಬೇ

---

1 ಶಂ. ಬಾ. ಜೋಶಿ: ಕರ್ಣನ ಮೂರು ಚಿತ್ರಗಳು, ಪು. ೧೬

ಂದರ್ಭವನ್ನು ತೂಗಿ ನೋಡಬೇಕು. ಕೃತಜ್ಞತೆ, ಪ್ರಾಮಾಣಿಕತೆಗಳಿಗೆ ಬಾಧೆ ರದಂತೆ ನಡೆಯಬೇಕಾಗಿದ್ದರೆ ಕರ್ಣನೇನು ಮಾಡಬೇಕಾಗಿತ್ತು ? ತನ್ನ ಹೃದಯ- ನ್ನು ಕಲ್ಲುಮಾಡಬೇಕಾಗಿತ್ತೇ ? ಅದೂ ಒಂದು ಬಗೆಯ ಅಪ್ರಾಮಾಣಿಕತನ- ಲ್ಲವೇ ? ಇಷ್ಟು ಮಾತ್ರ ನಿಜ. ತನ್ನ ಜನ್ಮಕಥೆ ತಿಳಿದು ಭಾಷೆಕೊಟ್ಟಮೇಲೆ ರವಡೊರೆಯ ಕೂಡ ಅವನು ಹೇಗೆ ನಡೆದನು ? ಮನಸ್ಸಿನ ಒಳತೋಟ ಹೇಗೆ ರಪಟ್ಟಿತು ? ಸೇನಾಪತಿಪಟ್ಟವನ್ನು ಸ್ವೀಕರಿಸುವಾಗ ಅವನಲ್ಲಿ ಅಂತಃಕ್ಷೋಭೆ ಂಟಾಗಲಿಲ್ಲವೇ ? ಈ ಮೊದಲಾದ ಅಂಶಗಳ ಕಡೆಗೆ ಕುಮಾರವ್ಯಾಸನು ಗಮನ- ೊಡಲಿಲ್ಲ ಎನ್ನಬಹುದು. ಈ ರೀತಿ ಪಾತ್ರನಿಬಿಡವಾದ ಮಹಾಭಾರತದ ಸಂದಣಿ- ಲ್ಲಿ ಇನ್ನೂ ಹಲವು ಸಂನಿವೇಶಗಳ ಮತ್ತು ಪಾತ್ರಗಳ ವಿಶ್ಲೇಷಣೆ ಸಮರ್ಪಕವಾಗದೆ ಳಿದಿದ್ದರೆ ಅದು ಆಶ್ಚರ್ಯವಲ್ಲ. ಮುಖ್ಯವಾಗಿ ತನ್ನ ಆಕರಗಳಿಂದೆತ್ತಿದ ಕರ್ಣ- ಾತ್ರದಲ್ಲಿಯ ಶೌರ್ಯ, ತ್ಯಾಗ, ನಿಷ್ಠೆ, ದುರ್ವಿಧಿವಿಲಾಸ, ದೈವಭಕ್ತಿ ಇವನ್ನು ಮಾರವ್ಯಾಸನು ಚಿತ್ತದಲ್ಲಿ ಅಚ್ಚೊತ್ತುವಂತೆ ಪ್ರಭಾವಿಯಾಗಿ ಚಿತ್ರಿಸಿರುವನೆಂದು ೇಳಬಹುದು.

ಕುಮಾರವ್ಯಾಸನ ವರ್ಣನೆಗಳಲ್ಲಿ ಒಂದು ಅಪೂರ್ವತೆಯಿದೆಯೆಂದು ರಸಿಕರು ಡಿದ್ದಾರೆ. ಇದಕ್ಕೆ ಮುಖ್ಯಕಾರಣವೆಂದರೆ ಅವನು ಕವಿಸಮಯ ತ್ಯಾಗಮಾಡಿರ- ್ದರೂ ಅದರ ಕೃತಕ ಬಂಧನಕ್ಕೆ ಒಳಗಾಗಿರಲಿಲ್ಲ. ಹದಿನೆಂಟು ವರ್ಣನೆಗಳ ಿಯಮಕ್ಕೆ ಅವನು ಕಟ್ಟುಬೀಳಲಿಲ್ಲ. ಅದರಲ್ಲಿ ಕೆಲವು ಸಂದರ್ಭವಶಾತ್ ಬಂದಿರ- ಹುದು. ವರ್ಣನೆಗಳ ಅತಿವಿಸ್ತರ, ಅಲಂಕಾರಜಾಲ, ಶಬ್ದಚ್ಛಲ ಇವುಗಳ ಡದಲ್ಲಿ ಸಿಕ್ಕು ಕತೆ–ಪಾತ್ರಗಳು ಎಚ್ಚರತಪ್ಪುವಂತೆ ಅವನು ಮಾಡಲಿಲ್ಲ. ೇಗಾದರೂ ಮಾಡಿ ಸೂಳೆಗೇರಿಯ ವರ್ಣನೆಯನ್ನು ತರಬೇಕೆಂಬ ಹವ್ಯಾಸಕ್ಕೆ ಲಿಯಾಗಲಿಲ್ಲ. ಅವನ ಹಲವಾರು ನಿಸರ್ಗವರ್ಣನೆಗಳು ಒಂದು ಸಾಭಿಪ್ರಾಯ- ದೃಶ್ಯ ಇಲ್ಲವೆ ರೂಪಕವಾಗಿ ಸಹಜಪ್ರಾಸದ ಕಿರುನುಡಿಗಳಲ್ಲಿ ಅಡಕಗೊಳ್ಳುತ್ತವೆ. ದಾ: 'ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ.' ಇಲ್ಲಿ 'ಬೆಳಗಾ- ತು' ಎಂಬುದನ್ನು ಕವಿಸಮಯಸ್ವೀಕಾರದ ತಳಹದಿಯ ಮೇಲೆ ಕಟ್ಟಿದ ಹೊಸ ಪಕದಲ್ಲಿ ವ್ಯಕ್ತಮಾಡಿದೆ. ಜೊತೆಗೆ, ಬಾಗಿಲಿನ ಬೀಯಗವನ್ನು ತೆಗೆದು ತರಣಿಯ ಕನ್ನು ಒಳಗೆ ಬರಮಾಡಿ ಸೆರೆಯಲ್ಲಿದ್ದ ತುಂಬಿಗಳನ್ನು ಹೊರಬಿಟ್ಟು ತಾವರೆ ಪಡೆದ ಕ್ತಮನದ ಉಲ್ಲಾಸವನ್ನು ಕೀಚಕನ ಕೊಲೆಗೆ ಬದ್ಧಕಂಕಣನಾದ ಭೀಮವಚನ- ದ ದ್ರೌಪದಿ ಪಡೆದಳೆಂಬ ಧ್ವನಿಯೂ ಅದರಲ್ಲಿ ಸಾಜಸೊಬಗಿನಿಂದ ಸೇರಿಕೊಂಡಿದೆ. ಂಡುನಿಧನಪ್ರಸಂಗದಲ್ಲಿ ವಸಂತಾಗಮ, ಕೀಚಕವಿರಹಕಾಲದ ಚಂದ್ರೋದಯ ಥಲ್ಲಿ ಉದ್ದೀಪನೆಯ ಔಚಿತ್ಯವರಿತು ಕುಮಾರವ್ಯಾಸನು ವರ್ಣನೆಗಳನ್ನು ತುಸು ಸುತ್ತಾನೆ. ಅವನೆಲ್ಲ ಕಲ್ಪನೆಗಳು ಆಗ ನವೀನವಾಗಿರುವುದಿಲ್ಲ, ಆದರೆ ಅವನ ಾತಿನ ವಿವಿಧಸಂಪತ್ತಿಯಿಂದ ಅವಕ್ಕೆ ನಾವೀನ್ಯವು ಒದಗುತ್ತದೆ. ಸಾಮಾನ್ಯವಾಗಿ

ಪಾತ್ರಗಳ ಮನಶ್ಚಿತ್ರ, ಭಾವರಸನಿರೂಪಣೆ ಈ ಬಗೆಯ ಮನೋಲೋಕದ ವರ್ಣನೆ ಗಳಲ್ಲಿ ಅವನ ಪ್ರತಿಭೆ ಕಾವುಗೊಳ್ಳುತ್ತದೆ. ಎಲ್ಲಕ್ಕಿಂತ ಮಿಕ್ಕಿದ ವಿಸ್ತಾರವೈವಿಧ್ಯಗಳ ಅವನ ಯುದ್ಧವರ್ಣನೆಗಳಲ್ಲಿ ಎಂಬುದನ್ನು ಕಾಣಬೇಕು. ಮಹಾಭಾರತದ ಅನುವಾದ ದಲ್ಲಿ ಬೇಸರುತರಬಹುದಾದ ಈ ಭಾಗಗಳಲ್ಲಿ ಶಸ್ತ್ರಾಸ್ತ್ರಗಳ ತಾಕಲಾಟ, ಅವುಗಳಿಂದ ರಣಭೂಮಿಯ ಮೇಲಾಗುವ ಕೋಲಾಹಲ, ವೀರರ ಮೂದಲಿಕೆಮಾತು ಮುಂತಾದ ಅಂಶಗಳಿಂದ ಯುದ್ಧವನ್ನು ಪ್ರತ್ಯಕ್ಷೀಕರಿಸಿಕೊಂಡ ಹಾಗೆ ಅವನು ಎದೆಯುಬ್ಬಿ ಬರೆದಿದ್ದಾನೆ.

ಕುಮಾರವ್ಯಾಸನ ಕಲ್ಪನಾಶಕ್ತಿಯನ್ನು ಕೈವಾರಿಸದ ವಿಮರ್ಶಕರಿಲ್ಲ. 'ನಾರಣಪ್ಪನು ರೂಪಕಸಾಮ್ರಾಜ್ಯದ ಚಕ್ರವರ್ತಿ'[1] ಎಂಬುದು ಗಾದೆಮಾತಾಗಿದೆ. ವಿಸ್ತಾರವಾದ ಪುರಾಣಕಾವ್ಯವನ್ನು ರಚಿಸಿದ ಕಾರಣ ಅವನ ಬರೆವಣಿಗೆಯಲ್ಲಿ ವಿಶೇಷವಾಗಿ ಆದಿಪರ್ವದಲ್ಲಿ ಮತ್ತು ರಸವುಕ್ಕದ ಸಂನಿವೇಶಗಳಲ್ಲಿ ತನ್ನ ಈ ಚಕ್ರ ವರ್ತಿತ್ವದ ಕಿರೀಟವನ್ನು ಕೆಳಗಿಟ್ಟಂತೆ ಒಂದು ಮಧ್ಯಮಗುಣದ ಕಲೆಯನ್ನು ತೋರಿಸುತ್ತಾನೆ. ಇಂಥಲ್ಲಿ ಅಪರೂಪವಾಗಿ ಒಂದು ಉಜ್ವಲಕಾಂತಿಯ ಮಣಿ ದೊರಕಬಹುದು. ಆದರೆ ನಾಟ್ಯಮಯ ಸಂನಿವೇಶಗಳನ್ನು ನಿರ್ಮಾಣಮಾಡಿಕೊಂಡು ತನಗೆ ಪ್ರಿಯವಾದ ವೀರ–ರೌದ್ರ, ಭಕ್ತಿ–ಅದ್ಭುತ ರಸಗಳನ್ನು ನಿರೂಪಿಸುವಾಗ ಸ್ಥಾಯಿಸಂಚಾರಿಗಳನ್ನು ತೆರೆದು ತೋರಿಸುವಾಗ, ಅವನ ರೂಪಕಶಕ್ತಿ ಅದೆಷ್ಟು ಸೂಕ್ಷ್ಮ, ಸಹಜ, ಉಚಿತವಾಗಿ ಬಾಣದ ಮೇಲೆ ಬಾಣ ಬಿಟ್ಟಹಾಗೆ ಸೊಮ್ಮುತ್ತದೆ! ಆದರೂ 'ಕವಿಸಮಯಕೋಶವನ್ನು ಕಂಠಪಾಠಮಾಡಿ ಪೂರ್ವಕವಿಪ್ರಯೋಗಗಳನ್ನು ಧಾರಾಳವಾಗಿ ತೆಗೆದುಕೊಂಡು ಸೃಜಿಸಿದ ಸಾದೃಶ್ಯವಾವುದೂ ಇಲ್ಲ. ಎಲ್ಲವೂ ನಾರಣಪ್ಪನು ತಾನೇ ಅನುಭವಿಸಿದುವು; ನಾರಣಪ್ಪನ ಪ್ರತಿಭೆಯೆಂಬ ಗಿಡದಲ್ಲಿ ಅರಳಿದ ಹೂಗಳು',[2] 'ಕನ್ನಡಕವಿಗಳಲ್ಲಿ ನೂತನತೆ ಅವನಿಗೆ ಮೊದಲು ನೈವೇದ್ಯ, ಅವನ ಭಾರತ ಸಂಪೂರ್ಣವಾಗಿ ಅವನದೇ'[3] ಎಂಬ ಉಕ್ತಿಗಳಲ್ಲಿಯ ಅತ್ಯಾವೇಶದ ಅರ್ಥವನ್ನು ಅರಿತುಕೊಳ್ಳಬಹುದಾದರೂ ಅತಿಶಯೋಕ್ತಿಯ ಬಣ್ಣವು ಅವಕ್ಕೆ ಬರುತ್ತದೆ. ಮುಖ್ಯವಾಗಿ ಕುಮಾರವ್ಯಾಸನ ರೂಪಕಶಕ್ತಿಯ ಆಶ್ಚರ್ಯಕರವಾದ ಸಿದ್ಧಿಗೆ ಮೂಲವು ಅವನ ಮಾಗಿದ ಪ್ರಜ್ಞೆಯಲ್ಲಿದೆ. ಋಷಿತುಲ್ಯವಾದ ಜೀವನ ಸಿದ್ಧಿಯಿಂದ ಸಂತುಷ್ಟಳಾದ ಸರಸ್ವತಿ ಅವನಿಗೆ ಒಲಿದಿದ್ದಾಳೆ. ಅವಳ ನಾಲ್ಕು ರೂಪಗಳಲ್ಲಿಯ 'ಪಶ್ಯಂತೀ ವಾಕ್' ಅವನ ಸೊತ್ತಾಗಿದೆ. ಅಂತೇ ಅವನು ಕಂಡುದೆ

---

1 ಎಸ್. ವಿ. ರಂಗಣ್ಣ : ನಾರಣಪ್ಪನ ಶೈಲಿ (ಕುಮಾರವ್ಯಾಸಪ್ರಶಸ್ತಿ, ಪು. ೩೩೧)

2 ಎಸ್. ವಿ. ರಂಗಣ್ಣ : ಕುಮಾರವ್ಯಾಸನ ಶೈಲಿ (ರನ್ನಕವಿಪ್ರಶಸ್ತಿ, ಪು. ೩೩೩)

3 ,, ,, ಕುಮಾರವ್ಯಾಸ, ಪು. ೬೩

ೃಶಚಿತ್ರವಾಗಿ ಕಾಣುತ್ತದೆ, ಉಕ್ತಿವೈಚಿತ್ರ್ಯವಾಗಿ ಹೊಮ್ಮುತ್ತದೆ. ಬಾಹ್ಯ ಗತ್ತಲ್ಲದೆ ಭಾವಪ್ರಪಂಚದ ಅನುಭವಗಳು ಸಹ ರೂಪಕರಾಶಿಯಾಗಿ ಕಾಣುವುದು ವರ ಸಹಜಧರ್ಮ. ಆದುದರಿಂದಲೇ ಬಹುಭಾಗದಲ್ಲಿ ಚಿತ್ರಕಚಮತ್ಕೃತಿ-ಾಗುವುದರ ಬದಲು ಅದು ಸಮಗ್ರ ಮತ್ತು ಸಮುಚಿತರೂಪಕವಾಗಿ ಕವಿಶಕ್ತಿಯ ಿಮೆಯನ್ನು ಎತ್ತಿತೋರುತ್ತದೆ. ಉದಾಹರಣೆಗೆ, ದುರ್ಯೋಧನನು ಕಾಳಗವನ್ನು ಗೆ ನಿಶ್ಚೈಸಿದನೆಂಬುದನ್ನು ರೂಪಕವಾಗಿ ಹೇಳುವ ಪದ್ಯವನ್ನು ಓದಬೇಕು :

‘ ನೆನೆದ ಮಂತ್ರವ ತನ್ನ ತಂದೆಯ ।
ಮನದ ಮಚ್ಚದೊಳೊರೆದು, ಕರ್ಣನ ।
ನೆನಹಿನೊಳು ಪುಟವಿಟ್ಟು, ಶಕುನಿಯ ನೀತಿಯೊಳು ನಿಗುಚಿ ॥
ಅನುಜಮತದೊಳು ವಿಸ್ತರಿಸಿ, ವೈ- ।
ದುನನ ಮತದೊಳು ಬಣ್ಣವಿಟ್ಟನು ।
ಜನಪನಪಕೀರ್ತ್ಯಂಗನೆಗೆ ತೊಡಿಸಿದನು ಭೂಷಣವ ॥ ’

(ಉದ್ಯೋಗ., ೨-೨೨)

ಪದ್ಯದಲ್ಲಿ ಅರ್ಥವತ್ತಾಗಿ ಬೆಳೆಯುತ್ತ ಬಂದ ರೂಪಕವು ತನ್ನ ಕೊನೆಯ ಚಿತ್ರದಲ್ಲಿ ರ್ಸ್ವಾರಸ್ಯದ ಮತ್ತು ಧ್ವನಿರಮ್ಯತೆಯ ಪರಾಕಾಷ್ಠೆಯನ್ನು ಮುಟ್ಟಿದೆ.

ಕುಮಾರವ್ಯಾಸನ ಶೈಲಿಯ ವೈಶಿಷ್ಟ್ಯವನ್ನೂ ಘನತೆಯನ್ನೂ ವಾಚಕರೂ ುರ್ಶಕರೂ ಮನವಾರೆ ಮೆಚ್ಚಿದ್ದಾರೆ. ದ್ರೌಪದಿಗೆ ಕೃಷ್ಣನ ಕೃಪೆಯಿಂದ ಅಕ್ಷಯ-ತ್ರ ದೊರೆತಂತೆ ಕುಮಾರವ್ಯಾಸನಿಗೆ ವೀರನಾರಾಯಣನ ಕರುಣೆಯಿಂದ ಕನ್ನಡ-ಿಯ ಅಕ್ಷಯಸಂಪತ್ತಿ ದೊರೆತಿದೆ. ಅದರ ಸಹಜಸಾಮರ್ಥ್ಯ, ಸುಲಭವೇದ್ಯವಾದ ನತೆ, ರೂಪಕವೈಭವ ಇವನ್ನು ಅಚ್ಚರಿಯಾಗಿ ಮೆರೆದವರಲ್ಲಿ ಕುಮಾರವ್ಯಾಸ-ಬ್ಬನು. ‘ ಗಂಡರೈವರು ಮೂರು ಲೋಕದ ಗಂಡರೊಬ್ಬಳ**ನಾಳಲಾರಿರಿ’** ರಾಟ., ೩-೪೯) ಎಂಬ ದ್ರೌಪದಿಯ ಮಾತಿಗೆ ಭೀಮನ ‘ರೋಷದ ಘನತೆ ತ್ತಿತು **ಹಿಂಡಿದನು** ಹಗೆಗಳನು ಮನದೊಳಗೆ’ (ವಿರಾಟ., ೩-೬೮) ಎಂಬ ತಿಕ್ರಿಯೆಯುಳ್ಳ ವರ್ಣನೆಯಲ್ಲಿ ಕನ್ನಡದೇಸಿಯನ್ನು ಉಜ್ವಲವಾಗಿ ಆದರೂ ಜವಾಗಿ ಕವಿ ಬಳಸಿದ್ದಕ್ಕೆ ನಿದರ್ಶನವಿದೆ. ನೂರಾರು ಇಂಥ ನಿದರ್ಶನಗಳನ್ನು ಣಬಹುದು. ಇಂಥಲ್ಲಿ ಕವಿ ಜನಭಾಷೆಯ ರೂಢಿಯಲ್ಲಿ ಹುದುಗಿದ ರೂಪಕಗಳನ್ನು ಚಿತಪ್ರಯೋಗದಿಂದ ಹೊರದೆಗೆದು ತೋರಿಸುತ್ತಾನೆ. ಮಾತಿನಲ್ಲಿದ್ದ ಮಹಾ-ವ್ಯವು ಕಣ್ದೆರೆದು ನಿಲ್ಲುತ್ತದೆ. ರಸಾನುಭವವು ಉತ್ಕಟ–ಸಹಜವಾಗಿ ಎಲ್ಲ ಜನದ ಮುಟ್ಟುತ್ತದೆ. ಜಾನಪದಸಾಹಿತ್ಯದ ಸಿದ್ಧಿಯೇ ಇದು. ಹೀಗೆ ಕನ್ನಡ-ರತವು ಸಾರ್ಥಕವಾಗಿದ್ದರೂ ಅದರಲ್ಲಿ ಸಂಸ್ಕೃತಮಾರ್ಗದ ಸಂಸ್ಕಾರಗಳಿವೆ. ಸಂಸ್ಕೃತ

ಶಬ್ದಗಳೂ ಸಮಾಸಗಳೂ ಒಮ್ಮೊಮ್ಮೆ ಹವಣುಮೀರಿ ಇಲ್ಲದ ಆಡಂಬರವಾ
ಅರ್ಥಕ್ಲಿಷ್ಟವಾಗಿ ಬಂದಿವೆ. ಆದರೆ ಅವುಗಳ ಹಾವಳಿ ಕಡಿಮೆ. ಕನ್ನಡದೇಶಿ
ಕನ್ನಡದಲ್ಲಿ ಬೆರೆತು ಬಂದ ಅನ್ಯದೇಶಿ ಇದನ್ನು ಬಳಸುವುದರ ಕಡೆಗೆ ಕುಮಾರವ್ಯಾಸ
ಒಲವಿದೆ. ಈ ಶೈಲಿಯಲ್ಲಿದ್ದ ಸಮಯಸ್ವಾತಂತ್ರ್ಯದ ಮೂಲಕ ಕೆಲವು ಸ
ಛಂದಸ್ಸಿಗಾಗಿ, ಪ್ರಾಸಕ್ಕಾಗಿ ಶಬ್ದರೂಪಗಳು ಪಲ್ಲಟಿಸಿವೆ, ವ್ಯಾಕರಣವು ಗಾಳಿ
ಹಾರಿದೆ. ಕೇಳಿದು (ಕೇಳ್ದು), ತೊಳಲಿದು (ತೊಟಿಲ್ದು) ಎಂಬ ತೆರೆದ ಬದಲಾವಣ
ಗಳು ವಿಶಿಷ್ಟವಾಗಿವೆ. ಹಳೆಯ ಸಾಹಿತ್ಯದಿಂದೆತ್ತಿದ, ಜನಭಾಷೆಯಿಂದ ತೆಗೆದುಕೊಂ
ಆದರೆ ಹಳೆಯ ಸಾಹಿತ್ಯದಲ್ಲಿ ದೊರೆಯದ, ಶಬ್ದಭಾಂಡಾರವೊಂದು ನಮ್ಮನ
ದಂಗುಬಡಿಸುತ್ತದೆ. ಭಾಮಿನೀ ಷಟ್ಪದಿಯ ಸಾಮಾನ್ಯನಿಯಮಕ್ಕೆ ಭಂಗತಾರ
ವಿಧವಿಧವಾಗಿ ಸಂದರ್ಭೋಚಿತವಾಗಿ ನಡೆಯುವ ಛಂದ, ಪಡೆಯುವ ನಾದ ಕ
ಮಹಿಮೆಗೆ ಹೆಗ್ಗುರುತಾಗಿವೆ. ಕುಮಾರವ್ಯಾಸನು ದೇಸಿಯನ್ನು ಉಚಿತಮಾರ್ಗದಿಂ
ಸಂಸ್ಕಾರಗೊಳಿಸಿದವನಾದರೂ ಶುದ್ಧಶೈಲಿಯ ಉಪಾಸಕನಲ್ಲ. ಅಲ್ಲಲ್ಲಿ ನಿರ್ಬಂ
ವಿಲ್ಲದೆ ಗ್ರಾಮ್ಯವೆನ್ನಬಹುದಾದ ರೂಪಗಳನ್ನು ಅವನು ಬಳಸಿದ್ದಾನೆ. 'ನಾಯಿ
'ಕುನ್ನಿ'ಗಳು ಅವನ ಕೃತಿಯಲ್ಲಿ ತುಂಬ ಸುಳಿದಾಡುತ್ತವೆ. ಕನ್ನಡ ಬೈಗು
ಮಾದರಿಗಳು ದೊರೆಯುತ್ತವೆ. ಅವುಗಳಿಂದ ಪ್ರಕಟವಾಗುವ ಪಾತ್ರಗಳ ಮನೋ
ಧರ್ಮ, ನಾಟಕೀಯಸಂಭಾಷಣೆಯ ಸಹಜತೆ ಇದಕ್ಕಾಗಿ ಅವನ್ನು ತಂದಿದ್ದಾ
ಆದರೆ ಒಂದೊಂದು ಸಲ ಔಚಿತ್ಯಮೀರಿದ ಒರಟುತನ, ಗಾಂಭೀರ್ಯದ ಕೊರ
ತೋರಿದ್ದೂ ಉಂಟು. ಆದಿಪ್ರಾಸವು ಅವನ ಬರೆವಣಿಗೆಯಲ್ಲಿ ಸಹಜ ಓಘವಾ
ಹರಿದುಬಂದಿದೆಯಾದರೂ ಪ್ರಯತ್ನಪೂರ್ವಕವಾದ ಪದಲಾಲಿತ್ಯವೆಂಬ ಆರೋಪ
ಆಗಾಗ ಗುರಿಯಾಗುತ್ತದೆ.

ಅನ್ಯಭಾಷೆಯ ಶಬ್ದಗಳು ಪಾರಸಿ, ಅರಬಿ ಮತ್ತು ಮರಾಠಿ ಇವುಗಳಿ
ಎತ್ತಿಕೊಂಡುವಾಗಿವೆ. ಇವುಗಳಲ್ಲಿ ಮರಾಠಿಪದಗಳ ಪ್ರಾಬಲ್ಯ ಹೆಚ್ಚಾಗಿ
ಅವರೆಗಿನ ಯಾವ ಕನ್ನಡಕಾವ್ಯದಲ್ಲಿಯೂ ಇಷ್ಟುಮಟ್ಟಿಗೆ ಅವುಗಳನ್ನು ಬಳಸಿ
ಅವುಗಳಲ್ಲಿ ಒಡ್ಡವಣೆ, ಚಡ್ಡಣೆ, ಆದರಣೆ, ಘಡಾವಣೆ, ಭಾರಣೆ(ವಣೆ), ಪಾರುಖಾ
ಎಂಬ ಶಬ್ದಗಳೂ ಅವುಗಳ 'ಣೆ' ಅಂತ್ಯವೂ ವೀರಪಣ, ಜಾಣಪಣ, ವಿಸ್ತಾರಪ
ಈ ಭಾವನಾಮಗಳಲ್ಲಿಯ 'ಪಣ' ಉಪಪದವೂ ಮರಾಠಿಯ ಖಂಡಿತವಾದ ಪ್ರಭಾ
ವನ್ನು ತೋರಿಸುತ್ತವೆ. 'ಉ, ಓ' ಪ್ರತ್ಯಯಗಳು [ರಾವುತೋ(ತು)] ಮೂಲ
ಕನ್ನಡವಾಗಿದ್ದು ಜ್ಞಾನೇಶ್ವರೀಕಾಲೀನ ಮರಾಠಿಯಲ್ಲಿ ಸೇರಿಕೊಂಡು ಮತ್ತೆ ಜ
ಮತ್ತು ಕುಮಾರವ್ಯಾಸರ ಕೃತಿಗಳಲ್ಲಿ ಹಾಗೂ ಶಾಸನದಲ್ಲಿ ಸೇರಿಕೊಂಡುವಾದ ಕಾರ
ಅಚ್ಚಮರಾಠಿ ವರ್ಚಸ್ಸೆಂದು ಇದನ್ನು ಕರೆಯಲಾಗದು. ಮರಾಠಿ ಧಾತು-ನಾವ
ಅನ್ವಯ ಹಾಗೂ ವಿಶಿಷ್ಟಾರ್ಥದ ದೇಸಿ ಕುಮಾರವ್ಯಾಸನಿಗೆ ಚೆನ್ನಾಗಿ ತಿಳಿದಿತ್ತೆಂಬ
ದಕ್ಕೆ 'ಪತಿಕರಿಸು, ನಿವಡಿಸು, ಖೇಪೆ, ಪೈಸರ, ಹಳುಹಳು, ಮೇಲುಗುಡ

(ಗುಡುಘಾ-ಮ), **ಖೇಳಮೇಳ,** ನವಾಯಿ, ಗರುವಾಯಿ, ಖರೆಯ, ಖಡಿಯ, ಚಾವಟಿ, ರಹಣಿ[ರಾಹಣಿ(ಮ)], ತಳಪದ, ಬೈಸಿಗೆ, ಬಾಷ್ಕಳ' ಈ ಮುಂತಾದ ಪ್ರಯೋಗಗಳು ಸಾಕ್ಷಿಯಾಗಿವೆ. ವಿಶೇಷವಾಗಿ 'ಖೇಳಮೇಳ' ಎಂಬುದು ಸಂಸ್ಕೃತ-ಮೂಲವಾದರೂ 'ಖೇಳೀಮೇಳೀನೆ' ಎಂಬ ಮರಾಠಿರೂಪದಲ್ಲಿ 'ಸಲಿಗೆಯಿಂದ, ಸಲೀಲವಾಗಿ' ಎಂಬುದಾಗಿ ಪಡೆದ ಅರ್ಥದಲ್ಲಿ ಅದನ್ನು ಕುಮಾರವ್ಯಾಸನು ಬಳಸಿ-ದ್ದಾನೆ. ಕ್ರಮೇಣ ಅವನ ಕಾಲದ ಜನಭಾಷೆಯಲ್ಲಿ ಸೇರಿ ಬಹುಶಃ ಪ್ರಚಲಿತವಾದ ಮರಾಠಿಪದಗಳನ್ನೇ ಅವನು ತನ್ನ ಕೃತಿಯಲ್ಲಿ ಅಳವಡಿಸಿರುವನೆಂಬುದು ದಿಟ. ಆದರೂ ಗಡುಗಿನ ಸೀಮೆಯಲ್ಲಿ ಅವುಗಳಲ್ಲಿ ಕೆಲವು ಇಂದು ಬಳಕೆಯಿಲ್ಲ. ತರುವಾಯದ ಶಿವಾಜಿ-ಪೇಶ್ವೆಕಾಲೀನ ಮರಾಠಿಪ್ರಭಾವದಿಂದ ಕನ್ನಡದ ಗಡಿನಾಡಿನಲ್ಲಿ ಇನ್ನೂ ಹೆಚ್ಚಿನ ಪ್ರಯೋಗಗಳು ಸೇರಿಕೊಂಡಿವೆ. ಇವು ಎಂದಾದರೂ ಗದುಗಿನ ಸೀಮೆಯ ಮಾತಿನಲ್ಲಿದ್ದುವೆಂದು ಹೇಳಲು ಬರುವಂತಿಲ್ಲ. ಆದ್ದರಿಂದ ಮರಾಠಿಗ್ರಂಥಗಳನ್ನು ಕೇಳಿ ಇಲ್ಲವೆ ಓದಿ ಹಾಗೂ ಮರಾಠಿ ತಾಯ್ನುಡಿಯುಳ್ಳ ರಾವುತ-ಮಾವುತರ ಮತ್ತು ಅಧಿಕಾರಿಗಳ ಬಾಯ್ಮಾತನ್ನು ಕೇಳಿ ಕುಮಾರವ್ಯಾಸನು ತನ್ನ ಕೋಶವನ್ನು ಸ್ವತಂತ್ರ-ಧೈರ್ಯದಿಂದ ವಿಸ್ತರಿಸಿಕೊಂಡಿರಬಹುದೆಂದು ತೋರುತ್ತದೆ. ಅವನ ವಂಶವೆಲ್ಲ ವಿಜಯನಗರದ ಗಜಸೇನಾಪತಿಯ ವೃತ್ತಿಯದಾಗಿತ್ತೆಂಬುದನ್ನು ಇಲ್ಲಿ ನೆನೆಯಬೇಕು.

ಕುಮಾರವ್ಯಾಸನ ಮತ ಮತ್ತು ವ್ಯಕ್ತಿತ್ವದ ವಿಚಾರವಾಗಿ ಸಾಕಷ್ಟು ಚರ್ಚೆ-ಯಾಗಿದೆ. ಎಲ್ಲ ಭಿನ್ನಾಭಿಪ್ರಾಯಗಳೂ ಅಭಿವ್ಯಕ್ತವಾಗಿವೆ. ಕನ್ನಡಭಾರತದ ಮೂಲ ಆವೃತ್ತಿಯಲ್ಲಿ ಆಗಿರಬಹುದಾದ ಪ್ರಕ್ಷೇಪಗಳಿಂದ ನಿರ್ಣಯವು ಕಠಿಣವಾಗಿದೆ. ಆದರೂ ಕುಮಾರವ್ಯಾಸನು ಅದ್ವೈತಿಯಾದ ಸ್ಮಾರ್ತಬ್ರಾಹ್ಮಣನೆಂದೂ ಹರಿಭಕ್ತಿ-ನಿರತನಾದರೂ ಹರಿಹರರಲ್ಲಿ ಭೇದವನ್ನೆಣಿಸದ ಭಾಗವತಸಂಪ್ರದಾಯಿಯೆಂದೂ ನಮಗೆ ತೋರಿದೆ. ಕೋಳಿವಾಡ ಗೌಡಕುಲದಲ್ಲಿ ಇಂದಿನ ವರೆಗೆ ನಡೆಮುಬಂದ ಮತಪರಂಪರೆ, ಅದರ ವಂಶಾವಳಿಯಲ್ಲಿ ಕುಮಾರವ್ಯಾಸನ ಅಣ್ಣತಮ್ಮಂದಿರಲ್ಲಿದ್ದ ಶಂಕರಸಯ್ಯ ಎಂಬ ಹೆಸರು, ಭೀಷ್ಮಪರ್ವದ ಭಗವದ್ಗೀತೆಯ ಕನ್ನಡ ಅನುವಾದವಲ್ಲಿ ಕಂಡುಬರುವ ಅದ್ವೈತಪರ ನಿರೂಪಣೆ ಇವು ಇದಕ್ಕೆ ಸ್ಪಷ್ಟಪ್ರಮಾಣಗಳಾಗಿವೆ. ಇತರ ಮತಗಳತ್ತ ಒಲವನ್ನು ತೋರಿಸುವ ಭಾಗಗಳನ್ನು ಕವಿಯ ಭಾಗವತಧರ್ಮದ ವಿಶಾಲ ಕ್ಷಿತಿಜದಲ್ಲಿ ಅಳವಡಿಸಬಹುದು ಇಲ್ಲವೆ ಪ್ರಕ್ಷಿಪ್ತವೆಂದು ಅಲ್ಲಗಳೆಯಬಹುದು. ಶ್ರೀ ಮಧ್ವಾಚಾರ್ಯರ 'ಭಾರತತಾತ್ಪರ್ಯನಿರ್ಣಯ'ವೆಂಬ ಗ್ರಂಥವನ್ನು ಅವನು ಓದಿಕೊಂಡು ಅದನ್ನು ಹಲವು ಕಡೆಗೆ ಅನುಸರಿಸಿರುವನೆಂದು ತೋರಿಸಲಾಗಿದೆ. ಅವನ ವಿಶಾಲಭೂಮಿಕೆಗೆ ಇದು ಸುಸಂಗತವಾದುದೆಂಬುದನ್ನು ಅರಿತಿರಬೇಕು. ಮತವಿಚಾರ-ಕ್ಕಿಂತ ಮುಖ್ಯವಾದದ್ದೆಂದರೆ ಕುಮಾರವ್ಯಾಸನ ಮನೋಧರ್ಮ ಮತ್ತು ವ್ಯಕ್ತಿತ್ವ. 'ಯೋಗೀಂದ್ರ' ಎಂದು ತಾನೇ ಹೇಳಿಕೊಂಡ ಮಾತ್ರದಿಂದಲ್ಲ, ಅವನ ಕೃತಿಯ ಉನ್ನತಿಯಿಂದಲೂ ಅವನು ಆರ್ಷದೃಷ್ಟಿಯನ್ನು ಪಡೆದ ಯೋಗಿ, ವೀರನಾರಾಯಣನ

ವೀರಭಕ್ತನಾದ ವರಕವಿಯೆಂಬುದು ತಿಳಿಯುತ್ತದೆ. ಅವನ ಮನಃಪ್ರಕೃತಿಯಲ್ಲಿ ವೀರಸಹಜ ರಾಜಸಗುಣದಿಂದ ಮಹಾಭಾರತದ ವೀರರೌದ್ರಾದಿರಸಗಳನ್ನು ಚಿತ್ರಿಸ ಅವನು ಸಹಜಸ್ಫುರಣವನ್ನು ಪಡೆದಂತೆ ದೇವಭಕ್ತಿ – ಸಮರ್ಪಣಭಾವಗಳಿ ನಮ್ರವಾದ ಸಾತ್ವಿಕಗುಣದ ಮೂಲಕ ಅವನು ಕೃಷ್ಣಭಕ್ತಿಯನ್ನು ಕೊಂಡಾಡು ಕುಣಿದಾಡಿದನು. ತೋರಲಿಕ್ಕೆ ವಿರುದ್ಧವೆನ್ನಬಹುದಾದ ವೀರ ಮತ್ತು ಭಕ್ತಿ ಅಂಶಗಳು ಅವನಲ್ಲಿ ಬೆರೆತುಕೊಂಡುವು. ಕುಮಾರವ್ಯಾಸನ ಮನೋಧರ್ಮ ಸಮನ್ವಯವಿದೆ, ಸಮರಸವಿದೆ ಎಂಬುದಕ್ಕೆ ಗ್ರಂಥದಲ್ಲಿ ಬೇಕಾದಷ್ಟು ಸಾಕ್ಷ್ಯಗಳಿ ಪೀಠಿಕೆಯ ಸಂಧಿಯಲ್ಲಿ ಭಕ್ತಿ–ವಿನಯಗಳನ್ನು ತೋರಿದಂತೆ ಆತ್ಮವಿಶ್ವಾಸವ ಮೆರೆದಿದ್ದಾನೆ. ಆದರೂ ಒಮ್ಮೊಮ್ಮೆ ಉತ್ಸಾಹದ ಅತಿರೇಕದಲ್ಲಿ ಇಲ್ಲವೆ ಮಾ ಮುರುಕದಲ್ಲಿ ಕುಮಾರವ್ಯಾಸನ ವ್ಯಕ್ತಿತ್ವದಲ್ಲಿ ವಿಸಂಗತಿ ತೋರಿದರೆ ಅಚ್ಚರಿಯಲ್ಲ.

ಕುಮಾರವ್ಯಾಸಭಾರತವು ಮಹಾಕವಿಯ ಮಹಾಕೃತಿ ಎಂಬುದೀಗ ಒಪ್ಪಿ ವಿಷಯವಾಗಿದೆ. ಆದರೂ ಈ ನಿರ್ಣಯಕ್ಕೆ ಬಂದುದೇಕೆ ಎಂಬುದನ್ನು ತಿಳಿದಿರಬೇಕ ‘ ವಿಶೇಷ ವ್ಯತ್ಯಾಸಗಳನ್ನು ಮಾಡಿಕೊಳ್ಳದೆ ವ್ಯಾಸಭಾರತವನ್ನು ನಿಷ್ಠೆಯಿಂದ ಅನ ವಾದಿಸಿದ ಈ ಕೃತಿಯಲ್ಲಿ ವಿಶೇಷವೇನಿದೆ ? ’ ಎಂಬ ಪ್ರಶ್ನೆಗೆ ಉತ್ತರಪಡೆಯಬೇಕ ಈ ಕೃತಿ ಕೊಡುವ ಶ್ರೇಷ್ಠ ರಸಾನುಭವವೇ ಉತ್ತರ ಎಂಬುದು ಸಾಲದು. ರಸಾನುಭವವನ್ನು ವಿಂಗಡಿಸಿ ನೋಡಿದರೆ, ಕನ್ನಡಭಾರತವು ವ್ಯಾಸಭಾರತವನ **ಕನ್ನಡಿಸಿದ** ಸಮಗ್ರರೀತಿಯಲ್ಲಿಯೇ ಅದರ ಹಿರಿಮೆ ಎದ್ದುಕಾಣುತ್ತದೆ. ತ ಜೀವನಸಾಧನೆ, ವಾಙ್ಮಯತಪಶ್ಚರ್ಯೆ ಇದರಿಂದ ತನ್ನ ಬೆಳೆದ ಮನಸ್ಸನ ತಿಳಿಯಾದ ಕನ್ನಡಿಯಂತಾಗಿಸಿ ಮಹಾಭಾರತದ ಇದಿರು ಹಿಡಿದು ಕುಮಾರವ್ಯಾಸ ಅದರ ಸಾರಚಿತ್ರವನ್ನು ಹೀರಿಕೊಂಡಿದ್ದಾನೆ, ಕನ್ನಡನುಡಿಯ ಸಾಜದೇಸಿಯ ಪಡಿನೆಳಲಾಗಿ ಅದನ್ನು ಮೂಡಿಸಿದ್ದಾನೆ. ಹೀಗೆ ವ್ಯಾಸಭಾರತವನ್ನು ಕುಮಾ ವ್ಯಾಸಭಾರತವು ಸಾರ್ಥಕವಾಗಿ ಕನ್ನಡಿಸಿರುತ್ತದೆ. ಮೂಲವನ್ನು ಗತಕಾಲ ಗವಿಯಿಂದೆತ್ತಿ ಪ್ರಾತಿಭಚಕ್ಷುವಿನ ಮುಂದೆ ತಂದುಕೊಂಡು ಕವಿಶಕ್ತಿಯ ಶ್ರೇಷ್ಠ ಸಾಧ ಗಳಿಂದ ಸಚೇತನಗೊಳಿಸಿದ್ದರಲ್ಲಿಯೇ ಈ ಕೃತಿಯ ಹೆಚ್ಚಳವಿದೆ. ಮೂಲದಲ್ಲಿ ಮಾರ್ಪಾಡುಗಳಿರಲಿ ಮೂಲದ ಅನುಸರಣವಿಲಿ, ಎಲ್ಲವೂ ಈ ಮೂಲ ಉದ್ದೇಶ ಸಹಕಾರಿಯಾಗಿದೆ. ಕೃತಿಯಲ್ಲಿ ಕೆಲವೆಡೆಗೆ ಬಂಧಶೈಥಿಲ್ಯವಿರಬಹುದು, ಜಾಬಾಳವಾ ಬೋಧನೆ ಬಂದಿರಬಹುದು, ಕಲಾದೃಷ್ಟಿಯಿಂದ ಸಾಮಾನ್ಯವೆನ್ನಬಹುದಾದ ಕಥನ ಇರಬಹುದು. ಆದರೆ ಒಟ್ಟಿನಲ್ಲಿ ತೋರಿದ ಉತ್ಕಟತೆ, ಜೀವಂತಿಕೆ, ಕಲ್ಪಕ ವಾಕ್‌ಸಹಜತೆ — ಎಲ್ಲಕ್ಕಿಂತ ಮಿಗಿಲಾಗಿ **ಅದ್ಭುತತಾದಾತ್ಮ್ಯ** — ಇವರಿ ಕುಮಾರವ್ಯಾಸಭಾರತವು ಕನ್ನಡದ ಮಹಾಕೃತಿಗಳಲ್ಲಿ ಒಂದಾಗಿದೆ. ‘ ನವ ಕವಿಗಳಲ್ಲಿ ಹಿರಿಯ ತಲೆ: ಹಿರಿಯರಲ್ಲಿ ಹಿರಿಯ—ನಮ್ಮ ಸಾಹಿತ್ಯದ ಉತ್ತಮ

ತ್ನಗಳಲ್ಲಿ ನಾಯಕರತ್ನ '[1] ಎಂದು ಶ್ರೀಯವರು ಹೇಳಿದ್ದರೆ, 'ಆ ವಾಙ್ಮಯದಲ್ಲಿ ಪ್ರಾಯಶಃ ಈ ಕೃತಿ ಒಂದೇ ಮಹಾಕಾವ್ಯದ ಮೆಟ್ಟಿಲನ್ನು ಮುಟ್ಟಿರತಕ್ಕ ಕೃತಿ '[2] ಎಂದು ಶ್ರೀನಿವಾಸರು ಹೇಳಿದ್ದಾರೆ. ಕನ್ನಡದಲ್ಲಿ ಬೇರೆ ಮಹಾಕಾವ್ಯಗಳಿವೆ ಎಂಬುದನ್ನು ಅಲ್ಲಗಳೆಯದೆ ಕುಮಾರವ್ಯಾಭಾರತವು ತನ್ನ ವಿಶಿಷ್ಟರೀತಿಯಲ್ಲಿ ಏಕಮೇವಾದ್ವಿತೀಯವಾದ ಮಹಾಕೃತಿಯೆಂದು ಹೇಳಲು ಅಭ್ಯಂತರವಿಲ್ಲ.

೨೪. ಇತರ ಭಾಗವತ ಕವಿಗಳು

ಕುಮಾರವ್ಯಾಸನ ತರುವಾಯ ಅವನಿಂದ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷವಾಗಿ ಪ್ರೇರಣೆಹೊಂದಿದ ವೈದಿಕಬ್ರಾಹ್ಮಣರಾದ ಭಾಗವತಕವಿಗಳ ಪರಂಪರೆಯೊಂದು ಈ ಯುಗದಲ್ಲಿ ಬೆಳೆದುಕೊಂಡು ಬಂದಿತು. ಕನ್ನಡದಲ್ಲಿ ಧಾರ್ಮಿಕ, ತಾತ್ವಿಕವಿಷಯಗಳನ್ನು ನೇರವಾಗಿಯೂ ಕಥಾರೂಪದಲ್ಲಿಯೂ ನಿರೂಪಿಸಬೇಕೆಂಬ ವಿಷಯದಲ್ಲಿ ಇವರೆಗಿನ ಮಿಾನಮೇಷ, ಅಸಡ್ಡೆಗಳು ಮಾಯವಾಗಿ ಬ್ರಾಹ್ಮಣಕವಿಗಳ ಶ್ರದ್ಧೆ ದೃಢತರವಾಯಿತು, ವಿಜಯನಗರಸಾಮ್ರಾಜ್ಯದ ಉದಯಕ್ಕೆ ಮೊದಲು ದಕ್ಷಿಣದಲ್ಲಿ ಹಿಂದೂಧರ್ಮ, ಅದರಲ್ಲಿಯೂ ವೈದಿಕಪರಂಪರೆ ಇದರ ಮೇಲೆ ಪರಕೀಯರಿಂದ ಆಘಾತಗಳುಂಟಾಗಲು ಸಂರಕ್ಷಕಶಕ್ತಿಯೊಂದು ವಿಜಯನಗರದಲ್ಲಿ ಕೇಂದ್ರಿತವಾಯಿತು, ಅದರ ಪ್ರಭಾವವು ಕುಮಾರವ್ಯಾಸನಿಂದ ಮೊದಲುಗೊಂಡ ಕನ್ನಡವೈದಿಕವಾಙ್ಮಯದಲ್ಲಿಯೂ ಕಂಡುಬಂದಿತು. ಮಹಾಭಾರತ, ಭಗವದ್ಗೀತೆ, ರಾಮಾಯಣ, ಭಾಗವತ, ಪುರಾಣಗಳು, ದರ್ಶನಗಳು, ಮತತ್ರಯಗಳು ಕನ್ನಡರೂಪತಾಳಿ ವೆಗ್ಗಳವಾದುದು ಈ ಯುಗದಲ್ಲಿಯೆ. 'ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ' ಎಂಬುದನ್ನು ಈ ಅರ್ಥದಲ್ಲಿಯೂ ನಾವಿಂದು ತಿಳಿದುಕೊಳ್ಳಬಹುದು.

ಕುಮಾರವಾಲ್ಮೀಕಿ

ಪಂಪನ ಪ್ರೇರಣೆಯಿಂದ ಮತ್ತು ಅವನ ವಿಷಯಕವಾದ ಹೆಮ್ಮೆಯಿಂದ ಅಭಿನವಪಂಪನಾದಂತೆ ಕುಮಾರವ್ಯಾಸನ ಪ್ರೇರಣೆಯಿಂದ ಕುಮಾರವಾಲ್ಮೀಕಿ ತಲೆದೋರಿದನು. ಪಂಪ–ಅಭಿನವಪಂಪ ಇವರು ಭಿನ್ನಗುಣರಾದಂತೆ ಕುಮಾರ-

1 ಬಿ. ಎಂ. ಶ್ರೀಕಂಠಯ್ಯ: ಕುಮಾರವ್ಯಾಸಪ್ರಶಸ್ತಿ, ಮುನ್ನುಡಿ, ಪು. xi.

2 ಮಾಸ್ತಿ ವೆಂಕಟೇಶ ಅಯ್ಯಂಗಾರ್: ಕುಮಾರವ್ಯಾಸ (ಕನ್ನಡಸಾಹಿತ್ಯಪರಿಷತ್‌ಪತ್ರಿಕೆ, ೨೬–೨, ಪು. ೧೩೩)

ವ್ಯಾಸ-ಕುಮಾರವಾಲ್ಮೀಕಿ ಇವರೂ ಭಿನ್ನರಾದರು. ಒಬ್ಬರು ಇನ್ನೊಬ್ಬರ ನೆಳಲಾ ಲಿಲ್ಲ, ಒಬ್ಬರ ಯೋಗ್ಯತೆ ಇನ್ನೊಬ್ಬರದಾಗಲಿಲ್ಲ. ಕುಮಾರವಾಲ್ಮೀಕಿ ತನ್ನ ಕಾ ವನ್ನು ಹೇಳಿಲ್ಲ, ಕಾಲಸೂಚಕವಾದ ನಿರ್ದಿಷ್ಟ ಅಂಶಗಳನ್ನೂ ಹೇಳಿಲ್ಲ. 'ಉ ಗಾಲಯುವ ಪೆಸರ್ವಡೆದನ' (೧-೧೭ ಮೋಹನತರಂಗಿಣಿ) ಮುಂತಾದ ಪದ್ಯದ ಕುಮಾರವ್ಯಾಸನೊಡನೆ ಅವನನ್ನು ಕನಕದಾಸನು ನೆನೆದಿದ್ದಾನೆ. ಅವನು ಸ್ವ ತನ್ನ ರಾಮಾಯಣದ ಕೊನೆಯಲ್ಲಿ ಕುಮಾರವ್ಯಾಸನನ್ನು ಹೊಗಳಿದ್ದಾನೆ. (ಯುದ್ ಕಾಂಡ, ೫೫-೬೬, ೬೭). ಇವರಿಬ್ಬರ ನಡುವಣ ಕಾಲವೆಂದರೆ ಸು. ೧೫೦೦ರಿಂ ೧೬೦೦ರೊಳಗೆ ಅವನು ಜೀವಿಸಿರಬೇಕೆಂದು ತೋರುತ್ತದೆ. ಕುಮಾರವ್ಯಾಸನ ಕಾಲ ಸು. ೧೫೦೦ ಎಂಬುದೇನು ಸರ್ವಸಂಮತವಾಗಿಲ್ಲ. ಆದ್ದರಿಂದ ೧೬ನೆಯ ಶ.ದೊ ಕುಮಾರವ್ಯಾಸನ ತರುವಾಯದಲ್ಲಿ ಕುಮಾರವಾಲ್ಮೀಕಿ ಇದ್ದನೆಂದು ಸದ್ಯಕ್ಕೆ ಹೇಳ ಎಲ್ಲರೂ ಒಪ್ಪುವಂತಿದೆ. ಅವನ ಚರಿತ್ರೆಯೇನೂ ತಿಳಿದಿಲ್ಲ. ವಿಜಾಪುರ ಬಳಿ ತೊರವೆಯಲ್ಲಿ ಅವನ ವಂಶದವರು ಇನ್ನೂ ಇದ್ದ ಕಾರಣ ಹೆಚ್ಚು ಸಂಶೋಧನೆ ನಡೆ ಚರಿತ್ರೆ ತಿಳಿಯಬಹುದಾಗಿದೆ. ಅವನು ತೊರವೆಯ ನರಸಿಂಹನ ಭಕ್ತನಾಗಿ ಸ್ಮಾರ್ತಭಾಗವತ ಕವಿಯೆಂದು ಸದ್ಯಕ್ಕೆ ಗ್ರಹಿಸಬಹುದು. ಅವನು 'ತೊರವೆ ರಾಮಾಯಣ', 'ಐರಾವಣನ ಕಾಳಗ' ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾ 'ತೊರವೆಯ ರಾಮಾಯಣ'ವೇ ಐದುಸಾವಿರದ ಮೇಲಿನ ಭಾಮಿನೀಷಟ್ಪದಿ ಪದ್ಯಗಳುಳ್ಳ ದೊಡ್ಡ ಗ್ರಂಥ, ವಾಲ್ಮೀಕಿರಾಮಾಯಣದ ಎಲ್ಲ ಕಾಂಡಗಳ ಮೊದಲನೆಯ ಸಲ ಅನುವಾದಿಸಿದ ಕನ್ನಡಕಾವ್ಯ. 'ರಘುವರ ಕಥಾವಿಮಲೋ ಧೀಂದು ಮಹಾಮುನಿಪ್ರಾಚೇತಸಂ ವಂದೇ' (೧-೧೦) ಎಂದು ವಾಲ್ಮೀಕಿಯ ವಂದಿಸಿ ಕುಮಾರವಾಲ್ಮೀಕಿ ಅವನ ರಾಮಾಯಣವನ್ನು ಕನ್ನಡಿಸಲು ಪ್ರವೃತ್ತನಾ ದ್ದಾನೆ. ಒಟ್ಟಿನಲ್ಲಿ 'ತೊರವೆಯ ರಾಮಾಯಣ'ವು ವಾಲ್ಮೀಕಿರಾಮಾಯ ಸಂಗ್ರಹವೇ ಆಗಿದ್ದರೂ ರಾಮನನ್ನು ವಿಷ್ಣುವಿನ ಅವತಾರವೆಂದು ಭಕ್ತಿಪರವ ನೋಡುವ ಭಾಗವತದೃಷ್ಟಿಯ ಪ್ರಭಾವವು ಅದರಲ್ಲಿ ನಿಚ್ಚಳವಾಗಿದೆ. ರಾಮನಾ ಮಹತ್ವ ಹೇಳಿ, ರಾಮಾಯಣವನ್ನು ಪಾರ್ವತಿಗೆ ಶಿವನು ಹೇಳಿದನೆಂಬ ಪೀಠಿ ಭಾಗವು ಇದನ್ನು ಸೂಚಿಸುತ್ತದೆ. ಕಥಾನಕದಲ್ಲಿ ಅದ್ಭುತರಾಮಾಯಣದ ವರ್ಚಸ್ಸ ಕೆಲವರು ಊಹಿಸುತ್ತಾರೆ. ನೇರವಾದ ಕಥನಗತಿಯ ಮೂಲಕ ಸಂಕ್ಷೇಪದಲ್ಲಿ ಕವಿಗೆ ಹೆಚ್ಚು ಆಸಕ್ತಿ. ಆದರೂ ತನಗೆ ತೋರಿದಾಗ ಮಹತ್ವದ ಸಂದರ್ಭಗಳ ಅವನು ವಿಸ್ತರಿಸುತ್ತಾನೆ. ಅರ್ಧಕ್ಕಿಂತ ಹೆಚ್ಚು ಭಾಗವನ್ನು ಯುದ್ಧಕಾಂಡ ಆಕ್ರಮಿಸಿಕೊಂಡಿದೆ ಎಂಬುದನ್ನು ಗಮನಿಸಬೇಕು. ಮೂಲಕಥೆಯ ಅನುವಾದ ಕೆಲವು ವ್ಯತ್ಯಾಸಗಳನ್ನು ಮಾಡಲಾಗಿದೆ. ಅವು ಸಾಮಾನ್ಯವಾಗಿ ಕಥೆಯ ಸ್ವಾರ ವನ್ನು ಹೆಚ್ಚಿಸಲು ಬರೆವಣಿಗೆಯ ಭರದಲ್ಲಿ ಆದುವು, ಅಷ್ಟೇನೂ ಕಣ್ಣು ಕೋರೈ ವಂಥವಲ್ಲ. ಮಂಥರೆ ಜ್ಞಾತಿದಾಸಿಯಾಗಿರದೆ ಮಾಯೆಯ ಅವತಾರವಾಗಿದ್ದಾ

ರಾಜ್ಯಾಭಿಷೇಕದ ದಿನ ತನ್ನ ಬಳಿಗೆ ಬಂದ ಮುನಿವಸಿಷ್ಠನಿಗೆ ರಾಮನು ಹೇಳಿದನಂತೆ: ಕಂಡೆನಿದೊಂದು ಕನಸನು ಕಾನನದೊಳರವಿಂದಮುಖಿಸಹಿತೆಮಗೆ ಸಂಭವಿಸಿತು ರಿಭ್ರಮಣ' (ಅಯೋಧ್ಯಾಕಾಂಡ, ೨-೧೫). ಮುನಿವೇಷದಲ್ಲಿ ರಾವಣನು ಬರಲು ೀತೆ 'ನಮ್ಮಯ ಜನಕ ಬಂದವೊಲಾಯಿತೆಂದಳು ಮುಗಿದು ಕರಯುಗವ' (ಅರಣ್ಯ-ಾಂಡ, ೯-೨೪). ಮುಂದೆ 'ಮಾರೀಚನೆಂಬಗ್ಗಳದ ಮಾಯಾಮೃಗದಲಳಿದನು ಾಮನೆಂಬ ನೃಪ' (೯-೩೩) ಎಂದು ರಾವಣ ಸುಳ್ಳಾಡುತ್ತಾನೆ. ಹೀಗೆ ಇನ್ನೂ ಲವನ್ನು ಗುರುತಿಸಬಹುದು. ಪಾತ್ರದೃಷ್ಟಿಯಿಂದ ರಾವಣನಲ್ಲಿ ಒಳ್ಳೆಯತನದ ಂಶಗಳನ್ನು ತೋರಿಸುವ ಪ್ರಯತ್ನವು ಕಾಣುತ್ತದೆ. ಅವನು ಯುದ್ಧಕ್ಕೆ ಹೊರಡುವ ುಂಚೆ ತನ್ನ ಸಂಪತ್ತಿಯನ್ನೆಲ್ಲ ಬಡಬಗ್ಗರಿಗೆ ದಾನಮಾಡಿ, ಸೆರೆಯಲ್ಲಿದ್ದವರ ಿಡುಗಡೆಮಾಡಿ, ತಾನು ಅಳಿದರೆ ನಂಬಿಗೆಗೇಡಾದ ವಿಭೀಷಣನನ್ನು ಪತಿಕರಿಸ-ೀಕೆಂದು ನೇಮಿಸಿದನಂತೆ. ರಣಪರಾಜಿತನಾಗಿರುವ ಕ್ಷಣದಲ್ಲಿ ಅವನಿಗೆ ಪಶ್ಚಾತ್ತಾಪ-ಾಗಿದೆ: 'ಮಾಣದಾದೆನು ಮಾವನಾಡಿದ ವಾಣಿಯಲಿ ಕಾಮುಕವಿಕಾರದಿ ಕಾಣ-ಾದೆನು ಕಲಿವಿಭೀಷಣನುಚಿತಭಾಷಣವ' (ಯುದ್ಧಕಾಂಡ, ೪೮-೨) ಎಂದು ುರುಗಿ ಇನ್ನೇನು ಉಪಾಯವೆಂದು ಅವನು ಸ್ವಲ್ಪಹೊತ್ತು ಹೊಯ್ದಾಡುತ್ತಾನೆ. ಾದರೆ ಅವನ ಮೂಲಪ್ರಕೃತಿ ಅವನನ್ನು ಬಿಡುವುದಿಲ್ಲ. ಅವನು ಮಹಾನುಭಾವ ಂಬ ವಿಶೇಷಣಕ್ಕೆ ಯೋಗ್ಯನಲ್ಲ. ನಾಗಚಂದ್ರನ ರಾವಣಚಿತ್ರದ ಪರಿಣಾಮ ಿ ನಿರೂಪಣೆಯ ಮೇಲೆ ಆಗಿರಬಹುದೆಂಬ ಅನುಮಾನ ಅಷ್ಟು ಸರಿಯಲ್ಲ. ಕವಿಗೇ ಿ ಸಂದರ್ಭದಲ್ಲಿ ತೋರಿದ ಅಂಶವಿರಬೇಕು. ಇಬ್ಬರ ಪಾತ್ರಕಲ್ಪನೆ, ಕಥನಪರಂಪರೆ ೇರೆಯೆ ಆಗಿವೆ.

ವಾಲ್ಮೀಕಿರಾಮಾಯಣವನ್ನು ಕನ್ನಡಿಸುವಲ್ಲಿ ಕುಮಾರವಾಲ್ಮೀಕಿ ಭಕ್ತಿ-ಯನ್ನೂ ನಿಷ್ಠೆಯನ್ನೂ ತೋರಿದಷ್ಟು ಕವಿತಾಶಕ್ತಿಯನ್ನು ತೋರಿಲ್ಲ. ಜೀವಾಳದ ಂದರ್ಭಗಳಲ್ಲಿ ಅವನು ಚಿತ್ರಗಳನ್ನು ಸರಿಯಾಗಿ ಬಿಡಿಸುತ್ತಾನೆ, ಪಾತ್ರಗಳ ುನೋಧರ್ಮವನ್ನು ಹೊರಪಡಿಸುತ್ತಾನೆ. ಕಥನಶೈಲಿಯಲ್ಲಿ ಓಟವಿದೆ, ಮಾಟವಿದೆ. ಾದರೆ ಬರೆವಣಿಗೆ ಉಜ್ವಲವಾಗಿ ಏರೇರುತ್ತ ಹೋಗುವುದಿಲ್ಲ. ಬಹುವಾಗಿ ಮಧ್ಯಮ-ಸ್ತಕದಲ್ಲಿ ನಡೆದಿರುವ ಸಾಂಪ್ರದಾಯಿಕಗಾಯನದಂತೆ ಅದು ತೋರುತ್ತದೆ. ಅವನ ೇಗ ಕೆಲವು ಸಲ ರಸಭಂಗಕ್ಕೆ ಕಾರಣವಾಗುತ್ತದೆ. ತನ್ನ ವರಗಳೆರಡನ್ನು ಕೈಕೇಯಿ ಿವರಿಸಿ ಹೇಳಿದೊಡನೆ 'ವನಿತೆಯುತ್ತರದಲಗು ನಾಟಿತು ಜನಪನುರವನು' ಅಯೋಧ್ಯಾಕಾಂಡ, ೨-೮) ಎಂದು ಮುಂತಾಗಿ ಒಂದೇ ಪದ್ಯದಲ್ಲಿ ವರ್ಣಿಸಿ ುಂದಿನದರಲ್ಲಿ ರಾತ್ರಿ ಕಳೆದು ಬೆಳಗಾಯಿತೆಂಬುದನ್ನು ಕವಿ ಹೇಳಲು ಧಾವಿಸಿದ್ದಾನೆ. ಅದೂ ಹೇಗೆ? ರಾವಣನ ವಧೆಗಾಗಿ ರಾಮ ತೊಡಗುವನೆಂದು ಶಚಿ 'ಪೊಂದಳಿಗೆಯ ಿವಾಳಿಯ ಧರಿಸಿದಳೊ' ಎಂಬಂತೆ ಸೂರ್ಯಬಿಂಬ ತೋರಿತಂತೆ. ಕಲ್ಪನೆ ತನ್ನಷ್ಟಕ್ಕೆ ಚೆನ್ನಾಗಿದ್ದರೂ ಕರುಣಸಂದರ್ಭದಲ್ಲಿ ಅದು ಹೊಂದಿಕೊಳ್ಳುವುದಿಲ್ಲ. ಶೋಕಮೂಢನಾದ

ದಶರಥನ ಹತ್ತಿರ ರಾಮು ಬರಲು ಅವನ ಮಾತನ್ನು ಕೇಳಿದೊಡನೆ 'ರಾಮನೇ ಬಂದಾತ ಜಗದಭಿರಾಮನೇ ನುಡಿವಾತ ಮಂಗಳನಾಮನೇ' (೨-೩೧) ಮುಂತಾದ ದಶರಥನ ಉದ್ರೇಕವೂ ಮುಂದಣ ವಿಲಾಪವೂ ಸಹಜರಮ್ಯವಾಗಿವೆ. ಇಲ್ಲಿ ಸಂಕ್ಷೇಪದ ಬದಲು ಸಮುಚಿತವಿಸ್ತಾರವು ಬಂದು ಸಂದರ್ಭಕ್ಕೆ ಕಳೆಕಟ್ಟಿದೆ. 'ಪರಮಹರುಷದ್ರುಮದ ಬೇರಿಂಗೆ ಉರಿಯನುರೆ ಚಾಚಿದೆವಲಾ' (೨-೩೭) ಎಂಬ ದಶರಥನ ಕೂಗು ಕರುಳನ್ನು ಹಿಂಡುತ್ತದೆ. ಸೀತಾಹರಣದ ಸಂದರ್ಭದಲ್ಲಿಯೂ ತಕ್ಕಮಟ್ಟಿಗೆ ವಿಸ್ತಾರವಿದ್ದರೂ ಅಲ್ಲಿ ಮುನಿವೇಷದ ರಾವಣನ ಮೋಸಗಾರಿಕೆಯನ್ನು ಬಣ್ಣಿಸುವಲ್ಲಿ ಕಲೆಯನ್ನು ವ್ಯಯಿಸಲಾಗಿದೆ. ಸೀತೆಯನ್ನು ತನ್ನ ಐಶ್ವರ್ಯ-ಅಧಿಕಾರಗಳ ಮೋಹಿನಿಯಿಂದ ವಶಗೊಳಿಸಿಕೊಳ್ಳಬೇಕೆಂದು ಅವನಾಡಿದ ಪಂಟು-ನುಡಿಗಳು ಅಂಥ ಕಲೆಯ ಎತ್ತರಕ್ಕೆ ಹೋಗುವುದಿಲ್ಲ. ಇಲ್ಲಿ ಪಂಪರಾಮಾಯಣಕ್ಕೆ ಹೋಲಿಸಿ ನೋಡಬಹುದು. ಸೀತೆ ಮೊದಲು ಮೋಸಹೋಗಿ ಮಧುರವಚನಗಳಿಂದ ಉಪಚರಿಸಿ ಆಮೇಲೆ ರೋಷದಿಂದ ಕೊಂಚ ಬಯ್ದಾಡಿದಳೆಂದು ಮಾತ್ರ ಇಲ್ಲಿದೆ. ಇನ್ನೂ ಹೆಚ್ಚಾದ ಪಾತ್ರನಿರೂಪಣೆ ಅಪೇಕ್ಷ್ಯವಾಗಿತ್ತು. ಒಟ್ಟಿನಲ್ಲಿ ಕುಮಾರ-ವಾಲ್ಮೀಕಿಯ ಯೋಗ್ಯತೆ ಮಧ್ಯಮಪ್ರತಿಯದಾದ ಕಾರಣ ಅವನ ಕಥನಕಲೆಯಲ್ಲಿ ಮಧ್ಯಮಗುಣ ತೋರಿದೆ. ಕುಮಾರವ್ಯಾಸನಂತೆ ಭಾರತೀಯಪರಂಪರೆಯಲ್ಲಿ ಪರಮಪೂಜ್ಯವಾದ ಗ್ರಂಥವನ್ನು ಕುಮಾರವಾಲ್ಮೀಕಿ ಅನುವಾದಕ್ಕೆಂದು ಆರಿಸಿದನು, ಅವನ ಹಾಗೇ ಭಾಗವತದೃಷ್ಟಿಯನ್ನು ಬೆಳೆಸಿಕೊಂಡನು, ಆದರೆ ಅವನ ಅಸಾಧಾರಣ-ಪ್ರತಿಭೆಯಿಲ್ಲದ ಕಾರಣ ಮಹಾಕೃತಿಯನ್ನು ನಿರ್ಮಿಸಲಿಲ್ಲ.

'ಸರಸವರ್ಣಕಕವಿಗಳೊಳು ಭಾ- |
ಸುರ ಕುಮಾರವ್ಯಾಸನೊಬ್ಬನು |
ಪರಿಕಿಪೊಡೆ ತಾನೊಬ್ಬ ಮಗುಳೆರಡನೆಯ ವರ್ಣಕಗೆ ||
ವರಕುಮಾರವ್ಯಾಸನೊಬ್ಬನು- |
ಯೆರಡನೆಯ ತಾನೊಬ್ಬ ಮಿಕ್ಕಿನ |
ಬರಡುಕವಿಗಳ ಲೆಕ್ಕಿಸುವನೆ ಕುಮಾರವಾಲ್ಮೀಕಿ ||'

(ಯುದ್ಧಕಾಂಡ, ೫೫-೬೬)

ಎಂಬ ಅವನ ಶ್ಲಾಘನೆ ಅರ್ಧಸತ್ಯವಾಗಿದೆ, ಅವನ ಮಟ್ಟಿಗೆ ಹುಸಿಹೆಮ್ಮೆಯ ನುಡಿ-ಯಾಗಿದೆ.

ಕುಮಾರವಾಲ್ಮೀಕಿಯ ಭಾಷೆ ಮತ್ತು ಭಾಮಿನೀಷಟ್ಪದಿಯ ನಡೆ ಇವುಗಳಲ್ಲಿ ಕಥನಕ್ಕಿಂತ ಮಿಗಿಲಾದ ಶಕ್ತಿಯಿದೆ, ಆಕರ್ಷಣೆಯಿದೆ. ಇಲ್ಲಿ ಕುಮಾರವ್ಯಾಸನ ಪ್ರಭಾವವೂ ಸುಸ್ಪಷ್ಟವಾಗಿದೆ, ಅವನ ಅನೇಕ ದೇಶ್ಯ-ಅನ್ಯದೇಶ್ಯಗಳನ್ನು ಕವಿ ಎತ್ತಿ-ಕೊಂಡಿದ್ದಾನೆ. ಆದರೂ 'ಪರರ ಬಗೆ ಪರರುಕ್ತಿ....ತಿರುಗಿ ನೋಡದ ಬಿರುದು ಬೇರೆ

ಕುಮಾರವಾಲ್ಮೀಕಿಯ ವಚೋಲಹರಿ' ಎಂಬುದು ಕುಮಾರವ್ಯಾಸನ 'ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ' ಎಂಬುದರ ಅನುಕರಣವಾಗಿದ್ದು ಪದ್ಯರೂಪದಲ್ಲಿಯೇ ತನ್ನ ಅಸತ್ಯವನ್ನು ಸಾರಿದೆ! ಕುಮಾರವ್ಯಾಸನಲ್ಲದೆ ಕಾಲಿದಾಸನಿಂದಲೂ ಅವನು ಕಲ್ಪನೆ–ಶೈಲಿಗಳಲ್ಲಿ ಪ್ರಭಾವಿತನಾಗಿದ್ದಾನೆ. ಪರರಿಂದ ಏನನ್ನೂ ಕೊಂಡಿಲ್ಲವೆಂಬ ಅಗ್ಗಳಿಕೆ ಶ್ರೇಷ್ಠಪ್ರತಿಭೆಯ ಕುಮಾರವ್ಯಾಸನ ವಿಷಯದಲ್ಲಿಯೆ ಸಟೆಯಾಗಿರುವಾಗ ಕುಮಾರವಾಲ್ಮೀಕಿಯಲ್ಲಿ ಸಟೆಯಾದರೆ ಆಶ್ಚರ್ಯವೇನು?

ಕುಮಾರವ್ಯಾಸನಿಂದ ಸ್ಫೂರ್ತಿಪಡೆದು ಅವನ ಗ್ರಂಥವನ್ನೆ ಪೂರ್ತಿಗೊಳಿಸಿದವನು ತಿಮ್ಮಣ್ಣಕವಿ. ಕೃಷ್ಣದೇವರಾಯನ ಓಲಗದಲ್ಲಿದ್ದು ಅವನಿಂದ ಸಂಮಾನಿತನಾಗಿ ಉತ್ತರಭಾರತದ ಏಳು ಪರ್ವಗಳನ್ನು ಅವನು ಕನ್ನಡಕ್ಕೆ ತಂದನು. 'ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ, ಭಾರತದ ಉಳಿದ ಪರ್ವಗಳ ನೀ **ಸಕಲಜನ ಮೆಚ್ಚುವಂತೆ** ಹೇಳು; ಸುರನದಿಯ ಯಮುನಾತರಂಗಿಣಿ ಬೆರಸಿ ಹರಿವಂದದಲಿ ಕವಿಕುಂಜರ ಕುಮಾರವ್ಯಾಸ**ನುರುವಾಗ್ಲಹರಿ**ಯೊಡನೀಗ ಸರಿಯೆನಿಸಿ ನೀ ಕೂಡಿಸೈ' ಎಂದು ಕೃಷ್ಣರಾಯನು ಆಜ್ಞಾಪಿಸಲು, ಹಸಾದವೆಂದು ಅವನ ಅಂಕಿತದಲ್ಲಿ ತಾನು ಬರೆದುದಾಗಿ ತಿಮ್ಮಣ್ಣ ಹೇಳಿದ್ದಾನೆ. ಗ್ರಂಥಕ್ಕೆ ಅಂತೇ 'ಕೃಷ್ಣರಾಯಭಾರತ' ಎಂಬ ಹೆಸರು ಕೊಟ್ಟಿದ್ದಾನೆ. ಕೃಷ್ಣರಾಯನು 'ಕನ್ನಡರಾಜ್ಯರಮಾರಮಣ'ನಾಗಿದ್ದರೂ ತೆಲುಗು ಗ್ರಂಥಕಾರನೂ ತೆಲುಗು ಕವಿಗಳಿಗೆ ಆಶ್ರಯದಾತನೂ ಆಗಿದ್ದನು. ಅವನ ಕಾಲದಲ್ಲಿ ಕನ್ನಡ–ತೆಲುಗು ಸಾಹಿತ್ಯಗಳು ಮೇಲಾದ ಅನ್ಯೋನ್ಯಪ್ರಭಾವವನ್ನು ಪಡೆದುವು. ತಿಮ್ಮಣ್ಣನ ಭಾರತದಲ್ಲಿ ತೆಲುಗಿನ 'ಕವಿಬ್ರಹ್ಮ'ನಾದ ತಿಕ್ಕಣ್ಣನ ವರ್ಚಸ್ಸು ತೋರಿಬರುತ್ತದೆ. ತಿಕ್ಕಣ್ಣನು ೧೩ನೆಯ ಶ.ದಲ್ಲಿದ್ದು ವಿರಾಟಪರ್ವದಿಂದ ಮುಂದಿನ ಪರ್ವಗಳನ್ನು ತೆಲುಗಿಸಿದ್ದಾನೆಂದು ಹೇಳುತ್ತಾರೆ. ತಿಮ್ಮಣ್ಣನು ಸಂಸ್ಕೃತ, ತೆಲುಗುಭಾರತಗಳ ಪ್ರಭಾವಕ್ಕೆ ಒಳಪಟ್ಟು ತಕ್ಕಮಟ್ಟಿಗೆ ಅನುವಾದಕಾರ್ಯದಲ್ಲಿ ಯಶಸ್ವಿಯಾಗಿದ್ದಾನೆ. ಅವನ ಬರೆವಣಿಗೆಯಲ್ಲಿ ಪ್ರಸನ್ನತೆಯಿದೆ, ಓಘವಿದೆ. ಕಲ್ಪನೆ ಚಮತ್ಕೃತಿಯ ಚದುರನ್ನು ತೋರುತ್ತದೆ. ಆದರೂ 'ಕರ್ಣಾಟಕಕವಿಕುಲಸಾರ್ವಭೌಮ' ಎಂಬ ಬಿರುದು ಯಥಾರ್ಥವಾಗಿಲ್ಲ. 'ಕವಿಕುಂಜರ ಕುಮಾರವ್ಯಾಸ'ನ 'ಉರುವಾಗ್ಲಹರಿ'ಯೊಡನೆ ಅದು ಸರಿಯಾಗಿಲ್ಲ. ಗಂಗೆಯಲ್ಲಿ ಯಮುನೆಯ ಪ್ರವಾಹ ಸೇರಿದರೂ ತನ್ನ ಬೇರೆ ಬಣ್ಣದಿಂದ ಹರಿಯುವಂತೆ ಕುಮಾರವ್ಯಾಸನೊಡನೆ ತಿಮ್ಮಣ್ಣನ ಪ್ರತಿಭೆ ಪ್ರತ್ಯೇಕವಾಗಿ ಸಾಗಿದೆ. ಗಂಗೆಯ ತೀವ್ರ ರಭಸ, ಧವಳಕಾಂತಿ, ಉತ್ಕಟರುಚಿ ಯಮುನೆಯಲ್ಲಿ ಹೇಗೆ ತೋರೀತು?

ಸುಮಾರು ಇದೇ ಕಾಲದಲ್ಲಿ ಭಾರತದ ಮತ್ತೆ ಬೇರೆ ಅನುವಾದ ಮತ್ತು ಭಾಗವತದ ಮೊದಲನೆಯ ಪದ್ಯರೂಪ ಅನುವಾದ ಇವು ಕನ್ನಡಕ್ಕೆ ದೊರೆತುವು. 'ಚಾಟುವಿಠ್ಠಲನಾಥ'ನೆಂಬ ಕವಿ ಇದನ್ನು ರಚಿಸಿದನೆಂದು ಕವಿಚರಿತಕಾರರು

ಹೇಳಿದ್ದಾರೆ. ಭಾರತ ಹಾಗೂ ಭಾಗವತ ಇವೆರಡೂ ಗ್ರಂಥಗಳ ಕರ್ತೃತ್ವವು ಚರ್ಚಾಸ್ಪದವಾಗಿದೆ. ಒಬ್ಬನೇ ಕವಿ ಭಾಗವತವನ್ನು ಕನ್ನಡಿಸಿಲ್ಲವೆಂದೂ ಆರಾಧ್ಯೇಂದ್ರ ಅಥವಾ ನಿತ್ಯಾತ್ಮನಾಥ, ವಿದ್ಯಾಯೋಗಿ ಅಥವಾ ವಿದ್ಯಾನಾಥ, ಸದಾನಂದಯೋಗಿ, ನಿರ್ವಾಣನಾಥ ಮತ್ತು ಚಾಟುವಿಠ್ಠಲನಾಥ ಎಂದು ಐವರು ಅದರ ಬೇರೆಬೇರೆ ಭಾಗಗಳ ಅನುವಾದಕರೆಂದೂ ಶ್ರೀ. ಬೆಟಗೇರಿ ಕೃಷ್ಣಶರ್ಮರು ಅಭಿಪ್ರಾಯಪಟ್ಟಿದ್ದಾರೆ.[1] ಭಾಗವತ ಹತ್ತು ಸ್ಕಂಧಗಳನ್ನು ಆರಾಧ್ಯೇಂದ್ರ ಬರೆದನೆಂದೂ ೧೧ನೆಯ ಸ್ಕಂಧವನ್ನು ಸದಾನಂದಯೋಗಿ ಬರೆದನೆಂದೂ ೧೨ನೆಯ ಸ್ಕಂಧವನ್ನು ನಿರ್ವಾಣನಾಥ ಬರೆದನೆಂದೂ ತಿಳಿಯಲು ಆಧಾರವಿದೆ. ಇವರೆಲ್ಲರ ಕೃತಿಗಳನ್ನು ಒಟ್ಟುಗೂಡಿಸಿ ಸಂಗ್ರಹಗೊಳಿಸಿದ ಶ್ರೇಯಸ್ಸು ಮಾತ್ರ ಚಾಟುವಿಠ್ಠಲನಾಥನಿಗೆ ಸಲ್ಲುತ್ತದೆ. ಇವರೆಲ್ಲರೂ ಸಂನ್ಯಾಸಿಗಳಾಗಿದ್ದು ಉತ್ತರ ಭಾರತದಲ್ಲಿ ಪ್ರಚಾರದಲ್ಲಿದ್ದ 'ನವನಾಥಪಂಥ'ದವರಿರಬೇಕೆಂದು ಶ್ರೀ. ಬೆಟಗೇರಿಯವರು ಊಹಿಸಿದ್ದಾರೆ. ಇದೇ ಕಾಲದಲ್ಲಿದ್ದ ಮಹಾರಾಷ್ಟ್ರೀಯ ಸಂತಕವಿ 'ಏಕನಾಥ'ನು ಮರಾಠಿಯಲ್ಲಿ ಭಾಗವತವನ್ನು ರಚಿಸಿದನೆಂಬುದನ್ನು ನೆನೆಯಬೇಕು. ಬಹುಕರ್ತೃಕವಾಗಿರಬಹುದಾದ ಕನ್ನಡಭಾಗವತವು ಭಾಮಿನೀಷಟ್ಪದಿಯ ೧೨ ಸಾವಿರಕ್ಕೆ ಮಿಕ್ಕಿದ ಪದ್ಯಗಳಲ್ಲಿ ೨೮೦ ಸಂಧಿಗಳಲ್ಲಿ ಬರೆಯಲಾಗಿದೆ. 'ಹರಿಗುಣಸ್ತುತಿ, ಹರಿಪದಾಂಬುಜ ಶರಣಜನಸಂಕೀರ್ತನೆಸ್ತುತಿ, ಹರಿಪದಾನತಭಕ್ತಿ ತತ್ಸಾಧನದ ವಿಸ್ತಾರ' ಮುಂತಾಗಿ ಅದರಲ್ಲಿ 'ಸಂಗ್ರಹವಾಗಿ' ಬಂದಿರುವುದು. ಹೀಗೆ ಭಾಗವತಸಂಪ್ರದಾಯಿಗಳಾದ ಕನ್ನಡಿಗರಿಗೆ ಹರಿಭಕ್ತಿಕೋಶವೊಂದು ದೊರಕಿತು. ಕೃಷ್ಣಕಥೆಯ, ಭಕ್ತಿಯ ಹಾಗೂ ತತ್ವದ ನಿರೂಪಣೆಯನ್ನು ಮೂಲಾನುಸಾರಿಯಾಗಿ ಮಾಡಿರುವುದರಲ್ಲಿ ಇದರ ಸಾಜಸೊಬಗಿದೆ, ದೇಸಿಯ ಕಸುವಿದೆ. ಎರಡನೆಯ ಗ್ರಂಥ ಭಾರತದ ಆದಿಪರ್ವಕ್ಕೆ ಸೇರಿದ ಪೌಲೋಮ, ಆಸ್ತಿಕ ಎಂಬ ಪರ್ವಗಳ ಕನ್ನಡ ಅನುವಾದವಾಗಿದೆ. ಇದರಲ್ಲಿ 'ನಿತ್ಯಾತ್ಮನಾರಾಯಣ' ಎಂಬ ಅಂಕಿತವು ಸಂಧಿಯ ಕೊನೆಗಳಲ್ಲಿ ಬರುತ್ತದೆ. ಚಾಟುವಿಠ್ಠಲನ ಉಲ್ಲೇಖವಿಲ್ಲ. ನಿತ್ಯಾತ್ಮನು ಆರಾಧ್ಯೇಂದ್ರ ಎಂಬ ಬೇರೆ ಕವಿಯಾಗಿದ್ದುದೇ ನಿಜವಾದರೆ ಇದರ ಕರ್ತೃತ್ವವೂ ಚಾಟುವಿಠ್ಠಲನಿಗೆ ದೊರೆಯುವುದಿಲ್ಲ. ಇದರಲ್ಲಿ ಸರಳಕಥನವಿದೆ. ಕುಮಾರವ್ಯಾಸನ ಪ್ರಭಾವವಿದ್ದರೂ, ಅವನ ಪ್ರತಿಭೆ ಕಿಂಚಿತ್ತಾದರೂ ಕಾಣದು. ಸಾಂಪ್ರದಾಯಿಕ ವ್ಯಾಕರಣಕ್ಕೆ ಸಂಮತವಲ್ಲದ ಅಶುದ್ಧದೇಸಿ ಇದರಲ್ಲಿ ಹಣೆಯಿಕ್ಕಿದೆ.

1 ಬೆಟಗೇರಿ ಕೃಷ್ಣಶರ್ಮ: ಕನ್ನಡಭಾಗವತದ ಕವಿ ಯಾರು? (ಕ.ಸಾ.ಪ., ಸಂ. ೧೨-೪)

ಲಕ್ಷ್ಮೀಶ

ಕುಮಾರವ್ಯಾಸನು ಪೂರ್ವಭಾರತವೆನ್ನಬಹುದಾದ ಹತ್ತು ಪರ್ವಗಳನ್ನು ಕನ್ನಡಿಸಿದನು, ತಿಮ್ಮಣ್ಣಕವಿ ಉತ್ತರಭಾರತವನ್ನು ಅನುವಾದಿಸಿದನು, ಉತ್ತರೋತ್ತರ-ಭಾರತವೆನ್ನಬಹುದಾದ 'ಜೈಮಿನಿಭಾರತ'ವನ್ನು ಲಕ್ಷ್ಮೀಶನು ಕನ್ನಡಕ್ಕೆ ಒದವಿ-ಸಿದನು. ಲಕ್ಷ್ಮೀಶನ ಕಾಲವಿಚಾರವನ್ನು ಹಿಂದೆ ಪ್ರಸ್ತಾಪಿಸಿದೆ, ಅವನು ೧೬ನೆಯ ಶ.ದ ಉತ್ತರಾರ್ಧಕ್ಕಿಂತ ಮುಂಚಿನವನೆಂದು ತೋರಿಸಲಾಗಿದೆ. ಅವನ ಸ್ಥಳ ದೇವನೂರೋ ಸುರಪುರವೋ ಎಂಬುದರ ಚರ್ಚೆ ಬೆಳೆದಿದೆ. ದೇವನೂರೇ ಇರಬೇಕೆಂದು ಸಿದ್ಧ-ಮಾಡಲು ಕೊಟ್ಟಿರುವ ಎಲ್ಲ ಪ್ರಮಾಣಗಳನ್ನು ಅಂಗೀಕರಿಸುವುದು ಸಾಧ್ಯವಿಲ್ಲವಾದರೂ ಸುರಪುರಪಕ್ಷಕ್ಕಿಂತ ಅವು ನಂಬತಕ್ಕುವೆಂದು ತೋರುತ್ತದೆ. ಲಕ್ಷ್ಮೀಶನ ಹೆಸರಿನ ಸುತ್ತು ಸಟೆ-ದಿಟ ಬೆರೆತ ಒಂದು ಪರಿವೇಷ ದೇವನೂರಿನಲ್ಲಿರುವುದೇ ಅವನು ಆ ಊರವನಿರಬಹುದೆಂಬುದಕ್ಕೆ ಸಾಕ್ಷಿಯಾಗಿದೆ. ಅವನ ಮತವಿಷಯವೂ ವಿಸ್ತಾರವಾದ ಚರ್ಚೆಗೆ ಒಳಗಾಗಿದೆ. ಅವನು ಕುಮಾರವ್ಯಾಸನಂತೆ ಭಾಗವತಸಂಪ್ರದಾಯಿ-ಯೆಂಬುದನ್ನು ಎಲ್ಲರೂ ಒಪ್ಪುವಂತಿದೆ. ಅದೇ ಅವನ ವ್ಯಕ್ತಿತ್ವದ ಜೀವಾಳವನ್ನೂ ಸೂಚಿಸುತ್ತದೆ. 'ಜೈಮಿನಿಭಾರತ'ಕ್ಕೆ ಅದರಿಂದಲೇ ಉತ್ಕಟಭಕ್ತಿಯ ಮತ್ತು ವಿಶಾಲಮನೋಭಾವದ ಮಿರುಗು ಬಂದಿದೆ. ಇನ್ನುಳಿದುದು ಅವನು ಶೈವನೋ ಶ್ರೀವೈಷ್ಣವನೋ ಎಂಬ ವಾದ. ಒಮ್ಮೆ ಹಾಗೆ ಒಮ್ಮೆ ಹೀಗೆ ತೋರುವಂತಿದೆ. ಸದ್ಯಕ್ಕೆ ಈ ವಿಷಯದ ನಿರ್ಧಾರ ಸಾಧ್ಯವಿಲ್ಲ ಎಂದರೆ ತಪ್ಪೇನು? ಶ್ರೀ. ಗೋವಿಂದ ಪೈಗಳು ಹೇಳುವಂತೆ ಅವನ ಮತವು ಭಾಗವತಸಂಪ್ರದಾಯವೇ ಆಗಿದ್ದಿರಬೇಕೆನ್ನುವುದರಿಂದ ಪ್ರಶ್ನೆ ಬಗೆಹರಿಯಿತೆಂದು ಮಾತ್ರ ಭಾವಿಸಕೂಡದು. ಯಾಕೆಂದರೆ ವೈದಿಕಪರಂಪರೆಯ ಮತತ್ರಯದಲ್ಲಿ ಅವನು ಜನ್ಮತಃ ಯಾವುದಕ್ಕೆ ಸಂಬಂಧಪಟ್ಟವನು ಎಂಬ ಪ್ರಶ್ನೆಗೆ ಅದು ಉತ್ತರವಲ್ಲ.

ಲಕ್ಷ್ಮೀಶನ ಕೃತಿ ಸಂಸ್ಕೃತ ಜೈಮಿನಿಭಾರತದ ಸಂಗ್ರಹರೂಪವಾದ ಅನುವಾದ-ವಾಗಿದೆ. ಮೂಲದ ೬೮ ಅಧ್ಯಾಯದ ವಿಸ್ತಾರವು ಇಲ್ಲಿ ೩೪ ಸಂಧಿಗಳಲ್ಲಿ ಅಡಕವಾಗಿದೆ. ಈ ಅಡಕದಲ್ಲಿಯೂ ಇದರ ಹರಹು ಇದ್ದೇ ಇದೆ. ಸಾಮಾನ್ಯವಾಗಿ ಕನ್ನಡಕವಿಗಳ ಪದ್ಧತಿಯಲ್ಲಿ ಅವನು ಮೂಲವನ್ನು ಬಹುಮಟ್ಟಿಗೆ ಅನುಸರಿಸಿದ್ದಾನೆ, ಎದ್ದುಕಾಣುವಂಥ ವ್ಯತ್ಯಾಸಗಳನ್ನು ಯಾವಲ್ಲಿಯೂ ಮಾಡಿಕೊಂಡಿಲ್ಲ. ಇಷ್ಟಾದರೂ ಸಂಗ್ರಹಕಾರ್ಯದಲ್ಲಿ ಅವನ ಸ್ವತಂತ್ರಪ್ರತಿಭೆ ಬೆಳಗದೆ ಇಲ್ಲ. ಮೂಲದಲ್ಲಿಯೂ ಹಲವಾರು ಧಾರ್ಮಿಕ ಮಹತ್ವದ ಮತ್ತು ಕಾವ್ಯಬಂಧಕ್ಕೆ ಅನಾವಶ್ಯಕವಾದ ವರ್ಣನೆ-ಬೋಧನೆಗಳನ್ನು ಅವನು ಬಿಟ್ಟಿದ್ದಾನೆ, ನವೀನ ಮತ್ತು ಪ್ರಸಂಗೋಚಿತವಾದ ವರ್ಣನೆಗಳನ್ನು ಸೇರಿಸಿದ್ದಾನೆ. ಅಲ್ಲಲ್ಲಿ ಮೂಲವಿಸ್ತಾರವನ್ನು ಮಾಡಿದ್ದಾನೆ. ಶೃಂಗಾರ, ವಿಶೇಷವಾಗಿ ಭಕ್ತಿ ಮತ್ತು ವೀರ ಈ ರಸಗಳ ವರ್ಣನೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿದ್ದಾನೆ. ಕಥಾಸಂಗತಿ.

ಗಳಲ್ಲಿ ಕನ್ನಡ ಜೈಮಿನಿಭಾರತಕ್ಕೂ ಸಂಸ್ಕೃತ ಜೈಮಿನಿಭಾರತಕ್ಕೂ ಇರುವ ಹಲವು ಸಾಧಾರಣ ವ್ಯತ್ಯಾಸಗಳನ್ನು ಗುರುತಿಸಬಹುದು: (೧) ಮರುತ್ತನ ಯಜ್ಞದಲ್ಲಿ ಬ್ರಾಹ್ಮಣರು ಬಿಸುಟ್ಟ ಧನವನ್ನು ಧರ್ಮರಾಯನು ತನ್ನ ಅಶ್ವಮೇಧಕ್ಕಾಗಿ ತಂದನು ಎಂಬುದು ಸಂ.ಜೈ. ಭಾರತದಲ್ಲಿಲ್ಲ. ಇದನ್ನು ವ್ಯಾಸಭಾರತದ ಅಶ್ವಮೇಧಪರ್ವದಿಂದ ಲಕ್ಷ್ಮೀಶನು ಎತ್ತಿಕೊಂಡಿದ್ದಾನೆ. (೨) ಬಭ್ರುವಾಹನನು ಕುದುರೆಯ ಪಟದ ಲಿಪಿಯನ್ನು ನೋಡಿದೊಡನೆಯೆ ತನಗೂ ಅರ್ಜುನನಿಗೂ ಇದ್ದ ಸಂಬಂಧವನ್ನರಿತು ಅವನಿಗೆ ಕುದುರೆಯನ್ನೊಪ್ಪಿಸಲು ಹೊರಟನೆಂದು ಸಂ.ಜೈ. ಭಾರತದಲ್ಲಿದ್ದರೆ ತಾಯಿ ಚಿತ್ರಾಂಗದೆಯ ಬುದ್ಧಿವಾದವನ್ನು ಕೇಳಿದ ಮೇಲೆ ಹಾಗೆ ಮಾಡಿದನೆಂದು ಕ.ಜೈ. ಭಾರತದಲ್ಲಿದೆ. (೩) ಕುಶಲವರ ಕಾಳಗದ ಸಂಗತಿ ಬಭ್ರುವಾಹನಯುದ್ಧವು ಆರಂಭವಾದ ಮೇಲೆ ಸಂ.ಜೈ. ಭಾರತದಲ್ಲಿ ಹೇಳಲಾಗಿದೆ. ಕನ್ನಡದಲ್ಲಿ ಕಾಳಗಕ್ಕೆ ಮೊದಲೇ ಅದು ವರ್ಣಿತವಾಗಿದೆ. ಇಂಥ ಹಲವು ವ್ಯತ್ಯಾಸಗಳನ್ನುಳಿದರೆ ಜೈಮಿನಿಭಾರತವು ಕಥಾನಕದ ಪ್ರಮುಖಭಾಗದಲ್ಲಿ ಮತ್ತು ಭಕ್ತಚರಿತ್ರಾವಳಿಯ ಜೋಡಣೆಯಲ್ಲಿ ಸಂಸ್ಕೃತಗ್ರಂಥವನ್ನು ಹಿಂಬಾಲಿಸಿರುತ್ತದೆ. ವ್ಯಾಸಭಾರತದಲ್ಲಿಯಾಗಲಿ ಪುರಾಣಗಳಲ್ಲಿಯಾಗಲಿ ಕಾಣದೊರೆಯದ ಯೌವನಾಶ್ವ, ಸುಧನ್ವ, ಮಯೂರಧ್ವಜ, ವೀರವರ್ಮ, ಚಂದ್ರಹಾಸ ಮುಂತಾದ ವ್ಯಕ್ತಿಗಳು ಪರಮವೈಷ್ಣವರಾಗಿ ಇಲ್ಲಿ ಬರುತ್ತಾರೆ. ಇವರ ಕಥೆಗಳು ಭಾಗವತಪರಂಪರೆಯಲ್ಲಿ ಪ್ರಚಲಿತವಾಗಿರಬೇಕು, ಚಾರಿತ್ರಿಕಸತ್ಯಾಂಶವನ್ನು ಒಳಗೊಂಡಿರಬೇಕು. ಈ ವಿಷಯದಲ್ಲಿ ಸಂಶೋಧನೆ ಮುನ್ನಡೆಯಬೇಕಾಗಿದೆ.

ಲಕ್ಷ್ಮೀಶನ ಕಥನಕಲೆಯನ್ನು ವಿಮರ್ಶಿಸುವಾಗ ಅವನ ಕೃತಿ ಮೂಲವನ್ನು ಎಷ್ಟುಮಟ್ಟಿಗೆ ಅನುಸರಿಸಿದೆ ಎಂಬುದನ್ನು ಅರಿತಿರಬೇಕಾಗುತ್ತದೆ. ಅವನ ಕಥನದಲ್ಲಿಯ ಅನೇಕ ಗುಣದೋಷಗಳಿಗೆ ಮೂಲಾನುಸರಣವೇ ಕಾರಣವಾಗಿದೆ. ಮೂಲದಲ್ಲಿಯ ವಿವಿಧ ವೀರಭಕ್ತರ ಮನಸೆಳೆಯುವ ಚರಿತ್ರೆ, ಹೃದಯಸ್ಪರ್ಶಿಯಾದ ಸಂನಿವೇಶ ಇವುಗಳಿಗೆ ದೊರೆಯುವ ಶ್ರೇಯಸ್ಸು ಅವನದಲ್ಲ. ಹಾಗೇ ಮೂಲದಲ್ಲಿಯ ಅದ್ಭುತ-ಅಸಂಭವಗಳಿಗೂ ಅವನು ಹೊಣೆಗಾರನಲ್ಲ. ಇಷ್ಟಾದರೂ ಮೂಲದಲ್ಲಿಯ ಪುರಾಣ-ಪ್ರಧಾನಕಥನವನ್ನು ಕಾವ್ಯಪ್ರಧಾನಕಥನವನ್ನಾಗಿಸಿ ಅದನ್ನು ರಸವತ್ತಾಗಿ ಮಾಡಿದ ಕೈವಾಡವೆಲ್ಲ ಲಕ್ಷ್ಮೀಶನದೇ. ಮೂಲದಿಂದ ಬಂದ ಕಥೆ ಯಾವುದೇ ಇರಲಿ ಅದನ್ನು ತನ್ನದಾಗಿ ಮಾಡಿಕೊಂಡು ಅದರ ಸಂನಿವೇಶ–ವ್ಯಕ್ತಿಗಳಲ್ಲಿಯೂ ವರ್ಣನಾಸಂದರ್ಭ-ರಸಸ್ಥಾನಗಳಲ್ಲಿಯೂ ಅತ್ಯಂತ ತಾದಾತ್ಮ್ಯವನ್ನು ಹೊಂದಿ ರುಚಿರುಚಿಯಾಗುವಂತೆ ಹೇಳುವ ಕಥನಕಲೆ ಅವನಲ್ಲಿತ್ತು. ಕತೆಯನ್ನು ಹೇಳುಹೇಳುತ್ತ ಅವನು ಸೊಗಸಾದ ಚಿತ್ರಗಳನ್ನು ಬಿಡಿಸುತ್ತಾನೆ, ಉತ್ಪ್ರೇಕ್ಷೆಗಳ ಮಾಲೆಯನ್ನು ರಚಿಸುತ್ತಾನೆ, ಕುಣಿತದ ಗೆಜ್ಜೆಗಳಂತೆ ಮಧುರವಾದ ವಿವಿಧವಾದ ಲಯದಿಂದ ಉಲಿಯುವ ನುಡಿಗಡಣವನ್ನು ಹೆಣೆಯುತ್ತಾನೆ. ಒಮ್ಮೊಮ್ಮೆ ಅವನೆಳೆಯುವ ಸಣ್ಣ ಕುಂಚದ ಗೆರೆಯೂ ಕಥೆಯ ಕುತೂಹಲಕ್ಕೆ ಕಾರಣವಾಗುತ್ತದೆ. ಶೀರ ಮೊದಲು ವ್ಯಾಸನು ಧರ್ಮರಾಜನಲ್ಲಿಗೆ

ಬರಲು ಸತ್ಕಾರವಾದ ಮೇಲೆ 'ಅರಸನನುತಾಪದಿಂ ತಲೆವಾಗಿ ಮಾತಾಡದಿರುತಿರ್ದ-ನನಿಲಸಂಚಾರವೊಂದಿನಿತಿಲ್ಲದುರಿವ ಕಡುವೇಸಗೆಯ ಬಿಸಿಲಿಂದ ಬಸವಳಿವ ಕೋಮಲ-ರಸಾಲದಂತೆ' (೨-೧೪). ಮೂಲದಲ್ಲಿ ದುಃಖಾಕ್ರಾಂತನಾದ ಧರ್ಮರಾಜನು 'ಜ್ಞಾತಿವಧೆಯ ಪಾಪಕ್ಕೆ ಪರಿಹಾರವೇನು?' ಎಂದು ವ್ಯಾಸನನ್ನು ತಟ್ಟನೆ ಕೇಳಿ-ಬಿಡುತ್ತಾನೆ. ಇಲ್ಲಿ ಮೊದಲು ಅತಿದುಃಖದಿಂದುಂಟಾದ ಮೌನ, ಆಮೇಲೆ 'ಏನಾಗಿದೆ' ಎಂದು ಕೇಳಿದ್ದಕ್ಕೆ 'ಜೀಯ ಸಂತಾಪದಿಂ ಬೆಂಡಾದುದೆನ್ನೊಡಲ್ ಸೈರಿಸಲರಿಯೆನು' ಎಂಬ ನಸುಮಾತು, ಕೊನೆಗೆ ಬಿಸುಸುಯ್ಯುತ್ತ ಆಡಿದ ಗೋತ್ರವಧೆಯ ಬಿಚ್ಚುಮಾತು. ಈ ಕ್ರಮ ಎಷ್ಟು ಸಹಜ ಎಂಬುದನ್ನು ನೋಡಬೇಕು. ಧರ್ಮರಾಯನ ಮೊದಲ ಮೌನವನ್ನು ಬಣ್ಣಿಸಲು ಕೊಟ್ಟ ಹೋಲಿಕೆಯ ಸಮರ್ಪಕತೆ, ಹೋಲಿಕೆಯ ನುಡಿಗಳ ನಾದಮಯತೆ ಇವನ್ನು ನಿರುಕಿಸಿದರೆ ಲಕ್ಷ್ಮೀಶನ ಕಥನಶಕ್ತಿಯ ಮತ್ತು ಉನ್ನತ-ಪ್ರತಿಭೆಯ ಪ್ರಥಮದರ್ಶನವು ನಮಗಾಗುತ್ತದೆ. ಹೀಗೆ ಇನ್ನೂ ಹಲವು ನಿದರ್ಶನ-ಗಳನ್ನು ಕಾಣಬಹುದು. ಅಶ್ವಮೇಧದ ಕುದುರೆಯಂತೆ ಅವನ ಕಥೆ ವಿಸಟಂಬರಿದಿದೆ, 'ಜೈಮಿನಿಭಾರತ'ವು ಒಂದು ಕಥೆ ಎನ್ನುವುದಕ್ಕಿಂತ ಕಥಾಸಂಗ್ರಹವೆನ್ನಲು ಯೋಗ್ಯ-ವಾಗಿದೆ ಎಂಬ ವಿಮರ್ಶೆ ಅವನಿಗೂ ಮೂಲಕ್ಕೂ ಕೂಡಿಯೆ ಅನ್ವಯಿಸುತ್ತದೆ. ಕಥೆಯ ಏಕತೆಗಿಂತ ರಸದ ಏಕತೆ ಇಲ್ಲವೆ ಭಾಗವತದೃಷ್ಟಿಯ ಏಕತೆ 'ಜೈಮಿನಿಭಾರತ'ದ ವಿಶೇಷವೆನ್ನಬೇಕು. ಇದನ್ನು ಲಕ್ಷ್ಮೀಶನು ಚೆನ್ನಾಗಿ ಸಾಧಿಸಿದ್ದಾನೆ. ಅವನು ಹೇಳಿದ ಕತೆಗಳಲ್ಲಿ ಸುಧನ್ವ, ಬಭ್ರುವಾಹನ, ಸೀತೆ-ಲವಕುಶರು, ಚಂದ್ರಹಾಸ ಇವುಗಳಲ್ಲಿ ಕಥನಕಲೆ ಗುಣದೃಷ್ಟಿಯಿಂದ ಏರೇರುತ್ತ ಹೋಗಿದೆ. 'ಚಂದ್ರಹಾಸ'ದಲ್ಲಿ ಅದು ಕಳಸವನ್ನೇ ಮುಟ್ಟಿದೆ. ಅವನೂ ಅದಕ್ಕೆ 'ಕರ್ಣಪೀಯೂಷ' ಎಂದು ಕರೆದಿದ್ದಾನೆ. ಉಳಿದ ವೀರರ ಕಥೆಗಳಲ್ಲಿ ತೋರಿದ ಭಕ್ತಿಮಹಿಮೆ ಚಂದ್ರಹಾಸನ ಕಥೆಯಲ್ಲಿ ಹೆಚ್ಚು ಸಹಜವೂ ಜೀವನದೊಡನೆ ನಿಕಟಸಂಬದ್ಧವೂ ಆಗಿ ಬಂದಿದೆ. ಅಲ್ಲದೆ ಚಂದ್ರಹಾಸನ ಬಾಲ್ಯದಿಂದ ಮೊದಲಾದ ರೋಮಾಂಚಕಾರಿಯಾದ ಜೀವನಕಥೆ ಸಮಗ್ರತೆಯಿಂದ ಕೂಡಿ ಕರುಣ-ವೀರಾದ್ಭುತಗಳಿಗೆ ಭಕ್ತಿಯ ರಸ ಬೆರೆಸಿ ಒಂದು ಸಂಪೂರ್ಣಕಥೆಯ ಸೃಷ್ಟಿಯನ್ನುಂಟುಮಾಡುತ್ತದೆ. ಲಕ್ಷ್ಮೀಶನು ಕನ್ನಡ ಸಾಹಿತ್ಯದಲ್ಲಿ ಮೂಲಾನು-ಸರಣವನ್ನು ಮಾಡಿಯೂ ಮೇಲ್ಮೆಯನ್ನು ಮೆರೆದ ಹಿರಿಯ ಕಥನಕವಿಯೆಂಬುದಕ್ಕೆ 'ಚಂದ್ರಹಾಸ'ನ ಸಾಕ್ಷ್ಯವೊಂದು ಸಾಕು.

ಲಕ್ಷ್ಮೀಪತಿಯ ಕಾವ್ಯರಚನೆ 'ಪುಣ್ಯಮುದು ಕೃಷ್ಣಚರಿತಾಮೃತಂ' (೩೪-೪೬) ಎಂದು ತಾನೇ ಹೇಳಿಕೊಂಡಿದ್ದಾನೆ. ಧರ್ಮರಾಜನ ಅಶ್ವಮೇಧಕಥಾನಕಕ್ಕೆ 'ಕೃಷ್ಣಚರಿತಾಮೃತ' ಎಂದರೆ ಅಸಂಬದ್ಧವಾಗಿ ತೋರಬಹುದು. ಆದರೆ ಮೂಲವನ್ನು ನೋಡಿದರೆ ಅಶ್ವಮೇಧ ನಿಮಿತ್ತವಾಗಿ, ಕೃಷ್ಣಭಕ್ತಿಯ ಚರಿತೆ ಪ್ರಧಾನವಾಗಿ ಕಂಡು ಬರುತ್ತದೆ. ಯಜ್ಞದ ಕುದುರೆ ಸಂಚಾರಿಯಾದರೆ ಅದನ್ನು ಅಲ್ಲಲ್ಲಿ ಕಟ್ಟಿಹಾಕಿದ ವೀರರ ಭಕ್ತಿ ಜೈಮಿನಿಭಾರತದ ಸ್ಥಾಯಿಯಾಗಿದೆ. ಇಂಥ ವಸ್ತುವಿನ್ಯಾಸದಲ್ಲಿಯ

ಪ್ರಚಾರಹೇತುವಿನ ಮೂಲಕ ಕೆಲವು ಸಲ ಕಥೆಯ ಸಹಜತೆಗೆ ಬಾಧೆಬಂದಿದೆ. ಆದರೂ ಅದರ ಭಾಗವತಸ್ವರೂಪದ ಸ್ವಾರಸ್ಯ, ಸಾಂಕೇತಿಕ ಧ್ವನಿಗಳನ್ನು ಮೆಚ್ಚಬೇಕು. ಏಕಾಂತಭಕ್ತಿಗೆ ದೇವರೊಲಿಯುತ್ತಾನೆ, ಎಂಥ ಸಂಕಟದಿಂದಲೂ ಪಾರುಗಾಣಿಸುತ್ತಾನೆ ಎಂಬ ಎಲ್ಲ ಕಥೆಗಳ ಆಂತರಿಕ ಆಶಯದಲ್ಲಿ ಕೃಷ್ಣಚರಿತಾಮೃತವಿದೆ. ಕೃಷ್ಣನಿಲ್ಲದ ಕಥೆ ಮುನ್ನಡೆಯದು, ಬಂದ ತಡೆ ಬಗೆಹರಿಯದು ಎಂಬುದರಿಂದ 'ಜೈಮಿನಿಭಾರತ'ದಲ್ಲಿ ಅವನ ಪ್ರಾಮುಖ್ಯವನ್ನು ಅರಿತುಕೊಳ್ಳಬಹುದು. ಕುಮಾರವ್ಯಾಸನು ತನ್ನ ಭಾರತಕ್ಕೆ 'ಕೃಷ್ಣಕಥೆ' ಎಂದಿರುವುದನ್ನು ಇಲ್ಲಿ ನೆನೆಯಬೇಕು. ಭಾಗವತದರ್ಶನದ ಸಾಮ್ಯ ಕುಮಾರವ್ಯಾಸ-ಲಕ್ಷ್ಮೀಶರಲ್ಲಿದೆಯಾದರೂ ಕಥನಸಾಮಗ್ರಿ ಇಲ್ಲವೆ ಕಥನಕಲೆಯಲ್ಲಿ ಭೇದವಿದೆ. 'ಕೃಷ್ಣನೇ ಇದರ ಕಥಾನಾಯಕ' ಎಂಬ ಉಕ್ತಿಯನ್ನು ಜೈಮಿನಿಭಾರತದ ವಿಷಯದಲ್ಲಿಯೂ ವಿಮರ್ಶಕರು ಬಳಸಿದ್ದಾರೆ. ಕುಮಾರವ್ಯಾಸ ಭಾರತಕ್ಕೆ ಅದು ಯಾವ ಅರ್ಥದಲ್ಲಿ ಸರಿಹೋಗುತ್ತದೆಯೋ ಅದೇ ಅರ್ಥದಲ್ಲಿ ಇಲ್ಲಿಯೂ ಸರಿಹೋಗುತ್ತದೆ ಎಂಬುದನ್ನು ಗಮನಿಸಬೇಕು.

ಜೈಮಿನಿಭಾರತದಲ್ಲಿಯ ಪಾತ್ರವರ್ಗ ದ್ವಿವಿಧವಾಗಿದೆ. ಮೂಲಭಾರತಕ್ಕೆ ಪರಿಚಿತವಾದ ಪಾಂಡವರು ಮತ್ತು ಅವರ ಪಕ್ಷಪಾತಿಗಳ ಒಂದು ವರ್ಗ, ಜೈಮಿನಿಭಾರತದ ಅಶ್ವಮೇಧಕಥೆಗೆ ಸಂಬಂಧವುಳ್ಳವರಾಗಿ ಬಂದ ವ್ಯಕ್ತಿಗಳ ಇನ್ನೊಂದು ವರ್ಗ. ಒಳ್ಳೆಯ ಕತೆಗಾರನು ತನ್ನ ಪಾತ್ರಹೃದಯವನ್ನು ಸೂಕ್ಷ್ಮವಾಗಿ ಅರಿತಿರಬೇಕು. ಲಕ್ಷ್ಮೀಶನು ಈ ಅರಿವನ್ನು ಸಂದರ್ಭೋಚಿತವಾಗಿ ತೋರಿದ್ದಾನೆ. ಎಲ್ಲ ಗಂಡುಪಾತ್ರಗಳಲ್ಲಿ ವೀರ ಮತ್ತು ಅನೇಕರಲ್ಲಿ ಭಕ್ತಿ ಇವು ಸಮಾನವಾಗಿದ್ದರೂ ಅವರವರ ಪ್ರಕೃತಿ ಮತ್ತು ಪ್ರತಿಕ್ರಿಯೆಗಳಲ್ಲಿ ವೈವಿಧ್ಯವಿದೆ. ಸುಪರಿಚಿತರಾದ ಧರ್ಮ ಭೀಮ, ಅರ್ಜುನರಲ್ಲದೆ ಹೊಸಬರಾದ ಯೌವನಾಶ್ವ, ಸುಧನ್ವ, ಮಯೂರಧ್ವಜ ಮುಂತಾದವರು ಬೇರೆಬೇರೆಯಾಗಿ ತಮ್ಮ ಶೌರ್ಯವನ್ನೂ ಭಕ್ತಿಭಾವವನ್ನೂ ಮೆರೆದಿದ್ದಾರೆ. ವೀರ-ಭಕ್ತಿಗಳ ಸಮನ್ವಯ ಅವರಲ್ಲಿ ತೋರಿದೆ. ಆದರೂ ಮೂಲ ಮತ್ತು ಅನುವಾದದಲ್ಲಿಯ ಭಕ್ತಿಪಕ್ಷಪಾತದಿಂದ ಅವರ ವೀರವು ಕೆಲವು ಸ ಸಪ್ಪೆಯಾಗಿಯೂ ನಾಟಕೀಯವಾಗಿಯೂ ಭಾಸವಾಗುತ್ತದೆ. ಚಂದ್ರಹಾಸನು ಸ 'ಸಿಕ್ಕಿದಡೆ ಕೃಷ್ಣದರ್ಶನದ ಪುಣ್ಯಮೆ ಸಾಕು' ಎಂದು ಧರ್ಮಯಜ್ಞದ ಕುದುರೆಗಳನ್ನು ಕಟ್ಟಿದರೆ ಪುರುಷಾರ್ಥವೇನೆಂದು ತನ್ನ ಮಕ್ಕಳನ್ನು ಕೇಳುತ್ತಾನೆ. ಪಾಂಡವರ ಕುದುರೆ, ಕೃಷ್ಣನ ದರ್ಶನಸಂದರ್ಭ ಎಂದೊಡನೆ, ಹುಚ್ಚೆದ್ದು ಹೋರಾಡಿ ಬಂಟರು ಆಯುಧಗಳನ್ನು ಕೆಳಗಿಡುತ್ತಾರೆ. ಮೂಲವಸ್ತುವಿನಲ್ಲಿಯೂ ಪಾತ್ರಕಲ್ಪನೆಯಲ್ಲಿಯೂ ಅಶ್ವಮೇಧ ಮತ್ತು ಕೃಷ್ಣಭಕ್ತಿ ಇವುಗಳ ಹೊಂದಿಕೆಯಲ್ಲಿ ಉಂಟಾ ಕೊರತೆ ಲಕ್ಷ್ಮೀಶನಲ್ಲಿಯೂ ಕಂಡು ಬಂದಿದೆ. ಅವನ ಸೊಗಸಾದ ಕತೆಗಾರಿಕೆಯ ಮೋಹಿನಿಯಿಂದ ನಾವದನ್ನು ಓದಿನ ಭರದಲ್ಲಿ ಅಲಕ್ಷಿಸುತ್ತೇವೆ. ಹೆಣ್ಣುಪಾತ್ರಗಳ ಉತ್ತರರಾಮಾಯಣದ ಭಾಗದಲ್ಲಿ ಕರುಣಮೂರ್ತಿಯಾಗಿ ಮೆರೆದ ಸೀತಾದೇ

ಪ್ರಮುಖಳಾಗಿದ್ದಾಳೆ. ಅವಳ ಆದರ್ಶರಾಮನಿಷ್ಠೆಯನ್ನೂ ಸಹನಶೀಲತೆಯನ್ನೂ ಚಿತ್ರಿಸುವುದರ ಜೊತೆಗೆ ಅನ್ಯಾಯವಾದ ಪರಿತ್ಯಾಗದ ಬಗ್ಗೆ ಪ್ರತಿಭಟನೆಯನ್ನೂ ಕವಿ ಚಿತ್ರಿಸಿದ್ದಾನೆ. ಲಕ್ಷ್ಮಣನಿಂದ ಪರಿತ್ಯಾಗದ ಕಾರಣವನ್ನು ತಿಳಿದೊಡನೆ ಅವಳಲ್ಲಿ ಉಂಟಾದ ಪ್ರತಿಕ್ರಿಯೆಗಳನ್ನು ಲಕ್ಷ್ಮೀಶನು ಸೂಕ್ಷ್ಮವಾಗಿಯೂ ಜಟಿಲವಾಗಿಯೂ ನಿರೂಪಿಸಿ ತನ್ನ ಪಾತ್ರಪ್ರಜ್ಞೆಯ ಮೇಲ್ಮಟ್ಟವನ್ನು ಮೆರೆದಿದ್ದಾನೆ. ಶೃಂಗಾರ-ರಸಿಕೆಯಾದ ಪ್ರಭಾವತಿ, ಚಲವಾದಿನಿಯಾದ ಜ್ವಾಲೆ, ವಿಪರೀತಪ್ರಕೃತಿಯ ಚಂಡಿ, ಪ್ರಣಯಚತುರೆಯಾದ ವಿಷಯೆ ಇವರನ್ನೂ ಲಕ್ಷ್ಮೀಶನು ತನ್ನ ಕಥಾಮಂದಿರದಲ್ಲಿ ಮೂರ್ತಿಗಳನ್ನಾಗಿ ಕೆತ್ತಿ ನಿಲ್ಲಿಸಿದ್ದಾನೆ. ಪ್ರೇರಣೆ ಮೂಲದಿಂದ, ಆದರೆ ಪ್ರತಿಕೃತಿ ಅವನದು.

ಲಕ್ಷ್ಮೀಶನ ಛಂದಸ್ಸು–ಶೈಲಿಗಳಲ್ಲಿ ಪ್ರೌಢಪಾಂಡಿತ್ಯದ ಲೇಪವುಳ್ಳ ಸಹಜ ಆವಿಷ್ಕಾರವಿದೆ, ದೇಸಿ–ಮಾರ್ಗಗಳ ಸಂಮಿಲನವಿದೆ. ಅವನ ಪ್ರತಿಭೆಯ ಸಹಜಾ-ವೇಶಕ್ಕೆ ಅವನ ಪಾಂಡಿತ್ಯವು ಬೆಂಬಲವಾಗಿದೆ. ಸವಿಯಾದ ಶಾರೀರವುಳ್ಳ ಸಂಗೀತ-ಗಾರನು ಸಶಾಸ್ತ್ರವಾಗಿ ಹಾಡಿ ರಂಜಿಸುವಂತೆ ಲಕ್ಷ್ಮೀಶನು ಹಾಡಿದ್ದಾನೆ. ತನ್ನ ಕಾವ್ಯವು '**ಸಕಲಜನರಿಂದ** ಸುಶ್ರಾವ್ಯಮಪ್ಪಂತೆ ಎನ್ನ ವದನಾಬ್ಜದಲ್ಲಿ ನೀನೇ ವ್ಯಾಪಿಸಿರ್ದು ಅಮಲಸುಮತಿಯಂ **ತಾಯೆನಗೆ ತಾಯೆ ನಗೆಗೂಡಿ** ನೋಡಿ' ಎಂದವನು ವಾಣಿಯನ್ನು ಬೇಡಿದನು. ಬೇಡುವ ವಾಣಿಯಲ್ಲಿಯೇ ಆ ತಾಯಿ ಅವನಿಗೆ ಸಹಜಯಮಕದ ಚಮತ್ಕೃತಿಯನ್ನು ನೀಡಿದಳು. ಮುಂದೆ ಗ್ರಂಥದ ತುಂಬೆಲ್ಲ ತರತರದ ಪ್ರಾಸಾನುಪ್ರಾಸಯಮಕಗಳೂ ಶ್ಲೇಷಗಳೂ ಬಹುಭಾಗದಲ್ಲಿ ಔಚಿತ್ಯ ಮತ್ತು ಸಹಜತೆಯಿಂದ ಕೂಡಿ ಮೆರೆದುವು. ಅವನ ನುಡಿಗೆ ಸೂಕ್ಷ್ಮನಾದ-ಶಕ್ತಿ ಪ್ರಾಪ್ತವಾಯಿತು. ವಾಣಿಯ ಅನುಗ್ರಹದೊಡನೆ ದೇವನ ಅನುಗ್ರಹವೂ ದೊರೆಯಿತು. ಎರಡೂ ಒಂದೇ ಎಂದರೂ ಸರಿಯೆ. ಅವನ ಆರಾಧ್ಯದೇವನು 'ವೀಣೆಯಿಂ ಗಾನಮಂ ನುಡಿಸುವಂದದೊಳೆನ್ನ ವಾಣಿಯಿಂ ಕವಿತೆಯಂ ಪೇಳಿಸಿದನು' ಎಂಬ ಶ್ರದ್ಧೆ ಭಾಗವತಕವಿಗೆ ಯೋಗ್ಯವಾಗಿ ಮೊಳೆಯಿತು.

ಷಟ್ಪದಿಕಾರರಲ್ಲಿ ವರ್ಣಕಕಾವ್ಯಕ್ಕೆ ಸಹ ಲಕ್ಷಣ ಬೇಕೆಂದು ಬಗೆದು ದೇಸಿಯ ಛಂದದಲ್ಲಿ ಮಾರ್ಗದ ಪ್ರೌಢಿಮೆಯನ್ನು ತುಂಬಿದ ಕವಿ ಲಕ್ಷ್ಮೀಶನು. 'ಪಾರದೆ ಪರಾರ್ಥಮಂ....ಸುಮಾರ್ಗದೊಳ್ನಡೆದ ಸತ್ಪುರುಷನ ಗಭೀರದಶೆಯ ಪೋಲ್ವ ಕಾವ್ಯ-ಪ್ರಬಂಧ' (೧–೫), 'ಛಂದಸ್ಸುಲಕ್ಷಣಮಲಂಕಾರಭಾವರಸಮೊಂದಿ ಕಳೆವೆತ್ತ ಸತ್ಕೃತಿ–ಚಮತ್ಕೃತಿಯುಕ್ತಮೊಂದುಮಿಲ್ಲದ ಕಾವ್ಯಮಶ್ರಾವ್ಯಮಹುದು' (೧–೬) ಎಂದು ಹೇಳಿದ್ದಲ್ಲದೆ '**ಸಕಲಜನಕೆ** ವ್ಯಾಪಿಸಿದ ಸುಪ್ರೌಢಿ ಮೆರೆಯೆ' (೩೪–೮೧) ಎಂದವನು ಕೊನೆಗೆ ಸಾರಿದ್ದರಲ್ಲಿ ಪಂಡಿತಮಾನ್ಯವೂ ಸಕಲಜನಹೃದ್ಯವೂ ಆದ ಕಾವ್ಯಪ್ರಬಂಧ-ವನ್ನು ರಚಿಸಿದ್ದಾನೆಂದು ತಿಳಿಯಬಹುದು. ಅವನ ಬರೆವಣಿಗೆಯಲ್ಲಿ ಹಸನಿದೆ,

ಚೊಕ್ಕತನವಿದೆ, ಸವಿಯಿದೆ. ಜೊತೆಗೆ ತನ್ನ ಬೆಡಗನ್ನು ಲೋಕಕ್ಕೆ ತೋರಿಸಬೇಕೆಂಬ ಕಾವ್ಯಕನ್ಯೆಯ ಒಯ್ಯಾರವಿದೆ, ಬಡಿವಾರವಿದೆ. ಕಾವ್ಯಕಲ್ಪನೆ, ಶಬ್ದಶ್ಲೇಷಗಳ ಚಮತ್ಕೃತಿ, ಆಡಂಬರ ಕೆಲವು ಸಲ ಔಚಿತ್ಯಮೀರಿ ಹರಡಿಕೊಳ್ಳುತ್ತವೆ. ಅವನ ನಿಸರ್ಗ ಮತ್ತು ಯುದ್ಧವರ್ಣನೆಗಳಲ್ಲಿ ಇದನ್ನು ವಿಶೇಷವಾಗಿ ನೋಡಬಹುದು. ಒಮ್ಮೊಮ್ಮೆ ಶೃಂಗಾರವು ಧ್ವನಿರಮ್ಯತೆಯನ್ನು ಕಳೆದುಕೊಂಡು ಅತಿರೇಕಕ್ಕಿಳಿಯುತ್ತದೆ. ಯುದ್ಧಕ್ಕೆ ಹೊರಟ ಸುಧನ್ವನು ತನ್ನರಸಿ ಪ್ರಭಾವತಿಯನ್ನು ಕಂಡಾಗಿನ ಸಂದರ್ಭವನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಸಕಾರಣವಾಗಿ ಸುರತಕ್ಕೆ ಕರೆಯುವ ಪ್ರಭಾವತಿ ತೀರ ಸ್ಫುಟವಾಕ್ಯಳೂ ಲಜ್ಜಾಹೀನೆಯೂ ಆಗುತ್ತಾಳೆ. ಪ್ರಣಯದ ರಮ್ಯಲೀಲೆ ಇಲ್ಲಿ ಮೈಗೂಟದ, ಮಕ್ಕಳ ಬಯಕೆಯ ವ್ಯವಹಾರವಾಗಿ ಪರಿಣಮಿಸುತ್ತದೆ.

'ಭಕ್ತಿರಸ–ವೀರರಸಪ್ರಧಾನವಾದ ಈ ಕಥೆಗಳನ್ನು ಹೇಳಿದಾತನು ಉತ್ತಮವರ್ಗದ ಕವಿ,'[1] 'ಕಾವ್ಯದ ಕೆಲವೆಡೆಗಳಲ್ಲಿ ಆತನು ಉದ್ದಾಮಕವಿಯೆಂದು ತೋರಿ ಬಂದರೂ ಸಮಗ್ರಕಾವ್ಯದೃಷ್ಟಿಯಿಂದ ಆತನನ್ನು ಪ್ರಥಮತಮಶ್ರೇಣಿಗೆ ಸೇರಿದ ಮಹಾಕವಿಯೆಂದು ಕರೆಯುವುದು ಅತಿಶಯೋಕ್ತಿಯಾಗಬಹುದು...........ಆದರೂ ಲಕ್ಷ್ಮೀಶನು ಶ್ರೇಷ್ಠಕವಿ....ಲಕ್ಷ್ಮೀಶನ ಕಾವ್ಯಜ್ಯೋತಿಯು ಮಬ್ಬಾಗಿದ್ದರೆ, ಅದು ಮಹತ್ವದ ಅಭಾವದಿಂದಲ್ಲ, ನೀರಸತೆಯ ಭಾವದಿಂದ',[2] 'ಲಕ್ಷ್ಮೀಶನ ಕಾವ್ಯವು ಉತ್ತಮಗುಣಗಳಿಂದ ಕೂಡಿದ್ದರೂ ಅದು ವಿಶೇಷವಾಗಿ ಜನಪ್ರಿಯವಾಗಿದ್ದರೂ ಶುದ್ಧಕವಿತಾದೃಷ್ಟಿಯಿಂದ ಅದು ಪಂಪ, ರನ್ನ, ನಾರಣಪ್ಪನ ಗ್ರಂಥಗಳ ಮಟ್ಟಕ್ಕೆ ಏರಲಾರದೆಂದು ಅನೇಕ ವಿಮರ್ಶಕರ ಅಭಿಪ್ರಾಯ. ಇದು ಬಲುಮಟ್ಟಿಗೆ ನಿಜವೂ ಹೌದು....ಅವನು ಪ್ರಥಮತಃ ಪಂಡಿತ. ಸಂಪ್ರದಾಯಶರಣ. ಉತ್ತಮ ಸಂಗ್ರಾಹಕ. ಮೇಲ್ಮಟ್ಟದ ಕತೆಗಾರ.'[3] ಈ ಅವತರಣಿಕೆಗಳಲ್ಲಿ ಲಕ್ಷ್ಮೀಶನ ವಿಷಯವಾಗಿ ವ್ಯಕ್ತವಾದ ತರತರದ ತೀರ್ಮಾನದ ಮಾದರಿಗಳನ್ನು ನೋಡಿಕೊಳ್ಳಬಹುದು. ಲಕ್ಷ್ಮೀಶನು ಮಹಾಕವಿಯೇ ? ಅವನ ಜೈಮಿನಿಭಾರತವು ಮಹಾಕಾವ್ಯವೇ ? ಎಂಬ ಪ್ರಶ್ನೆಗಳಿಗೆ ವಿಮರ್ಶಕರ ಉತ್ತರವು ಒಂದೇಸಮನಾಗಿಲ್ಲ. 'ಜೈಮಿನಿಭಾರತ'ವು ಸಾಂಪ್ರದಾಯಿಕಲಕ್ಷಣಗಳಿಂದ ಕೆಲಮಟ್ಟಿಗೆ ಮಹಾಕಾವ್ಯವಾಗಿದ್ದರೂ ಕಲಾದೃಷ್ಟಿಯಿಂದ ಸಮಗ್ರಸ್ವರೂಪದಲ್ಲಿ ಮಹಾಕೃತಿಯಲ್ಲವೆಂದೂ ಮಹಾಕೃತಿಯ ತೇಜೋಂಶವನ್ನು ಅಲ್ಲಲ್ಲಿ ತೋರಿದೆಯೆಂದೂ ನಮಗೆನಿಸುತ್ತದೆ. ಮೂಲದಲ್ಲಿಯ ಕಥಾವಸ್ತುವಿನ ಕೃತಕತೆಯನ್ನೂ ಶಬಲತೆಯನ್ನೂ ಲಕ್ಷ್ಮೀಶನು ಅನುಕರಿಸಿ ಬಿಡಿಯಾದ ಹಲಕೆಲವು

---

1 ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಅಧ್ಯಕ್ಷಭಾಷಣ (ಕವಿಲಕ್ಷ್ಮೀಶ, ಪು. ೮)

2 ಕೆ. ವಿ. ಪುಟ್ಟಪ್ಪ : ಉಪಮಾಲೋಲ ಲಕ್ಷ್ಮೀಶ (,, ಪು. ೧೯೨–೩)

3 ಎಸ್. ಅನಂತರಂಗಾಚಾರ್ : ಲಕ್ಷ್ಮೀಶ, ಪು. ೩೧, ೬೦.

ಕತೆಗಳಲ್ಲಿ ಮಾತ್ರ ಗ್ರಥನಕೌಶಲ್ಯದ ಹಿರಿಮೆಯನ್ನು ತೋರಿದ್ದಾನೆ. ಆದರಿಂದಲೇ ಅವನದು ಮಹಾಕವಿಯೋಗ್ಯತೆ ಎಂಬುದು ಸಿದ್ಧವಾಗುತ್ತದೆ. ಇಡಿಯ ಗ್ರಂಥದಲ್ಲಿಯ ಛಂದಸ್ಸು-ಶೈಲಿಗಳ ಪರಿಪಾಕದಿಂದಲೂ ಅವನ ಹಿರಿಯ ಶಕ್ತಿ ತಿಳಿಯುತ್ತದೆ. ಅವನು ಪ್ರಥಮತಃ ಪಂಡಿತ ಎನ್ನುವುದಕ್ಕಿಂತ ಕಥನಕವಿ ಎಂದರೆ ಹೆಚ್ಚು ಯುಕ್ತ. ಅವನು ಸಾಂಪ್ರದಾಯಿಕನಾದರೂ ಸಂಪ್ರದಾಯಶರಣನಲ್ಲ. ಪಾಂಡಿತ್ಯ – ಚಮತ್ಕೃತಿಗಳ ವ್ಯಾಮೋಹ ಅವನ ಕಾವ್ಯರಚನೆಯಲ್ಲಿ ಎದ್ದುಕಾಣುತ್ತಿದ್ದರೂ ಅದರ ಬುಡದಲ್ಲಿ ಕವಿತಾಸತ್ವವು ಸಿಲುಕಿ ಜರ್ಜರಿತವಾದ ಸಂದರ್ಭಗಳು ಕಡಿಮೆ. ಒಟ್ಟಿನಲ್ಲಿ ಲಕ್ಷ್ಮೀಶ ಮಹಾಕವಿಯಾದರೂ ಅವನ ಜೈಮಿನಿಭಾರತವು ಅಂಶದಲ್ಲಿ ಮಹತ್ತಾಗಿದೆ, ಸಮಗ್ರದಲ್ಲಿ ಮಹಾಕೃತಿಯಾಗಿಲ್ಲ.

ಗೋಪಕವಿ

ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಪ್ರಭಾವಳಿಯಲ್ಲಿ ಬೆಳೆದ ಕವಿಗಳಲ್ಲಿ ಗೋಪ ಇಲ್ಲವೆ ಗೋವಿಂದಕವಿಯೊಬ್ಬನು. ಇವನು 'ಚಿತ್ರಭಾರತ', 'ನಂದಿಮಾಹಾತ್ಮ್ಯ' ಎಂಬೆರಡು ಗ್ರಂಥಗಳನ್ನು ಬರೆದಿದ್ದಾನೆ. ಇತ್ತೀಚೆ ಉಪಲಬ್ಧವಾದ 'ಚಿತ್ರಭಾರತ'ದ ರಚನೆಯ ಕಾಲವನ್ನು ೧೫೮೧ ಎಂದಿವನೇ ಹೇಳಿದ ಕಾರಣ, ೧೬ನೆಯ ಶ.ದ ಉತ್ತರಾರ್ಧದಲ್ಲಿ ಇವನು ಜೀವಿಸಿದ್ದನೆಂಬುದು ಸ್ಪಷ್ಟವಾಗುತ್ತದೆ. ಇವನ ಗ್ರಂಥಗಳಿಂದ ಇವನು ವಿಜಾಪುರ ಜಿಲ್ಲೆಯ ಬೇಡಬುಯ್ಯರದ ಕರಣಿಕ ಕುಲದವನೆಂದೂ ಬ್ರಹ್ಮಚಾರಿಯಾಗಿ ಭಾರತವನ್ನೆಲ್ಲ ತೀರ್ಥಯಾತ್ರೆಗೋಸ್ಕರ ಸುತ್ತಿರಬಹುದೆಂದೂ ತಿಳಿಯುತ್ತದೆ. ಪೂರ್ವಕವಿಗಳಲ್ಲಿ 'ಲಕ್ಷ್ಮೀಪತಿ'ಯನ್ನು ನೆನೆದಿದ್ದಾನೆ. ಅಲ್ಲದೆ 'ಉತ್ತಮಕವೀಂದ್ರೋತ್ಸವಂ **ಚೈತ್ರಶುಕನಲಿ** ಈವುತ್ತಿರಲು ಸದ್ಗುರುಕೃಪಾಮೃತದ ಪೆದ್ದೊರೆಯ ಒತ್ತಿಬಹ ಪರ್ವಿನಿಂದ ತಳೆದು' (ಚಿತ್ರಭಾರತ ಪೀಠಿಕೆ, ಪ. ೨೩) ಎಂಬಲ್ಲಿ ಲಕ್ಷ್ಮೀಶ-ಕುಮಾರವ್ಯಾಸ ಇಬ್ಬರನ್ನೂ ಸೂಚಿಸಿರಬೇಕೆಂಬ ಊಹೆಯಿದೆ. ಅವರಂತೆ ಇವನೂ ಭಾಗವತಸಂಪ್ರದಾಯಿಯಾಗಿದ್ದನು. ಎರಡೂ ಕೃತಿಗಳಲ್ಲಿ 'ಶ್ರೀವಿಷ್ಣುಮದನಗೋಪಾಲ'ನು ತನ್ನ ಆರಾಧ್ಯದೈವವೆಂದು ಹೇಳುತ್ತಾನೆ. ಲಕ್ಷ್ಮೀಶನಂತೆ ಮದನಗೋಪಾಲನೇ ತನ್ನಲ್ಲಿ ನಿಂತು ಕಾವ್ಯ ಹೇಳಿಸಿದವನೆಂದು ಸಮರ್ಪಣಭಾವದಿಂದ ಹೇಳುತ್ತಾನೆ (ಚಿ.ಭಾ. ಪೀಠಿಕೆ ೨೪, ನಂ.ಮಾ. ೧–೧೪). ಲಕ್ಷ್ಮೀಶನ ಭಾವ–ಭಾಷೆ, ಪ್ರಾಸಯಮಕಗಳ ಅನುಕರಣೆ ಹೇರಳವಾಗಿದೆ. 'ಚಿತ್ರಭಾರತ'ದಲ್ಲಿ ಭಾರತಕಥಾಂಶವೇ ಇದೆ. ಸುಮಾರು ಅರ್ಧದವರೆಗೆ ರಾಜಸೂಯ, ದ್ಯೂತ, ವನವಾಸವಿದ್ದು ಉಳಿದರ್ಧದಲ್ಲಿ ವತ್ಸಲಾಹರಣದ ವಿಸ್ತಾರವಿದೆ. ಮಹಾರಾಷ್ಟ್ರಭಾಷೆಯಲ್ಲಿ ಈ ಕಥೆ ಪ್ರಚುರವಾಗಿದೆಯೆಂದು ಕನ್ನಡದಲ್ಲಿ ಬರೆದೆನಾಗಿ ಹೇಳಿದ್ದಾನೆ. 'ಸಾರಮಿದು ಶ್ರೀಹರಿಕಥಾಮೃತಂ' ಎಂಬಲ್ಲಿ ಅವನ ಭಾಗವತದೃಷ್ಟಿ ಪ್ರಕಟವಾಗಿದೆ. ಕುಮಾರವ್ಯಾಸಾದಿಗಳ ಪರಂಪರೆಗೆ

ಅನುಗುಣವಾಗಿದೆ. ಚಿತ್ರಕವಿತ್ವದ ಚಮತ್ಕೃತಿ ಶಬ್ದಾರ್ಥದಲ್ಲಿ ವೆಗ್ಗಳವಾದ ಕಾರಣ ಚಿತ್ರಭಾರತವೆಂದಿದಕ್ಕೆ ಹೆಸರು. ೩೦ ಸಂಧಿಗಳ ಸಾವಿರಾರು ವಾರ್ಧಕಷಟ್ಪದಿಗಳ ಈ ಕೃತಿಯಲ್ಲಿ ಭಕ್ತಿಯಿದೆ, ಚಮತ್ಕೃತಿಯಿದೆ, ಮಧ್ಯಮಕಾವ್ಯದ ಗುಣವಿದೆ. ಆದರೆ ಅವನೆಂದಂತೆ ಇದು 'ಮಹಾಕೃತಿ'ಯಲ್ಲ. 'ನಂದಿಮಾಹಾತ್ಮ್ಯ' ಅವನ ಹೆಚ್ಚು ಪರಿಪಕ್ವವಾದ ಕೃತಿ. ಅದರಲ್ಲಿಯೂ ನಂದಿಯ ಮಾಹಾತ್ಮ್ಯವನ್ನು ಸಾರುವ ಒಂದು ಸೂತಪುರಾಣವಿದೆ. ಕಥಾನಕದಲ್ಲಿ ಆಕರ್ಷಕವಾದದ್ದೇನೂ ಇಲ್ಲ. ಆದರೂ ಕವಿಯ ಕಲ್ಪನಾಶಕ್ತಿ, ಭಾಷಾಶೈಲಿಗಳು ಹೆಚ್ಚು ಪಾಡಿಗೆ ಬಂದಿವೆ. 'ತನುವಿಲ್ಲದಲ್ಲಿ ಪ್ರಾಣಪ್ರತಿಷ್ಠೆಯ........ಕವೀಶ್ವರರ ಘನತೆಯಂ ಬಣ್ಣಿಸುವರಾರ್ ಆನೆ ಹೋದುದೆ ಬೀದಿಯಲ್ಲವೆ ಜಗದೊಳು' (೧-೧೬) ಎಂಬ ತೆರದ ಪದ್ಯಗಳಲ್ಲಿ ಶ್ರೇಷ್ಠಕಾವ್ಯದ ತಿಳಿವು ಮೂಗಿದೆ. 'ಚಿತ್ರಭಾರತ'ದಲ್ಲಿಯ ಕ್ಲಿಷ್ಟತೆ, ವೈಷಮ್ಯಗಳು ಇಲ್ಲಿ ಕಡಿಮೆಯಾಗಿ ಲಕ್ಷ್ಮೀಶನಿಗೆ ಸಮಾನವಾದ ಪ್ರಸಾದಮಾಧುರ್ಯಗಳು ಕಾಣುತ್ತವೆ. 'ನವೀನ-ರಸಚಿತ್ರಾರ್ಥಭರಿತಕಾವ್ಯಂ ಸುಜನಸೇವ್ಯಸುಶ್ರಾವ್ಯಮಾಗಿದೆ ಮಹೀಮಂಡಲದೊಳು' (೧-೨೦) ಎಂಬ ಹೇಳಿಕೆ ಸಫಲವಾಗಿದೆ. '**ಈ ನವ್ಯಂ ಕಾವ್ಯಂ** ಜಗತ್‌ಸೇವ್ಯ-ಮಾಗುವಂತೆ' (೧-೧೦) ನಂದಿ ಮಾಡಲಿ ಎಂದು ಕವಿ ಬೇಡಿಕೊಂಡಿದ್ದಾನೆ. ನಂದೀಶಮಾಹಾತ್ಮ್ಯ ಎಂಬ ವಿಷಯದ ಹೊರತಾಗಿ ಇದರಲ್ಲಿ ನವ್ಯತೆಯೇನೂ ತಿಳಿಯದು.

ನಾಗರಸ

ಇದೇ ಭಾಗವತಪರಂಪರೆಯಲ್ಲಿ ಕನ್ನಡಕ್ಕೆ ತನ್ನದೊಂದು ಕಾಣಿಕೆಯನ್ನು ನೀಡಿದವನು ನಾಗರಸನು. ಇವನ ಕಾಲದೇಶಾದಿ ಚರಿತ್ರೆಯೇನೂ ತಿಳಿದಿಲ್ಲ. ತಾನು ವಿಶ್ವೇಶ್ವರನ ಸುತ, ಶಂಕರಗುರುವಿನ ಶಿಷ್ಯ ಎಂದು ಹೇಳಿದ್ದಾನೆ, 'ವಿಟ್ಠಲ-ರಾಯ'ನನ್ನು ನೆನೆದಿದ್ದಾನೆ. ಯಾವ ಕಾರಣವನ್ನೂ ಕೊಡದೆ 'ಇವನು ಸುಮಾರು ೧೬೫೦ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ' ಎಂದು ಕವಿಚರಿತಕಾರರು ಹೇಳಿದ್ದಾರೆ. ಶೈಲಿಯೇನೊ ಶಿಥಿಲದೇಸಿಯಿಂದ ಮಿಶ್ರವಾದ ಕಾರಣ ೧೬-೧೭ನೆಯ ಶತಮಾನದಲ್ಲಿ ಇವನಿರಬಹುದು. ದಾಸಕೂಟದ ಭಕ್ತಿವಾಙ್ಮಯದ ಪ್ರಭಾವಕ್ಕೆ ಒಳಪಟ್ಟಿರಬೇಕು. ಇವನು ಭಾಗವತಸಂಪ್ರದಾಯದ ಸ್ಮಾರ್ತ ಎಂದರೆ ಶಂಕರಾದ್ವೈತ ಮತದವನೆಂಬುದು ಗ್ರಂಥಸ್ಥಪ್ರಮಾಣಗಳಿಂದ ತಿಳಿಯಬಹುದು. ಭಗವದ್ಗೀತೆಯ ಕನ್ನಡ ಅನುವಾದವನ್ನು ಪದ್ಯಕ್ಕೆ ಪದ್ಯವಾಗಿ ಭಾಮಿನಿಷಟ್ಪದಿಯಲ್ಲಿ ಮಾಡಿದ್ದಾನೆ. '**ವಾಸುದೇವಕಥಾಮೃತವ** ವಿಶ್ವಾಸದಿಂ ನೆರೆ ತಿಳಿದು ಸುಖಿಸುವುದು ಆಸೆಯೆಲ್ಲವ ಬಿಟ್ಟು ಮುನಿಗಳು ಹರಿಪರಾಯಣರು' (ಪೀ. ೩) ಎಂಬುದು ಇವನ ಭಾಗವತತನಕ್ಕೆ ಸಾಕ್ಷಿ. ಭಗವದ್ಗೀತೆ ಎಂದರೆ ಅವನಿಗೆ 'ವಾಸುದೇವಕಥಾಮೃತ'. ಕುಮಾರ-

ವ್ಯಾಸನಿಂದ ನಾಗರಸನವರೆಗೆ ಬಹುಶಃ ಎಲ್ಲ ಭಾಗವತಕವಿಗಳು ಹೀಗೆ ಹೇಳಿರುವುದನ್ನು ಲಕ್ಷಿಸಬೇಕು. ಗೀತೆಯ ಅನುವಾದದಲ್ಲಿ ಅನೇಕ ಕಡೆಗೆ ಮೂಲದಲ್ಲಿ ಸ್ಫುಟವಾಗಿ ಇಲ್ಲದಾಗಲೂ ಶಂಕರಾದ್ವೈತದ ರೀತಿಯಲ್ಲಿ ಕನ್ನಡಿಸಿದ್ದಾನೆ. ಉದಾಹರಣೆಗೆ, 'ಪರಮುನಿಗಳು ಯತ್ನದಿಂ ಕಾಂಬರು ಕಣಾ ಜೀವಾತ್ಮನೇ ನಿರ್ಧರಿಸಿ ನೋಡಲು ತನ್ಮೊಳಿಹ ಪರಮಾತ್ಮನೆಂದಿಂತು' (೧೫-೧೧). ಇದಕ್ಕೆ ಮೂಲವಾದ ಪದ್ಯದಲ್ಲಿ 'ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಂ' ಎಂದಿದೆ. ಹಲವು ಕಡೆಗೆ ನಾಯಾವಾದವನ್ನು ಅನುಗೊಳಿಸಿದ್ದಾನೆ.

ಒಟ್ಟಿನಲ್ಲಿ ನಾಗರಸನ ಅನುವಾದಕಾರ್ಯವು ಸಮರ್ಪಕವಾಗಿದೆ, ಹೃದ್ಯವಾಗಿದೆ. ತನ್ನ ಒಪ್ಪಿಗೆಯ ಮತದೃಷ್ಟಿಯಿಂದ ಗೀತೆಯ ಶ್ಲೋಕಗಳನ್ನು ಚೆನ್ನಾಗಿ ತಿಳಿದುಕೊಂಡು ಅವಕ್ಕೆ ತಿಳಿಗನ್ನಡದ ಸ್ವರೂಪಕೊಡುವುದರಲ್ಲಿ ಅವನು ಪಡೆದ ಯಶಸ್ಸು ಹೆಚ್ಚಿನದು. ಸಂಸ್ಕೃತಪದಗಳನ್ನು ಹಾಗೇ ಇಟ್ಟು ಇಲ್ಲವೆ ಇನ್ನೂ ಕಠಿನವಾದ ಪದಗಳನ್ನು ಸೇರಿಸಿ ಅವನು ಭಾಷಾಂತರಮಾಡಿದ್ದರೆ ಇವನಿಗಿಂತ ಭಗವದ್ಗೀತೆ ಸರಳವಾಗಬಹುದಾಗಿತ್ತು. ಇವನ ಸರಳ, ಸ್ಪಷ್ಟ, ಅಚ್ಚಗನ್ನಡದ ಅನುವಾದಕ್ಕೆ 'ಆವನೊಬ್ಬನು ತನುವಿನೊಳಗಿಹ ಜೀವವನು ಕೊಲುವಾತನೆಂಬವನಾವನೊಬ್ಬನು ಕೊಲಿಸಿಕೊಂಬವ ತಾನೆಯೆಂಬವನು' (೨-೧೯) ಎಂದು ಮುಂತಾದ ಪದ್ಯವನ್ನು ಉದಾಹರಣೆಗೆ ನೋಡಬೇಕು. ಕೆಲವು ಸಲ ಮೂಲದ ಅರ್ಥವು ಅಸ್ಪಷ್ಟವಾಗಿದೆ, ಶೈಲಿ ಕ್ಲಿಷ್ಟವಾಗಿದೆ. ಆದರೆ ಹೆಚ್ಚು ಕಡೆಗಳಲ್ಲಿ ನಾಗರಸನು ಕನ್ನಡಿಗನಾಗಿ ಕನ್ನಡಭಗವದ್ಗೀತೆಯನ್ನು ಅಂದವಾಗಿ ರಚಿಸಿದ್ದಾನೆ. ಪದ್ಯಪೂರಕವೆಂದು ತನ್ನ ಕೆಲವು ಮಾತುಗಳನ್ನು ಸೇರಿಸುವಲ್ಲಿ 'ಕನಸಿನ ಕತ್ತಲೆಯಲ್ಲಿಹ ಕಳ್ಳನಂದದಿ' (೧೪-೫) ಎಂಬ ಕ್ವಚಿತ್ತಾದ ಹೋಲಿಕೆಗಳನ್ನು ಕೊಟ್ಟಿದ್ದಾನೆ. ತಾತ್ವಿಕಗ್ರಂಥಗಳ ಸರಳಾನುವಾದಕ್ಕೆ ಮಾದರಿಯಾಗಿರುವ ಇವನ ಗ್ರಂಥವು ಕನ್ನಡ-ಜನದಲ್ಲಿ ಹೆಚ್ಚು ಪ್ರಚಾರಗೊಳ್ಳಬೇಕಾಗಿದೆ.

೨೫. ದಾಸವಾಙ್ಮಯ (೧)

ಕುಮಾರವ್ಯಾಸನಿಂದ ನಾಗರಸನವರೆಗೆ ಆಗಿಹೋದ ಭಾಗವತಕವಿಗಳು ಭಾರತ ರಾಮಾಯಣ, ಭಾಗವತ, ಭಗವದ್ಗೀತೆ ಇವನ್ನು ಕನ್ನಡಿಸಿ ದೇಸಿಯ ಛಂದಸ್ಸಿನ ವೈದಿಕಪರಂಪರೆಯ ವಾಙ್ಮಯವನ್ನು ನೀಡಿದ್ದನ್ನು ನೋಡಿದೆವು. ಇನ್ನು ಇದೇ ಯುಗದಲ್ಲಿ ಅದೇ ಪರಂಪರೆಯ ದಾಸವಾಙ್ಮಯವು ಹಾಡಿನ ರೂಪತಾಳಿ ಬಳಕೆ ಮಾತಿಗೆ ಇನ್ನೂ ಹತ್ತಿರ ಬಂದು ರಾಶಿರಾಶಿಯಾಗಿ ಬೆಳೆಯಿತು, ಜನಜೀವನದ ಒಂದು ಚಿರಂತನವಾದ ಸ್ಫೂರ್ತಿಕೇಂದ್ರವನ್ನು ನಿರ್ಮಾಣಮಾಡಿತು. ಬಸವಯುಗದ ಕೊನೆಯಲ್ಲಿ ನರಹರಿತೀರ್ಥನ ಉಲ್ಲೇಖಮಾಡಿ ದಾಸವಾಙ್ಮಯದ ಉದಯವನ್ನು ಸೂಚಿಸಿದೆವು. ಈ ಯುಗದಲ್ಲಿ, ಅದರಲ್ಲಿಯೂ ೧೬ನೆಯ ಶ.ದ ಮೊದಲರ್ಧದಲ್ಲಿ ಈ ವಾಙ್ಮಯವು ತನ್ನ ಶಿಖರವನ್ನು ಮುಟ್ಟಿತು. ವ್ಯಾಸರಾಯ, ಅವನ ಶಿಷ್ಯಂದಿರಾದ ಪುರಂದರದಾಸ–ಕನಕದಾಸರು ಈ ತ್ರಿಮೂರ್ತಿಗಳೇ ಇದಕ್ಕೆ ಅಂಥ ಉನ್ನತಿಯನ್ನು ತಂದುಕೊಟ್ಟರು. ಅವರ ತರುವಾಯ ವಾದಿರಾಜ, ವಿಜಯದಾಸ, ಜಗನ್ನಾಥದಾಸ ಪ್ರಸನ್ನವೆಂಕಟದಾಸ ಮೊದಲಾದ ಕೆಲವರು ಈ ವಾಙ್ಮಯದ ಪರಂಪರೆಯನ್ನು ಮುಂದರಿಸಿದ್ದಾರೆ. ಈ ಪರಂಪರೆ ಅಖಂಡವಾಗಿದೆಯೆಂದೂ ಎಲ್ಲರಲ್ಲಿ ಅಷ್ಟೆ ಉಜ್ವಲವಾಗಿದೆಯೆಂದೂ ಹೇಳಲು ಬರುವುದಿಲ್ಲ. ಶಿವಶರಣರ ವಚನವಾಙ್ಮಯದಲ್ಲಿ ಹೇಗೋ ಹಾಗೆ ಇಲ್ಲಿಯೂ ಕೃತಿಗೆ ಮೂಲ ಜೀವನಸಿದ್ಧಿ, ವ್ಯಕ್ತಿತ್ವಪರಿಣತಿ. ಕೇವಲ ಪಾಂಡಿತ್ಯ–ಕವಿತಾಶಕ್ತಿಗಳಿಂದ ಇಂಥ ಸಾಹಿತ್ಯ ಸಹಜಸಂಪನ್ನವಾಗಿ ನಿರ್ಮಾಣ ವಾಗದು. ಅಂತೆಯೆ ಈ ಕಾರಣದಿಂದಲೂ ಒಮ್ಮೊಮ್ಮೆ ಚಾರಿತ್ರಿಕ ಕಾರಣಗಳಿಂದಲೂ ಪರಂಪರೆ ಅವ್ಯಾಹತವಾಗದಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ದಾಸವಾಙ್ಮಯದ ಚಾರಿತ್ರಿಕವಾಗಿ ನಾಲ್ಕು ಮೆಟ್ಟುಗಳಿವೆಯೆಂದು ಹೇಳಲಾಗುತ್ತದೆ.[1] ೧ನೆಯದು ಮಧ್ವಾಚಾರ್ಯರ ಕಾಲದಲ್ಲಿ ಅವರ ಶಿಷ್ಯಸಂಘವು ನರಹರಿತೀರ್ಥನ ನೇತೃತ್ವದಲ್ಲಿ ಪ್ರಕಟಮಾಡಿದ್ದು. 'ನರಹರಿತೀರ್ಥರು ಕನ್ನಡದಲ್ಲಿ ಪದಗಳನ್ನು ರಚಿಸಿ ದಾಸಕೂಟದ ಮೂಲಪುರುಷರೆಂದು ಪ್ರಸಿದ್ಧಿಪಡೆದಿದ್ದಾರೆ.'[2] ೨ನೆಯದು ಕೃಷ್ಣದೇವರಾಯನ ಕಾಲದಲ್ಲಿ ಪುರಂದರದಾಸ, ಕನಕದಾಸರು ವ್ಯಾಸರಾಯನ ಗುರುತ್ವದಲ್ಲಿ ಅಭಿವ್ಯಕ್ತಿ ಗೊಳಿಸಿದ್ದು. ೩ನೆಯದು ವಿಜಯದಾಸ ಮುಂತಾದ ದಾಸವೃಂದವು ಸೃಷ್ಟಿಮಾಡಿದ್ದು ೪ನೆಯದು ಪ್ರಾಣೇಶ, ಗುರುಪ್ರಾಣೇಶ ಮುಂತಾದ ದಾಸರು ರಚಿಸಿದ್ದು 'ಮೊದಲನೆಯ ಗುಂಪಿನ ಪ್ರಭಾವವು ಸುಮಾರು ೩೦೦ ವರ್ಷಗಳವರೆಗೆ ಮೆರೆದಿದ್ದ ಎರಡನೆಯ ಗುಂಪು ಸುಮಾರು ೨೫೦ ವರ್ಷ ಬಾಳಿತು. ಮೂರನೆಯ ಗುಂಪು ಹು...

---

1 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೪೯, ೫೦

2 ,, ,, ಪು. ೪೯

ಸುಮಾರು ೬೦-೭೦ ವರ್ಷಗಳಾಗುವಷ್ಟರಲ್ಲಿ ಪ್ರಾಣೇಶರಾಯರು....ಅಲ್ಲಲ್ಲಿ ಉದಯಿಸಿ-
ಕೊಂಡಿ ಪುರಂದರದಾಸ-ವಿಜಯದಾಸಾಚಾರ್ಯರ ಉಪದೇಶಗಳನ್ನು ಮತ್ತೆ, ವಿಷಯ-
ಲೋಲುಪರಾಗಿ ಶ್ರೀಹರಿಯ ಉಪಾಸನೆಯನ್ನು ಮರೆತಿದ್ದ ಜನರಿಗೆ ತಮ್ಮ ಪ್ರೌಢ-
ನುಡಿಗಳಿಂದ ಬೋಧಿಸಹತ್ತಿದರು.'[1] ಭಕ್ತರೂ ಕವಿಗಳೂ ಕಾಲಕಾಲಕ್ಕೆ ಉದಯಿಸಿ
ಪೂರ್ವಿಕರ ಪ್ರಭಾವವು ಮುಸುಳಿಸಲಿ ಬಿಡಲಿ, ಹೊಸ ಕೃತಿಗಳಿಂದ ಹೊಸ ವರ್ಚಸ್ಸು
ತೋರುತ್ತಾರೆ. ಆದರೆ ಯಾವಾಗಲೂ ಒಂದು ಅಖಂಡಪರಂಪರೆಯ ಸ್ವರೂಪವು
ಅವರ ಕಾರ್ಯಕ್ಕೆ ಇರುವುದೆಂದು ಹೇಳಲಾಗದು. ೧೩ನೆಯ ಶ.ದ ಕೊನೆಗಿದ್ದ
ನರಹರಿತೀರ್ಥನು 'ದಾಸಕೂಟದ ಮೂಲಪುರುಷ'ನಾಗಿ ಹೋದನು. ಆದರೆ ಅವನ
ತರುವಾಯ ೧೫ನೆಯ ಶ.ದ ಶ್ರೀಪಾದರಾಯನವರೆಗೆ ಯಾರ ಹೆಸರೂ ಕೇಳಬರುವು-
ದಿಲ್ಲ. ದಾಸಕೂಟಕ್ಕೆ ಹಿರಿಯನೆಂದು ಕೀರ್ತನಕಾರರು ಮೊದಲು ಶ್ರೀಪಾದರಾಯ-
ನನ್ನು ನೆನೆದಿರುವುದನ್ನು ನೋಡಿದರೆ ನರಹರಿತೀರ್ಥನ ಬದಲು ಅವನೇ ಮೊದಲಿಗ-
ನಾಗಿರಬೇಕೆಂದು ತೋರುವಂತಿದೆ. ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕಾಗಿದೆ.
ಸದ್ಯದ ಮಟ್ಟಿಗೆ ನರಹರಿತೀರ್ಥನೇ ಮೊದಲಿಗನೆಂದು ನಾವು ಗ್ರಹಿಸಿದ್ದೇವೆ. ಪರಂಪರೆ
ತ್ರುಟಿತವಾಗಿದೆ ಎಂಬುದರಿಂದ ಅವನು ಮೊದಲಿಗನಲ್ಲ ಎಂದು ತಿಳಿಯಬೇಕಾಗಿಲ್ಲ.
ಕನ್ನಡದಲ್ಲಿ ಧಾರ್ಮಿಕವಾಙ್ಮಯವನ್ನು ರಚಿಸಬೇಕೋ ಬೇಡವೋ ಎಂಬ ಬಗ್ಗೆ
ಬ್ರಾಹ್ಮಣಕವಿಗಳ ಮನೋವೃತ್ತಿ ೧೫ನೆಯ ಶ.ದವರೆಗೆ ದೃಢವಾಗಿರಲಿಲ್ಲ. ವಿಜಯ-
ನಗರಕಾಲದಲ್ಲಿ ಅದು ದೃಢವಾಯಿತು ಮಾತ್ರವಲ್ಲ, ಒಂದು ಆಳವಾದ ಶ್ರದ್ಧೆಯು
ಬೇರೂರಿತು. ಅಂತೇ ಕುಮಾರವ್ಯಾಸ ಮುಂತಾದವರ ವಿಪುಲನಿರ್ಮಾಣವು ಈ
ಕಾಲದಲ್ಲಿ ಆಯಿತು, ದಾಸವಾಙ್ಮಯವೂ ಸಮೃದ್ಧವಾಯಿತು. ಇಷ್ಟಾದರೂ
ವಿಜಯನಗರಪತನದ ತರುವಾಯ ಉಂಟಾದ ವಿಷಮವಾತಾವರಣದಲ್ಲಿ ಮತ್ತೆ ಅದರ
ಪರಂಪರೆ ಕೆಲಕಾಲ ಖಂಡಿತವಾಯಿತು. ಅನಂತರ ವಿಜಯದಾಸ ಮೊದಲಾದವರು
ಅದನ್ನು ಮುಂಬರಿಸಿದರು. ಬರಬರುತ್ತ ಬ್ರಾಹ್ಮಣ್ಯಕ್ಕೆ ಪ್ರಾಪ್ತವಾದ ದುರವಸ್ಥೆಯಲ್ಲಿ
ದಾಸಜೀವನದ ತೇಜಸ್ವಿತೆ ಕಡಿಮೆಯಾದಂತೆ ದಾಸಸಾಹಿತ್ಯವೂ ಕಳೆಗುಂದಿತೆಂದು
ಹೇಳಬಹುದು.

ಶ್ರೀಪಾದರಾಯ

ಲಕ್ಷ್ಮೀನಾರಾಯಣ ಮುನಿಯೆಂದು ಹೆಸರಾಗಿ ಇವನು ಶ್ರೀ ಮಧ್ವಾಚಾರ್ಯ
ಶಿಷ್ಯನಾದ ಪದ್ಮನಾಭತೀರ್ಥನ ಪೀಳಿಗೆಯ ಮುಳುಬಾಗಿಲಮಠಕ್ಕೆ ಒಂಬತ್ತನೆಯ
ಪೀಠಿಯವನಾದ ಸ್ವಾಮಿಯಾದನು, ಮಹಾಪಂಡಿತನೆಂದು ಖ್ಯಾತಿಪಡೆದನು. ಕನ್ನಡ-
ದಲ್ಲಿ ಧರ್ಮಗ್ರಂಥಗಳನ್ನು ಪರಿವರ್ತಿಸಬೇಕೆಂಬ ಅಭಿಲಾಷೆ ಇವನಲ್ಲಿ ಉಂಟಾದುದು

1 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೫೦

ಅಂದಿನ ಪರಿಸ್ಥಿತಿಯಲ್ಲಿ ಕ್ರಾಂತಿಕಾರಕವೇ ಆಗಿತ್ತು. 'ಇದಕ್ಕಾಗಿ ಭಾಗವತ ತಂ
ವೊಂದನ್ನೇರ್ಪಡಿಸಿ ಪೂಜಾಕಾಲದಲ್ಲಿ ವೇದಪಾರಾಯಣ ಮಾಡಿದಂತೆ ಭಾಗವತ
ಮುಖದಿಂದ ಕನ್ನಡದೇವರನಾಮಗಳನ್ನು ಹಾಡಿಸಿದರು.'[1] ಅವುಗಳಲ್ಲಿ ಮುಖ
ವಾದುವೆಂದರೆ ಅವನೇ ರಚಿಸಿದ 'ಭ್ರಮರಗೀತೆ', 'ವೇಣುಗೀತೆ', 'ಗೋಪೀಗೀತೆ
ಗಳು. ಇವುಗಳಲ್ಲಿ ಗೇಯುತೆಯಿತೆ, ಪ್ರಾಸದ ಸೊಗಸಿದೆ. ಶೈಲಿಯಲ್ಲಿ ಅಶುದ್ಧವಾ
ಮಾತಿನ ದೇಸಿಯೂ ಸೇರಿಕೊಂಡಿದೆ. ಅವನ ಕೃತಿಗಳಲ್ಲಿ ಅನೇಕಪ್ಟೋ ದೊರೆಯ
ಹೋಗಿವೆ. ಕೆಲವನ್ನು ಮಾತ್ರ 'ರಂಗವಿಠ್ಠಲ' ಎಂಬ ಮುದ್ರಿಕೆಯಲ್ಲಿ ಅವ
ರಚಿಸಿದ್ದನ್ನು ನಾವು ಓದಬಹುದು. 'ಶ್ರೀಪಾದರಾಜರ ಕನ್ನಡಕೃತಿಗಳಲ್ಲಿ ಪದಲಾಲಿ
ಅಲಂಕಾರಪ್ರೌಢಿಮೆ, ಶೃಂಗಾರ–ಶಾಂತಿ, ಭಕ್ತಿರಸಗಳ ನಿರೂಪಣೆ ಇವು ಓದುಗ
ಚಿತ್ತವನ್ನೂ ಹೃದಯವನ್ನೂ ಆಕರ್ಷಿಸುವವು. ಶ್ರೀ ಭಾಗವತದ ಕೃಷ್ಣಕಥೆಯ
ಚಿಕ್ಕ ಚಿಕ್ಕ ಪದಗಳಲ್ಲಿ ಬಹುರಸವತ್ತಾಗಿ ಹಾಡಿದ್ದಾರೆ'[2] ಉಪಲಬ್ಧಕೃತಿಗಳ
ಅವನ ವ್ಯಕ್ತಿತ್ವಮಹಿಮೆಯ ಅಚ್ಚು ಮೂಡಿದೆಯಾದರೂ ಸಾಹಿತ್ಯದೃಷ್ಟಿಯಿಂದ ಅ
ಹಿರಿದಾಗಿವೆ ಎಂದು ಹೇಳಲಾಗದು.

ವ್ಯಾಸರಾಯ ಇಲ್ಲವೆ ವ್ಯಾಸತೀರ್ಥ

ಇವನು ಶ್ರೀಪಾದರಾಯನ ಶಿಷ್ಯೋತ್ತಮನಾಗಿ ಅಷ್ಟೇ ದೊಡ್ಡ ಪಂಡಿತನೆಂ
ಪ್ರಖ್ಯಾತನಾದನು, ವ್ಯಾಸರಾಯಮಠದ ಸ್ವಾಮಿಯಾದನು. ವಿಜಯನಗರದ ದೊ
ಗಳಿಂದ ಇವನು ವಿಶೇಷ ಮನ್ನಣೆಪಡೆದನು. ವಿಶೇಷವಾಗಿ ಕೃಷ್ಣದೇವರಾಯ
ಆಳಿಕೆಯಲ್ಲಿ ಒದಗಿದ ಕುಹುಯೋಗವನ್ನು ನಿವಾರಿಸಿದನು. ವಿದ್ಯಾರಣ್ಯನು ವಿಜಯ
ನಗರ ಸಾಮ್ರಾಜ್ಯದ ಆರಂಭಕ್ಕೆ 'ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ರಾಜ್ಯ
ಲೌಕಿಕಂ' ಎಂದು ತೋರಿ ಕ್ಷತ್ರಿಯ ತೇಜಸ್ಸಿಗೆ ಬ್ರಹ್ಮತೇಜದ ಬೆಂಬಲನೀಡಿದ
ವ್ಯಾಸರಾಯನು ಆ ಸಾಮ್ರಾಜ್ಯದ ವೈಭವಕಾಲದಲ್ಲಿ ಅದೇ ಬಗೆಯ ಅಂತರಿಕಶ
ಯುಳ್ಳ ಆಧಾರವಾಗಿದ್ದನು. ಸಂಸ್ಕೃತದಲ್ಲಿ ಅವನ ತರ್ಕಶಾಸ್ತ್ರದ ಮತ್ತು ಮಧ್ವಮ
ಪ್ರತಿಪಾದಕವಾದ ಗ್ರಂಥಗಳು ಹೆಸರಾಗಿವೆ. ಕನ್ನಡದಲ್ಲಿ ದೇವರನಾಮಗಳನ್ನು ಬರೆ
ಬರೆಯಿಸಿ ತನ್ನ ಗುರು ಶ್ರೀಪಾದರಾಯನ ಹೊಸ ಸಂಪ್ರದಾಯವನ್ನು ಶ್ರದ್ಧೆಯಿ
ಅವನು ಮುಂದುವರಿಸಿದನು. ವ್ಯಾಸಕೂಟ ಮತ್ತು ದಾಸಕೂಟ ಎಂಬ ಎರ
ಟಿಸಿಲುಗಳು ಅವಕ್ಕೆ ಒಡೆದುವು. ಅವುಗಳಲ್ಲಿ ವಿರೋಧವುಂಟಾಯಿತೆಂದೂ ಅನ್ಯೋ
ಅವಹೇಳನೆ ನಡೆಯಿತೆಂದೂ ಕೆಲವರು ಹೇಳುತ್ತಾರೆ. ಅವರೆ ಒಂದೇ ಭಾಗವ
ಸಂಪ್ರದಾಯದ ಪಂಡಿತವರ್ಗವಾದ ಸಂಸ್ಕೃತಶಾಖೆ ವ್ಯಾಸಕೂಟವೆಂದೂ ಜ

1 ಬೇಲೂರು ಕೇಶವದಾಸರು: ಕರ್ಣಾಟಕ ಭಕ್ತವಿಜಯ, ಭಾ. ೧, ಪು. ೩೦

2 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೫೫

ಮುಖವಾದ ಕನ್ನಡಕೀರ್ತನೆಗಳ ರಾಜಿ ದಾಸಕೂಟವೆಂದೂ ಅವುಗಳಲ್ಲಿ ಸ್ವತಃವಿವ ಬೋಧವಿಲ್ಲವೆಂದೂ ಬೇರೆ ಕೆಲವರು ಹೇಳುತ್ತಾರೆ. ಎರಡರಲ್ಲಿಯೂ ಸತ್ಯಾಂಶವಿದೆ. ತ್ವತಃ ವಿರೋಧವಿರದಿದ್ದರೂ ಆಚರಣೆಯಲ್ಲಿ ಒಬ್ಬರೊಬ್ಬರ ಹೀಯಾಳಿಕೆ ತೋರಿರುವ ಭವವಿದೆ. ಪುರಂದರದಾಸ–ಕನಕದಾಸರು ವ್ಯಾಸರಾಯನ ದಾಸಕೂಟದಲ್ಲಿಯು ಷ್ಠಶಿಷ್ಯರಾಗಿ ಕನ್ನಡಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಿದರು.

ವ್ಯಾಸರಾಯನು ಬರೆದ ಕೀರ್ತನೆಗಳವೆಷ್ಟೋ ಈಗ ಲುಪ್ತವಾಗಿವೆ. ಉಪಲಬ್ಧ-ದವುಗಳು ನೂರಾರು ಮಾತ್ರ. ಅವುಗಳಲ್ಲಿ ಅವನ ಭಕ್ತಿನಿರ್ಭರತೆ, ಸಂಗೀತಜ್ಞಾನ, ತತ್ತ್ವದೃಷ್ಟಿಗಳನ್ನು ಕಾಣಬಹುದು. 'ವೃತ್ತನಾಮ' ಎಂಬ ಹೆಸರಿನ ಪ್ರಕಾರವು ಪಾದರಾಯನಿಂದ ಆರಂಭವಾಗಿ ವ್ಯಾಸರಾಯನ ಕಾಲದಲ್ಲಿ ಹೆಚ್ಚು ರೂಢ-ಯಿತು. ಅದರಲ್ಲಿ ಒಂದು ಪದದ ಪಲ್ಲವಿ, ಒಂದು ವೃತ್ತ, ಒಂದು ನುಡಿ ಹೀಗೆ ಪರ್ಯಾಯದಿಂದ ಬರುತ್ತವೆ. ಈ ವೃತ್ತನಾಮದಲ್ಲಿ ವ್ಯಾಸರಾಯನು ಸುಲಭವಾದ ಗವದ್ಗೀತೆಯನ್ನು ಬರೆದಿದ್ದಾನೆ. ಇವನ ಕೀರ್ತನೆಗಳಲ್ಲಿ 'ದಾವಾನಲನ ತಪ್ಪಿಸಿ ಡಾನೆಯ ದೇವಗಂಗೆಗೆ ತಂದು ಪೊಗಿಸಿದಂತೆ' (ಹರಿದಾಸರ ಸಂಗ) ಎಂಬ ಪಮೆಗಳು, 'ಗಾತ್ರವೇ ಮಂದಿರ, ಹೃದಯವೇ ಮಂಟಪ, ನೇತ್ರವೇ ಮಹದೀಪ' ಂಬ ಮಾನಸಪೂಜೆಯ ರೂಪಕಗಳು ಮೆಚ್ಚತಕ್ಕುವಾಗಿದ್ದರೂ ಕೇವಲ ಸಾಹಿತ್ಯ-ಷ್ಟಿಯಿಂದ ಅಚ್ಚರಿಗೊಳಿಸುವ ಹಿರಿಮೆಯಿದೆ ಎಂದು ತೋರಿಸುವುದಕ್ಕೆ ಆಧಾರ-ಲ್ಲ. ಶ್ರೇಷ್ಠತರಗತಿಯ ಪಂಡಿತನೂ ಯತಿಯೂ ಆಗಿ ತತ್ಕಾಲೀನ ಜನಜೀವನದ ಲೆ ಪ್ರಭಾವವನ್ನು ಬೀರಿ ಶಿಷ್ಯರ ಮೂಲಕ ದಾಸಕೂಟವಾಙ್ಮಯಕ್ಕೆ ಎತ್ತರದ ಶವನ್ನು ಕಲ್ಪಿಸಿಕೊಟ್ಟು ಕನ್ನಡಜನತೆಗೆ ಮಹೋಪಕಾರಮಾಡಿದ ಮಹಾವ್ಯಕ್ತಿ-ಯೆಂದು ವ್ಯಾಸರಾಯನನ್ನು ನೆನೆಯಬೇಕು.

ಪುರಂದರದಾಸ

'ದಾಸಶ್ರೇಷ್ಠ' ಎಂದು ಹೊಗಳಿಸಿಕೊಂಡ ಪುರಂದರದಾಸನು ಹಿರಿಯ ಭಕ್ತ, ರಿಯ ಹಾಡುಗಾರ. ಸಿರಿತನದ ಮಡಿಲಲ್ಲಿ ಬೆಳೆದು ಯಾವುದೋ ಒಂದು ಪ್ರಸಂಗದಲ್ಲಿ ಲ್ಲವನ್ನು ತ್ಯಾಗಮಾಡಿ ಅವನು ಸ್ವೇಚ್ಛೆಯ ತಿರುಕನಾದನು. ಹೆಂಡಿರುಮಕ್ಕಳೊಡನೆ ಜಯನಗರಕ್ಕೆ ಬಂದು ವ್ಯಾಸರಾಯನಿಂದ ಮಂತ್ರೋಪದೇಶಪಡೆದು ದಾಸನಾದನು. ವನ ಮುಂದಿನ ಜೀವನವೆಲ್ಲ ಹರಿಸಮರ್ಪಿತವಾಯಿತು. ಅವನ ವಿಷಯವಾಗಿ ಚಲಿತವಾಗಿದ್ದ ದಂತಕಥೆ, ಕೀರ್ತನೆಗಳ ಮಥಿತಾರ್ಥವು ಇದೇ ಆಗಿದೆ. ಅವನೇ ದಿದ ಹಾಡುಗಳಿಂದಲೂ ಇದಕ್ಕೆ ಪುಷ್ಟಿದೊರೆಯುತ್ತದೆ. ಅವನು ಭಾರತವೆಲ್ಲ ಸಂಚರಿಸಿ ರ್ಥಯಾತ್ರೆ ಮಾಡಿರಬೇಕು; ಎಲ್ಲ ತರದ, ಮತಪಂಥದ ಜನದೊಡನೆ ನಿಕಟ-ಂಬಂಧವನ್ನು ಬೆಳೆಸಿ ಸೂಕ್ಷ್ಮವಾಗಿ ಲೋಕಜೀವನನಿರೀಕ್ಷಣೆಯನ್ನು ಮಾಡಿರಬೇಕು, ನ್ನ ಭಕ್ತಿಸ್ಥಾಯಿಗೆ ವಿವಿಧ ಸಂನಿವೇಶಗಳಿಂದ ಸಹಜಸ್ಫೂರ್ತಿಯನ್ನು ಪಡೆದು ಹಾಡು

ಕಟ್ಟಿರಬೇಕು, ನಕ್ಕುನಗಿಸುವ ವಿಡಂಬಕ ಹಾಸ್ಯದಲ್ಲಿ ಮೇಲುಗೈಯಾಗಿರಬೇಕು ಎಂಬುದನ್ನು ಅರಿತರೆ ಅವನ ವ್ಯಕ್ತಿತ್ವದ ಕೆಲವಂಗಗಳ ದರ್ಶನವಾಗುತ್ತದೆ. ಅವನು ಬರೆದ ಕೀರ್ತನೆಗಳು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಎಂಬುದನ್ನು ಅವನೇ ಹೇಳಿದ್ದರೂ ನಂಬುವುದು ಸಾಧ್ಯವಿಲ್ಲ. ಈವರೆಗೆ ದೊರೆತು ಪ್ರಕಟವಾದುವು ಒಂದು ಸಾವಿರ ಮೇಲೆ ಕೆಲವಾಗುತ್ತವೆ. ಇನ್ನೂ ಕೆಲವು ದೊರೆಯದೆ ಹೋಗಿರಬಹುದು. ದೊರೆತವುಗಳಲ್ಲಿ ಕೆಲವು ಅವನಿಂದ ರಚಿತವಾಗಿರದೆ ಬೇರೆಯವರು ರಚಿಸಿ ಅವನ ಅಂಕಿತ ಹಾಕಿರಲೂ ಬಹುದು. ಹಲಕೆಲವು ಕೀರ್ತನೆಗಳು ಪ್ರಮುಖದಾಸರಲ್ಲಿ ಪುನರುಕ್ತವಾಗಿರುತ್ತವೆ. ಯಾರಾದರೊಬ್ಬರು ಅವನ್ನು ಬರೆದಿರಬೇಕು. ಈ ಸಂಗತಿಗಳನ್ನು ಇನ್ನೂ ಹೆಚ್ಚಿನ ಸಾಮುಗ್ರಿಯ ಆಧಾರದಿಂದ ಪರೀಕ್ಷಿಸುವ ಅಗತ್ಯವಿದೆ.

ಪುರಂದರದಾಸನ ಕೀರ್ತನೆಗಳನ್ನು ಮತೀಯಗೌರವದಿಂದಾಲಿ, 'ಹಿರಿಯರು ಬರೆದದ್ದೆಲ್ಲ ಹಿರಿದೇ' ಎಂಬ ಭಾವನಾವಶತೆಯಿಂದಾಗಲಿ ನೋಡಿದರೆ ಆಗದು. ಇಲ್ಲವೆ ಸಾಹಿತ್ಯದ ಕೆಲವು ಸಾಂಪ್ರದಾಯಿಕ ಲಕ್ಷಣಗಳ ಅಳತೆಗೋಲಿನಿಂದ ಅಳೆದರೂ ಸಾಲದು. ಒಂದು ಭಕ್ತಿತನ್ಮಯವಾದ ಜೀವನವು ತನ್ನ ಅಭಿವ್ಯಕ್ತಿಯನ್ನು ಹೇಗೆ ಮಾಡಿದೆ, ಅದರಲ್ಲಿಯ ಅನುಭವಸಂಪತ್ತಿಯೆಷ್ಟು, ಅಭಿವ್ಯಕ್ತಿಯ ಪ್ರಕ್ರಿಯೆಯಲ್ಲಿ ಅದು ಪಡೆದ ಸಾಹಿತ್ಯಸೌಂದರ್ಯವೆಷ್ಟು ಎಂಬುದನ್ನು ಹಿಂಜಿ ತಿಳಿಯಬೇಕಾಗುತ್ತದೆ. ಒಂದೊಂದು ಸಲ ದೇವರನಾಮ ಎಂಬ ದೃಷ್ಟಿಯಿಂದ, ಗೇಯವಾದ ಕೀರ್ತನೆ ಎಂಬ ದೃಷ್ಟಿಯಿಂದ ಕಿವಿಗೆ ಮತ್ತು ಮತೀಯಭಾವನೆಗೆ ಮೆಚ್ಚಿಗೆಯಾಗುವ ಕೀರ್ತನೆ ಸಾಹಿತ್ಯದೃಷ್ಟಿಯಿಂದ ಗುಣಶೂನ್ಯವಾಗಲಿ ಸಾಧಾರಣವಾಗಲಿ ಇರಬಹುದು. ಹಾಗೆ ಅದನ್ನು ಹೇಳಬೇಕಾಗುತ್ತದೆ. ಹೇಳುವುದರಲ್ಲಿ ವ್ಯಕ್ತಿಗೆ ಅಗೌರವ ಎಂಬುದನ್ನು ಭಾವಿಸಬಾರದು. ಇದು ಶೈವ, ವೈಷ್ಣವ, ಜೈನ ಮುಂತಾದ ಎಲ್ಲ ಮತಗಳ ಧಾರ್ಮಿಕವಾಙ್ಮಯಕ್ಕೆ ಅನ್ವಯಿಸುತ್ತದೆ. ಇನ್ನೊಂದು ಸಲ ಬೆಲೆಯುಳ್ಳ ಒಂದು ಅನುಭವ, ಒಂದು ಸತ್ಯದರ್ಶನ ತಕ್ಕಮಟ್ಟಿಗೆ ಚೆನ್ನಾದ ಇಲ್ಲವೆ ಎಷ್ಟೂ ಚೆಂದವಿಲ್ಲದ ಹಾಡಿನಲ್ಲಿ ರೂಪಗೊಂಡಿರಬಹುದು. ಆರಂಭ ಉಜ್ವಲವಾಗಿ ಮುಂದೆ ಮುಂದೆ ತೀರ ಸಪ್ಪೆಯಾಗಿರಬಹುದು, ರಸಪೂರ್ತಿಯ ಅಭಾವದಿಂದ ಅತೃಪ್ತಿಯನ್ನು ಉಂಟುಮಾಡುತ್ತಿರಬಹುದು. ಈ ಅಂಶಗಳನ್ನೆಲ್ಲ ಮನದಂದು ಕೆಳಗಿನ ವಿಮರ್ಶೆಯನ್ನು ಸಂಗ್ರಹವಾಗಿ ಮಾಡಿದೆ.

ವಿಷಯಾನುಗುಣವಾಗಿ ನಾಮಮಹಿಮೆ, ಹರಿಗುರುಗಳ ಸ್ಮರಣೆ–ಸ್ತುತಿ, ಅಂತರಂಗನಿವೇದನೆ, ಕೃಷ್ಣಲೀಲೆ, ಸಮಾಜವಿಮರ್ಶೆ, ಸಮಾಜಬೋಧನೆ ಹೀಗೆ ಸ್ಥೂಲವಾಗಿ ಎಲ್ಲ ದಾಸರ, ವಿಶೇಷವಾಗಿ ಪುರಂದರದಾಸನ ಕೀರ್ತನೆಗಳನ್ನು ವಿಭಾಗಿಸಬಹುದು. ಬೆಳೆಯುತ್ತಿರುವ ಭಕ್ತಜೀವ ತನ್ನಲ್ಲಿ ತಾನು ಕಾಣುವುದನ್ನೂ ತನ್ನ ಸುತ್ತುಮುತ್ತಿನ ಸಮಾಜದಲ್ಲಿ ಕಾಣುವುದನ್ನೂ ಸಹಜಸ್ಫೂರ್ತವಾಗಿ ಹೇಳಬಯಸುವುದು ಈಗ ಎಲ್ಲ ಕೀರ್ತನೆಗಳ ಮೂಲಪ್ರೇರಕವಾಗಿದೆ. ವ್ಯಕ್ತಿತ್ವದ ಏಕ

ಸೂತ್ರವು ಈ ವಿವಿಧ ವಿಷಯಗಳನ್ನು ಒಂದುಗೊಳಿಸಿದೆ. ಆದರೆ ಹೇಳಿಕೊಳ್ಳುವುದು ಮುಖ್ಯವಾಗಿ, ಹೇಗೆ ಹೇಳುವುದು ಅಮುಖ್ಯವಾಗಿ ಬಿಡುವ ಸಂಭವವು ಇಂಥ ವ್ಯಕ್ತಿತ್ವದಲ್ಲಿರುತ್ತದೆ. ವಿಷಯ-ರೀತಿಗಳ ಸಂಗಮವು ಕೆಲವು ಸಲ ಮಾತ್ರ ಸೊಗಸಾಗಿ, ಅದ್ಭುತವಾಗಿ ಒದಗಿಬರುತ್ತದೆ. ಪುರಂದರದಾಸನ ಕೀರ್ತನೆಗಳಲ್ಲಿ ಇದನ್ನು ನೋಡ-ಬಹುದು. 'ನಾರಾಯಣ ನಿಮ್ಮ ನಾಮದ ಸ್ಮರಣೆಯ ಸಾರಾಮೃತವೆನ್ನ ನಾಲಿಗ್ಗೆ ಬರಲಿ' (೧-೭೩) ಈ ಪಲ್ಲವಿಯಲ್ಲಿಯ ಭಾವ ಮುಂದಿನ ನುಡಿಗಳಲ್ಲಿ ಸೊಗಸಾಗಿ ಅರಳುತ್ತದೆ. ಈ ಕೀರ್ತನೆಯಲ್ಲಿ ಕಲ್ಪನಾಶಕ್ತಿ ಎಷ್ಟೂ ಇರದಿದ್ದರೂ ಒಂದು ಅತ್ಯಂತ-ನೈಜವಾದ ಅಂತರಂಗದ ಬಯಕೆ ತನ್ನ ಸರಳ ಉತ್ಕಟತೆಯಲ್ಲಿ ಅಭಿವ್ಯಕ್ತವಾಗಿದೆ. ಕೀರ್ತನೆಗಳಲ್ಲಿಯ ಸಾಹಿತ್ಯಸ್ವಾರಸ್ಯ ಬಹುಭಾಗದಲ್ಲಿ ಹೀಗಿರುತ್ತದೆ. ಇನ್ನು 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ' (೧-೧೮) ಎಂಬುದನ್ನು ನೋಡಿದರೆ ಅದರ ಪಲ್ಲವಿಯಲ್ಲಿಯ ಸಲಿಗೆಯ ಆತ್ಮವಿಶ್ವಾಸ, ಹಳಿಯಬಾರದ ಔದ್ಧತ್ಯ ನುಡಿಗಳಲ್ಲಿ ಪ್ರಕಟಗೊಂಡಿಲ್ಲ, ನಿರೀಕ್ಷೆ ಸಫಲವಾಗಿಲ್ಲ. ನಾಮಸ್ಮರಣೆಯಿಂದ ಉದ್ಧಾರವಾದವರ ನಿದರ್ಶನಗಳು ಅಲ್ಲಿ ಅಪ್ರಸ್ತುತವಲ್ಲದಿದ್ದರೂ ಮೂಲಭಾವಕ್ಕೆ ಪೋಷಕವಾಗಿಲ್ಲ. ಈ ಹಾಡು ಗೇಯತೆಯಿಂದಲೂ ನಿದರ್ಶನಗಳ ಹೃದಯಸ್ಪರ್ಶಿತೆಯಿಂದಲೂ ಜನಪ್ರಿಯವೇನೊ ಆಗಿದೆ, ಆದರೆ ಸಾಹಿತ್ಯದೃಷ್ಟಿಯಿಂದ ಇದು ಅಷ್ಟು ಯಶಸ್ವಿಯಲ್ಲವೆಂದು ಹೇಳಬೇಕು. ನಾಮಸ್ಮರಣೆಯ ಹಾಗೂ ಸ್ತುತಿಯ ಅನೇಕ ಕೀರ್ತನೆಗಳು ಕಿವಿಗಿಂಪಾದ ನುತಿ-ನಾಮಾವಳಿಗಳಾಗಿವೆ, ಮತೀಯರಿಗೂ ಸಾಧಕರಿಗೂ ಅವುಗಳ ಬೆಲೆಯಿದ್ದಷ್ಟು ಇತರರಿಗೆ ಇರಲಾರದು. ಆದರೂ ಅವುಗಳಲ್ಲಿ 'ಯಾದವ ನೀ ಬಾ ಯದುಕುಲನಂದನ' (೧-೧೩), 'ಮೂರುತಿಯನು ನಿಲ್ಲಿಸೊ' (೧-೧೭), 'ನೀನೇ ದಯಾಳೊ ನಿರ್ಮಲಚಿತ್ತ' (೧-೫೮), 'ಹುವ್ವ ತರುವರ ಮನೆಗೆ ಹುಲ್ಲು ತರುವ' (೧-೧೪೭) ಇಂಥವು ಚಿತ್ರರಮ್ಯತೆಯಿಂದಲೂ ನಾದಮಾಧುರ್ಯ-ದಿಂದಲೂ ಮನಸೆಳೆಯುತ್ತವೆ. ಇಂಥ ಕೆಲವದರಲ್ಲಿ ಆಯಾ ದೇವತೆಯ ಇಲ್ಲವೆ ವ್ಯಕ್ತಿಗಳ ಚರಿತೆ-ಲೀಲೆಗಳು ಪ್ರೌಢಸರಣಿಯಲ್ಲಿ ಇಲ್ಲವೆ ಜಾನಪದ ಧಾಟಿಯಲ್ಲಿ ಸೊಗಸಾಗಿ ವರ್ಣಿತವಾಗಿರುತ್ತವೆ. ಕೆಲವು ಸಲ ಅವುಗಳ ಅದೇತನವು ಮಾತ್ರ ಬೇಸರು-ತರುತ್ತದೆ. 'ಭಾಗ್ಯದ ಲಕ್ಷ್ಮಿ ಬಾರಮ್ಮ' (೧-೨೧೨) ಇದು ಇಂಥ ವಿಭಾಗದಲ್ಲಿ ತುಂಬ ಮೆಚ್ಚಿಗೆಯಾಗತಕ್ಕ ಗೀತ. 'ಗೆಜ್ಜೆಕಾಲ್ಗಳ ಧ್ವನಿಯ ತೋರುತ ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ ಸಜ್ಜನಸಾಧು ಪೂಜೆಯ ವೇಳೆಗೆ **ಮಜ್ಜಿಗೆಯೊಳಗಿನ ಬೆಣ್ಣೆಯೆಂತೆ**' ಇದರಲ್ಲಿಯ ಸಹಜಪ್ರಾಸ, ಸೊಗಸಾದ ಚಿತ್ರ ಮತ್ತು ಹೊಸ ಹೋಲಿಕೆ ಇವನ್ನು ನೋಡಬೇಕು. ಪುರಂದರದಾಸನ ಕೃತಿಗಳಲ್ಲಿಯ ಸಾಹಿತ್ಯಸತ್ವವು ಇಂಥಲ್ಲಿ ಸಾಜವಾಗಿ ತೋರಿದೆ.

ಅಂತರಂಗದ ಕೀರ್ತನೆಗಳಲ್ಲಿ ಭಕ್ತಿಜೀವನದ ಬಯಕೆ-ಬೇಡಿಕೆಗಳು, ಕುಗ್ಗು-ಕೊರತೆಗಳು ವ್ಯಕ್ತವಾಗಿವೆ. ಇಂಥ ಕೆಲವು ಗೀತೆಗಳಲ್ಲಿ ಪುರಂದರದಾಸನು

ಸೊಗಸನ್ನೂ ಹಿರಿಮೆಯನ್ನೂ ಸೂರೆಗೊಳಿಸಿದ್ದಾನೆ. 'ನಾ ನಿನ್ನೊಳನ್ಯ ಬೇಡುವುದಿಲ್ಲ ಎನ್ನ ಹೃದಯಕಮಲದೊಳು ನಿಂದಿರು ಹರಿಯೇ' (೧-೨೧), 'ಕಣ್ಣಾರೆ ಕಂಡೆ. ನಚ್ಯುತನ' (೧-೮೩), 'ಕಂಡು ಕಂಡು ಎನ್ನ ಕೈಬಿಡುವರೆ' (೧-೯೩), 'ಆದದ್ದೆಲ್ಲ ಒಳಿತೇ ಆಯಿತು' (೧-೯೫), 'ಇನ್ನೂ ದಯ ಬಾರದೆ ದಾಸನಮೇಲೆ' (೧-೧೩೫), 'ನಾನೇಕೆ ಬಡವನು ನಾನೇಕೆ ಪರದೇಶಿ' (೧-೧೪೬), 'ಹರಿ ನಿನ್ನೊಲುಮೆಯು ಆಗುವತನಕ ಅರಿತು ಸುಮ್ಮನಿರುವದು ಲೇಸು' (೧-೧೫೭), 'ಸಕಲಗ್ರಹಬಲ ನೀನೆ' (೨-೨೭), 'ಬದುಕಿದೆನು ಬದುಕಿದೆನು ಭವ ಹಿಂಗಿತು' (೨-೩೫), 'ಹ್ಯಾಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ' (೨-೬೯), 'ಬಂದದ್ದೆಲ್ಲ ಬರಲಿ ಗೋವಿಂದನ ದಯ ನಮಗಿರಲಿ' (೨-೭೬), 'ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ' (೨-೧೦೦), 'ನಾ ನಿನ್ನ ಧ್ಯಾನದೊಳಿರಲು' (೨-೧೨೧), 'ಬಿನ್ನಹಕ್ಕೆ ಬಾಯಿಲ್ಲವಯ್ಯಾ' (೨-೧೫೩), 'ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು' (೨-೧೬೭), 'ಹುಚ್ಚು ಹಿಡಿಯಿತು ಎನಗೆ' (೩-೨೯), 'ಕೆಂಡಕೆ ಒರಳೆ ಮುತ್ತುವದುಂಟೆ' (೩-೧೧೯), 'ಯಾಕೆನ್ನ ಈ ರಾಜ್ಯಕೆಳತಂದೆ' (೩-೧೨೨), 'ಸಂಸಾರವೆಂಬಂಥ ಭಾಗ್ಯವಿರಲಿ' (೪-೭೭), 'ಅನುಭವದಡಿಗೆಯ ಮಾಡಿ' (೪-೧೧೭), 'ಬೈಲಿಗೆ ಬೈಲಾಗಿತು ಬೈಲೊಳಗೆ' (೫-೬೩) ಈ ಮೊದಲಾದ ಕೀರ್ತನೆಗಳಲ್ಲಿ ಆರ್ತಭಕ್ತನ ಕೋರಿಕೆ-ಕಳವಳಗಳಿದ್ದಂತೆ ಸಿದ್ಧಭಕ್ತನ ಸಮಗ್ರಸಮರ್ಪಣೆ, ಸಾಕ್ಷಾತ್ಕಾರ, ನಿರ್ಭೀತಿ-ನಿಶ್ಚಿಂತೆಗಳು ಭಾವಗೀತೆಯ ಸುಂದರರೂಪವನ್ನು ತಾಳಿರುತ್ತವೆ. ಒಂದೊಂದಾಗಿ ನೋಡಿದಾಗ ನಕ್ಷತ್ರಗಳು ಚೆಲುವಾಗಿ ಮಾತ್ರ ತೋರಿ, ಒಟ್ಟಾಗಿ ನೋಡಿದಾಗ ಭವ್ಯರಮಣೀಯವಾಗಿ ತೋರುವಂತೆ ಇವುಗಳ ರೀತಿಯಿದೆ. ಉತ್ಕಟ-ಭಾವನೆಗಾಗಿ 'ನಾ ನಿನ್ನೊಳನ್ಯ ಬೇಡುವದಿಲ್ಲ, ಕಂಡು ಕಂಡು ಎನ್ನ ಕೈಬಿಡುವರೆ, ಯಾಕೆನ್ನ ಈ ರಾಜ್ಯಕೆಳತಂದೆ' ಈ ಭಾವಗೀತೆಗಳು ಹೃದ್ಯವಾಗಿವೆ; ಕಲ್ಪಕತೆಗಾಗಿ 'ಹರಿ ನಿನ್ನೊಲುಮೆಯು ಆಗುವ ತನಕ, ಹ್ಯಾಗೆ ಮೆಚ್ಚಿಸಲಿ, ನಾ ನಿನ್ನ ಧ್ಯಾನ-ದೊಳಿರಲು' ಇವು ಮೇಲಾಗಿವೆ. 'ನಾ ನಿನ್ನ ಧ್ಯಾನದೊಳು' ಇದು ಮೂರೇ ನುಡಿಗಳ ಹಾಡಾದರೂ ಅಸಾಧಾರಣವಾದ ಚೈತನ್ಯದಿಂದ ಕೂಡಿದ್ದು ಅಭಯವಾಣಿ-ಯಾಗಿ ಪುರಂದರದಾಸನ ಹಿರಿಮೆಯನ್ನು ಸಾರುತ್ತದೆ. ಅದರಲ್ಲಿ 'ಕಿಚ್ಚಿಗೆ ಇರುವೆ ಮುತ್ತುವದೆ, ಘಾಳಿಗೆ ಗಿರಿ ನಡುಗುವದೇ' ಇಂಥ ಸಾದೃಶ್ಯಗಳು ನವೀನವಲ್ಲದಿದ್ದರೂ ಉಚಿತ ಸಂದರ್ಭದಲ್ಲಿ ಸೇರಿಕೊಂಡು ಮೂಲಭಾವವನ್ನು ಎತ್ತಿ ತೋರುತ್ತವೆ. ರಸಪೂರ್ತಿಯ ದೃಷ್ಟಿಯಿಂದ ಈ ಬಗೆಯ ಕೀರ್ತನೆಗಳಲ್ಲಿ ಕೆಲವು ಸಲ ಇನ್ನಿಷ್ಟು ವಿಸ್ತಾರ ಮತ್ತು ಪುಷ್ಟಿ ಬೇಕೆಂದು ತೋರಬಹುದು, ಕೇಂದ್ರಭಾವದಿಂದ ಒಂದು ಬಗೆಯ ಸಂಚರಣೆಯಾಗಿದೆ ಇಲ್ಲವೆ ಸಾಂಪ್ರದಾಯಿಕ ವಿವರಣೆಯಾಗಿದೆ ಎಂದು ತೋರಬಹುದು. ಈ ದೋಷಗಳನ್ನು ಅಲ್ಲಗಳೆಯುವಂತಿಲ್ಲ. ಉದಾಹರಣೆಗೆ 'ಬಿನ್ನಹಕೆ ಬಾಯಿಲ್ಲವಯ್ಯಾ' ಎಂಬಲ್ಲಿಯ ಭಾವವಿಶೇಷವು ನುಡಿಗಳಲ್ಲಿ ಸಮರ್ಪಕ-

ವಾಗಿ ಸಫಲಗೊಂಡಿದೆ ಎಂದು ಹೇಳಲಾಗದು. 'ಶಿಶುಮೋಹ ಸತಿಮೋಹ', ಆಮೇಲೆ 'ಅನ್ನಮದವರ್ಥಮದ' ಇವುಗಳ ಪಟ್ಟಿಗೆ ಪ್ರಾಮುಖ್ಯದೊರೆತು ಆ ಭಾವದ ಸೂಕ್ಷ್ಮ-ಸುಂದರವಾದ ನಿರೂಪಣೆ ಕಣ್ಮರೆಯಾಗಿ ಬಿಡುತ್ತದೆ.

ಕೃಷ್ಣಲೀಲೆಯ ಕೀರ್ತನೆಗಳಲ್ಲಿ ಭಾಗವತಪುರಾಣದ ಹಲವಾರು ಸಂನಿವೇಶಗಳೂ ವ್ಯಕ್ತಿಗಳೂ ತಲೆದೋರಿವೆ; ಶೃಂಗಾರ, ವಾತ್ಸಲ್ಯ, ಹಾಸ್ಯರಸಗಳು ಹೊರಹೊಮ್ಮಿವೆ. ಇವುಗಳಲ್ಲಿ 'ಬಗೆಬಗೆ ಆಟಗಳಲ್ಲಿ ಕಲಿತಯ್ಯ ಜಗವ ಮೋಹಿಪನೆ' (೧-೯೬), 'ಆಡಿದನು ರಂಗ ಅದ್ಭುತದಿಂದಲಿ ಕಾಳಿಂಗನ ಫಣೆಯಲಿ' (೨-೧೦೫), 'ಹೋಗದಿರೆಲೊ ರಂಗ ಬಾಗಿಲಿಂದಾಚೆಗೆ' (೨-೧೧೨) ಈ ಮುಂತಾದುವು ಹೃದಯಂಗಮವಾಗಿವೆ. 'ರಂಗನೊಲಿದಾ ನಮ್ಮ ಕೃಷ್ಣನೊಲಿದಾ' (೫-೭೨) ಇದರಲ್ಲಿ ದ್ರೌಪದಿಯ ಮಾನಸಂರಕ್ಷಣೆಯ ಸಂದರ್ಭವನ್ನು ವಿಸ್ತಾರವಾಗಿ ವರ್ಣಿಸಲಾಗಿದೆ. ಪುರಂದರದಾಸನ ಮತ್ತು ಉಳಿದ ದಾಸರ ಕೃಷ್ಣಲೀಲೆಯ ಕೀರ್ತನೆಗಳನ್ನು ಒಟ್ಟುಗೂಡಿಸಿದರೆ ಕೀರ್ತನರೂಪದಲ್ಲಿಯ ಭಾರತ-ಭಾಗವತವನ್ನು ಕಾಣಬಹುದು. ಕೆಲವು ಸಲ ಇಂಥ ಹಾಡುಗಳ ಶೃಂಗಾರ ಉತ್ತಾನಕ್ಕಿಳಿಯುತ್ತದೆ, ಶೈಲಿ ತೀರ ಗ್ರಾಮ್ಯವಾಗುತ್ತದೆ. ಆದರೆ ಒಟ್ಟಿನಲ್ಲಿ ಇವುಗಳ ಕಥನ, ನಾಟ್ಯನಿರೂಪಣ ಮತ್ತು ಸಾಂಕೇತಿಕ ಧ್ವನಿ ನಾದಮಯವಾಗಿ ತೋರಿರುತ್ತವೆ.

ಪುರಂದರದಾಸನ ಕೀರ್ತನೆಗಳಲ್ಲಿ ಸಮಾಜಜೀವನವನ್ನು ಕುರಿತ ಕೀರ್ತನೆಗಳು ಹೇರಳವಾಗಿವೆ. ಅವುಗಳಲ್ಲಿ ಸಂಸಾರದ ನಿಸ್ಸಾರತೆ, ವೈರಾಗ್ಯಬೋಧನೆಯಿದ್ದಂತೆ ಜೀವನನಿಷ್ಠೆಯಿದೆ. ಅನೀತಿ-ದಾಂಭಿಕತೆಗಳ ಕಟುವಿಮರ್ಶೆಯೊಡನೆ ಚಿರಂತನಮೂಲ್ಯಗಳ ಮತ್ತು ಭಕ್ತಿಮಹಿಮೆಯ ಉಪದೇಶವಿದೆ. ಸಮಾಜವಿಮರ್ಶೆಯ ಗೀತೆಗಳಲ್ಲಿ 'ನಗೆಯು ಬರುತಿದೆ' (೧-೨೨), 'ತನುವ ನೀರೊಳಗದ್ದಿ ಫಲವೇನು' (೧-೨೫), 'ಬೇವು ಬೆಲ್ಲದೊಳಿಡಲೇನು ಫಲ' (೧-೬೧), 'ಮೂರ್ಖರಾದರು ಜನರು ಲೋಕದೊಳಗೆ' (೧-೬೨), 'ಮಡಿಮಡಿ ಮಡಿಯೆಂದು ಅಡಿಗಡಿ ಹಾರುವಿ' (೧-೧೧೪), 'ಜಾಲಿಯ ಮರದಂತೆ ಧರೆಯೊಳು ದುರ್ಜನರು' (೧-೧೧೬), 'ಹೊಲೆಯ ಹೊರಗಿಹನೆ ಊರೊಳಗಿಲ್ಲವೆ' (೧-೧೭೪), 'ಮಲವ ತೊಳೆಯಬಲ್ಲರಲ್ಲದೆ ಮನವ ತೊಳೆಯಬಲ್ಲರೆ' (೧-೧೮೦), 'ಉದರ ವೈರಾಗ್ಯವಿದು' (೨-೨೬), 'ಒಲ್ಲೆನೆ ವೈದಿಕ ಗಂಡನ' (೨-೧೯೭), 'ಬೇನೆ ತಾಳಲಾರೆ ಬಾಯೆನ್ನ ಗಂಡ' (೩-೧೮೭), 'ತಾಳಿಯ ಹರಿದು ಬೀಸಾಟಿ' (೪-೫೩), 'ಕೇಳನೊ ಹರಿ ಕೇಳನೊ' (೪-೮೩), 'ಇಬ್ಬರ್ಹೆಂಡರ ಸುಖವು ಇಂದು ಕಂಡೆನಯ್ಯ' (೫-೨೪) ಇವನ್ನು ಗಮನಿಸಿದರೆ ಮನುಷ್ಯಸ್ವಭಾವದ ವೈವಿಧ್ಯಪರಿಚಯ, ವಿಡಂಬಕಹಾಸ್ಯ ಮತ್ತು ಸಮಾಜಜೀವನದಲ್ಲಿಯ ಸಾಮಾನ್ಯ ಅಧೋಗತಿಯ ನಿಚ್ಚಳವಾದ ಅರಿವು ಪುರಂದರದಾಸನಲ್ಲಿ ಎಷ್ಟುಮಟ್ಟಿಗೆ ಇತ್ತೆಂಬುದು ತಿಳಿಯುತ್ತದೆ. 'ಉದರ ವೈರಾಗ್ಯವಿದು' ಇದರಂತೆ ಎಲ್ಲ ಹಾಡುಗಳಲ್ಲಿ ಭಾವಗೀತೆಯ ಸಂಪೂರ್ಣತೆ ಕಂಡು ಬಂದಿಲ್ಲ. ಪುನರುಕ್ತಿ-ಶೈಥಿಲ್ಯ-

ಗಳೂ ಅಲ್ಲಲ್ಲಿ ಹಣೆಯಿಕ್ಕಿವೆ. ರಚನಾಸೌಂದರ್ಯದ ಕಡೆಗೆ ಸಹೇತುಕವಾದ ಲಕ್ಷ್ಯ ಕಾಣುವುದಿಲ್ಲ. ಅದರಿಂದಲೇ ಗುಣದೋಷಗಳು ಉಂಟಾಗಿವೆ.

ಸಮಾಜಬೋಧನೆಯ ಕೀರ್ತನೆಗಳು ಸಮಾಜವಿಮರ್ಶೆಗಿಂತಲೂ ಹೆಚ್ಚಾಗಿವೆ. ಬೋಧಕನ ಆವೇಶ ಪುರಂದರದಾಸನ ಮನಃಪ್ರಕೃತಿಯಲ್ಲಿ ವಿಲಕ್ಷಣವಾಗಿದೆ. ಜನರಲ್ಲಿ ದೇವಭಕ್ತಿ, ಸತ್ಯಧರ್ಮ, ನೈಜನೀತಿ ಜೀವನನಿಷ್ಠೆಗಳು ಬೆಳೆಯಬೇಕೆಂಬುದೇ ಅವನ ಬೋಧನೆಯ ತಿರುಳು. 'ಈಸಬೇಕು ಇದ್ದು ಜೈಸಬೇಕು' (೧-೧೨), 'ಮಾನವ-ಜನ್ಮ ದೊಡ್ಡದು' (೧-೧೪) ಈ ಪ್ರಸಿದ್ಧಕೀರ್ತನೆಗಳಲ್ಲಿ ಕರ್ಮಯೋಗದ ಸಂದೇಶ-ವನ್ನು ಸಾರಲಾಗಿದೆ. ಇವೆರಡೂ ಚಿಕ್ಕವಾಗಿದ್ದು ನುಡಿಗಳಲ್ಲಿ ಮೂಲಭಾವವು ರಸ-ಪದವಿಗೆ ಏರುವಷ್ಟು ಪೋಷಣೆಹೊಂದಿಲ್ಲ. ಆದರೂ ವ್ಯಕ್ತಿಮಹಿಮೆಯಿಂದ ಮತ್ತು ಅಭಿಪ್ರಾಯಮಹತ್ವದಿಂದ ಅವಕ್ಕೆ ಮಹತ್ವಬಂದಿದೆ. ಇನ್ನುಳಿದವುಗಳಲ್ಲಿ 'ಇದು ಭಾಗ್ಯವಿದು ಭಾಗ್ಯ' (೧-೩೨), 'ಡಂಗುರವ ಸಾರಿ' (೧-೫೩), 'ಸ್ನಾನವ ಮಾಡಿರೊ ಜ್ಞಾನತೀರ್ಥದಲಿ' (೧-೬೯), 'ಸಕಲವೆಲ್ಲವೂ ಹರಿಸೇವೆಯೆನ್ನಿ' (೧-೭೧), 'ಧರ್ಮವೇ ಜಯವೆಂಬ ದಿವ್ಯಮಂತ್ರ' (೨-೭೭), 'ಹೊಡಿ ನಗಾರಿಮ್ಯಾಲ ಕೈಯ್ಯ' (೨-೧೦೬), 'ಎಚ್ಚರದಲಿ ನಡೆ ಮನವೆ' (೩-೧೩೬), 'ಇರಬೇಕು ಇರದಿರಬೇಕು' (೪-೪೭), 'ಇನ್ನಾದರೂ ನಿನಗೆ ನೀನು ತಿಳಿಯದೆ' (೫-೨೨), 'ಬ್ರಾಹ್ಮಣನೆಂದರೆ ಬ್ರಹ್ಮನ ತಿಳಿದವ' (೫-೬೨) ಇವನ್ನು ಬೋಧನೆ ಮತ್ತು ಭಾವಗೀತೆಯ ಗುಣ ಇವುಗಳ ಮೇಳವಿಕೆಗಾಗಿ ಉದಾಹರಿಸಬಹುದು. 'ಧರ್ಮವೇ ಜಯವೆಂಬ ದಿವ್ಯ-ಮಂತ್ರ' ಎಂಬುದು ಅತ್ಯುಚ್ಚವಾದ ಪ್ರೀತಿತತ್ವದ, ಅಹಿಂಸಾಧರ್ಮದ ಬೋಧನೆ-ಯನ್ನು ಜನಸಾಮಾನ್ಯಕ್ಕೆ ತಿಳಿಯುವ ರೀತಿಯಲ್ಲಿ ಮಾಡುತ್ತದೆ. ೧-೩೨ರಲ್ಲಿ 'ಕಲ್ಲಾಗಿ ಇರಬೇಕು ಕಠಿಣಭವತೊರೆಯೊಳಗೆ ಬಿಲ್ಲಾಗಿ ಇರಬೇಕು ಬಲ್ಲವರೊಳಗೆ' ಎಂಬ ತೆರದ ಉಕ್ತಿಗಳು ಗಾದೆಮಾತುಗಳಾಗಿ ಕನ್ನಡಿಗರ ಮನೆಮಾತಿನಲ್ಲಿ ಸೇರಿ-ಕೊಂಡುಬಿಟ್ಟಿವೆ, ಜನತೆಯ ಹೃದಯಪೀಠದಲ್ಲಿ ಪುರಂದರದಾಸನನ್ನು ಚಿರಸ್ಥಾಯಿ-ಯಾಗಿ ನಿಲ್ಲಿಸಿರುತ್ತವೆ. ಬೋಧನೆಯ ಹಾಡುಗಳಲ್ಲಿ ವ್ಯವಹಾರದಲ್ಲಿಯ ವಿಶೇಷ-ಸಂದರ್ಭಗಳನ್ನು ತೆಗೆದುಕೊಂಡು ಅವುಗಳಿಗೆ ಆಧ್ಯಾತ್ಮಿಕಪ್ರತೀಕದ ಸ್ವರೂಪ ಕೊಟ್ಟುದು ಹೆಚ್ಚಾಗಿ ಕಂಡು ಬರುತ್ತದೆ. ಉದಾ: ೧-೧೨೬ರಲ್ಲಿ 'ಕಲ್ಲುಸಕ್ಕರೆ ಕೊಳ್ಳಿರೊ', ೧-೧೦೨ರಲ್ಲಿ 'ಮುತ್ತು ಕೊಳ್ಳಿರೊ', ೩-೯೭ರಲ್ಲಿ 'ಗುಡಿಗುಡಿಯನು ಸೇದಿನೋಡೊ.' ದಾಸಕೂಟದಲ್ಲಿ ಇದೊಂದು ಕವಿಸಮಯವಾದಂತಾಗಿ ಕೃತಕತೆ-ಯನ್ನುಂಟುಮಾಡಿದೆ. ಆದರೂ ಒಮ್ಮೊಮ್ಮೆ ಇಂಥ ಕೀರ್ತನೆಗಳಲ್ಲಿ ಜನಮನವನ್ನು ಆಕರ್ಷಿಸಿ ಭಾಗವತಧರ್ಮವನ್ನು ತಿಳಿಸುವ ಶಕ್ತಿಯೂ ಉಂಟಾಗಿದೆ.

ಪುರಂದರದಾಸನು ವ್ಯಾಸರಾಯನ ಪಟ್ಟಶಿಷ್ಯನೂ ಮಧ್ವಮತಾನುಯಾಯಿಯೂ ಎಂಬುದು ಸ್ಪಷ್ಟವಾಗಿದೆ. 'ಮಧ್ವಮತದಲಿ ಮೀನಾಗಿರಲು ಬೇಕು' (೧-೩೨), 'ಮಧ್ವಮತಸಿದ್ಧಾಂತದ ಪದ್ಧತಿ ಬಿಡಬೇಡ' (೧-೨೦೫), 'ಮತಮೊಳಗೆ ಒಳ್ಳೆ

ಮತ ಮಧ್ವಮತವೂ' (೨-೧೦೯) ಇಂಥ ಹಾಡುಗಳಿಂದಲೂ ಮಧ್ವಮತತತ್ವಗಳ ಪ್ರತಿಪಾದನೆಯಿಂದಲೂ ಇದು ತಿಳಿಯುತ್ತದೆ. 'ಶಿವ ನೀನ್ಹ್ಯಾಗಾದ್ಯೋ' (೧-೧೮೮) ಎಂಬಂಥ ಕೀರ್ತನೆಗಳಲ್ಲಿ ಅದ್ವೈತದ ಹೀಯಾಳಿಕೆಯೂ ಬಂದಿದೆ. ಇಂಥ ಕೀರ್ತನೆ ಪುರಂದರದಾಸಕೃತವೇ ಅಲ್ಲವೇ ಎಂಬುದಿನ್ನೂ ನಿಶ್ಚಿತವಿಲ್ಲ. ಇದೇನೇ ಇದ್ದರೂ ಮಧ್ವಮತದ ಪ್ರಮೇಯಗಳಲ್ಲಿ ಪುರಂದರದಾಸನಿಗೆ ಸಂಪೂರ್ಣ ಶ್ರದ್ಧೆಯುಂಟೆಂಬುದನ್ನೂ ಯಾರು ಅಲ್ಲಗಳೆಯಲಾರರು. ಆದರೆ ಇದರೊಡನೆ ಒಂದು ಮಹತ್ವದ ಮಾತನ್ನು ಅರಿತಿರಬೇಕು. ಪುರಂದರದಾಸನ ಮಧ್ವಮತವು ಅವನ ಪ್ರತಿನಿತ್ಯದ ಬಾಳಿನಲ್ಲಿ ಬೆರೆತು ಆಚರಣೆಯಲ್ಲಿಳಿದ ಜೀವನದರ್ಶನವಾಗಿತ್ತು. ಅಂತೇ ಅದು ಬರೀ ಮತವಾಗಿರಲಿಲ್ಲ, ಜೀವಂತಶ್ರದ್ಧೆಯಾಗಿತ್ತು. ಸ್ವಮತಾಸಕ್ತಿ ಎಷ್ಟೇ ಇದ್ದರೂ ಇತರ ಮತಗಳ ಹಾಗೂ ಮತೀಯರ ಕೂಡ ತನ್ನ ರೀತಿಯಲ್ಲಿ ಅವನು ಸಮನ್ವಯವನ್ನು ಸಾಧಿಸಿದ್ದನು. 'ಜಂಗಮರು ನಾವು ಜಗದೊಳು, ಜಂಗಮರು ನಾವು ಲಿಂಗಾಂಗಿಗಳು ಮಂಗಳವಂತರು ಭವಿಗಳೆಂತೆಂಬಿರಿ' (೪-೧೫೩), 'ಅರಿಯದೆ ಬಂದೆವು ಕಿಮ್ಸನ್ ಪರಿಹರಿಸಯ್ಯ ಭಮ್ಸನ್' (೨-೫೯) ಇಂಥ ಗೀತೆಗಳು ಸಾಕ್ಷಿಯಾಗಿವೆ. 'ಆವ ಕುಲವಾದರೇನು ಆವನಾದರೇನು' (೩-೧೩೯) ಇದರಲ್ಲಿ 'ಕುಲದ ಮೇಲೆ ಹೋಗಬೇಡ, ಕುಲವಿಲ್ಲ ಜ್ಞಾನಿಗಳಿಗೆ' ಎಂಬ ಮಾತು, 'ವಿಧಿನಿಷೇಧ ನಿನ್ನವರಿಗೆಂತೋ' (೩-೧೦೬) ಎಂಬಲ್ಲಿ 'ನಡೆದದ್ದೆಲ್ಲವೂ ಲಕ್ಷಪ್ರದಕ್ಷಿಣೆ ನುಡಿದದ್ದೆಲ್ಲ ಗಾಯತ್ರಿಮಂತ್ರಗಳು....ಕಂಡದ್ದೇ ವಿಶ್ವಾದಿ ಮೂರ್ತಿಗಳು, ಭೂಮಂಡಲದಿ ಶಯನವೇ ನಮಸ್ಕಾರ, ಥಂಡಥಂಡ ಕ್ರಿಯೆಗಳು ಹರಿಪೂಜೆ ತೊಂಡರಾಗಿ ಬಿದ್ದಿಹ ಭಾಗವತರಿಗೆ' ಎಂಬ ನುಡಿಗಳು, ಮಡಿ, ಹೊಲೆತನ ಇದಕ್ಕೆ ಸಂಬಂಧಿಸಿದ ಅಸಾಂಪ್ರದಾಯಿಕವಿಚಾರಗಳು (೧-೧೧೪, ೧೧೫, ೧೧೭) ಇವನ್ನೆಲ್ಲ ಗಮನಿಸಿದರೆ ಪುರಂದರದಾಸನ ವಿಶಾಲಧಾರ್ಮಿಕದೃಷ್ಟಿ ತಿಳಿಯುತ್ತದೆ.

ಕೀರ್ತನೆಗಳಲ್ಲದೆ ಪುರಂದರದಾಸನು ಹಲವಾರು ಸುಳಾದಿಗಳನ್ನೂ ಉಗಾಭೋಗಗಳನ್ನೂ ಬರೆದಿದ್ದಾನೆ. ಅವುಗಳಲ್ಲಿಯೂ ಅವನ ಭಕ್ತಿಯೂ ಬೋಧನೆಯೂ ಸ್ವಚ್ಛಂದವಾಗಿ ಹರಿದಿದೆ. 'ಗೋಪಿದೇವಿಯಂತೆ ಒರಳಿಗೆ ಕಟ್ಟದೆ ಬರಿದೆ ದೈನ್ಯಪಡುವೆ' ಮುಂತಾದ ಸುಳಾದಿಯ ಕಲ್ಪನೆ ಚೆನ್ನಾಗಿದೆ. 'ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ ಜೇನುಮಳೆಗರೆದರೆ ವಿಷ ಹೋಗುವದೇನಯ್ಯ' ಎಂಬಂಥ ಸಮರ್ಪಕಸಾದೃಶ್ಯದ ಉಗಾಭೋಗಗಳು ಹಿತಮಿತವಾಗಿವೆ. ಇವುಗಳ ರಚನಾರೀತಿಯನ್ನು ಕುರಿತು ಮುಂದೆ ಪ್ರಸ್ತಾಪಿಸೋಣ.

ಪುರಂದರದಾಸನು ನರಹರಿತೀರ್ಥ-ಶ್ರೀಪಾದರಾಯರಿಂದ ಉಗಮಹೊಂದಿಬಂದ ದಾಸವಾಙ್ಮಯವನ್ನು ವ್ಯಾಸರಾಯನ ಆಧ್ಯಾತ್ಮಿಕ ನೇತೃತ್ವದಲ್ಲಿ ಸಂಪನ್ನ ಮತ್ತು ಉಜ್ವಲಗೊಳಿಸಿದನು, ದಾಸಕೂಟವೆಂಬ ಪರಂಪರೆಗೆ ಮೊದಲಿಗನಾದನು. 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಹೊಗಳಿಕೆಯನ್ನು ತನ್ನ ಗುರುವಿನಿಂದಲೆ

ಪಡೆದನು. 'ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ ಮಾತುಮಾತಿಗೆ ಬಿಡದೆ ವರ್ಣಿಸುತಲಿ, ಗೀತನರ್ತನದಿ ಶ್ರೀಕೃಷ್ಣನ್ನ ಪೂಜಿಸುವ ಪೂತಾತ್ಮದಾಸ ಪುರಂದರ-ದಾಸರಯ್ಯ' ಎಂಬ ವ್ಯಾಸಸ್ತುತಿ ಸಾರ್ಥಕವಾಗಿದೆ. ಕೀರ್ತನಪದ್ಧತಿಯ ಉದ್ಧಾರ, ಮತವೈರಗಳ ಪರಿಹಾರ, ಪಂಚಮರಲ್ಲಿ ಸಹಾನುಭೂತಿಪ್ರದರ್ಶನ, ಕರ್ನಾಟಕ ಭಾಷೋಜ್ಜೀವನ, ಸಂಗೀತಶಾಸ್ತ್ರದ ಉದ್ಧಾರ ಇವನ್ನು ಪುರಂದರದಾಸನು ಮಾಡಿದ-ನೆಂದು ಬೇಲೂರು ಕೇಶವದಾಸರು ಹೇಳಿದ್ದಾರೆ.[1] ಕೀರ್ತನಪದ್ಧತಿಯೆಂದರೆ ಭಕ್ತಿಗೀತಗಳನ್ನು ಸಶಾಸ್ತ್ರವಾಗಿ ರಚಿಸಿ ಹಾಡುವುದೆಂದಿಷ್ಟೇ ಇರದೆ ಹರಿಕಥೆಯ ಮೂಲಕ ಭಕ್ತಿಪ್ರಚಾರವೆಂಬ ಅರ್ಥದಲ್ಲಿ ಅದು ಎಂದು ಮೊದಲಾಯಿತು ಎಂಬ ಪ್ರಶ್ನೆ ಅಭ್ಯಾಸಾರ್ಹವಾಗಿದೆ. ಈಗ ತಿಳಿದ ಮಟ್ಟಿಗೆ ಹಿಂದಿನ ದಾಸರಿಂದ ಮೊದಲಾದ ಈ ಪದ್ಧತಿಯನ್ನು ಪುರಂದರದಾಸನು ಸ್ಥಿರಗೊಳಿಸಿದನೆಂದು ತೋರುತ್ತದೆ. ಕರ್ನಾಟಕ-ಸಂಗೀತಶಾಸ್ತ್ರಕ್ಕೆ ಪುರಂದರದಾಸನು ಮಾಡಿದ ಉಪಕಾರವನ್ನು ಶಾಸ್ತ್ರಜ್ಞರು ಕೊಂಡಾಡಿದ್ದಾರೆ. ತ್ಯಾಗರಾಜನಿಗೆ ಅವನು ಕೊಟ್ಟ ಸ್ಫೂರ್ತಿ ತಿಳಿದ ವಿಷಯವಾಗಿದೆ. ಮುಖ್ಯವಾಗಿ ಪುರಂದರದಾಸನು ಹೇರಳವಾದ ಭಕ್ತಿಗೀತೆಗಳನ್ನು ರಚಿಸಿ, ಜನ-ಸಾಮಾನ್ಯಕ್ಕೂ ಕನ್ನಡಸಾಹಿತ್ಯಕ್ಕೂ ಚಿರವಾದ ಬೆಸುಗೆಯನ್ನುಂಟುಮಾಡಿದ ಹಿರಿಯ ವ್ಯಕ್ತಿಗಳಲ್ಲಿ ಒಬ್ಬನಾದನು.

೨೬. ದಾಸವಾಙ್ಮಯ (೨)

ಕನಕದಾಸ

ಪುರಂದರದಾಸನಿಗೆ ಸಮತೂಕದವನೂ ಸ್ವತಂತ್ರ ಕಾಂತಿಯುಳ್ಳವನೂ ಆಗಿ ಕನಕದಾಸನು ಅದೇ ಕಾಲದಲ್ಲಿ ಜೀವಿಸಿದನು. ಉಪಲಬ್ಧಸಾಮಗ್ರಿಯನ್ನು ಕಣ್ಣಿಟ್ಟು ನೋಡಲಾಗಿ, ಅವನು ಬಾಡವೆಂಬ ಹಳ್ಳಿಯಲ್ಲಿ ಕುರುಬರ ಕುಲದಲ್ಲಿ ಹುಟ್ಟಿ ಬೆಳೆದು ದಂಡನಾಯಕನಾದನೆಂದೂ ಯಾವುದೋ ಯುದ್ಧಕಾಲದಲ್ಲಿ ಸಂಸಾರದ ಬಗ್ಗೆ ಉಪರತಿಹುಟ್ಟಿ ಭಕ್ತನಾದನೆಂದೂ ತೋರುತ್ತದೆ. ಕಾಗಿನೆಲೆಯಲ್ಲಿ ಆದಿಕೇಶವನ ಗುಡಿಯನ್ನು ಕಟ್ಟಿಸಿ ಅವನನ್ನೇ ತನ್ನ ಆರಾಧ್ಯದೈವತವಾಗಿ ಮಾಡಿಕೊಂಡನು. ಪುರಂದರದಾಸನು ಸರ್ವಸ್ವತ್ಯಾಗಮಾಡಿ ವಿಜಯನಗರಕ್ಕೆ ಬಂದಂತೆ ಕನಕದಾಸನೂ ಬಂದು ಬಡತನದ ವ್ರತವನ್ನು ಕೈಕೊಂಡು ವ್ಯಾಸರಾಯನ ಅಚ್ಚುಮೆಚ್ಚಿನ ಶಿಷ್ಯ-ನಾದನು, ಮಾಧ್ವಪರಂಪರೆಯ ಭಕ್ತನಾದನು. ಆದರೂ ಅವನು ಸ್ವೀಕಾರಮಾಡಿದ ಮತದ ಬಗ್ಗೆ ಸಂದೇಹಕ್ಕೆ ಆಸ್ಪದವಿದೆ. ಇದಕ್ಕೆ ಅವನ 'ಮೋಹನತರಂಗಿಣಿ'

1 ಬೇಲೂರು ಕೇಶವದಾಸ: ಹರಿಭಕ್ತಿವಿಜಯ, ಭಾಗ ೨, ಪು. ೩೦೫–೩೧೪.

ಕಾವ್ಯದಲ್ಲಿಯ ಶ್ರೀವೈಷ್ಣವಪರವಾದ ಸಾಕ್ಷ್ಯಗಳು ಕಾರಣವಾಗಿವೆ. 'ಮೊದಲು ಶ್ರೀ-ರಾಮಾನುಜ ಮತದ ಶ್ರೀವೈಷ್ಣವತತ್ವವನ್ನು ಸ್ವೀಕರಿಸಿ ಮೋಹನತರಂಗಿಣಿ ಮೊದ-ಲಾದ ಗ್ರಂಥಗಳನ್ನು ಬರೆದಿದ್ದರೂ 'ಹರಿಭಕ್ತಿಸಾರ'ದಲ್ಲಿಯೂ ಉಳಿದ ಪದಪದ್ಯ-ಗಳಲ್ಲಿಯೂ ಮಾಧ್ವಸಂಪ್ರದಾಯದ ಪ್ರಮೇಯಗಳನ್ನು ಎತ್ತಿ ಹಿಡಿದಿದ್ದಾರೆ. ಆದ್ದರಿಂದ ಇವರು ಕಡೆಯ ಭಾಗದಲ್ಲಿ ಮಾಧ್ವವೈಷ್ಣವರಾಗಿ ಕಾಗಿನೆಲೆಯಲ್ಲಿ ನೆಲೆಸಿ ಅಲ್ಲಿಯೇ ಹರಿಪದವನ್ನೈದಿದರೆಂದು ತಿಳಿಯಬಹುದು'[1] ಎಂದು ಶ್ರೀ. ಪಂಚಮುಖಿ ಅವರು ಹೇಳಿದ್ದಾರೆ. ಕನಕದಾಸನು ಶ್ರೀವೈಷ್ಣವಸಂಪ್ರದಾಯದವನೇ ಆಗಿರಬೇಕು ಎಂಬ ಕೆಲವರ ವಾದಕ್ಕೆ ಇದು ಉತ್ತರ. ಮೊದಲೊಂದು ಮತ, ಆಮೇಲೆ ಇನ್ನೊಂದು ಎಂಬ ಸಂಪ್ರದಾಯಸ್ವೀಕಾರದ ಕಟ್ಟನಲ್ಲಿ ಕನಕದಾಸನನ್ನು ಇರಿಸುವುದು ಅವನಿಗೆ ಅನ್ಯಾಯವೆಂದು ನಮಗೆ ತೋರುತ್ತದೆ. ಪುರಂದರದಾಸನಿಗೂ ಅವನಿಗೂ ಈ ವಿಷಯ-ದಲ್ಲಿ ಮೂಲಭೂತವಾದ ಭೇದವಿದೆ. ಪುರಂದರದಾಸನು ತನ್ನ ಗುರುವನ್ನೂ ಮಧ್ವ-ಮತವನ್ನೂ ಸಮಗ್ರವಾಗಿ ಸ್ವೀಕರಿಸಿ ಅದರ ಸತತವಾದ ಆಚರಣೆಯಲ್ಲಿ ಅಳವಡುವಷ್ಟು ವಿಶಾಲಭಾವನೆಯನ್ನೂ ಸರ್ವಸಂಗ್ರಹವೃತ್ತಿಯನ್ನೂ ತೋರಿದನು. ಕನಕದಾಸನು ಬೆಳೆದಂತೆ ಎಲ್ಲ ಮೇಲಾದ ಸಂಸ್ಕಾರಗಳಿಗೆ ಒಳಗಾಗಿ ಭಾಗವತಧರ್ಮದೃಷ್ಟಿಯನ್ನು ಸ್ಥಿರಪಡಿಸಿಕೊಂಡನು. ನಮ್ಮ ದೃಷ್ಟಿಯಲ್ಲಿ ಅವನು ಯಾವೊಂದು ಮತದ ಪಡಿಯಚ್ಚಿನಲ್ಲಿ ಮಾತ್ರ ಬೆಳೆಯದೆ ಎಲ್ಲ ಮತದ ಸಾರಗ್ರಾಹಿಯಾದ ಪರಮಭಕ್ತ-ನಾಗಿದ್ದನು. ಹೀಗಿದ್ದರೂ ರಾಮಾನುಜಮತವು ಮನೆತನದ ಸಂಪ್ರದಾಯದ ಮೂಲಕವೂ ಆಮೇಲಿನ ಸಂಪರ್ಕಗಳ ಮೂಲಕವೂ ಗಾಢಸಂಸ್ಕಾರಗಳನ್ನು ಉಂಟು-ಮಾಡಿರಬಹುದು. ಆಮೇಲಿನ ಇನ್ನೊಂದು ಪ್ರಬಲ ಸಂಸ್ಕಾರವೆಂದರೆ ಮಾಧ್ವ-ಮತದ್ದು. 'ಆದರೆ ಅದು ಮಾಧ್ವಮತತತ್ವ, ಸಂಪ್ರದಾಯ ಇವುಗಳ ಸಮಗ್ರ-ಸ್ವೀಕಾರದ ಸ್ವರೂಪವನ್ನು ತಾಳಿರಲಾರದು. ಮಾಧ್ವಗುರುಗಳ ಹಾಗೂ ಹರಿಭಕ್ತರ ಸರ್ವಾರ್ಪಣದ ಜೀವನವು ದಾಸರನ್ನು ಮುಗ್ಧಮಾಡಿತು. ಹರಿವಾಯುಗಳ ಉಪಾಸನೆ ಅವರ ಮನಸ್ಸೆಳೆಯಿತು'....'ಅವರು ಕಾಲ–ದೇಶ, ಮತತತ್ವ ಇವುಗಳನ್ನು ಮೀರಿದ ದೇವಜೀವಿಗಳು, ಸರ್ವಸಮದರ್ಶಿಗಳು.'[2]

ಕನಕದಾಸನು ಕೀರ್ತನೆಗಳನ್ನಲ್ಲದೆ ಈ ಯುಗದ ವರ್ಣಕಪರಂಪರೆಗನುಸರಿಸಿ ಹಲವು ಷಟ್ಪದಿಸಾಂಗತ್ಯಕಾವ್ಯಗಳನ್ನು ರಚಿಸಿದನು. ಅವೆಂದರೆ 'ಹರಿಭಕ್ತಿಸಾರ', 'ರಾಮಧಾನ್ಯಚರಿತ್ರೆ', 'ನಳಚರಿತ್ರೆ', 'ಮೋಹನತರಂಗಿಣಿ'. 'ನೃಸಿಂಹಸ್ತವ' ಎಂಬ ಚಿಕ್ಕ ಸಾಂಗತ್ಯವು ಅವನದೇ ಇರಬೇಕೆಂಬ ಊಹೆಯಿದೆ. 'ಮೋಹನ-ತರಂಗಿಣಿ'ಯೊಂದರಲ್ಲಿ 'ಕನಕದಾಸನ ಕಾವ್ಯ'ವೆಂಬ ಉಲ್ಲೇಖವು ಆದಿಕೇಶವನ

---

1 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೬೬.

2 ರಂ. ಶ್ರೀ. ಮುಗಳಿ: ಕನಕದಾಸರು (ಜೀವನ, ೨–೮, ಪು. ೪೫೭)

ಅಂಕಿತದೊಡನೆ ಇದೆ. ಉಳಿದ ಕೃತಿಗಳನ್ನು ಅಂಕಿತಬಲದಿಂದ ಮಾತ್ರ ಅವನವೆಂದು ತಿಳಿಯಲಾಗಿದೆ. ಜನಪ್ರತೀತಿ, ಶೈಲಿಸಾಮ್ಯದ ಮೇಲಿಂದಲೂ ಇದಕ್ಕೆ ಬೆಂಬಲ-ಕೊಡಬಹುದು. ಆದರೆ ಅಸಂದಿಗ್ಧಪ್ರಮಾಣಗಳು ಲಭಿಸಿಲ್ಲವೆಂಬುದನ್ನು ನೆನೆದಿರ-ಬೇಕು.

'ಹರಿಭಕ್ತಿಸಾರ'ವು ಭಾಮಿನಿಯ ೧೧೦ ಪದ್ಯಗಳಲ್ಲಿ ಹರಿನಾಮಸ್ತವ, ಪ್ರಾರ್ಥನೆಗಳನ್ನು ಒಳಕೊಂಡಿದೆ. ಆದರೆ

'ಈ ತೆರದೊಳಚ್ಯುತನ ನಾಮವ ।
ನೂತನದಿ ವಸುಧಾತಳದಿ ವಿ- ।
ಖ್ಯಾತಿಯನು ಬಣ್ಣಿಸಿದ ಕನ್ನಡ **ಕುಸುಮಷಟ್ಪದಿಯಲಿ** ॥'

ಎಂದಿರುವುದು ಅಚ್ಚರಿಯೆ ಸರಿ. ಈ ಪದ್ಯ ಅರಿಯದ ಯಾರದಾದರೂ ಪ್ರಕ್ಷೇಪ-ವಿರಬಹುದೇ? ಇದರಲ್ಲಿ ಭಕ್ತನ ಎದೆದುಂಬಿದ ಮೊರೆ ತಿಳಿಯಾದ ಸರಣಿಯಲ್ಲಿದೆ, ಛಂದ ಪ್ರವಾಹಿಯಾಗಿದೆ. ತತ್ವ–ನೀತಿಗಳ ಮಿಶ್ರಣವಿದ್ದರೂ ಆರ್ತಭಕ್ತಿಯ ಮತ್ತು ಶರಣವೃತ್ತಿಯ ರಸಾವೇಶವು ಅವಿರತವಾಗಿದ್ದು ಭಕ್ತಪ್ರಕೃತಿಯ ಜನರ ಪಾರಾಯಣಕ್ಕೆ ಯೋಗ್ಯವಾಗಿದೆ.

'ರಾಮಧಾನ್ಯಚರಿತ್ರೆ' ನನುಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಅಪರೂಪವಾದ ಸ್ವಕಲ್ಪಿತಕಥಾವಸ್ತುಗಳಲ್ಲಿ ಒಂದನ್ನು ನಿರೂಪಿಸಿರುತ್ತದೆ. ದೇವನು ಬಡವರ ಕೈವಾರಿ, ಭಕ್ತರ ಪಕ್ಷಪಾತಿ ಎಂಬುದನ್ನು ಸೂಚಿಸುವ ರೀತಿಯಲ್ಲಿ ರಾಗಿ ಮತ್ತು ಭತ್ತಗಳ ನಡುವೆ ವಾದ ನಡೆಯಿಸಿ ಅದರಲ್ಲಿ ರಾಗಿ ಗೆದ್ದಿತೆಂದೂ ಅದಕ್ಕೆ ರಾಮನು 'ರಾಘವ' ಎಂಬ ತನ್ನ ಹೆಸರನ್ನಿತ್ತನೆಂದೂ ಇದರಲ್ಲಿ ಕನಕದಾಸನು ಕಲ್ಪಿಸಿದ್ದಾನೆ. ಈ ಕಲ್ಪನೆ-ಯಲ್ಲಿಯೂ ಕವಿ ತನ್ನ ಭಾಗವತಮನೋಭಾವವನ್ನೂ ಜನತಾದೃಷ್ಟಿಯನ್ನೂ ಪ್ರಕಟಗೊಳಿಸಿದ್ದಾನೆ.

'ನಳಚರಿತ್ರೆ'ಯಲ್ಲಿ ಸುಪ್ರಸಿದ್ಧವಾದ ನಳದಮಯಂತೀಕಥೆ ತುಂಬ ಸ್ವಾರಸ್ಯ-ವಾಗಿ ನಿರೂಪಿತವಾಗಿದೆ. ಇದು ಪ್ರಧಾನವಾಗಿ ಲೌಕಿಕಕಾವ್ಯವಾದರೂ 'ಕಮಲ-ನಾಭನ ಕರುಣಕವಚವು ಸವೆದರಾರೇಗುವರು' (೪–೩೫), 'ದೈವವ ನೆನೆವ ಭಕ್ತರಿ-ಗುಂಟೆ ಭಯವೆಲೆ ನೃಪತಿ' (೫–೫೦) ಎಂಬ ಉಕ್ತಿಗಳು ಕನಕದಾಸನ ಭಕ್ತಿಪರತೆ-ಯನ್ನು ತೋರುತ್ತವೆ. ಮಹಾಭಾರತದಿಂದ ಮುಖ್ಯ ಕಥಾಂಶಗಳನ್ನು ಎತ್ತಿಕೊಂಡು ಕವಿ ಹಲಕೆಲವು ಹೃದ್ಯವಾದ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಕಥೆ ಎಲ್ಲಿಯೂ ನೀರಸ ಇಲ್ಲವೆ ಅಸ್ಫುಟವಾಗದೆ ಮುಂಬರಿಯುತ್ತದೆ, ನಳದಮಯಂತಿಯರ ಉದಾತ್ತಪಾತ್ರಗಳು ಎದ್ದುನಿಲ್ಲುತ್ತವೆ. ೪–೫ನೆಯ ಸಂಧಿಗಳಲ್ಲಿ ರಾಜ್ಯವನ್ನು ಕಳೆದುಕೊಂಡು ಹಲವಾರು ಕೋಟಲೆಗಳಿಗೆ ಸಿಲುಕಿದ ಆ ದಂಪತಿಗಳ ಕರುಣಚಿತ್ರವು ಹೃದಯಸ್ಪರ್ಶಿಯಾಗಿದೆ, ಕನಕದಾಸನ ಕಾವ್ಯಶಕ್ತಿಯ ಹೆಚ್ಚಳಕ್ಕೆ ನಿದರ್ಶನವಾಗಿದೆ.

ಕುಮಾರವ್ಯಾಸ – ಕುಮಾರವಾಲ್ಮೀಕಿಗಳ ಪ್ರಭಾವವು ಇದರಲ್ಲಿ ಮೂಡಿರಬೇಕು. ವಿಶೇಷವಾಗಿ ಕುಮಾರವ್ಯಾಸನ ವರ್ಣನಾಮಿತಿ, ಕಲ್ಪಕತೆಯ ಬೆಡಗು, ಶೈಲಿಯ ಪ್ರಸನ್ನತೆ ಇಲ್ಲಿ ಕೆಲವಂಶದಿಂದ ಕಾಣದೊರೆಯುತ್ತವೆ. ಕನಕದಾಸನ ಭಾಷಾಶೈಲಿಯಲ್ಲಿ ಆಡಂಬರವಿಲ್ಲದ ಸಂಸ್ಕೃತವು ತಿಳಿಯಾದ ತಿರುಳ್ಗನ್ನಡದೊಂದಿಗೆ ಹೊಂದಿದ ಸಮರಸತೆಯನ್ನು ‘ ನಳಚರಿತ್ರೆ ’ ಚೆನ್ನಾಗಿ ಉದಾಹರಿಸುತ್ತದೆ.

‘ ಮೋಹನತರಂಗಿಣಿ ’ ‘ ನಳಚರಿತ್ರೆ ’ಗಿಂತ ಗಾತ್ರದಲ್ಲಿಯೂ ಗುಣದಲ್ಲಿಯೂ ತುಂಬ ದೊಡ್ಡದು. ಭಾರತ–ಭಾಗವತಗಳಲ್ಲಿ ಬಂದಿರುವ ಕಾಮದಹನ, ಉಷಾ–ಅನಿರುದ್ಧಪ್ರಣಯ, ಹರಿಹರಸಮಾನತೆಯ ಸಂದೇಶದಲ್ಲಿ ಕೃಷ್ಣ–ಬಾಣಾಸುರ ಯುದ್ಧದ ಪರ್ಯವಸಾನ ಈ ಕಥಾನಕವನ್ನು ಸಾಂಗತ್ಯರೂಪದಲ್ಲಿ ಬಿತ್ತರಿಸಲಾಗಿದೆ. ಭಾಗವತಧರ್ಮದ ಪ್ರಚಾರಕ್ಕಾಗಿ ಕನಕದಾಸನು ಈ ವಿಷಯವನ್ನು ಆರಿಸಿಕೊಂಡರೂ ರಾಜಕೀಯ ಉದ್ದೇಶವನ್ನೂ ಇಟ್ಟುಕೊಂಡಿರಬೇಕು. ‘ ಕೃಷ್ಣಚರಿತೆ ’ ಎಂದಿದನ್ನು ಕರೆದು ‘ ಕೃಷ್ಣದೇವರಾಯನ ಚರಿತೆ ’ ಎಂಬ ಸೂಚ್ಯಾರ್ಥವನ್ನು ಅಪೇಕ್ಷಿಸಿರಬಹುದು. ಯಾಕೆಂದರೆ ಗ್ರಂಥದ ವರ್ಣನಾಭಾಗಗಳಲ್ಲಿ ವಿಜಯನಗರ ಕಾಲದ ವಿವಿಧಜೀವನವು ಪರ್ಯಾಯವಾಗಿ ಚಿತ್ರಿತವಾಗಿದೆ. ಹೀಗೆ ಮಾಡುವಾಗ ಇತಿಹಾಸವಿಸಂಗತಿಗಳಾದರೂ ಕವಿ ಅವನ್ನು ಗಮನಿಸಿಲ್ಲ. ಇದರ ಕಥಾನಕವು ದೀರ್ಘವರ್ಣನೆಗಳಿಂದ ಕಿಕ್ಕಿರಿದು ತಡೆತಡೆದು ಸಾಗುತ್ತದೆ, ಅಸಾಧ್ಯ–ಅದ್ಭುತ ಸಂನಿವೇಶಗಳು ಹೆಚ್ಚಾಗಿವೆ. ಕೆಲವು ಕರುಣ ಮತ್ತು ವೀರರಸದ ಪ್ರಸಂಗಗಳು ಚಿತ್ತವೇಧಕವಾಗಿವೆ. ‘ ಮೋಹನತರಂಗಿಣಿ ’ಯ ಮುಖ್ಯಮೋಹನವೆಂದರೆ ವಿವಿಧವರ್ಣನೆಗಳ ಸ್ವಭಾವೋಕ್ತಿ ಮತ್ತು ಕಲ್ಪಕತೆ. ಕಾವ್ಯಮಾರ್ಗದ ಹದಿನೆಂಟು ವರ್ಣನೆಗಳನ್ನೂ ಹಲವು ರಸಗಳನ್ನೂ ಸಾಂಗತ್ಯದ ಧಾಟಿಯಲ್ಲಿ ಕನಕದಾಸನು ತಂದಿದ್ದಾನೆ, ತನ್ನ ಕವಿತಾಶಕ್ತಿಯ ಮೇಲ್ತರವನ್ನು ತೋರಿದ್ದಾನೆ. ಅವನ ಶೈಲಿ ‘ ಕೇಳ್ವರಿಗಿದು ತನಿಬೆಲ್ಲದಚ್ಚು ’, ‘ ಜೇನುತುಪ್ಪದ ತೊರೆ ’ಯಾಗಿದೆ. ನಾಣ್ಣುಡಿ–ಒಳ್ನುಡಿಗಳೂ ಅನ್ಯದೇಶ್ಯಗಳೂ ಇದರಲ್ಲಿವೆ. ಇದನ್ನು ‘ ಮೇಲ್ಗತೆ ’ಯೆಂದು ಕವಿ ಅದೆಷ್ಟೋ ಸಲ ಹೇಳಿಕೊಂಡಿದ್ದಾನೆ. ಕಥಾನಕ ಹಾಗೂ ಪಾತ್ರಗಳಲ್ಲಿ ಮಾನವತೆಯ ಗಾಢಸಂಪರ್ಕವಿಲ್ಲ. ಸಾಂಗತ್ಯರಚನೆ, ವರ್ಣನೆ, ಶೈಲಿಗಳಲ್ಲಿ ಮಾತ್ರ ಮೇಲ್ಮೆ ತೋರಿದೆ. ಒಟ್ಟಿನಲ್ಲಿ ಪೌರಾಣಿಕ ಕಥೆಯ ಮೂಲಕ ತತ್ಕಾಲೀನ ಜೀವನವನ್ನು ಚಿತ್ರಿಸಿ ಚಿರಂತನವಾದ ಭಕ್ತಿಸಂದೇಶವನ್ನು ಬೀರಿ ಈ ಕೃತಿ ಸಫಲವಾಗಿದೆ. ರಾಜಕೀಯ ಧ್ವನಿ ಮತ್ತು ತತ್ಕಾಲೀನ ಚಿತ್ರವುಳ್ಳ ಪೌರಾಣಿಕ ಕಾವ್ಯಗಳಲ್ಲಿ ಇದಕ್ಕೊಂದು ಮೇಲಾದ ಸ್ಥಾನವಿದೆ. ಈ ಅರ್ಥದಲ್ಲಿ ಇದು ಮೇಲ್ಗತೆಯಾದರೂ ಮಹಾಕೃತಿಯಲ್ಲವೆಂಬುದು ಸ್ಪಷ್ಟವಾಗಿದೆ.

ಕನಕದಾಸನ ಭಕ್ತಿತರಂಗಿಣಿ ಕೀರ್ತನೆಗಳಲ್ಲಿ ಹೊರಸೂಸಿ ಹರಿದಿದ್ದಾಳೆ. ಅವನು ಮುಖ್ಯವಾಗಿ ಭಾಗವತ, ಹರಿಭಕ್ತಿಯ ಮತ್ತು ಸರ್ವಾರ್ಪಣದ ಪ್ರತಿಪಾದಕ. ಮಾಧ್ವ, ರಾಮಾನುಜ ಇವುಗಳ ಮತಸಾರವನ್ನು ಒಪ್ಪಿಯೂ ತಿರುತಿರುಗಿ ಯಾವು-

ದೊಂದರ ನಿರ್ದಿಷ್ಟಪ್ರಚಾರವನ್ನು ಮಾಡುವ ಗೊಡವೆಗೆ ಅವನು ಹೋದಂತಿಲ್ಲ. 'ಅಂಧಂತಮಸ್ಸು ಮತ್ತಿನ್ಯಾರಿಗೆ' (೧-೧೨) ಎಂಬ ತೆರದ ಗೀತೆಗಳು ಅವನ ಸಾಮಾನ್ಯಮನೋವೃತ್ತಿಗೆ ವಿಸಂಗತವಾಗಿರುವ ಕಾರಣ ಪ್ರಕ್ಷಿಪ್ತವಾಗಿರಬಹುದು. ಏಕಾಂತಭಕ್ತಿ, ನೀತಿಧರ್ಮ ಇವನ್ನು ಅವನು ಬೋಧಿಸಿದ್ದಾನೆ, ದಂಭಾಚಾರ-ಸಂಕುಚಿತಮನೋವೃತ್ತಿಗಳನ್ನು ಖಂಡಿಸಿದ್ದಾನೆ. ದಾಸಕೂಟದ ಸಾಮಾನ್ಯಕ್ರಮ-ದಂತೆ ದೇವತಾಸ್ತುತಿ, ನಾಮಸ್ಮರಣೆಯ ಹಾಡುಗಳು ಇವನಲ್ಲಿಯೂ ಇವೆ, ಆದರೆ ವೆಗ್ಗಳವಾಗಿಲ್ಲ. ಇದ್ದವುಗಳಲ್ಲಿ ಕೆಲವು ಶಬ್ದಚಿತ್ರ, ಪದಲಾಲಿತ್ಯ, ಸಂಗೀತಗುಣದಿಂದ ಮೆಚ್ಚತಕ್ಕುವಾಗಿವೆ. ನೀತಿ-ತತ್ವ ಮುಖ್ಯವಾದ ಕೀರ್ತನೆಗಳು ಮಾತ್ರ ಹೇರಳ-ವಾಗಿವೆ. ಪುರಂದರದಾಸನಂತೆ ಬೋಧಕನ ಆವೇಶ ಕನಕದಾಸನಲ್ಲಿಯೂ ಸಹಜ-ವಾಗಿದೆ. ಆದರೆ ಕನಕದಾಸನಲ್ಲಿ ವಿಚಾರಸ್ವಾತಂತ್ರ್ಯ ಹೆಚ್ಚು. ಜನಜೀವನದ, ಜನಭಾಷೆಯ ಅರಿವು ಹೆಚ್ಚು. ಬೋಧಪರಕೀರ್ತನೆಗಳಲ್ಲಿ ಉಚಿತವಾದ ಉಪಮೆ-ರೂಪಕಗಳಿಂದ ತತ್ವ-ನೀತಿಗಳಿಗೆ ಕವಿತ್ವದ ಪರಿವೇಷಕಟ್ಟಿದ ಸೊಗಸುಗಾರಿಕೆ ಇದೆ. ಒಮ್ಮೊಮ್ಮೆ ಇಡೀ ಕೀರ್ತನೆ ರೂಪಕವಿಸ್ತಾರವಾಗಿ ಸೊಗಸುತ್ತದೆ. ಕನಕನ ಮುಂಡಿಗೆ ಎಂಬ ಹೆಸರಿನ ಹಾಡುಗಳು ಬೆಡಗಿನ ವಚನಗಳಂತೆ ಸಂಕೇತ ಬಲ್ಲವರಿಗೆ ಗಮ್ಯ, ಉಳಿದವರಿಗೆ ಗೂಢವಾಗಿ ಬಿಡುತ್ತವೆ. ಜಾನಪದಧಾಟಿಯಲ್ಲಿ ಕನಕದಾಸನು 'ಸಾರಿ ದೂರಿ ಹೇಳತೇನೆ' (೧-೩), 'ಏನು ಇಲ್ಲದ ಎರಡು ದಿನದ ಸಂಸಾರ' (೧-೮), 'ಡಿಂಬದಲ್ಲಿರುವ ಜೀವ' (೧-೪೨) ಇಂಥ ಹಾಡುಗಳನ್ನು ಚೆಂದಾಗಿ ಕಟ್ಟಿದ್ದಾನೆ. 'ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು ಚಳ್ಳಪಿಳ್ಳಿ ಗೊಂಬೆಯಂತೆ ಆಡಿ ಹೋಯಿತು | ಹಳ್ಳ ಹರಿದು ಹೋಗುವಾಗ ಗುಳ್ಳೆ ಬಂದು ಒಡಿಯುವಂತೆ ಉಳ್ಳಿ-ಪೊರೆಯಂತೆ ನೋಡೊ ಸಂಸಾರದಾಟವೊ' ಎಂಬ ನುಡಿ ರಮ್ಯವಾಗಿದೆ. ಅವನ ಹಾಡುಗಳಲ್ಲಿ ಪರಿಪಕ್ವವಾದ ಪ್ರಪಂಚಾನುಭವ, ಉತ್ತಮವಿವೇಕ ಕಂಡು ಬರುತ್ತವೆ.

ಸಮಾಜವಿಮರ್ಶೆ ಮತ್ತು ಜನಜೀವನ ಚಿತ್ರಕ್ಕೆ ಮೀಸಲಾದ ಎಷ್ಟೋ ಕೀರ್ತನೆಗಳಿವೆ. ಅವುಗಳಲ್ಲಿ ಕನಕದಾಸನು ಸಮಾಜದ ಕುಂದುಕೊರತೆಗಳನ್ನು ಮುಚ್ಚುಮರೆಯಿಲ್ಲದೆ ಕೆಡೆನುಡಿದಿದ್ದಾನೆ. ಅವನ ಕಳಕಳಿ ನೈಜ, ಮಾತು ಹರಿತ, ನಿರೀಕ್ಷಣೆ ತೀವ್ರ ಎಂಬುದು ತಿಳಿಯುತ್ತದೆ. ಅವನ ಕಿರುನುಡಿಗಳು ಕೆಲವು ಸಲ ಕಿಡಿಯಂತೆ ಸಿಡಿಯುತ್ತವೆ. ಅವುಗಳ ಯಮಕ ಅಚ್ಚರಿಯನ್ನು ಹುಟ್ಟಿಸುತ್ತದೆ. ೧-೬೪, ೧೫೮ರಲ್ಲಿ ಕುಲ ವಿಚಾರ, ೬೩ರಲ್ಲಿ 'ಮಗನಿಂದ ಗತಿ' ಎಂಬ ಕಲ್ಪನೆ ಇವುಗಳ ವಿಮರ್ಶೆ ಖಂಡಿತವಾಗಿದೆ. 'ಮೋಹನತರಂಗಿಣಿ'ಯಲ್ಲಿ ವಿಜಯನಗರ-ಕಾಲದ ಸುಖಸಂತೋಷಗಳ ಚಿತ್ರ ಹೆಚ್ಚಾಗಿದ್ದರೆ ಕೀರ್ತನೆಗಳಲ್ಲಿ ಲೋಪದೋಷಗಳ ಚಿತ್ರವಿದೆ. ಹಲವು ದೈವದ ಹುಚ್ಚು, ಅವಕ್ಕೆ ಸಂಬಂಧಿಸಿದ ಮೂಢ ಆಚಾರಗಳು, ಪ್ರಾಣಿಬಲಿಯ ಪದ್ಧತಿ ಇವೆಲ್ಲ ೧-೧೪೨, ೧೬೩, ೧೬೭, ೧೬೮, ೧೭೩, ೧೭೭ ಇವುಗಳಲ್ಲಿ ಕನಕದಾಸನ ವಿಡಂಬನೆಗೆ ಗುರಿಯಾಗಿವೆ.

ಅಂತರಂಗದ ಆಳವನ್ನೂ ಭಕ್ತಿನಿರ್ಭರತೆಯನ್ನೂ ತಿಳಿಸುವ ಕೀರ್ತನೆಗಳು ಕನ್ನಡನುಡಿಗೆ ತೊಡವಾದ ಹಿರಿಯ ಭಾವಗೀತೆಗಳಾಗಿವೆ. 'ತನು ನಿನ್ನದು ಜೀವನ ನಿನ್ನದು', 'ತಲ್ಲಣಿಸದಿರು ಕಂಡ್ಯ ತಾಳು ಮನವೇ', 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ', 'ನನ್ನಿಂದ ನಾನೇ ಜನಿಸಿ ಬಂದೆನೇ' ಈ ಮೊದಲಾದುವು-ಗಳಲ್ಲಿ ಭಾವಗೀತೆ ಮತ್ತು ಭಕ್ತಿ ಸಮರಸವಾಗಿವೆ. ಇನ್ನೂ ಹಲವದರಲ್ಲಿ ಯಾವುದೋ ವಿಶಿಷ್ಟಭಾವವು ಮೊಳೆತು ಮುಂದೆ ಸಾಂಪ್ರದಾಯಿಕವಾಗಿ ಬೆಳೆಯುತ್ತದೆ. ಪಲ್ಲವಿಯಲ್ಲಿ ಹುಟ್ಟಿದ ಆಕಾಂಕ್ಷೆಯನ್ನು ನುಡಿಗಳು ಸ್ವತಂತ್ರವಾಗಿ ಪೂರೈಸದೆ ಸಾಮಯಿಕಸ್ತುತಿ-ಯಲ್ಲಿ ಕೊನೆಗೊಳ್ಳುತ್ತವೆ. 'ನೀನುಪೇಕ್ಷೆಯ ಮಾಡೆ ಬೇರೆ ಗತಿ ಯಾರೆನಗೆ' ಎಂಬುದು ಇದಕ್ಕೆ ನಿದರ್ಶನ. ಕೆಲವು ಕೀರ್ತನೆಗಳಲ್ಲಿ ಅನುಭಾವ, ದಿವ್ಯದರ್ಶನ ಇವು ಪ್ರಮುಖವಾಗಿವೆ. ಉದಾ: 'ಇಷ್ಟು ದಿನ ಈ ವೈಕುಂಠ ಎಷ್ಟು ದೂರವೆನ್ನುತಿದ್ದೆ', 'ಎಲ್ಲಿ ನೋಡಿದಲ್ಲಿ ರಾಮು'. ಕೃಷ್ಣಗೋಪಿಯರನ್ನು ಕುರಿತ ಹಲವು ಕೀರ್ತನೆಗಳಲ್ಲಿ ವರ್ಣನೆ, ಶೈಲಿ, ನಾದ ಇವುಗಳ ಮುಪ್ಪುರಿ ಕಾಣುತ್ತದೆ.

ಕನಕದಾಸನ ಕೀರ್ತನೆಗಳೆಲ್ಲವೂ ಹಿರಿಯವಲ್ಲ. ಆದರೂ ಅವನ ಪ್ರತಿಭೆಯ ಉನ್ನತಿಯನ್ನು ತೋರುವ ಕಾವ್ಯಕಲ್ಪನೆಗಳು ಬೇಕಾದಷ್ಟಿವೆ. ಎಂಥ ಬೋಧನೆ-ಯಲ್ಲಿಯೂ 'ಪಂಚೇಂದ್ರಿಯಗಳೆಂಬ ಮಂಚಿಗೆಯ ಹಾಕಿರಯ್ಯ, ಚಂಚಲವೆಂಬ ಹಕ್ಕಿಯನ್ನು ಓಡಿಸಿರಯ್ಯ, ಉದಯಾಸ್ತಮಾನವೆಂಬ ಎರಡು ಕೊಳಗವ ಮಾಡಿ ಆಯುಷ್ಯದ ರಾಸಿಯನು ಅಳೆಯಿರಯ್ಯ' ಎಂಬ ಕಲ್ಪನೆ ಅದ್ಭುತವಾಗಿ ಹೊಳೆಯು-ತ್ತದೆ. ಸಮಗ್ರರೂಪಕವಾದ 'ಬೊಂಬೆಯಾಟವನಾಡಿಸಿದೆ ಮಹಾಭಾರತದಾ' ಎಂಬ ಕೀರ್ತನೆಯಲ್ಲಿ ಅದನ್ನು ಕಾಣಬಹುದು. ಸಂಸಾರದುಃಖದ ಅನುಭವಕ್ಕೆ 'ನಾಯಿ ಬಾಯಿ ಅರಿವೀಯಂತೆ ನಾನಾಕೋಟಲೆಯಲಿ ಬಿದ್ದು' ಎಂಬ ಸ್ವತಂತ್ರ ಹೋಲಿಕೆ-ಯಲ್ಲಿಯೂ 'ಹಲವು ಜನುಮದಿ ತಾಯಿ ಎನಗಿತ್ತ ಮೊಲೆಹಾಲು ನಲಿದುಂಬಾಗ ಹನಿ ನೆಲಕ್ಕೆ ಬಿದ್ದುದು ಕೂಡಿ ಅಳೆಯೆ ಕ್ಷೀರಾಂಬುಧಿಗೆ ಇಮ್ಮಿಗಿಲೋ' ಎಂಬ ಭವ್ಯ-ಕಲ್ಪನೆಯಲ್ಲಿಯೂ ಅವನ ಕಲ್ಪನಾಶಕ್ತಿ ಎತ್ತರಕ್ಕೆ ಪುಟನೆಗೆದಿರುವುದು ಕಾಣುತ್ತದೆ. ಅವನ ಕಾವ್ಯಗ್ರಂಥ ಮತ್ತು ಕೀರ್ತನೆಗಳಲ್ಲಿ ನವೋನವಪ್ರತಿಭೆ ಸಹಜಲಾಸ್ಯದಿಂದ ಕುಣಿದಿದ್ದಾಳೆ. ಅವನ ವಾಣಿಯಲ್ಲಿ ಸಹಜಸೊಮ್ಮು, ದೇಸಿಯ ಸವಿತಿರುಳು ಮೈಗೊಂಡಿವೆ. ಅವನು ಮಹಾಭಕ್ತನಾದಂತೆ ಮಹಾಕವಿಯ ಸತ್ವವುಳ್ಳವನು. ಅವನ ಜೀವನವೇ ಮಹಾಕೃತಿಯಾಗಿತ್ತು; ಅವನ ಕೃತಿಗಳಲ್ಲಿಯೂ ಮಹೋನ್ನತಿ ಬೆಳಗಿದೆ. ಪುರಂದರದಾಸನಂತೆ ಆದರೂ ಅವನಿಗಿಂತ ಕೆಲಮಟ್ಟಿಗೆ ಬೇರೆಯಾಗಿ ಕನಕದಾಸನು ತನ್ನ ಜೀವನ–ಸಾಹಿತ್ಯಗಳಲ್ಲಿಯ ಸಿದ್ಧಿಯಿಂದ ಕನ್ನಡಿಗರ ಚಿರಂತನ-ವಾದ ಸಂಸ್ಕೃತಿಪ್ರದೀಪಗಳಲ್ಲಿ ಒಂದಾಗಿದ್ದಾನೆ.

ವಾದಿರಾಜ

ವ್ಯಾಸರಾಯನ ಸಮಕಾಲೀನನಾಗಿ ಅವನಂತೆ ವ್ಯಾಸಕೂಟ-ದಾಸಕೂ ಎರಡರಲ್ಲಿಯೂ ಹೆಸರಾದವನು ಸೋದೆಮಠದ ಸ್ವಾಮಿಯಾದ ವಾದಿರಾಜತೀರ್ಥನು ವ್ಯಾಸರಾಯನಂತೆ ನ್ಯಾಯವೇದಾಂತಗಳಲ್ಲಿ ಪರಿಣತನಾಗಿ ಅವನು ಸಂಸ್ಕೃತದ ೧೬ ಗ್ರಂಥಗಳನ್ನು, ಕನ್ನಡದಲ್ಲಿ ವೈಕುಂಠವರ್ಣನೆ, ಲಕ್ಷ್ಮೀಶೋಭನೆ, ಸ್ವಪ್ನಪದ ಕೀಚಕವಧ, ಕೇಶವನಾಮ, ಗುಂಡಕ್ರಿಯೆ ಮುಂತಾದುವಲ್ಲದೆ ಹಯವದನಮುದ್ರಿಕೆ ಯಲ್ಲಿ ಹಲವಾರು ಕೀರ್ತನೆ ಮತ್ತು ಸುಳಾದಿ-ಉಗಾಭೋಗಗಳನ್ನು ಬರೆದಿದ್ದಾನೆ ಎಲ್ಲ ಗ್ರಂಥಗಳಲ್ಲಿ ಹಾಗೂ ಕೀರ್ತನೆಗಳಲ್ಲಿ ತರ್ಕಶುದ್ಧವಾಗಿ ಇಲ್ಲವೆ ಸಾಹಿತ್ಯರೀತಿಯ ಮಧ್ವಮತದ ತತ್ವಗಳ ಪ್ರತಿಪಾದನೆಯಿರುತ್ತದೆ. 'ಸ್ವೀಕರಿಸು ವೈಷ್ಣವರ ಮತವ ನಿರಾಕರಿಸು ಅನ್ಯಮತವ' ಎಂಬುದೇ ಅವುಗಳ ಆಶಯ. 'ಶಾಸ್ತ್ರೀಯ ಯುಕ್ತಿಗಳನ್ನು ಸಾಹಿತ್ಯಮುದ್ರೆಯಿಂದ ಮನಸ್ಸಿಗೆ ನಡುವಂತೆ ಸರಳವಾದ ಪ್ರೌಢಕನ್ನಡನುಡಿಯು ಮುಖ್ಯಪ್ರಮೇಯವಾದ ಭಕ್ತಿಯಿಂದ ಶ್ರೀಹರಿಯನ್ನು ಒಲಿಸಿ ಮುಕ್ತಿಯನ್ನು ಪಡೆಯಬೇಕೆಂಬುದನ್ನು ಸಿದ್ಧಾಂತಿಸಿದ್ದಾರೆ. ಇವರ ಕೃತಿಗಳಿಗೆ ಶಾಸ್ತ್ರಸಾಹಿತ್ಯವೆನ್ನ ಬಹುದು.'[1] ವ್ಯಾಸರಾಯನ ಶಿಷ್ಯಂದಿರಲ್ಲಿ ಒಬ್ಬನಾದ ವೈಕುಂಠದಾಸನು ಇದೇ ಕಾಲದಲ್ಲಿದ್ದು ಕೀರ್ತನೆಗಳನ್ನು ರಚಿಸಿದ್ದಾನೆ. ಮುಂದೆ ೧೬ನೆಯ ಶ.ದ ಕೊನೆ ೧೮ನೆಯ ಶ.ದ ಮೊದಲಿನವರೆಗೆ ದಾಸರ ಪೀಳಿಗೆ ಕಣ್ಮರೆಯಾದಂತಿದೆ. ನಡುವಿ ಅವಧಿಯಲ್ಲಿ ಪುರಂದರದಾಸನ ನಾಲ್ಕು ಮಕ್ಕಳು ದಾಸಕೂಟಪರಂಪರೆಯನ್ನು ಮುಂದುವರಿಸಿದರೆಂದು ಗ್ರಹಿಕೆಯಿದೆ. ಅದು ದಿಟವಾಗಿದ್ದರೂ ಪರಂಪರೆ ಅಬಾಧಿ ವಾಗಿದೆ ಎಂದು ಹೇಳುವಂತಿಲ್ಲ. ಶ್ರೀವಿಜಯೀಂದ್ರತೀರ್ಥ ಮತ್ತು ಅವನ ಶಿಷ್ಯ ಪ್ರಶಿಷ್ಯರು ಅದನ್ನು ಮುಂದುವರಿಸಿದರೆಂದೂ 'ಶ್ರೀಸುಧೀಂದ್ರತೀರ್ಥರ ಕುಮಾರ ರಾದ ಶ್ರೀರಾಘವೇಂದ್ರತೀರ್ಥರು 'ಇಂದು ಎನಗೆ ಗೋವಿಂದ' ಎಂಬ ಒಳ್ಳೆ ವಿರಕ್ತಿಭಕ್ತಿಪೂರ್ವಕವಾದ ಹಾಡನ್ನು ರಚಿಸಿ ದಾಸಸಂಪ್ರದಾಯದ ಪ್ರಭುತ್ವವನ್ನು ಎಲ್ಲರೂ ಮಾನ್ಯಮಾಡಿದ್ದರೆಂಬುದನ್ನು ಪ್ರಕಟಗೊಳಿಸಿರುವರು'[2] ಎಂದೂ ಹೇಳ ಲಾಗಿದೆ. ಅಲ್ಲದೆ 'ಶ್ರೀರಾಘವೇಂದ್ರತೀರ್ಥರು ಪುರಂದರದಾಸರ ಗುಂಪಿಗ ವಿಜಯದಾಸಾದಿ ಹರಿಭಕ್ತರ ಗುಂಪಿಗೂ ಮಧ್ಯವರ್ತಿಗಳಾಗಿದ್ದು ಪರಂಪರೆಯಿಂ ಬಂದ ದಾಸ-ವ್ಯಾಸಕೂಟಗಳ ತಿರುಳನ್ನು ಮುಂದಿನ ಭಕ್ತವೃಂದಕ್ಕೆ ನೀಡು ಜೀವನಸಳಿಕೆಯಂತೆ ಆದರು.'[3] ೧೮ನೆಯ ಶ.ದಲ್ಲಿ ಉದಯಹೊಂದಿದ ದಾಸರ ಅಗ್ರಗಣ್ಯರೆಂದರೆ ಪ್ರಸನ್ನವೆಂಕಟದಾಸ, ಮಹಿಪತಿದಾಸ, ವಿಜಯದಾಸ, ಗೋಪಾ

---

1 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೧೫೭.

2 ,, ,, ,, ಪು. ೬೭.

3 ,, ,, ,, ಪು. ೬೮.

ಾಸ ಮತ್ತು ಜಗನ್ನಾಥದಾಸ ಇವರು. ಪ್ರಸನ್ನವೆಂಕಟದಾಸನು ಕೀರ್ತನೆಗಳಲ್ಲದೆ ಾಗವತದಶಮಸ್ಕಂಧದ ಪೂರ್ವಾರ್ಧವನ್ನು ಕನ್ನಡದಲ್ಲಿ ರಚಿಸಿದ್ದಾನೆ. ಮಹಿಪತಿ-ಾಸನು ತತ್ವದ ಮತ್ತು ಭಕ್ತಿಯ ಅನೇಕ ಹಾಡುಗಳನ್ನು ರಚಿಸಿದ್ದರೂ ಅವಿನ್ನೂ ಳಕಿಗೆ ಬಂದಿಲ್ಲ. ವಿಜಯದಾಸನು ತನ್ನ ಕಾಲದಲ್ಲಿ ದಾಸಶ್ರೇಷ್ಠನೆಂದು ಕೀರ್ತಿಗಳಿಸಿ ಹುಸಂಖ್ಯೆಯಲ್ಲಿ ಸುಳಾದಿಗಳನ್ನೂ ಪದಗಳನ್ನೂ ರಚಿಸಿದನು. ಗೋಪಾಲದಾಸನು ವನ ಶಿಷ್ಯನಾಗಿ ಹಾಡುಗಳನ್ನು ಹಾಡಿದನು. ಇವರೆಲ್ಲರ ಕೃತಿಗಳ ವಿವೇಚನೆ ವಶ್ಯಕವಾಗಿದ್ದರೂ ವಿಸ್ತಾರಭಯದಿಂದ ಮಾಡಲಾಗಿಲ್ಲ.

ಗನ್ನಾಥದಾಸ

ಪುರಂದರದಾಸ–ಕನಕದಾಸರ ತರುವಾಯ ದಾಸಕೂಟದ ಪರಂಪರೆಯನ್ನು ಜ್ವಲವಾಗಿ ಬೆಳಗಿಸಿದವರಲ್ಲಿ ಜಗನ್ನಾಥದಾಸನು ಹಿರಿಯನು. ಅವನಲ್ಲಿ ಸಂಸ್ಕೃತ-ಾಂಡಿತ್ಯದೊಡನೆ ಕನ್ನಡಶ್ರದ್ಧೆ, ಸಂಪ್ರದಾಯನಿಷ್ಠೆಯೊಡನೆ ವಿಶಾಲಮನೋಭಾವ, ಪರೋಕ್ಷಜ್ಞಾನದೊಡನೆ ಭಕ್ತಿ ಬೆರೆತುಕೊಂಡಿದ್ದುವು. 'ಭಕ್ತವಿಜಯ'ದಲ್ಲಿ ರೂಪಿತವಾದ ಚರಿತ್ರೆಯನ್ನು ನಂಬಬಹುದಾದರೆ ಜಗನ್ನಾಥದಾಸನು ಮೊದಲು ಸ್ಕೃತಜ್ಞಾನದ ದರ್ಪದಲ್ಲಿ ದಾಸಕೂಟವನ್ನೂ ಕನ್ನಡಪದಗಳನ್ನೂ ಹೀಯಾಳಿಸು-ದ್ದು ಆಮೇಲೆ ವಿಜಯದಾಸ–ಗೋಪಾಲದಾಸರ ಅನುಗ್ರಹದಿಂದ ಪರಿವರ್ತನ-ಾಂದಿ ದಾಸಕೂಟವನ್ನು ಸೇರಿರಬೇಕು. ಅವನು 'ತಂತ್ರಸಾರ', 'ತತ್ವಸುವಾಲಿ', ಹರಿಕಥಾಮೃತಸಾರ'ಗಳನ್ನೂ ಕೀರ್ತನೆಗಳನ್ನೂ ರಚಿಸಿದ್ದಾನೆ. ಗೀತಾ, ಬ್ರಹ್ಮ-ೂತ್ರ, ದಶೋಪನಿಷತ್ತು ಎಂಬ ಪ್ರಸ್ಥಾನತ್ರಯಿಯನ್ನು ಕನ್ನಡಿಸಿರಬಹುದೆಂಬ ತೀತಿಯಿದೆ, ಆದರೆ ಅವು ಉಪಲಬ್ಧವಿಲ್ಲ. 'ತಂತ್ರಸಾರ'ವು ೨೭ ನುಡಿಗಳಲ್ಲಿ ಷ್ಣುಸ್ತುತಿ ಮತ್ತು ಮಂತ್ರಸ್ವರೂಪವನ್ನು ಒಳಗೊಂಡ ಹಾಡು. 'ತತ್ವಸುವಾಲಿ' ಲ್ಲಿ ತ್ರಿಪದಿಧಾಟಿಯಲ್ಲಿ ತತ್ವವನ್ನು ಹೇಳುವ ಸುಮಾರು ೬೦೦ ಪದ್ಯಗಳಿರುತ್ತವೆ. ಹರಿಕಥಾಮೃತಸಾರ'ವು ೩೨ ಸಂಧಿ ಮತ್ತು ಸುಮಾರು ಸಾವಿರದಷ್ಟು ಭಾಮಿನಿ-ಟ್ಪದಿ ಪದ್ಯಗಳುಳ್ಳ ಗ್ರಂಥ. 'ಹರಿಕಥಾಮೃತಸಾರ' ಎಂಬ ಹೆಸರು ಇದರ ಎಲ್ಲ ಂಧಿಗಳಿಗೂ ಅನ್ವರ್ಥಕವಾಗಿಲ್ಲ. ಇದರಲ್ಲಿ ಮಧ್ವಮತದ ತತ್ವಗಳನ್ನು ವಿವರ ಪರವಾಗಿ ಅಧಿಕಾರವಾಣಿಯಿಂದ ವಿವೇಚಿಸಲಾಗಿದೆ. ತತ್ವವನ್ನು ತಿಳಿಸಿ ಹೇಳುವಲ್ಲಿ ಾಹಿತ್ಯದೃಷ್ಟಿ ಮಾತ್ರವಲ್ಲ, ಅನಭಿಜ್ಞನಿಗೂ ತಿಳಿಸಿಕೊಡಬೇಕೆಂಬ ಉದ್ದೇಶವು ಗ್ರಂಥದಲ್ಲಿದೆ. ಬಹುಭಾಗದಲ್ಲಿ ಇದು ಶಾಸ್ತ್ರಜಡವಾಗಿದ್ದರೂ ಇದರ ವಿವೇಚನೆಯ ಾಗಸು, ಸಾದೃಶ್ಯಗಳ ಔಚಿತ್ಯ ಚಿತ್ರವನ್ನು ಎಳೆದುಕೊಂಡು ಹೋಗುತ್ತವೆ. ಸಣಾಸಂಧಿ, ಸರ್ವಪ್ರತೀಕಸಂಧಿಗಳಲ್ಲಿಯ ಉತ್ಕಟಭಕ್ತಿ, ಉದಾರಹೃದಯಗಳು ಗನ್ನಾಥದಾಸನ ವ್ಯಕ್ತಿತ್ವದ ಘನತೆಯನ್ನು ಎತ್ತಿತೋರುತ್ತವೆ. ಉತ್ತಮಕವಿತೆಯ ದರ್ಶನಗಳು ಅಲ್ಲಲ್ಲಿ ಮಿನುಗುತ್ತವೆ. ಪರಮಾತ್ಮನ ಭಕ್ತಪ್ರಿಯತೆಯನ್ನು ಸಾರುವ

'ಮನವಚನಕತಿದೂರ' (೨-೪), 'ಮಲಗಿ ಪರಮಾದರದಿ ಪಾಡಲು' (೨-೫), 'ಜನನಿಯನು ಕಾಣದಿಹ ಬಾಲಕ' (೨-೧೧), ೨-೨೪, ೨೫, ೨೬, ೨೭, ೨೮ ಈ ಪದ್ಯಗಳು ಅತ್ಯಂತಸರಳವೂ ಹೃದ್ಯವೂ ಆಗಿರುತ್ತವೆ. ಜಗನ್ನಾಥದಾಸನ ವಿಶಾಲ-ದೃಷ್ಟಿಗೆ ಉದಾಹರಣೆಯಾಗಿ 'ಆವ ದೇಹವ ಕೊಡಲಿ ಹರಿ ಮತ್ತಾವ ಲೋಕದೊಳಿಡಲಿ ತಾ ಮತ್ತಾವ ದೇಶದೊಳಿರಲಿ ಆವಾವಸ್ಥೆಗಳು ಬರಲಿ....ಈ ವಿಧದಿ....ಸುಜ್ಞಾನ ಭಕುತಿಯ ಬೇಡು ಕೊಂಡಾಡು' (೭-೨೨),

'ಸರ್ವದೇಶವು ಪುಣ್ಯದೇಶವು ।
ಸರ್ವಕಾಲವು ಪುಣ್ಯಕಾಲವು ।
ಸರ್ವಜೀವರು ದಾನಪಾತ್ರರು ಮೂರು ಲೋಕದೊಳು ॥
ಸರ್ವಮಾತುಗಳೆಲ್ಲ ಮಂತ್ರವು ।
ಸರ್ವಕೆಲಸಗಳೆಲ್ಲ ಪೂಜೆಯು ।
ಶರ್ವವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ ॥' (೧೦-೪)

ಇಂಥ ಪದ್ಯಗಳನ್ನು ನೋಡಬಹುದು. ಸರ್ವಜನಕ್ಕೆ ತಿಳಿಯುವ ಮತ್ತು ಎದೆನಡುವ ಹೋಲಿಕೆಗಳಂತೂ ಈ ಗ್ರಂಥದಲ್ಲಿ ಹೇರಳವಾಗಿವೆ. ಉದಾ:

'ನದನದಿಗಳಿಳೆಯೊಳಗೆ ಪರಿವವು ।
ಉದಧಿಪರಿಯಂತರದಿ ತರುವಾ- ।
ಯದಲಿ ರಮಿಸುವವಲ್ಲಿ ತನ್ಮಯವಾಗಿ ತೋರದಲೆ ॥
ವಿಧಿನಿಷೇಧಗಳಾಚರಿಸುವರು ।
ಬುಧರು ಭಗವದ್ರೂಪ ಸರ್ವ- ।
ತ್ರದಲಿ ಚಿಂತನೆ ಬರಲು ತ್ಯಜಿಸುವರಖಿಳಕರ್ಮಗಳ ॥' (೧೦-೮)

'ಬುದ್ಧಿವಿದ್ಯಾಬಲದಿ ಪೇಳಿದ ಶುದ್ಧಕಾವ್ಯವಿದಲ್ಲ ತತ್ವಸುಪದ್ಧತಿಗಳನು ತಿಳಿದ ಮಾನವನಲ್ಲ' (೧೦-೧೮) ಎಂದು ಮುಂತಾಗಿ ಹೇಳಿದ್ದರಲ್ಲಿ ವಿನಯ ತುಂಬಿದೆ. ಆದರೆ 'ಶುದ್ಧಕಾವ್ಯವಲ್ಲ' ಎಂಬಲ್ಲಿ ಸತ್ಯಾಂಶವಿದೆ. ಈ ಗ್ರಂಥ ಶುದ್ಧಕಾವ್ಯವಲ್ಲ. ತತ್ವಪ್ರತಿಪಾದಕಕಾವ್ಯ ಎಂಬರ್ಥವಾಗಬಹುದು, ಅಶುದ್ಧರೂಪಗಳನ್ನು ಒಳಕೊಂಡಿದೆ ಎಂಬರ್ಥದಲ್ಲಿಯೂ ಹೇಳಬಹುದು. 'ಈ ಮಹಾದ್ಭುತಕಾವ್ಯ' ಎಂದಿದನ್ನು ಫಲಸ್ತುತಿ ಸಂಧಿಯಲ್ಲಿ ಬಣ್ಣಿಸಲಾಗಿದೆ. ಅದ್ಭುತತನದ ಅಂಶಗಳಿದ್ದರೂ ಈಶಪ್ರೇರಣೆಯಿಂದ ಓಘವತಿಯಾಗಿ ಬರೆದುದಾದರೂ, 'ಮಹಾದ್ಭುತಕಾವ್ಯ' ಎಂಬುದು ಶಿಷ್ಯನಾಡಿದ ಹೆಮ್ಮೆಯ ಮಾತು.

ಜಗನ್ನಾಥದಾಸನ ಕೀರ್ತನೆಗಳಲ್ಲಿ ಹರಿಗುರುಸ್ತುತಿ, ಆಧ್ಯಾತ್ಮಿಕ ಅನುಭವ ಇವಕ್ಕೆ ಮಿಗಿಲಾದ ಸ್ಥಾನವಿದೆ. ಅವುಗಳಲ್ಲಿ 'ಎಂಥಾದೋ ಶ್ರೀವೈಕುಂಠವೆಂಥಾದೊ

(೨), ' ದಾಸೋಹಂ ತವ ದಾಸೋಹಂ ' (೮), ' ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ ' (೧೦), ' ಪಿಡಿಯೆನ್ನ ಕೈಯ್ಯ ' (೧೨೩), ' ಸಿರಿರಮಣ ತವ ಚರಣ ' (೧೩೩), ' ಕಂಡೆ ಕಂಡೆ ಕೃಷ್ಣನ ಕಂಡೆ ' (೧೩೪) ಇವನ್ನು ವಿಶೇಷವಾಗಿ ನೆನೆಯಬಹುದು. ' ಅರಿತವರಿಗತಿಸುಲಭ ಹರಿಯ ಪೂಜೆ ' (೧೦೯) ಈ ಸಮಗ್ರಕೀರ್ತನೆ ಜಗನ್ನಾಥದಾಸನ ಮಹಾವ್ಯಕ್ತಿತ್ವದ ಮತ್ತು ಸರ್ವಾರ್ಪಣಸಿದ್ಧಿಯ ಪ್ರತೀಕವಾದ ಭವ್ಯರೂಪಕವಾಗಿದೆ, ದಾಸಸಾಹಿತ್ಯದ ಹಿರಿಯ ಗೀತೆಗಳಲ್ಲಿ ಒಂದಾಗಿದೆ. ಪುರಂದರದಾಸನಲ್ಲಿಯೂ ಇಂಥ ಹರಿಪೂಜೆಯ ಕಲ್ಪನೆಯಿದೆ. ಈ ದಾಸನ ' ಹರಿಕಥಾಮೃತಸಾರ 'ದಲ್ಲಿ

' ಮೇದಿನಿಯ ಮೇಲುಳ್ಳ ಗೋಷ್ಪಾ-
ದೋದಕಗಳೆಲ್ಲಮಲತೀರ್ಥವು ।
ಪಾದಪಾದ್ರಿ ಧರಾತಳವು ಸುಕ್ಷೇತ್ರ, ಜೀವಗಣಾ ॥
ಶ್ರೀಧರನ ಪ್ರತಿಮೆಗಳು, ಇವರುಂ- ।
ಬೋದನವೆ ನೈವೇದ್ಯ, ನಿತ್ಯದಿ ।
ಹಾದಿ ನಡೆವದೆ ನರ್ತನಗಳೆಂದರಿತವನೆ ಯೋಗಿ ॥ ' (೧೦-೩)

ಎಂಬಲ್ಲಿಯೂ ಈ ಭಾವವಿದೆ. ಕೀರ್ತನೆಯಲ್ಲಿಯ ' ನಡೆವ ನಡೆಗಳು ಹರಿಗೆ ಬಿಡದೆ ನರ್ತನವೆಂದು ' ಎಂಬುದನ್ನು ಮೇಲಿನ ಪದ್ಯಕ್ಕೆ ಹೋಲಿಸಬೇಕು. ಜಗನ್ನಾಥದಾಸನು ಮತೀಯ ತತ್ವವನ್ನು ಸಮಗ್ರವಾಗಿ ತಿಳಿದುಕೊಂಡು ಆಚರಣೆಯಲ್ಲಿ ತಂದಿರುವ ವಿಶಾಲಹೃದಯದ ರಸಯೋಗಿಗಳಲ್ಲಿ ಒಬ್ಬನಾಗಿದ್ದನೆಂಬುದು ಕನ್ನಡಸಂಸ್ಕೃತಿಯ ಚರಿತ್ರೆಯಲ್ಲಿ ನೆನೆಯತಕ್ಕ ಮಾತಾಗಿದೆ.

ದಾಸಸಾಹಿತ್ಯದ ಸಾಮಾನ್ಯಸ್ವರೂಪ

ಕನ್ನಡಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಹಿಮಾಲಯದ ಎತ್ತರದಿಂದ ಹರಿದು ಬಂದ ಗಂಗೆ ಬಯಲಿನಲ್ಲಿಳಿದು ನೆಲವನ್ನೆಲ್ಲ ಫಲದ್ರೂಪಮಾಡುವಂತೆ ಕನ್ನಡಸಾಹಿತ್ಯ ಶರಣರ ಮತ್ತು ದಾಸರ ಸಾಹಿತ್ಯಗಳಲ್ಲಿ ಚಿತ್ತದ ಎತ್ತರದಿಂದ ಹುಟ್ಟಿತು, ಕೆಳಗಿನ ಎಲ್ಲ ಜನದವರೆಗೆ ಹಬ್ಬಿಕೊಂಡಿತು, ಜನತೆಯಲ್ಲಿ ಸಂಸ್ಕೃತಿಯನ್ನು ಬೆಳೆಯಿಸುವ ಪ್ರಭಾವಿಯಾದ ಸಾಧನವಾಯಿತು. ಓದದ ಕನ್ನಡಜನಕ್ಕೆ ಪಂಪಾದಿ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ಶರಣರ ಮತ್ತು ದಾಸರ ಸೊಳ್ನುಡಿ-ಸವಿಹಾಡುಗಳು ಗೊತ್ತಿಲ್ಲದವರು ಅಪರೂಪ. ಜನದ ಮೇಲೆ ನಿತಾಂತ, ನಿರಂತರ ಪ್ರಭಾವವನ್ನು ಬೀರುವ ಜನಸಂಮುಖತೆ ಇದು ದಾಸಸಾಹಿತ್ಯದ ಪ್ರಮುಖಲಕ್ಷಣಗಳಲ್ಲಿ ಒಂದು. ಆದರೆ ಕೆಲಭಾಗದಲ್ಲಿ ಒಂದು ವಿಶಿಷ್ಟಮತದ ಪ್ರತಿಪಾದನೆಯಿದೆ, ಕ್ವಚಿತ್ತಾಗಿ ಇತರ ಮತಗಳಿಗಿಂತ ಅದು ಮೇಲಾದುದೆಂಬ ಸಮರ್ಥನೆಯಿದೆ. ಆದರೆ ಎರಡು ಮಾತು

ಗಳನ್ನು ಗಮನಿಸಬೇಕು. ಆ ಮತದ ಭಾಗವತಧರ್ಮವನ್ನು ಮತ್ತು ಭಕ್ತಿತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ವ್ಯಕ್ತಿಗಳು ಅದನ್ನು ಪ್ರತಿಪಾದಿಸಿದರು. ಪುಸ್ತಕ ಓದಿ ಸ್ವಂತ ಜೀವನಕ್ಕೆ ಸಂಬಂಧವಿಲ್ಲದ ತತ್ವಗಳನ್ನು ಪ್ರತಿಪಾದಿಸಿದಂತೆ ಮಾಡಲಿಲ್ಲ. ಅಲ್ಲದೆ ಮತವನ್ನು ಮೀರಿದ ನೀತಿ, ಧರ್ಮ, ಮಾನವಮೂಲ್ಯಗಳು ಇವನ್ನು ದಾಸರು ಅರಿತವರಾಗಿದ್ದರು, ಇವಕ್ಕೆ ಹೆಚ್ಚಿನ ಬೆಲೆಕೊಡುವವರಾಗಿದ್ದರು. ಇವಿಲ್ಲದ ತಮ್ಮ ಮತವೇ ಇರಲಿ, ಅದನ್ನು ಅವರು ಒಪ್ಪುವವರಲ್ಲ. ಆದ್ದರಿಂದಲೇ ದಾಸಸಾಹಿತ್ಯಕ್ಕೆ ಸರ್ವಮಾನ್ಯತೆ ದೊರೆಯಿತು. ಇಷ್ಟು ಹೇಳಿಯೂ ಕೆಲವು ಕಡೆಗೆ ತೂಕತಪ್ಪಿದ ಮತಾಭಿಮಾನ, ಬಿರುಸುಮಾತು ಬಂದಿವೆಯೆಂಬುದನ್ನು ಅಲ್ಲಗಳೆಯಬೇಕಾಗಿಲ್ಲ. ಸಮನ್ವಯವು ಆಚರಣೆಯಲ್ಲಿ ಸುಲಭವಲ್ಲ ಎಂಬುದೇ ಇದರರ್ಥ. 'ಹಿಂದೆ ಇವುಗಳನ್ನು ಸಾಹಿತ್ಯವೆಂದು ಎಣಿಸುತ್ತಿರಲಿಲ್ಲವೆಂದು ತೋರುತ್ತದೆ. ದಾಸರು ಕವಿಗಳ ಜೊತೆಗೆ ತಾವೂ ಕವಿಗಳೆಂದು ಹೇಳಿಕೊಳ್ಳದೆ ಇದ್ದದ್ದು ಇದರ ಮುಖ್ಯಕಾರಣವಾಗಿರಬೇಕು.... ಮತಗ್ರಂಥಗಳಿಗೆ ಸೇರಿದ ಮೇಲೆ ಸಾಹಿತ್ಯವು ಇವನ್ನು ತನ್ನ ಗುಂಪಿಗೆ ಸೇರಿದುವೆಂದು ಸ್ಥಾಪಿಸಲು ಯತ್ನಮಾಡಲಿಲ್ಲ'[1] ಎಂದು ಶ್ರೀ. ಮಾಸ್ತಿಯವರು ಹೇಳಿದ್ದಾರೆ. ಕೆಲವೊಂದು ಸಾಹಿತ್ಯವು ತಮ್ಮ ಮತದ ಸೊತ್ತೆಂಬ ಒಂದು ಮತದವರ ಪ್ರತಿಪಾದನೆಯಿಂದ ಉಳಿದ ಜನ ಅದರಿಂದ ದೂರವಾಗಿರುವ ಸಂದರ್ಭವು ಒದಗುತ್ತದೆ ಎಂಬುದೇನೋ ನಿಜ. ಸಾಹಿತ್ಯಗ್ರಂಥವನ್ನು ಮತಗ್ರಂಥವಾಗಿ ಮಾಡಿಕೊಳ್ಳುವ, ಮತಸಾಹಿತ್ಯವುಳ್ಳ ಗ್ರಂಥವನ್ನು ಕೇವಲ ಮತೀಯಗ್ರಂಥವಾಗಿ ಭಾವಿಸುವ ವೃತ್ತಿ ಈ ನಾಡಿನಲ್ಲಿ ಕಂಡು ಬಂದಿದೆ. ಆದರೂ ದಾಸಸಾಹಿತ್ಯದ ವಿಷಯದಲ್ಲಿ ಈ ಮಾತು ಸಂಪೂರ್ಣವಾಗಿ ಅನ್ವಯಿಸುವುದಿಲ್ಲ. ಮತವಿರಲಿ ಬಿಡಲಿ, ಅದನ್ನು ಮೀರಿದ ತತ್ವ ಮತ್ತು ಸಾಹಿತ್ಯವುಳ್ಳ ಭಾಗ ಎಲ್ಲ ಕನ್ನಡ ಜನದ ಅಂತಃಕರಣವನ್ನು ಹೊಕ್ಕು ನಿಂತಿದೆ. 'ಸಂಸಾರವನ್ನು ತೊರೆದು ಅರಣ್ಯವನ್ನು ಸೇರಿ ತಪಸ್ಸು ಮಾಡುವುದೇ ಲೇಸು ಎಂದು ಅವರು ಉಪದೇಶಿಸುತ್ತಿದ್ದರು. ಅಂದರೆ ದ್ವೈತಸಿದ್ಧಾಂತದ ಅನುಯಾಯಿಗಳಾದ ಹರಿದಾಸರ ಕೃತಿಗಳಿಂದ ಈ ವಿಪರೀತಭಾವನೆ ಜನರ ಮನಸ್ಸಿನಿಂದ ತೆಗೆದು ಹಾಕಲ್ಪಟ್ಟಿತು'[2] ಎಂದು ಶ್ರೀ. ಪಂಚಮುಖಿಯವರು ಸಾಧಿಸಿದ್ದಾರೆ. ದ್ವೈತಸಿದ್ಧಾಂತ ಇಲ್ಲವೆ ಹರಿದಾಸಸಾಹಿತ್ಯದ ವೈಶಿಷ್ಟ್ಯವೆಂದು ಇದನ್ನು ಹೇಳಲಾಗದು. ಕೆಲವು ಸಿದ್ಧಾಂತಗಳಲ್ಲಿಯ ಸಂಸಾರತ್ಯಾಗ ಮತ್ತು ತಪಶ್ಚರಣೆಯ ಅಂಶಗಳಿಗೆ ಪ್ರತಿಕ್ರಿಯೆಯಾಗಿ ವೈದಿಕ, ಅವೈದಿಕಮತಗಳು ಎಂದಿನಿಂದಲೋ ಪ್ರವೃತ್ತಿಮಾರ್ಗವನ್ನೂ ಕರ್ಮ-ಭಕ್ತಿಜ್ಞಾನಗಳ ಸಮನ್ವಯವನ್ನೂ ತಂತಮ್ಮ ರೀತಿಯಲ್ಲಿ ಬೋಧಿಸುತ್ತ ಬಂದಿವೆ. ಶರಣಸಾಹಿತ್ಯದಲ್ಲಿ ಇದು ಸುಸ್ಪಷ್ಟವಾಗಿದೆ. ಹರಿದಾಸರು ಅದನ್ನೇ ಒತ್ತಿ ಹೇಳಿದರೆಂದೂ

---

1 ಮಾಸ್ತಿ ವೆಂಕಟೇಶ ಅಯ್ಯಂಗಾರ್: ವಿಮರ್ಶೆ ೧, ಪು. ೨೯

2 ರಾ. ಸ್ವಾ. ಪಂಚಮುಖಿ: ಹರಿದಾಸಸಾಹಿತ್ಯ, ಪು. ೨೪೯

ಜನತೆಯನ್ನು ಮತ್ತೆ ಪ್ರವೃತ್ತಿಪರವನ್ನಾಗಿ ಮಾಡಿದರೆಂದೂ ಹೇಳಬಹುದು. ಜೊತೆಗೆ ಸಂಸಾರ ಹೇಯವೆಂಬುದನ್ನು ಶಿವಶರಣರಂತೆ ಹರಿದಾಸರೂ ಹಾಡಿ ಹಾಡಿ ದಣಿದಿದ್ದಾರೆ. 'ದ್ವೈತಸಿದ್ಧಾಂತದ ಅನುಯಾಯಿ'ಗಳೆಂದು ಹರಿದಾಸರನ್ನು ವಿಶೇಷೀಕರಿಸಿ ಅವರ ಸಾಹಿತ್ಯವೆಂದರೆ ದ್ವೈತಸಿದ್ಧಾಂತದ ಪ್ರಮೇಯಗಳ ಪ್ರಚಾರತಂತ್ರವೆಂಬಂತೆ ವಿಸ್ತಾರವಾಗಿ ಲಕ್ಷ್ಯಪೂರ್ವಕವಾಗಿ ಹೇಳುವುದು ಒಂದು ಬಗೆಯ ಮನೋವೃತ್ತಿ. ಆದರೆ ಸಾಹಿತ್ಯ–ಸಂಸ್ಕೃತಿಗಳ ದೃಷ್ಟಿಯಿಂದ ನೋಡುತ್ತಿರುವವರಿಗೆ ಆ ಮನೋವೃತ್ತಿ ಸಲ್ಲದು. ಹರಿದಾಸರು ಪ್ರಾಯಶಃ ಮಧ್ವಸಿದ್ಧಾಂತದ ಅನುಯಾಯಿಗಳೇನೋ ನಿಜ, ಆದರೆ ಅವರು ಹೆಚ್ಚಾಗಿ ಆದರ ಜೀವನಸ್ಪರ್ಶಿಯಾದ ಭಾಗವತಧರ್ಮದ ಅನುಯಾಯಿಗಳು, ಶುಷ್ಕ ಸಂಪ್ರದಾಯದ ಇಲ್ಲವೆ ತರ್ಕಕರ್ಕಶವಾದ ಸರಣಿಯ ಅನುಯಾಯಿಗಳಲ್ಲ. ಅವರಲ್ಲಿ ನ್ಯಾಯವೇದಾಂತಪಂಡಿತರಾಗಿದ್ದ ಹಲವರು ತರ್ಕಪದ್ಧತಿಯನ್ನು ಅವಲಂಬಿಸಿದ್ದರೂ ಭಕ್ತರೂ ಜ್ಞಾನಿಗಳೂ ಆಗಿ ರಾಗದ್ವೇಷರಹಿತರಾಗಿದ್ದರೆಂಬುದನ್ನು ನೆನೆಯಬೇಕು.

ದಾಸಸಾಹಿತ್ಯ ಕೀರ್ತನೆ, ಸುಳಾದಿ, ಉಗಾಭೋಗ ಈ ಮುಖ್ಯರೂಪಗಳಲ್ಲಿದೆ. ವಿಷಯಾನುಗುಣವಾದ ರೂಪವನ್ನು ಆಯ್ದುಕೊಳ್ಳುವ ರೀತಿಯಲ್ಲಿ ಅದು ಭಾವಗೀತೆಯ ಲಕ್ಷಣವನ್ನು ಸ್ವೀಕರಿಸಿದೆ. ಸ್ವಯಂಪೂರ್ಣವಾದ ಏಕಮೇವ ಭಾವದ ನಿರೂಪಣೆಯಿಂದಲೂ ಅದು ಭಾವಗೀತೆಯ ಸ್ವರೂಪತಾಳಿದೆ. ಕೀರ್ತನೆಯಲ್ಲಿ ರಾಗ–ತಾಲಬದ್ಧವಾಗಿ ಪಲ್ಲವಿ, ಅನುಪಲ್ಲವಿ, ನುಡಿಗಳ ಯೋಜನೆಯಿರುತ್ತದೆ, ಕೊನೆಯ ನುಡಿಯಲ್ಲಿ ದಾಸನ ಅಂಕಿತವಿರುತ್ತದೆ. ಮಾತ್ರೆಗಿಂತ ಲಯಕ್ಕೆ ಪ್ರಾಧಾನ್ಯವಿದ್ದರೂ ಕೆಲವು ಸಲ ಎರಡೂ ಹೊಂದಿಕೊಳ್ಳಬಹುದು. ಹಲವು ಕೀರ್ತನೆಗಳು ಷಟ್ಪದಿ, ಸಾಂಗತ್ಯ, ಚೌಪದಿ ಇವುಗಳ ಬೇರೆಬೇರೆ ಜೋಡಣೆಗಳನ್ನು ಒಳಗೊಂಡಿರುತ್ತವೆ. ಕರ್ನಾಟಕಸಂಗೀತಸಂಪ್ರದಾಯಕ್ಕೆ ಪಿಳ್ಳಾರಿಗೀತಗಳನ್ನು ಮಾತ್ರವಲ್ಲ, ಪುರಂದರದಾಸನು ಸಾವಿರಾರು ರಸಾನುಗುಣವಾದ ತಾಲಭೇದವುಳ್ಳ ಪ್ರಬಂಧಗಳನ್ನು ಒದಗಿಸಿಕೊಟ್ಟನು. ಉಳಿದ ದಾಸರೂ ಅದಕ್ಕೆ ತಮ್ಮ ಸೇರ್ಪಡೆಗಳನ್ನು ಮಾಡಿದರು. ತ್ಯಾಗರಾಜನು ಪುರಂದರದಾಸನಿಂದ ಸ್ಫೂರ್ತಿಪಡೆದು ಸಾಹಿತ್ಯ–ಸಂಗೀತಗಳ ಸಂಮಿಲನವನ್ನು ಇನ್ನೂ ಹೆಚ್ಚು ಮಾಡಿದನು. ಪ್ರಬಂಧಗಳಿಗೆ ಪ್ರಸ್ತಾರವು ದೊರೆಯಿತು. ಒಂದು ದೃಷ್ಟಿಯಿಂದ ಈ ಪ್ರಸಾರದ ಮತ್ತು ಲಯದ ಬಿಗಿಕಟ್ಟಿಲ್ಲದೆ ಕೀರ್ತನೆಗಳು ಸಹಜಮನೋಹರವಾದ ಗೇಯತೆಯನ್ನು ಪಡೆದುದು ಹರಿದಾಸಸಾಹಿತ್ಯದ ವೈಶಿಷ್ಟ್ಯವೆಂದು ತೋರುತ್ತದೆ. ಸಂಗೀತಶಾಸ್ತ್ರವರಿಯದ ಹೆಣ್ಣುಮಕ್ಕಳು, ಹಳ್ಳಿಯ ದಾಸಯ್ಯನವರು ಹಳೆಯ ಧಾಟಿಗಳಲ್ಲಿ ಇನ್ನೂ ಸೊಗಸಾಗಿ ಕೀರ್ತನೆಗಳನ್ನು ಹಾಡುತ್ತಿರುವುದನ್ನು ಕೇಳಿದರೆ ಅತಿಶಾಸ್ತ್ರದ ಬಾಧೆಯಿಲ್ಲದ ಈ ಸಂಪ್ರದಾಯವನ್ನು ಉಳಿಸಿಕೊಳ್ಳುವುದು ಉಚಿತವೆಂದು ತೋರುತ್ತದೆ. ಇಲ್ಲವಾದರೆ ನಾಟಕ–ಸಿನೆಮಾಧಾಟಿಗಳಲ್ಲಿ ಸಿಲುಕಿ ಹರಿದಾಸಸಾಹಿತ್ಯವು ಹಳ್ಳಗೂಡಿ ಹೋಗಬಹುದು.

ಕೀರ್ತನೆ ಇಲ್ಲವೆ ಪದ ಎಂಬುದೇನೂ ಹೊಸದಲ್ಲ. ವೈದಿಕಪರಂಪರೆಯಿಂದ ಅದು ಬಂದದ್ದೆಂಬುದು ದೂರದ ಮಾತು. ಕನ್ನಡದ ಮಟ್ಟಿಗೆ ಪಾಡು, ಮೆಲ್ಪಾಡು, ಬಾಜನೆಗಬ್ಬಗಳಿದ್ದುವು, ಆಮೇಲೆ ಶಿವಶರಣರಲ್ಲಿ ಕೆಲವರು ಪದಗಳನ್ನು ಹಾಡಿದರು. ಅದೇ ಹರಿದಾಸರ ಬಾಯಲ್ಲಿ 'ಕೀರ್ತನೆ' ಅಂದರೆ ಹರಿಸ್ತುತಿಪರವಾದ ಹಾಡಾಯಿತು, ಸಂಗೀತದಲ್ಲಿ ಪ್ರಮಾಣಸ್ವರೂಪ ಪಡೆಯಿತು. 'ಸುಳಾದಿ' ಎಂಬ ರೂಪವು ಶ್ರೀಪತಿ-ರಾಯನಿಂದ ಮೊದಲಾಗಿ ದಾಸಸಾಹಿತ್ಯದಲ್ಲಿ ತುಂಬ ಪ್ರಚುರವಾಯಿತು. ಸಪ್ತತಾಳ-ಗಳಲ್ಲಿ ಒಂದೊಂದು ತಾಳದಲ್ಲಿ ಹಾಡಬರುವ ಚಿಕ್ಕ ಪ್ರಬಂಧಗಳೇ ಸುಳಾದಿಗಳಾದುವು. ಪಲ್ಲವಿಯಿಲ್ಲದ ನುಡಿಗಳಂತೆ ಅವು ತೋರುತ್ತಿದ್ದರೂ ವಚನಗದ್ಯ ಮತ್ತು ಕೀರ್ತನೆಗಳ ನಡುವಣ ಒಂದು ಲಯವು ಸುಳಾದಿಯಲ್ಲಿದೆ. ಪ್ರತಿ ತಾಳಕ್ಕೆ ಬೇರೆ ರಾಗವೆಂಬ ನಿಬಂಧನೆಯನ್ನು ಶ್ರೀಪಾದರಾಯ, ಪುರಂದರದಾಸರು ಪಾಲಿಸಿದ್ದಾರೆ. ಅಸಂಖ್ಯ ಸುಳಾದಿಗಳನ್ನು ಬರೆದ ವಿಜಯದಾಸನು ರಾಗವೊಂದು, ತಾಳ ಏಳು ಇಲ್ಲವೆ ಕಡಿಮೆ ಎಂಬ ಕ್ರಮವನ್ನು ಇಟ್ಟುಕೊಂಡಿದ್ದಾನೆ. ಯಾವ ತಾಳದ ಸಾಹಿತ್ಯವನ್ನೂ ಬೇರೆ ಯಾವುದೇ ತಾಳದಲ್ಲಿ ಹಾಡಲು ಬರುವುದು ಸುಳಾದಿಗಳ ವೈಶಿಷ್ಟ್ಯವೆಂದು ಬೇಲೂರು ಕೇಶವದಾಸರು ಹೇಳಿದ್ದಾರೆ.[1] ಶಬ್ದಗಳನ್ನು ಎಳೆದಾಡಿದರೆ ಯಾವ ಸಾಹಿತ್ಯವನ್ನೂ ಎಲ್ಲ ತಾಳಗಳಲ್ಲಿ ಹೇಳಲು ಬಂದೀತು. ಎಳೆದಾಟವಿಲ್ಲದೆ ಮೇಲಿನ ಸಂಗತಿ ಜರುಗು-ತ್ತಿದ್ದರೆ ಅದು ವೈಶಿಷ್ಟ್ಯವೆನ್ನಬಹುದು. 'ಸುಳಾದಿ' ಈ ಶಬ್ದ ಹೇಗೆ ಬಂತು? ಎಂಬುದು ಅರಿದಾಗಿದೆ. 'ಸೂಡಾಲಿ' ಎಂಬುದರ ಪರ್ಯಾಯವೆಂದು ತಿಳಿಯ-ಲಾಗಿದೆ. ಆದರೆ ಸೂಡಾಲಿ ಎಂದರೇನು? 'ಸುಲಭವಾದ ಹಾದಿ' ಎಂಬುದರಿಂದ 'ಸುಳಾದಿ'ಯನ್ನು ಹಿಂಡಿ ತೆಗೆಯುವುದು ಸುಲಭವಾದ ಹಾದಿಯಾದರೂ ನಂಬಲು ಕಠಿಣವಾದದ್ದು. ಶುದ್ಧದ ಅಪಭ್ರಂಶ ಸೂಡ, ಸೂದ. ಧ್ರುವ ಮುಂತಾದ ಎಂಟು ತಾಳಗಳಿಗೆ ಸೂಡಾದಿ (ಸುಳಾದಿ) ಎಂಬುದಾಗಿ ಪುಂಡರೀಕವಿಠ್ಠಲನ 'ನರ್ತನ-ನಿರ್ಣಯ'ದಲ್ಲಿದೆ. ಈ ವಿವರಣೆ ಹೆಚ್ಚು ಗ್ರಾಹ್ಯವಾಗಿದೆ.[2] 'ಉಗಾಭೋಗ' ಎಂಬ ಇನ್ನೊಂದು ರೂಪದ ವ್ಯುತ್ಪತ್ತಿ ಮಾತ್ರ ತಿಳಿದಿದೆ. ಉದ್ಗ್ರಾಹ ಮತ್ತು ಆಭೋಗ ಇವೆರಡರ ಕೂಡಿಕೆಯಿಂದ 'ಉಗಾಭೋಗ'ವಾಗಿದೆ. 'ಸಂಗೀತರತ್ನಾಕರ'ದ ನಾಲ್ಕನೇ ಪ್ರಬಂಧಾಧ್ಯಾಯದಲ್ಲಿ 'ಉದ್ಗ್ರಾಹಃ ಪ್ರಥಮಸ್ತತ್ರ ತತೋ ಮೇಲಾಪಕ-ಧ್ರುವೌ। ಆಭೋಗಶ್ಚೇತಿ ಕ್ರಮಾಲ್ಲಕ್ಷ್ಮಾಭಿದಧ್ಮಹೇ' (೭) ಎಂದು ಅದರ ಲಕ್ಷಣ ಹೇಳಿ ಉದ್ಗ್ರಾಹ ಮತ್ತು ಧ್ರುವ ಇವು ಇಂಥ ಪ್ರಬಂಧದಲ್ಲಿ ನಿತ್ಯವೆಂದೂ ಮೇಲಾಪಕ, ಆಭೋಗಗಳು ಐಚ್ಛಿಕವೆಂದೂ ವಿವರಿಸಲಾಗಿದೆ. ಉದ್ಗ್ರಾಹ ಇದು ಪ್ರಬಂಧದ ಪ್ರಾರಂಭವನ್ನೂ ಆಭೋಗ ಇದು ಅದರ ಪರಿಪೂರ್ಣತೆಯನ್ನೂ ಸೂಚಿಸುತ್ತದೆ.

---

1 ಬೇಲೂರು ಕೇಶವದಾಸ: ಹರಿದಾಸಸಾಹಿತ್ಯ, ಪು. ೫೦.

2 ಹುಲಗೂರು ಕೃಷ್ಣಾಚಾರ್ಯ: ಕರ್ಣಾಟಕ ಸಂಗೀತವೂ ದಾಸಕೂಟವೂ, ಪು. ೧೦೦.

'ಸುಳಾದಿ' ಇದು ಲಯಪ್ರಧಾನಗೀತವಾದರೆ 'ಉಗಾಭೋಗ'ವು ಸ್ವರಪ್ರಧಾನಗೀತವೆಂದು ತಿಳಿಯಬಹುದು. 'ಉತ್ತರಭಾರತದಲ್ಲಿ ಸ್ಥಾಯಿಾ, ಠಾಯಿಾ, ಆಸ್ತಾಯಿಾ ಎಂದು ಕರೆಯಿಸಿಕೊಳ್ಳುವ ಪ್ರಬಂಧವು ಕನ್ನಡಹರಿದಾಸಸಾಹಿತ್ಯದ ಮೊದಲ ಪ್ರಬಂಧವಾಯಿತು. ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರ, ಆಭೋಗವೆಂಬುವುಗಳು ಉಗಾಭೋಗದ ಐದು ಧಾತುಗಳು. ಒಂದು ರಾಗವನ್ನು ಗ್ರಹಿಸಿ ಮೇಳದಲ್ಲಿ ನಿಲ್ಲಿಸಿ ರಾಗವನ್ನು ಧ್ರುವಗೊಳಿಸಿ ಸಮೀಪ ರಾಗಗಳ ಸೂಕ್ಷ್ಮಸ್ಥಾನಗಳಲ್ಲಿ ವಿನ್ಯಾಸಗೊಳಿಸಿ ರಾಗಸಮಾರೋಪಣ ಮಾಡುವುದು ಧಾತುಗಳ ತಾತ್ಪರ್ಯ'[1]....ಇಷ್ಟನ್ನೂ ಮೂಕರಾಗದಲ್ಲಿ ವಿನ್ಯಾಸಮಾಡದೆ ಲಲಿತಸಾಹಿತ್ಯಸಹಿತವಾಗಿ ಪೂರ್ಣಮಾಡಿದರೆ ಅದು ಉಗಾಭೋಗವೆನಿಸುವುದು.'[2] 'ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ। ನಿನ್ನ ಸುತ್ತಿಹುದೆಲ್ಲ ಯೆನ್ನ ಮಾನ(ಯ?)ವಯ್ಯ॥ ಜಗಕೆ ಬಲ್ಲಿದ ನೀನು। ನಿನಗೆ ಬಲ್ಲಿದ ನಾನು। ಮೂರು ಜಗವು ನಿನ್ನೊಳಗೆ। ನೀನು ಯೆನ್ನೊಳಗೆ। ಕರಿಯು ಕನ್ನಡಿಯಲ್ಲಿ ಅಡಗಿಪ್ಪ ತೆರದಂತೆ। ಯೆನ್ನೊಳು ಅಡಗಿದಿಯೊ ಪುರಂದರವಿಠಲಾ'[3] 'ಯಾರು ಮುನಿದು ನಮಗೇನು ಮಾಡುವರಯ್ಯ। ಯಾರು ಒಲಿದು ನಮಗೇನು ಕೊಡುವರಯ್ಯ। ಕೊಡಬ್ಯಾಡ ನಮ್ಮ ಕುನ್ನಿಗೆ ಕಾಸನು। ಈಯಲುಬ್ಯಾಡ ನಮ್ಮ ಶುನಕಗೆ ತಳಗಿಯ। ಆನೆಮ್ಯಾಲೆ ಪೋಪಗೆ ಶ್ವಾನ ಮುಟ್ಟಬಲ್ಲುದೆ ನಮಗೆ ಶ್ರೀಪುರಂದರವಿಠಲಾನೆ ಸಾಕು'[4] ಇಂಥ ಉದಾಹರಣೆಗಳಲ್ಲಿ ಉಗಾಭೋಗಗಳಿಗೂ ವಚನಗಳಿಗೂ ಭಾವ ಮತ್ತು ರೂಪದಲ್ಲಿಯ ಸಾಮ್ಯ ತಿಳಿಯುತ್ತದೆ. ಎಲ್ಲ ಕಾಲದ ಭಕ್ತರಲ್ಲಿ ಕೆಲವು ಭಾವಗಳು ಸಮಾನವೆನ್ನಬಹುದಾದರೂ ದಾಸಸಾಹಿತ್ಯದ ಮೇಲೆ ಶರಣವಚನಗಳ ವರ್ಚಸ್ಸು ಆಗಿದೆ ಎಂಬುದು ದಿಟ. ಈ ಅನ್ಯೋನ್ಯಭಾವ ಕನ್ನಡಿಗರಿಗೆ ಹೆಮ್ಮೆಯ ಮಾತು. ಅಂಕಿತವನ್ನು ಬದಲಿಸಿದರೆ ಅಂತಃಕರಣ ಒಂದೇ, ಅಭಿವ್ಯಕ್ತಿ ಒಂದೇ ಎಂದು ಕಾಣುತ್ತದೆ. ಸೂಕ್ಷ್ಮವಾಗಿ ನೋಡಿದಲ್ಲಿ ವಚನರೂಪಕ್ಕೂ ಉಗಾಭೋಗಕ್ಕೂ ರಚನೆಯಲ್ಲಿ ಗಮಕರೀತಿಯಲ್ಲಿ ಭೇದವಿದ್ದಂತಿದೆ. ಈ ವಿಷಯದಲ್ಲಿ ಮತಭೇದಕ್ಕೆ ಅವಕಾಶವುಂಟು. ದಾಸಸಾಹಿತ್ಯದಲ್ಲಿ ವೃತ್ತನಾಮ, ಸುವ್ವಾಲಿ, ಗುಂಡಕ್ರಿಯೆ, ದಂಡಕಗಳಲ್ಲದೆ ರಗಳೆ, ಸಾಂಗತ್ಯ, ಷಟ್ಪದಿಗಳ ಬಳಕೆಯಿದೆ, ಜಾನಪದ ಧಾಟಿಗಳ ಅನುಕರಣವೂ ಇದೆ.

ಭಾಷೆಯ ದೃಷ್ಟಿಯಿಂದ ದಾಸಸಾಹಿತ್ಯ ಜನಭಾಷೆಯ ಅಶುದ್ಧರೂಪಗಳನ್ನು ಬೇಕಾದಂತೆ ಎತ್ತಿ ಬಳಸಿ ತನ್ನ ವಿಶಿಷ್ಟತೆಯನ್ನು ತೋರಿದೆ. ಕೀರ್ತನೆ ಮುಂತಾದ್ದರಲ್ಲಿ ಅಲ್ಲದೆ 'ಹರಿಕಥಾಮೃತಸಾರ'ದಂಥ ಷಟ್ಪದಿಗ್ರಂಥದಲ್ಲಿಯೂ ಪ್ರೌಢತತ್ವಪ್ರತಿ-

---

1 ಬೇಲೂರು ಕೇಶವದಾಸ: ಹರಿದಾಸಸಾಹಿತ್ಯ, ಪು. ೧೮

2 ಅದೇ, ಪು. ೧೮–೧೯

3 ಪುರಂದರದಾಸ: ಕೀರ್ತನೆಗಳು, ಭಾಗ ೫ (ಉಗಾಭೋಗ ೧೯, ಪು. ೯೭)

4 ಅದೇ (ಉಗಾಭೋಗ ೭೭, ಪು. ೧೦೯)

ಪಾದನೆಗೂ 'ಕಲುಷವಚನ'ಗಳನ್ನು ಉಪಯೋಗಿಸಲಾಯಿತು. ಹೆಚ್ಚು ಜನಕ್ಕೆ ತಿಳಿಯುವಂಥ, ಸೊಗಸುವಂಥ ಭಾಷೆ ಸಾಹಿತ್ಯದಲ್ಲಿರಬೇಕು, ಮಾತಿನಲ್ಲಿದ್ದ ರೂಪಕ್ಕೆ ಇದ್ದ ಸಾಹಚರ್ಯ ತಿದ್ದಿದ ರೂಪಕ್ಕೆ ಬಾರದು ಎಂಬ ದೃಷ್ಟಿ ಇದರ ಮೂಲದಲ್ಲಿರಬೇಕು. ವಚನಸಾಹಿತ್ಯದಲ್ಲಿಯೂ ಇದೇ ದೃಷ್ಟಿಯಿದ್ದು ಹಳಗನ್ನಡ ದೃಷ್ಟಿಯಿಂದ ಅಗ್ರಾಹ್ಯವಾದ ನಡುಗನ್ನಡಪ್ರಯೋಗಗಳನ್ನು ಅದು ಬಳಸಿತು. ಹೊಸಗನ್ನಡದೃಷ್ಟಿಯಿಂದಲೂ ಅಗ್ರಾಹ್ಯವೆನ್ನಬಹುದಾದ ರೂಪಗಳನ್ನು ದಾಸಸಾಹಿತ್ಯ ಬಳಸಿದೆ. ಕೆಲವು ಸಲ ಈ ಶೈಲಿಯ ಅತಿರೇಕವಾಗಿ ಗ್ರಾಮ್ಯ ಇಲ್ಲವೆ ಪ್ರಚಲಿತದೇಸಿ ಬಂದು ಸಂದರ್ಭದ ಗಾಂಭೀರ್ಯಕ್ಕೆ ಕೊರತೆಯುಂಟುಮಾಡುತ್ತದೆ. ಸಲಿಗೆ, ತಿಳಿನಗೆ, ಕಟಕಿಯಿದ್ದಲ್ಲಿ ಅದು ಬಹಳ ಸೊಗಸಾಗಿ ಪರಿಣಮಿಸುತ್ತದೆ. ಒಟ್ಟಿನಲ್ಲಿ ವಿಷಯ, ರೂಪ, ಭಾಷೆಗಳಲ್ಲಿ ದಾಸಸಾಹಿತ್ಯ ವಿಶಿಷ್ಟಕಾಂತಿಯುಳ್ಳದಾಗಿ ಕನ್ನಡಿಗರ ಚಿರಸ್ಥಾಯಿಯಾದ ಸೊತ್ತಾಗಿದೆ. ಜನಕ್ಕೆ ಅದು ಹತ್ತಿರ ಬಂದಂತೆ ಜನವೂ ಅದರ ಹತ್ತಿರ ಹೋಗಿ ಸಂಸ್ಕೃತಿಸಂವರ್ಧನಕಾರ್ಯದಲ್ಲಿ ಅದರಿಂದ ಸ್ಫೂರ್ತಿಪಡೆಯಬೇಕು.

೨೭. ಒಡೆಯರ ಕಾಲದ ಬ್ರಾಹ್ಮಣಸಾಹಿತ್ಯ

ಮೈಸೂರೊಡೆಯರ ಕಾಲದಲ್ಲಿ ಕನ್ನಡಸಾಹಿತ್ಯ ತೋರಿದ ವಿಶೇಷಾಂಶಗಳಲ್ಲಿ ನೇರವಾದ ಚಾರಿತ್ರಿಕಕಾವ್ಯಗಳ ಹೆಚ್ಚಳವೊಂದಾಗಿದೆ. ಪಂಪಯುಗದಲ್ಲಿಯೂ ಮುಂದೆಯೂ ಲೌಕಿಕಕಾವ್ಯಗಳಲ್ಲಿ ಚಾರಿತ್ರಿಕ ಧ್ವನಿಯಿದೆ. ಆದರೆ ಚರಿತ್ರೆಯ ಲೇಖನವೇ ಮುಖ್ಯಗುರಿಯಾಗಿಲ್ಲ. ನಂಜುಂಡನ 'ಕುಮಾರರಾಮನ ಚರಿತೆ' ಇದಕ್ಕೆ ಅಪವಾದವಾಗಿದೆ. ಅದೃಶ್ಯಕವಿಯ 'ಪ್ರೌಢರಾಯನ ಕಾವ್ಯ'ವೂ ಹೆಸರಿನಲ್ಲಿ ಚರಿತ್ರೆಯ ನಿದರ್ಶಕವಾಗಿದ್ದರೂ ಅದರಲ್ಲಿ ಶಿವಶರಣರ ಕಥೆ ಮುಖ್ಯವಾಗಿದೆ. ೧೭ನೆಯ ಶ.ದ ಮಧ್ಯದಲ್ಲಿ ರಚಿತವಾದ 'ಕಂಠೀರವನರಸರಾಜವಿಜಯ' ಎಂಬ ಸಾಂಗತ್ಯಗ್ರಂಥವು ಮಾತ್ರ ಮುಖ್ಯವಾಗಿ ಚಾರಿತ್ರಿಕಕಾವ್ಯ. ಇದನ್ನು ಬರೆದವನು ಗೋವಿಂದವೈದ್ಯ ಇಲ್ಲವೆ ಭಾರತಿನಂಜ ಇರಬೇಕು. ಗೋವಿಂದವೈದ್ಯನು ಇದನ್ನು ಬರೆದು ಭಾರತಿನಂಜನಿಂದ ರಾಜಾಸ್ಥಾನದಲ್ಲಿ ಓದಿಸಿರಬಹುದೆಂದು ತಿಳಿಯಲೂ ಆಧಾರವಿದೆ. 'ದೇವತಾಸ್ತುತಿಯಲ್ಲ ಕೇಳ್ವೊಡೆ ನರಸ್ತುತಿ ಯಾವ ವೆಗ್ಗಳವೆನಬೇಡ। ನಾ ವಿಷ್ಣುಃ ಪೃಥಿವೀಪತಿಯೆಂದು ವೇದಾವಳಿಗಳು ಸಾರುತಿವೆ ಕೊ' (೧-೧೭) ಎಂದು ಕಾವ್ಯವಿಷಯದ ಬಗ್ಗೆ ಕವಿ ಸಮರ್ಥನೆ ಮಾಡಿಕೊಂಡಿದ್ದಾನೆ. 'ಈ ಮಹಿಮನ ಸುಚರಿತ್ರಶೌರ್ಯಗಳ ಸುತ್ರಾಮಭೋಗವ ಧರ್ಮದಿರವ। ನೇಮದ ಮಾಂಗಲ್ಯಕೃತಿಯಾಗೆ ಪೇಳ್ವೆನು' (೧-೨೦), 'ನೆರೆ ಕರ್ಣಾಟಕಚಕ್ರೇಶನರಸಭೂವರನ ಚರಿತ್ರೆಯ ಪೇಳುವೆನು' (೧-೨೧), 'ಭೂವರಕಂಠೀರವನೆನಿಸಿದ ನರದೇವನ ಕೃತಿಯ ಪೇಳುವೆನು' (೧-೨೪) ಎಂದು ತನ್ನ ಚಾರಿತ್ರಿಕ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ.

ಈ ಕಾವ್ಯದಲ್ಲಿ ಕಥಾವಸ್ತುವಿಲ್ಲ. ಕಂಠೀರವನರಸರಾಜನ ರಾಜ್ಯ, ವಂಶ, ರಾಜಧಾನಿ-ವರ್ಣನೆ, ಚರಿತ್ರವರ್ಣನೆ ವಿಸ್ತಾರವಾಗಿವೆ. ೯–೧೦ ಸಂಧಿಗಳಲ್ಲಿ ತತ್ಕಾಲೀನವಾದ ಮದನಮೋಹಿನಿ ಕಥೆ ಮಾತ್ರ ಬಂದಿದೆ. ನರಸರಾಜಚರಿತ್ರೆಗೆ ಅದರ ಸಂಬಂಧವೇನೂ ಇಲ್ಲದ ಕಾರಣ ಶೃಂಗಾರರಸದ ಸಂದರ್ಭವಿರಲೆಂದು ಅದನ್ನು ಸೇರಿಸಿದಂತಿದೆ. ಅದರಲ್ಲಿಯೂ ಕಥಾಂಶಕ್ಕಿಂತ ಶೃಂಗಾರಿಕವರ್ಣನೆ ಹೆಚ್ಚಾಗಿದೆ, ಪ್ರಣಯರಮ್ಯವಾದ ಉತ್ಕಟಕಲ್ಪನೆ ಬಹುಶಃ ಸಾಮಯಿಕವಾಗಿ ಪ್ರಕಟವಾಗಿದೆ. ಈ ಕಾವ್ಯದಲ್ಲಿಯ ಪ್ರಮುಖ ಗುಣವು ಅದರಲ್ಲಿಯ ಜನಜೀವನ ಮತ್ತು ರಾಜಕೀಯಜೀವನದ ವಾಸ್ತವ-ಚಿತ್ರದಲ್ಲಿದೆ. ವಿಶೇಷವಾಗಿ ಕರ್ನಾಟಕಕ್ಕೆ ರಣದುಲ್ಲಾಖಾನನು ಬಂದ ಸಂದರ್ಭದಲ್ಲಿ ಏನೇನು ನಡೆಯಿತು, ಅವನನ್ನು ಕಂಠೀರವನರಸರಾಜನು ಹೇಗೆ ಸೋಲಿಸಿದನೆಂಬು-ದನ್ನು ಕಣ್ಣೆದಿರು ಕಟ್ಟುವಂತೆ ಬಣ್ಣಿಸಲಾಗಿದೆ. 'ರಣಧೂಳಿಖಾನ'ನು ಕರ್ನಾಟಕಕ್ಕೆ ಬರುವಾಗ ಮಾಡಿದ ಹಾವಳಿ, ಹುಟ್ಟಿಸಿದ ಗಾಬರಿಯನ್ನು ಅದೇ ಕಾಲದಲ್ಲಿದ್ದ ಕವಿ ಯಥಾರ್ಥವಾಗಿ ಬಣ್ಣಿಸಿದ್ದಾನೆ. ಬಣ್ಣನೆಯಲ್ಲಿ ಒಮ್ಮೊಮ್ಮೆ ಕಲ್ಪನೆ ಅಸಾಧಾರಣ-ಶಕ್ತಿಯನ್ನು ತೋರಿದೆ. ಉದಾ:

'ಸಿಡಿಲ ಕುಡುಹಿನಿಂದೆ ಬ್ರಹ್ಮಾಂಡಭೇರಿಯ ।
ಬಡಿವವೊಲಾನೆಯ ಮೇಲೆ ।
ಹೊಡೆವ ಡಮಾಮಿಗಳಬ್ಬರ ಗಗನವ ।
ತುಡುಕಿತೇವೇಳ್ವೆನದ್ಭುತವ ॥' (೧೧–೨೩)

ಜನಜೀವನ ಮತ್ತು ಯುದ್ಧಗಳ ಚಿತ್ರ ಹೇಗಿದೆ ಎಂದು ತಿಳಿಯಲು 'ಕರ್ನಾಟಕ ಜನಜೀವನ'ದಲ್ಲಿ ಶ್ರೀ. ಬೆಟಗೇರಿ ಕೃಷ್ಣಶರ್ಮರ ಲೇಖನವನ್ನು ನೋಡಬೇಕು. ಚಾರಿತ್ರಿಕಗ್ರಂಥ ಎಂಬ ದೃಷ್ಟಿಯಿಂದ ಮಾತ್ರವಲ್ಲ, ಕಾವ್ಯವೆಂಬ ದೃಷ್ಟಿಯಿಂದಲೂ ಈ ಕೃತಿ ಮಧ್ಯಮಕಾವ್ಯದ ಗುಣಗಳಿಂದ ಕೂಡಿ ಮೆಚ್ಚುವಂತಿದೆ. ಇದರಲ್ಲಿ ಕವಿಯ ಕಲ್ಪನಾಶಕ್ತಿ, ನಿರೀಕ್ಷಣಶಕ್ತಿ, ನಿರೂಪಣಸಾಮರ್ಥ್ಯ ಚೆನ್ನಾಗಿರುವವಲ್ಲದೆ ಶೈಲಿ ಪ್ರವಾಹಿಯೂ ಪ್ರಸನ್ನವೂ ಆಗಿದೆ. ಸಾಂಗತ್ಯರಚನೆ ಸಲೀಸಾಗಿ ಸಾಗಿದೆ. ಚಾರಿತ್ರಿಕ-ಗ್ರಂಥಗಳಲ್ಲಿ ಇದಕ್ಕೆ ಮನ್ನಣೆಯ ಸ್ಥಾನವು ಸಲ್ಲುತ್ತದೆ.

ಮೈಸೂರೊಡೆಯರ ಕಾಲದ ಸಾಹಿತ್ಯ ತೋರಿದ ಇನ್ನೊಂದು ವಿಶೇಷವೆಂದರೆ ಶ್ರೀವೈಷ್ಣವಪರವಾದ ಭಕ್ತಿಪ್ರಧಾನವಾದ ಸಾಹಿತ್ಯಸೃಷ್ಟಿ. ೧೨ನೆಯ ಶ.ದಿಂದಲೂ ಕರ್ನಾಟಕದಲ್ಲಿ ಶ್ರೀರಾಮಾನುಜಮತವು ಪ್ರಸಾರವಾಗುತ್ತಿದ್ದರೂ ಕನ್ನಡದಲ್ಲಿ ಈ ಮತಕ್ಕೆ ಸಂಬಂಧಿಸಿದ ವಾಙ್ಮಯವು ಈವರೆಗೆ ಹುಟ್ಟಿರಲಿಲ್ಲ. ಸಂಸ್ಕೃತಗ್ರಂಥಗಳು, ದ್ರಾವಿಡಪ್ರಬಂಧಗಳು ಇವುಗಳಿಂದ ತೃಪ್ತಿಯಾದಂತಿತ್ತು. ಮೈಸೂರು ರಾಜರ, ವಿಶೇಷ-ವಾಗಿ ಚಿಕದೇವರಾಜನ ಆಶ್ರಯದಲ್ಲಿ ಚಂಪೂ–ಗದ್ಯರೂಪಗಳಲ್ಲಿಯ ಮಾರ್ಗಕಾವ್ಯವು ಮತ್ತೆ ತಲೆಯೆತ್ತಿತಲ್ಲದೆ ಶ್ರೀವೈಷ್ಣವಪರವಾದ ಅನೇಕ ಗ್ರಂಥಗಳು ಜನ್ಮತಾಳಿದುವು.

ಚಿಕದೇವರಾಜನು ಸ್ವತಃ 'ಚಿಕದೇವರಾಜಬಿನ್ನಪ, ಗೀತಗೋಪಾಲ, ಭಾಗವತ, ಶೇಷಧರ್ಮ, ಭಾರತ' ಇವನ್ನು ಬರೆದನೆಂದು ಪ್ರತೀತಿಯಿದೆ. ಅವನು ಪಂಡಿತನೂ ರಸಿಕನೂ ಆಗಿದ್ದ ಕಾರಣ ಗ್ರಂಥರಚನೆಯನ್ನು ಮಾಡಿರಬಹುದು. 'ಭಾಗವತ, ಶೇಷಧರ್ಮ, ಭಾರತ' ಈ ಟೀಕಾತ್ಮಕಗ್ರಂಥಗಳನ್ನು ಬರೆದಿರಲೂ ಬಹುದು. ಆದರೆ 'ಚಿಕದೇವರಾಜಬಿನ್ನಪ' ಮತ್ತು 'ಗೀತಗೋಪಾಲ' ಇವು ತಿರುಮಲಾರ್ಯವಿರಚಿತವಾಗಿ ಚಿಕದೇವರಾಜನಿಂದ ವಿರಚಿತವೆಂಬ ಆಭಾಸವನ್ನು ತಿರುಮಲಾರ್ಯನಿಂದಲೇ ಪಡೆದಿರಬೇಕು. ಇವೆರಡರಲ್ಲಿಯೂ ಬಂದಿರುವ ಚಿಕದೇವರಾಜಸ್ತುತಿಯ ಪದ್ಯಗಳು ಬಹುಮಟ್ಟಿಗೆ ತಿರುಮಲಾರ್ಯನ ಹೆಸರಿನಲ್ಲಿದ್ದ ಗ್ರಂಥಗಳಿಂದ ಎತ್ತಿದವುಗಳಾಗಿವೆ. ರಾಜನು ತನ್ನ ಸ್ತುತಿಯನ್ನು ಇಷ್ಟು ಮಟ್ಟಿಗೆ ತಾನೇ ಮಾಡಲಾರನು. 'ತಿರುಮಲೆಯಾರ್ಯರ ದಿವ್ಯಕೃತಿಯನಿದ ಪಾಡುವೆನು' (ಪ. ೭, ಪು. ೬೪) ಎಂದೂ 'ಗೀತಗೋಪಾಲ'ದಲ್ಲಿ ಸ್ಪಷ್ಟವಾಗಿ ಹೇಳಿದೆ. ಇವೆಲ್ಲ ಸಾಕ್ಷ್ಯಗಳು ಕರ್ತೃತ್ವದ ಆಭಾಸವನ್ನು ಕಳೆಯಲು ಸಾಕು. ಚಿಕದೇವರಾಜನು ಸ್ವತಃ ಗ್ರಂಥಕಾರನಾಗಿರಲಿ ಬಿಡಲಿ, ಗ್ರಂಥಕಾರರ ತಂಡವೊಂದನ್ನು ನಿರ್ಮಾಣಮಾಡಿದನೆಂಬುದು ಖಂಡಿತ. 'ಇವನ ಪ್ರೋತ್ಸಾಹದಿಂದಲೇ ತಿರುಮಲಾರ್ಯ, ಸಿಂಗರಾರ್ಯ, ಚಿಕುಪಾಧ್ಯಾಯ, ಶೃಂಗಾರಮ್ಮ, ಹೊನ್ನಮ್ಮ, ವೇಣುಗೋಪಾಲವರಪ್ರಸಾದ, ತಿಮ್ಮಕವಿ, ಮಲ್ಲಿಕಾರ್ಜುನ, ಚಿದಾನಂದಕವಿ, ಮಲ್ಲರಸ ಮುಂತಾದ ಕವಿಗಳು ಕನ್ನಡದಲ್ಲಿ ಉದ್ಗ್ರಂಥಗಳನ್ನು ಬರೆದು ಆ ಭಾಷೆಗೆ ಉನ್ನತಿಯನ್ನುಂಟುಮಾಡಿದರು.'[1]

'ಚಿಕದೇವರಾಜಬಿನ್ನಪ'ದಲ್ಲಿ ಯದುಗಿರಿನಾರಾಯಣನನ್ನು ಕುರಿತು ಗದ್ಯದಲ್ಲಿ ೩೦ ಬಿನ್ನಪಗಳಿವೆ, ಬಿನ್ನಪದ ರೂಪದಲ್ಲಿ ಶ್ರೀವೈಷ್ಣವಮತದ ತತ್ವಗಳನ್ನು ವಿವರಿಸಲಾಗಿದೆ. 'ಎಲ್ಲರುಮುಱಿವಂತೆ ಕನ್ನಡವಾತಿನೊಳಂ ಮೆಲ್ನುಡಿಗಳಿಂದೆ ಅಖಿಲತತ್ವಾರ್ಥಂಗಳಂ ಸಂಗತಿಗೊಳಿಸಿ' ಎಂದು ಪೀಠಿಕೆಯಲ್ಲಿದೆ. ಇದು ಕೇವಲ ತತ್ವಪ್ರತಿಪಾದಕವಾದ ಶಾಸ್ತ್ರಗ್ರಂಥವಲ್ಲ, ಶಾಸ್ತ್ರವನ್ನು ಸಾಹಿತ್ಯರೂಪಕ್ಕೆ ಇಳಿಸಿದ ಭಕ್ತಿಜ್ಞಾನಸಂಮಿಶ್ರವಾದ ಗ್ರಂಥ. ಮತತತ್ವಗಳನ್ನು ತರ್ಕಬದ್ಧವಾಗಿ ಅಚ್ಚುಕಟ್ಟಾಗಿ ನಿರೂಪಿಸುತ್ತಲೆ ಉಚಿತವಾದ ಉಪಮೆಗಳಿಂದಲೂ ಶೈಲಿಯ ಸೊಬಗಿನಿಂದಲೂ ತತ್ವದ ತಿಳಿವು ಸುಲಭವೂ ಮೋಹಕವೂ ಆಗುವಂತೆ ಮಾಡಲಾಗಿದೆ. ಕನ್ನಡದಲ್ಲಿ ರಾಮಾನುಜಮತದ ಮುಖ್ಯಪ್ರಮೇಯಗಳನ್ನು ತಿಳಿದುಕೊಳ್ಳಲು ಸ್ಪಷ್ಟವೂ ಸಂಕ್ಷಿಪ್ತವೂ ಆದ ಕೃತಿ ಇದೊಂದೇ. ಪ್ರತಿಯೊಂದು ಬಿನ್ನಪದ ಮೊದಲು–ಕೊನೆಗಳಲ್ಲಿ ಭಕ್ತಿನಿದರ್ಶಕವಾದ ಸಂಬೋಧನೆ–ಪ್ರಾರ್ಥನೆಗಳು ಬಂದದ್ದು ತತ್ವನಿರೂಪಣೆಗೂ ಭಾವನೆಯ ಕಾವು ಕೆಲಮಟ್ಟಿಗೆ ದೊರೆತಿದೆ. 'ಎನ್ನೊಳಂ ಅಕಾರಣ ಕರುಣಾಬ್ಧಿಕಲ್ಲೋಲಂಗಳಂ ಕವಿಸಿ ಮನ್ನಿಪುದು ಮನ್ನಿಪುದನನ್ಯಜನಸುಲಭ ಶ್ರೀಯದುಶೈಲವಲ್ಲಭಾ' ಈ ಬಗೆಯ

---

1 ಆರ್. ನರಸಿಂಹಾಚಾರ್ಯ : ಕವಿಚರಿತೆ, ಭಾಗ ೨, ಪು. ೪೫೩

ಉಕ್ತಿಗಳನ್ನು ನೋಡಬೇಕು. ಕನ್ನಡಸಾಹಿತ್ಯದಲ್ಲಿ ಅಷ್ಟಕ-ಶತಕಗಳು ಭಕ್ತಿಜ್ಞಾನ-ಸಂಮಿಶ್ರವಾಗಿವೆ, ಗದ್ಯದಲ್ಲಿ ವಚನಗಳು ಬಿಡಿಬಿಡಿಯಾಗಿ ಈ ರೂಪತಾಳಿವೆ, ಗೇಯವಾದ ಸುಳಾದಿ-ಉಗಾಭೋಗಗಳು ಹೀಗಿವೆ. ಆದರೂ 'ಚಿಕದೇವರಾಜ-ಬಿನ್ನಪ'ದ ಅನನ್ಯತೆಗೆ ಬಾಧೆಯಿಲ್ಲ. ಅದರ 'ಉದಾರಗದ್ಯ'ದಲ್ಲಿ ಪ್ರೌಢಿಮೆಯಿದೆ, ಚೊಕ್ಕಟತನವಿದೆ. 'ಎಲ್ಲರುಮುಜ್ಜೀವಂತೆ' ಎಂಬ ಉದ್ದೇಶವು ಎಲ್ಲ ಕಡೆಗೆ ಕೈಗೂಡಿಲ್ಲ. ಆದರೆ ವಿವರಣೆಯ ಕಾರ್ಯ ಯಶಸ್ವಿಯಾಗಿದೆ. ಇದರ ಗದ್ಯಕ್ಕೆ ಆಂದೋಲಕವಾದ ಸಹಜಲಯವಿದೆ, 'ಚಿಕದೇವರಾಯವಂಶಾವಳಿ'ಯ ಸರಣಿಗೆ ಸಮಾನವಾದ ಗದ್ಯಗುಣವಿದೆ.

'ಗೀತಗೋಪಾಲ'ವು ಏಳು ಸಪ್ತಪದಿಗಳಲ್ಲಿ ರಚಿತವಾದ ಭಕ್ತಿಗೀತಗಳ ಸಂಗ್ರಹ. 'ಹರಿಸಂಕೀರ್ತನವೊಂದೇ ಪರಗತಿಗನುಕೂಲಮೆಂದು ನಿರವಿಸಿ ನೆಗಟ್ದಿಂ, ತೊಡರ್ದಿರೆ ನುಡಿ ನುಣ್ಬರಗಳ ಬೆಡಂಗು ಮನವೊಲ್ದು ಗೀತಗೋಪಾಲವೆಸರ್ವಡೆದು (೧-೯), ಒಳ್ಗನ್ನಡಗಬ್ಬಮನೊಡರಿಸಿ ಚಿಕದೇವರಾಯನುನ್ನತಿವೆತ್ತಂ' ಎಂದು ಹೇಳಿ-ದಂತೆ ಒಂದು ಕ್ರಮುಬದ್ಧವಾಗಿ 'ಗೀತಗೋಪಾಲ'ವನ್ನು ರಚಿಸಲಾಗಿದೆ. ಶ್ರೀವೈಷ್ಣವ-ತತ್ವಕ್ಕೆ ಅನುಸರಿಸಿದ ಭಕ್ತಿ ಇದರಲ್ಲಿ ಹೊರಪಟ್ಟಿದೆ, ತತ್ವವನ್ನು ಮುನ್ನೆಲೆಯಲ್ಲಿ ತಂದು ನಿಲ್ಲಿಸಿಲ್ಲ. 'ಚಿಕದೇವರಾಜಬಿನ್ನಪ'ದಲ್ಲಿ ತತ್ವ ಮುಖ್ಯವಾಗಿ, ಭಕ್ತಿ ಅದಕ್ಕೆ ಕಾಪುಕೊಡುವ ಗುಣವಾಗಿದ್ದರೆ ಇಲ್ಲಿ ಭಕ್ತಿ ಮುಖ್ಯವಾಗಿ ತತ್ವ ಹಿನ್ನೆಲೆಯಲ್ಲಿ ಶ್ರುತಿಗೊಡುತ್ತದೆ. ಹರಿದಾಸರ ಕೀರ್ತನೆಗಳ ಸ್ಥಾಯಿಸಂಚಾರಿಗಳು ಬಂದಿದ್ದರೂ ಇಲ್ಲಿಯ ಕೀರ್ತನೆಗಳ ಶೈಲಿ ಶುದ್ಧವಾಗಿದೆ, ತಿಳಿಗನ್ನಡದತ್ತ ಒಲವುತೋರಿದೆ. ಭಾವ-ಸಂಪತ್ತಿ, ಕಲ್ಪನಾಸಂಪತ್ತಿ 'ಗೀತಗೋಪಾಲ'ದಲ್ಲಿ ಅಷ್ಟುಮಟ್ಟಿಗೆ ಕಾಣದೊರೆಯು-ವುದಿಲ್ಲವಾದರೂ ಭಕ್ತಿಭಾವವು ನೈಜವೂ ಉತ್ಕಟವೂ ಆಗಿ ತೋರಿದೆ. 'ಬಡವನೆ ನೀನು ಏನೇನೇನು ಬಡವನೆ ನೀನು', 'ನಿಂದೆಗೆಯ್ವರು ಮಿಗೆ ನಿಂದಿಸುತಿರಲಿ', 'ತನ್ನ ನೆನೆವುದು ಜೀವ ತಲ್ಲಣಿಪುದು', 'ತಪ್ಪದಾರದು' ಈ ಮುಂತಾದ ಕೆಲವು ಗೀತಗಳಲ್ಲಿ ಈ ಮಾತಿಗೆ ನಿದರ್ಶನಗಳನ್ನು ನೋಡಬಹುದು. ಗೋಪಾಲಕನಾದ ಕೃಷ್ಣನನ್ನು ಎಬ್ಬಿಸುವ ಮತ್ತು ಅವನ ಲೀಲೆಗಳನ್ನು ವರ್ಣಿಸುವ ಗೀತೆಗಳಲ್ಲಿ ಕೆಲವು ಸೊಗಸಾಗಿವೆ. ಹರಿಕೀರ್ತನೆಗಳ ಭಾಂಡಾರಕ್ಕೆ 'ಗೀತಗೋಫಾಲ'ವು ಉನ್ನತವಾದ ಅಲ್ಲದಿದ್ದರೂ ತುಂಬ ಮೆಚ್ಚುವಂಥ ಗೀತನಿಧಿಯನ್ನು ನೀಡಿರುತ್ತದೆ. ಶ್ರೀವೈಷ್ಣವ-ಸಂಪ್ರದಾಯದ ಗೀತಗಳಲ್ಲಿಯಂತೂ ಕನ್ನಡದಲ್ಲಿ ಇದೇ ಮೊದಲನೆಯದು.

ತಿರುಮಲಾರ್ಯ

ತಿರುಮಲಾರ್ಯನು ಚಿಕದೇವರಾಜನ ಕಾಲದ ಪ್ರಭಾವಶಾಲಿಯಾದ ಮತ್ತು ಸವ್ಯಸಾಚಿಯಾದ ವ್ಯಕ್ತಿ. ಸಂಸ್ಕೃತ-ಕನ್ನಡ ಪಂಡಿತನಾಗಿ ಎರಡೂ ಭಾಷೆಗಳಲ್ಲಿ ಅವನು ಗ್ರಂಥರಚಿಸಿದನು, ಮಂತ್ರಿಯಾಗಿ ಮೈಸೂರು ರಾಜ್ಯದ ಏಳಿಗೆಮಾಡಿದನು.

ಕನ್ನಡದಲ್ಲಿ ಮೇಲೆ ವಿಮರ್ಶಿಸಿದ ಎರಡು ಕೃತಿಗಳಲ್ಲದೆ ‘ಅಪ್ರತಿಮವೀರಚರಿತ, ಚಿಕದೇವರಾಜವಿಜಯ, ಚಿಕದೇವರಾಯವಂಶಾವಳಿ, ಚಿಕದೇವರಾಯಶತಕ’ ಇವನ್ನು ಬರೆದಿದ್ದಾನೆ. ಕೊನೆಯದು ದೊರೆತಿಲ್ಲ. ಎಲ್ಲ ಗ್ರಂಥಗಳಲ್ಲಿ ಅವನ ಮನಸ್ಸು ಚಿಕದೇವರಾಯಮಯವಾಗಿದೆಯೆಂಬುದನ್ನೂ ಅವನ ಕಾವ್ಯಗಳಿಗೆ ಅವನ ದೊರೆಯ ಚರಿತೆಯೇ ವಸ್ತು, ದೊರೆಯೇ ನಾಯಕನೆಂಬುದನ್ನೂ ಕಾಣಬಹುದು. ‘ಅಪ್ರತಿಮವೀರಚರಿತ’ ಎಂದು ‘ಕುವಲಯಾನಂದ’ವನ್ನು ಮುಖ್ಯವಾಗಿ ಅನುಸರಿಸಿ ಬರೆದ ಅರ್ವಾಚೀನ ಅಲಂಕಾರಗ್ರಂಥಕ್ಕೂ ‘ಅಪ್ರತಿಮವೀರಚರಿತ’ ಎಂಬ ಅಪ್ರತಿಮವಾದ ಹೆಸರು! ಯಾಕೆಂದರೆ ಅದರಲ್ಲಿಯ ಲಕ್ಷ್ಯಪದ್ಯಗಳೆಲ್ಲ ಅಪ್ರತಿಮ ವೀರನೆಂಬ ಬಿರುದುಳ್ಳ ಚಿಕದೇವರಾಯನ ಚರಿತ್ರೆಯನ್ನು ತಿಳಿಸುತ್ತವೆ, ಗುಣಗಳನ್ನು ಹೊಗಳುತ್ತವೆ. ಲಕ್ಷ್ಯಪದ್ಯಗಳಲ್ಲಿಯ ಈ ಏಕವಿಷಯತೆ, ಅವುಗಳಲ್ಲಿಯ ಚಾರಿತ್ರಿ ವಿವರಗಳ ಮಹತ್ವ ಈ ದೃಷ್ಟಿಯಿಂದಲೇ ಈ ಗ್ರಂಥ ವೈಶಿಷ್ಟ್ಯಪಡೆದಿದೆ. ಅಲಂಕಾರ ಶಾಸ್ತ್ರದೃಷ್ಟಿಯಿಂದ ಮಮ್ಮಟ, ವಾಮನ, ಕುವಲಯಾನಂದಕಾರ ಇವರ ಅನುಸರಣವೆ ಇಲ್ಲಿ ಕಾಣುತ್ತದೆ. ಲಕ್ಷ್ಯಪದ್ಯಗಳಲ್ಲಿಯ ವಿಷಯೈಕ್ಯದ ನಿರ್ಬಂಧದ ಮೂಲಕ ಕೆಲವು ಸಲ ಸಮರ್ಪಕವೂ ಸ್ಪಷ್ಟವೂ ಆಗಿರುವುದಿಲ್ಲ, ಅಭ್ಯಾಸಿಗಳಿಗೆ ಸುಕರವೂ ಆಗಿಲ್ಲ. ಆದರೆ ಇತಿಹಾಸಕಾವ್ಯದ ಮೇಲ್ಮೆ ಮಾತ್ರ ಅವುಗಳಲ್ಲಿ ಎದ್ದುಕಾಣುತ್ತದೆ. ‘ಚಿಕದೇವರಾಜವಿಜಯ’ವು ಪ್ರೌಢವಾದ ಚಂಪೂಕಾವ್ಯ. ಈ ಯುಗದಲ್ಲಿ ಅಪರೂಪವಾದ ಚಂಪೂಕಾವ್ಯವು ಮತ್ತೆ ಇಲ್ಲಿ ತಲೆಯೆತ್ತಿದೆ. ‘ಸಕ್ಕದಗನ್ನಡವೆರಡಱೊ ಕ್ಕಸರಂಗೊಳ್ವುದೋಜೆಗಬ್ಬಂ’ (೧–೧೫) ಎಂಬಲ್ಲಿ ಹೇಳಿದಂತೆ ಈ ಓಜೆಗಬ್ಬ ‘ಎಡೆಯೆಡೆಯೊಳ್ ತಕ್ಕತಕ್ಕ ಬಣ್ಣಿಗೆ ಬವಣಿಂ’ (೧–೧೬) ಸೊಗಸನ್ನು ಪಡೆದಿ ವಿಷಯ ಕವಿಗೆ ಪ್ರಿಯವಾದದ್ದು, ಚರಿತ್ರೆ–ವರ್ಣನೆಗಳಿಂದ ಪ್ರಚುರವಾದದ್ದು ಪುನರುಜ್ಜೀವನಹೊಂದಿದ ಚಂಪೂಶೈಲಿಯ ಬಿಗುವಿಗೂ ಕನ್ನಡ–ಸಂಸ್ಕೃತಗ ಸೇರುವೆಯ ಮಿದುವಿಗೂ ಈ ಕೃತಿಯನ್ನು ನೋಡಬೇಕು. ‘ಚಿಕದೇವರಾಯ ವಂಶಾವಳಿ’ ತಿರುಮಲಾರ್ಯನ ಗುಣಸರ್ವಸ್ವವನ್ನು ಮೆರೆಯುವ ಗದ್ಯಗ್ರಂ ಇದರಲ್ಲಿ ರಾಜನೃಪನಿಂದ ಮೊದಲಾಗಿ ಚಿಕದೇವರಾಜನ ವರೆಗೆ ಮೈಸೂರು ರಾ ವಂಶದ ಪ್ರಸಿದ್ಧರಾಜರ ಚರಿತ್ರೆಯಿದೆ. ಚಿಕದೇವರಾಯನ ವಿಜಯಯಾತ್ರೆಯನ ವರ್ಣಿಸುತ್ತಲೆ ಅಪೂರ್ಣವಾಕ್ಯದಲ್ಲಿ ದೊರೆತ ಮಾತೃಕೆ ಮುಗಿಯುತ್ತದೆ, ಗ್ರಂಥವಿನ ಮುಂದೆ ಸಾಗಿರಬೇಕು. ಇದರಲ್ಲಿ ವಂಶಾವಳಿಯ ಚರಿತ್ರೆಯಿದೆ ಎಂದರೂ ಚಾರಿತ್ರಿ ಅಂಶಗಳಿವೆ ಎನ್ನುವುದು ಹೆಚ್ಚು ಯುಕ್ತ. ಯಾಕೆಂದರೆ ಚರಿತ್ರೆಯಲ್ಲಿ ಕಲ್ಪನಾಂ ಗಳನ್ನು ಬೆರಸಿ, ತೋರಿದಲ್ಲಿ ವರ್ಣನಾಸಂದರ್ಭಗಳನ್ನು ಕಲ್ಪಿಸಿಕೊಂಡು ಪ್ರೌಢವಾ ಗದ್ಯಕಾವ್ಯವನ್ನು ರಚಿಸುವುದೇ ಇದರ ಗಮ್ಯವಾಗಿತ್ತು. ಚಿಕದೇವರಾಜನಿಂದ ಹಿಂ ಹಿಂದಿನ ಚರಿತ್ರೆ ಹೆಚ್ಚಾಗಿ ಅವನಿಗೆ ಕೇಳಿಕೆಯದಾಗಿದ್ದ ಕಾರಣ ಅವನ ಕಲ್ಪನಾ ಹೆಚ್ಚು ಕೆಲಸ ಮಾಡಿದಂತಿದೆ. ದೊಡದೇವರಾಜ, ಚಿಕದೇವರಾಜರ ತಾತ್ಕಾ

ಚರಿತ್ರೆ ಮಾತ್ರ ಅವನಿಗೆ ತೀರ ಪರಿಚಿತವಾದುದು. ಅದರ ನಿರೂಪಣೆಯಲ್ಲಿ ಅವನು ಚಾರಿತ್ರಿಕಸತ್ಯಕ್ಕೆ ಬಹುಶಃ ಎರವಾಗಿಲ್ಲ. ಅಂದಿನ ಘಟನೆಗಳ ಮತ್ತು ವಿವರಗಳ ಜ್ಞಾನ ಅವನೆಲ್ಲ ಗ್ರಂಥಗಳಲ್ಲಿ ನಿಚ್ಚಳವಾಗಿದೆ. 'ಚಿಕದೇವರಾಯವಂಶಾವಳಿ'ಯ ಸಮಗ್ರಗ್ರಂಥದಲ್ಲಿ ಹೀಗೇ ಇರಬೇಕು. ಅಪೂರ್ಣ ಮಾತೃಕೆಯಲ್ಲಿ ಬಂದಿರುವ ದೊಡದೇವರಾಜನ ಚರಿತ್ರೆ ಮಾತ್ರ ಬಹುಭಾಗವನ್ನು ಆಕ್ರಮಿಸಿಯೂ ಚರಿತ್ರೆ-ಯಾಗಿಲ್ಲ, ವರ್ಣನೆಯ ಅತಿರೇಕವಾಗಿದೆ. 'ಚರಿತ್ರ, ಮತತತ್ವ, ಕಾವ್ಯ ಇವುಗಳ ಮುಪ್ಪುರಿಯೇ 'ಚಿಕದೇವರಾಯವಂಶಾವಳಿ' ಎಂದು ಹೇಳುವುದಕ್ಕೆ ಈ ಭಾಗವು ಬಲವಾದ ಪ್ರಮಾಣವಾಗಿದೆ.'[1] ಈ ಹೇಳಿಕೆಯಲ್ಲಿ ಸತ್ಯವಿದೆ. ಆದರೆ ಚರಿತ್ರೆ, ಮತತತ್ವ, ಕಾವ್ಯ ಇವುಗಳನ್ನು ಸಮವಾಗಿ ಹೊಂದಿಸಿಕೊಂಡು ಏಕಜೀವವಾದ ಕೃತಿ ಸಂಬರ್ಧದಲ್ಲಿ ಇದು ಮುಪ್ಪುರಿಯಲ್ಲ, ಮೂರು ಬೇರೆ ಹುರಿಗಳು ವಿಷಮಪ್ರಮಾಣದಲ್ಲಿ ಕೂಡಿರುವ ಸಂದರ್ಭವೇ ಹೆಚ್ಚು. ರಾಜನೃಪನ ಚರಿತ್ರೆಯಲ್ಲಿ ಕಲ್ಪನಾಂಶ ಬೆರೆತಿದ್ದರೂ ವರ್ಣನೆಗಳಲ್ಲಿ ಅತಿಶಯೋಕ್ತಿಯಿದ್ದರೂ ಚಾರಿತ್ರಿಕ ಕಾವ್ಯದ ಗತಕಾಲದೃಷ್ಟಿ, ನಿರೂಪಣೆಯ ಸ್ವಾರಸ್ಯ ಇವೆ. ಮುಂದೆ ಮುಂದೆ ಹೋದಂತೆ ಪ್ರಮಾಣಜ್ಞಾನ ಕಡಿಮೆಯಾಗುತ್ತ ಹೊರಟಿದೆ. ಕಂಠೀರವನರಸರಾಜನ ಚರಿತ್ರೆಗೆ ದೊರೆಯಬೇಕಾದ ಪ್ರಾಮುಖ್ಯ, ವಿಸ್ತಾರ ದೊರೆತಿಲ್ಲ. ದೊಡದೇವರಾಜನ ಚರಿತವಂತೂ ಅತ್ಯುಕ್ತಿಗಳ ಮಾಲಿಕೆಯಾಗಿದ್ದು ತರತರದ ವರ್ಣನೆಗಳಿಗೆ ನಿಮಿತ್ತಮಾತ್ರವಾಗಿದೆ. ಇಲ್ಲಿ ಕವಿ ಪ್ರಮಾಣಜ್ಞಾನವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾನೆ. ಇದಕ್ಕೆ ಮತೀಯ ಆವೇಶ, ವರ್ಣನೆಯ ಉತ್ಸಾಹಗಳು ಕಾರಣವಾಗಿವೆ. ಒಟ್ಟಿನಲ್ಲಿ ಕೃತಿಬಂಧದಲ್ಲಿ ಏಕತಾನತೆಯಿಲ್ಲ. ಪೂರ್ಣಗ್ರಂಥ ಹೇಗಿದೆಯೋ ಗೊತ್ತಿಲ್ಲ. ಮೈಸೂರು ರಾಜರನ್ನು ಆದರ್ಶನೃಪರೆಂದು ಚಿತ್ರಿಸುವ ಹೇತು ಸಫಲವಾಗಿದೆ. ಆದರೆ ಚಾರಿತ್ರಿಕ ಕಾವ್ಯವೆಷ್ಟು ಕಾಲ್ಪನಿಕವಾದರೂ ಇಷ್ಟುಮಟ್ಟಿನ ಅತಿಶಯೋಕ್ತಿ ಅದರಲ್ಲಿ ಹೊಂದಿಕೊಳ್ಳಲಾರದು.

'ಚಿಕದೇವರಾಯವಂಶಾವಳಿ'ಯ ಮುಖ್ಯ ಗುಣ ಅದರ ಗದ್ಯಶೈಲಿಯಲ್ಲಿ ಮತ್ತು ಬಿಡಿಯಾದ ವರ್ಣನೆ ಹಾಗೂ ಸಾದೃಶ್ಯಮಾಲಿಕೆಗಳಲ್ಲಿದೆ. ತಿರುಮಲಾರ್ಯನು ಮೇಲಾದ ಕವಿ ಮತ್ತು ಶೈಲಿಕಾರನೆಂಬುದು ದಿಟ. ಅವನ ವರ್ಣನೆಗಳಲ್ಲಿ 'ಅಕೃತಕ-ವಾದ ಉತ್ಸಾಹಿತವಾದ ವಿಸ್ತಾರವೈಭವವಿದೆ; ವಿವರವಿವರದಲ್ಲಿಯೂ ನೂತನವಾದ ಕಣ್ಣಿಂದ ನೋಡುವ ಕಲ್ಪನೆಯ ಚಿರಯೌವನವಿದೆ; ಉಚಿತವಾಗಿ ವಿಧವಿಧವಾಗಿ ಮಾತು ಹೆಣೆದು ಮುಂದರಿಯುವ ಅನೂನವಾಣಿಯಿದೆ. ವಿಶೇಷವಾಗಿ ಭಕ್ತಿರಸದಲ್ಲಿ ಆ ತಲ್ಲೀನನಾಗಿ ತನ್ನ ಶಕ್ತಿಯನ್ನೆಲ್ಲ ಸೂರೆಮಾಡಿರುವನು....ಆದರೆ ತಿರುಮಲಾರ್ಯನ ಪ್ರೌಢಿ ಕ್ಷೆ ತನ್ನ ನಾವೀನ್ಯಹಟದಿಂದ ಹೊರಟು ಕೃತ್ರಿಮವಾಗಿಯೂ ಶುಷ್ಕವಾಗಿಯೂ

---

1 ಸ. ಸ. ಮಾಳವಾಡ: ಚಿಕದೇವರಾಯವಂಶಾವಳಿಯ ಚರಿತ್ರಾಂಶಗಳು (ಕರ್ನಾಟಕ ವಿದ್ಯಾಲಯ ಪತ್ರಿಕೆ), ಪು. ೩೨.

ಸಾಧಾರಣವಾಗಿಯೂ ತೋರಿರುವುದುಂಟು.'[1] 'ತಿರುಮಲಾರ್ಯನಲ್ಲಿ ಸಾವಿನ್ಯ ನೈಪುಣ್ಯ ತೋರಲಿ, ತೋರದಿರಲಿ, ಅವನ ಗದ್ಯಶಕ್ತಿಯೇ ಅವನ ಹೆಚ್ಚಿನ ಕಾವ್ಯ ಶಕ್ತಿಯ ನಿತ್ಯನಿದರ್ಶನವೆಂದು ಅವನ ಚಿಕದೇವರಾಯವಂಶಾವಳಿ ಕನ್ನಡರಸಿಕ ವಂಶಾವಳಿಗೆ ಸಾರುತ್ತಿದೆ. ತಿರುಮಲಾರ್ಯನ ಶೈಲಿಯೇ ಅವನ ಜೀವಾಳ, ರೀತಿಯೇ ಅವನ ಕಾವ್ಯಕ್ಕೆ ಆತ್ಮ. ಸಂಸ್ಕೃತ ಹಾಗೂ ಕನ್ನಡ ಕಾವ್ಯಶೈಲಿಗಳ ಒಳದಿರುಳನ್ನು ಹೀರಿ ಪುಷ್ಟವಾಗಿಯೂ ಹೊಸ ನಡೆಯ ಬೆಡಗುಳ್ಳುದು ಅವನ ಗದ್ಯ. ಯಾವ ತಡೆಯೂ ಇಲ್ಲದೆ ತಿಳಿಯಾಗಿ ಅಚ್ಚುಕಟ್ಟಾಗಿ ತುಂಬಿ ತುಂಬಿ ಹರಿಯುವುದೇ ಅದರ ಲಕ್ಷಣ.'... 'ಆಂಡಯ್ಯನ ಅಚ್ಚಗನ್ನಡಕ್ಕೆ ಒಲಿದರೂ ಸಂಸ್ಕೃತದ ಸವಿಯನ್ನು ಬಿಡದೆ ಹೊಸ ಒಂದು ಓರಣವನ್ನು ಅವನ ಶೈಲಿ ತೋರಿದೆ. ಸಮತೂಕ ಹಾಗೂ ಲಾಲಿತ್ಯ ಇವುಗಳ ಸರಿಬೆರ ಅಡಿಗಡಿಗೆ ಸಹಜವಾಣಿಯ ಸ್ಫುರಣದಿಂದ ಹೊರ ಉಕ್ಕಿದೆ.'[2] 'ತಿರುಮಲಾರ್ಯನದು ನಿಜವಾಗಿಯೂ ತಲೆದೂಗಿಸುವ ಶೈಲಿ.'........'ಮುಸುಕಿಂದ ಮುಗಿಲನೊಡೆದ ಮೆಯ್ದೋಱುವ ಪೆಱೆಯಂತೆಯುಂ, ಮಂಜಂ ಕಳೆದು ತೊಳಗುವ ನೇಸಱಂತೆಯುಂ ಈ ಮೊದಲಾದ ಉದ್ದ ಹೋಲಿಕೆಯಿರಲಿ, 'ಒಡಲೊಳಿಡರಂ, ಪಾಸಿನೊಳ್ ತೇಟಂ ಮೊದಲಾದ ತುಂಡು ಹೋಲಿಕೆಯಿರಲಿ, ಆ ತಲೆದೂಗಿಸುವ ಸಮತೂಕವು ತೋರಿದೆ.

'ಚಿಕದೇವರಾಯವಂಶಾವಳಿ' ಚಾರಿತ್ರಿಕಕಾವ್ಯದೃಷ್ಟಿಯಿಂದ ಏಕಾಗ್ರವಾಗಿ ಗುಣದೋಷಮಿಶ್ರವಾಗಿದೆ. ಆದರೆ ಅದರ ಗದ್ಯಶೈಲಿಯಲ್ಲಿ ಮತ್ತು ಕಲ್ಪಕತೆಯ ಅಸಾಧಾರಣ ಗುಣವಿದೆ. ವಿರಳವಾದ ಕನ್ನಡಗದ್ಯಗ್ರಂಥಗಳಲ್ಲಿ ಅದಕ್ಕೆ ಮೇಲಾ ಎಡೆಯಿದೆ. 'ಎನಿತಂದವಾಗಿ ಮೆಲ್ಪುವಡೆದ ಸಬುದಂಗಳ ಸೇರುವೆಯಿಂ ಸರಳಮು ಕರಮೆಸೆವ ಪುರುಳಪವಣಿಗೆಯುಂ ಸರಸಮುಮೆನಿಸಿ ತನಿಸೊದೆಯ ಸೋನೆಯ ಇನಿದಂ ಕಿವಿಗಳ್ಗೆ ಕಱೆಗುಮೀ ತಿರುಮಲಾರ್ಯರ ಬಾಯ್ದೆಱೆಯ ಸರಸತಿಯ ಸೈ ವಡೆದ ಸಾಹಿತ್ಯಸೌಂದರ್ಯಂ' ಎಂಬ ಸಿಂಗರಾರ್ಯಸ್ತುತಿ ಯಥಾರ್ಥವಾಗಿದೆ. ಆ ವ್ಯಂಗ್ಯಪ್ರಧಾನವಾಗಿ ಕನ್ನಡದಲ್ಲಿ ಕಾವ್ಯ ಬರೆಯಲು ಈತನು ಮೊದಲುಮಾಡಿ ನೆಂದಾಗಲಿ, ಸಂಸ್ಕೃತದಲ್ಲಿ ಕಾದಂಬರಿಯಂತೆ 'ಚಿಕದೇವರಾಯವಂಶಾವಳಿ' ಕನ್ನಡ ಉತ್ತಮ ಗದ್ಯಗ್ರಂಥವೆಂದಾಗಲಿ ಕೆಲವರು ಮಾಡಿದ ಪ್ರಶಂಸೆ ನಮಗೆ ಸಂಮತವಿ

ತಿರುಮಲಾರ್ಯನಂತೆ ಚಿಕದೇವರಾಯನಿಗೆ ಮಂತ್ರಿಯೂ ಪಂಡಿತನೂ ಇನ್ನೊಬ್ಬ ಗ್ರಂಥಕಾರ ಚಿಕುಪಾಧ್ಯಾಯನು. ಆದರೆ ಗ್ರಂಥಗಳ ಗಾತ್ರ ಮ ಸಂಖ್ಯೆಯಲ್ಲಿ ತಿರುಮಲಾರ್ಯನನ್ನು ಇವನು ಮೀರಿದನು. ಸುಮಾರು ೩೦ರ ಮೆ

---

1 ರಂ. ಶ್ರೀ. ಮುಗಳಿ: ಚಿಕದೇವರಾಯವಂಶಾವಳಿಯ ಕಾವ್ಯಶೈಲಿ (ಕರ್ನಾಟಕ ವಿದ್ಯಾಲಯ ಪತ್ರಿಕೆ), ಪು.

2 ಅದೇ, ಪು. ೪೧.

3 ಅದೇ, ಪು. ೪೨.

ವನು ಗ್ರಂಥ ಬರೆದಿದ್ದಾನೆ. ಕನ್ನಡಸಾಹಿತ್ಯದ ಇತಿಹಾಸದಲ್ಲಿಯೇ ಇಷ್ಟು ಗ್ರಂಥ-ಗಳನ್ನು ಬರೆದ ಬೇರೊಬ್ಬರು ಈವರೆಗೆ ಹುಟ್ಟಿರಲಿಲ್ಲ. ಎಲ್ಲವೂ ಗ್ರಂಥವೆಂಬ ಪದವಿಗೆ ಯೋಗ್ಯವೆಂದಲ್ಲ; ಯೋಗ್ಯವಾಗಿದ್ದುವು ಸಹ ತಕ್ಕಮಟ್ಟಿಗೆ ಗುಣವುಳ್ಳುವು. ಸಾಮಾನ್ಯವಾಗಿ ತನ್ನ ಕೃತಿಗಳಲ್ಲಿ ಅವನು ಶ್ರೀವೈಷ್ಣವಮತದ ತತ್ವ, ಸಂಪ್ರದಾಯ, ರೀತಿ ಎಲ್ಲವನ್ನೂ ನಿರೂಪಿಸಿ ರಾಮಾನುಜಮತಕೋಶವೊಂದನ್ನು ರಚಿಸಿದಂತೆ ಮಾಡಿದ್ದಾನೆ. ಅವನ ಗ್ರಂಥಗಳಲ್ಲಿ 'ಕಮಲಾಚಲಮಾಹಾತ್ಮ್ಯ, ಹಸ್ತಿಗಿರಿಮಾಹಾತ್ಮ್ಯ, ರುಕ್ಮಾಂಗದಚರಿತೆ, ವಿಷ್ಣುಪುರಾಣ, ದಿವ್ಯಸೂರಿಚರಿತೆ, ಸಾತ್ವಿಕಬ್ರಹ್ಮ-ವಿದ್ಯಾವಿಲಾಸ, ಅರ್ಥಪಂಚಕ' ಎಂಬ ಚಂಪೂಗ್ರಂಥಗಳ ಗುಂಪು, 'ವೆಂಕಟಗಿರಿ-ಮಾಹಾತ್ಮ್ಯ, ಶ್ರೀರಂಗಮಾಹಾತ್ಮ್ಯ, ಯದುಗಿರಿಮಾಹಾತ್ಮ್ಯ' ಮುಂತಾದ ಗದ್ಯ-ಗ್ರಂಥಗಳ ಗುಂಪು, 'ಪಶ್ಚಿಮರಂಗಮಾಹಾತ್ಮ್ಯ, ಶೃಂಗಾರಶತಕ, ರಂಗಧಾಮಸ್ತುತಿ' ಮುಂತಾದ ಸಾಂಗತ್ಯಗ್ರಂಥಗಳ ಗುಂಪು, 'ಕಾಮಂದಕನೀತಿ, ತಿರುವಾಯ್ಮೊಳಿಟೀಕೆ' ಮುಂತಾದ ಟೀಕಾಗ್ರಂಥಗಳ ಗುಂಪು—ಹೀಗೆ ನಾಲ್ಕೈದು ವಿಭಾಗಗಳಾಗುತ್ತವೆ. ಶೃಂಗಾರದ ಹಾಡುಗಳನ್ನೂ ಬರೆದಿದ್ದಾನೆ, ಆದರೆ ಅವುಗಳಲ್ಲಿ ಚಿಕದೇವರಾಯನ ಸ್ತುತಿಯಿದೆ. ವಸ್ತುಕ–ವರ್ಣಕದ ಪದ್ಧತಿಗಳನ್ನೆಲ್ಲ ಬಳಸಿದ್ದಾನೆ. ದೊರೆತ ಗ್ರಂಥಗಳಲ್ಲಿ ಷಟ್ಪದಿಗೆ ಮಾತ್ರ ಉದಾಹರಣೆಯಿಲ್ಲ. ಇವನ ಕೆಲವು ಚಂಪೂಗ್ರಂಥಗಳು ತುಂಬ ದೊಡ್ಡವಾಗಿವೆ. ಅವುಗಳಲ್ಲಿ ಶ್ರೇಷ್ಠವೆಂದು ಪರಿಗಣಿಸಲಾದ 'ದಿವ್ಯಸೂರಿ-ಚರಿತೆ'ಯಲ್ಲಿ ಹನ್ನೆರಡು ಆಳ್ವಾರುಗಳ ಚರಿತ್ರೆ ಬಂದಿದೆ, ರಾಮಾನುಜಾಚಾರ್ಯರ ಚರಿತ್ರೆಯೂ ಅದರಲ್ಲಿ ಸೇರಿದೆ. ಚಂಪೂಕಾವ್ಯಕ್ಕೆ ಈ ವಿಷಯ ಹೊಸದು. 'ಸಾತ್ವಿಕಬ್ರಹ್ಮವಿದ್ಯಾವಿಲಾಸ'ದಲ್ಲಿ ವಿಶಿಷ್ಟಾದ್ವೈತಮತವನ್ನು ಸಪ್ರಮಾಣವಾಗಿ ಪ್ರತಿಪಾದಿಸಲಾಗಿದೆ. ಮತತತ್ವವನ್ನು ಚಂಪುವಿನ ರೂಪದಲ್ಲಿ ಹಿಂದೆ ಜೈನಕವಿಗಳು ನಿರೂಪಿಸಿದ್ದರು. ಇದು ಶ್ರೀವೈಷ್ಣವಮತದ ವಿಷಯದಲ್ಲಿ ಅಂಥ ಪ್ರಯತ್ನ. ಇವನ ಚಂಪೂಕೃತಿಗಳಲ್ಲಿ ಪ್ರೌಢ ಮತ್ತು ಸಂಸ್ಕೃತಪ್ರಚುರವಾದ ಶೈಲಿಯಿದ್ದರೆ ಸಾಂಗತ್ಯ-ಕೃತಿಗಳಲ್ಲಿ ತಿಳಿಗನ್ನಡವಿದೆ. ಇವನ ಪಾಂಡಿತ್ಯ ಮತ್ತು ಕವಿತಾರಚನೆಯ ಶಕ್ತಿ ಅಪೂರ್ವವಾದವಾದರೂ ಕವಿತ್ವದ ಮಟ್ಟ ಉನ್ನತವಾದುದಲ್ಲ.

ತಿರುಮಲಾರ್ಯನ ತಮ್ಮನಾದ ಸಿಂಗರಾರ್ಯನು ಕನ್ನಡಕ್ಕೆ ಮೊದಲನೆಯದಾಗಿ ದೊರೆಯಲಬ್ಧವಾದ 'ಮಿತ್ರವಿಂದಾಗೋವಿಂದ' ನಾಟಕವನ್ನು ಬರೆದಿದ್ದಾನೆ. ಅದೂ ರತ್ನಾವಳಿ ನಾಟಕದ ಭಾಷಾಂತರ. ಭಾಷಾಂತರವಾದರೂ ಹಾಗೆಂದು ಒಪ್ಪಿಕೊಂಡಿಲ್ಲ. ಅವನು ಮೂಲದಲ್ಲಿಯ ಪಾತ್ರವರ್ಗದ ಹೆಸರುಗಳನ್ನು ಬದಲಿಸಿಕೊಂಡಿದ್ದಾನೆ, ಕೃಷ್ಣನನ್ನು ನಾಯಕನೆಂದು ಇಟ್ಟುಕೊಂಡಿದ್ದಾನೆ. ಹೆಚ್ಚಿನ ವ್ಯತ್ಯಾಸಗಳೇನೂ ಇಲ್ಲದೆ ಮೂಲವನ್ನು ಬಿಟ್ಟುಬಿಡದೆ ಕನ್ನಡಿಸಿದ್ದರೂ ಇದು ಸ್ವತಂತ್ರಕೃತಿಯೆಂದು ತೋರು-ವಂತೆ ಮಾಡಿದ್ದು ಕೃತಿಚೌರ್ಯದ ಮಾದರಿಯೇ ಸರಿ. ಕಥಾನಕದಲ್ಲಿ ಮಾಡಿಕೊಂಡ ಒಂದೆರಡು ವ್ಯತ್ಯಾಸಗಳಿಂದ ಭಾಷಾಂತರಕ್ಕೆ ಕಳೆ ಬರುವ ಬದಲು ಕಲಂಕವೇ

ತಟ್ಟಿದೆ, ವಿಶೇಷ ಪ್ರಯೋಜನವೇನೂ ಆಗಿಲ್ಲ. ನಾಯಕನಾದ ವಾಸುದೇವನ
ಪಾತ್ರಕಲ್ಪನೆ ಸುಸಂಗತವಾಗಿಲ್ಲ. ಒಮ್ಮೆ ಸಾಮಾನ್ಯ ಮನುಷ್ಯ, ಒಮ್ಮೆ ವಿಷ್ಣುವಿನ
ಅವತಾರ ಎನ್ನುವಂತೆ ಅವನು ಅಸಂಗತನಾಗಿ ತೋರುತ್ತಾನೆ. ಮೂಲಕ್ಕನುಸರಿಸಿ
ಶೃಂಗಾರನಾಯಕನಾದರೆ ಕವಿಯ ವ್ಯತ್ಯಾಸಕ್ಕನುಸರಿಸಿ 'ಪುರುಷೋತ್ತಮ'ನಾಗು
ತ್ತಾನೆ. ಎರಡಕ್ಕೂ ಹೊಂದಿಕೆಯಾಗಿಲ್ಲ. ಭಾಷಾಂತರದೃಷ್ಟಿಯಿಂದ ತಿರುಮಲಾರ್ಯನ
ವರ್ಚಸ್ಸುಳ್ಳ ತಿಳಿಯಾದ ಹಳಗನ್ನಡದ ಶೈಲಿಯಿದೆ. ಮೂಲವನ್ನು ಕನ್ನಡಿಸುವಲ್ಲಿ
ಕೆಲವು ಕಡೆ ದೋಷಗಳಾಗಿವೆ, ಕ್ವಚಿತ್ತಾಗಿ ಮೂಲಕ್ಕಿಂತ ಹೆಚ್ಚಿನ ಸೊಗಸು ಬಂದಿದೆ.
ನಾಟಕವು ತೀರ ಸಾಮಾನ್ಯವಾದರೂ ಇದರ ಗುಣಭಾಗವೆಲ್ಲ ಭಾಷಾಶೈಲಿಯಲ್ಲಿದೆ
ಎಂದು ನಮಗೆ ತೋರುತ್ತದೆ.

ಹೊನ್ನಮ್ಮ

ಸಿಂಗರಾರ್ಯನು ತನ್ನ ನಾಟಕದಲ್ಲಿ ಗುಣಾತಿಶಯವನ್ನು ತೋರದಿದ್ದರೂ ತನ್ನ
ಶಿಷ್ಯೆಯಾದ ಹೊನ್ನಮ್ಮನಿಗೆ ಯೋಗ್ಯಸಂಸ್ಕಾರ ಕೊಟ್ಟು ಅವಳಿಂದ ಅಪರೂಪವಾದ
ಕೃತಿ ಬರೆಯಿಸಿದನು. ಅರಸಿಯ ಊಳಿಗದಲ್ಲಿದ್ದು ಬುದ್ಧಿಯಿದ್ದರೂ ವಿದ್ಯೆಯಿಲ್ಲದ
ಹೆಂಗಸು 'ಚೆನ್ನಿಗ ಚಿಕದೇವರಾಯನ ಸಂಚಿಯ ಹೊನ್ನಮ್ಮ'ನಾಗಿ ರಾಯನ
ಪ್ರೇರಣೆಯಿಂದ ಸಿಂಗರಾರ್ಯನಲ್ಲಿ ವ್ಯಾಸಂಗಮಾಡಿ 'ಹದಿಬದೆಯ ಧರ್ಮ'ವೆಂಬ
ನೀತಿಕಾವ್ಯ ಬರೆದದ್ದು ಕನ್ನಡಸಾಹಿತ್ಯಚರಿತ್ರೆಯಲ್ಲಿ ಸೋಜಿಗದ ಸಂಗತಿಯೇ ಸರಿ
ನಮ್ಮ ನಾಡಿನಲ್ಲಿ ಹೆಂಗಳೆಯರು ಕವಿಯಿತ್ರಿಯರೂ ಲೇಖಕಿಯರೂ ಹೆಚ್ಚಾಗಿ ಹಿಂದೆ
ಆಗದಿರಲು ಅವರಲ್ಲಿ ಪ್ರತಿಭೆ-ಮೇಧಾಶಕ್ತಿಗಳು ಇರಲಿಲ್ಲವೆಂಬುದಲ್ಲ. ಅವರ ವ್ಯಕ್ತಿತ್ವ
ವಿಕಾಸಕ್ಕೆ ಸೌಕರ್ಯಗಳು ದೊರೆಯಲಿಲ್ಲವೆಂಬುದು ಮುಖ್ಯಕಾರಣ. ಹೊನ್ನಮ
ಚಿಕದೇವರಾಯನ ಕೃಪಾರಸದಿಂದ 'ಕಬ್ಬೊನ್ನು ಚೆಂಬೊನ್ನಾದಂತೆ' ಆಗಿ ಬೆಲೆ
ಯುಳ್ಳ ಕೃತಿಯೊಂದನ್ನು ರಚಿಸಿದ ಕಥೆ ಹೆಂಗಳೆಯರ ವಿಕಾಸಕ್ಕೆ ಅನುವುಮಾಡಿ
ಕೊಟ್ಟರೆ ಏನು ಸಾಧ್ಯ ಎಂಬುದಕ್ಕೆ ನಿದರ್ಶನವಾಗಿದೆ. ಹೊನ್ನಮ್ಮನ ಚರಿತ್ರೆ
ತಿಳಿಯಬೇಕಾದಷ್ಟು ತಿಳಿದಿಲ್ಲ. 'ಹದಿಬದೆಯ ಧರ್ಮ'ವನ್ನು ಬರೆಯಲು ವ್ಯಾಸಂಗ
ಬಲದಿಂದ ಅವಳು ಅರ್ಹತೆಪಡೆದಳೋ, ಅಂಥ ಜೀವನವನ್ನು ನಡೆಸಿದಳೋ ಎಂಬುದು
ಸ್ಪಷ್ಟವಾಗಿಲ್ಲ. ಚಿಕದೇವರಾಯನ ಅಂತಃಪುರದಲ್ಲಿ ಬಹುಶಃ 'ಬಂಗಾರ'ದವಳಾಗಿ
ಅವಳು ಸ್ಥಾನಪಡೆದಿದ್ದಳೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದು ನಿಜವಾಗಿದ್ದ
ಸ್ವಾನುಭವದಿಂದೆಂಬಂತೆ ಅವಳು ಹದಿಬದೆಯ ಧರ್ಮವನ್ನು ವಿವರವಾಗಿ ಬಣ್ಣಿಸಿರು
ವುದು ಸಾಹಿತ್ಯಪ್ರಾಂತದಲ್ಲಿ ಒಂದು ಗೂಢವಾಗಿ ತೋರುತ್ತದೆ. 'ಹದಿಬದೆಯ
ಧರ್ಮ' ಎಂಬ ವಿಷಯವೇ ಕನ್ನಡಕ್ಕೆ ಹೊಸದು. 'ಪದಿನೆಂಟು ಬಣ್ಣನೆಯೆಂಬ
ಬಣಣೆಗೊಂಡು ಪದಗೆಟ್ಟು ಬಯಲ ಬಣ್ಣಿಸದೆ' (೧-೩೫) ಹದಿಬದೆಯ ಧರ್ಮ

ಬಣ್ಣಿಸುವೆನೆಂದು ಅವಳು ಧೈರ್ಯವಾಗಿ ಹೇಳಿದ್ದಾಳೆ. ಇದರಲ್ಲಿ ಕಥಾಸಕ್ತಿ ...ಬುದಿಲ್ಲ, ಉದಾಹರಣೆಗಾಗಿ ಅಲ್ಲಲ್ಲಿ ಚಿಕ್ಕ ಕಥೆಗಳನ್ನು ಹೇಳಿದೆ. ರಾಮಾಯಣ, ...ತ, ಮನ್ವಾದಿಧರ್ಮಶಾಸ್ತ್ರದಲ್ಲಿ ಹೇಳಿದ ಸತೀಧರ್ಮವನ್ನು ಹೇಳುವುದೇ ಇದರ ...ೇಶ. 'ಬಲ್ಲರಿಂದಾನು ಕೇಳಿದುದಕೆ ಪೆರ್ಚಕುಂದಿಲ್ಲದಂತೆಚ್ಚರುಗೂಡಿ। ಎಲ್ಲರು-...ವಂತೆಳವಾತುಗಳಿಂದೆ ಸೊಲ್ಲಿಸುವೆನು ಸೊಗಸುವೊಲು' (೧-೩೮) ಎಂದು ...ನ್ನಮ್ಮ ವಿನಯಪೂರ್ವಕವಾಗಿ ಅಂದಿದ್ದಾಳೆ. ಇದರಲ್ಲಿ ಬಂದಿರುವ ಪತಿವ್ರತಾ-...ರ್ದ ನಿಯಮಗಳು, ಭಾರತೀಯ ಸ್ತ್ರೀಯ ಸ್ಥಾನಮಾನದ ವರ್ಣನೆಗಳು, ...ಾಹರಣರೂಪವಾದ ಕಥೆಗಳು, ಶ್ರೀವೈಷ್ಣವತತ್ವಗಳು ಇವನ್ನೆಲ್ಲ ಅವಳು ತಾನು ...ವ ಗ್ರಂಥಗಳಿಂದ ಎತ್ತಿಕೊಂಡಿದ್ದಾಳೆ. ಆದರೆ ಇವನ್ನು ಅನುವಾದಿಸುವ ಕಾಲಕ್ಕೆ ... ಅನುಭವದ ಮತ್ತು ಶೈಲಿಯ ಮುದ್ರೆಯೊತ್ತಿದ್ದಾಳೆ. ಅಲ್ಲದೆ ಹದಿಬದೆಯ ...ರ್ಮವನ್ನು ನೀತಿಗ್ರಂಥದಂತೆ ನೀರಸವಾಗಿ ಹೇಳಿಲ್ಲ. ಹದಿಬದೆ ತನ್ನ ಪತಿಯ ಕೂಡ ...ರಬೇಕು, ಅಗಲಿದಾಗ ಹೇಗಿರಬೇಕು, ಅತ್ತೆಮಾವಂದಿರು ಮತ್ತು ಉಳಿದ ...ಗದೊಡನೆ ಹೇಗೆ ನಡೆಯಬೇಕೆಂಬುದನ್ನು ಮಾದರಿನಡತೆಯ ಸರಸ ಚಿತ್ರವನ್ನು ...ಸಿದಂತೆ ಬಣ್ಣಿಸಿದ್ದಾಳೆ. ಇದರಿಂದಲೇ ಈ ಕೃತಿ ಕಾವ್ಯಸ್ವರೂಪವನ್ನು ತಾಳಿದೆ. ...ನ್ನು ವಿಶೇಷವಾಗಿ ೭ನೆಯ ಸಂಧಿಯಲ್ಲಿ ನೋಡಬೇಕು. ಇಲ್ಲಿ ವಿರಹಿಣಿಯಾದ ...ರ್ಶ ಸತಿಯ ಚಿತ್ರವನ್ನು ಹೊನ್ನಮ್ಮನು ಸರಳವಾಗಿಯೂ ಕಲ್ಪನಾರಮ್ಯವಾಗಿಯೂ ...ದ್ದಾಳೆ. ವಿರಹದಲ್ಲಿಯ ಉತ್ಕಂಠೆ-ನಿರೀಕ್ಷೆ, ಪತಿಯ ಪುನರಾಗಮನದಿಂದ ...ಟಾದ ಹರ್ಷ-ಪ್ರೀತಿ ಇವೆಲ್ಲ ಸೊಗಸಾಗಿ ನಿರೂಪಿತವಾಗಿವೆ. ಉದಾಹರಣೆಗೆ,

'ಬಾಗಿಲ ಬಳಿಗೆ ಬಂದಪನೆಂಬುದುಮನು-।
ರಾಗರಸದ ಲಹರಿಯೊಳು।
ಏಗೈವೆನೆಂಬುದರಿಯದವನಿಗಿದಿ-।
ರಾಗಿ ನಿಟ್ಟಿಸಿ ನಿಂದಿಹಳು॥' (೭-೪೦)

'ಪುಳಕದ ನೆವದಿಂದ ಪೊಣ್ಮುವ ಹರ್ಷದ।
ಬೆಳೆಗೈಗೆ ನೀರೆರೆವಂತೆ।
ತುಳುಕುವ ಸೊಗದಾಲಿನೀರ್ದೊರೆಯನು ತಂ-।
ದಿಳುಪುತವನ ನಿಟ್ಟಿಪಳು॥' (೭-೪೪)

...ಲ್ಲಿ ಅವಳ ಕವಿತಾಶಕ್ತಿ ಮೇಲ್ತರಗತಿಯದೆಂಬುದು ತಿಳಿಯುತ್ತದೆ.

ಹೊನ್ನಮ್ಮನ ಸತೀಧರ್ಮವಿಷಯಕವಾದ ವಿಚಾರಗಳೆಲ್ಲ ಸಾಂಪ್ರದಾಯಿಕ-...ುದು ದಿಟ. ಅದು ಅಪರಿಹಾರ್ಯವಾಗಿತ್ತು. ಆದರೆ ಸಂಪ್ರದಾಯದಲ್ಲಿಯೂ ...ವಾದದ್ದನ್ನು ಅವಳು ಎತ್ತಿ ತೋರಿದ್ದಾಳೆ.

'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ।
ಪೆಣ್ಣಲ್ಲವೆ ಪೊರೆದವಳು ।
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ।
ಕಣ್ಣುಕಾಣದ ಗಾವಿಲರು ॥' (೫–೭)

'ಕುವರನಾದೊಡೆ ಬಂದ ಗುಣವೇನದರಿಂದೆ ।
ಕುವರಿಯಾದೊಡೆ ಕುಂದೇನು ।' (೫–೮)

ಎಂಬ ರೂಢಿವಿರುದ್ಧವಾದ ಹೊಸ ಮಾತುಗಳನ್ನೂ ಹೇಳಿದ್ದಾಳೆ. ಸತೀಧರ್ಮದ
ಕೆಲವು ಕಡೆಗೆ ಪತಿಧರ್ಮವನ್ನೂ ಅವಳು ತಿಳಿಸಿರುವಳು. ೬ನೆಯ ಸಂಧಿಯಲ್ಲಿ
ತುಂಬ ಕಾವ್ಯಮಯವಾಗಿ ಬಂದಿದೆ.

'ಅರಿಯದ ಪೆಣ್ಣನಾದರಿಸಿಯಂಜಿಕೆಗಳ ।
ಪರಿವುಗೆಯ್ಯದೆ ಬಲ್ಮೆದೋರೆ ।
ತರಿಸಂದು ಮಳೆಗೆ ಬಾಯ್ದೆರೆವ ಚಾದಗೆಯೊಳು ।
ಬರಸಿಡಿಲೆರಗಿದಂತೆ ॥' (೬–೨೬)

'ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳಿಪದೆ ।
ಪಗೆಸಾಧಿಸಿ ಬಲ್ಮೆದೋರೆ ।
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ ।
ಬಗೆಯೆನಿಪುದು ಭಾವಿಪೊಡೆ ॥' (೬–೨೭)

ಈ ಮುಂತಾದ ಪದ್ಯಗಳನ್ನು ನೋಡಬೇಕು.

'ಹದಿಬದೆಯ ಧರ್ಮ'ದ ಶೈಲಿ ತಿರುಮಲಾರ್ಯ-ಸಿಂಗರಾರ್ಯರ ಪ್ರ
ದಿಂದಲೂ ಹೊನ್ನಮ್ಮನ ಸ್ವಂತ ಸತ್ವದಿಂದಲೂ ಮಾದರಿಯ ಅಚ್ಚಗನ್ನಡ
'ಎಲ್ಲರುಮರಿವಂತೆ ಎಳವಾತುಗಳಿಂದ' ಹೇಳಿದ ಸೊಲ್ಲಾಗಿದೆ. ಅವರಲ್ಲಿ ಬಿ
ಆದರೆ ಬಿಗಿಯಿಲ್ಲ. ಸಹಜಪ್ರಾಸವಿದೆ. ತಿಳಿಯಾದ ಓಟವಿದೆ. 'ಸರಸ
ವರದೇವತೆ' ಎಂಬ ಬಿರುದಿಗೆ ತಕ್ಕವಳೆನ್ನುವಂತೆ ಹೊನ್ನಮ್ಮ ಈ ನೀತಿಕಾ
ಪ್ರಾಸಾದಿಕವಾಣಿಯಿಂದ ಬರೆದಿದ್ದಾಳೆ. ಸಾಂಗತ್ಯರಚನೆಯೂ ಹೃದ್ಯವಾಗಿ

'ಈ ಮಹಿಮೆಯೊಳೆಸೆವಳ ಸಿಂಗಾರ್ಯನು ।
ದ್ದಾಮಕೃಪಾವೈಭವಕೆ ।
ಭೂಮಿಯೆನಿಸಿ ಸೆಗಳೆದ ಮ್ಮೆಮೆಯಿಂದಾಗಿ ।
ಮಹಾಕೃತಿ ಪೇಳಿದೆನು ॥'

ದು ಅವಳು ಹೇಳಿದಂತೆ ಕೃಪಾವೈಭವವೇನೊ ನಿಜ; ಕೃತಿ ಮಹಾಕೃತಿಯಲ್ಲ, ...ತಿ. 'ಈಕೆಯ ಗ್ರಂಥ ಓದಲು ಸುಲಭವಾಗಿದ್ದರೂ, ಮರೆಯಲು ಸುಲಭವಲ್ಲ'[1] ...ಬ ಮೆಚ್ಚಿಗೆಯ ಮಾತು ಸತ್ಯವಾಗಿದೆ. ಹೊನ್ನಮ್ಮನು ನೀಡಿದ ಈ ಗೃಹಿಣಿಯರ ...ಡಿ ಕನ್ನಡಸಾಹಿತ್ಯಕ್ಕೆ ಚಿರವಾದ ಕೊಡುಗೆ.

ಸಂಚಿಯ ಹೊನ್ನಮ್ಮನ ತರುವಾಯ ತುಸು ಮುಂದಿನ ಕಾಲದಲ್ಲಿ ಆಗಿಹೋದ ...ನ್ನೊಬ್ಬ ಕವಯಿತ್ರಿಯೆಂದರೆ ಹೆಳವನಕಟ್ಟೆ ಗಿರಿಯಮ್ಮ ಎಂಬವಳು. ಹೊನ್ನಮ್ಮ ...ಲ್ಲಿದ್ದ ಶಕ್ತಿಯನ್ನು ಗುರುಸಹಾಯದಿಂದ ಸಾಧನೆಮಾಡಿ ಬೆಳೆಸಿಕೊಂಡರೆ ...ಯಮ್ಮ ದೇವೋನ್ಮಾದದಲ್ಲಿ ಹುಟ್ಟಿ ಬೆಳೆದು ಆವೇಶಬಲದಿಂದ ತನ್ನ ಕೃತಿಗಳನ್ನು ...ಸಿರಬೇಕೆಂದು ತೋರುತ್ತದೆ. ವಿವಾಹಿತೆಯಾದರೂ ವೈರಾಗ್ಯಶೀಲಳಾಗಿ ಕೃಷ್ಣ-...ಯಲ್ಲಿ ತಲ್ಲೀನಳಾಗಿ ಅವಳು ಬಾಳಿದಳು. ಹಲವು ಪವಾಡಗಳನ್ನು ಮಾಡಿದ-...ದೂ ಖ್ಯಾತಿಯಿದೆ. 'ಚಂದ್ರಹಾಸನ ಕಥೆ, ಸೀತಾಕಲ್ಯಾಣ, ಉದ್ದಾಳಕನ ಕಥೆ, ...ಯ ಹಾಡುಗಳು' ಇವು ಅವಳ ಕೃತಿಗಳು. ಕವಿಚರಿತೆಯಲ್ಲಿ ಉಲ್ಲೇಖವಾಗಿರದ ...ಹ್ಮಕೊರವಂಜಿ' ಎಂಬುದೂ ಅವಳ ಕೃತಿಯಾಗಿರಬೇಕು. 'ಚಂದ್ರಹಾಸನ ಕಥೆ' ...ಂಗತ್ಯ ೫ ಸಂಧಿಗಳಲ್ಲಿದೆ. ಅದರ ಒಂದು ಪ್ರತಿಯ ಕೊನೆಗೆ 'ಶ್ರೀಮತ್ಪರಮ-...ಸಾರೂಢೆಗಳಾದ ನಿತ್ಯನಿರ್ಮಲಪರಮಾನಂದಹೃದಯೆಯರಾದ ಶ್ರೀ ಹೆಳವನಕಟ್ಟೆ ...ಗನಾಥಸ್ವಾಮಿಯ ಕರುಣವುಳ್ಳವರಾದ ಹೆಳವನಕಟ್ಟೆ ಗಿರಿಯಮ್ಮನವರು' ಎಂಬ ...ರ್ಣನೆಯಿಂದ ಅವಳು ಮುಟ್ಟಿದ ನೆಲೆ ಎಷ್ಟು ಎತ್ತರದ್ದು ಎಂಬುದು ತಿಳಿಯುತ್ತದೆ. ...ಮುಟ್ಟಿಗೆ ಅದರಲ್ಲಿ ಅತಿಶಯೋಕ್ತಿ ಇದೆಯೆಂದರೂ ಅವಳ ಜೀವನಯೋಗ್ಯತೆಗೆ ...ಧೆಯಿಲ್ಲ. ಅವಳ ಕೃತಿಗಳಲ್ಲಿ ಶುದ್ಧದೇಸಿಯ ಸರಳಸೌಂದರ್ಯವಿದೆ, ನಿರ್ವ್ಯಾಜ-...ದ ಭಾವನಾಶಕ್ತಿಯಿದೆ.

ದೇಸಿಪ್ರಧಾನವಾದ ಈ ಯುಗದಲ್ಲಿ ವೇದಾಂತತತ್ವಗಳನ್ನು ಜನಸಾಮಾನ್ಯಕ್ಕೆ ...ಂದಟ್ಟಾಗುವಂತೆ ತಿಳಿಸಿಹೇಳುವ ಪ್ರಯತ್ನಗಳು ನಡೆದವು. ಮಾಧ್ವ, ರಾಮಾನುಜ ...ಗಳನ್ನು ಈ ಬಗೆಯಲ್ಲಿ ವಿವರಿಸಿದ ಗ್ರಂಥಗಳನ್ನು ಹಿಂದೆ ಅವಲೋಕಿಸಿದ್ದೇವೆ. ... ಶಾಂಕರತತ್ವಜ್ಞಾನವನ್ನು ತಿಳಿಯಾಗಿ ನಿರೂಪಿಸಿದ ರಂಗನಾಥನ ಇಲ್ಲವೆ ...ಹಲಿಂಗರಂಗಕವಿಯ 'ಅನುಭವಾಮೃತ'ವನ್ನು ನೋಡಬೇಕು. ಇದರಲ್ಲಿ ...ಖಿಲವೇದಾಂತಾರ್ಥವನು ನಾ ಯುಕುತಿಯಲಿ ಸಂಗ್ರಹಿಸಿ ಹೇಳುವೆ ಸಕಲರಿಗೆ ...ವಂತೆ ಸುಲಭೋಪಾಯದಿಂದೊಲಿದು' (೧–೯) ಎಂದು ಗ್ರಂಥಕಾರನು ತನ್ನ ...ರೂಪಣಪದ್ಧತಿಯನ್ನು ಸೂಚಿಸಿದ್ದಾನೆ. 'ಸುಲಿದ ಬಾಳೆಯ ಹಣ್ಣಿನಂದದಿ' ...೫) ಮುಂತಾದ ಪ್ರಸಿದ್ಧ ಪದ್ಯದಲ್ಲಿ ಕನ್ನಡ ಶ್ರದ್ಧೆಯನ್ನು ತೋರಿದ್ದಾನೆ. ...ನುಭವಾಮೃತ'ದಲ್ಲಿ ಅಧಿಕಾರಲಕ್ಷಣ, ವೈರಾಗ್ಯ, ತ್ವಂಪದ, ತತ್‌ಪದ, ಅಸಿಪದ,

---

[1] ಡಿ. ಚಂಪಾಬಾಯಿ: ಹದಿಬದೆಯ ಧರ್ಮ, ಪೀಠಿಕೆ, ಪು. ೪೦

ಸಪ್ತಭೂಮಿಕೆ, ಪರಮಾತ್ಮ, ಮಾಯಾವಾದ, ಜೀವತ್ರಯ, ಜೀವನ್ಮುಕ್ತಿ, ನಿರ್ಗುಣ ರಾಧನೆ ಈ ವಿಷಯಗಳಲ್ಲಿ ಒಂದೊಂದಕ್ಕೆ ಒಂದು ಅಧಿಕಾರವಾಗಿ ವಿವರಣೆ ಬಂದಿ ಸಂಸ್ಕೃತವರಿಯದ ಕನ್ನಡಿಗನಿಗೆ ಅದ್ವೈತಮತದ ಪ್ರಮುಖತತ್ವಗಳನ್ನು ತಿಳಿ ಕೊಳ್ಳಲು ಇದರಷ್ಟು ತಿಳಿಯಾದ, ದೃಷ್ಟಾಂತಸಂಪತ್ತಿಯಿಂದ ಸೊಗಸಾದ ಗ್ರಂಥ ಇನ್ನೊಂದಿಲ್ಲ. ಸುಮಾರು ಪ್ರತಿಯೊಂದು ಪದ್ಯದಲ್ಲಿ ಉಚಿತವಾದ ಲೋಕಾನುಭ ಯುತವಾದ ಹೋಲಿಕೆಯಿರುತ್ತದೆ. ೨-೨೦, ೨೨, ೨೫ರಲ್ಲಿಯಂತೆ ಇಂಥ ಸಾದೃ ಗಳು ವಚನಸಾಹಿತ್ಯದಿಂದ ತೆಗೆದುಕೊಂಡವು ಇರಬಹುದು, ಬೇರೆ ಆಧಾರದಿ ಎತ್ತಿಕೊಂಡವೂ ಇರಬಹುದು. ಒಮ್ಮೊಮ್ಮೆ ಸಾದೃಶ್ಯಗಳ ಸಮಾನತೆ ಆಕಸ್ಮಿ ವಾಗಿರಲೂ ಬಹುದು. ಯಾಕೆಂದರೆ ಜನದ ಮಾತಿನಲ್ಲಿ ಎಂದಿನಿಂದಲೋ ಬೆರೆತುಕೊ ಕೆಲವು ಸಾಮತಿಗಳು ಎಲ್ಲ ಕಾಲದ ಕವಿಗಳಿಗೆ ಸಾಮಗ್ರಿಯನ್ನೊದಗಿಸುತ್ತವೆ.

> ‘ಇರುಳು ಮನೆಯಲಿ ಮಲಗಿ ನಿದ್ರೆಯ |
> ಭರದಲೆದ್ದವ ಮೆಲ್ಲಮೆಲ್ಲನೆ |
> ಕರದಿ ಕಂಬವ ಹುಡುಕಿ ತಡವರಿಸುತ್ತ ಭೀತಿಯಲಿ |
> ಹೊರಡುವನು ಪೂರ್ವಾನುಭವಸಂ- |
> ಸ್ಮರಣಸಾಧನಬುದ್ಧಿಯಿಂದೀ |
> ಪರಿಯ ಬುದ್ಧಿಯನರಿವರಿವೆ ನೀನೆಂದು ನಿಶ್ಚಯಿಸು ||’ (೩-೧೬

> ‘ಕೆಂಡ ಮನೆಯೊಳಗಿರಲು ಕತ್ತಲೆ- |
> ಯಂಡಲೆವುದಕ್ಷಿಗಳನಂತಾ |
> ಕೆಂಡದಲಿ ದೀವಿಗೆಯ ಬೆಳಗಲು ತಿಮಿರವಳಿವಂತೆ |
> ಪಂಡಿತನೆ ಪರಬೊಮ್ಮವಿದ್ದೂ |
> ಚಂಡಮಾಯೆ ವಿಜೃಂಭಿಸುತ್ತಲ- |
> ಖಂಡವಹ ಸುಜ್ಞಾನದೀಪವ ಬೆಳಗೆ ಲಯವಹುದು ||’ (೮-೩೦

‘ಮಣ್ಣ ಬೆನಕಗೆ ಮಜ್ಜನದೊಳೇ ತನ್ನ ಮರಣವದೆಂಬ ಗಾದೆಯಲಿನ್ನು ಮಾಯೆಗೆ ಮೂಲವನರಿಯೆ ಲಯವಹುದು’ (೮-೩೧) ಈ ಬಗೆಯ ಹೇರಳವಾದ ದೃಷ್ಟಾ ಗಳಿಂದ ಅತ್ಯಂತಗಹನವಾದ ಪ್ರಮೇಯವನ್ನೂ ತಿಳಿಹೇಳುವುದರಲ್ಲಿ ರಂಗನಾಥ ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ. ಭಗವದ್ಗೀತೆ, ಭಾರತ-ರಾಮಾಯಣ, ಶಾಂ ಭಾಷ್ಯ ಮುಂತಾದ ಗ್ರಂಥಗಳಿಂದ ಅವನು ಉಪಕೃತನಾಗಿರುವುದು ನಿಜ. ಆ ಅವನಲ್ಲಿ ಸ್ವತಂತ್ರವಾದ ಲೋಕಾನುಭವಪೂರ್ಣವಾದ ವಿವರಣಶಕ್ತಿಯಿದೆ, ಕವಿ ಶಕ್ತಿಯಿದೆ ಎಂಬುದನ್ನು ಅರಿತು ಮೆಚ್ಚಬೇಕು. ‘ಹರಿಕಥಾಮೃತಸಾರ’ದಲ್ಲಿ ದ್ವೈ ಮತವು ಭಾಮಿನಿಷಟ್ಪದಿಯಲ್ಲಿಳಿದಂತೆ ಇಲ್ಲಿ ‘ಅನುಭವಾಮೃತ’ದಲ್ಲಿ ಅದ್ವೈತಮ

ಅದೇ ರೂಪದಲ್ಲಿ ಅವತರಿಸಿದೆ. ಎರಡರಲ್ಲಿಯೂ ಸಾದೃಶ್ಯಸಂಪತ್ತಿಯಿದೆ. ಆದರೆ ಜಗನ್ನಾಥದಾಸನ ಭಕ್ತಿನಿರ್ಭರತೆ ಇಲ್ಲಿಲ್ಲ, ರಂಗನಾಥನ ಪ್ರಸನ್ನತಾತ್ವಿಕತೆ ಆ ಗ್ರಂಥದಲ್ಲಿಲ್ಲ. 'ಹರಿಕಥಾಮೃತಸಾರ'ವು ಕೆಲವು ಕಡೆ ಕ್ಲಿಷ್ಟವೂ ಜಡವೂ ಆಗಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ.

'ಅನುಭವಾಮೃತ'ವನ್ನು ಬಹಳ ಮಟ್ಟಿಗೆ ಅನುಸರಿಸಿ ೧೮ನೆಯ ಶ.ದ ಮಧ್ಯದಲ್ಲಿ ಚಿದಾನಂದಾವಧೂತನು 'ಜ್ಞಾನಸಿಂಧು' ಎಂಬ ದೊಡ್ಡ ಗ್ರಂಥವನ್ನು ಭಾಮಿನಿಷಟ್ಪದಿಯಲ್ಲಿ ಬರೆದನು. ಅದರಲ್ಲಿ ಅದ್ವೈತವೇದಾಂತವು ವಿಸ್ತಾರವಾಗಿ ನಿರೂಪಿಸಲಾಗಿದೆ. 'ತಾನೆ ತನ್ನನು ತಿಳಿದು ತಾನೇ ತಾನಾಗಿಯೇ ತನ್ನಯನುಭವ ತುಂಬಿಕೊಂಡಿರಲು ಜ್ಞಾನಸಿಂಧುವು ಎಂಬ ಪೆಸರಾಯ್ತು' ಎಂದೂ ಅದರಲ್ಲಿ 'ಸರ್ವಶಾಸ್ತ್ರಾರ್ಥವನು ಪೇೞುಹೆ ಸರ್ವಗೀತಗಳರ್ಥಸಾರವನಿದಱೊಳುಸಿರಿರ್ಪೆಂ' ಎಂದೂ ಕವಿ ಹೇಳಿದ್ದಾನೆ. ನಿರೂಪಣೆಯ ಸರಣಿ ರಂಗನಾಥನದೇ ಆಗಿದೆ. ಹೀಗೆ ಅವನ ಪ್ರಭಾವವನ್ನು ಗುರುತಿಸಬಹುದು.

ಇಲ್ಲಿಯ ವರೆಗೆ ಈ ಯುಗದಲ್ಲಿ ವೈದಿಕಪರಂಪರೆಯಲ್ಲಿ ವಿಧವಿಧವಾದ ಗ್ರಂಥಗಳನ್ನೂ ಕೀರ್ತನೆಗಳನ್ನೂ ರಚಿಸಿ ಕನ್ನಡವಾಙ್ಮಯಕ್ಕೆ ತಮ್ಮ ಕಾಣಿಕೆಗಳನ್ನು ಸಲ್ಲಿಸಿದ ಗ್ರಂಥಕಾರರ ಮತ್ತು ದಾಸರ ಸಾಹಿತ್ಯವನ್ನು ಸಮಾಲೋಚಿಸಿದೆವು. ಈ ಪರಂಪರೆಯ ಲೇಖಕರಲ್ಲಿ ಕನ್ನಡದಲ್ಲಿ ನಂಬಿಕೆ ಹೇಗೆ ಬೆಳೆಯಿತು, ನೆಲೆಗೊಂಡಿತು ಎಂಬುದಕ್ಕೆ ಈ ಸಮಾಲೋಚನೆ ಸಾಕಷ್ಟು ನಿದರ್ಶನವಾಗಬಹುದೆಂದು ನಂಬಿರುತ್ತೇವೆ.

೨೮. ಈ ಯುಗದ ವೀರಶೈವಸಾಹಿತ್ಯ (೧)

ಈ ಯುಗದಲ್ಲಿ ಎರಡನೆಯ ವಿಭಾಗ ವೀರಶೈವಸಾಹಿತ್ಯಕ್ಕೆ ಸಂಬಂಧಪಟ್ಟಿದು. ಹಿಂದೆ ಹೇಳಿದಂತೆ ವೀರಶೈವಪುನರುಜ್ಜೀವನವು ದೊಡ್ಡ ಪ್ರಮಾಣದಲ್ಲಿ ನಡೆಯಿತು. ಅದರ ಪರಿಣಾಮವಾಗಿ ವೀರಶೈವಸಾಹಿತ್ಯವು ನಾನಾಮುಖವಾಗಿ ಬೆಳೆಯಿತು. ವಿಜಯನಗರಸಾಮ್ರಾಜ್ಯದ ಕಾಲದಲ್ಲಿಯೇ ಹೆಚ್ಚಾಗಿ ಅದು ನಿರ್ಮಾಣವಾಯಿತು. ವಿಜಯನಗರಸಾಹಿತ್ಯದಲ್ಲಿ ವೈದಿಕಸಾಹಿತ್ಯದಷ್ಟೆ ಅದಕ್ಕೆ ಮಹತ್ವವಿದೆ. 'ಈ ಕಾಲದ ಸಾಹಿತ್ಯವನ್ನು (೧) ಶೈವಪುರಾಣಗಳಿಂದ ಉದ್ಧೃತವಾದ ಕಥೆಗಳು, (೨) ಅರುವತ್ತು ಮೂವರು ಪುರಾತನರು ಮುಕ್ತಿಪಡೆದ ವಿಧಾನವನ್ನು ವಿವರಿಸುವ ಕಥೆಗಳು, (೩) ನೂತನ ಪುರಾತನರೆಂದು ಕರೆಸಿಕೊಂಡ ಬಸವ ಮತ್ತು ಅವನ ಸಮಕಾಲೀನರ ಕಥೆಗಳು, (೪) ನೂತನರ ಕಥೆಗಳು, (೫) ವೀರಶೈವರ ಅನೇಕ ಕಥೆಗಳನ್ನು ಒಳಗೊಂಡಿರುವ ಗ್ರಂಥಗಳು ಎಂದು ಐದು ಭಾಗವಾಗಿ ವಿಂಗಡಿಸಬಹುದು'[1] ಎಂದು ಹೇಳಲಾಗಿದೆ. ಇನ್ನಿಷ್ಟು ವ್ಯಾಪಕವಾಗಿ ನೋಡಿದರೆ ಈ ಯುಗದ ವೀರಶೈವಸಾಹಿತ್ಯವನ್ನು ವಚನ-ಸಂಕಲನ ಮತ್ತು ಸಂಪಾದನೆ, ವಚನಗಳ ಟೀಕೆ-ಟಿಪ್ಪಣಿ, ನವೀನವಚನಗಳು, ವೀರಶೈವಶಾಸ್ತ್ರಸಂಬಂಧಿ ಗ್ರಂಥಗಳು, ವೀರಶೈವಕೋಶರೂಪಪುರಾಣಗಳು, ಪುರಾತನ-ನೂತನ ಶರಣಚರಿತ್ರೆಗಳು, ತಾತ್ವಿಕಪದಗಳು, ಶೈವಪುರಾಣದಿಂದ ಎತ್ತಿ-ಕೊಂಡ ಕಥೆಗಳು, ಲೌಕಿಕ ಮತ್ತು ಶಾಸ್ತ್ರೀಯಗ್ರಂಥಗಳು, ನೀತಿಪದ್ಯಗಳು, ತಾತ್ವಿಕ ಮತ್ತು ಭಕ್ತಿಪರವಾದ ಶತಕಗಳು ಈ ಮುಂತಾಗಿ ವಿಷಯಾನುಗುಣವಾಗಿ ವಿಭಾಗಿಸ-ಬಹುದು. ರೂಪ ಇಲ್ಲವೆ ಛಂದಸ್ಸಿನ ದೃಷ್ಟಿಯಿಂದ ಷಟ್ಪದಿಯೇ ಪ್ರಮುಖವಾಗಿದೆ; ವಚನ-ಇತರ ಗದ್ಯ, ಸಾಂಗತ್ಯ, ತ್ರಿಪದಿ, ಅಕ್ಷರವೃತ್ತ, ಕ್ವಚಿತ್ತಾಗಿ ಚಂಪು, ಗೀತೆ ಇವುಗಳಿಗೆ ಇಂಬುದೊರೆತಿದೆ.

ಈ ಯುಗದ ರಾಜಕವಿ ದೇಪರಾಜನು ವೀರಶೈವನಹುದೋ ಅಲ್ಲವೋ, ಶೈವ-ನೆಂಬುದು ದಿಟ. ತಾನು ಸಂಗಮವಂಶದ ಕಂಪಸುತನೆಂದು ಅವನು ಹೇಳಿಕೊಂಡಿ-ದ್ದಾನೆ. ಬುಕ್ಕರಾಯನ ಮೊಮ್ಮಗನಾಗಿ ೧೫ನೆಯ ಶ.ದ ಮೊದಲಲ್ಲಿರಬೇಕೆಂದು ಊಹಿಸಲಾಗಿದೆ. ಇವನ 'ಸೊಬಗಿನ ಸೋನೆ', 'ಸುರಭಾವತಿ' ಮುಂತಾದ ಏಳು ಕಥೆಗಳ ಸಂಗ್ರಹ, ಸಾಂಗತ್ಯದಲ್ಲಿ ಬರೆದಿದೆ. ಹದಿನೆಂಟು ವರ್ಣನೆಗಳ ವ್ಯಾಮೋಹ, ಶಬ್ದಶ್ಲೇಷಪ್ರೀತಿ ಈ ಮುಂತಾದ ಸಾಂಪ್ರದಾಯಿಕ ಕಾವ್ಯಲಕ್ಷಣಗಳನ್ನು ಇವನಲ್ಲಿ ಕಾಣಬಹುದು. ಶೈಲಿಯೂ ಬಹುಮಟ್ಟಿಗೆ ಹಳಗನ್ನಡವಾಗಿದೆ. ಸಾಂಗತ್ಯದ ಜಾನಪದಧಾಟಿಯಲ್ಲಿ ಬಿಗುವುಳ್ಳ ಹಳಗನ್ನಡಪ್ರಯೋಗಗಳನ್ನು ಹೆಣೆದ ಮೂಲಕ ಲಯವು ಅಲ್ಲಲ್ಲಿ ಕುಂಠಿತವಾಗುತ್ತದೆ. ಉದಾಹರಣೆಗೆ,

---

[1] ಡಿ. ಎಲ್. ನರಸಿಂಹಾಚಾರ್: ವಿಜಯನಗರಕಾಲದ ಕನ್ನಡಸಾಹಿತ್ಯ (ಪ್ರ.ಕ., ೨೨-೪, ಪು. ೧೫)

‘ ಪುಳಕಿಸಿ ಮುತ್ತುಗಳಿಂ ರಾಗಿಸಿ ಕೆಂಬ- |
ವಳವಳ್ಳಿಯಿಂ ನೊರೆಯಿಂ ನಕ್ಕು ||
ವಳಿಗೈಯಿಂ ತಟಿಕ್ಕೈಸಲುರ್ವುವೊಲಬ್ಧಿ |
ಬಳೆವುದು ತಿಂಗಳೊಗೆಯಲಾಗ || ’[1]

ಈ ಪದ್ಯವನ್ನು ನೋಡಬೇಕು. ದೇಪರಾಜನ ಕಲ್ಪನಾಶಕ್ತಿ ಗಣ್ಯವೆಂಬುದನ್ನು ಈ ಪದ್ಯ ತೋರಿಸುತ್ತದೆ. ಶೈಲಿ–ಛಂದಸ್ಸುಗಳ ದೃಷ್ಟಿಯಿಂದ ಬಹುಶಃ ಇವನೇ ಮೊದಲನೆಯ ಸಾಂಗತ್ಯಕಾರನೆಂದೂ ಶಿಶುಮಾಯಣನು ತರುವಾಯದವನೆಂದೂ ತಾತ್ಪೂರ್ತಿಕವಾಗಿ ತಿಳಿಯಬಹುದು. ಕಾಲದೃಷ್ಟಿಯಿಂದಲೂ ಇವನು ೧೫ನೆಯ ಶ.ದ ಪೂರ್ವಾರ್ಧದವನಾದರೆ ಶಿಶುಮಾಯಣನು ಉತ್ತರಾರ್ಧದಲ್ಲಿದ್ದವನೆಂದು ಊಹಿಸಲು ಅವಕಾಶವಿದೆ. ಇವನ ಎರಡನೆಯ ಗ್ರಂಥವು ‘ ಅಮರುಕಶತಕ ’ವೆಂಬ ಸಂಸ್ಕೃತಕಾವ್ಯದ ಭಾಷಾಂತರ. ಪ್ರಣಯ ಚಿತ್ರಗಳನ್ನು ಬಿಡಿಬಿಡಿಯಾದ ಅಕ್ಷರವೃತ್ತಗಳಲ್ಲಿ ಬಿಡಿಸಿದ ಮೂಲವನ್ನು ದೇಪರಾಜನು ಪರಿವರ್ಧಿನಿಷಟ್ಪದಿಯಲ್ಲಿ ಕನ್ನಡಿಸಿದ್ದಾನೆ. ಇದಕ್ಕೂ ಮೊದಲು ಕುಮುದೇಂದು, ಕುಮಾರಪದ್ಮರಸರ ನಾನಾಷಟ್ಪದಿಗಳಲ್ಲಿ ಪರಿವರ್ಧಿನಿಗೆ ಸ್ಥಾನದೊರೆತಿದ್ದರೂ, ಪರಿವರ್ಧಿನಿಯಲ್ಲಿಯೇ ರಚಿಸಲಾದ ಇಡಿಯ ಗ್ರಂಥ ಇದೇ ಮೊದಲನೆಯದೆಂದು ತೋರುತ್ತದೆ. ಛಂದೋರಚನೆ ಅಷ್ಟು ಹಿತವಾಗಿಲ್ಲವೆಂಬುದಕ್ಕೆ

‘ ಸ್ಮರರಾಜ್ಯದ ವೈಸಿರಿ ಶೃಂಗಾರದ |
ಶರನಿಧಿ ರತಿನಾಟ್ಯದ ರಂಗಸ್ಥಳ |
ವಿರಹದ ನೆಲೆವೀಡೋಪರ ಕೂರಾಟದ ಕೊಸರಿನ ಗೊತ್ತು ||
ಸರಸರ ಸಂತವಣೆಯ ಮನೆ ಸುಗ್ಗಿಯ |
ಪೊರೆವಾಗರ ಭಾವಾಲಯವಪ್ಪಂ- |
ತಿರೆ ಪೇಳ್ದನಮರುಕವನು ದೇಪಮಹೀಪತಿ ಕನ್ನಡಿಸಿ || ’

ಈ ಪದ್ಯ ಉದಾಹರಣೆಯಾಗಿದೆ.

ಈ ಕಾಲದ ವಚನಸೃಷ್ಟಿ

ಬಸವೇಶ್ವರನ ಕಾಲದಲ್ಲಿ ವಚನಗಳು ಶರಾವತಿಯ ಪ್ರವಾಹದಂತೆ ತುಂಬಿಕೊಂಡು ಬಂದುವು. ಆದರೆ ಒಮ್ಮಿಂದೊಮ್ಮೆಲೆ ರೂಪಗೊಳ್ಳುತ್ತಿದ್ದ ಸಂಘಟನೆ ಒಡೆಯಿತು. ವಚನಗಳ ಪ್ರವಾಹ ಹತ್ತು ಕಡೆಗೆ ಹರಿದು ತಡಸಲಾಗಿ ಬೀಳತೊಡಗಿತು. ತೇಜೋಗರ್ಭವಾದ ಈ ಜಲವನ್ನು ಸಂಗ್ರಹಿಸಿ ತೇಜಸ್ಸನ್ನು ಹೊರಗೆಡಹುವ ಕಾರ್ಯವು

1 ಆರ್. ನರಸಿಂಹಾಚಾರ್ : ಕವಿಚರಿತೆ, ಸಂ. ೨, ಪು. ೪೪.

ವಿಜಯನಗರಕಾಲದ ಶಿವಶರಣರಿಗೆ ವಿೂಸಲಾಗಿತ್ತು. ವಿಶೇಷತಃ ಪ್ರೌಢದೇವರಾಯನ ಆಳಿಕೆಯಲ್ಲಿ ನೂರೊಂದು ವಿರಕ್ತರಾಗಿ ಹೋದರೆಂದೂ ಅವರು ಈ ಮಹಾಕಾರ್ಯವನ್ನು ಮಾಡಿದರೆಂದೂ ತಿಳಿಯುತ್ತದೆ. ಅವರಲ್ಲಿ ಮಹಾಲಿಂಗದೇವ, ಅವನ ಪ್ರಶಿಷ್ಯನಾದ ಜಕ್ಕಣಾರ್ಯ ಇವರನ್ನು ಮೊದಲು ನೆನೆಯಬೇಕು. ಮಹಾಲಿಂಗದೇವನು ಷಟ್ಸ್ಥಲ-ಸಿದ್ಧಾಂತದ ನೂರೊಂದು ನೆಲೆಗಳಲ್ಲಿ ವಚನಗಳನ್ನು ವಿಭಾಗಿಸಿ 'ಏಕೋತ್ತರಶತಸ್ಥಲ' ಎಂಬ ವಚನಸಂಕಲನವನ್ನು ರಚಿಸಿದನು. ಅವನು ದೊಡ್ಡ ಅನುಭಾವಿಯಾಗಿರ-ಬೇಕೆಂದು 'ಮಹಾಲಿಂಗದೇವರು ತಮ್ಮ ಪರಮಜ್ಞಾನಾನುಭವಪ್ರಸನ್ನಪ್ರಕಾಶದಿಂ' ಎಂಬ ಮಾತಿನಿಂದ ತಿಳಿಯುತ್ತದೆ. 'ಭಕ್ತಿಭಂಡಾರಿ' ಜಕ್ಕಣಾರ್ಯನಿಗೆ ಇದನ್ನು ಹೇಳುವುದಕೋಸ್ಕರ ಸಂಕಲನವನ್ನು ಮಾಡಿದ್ದೂ ತಿಳಿಯುತ್ತದೆ. ಈ ರೀತಿಯಾಗಿ ವಚನಗಳಿಗೆ ತಾತ್ವಿಕವ್ಯವಸ್ಥೆಯೊಂದು ಏರ್ಪಟ್ಟಿತು. 'ಪ್ರಭುದೇವರ ಷಟ್ಸ್ಥಳ-ಜ್ಞಾನಚಾರಿತ್ರವಚನದ ಟೀಕೆ' ಅಥವಾ 'ಷಟ್ಸ್ಥಲವಿವೇಕ' ಎಂಬುದು ಮಹಾಲಿಂಗ-ದೇವನ ಎರಡನೆಯ ಗ್ರಂಥ. ಇದರಲ್ಲಿ ವಚನಗಳಿಗೆ ಟೀಕೆ ಬರೆದು ವೀರಶೈವಸಿದ್ಧಾಂತ-ವನ್ನು ವಿವರಿಸುವ ಕ್ರಮವು ಮೊದಲಾಯಿತು.

ಜಕ್ಕಣಾರ್ಯನು ತನ್ನ ಗುರುವಿನಂತೆ ತಾನೂ 'ಏಕೋತ್ತರಸ್ಥಲ'ವನ್ನು ಬರೆದಿ-ದ್ದಾನೆ. ಮಹಾಲಿಂಗದೇವನ ಶಿಷ್ಯನಾದ ಕುಮಾರಬಂಕನಾಥನ ಕರಜಾತನೆಂದು ಇವನ ವರ್ಣನೆಯಿದೆ, ಆದರೂ ಮಹಾಲಿಂಗದೇವನು ಇವನಿಗೆ ಪ್ರತ್ಯಕ್ಷಗುರುವಾಗಿರ-ಬೇಕು. ಪ್ರೌಢದೇವರಾಯನಲ್ಲಿ ಇವನು ದಂಡನಾಯಕನಾಗಿದ್ದನು. ತನ್ನ ಶಕ್ತಿ-ಯನ್ನೂ ಸಂಪತ್ತಿಯನ್ನೂ ವೀರಶೈವಗ್ರಂಥಗಳ ರಚನೆಗಾಗಿ ಇವನು ಸೂರೆಮಾಡಿರ-ಬೇಕು. 'ಅವನೆ ನಿರೂಪಿಸಿದ ಪುರಾತನರ ಮಹಾವಚನಂಗಳೊಳಗೆ ಜಕ್ಕಣಾರ್ಯರು ಸಾರಾಯವಾದ ನೂಱೊಂದು ಸ್ಥಲವಚನಂಗಳಂ ತೆಗೆದುಕೊಂಡು ಸೂತ್ರವಿಟ್ಟು ಸಂಗ್ರಹಿಸಿದರು' ಎಂದು ಇವನ ಗ್ರಂಥಾರಂಭದಲ್ಲಿದೆ. ಮಹಾಲಿಂಗದೇವನಂತೆಯೆ ಷಟ್ಸ್ಥಲವಿವರಗಳುಳ್ಳ ಎರಡನೆಯ ಸಂಕಲನಗ್ರಂಥವಿದು. 'ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ'ದಲ್ಲಿ 'ವಸ್ತುಕವರ್ಣಕದಿಂದ ಸಂಗ್ರಹಿಸಿ' ಎಂದಿವರ ಬಗೆ ಹೇಳಿದೆ, ಅಲ್ಲದೆ ಪ್ರಭುದೇವರ ವಚನಗಳಿಗೂ ಸೂತ್ರಸ್ಥಲವಿಟ್ಟು ವ್ಯಾಖ್ಯಾನ ಮಾಡಿರುವುದಾಗಿ ಹೇಳಿದೆ. ನೂರಿನ್ನೂರು ವರ್ಷಗಳ ತರುವಾಯದ ಈ ಹೇಳಿಕೆಯಲ್ಲಿ ಸತ್ಯಾಂಶವೆಷ್ಟು ಎಂಬುದಿನ್ನೂ ತಿಳಿಯಬೇಕು. ಇನ್ನುಮುಂದೆ ವಚನಸಂಕಲನ ಮಾಡಿದವರಲ್ಲಿ ಕಲ್ಲಮಠದ ಪ್ರಭುದೇವ, ಗುಬ್ಬಿಯ ಮಲ್ಲಣ್ಣ, ಎಳಮಲೆಯ ಗುರು-ಶಾಂತದೇವ, ಸಂಪಾದನೆಯ ಚೆನ್ನಂಜೆದೇವ, ಸಿದ್ಧವೀರಣಾಚಾರ್ಯ, ಗೂಳೂರ ಸಿದ್ಧವೀರಣಾಚಾರ್ಯ ಇವರು ಪ್ರಮುಖರಾಗಿದ್ದಾರೆ. ಇವರಲ್ಲಿ ಕಲ್ಲಮಠದ ಪ್ರಭುದೇವನಂತೆ ಕೆಲವರು ಸಂಕಲನದೊಡನೆ ವ್ಯಾಖ್ಯಾನಮಾಡಿದ್ದಾರೆ, ಅಲ್ಲಮ-ಪ್ರಭುದೇವನ ಮಂತ್ರಗೋಪ್ಯದಂಥ ಕೃತಿಗಳಿಗೆ ಟೀಕೆ ಬರೆದಿದ್ದಾರೆ. 'ಲಿಂಗಲೀಲಾ-ವಿಲಾಸಚಾರಿತ್ರ' ಎಂಬ ತನ್ನ ಗ್ರಂಥದ ಆರಂಭದಲ್ಲಿ 'ಪುರಾತನರ ವಚನಂಗಳ

ಾರವಾದ ವಚನಂಗಳಂ ತೆಗೆದುಕೊಂಡು ಷೋಡಶಸ್ಥಲಪರಿಕ್ರಮದಿಂದ ಸೇರಿಸಿ ರ್ಥೈರ್ಯಸಿದ **ವಚನಾಗಮವಿದು** ' ಎಂದು ಕಲ್ಲಮಠದ ಪ್ರಭುದೇವನು ಹೇಳಿದ್ದಾನೆ. ೀಗೆ ವಚನಗಳ ಸಂಕಲನ ಮತ್ತು ನಿರ್ವಚನ ಇವೆರಡನ್ನೂ ಬೆರಸಿರುವುದರ ಮೂಲಕ ವಚನಾಗಮ ' ಎಂಬ ವಿಶೇಷರೂಪವು ಇಲ್ಲಿ ಕಾಣುತ್ತದೆ. ಗುಬ್ಬಿಯ ಮಲ್ಲಣ್ಣನು ನ್ನ 'ಗಣಭಾಷ್ಯರತ್ನಮಾಲೆ'ಯಲ್ಲಿ ವಚನಸಂಗ್ರಹಕ್ಕೆ ಇನ್ನೊಂದು ರೂಪ- ೊಟ್ಟಿದ್ದಾನೆ, ೧೦೧ ಸ್ಥಲಗಳಲ್ಲಿ ವೀರಶೈವರ ಆಚರಣೆಗಳನ್ನು ಸಂಗ್ರಹಿಸಿ ಅದಕ್ಕೆ ವೇದಾಗಮಪುರಾಣೇತಿಹಾಸಾದಿಗ್ರಂಥಗಳಿಂದ ಪ್ರಮಾಣಗಳನ್ನೂ ಪುರಾತನರ ನ್ನಡ ವಚನಗಳನ್ನೂ ಉದಾಹರಿಸಿ ವಿವರಿಸಿದ್ದಾನೆ.' ವೀರಶೈವಸಿದ್ಧಾಂತ ಮತ್ತು ಚಾರಧರ್ಮ ಇವೆರಡೂ ಉದಾಹೃತವಾಗುವಂತೆ ವಚನಗಳನ್ನು ಪೋಣಿಸಲಾಗಿದೆ. ಂಪಾದನೆಯ ಚೆನ್ನಂಜೆದೇವ ಮತ್ತು ಸಿದ್ಧವೀರಣಾಚಾರ್ಯ ಇವರು ಆಚರಣೆಯ ಂಬಂಧದ ಮತ್ತು ಬಸವಾದಿಗಳ ಸ್ತೋತ್ರದ ವಚನಗಳನ್ನು ಸಂಕಲನಮಾಡಿದ್ದಾರೆ. ಶೂನ್ಯಸಂಪಾದನೆ'ಯ ೫ ಸಂಕಲನಗ್ರಂಥಗಳಿರುವುವೆಂದೂ ಶಿವಗಣಪ್ರಸಾದಿ ುಹದೇವಯ್ಯ, ಕೆಂಚವೀರಣ್ಣೊಡೆಯ, ಕೆಂಚವೀರಣ್ಣೊಡೆಯ ಕಲ್ಮೇಶ್ವರರು ಸೇರಿ, ುಮ್ಮಳಾಪುರದ ಸಿದ್ಧಲಿಂಗಯತಿ, ಗೂಳೂರು ಸಿದ್ಧವೀರಣಾಚಾರ್ಯ ಇವರು ಅವನ್ನು ರೆದಿರುವರೆಂದೂ ತಿಳಿದಿದೆ (ಪ್ರಭುಲಿಂಗಲೀಲೆ, ಪೀಠಿಕೆ, ಪು. ೨೮-೯). ಇವರೆಲ್ಲರಲ್ಲಿ ವಚನಸಂಪಾದನೆಯನ್ನು ವ್ಯಕ್ತಿಮತ್ವಸೂಚಕವೂ ತತ್ವಬೋಧಕವೂ ನಾಟಕೀಯವೂ ಾದ ನವೀನ ಸಂವಾದರೀತಿಯಲ್ಲಿ ಮಾಡಿದವನು ಗೂಳೂರು ಸಿದ್ಧವೀರಣಾಚಾರ್ಯನು. ಅವನ 'ಶೂನ್ಯಸಂಪಾದನೆ' ಕನ್ನಡಸಾಹಿತ್ಯದಲ್ಲಿ ಶ್ರೇಷ್ಠಸಂಕಲನಗ್ರಂಥವಾಗಿದೆ. ಅದರ ಮಹತಿಯನ್ನು ಅಲ್ಲಮಪ್ರಭುದೇವನ ಸಂದರ್ಭದಲ್ಲಿ ತಿಳಿಸಲಾಗಿದೆ.

ಬಸವೇಶ ಎಂಬ ಸಂಕಲನಕಾರನು ತನ್ನ 'ಪದ್ಯೈಕೋತ್ತರಶತಸ್ಥಲ' ಎಂಬ ಾರ್ಥಕಷಟ್ಪದಿಯ ಗ್ರಂಥದಲ್ಲಿ ಶರಣರ ವಚನಗಳನ್ನು ಪದ್ಯರೂಪಕ್ಕೆ ತಿರುಗಿಸಿ ೊಸತನವನ್ನು ತೋರಿದ್ದಾನೆ. ವಚನಗಳನ್ನೂ ಶಿವಶರಣರ ಇತರ ಕೃತಿಗಳನ್ನೂ ವಿವರಿಸುತ್ತ ಟೀಕೆಟಿಪ್ಪಣಿಗಳನ್ನು ಈ ಯುಗದಲ್ಲಿ ಅನೇಕರು ಬರೆದಿದ್ದಾರೆ. ಸಂಕಲನದ ಜೊತೆಗೆ ವ್ಯಾಸಂಗ ಮತ್ತು ಆಧ್ಯಾತ್ಮಿಕಸಾಧನೆ ಗುರುಶಿಷ್ಯಪರಂಪರೆಯ ಮೂಲಕ ಅವ್ಯಾಹತವಾಗಿ ಮುಂದರಿಯಿತು. ಅದರ ಫಲವೇ ಟೀಕೆಟಿಪ್ಪಣಿಗಳುಳ್ಳ ಗ್ರಂಥರಚನೆ. ಂದೆ ಹೇಳಿದವರಲ್ಲದೆ ಶ್ರೀಗಿರೀಂದ್ರ, ೨ನೆಯ ಚೆನ್ನಬಸವ, ಉಜ್ಜೈನೀಶ, ಚೆನ್ನ- ಮಲ್ಲಿಕಾರ್ಜುನ, ಪರ್ವತಶಿವಯೋಗಿ, ಸೋಮಶೇಖರಶಿವಯೋಗಿ ಈ ಮುಂತಾ- ದವರನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಇವರಲ್ಲಿ ಕೊನೆಯ ಇಬ್ಬರು ಶಿವ- ಯೋಗಿಗಳು ಬರೆದ ಟೀಕೆಗಳು ಹೇರಳವೂ ಉಪಯುಕ್ತವೂ ಆಗಿರುತ್ತವೆ.

೧೨ನೆಯ ಶ.ದ ಮಧ್ಯದಲ್ಲಿ ಒಂದೇ ಹೊತ್ತಿಗೆ ತಲೆದೋರಿದ ನಕ್ಷತ್ರ- ಪುಂಜದಂತೆ ವಚನಕಾರರು ಉದಯವಾದರು. ಈ ಯುಗದಲ್ಲಿ ಅವರಿಂದ ಸ್ಫೂರ್ತಿ-

ಪಡೆದು ವೀರಶೈವಪುನರುಜ್ಜೀವನವನ್ನು ಮಾಡಿದ ಶರಣರೂ ಸಾಧಕರೂ ಅನೇಕರಾಗಿ ಹೋದರೂ ಸ್ವತಂತ್ರವಚನಕಾರರು ಹೆಚ್ಚು ಜನರಾಗಲಿಲ್ಲ. ಇಷ್ಟು ವಿಸ್ತಾರವಾದ ನಾಲ್ಕೈದು ಶತಕಗಳ ಅವಧಿಯಲ್ಲಿ ಐದಾರು ಜನ ಮಾತ್ರ ವಚನಕಾರರಾಗಿದ್ದಾರೆ. ಅವರಲ್ಲಿಯೂ ಬಸವಾದಿ ಶರಣರ ಅನುಕರಣವಿದೆ, ಸ್ವತಂತ್ರವೆನ್ನಬಹುದಾದ ತೇಜಸ್ಸು ಕಡಿಮೆ. ಅವರಲ್ಲಿ ಕೆಲವರ ಅನುಭಾವಿಕಸಿದ್ಧಿ ಉನ್ನತವಾದುದೆಂಬಲ್ಲಿ ಸಂಶಯವಿಲ್ಲ, ಆದರೆ ಅದನ್ನು ಸಾಹಿತ್ಯರೂಪಕ್ಕೆ ಇಳಿಸಿ ಹೇಳಬಲ್ಲ ಪ್ರತಿಭೆ ಅಸಾಧಾರಣವಲ್ಲ. ಅವರ ವಚನಗಳ ಗುಣವಿಶೇಷವನ್ನು ಮೆಚ್ಚಿಯೂ ಈ ಮಾತನ್ನು ಹೇಳಬಹುದು. ತೋಂಟದ ಸಿದ್ಧೇಶ್ವರನು ಅವರಿಗೆಲ್ಲ ಹಿರಿಯನು, ಗುರುಸ್ವರೂಪನು. ತೋಂಟದ ಸಿದ್ಧಲಿಂಗಯತಿ ಎಂಬ ಹೆಸರೂ ಅವನಿಗಿತ್ತು. ಅವನು ನಾಗಿಣೀನದಿಯ ತೀರದ ತೋಟದಲ್ಲಿ ಶಿವಯೋಗದಲ್ಲಿದ್ದುದರಿಂದ ಹಾಗೆ ಅವನಿಗೆ ಹೆಸರಾಯಿತು. ಎಡೆಯೂರಲ್ಲಿ ಅವನು ಸಮಾಧಿಹೊಂದಿದನು. ಅಂದಿನ ವೀರಶೈವ ಕೇಂದ್ರಗಳಲ್ಲಿ ಹಂಪೆಯೊಂದು, ಎಡೆಯೂರು ಇನ್ನೊಂದು ಎನ್ನುವಷ್ಟು ಇವನ ಸುತ್ತು ಶಿಷ್ಯಪರಿವಾರವು ನೆರೆಯಿತು. ವೀರಶೈವಸಿದ್ಧಾಂತವನ್ನು ಜೀವನದಲ್ಲಿ ಇಳಿಸಿ ವಚನರೂಪದಲ್ಲಿ ಹೊರಹೊಮ್ಮಿಸುವ ಹೊಸ ಅನುಭವಮಂಟಪವೊಂದು ತಲೆಯೆತ್ತಿತು. ಇವನನ್ನು ಕುರಿತು ಅನೇಕ ಚರಿತ್ರಗ್ರಂಥಗಳು ಹುಟ್ಟಿವೆ. ದಿವ್ಯಶಿವಯೋಗಿ, ಅಗಣಿತಮಹಾಪುರುಷ ಎಂದಿವನನ್ನು ಹೊಗಳಲಾಗಿದೆ. 'ಷಟ್ಸ್ಥಲಜ್ಞಾನಸಾರಾಮೃತ' ಎಂಬುದಿವನ ವಚನರೂಪವಾದ ಗ್ರಂಥ, ಇದರಲ್ಲಿ ೭೦೧ ವಚನಗಳು ೭ ವೃತ್ತಗಳಿವೆ. 'ಮಹಾಲಿಂಗಗುರುಶಿವ-ಸಿದ್ಧೇಶ್ವರಪ್ರಭು' ಇದು ಇವನಂಕಿತ. ವಚನಕಾರರ ಪರಂಪರೆಗನುಸರಿಸಿ ಷಟ್ಸ್ಥಲ-ನಿರೂಪಣೆ ಸ್ವಾನುಭವದಿಂದ ಪ್ರತೀತವಾಗಿ ಇಲ್ಲಿ ಅಭಿವ್ಯಕ್ತವಾಗಿದೆ. ಹಿಂದಿನ ಪ್ರಭಾವಗಳೂ ಸ್ವಾಭಾವಿಕವಾಗಿವೆ. 'ಕರಣದ ಕತ್ತಲೆಯ ಸದಮಲದ ಬೆಳಗನುಟ್ಟು ಪರಿಹರಿಸಬೇಕು ನೋಡಿರೋ. ಜವ್ವನದ ಹೊರಮಿಂಚ ಕಣ್ಣಿಗೆ ತೋರುವ ಕಾಮ-ಜಾಲಂಗಳ ಶಿವಜ್ಞಾನಾಗ್ನಿಯಲಿ ಸಿಕ್ಕಿ ಸುಟ್ಟುರುಪಿ ಭಸ್ಮವ ಧರಿಸಬಲ್ಲರೆ ಶರಣರೆಂಬೆ ಉಳಿದವರೆಲ್ಲ ಪುಸಿಯೆಂಬೆ ಕಾಣಾ' ಎಂಬುದು ಅಕ್ಕಮಹಾದೇವಿಯ 'ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ' ಮುಂತಾದ ವಚನವನ್ನು ಅನುವಾದಿಸಿದಂತಿದೆ. ಅನುವಾದವಲ್ಲದ ವಚನಗಳಲ್ಲಿ ಸ್ವಾನುಭಾವ, ಸ್ವತಂತ್ರನಿರ್ಮಾಣವಿದೆಯಾದರೂ ಹಿಂದಿನ ವಚನಕಾರರ 'ಶ್ರುತಿ' ಈ ಸಂಗೀತಕ್ಕೆ ಇದ್ದೇ ಇದೆ. ಅವರಿಂದ ಅಭಿವ್ಯಕ್ತ-ವಾದ ಭಾವದ ಇನ್ನೊಂದು ಛಾಯೆಯೆಂದು ತೋರುತ್ತದೆ. ಉದಾ: 'ಉದಯ ಕಾಲದೊಳೆದ್ದು ಹೂಪತ್ರೆಗಳ ಕೊಯ್ದೆಂದು ಹೊಜಿ ಉಪಚಾರ ಮಾಡುವುದೆಲ್ಲ ಬಱಿಯ ಭಾವದ ಬಟಲಿಕೆ ನೋಡಾ, ನಿತ್ಯತೃಪ್ತಂಗೆ ಹಸಿವಿನ ಭಯವುಂಟೆ?.... ಸ್ವಯಂಜ್ಯೋತಿಪ್ರಕಾಶವುಳ್ಳಾತನು ಚಂದ್ರಸೂರ್ಯಾದಿಗಳನಾಶ್ರಯಿಸುವನೆ? ತನ್ನ ತಾನರಿದು ತಾನೇ ತಾನಾದಾತನು ಮಾಯೆಯ ಗಜಬಜೆಯ ಹುಸಿಗೆ ಬೆದಱುವನೆ ಮಹಾಶರಣನು?' ಭಾವಾನುವಾದ, ಛಾಯಾನುವಾದವಿಲ್ಲದೆ ಇದ್ದ

ಹಲವು ವಚನಗಳು ಸೊಗಸಾಗಿವೆ, ತೋಂಟದ ಸಿದ್ಧೇಶ್ವರನ ಅನುಭವಸಿದ್ಧಿಗೂ ಸಾಹಿತ್ಯಶಕ್ತಿಗೂ ಸಾಕ್ಷಿಯಾಗಿವೆ. ಉದಾ : 'ತಾನೊಬ್ಬನು ಕೊಲುವರು ಹಲಬರು.... ಜಲಧಿಯ ಸಾಗರವ ದಾಂಟಿ ಅಮೃತಸಾಗರವ ಬೆರಸಿ ಅನುಪಮಸುಖಿಯಾನಯ್ಯ' ಎಂಬುದನ್ನು ಲಕ್ಷಿಸಬೇಕು. 'ಅವನ ವಚನಗಳು ಕಾವ್ಯದ ಕಾವಿಲ್ಲದೆ ಉಪದೇಶಾತ್ಮಕವಾಗಿ ಸಾಹಿತ್ಯದೃಷ್ಟಿಯಿಂದ ನೀರಸವಾಗಿವೆ. ಬಸವನೂ ಅವನ ಅನುಯಾಯಿಗಳೂ ಬರೆದ ವಚನಗಳೊಡನೆ ಹೋಲಿಸಿ ನೋಡಿದರೆ ಇವನ ವಚನಗಳು ನಿಕೃಷ್ಟವಾದವುಗಳೆಂದು ಹೇಳಬಹುದು.'[1] ಈ ವಿಮರ್ಶೆ ಅಷ್ಟು ಸಮರ್ಪಕವಾಗಿಲ್ಲ. ಇವನ ವಚನಗಳು ನೀರಸವಾಗಿಲ್ಲ, ತಕ್ಕಮಟ್ಟಿಗೆ ಸರಸವಾಗಿವೆ. ಬಸವಾದಿಗಳ ವಚನಗಳಷ್ಟು ಕಲ್ಪನಾಸಂಪತ್ತಿ-ಭಾವನಾಸಂಪತ್ತಿ ಇಲ್ಲವೆನ್ನಬಹುದು, ಆದರೆ ನಿಕೃಷ್ಟವೆನ್ನುವುದು ಅನ್ಯಾಯವಾಗುತ್ತದೆ.[2]

ತೋಂಟದ ಸಿದ್ಧೇಶ್ವರನ ತರುವಾಯ ಅವನ ಶಿಷ್ಯಂದಿರಲ್ಲಿ ಒಬ್ಬನಾದ ಸ್ವತಂತ್ರಸಿದ್ಧಲಿಂಗೇಶ್ವರನು ೪೦೦ರ ಮೇಲೆ ವಚನಗಳನ್ನು ಬರೆದಿದ್ದಾನೆ. ಸ್ವತಂತ್ರ ಎಂಬ ವಿಶೇಷಣವನ್ನು ತಾನೇ ಹಚ್ಚಿಕೊಂಡಿದ್ದರೂ ಇವನ ವಚನಗಳಲ್ಲಿ ಕೆಲವು ಹಿಂದಿನ ವಚನಕಾರರನ್ನು ನೆನಪಿಸುತ್ತವೆ. 'ಹಾವಡಿಗ ಹಾವನಾಡಿಸುವಲ್ಲಿ ತನ್ನ ಕಾದುಕೊಂಡು ಹಾವನಾಡಿಸುವನವನಂತೆ ಆವ ಮಾತನಾಡಿದರೂ ತನ್ನ ಕಾದು ಆಡಬೇಕು' ಎಂಬುದು ಅಕ್ಕಮಹಾದೇವಿಯ ಸುಪ್ರಸಿದ್ಧ ವಚನವನ್ನು ನೆನಪಿಗೆ ತರುತ್ತದೆ. ವಚನಸಮುಯುವೊಂದು ಬೆಳೆದು ಬಂದಿತ್ತೆನ್ನುವಂತೆ ಕೆಲವು ವಚನಗಳ ರಚನೆಯಿದೆ. ಇವನು 'ಮುಕ್ತ್ಯಂಗನೆಯ ಕಂಠಮಾಲೆ' ಎಂಬ ವಚನವನ್ನೂ 'ಜಂಗಮರಗಳೆ' ಎಂಬ ಪದ್ಯವನ್ನೂ ಬರೆದಿದ್ದಾನೆ. ಇವನ ಕವಿತಾಶಕ್ತಿಯನ್ನು ತಿಳಿಯಲು ಹೆಚ್ಚಿನ ಆಧಾರಗಳು ಬೇಕು. ಗುಮ್ಮಳಾಪುರದ ಸಿದ್ಧಲಿಂಗೇಶ್ವರನು ತೋಂಟದ ಯತಿಯ ಇನ್ನೊಬ್ಬ ಶಿಷ್ಯನಾಗಿ 'ಷಟ್ಸ್ಥಲ ಲಿಂಗಾಂಗಸಂಬಂಧವ ನಿರ್ವಚನ' ಎಂಬ

---

1 ಡಿ. ಎಲ್. ನರಸಿಂಹಾಚಾರ್ : ವಿಜಯನಗರಕಾಲದ ಕನ್ನಡಸಾಹಿತ್ಯ (ಪ್ರ.ಕ., ೨೨-೪, ಪು. ೨೧)

2 ಮೂಲತಃ ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಇಂಗ್ಲಿಷಿನಲ್ಲಿ ಬರೆದ ಲೇಖನದ ಈ ಭಾಗವು ಅನುವಾದದಲ್ಲಿ ಅಷ್ಟು ಸಮರ್ಪಕವಾಗಿಲ್ಲವೆಂದು ಅವರಿಂದ ತಿಳಿಯಿತು. ಆದ್ದರಿಂದ ಮೂಲದಲ್ಲಿಯ ವಾಕ್ಯಗಳನ್ನೇ ಇಲ್ಲಿ ಎತ್ತಿ ಕೊಡುತ್ತೇವೆ: "Of original writers Tontada Siddhalinga (C 1470), the nucleus of the movement, is easily the best. But his vachanas are cold and didactic and seldom give the glow of literature. When compared with the writings of Basava and his followers, his is a miserable performance."

ಹೆಸರಿನಲ್ಲಿ ೧೫ ಸ್ವಂತ ವಚನಗಳನ್ನು ಬರೆದಿದ್ದಾನೆ. ವಚನಗಳು ಹೆಚ್ಚಾಗಿ ಬೌದ್ಧಿಕ-ವಾಗಿವೆ, ವೀರಶೈವಸಿದ್ಧಾಂತವನ್ನು ಬೋಧಿಸುತ್ತವೆ. ಆದರೂ ಗುರುಕೃಪೆಯಿಂದ ಪಡೆದ ತುರೀಯಾನುಭವವು ಅವುಗಳಲ್ಲಿ ಮೂಡಿದೆ. ತೋಂಟದ ಸಿದ್ಧಲಿಂಗಯತಿಯ ಇನ್ನೊ ಒಬ್ಬ ಶಿಷ್ಯನೂ ತನ್ನ ಕಾಲಕ್ಕೆ ಪ್ರಸಿದ್ಧ ಪಂಡಿತನೂ ಆದ ಘನಲಿಂಗನು ವಚನಗಳನ್ನು ಬರೆದಿದ್ದಾನೆ. 'ಸುತ್ತೂರು ಸಿಂಹಾಸನದ....ಶರಣುವೆಣ್ಣಯ್ಯ ನಾನು' ಎಂದು ಹೇಳಿ 'ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ ತೋಂಟ-ದಾರ್ಯನಿಗೆ ಗುರುಭಕ್ತಿಯಿಂದ ಎನ್ನ ಶರಣುಮಾಡಿದರು' (೧೨) ಎಂದು ಗುರುಭಕ್ತಿ-ಯನ್ನು ತೋರಿದ್ದಾನೆ. ಇವನಲ್ಲಿ ಉತ್ಕಟವಾದ ಆರ್ತತೆಯಿದೆ, ಪ್ರಭಾವಿಯಾದ ವಾಣಿಯಿದೆ. ಪೂರ್ವದ ಅನುಕರಣವನ್ನು ಮೀರಿದ ಸ್ವತಂತ್ರಕಲ್ಪನಾಶಕ್ತಿಯೂ ಇದೆ. 'ಎನ್ನಾತ್ಮನದೊಂದು ಅರಸುತನದ ಅನ್ಯಾಯವ ಕೇಳಯ್ಯ ಗುರುವೇ' ಎಂಬ ಮೊದಲನೆಯ ವಚನರೂಪಕವನ್ನು ನೋಡಬೇಕು. 'ಇಂದ್ರಿಯ ವಿಕಾರವೆಂಬ ಹುಚ್ಚುನಾಯಿಗಳು ಕಚ್ಚಿ ಕಚ್ಚಿ ಒದರುತ್ತಿವೆ. ಸಾವನ್ನಬರ ಸರಸ ಉಂಟೇ ಲಿಂಗವೇ? ಅನ್ಯಸಮಯದ ಗುಮ್ಮಟನ ಕೈವಿಡಿದೆತ್ತಿಕೊಂಡು ನಿನ್ನ ಸಮಯದ ಶಿಶುವು ಬಾವಿಯಲ್ಲಿ ಬೀಳ್ವರೆ ನೋಡುತಿರ್ಪಿರೆ ಕರುಣಿ?' (೧), 'ಕುನ್ನಿಗೆ ರನ್ನದ ಹಲ್ಲಣ ಹಾಕಿದಂತೆ ಹಂದಿಯ ತಂದು ಅಂದಣವನೇರಿಸಿದಂತೆ ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ?' (೨), 'ನಿನ್ನ ನೆನೆನೆನೆದು ಎನ್ನ ಮನ ಬೀಗಿ ಬೆಳೆದು ತಳಿರಾಗಿ ಹೂಮಿಡಿಗೊಂಬುದಯ್ಯ. ನಿನ್ನ ಹಾಡಿ ಹಾಡಿ ಜಿಹ್ವೆ ಅಮೃತಸಾಗರದೊಳೋಲಾಡುತಿಪ್ಪುದಯ್ಯ' (೬), 'ದೇವಾ ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ ಮರ್ತ್ಯಲೋಕಕ್ಕೆ ಬಂದು ಮಾನವಜನ್ಮವ ಕಂಡೆ' (೧೫) ಈ ಮುಂತಾದ ವಚನಗಳಲ್ಲಿ ಘನಲಿಂಗನ ಘನವಾದ ಭಾವಶಕ್ತಿಯಿದೆ, ಮೇಲಾದ ಕಲ್ಪನಾಶಕ್ತಿಯಿದೆ. ಸತಿಪತಿಭಾವದರ್ಶಕವಾದ ಶರಣಾವಸ್ಥೆ ಅವನ ವಚನಗಳಲ್ಲಿ ಕೆಲವು ಸಲ ಕಾಣುತ್ತದೆ. ೧೨, ೧೩, ೧೪ ಈ ವಚನಗಳಲ್ಲಿ ಅದಕ್ಕೆ ನಿದರ್ಶನಗಳಿವೆ. 'ಅಯ್ಯಾ ಬಸವಾದಿ ಪ್ರಮಥರೇ ನಿಮ್ಮ ಕರುಣಪ್ರಸಾದವ ನಾನು ಆದಿ ಅನಾದಿಯಲ್ಲಿ ದಣಿಯಲುಂಡ ದೆಸೆಯಿಂದಲೆನ್ನ ತನು ಷಟ್‌ಸ್ಥಲವನೊಳಕೊಂಡು ಉದಯ-ವಾಯಿತ್ತು....ಎನ್ನ ಪ್ರಾಣ ಷಟ್‌ಸ್ಥಲಕ್ಕೆ ಸಲೆಸಂದ ಅಕ್ಕಮಹಾದೇವಿಯರು ಹೋದ ಬಟ್ಟೆಯಲ್ಲಿ ನಡೆವುದಲ್ಲದೆ, ಕಿರುಬಟ್ಟೆಯಲ್ಲಿ ನಡೆಯದು' (೪೫) ಇದರಲ್ಲಿ ಬಸವಾದಿಗಳ ವಿಷಯದಲ್ಲಿ ಅತ್ಯಂತ ಆದರವಿದೆ, ಉಪಕೃತಭಾವವಿದೆ, ಕಿರುಬಟ್ಟೆಯಲ್ಲಿ ನಡೆಯದೆ ಶರಣರು ತುಳಿದ ದೊಡ್ಡ ದಾರಿಯಲ್ಲಿ ನಡೆಯುವ ಹಂಬಲಿದೆ. ಆದರೆ ಘನಲಿಂಗನ ವಚನದಲ್ಲಿ ಭಾವಗೀತೆಯ ಮನೋಧರ್ಮವು ಪಾಂಡಿತ್ಯದಿಂದಲೂ ಗೂಢತೆಯಿಂದಲೂ ವ್ಯಗ್ರವಾಗಿ ಶುದ್ಧವಚನಪರಂಪರೆ ವಿರಳವಾಗಿ ತೋರಿದೆಯೆನ್ನಲು ಅಡ್ಡಿಯಿಲ್ಲ. 'ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ ಇಪ್ಪುದಲ್ಲದೆ ಮರ್ತ್ಯದ ಪಶುವಿನಲ್ಲಿ ಉಂಟೇ ಅಯ್ಯಾ' (೫೭) ಈ ಮುಂತಾದ ವಚನದಲ್ಲಿಯ ಭಾವಗೀತೆಯ ಸ್ವಯಂಪೂರ್ಣತೆ

ಹಾಗೂ ಸಂಕ್ಷಿಪ್ತತೆ ಅನೇಕ ವಚನಗಳಲ್ಲಿ ಕಾಣುವುದಿಲ್ಲ. ಅವು ಉದ್ದಾನುದ್ದವಾಗಿ ಬೆಳೆದಿವೆ. ಉದಾಹರಣೆಗೆ ೬, ೭, ೪೩, ೪೪ ಇವನ್ನು ನೋಡಬೇಕು. ಅವುಗಳಲ್ಲಿ ಒಂದು ರೂಪಕವು ವಿಸ್ತಾರವಾಗಿ ದಾಂಗುಡಿಬಿಟ್ಟಿರಬಹುದು, ಸಿದ್ಧಾಂತ ಇಲ್ಲವೆ ಅನುಭಾವವು ಬಿಡಿಬಿಡಿಯಾಗಿ ಬಂದಿರಬಹುದು. ೨೧ರಲ್ಲಿ ಆನೆಯನ್ನು ಕಂಡ ಕುರುಡರ ಕಥೆ ಒಂದು ವಚನವಾಗಿದೆ. ೨೯, ೩೦, ೩೧, ೩೨ರಲ್ಲಿ ಷಟ್‌ಸ್ಥಲ-ಸಿದ್ಧಾಂತವು ಪ್ರಧಾನವಾಗಿದೆ. ಇಂಥಲ್ಲಿಯೂ 'ಇದನರಿಯದೆ ಜ್ಞಾನಕ್ರಿಯೆಗಳಿಂದಾ-ಚರಿಸಿ ಲಿಂಗಾಂಗ ಸಂಯೋಗವಾಗದೆ, ಕೆರಹಿನಟ್ಟಿಗೆ ನಾಯಿ ತಲೆದೂಗುವಂತೆ ತಮ್ಮ ಅರುಹಿಂಗೆ ತಾವೆ ತಲೆದೂಗಿ ಅಹಂ ಬ್ರಹ್ಮವೆಂಬ ಚೌರಾಸಿ ಹೊಲೆಯರ ಎನಗೊಮ್ಮೆ ತೋರದಿರಯ್ಯ' (೩೦) ಎಂಬ ಆವೇಶಯುತವಾದ ವಾಕ್ಯಗಳಿವೆ. ಆದರೂ ಘನ-ಲಿಂಗನ ವ್ಯಕ್ತಿತ್ವದಲ್ಲಿ ಬುದ್ಧಿ–ಭಾವನೆಗಳ, ಪ್ರತಿಭೆ–ಪಾಂಡಿತ್ಯಗಳ ಸಮರಸವು ಪೂರ್ಣವಾಗಿರಲಿಲ್ಲವೆಂಬುದನ್ನು ಅವನ ವಚನಗಳು ಸೂಚಿಸುತ್ತವೆ. ಈ ಯುಗದ ಸಮರ್ಥ ವಚನಕಾರರಲ್ಲಿ ಅವನೊಬ್ಬನೆಂಬುದೂ ಅವುಗಳಿಂದ ತಿಳಿಯುತ್ತದೆ.

ಇನ್ನುಳಿದ ವಚನಕಾರರಲ್ಲಿ ಬೆಂಗಳೂರು ಮುದ್ದುವೀರಸ್ವಾಮಿ ಎಂಬವನ ಹೆಸರು ಕವಿಚರಿತೆಯಲ್ಲಿದೆ, ವಚನಗಳು ನೋಡಲು ದೊರೆತಿಲ್ಲ. 'ನಿರಾಲಂಬಶರಣ' ಎಂಬವನು ಬರೆದ ಅಖಂಡೇಶ್ವರವಚನಗಳು ಪ್ರಸಿದ್ಧವಾಗಿವೆ. ಇವನು ಕಲಬುರ್ಗಿಯ ಹತ್ತಿರದ ಜೀವರಗಿಯ ವಿರಕ್ತಮಠದ ಷಣ್ಮುಖಸ್ವಾಮಿಯೆಂದೂ ಸು. ೧೭೦೦ರಲ್ಲಿ-ದ್ದವನೆಂದೂ ತಿಳಿಯುತ್ತದೆ. ಇವನ ೭೧೭ ವಚನಗಳು ಮತ್ತು ೪೧ ಜೋಗುಳದ ಪದಗಳು ದೊರೆತಿವೆ. ವಚನಗಳಲ್ಲಿ ಷಟ್‌ಸ್ಥಲಗಳಿಗೆ ಅನುಗುಣವಾದ ಆತ್ಮಾವಿಷ್ಕಾರ-ವಿದೆ. ಜೊತೆಗೆ ಅಷ್ಟಾವರಣಗಳ ಮಹತ್ವವನ್ನೂ ಸ್ವರೂಪವನ್ನೂ ತಿಳಿಸುವ ಹೇರಳವಾದ ವಚನಗಳಿವೆ. ಅಖಂಡೇಶ್ವರ ವಚನಗಳಲ್ಲಿ ವೀರಶೈವ ಆಚಾರಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತದ್ದು ವಿಶಿಷ್ಟಲಕ್ಷಣವಾಗಿವೆ. ಒಟ್ಟಿನಲ್ಲಿ ಪ್ರಚಾರಭಾವನೆ, ಪರಿಣಾಮಕರವಾದ ಪುನರುಕ್ತಿ ಇವು ಅಂದಿನ ಕಾಲಕ್ಕೆ ಅಗತ್ಯವಾಗಿ ವಚನಗಳಲ್ಲಿ ಬಂದಿವೆ. ಈ ವಚನಗಳಲ್ಲಿ ತಿಳಿಯಾದ ಕಳಕಳಿಯಿದೆ, ಆತ್ಮಜ್ಞಾನದ ಕುರುಹಿದೆ. ಉದಾ: 'ಅನಂತಕಾಲ ಎನ್ನ ಒಡಲ ಮರೆಯೊಳಗೆ ಅಡಗಿರ್ದು ಎನಗೆ ಕಾಣಿಸದೆ ಇರ್ದುದು ಇದೇನು ನಿಮ್ಮ ಗಾರುಡವಯ್ಯ, ನೀವು ನಿಮ್ಮ ಕರುಣದಿಂದೆನ್ನ ಒಡಲ ಮರವೆಯ ಒಡೆದು ಎನ್ನ ಕಣ್ಣ ಮುಂದಣ ಸತ್ವರಜತಮದ ಪರದಿಯ ಹರಿಯಲೊಡನೆ ನಿಮ್ಮ ನಿತ್ಯದ ನಿಲವು ಕಂಡೆನಯ್ಯ ಅಖಂಡೇಶ್ವರಾ' (೨–೫). ಕಲ್ಪನೆಯ ರಭಸ ಮತ್ತು ಸೂಕ್ಷ್ಮತೆಗೆ, 'ಕೋಟಿಸಿಡಿಲು ಹೊಯ್ದಂತೆ ವಿಷ್ಣುಪ್ರಸೂತಿಯ ಗಾಳಿ ಬೀಸಲು ಅದ ಕಂಡು ಥರಥರನೆ ನಡುಗಿ ಧ್ಯಾನಪಲ್ಲಟವಾಗಿ ದಿಗ್ಭ್ರಮಣೆಗೊಂಡು ಊರ್ಧ್ವಮುಖವಾಗಿ ಕುಳಿತಿರ್ದ ಶಿಶುವು ಗಿರ್ರನೆ ತಿರುಗಿ ತಲೆಕೆಳಗಾಗಿ ಕರ್ತಾರನ ಕಂಬಚ್ಚಿನಲ್ಲಿ ಚಿನ್ನದ ಸಲಾಕೆಯ ತೆಗೆದಂತೆ ಬಚ್ಚಲಹುಳುವಿನಂದದಿ ಯೋನಿಯೆಂಬ ಸೂಕ್ಷ್ಮದ್ವಾರದಿಂದೆ ಪೊರಮಟ್ಟು ಹುಟ್ಟಿದಲ್ಲಿ' (೩–೭) ಈ ಮುಂತಾದ ವಚನವನ್ನು

ಓದಬೇಕು. ಘನಲಿಂಗನಂತೆ ಅಖಂಡೇಶ್ವರವಚನಗಳಲ್ಲಿ ಕೆಲವು ದೀರ್ಘವಾಗಿದ್ದರೂ ಸುದೀರ್ಘವಾಗಿಲ್ಲ, ಕಿರುವಚನಗಳ ಸಂಖ್ಯೆ ಹೆಚ್ಚಿದೆ. ಘನಲಿಂಗನಿಗಿಂತ ಹೆಚ್ಚಾದ ಪ್ರಸನ್ನತೆ ಮತ್ತು ಸರಳತೆ ಇವುಗಳಲ್ಲಿದೆ. ಪೂರ್ವಿಕರ ಪ್ರಭಾವವು ಅನೇಕವಚನಗಳಲ್ಲಿದೆ. ಹಲವು ಸಲ ಆತ್ಮಾವಿಷ್ಕಾರಕ್ಕಿಂತ ಸರಳವಾದ ಮತೀಯಬೋಧನೆಯಿದೆ. ಸಾಹಿತ್ಯದೃಷ್ಟಿಯಿಂದ ಮೇಲಾದ ವಚನಗಳು ಕೆಲವು ಮಾತ್ರ ಎಂಬುದನ್ನರಿಯಬೇಕು. ಘನಲಿಂಗನ ವಚನಗಳು ಇದಕ್ಕಿಂತ ಕಡಿಮೆಯಾಗಿದ್ದರೂ ಅವುಗಳ ಸಾಹಿತ್ಯಗುಣವು ಮೇಲಾದುದೆಂದು ತೋರುತ್ತದೆ.

ಈ ಯುಗದಲ್ಲಿ ವೀರಶೈವಶಾಸ್ತ್ರಸಂಬಂಧಿಯಾದ ವಿವಿಧಸ್ವರೂಪದ ಗ್ರಂಥಗಳು ಹುಟ್ಟಿವೆ. ಅವುಗಳಲ್ಲಿ ವೇದಾಗಮೋಪನಿಷತ್ತುಗಳೊಡನೆ ಅದನ್ನು ಸಮನ್ವಿತಗೊಳಿಸುವ ಪ್ರಯತ್ನವು ಆಗಿದೆ. ಮೊದಲನೆಯದಾಗಿ ಮಗ್ಗೆಯ ಮಾಯಿದೇವನ ಸಂಸ್ಕೃತದಲ್ಲಿಯ 'ಶಿವಾನುಭವಸೂತ್ರ'ವು ಒಂದು ಪ್ರಮಾಣಗ್ರಂಥವಾಗಿದೆ. ಕನ್ನಡದಲ್ಲಿ ಅವನು ಬರೆದ 'ಷಟ್‌ಸ್ಥಲಗದ್ಯ', 'ಶತಕತ್ರಯಿ'ಗಳಲ್ಲಿ ಶಾಸ್ತ್ರವಿಚಾರವಿದೆ. ಶತಕಸಾಹಿತ್ಯದ ಸಂದರ್ಭದಲ್ಲಿ ಶತಕತ್ರಯಿಯನ್ನು ಪರಾಮರ್ಶಿಸಲಿದ್ದೇವೆ, ಷಟ್‌ಸ್ಥಲಗದ್ಯವು ನೋಡಲು ದೊರೆತಿಲ್ಲ. ಆನಂದಬಸವಲಿಂಗಶಿವಯೋಗಿಯ 'ಮಾಚಿದೇವಮನೋವಿಲಾಸ'ವು ೩೪ ಪ್ರಕರಣಗಳಲ್ಲಿ ವೀರಶೈವಸಿದ್ಧಾಂತವನ್ನು ನಿರೂಪಿಸುವ ಗದ್ಯಗ್ರಂಥವಾಗಿದೆ. ಮಡಿವಳ ಮಾಚಿದೇವನ ಮನೋಭಾವವನ್ನು ಅನುಸರಿಸಿ ಇದನ್ನು ಬರೆದ ಕಾರಣ ಈ ಹೆಸರು ಬಂದಿದೆ. ಹಾಗೆಂದರೇನೆಂಬುದು ಗ್ರಂಥವನ್ನು ಅವಲೋಕಿಸಿದಾಗ ತಿಳಿಯಬಹುದು. ಸಂಸ್ಕೃತ ಶ್ಲೋಕ ಮತ್ತು ಕನ್ನಡ ಟೀಕೆ ಇವುಗಳ ಸ್ವರೂಪದಲ್ಲಿ ಇದು ಇದ್ದಂತಿದೆ. ಸಿದ್ಧಾಂತವನ್ನು ತಿಳಿಸಿಕೊಡುವ ಹೆಚ್ಚು ಗ್ರಂಥಗಳು ಪದ್ಯರೂಪದಲ್ಲಿವೆ, ಅದರಲ್ಲಿಯೂ ದೇಶ್ಯಛಂದಸ್ಸಿನಲ್ಲಿವೆ. 'ಕರಸ್ಥಲದ ನಾಗಿದೇವತ್ರಿವಿಧಿ' (೩೧ ಗೂಢಾರ್ಥವುಳ್ಳ ತ್ರಿಪದಿಗಳುಳ್ಳ ಗ್ರಂಥ), ಗುರುಬಸವನ 'ಸಪ್ತಕಾವ್ಯ' (ವಿವಿಧ ಷಟ್ಪದಿಗಳಲ್ಲಿ ಮತ್ತು ಹಾಡಿನ ರೂಪದಲ್ಲಿದ್ದುವು), ವಿರತಮಹಲಿಂಗದೇವನ 'ಗುರುಬೋಧಾಮೃತ' (ತ್ರಿಪದಿ ಮತ್ತು ಕಂದವೃತ್ತವಚನಗಳುಳ್ಳ ಗ್ರಂಥ) ನಿಜಗುಣಶಿವಯೋಗಿಯ 'ಅನುಭವಸಾರ' ಮುಂತಾಗಿ ತ್ರಿಪದಿ, ರಗಳೆ, ಸಾಂಗತ್ಯ, ಗೀತಗಳಲ್ಲಿಯ ಐದು ಗ್ರಂಥಗಳು, ಮುರಿಗೆಯ ಶಾಂತವೀರನ 'ಪ್ರಭುಲಿಂಗದ ಕಂದ ಮತ್ತು ವೈರಾಗ್ಯಷಟ್ಪದಿ', ಶಾಂತಮಲ್ಲನ 'ಅನುಭವಮುದ್ರೆ' ಎಂಬ ಸಾಂಗತ್ಯಗ್ರಂಥ ಇವನ್ನೆಲ್ಲ ನೋಡಿದರೆ ಸಾಮಾನ್ಯಜನತೆಗಾಗಿ ಸಿದ್ಧಾಂತವನ್ನು ಸುಲಭಹೃದ್ಯವಾಗಿ ಮಾಡಿರುವುದು ಕಂಡುಬರುತ್ತದೆ. ಇವರಲ್ಲಿ ಗುರುಬಸವ ಮತ್ತು ನಿಜಗುಣಶಿವಯೋಗಿ ಹೆಚ್ಚು ಗಣ್ಯರೂ ಪ್ರಖ್ಯಾತರೂ ಆಗಿದ್ದಾರೆ. 'ವೀರಶೈವಮತಸ್ಥಾಪನಾಚಾರ್ಯ' ಎಂದು ತನ್ನ ಕಾಲಕ್ಕೆ ಬಿರುದುಹೊತ್ತಿರಬೇಕಾದರೆ ವೀರಶೈವಧರ್ಮದ ಪುನರುದ್ಧಾರಕಾರ್ಯದಲ್ಲಿ ಗುರುಬಸವನು ಪ್ರಮುಖಪಾತ್ರವನ್ನು ವಹಿಸಿರಬೇಕೆಂದು ತೋರುತ್ತದೆ.

ಇವನ ಸಪ್ತಕಾವ್ಯಗಳಲ್ಲಿ ಒಂದಾದ 'ಶಿವಯೋಗಾಂಗಭೂಷಣ'ದಲ್ಲಿ ಯೋಗಶಾಸ್ತ್ರವು 'ಅಖಿಲಾದ್ಯರ ವಚನಂಗಳ ನಿಶ್ಚಿತಮತ'ವಾಗಿ ಬಂದಿದೆ. 'ಸದ್ಗುರು ರಹಸ್ಯ'ದಲ್ಲಿ

'ವೇದದಂತುಟಿದಲ್ಲ ಶಾಸ್ತ್ರದ।
ಹೋದ ಹೊಲಬಲ್ಲೆಲೆ ಪುರಾಣದ।
ಗಾದೆಗಳ ಜಂಜಡದ ಜಾಡ್ಯದ ಜಿನುಗು ತಾನಲ್ಲ॥
ಆದರಿಸಿ ಕೇಳುವೆಡೆ ಪರಮುಪ-।
ಮಾಧಿ ಶಾಂಭವಸತ್ಯಸಮ್ಯಗ್-।
ಬೋಧಲೀಲಾಲೋಲಶೀಲಾನ್ವಯರಹಸ್ಯವಿದು॥'

ಎಂದು ಆ ಗ್ರಂಥವನ್ನು ನುತಿಸಲಾಗಿದೆ. ಶಾಸ್ತ್ರಜ್ಞಾನ, ಶಿವಾನುಭಾವಗಳ ಜೊತೆಗೆ ಗುರುಬಸವನಲ್ಲಿ ಮೇಲಾದ ಕವಿತಾಶಕ್ತಿಯಿದೆಯೆಂಬುದನ್ನು ಅವನ ಎಲ್ಲ ಕೃತಿಗಳು ತೋರುತ್ತವೆ.

'ಪ್ರಳಯಾರ್ಕನ ದೀಪ್ತಿಯನೊಳಕೊಂಡು।
ಜ್ವಲಿಸುವ ಲಿಂಗದ್ಯುತಿ ಸರ್ವಾಂಗವ।
ಬಳಸಿ ಮಹಾತೇಜಃಪುಂಜೀಕೃತಮಾಗಿ ಬಹಿಸ್ಫುರಿಸಿ।
ಮಲೆಯುತ ದಳವೇಱುತ ಥಳಥಳಿಸುತ।
ಘುಳುಘುಳಿಸುತ ಘೂರ್ಮಿಸುತ ಸಮಸ್ತವ।
ಸುೞಿಸುೞಿಗೊಳುತಿಹುದೀಗ ಮಹಾಸಿದ್ಧಿಗೆ ಕುಱುಹೞಿಯೆಂದ॥'

ಎಂದು ಮುಂತಾದ ಪದ್ಯಗಳಲ್ಲಿ ಬರೆವಣಿಗೆಯ ಒಂದು ತೇಜಸ್ವಿಯಾದ ಓಘವು ಕಾಣುತ್ತದೆ. 'ವೃಷಭಗೀತೆ'ಯಲ್ಲಿ 'ಪೞಿಯದಿಹುದೆ ಧರ್ಮ, ತನುವ ಕೆಳೆಯದಿಹುದೆ ಸಿದ್ಧಿ, ಚಿತ್ತವಲುಗದಿಹುದೆ ಮುಕ್ತಿ' ಮುಂತಾದ ಸುಲಭಗ್ರಾಹ್ಯವಾದ ಚುಟುಕಗಳಿವೆ. ತತ್ವ, ಅನುಭಾವ, ಸಾಹಿತ್ಯ ಇವು ಮುಪ್ಪುರಿಯಾಗಿ ಸತ್ಕಾವ್ಯವನ್ನು ಬಹುಭಾಗದಲ್ಲಿ ಒದವಿಸಿದ ಕನ್ನಡಗ್ರಂಥಕಾರರಲ್ಲಿ ಇವನಿಗೆ ಮನ್ನಣೆಯ ಸ್ಥಾನವಿದೆ.

೨೬. ಈ ಯುಗದ ವೀರಶೈವಸಾಹಿತ್ಯ (೨)

ನಿಜಗುಣಶಿವಯೋಗಿ ಮತ್ತು ಇತರರು

ನಿಜಗುಣಶಿವಯೋಗಿ ಕನ್ನಡನಾಡಿನ ಅದ್ಭುತವ್ಯಕ್ತಿಗಳಲ್ಲಿ ಒಬ್ಬನು. ಅಗಾಧ ವಿದ್ವತ್ತೆಯಿಂದಲೂ ದೀರ್ಘತಪಶ್ಚರ್ಯೆಯಿಂದಲೂ ಜ್ಞಾನದ ತುತ್ತತುದಿಯನ್ನೇರಿ ಕೆಳಗಿಳಿದು ಬಂದು ತರತರದ ಗದ್ಯಪದ್ಯದಲ್ಲಿ ಕನ್ನಡಜನಕ್ಕೆ ತನ್ನ ಅರಿವನ್ನು ಹಂಚಿಕೊಟ್ಟವನು. ಜ್ಞಾನಿಯ ಚರಿತ್ರೆ ತಿಳಿಯದಿರುವುದೇ ಜ್ಞಾನಿಯ ಲಕ್ಷಣ. ನಿಜಗುಣದಲ್ಲಿ ಅಂದರೆ ಆತ್ಮಸ್ವರೂಪದಲ್ಲಿ ನೆಲೆನಿಂತ ಶಿವಯೋಗಿ ಎಂಬುದು ತಿಳಿದರೆ ಸಾಕು. ಅವನ ಗ್ರಂಥಗಳಲ್ಲಿ 'ಶಂಭುಲಿಂಗ' ಎಂಬ ಅಂಕಿತವಿದೆ. ಶಂಭುಲಿಂಗನ ಬೆಟ್ಟದಲ್ಲಿ ಶಂಭುಲಿಂಗೇಶ್ವರ ಗುಡಿಯೂ ನಿಜಗುಣಶಿವಯೋಗಿ ತಪಸ್ಸುಮಾಡಿದ ಗವಿಯೂ ಇಂದಿಗೂ ಇರುತ್ತವೆ. ಮೊದಲು ಅರಸನಾಗಿದ್ದು ಆಮೇಲೆ ವಿರಕ್ತನಾದನೆಂದು ಹೇಳುತ್ತಾರೆ. ಇವನ ಗುರು ಚೆನ್ನಸದಾಶಿವಯೋಗಿ ಇರಬೇಕೆಂದು ತಿಳಿವಳಿಕೆಯಿದೆ. ಗುರುವೆಂದು ಅವನ ಉಲ್ಲೇಖಮಾಡಿಲ್ಲವಾದ ಕಾರಣ ಸ್ಪಷ್ಟವಾದ ಆಧಾರವಿಲ್ಲ ಎಂದು ಕೆಲವರು ಅನ್ನುತ್ತಾರೆ. ಇವನ ಮತವಿಷಯವಾಗಿಯೂ ಚರ್ಚೆಯಾಗಿದೆ. 'ನಿರಾಭಾರಿದೇಶಿಕೋತ್ತಮ' ಪದಪ್ರಯೋಗ, ವೀರಶೈವಲಕ್ಷಣದಲ್ಲಿ ವೀರಶೈವನ ಸರ್ವೋತ್ತಮತ್ವದ ಪ್ರತಿಪಾದನೆ, ಶಿವಯೋಗಪಕ್ಷಪಾತ, ಶಿವಾಧಿಕ್ಯದ ವರ್ಣನೆ ಇವುಗಳಿಂದ ಇವನು ವೀರಶೈವನೆಂಬುದನ್ನು ಸ್ಥಾಪಿಸಲಾಗಿದೆ.[1] ಷಡಕ್ಷರಕವಿ ಮಾಡಿದ ನಿಜಗುಣಸ್ತುತಿಯಿಂದಲೂ ಅದಕ್ಕೆ ಪುಷ್ಟಿಪಡೆಯಲಾಗಿದೆ. ಅರುವತ್ತು-ಮೂರು ಪುರಾತನರ ತ್ರಿಪದಿಯಲ್ಲಿ ಪುರಾತನರ ಸ್ಮರಣೆಮಾಡಿದ್ದನ್ನು ನೋಡಿದರೆ ಇವನು ವೀರಶೈವನಿರಬೇಕೆಂಬುದಕ್ಕೆ ಇನ್ನೊಂದು ಆಧಾರವು ದೊರೆಯುತ್ತದೆ. 'ಪರಮಾರ್ಥಪ್ರಕಾಶಿಕೆ'ಯಲ್ಲಿ ವೀರಶೈವಷಟ್‌ಸ್ಥಲ ಮಾರ್ಗವು ಸರ್ವೋತ್ಕೃಷ್ಟವೆಂದು ಹೇಳಿದ್ದನ್ನೂ ಇಲ್ಲಿ ನೆನೆಯಬಹುದು. ಶ್ರೀ. ಬೇಂದ್ರೆಯವರ ಅಭಿಪ್ರಾಯದಲ್ಲಿ 'ಅದ್ವೈತವೇದಾಂತವು ಮೂಲತಃ ಶೈವವಾಗಿದ್ದರೂ ಷಣ್ಮತಗಳ ಸಮನ್ವಯ-ದಿಂದುಂಟಾಗಿದೆ. ಶುದ್ಧಶೈವವು ಹಾಗಲ್ಲ. ಆದರೂ ನಿಜಗುಣರು ಉದಾರರಾದ ತತ್ವಜ್ಞರಾದ ವಿವೇಕಿಗಳಾದ ಶೈವರೆಂಬುದು ಅವರ ಪ್ರತಿಯೊಂದು ಗ್ರಂಥದಲ್ಲಿ ಕಂಡು-ಬರುವದು.'[2] ನಮಗೆ ತೋರುವಂತೆ ನಿಜಗುಣಶಿವಯೋಗಿ ವೀರಶೈವನೇನೊ ನಿಜ, ಆದರೆ ವೇದೋಪನಿಷತ್ತುಗಳಿಗೆ ಸಂಮತವೆಂದು ಅವನಿಗೆ ತೋರಿದ ಅದ್ವೈತವನ್ನೂ

---

1 ಬಿ. ಶಿವಮೂರ್ತಿ ಶಾಸ್ತ್ರಿ : ಶ್ರೀ ನಿಜಗುಣಶಿವಯೋಗಿಯ ಚರಿತ್ರೆ (ಶರಣಸಾಹಿತ್ಯ, ೧-೭, ಪು. ೩೩-೩೪)

2 ದ. ರಾ. ಬೇಂದ್ರೆ : ನಿಜಗುಣಶಿವಯೋಗಿ (ವಾಗ್ಭೂಷಣ—ಹೊಸ ಸಂ. ೧-೩, ೪)

ಆಗಮಸಂಮತವಾದ ಷಟ್‌ಸ್ಥಲಸಿದ್ಧಾಂತವನ್ನೂ ಸಮನ್ವಯಗೊಳಿಸಿದ ವೀರಶೈವಯತಿ ಮತ್ತು ಜ್ಞಾನಿ. 'ಕೈವಲ್ಯಪದ್ಧತಿ'ಯನ್ನು 'ಸಕಲವೇದವೇದಾಂತಾಗಮಸ್ಮೃತಿ-ಪುರಾಣೇತಿಹಾಸಸೂತ್ರಾದಿ ಶಾಸ್ತ್ರಸಂಮತದಿಂ ಪುರಾತನ ಗೀತಾನುಗುಣ್ಯವೆನಿಸಿ' ಬರೆದುದಾಗಿ ಅವನು ಹೇಳಿದ್ದಾನೆ. ಅದರ ಮೊದಲನೆಯ ಹಾಡಿನಲ್ಲಿ 'ಬಳಸದಿರ-ದ್ವೈತವನ್ನು ಬಾಹ್ಯದಲಿ, ನಿನ್ನೊಳಗೇಕೋಭಾವನೆಯೊಡಗೂಡು, ತಿಳಿದು ಸಮಯ-ನಿಷ್ಠೆಗಲಿ, **ವೇದವಿಧಿಭಕ್ತಿಗಳನಗಲದಿರು**', 'ಪರಮಾರ್ಥಗೀತೆ'ಯ ಕೊನೆಗೆ 'ಇತಿಹಾಸಪುರಾಣಸ್ಮೃತಿಶ್ರುತಿಯರ್ಥವನಿಂತು ಕನ್ನಡಿಸಿದಂ ನಿಜಗುಣಯತಿ ಶಂಭುಲಿಂಗದೊಲವಿಂ' ಈ ಮುಂತಾದ ಉಕ್ತಿಗಳಿಂದ ಅವನ ಸಮನ್ವಯದೃಷ್ಟಿ ಗೊತ್ತಾಗುತ್ತದೆ. ತನ್ನ ಅನೇಕ ಗ್ರಂಥಗಳಲ್ಲಿ ಷಟ್‌ಸ್ಥಲಸಿದ್ಧಾಂತದ ಸಾಂಪ್ರದಾಯಿಕ ನಿರೂಪಣೆಗಿಂತ ಅದ್ವೈತಸಿದ್ಧಾಂತದ ವಿಶಾಲಭೂಮಿಕೆಯನ್ನು ವಿವರಿಸಿದ್ದಾನೆ. 'ಪರಮಾನುಭವಬೋಧೆ' ಯಾಜ್ಞವಲ್ಕ್ಯ–ಮೈತ್ರೇಯಿ ಇವರ ಸಂವಾದರೂಪದಲ್ಲಿದೆ. ಬಸವೇಶ್ವರ, ಪ್ರಭುದೇವರ ಶರಣಮಾರ್ಗಕ್ಕೆ ಈ ಭೂಮಿಕೆ ಸುಸಂಗತವಾಗಿದೆ. ಅದನ್ನು ವೀರಶೈವ ಎಂದು ಕರೆಯುವುದು ಯುಕ್ತವಾದರೂ ಸರ್ವಸಂಗ್ರಾಹಕವಾದ ಸಮನ್ವಯಶೀಲವಾದ ವೀರಶೈವ ಎಂಬುದು ಹೆಚ್ಚು ಉಚಿತ.

'ಕೈವಲ್ಯಪದ್ಧತಿ, ಪರಮಾನುಭವಬೋಧೆ, ಪರಮಾರ್ಥಗೀತೆ, ಅನುಭವಸಾರ, ಅರುವತ್ತುಮೂವರ ತ್ರಿಪದಿ, ಪರಮಾರ್ಥಪ್ರಕಾಶಿಕೆ, ವಿವೇಕಚಿಂತಾಮಣಿ' ಇವು ಏಳು ಅವನ ಗ್ರಂಥಗಳು. ಮೊದಲಿನ ಐದು ಅನುಕ್ರಮವಾಗಿ ಹಾಡು, ಸಾಂಗತ್ಯ, ರಗಳೆ, ತ್ರಿಪದಿಯಲ್ಲಿ (ಎರಡು) ಇವುಗಳಲ್ಲಿದ್ದು ಕೊನೆಯವೆರಡು ಶಾಸ್ತ್ರಗದ್ಯದಲ್ಲಿವೆ. 'ಕೈವಲ್ಯಪದ್ಧತಿ'ಯಲ್ಲಿ ತತ್ತ್ವೋಪದೇಶಪರವಾದ ಮತ್ತು ಶಿವಸ್ತುತಿಯುಳ್ಳ ಹಾಡು-ಗಳಿವೆ. ಅವುಗಳಲ್ಲಿ ಕಲ್ಪನಾವಿಲಾಸವಿಲ್ಲ, ತಿಳಿಗನ್ನಡದಲ್ಲಿ ಸ್ಫೂರ್ತಿದಾಯಕವಾದ ಬೋಧನೆಯಿದೆ. 'ಕೋಗಿಲೆ ಚೆಲ್ವಕೋಗಿಲೆ ಮುದ್ದುಕೋಗಿಲೆ' (ಪು. ೨೧) ಎಂಬಂಥ ಹಾಡುಗಳಲ್ಲಿ ಭಾವಗೀತೆಯ ಕಾವು ಏರುತ್ತದೆ. ಮೊದಲಿನಿಂದ ಕೊನೆಯ ವರೆಗೆ ಗುರುಭಕ್ತಿ ತುಂಬಿ ತುಳುಕುತ್ತದೆ. 'ಶ್ರೀಗುರುವಚನೋಪದೇಶವನಾಲಿಸಿ-ದಾಗಳಹುದು ನರರಿಗೆ ಮುಕ್ತಿ' (ಪು. ೧), 'ಬೇರೊಂದು ಪದವಿಯನು ಪಡೆವೆ-ನೆಂಬಳಿಯಾಸೆದೋರದೆನ್ನೊಳು ಗುರುವಿನೊಲುಮೆ ದೊರೆಕೊಳ್ಳಲು' (ಪು. ೫೩), 'ಶ್ರೀಗುರುವೆ ನೀನೆ ಶರಣಾಗೆನಗೆ ನಿಜಸುಖದ ಸಾಗರನೆ ಸಕಲವಿದ್ಯಾಗುಣನಿವಾಸಾ' (ಪು. ೫೪), 'ಗುರುವೆ ನಿಮ್ಮಯ ಕರುಣದೊಳೆನ್ನ ತತ್ವದಿರವನರಿದು ನಿತ್ಯಸುಖಿ-ಯಾದೆ' (ಪು. ೧೨೧) ಎಂಬ ಹಾಡುಗಳಲ್ಲಿ ನಿಜಗುಣಶಿವಯೋಗಿ ಅದನ್ನು ಭಾವಪೂರ್ಣವಾಗಿ ತೋರಿದ್ದಾನೆ. 'ಅರಿವೆ ನೀನೆಂದು ಸದ್ಗುರು ಪೇಳೆ ತಿಳಿವನು ಜಾಣ' (ಪು. ೯೨) ಮುಂತಾದ ಹಾಡುಗಳಲ್ಲಿ ಜ್ಞಾನಮಾರ್ಗದ ಸಿದ್ಧಿ ಗುರುಕೃಪೆ-ಯಿಂದ ದೊರೆಯುವುದಾಗಿ ಹೇಳಿದೆ. 'ಪರಮಾನುಭವಬೋಧೆ' ಇದು 'ಅದ್ವೈತ-ತತ್ತ್ವವನಿಲ್ಲಿ ಪ್ರಕಟಿಸುವೆನು ಬೋಧೆಗತಿಯಿಂದ' (೧) ಎಂದು ಯಾಜ್ಞವಲ್ಕ್ಯ–

ಮೈತ್ರೇಯಿಯವರ ಸಂವಾದರೂಪವಾಗಿದೆ. ‘ ಇದು ವೇದವೇದಾಂತದೊಳು ಗೋಪ್ಯವಾದರ್ಥ ’ ಎಂದು ಮುಂತಾಗಿ ಸಮನ್ವಯವು ಸಾಧಿಸಲಾಗಿದೆ. ಇದರ ರಚನೆಯಲ್ಲಿ ವಿಶೇಷವೊಂದಿದೆ. ಪ್ರತಿಯೊಂದು ಸೂತ್ರವು ಹಾಡಿನ ರೂಪದಲ್ಲಿದ್ದು ಸ್ಥೂಲವಾಗಿ ಸಾಂಗತ್ಯರೂಪದಂತಿದ್ದರೂ ಅದಕ್ಕೆ ಒಂದು ವಿಶಿಷ್ಟವಾದ ಛಂದೋಬಂಧವಿದೆ. ‘ ಶ್ರೀಗುರುಶಂಭುಲಿಂಗದ ಪಾದಪಂಕಜ । ವೀಗೆನ್ನ ಮತಿಗೆ ಮಂಗಳವಾ ॥ ’ ಈ ಪಲ್ಲವಿಯಲ್ಲಿ ತ್ರಿಪದಿಯ ಒಂದುವರೆ ಪಾದದ ಇಲ್ಲವೆ ಸಾಂಗತ್ಯದ ೨ ಪಾದದ ನಡೆಯಿದೆ. ಮುಂದಿನ ನುಡಿಗಳಲ್ಲಿ ಬಹುಶಃ ವಿಸ್ತಾರಗೊಂಡ ಸಾಂಗತ್ಯವಿದೆ.

‘ ಶ್ರೀಮಹಾದೇವಂಗೆ ಸೋಮಂಗೆ ಸುಖಪೂರ್ಣ- ।
ಧಾಮಂಗೆ ಸತ್ಯಚಿದ್ರೂಪಂಗೆ ॥
ಕಾಮಿತಜನಕಲ್ಪ ಭೂಜಂಗೆ ಶಂಭುವಿಂ- ।
ಗಾಮೋದದಿಂದೆ ವಂದಿಪೆನೊ ॥ ’

ಇಲ್ಲಿ ೨ನೆಯ ಪಾದದಲ್ಲಿ ೫। ೫। ೩ರ ಬದಲು ೫। ೫। ೫ ಇದ್ದು ೪ರಲ್ಲಿ ಮಾತ್ರ ೫। ೫। ೩ ಇದೆ, ಸಾಮಾನ್ಯವಾಗಿ ೫। ೫। ೫ರ ಪ್ರಯೋಗವೇ ಹೆಚ್ಚು. ಛಂದಸ್ಸು ಮಾತ್ರಾಬದ್ಧವಾಗಿರದೆ ಲಯಬದ್ಧವಾಗಿದೆ. ಒಟ್ಟಿನಲ್ಲಿ ‘ ಇದು ಪ್ರಾಕೃತವೆ ಎಲ್ಲರಜೀವಂತೆ ’ ಎಂಬ ಸಕಲವೇದ್ಯತೆ ಮತ್ತು ಮಾಧುರ್ಯ ಈ ಗ್ರಂಥದ ಗುಣಗಳಾಗಿವೆ. ‘ ಅನುಭವಸಾರ ’ವು ತ್ರಿಪದಿಯಲ್ಲಿ ‘ ಸಕಲವೇದಾಂತಸಾರವನು ತಿಳಿವಂತೆ ಸಾಧಕರಿಗೆ ’ ಬರೆದ ಗ್ರಂಥ. ಇದರಲ್ಲಿ ಪ್ರತಿಜ್ಞೆಮಾಡಿದಂತೆ ತಿಳಿಯಾಗಿ ಉಚಿತದೃಷ್ಟಾಂತಗಳಿಂದ ಆತ್ಮಸ್ವರೂಪವನ್ನೂ ಅದ್ವೈತಸಿದ್ಧಿಯನ್ನೂ ವಿವರಿಸಲಾಗಿದೆ. ‘ ಪರಮಾರ್ಥಗೀತೆ ’ ‘ ಅನುಭವಸಾರ ’ದಂತೆ ಗುರುಶಿಷ್ಯಸಂವಾದರೂಪವಾಗಿದ್ದು ಲಲಿತರಗಳೆ ಮತ್ತು ಕಂದಗಳಲ್ಲಿ ಮೋಕ್ಷಶಾಸ್ತ್ರವನ್ನು ತಿಳಿಸುತ್ತದೆ. ಇದರಲ್ಲಿ ಯೋಗಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳೂ ಬಂದಿವೆ. ‘ ಅರುವತ್ತುಮೂವರ ತ್ರಿವಿಧಿ ’ ತ್ರಿಪದಿಯಲ್ಲಿ ೬೩ ಪುರಾತನರ ಸ್ತುತಿರೂಪವಾಗಿದೆ. ಈ ಐದು ಗ್ರಂಥಗಳು ಅಚ್ಚಗನ್ನಡ ಛಂದಸ್ಸಿನಲ್ಲಿ ಸಾಧ್ಯವಾದಷ್ಟು ತಿಳಿಯಾದ ಮೃದುಮಧುರವಾದ ಭಾಷೆಯಲ್ಲಿ ಎಲ್ಲರೂ ತಿಳಿಯಲೆಂಬ ಹೇತುವಿನಿಂದ ಬರೆದವುಗಳು. ಇವುಗಳಲ್ಲಿ ಉನ್ನತಪ್ರತಿಭೆ ಪ್ರಕಟವಾಗಿದೆಯೆಂದಲ್ಲ. ಆದರೆ ಉನ್ನತವಾದ ಸಿದ್ಧಿ, ನಿಚ್ಚಳವಾದ ಭಕ್ತಿಜ್ಞಾನ ಇವು ನಿಜವಾಗಿಯೂ ಸಕಲವೇದ್ಯವಾದ ಸಾಹಿತ್ಯಗುಣವನ್ನು ತೋರಿವೆ, ಕ್ವಚಿತ್ತಾಗಿ ಮೇಲ್ಮಟ್ಟವನ್ನು ಮುಟ್ಟಿವೆ ಎನ್ನಬಹುದು.

ಉಳಿದೆರಡು ಗ್ರಂಥಗಳಲ್ಲಿ ‘ ಪರಮಾರ್ಥಪ್ರಕಾಶಿಕೆ ’ ಚೆನ್ನಸದಾಶಿವಯೋಗಿಯ ‘ ಶಿವಯೋಗಪ್ರದೀಪಿಕೆ ’ಯ ಕನ್ನಡವ್ಯಾಖ್ಯಾನ. ‘ ಸಮ್ಯಗ್‌ಜ್ಞಾನಸಂಪನ್ನ ನಿಜಗುಣಶಿವಯೋಗಿಯು....ಮೋಕ್ಷಮಾತ್ರಾಪೇಕ್ಷಿತರಾದ ಸಾಧುಜನಂಗಳಾಯಾಸವಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ಥರಾಗಲೆಂದು ’ ಇದರಲ್ಲಿ ಶಿವಯೋಗಶಾಸ್ತ್ರಗ್ರಂಥಕ್ಕೆ

ಗದ್ಯದಲ್ಲಿ ವ್ಯಾಖ್ಯಾನ ಬರೆದಿದ್ದಾನೆ. ಯೋಗಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು ನಿರೂಪಿತವಾಗಿದೆ. ಇದರಲ್ಲಿ ವೀರಶೈವಷಟ್‌ಸ್ಥಲವು ಅಷ್ಟಾಂಗಯೋಗದ ಪರ್ಯಾಯವೆಂದು ನಿರೂಪಿಸಲಾಗಿದೆ. 'ವಿವೇಕಚಿಂತಾಮಣಿ' ನಿಜಗುಣಶಿವಯೋಗಿಯ ಹೆಚ್ಚೊತ್ತಿಗೆ, ಕನ್ನಡಜನಕ್ಕೆ ಅವನು ನೀಡಿದ ಜ್ಞಾನಭಾಂಡಾರ. ಇದರಲ್ಲಿ ಅಂದಿನ ಎಲ್ಲ ಶಾಸ್ತ್ರಿಕ ಭೌಗೋಲಿಕ ಸಾಹಿತ್ಯಿಕ ವಿಷಯಗಳ ಜ್ಞಾನವು ಸಂಗ್ರಹವಾಗಿ ಕೆನೆಗಟ್ಟಿ ನಿಂತಿದೆ. ಗ್ರಂಥದಲ್ಲಿ ಹತ್ತು ಪ್ರಕರಣ, ೭೬೫ ವಿಷಯಗಳಿವೆ. 'ವೇದಪುರಾಣಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವವಿಷಯಂಗಳ ಸಂಸ್ಥಿತಿಯಂ ವಿವೇಕಚಿಂತಾಮಣಿಯೆಂದು ಸಲ್ವ ಪೆಸರಿಟ್ಟು ಮಹಾಕವಿತಾಪ್ರಬಂಧಮಂ ಪ್ರೇಮದಿ ಪೇೞ್ವೆ' ಎಂದು ಪ್ರಾರಂಭವಾದ ಈ ಗ್ರಂಥ ಮಹಾಕವಿತಾಪ್ರಬಂಧವಲ್ಲ, ಮಹಾಜ್ಞಾನನಿಧಿಯೆಂಬುದು ಖಂಡಿತ. 'ಆಗಮಾಮ್ನಾಯಸಂಮತದಿಂ....ಸ್ಮೃತಿಪುರಾಣೇತಿಹಾಸ ಪುರಾಣೋಕ್ತಿಗಳನುಸಾರದಿಂದನುಭವಿಗಳಹುದೆಂಬಂತೆ ಸ್ವಕಪೋಲಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಂಗಳನೆ ಸಂಗ್ರಹಿಸಿ....ಮುಮುಕ್ಷುಜನಂಗಳು....ಬಳಲದೆ ಅಭಿವ್ಯಕ್ತಮಾಗಿಲ್ಲಿಯೆ ಸಲೀಲೆಯಿಂದರಿತು ಕೃತಾರ್ಥರಾಗಲೆಂದು ನಿಜಗುಣಶಿವಯೋಗಿ ಬೆಳುಗನ್ನಡಮಾದ ವಚನರಚನೆಗಳಿಂದ ವಿವೇಕಚಿಂತಾಮಣಿಯೆಂಬ ಪ್ರಕರಣಮಂ ಪೇಳ್ದಂ' ಎಂಬ ಇದರ ಪೀಠಿಕೆಯಲ್ಲಿ ಇದರ ಉದ್ದೇಶವು ಸ್ಫುಟವಾಗಿದೆ. ಶಾಸ್ತ್ರವಿಷಯಗಳನ್ನು ಬಹುಶಃ ಸಂಸ್ಕೃತಪದಭೂಯಿಷ್ಠವಾಗಿ ಹೇಳಬೇಕಾಗಿ ಬಂದುದರಿಂದಲೂ ಕೆಲವು ಕಡೆಗೆ ಬರೀ ಪಾರಿಭಾಷಿಕಪದಗಳ ಪಟ್ಟಿಯೇ ಇರುವುದರಿಂದಲೂ 'ಬೆಳುಗನ್ನಡದ ವಚನರಚನೆ' ಎಲ್ಲ ಕಡೆಗೆ ಸಾಧ್ಯವಾಗಿಲ್ಲ; ಸರ್ವಸಂಗ್ರಹವಾಗಬೇಕು, ಸರ್ವರಿಗೆ ವೇದ್ಯವಾಗಬೇಕು ಎಂಬ ಉದ್ದೇಶವು ಒಟ್ಟಿನಲ್ಲಿ ಫಲಿಸಿದೆ. ಇದು ಒಂದು ಮತದ ಇಲ್ಲವೆ ತತ್ವದ ಜ್ಞಾನಕೋಶವಲ್ಲ. ಇಲ್ಲವೆ ವಿದ್ಯಾರಣ್ಯರ 'ಸರ್ವದರ್ಶನ ಸಂಗ್ರಹ'ದಂತೆ ದಾರ್ಶನಿಕಮಾತ್ರವಲ್ಲ. ಮತಾತೀತವಾದ ಸಕಲಜ್ಞಾನಕೋಶವೆಂಬ ಸ್ವರೂಪದಲ್ಲಿ ಇದು ಕನ್ನಡವಾಙ್ಮಯದಲ್ಲಿ ಅದ್ವಿತೀಯವಾದ ಗದ್ಯಗ್ರಂಥ. 'ಇದರಲ್ಲಿ ಹತ್ತು ಪ್ರಕರಣಗಳಿದ್ದು ವೇದಾಂತಿ-ಸಿದ್ಧಾಂತಿ-ಯೋಗಿಗಳಿಗೆ ಇದೊಂದು ಜ್ಞಾನಕೋಶದಂತಿದೆ. ಇವರು ಬರೆದ ಗ್ರಂಥಗಳಲ್ಲಿ ಇದು ಎಲ್ಲಕ್ಕೂ ದೊಡ್ಡದು. ಇವರ ಅಭ್ಯಾಸ, ಅವಲೋಕನ, ಸಂಗ್ರಹಚಾತುರ್ಯ ಮೊದಲಾದವುಗಳ ಅನುಭವವೂ ಇದರಲ್ಲಿ ಬರುವದು....ತತ್ವಜ್ಞಾನಿಯ ನಿಃಪಕ್ಷಪಾತವೃತ್ತಿಯೂ ಮತಮಾರ್ಗದೊಡನೆ ಹೊಂದಿಸಿಕೊಂಡು ಹೋಗುವ ಜಾಣ್ಮೆಯೂ ಇಲ್ಲಿ ಕಂಡು ಬರುವದು. ತತ್ವಪ್ರತಿಪಾದಕರಲ್ಲಿ ನಿಜಗುಣಿಗಳ ಸ್ಥಾನವು ಮಹತ್ವದ್ದಾಗಿದೆ'[1] ಎಂಬುದು ಒಪ್ಪತಕ್ಕ ಮಾತು. ನಿಜಗುಣಶಿವಯೋಗಿ ಕನ್ನಡನಾಡಿನ ಜ್ಞಾನಿಗಳಲ್ಲಿ ಉನ್ನತನೂ ಕವಿಗಳಲ್ಲಿ ಗಣ್ಯನೂ ಆದ ವ್ಯಕ್ತಿಯಾಗಿ ಹೋದನು.

1 ದ. ರಾ. ಬೇಂದ್ರೆ: ನಿಜಗುಣಶಿವಯೋಗಿ (ವಾಗ್ಭೂಷಣ_ಹೊಸ ಸಂ. ೧-೩, ೪, ಪು. ೧೨)

ಮುಪ್ಪಿನ ಷಡಕ್ಷರಿ ಮತ್ತು ಸರ್ಪಭೂಷಣ

ವೀರಶೈವಸಾಹಿತ್ಯದಲ್ಲಿ ಹಾಡಿನ ಪರಂಪರೆ ಬಸವೇಶ್ವರನ ಕಾಲದಲ್ಲಿ ಮೊದಲಾಗಿ ಮತ್ತೆ ನಿಜಗುಣಶಿವಯೋಗಿಯ ಕಾಲಕ್ಕೆ ತಲೆಯೆತ್ತಿತು. ಅದನ್ನು ಹಲವು ಶಿವಶರಣರು ಮುಂದೆ ಸಾಗಿಸಿಕೊಂಡು ಹೋದರು. ಅವರಲ್ಲಿ ನಿಜಗುಣಶಿವಯೋಗಿಯ ಸಮಕಾಲೀನನೂ ಅದೇ ಶಂಭುಲಿಂಗನ ಬೆಟ್ಟದಲ್ಲಿ ತಪಸ್ಸುಮಾಡಿದವನೂ ಆದ ಮುಪ್ಪಿನ ಷಡಕ್ಷರಿ ಪ್ರಖ್ಯಾತನು. ನಿಜಗುಣಶಿವಯೋಗಿಯಲ್ಲಿ ಜ್ಞಾನಪ್ರಧಾನವಾದ ಭಾವಶಾಂತಿಯಿದ್ದರೆ ಮುಪ್ಪಿನ ಷಡಕ್ಷರಿಯಲ್ಲಿ ಭಕ್ತಿಪ್ರಧಾನವಾದ ಭಾವಕ್ಷೋಭವಿದೆ, ಉತ್ಕಟವಾದ ಮೊರೆಯಿದೆ. ಅವನ ಹಾಡುಗಳು 'ಸುಬೋಧಸಾರ' ಎಂಬ ಹೆಸರಿನಲ್ಲಿ ಸಂಗ್ರಹವಾಗಿವೆ. ಅವುಗಳಲ್ಲಿ ಅವನ ವ್ಯಕ್ತಿತ್ವದ ವಿಶಾಲಸ್ವರೂಪವು ಕಾಣುತ್ತದೆ. 'ಸಕಲಕೆಲ್ಲಕೆ ನೀನು ಅಕಲಂಕಗುರುವೆಂದು ನಿಖಿಳ ಶಾಸ್ತ್ರವು ಪೇಳುತಿರಲರಿದೆನು' ಎಂಬ ಹಾಡಿನಲ್ಲಿ 'ಅವರವರ ದರುಶನಕೆ ಅವರವರ ವೇಷದಲಿ ಅವರವರಿಗೆಲ್ಲ ಗುರು ನೀನೊಬ್ಬನೆ। ಅವರವರ ಭಾವಕ್ಕೆ ಅವರವರ ಪೂಜೆಗಂ ಅವರವರಿಗೆಲ್ಲ ದೇವನೀನೊಬ್ಬನೆ' ಎಂಬ ನುಡಿ ಇದಕ್ಕೆ ಸಾಕ್ಷಿಯಾಗಿದೆ. 'ಹೆಮ್ಮಗಳು ನಾ ನಿಮ್ಮ ಕರೆಯಬನ್ನಿ', 'ಎನ್ನ ಕರದೊಳಗಿರ್ದು ಏಕೆ ನುಡಿಯೆ', 'ಎನ್ನ ಕಾಯವು ನಿನಗೆ ಉನ್ನತಾಲಯವಾಯಿತಿನ್ನೆನಗೆ ಭಯವುಂಟೆ ಎಲೆ ಲಿಂಗವೆ', 'ಎನ್ನ ಸರ್ವಾಂಗವನು ನಿನ್ನ ಪರಿಣಾಮಕ್ಕೆ ಚೆನ್ನಾಗಿ ಸಲಿಸುವೆನು ಎಲೆ ಲಿಂಗವೆ' ಈ ಮುಂತಾದ ಹಾಡುಗಳಲ್ಲಿ ಉತ್ಕಂಠೆ, ಸಮರ್ಪಣಭಾವ, ಸತ್ಯಧರ್ಮದ ಅರಿವು, ಅನುಭಾವದೆತ್ತರ ಇವು ತಿಳಿತಿಳಿಯಾದ ಮಾತುಗಳಲ್ಲಿ ಮೂಡಿರುತ್ತವೆ. ಹಾಡುಗಳೆಲ್ಲ ಹಾಡಿನ ಧಾಟಿಯಲ್ಲಿದ್ದರೂ ಷಟ್ಪದಿಯ ಎಲ್ಲ ಪ್ರಕಾರದ ಪದ್ಯರೂಪಗಳಲ್ಲಿವೆ. ಅನೇಕ ಹಾಡುಗಳು ಕುಸುಮ ಮತ್ತು ಭೋಗಷಟ್ಪದಿಯಲ್ಲಿ ರಚಿತವಾಗಿವೆಯೆಂಬುದನ್ನು ನೋಡಬೇಕು. ತರುವಾಯ ಸರ್ಪಭೂಷಣ ಇಲ್ಲವೆ ಸಪ್ಪಣ್ಣನು ಅದೇ ಬಗೆಯ ಉದಾತ್ತಮನೋಧರ್ಮ ಮತ್ತು ಅನುಭಾವದಾಳವುಳ್ಳ ಹಾಡುಗಾರನು ಆಗಿಹೋದನು. ಅವನ 'ಕೈವಲ್ಯಕಲ್ಪವಲ್ಲರಿ'ಯಲ್ಲಿ ಅವನ ಹಾಡುಗಳು ಸಂಕಲಿತವಾಗಿವೆ. 'ಗುರುಸಿದ್ಧ' ಎಂಬ ಅಂಕಿತದಲ್ಲಿ ಅವನು ಬರೆದಿದ್ದಾನೆ. ಅವುಗಳಲ್ಲಿ 'ಆ ದೇವನ ಪದಪದ್ಮವನಾವಗನುಭಿವಂದಿಸುವೆನು ಮೂದೇವರ ನಾಮಕ್ರಿಯೆರೂಪಗಳಳಿದುಳಿದಾ' ಎಂಬುದು ಮತಾತೀತವಾದ ರೀತಿಯಲ್ಲಿ ದೇವನ ಭವ್ಯಕಲ್ಪನೆ ಕೊಡುವ ವಂದನಗೀತವಾಗಿದೆ. 'ದಯಪಾಲಿಸೆಲೊ ದೇವ ನೀನೆ ನಿಶ್ಚಲಪದವಿಯನಿನ್ನಾವ ವರವ ನಾನೊಲ್ಲೆನು', 'ಸಿರಿಯನೆ ಕರುಣಿಸು ನಿನ್ನಯೆ', 'ಕರಣ ಮೂರರಲ್ಲಿಯೂ' ಈ ಹಾಡುಗಳನ್ನು ವಿಶೇಷವಾಗಿ ನೆನೆಯಬೇಕು. ಈ ತಾತ್ವಿಕ ಮತ್ತು ಭಕ್ತಿಗೀತಗಳ ಪರಂಪರೆಯನ್ನು ಮುಂದೆ ಘನಮಠದಾರ್ಯ, ಬಾಲಲೀಲಾಮಹಾಂತಶಿವಯೋಗಿ, ಮೈಲಾರ ಬಸವಪ್ಪ ಮುಂತಾದವರು ಮೊನ್ನಿನವರೆಗೆ ನಡೆಸಿಕೊಂಡು ಬಂದಿದ್ದಾರೆ. ಜಾನಪದ ಕವಿಗಳಲ್ಲಿ

ಶರೀಫಸಾಹೇಬನು ಮೇಲಾದ ವೇದಾಂತಿಯಾಗಿ ಸಾವಿರಾರು ಹಾಡುಗಳನ್ನು ಕಟ್ಟಿದನು. ಇನ್ನೂ ಇಂಥವರು ನಾಡಿನಲ್ಲಿ ಅಪರೂಪವಾಗಿ ಕಣ್ಣಿಗೆ ಬೀಳುತ್ತಾರೆ.

ಲಕ್ಕಣ್ಣ ಮತ್ತು ಗುಬ್ಬಿಯ ಮಲ್ಲಣಾರ್ಯ

ವೀರಶೈವಸಿದ್ಧಾಂತವನ್ನು ನಿರೂಪಿಸುವ ಹೊಸ ಪದ್ಧತಿಯ ಬರವಣಿಗೆ ಈ ಯುಗದ ಹಲಕೆಲವು ಗ್ರಂಥಗಳಲ್ಲಿದೆ. ಪ್ರೌಢದೇವರಾಯನ ಮಹಾಪ್ರಧಾನನೂ ಮಹಾಶೂರದಂಡೇಶನೂ ಆಗಿದ್ದ ಲಕ್ಕಣ್ಣನ 'ಶಿವತತ್ವಚಿಂತಾಮಣಿ' ಇದಕ್ಕೆ ಮೊದಲನೆಯ ಉದಾಹರಣೆಯಾಗಿದೆ. ೫೫ ಸಂಧಿಗಳಲ್ಲಿ ಎರಡುಸಾವಿರಕ್ಕೆ ಮೇಲ್ಪಟ್ಟ ವಾರ್ಧಕಷಟ್ಪದಿಗಳುಳ್ಳ ಈ ದೊಡ್ಡಗ್ರಂಥದ ಪ್ರಾರಂಭಪದ್ಯದಲ್ಲಿ 'ವಿತತವೇದಾಗಮ-ಪುರಾತನೋಕ್ತಿಗಳ ಸಂಮತದ ಸಾರಾಯ ಶಿವತತ್ವಚಿಂತಾಮಣಿಯ ಕೃತಿಯಂ ವಿಸ್ತರಿಸುವೆಂ' ಎಂದಿದೆ. ವೀರಶೈವಕ್ಕೆ ಸಂಬಂಧಿಸಿದ್ದು ಇದರಲ್ಲಿ ಬಾರದ ತಾತ್ವಿಕ ಮತ್ತು ಚಾರಿತ್ರಿಕ ವಿಷಯವಿಲ್ಲ. ನಿತ್ಯಾನಿತ್ಯವಸ್ತುವಿವರಣ, ಸಕಲನಿಷ್ಕಲವಿಚಾರ, ಶಿವನ ೨೫ ಲೀಲೆಗಳು, ಭುವನಕೋಶ, ಶಿವಲೋಕವರ್ಣನ, ಶಿವನಂದೀಶಸಂವಾದ, ಬಸವಚರಿತ, ಗಣಪ್ರಶಂಸೆ, ಧರ್ಮಾಧರ್ಮವಿವರಣ, ಪಂಚಾಕ್ಷರೀಭಸಿತಾದಿ-ಮಾಹಾತ್ಮ್ಯ, ಲಿಂಗಧಾರಣ, ಶಿವಪೂಜಾವಿಧಿ, ಪಾದೋದಕಪ್ರಸಾದಮಹಿಮೆ, ಶಿವಾಧಿಕ್ಯ, ಮಾಹೇಶ್ವರಾಚರಣೆ, ಷಟ್ಸ್ಥಲ ಈ ಮುಂತಾದ ವಿಷಯಗಳಿವೆ. ವೀರಶೈವ ಷಟ್ಸ್ಥಲಸಿದ್ಧಾಂತಕ್ಕೆ ಪ್ರಾಧಾನ್ಯವಿದ್ದರೂ ಅಷ್ಟಾವರಣಗಳು ಮತ್ತು ಆಚಾರಧರ್ಮ, ಶಿವಾಧಿಕ್ಯ, ಶಿವಲೀಲೆ, ಶಿವಶರಣರ ಚರಿತ್ರೆ, ಸೃಷ್ಟಿಶಾಸ್ತ್ರ ಮುಂತಾ-ದುವು ಸೇರಿ ಇದು ಕಲಸುಮೇಲೋಗರವಾದಂತೆ ತೋರಬಹುದು. ಆದರೆ ವೀರಶೈವ-ವಿಶ್ವಕೋಶವನ್ನು ಒಂದೇ ಗ್ರಂಥದಲ್ಲಿ ಒದಗಿಸಿಕೊಡಬೇಕೆಂಬ ಹೇತು ಇದಕ್ಕೆ ಪ್ರೇರಕವಾಗಿದೆ. '**ಶಿವತತ್ವಚಿಂತಾಮಣಿ**' ಎಂಬ ಹೆಸರೂ ಸಾರ್ಥಕವಾಗಿದೆ. ಶಿವತತ್ವಕ್ಕೆ ಸಂಬಂಧಿಸಿದ ಯಾವುದನ್ನು ಬೇಡಿದರೂ ಈ 'ಚಿಂತಾಮಣಿ' ಕೊಡುತ್ತದೆ ಎಂದು ಅಭಿಪ್ರಾಯ. ಬಸವಚರಿತ್ರೆ ೩೦, ೩೧, ೩೨ ಈ ಸಂಧಿಗಳಲ್ಲಿ ಬಂದಿದ್ದು ಲಕ್ಕಣ್ಣನಲ್ಲಿ ಚರಿತ್ರಕಾರ ಕವಿಯ ಶಕ್ತಿಯಿದೆ ಎಂಬುದಕ್ಕೆ ನಿದರ್ಶನವಾಗಿದೆ. ಷಟ್ಪದಿ-ರಚನೆಯಲ್ಲಿಯೂ ಶೈಲಿಯಲ್ಲಿಯೂ ಈ ಗ್ರಂಥ ತಕ್ಕಮಟ್ಟಿನ ಗುಣವನ್ನು ತೋರಿಸಿದೆ. ಅಲ್ಲಲ್ಲಿ ಪ್ರಾಸಮೋಹ ಹೆಚ್ಚಿದ್ದರೂ ಕವಿತಾಶಕ್ತಿ ಸಹಜವೆಂಬುದಕ್ಕೆ ಬಾಧಕವಿಲ್ಲ. ಇನ್ನೊಂದು ಗ್ರಂಥ ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತಪುರಾಣ'. ಇದೂ ವಾರ್ಧಕಷಟ್ಪದಿ ೧೩೬ ಸಂಧಿಗಳಲ್ಲಿ ಏಳುಸಾವಿರಕ್ಕೆ ಮಿಕ್ಕಿದ ಪದ್ಯಗಳಲ್ಲಿದ್ದು 'ಶಿವತತ್ವಚಿಂತಾಮಣಿ'ಗಿಂತಲೂ ದೊಡ್ಡದಾಗಿದೆ. ಇದರಲ್ಲಿ ಶಿವನ ೨೫ ಲೀಲೆಗಳು, ಪುರಾತನ ನೂತನ ಶರಣರ ಕಥೆಗಳು, ವೇದಾಗಮಾದಿ ವಾಕ್ಯಗಳು ಮುಂತಾದ ಅನೇಕ ವಿಷಯಗಳಿವೆ. ಲಕ್ಕಣ್ಣದಂಡೇಶನ ಪ್ರಭಾವವು ಇವನ ಮೇಲಾಗಿದೆ.

ಆದರೆ 'ಶಿವತತ್ತ್ವಚಿಂತಾಮಣಿ' ಸಿದ್ಧಾಂತಪ್ರಧಾನವಾಗಿದ್ದರೆ ಇದು ಚರಿತ್ರಪ್ರಧಾನವಾಗಿದೆ. ಅಂತೆಯೆ ಪುರಾಣ ಎಂಬ ಹೆಸರು ಇದಕ್ಕೆ ಬಂದಿರಬೇಕು. ವೀರಶೈವಪುರಾಣ ಎಂದು ಯಾವುದಕ್ಕೆ ಕರೆಯಬೇಕೆಂಬುದು ತಿಳಿಯಬೇಕಾದ ವಿಷಯ. ಈ ಯುಗದ ಚರಿತ್ರೆಗಳನ್ನು ವಿಮರ್ಶಿಸುವಾಗ ಇದನ್ನು ಚರ್ಚಿಸುತ್ತೇವೆ. ಸದ್ಯಕ್ಕೆ ಈ ಗ್ರಂಥ ಬಹುವಿಷಯಗರ್ಭಿತವಾದ ವೀರಶೈವ ಕೋಶವಾಗಿದೆಯೆಂದೂ ಇದರಲ್ಲಿಯ ಕವಿತಾಶಕ್ತಿ, ಪದ್ಯರಚನಾಶಕ್ತಿ, ಭಾಷಾಶೈಲಿಗಳು ಸತ್ಕವಿಗೆ ಶೋಭಿಸುವಷ್ಟು ಚೆನ್ನಾಗಿವೆಯೆಂದೂ ಹೇಳಬಹುದು.

ಈ ಯುಗದ ಚರಿತ್ರಗ್ರಂಥಗಳಲ್ಲಿ ವೀರಶೈವಕವಿರಚಿತವಾದುವೇ ಹೆಚ್ಚಾಗಿವೆ. ಅವುಗಳಲ್ಲಿ ಪುರಾತನ ಮತ್ತು ನೂತನ ಶರಣರ ಚರಿತ್ರೆ, ಶೂರ ವ್ಯಕ್ತಿಗಳ ಚರಿತ್ರೆ ಎಂದು ವಿಭಾಗಮಾಡಬಹುದು. ಪುರಾತನಚರಿತ್ರೆಗಳಲ್ಲಿ ಬೊಮ್ಮರಸನ 'ಸೌಂದರಪುರಾಣ', ಸುರಂಗಕವಿಯ 'ತ್ರಿಷಷ್ಟಿಪುರಾತನಚರಿತ್ರೆ', ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನ', ಚೇರಮಾಂಕನ 'ಚೇರಮಕಾವ್ಯ' ಇವು ಉಲ್ಲೇಖಯೋಗ್ಯವಾಗಿವೆ. ಸುರಂಗಕವಿಯ ಗ್ರಂಥವೊಂದು ಚಂಪೂರೂಪದಲ್ಲಿದೆ, ಉಳಿದುವೆಲ್ಲ ವಾರ್ಧಕಷಟ್ಪದಿಯಲ್ಲಿವೆ. 'ಸೌಂದರಪುರಾಣ'ದಲ್ಲಿ ನಂಬಿಯಣ್ಣನ ಚರಿತ್ರೆ, 'ಚೇರಮಕಾವ್ಯ'ದಲ್ಲಿ ನಂಬಿಯಣ್ಣನ ಕಾಲಕ್ಕೆ ಶಿವಭಕ್ತನಾದ ಚೇರಮನ ಚರಿತ್ರೆ ನಿರೂಪಿತವಾಗಿವೆ. 'ರಸಿಕರ್ಗೆ ನಲವೀವುದೀ ದಿವ್ಯಕಾವ್ಯಂ' ಎಂದು ಒಂದರಲ್ಲಿ ಹೇಳಿಕೊಂಡಿದ್ದರೆ, 'ಪೊಸಬಗೆಯಿದೆಂದು ಕೊಂಡಾಡೆ ಲಾಕ್ಷಣಿಕರ್' ಎಂದು ಇನ್ನೊಂದರಲ್ಲಿದೆ. ಎರಡೂ ಮಧ್ಯಮತರಗತಿಯ ಲಕ್ಷಣಯುಕ್ತ ಷಟ್ಪದಿಕಾವ್ಯಗಳಾಗಿವೆ. 'ಭಾವಚಿಂತಾರತ್ನ'ವು ಪಂಚಾಕ್ಷರಿಯ ಮಹಿಮೆಯನ್ನು ಬೋಧಿಸುವ ಸತ್ಯೇಂದ್ರಚೋಳನ ಕಥೆ. ತಮಿಳಿನಿಂದ ಕನ್ನಡಕ್ಕೆ ಅನುವಾದವಾಗಿದೆ. 'ಕೃತಿಯ ಪಲ್ಲವಿ ತೊಡಗಿ ಪೂರ್ಣಮಪ್ಪನ್ನವಿಶಾಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದವಿಲ್ಲ' (೧-೧೭) ಎಂದು 'ಭಾವಚಿಂತಾರತ್ನ'ವೆಂಬ ಹೆಸರು ಈ ಕಾವ್ಯಕ್ಕೆ ಬಂದಿದೆ. 'ಕ್ಷಳ ಜಟಿಕುಳಾಕ್ಷರ.... ಅಲಂಕಾರಚಿತ್ರಾರ್ಥರಸಭಾವವೆಗ್ಗಳಿಸೆ' (೧-೧೯), 'ಈ ಕಾವ್ಯರತ್ನದಲ್ಲಿ ಒಸೆದು ತೋಱುವ ಲಕ್ಷಣೋಕ್ತಿ' (೧-೨೦) ಎಂಬ ಹೇಳಿಕೆಗಳಿಂದ ಪ್ರೌಢ ಮತ್ತು ಸಲಕ್ಷಣವಾದ ಷಟ್ಪದಿಕಾವ್ಯವನ್ನು ರಚಿಸಲು ಕವಿ ಹೊರಟಿದ್ದಾನೆ. ವರ್ಣಕಕಾವ್ಯಕ್ಕೆ ಲಕ್ಷಣವಿಲ್ಲ ಎಂಬ ವಾದಕ್ಕೆ ಪ್ರತಿಕ್ರಿಯೆಯಾಗಿ ಇಂಥ ದೇಸಿಗಬ್ಬಗಳು ಈ ಯುಗದಲ್ಲಿ ನಿರ್ಮಿತವಾಗಿವೆ. ಅವುಗಳಲ್ಲಿ 'ಭಾವಚಿಂತಾರತ್ನ'ವೂ ಒಂದು. ಕಥಾನಕದಲ್ಲಿ ಸ್ವತಂತ್ರವೇನೂ ಇಲ್ಲ, ಮೂಲಕಥೆಯಲ್ಲಿಯೂ ಅಂಥ ಸ್ವಾರಸ್ಯವಿಲ್ಲ. ಬಾಲಕನ ಮೇಲೆ ಕುದುರೆ ಹಾಯ್ದು ಸಾವನ್ನು ತರಲು ತಿರುಕೊಳವಿನಾಚಿ ಹಲುಬಿದ ಸಂದರ್ಭದಲ್ಲಿ ಕರುಣರಸವಿದೆ. ಉಳಿದ್ದೆಲ್ಲ ವರ್ಣನೆ-ಉತ್ಪ್ರೇಕ್ಷೆಗಳಿಂದ ತುಂಬಿಕೊಂಡ ಕೃತಿ 'ಉತ್ಪ್ರೇಕ್ಷೆಯಿಲ್ಲದುದೊಂದು ಪದವಿಲ್ಲ' ಎಂಬ ಪ್ರತಿಜ್ಞೆಯನ್ನು ಶಬ್ದಶಃ ತೆಗೆದುಕೊಳ್ಳದಿದ್ದರೆ ಉತ್ಪ್ರೇಕ್ಷೆಗಳ ವಿಪುಲತೆ ಈ ಕಾವ್ಯದಲ್ಲಿ ಕಾಣುತ್ತದೆ ಎನ್ನಬಹುದು

ಅವುಗಳಲ್ಲಿ ಮಲ್ಲಣಾರ್ಯನ ಕಲ್ಪನಾಚಮತ್ಕೃತಿ ಮಿನುಗುತ್ತದೆ, ಕ್ವಚಿತ್ತಾಗಿ ಅದು ರಸಪೋಷಕವೂ ಆಗಿದೆ. ತಿರುಕೊಳವಿನಾಚಿ ದುಕ್ಕದ ಕಡಲೊಳೀಸಾಡುತ್ತಿರುವಾಗ, 'ತೋಱಿದ ಜಲಂ' (೮-೨೭) ಮುಂತಾದ ಪದ್ಯದಲ್ಲಿ 'ಚೀಱುವಂಗನೆಯಬ್ಬರದೊಳೊದವೆ ಸಿಡಿಲು, ಅಳುವ ಮಾಱುದನಿಯವಳ ಕಣ್ಣೊಳು ಕಱೆಯೆ ಮುಱೆ, ಶೋಕ ವರ್ಷಋತುವೆನಲೆಸೆದುದು' ಎಂಬ ಉತ್ಪ್ರೇಕ್ಷೆ ಸಂದರ್ಭಕ್ಕೆ ಅನುಚಿತವೂ ಕೃತಕವೂ ಆಗಿ ತೋರುತ್ತದೆ. ಉತ್ಪ್ರೇಕ್ಷೆಯ ಪ್ರತಿಜ್ಞೆ ಹೀಗೆ ರಸಭಂಗಕ್ಕೆ ಕಾರಣವಾದದ್ದುಂಟು. ಶೈಲಿ ಪ್ರೌಢವೂ ಅಚ್ಚಗನ್ನಡದ ಒಲವುಳ್ಳದೂ ಆಗಿದೆ. ಮಲ್ಲಣಾರ್ಯನ ಕವಿತಾಶಕ್ತಿ ಮೇಲಾದುದಾದರೂ ಹಿರಿದಲ್ಲ ಎಂಬುದನ್ನು 'ಭಾವಚಿಂತಾರತ್ನ' ತೋರಿಸುತ್ತದೆ.

ನೂತನ ಶರಣರ ಚರಿತ್ರೆಗಳು ಈ ಕಾಲಾವಧಿಯಲ್ಲಿ ಹೇರಳವಾಗಿವೆ. ಅವುಗಳಲ್ಲಿ ಚಾಮರಸನ 'ಪ್ರಭುಲಿಂಗಲೀಲೆ', ನೀಲಕಂಠಾಚಾರ್ಯನ 'ಆರಾಧ್ಯಚರಿತ್ರೆ', ಚತುರ್ಮುಖಬೊಮ್ಮರಸನ 'ರೇವಣಸಿದ್ಧೇಶ್ವರಪುರಾಣ', ಸಿಂಗಿರಾಜನ 'ಮಲಬಸವರಾಜಚರಿತ್ರೆ', ಕಿಕ್ಕೇರಿಯಾರಾಧ್ಯನಂಜುಂಡನ 'ಭೈರವೇಶ್ವರಕಾವ್ಯ', ಚೆನ್ನಬಸವಾಂಕನ 'ಮಹಾದೇವಿಯಕ್ಕನ ಪುರಾಣ', ವಿರಕ್ತತೋಂಟದಾರ್ಯನ 'ಸಿದ್ಧೇಶ್ವರಪುರಾಣ' ಮತ್ತು 'ಪಾಲ್ಕುರಿಕೆ ಸೋಮೇಶ್ವರಪುರಾಣ', ಅದ್ರೀಶನ 'ಪ್ರೌಢರಾಯನ ಚರಿತೆ', ವಿರೂಪಾಕ್ಷಪಂಡಿತನ 'ಚೆನ್ನಬಸವಪುರಾಣ', ಚಿಕ್ಕನಂಜೇಶ ಅಥವಾ ಸಿದ್ಧನಂಜೇಶನ 'ರಾಘವಾಂಕಚಾರಿತ್ರ' ಮತ್ತು 'ಗುರುರಾಜಚಾರಿತ್ರ', ಶಾಂತಿಲಿಂಗ ದೇಶಿಕನ 'ಕಥಾಸೂತ್ರರತ್ನಾಕರ' ಇವನ್ನು ವಿಶೇಷವಾಗಿ ನೆನೆಯಬೇಕು. 'ಪ್ರಭುಲಿಂಗಲೀಲೆ' ಮತ್ತು 'ಚೆನ್ನಬಸವಪುರಾಣ' ಇವೆರಡು ಈ ಚರಿತ್ರಗಳ ಚರಿತ್ರೆಯಲ್ಲಿ ಮೇಲ್ತರಗತಿಯ ಗ್ರಂಥಗಳು. ಉಳಿದವುಗಳಲ್ಲಿ ಚಾರಿತ್ರಿಕ ಸಾಮಗ್ರಿಯಿದೆ, ಭಕ್ತಿ-ಉತ್ಸಾಹಗಳಿಂದ ಕೂಡಿದ ನಿವೇದನವಿದೆ, ಕವಿತಾಶಕ್ತಿಯಿದೆ, ಆದರೆ ಮೇಲ್ಮೆಯಿಲ್ಲ. ಸಿಂಗಿರಾಜನ 'ಮಲಬಸವರಾಜಚರಿತ್ರ'ವು ಬಸವೇಶ್ವರನ ಚರಿತ್ರೆಯ ಒಂದು ವಿಶಿಷ್ಟಸಂಪ್ರದಾಯವನ್ನು ಒಳಗೊಂಡಿರುವ ಕಾರಣ ಮಹತ್ವದ್ದಾಗಿದೆ. ಪಾಲ್ಕುರಿಕೆಸೋಮ, ಭೀಮಕವಿ ಇವರ ಬಸವಚರಿತ್ರೆಗಿಂತ ಕೆಲವು ಮುಖ್ಯಾಂಶಗಳಲ್ಲಿ ಇದು ಬೇರೆಯಾಗಿದೆ. ಲಕ್ಕಣ್ಣದಂಡೇಶನ 'ಶಿವತತ್ವಚಿಂತಾಮಣಿ'ಯಲ್ಲಿಯೆ ಈ ಬೇರೆ ಸಂಪ್ರದಾಯವಿದೆ. ಅವನ ಅನುಯಾಯಿಯಾದ ಸಿಂಗರಾಜನು ಅವನನ್ನು ಅನುಸರಿಸಿದ್ದು ಸಹಜವಾಗಿದೆ. ಚೆನ್ನಬಸವಾಂಕನ 'ಮಹಾದೇವಿಯಕ್ಕನ ಪುರಾಣ'ವು ನಾನಾಷಟ್ಪದಿಗಳಲ್ಲಿ ಬರೆದಿದ್ದು ಕೆಲವು ಸಾಂಗತ್ಯಗಳನ್ನೂ ಒಳಕೊಂಡಿದೆ. ಹರಿಹರನು ರಗಳೆಯಲ್ಲಿ ಹೇಳಿದ ಚರಿತ್ರೆಯನ್ನೇ ತಾನು ಷಟ್ಪದಿಯಲ್ಲಿ ಬರೆದಿರುವುದಾಗಿ ಹೇಳಿದ್ದಾನೆ. ಚೆನ್ನಬಸವಾಂಕನ ಬರೆವಣಿಗೆಯಲ್ಲಿ ಚದುರಿದೆ, ಚಮುಕಿಲ್ಲ. ಕವಿಸಮಯನಿಷ್ಠವರ್ಣನೆಗಳನ್ನು ಮಾಡಿದ್ದಾನೆ. 'ಬಹಳ ದೊಡ್ಡ ಗ್ರಂಥವಾದರೂ ಕಾವ್ಯದೃಷ್ಟಿಯಿಂದ ಚೆನ್ನಾಗಿಲ್ಲದಿಲ್ಲ. ಈ ಗ್ರಂಥವನ್ನು ಅನೇಕ ದೇಶೀಯ ಛಂದಸ್ಸುಗಳಲ್ಲಿ ಬರೆದು ಅದರ ನಾಯಕಿಯು ಪಟ್ಟ

ಅನೇಕ ತೊಂದರೆಗಳನ್ನು ಚೆನ್ನಾಗಿ ತಂದಿದ್ದಾನೆ.'[1] ವಿರಕ್ತತೋಂಟದಾರ್ಯನು 'ಸಿದ್ಧೇಶ್ವರಪುರಾಣ'ದಲ್ಲಿ ತೋಂಟದ ಸಿದ್ಧಲಿಂಗನ ಚರಿತೆಯನ್ನೂ 'ಪಾಲ್ಕುರಿಕೆ ಸೋಮೇಶ್ವರಪುರಾಣ'ದಲ್ಲಿ ಪಾಲ್ಕುರಿಕೆ ಸೋಮೇಶ್ವರನ ಚರಿತೆಯನ್ನು ವಾರ್ಧಕ ಷಟ್ಪದಿಯಲ್ಲಿ ವಿಸ್ತಾರವಾಗಿ ಬರೆದಿದ್ದಾನೆ. ಎರಡನೆಯ ಗ್ರಂಥದಲ್ಲಿ ಕವಿ 'ಅವನ ಜೀವನಚರಿತ್ರೆಯನ್ನು ಸ್ವಾರಸ್ಯವಾಗಿ ತರದೆ ಅವನಿಗೆ ಅನ್ಯಾಯಮಾಡಿದ್ದಾನೆ. ಕಥೆಯ ಮಧ್ಯದಲ್ಲಿ ಇತರ ಅನೇಕ ಕೆಲಸಕ್ಕೆ ಬಾರದ ಘಟನೆಗಳನ್ನೆಲ್ಲಾ ತಂದು ಸೇರಿಸಿ ಮಧ್ಯೆ ಎಲ್ಲೋ ಒಂದೊಂದು ಕಡೆ ನಾಯಕನ ಜೀವನದಲ್ಲಿ ನಡೆದ ಒಂದೆರಡು ಘಟನೆಗಳನ್ನು ಮಾತ್ರ ಹೇಳಿದ್ದಾನೆ. ಇದು ಒಂದಕ್ಕೊಂದು ಸಂಬಂಧವಿಲ್ಲದ ನೂರಾರು ಕಥೆಗಳು ಸೇರಿಸಿ ಹೊಲಿದ ಬಂತೆಯಂತಿದೆ; ಬಗೆಬಗೆಯ ಪದಾರ್ಥಗಳನ್ನೊಳಗೊಂಡ ರೀತಿ-ರಂಗವಿಲ್ಲದ ರಾಶಿಯಂತಿದೆ. ವೀರಶೈವಕಥಾನಕಗಳ ನಿಘಂಟುವಾಗಿರುವುದರಿಂದ ಇದಕ್ಕೆ ಸ್ವಲ್ಪ ಬೆಲೆಯುಂಟು.'[2] ಈ ಯುಗದ ಹಲವಾರು ಗ್ರಂಥಗಳಲ್ಲಿ ಈ ಬಗೆಯ ಅನೇಕಾಗ್ರತೆ ಕಂಡು ಬಂದಿದೆ. ಅದರಿಂದ ಗ್ರಂಥಕಾರನ ಯೋಗ್ಯತೆ ಎಷ್ಟು ಮೇಲಾದರೂ ಕಲಾದೃಷ್ಟಿಯಿಂದ ಗ್ರಂಥದ ಬೆಲೆ ತಗ್ಗುತ್ತದೆ. ಅದೃಶ್ಯ ಇಲ್ಲವೆ ಅದ್ರೀಶಕವಿಯ 'ಪ್ರೌಢರಾಯನ ಕಾವ್ಯ'ವು ತೋರಲಿಕ್ಕೆ ಐತಿಹಾಸಿಕವಾದರೂ ನಿಜವಾಗಿ ಧಾರ್ಮಿಕವಾಗಿದೆ. ಅದರಲ್ಲಿ ಪ್ರೌಢರಾಯನಿಗೆ ಅವನ ಮಂತ್ರಿ ಹೇಳಿದ ಶಿವಶರಣರ ಕಥೆಯ ಸಾರವಿದೆ. ಸಿದ್ಧನಂಜೇಶನು 'ರಾಘವಾಂಕಚಾರಿತ್ರ' ಮತ್ತು 'ಗುರುರಾಜಚಾರಿತ್ರ' ಎಂಬ ಎರಡು ಮಹತ್ವದ ಗ್ರಂಥಗಳನ್ನು ರಚಿಸಿದ್ದಾನೆ. ಮೊದಲನೆಯದು ರಾಘವಾಂಕನ ಚರಿತ್ರೆಯನ್ನು ನಿರೂಪಿಸಿದ ಒಂದೇ ಗ್ರಂಥ, ಅದರಲ್ಲಿ ಸತ್ಯಾಂಶಗಳಿದ್ದರೂ ೩-೪ ನೂರು ವರ್ಷಗಳಾದ ಮೇಲೆ ಬರೆದಿದ್ದ ಕಾರಣ ಪೂರ್ತಿಯಾಗಿ ವಿಶ್ವಸನೀಯವಲ್ಲ. ಎರಡನೆಯದು ಅನೇಕ ವೀರಶೈವಗುರುಗಳ ಮತ್ತು ಕವಿಗಳ ಚರಿತ್ರೆಯನ್ನು ಹೇಳಿದೆ, ತತ್ವ-ಸಂಪ್ರದಾಯಗಳನ್ನೂ ಶಿವಲೀಲೆ-ಗಳನ್ನೂ ವಿವರಿಸಿದೆ. ನೂತನಶರಣರ ಚರಿತ್ರೆಗಳನ್ನು ಪ್ರಧಾನವಾಗಿಟ್ಟುಕೊಂಡು ಒಂದು ಬಹುವಿಷಯಗರ್ಭಿತವಾದ ಧಾರ್ಮಿಕ ಕೋಶವನ್ನು 'ಗುರುರಾಜಚಾರಿತ್ರ'ವು ಒದವಿಸಿರುತ್ತದೆ, 'ವೀರಶೈವಾಮೃತಪುರಾಣ'ವನ್ನು ಕೆಲಮಟ್ಟಿಗೆ ಹೋಲುತ್ತದೆ. 'ಗುರುರಾಜಚಾರಿತ್ರದಲ್ಲಿ ಕಾವ್ಯಾಂಶಕ್ಕಿಂತ ಧರ್ಮಾಂಶ ಹೆಚ್ಚಿದೆ. ಇದೇ ಕವಿಯ ಕೃತಿ ರಾಘವಾಂಕಚಾರಿತ್ರವನ್ನು ಓದುವಾಗ ನಮ್ಮ ಭಾವನೆ ತಿರುವುಮುರುವಾಗುತ್ತದೆ ....ನೂರುಗಂಟಲೆ ಕಥೆಗಳನೊಳಗೊಂಡಿರುವ ಗುರುರಾಜಚಾರಿತ್ರ ಒಂದು ಸಣ್ಣ 'ಶಿವಕಥಾಸರಿತ್ಸಾಗರ'ದಂತಿದೆ....ಕನ್ನಡಸಾಹಿತ್ಯ ಮತ್ತು ವೀರಶೈವಸಂಪ್ರದಾಯ.

---

1 ಡಿ. ಎಲ್. ನರಸಿಂಹಾಚಾರ್: ವಿಜಯನಗರಕಾಲದ ಕನ್ನಡಸಾಹಿತ್ಯ, (ಪ್ರ.ಕ., ೨೨-೪, ಪು, ೧೯

2 ಡಿ. ಎಲ್. ನರಸಿಂಹಾಚಾರ್: ವಿಜಯನಗರಕಾಲದ ಕನ್ನಡಸಾಹಿತ್ಯ, (ಪ್ರ.ಕ., ೨೨-೪, ಪು. ೧೮-೧೯

ದೃಷ್ಟಿಯಿಂದ ಗುರುರಾಜಚಾರಿತ್ರಕ್ಕೆ ಇಂದು ಒಳ್ಳೇ ಪ್ರಾಶಸ್ತ್ಯವಿದೆಯೆಂದು ಹೇಳಬೇಕು.'[1] ಈ ರೀತಿಯಾಗಿ ಪ್ರೊ. ಭೂಸನೂರಮಠರು ಮಾಡಿದ ವಿಮರ್ಶೆಯನ್ನು ಲಕ್ಷಿಸಬೇಕು.

ಶೂರಚರಿತ್ರೆಗಳಲ್ಲಿ ನಂಜುಂಡನ 'ಕುಮಾರರಾಮಕಥೆ' ಮತ್ತು ಗಂಗನ 'ಕುಮಟರಾಮಕಥೆ' ಇವೆರಡಿವೆ. ಎರಡರ ಕಥಾನಾಯಕರು ಕುಮಾರರಾಮ, ಎರಡೂ ಸಾಂಗತ್ಯದಲ್ಲಿ ಬರೆದುವು. ಕುಮಾರರಾಮಕಥೆಯಲ್ಲಿ ಅಲ್ಲಲ್ಲಿ ಕೆಲವು ಷಟ್ಪದಿಗಳೂ ಇವೆ. ಸಾಮಾನ್ಯವಾಗಿ ವೀರಶೈವಕವಿಗಳು ಹರಿಹರನು ಹಾಕಿಕೊಟ್ಟ ವಿಷಯ-ನಿಯಮವನ್ನು ಅನುಸರಿಸಿದ್ದಾರೆ. ಅದಕ್ಕೆ ಅಪವಾದವಾಗಿ ಇವರಿಬ್ಬರು ಕುಮಾರ-ರಾಮನೆಂಬ ಕಂಪರಾಜನ ಮಗನು ತೋರಿದ ಶೌರ್ಯ–ಸಚ್ಚಾರಿತ್ರ್ಯಗಳ ಲೌಕಿಕ-ಕಥೆಯನ್ನು ನಿರೂಪಿಸಿದ್ದಾರೆ, ಧಾರ್ಮಿಕವಿಷಯಗಳಿಂದ ಇಡಿಕಿರಿದ ಸಾಹಿತ್ಯಕ್ಕೆ ಸ್ವಲ್ಪಮಟ್ಟಿಗೆ ವೈವಿಧ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಕಥನಶೈಲಿಯಲ್ಲಿ ಮತ್ತು ವರ್ಣನೆಯಲ್ಲಿ ಸೊಗಸಿದೆ.

'ರಸದಿಂದೆ ಪುಟ್ಟಿಸಿ ಭಾವದಿಂದ ಬಲಿಯಿಸಿ ।
ಪೊಸಬಗೆವೆತ್ತಲಂಕೃತಿಯ ।
ಎಸಕದಿಂ ಬಳೆಯಿಸಿ ಕೃತಿಯೆನಿಸುವೆನಿದ ।
ರಸಿಕರು ಮೆಚ್ಚುವಂದದಲಿ ॥'

ಎಂದು ಹೇಳಿ ನಂಜುಂಡನು ತನ್ನ ಕಥೆಯಲ್ಲಿ ಜಾನಪದಸರಣಿಯ ಕಾವ್ಯಕ್ಕೆ ಪಂಡಿತ-ಪ್ರಿಯವಾಗುವ ರಸಾಲಂಕಾರಗಳ ಜೋಡನ್ನು ಕೊಟ್ಟಿದ್ದಾನೆ. ಸಾಂಗತ್ಯಗ್ರಂಥಗಳಲ್ಲಿ ನಂಜುಂಡನ 'ಕುಮಾರರಾಮಕಥೆ' ಮನ್ನಣೆಯ ಸ್ಥಾನಗಳಿಸಿದೆ.

೩೦. ಈ ಯುಗದ ವೀರಶೈವ ಸಾಹಿತ್ಯ (೩)

ಚಾಮರಸ

ಈ ಯುಗದ ಚರಿತ್ರಗ್ರಂಥಗಳಲ್ಲಿ ಚಾಮರಸನ 'ಪ್ರಭುಲಿಂಗಲೀಲೆ' ಶ್ರೇಷ್ಠಕೃತಿ. ಚಾಮರಸನ ಚರಿತ್ರೆ ಅವನ ಕಥಾನಾಯಕನ ಚರಿತ್ರೆಯಂತೆ ತಿಳಿದದ್ದು ಸ್ವಲ್ಪ. ಪ್ರೌಢದೇವರಾಯನ ಕಾಲದ ವಿರಕ್ತರಲ್ಲಿ ಅವನ ಗಣನೆಮಾಡುತ್ತಾರೆ. ಅವನ ಕೃತಿಯನ್ನು ನೋಡಿದರೆ ಜ್ಞಾನವೈರಾಗ್ಯಗಳ ಮೂರ್ತಿಯೂ ಸ್ವತಂತ್ರ ಸಿದ್ಧಪುರುಷನೂ ಆದ ಅಲ್ಲಮನ ಜೀವಾಳವನ್ನು ಅರಿತು ಬಿತ್ತರಿಸುವುದಕ್ಕೆ ಬೇಕಾದ ವಿರಕ್ತಿ–ಸ್ವತಂತ್ರ-ದೃಷ್ಟಿಗಳು ಅವನಲ್ಲಿರಬೇಕೆಂದು ಊಹಿಸಬಹುದು. 'ಪ್ರಭುಲಿಂಗಲೀಲೆ'ಯ

---

1 ಸಂ. ಶಿ. ಭೂಸನೂರಮಠ: ಗುರುರಾಜಚಾರಿತ್ರ, ಪ್ರಸ್ತಾವನೆ, ಪು. ೧೩, ೧೭.

ಶ್ರೇಷ್ಠತೆಗೆ ಕಥಾನಾಯಕ ಮತ್ತು ಚಿತ್ರಕಾರ ಇವರ ಮೇಳವಿಕೆ ಮುಖ್ಯಕಾರಣವಾಗಿದೆ. ಚಾಮರಸನ ಪ್ರತಿಭೆಗೆ ವ್ಯಕ್ತಿತ್ವದ ಜೋಡಿರುವುದರಿಂದಲೇ ಅವನ ಕೃತಿ ಸಫಲವಾಯಿತು.

ಅಲ್ಲಮಪ್ರಭುವಿನ ಚರಿತ್ರೆಯನ್ನು ಮೊಟ್ಟಮೊದಲು ಬರೆದವನು ಹರಿಹರನು. ಅವನು 'ಪ್ರಭುದೇವರ ರಗಳೆ' ಮತ್ತೆ ಚಾಮರಸನ 'ಪ್ರಭುಲಿಂಗಲೀಲೆ' ಇವೆರಡರ ಕಥಾನಕ ಮತ್ತು ಕ್ರಮದಲ್ಲಿ ಅನೇಕ ವ್ಯತ್ಯಾಸಗಳಿವೆ. ಹರಿಹರನ ಅಲ್ಲಮನು ಕಾಮಲತೆಗೆ ಮರುಳಾಗಿ ವಿರಹದಿಂದ ಬೆಂದು ವೈರಾಗ್ಯಪಡೆಯುವನು, ಚಾಮರಸನ ಅಲ್ಲಮನು ಮಾಯೆಯನ್ನು ಮರುಳುಮಾಡಿ ಅವಳ ಕೈಗೆ ಸಿಕ್ಕದೆ ವೈರಾಗ್ಯಮೆರೆಯುವನು. ಹರಿಹರನಲ್ಲಿ ಅಲ್ಲಮನು ಸಿದ್ಧರಾಮನನ್ನು ಕಂಡು ಶ್ರೀಪರ್ವತಕ್ಕೆ ಹೋದನೆಂದಿದೆ, ಕಲ್ಯಾಣಕ್ಕೆ ಹೋದ ಸಂದರ್ಭವಿಲ್ಲ. ಮುಕ್ತಾಯಿ–ಅಕ್ಕಮಹಾದೇವಿ –ಗೋರಕ್ಷನಾಥರ ಸನ್ನಿವೇಶಗಳಿಲ್ಲ. ಹರಿಹರನ ರಗಳೆ ಒಂದು ಬಿರುಗಾಳಿಯ ವೇಗದಿಂದ ಮುಂದುವರಿದು ಮುಗಿಯುತ್ತದೆ, ಚಾಮರಸನ 'ಲೀಲೆ' ಸಲೀಲವಾಗಿ ತುಂಬಿದ ತೊರೆಯಂತೆ ಸಾಗುತ್ತದೆ. ಅಲ್ಲಮನ ಚರಿತ್ರೆಯ ಸತ್ಯಾಂಶ ತಿಳಿಯುವುದು ಸುಲಭವಲ್ಲ. ಆದರೆ ಎಲ್ಲ ಸಾಮಗ್ರಿಗಳ ಅವಲೋಕನದಿಂದ ಅಲ್ಲಮನ ಚರಿತ್ರೆಯಲ್ಲಿ ತರುವಾಯ ಮಾರ್ಪಾಟು ಆಗಿದೆ ಎಂದು ಅಭಿಪ್ರಾಯವೊಂದು ಉಂಟಾಗಿದೆ. 'ಮೇಲೆ ಹೇಳಿರುವ ಈ ಕಥೆಗಳನ್ನೆಲ್ಲ ವಿಮರ್ಶಿಸಿದರೆ ಅಲ್ಲಮಪ್ರಭುವಿನ ಚರಿತ್ರೆಯನ್ನು ಲಕ್ಕಣ್ಣದಂಡೇಶ, ಚಾಮರಸ, ಅದೃಶ್ಯಕವಿ ಮುಂತಾದವರು ಒಂದು ರೀತಿ ತಿದ್ದುವುದಕ್ಕೆ ಪ್ರಯತ್ನಪಟ್ಟ ಹಾಗೆ ತೋರುತ್ತದೆ.'[1] 'ಅಲ್ಲಮಪ್ರಭುಸಾಂಪ್ರದಾಯದ ಸಲ್ಲಲಿತಸನ್ಮಾರ್ಗವನು ನಾನೆಲ್ಲರಱಿವಂದದಲಿ ಪೇಳುವೆನುಚಿತವಚನದಲಿ' (೧–೮)[2] ಎಂಬ ಚಾಮರಸನ ಹೇಳಿಕೆಯಲ್ಲಿ ಒಂದು ವಿಶಿಷ್ಟಸಂಪ್ರದಾಯದ ಸೂಚನೆಯಿದೆ. ಅದು ಹಾಗಿರಲಿ ಬಿಡಲಿ, ಚಾಮರಸನು ಬೆಳೆಯುತ್ತಿರುವ ಇಲ್ಲವೆ ಬಿದ್ದು ಎದ್ದ ವ್ಯಕ್ತಿಯನ್ನಲ್ಲ, ಬೆಳೆದ ಮತ್ತು ಸಿದ್ಧನಾದ ವ್ಯಕ್ತಿಯನ್ನು ಚಿತ್ರಿಸುವ ಉದ್ದೇಶವನ್ನಿಟ್ಟುಕೊಂಡಿದ್ದನೆಂಬುದು ಸ್ಪಷ್ಟವಾಗಿದೆ. ಇಷ್ಟೇ ಯಾಕೆ, 'ಪ್ರಭುಲಿಂಗಲೀಲೆ' ಎಂಬ ಹೆಸರು ತೋರಿಸುವಂತೆ, ಅಲ್ಲಮಪ್ರಭುವಿನ ರೂಪದಲ್ಲಿ ಲಿಂಗನು ಮಾಡಿದ ಲೀಲೆಯನ್ನು ಚಾಮರಸನು ಬಣ್ಣಿಸಲು ಹೊರಟಿದ್ದಾನೆ. ತನ್ನ ಉದ್ದೇಶದ ಘನತೆಗೆ ಅನುಗುಣವಾಗಿ ಅವನು ಅಹಂಕಾರವನ್ನು ಬದಿಗೊತ್ತಿ ವಿನಯವನ್ನು ಮೆರೆದಿದ್ದಾನೆ, ದೈವೀಶಕ್ತಿಗೆ ತಾನು ಸಾಧನಮಾತ್ರವೆಂದು ನಂಬಿದ್ದಾನೆ. 'ದೇಗುಲವೆ ಮಾತಾಡುವಂದದೊಳು' (೧–೯), 'ವಿವರಿಸುವಡೀ ಲೀಲೆಯನು ಹೇಳುವನು ದಿಟ ನಾನಲ್ಲ....

---

1 ಎಂ. ಆರ್. ಶ್ರೀನಿವಾಸಮೂರ್ತಿ: ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ ಪು. ೪೪

2 ೧–೮, ೯, ೧೦, ೧೨, ೧೩ ಇವು 'ಪ್ರಭುಲಿಂಗಲೀಲೆ'(ಸಂಪೂರ್ಣಗ್ರಂಥ)ಯ ಪದ್ಯಸಂಖ್ಯೆಗಳನ್ನು ಸೂಚಿಸುತ್ತವೆ.

ಶಿವನ ನಟನಾಟಕದ ಮಹಿಮೆಯ ಶಿವನೆ ಬಲ್ಲನು' (೧-೧೦) ಎಂದು ಮುಂತಾದ ಪದ್ಯಗಳನ್ನು ನೋಡಬೇಕು. 'ಕಾಳಗದ ಕಥೆಯಲ್ಲ, ಸತ್ತವರ ಕಥೆಯಲ್ಲ' (೧-೧೨, ೧೩) ಈ ಪದ್ಯಗಳಲ್ಲಿಯೂ ಅವನ ದೃಷ್ಟಿವಿಶೇಷ ತೋರಿದೆ, ತತ್ಕಾಲೀನವಾದ ವಿಷಯವಾದವೂ ಸೂಚಿತವಾಗಿದೆ.

ಅಲ್ಲಮಪ್ರಭುವಿನ ವ್ಯಕ್ತಿಚಿತ್ರಣದಲ್ಲಿಯೇ ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿ ಎಲ್ಲ ಸಂನಿವೇಶಗಳನ್ನು ಮೂಲ ಉದ್ದೇಶಸಿದ್ಧಿಗೆ ಅನುಗೊಳಿಸಿಕೊಂಡು ಇತರ ವಿಲೋಭನಗಳ ಮಾಯೆಗೆ ಬಲಿಬೀಳದೆ ವ್ಯಕ್ತಿಕೇಂದ್ರಿತ ಚರಿತ್ರೆಯನ್ನು ಸಮರ್ಪಕ-ವಾಗಿ ಸಹಜವಾಗಿ ಬರೆದಿರುವುದರಲ್ಲಿ ಚಾಮರಸನ ಹಿರಿಮೆಯಿದೆ. ಮೊದಲೇ ಪಾರ್ವತಿಗೆ ಶಿವನು ಅಲ್ಲಮನ ಪರಿಚಯಮಾಡಿಕೊಡುವಾಗ

ಖಾತಿಗೊಳ್ಳದಿರಾಡಿ ತೋಱದ- |
ಡೀತ ನಿಷ್ಠುರನೆನ್ನದಿರು ಬಱ |
ಮಾತುಮಾತಿಗೆ ಸಿಕ್ಕನು ಆರಾರು ಆವ ಭಕ್ತಿಗಳ |
ರೀತಿಗಳಲಿಹರು ಅವರಿಗವರ |
ಪ್ರೀತಿಯಲಿ ರೂಪಾಗಿ ತೋಱುವ- |
ನಾತನು ಅನುಪಮನಗಜೆ ಕೇಳ್ ಸಾಮಾನ್ಯನಲ್ಲೆಂದ ||' (೧-೨೩)[1]

ಎಂದು ಅಲ್ಲಮನ ಅಸಾಮಾನ್ಯತೆಯನ್ನು ತಿಳಿಸುತ್ತಾನೆ. ಮುಂದೆ ಅನೇಕ ಸಂದರ್ಭ-ಗಳಲ್ಲಿ ಈ ಹೇಳಿಕೆ ಸತ್ಯವಾಗುತ್ತದೆ. ಕೆಲವು ಕಡೆ ಸ್ಪಷ್ಟವಾಗಿ 'ಅಲ್ಲಮಪ್ರಭುವೆಂದೆನಿಸಿ-ಕೊಂಬವನು ತಾ ಪ್ರತ್ಯಕ್ಷ ಪರಬೊಮ್ಮ' (೪-೧೩೬) ಎಂದು ಬಣ್ಣಿಸಿದೆ. ಸಿದ್ಧಪುರುಷನ ರೂಪದಲ್ಲಿದ್ದ ಪರಬ್ರಹ್ಮ, ಪರಮಜ್ಞಾನಿ ಎಂಬುದಾಗಿ ಚಾಮರಸನು ಅಲ್ಲಮನನ್ನು ಚಿತ್ರಿಸಿದ್ದಾನೆ. ಹೀಗೆ ಚಿತ್ರಿಸುವಾಗ ಪವಾಡಗಳನ್ನು ತೆರೆತೆರೆಯಾಗಿ ಚಿಮ್ಮಿಸುವ ರೀತಿ ಬಂದಿದ್ದರೆ ಸಾಂಪ್ರದಾಯಿಕವರ್ಣನೆಗಳಿಂದ ಅದು ರಂಗುರಂಗಾಗಿದ್ದರೆ 'ಪ್ರಭುಲಿಂಗಲೀಲೆ' ಉನ್ನತಿಯನ್ನು ಪಡೆಯುತ್ತಿರಲಿಲ್ಲ. ಮಾಯೆಯ ಸಂನಿವೇಶ-ದಿಂದ ಕೊನೆಯ ವರೆಗೆ ಅಲ್ಲಮನು ತನ್ನನ್ನು ಇದಿರಿಸಿದ ಜೀವನಸಂನಿವೇಶಗಳಲ್ಲಿ ಸಂಪೂರ್ಣವೈರಾಗ್ಯ, ನಿರ್ಲಿಪ್ತತೆ, ಸಮಯಾತೀತತೆ, ಆದರ್ಶಗುರುವಿನ ಮಾರ್ಗದರ್ಶನ, ನಿಷ್ಠುರತೆಯೊಡನೆ ಬೆರೆತ ಪ್ರೇಮಳತೆ ಈ ಮೊದಲಾದ ವ್ಯಕ್ತಿತ್ವದ ಅಂಗಗಳನ್ನು ತೋರ್ಪಡಿಸಿದ್ದಾನೆ. ಮಾಯೆಯಲ್ಲಮರನ್ನು ಸೆಜ್ಜೆವನೆಯಲ್ಲಿ 'ತಮವ ತರಣಿಯನೊಂದುಗೂಡುವೆವೆಂಬ ಭಾವಭ್ರಮಿತಬುದ್ಧಿಯಲಿ' (೩-೮೬) ಕೆಳದಿಯರು ಸೇರಿಸಿದರಂತೆ. ಆಗ ಅಲ್ಲಮನು ಎಷ್ಟು ನಿರ್ಲಿಪ್ತನೂ ಮಾಯಾತೀತನೂ ಆಗಿ

---

1 ಇಲ್ಲಿಂದ ಮುಂದಿನವುಗಳೆಲ್ಲ 'ಪ್ರಭುಲಿಂಗಲೀಲೆಯ ಸಂಗ್ರಹ'ದ ಪದ್ಯಸಂಖ್ಯೆಗಳನ್ನು ಸೂಚಿಸುತ್ತವೆ.

ನಡೆದನೆಂಬುದನ್ನು ಚಾಮರಸನು ಚೆಲುವಾಗಿ ವರ್ಣಿಸಿದ್ದಾನೆ. 'ಮಳೆಗೆ ನೆನೆವುದೆ ಗಾಳಿ ಬೀಸಿದೊಡಲೆವುದೆ ಬಲುಗಿಚ್ಚಿನುರಿಯಿಂದಳಿವುದೇ ನಭವು, **ಆ ಪರಿಯ ಬಯಲಿಗನು** ತಾನಾಗಿ' (೩-೮೭) ಎಂದು ಮುಂತಾದ ಪದ್ಯವನ್ನು ನೋಡಬೇಕು. ಮುಂದೆ ನರ್ತಿಸುವ ಮಾಯೆಯ ಜೊತೆಗೆ ಮದ್ದಳೆಯನ್ನು ಬಾರಿಸುವ ಅಲ್ಲಮನನ್ನು ವರ್ಣಿಸುತ್ತ

'ಲಲಿತನಿರ್ಮಳ ಚಂದ್ರಕಾಂತದ |
ಶಿಲೆಯ ಹತ್ತಿರ ಲತೆಯ ದಾವಾ- |
ನಳನು ಕೊಳಲಾಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ |
ತಿಳಿಯದಱಿಯದ ಜನಕೆ ಮಾಯೆಯ |
ತಳಿತ ಕಾಮಜ್ವಾಲೆಯಲ್ಲಮ- |
ನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯೆಂಬಂತೆ ||' (೫-೧೪೧)

ಎಂದು ಚಾಮರಸನು ಕೊಟ್ಟ ಹೋಲಿಕೆ ಅತ್ಯಂತ ಸೂಕ್ಷ್ಮವೂ ಸಮರ್ಪಕವೂ ಆಗಿದೆ. ಅವನ ವ್ಯಕ್ತಿತ್ವದರ್ಶನ ಮತ್ತು ಅಸಾಧಾರಣ ಪ್ರತಿಭೆ ಇವಕ್ಕೆ ಈ ಪದ್ಯ ಉತ್ತಮನಿದರ್ಶನವಾಗಿದೆ. ಅಲ್ಲಮನು ಕಾಮಿಯಂತೆ ಸಾಮಾನ್ಯನಂತೆ ಸಾಮಾನ್ಯ-ಜನಕ್ಕೆ ತೋರುವನು, ಆದರೆ ನಿಜವಾಗಿ ಅವನು ನಿರ್ಮಾಯನು, ಈಶ್ವರ-ಸ್ವರೂಪನು ಎಂಬುದನ್ನು ಇಲ್ಲಿಯ ಕಲ್ಪನೆ ತಿಳಿಸುತ್ತದೆ. ಮಾಯೆಯನ್ನು ಅವನು ತಿರಸ್ಕರಿಸಿ ಹೊರಡಲು 'ಗಾಱುದೂಱಿನ ಮಾಯೆಗೀಯೆಗೆ ತೋಱಿಸುವನೇ ತನ್ನ ನಿಜವನು, **ಮಾರಿ ಮಾಸಲ**ನಲ್ಲಮಪ್ರಭು ಗುರುಗುಹೇಶ್ವರನು' (೫-೧೮೦) ಎಂದಿದೆ. ಗೊಗ್ಗಯ್ಯನ ಸಂದರ್ಭದಲ್ಲಿ 'ನರನು ತಾ ದಿಟವೆಂಬ ಬಳಕೆಯ ಪರಿಯನಂಗೀಕರಿಸಿ ಪರರಿಗೆ ಪರಮನಲ್ಲಮ ನಟಿಸುತಿರ್ದನು ತನ್ನ ಲೀಲೆಯಲಿ' (೨-೨೫೧) ಎಂಬುದು ಇದನ್ನೇ ಹೇಳುತ್ತದೆ. ಸಿದ್ಧರಾಮ, ಬಸವೇಶ್ವರ ಮೊದಲಾದ ಶರಣರು ತಂತಮ್ಮ ನೆಲೆಯಲ್ಲಿ ಎತ್ತರಮುಟ್ಟಿದವರಾದರೂ ಅಲ್ಲಮನಂಥ ಆಕಾಶದೆತ್ತರದ ಮುಂದೆ ಅವರು ನಮ್ರರಾಗುತ್ತಾರೆ, ಅವನಿಂದ ಜರೆಯಿಸಿಕೊಂಡು ಅರಿವುಪಡೆಯುತ್ತಾರೆ. ಯಾರ ಗುಣವೇನು, ಕೊರತೆ ಯಾವುದು, ಪ್ರಗತಿಯನ್ನು ತಡೆದಿರುವ ಒಳಗಂಟು ಯಾವುದು ಇದರ ಸೂಕ್ಷ್ಮಪರಿಜ್ಞಾನದಿಂದ ಅಲ್ಲಮನು ಅವರನ್ನು ಒರೆಯುತ್ತಾನೆ, ಕೆಡೆನುಡಿಯು-ತ್ತಾನೆ, ದಾರಿತೋರುತ್ತಾನೆ. ಅವನ ಆ ಬೆಳಕೆಲ್ಲ ಒಲವಿನ ಬೆಳಕು, ಅಹಮ್ಮಿನ ಥಳುಕಲ್ಲ. 'ಸತ್ಯಶಾಶ್ವತಸ್ವಸ್ವರೂಪದ ತತ್ವ ತಾನು ಎಂದಱಿವುದೇ ಫಲ' ಎಂಬ ತನ್ನರಿವು ಇದೇ ಅವನ ಜ್ಞಾನಮಾರ್ಗ. ಕರ್ಮಮಾರ್ಗ ಅದರ ಮುಂದೆ ಗೌಣ. ಹೀಗೆ ಅಲ್ಲಮನ ಮೂರ್ತಿಸ್ವರೂಪವನ್ನು ಚಾಮರಸನು ಸಂಪೂರ್ಣವಾಗಿ ಸಹಜೋ-ಜ್ಜ್ವಲವಾಗಿ ಚಿತ್ರಿಸಿದ್ದಾನೆ. ಅವನ ಚಿತ್ರಣದಲ್ಲಿ ಆದರ್ಶೀಕರಣವಿದೆ, ಧಾರ್ಮಿಕ ಅಭಿನಿವೇಶವಿದೆ. ಆದರೆ ಚರಿತ್ರೆಯ ಜೀವಾಳಕ್ಕೆ ಬಾಧೆಯನ್ನು ತರುವಷ್ಟು ಅವ

ಮಿತಿಮೀರಿಲ್ಲ. ಒಂದು ದೃಷ್ಟಿಯಿಂದ ಪಾರ್ವತಿಯ ತಾಮಸಕಳೆಯಾಗಿ ಬಂದ ಮಾಯೆ, ಅವಳಿಗೆ ತಿಳಿವನ್ನು ಕೊಟ್ಟ ವಿಮಳೆ, ಸಾತ್ವಿಕಕಳೆಯಾಗಿ ಬಂದ ಅಕ್ಕಮಹಾದೇವಿ, ಸುಜ್ಞಾನಿ ಮತ್ತು ನಿರಹಂಕಾರರ ಮಗನಾಗಿ ಹುಟ್ಟಿದ ಅಲ್ಲಮ ಈ ಮುಂತಾದ ಕಥಾರಚನೆಯಲ್ಲಿ ಆಧ್ಯಾತ್ಮಿಕವಾದ ಸಾಂಕೇತಿಕ ಧ್ವನಿಯ ಏಕತೆ ಕಾಣುತ್ತದೆ. 'ಮಹಾತ್ಮರ ಜೀವನಚರಿತ್ರೆಯನ್ನು ಕಾವ್ಯರೂಪದಲ್ಲಿ ಹೇಗೆ ಬರೆಯ ಬೇಕೆಂಬುದಕ್ಕೆ ಪ್ರಭುಲಿಂಗಲೀಲೆ ಉತ್ತಮನಿದರ್ಶನವಾಗಿದೆ. ಎರಡನೆಯದಾಗಿ ಪ್ರಭುಲಿಂಗಲೀಲೆ ವೀರಶೈವಪುರಾಣವಾಗಿ ಪರಿಗಣಿತವಾದರೂ ಸಾಮಾನ್ಯವಾಗಿ ಬಸವಚೆನ್ನಬಸವಪುರಾಣಾದಿಗಳಲ್ಲಿ ಬರುವಂತೆ ಪುರಾತನರ ಮತ್ತು ಇತರ ಶಿವಶರಣರ ಉಪಕಥೆಗಳನ್ನು ಹೇರಿ ಮೂಲಕಥೆಗಳನ್ನು ಮುಳುಗಿಸಿಲ್ಲ',[1] 'ಉಜ್ವಲವ್ಯಕ್ತಿಗಳ ಚರಿತ್ರೆಯನ್ನು ಅವರ ವ್ಯಕ್ತಿತ್ವಕ್ಕೆ ಕುಂದು ಬಾರದ ರೀತಿಯಲ್ಲಿ ಬರೆಯಬೇಕೆನ್ನು-ವವರಿಗೆ ಚಾಮರಸನ ಮಾರ್ಗವು ಆದರ್ಶವಾಗಿದೆ'[2] ಈ ಬಗೆಯ ಅಭಿಪ್ರಾಯಗಳು ಚಾಮರಸನ ಮೇಲ್ಮೆಯನ್ನು ಸಾರುತ್ತವೆ.

ಕಾವ್ಯದೃಷ್ಟಿಯಿಂದ ಚಾಮರಸಕೃತಿಯನ್ನು ಪರೀಕ್ಷಿಸಲಾಗಿ, ಅವನ ಕಲ್ಪನಾ-ಸಂಪತ್ತಿಯ ಮತ್ತು ಶಬ್ದಶಕ್ತಿಯ ಸಹಜವಿಲಾಸವು ಹೆಜ್ಜೆಹೆಜ್ಜೆಗೆ ಗೋಚರವಾಗುತ್ತದೆ. ಅವನ ಆಂತರಿಕಶಕ್ತಿಯ ಜೊತೆಗೆ ಅಲ್ಲಮನಲ್ಲಿ ಅವನು ಹೊಂದಿದ ತಾದಾತ್ಮ್ಯ, ಪಡೆದ ಸೂಕ್ಷ್ಮಜ್ಞಾನ ಇವು ಅವನ ಬರೆವಣಿಗೆಗೆ ಪ್ರಾಸಾದಿಕಪ್ರವಾಹವನ್ನೂ ಕಲ್ಪನಾ-ವಿಲಾಸವನ್ನೂ ಒದವಿಸಿರಬೇಕು. ಮಾಯೆಯ ಸೌಂದರ್ಯವರ್ಣನೆ, ಶೃಂಗಾರ-ವರ್ಣನೆ ಈ ಮುಂತಾದುವು ಇದಕ್ಕೆ ನಿದರ್ಶನವಾಗಿವೆ. ಅವನ ಅಚ್ಚಗನ್ನಡದೇಸಿ ಅಪ್ರಯತ್ನಸಮೃದ್ಧಿಯಾಗಿ ಬಂದು ಕಲ್ಪನೆಯ ಸ್ಪಷ್ಟತೆಯನ್ನು ಇನ್ನಿಷ್ಟು ನಿಚ್ಚಳ-ವಾಗಿಸುತ್ತದೆ, ಸರಳವಾದ ಉತ್ಕಟತೆಯ ಪರಿಣಾಮವುಂಟುಮಾಡುತ್ತದೆ. 'ಅಣ್ಣಿ ಕೇಳುದಕದಲಿ ಮುಳುಗಿದ ಸುಣ್ಣಕಲ್ಲಂತಾಗಿ ಕುದಿವುತ ಬನ್ನಬಟ್ಟಳು ಮಾಯೆ ಕಾಣುತ ನಿನ್ನ ಬೇಟದಲಿ' (೩-೯೮),

'ಬಳಿಕ ಮಾಯಾಂಗನೆಯ ಮನಸಿಗೆ।
ತಿಳಿವು ತಿಣ್ಣನೆ ತಿಟ್ಟವಿಟ್ಟತು।
ಹೊಳಹು ಹೊಮ್ಮಿತು ತನ್ನ ಪೂರ್ವದ ಕಥನಕಾರಣದ।
ಬೆಳವಿಗೆಗೆ ಬೆದೆಯಾಯ್ತು ನೆನಹಿನ।
ನೆಳಲು ಮಿಂಚಿದುದೊಳಗೊಳಗೆ ನಿ-।
ರ್ಮಳರ ಸಂಗವು ಕಳೆಯದಿಹುದೇ ಮನದ ಮೈಲಿಗೆಯ॥' (೪-೧೦೭)

---

1 ಎಂ. ಆರ್. ಶ್ರೀನಿವಾಸಮೂರ್ತಿ: ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪು. ೪೫

2 ಶಿ. ಶಿ. ಬಸವನಾಳ: ಪ್ರಭುಲಿಂಗಲೀಲೆ, ಪ್ರಸ್ತಾವನೆ, ಪು. ೧೫

'ಸಿಡಿಲುವಕ್ಕಿಯ ಪಕ್ಕವನು ಕಿ- ।
ತ್ತಡಬಳದ ಬಾಣಸವ ಮಾಡುವ ।
ಕಡುಗಲಿಗಳಾರುಂಟು ಕಾಳೋರಗನ ನಿದ್ರೆಯನು ।
ಕೆಡಿಸಿ ಬದುಕುವ ಕೀಲಣದ ಗಾ- ।
ರುಡಿಗರಾರುಂಟೆನ್ನ ತತ್ವದ ।
ತೊಡಕು ದುರ್ಘಟ ಚಿಂತೆಯೇತಕೆ ಗಿರಿಜೆ ಕೇಳೆಂದ ॥ (೬–೧೮೬)

ಬಳಿಕ ಸಂತೋಷದಲಿ ತನ್ನಯ ।
ಸಲುಗೆ ಬಿನ್ನಹವೆಂಬ ಬೀಜದ ।
ಬೆಳೆಗೆ ಹದವಳೆ ಹಣ್ಣಿ ಹಸರಿಸಿತೆನುತ ಹರುಷದಲಿ ॥' (೬–೧೯೧)

ಈ ಮುಂತಾದ ಉದಾಹರಣೆಗಳಲ್ಲಿ ತಿಳಿಗನ್ನಡದ ಚಿಕ್ಕ ಹಾಗೂ ಚೊಕ್ಕನುಡಿಗಳು ಕಲ್ಪನೆಯ ವೈಹಾಳಿಗೆ ದೊರೆತ ಮರಿಗುದುರೆಗಳಂತೆ ಮೆರೆಯುತ್ತವೆ. ಚಾಮರಸನ ಶೈಲಿಯಲ್ಲಿ ಆಡಂಬರವಿಲ್ಲ, ಅತಿ ಅಲಂಕಾರವಿಲ್ಲ, ಸಂಸ್ಕೃತದ ಅತಿರೇಕವಿಲ್ಲ; ಸಮಾನ-ವಾದ ಸಲೀಲವಾದ ಗತಿಯಿದೆ. ಭಾಮಿನಿಷಟ್ಪದಿಯ ನಿರರ್ಗಳವಾದ ಬಳಸುವಿಕೆ-ಯಲ್ಲಿಯೂ ರೂಪಕಸಂಪತ್ತಿಯಲ್ಲಿಯೂ ಕುಮಾರವ್ಯಾಸನೂ ಚಾಮರಸನೂ ಒಂದೇ ಒಕ್ಕಲಿನವರು. ಅಷ್ಟಾದಶವರ್ಣನೆಗಳ ವಿಷಯದಲ್ಲಿಯೂ ಇಬ್ಬರೂ ಸಂಪ್ರದಾಯ-ವಿಮುಖರು. ಸಂದರ್ಭವಶವಾಗಿ ಬಂದ ವರ್ಣನೆಯನ್ನು ಔಚಿತ್ಯವರಿತು ಮಾಡು-ತ್ತಾರೆ. ವರ್ಣನೆ ಬರಲೇಬೇಕೆಂದು ಸಂದರ್ಭವನ್ನು ಹಿಡಿದು ತರುವುದಿಲ್ಲ.

ಚಾಮರಸನು ಕನ್ನಡದ ಶ್ರೇಷ್ಠಕವಿಗಳಲ್ಲಿ ಒಬ್ಬನೆಂದೂ 'ಪ್ರಭುಲಿಂಗಲೀಲೆ' ಶ್ರೇಷ್ಠಚರಿತ್ರಕಾವ್ಯವೆಂದೂ ವಿಮರ್ಶಕರು ಕೈವಾರಿಸಿದ್ದಾರೆ. ಹರಿಹರನ 'ಬಸವ-ರಾಜದೇವರ ರಗಳೆ'ಯ ತರುವಾಯ 'ಪ್ರಭುಲಿಂಗಲೀಲೆ' ಅಷ್ಟೇ ತೂಕದ ಚರಿತ್ರ-ಕಾವ್ಯ. ಒಂದರಲ್ಲಿ ಭಕ್ತಿಪೂರವಿದೆ, ಇನ್ನೊಂದರಲ್ಲಿ ಜ್ಞಾನಸಾಗರವಿದೆ. ಇಬ್ಬರೂ ಕವಿಗಳು ತಮ್ಮ ಚರಿತ್ರನಾಯಕರ ಜೀವಾಳವನ್ನರಿತುಕೊಳ್ಳಲು ಸಮಾನಧರ್ಮಿ-ಗಳಾಗಿ ತಮ್ಮ ಜೀವನವನ್ನೇ ಧಾರೆಯೆರೆದರು, ಅಂತೆ ಅಷ್ಟು ಉಜ್ವಲಜೀವಂತ-ಚಿತ್ರಗಳನ್ನು ಮೂಡಿಸಿದರು. ಚರಿತ್ರಕಾವ್ಯಗಳ ಮಹತಿಗೆ ಪ್ರತಿಭೆಯ ಹೆಚ್ಚಳದೊಡನೆ ಚರಿತ್ರಕಾರನ ವ್ಯಕ್ತಿತ್ವದ ಹೆಚ್ಚಳ ಬೇಕು, ಚರಿತ್ರನಾಯಕನೊಡನೆ ಏಕಜೀವವಾಗು-ವಂಥ ಜೀವನಸಿದ್ಧಿ ಬೇಕು. ಇದರಿಂದಲೇ ಹರಿಹರ–ಚಾಮರಸರು ಕನ್ನಡಸಾಹಿತ್ಯಕ್ಕೆ ಉತ್ತಮಕೃತಿಗಳನ್ನು ನೀಡಿದರು.

ವಿರೂಪಾಕ್ಷಪಂಡಿತ

ಇನ್ನೊಂದು ಗಣ್ಯವಾದ ಚರಿತ್ರಗ್ರಂಥವೆಂದರೆ ವಿರೂಪಾಕ್ಷಪಂಡಿತನ 'ಚೆನ್ನ-ಬಸವಪುರಾಣ.' ಚೆನ್ನಬಸವೇಶ್ವರನ ಚರಿತೆಗಾಗಿಯೇ ವಿಾಸಲಾದ ಮೊದಲನೆಯ

ಗ್ರಂಥವಿದು. ಆದರೆ ಆ ಚರಿತೆಯಿಂದ ಪ್ರಾರಂಭವಾಗಿ ಶಿವಲೀಲೆಗಳು, ಇತರ ಶರಣರ ಚರಿತೆ, ವೀರಶೈವಸಿದ್ಧಾಂತ-ಸಂಪ್ರದಾಯ ಮುಂತಾಗಿ ಅನೇಕ ವಿಷಯಗಳನ್ನೊಳ-ಗೊಂಡು ಇದು ವೀರಶೈವಮತದ ಕೈಪಿಡಿಯಾಗಿ ಪರಿಣಮಿಸಿದೆ. ಕವಿಯ ಉದ್ದೇಶವೂ ಇಂಥ ಪುರಾಣವನ್ನು ರಚಿಸುವುದೇ ಆಗಿತ್ತು. ಚೆನ್ನಬಸವನು ಸಿದ್ಧರಾಮನಿಗೆ 'ಪರಮಶಿವತತ್ವಮಂ ತಿಳಿಪಿ ದೀಕ್ಷೆಯನಿತ್ತ ಪರಮಸತ್ಕಥೆ'ಯೆಂದಿದನ್ನು ವಿರೂ-ಪಾಕ್ಷನು ಮೊದಲನೆಯ ಸೂಚನೆಯ ಪದ್ಯದಲ್ಲಿ ಬಣ್ಣಿಸಿದ್ದಾನೆ. ಪರಮಶಿವತತ್ವವನ್ನು ತಿಳಿಸುವಲ್ಲಿ ಆನುಷಂಗಿಕವಾಗಿ ಎಲ್ಲ ಮತೀಯ ವಿಷಯಗಳು ಬರುತ್ತವೆ. ಅಲ್ಲದೆ 'ಕರ್ಣಾಟಕ ವ್ಯಾಕರಣಛಂದಸ್ಸಲಂಕಾರಶಬ್ದಂಗಳ ಅನುಗೊಳಿಸಿ **ವರ್ಣಕಕ್ಕಿಲ್ಲ ಲಕ್ಷಣಮೆಂಬ** ನಾಣ್ನುಡಿಯನಲ್ಲೆನಿಸಿ ಪೇಳ್ದಂ ವಿನೂತನಕಾವ್ಯಮಂ ಜಗತ್ಸೇವ್ಯಮಂ ಕಿವಿಗೊಟ್ಟು ಕೇಳ್ವುದೆಲ್ಲಾ ಸುಜನರು' (೧-೨೮) ಎಂದು ಪ್ರೌಢಮಹಾಕಾವ್ಯದ ಹದಿನೆಂಟು ವರ್ಣನೆ, ನವರಸಗಳ ನಿರೂಪಣೆಗಳಿಗೂ ಕವಿ ಅವಕಾಶ ಕಲ್ಪಿಸಿಕೊಂಡಿ-ದ್ದಾನೆ. ಹೀಗಾಗಿ ೫ ಕಾಂಡ, ೬೩ ಸಂಧಿ, ೨೯೦೬ ವಾರ್ಧಕಷಟ್ಪದಿ ಪದ್ಯಗಳ ಹಿರಿಹೊತ್ತಗೆ ಕೈಗೆ ದೊರೆತಿದೆ. ಒಬ್ಬ ಚರಿತ್ರವಿಷಯನಾದ ವ್ಯಕ್ತಿಯ ನಿಮಿತ್ತದಿಂದ ಇಷ್ಟೆಲ್ಲ ವಿಸ್ತಾರವಾದ ಮತೀಯಪ್ರಪಂಚವನ್ನು ಪ್ರೌಢಕಾವ್ಯದ ಸರಣಿಯಲ್ಲಿ ಪರುಠವಿಸಿದ್ದರಲ್ಲಿ ಈ ಪುರಾಣದ ವಿನೂತನತೆಯಿದೆ. 'ಶಿವಕವಿ, ಸದಮಲಜ್ಞಾನಿ, ಸಕಲಾಗಮಪುರಾಣಕೋವಿದ'ನಾದ ವಿರೂಪಾಕ್ಷಪಂಡಿತನು ಈ 'ಮಹಾಕೃತಿ'-ಯಲ್ಲಿ ಒಂದು ಪವಾಡವನ್ನೇ ಮೆರೆದಿದ್ದಾನೆ. 'ವೀರಶೈವಾಮೃತಪುರಾಣ'ದಂತೆ ಇದು ವೀರಶೈವ ವಿಶ್ವಕೋಶವಾಗಿದೆ, ಆದರೆ ಚಾರಿತ್ರಿಕಥ್ಯೇಯ, ಕ್ರಮ ಮತ್ತು ಕವಿತಾಪ್ರೌಢಿಮೆಯಲ್ಲಿ ಇದರ ರೀತಿ ಬೇರೆಯಾಗಿದೆ. ಇದರಲ್ಲಿ ಮೇಲಾದ ಪಾಂಡಿತ್ಯ-ವಿದೆ, ಕವಿತ್ವವಿದೆ, ಸಮಯನಿಷ್ಠೆಯಿದೆ, ಶೈಲಿಸೌಷ್ಠವವಿದೆ. 'ಕಡುಜಾಣರಂ ಮೆಚ್ಚಿಸುವ ವಾಗ್ವಿಲಾಸ' (೧-೨೫) ಇದರಲ್ಲಿ ನಿಕ್ಷಿಪ್ತವಾಗಿದೆ. ತನಗಿಂತ ಮೊದಲಿನ ವೀರಶೈವ ಮತ್ತು ಇತರ ಕವಿಗಳಿಗೆ ವಿರೂಪಾಕ್ಷಪಂಡಿತನು ಋಣಿಯಾಗಿದ್ದಾನೆ. ಲಕ್ಷ್ಮೀಶನಿಗೂ ಅವನಿಗೂ ಸಾಕಷ್ಟು ಸಾಮ್ಯಗಳು ಕಂಡುಬಂದಿವೆ. ಇತ್ತೀಚೆ ದೊರೆತ ಆಧಾರದಿಂದ ಲಕ್ಷ್ಮೀಶನು ಇವನಿಗಿಂತ ಮೊದಲಿಗನೆಂಬುದು ದಿಟವಾದರೆ ಅವನಿಂದಲೇ ವಿರೂಪಾಕ್ಷನು ಕೆಲವು ಕಾವ್ಯಭಾವಗಳನ್ನೂ ಶೈಲಿರೂಪಗಳನ್ನೂ ತೆಗೆದುಕೊಂಡಿರಬಹುದು. ಇಷ್ಟಾದರೂ ಅವನ ಶಕ್ತಿ ಸ್ವತಂತ್ರವಾದುದು, ಮೇಲಾ-ದುದು. ಆದರೆ ಅವನು ಪ್ರಥಮಶ್ರೇಣಿಯ ಕವಿಯಲ್ಲ, ಅವನ ಕೃತಿಯೂ ಮಹಾಕೃತಿಯಲ್ಲ. 'ಒಟ್ಟಿನಲ್ಲಿ ಈ ಕವಿಯು ಪಂಪರನ್ನಷಡಕ್ಷರದೇವರೊಡನೆ ಪ್ರಥಮಶ್ರೇಣಿಯ ಕವಿಮಾಲಿಕೆಯಲ್ಲಿ ಸೇರಲು ತಕ್ಕವನಲ್ಲವೆಂದರೂ ಲಕ್ಷ್ಮೀಶ-ಕುಮಾರವ್ಯಾಸರ ಮಾಲಿಕೆಯಲ್ಲಿ ಸೇರಲಿಕ್ಕೆ ಅವ ಸಂದೇಹವೂ ಇಲ್ಲೆನ್ನಬಹುದು'[1]

---

1 ಶಿ. ಶಿ. ಬಸವನಾಳ: ಚೆನ್ನಬಸವಪುರಾಣ, ಪ್ರಸ್ತಾವನೆ, ಪು. ೧೫

ಎಂಬ ತೀರ್ಮಾನವು ವ್ಯಕ್ತವಾಗಿದೆ. ಇದರಲ್ಲಿ ಮಾಡಿದ ವರ್ಗೀಕರಣ ಮತ್ತು ಆಯಾ ವರ್ಗದಲ್ಲಿ ಸೇರಿಸಿದ ಕವಿಗಣ ಈ ವಿಷಯ ಚರ್ಚಾಸ್ಪದವಾದುದು, ಆದರೆ ಇಲ್ಲಿ ಅದು ಪ್ರಸ್ತುತವಲ್ಲ. ವಿರೂಪಾಕ್ಷಪಂಡಿತನು ಮತ ಮತ್ತು ಕಾವ್ಯ ಎರಡೂ ದೃಷ್ಟಿಯಿಂದ ತುಂಬ ಸಾಂಪ್ರದಾಯಿಕನು. ಅವನ ಸೌಂದರ್ಯಪ್ರಜ್ಞೆಗಿಂತ ಅವನ ಮತಾಸಕ್ತಿ, ಪಾಂಡಿತ್ಯಪ್ರೌಢಿಮೆಗಳು ಹೆಚ್ಚು ಬಲಿಷ್ಠವಾದುವು. ಚಾಮರಸನಿಗೆ ಅವನನ್ನು ಹೋಲಿಸಿ ನೋಡಿದರೆ, ಇಬ್ಬರಲ್ಲಿಯ ಭೇದ ತಿಳಿಯುತ್ತದೆ. ಚಾಮರಸನು ತನ್ನ ಕಾವ್ಯವಸ್ತುವಿನಲ್ಲಿ ತಲ್ಲೀನನಾಗಿ ಇತರ ವಿಷಯಗಳಿಗೆ ಗೌಣಸ್ಥಾನವನ್ನು ಕೊಟ್ಟನು, ತನ್ನ ಕಲ್ಪನಾಶಕ್ತಿಯನ್ನು ಸ್ವತಂತ್ರವಾಗಿ ಹರಿಬಿಟ್ಟನು. ಇದಕ್ಕೆ ವಿರುದ್ಧವಾಗಿ ವಿರೂಪಾಕ್ಷನು ತನ್ನ ವಿಷಯದ ಆಯ್ಕೆಯಲ್ಲಿ ತೋರಿದ ಏಕಾಗ್ರತೆಯನ್ನು ಸಮಯನಿಷ್ಠೆಯ ಮೂಲಕ ಕಳೆದುಕೊಂಡು 'ಅದೂ ಇರಲಿ ಇದೂ ಇರಲಿ' ಎಂಬ ಸರ್ವಸಂಮಿಶ್ರಗ್ರಂಥರಚನೆಗೆ ತೊಡಗಿದನು. ಅವನ ಕವಿತಾಶಕ್ತಿ ಮೇಲಾದುದಾಗಿಯೂ ಲಕ್ಷಣಯುಕ್ತವಾಗಬೇಕೆಂದು ಚಮತ್ಕೃತಿಯ ಬೆನ್ನಹತ್ತಿತು, ವರ್ಣನೆಗಳ ಸಂಕೋಲೆ ತೊಟ್ಟಿತು. ಇದನ್ನೆಲ್ಲ ಮನದಂದರೆ ಅವನು ಪ್ರಥಮಶ್ರೇಣಿಯ ಕವಿಯಾಗಲಾರನೆಂದು ತೋರುತ್ತದೆ. ಅವನಲ್ಲಿ ಆಗಾಗ ಅಂಥ ಶಕ್ತಿ ತೋರಿದೆ ಎಂದು ಒಪ್ಪಬಹುದಾದರೂ ಅವನ ಗ್ರಂಥವು ಮಾತ್ರ ಮಹಾಕೃತಿಯೆಂದು ಕಲಾದೃಷ್ಟಿಯಿಂದ ತಿಳಿಯುವುದು ಸಾಧ್ಯವಿಲ್ಲ.

ವೀರಶೈವಪುರಾಣದ ಲಕ್ಷಣ

ವೀರಶೈವಪುರಾಣದ ಲಕ್ಷಣವೇನು? ಯಾವ ಗ್ರಂಥವನ್ನು ಪುರಾಣವೆಂದು ಕರೆಯಬೇಕು? ವೀರಶೈವಕವಿಗಳು ತಂತಮ್ಮ ಗ್ರಂಥಗಳಿಗೆ ಚಾರಿತ್ರ, ಚರಿತ್ರೆ, ಪುರಾಣ, ಲೀಲೆ ಹೀಗೆ ಪದಗಳನ್ನು ಬಳಸಿದ್ದಾರೆ. ಪುರಾಣವೆಂದು ಕರೆದಿರದ ಗ್ರಂಥಗಳೂ ಪುರಾಣಗಳಾಗಿರಬಹುದು, ಪುರಾಣವೆಂದು ಕರೆದ ಗ್ರಂಥಗಳು ಹಾಗೆ ಇರದೆ ಹೋಗಿರಬಹುದು. ಆದ್ದರಿಂದ ಈ ವಿಷಯದ ಪರಿಶೀಲನೆ ಅವಶ್ಯ. ರಾಘವಾಂಕನು ಸಿದ್ಧರಾಮಚಾರಿತ್ರ ಇಲ್ಲವೆ ಪುರಾಣ ಎಂದು ಕರೆದಿದ್ದಾನೆ, ಆದರೆ ಹರಿಶ್ಚಂದ್ರಚಾರಿತ್ರವೆಂದು ಮಾತ್ರ ಹೆಸರಿಸಿದ್ದಾನೆ. ಭೀಮಕವಿಯ 'ಬಸವಪುರಾಣ' ಪುರಾಣವಾಗಿದೆ. ವಿರೂಪಾಕ್ಷನ 'ಚೆನ್ನಬಸವಪುರಾಣ'ವೂ ಹಾಗೇ ಸರಿ. ಪುರಾಣವೆಂದು ಕರೆದ ಗ್ರಂಥಗಳಲ್ಲಿ ಒಬ್ಬ ಇಲ್ಲವೆ ಅನೇಕ ಶಿವಶರಣರ ಚರಿತ್ರೆ ಪ್ರಮುಖವಾಗಿರುತ್ತದೆ. ಅವರಲ್ಲಿ ಪುರಾತನ ಮತ್ತು ನೂತನ ಶರಣರ ನಿರ್ದಿಷ್ಟಸಂಖ್ಯೆಯಿದೆ. ಈ ನೆರವಿಯಲ್ಲಿ ಬಾರದ ಹರಿಶ್ಚಂದ್ರನಂಥ ಶಿವಭಕ್ತರು ಪುರಾಣವಿಷಯವಾಗದೆ ಚಾರಿತ್ರವಿಷಯವಾಗುತ್ತಾರೆ. ಈ ಬಗೆಯ ಲಕ್ಷಣವನ್ನು ನಾವು ಪುರಾಣಕ್ಕೆ ಸ್ಥೂಲವಾಗಿ ಕಲ್ಪಿಸಿಕೊಳ್ಳಬಹುದು. ಆದರೆ ವೀರಶೈವಸಾಹಿತ್ಯ ಮುಂಬರಿದಂತೆ

'ಶಿವತತ್ವಚಿಂತಾಮಣಿ', 'ವೀರಶೈವಾಮೃತಪುರಾಣ', 'ಚೆನ್ನಬಸವಪುರಾಣ'-ದಂಥ ಗ್ರಂಥಗಳು ಕಣ್ಣಿಗೆ ಬೀಳುತ್ತವೆ. ಇವುಗಳಲ್ಲಿ ಬಹುವಿಷಯಗರ್ಭಿತವಾದ ವೀರಶೈವಧರ್ಮಕೋಶವನ್ನು ರಚಿಸುವ ಉದ್ದೇಶವು ಪ್ರಧಾನವಾಗಿ ಕಂಡು ಬಂದಿದೆ. ಶಿವಶರಣರ ಚರಿತ್ರೆ ಇವುಗಳಲ್ಲಿದೆ, ಚೆನ್ನಬಸವಪುರಾಣದಲ್ಲಿಯಂತೂ ಚೆನ್ನಬಸವೇ-ಶ್ವರನ ಚರಿತ್ರೆಯ ಸುತ್ತು ಉಳಿದ ಜಾಲವನ್ನು ಹೆಣೆದಿದೆ. ಆದರೆ ಶಿವಲೀಲೆ, ವೀರಶೈವತತ್ವಸಂಪ್ರದಾಯ ಇವುಗಳ ವರ್ಣನೆ-ವಿವರಣೆಗಳಿಗೆ ಪ್ರಾಮುಖ್ಯಬಂದಿದೆ. ಆದ್ದರಿಂದ ವೀರಶೈವಪುರಾಣದ ಕಲ್ಪನೆ ಬೆಳೆಯುತ್ತ ಹೋಗಿ ಸರ್ವಸಂಗ್ರಹ ಮತ್ತು ಸಂಮಿಶ್ರವಾಯಿತೆನ್ನಬಹುದು. ಇದನ್ನು ಲಕ್ಕಣ್ಣದಂಡೇಶ ಮತ್ತು ಗುಬ್ಬಿಯ ಮಲ್ಲಣಾರ್ಯ ಇವರು ಹೇಳಿದ ೧೮ ಲಕ್ಷಣಗಳಲ್ಲಿ ಗುರುತಿಸಬಹುದು. ವಿಜಯನಗರ-ಕಾಲದಲ್ಲಿ ಧರ್ಮಶ್ರದ್ಧೆ ಮತ್ತು ಜ್ಞಾನಗಳ ಪ್ರಸಾರಕ್ಕೆ ಇಂಥ ಪುರಾಣಗಳ ಅಗತ್ಯ ಹೆಚ್ಚಾಗಿ ತೋರಿರಬೇಕು. ಇಲ್ಲಿ ವೈದಿಕಪುರಾಣಗಳ ಸಂಮಿಶ್ರಲಕ್ಷಣಕ್ಕೆ ವೀರಶೈವ-ಪುರಾಣಗಳು ಹತ್ತಿರ ಬರುತ್ತವೆ, ಜೈನಪುರಾಣಗಳ ಚರಿತ್ರಪ್ರಾಧಾನ್ಯದ ಲಕ್ಷಣದಿಂದ ದೂರ ಸರಿಯುತ್ತವೆ. ಹೀಗಾಗಿ ವಿಷಯೈಕ್ಯದ ಅಭಾವದಿಂದಲೂ ಅನೇಕಾಗ್ರತೆ-ಯಿಂದಲೂ ಕೆಲವು ವೀರಶೈವಗ್ರಂಥಗಳು ಸಾಹಿತ್ಯಸೌಂದರ್ಯವನ್ನು ಪಡೆಯ-ಬೇಕಾದಷ್ಟು ಪಡೆದಿಲ್ಲ. ಚರಿತ್ರಪ್ರಧಾನವಾದ ಪುರಾಣಗಳಲ್ಲಿ 'ಬಸವರಾಜದೇವರ ರಗಳೆ', 'ಪ್ರಭುಲಿಂಗಲೀಲೆ'ಯಂಥ ಕೃತಿಗಳು ಮತಧರ್ಮ ಮತ್ತು ಕಾವ್ಯಧರ್ಮ ಇವುಗಳ ಸಂಮಿಳನದಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿವೆ. ಉಳಿದವುಗಳಲ್ಲಿ ಕಾವ್ಯ-ಕ್ಕಿಂತ ಮತವು ಹೆಚ್ಚು ಪ್ರಭಾವಶಾಲಿಯಾಗಿ ಪರಿಣಮಿಸಿದೆ. ವೈದಿಕ, ಜೈನಪುರಾಣ-ಗಳಲ್ಲಿಯೂ ಕಾವ್ಯ ಮತ್ತು ಧರ್ಮಗಳನ್ನು ಒಂದುಗೂಡಿಸಿದ ಕೃತಿಗಳು ವಿರಳವೆಂದೇ ಹೇಳಬೇಕು. ಪುರಾಣ, ಚಾರಿತ್ರ, ಲೀಲೆ ಎಂದು ಮೂರು ವಿಭಾಗಮಾಡಿ, ಶಿವಶರಣನ ಚರಿತ್ರೆಯಾಗಿರುವುದು **ಚಾರಿತ್ರ**, ನಿರ್ದಿಷ್ಟ ಶಿವಶರಣರ ಸಾಂಪ್ರದಾಯಿಕ ಪದ್ಧತಿಯ ಕಥೆ **ಪುರಾಣ**, ಶಿವನ ಪಂಚವಿಂಶತಿಲೀಲೆಗಳ ವಿಷಯವಾಗಿ ಬರೆದದ್ದು **ಲೀಲೆ** ಎಂದು ಕರೆಯಬೇಕೆಂಬ ಸೂಚನೆ ಬಂದಿದೆ. ಆ ಮೇರೆಗೆ 'ಪ್ರಭುಲಿಂಗ-ಲೀಲೆ', 'ಭಿಕ್ಷಾಟನಚರಿತೆ' ಲೀಲೆಗಳಾಗುತ್ತವೆ, 'ಸಿದ್ಧರಾಮಚರಿತ್ರೆ' ಚಾರಿತ್ರ-ವಾಗುತ್ತದೆ, 'ಗುರುರಾಜಚಾರಿತ್ರ' ಪುರಾಣವಾಗುತ್ತದೆ. ಆದರೆ ಚರಿತ್ರೆ, ಲೀಲೆ, ತತ್ವ ಎಲ್ಲವೂ ಸೇರಿದ ಗ್ರಂಥಕ್ಕೆ ಏನೆನ್ನಬೇಕು? ಅಲ್ಲದೆ 'ಪ್ರಭುಲಿಂಗಲೀಲೆ'ಯಲ್ಲಿ ಅಲ್ಲಮಪ್ರಭು ಮನುಷ್ಯರೂಪದಲ್ಲಿಯ ಪರಶಿವನ ಅವತಾರವೆಂದಿದ್ದ ಕಾರಣ ಪಂಚ-ವಿಂಶತಿ ಲೀಲೆಗಳ ಹಾಗೆ ಲೀಲೆಯಲ್ಲ, ಅದು ಚರಿತ್ರೆಯೆ ಆಗುತ್ತದೆ, ಚರಿತ್ರೆಗೂ ಪುರಾಣಕ್ಕೂ ಸೂಚಿಸಿದ ಭೇದವು ತೀರ ತೆಳ್ಳಗಾದುದು. ಆದರಿಂದ ಚರಿತ್ರೆಗೂ ಪುರಾಣಕ್ಕೂ ಇರುವ ವ್ಯತ್ಯಾಸವನ್ನು ತೋರಿಸಲು ಬರಬಹುದಾದರೂ ವ್ಯಾಪಕವಾದ ಪುರಾಣಲಕ್ಷಣವು ಹೊರಪಡುವುದಿಲ್ಲ, ಚರಿತ್ರಗ್ರಂಥಗಳಿಗೆ ಪುರಾಣಸ್ವರೂಪವನ್ನು ಕೊಟ್ಟಿರುವ ಹಿಂದಿನ ರೂಢಿಗೆ ಧಕ್ಕೆ ತಗಲುತ್ತದೆ. ಒಟ್ಟಿನಲ್ಲಿ, ಗ್ರಂಥಗಳಿಗೆ ಕೊಟ್ಟ

ಹೆಸರು ಏನೇ ಇರಲಿ, ನಿರ್ದಿಷ್ಟಶಿವಶರಣರಲ್ಲಿ ಒಬ್ಬನ ಅಥವಾ ಹಲವರ ವಿ
ಪ್ರಕಾರದ ಚರಿತ್ರೆ ಆಗಲಿ ಚರಿತ್ರೆಗಳನ್ನೊಳಗೊಂಡ ಸಂಮಿಶ್ರಮತೀಯಕೋಶವಾಗ
ವೀರಶೈವಪುರಾಣವೆನ್ನಿಸಿಕೊಳ್ಳಲು ಯೋಗ್ಯವಾದುವು.

೩೧. ಈ ಯುಗದ ವೀರಶೈವಸಾಹಿತ್ಯ (೪)

ಶೈವಪುರಾಣದಿಂದ ಉದ್ಧೃತವಾದ ಕಥೆಗಳು ಈ ಯುಗದಲ್ಲಿ ಓದುವಗಿರಿ
ಮತ್ತು ಬೊಂಬೆಯಲಕ್ಕ ಇವರ 'ಹರಿಶ್ಚಂದ್ರಸಾಂಗತ್ಯ', ವೀರಭದ್ರರಾಜ
'ವೀರಭದ್ರವಿಜಯ', ಗುರುಲಿಂಗವಿಭುವಿನ 'ಭಿಕ್ಷಾಟನಚರಿತೆ', ಮಲ್ಲಿಕಾರ್ಜುನ
'ಶ್ವೇತಸಾಂಗತ್ಯ'ಗಳಲ್ಲಿವೆ. ಓದುವಗಿರಿಯ ಮತ್ತು ಬೊಂಬೆಯಲಕ್ಕ 'ಇಬ್ಬರ
ರಾಘವಾಂಕನನ್ನೇ ಬಹುವಾಗಿ ಅನುಸರಿಸಿದ್ದಾರೆ. ಇವರಲ್ಲಿ ಬೊಂಬೆಯಲಕ್ಕನಂತ
ಅವನಲ್ಲಿ ಕಂಡು ಬರುವ ಅನೇಕ ಪದಸಮುದಾಯಗಳನ್ನೇ, ಅದೇ ಭಾವಗಳನ
ಉಪಯೋಗಿಸಿಕೊಂಡುಬಿಟ್ಟದ್ದಾನೆ.'[1] ವೀರಭದ್ರರಾಜನ 'ವೀರಭದ್ರವಿಜಯ'
ಕಟ್ಟುನಿಟ್ಟಾದ ಚಂಪೂರೂಪದಲ್ಲಿ ಬರೆದ ಕಾವ್ಯ. ದಕ್ಷಯಜ್ಞಧ್ವಂಸಮಾಡಿದ ವೀ
ಭದ್ರನ ವಿಜಯವೇ ಇದರಲ್ಲಿಯ ವಿಷಯ. ಮೊದಲಿನ ಆರು ಆಶ್ವಾಸಗಳಲ್ಲಿ ಬ
ಸಾಂಪ್ರದಾಯಿಕಕಾವ್ಯದ ವರ್ಣನೆಗಳು ಬಂದಿವೆ. ತಂದೆ ವಿರೂಪರಾಜನ 'ತ್ರಿಭುವ
ತಿಲಕ'ವೆಂಬ ಸಾಂಗತ್ಯಗ್ರಂಥಕ್ಕೂ ಇತರ ಪ್ರಾಚೀನ ಕಾವ್ಯಗಳಿಗೂ ಅವ
ಋಣಿಯಾಗಿದ್ದಾನೆ. ದೇಶಿಯ ಯುಗದಲ್ಲಿ ಇದೊಂದು ಮಾರ್ಗಕಾವ್ಯಪ್ರಯ
ಸಾಧಾರಣ ಗುಣವುಳ್ಳ ಕೃತಿ. ಗುರುಲಿಂಗವಿಭುವಿನ 'ಭಿಕ್ಷಾಟನಚರಿತೆ' ಈ ಗುಂ
ಕಾವ್ಯಗಳಲ್ಲಿ ಒಳ್ಳೆಯದು. ಸಂಸ್ಕೃತ 'ಭಿಕ್ಷಾಟನಕಾವ್ಯ'ದ ಆಧಾರದ ಮೆ
ಇದನ್ನು ಬರೆದಿದೆ. 'ಧರೆಯೊಳಗೆ ಗೋಪಾಲಕೃಷ್ಣ ಹದಿನಾರುಸಾವಿರ ಗೋಪಿ
ರೊಳಿಹುದು ನೋಡಬೇಕೆಂದು ಪುರಹರನು ಭಿಕ್ಷುಕನಾಗಿ ದ್ವಾರಾವತಿಗೆ ಬಂದ ಪ
ಇಲ್ಲಿಯ ಕಥೆ. ಹದಿನೆಂಟು ವರ್ಣನೆಗಳಿಂದ ಹಿರಿದಾದ ಕಾವ್ಯಗಳಿರಲು ಇದು ಏಕೆ
ಅನ್ನದಿರಿ, 'ನರಸ್ತುತಿಯಲ್ಲ ಚರಿತೆಗಳೊಳಿಂತಿದಕೆ ಚರಿತೆಯೆಂದೆನೆ ಪೇಳ್ವೆ' ಎ
ಮುಂತಾಗಿ ಕವಿ ಹೇಳಿದ್ದಾನೆ. ಆದರೆ ಇದು ಚರಿತೆಯಲ್ಲ, ಲೀಲೆಯೆಂಬುದು ಸ್ಪ
ವಿಷ್ಣುವಿನ ಶಿವಭಕ್ತಿಯನ್ನೂ ಶಿವಾಧಿಕ್ಯವನ್ನೂ ತೋರಿಸುವ ಮತೀಯ ಗ್ರ
ವಾರ್ಧಕಷಟ್ಪದಿಯ ೧೫೦ ಪದ್ಯಗಳು ೩ ಸಂಧಿಗಳಲ್ಲಿ ಅಡಕವಾದ ಚಿಕ್ಕಕಾ
ವಾದರೂ ಇದರಲ್ಲಿ ಕವಿ ತನ್ನ ಕವಿತ್ವಶಕ್ತಿ, ಸಮಯಶರಣತೆಗಳನ್ನು ಸಾಕಷ್ಟು ಪ್ರದ

1 ಡಿ. ಎಲ್. ನರಸಿಂಹಾಚಾರ್: ವಿಜಯನಗರಕಾಲದ ಕನ್ನಡಸಾಹಿತ್ಯ
(ಪ್ರ.ಕೆ., ೨೨-೪, ಪು. ೧೫-

ದ್ದಾನೆ. ೨ನೆಯ ಸಂಧಿಯಲ್ಲಿ ಶಿವನನ್ನು ಸೂಳೆಗೇರಿಯ ಸಂಚಾರಕ್ಕೆ ಕರೆದೊಯ್ಯುತ್ತಾನೆ, ಚರ್ವಿತಚರ್ವಣ ಮಾಡುತ್ತಾನೆ. ಗುರುಲಿಂಗವಿಭುವಿನ ಛಂದಸ್ಸು-ಲಿಗಳಲ್ಲಿಯೂ ಹದವಿದೆ, ಕವಿತಾಶಕ್ತಿ ಸಹಜವಾಗಿದೆ. ವಾರ್ಧಕಷಟ್ಪದಿಗಳಲ್ಲಿ ನ್ನದು ಲಾಕ್ಷಣಿಕ ಗ್ರಂಥವೆಂದು ಅವನು ಹೇಳಿಕೊಳ್ಳುತ್ತಾನೆ: 'ಎಸೆದಿಹ ಸುರೇಖೆಯಿಂದಂ........ಅಲಂಕಾರದಿಂ ಲಕ್ಷಣೋಚಿತಮಾದ ಶುದ್ಧಾಂಗದಿಂ' (೨-೨), ವಿರಚಿಸಲು ಬಲ್ಲ ವಸ್ತುಕಕವೀಂದ್ರರ ವಸ್ತುನಿರತವರ್ಣಕಕವೀಶ್ವರರ ಕರ್ಣಾಭರಣ' ೩-೨). ಹೀಗೆ ದೇಸಿಗಬ್ಬಗಳಿಗೆ ಮಾರ್ಗಸಂಸ್ಕಾರವನ್ನು ಕೊಟ್ಟು ಪ್ರೌಢಗೊಳಿಸಬೇಕೆಂದ ಅಂದಿನ ಕವಿಗಳಲ್ಲಿ ಗುರುಲಿಂಗವಿಭು ಒಬ್ಬನಾಗಿದ್ದಾನೆ. ಸಣ್ಣಗಾತ್ರದಲ್ಲಿ ಅವನ ಉದ್ದೇಶವೇನೋ ಕೈಗೂಡಿದೆ. ಆದರೆ ತನ್ನ ಗುಣವನ್ನು ಕಾಣಿಸಿಕೊಡಲು ಅವನು ಬೇರೆ ವಿಷಯವನ್ನು ಆರಿಸಬೇಕಾಗಿತ್ತು, ದೇಸಿ-ಮಾರ್ಗಗಳ ಜೋಡಣೆಯಲ್ಲಿಯ ಅಸಂಗತಿಗಳನ್ನು ಕಳೆಯಬೇಕಾಗಿತ್ತು.

ಶತಕಗಳು

ಈ ಯುಗದಲ್ಲಿ ಹೆಚ್ಚಾದ ಶತಕಗಳನ್ನು ವೀರಶೈವಕವಿಗಳು ರಚಿಸಿದ್ದಾರೆ. ಅವುಗಳಲ್ಲಿ ಮಗ್ಗೆಯ ಮಾಯಿದೇವನ 'ಶತಕತ್ರಯ', ಚಂದ್ರಕವಿಯ 'ಗುರುಮೂರ್ತಿಶಂಕರಶತಕ', ವೀರಭದ್ರರಾಜನ 'ಪಂಚಶತಕ', ಸಿರಿನಾಮಧೇಯನ 'ಮಲ್ಲೇಶ್ವರಶತಕ', ಚೆನ್ನಮಲ್ಲಿಕಾರ್ಜುನನ 'ಶಿವಮಹಿಮಾಶತಕ', ಶಂಕರದೇವನ 'ಶಂಕರಶತಕ', ಶಾಂತವೃಷಭೇಶನ 'ಅನುಭವಶತಕ' ಇವನ್ನು ಉಲ್ಲೇಖಿಸಬಹುದು. ಈ ಎಲ್ಲ ಶತಕಗಳಲ್ಲಿ ವೀರಶೈವತತ್ವಕ್ಕನುಸರಿಸಿ ಭಕ್ತಿಜ್ಞಾನವೈರಾಗ್ಯಗಳ ಬೋಧನೆಯಿದೆ, ಷಟ್ಸ್ಥಲಸಿದ್ಧಾಂತದ ವಿವರಣೆಯಿದೆ. ಅಕ್ಷರವೃತ್ತದಲ್ಲಿ ಬರೆದ ತಾತ್ವಿಕ ಮತ್ತು ನೀತಿಪ್ರಧಾನಕಾವ್ಯದ ಮಾದರಿಯೆಂದು ಇದನ್ನು ಕರೆಯಬಹುದು. ಯಾವ ಶತಕಗಳಲ್ಲಿಯೂ ಶೃಂಗಾರಕ್ಕೆ ಎಡೆಯಿಲ್ಲ. ಅಲ್ಲಲ್ಲಿ ಭಾವಗೀತೆಯ ಅಂತಸ್ಸತ್ವವು ಕಂಡುಬರುತ್ತದೆ. ಚಂದ್ರಕವಿಯ ಶತಕದಲ್ಲಿ ಪ್ರಸನ್ನ ಪದ್ಯರಚನೆಯಿದೆ, 'ನಾಲ್ನುಡಿಗಳಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ'ಯಿದೆ. ವೀರಭದ್ರರಾಜನ ಪಂಚಶತಕಗಳಲ್ಲಿ ಶಿವಸ್ತುತಿ, ತತ್ವ, ನೀತಿ, ವೈರಾಗ್ಯ ಇವುಗಳ ಬೋಧನೆ 'ಸಲ್ಲಕ್ಷಣೋದರಮಾಗಿರ್ದು' ಪ್ರೌಢಪದ್ಯಗಳಲ್ಲಿ ಬಂದಿವೆ. ಅವುಗಳಲ್ಲಿ ಒಂದು ಶತಕ ಕಂದಪದ್ಯದಲ್ಲಿದೆ. ಸಿರಿನಾಮಧೇಯನ 'ಮಲ್ಲೇಶ್ವರಶತಕ'ವು 'ಅಷ್ಟಾವರಣಸ್ತವ'ವಾಗಿದೆ, ಬಹುಭಾಗದಲ್ಲಿ ತಾತ್ವಿಕವಾಗಿದೆ. ಚೆನ್ನಮಲ್ಲಿಕಾರ್ಜುನನ 'ಶಿವಮಹಿಮಾಶತಕ'ವು ಶಿವಪಾರಮ್ಯವನ್ನು ಪ್ರತಿಪಾದಿಸುತ್ತದೆ. 'ವೈಷ್ಣವವಾಗದ್ವೈತಿಕರ್ಮಿಗಳ ಹೃಚ್ಛಲ್ಯಂ' ಎಂದು ಕವಿ ಅದನ್ನು ವರ್ಣಿಸಿದಂತೆ ಪರಮತನಿಂದೆಯೂ ಅದರಲ್ಲಿ ಬಂದಿದೆ. ಶಂಕರದೇವನ 'ಶಂಕರಶತಕ'ವು ವೀರಶೈವವೇದಾಂತವನ್ನು ಬೋಧಿಸುತ್ತಲೆ ಭಕ್ತಿಭಾವನೆ-

ಯನ್ನು ಚೆನ್ನಾಗಿ ವ್ಯಕ್ತಗೊಳಿಸಿದೆ. 'ಮನದಧಿಕಾರವಾಗಿ ಕೆಲಸಾರಿತು ಭಕ್ತಿವಸಂತ. ಕಾಲ ಜನಿಸಿತು ಲಿಂಗವೋಹಲತೆಯಂಕುರಿಸಿತ್ತು' ಮತ್ತು 'ಕಾಮದ ಗಾಳಿ ಬೀಸಿ ನೆಱೆ ಕೋಪದ ಮೋಡಮುಸುಕಿ........ಜೀವಹಂಸಿಗೆರವಿಲ್ಲ' ಎಂಬ ಪದ್ಯಗಳನ್ನು ನೋಡಬಹುದು.

ಮುಗ್ಗೆಯ ಮಾಯಿದೇವ

ಬಹುಶಃ ಈ ಎಲ್ಲ ಶತಕಗಳಲ್ಲಿ ಮುಗ್ಗೆಯ ಮಾಯಿದೇವನ ಶತಕತ್ರಯಕ್ಕೆ ಎಲ್ಲ ದೃಷ್ಟಿಯಿಂದಲೂ ಅಗ್ರಮಾನ ಸಲ್ಲುತ್ತದೆ. ಅವನು ತನ್ನ 'ಶಿವಾಧವಕಶತಕ'ದಲ್ಲಿ ಜ್ಞಾನವನ್ನೂ 'ಶಿವಾವಲ್ಲಭಶತಕ'ದಲ್ಲಿ ಭಕ್ತಿಯನ್ನೂ 'ಐಪುರೀಶ್ವರಶತಕ'ದಲ್ಲಿ ವೈರಾಗ್ಯವನ್ನೂ ಮುಖ್ಯವಾಗಿ ನಿರೂಪಿಸಿದ್ದಾನೆ. ಭರ್ತೃಹರಿಯ ಸಂಸ್ಕೃತಶತಕತ್ರಯ-ದಲ್ಲಿ ಶೃಂಗಾರ, ವೈರಾಗ್ಯ, ನೀತಿಗಳಿದ್ದರೆ ಇವನ ಶತಕತ್ರಯದಲ್ಲಿ ಜ್ಞಾನಭಕ್ತಿ-ವೈರಾಗ್ಯಗಳು ಪ್ರತಿಪಾದಿತವಾಗಿವೆ. ಸ್ವಸಿದ್ಧಾಂತಬೋಧನೆಯ ಹೇತು ಪ್ರಚೋದಕ-ವಾಗಿದೆ. ಅಲ್ಲಲ್ಲಿ ಸುಂದರಸಾದೃಶ್ಯಗಳನ್ನು ಕೊಟ್ಟು ತತ್ವವನ್ನು ತಿಳಿಸಲಾಗಿದೆ (ಉದಾಹರಣೆಗೆ, ಶಿವಾಧವಶತಕಪದ್ಯ, ೨೩, ೯೭, ೯೭). ಶೈಲಿಯ ಮೇಲೆ ಸಂಸ್ಕೃತ-ಪ್ರಭಾವ ಹೆಚ್ಚಿದೆ, ಶಾಸ್ತ್ರೀಯಪದ್ಧತಿಯ ಅನುಸರಣವಿದೆ. ಆದರೂ ಮುಂದಟ್ಟಾಗುವಂತೆ ಹೇಳಬೇಕೆಂಬ ಉದ್ದೇಶ ಮತ್ತು ಹೇಳುವ ಸೌಲಭ್ಯ ಮಾಯಿದೇವನಲ್ಲಿವೆ. ಮೂರನೆಯ-ದಾದ 'ಐಪುರೀಶ್ವರಶತಕ'ದಲ್ಲಿ ಮಾಯಿದೇವನ ಆರ್ತಭಕ್ತಿ ಹಾಗೂ ಅನುಭವಪರಿ-ಪಾಕ ಪ್ರಕಟವಾಗಿವೆ. 'ದಿನದೆಡೆಯುಂಟೆ ಸೂರ್ಯನುದಯಕ್ಕೆ ತಮೋವಿಲಯಕ್ಕೆ' (೨೨), 'ಆರಿಗೆ ಪೇಳ್ವೆನಾರಿಗೆ ಪಲಂಬುವೆನಾರಿಗೆ ತೋರ್ಪೆನೆನ್ನ ಸಂಸಾರದುರಾಪ್ತ-ದುಃಖಭಯಮಂ' (೨೩), 'ಭುವನಚತುರ್ದಶೈಕವಿಭುವಾಗಿ ವಿರಾಜಿಸುತಿರ್ಪ ನಿನ್ನ ವೈಭವದೊಳಗಾಂ ದರಿದ್ರನೆನಿಸಿರ್ಪುದೇಂ' (೨೭), 'ಕ್ಷೀರಸಮುದ್ರಸನ್ನಿಧಿಯೊಳಿರ್ದು ಪಿಪಾಸಿತನಾಗಿ ಬಾವಿಯಂ ಹಾರೆಯನಾಂತಗುಳ್ವವನೊಲಾಯ್ತು' (೨೮) ಈ ಮುಂತಾದ ಪದ್ಯಗಳನ್ನು ನಿದರ್ಶನಕ್ಕಾಗಿ ಓದಬೇಕು. ವಚನಕಾರರ ಸಲಿಗೆ, ಉತ್ಕಟತೆ, ಧೈರ್ಯ ಇವು ಮಾಯಿದೇವನಲ್ಲಿ ತೋರುತ್ತವೆ. 'ಬೇಡುವ ಕಾಡುವಾಯಸಗೊಳುತ್ತಿಹ ಭಕ್ತಿಯೆ ಪಾಪಮಿಂತಿದಂ ಬೇಡದ ಹಾಂಗೆ ಮಾಡು' (೯೮) ಎಂದು ತಿರುತಿರುಗಿ ಬೇಡುತ್ತಾನೆ. ಹೀಗೆ ಈ ಶತಕಗಳಲ್ಲಿ ಮಾಯಿದೇವನ ವಿದ್ವತ್ತೆ ಮತ್ತು ಕಳಕಳಿಗಳು ಮೆಚ್ಚುವಂತಿವೆ.

ನೀತಿಬೋಧಕವಾದ ಮತ್ತು ಅನುಭವನಿವೇದಕವಾದ ಪದ್ಯಗಳು ಈ ಯುಗದಲ್ಲಿ ಹೆಚ್ಚಿವೆ. ಆದರೆ ಅವು ಇದೇ ಯುಗದಲ್ಲಿ ಮಾತ್ರ ರಚಿತವಾದುವೆಂದು ನಿಶ್ಚಿತವಾಗಿ ಹೇಳಲು ಬರುವುದಿಲ್ಲ. ಕನ್ನಡಜಾಣ, ಕವಿಪಂಚಮಾರ್ಗಣ, ಗುಣರತ್ನ, ಚೂಡಾರತ್ನ ಮುಂತಾದ ಅಂಕಿತಗಳಲ್ಲಿ ಅವು ಕೊನೆಗೊಳ್ಳುತ್ತವೆ. ಕೆಲವು ಕವಿಗಳ

ಅಭ್ಯಾಸಕವಿತೆಯಾಗಿ ಅವು ಜನ್ಮತಾಳಿರಬಹುದು ಇಲ್ಲವೆ ಆ ಬಗೆಯ ಅವರ ಗ್ರಂಥಗಳಲ್ಲಿ ಸೇರ್ಪಡೆಹೊಂದಿರಬಹುದು. ವೀರಭದ್ರರಾಜನು 'ಕನ್ನಡಜಾಣ ಹಂಪೆಯ ಹರೀಶ್ವರನ ಬಗೆ' ಎನ್ನುತ್ತಾನೆ. ಹಾಗಾದರೆ ಕನ್ನಡಜಾಣವೆಂಬ ಅಂಕಿತದ ಪದ್ಯಗಳು ಹರಿಹರರಚಿತವೇ ಎಂಬ ಪ್ರಶ್ನೆ ಹುಟ್ಟುತ್ತದೆ. ಗನೆಯ ಮಂಗರಾಜನ 'ಖಗೇಂದ್ರಮಣಿದರ್ಪಣ'ದಲ್ಲಿ ವಿವೇಕಚೂಡಾರತ್ನ ಮುಂತಾದ ಬಿರುದಿನ ಕೆಲವು ಪದ್ಯಗಳು ದೊರೆಯುತ್ತವೆ. ಇವನ್ನು ಬರೆದವರು ಯಾರು ತಿಳಿಯದು. ಸಾಮಾನ್ಯ-ವಾಗಿ ಇವು ಕಂದಪದ್ಯಗಳಲ್ಲಿರುತ್ತವೆ, ಶೈಲಿ ಸರಳವಾಗಿರುತ್ತದೆ.

'ಪೊಸಕಾಲದ ನವಿಲಾಟಂ |
ಸಿಸುಗಳ ಮುದ್ದಾಟ ಹರಿಣಹರಿಣಿಯ ನೋಟಂ |
ರಸಕವಿಗಳ ಕರ್ಣಾಟಂ |
ಶಶಿಮುಖಿಯೊಡಗೂಡಿದಂತೆ ಕನ್ನಡಜಾಣ ||

ಎಲ್ಲಿ ಸುಶೀಲಂ ಸದ್ಗುಣ- |
ಮೆಲ್ಲಿ ದಯಾಧರ್ಮಮೆಸೆವ ಸತ್ಯಂ ನೆಲೆಗೊಂ- |
ಡಲ್ಲಿಯೆ ಆಯುಂ ಸಿರಿಯುಂ |
ಸಲ್ಲೀಲೆಯೊಳಿರ್ಪುವಲ್ತೆ ಚೂಡಾರತ್ನ ||

ಶರಣೆನೆ ಕಾವುದು ಬೇಡಿದೊ- |
ಡಿರದೀವುದು ತೊಡರೆ ಸೆಡೆಯದಿರುವುದು ಪುಸಿಯೊಳ್ |
ಬೆರೆಯದೆ ನಡೆವುದು ನಡೆಯದೊ- |
ಡರಸಂ ಕಡುಬರಸನಲ್ತೆ ಚೂಡಾರತ್ನಾ ||

ಕುಡಲುಂ ಭೋಗಿಸಲುಂ ಸಿರಿ |
ಕಿಡುವುದೆ ಕೆಟ್ಟೊಜಿತೆ ತೋಡೆ ತವನಿಧಿಯಕ್ಕುಂ |
ಕುಡದನ ಭೋಗಿಸದನ ಸಿರಿ |
ಪಡಿಗದ ನೀರಂತೆ ಸುಗುಣರತ್ನಕರಂಡಾ ||'

ಈ ಮುಂತಾದ ಉದಾಹರಣೆಗಳಲ್ಲಿ ಇಂಥ ಪದ್ಯಗಳ ವಿವೇಕವನ್ನೂ ಸ್ವಾರಸ್ಯವನ್ನೂ ಅರಿತುಕೊಳ್ಳಬಹುದು. ಶತಕಗಳು ಪ್ರೌಢವಾಗಿ ಪರಿಮಿತಜನಕ್ಕೆ ಪ್ರಯೋಜನ-ಕಾರಕವಾಗಿರಲು, ಇಂಥ ಕಂದಪದ್ಯಗಳು ಹೆಚ್ಚು ಜನಕ್ಕೆ ಮಾರ್ಗದರ್ಶಿಯಾದುವು.

ಸರ್ವಜ್ಞಮೂರ್ತಿ

ಸರ್ವಜ್ಞಮೂರ್ತಿ ಈ ಯುಗದ ವ್ಯವಹಾರಜ್ಞಾನ–ವಿವೇಕಗಳ ಮೂರ್ತಿ-ಯಾಗಿ ಬಾಳಿದನು.

> 'ಪಾಪಮಿದು ಪುಣ್ಯಮಿದು ಹಿತ- |
> ರೂಪಮಿದಹಿತಪ್ರಕಾರಮಿದು ಸುಖಮಿದು ದುಃ- |
> ಖೋಪಾತ್ತಮಿದೆಂದಱಿಪುಗು- |
> ಮಾ ಪರಮಕವಿಪ್ರಧಾನರಾ ಕಾವ್ಯಂಗಳ್ ||'

ಎಂದು ಕವಿರಾಜಮಾರ್ಗಕಾರನು ಹೇಳಿದಂತೆ ಪ್ರಾಚೀನಕಾಲದಿಂದಲೂ ನಮ್ಮ ನಾಡಿನ ಕವಿಗಳು ಕಾಂತಾಸಂಮಿತಿಯಿಂದ ಉಪದೇಶಮಾಡುತ್ತ ಬಂದಿದ್ದಾರೆ. ವಿಜಯ-ನಗರಕಾಲದ ಜನಸಂಮುಖವಾದ ಸಾಹಿತ್ಯದಲ್ಲಿ ಶರಣರು, ದಾಸರು ಹಾಗೂ ಇತರ ಕವಿಗಳು ನೀತಿಧರ್ಮದ ಬೋಧನೆಯನ್ನು ಹೆಚ್ಚಾಗಿ ಮಾಡಿದರು. ಆ ಸಾಮ್ರಾಜ್ಯವು ಪತನಹೊಂದಿದ ಮೇಲೆ ಮರಗಾಳಿಯ ಬಿರುಬಿಗೆ ಸಿಕ್ಕ ನೆಲದಲ್ಲಿ ಹಾಳುಬೀಳುಗಳು ಎಲ್ಲ ಕಡೆಗೆ ಕಾಣುವಂತೆ ಜನಜೀವನ ದಿಕ್ಕೆಟ್ಟಿತು, ಅಸ್ತವ್ಯಸ್ತವಾಯಿತು. ಹಿಂದಿನ ಅನುಭವ ಅಳಿಸಿದಂತಾಯಿತು, ವಿವೇಕ ಮಸುಳಿದಂತಾಯಿತು. ಇಂಥ ಕಾಲದಲ್ಲಿ ಸರ್ವಜ್ಞ ಹುಟ್ಟಿ ಸಮಾಜವೈದ್ಯನಾಗಿ ರೋಗಪರೀಕ್ಷೆಮಾಡಿದನು, ಬಿಚ್ಚುಮಾತಿನ ಔಷಧಿಯನ್ನು ನೀಡಿದನು. ಅವನ ಚರಿತ್ರೆ ದಂತಕಥೆಯಾಗಿ ಬಿಟ್ಟಿದೆ. ಅದು ಹೀಗಿದೆ ಎಂದು ಹೇಳುವುದಕ್ಕಿಂತ ಹೀಗಿರಬಹುದೇನೊ ಎಂಬ ಉತ್ಪ್ರೇಕ್ಷೆಯಲ್ಲಿ ಹೇಳಬೇಕಾಗು-ತ್ತದೆ. ಯಾವ ಅವನ ಆತ್ಮಚರಿತ್ರಪರವಾದ ವಚನಗಳಿಂದ ಅವನ ಚರಿತ್ರೆಯನ್ನು ಹೇಳಬಹುದೋ ಅವೆಷ್ಟುಮಟ್ಟಿಗೆ ಅವನವು ಎಂಬುದು ಸಂಶಯವೆ. ಎರಡುಸಾವಿರದ-ವರೆಗೆ ಸಂಗ್ರಹವಾದ ಅವನ ತ್ರಿಪದಿಗಳಲ್ಲಿ ಬೇರೆಯವರು ಬರೆದುವು ಸೇರಿಕೊಂಡಿವೆ. ಅಂಥ ಕೆಲವನ್ನು ಗುರುತಿಸಬಹುದು, ಕೆಲವನ್ನು ಗುರುತಿಸಲಾರೆವು. ಸದ್ಯಕ್ಕೆ ಅನ್ಯಕೃತವೆಂದು ನಿಶ್ಚಿತವಾಗಿ ಹೇಳಬಹುದಾದ ವಚನಗಳನ್ನು ಬಿಟ್ಟು ಉಳಿದವು-ಗಳಿಂದ ಅವನ ವ್ಯಕ್ತಿಸ್ವರೂಪದ ಹೊಳಹನ್ನು ಹಾಕಿಕೊಳ್ಳಬೇಕು. ಅದಕ್ಕೆ ಸರಿಹೋಗುವಂತೆ ಅವನ ಚರಿತ್ರೆಯನ್ನು ಹೇಳುವ ಪದ್ಯಗಳಿದ್ದರೆ ಅವನ್ನು ತಾತ್ಪೂ-ರ್ತಿಕವಾಗಿ ಅಂಗೀಕರಿಸಬಹುದು. ಈ ಭೂಮಿಕೆಯಿಂದ ವಿಚಾರಮಾಡಲಾಗಿ, ಅನುಭವಶಾಲಿ, ಸತ್ಯಪ್ರೇಮಿ, ಖಂಡಿತವಾದಿ, ವಿಶಾಲಮನಸ್ಕ, ವಿರಕ್ತವಿವೇಕಿ ಎಂಬ ಮೂರ್ತಿಚಿತ್ರವು ನಮ್ಮ ಕಣ್ಣ ಮುಂದೆ ಅವನ ತ್ರಿಪದಿಗಳನ್ನು ಓದುತ್ತ ಹೋದ ಹಾಗೆ ಸುಳಿಯುತ್ತದೆ. ಅವನ ಚರಿತ್ರೆಯಲ್ಲಿ ಬಂದಿರುವ ಬಸವರಸ ಮತ್ತು ಕುಂಬಾರ-ಮಾಳಿಯ ಪ್ರಣಯಕಥೆ ಸತ್ಯವಿರಲಿ ಬಿಡಲಿ, ಅವನ ಜನ್ಮ ಅಸಾಂಪ್ರದಾಯಿಕ-ವಾಗಿರಬಹುದೆಂದು ತೋರುತ್ತದೆ. ಅವನ ಬಾಲ್ಯದಲ್ಲಿ ತಾಯಿ ಯಾರು, ತಂದೆ

ಯಾರು ಎಂದು ಕೇಳಿ ಅನೇಕರು ಅಣಕಿಸಿರಬಹುದು. ಆಗಲೆ ಅವನು 'ನಾ ಶಿವನ ಮಗನೆಂದು' ಹೇಳಲು ಮೊದಲುಮಾಡಿರಬೇಕು. ತಾಯಿಯೊಡನೆ ಹೊಂದಿಕೆಯಾಗದೆ ಅವನು ಸಣ್ಣ ವಯಸ್ಸಿನಲ್ಲಿಯೆ ಮನೆ ಬಿಟ್ಟು ಹೋಗಿರಬೇಕು.

'ನೂಕಿದರು ಅವರಾಗ ಕುಹಕತನದೊಳು ಬೇಗ |
ಲೋಕದೊಳಗೆಲ್ಲ ಕಂಡುದನು ನುಡಿದು ತಾ- |
ನೇಕವಾಗಿಹನು ಸರ್ವಜ್ಞ ||'

ಈ ಪದ್ಯ ಸಾಭಿಪ್ರಾಯವಾಗಿದೆ. ಕಂಡದ್ದನ್ನಾಡುವ ಅವನ ಸ್ವಭಾವವು ಮನೆಬಿಡಿಸಿತು. ಬಾಳಿನ ಬಗ್ಗೆ ಕಹಿ ಹೆಚ್ಚಿ ಅವನು ಸಮಾಜವೈರಿಯಾಗಿ ಅಲೆಯಬಹುದಾಗಿತ್ತು. ಆದರೆ ಸದ್ಗುರುವಿನ ಲಾಭದಿಂದ ಅವನ ಬುದ್ಧಿ ಬೆಳೆಯಿತು, ವಿವೇಕ ಜಾಗೃತವಾಯಿತು. ಕಹಿ ಹೋಗಿ ಸಿಹಿಯಾಯಿತು. ಬಾಳನ್ನು ಅವನು ಪ್ರೀತಿಸಹತ್ತಿದನು, ಊರೂರು ಸುತ್ತಿ ಎಲ್ಲವರೂ ತನ್ನವರೇ ಎಂಬ ಉದಾತ್ತಭಾವವನ್ನು ಬೆಳೆಸಿಕೊಂಡನು. ಅವನು ಸ್ವಾರ್ಥರಹಿತನೂ ವೈರಾಗ್ಯಪೂರ್ಣನೂ ಆದನು. ಅವನ ಒಳಗಣ್ಣು ತೆರೆಯಿತು. ರಾಗದ್ವೇಷರಹಿತನಾಗಿ ಜೀವನಸತ್ಯವನ್ನು ಅವನು ಕಂಡನು. ಕಂಡದ್ದನ್ನು ಆಡಬೇಕಾದರೆ ಕಂಡದ್ದು ಸತ್ಯವಾಗಿರಬೇಕು. ಸತ್ಯವನ್ನು ಕಾಣುವುದಕ್ಕೆ ಶುದ್ಧಪ್ರೀತಿ ಬೇಕು, ದೃಢವೈರಾಗ್ಯ ಬೇಕು, ನಿರ್ಭೀತಿ ಬೇಕು. ಸರ್ವಜ್ಞನು ಬೆಳೆದಂತೆ ಅಂಥ ಸತ್ಯದರ್ಶಿಯೂ ಖಂಡಿತವಾದಿಯೂ ಆದನು.

'ಜೀಯ ಸದ್ಗುರುನಾಥ ಕಾಯ ಪುಸಿಯನೆ ತೋರಿ |
ಮಾಯಾಪಾಶವನು ಹರಿಸುತ್ತ ಶಿಷ್ಯಂಗೆ |
ತಾಯಿಯಂತಾದ ಸರ್ವಜ್ಞ ||'

ಮುಂತಾದ ಗುರುಮಹಿಮೆಯ ಪದ್ಯಗಳನ್ನೂ

'ಊರೆಲ್ಲ ನೆಂಟರು ಕೇರಿಯೆಲ್ಲವು ಬಳಗ |
ಧಾರಿಣಿಯು ಎಲ್ಲ ಕುಲದೈವವಾಗಿನ್ನು |
ಯಾರನ್ನು ಬಿಡಲಿ ಸರ್ವಜ್ಞ ||'

ಎಂದು ಮೊದಲಾದ ಪದ್ಯಗಳನ್ನು ನೋಡಿದರೆ ಅವನ ವ್ಯಕ್ತಿತ್ವಚಿತ್ರವು ಸ್ಫುಟವಾಗುತ್ತದೆ. ಅವನು ಯಾವ ಮತದವನು, ಯಾವ ಪಂಥದವನು ಎಂದು ಕೇಳುವುದುಂಟು. ಜೀವಾಳದಲ್ಲಿ ಅವನಿಗೆ ಮತವೊಂದೇ ಎಂಬುದಿಲ್ಲ, ಪಂಥವೊಂದೇ ಎಂಬುದಿಲ್ಲ. ಈ ವಿಷಯದಲ್ಲಿ ಅವನು ವಿಲಕ್ಷಣವ್ಯಕ್ತಿ. ಅನುಭವವೇ ಅವನ ವೇದ, ಜೀವನವೇ ಅವನ ಪಾಠಶಾಲೆ. ಅವನದು ಸರ್ವಸಂಗ್ರಹವಾದ ಮೂಲಗಾಮಿಯಾದ ದೃಷ್ಟಿ.

ಆದರೂ ಅವನ ಗುರು ವೀರಶೈವನಾಗಿರಬಹುದು, ಅವನಿಂದ ದೊರೆತ ಸಂಸ್ಕಾರವೆ ಹೆಚ್ಚು ದೃಢವಾಗಿರಬಹುದು. ಒಮ್ಮೊಮ್ಮೆ ಅವನು ಭಟ್ಟಂಗಿಯಂತೆ ಎಲ್ಲರನ್ನೂ ಮೆಚ್ಚುತ್ತಾನೆ, ಕುಹಕಿಯಂತೆ ಎಲ್ಲರನ್ನೂ ತೆಗಳುತ್ತಾನೆ ಎಂದು ತೋರಬಹುದು ಅವನವಲ್ಲದ ವಚನಗಳಿಂದಲೂ ಈ ಗೊಂದಲ ಹೆಚ್ಚಬಹುದು. ಆದರೆ ಅವನ ವ್ಯಕ್ತಿತ್ವದ ಜೀವಾಳವನ್ನು ಹಿಡಿದು ಎಲ್ಲವನ್ನು ಅರ್ಥವಿಸುವುದು ಒಳ್ಳೆಯದು ಸರ್ವಜ್ಞ ಎಂಬುದು ಅವನ ಹೆಸರೇ ಎಂಬ ಪ್ರಶ್ನೆಯ ಚರ್ಚೆಯೂ ಆಗಿದೆ. ಅದು ಅವನಿಗೆ ಕೊಟ್ಟ ಬಿರುದು ಎಂದು ಕೆಲವರ ಊಹೆ. ಅವನ ಅಂಕಿತವಾಗಿರಬೇಕೆಂದು ಇನ್ನೊಂದು ಊಹೆ. 'ಸರ್ವಜ್ಞ ಎಂಬುದು ಎಲ್ಲವನ್ನು ತಿಳಿದ ಜ್ಞಾನಸ್ವರೂಪನಾದ ಭಗವಂತನನ್ನು ಮನಸ್ಸಿನಲ್ಲಿಟ್ಟುಕೊಂಡು ಉಪಯೋಗಿಸುವ ಅಂಕಿತವಾಗಿ ಕಾಣುತ್ತದೆ.'[1] 'ಒಬ್ಬ ಸರ್ವಜ್ಞಕರ್ತನು. ಜಗಕೆಲ್ಲ ಒಬ್ಬನೇ ದೈವ' ಎಂದವನೇ ಹೇಳಿದ್ದಾನೆ. ನಮಗೆ ತೋರುವಂತೆ ಸರ್ವಜ್ಞ ಇದು ಅವನ ಹೆಸರಲ್ಲವೆಂಬುದೇನೊ ದಿಟ. ಆದರೆ ಅದು ಬರೀ ದೇವರ ಅಂಕಿತವಾಗಿರದೆ ಅವನಿಗೆ ಜನತೆ ಕೊಟ್ಟ ವ್ಯಕ್ತಿತ್ವ-ನಿದರ್ಶಕವಾದ ಬಿರುದೂ ಆಗಿರಬೇಕು.

'ಸರ್ವಜ್ಞನೆಂಬವನು ಗರ್ವದಿಂದಾವನೆ ।
ಸರ್ವರೊಳಗೊಂದೊಂದು ನುಡಿಗಲಿತು ।
ವಿದ್ಯದ ಪರ್ವತವೆ ಆದ ಸರ್ವಜ್ಞ ॥'

ಎಂಬುದು ಇದಕ್ಕೆ ಆಧಾರವಾಗಿದೆ. ಅವನಿಗೆ ದೊರೆತ ವಿಧವಿಧವಾದ ಲೋಕಾನುಭವ, ಪರಿಪಕ್ವವಾದ ವಿವೇಕ, ವಿಶಾಲವಾದ ಮನೋಭಾವ ಇವುಗಳಲ್ಲಿ ಅವನ ಸರ್ವಜ್ಞತ್ವ-ವಿದೆ. ಅವನೇನು ಸಕಲಶಾಸ್ತ್ರಪಂಡಿತನಾಗಿರಲಿಲ್ಲ, ವೇದಾಂತಶಿರೋಮಣಿಯಾಗಿರ-ಲಿಲ್ಲ. ಆದರೆ ಯುಗಯುಗದ ಜಾಣ್ಮೆಯೂ ಭಾರತೀಯ ಮತ್ತು ಕನ್ನಡಸಂಸ್ಕೃತಿಯ ಸಾರಾಯವೂ ಅವನಲ್ಲಿ ಮನೆಮಾಡಿತು. 'ಆತ್ಮನನ್ನು ಅರಿತರೆ ಇದನ್ನೆಲ್ಲ ಅರಿತಂತೆ' ('ಆತ್ಮನಿ ಖಲ್ವರೇ ವಿದಿತೇ ಇದಂ ಸರ್ವಂ ವಿದಿತಂ') ಎಂದು ಉಪನಿಷತ್ತು ಹೇಳಿದ ರೀತಿಯಲ್ಲಿ ಅವನು ಸರ್ವಜ್ಞನಾದನು. ಅವನಿಗೆ ಅದು ಸಾರ್ಥಕವಾದ ಬಿರುದಾಯಿತು. ಇಂಥ ಸರ್ವಜ್ಞನು ಸರ್ವಕಾಲದಲ್ಲಿಯೂ ಅರಿಯುತ್ತಲೇ ಹೋಗುತ್ತಾನೆ, ಗರ್ವರಹಿತ-ನಾಗಿರುತ್ತಾನೆ ಎಂಬುದನ್ನೂ ಅವನು ತೋರಿದನು.

ಸರ್ವಜ್ಞನ ತ್ರಿಪದಿಗಳಲ್ಲಿ ಕಥೆಯಿಲ್ಲ, ವರ್ಣನೆಯಿಲ್ಲ. ಆದರೆ ಸಮಗ್ರ ಜೀವನ-ಕಥೆ ಇಲ್ಲವೆ ಜೀವನಧರ್ಮ ಅವುಗಳಲ್ಲಿ ರೂಪಗೊಂಡಿದೆ, ಜೀವನರಸಕ್ಕೆ ಪೋಷಕ-ವಾಗಿದೆ. ಅವು ಬರೀ ನೀತಿಬೋಧಕವಾದವುಗಳಲ್ಲ. ಅನುಭವದ ವೇದ, ವಿವೇಕದ

---

[1] ಎ. ಆರ್. ಕೃಷ್ಣಶಾಸ್ತ್ರಿ : ಸರ್ವಜ್ಞಕವಿ, ಪು. ೭-೮.

ಕಾಣಿ ಅವುಗಳಲ್ಲಿದೆ. ಕೆಲವು ಪದ್ಯಗಳಲ್ಲಿ ಇದು ಲೇಸು, ಇದು ಹೊಲ್ಲ ಎಂದು ಹೇಳುವಾಗ ಮಾತಿನ ಚತುರವಾದ ಜೋಡಣೆ, ಹಗುರಾದ ನಗೆ ಮಾತ್ರ ಕಾಣುತ್ತದೆ. ಉಳಿದನೇಕವಚನಗಳಲ್ಲಿ ಸಮಾಜದ ಗುಣದೋಷಗಳ ಚಿತ್ರವಿದೆ, ವಿಡಂಬನೆಯಿದೆ, ಬೋಧನೆಯಿದೆ. ಯಾರ ಭಿಡೆ–ಮುರವತ್ತುಗಳಿಲ್ಲದೆ, ಮುಚ್ಚುಮರೆಯಿಲ್ಲದೆ ಅವನು ಕಂಡದ್ದನ್ನಾಡಿದ್ದಾನೆ. ಕನ್ನಡಸಾಹಿತ್ಯದ ಚರಿತ್ರೆಯಲ್ಲಿ ಇಷ್ಟುಮಟ್ಟಿನ ಸ್ವಾತಂತ್ರ್ಯ–ಮನೋಧೈರ್ಯಗಳು ಬೇರೆಯವರಲ್ಲಿ ಕಾಣವು. ಬ್ರಹ್ಮಶಿವನಂಥ ವಿಡಂಬನಕಾರರು ಕಟುವಾಗಿ ಕೆಡೆನುಡಿದಿದ್ದಾರೆ. ಆದರೆ ಅವರದು ಮತೀಯವಾದ ಮರ್ಯಾದಿತವಾದ ದೃಷ್ಟಿ. ತಮ್ಮ ಮತದ ವಿಷಯದಲ್ಲಿ ಅವರು ಪರತಂತ್ರರು, ಸಮಯಶರಣರು. ದೇವ, ಧರ್ಮ, ಪೂಜೆ, ಗುರು, ದಾನ, ಕುಲ, ಮತ, ನೀತಿ ಮುಂತಾದ ಅನೇಕ ವಿಷಯಗಳಲ್ಲಿ ಸರ್ವಜ್ಞನದು ಸಮಯಸ್ವತಂತ್ರವಾದ ಸಾರ್ವಕಾಲಿಕವಾದ ಮೂಲ್ಯ-ಪ್ರಜ್ಞೆ.

ಸರ್ವಜ್ಞನ ತ್ರಿಪದಿ ಕಾವ್ಯವೇ, ಸರ್ವಜ್ಞನು ಕವಿಯೇ ಎಂಬ ಕೇಳಿಕೆ ಸಹಜ-ವಾಗಿದೆ. ಅವನ ತ್ರಿಪದಿಗಳನ್ನು ಸಂಗ್ರಹಿಸಿ, ಪರಿಶ್ರಮದಿಂದ ಅಭ್ಯಾಸಿಸಿ ಸರ್ವಜ್ಞ-ತಜ್ಞರೆಂದು ಹೆಸರಾದ ಶ್ರೀ. ಚೆನ್ನಪ್ಪ ಉತ್ತಂಗಿಯವರು ಈ ಪ್ರಶ್ನೆ ಕೇಳಿ ಉತ್ತರ-ಕೊಟ್ಟಿದ್ದಾರೆ. 'ಸರ್ವಜ್ಞನ ಪದ್ಯಗಳಲ್ಲಿ ಜೀವನವನ್ನೂ ಭಾವನಿರ್ಭರತೆಯನ್ನೂ ವಕ್ರೋಕ್ತಿಪ್ರಕಾರವನ್ನೂ ಕಂಡವರು ಇವುಗಳಿಗೆ ಕಾವ್ಯರೂಪವಿದೆಯೆಂದೇ ಭಾವಿಸುವ-ರಲ್ಲದೆ ನೀತಿಯ ರಗಳೆಯೆಂದು ಎಂದಿಗೂ ತಿಳಿಯರು.'[1] 'ಅವನು ಸಂಸ್ಕೃತರ ಸಂಸ್ಕೃತಕವಿಯಲ್ಲ, ಪ್ರಾಕೃತರ ಪ್ರಾಕೃತಕವಿ'[2] ಎಂದೂ ಸಂಗ್ರಹಶಕ್ತಿ, ಬಿರುಸು, ಚಿತ್ತಾಕರ್ಷಣ, ಹಿಡಿನುಡಿಗಳ ಪ್ರಯೋಗ, ಸ್ವಾಭಾವಿಕತೆ ಸರ್ವಜ್ಞಕಾವ್ಯದ ಲಕ್ಷಣ-ಗಳೆಂದೂ ಅವರು ಹೇಳಿದ್ದಾರೆ. 'ಕವಿಗಳಲ್ಲಿ ಎರಡು ಜಾತಿ: ವರ್ಣಕ, ದರ್ಶಕ ಎಂದು. ವರ್ಣಕರು ಎಲ್ಲರೂ ಕಂಡುದನ್ನೇ ಸರಸವಾಗಿ ಬಣ್ಣಿಸುವರು. ದರ್ಶಕರು ಸಾಮಾನ್ಯವಾಗಿ ಕಣ್ಣಿಗೆ ಮರೆಯಾದುದನ್ನು ತಾವು ಕಂಡುಕೊಂಡು ಅನ್ಯರು ಅದನ್ನು ಕಾಣುವಂತೆ ಮಾಡುವರು. ಸರ್ವಜ್ಞ ಅಂಥ ದರ್ಶಕಕವಿ........ಇಲ್ಲಿಯ ನೀತಿ ಬರಡುಮಾತಲ್ಲ, ರಸಮಯವಾದ ಸಂಭಾಷಿತ. ಹಾಸ್ಯವು ಕರುಣಾಶಾಲಿಯ ಶಲ್ಯ-ತಂತ್ರ' ಎಂದು ಮುಂತಾಗಿ ಶ್ರೀ. ಬೇಂದ್ರೆಯವರು ಹೇಳಿದ್ದಾರೆ.[3] 'ಸರ್ವಜ್ಞನ ಕಾವ್ಯ ಒಟ್ಟಿನ ಮೇಲೆ ನೀತಿಕಾವ್ಯ........ರಸಿಕತೆಯೇ ಕವಿಯ ಜೀವ. ಅದು ಸರ್ವಜ್ಞನಲ್ಲಿ ಬೇಕಾದಷ್ಟಿದೆ. ಆದ್ದರಿಂದ ಅವನ ನೀತಿಕಾವ್ಯವು ಕಾವ್ಯವಾಗಿದೆ, ಉತ್ತಮಕಾವ್ಯವಾಗಿದೆ'[4] ಎಂದು ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳು ಅಭಿಪ್ರಾಯ-

---

1 ಚೆನ್ನಪ್ಪ ಉತ್ತಂಗಿ: ಸರ್ವಜ್ಞವಚನಗಳು, ಪ್ರಸ್ತಾವನೆ, ಪು. ೬೫

2 ,, ,, ,, ಪು. ೬೬

3 ದ. ರಾ. ಬೇಂದ್ರೆ: ಸರ್ವಜ್ಞಕವಿ (ಜೀವನ ೧–೨, ಪು. ೮೨–೮೩)

4 ಎ. ಆರ್. ಕೃಷ್ಣಶಾಸ್ತ್ರಿ: ಸರ್ವಜ್ಞಕವಿ, ಪು. ೫೩

ಪಟ್ಟಿದ್ದಾರೆ. ತಮಿಳಿನ ಕುರಳ್ ಕಾವ್ಯಕ್ಕೂ ತೆಲುಗಿನ ವೇಮನನ ಕಾವ್ಯಕ್ಕೂ ಸರ್ವಜ್ಞನ ವಚನಗಳನ್ನು ಹೋಲಿಸಿ, 'ಸರ್ವಜ್ಞನು ಕನ್ನಡಿಗರ ತಿರುವಳ್ಳುವರ್, ಕನ್ನಡಿಗರ ವೇಮನ. ಅವರಂತೆ ಇವನಿಗೂ ನೀತಿಸಾಹಿತ್ಯದಲ್ಲಿ ಉಚ್ಚಸ್ಥಾನವು ಸಲ್ಲುತ್ತದೆ'[1] ಎಂದಿದ್ದಾರೆ.

ಮೊದಲನೆಯದಾಗಿ ಬಿಡಿಪದ್ಯಗಳಲ್ಲಿಯೂ ಕಾವ್ಯವಿರುತ್ತದೆ, ಅದು ಉತ್ತಮಿಕೆಯನ್ನೂ ತೋರುತ್ತದೆ ಎಂಬುದನ್ನು ನೆನೆಯಬೇಕು. ಜನಪದಸಾಹಿತ್ಯದ ತ್ರಿಪದಿಗಳು ಇದಕ್ಕೆ ಸಾಕ್ಷಿ. ಆದರೆ ಇಂಥ ಬರೆವಣಿಗೆಯೆಲ್ಲ ಕಾವ್ಯವಾಗಿರುತ್ತದೆ ಎಂದು ಭಾವಿಸ ಕೂಡದು. ಒಟ್ಟನಲ್ಲಿ ಕವಿಯ ಭೂಮಿಕೆಯಿಂದ ಅದರ ನಿರ್ಮಾಣವಾಗುತ್ತದೆ. ಅದರಲ್ಲಿ ಸಾದೃಶ್ಯಲಕ್ಷ್ಮಿ ಒಮ್ಮೆ ಛಂದಸ್ಸು, ಪ್ರಾಸ, ನಾದಗಳಿಂದ ಭೂಷಿತಳಾಗಿರಬಹುದು, ಒಮ್ಮೆ ಅವಳಿಲ್ಲದೆ ಅವಳ ಭೂಷಣ ಮಾತ್ರ ಇರಬಹುದು. ಸರ್ವಜ್ಞನಲ್ಲಿ ತಾ ಕಂಡ ಸತ್ಯವನ್ನು ರಸಾನುಭವವಾಗಿಸಿ ಹೇಳುವ ಕವಿಯ ಮನೋಧರ್ಮವಿದೆ ಎಂದು ಅವನನ್ನು ಕವಿಯೆನ್ನಬೇಕು. ಆದರೆ ಅವನು ಬರೆದದ್ದೆಲ್ಲ ಕವಿತೆಯಾಗಿದೆ ಎಂದಲ್ಲ.

'ರಾಗವಿದ್ದರೆ ಭೋಗ ಭೋಗವಿದ್ದರೆ ರಾಗ ।
ರಾಗದಲಿ ಸಕಲಸಂಪದವು ಜಗದಲಿ ವಿ- ।
ರಾಗವೇ ಯೋಗ ಸರ್ವಜ್ಞ ॥'

ಇಂಥ ಪದ್ಯಗಳಲ್ಲಿ ಸತ್ಯದರ್ಶನವು ಪ್ರಾಸಬದ್ಧರಚನೆಯಾಗಿದೆ, ಆದರೆ ಕವಿತೆಯಾಗಿದೆ ಎಂದು ಹೇಳಲು ಬಾರದು. ಅದೇ

'ಸರವೆ ಸುರಲತೆಯಕ್ಕು ಗೊರವ ಸುರಪತಿಯಕ್ಕು ।
ಹರ ಕೊಟ್ಟ ಗರಿಯು ಗಿರಿಯಕ್ಕು ಗುರುವಿನಾ ।
ಕರುಣವಿರುವನಕ ಸರ್ವಜ್ಞ ॥

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ ।
ರಸಿಕನಲ್ಲದನ ಬರಿಮಾತು ಕಿವಿಯೊಳ್ಕೊ- ।
ರ್ದಸಿಯ ಬಡಿದಂತೆ ಸರ್ವಜ್ಞ ॥'

ಇಂಥಲ್ಲಿ ಕವಿತೆಯ ಲಕ್ಷಣವಿದೆ. ಸರ್ವಜ್ಞನ ತ್ರಿಪದಿಗಳ ಬಹುಭಾಗ ಇಂಥ ಪದ್ಯಗಳಿಂದ ಕೂಡಿದ್ದು ಸಹಜವಾದ ಕವಿತಾಸತ್ವಕ್ಕೆ ನಿದರ್ಶನವಾಗಿದೆ. ಅವನ ಕೃತಿಗೆ ಬರಿಯ ನೀತಿಕಾವ್ಯ ಎನ್ನಲಾಗದು. ಅನುಭವ, ನೀತಿ, ತತ್ತ್ವ, ಭಕ್ತಿ ಎಲ್ಲವ

1 ಅದೇ, ಪು. ೫೩.

ಇರುವ ಜೀವನಸತ್ಯದ ಕಾವ್ಯ ಎಂದರೆ ಹೆಚ್ಚು ಒಳ್ಳಿತು. ಈ ಕಾವ್ಯದಲ್ಲಿ ಜೀವನ-ಸತ್ಯದ ನಿಚ್ಚಳವಾದ ಕಾಣ್ಕೆ ಅತ್ಯಂತಸಹಜವಾದ ರಸಾನುಭವವಾಗಿ ಹೊರಹೊಮ್ಮು-ತ್ತದೆ, ಸಮಗ್ರತೆಯಲ್ಲಿ ವಚನಕಾರರ ಮಾತಿನ ಘನತೆಯನ್ನು ಪಡೆಯುತ್ತದೆ. ವಚನ-ಕಾರರ ಗಾಂಭೀರ್ಯ ಸರ್ವಜ್ಞನಲ್ಲಿ ಸತತವೂ ಕಾಣುವುದಿಲ್ಲ. ಆದರೆ ಅವರ ಶಕ್ತಿ ಅವನ ಶಕ್ತಿ ಒಂದೇ. 'ಕಿಱಿದಱೊಳೆ ಪಿರಿದುಮರ್ಥಮನಱಿಪಲ್ ನೆಱೆವಾತ' ನಾದ ಸರ್ವಜ್ಞನ ಸಂಕ್ಷೇಪಸ್ವಾರಸ್ಯ, ತ್ರಿಪದಿಯ ತ್ರಿವಿಕ್ರಮ, ಅಚ್ಚಗನ್ನಡಸೊಬಗು ಇವನ್ನು ಎಷ್ಟು ಹೊಗಳಿದರೂ ಸಾಲದು. ಅವನ ಬರೆವಣಿಗೆಯೆಲ್ಲ ಉತ್ತಮಕಾವ್ಯ-ವೆನ್ನಲಾಗದಿದ್ದರೂ ಅವನಲ್ಲಿ ಉತ್ತಮಕವಿಯ ಸತ್ವವಿದೆ ಎನ್ನಬೇಕು. ಅವನ ವಚನಗಳು ಜನತೆಯ ಜ್ಞಾನಕೋಶವಾಗಿವೆ, ಸ್ಫೂರ್ತಿವಾಕ್ಯಗಳಾಗಿವೆ, ಗಾದೆಮಾತು-ಗಳಾಗಿವೆ. ಕನ್ನಡಸಾಹಿತ್ಯದ ದೇಸಿತತ್ವವು ಸರ್ವಜ್ಞನಲ್ಲಿ ಸಾರ್ಥಕ್ಯವನ್ನು ಪಡೆದಿದೆ.

೩೨. ಈ ಯುಗದ ವೀರಶೈವ ಸಾಹಿತ್ಯ (೫)

ಷಡಕ್ಷರದೇವ

ಈ ಯುಗದ ಸೋಜಿಗವೆಂದರೆ ದೊರೆಯುವ ಹಲಕೆಲವು ಚಂಪೂಗ್ರಂಥಗಳನ್ನು ವೀರಶೈವಕವಿಗಳೇ ಹೆಚ್ಚಾಗಿ ರಚಿಸಿರುತ್ತಾರೆ. ಜೈನಕವಿಗಳು ಚಂಪುವಿನ ಹತ್ತಿರ ಹಾಯಲಿಲ್ಲವೆಂದರೂ ಸರಿ. ಬಹುಶಃ ಇದಕ್ಕೆ ಕಾರಣವೆಂದರೆ ಜೈನವ್ಯಾಸಂಗಪರಂಪರೆ ಕುಂಠಿತವಾಗಿರಬೇಕು, ಪ್ರೌಢಕಾವ್ಯದ ಅಭ್ಯಾಸ-ಅಭಿರುಚಿಗಳು ಕಡಿಮೆಯಾಗಿರಬೇಕು. ಜೊತೆಗೆ ದೇಸಿಗಬ್ಬದ ಅಗತ್ಯವನ್ನು ಉಳಿದವರಂತೆ ಜೈನರೂ ಅರಿತುಕೊಂಡು ವಾತಾವರಣಕ್ಕೆ ಸರಿಯಾಗಿ ಹೊಂದಿಕೊಂಡರು. ಅದೇ ವೀರಶೈವಪುನರ್ಘಟನೆಯ ಆಂದೋಲನದ ಮೂಲಕ ಪ್ರೌಢವ್ಯಾಸಂಗವು ಮಠಮಠಗಳಲ್ಲಿ ಹೆಚ್ಚುತ್ತಹೋಯಿತು. ಅದರ ಪರಿಣಾಮವಾಗಿ ಷಟ್ಪದಿ-ಸಾಂಗತ್ಯಕಾವ್ಯಗಳಲ್ಲಿಯೂ ಲಕ್ಷಣವುಳ್ಳ ವರ್ಣಕ, ಲಕ್ಷಣವಿರದ ವರ್ಣಕ ಎಂದು ಎರಡು ಪ್ರಕಾರಗಳು ತಲೆದೋರಿದುವು. ಅನೇಕ ವೀರಶೈವ ಪಂಡಿತರು 'ವರ್ಣಕಕ್ಕೆ ಲಕ್ಷಣವಿಲ್ಲ' ಎಂಬ ಅಪವಾದವನ್ನು ತೊಡೆದು ಹಾಕಲು ಕಂಕಣತೊಟ್ಟು ದೇಸಿಯ ಛಂದಸ್ಸಿನಲ್ಲಿ ಮಾರ್ಗದ ಬಿಗುವನ್ನು ತರಲು ಹವಣಿಸಿದರು. ಅವರಲ್ಲಿ 'ಚೆನ್ನಬಸವಪುರಾಣ'ದ ವಿರೂಪಾಕ್ಷಪಂಡಿತನು ಪ್ರಖ್ಯಾತನಾದನು. ಇದೇ ರೀತಿ ಚಂಪೂಕಾವ್ಯಗಳನ್ನು ಬರೆದು ಪ್ರೌಢಿಮೆಯನ್ನು ಮೆರೆಯುವ ಪ್ರಘಾತವು ಆರಂಭವಾಯಿತು. ವೀರಶೈವ ಚಂಪೂಕಾಲದಲ್ಲಿ ಚಂದ್ರಕವಿ, ಸುರಂಗಕವಿ, ಪ್ರಭುಗ, ವೀರಭದ್ರರಾಜ, ಸದಾಶಿವಯೋಗಿ, ಮುರಿಗೆದೇಶಿಕೇಂದ್ರ, ಸಿದ್ಧಲಿಂಗಶಿವಯೋಗಿ, ಶಾಂತವೀರದೇಶಿಕ, ಕವಿಮಾದಣ್ಣ, ಷಡಕ್ಷರದೇವ ಇವರನ್ನು ಉಲ್ಲೇಖಿಸಬೇಕು. ಇವರೆಲ್ಲರೂ ಬಹುಶಃ ಕಾವ್ಯವಿಷಯ, ರಸಪ್ರತಿಪಾದನೆ, ಶಿವಕವಿತ್ವದೃಷ್ಟಿಯಲ್ಲಿ ಹರಿಹರನ ಮಾರ್ಗವನ್ನು ಅನುಸರಿಸಿದರು; ವರ್ಣನೆ-ಅಲಂಕಾರ-ಕವಿಸಮಯಗಳಲ್ಲಿ ಕನ್ನಡಚಂಪೂಕಾವ್ಯ ಇಲ್ಲವೆ ಸಂಸ್ಕೃತಮಹಾಕಾವ್ಯದ ದಾರಿಯಲ್ಲಿ ಹೆಜ್ಜೆಯಿಟ್ಟರು. ಚಂದ್ರಕವಿಯ 'ವಿರೂಪಾಕ್ಷಾಸ್ಥಾನ' ಹಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುವ ಐತಿಹಾಸಿಕ-ಧಾರ್ಮಿಕಕಾವ್ಯ. ಧಾರ್ಮಿಕ ಅಂಶವೇ ಇದರಲ್ಲಿ ಹೆಚ್ಚೆಂದು ಹೇಳಬೇಕು. 'ತಿಂಗಳ ಬಿಂಬಮಂ ಹಿಡಿದು ಹಿಂಡಿ ಪಳಚ್ಚನೆ ಸೋರ್ವ ಸೋನೆಯಂತೆ' ಮುಂತಾದ ಪದ್ಯವನ್ನು ನೋಡಿದರೆ ಚಂದ್ರಕವಿ ಒಳ್ಳೆಯ ಪ್ರೌಢಕವಿಯೆಂಬುದು ತಿಳಿಯುತ್ತದೆ. ಸುರಂಗಕವಿಯ 'ತ್ರಿಷಷ್ಟಿಪುರಾತನರ ಚರಿತ್ರೆ' ೬೩ ಆಶ್ವಾಸಗಳಲ್ಲಿ ತಮಿಳುನಾಡಿನ ೬೩ ಶಿವಭಕ್ತರ ಚರಿತ್ರೆಯನ್ನು ನಿರೂಪಿಸುವ ದೊಡ್ಡ ಗ್ರಂಥ. ಹರಿಹರನ ಚಂಪೂರೀತಿಯ ಅನುಕರಣೆಯಿದ್ದರೂ ವರ್ಣನಾಶಕ್ತಿ ಚೆನ್ನಾಗಿದೆ. ವೀರಭದ್ರರಾಜನ 'ವೀರಭದ್ರವಿಜಯ'ವನ್ನು ಕುರಿತು ಹಿಂದೆ ಹೇಳಿದೆ. ಸದಾಶಿವಯೋಗಿಯ 'ರಾಮನಾಥವಿಲಾಸ'ವು ವೀರಶೈವಮತ

ೀಷ್ಠತೆಯನ್ನು ಸಿದ್ಧಮಾಡಿದ ರಾಮನಾಥಗುರುವಿನ ಚರಿತ್ರೆಯಿದೆ. ಚಂಪೂರೂಪ-
ಲ್ಲಿಯೂ ಅಲ್ಲಲ್ಲಿ ಷಟ್ಪದಿಗಳನ್ನು ಸೇರಿಸಿದ್ದು ಇದರ ವಿಶೇಷವಾಗಿದೆ; 'ಚಮತ್ಕೃತಿ-
ಥಿತಮಿಾ ಮತ್ಕಾವ್ಯಂ' ಎಂಬ ಕವಿಯ ಆತ್ಮವಿಮರ್ಶೆ ಸರಿಯೆಂದು ತೋರುತ್ತದೆ.
ುರಿಗೇದೇಶಿಕೇಂದ್ರನ 'ರಾಜೇಂದ್ರವಿಜಯ ಅಥವಾ ಹಮ್ಮೀರಕಾವ್ಯ'ವು ಹಮ್ಮೀರ-
ರ ಇಲ್ಲವೆ ಪಟ್ಟದಕಲ್ಲಿನಲ್ಲಿ ಆಳಿದ ಹಮ್ಮೀರನ ಚರಿತ್ರೆಯಾಗಿದೆ. ಹಿಂದೆ ಶರಣರು
ೀಳಿದ ಈ ಕಥೆ ಒಬ್ಬ ಶಿವಭಕ್ತನದೇ ಆಗಿದೆ. 'ಪರಮಶಿವಶರಣ ರಾಜೇಂದ್ರ
ಮ್ಮೀರ ವಿಕ್ರಮಾತುಳಪ್ರಬಂಧ' ಎಂದು ಪ್ರಕರಣಾಂತ್ಯಗದ್ಯವು ಹೇಳುತ್ತದೆ.
ಾವ್ಯವೆಲ್ಲ ಸಾಂಪ್ರದಾಯಿಕಸರಣಿಯಲ್ಲಿದೆ. ಸಿದ್ಧಲಿಂಗಶಿವಯೋಗಿಯ 'ಭೈರವೇಶ್ವರ-
ರಾಣ'ದಲ್ಲಿ ಭೈರವರಾಜನೆಂಬ ಶಿವಭಕ್ತನ ಕಥೆಯನ್ನು ಹೇಳಿದೆ. ಮತೀಯ-
ಾದವೂ ಇದರಲ್ಲಿ ತಲೆಯಿಕ್ಕಿದೆ. ಶಾಂತಿವೀರದೇಶಿಕನ 'ಶಿವಲಿಂಗಚಾರಿತ್ರ'ವು
ವಲಿಂಗಾರ್ಯನ ಚರಿತ್ರೆಯಾಗಿದೆ. ಕವಿಮಾದಣ್ಣನ 'ನನ್ನಯ್ಯಗಳ ಚರಿತ್ರೆ'
ಕ್ಕದಾಗಿದ್ದು ಗುರುಭಕ್ತನೊಬ್ಬನ ಚರಿತ್ರೆಯನ್ನು ನಿರೂಪಿಸುತ್ತದೆ.

ಷಡಕ್ಷರದೇವನೇ ಈ ಯುಗದ ವೀರಶೈವ ಚಂಪೂಕಾರರಲ್ಲಿ ಶ್ರೇಷ್ಠನು.
ೖಸೂರು ದೊರೆ ಚಿಕದೇವರಾಜನ ಕಾಲದಲ್ಲಿ ಕನ್ನಡಸಾಹಿತ್ಯಕ್ಕೆ ಬಂದ ಮರುಸುಗ್ಗಿ-
ಲ್ಲಿ ಷಡಕ್ಷರಿ ತನ್ನ 'ರಸಗಾನ'ವನ್ನು ಬೆರೆಸಿದನು. ತಿರುಮಲಾರ್ಯ, ಚಿಕುಪಾಧ್ಯಾ-
ುರು ಸ್ವಮತದ ವಾಹಕವಾಗಿ ಪ್ರೌಢಚಂಪುವನ್ನು ಆಶ್ರಯಿಸಿದಂತೆ ಷಡಕ್ಷರಿಯೂ
ನ್ನ ರೀತಿಯಲ್ಲಿ ಅದನ್ನೇ ಕೈಕೊಂಡನು. ಚಂಪೂರೂಪಕ್ಕೆ ಮತ್ತೆ ತುಂಬುಕಳೆ
ಂದಿತು. ಸಹಜಾತವಾದ ಕವಿತ್ವ, ಕುಶಾಗ್ರವಾದ ಮತಿ ಇವುಗಳಿಗೆ ವ್ಯುತ್ಪತ್ತಿಯ
ೋಡು ದೊರೆತ ಕಾರಣ ಮಠಪತಿಯೂ ಯತಿಯೂ ಆದ ಷಡಕ್ಷರಿ ಬಾಲ್ಯದಿಂದ
ೀವನರಸಿಕನೂ ಕವಿತಾರಚನೆಯಲ್ಲಿ ನಿಷ್ಣಾತನೂ ಆದನು. ಅದನ್ನವನು
ಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಗಿಡಕ್ಕೆ ಎಲೆಗಳು ಹೂಗಳು ಬರುವಂತೆ ಕವಿಗೆ
ಂತೆ ಬರಬೇಕೆಂಬ ಕೀಟ್ಸ್‌ಕವಿಯ ಉಕ್ತಿ ಅವನಿಗೆ ಬಹಳ ಚೆನಾಗಿ ಅನ್ವಯಿಸುತ್ತದೆ.
ವನು ಕನ್ನಡ-ಸಂಸ್ಕೃತ ಎರಡರಲ್ಲಿಯೂ ಅನೇಕ ಗ್ರಂಥಗಳನ್ನು ರಚಿಸಿದನು.
ನ್ನಡದಲ್ಲಿ ಅವನ ಗ್ರಂಥಗಳೆಂದರೆ 'ರಾಜಶೇಖರವಿಳಾಸ, ಶಬರಶಂಕರವಿಳಾಸ ಮತ್ತು
ಷಭೇಂದ್ರವಿಜಯ.' ಇವು ಮೂರೂ ಚಂಪೂರೂಪದಲ್ಲಿವೆ, ಕವಿತ್ವ-ಪಾಂಡಿತ್ಯಗಳ
ಚ್ಚರಿಯ ಬೆರಕೆಯಾಗಿವೆ. 'ರಾಜಶೇಖರವಿಳಾಸ'ದಲ್ಲಿ ಮಲ್ಲಣಾರ್ಯನು 'ಭಾವ-
ಂತಾರತ್ನ'ದಲ್ಲಿ ವರ್ಣಕವಾಗಿ ಹೇಳಿದ ಕಥೆಯನ್ನು ತಾನು ವಸ್ತುಕವಾಗಿ ಹೇಳುವೆ-
ಂದಿದ್ದಾನೆ.

'ಮೃದುಮಧುರ ಪದವಿಲಾಸಾ- |
ಸ್ಪದ ರಸವಿಸರಪ್ರಕಾಶ ಕರ್ಣಾಟಕ ಕವಿ- |
ತ್ವದೊಳೊರ್ವನೆ ಪೆಸರ್ವಡೆದ- |
ಗ್ಗದ **ಹರಿಹರನ ಉದಿತಮಾರ್ಗದಿಂದಿದನೊರೆವೆಂ** ||' (೧-೭೯)

ಎಂಬಲ್ಲಿ ತನ್ನದು ಹರಿಹರನ ಮಾರ್ಗವೆಂದು ಅವನು ಸ್ಪಷ್ಟವಾಗಿ ಸಾರಿದ್ದಾನೆ. ಅದಕ್ಕೆ ಅನುಸರಿಸಿ ಪಂಚಾಕ್ಷರೀ ಮಂತ್ರದ ಮಹಿಮೆಯನ್ನು ತಿಳಿಸುವ ಶಿವಭಕ್ತನ ಕಥೆಯನ್ನು ಆಯ್ದುಕೊಂಡಿದ್ದಾನೆ. ಸಾಮಾನ್ಯವಾದ ಪದ್ಧತಿಯಂತೆ ಮೊದಲೇ ಅಲ್ಪವಾಗಿರುವ ಕಥೆಯ ಹಂದರದ ಮೇಲೆ ಇದನ್ನು ಮುಚ್ಚಿ ಬಾಗಿಸುವಷ್ಟು ವರ್ಣನೆಯ ಬಳ್ಳಿಯನ್ನು ದಾಂಗುಡಿಬಿಡಿಸಿದ್ದಾನೆ. ೧೪ ಆಶ್ವಾಸಗಳೂ ವರ್ಣನಾ-ಮಯವಾಗಿವೆ. ಕಥೆ ಜಂಬೂಸವಾರಿಯ ಮೆರೆವಣಿಗೆಯಂತೆ ಮೆಲ್ಲನೆ ಸಾಗುತ್ತದೆ. ಅದರಲ್ಲಿ ಯಾವ ಕುತೂಹಲಜನಕ ಅಂಶವೂ ಇಲ್ಲ. ೧೩ನೆಯ ಆಶ್ವಾಸದ ತಿರುಕೊಳವಿನಾಚಿ ಸಂದರ್ಭದಲ್ಲಿ ಕರುಣರಸವುಕ್ಕುತ್ತದೆ. ಉಳಿದದ್ದೆಲ್ಲವೂ ಶಿವಸಮಯ ಇಲ್ಲವೆ ಕವಿಸಮಯ ಇವುಗಳ ಜಾಡುಹಿಡಿದು ಹೊರಟ ಉತ್ಪ್ರೇಕ್ಷೆ, ಪ್ರೌಢಿಮೆ. ಈ ಕಾವ್ಯದಲ್ಲಿ ಶೃಂಗಾರಕರುಣಭಕ್ತಿರಸಗಳು ತಲೆದೋರಿವೆ. ಗಾತ್ರದಲ್ಲಿ ಶೃಂಗಾರವೇ ಇಲ್ಲಿ ಪ್ರಮುಖವೆಂದು ತೋರಿದರೂ ಜೀವಾಳದಲ್ಲಿ ಭಕ್ತಿಯೇ ಇಲ್ಲಿ ಪ್ರಧಾನವಾಗಿದೆ. ಕರುಣ ಅದಕ್ಕೆ ಪೋಷಕವಾಗಿದೆ. ತಿರುಕೊಳವಿನಾಚಿಯ ಸಂದರ್ಭವು ನಿಜವಾಗಿಯೂ ಹೃದಯಸ್ಪರ್ಶಿಯಾಗಿದೆ. ಷಡಕ್ಷರಿ ಎಂಥ ಪಂಡಿತನಾದರೂ ಎಷ್ಟು ಉತ್ಪ್ರೇಕ್ಷೆಗಳ ಉದ್ಯಾನವನ್ನೇ ರಚಿಸಿದರೂ ರಸಮಯಸಂನಿವೇಶಗಳಲ್ಲಿ ಅವನು ತೀರ ಸರಳ, ಮಾನವಸಹಜವಾಗುತ್ತಾನೆ. ತಾನು ಹರಿಹರನ ರಸವತ್ಕವಿತಾಮಾರ್ಗದ ಅನು-ಯಾಯಿಯೆಂಬುದನ್ನು ತೋರುತ್ತಾನೆ. ತಿರುಕೊಳವಿನಾಚಿ 'ತನುಭವನೆಲ್ಲಿದನಿನಿ-ವಾತಿನ ನೀರನೆಲ್ಲಿದಂ ಮೆಲ್ನಗೆಯಿಂಪಿನ ಸೊಬಗನೆಲ್ಲಿದಂ ಚೆಲ್ವಿನ ಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ' (೧೩-೧೦೪) ಎಂದು ಅಲ್ಪರಿಯುತ್ತ ಬಂದು ಸತ್ತ ಮಗನನ್ನು ನೋಡಿದೊಡನೆ 'ಅಡವಿಗಿಚ್ಚುರ್ಗೊಂಡ ಪುಲ್ಲೆಯಂತೆ ಹರಣಂ ಹಮ್ಮೈಸಿ ಪರ್ದೆರಗಿದುರಗಿಯಂತೆ ಮಿಡುಮಿಡನೆ ಮಿಡುಕಿ ಕಡಿವಡೆದೆಳವಳ್ಳಿಯಂತೆ ಕೊರ್ಗಿ ಪೊಸೆದಿಟ್ಟ ಪೂಮಾಲೆಯಂತೆ ಕಂದಿ ಕುಂದಿ ಮುಂದೈಸಿದಳಲಿಂ ಮುಂದುಗೆಟ್ಟು ಕೆಟ್ಟೆ ಕೆಟ್ಟೆನೆಂದು ಬಸಿರಂ ಪೊಸೆದು ದೆಸೆದೆಸೆಗೆ ಬಾಯಂ ಬಿಟ್ಟು ಮೊರೆಯಿಟ್ಟು ಮರುಗಿ ಶೋಕಿಸಿದಳಂತೆ. ಇಲ್ಲಿ ಅವನ ಕಲ್ಪನೆ-ಭಾವನೆಗಳು ಸಹಕರಿಸಿ ಒಂದು ಉತ್ಕಟ ರಮ್ಯಚಿತ್ರವನ್ನು ಒದವಿಸಿರುತ್ತವೆ. ಮುಂಬರುವ ವಿಳಾಪದಲ್ಲಿ ತಾಯಿಗರುಳಿನ ಸಹಜವಾದ ಮೊರೆಯಿದೆ, ಅಲಂಕಾರಗಳ ಬೇಗಡೆಯಿಲ್ಲ. 'ರಾಜಶೇಖರವಿಳಾಸ'ವು ಮುಖ್ಯವಾಗಿ ಷಡಕ್ಷರಿಯ ಕಲ್ಪನಾವಿಳಾಸಕ್ಕೆ ನಿದರ್ಶನ. 'ತೂಗುತೆ ತೊನೆಯುತೆ (೨/೧೧-೧೫) ಮುಂತಾದ ಪದ್ಯಗಳಲ್ಲಿ ನಿಸರ್ಗಚಿತ್ರವನ್ನು ಇದ್ದಕಿದ್ದಹಾಗೆ ಸ್ವಭಾವೋಕ್ತಿಯ ಕುಶಲಕುಂಚದಿಂದ ಬರೆಯುವಂತೆ ಕಲ್ಪನೆಗಳನ್ನು ಒಂದರ ಮೇಲೊಂದು ತೂರುವಲ್ಲಿಯೂ ಮೇಲಾದ ಕನ್ನಡಕವಿಗಳಲ್ಲಿ ಅವನೊಬ್ಬನು. ಅವು-ಗಳಲ್ಲಿ ವಿದಗ್ಧತೆ, ಚಮತ್ಕೃತಿಗಳ ಪ್ರಾಬಲ್ಯವಿದೆ, ಆದರೂ ಪ್ರತಿಭೆಯ ಉಜ್ವಲತೆಯೂ ಇದೆ. ಉದಾಹರಣೆಗೆ, ರಾಜನ ಕೀರ್ತಿಯನ್ನು ಬಣ್ಣಿಸುವ

'ಸುರನದಿಯಲ್ಲಿ ಮಿಂದು ಸುರಮಾರ್ಗ ಕಚೌಘಮಂ ನೈದೆ ಬಿಚ್ಚಿ ವಿ-।
ಸ್ಫುರಿತ ತದುತ್ಪ್ರತಾಪತಪನಾತಪದಾಂಸಿ ಸೂಡಿ ತಾರಕೋ-।
ತ್ಕರ ಕುಸುಮಂಗಳಂ ತಳೆದು ಚಂದ್ರಿಕೆಯೆಂಬ ವಿಶಾಲಚೇಲಮಂ।
ಧರಣಿಪಕೀರ್ತಿಕಾಂತೆ ವಿಧುದರ್ಪಣಮಂ ನೆರೆನಿಂದು ನಿಟ್ಟಿಪಳ್ ॥' (೩-೫)

ಈ ಪದ್ಯದಲ್ಲಿಯ ಭವ್ಯಕಲ್ಪನೆಯನ್ನು ನೋಡಬೇಕು. ಒಟ್ಟಿನಲ್ಲಿ ಅವನ ವರ್ಣನಾಶಕ್ತಿ ಕಲ್ಪನೆಯ ಕುದುರೆಯನ್ನೇರಿ ಬೇಕಾದಲ್ಲಿ ನಿರ್ಭಯವಾಗಿ ನಿರರ್ಗಳವಾಗಿ ವೈಹಾಳಿಸಬಹುದೆಂಬುದು ಮೆಚ್ಚತಕ್ಕ ಮಾತು. ಪ್ರಥಮಕೃತಿಯಾದರೂ 'ರಾಜಶೇಖರವಿಳಾಸ'ದ ಕಂದವೃತ್ತಗದ್ಯಗಳಲ್ಲಿ ಪರಿಪಕ್ವವಾದ ಆಶ್ಚರ್ಯಕಾರಕವಾದ ರಚನಾಸಾಮರ್ಥ್ಯವಿದೆ, ಸುಖವನ್ನು ಕೊಡುವ ಮಾರ್ದವ-ಮಾಧುರ್ಯವಿದೆ. ಅದು ಉದ್ದಾಮಕಾವ್ಯ, ಆದರೆ ಉನ್ನತಕಾವ್ಯವಲ್ಲ. ವರ್ಣನಾಪ್ರಚುರವಾದ ಮತ್ತು ವಸ್ತುಪಾತ್ರಗಳ ವಿನ್ಯಾಸವೈಭವದಿಂದ ಜೀವನಸಂಸ್ಪರ್ಶಿಯಾಗದ ಕೃತಿ ಉನ್ನತಕಾವ್ಯವಾಗದು, ಉನ್ನತಿಯ ಬೀಜರೂಪಶಕ್ತಿಯನ್ನು ತೋರಬಲ್ಲುದು.

'ಶಬರಶಂಕರವಿಳಾಸ'ವು ಶಿವಲೀಲೆಯನ್ನು ವರ್ಣಿಸುವ ೫ ಆಶ್ವಾಸಗಳ ಚಿಕ್ಕ ಗ್ರಂಥ. ಇದನ್ನು ಲಘುಕಾವ್ಯ ಇಲ್ಲವೆ ಖಂಡಕಾವ್ಯ ಎಂದು ಕರೆಯುವುದಕ್ಕಿಂತ ಮಧ್ಯಮಕಾವ್ಯ ಎನ್ನುವುದು ಲೇಸು. ಮಹಾಭಾರತದಲ್ಲಿ ಪಾಶುಪತಾಸ್ತ್ರ ಪಡೆಯಲು ಅರ್ಜುನನು ಶಿವನನ್ನು ಕುರಿತು ತಪಸ್ಸು ಮಾಡಿದ್ದು, ಬೇಡನಾಗಿ ಶಿವನು ಬಂದು ಅವನನ್ನು ಪರೀಕ್ಷಿಸಿ ಬೇಡಿದ ವರವನ್ನು ನೀಡಿದ್ದು ಇಲ್ಲಿಯ ಕಥೆ. ಈ ವಿಷಯವು ಅನೇಕ ಕವಿಗಳಿಗೆ ಸ್ಫೂರ್ತಿಕೊಟ್ಟಿದೆ. ಭಾರವಿಯ 'ಕಿರಾತಾರ್ಜುನೀಯ'ಕ್ಕೆ ಸಾಮಗ್ರಿಯಾಗಿ ಇದು ಸಂಸ್ಕೃತಕಾವ್ಯದಲ್ಲಿ ಸೇರಿತು. ಕನ್ನಡದಲ್ಲಿ ಷಡಕ್ಷರಿಗಿಂತ ಮೊದಲು ಪಂಪ, ಕುಮಾರವ್ಯಾಸ, ವಿರೂಪಾಕ್ಷಪಂಡಿತ ಇವರ ಕೃತಿಗಳಲ್ಲಿ ಈ ಕಥಾನಕವು ಬಂದಿತ್ತು. ಷಡಕ್ಷರಿ ಇದರಲ್ಲಿ ಶೈವಸಂಪ್ರದಾಯದ ಮೂಲವನ್ನು ಮುಖ್ಯವಾಗಿ ಅನುಸರಿಸಿದ್ದಾನೆ. ಅಂತೆಯೆ ಈಶ್ವರನು ಮುಖ್ಯ, ಅರ್ಜುನನು ಗೌಣನಾಗಿದ್ದಾನೆ. ಕಥೆಯ ಪ್ರಾರಂಭ ಮತ್ತು ಬೆಳವಣಿಗೆಯಲ್ಲಿ ಅವಧಾರಣೆ ಈಶ್ವರಲೀಲೆಯಲ್ಲಿದೆ. ಕಥಾನಕವಿವರಗಳಲ್ಲಿ ಕುಮಾರವ್ಯಾಸಭಾರತಕ್ಕೂ 'ಶಬರಶಂಕರವಿಳಾಸ'ಕ್ಕೂ ಹೋಲಿಕೆಯಿದೆ. ಕುಮಾರವ್ಯಾಸನ ಕೃತಿ ಷಡಕ್ಷರಿಗೆ ಅವನ್ನು ಒದವಿಸಿರಬೇಕು. 'ಕವಿಯು ಕುಮಾರವ್ಯಾಸನನ್ನು ಕಥಾವಸ್ತುವಿನಲ್ಲಿ ಅನುಸರಣಮಾಡುವುದಲ್ಲದೆ ಶೈಲಿಯಲ್ಲಿಯೂ ಅವನ ಅನುಕರಣಮಾಡಿರುವೆನೆಂದು ಸಕೃದ್ದರ್ಶನಕ್ಕೆ ತೋರಬಹುದು........ಇಲ್ಲಿ ಕಾಣುವುದು ಕುಮಾರವ್ಯಾಸನ ಭಾವಗಳ ಇಲ್ಲವೆ ಶೈಲಿಯ 'ಮಕ್ಕಾಮಕ್ಕಿ' ತೆರದ ಶುಷ್ಕಾನುಕರಣವಲ್ಲ; ವರ್ಣಕವನ್ನು ವಸ್ತುಕಕ್ಕೆ ತಿರುಗಿಸುವಲ್ಲಿ ಕಂಡು ಬರುವ ಆತನ ಪುರುಷಹಸ್ತದ ಪ್ರಭಾವ........ಹೀಗೆ ಆಳವಾಗಿ ವಿವೇಚಿಸುವುದರಿಂದ ಕರ್ಣಾಟಕಭಾರತಕ್ಕೂ 'ಶಬರಶಂಕರವಿಳಾಸ'ಕ್ಕೂ ಇರುವ ಸಾಮ್ಯ-

ಹೋಲಿಕೆಗಳು ತೋರಮೈಯ್ಯ ಹೋಲಿಕೆಗಳೆಂದು ಹೇಳಬಹುದೇ ಹೊ
ಒಳದಿರುಳಿನವಲ್ಲ'[1] ಎಂದು ಶ್ರೀ. ಬಸವನಾಳರು ಹೇಳಿದ್ದಾರೆ. ಕುಮಾರವ್ಯಾ
ಶೈಲಿ ಬೇರೆ. ಷಡಕ್ಷರಿಯ ಶೈಲಿ ಬೇರೆ. ಕಾವ್ಯಮಾರ್ಗಗಳೂ ಭಿನ್ನ. ಕುಮಾರವ್ಯಾ
ಭಾವ ಇಲ್ಲವೆ ಶೈಲಿಯ ಅನುಕರಣವನ್ನು ಷಡಕ್ಷರಿ ಮಾಡಿರುವನೆನ್ನುವುದ
ಕಥಾಸಂದರ್ಭದಲ್ಲಿ ಬರುವ ಭಾವವನ್ನು ತೆಗೆದುಕೊಂಡು ತನ್ನ ರೀತಿಯಲ್ಲಿ ಪರಿವ
ಮಾಡಿಕೊಂಡಿರುವನೆಂದರೆ ಲೇಸು. ಹೀಗೆ ಮಾಡುವಾಗ ಮೂಲಕ್ಕಿಂತ ಚೆ
ಪರಿವರ್ತನ ಬಂದಿದೆ, ಮೂಲದಷ್ಟೇ ಚೆನ್ನಾದ ಅನುವಾದವೂ ಇದೆ. ತನ
ಪೂರ್ವಿಕರ ಸಾಮಗ್ರಿಯನ್ನು ಹೇಗೆ ಕುಮಾರವ್ಯಾಸ ಬಳಸಿಕೊಂಡನೋ
ಷಡಕ್ಷರಿ ಬಳಸಿಕೊಂಡಿದ್ದಾನೆ. ಇದರಲ್ಲಿ ಯಾರಿಗೂ ಹೀನಾಯವಿಲ್ಲ. ಎಲ್ಲಿ
ಕೆಲವು ಭಾವಗಳನ್ನು ಒಳದಿರುಳಿನಲ್ಲಿ ತೆಗೆದುಕೊಂಡರೆ ಸ್ವತಂತ್ರಕಲ್ಪ
ಷಡಕ್ಷರಿಗೆ ಕುಂದಕವಲ್ಲ. ಹಾಗೆ ಅವನು ತಿಳಿದಿರಲಾರನು. ಆದ್ದರಿಂದ ಹೋ
ಗಳೆಲ್ಲ ತೋರಮೈಯ್ಯ ಹೋಲಿಕೆಗಳೆಂಬ ತೀರ್ಮಾನವು ನಮಗೆ ಸಂಮತವ
'ರಾಜಶೇಖರವಿಳಾಸ'ದಂತೆ ಇಲ್ಲಿಯೂ ವರ್ಣನಾವಿಳಾಸವೇ ಹೆಚ್ಚು.
ಶಬ್ದಶ್ಲೇಷ, ಸಂಸ್ಕೃತಮೋಹ ಇನ್ನೂ ಮಿಕ್ಕಿವೆ. ಉತ್ತರಭಾಗದಲ್ಲಿ ಓಡುವ ಹ
ಬೆನ್ನಟ್ಟಿ ಕಿರಾತವೇಷದ ಶಿವನು ಬರುತ್ತಲೆ ಕಥೆಯೂ ಓಡತೊಡಗುತ್ತದೆ. 'ಕಿ
ಅರ್ಜುನರ ಸಂದರ್ಶನ, ಸಂವಾದ, ಸಂಗ್ರಾಮ, ಸಾಮರಸ್ಯ ಇವುಗಳೇ ಆ
ಜೀವಾಳ'ವಾಗುತ್ತವೆ. ಇದರಲ್ಲಿ ಪಾತ್ರಸೃಷ್ಟಿ ಹೇಳಿಕೊಳ್ಳುವಂತಿಲ್ಲ. ಈ
ಕಥಾನಾಯಕನಾದರೂ ಮಾನವನಾಯಕಪಾತ್ರವಲ್ಲ. ಅರ್ಜುನನ ಪ
ತಪೋನಿಷ್ಠೆ, ಶೌರ್ಯ, ಸ್ವಾಭಿಮಾನ, ಶಿವಭಕ್ತಿ ಇವನ್ನು ಚೆನ್ನಾಗಿ ಚಿ
ಕಿರಾತನೆಂದು ನಟನೆಮಾಡಿದವನು ಶಿವನೇ ಎಂದು ಗೊತ್ತಾದೊಡನೆ ಅವನ ಮ
ಹೇಗಾಯಿತೆಂಬ ಚಿತ್ರಣ ಯಥಾರ್ಥವಾಗಿದೆ. 'ಪಡಿದೆಱೆದಂತೆ ಪಾಱಿತೆರ್ದೆ
ಜುಮ್ಮೆನೆ ಮೆಯ್ಯನಿರ್ ಪೊದಱ್ದಿಡಿಕಿಱಿದತ್ತು' (೪-೧೨೨) ಮುಂತಾದ ಪದ

'ಉಱೆವೆಳಗು ಸಂಜೆ ನಸುಮ- |
ರ್ಬಳದಂಬರದಂತೆ ತಿಳಿವು ರಾಗಂ ನೆಗಱ್ದು- |
ಮ್ಮಳಮನೊಳಕೊಂಡ ಬಗೆಯಿಂ |
ತಳವೆಳಗಾಗುತ್ತೆ ಪಾರ್ಥನಂದಿಂತೆಂದಂ ||' (೪-೧೧೪)

ಈ ಪದ್ಯವನ್ನೂ ಉದಾಹರಿಸಬಹುದು. ಚಮತ್ಕೃತಿಪ್ರಧಾನವಾದ ಸ್ವತಂತ್ರ
ಸನ್ನಾಹದಲ್ಲಿ ಷಡಕ್ಷರಿಯದು ಎತ್ತಿದ ಕೈ. ಚಿತ್ರಕಾರನಿಗೆ ಸಾಮ
ಒದವಿಸತಕ್ಕ ನೂರಾರು ರಮ್ಯಚಿತ್ರಗಳು ಇವನ ಕಾವ್ಯದುಂದಿದ್ದಲ್ಲಿವೆ.

1 ಶಿ. ಶಿ. ಬಸವನಾಳ: ಶಬರಶಂಕರವಿಳಾಸ, ಪ್ರಸ್ತಾವನೆ, ಪು. ೨೪, ೨೯

ಸನ್ಮಂದಾರ ಭೂಜಾತದ ಬಟ್ಟೆನೆಟ್ಟಲೊಳ್ ನಿಂದು ಚಂದ್ರಾಕ್ಷಿಹೀರ- |
ದೊಳ್ ಪೂಗೊಂಚಲೊಂದಂ ಪಿಡಿದಡಿಗಡಿಗಾಘ್ರಾಣಿಸುತ್ತಿರ್ಪೆಯಂ ಚೆಂ- |
ದ್ಯತ್ತಾಲವೃಂತಂಬಿಡಿದು ಪದಪಿನಿಂ ಬೀಸೆ ಕಲ್ಯಾಣಿ ತಾಂ ಕಣ್- |
ಳಿಸಿರ್ದಂ ನೋಡುತುಂ ಬೇಂಟೆಯ ಪೊಸ ಪರಿಯಂ ಲೀಲೆಯಿಂ ಭಾಳನೇತ್ರಂ ||’

ಪ ತುಂಬ ರಮಣೀಯವಾಗಿದೆ. ಚಂಪೂಶೈಲಿಯ ಪ್ರೌಢಿಯಿದ್ದರೂ ಪ್ರಸಾದಕ್ಕೆ ಲ್ಲ. ಶ್ಲೇಷ ಬಂದಲ್ಲಿ ಬರೆವಣಿಗೆ ಗಡುಚಾಗುತ್ತದೆ. ‘ಸಂಸ್ಕೃತಮಾರ್ಗದ ಗೂ ಕನ್ನಡದೇಸಿಯ ಸರಲತೆಗೂ ಅವೆರಡರ ಲಲಿತವಾದ ಮಿಶ್ರಣಕ್ಕೂ ಒಳ್ಳೆಯ ದರಣೆಗಳನ್ನು ಈತನ ಕೃತಿಗಳಿಂದ ಕೊಡಬಹುದು’[1] ಎಂಬುದು ಹರಿಹರನಲ್ಲಿ ಸಾರ್ಥಕವಾಗಿದೆ. ಇವನದೂ ಅದೇ ಮಾರ್ಗವಾದರೂ ಶ್ಲಿಷ್ಟಸಂದರ್ಭಗಳಲ್ಲಿ ಂಸ್ಕೃತಾಡಂಬರ, ದುರ್ಬೋಧತೆಗಳು ತೋರಿಬರುತ್ತವೆ. ಒಟ್ಟಿನಲ್ಲಿ ‘ಶಬರ- ಳಾಸ’ವು ಮಧ್ಯಮಗಾತ್ರದ ಮಧ್ಯಮಗುಣದ ವಿದಗ್ಧಕಾವ್ಯ. ಅದರಲ್ಲಿ ಯ ಕಲ್ಪನಾಶಕ್ತಿ, ರಚನಾಶಕ್ತಿ ಮತ್ತು ಶಬ್ದಶಕ್ತಿಗಳು ತಮ್ಮ ಮೇಲ್ಮೆಯನ್ನು ರಗುಗೊಳಿಸುತ್ತವೆ, ಆದರೆ ಕೃತಿಯ ಸಮಗ್ರಸೌಂದರ್ಯವನ್ನು ಹೆಚ್ಚಿಸುವಷ್ಟು ಭಾವಿಯಾಗಿಲ್ಲ.

ವೃಷಭೇಂದ್ರವಿಜಯ’ವೆಂಬ ಮೂರನೆಯದು ಬಸವೇಶ್ವರಚರಿತೆಯನ್ನು ಸುವ ಗ್ರಂಥ. ಪಾಲ್ಕುರಿಕೆಸೋಮ, ಭೀಮಕವಿ ಮೊದಲಾದವರು ಹೇಳಿದ ಯನ್ನು ‘ಜೇರಿ ಮೇಣ್ ಪೇಳ್ವುದು ಹಾಸ್ಯಕ್ಕಾಸ್ಪದಂ ಪೆಳ್ತನಮನುಚಿತ- ದೊಡಂ ತದ್ಗುಣಸ್ತೋಮದ ಜ್ಞಾನಂ ಸಾಪ್ಯದೀನ್ಯಾಜದಿನೆಮತಿದನಾಂ ಪೇಳ- ತ್ತನಾದೆಂ’ (೧–೨೯) ಎನ್ನುತ್ತಾನೆ. ಇದು ೪೨ ಆಶ್ವಾಸಗಳಲ್ಲಿ ಸುಮಾರು ಸಾವಿರ ಪದ್ಯಗಳುಳ್ಳ ದೊಡ್ಡ ಚಂಪೂಗ್ರಂಥ. ಇದರಲ್ಲಿಯ ಗದ್ಯಭಾಗಗಳು ದೀರ್ಘವಾಗಿಲ್ಲ, ಹೆಚ್ಚಾಗಿಯೂ ಇಲ್ಲ. ಬಸವಚರಿತ್ರೆಯನ್ನು ಅತ್ಯಂತ ಂದ ಹೇಳಿದೆ, ಆದರೆ ಹರಿಹರಮಾರ್ಗದವನು ತಾನೆಂದು ಹೇಳಿಕೊಳ್ಳುವ ಹರಿಹರನ ‘ಬಸವರಾಜದೇವರ ರಗಳೆ’ಯ ಚರಿತ್ರಸಂಪ್ರದಾಯವನ್ನೂ ದ್ಧತಿಯನ್ನೂ ಅನುಸರಿಸಿಲ್ಲ. ‘ಪುರಾಣದ ಕಥಾವಸ್ತುವನ್ನೇ ಕವಿಯು ಸಿದ್ದರೂ ಬಸವೇಶ್ವರನ ಪರಿಶುದ್ಧವಾದ ಚಾರಿತ್ರಕ್ಕೆ ಕುಂದಕವಾಗಬಹುದಾದ ಶಗಳನ್ನು ಅಲ್ಲಲ್ಲಿ ಮಾರ್ಪಡಿಸಿಕೊಂಡಿರುವುದು ಆತನ ಔಚಿತ್ಯಜ್ಞಾನದ ಕವಾಗಿದೆ.’[2] ಇದು ಕಥನ–ಕವನಗಳ ಕಣಿಯಾಗಿದ್ದು ಇದರಲ್ಲಿ ಶೃಂಗಾರದ ವಾಗಲಿ ವರ್ಣನೆಗಳ ಬಾಹುಲ್ಯವಾಗಲಿ ಇಲ್ಲ. ‘ಒಟ್ಟಿನಲ್ಲಿ ವೃಷಭೇಂದ್ರ-

ಶಿ. ಶಿ. ಬಸವನಾಳ: ಶಬರಶಂಕರವಿಳಾಸ, ಪ್ರಸ್ತಾವನೆ, ಪು. ೩೧

ಶಿ. ಶಿ. ಬಸವನಾಳ: ಶಬರಶಂಕರವಿಳಾಸ, ಪ್ರಸ್ತಾವನೆ, ಪು. ೧೫

ವಿಜಯವು ಷಡಕ್ಷರದೇವನ ಕೃತಿಗಳಲ್ಲೆಲ್ಲ ಶ್ರೇಷ್ಠವಾದುದೆಂದು ನಿರ್ಣಯಿಸಬಹುದಲ್ಲ ಕನ್ನಡಸಾಹಿತ್ಯದಲ್ಲಿಯ ಶ್ರೇಷ್ಠವರ್ಗದ ಕಾವ್ಯಗಳಲ್ಲಿಯೂ ಇದೊಂದು ಎಂದ ಪರಿಗಣಿಸಬಹುದು '[1] ಎಂಬ ಅಭಿಪ್ರಾಯವು ವ್ಯಕ್ತವಾಗಿದೆ. ಗುಣವನ್ ಕೊಂಡಾಡುವ ಭರದಲ್ಲಿ ಇದು ಅತ್ಯುಕ್ತಿಯಾಗಿದೆಯೆಂದು ನಮಗೆ ತೋರುತ್ತದೆ.

ಷಡಕ್ಷರದೇವನು ಕನ್ನಡಕ್ಕೆ ಕೊಟ್ಟ ಮೂರು ಗ್ರಂಥಗಳಿಂದ ಅವನ ಯೋಗ್ಯತಾ ವಿಶೇಷವನ್ನು ಅರಿತುಕೊಳ್ಳಬಹುದು. ಸಹಜಕವಿತಾಶಕ್ತಿಯಲ್ಲಿಯ ಪವಾಡಗುಣ ಅವನಲ್ಲಿ ಎದ್ದುಕಾಣುತ್ತದೆ. ಈ ವಿಷಯದಲ್ಲಿ ಹರಿಹರನನ್ನು ಅವನು ಹೋಲುತ್ತಾನೆ ಒಂದು ದೃಷ್ಟಿಯಿಂದ ಹರಿಹರನಿಗಿಂತ ಬೇಗನೆ ಅವನ ಪ್ರತಿಭೆ ತನಿಯರಳಿ ಗಮಗಮಿಸ ತೊಡಗಿತೆಂದು ಹೇಳಬಹುದು. ಹರಿಹರನ ವ್ಯಕ್ತಿತ್ವವರಳುತ್ತ ಹೋದಂತೆ ಪ್ರತಿಭೆ ಯರಳಿರಬೇಕು. ಜೀವನ ಮತ್ತು ಕೃತಿಗಳ ನಿಕಟಸಂಬಂಧದಿಂದ ಹರಿಹರನು ತನ್ನ ಹಿರಿಮೆಯನ್ನು ಪಡೆದನು. ಅದೇ ಷಡಕ್ಷರಿ ಪ್ರತಿಭೆಯ ಮಹಾಪೂರದಲ್ಲಿ ತನ್ನ ಶಕ್ತಿಗೆ ತಾನೇ ಮುಗ್ಧನಾಗಿ ತನ್ನ ಜೀವನದ ವಿಕಾಸಕ್ಕೆಂದು ತಡೆಯದೆ ತಾನು ಪಡೆ ವ್ಯುತ್ಪತ್ತಿ ಸಾಕೆಂದು ಕೃತಿರಚನೆಗೆ ತೊಡಗಿದನು. ಇದೇ ಇಬ್ಬರಲ್ಲಿಯ ಮೂಲಭೂತ ವಾದ ಭೇದ. ಹರಿಹರನ ಕೃತಿಗಳಲ್ಲಿ ಎಷ್ಟು ಕೊರತೆಗಳು ಸೇರಿಕೊಂಡಿದ್ದರೂ ಅವ ಪ್ರತಿಭೆ ಪರಿಪಕ್ವಜೀವನದ ವಾಣಿಯಾಗಿ ಹೊರಹೊಮ್ಮಿದೆಯೆಂಬ ಅರಿವು ರಸಿಕನಿ ಉಂಟಾಗುತ್ತದೆ. ಷಡಕ್ಷರಿಯ ಕೃತಿಗಳಲ್ಲಿ ಆಶ್ಚರ್ಯಕಾರಕವಾದ ಪ್ರತಿಭೆ ಆಳವಾ ಜೀವನವನ್ನು ಸ್ಪರ್ಶಿಸದೆ ವೈದುಷ್ಯದ ಇಲ್ಲವೆ ಚಮತ್ಕೃತಿಯ ರೂಪತಾಳಿರುವುದ ಹೆಚ್ಚು. ಅವನು ಮಹಾಕವಿಯೆಂದು ಕೆಲವರು ಭಾವಿಸುತ್ತಾರೆ. ನಮ್ಮ ನಮ್ರವಾ ತಿಳಿವಳಿಕೆಗೆ ಅವನು ಮಹಾಕವಿಯ ತೇಜೋಂಶವುಳ್ಳವನೇ ಹೊರತು ಮಹಾಕವಿ ಸಿದ್ಧಿ ಪಡೆದವನಲ್ಲ. ಅವನ ಯಾವ ಕೃತಿಗಳೂ ಭವ್ಯಸೌಂದರ್ಯದ, ಜೀವನಸಂಸ್ಪರ್ಶ ಎತ್ತರವನ್ನು ಪಡೆಯಲಿಲ್ಲ. ಯಾಕೆಂದರೆ ಕೃತಿಯ ಎತ್ತರಕ್ಕೆ ಕವಿಯಲ್ಲಿ ಆಳ ಬೇಕ ಕಲ್ಪನಾಸಂಪತ್ತಿ, ರಚನಾಶಕ್ತಿ ಮತ್ತು ಭಾಷಾಪ್ರಭುತ್ವ ಇವು ಮಹಾಕವಿ ಸಾಧನಗಳೇ ಹೊರತು ಜೀವನಾನುಭವದ ಆಳ, ಜೀವಂತವಾದ ದರ್ಶನ ಇವು ಅವ ಮುಖ್ಯ ಆಧಾರಗಳು. ಶ್ರೇಷ್ಠಪ್ರತಿಭೆಯ ಪ್ರೇರಣೆ ಅಲ್ಲಿದೆ. ' ಕವಿಗಳಲ್ಲಿ ಸಾಧಾರ ವಾಗಿ ಕವಿತಾಶಕ್ತಿ ಮತ್ತು ಕವಿತಾಚಾತುರ್ಯ ಎಂಬ ಎರಡು ಲಕ್ಷಣಗಳಿರುತ್ತ ಷಡಕ್ಷರಿಯಲ್ಲಿ ಕವಿತಾಶಕ್ತಿಗಿಂತಲೂ ಕವಿತಾಚಾತುರ್ಯವೇ ಹೆಚ್ಚಾಗಿರುತ್ತದೆ'[2] ಎಂ ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿಗಳು ಹೇಳಿದ್ದಾರೆ. ಇದರ ಆಶಯವನ್ನು ನಾ ತಿಳಿದುಕೊಳ್ಳಬಹುದಾದರೂ ಕವಿತಾಶಕ್ತಿ ಮತ್ತು ಕವಿತಾಚಾತುರ್ಯ ಈ ಪದಗ

1 ಅದೇ, ಶಬರಶಂಕರವಿಲಾಸ, ಪ್ರಸ್ತಾವನೆ, ಪು. ೧೫-೧೬

2 ಎಂ. ಆರ್. ಶ್ರೀನಿವಾಸಮೂರ್ತಿ : ಕರ್ಣಾಟಕಸಾಹಿತ್ಯದಲ್ಲಿ ಷಡಕ್ಷರಿಯ ಸ್ಥಾನನಿರ್ದೇಶ (ಪ್ರ.ಕ., ೪-

ಂದನ್ನೊಂದು ಬಿಟ್ಟವೆಯೇನೊ ಎನ್ನುವಂತೆ ಭಾಸವಾಡುವ ರೀತಿ ಅಷ್ಟು ಪ್ರಸನ್ನ-ವಾಗಿಲ್ಲ. ಅವರು ಮೇಲಿನ ಅಭಿಪ್ರಾಯದ ವಿವರಣೆಯನ್ನು ವಿಸ್ತಾರವಾಗಿ ಮಾಡಿ-ದ್ದಾರೆ. ಅದನ್ನೆಲ್ಲ ನೋಡಿದರೆ ಷಡಕ್ಷರಿ ಕವಿತಾಶಕ್ತಿಯ ಪಂಗಡದ ಹರಿಹರನಿಗಿಂತ ಬೇರೆ ಎಂದು ಅರ್ಥವಾಗುತ್ತದೆ. ಆದರೆ ಕವಿತಾಚಾತುರ್ಯದಲ್ಲಿ ಕವಿತಾಶಕ್ತಿ ಪ್ರಬಲ-ವಾಗಿ ಸೇರಿಕೊಂಡು ಬರಬಹುದು. ಚಾತುರ್ಯ ಕಡಿಮೆಯಾಗಿದ್ದಲ್ಲಿಯೇ ಕವಿತಾಶಕ್ತಿ ಹೆಚ್ಚಾಗಿರುವುದೆಂದಲ್ಲ. ಷಡಕ್ಷರಿಯಲ್ಲಿ ಕವಿತಾಶಕ್ತಿ ಚಾತುರ್ಯವಾಗಿ ಸಹಜ-ಸ್ಫೂರ್ತವಾಗಿ ಬಂದಿತು. ಅದನ್ನು ಹರವಾದ, ಆಳವಾದ ಜೀವನಪಾತ್ರದಲ್ಲಿ ಧರಿಯಿಸಿಕೊಳ್ಳುವ ಸಂಯಮ–ಸೈರಣೆ ಅವನಲ್ಲಿರಲಿಲ್ಲ. ಅದೇ ಹರಿಹರನು ತನ್ನಲ್ಲಿಗೆ ಸಾವೇಶವಾಗಿ ಚಾತುರ್ಯವಾಗಿ ಬಂದ ಶಕ್ತಿಯನ್ನು ಜೀವನಸಿದ್ಧಿಯಲ್ಲಿ ಸಮರಸ-ಮಾಡಿದನು. ಇದೇನೇ ಇದ್ದರೂ ಷಡಕ್ಷರಿ ನಮ್ಮ ನಾಡಿನ ಅಸಾಮಾನ್ಯಪ್ರತಿಭಾಶಾಲಿ-ಗಳಲ್ಲಿ ಒಬ್ಬನೆಂಬುದು ನಿಶ್ಚಿತ.

೩೩. ಈ ಯುಗದ ಜೈನಸಾಹಿತ್ಯ (೧)

ಭಾಸ್ಕರ

ಈ ಯುಗದಲ್ಲಿ ಜೈನಕವಿಗಳು ಪಲ್ಲಟವಾದ ಪರಿಸ್ಥಿತಿಗೆ ಅನುಗುಣವಾಗಿ ಹೊಸ ವಿಷಯಗಳನ್ನು ಆರಿಸಿಕೊಂಡು, ಅಚ್ಚಕನ್ನಡದ ಛಂದೋರೂಪಗಳಲ್ಲಿ ಅವನ್ನು ಸುಗಮವಾಗಿ ನಿರೂಪಿಸಿದ್ದಾರೆ. ತೀರ್ಥಂಕರಚರಿತೆ, ತತ್ವವಿವರಣೆಯಂಥ ಹಳೆಯ ವಿಷಯಗಳನ್ನು ಎತ್ತಿಕೊಂಡಾಗಲೂ ಹೊಸ ಛಂದಸ್ಸು, ಭಾಷಾಶೈಲಿಗಳಿಗೆ ಶರಣುಹೋಗಿದ್ದಾರೆ. ನೀತಿಪರವಾದ ಕಥೆಗಳನ್ನು ಹೇಳುವ ಸಂಪ್ರದಾಯವು ನಯಸೇನನ 'ಧರ್ಮಾಮೃತ'ದಂಥ ಚಂಪುಗಳಲ್ಲಿಯೂ 'ವಡ್ಡಾರಾಧನೆ'ಯಂಥ ಗದ್ಯಕಥೆಗಳಲ್ಲಿಯೂ ಹಿಂದೆಯೆ ಪ್ರಾರಂಭವಾಗಿತ್ತು. ಈಗ ಮತ್ತೆ ಬೇರೆ ನೀತಿಬೋಧಕವಾದ ಕಥೆಗಳು ಮುಂದೆ ಬಂದುವು. ಅವುಗಳಲ್ಲಿ 'ಜೀವಂಧರಕಥೆ'-ಯೊಂದು. ೧೫ನೆಯ ಶ.ದ ಮೊದಲಲ್ಲಿದ್ದ ಭಾಸ್ಕರನು 'ಜೀವಂಧರಚರಿತೆ'ಯನ್ನು ಭಾಮಿನಿಷಟ್ಪದಿಯಲ್ಲಿ ಬರೆದು ಮೊದಲಿಗನಾದನು. 'ವಾದಿಮದಗಜಸಿಂಹಸೂರಿ-ಗಳಾದಿಯಲ್ಲಿ ನವಸಂಸ್ಕೃತದೆ ಸಂಪಾದಿಸಿದ ಭೂವಿನುತ ಜೀವಂಧರಚರಿತವನು' ವೇದಿಸುವೆನೆಂದು ಅವನು ಹೇಳಿದ್ದಾನೆ. ಸು. ೧೨ನೆಯ ಶ.ದಲ್ಲಿ ದಕ್ಷಿಣದಲ್ಲಿ ಆಗಿಹೋದ ಒಡೆಯದೇವ ಇಲ್ಲವೆ ವಾದೀಭಸಿಂಹ ಎಂಬ ಕವಿ 'ಗದ್ಯಚಿಂತಾಮಣಿ' ಮತ್ತು 'ಕ್ಷತ್ರಿಯಚೂಡಾಮಣಿ' (ಪದ್ಯದಲ್ಲಿ) ಇವೆರಡರಲ್ಲಿಯೂ ಜೀವಂಧರಚರಿತೆ-ಯನ್ನೇ ಬರೆದಿದ್ದಾನೆ. ಮೊದಲನೆಯದು ಗುಣಭದ್ರನ 'ಉತ್ತರಪುರಾಣ'ವನ್ನು ಆಧರಿಸಿದ್ದು, ಎರಡನೆಯದು 'ಜೀವಕಚಿಂತಾಮಣಿ'ಯೆಂಬ ತಮಿಳುಕಾವ್ಯವನ್ನು ಬಹುಭಾಗದಲ್ಲಿ ಅನುವಾದಿಸಿದೆ. ಭಾಸ್ಕರನು ಈ ಎರಡೂ ಸಂಸ್ಕೃತಗ್ರಂಥಗಳನ್ನು ಅನುಸರಿಸಿದಂತೆ ತೋರುತ್ತದೆ. ಹರಿಚಂದ್ರನ 'ಜೀವಂಧರಚಂಪು'ವಿನಿಂದಲೂ ಅವನು ಉಪಕೃತನಾಗಿರಬೇಕೆಂದು ಅಂತಸ್ಥಪ್ರಮಾಣಗಳಿಂದ ತಿಳಿಯುತ್ತದೆ. ಸತ್ಯಂಧರರಾಜನ ಮಗನಾದ ಜೀವಂಧರನು ಜನನದಿಂದ ತೊಟ್ಟು ತೊಂದರೆಗಳನ್ನು ಅನುಭವಿಸಿ ಕಾಷ್ಠಾಂಗಾರಮಂತ್ರಿಯ ಕ್ರೂರಕರ್ಮಗಳಿಂದ ಹತನಾಗಲಿ ಹತಾಶನಾಗಲಿ ಆಗದೆ ವಿಜಯಶಾಲಿಯಾದನೆಂಬುದನ್ನೂ ಅನೇಕ ಮದುವೆಗಳನ್ನು ಮಾಡಿಕೊಂಡ-ನೆಂಬುದನ್ನೂ ಈ ಕಥೆಯಲ್ಲಿ ಹೇಳಿದೆ. ಇದನ್ನು ಭಾಸ್ಕರನು ಮೂಲದಲ್ಲಿದ್ದಂತೆ ಹೇಳುತ್ತ ಹೋಗಿದ್ದಾನೆ. ಕ್ವಚಿತ್ತಾಗಿ ವಿವರಗಳಲ್ಲಿ ತನ್ನದೆಂಬುದನ್ನು ತಂದಿದ್ದಾನೆ. ಮೂಲದಲ್ಲಿ ಕಾಣದ ಇಲ್ಲವೆ ಕಾಣಲು ಅಶಕ್ಯವಾದ ಒಂದು ಮಹತ್ವದ ವ್ಯತ್ಯಾಸ-ವೆಂದರೆ ಜಿನಸ್ತುತಿಯ ಪದ್ಯಗಳು ಬಂದಲ್ಲಿ ಉಪನಿಷತ್ತಿಗೂ ಭಕ್ತಿಪಂಥಕ್ಕೂ ಸರಿಹೋಗುವ ವಿಚಾರಗಳನ್ನೂ ವಿಶೇಷಣಗಳನ್ನೂ ಅವನು ಪ್ರಯೋಗಿಸಿದ್ದಾನೆ.

ಉದಾಹರಣೆಗೆ, 'ಭಕ್ತವತ್ಸಲ ಲಯವಿಹೀನ **ಮಹೇಶಮಾಯಾತೀತ**' (೧-೩೮), 'ಶ್ರೀವರ **ಜಗನ್ನಾಥ ಜನನವಿದೂರ** ಸಾಕಾರ' (೧-೩೯), '**ಸರ್ವಗತ** ಸರ್ವಜ್ಞ ಸದಮಲ **ಸರ್ವಮಯ**....ಸರ್ವಲೋಕೇಶ್ವರ....**ಸರ್ವಭೂತಾತ್ಮಕ**' (೧-೪೧), '**ವಿಶ್ವಮಯ**ವಿಶ್ವೇಶವಿಶ್ವಗ **ವಿಶ್ವತೋಮುಖ**' (೧-೪೨), 'ಗರುಡಮಂತದಿಂದಲ್ಲ-ದಹಿಭಯ ಕರಗುವುದೆ, **ಸರ್ವಜ್ಞ**ನಾಮಸ್ಮರಣೆಯಿಂದಲ್ಲದೆ **ಭವಾಂಭೋರಾಶಿ ಬತ್ತುವುದೆ**' (೧೨-೬), 'ಅವ್ಯಯನ**ನಂತಾತ್ಮ**ನದ್ವಯ' (೧೨-೭), '**ಜಗಭರಿತ** ನೀನ**ಭವ** ಮಿಗೆ ಮೂಜಗಕೆ ಗತಿಮತಿ ನೀನೇ ಕೇಳ್ಳೆ ಜಗದುದಯ' (೧೨-೧೬), 'ದೋಷರಹಿತನು ನೀನೆ ಕರುಣಾವಾಸ ನೀನೆ ಮಹೇಶ ನೀನೆ ಸುರೇಶನುತ ನೀನೆಂದು ಸಂಸ್ತುತಿಸಿದನು ಜಿನಪತಿಯ' (೧೨-೧೮). ಇದಲ್ಲದೆ 'ಹೃದಯದಮಳಜ್ಯೋತಿಯನು ಬೆಳಗದೆ ನಮಾರತಿಯೆತ್ತಲೇನಹುದು' (೧೨-೪), 'ಕರ್ಮಗಳ ದಂದುಗವದೇಕಿವನು-ಟಿುದು ಸಾನಂದದಲಿ **ಸರ್ವಜ್ಞನನು ಭಜಿಸೊಂದು ಮುಕ್ತಿಶ್ರೀಯನು**' (೧೨-೫) ಈ ಪದ್ಯಭಾಗಗಳನ್ನು ನೋಡಿದರೆ ಭಾಗವತ ತತ್ವಜ್ಞಾನ ಮತ್ತು ಉಪಾಸನೆಯ ಪ್ರಭಾವ ಅವನ ಮೇಲೆ ವಿಶೇಷವಾಗಿ ಆಗಿರಬೇಕೆಂದು ತೋರುತ್ತದೆ. ಯಾವ ಮೂಲಗಳಲ್ಲಿಯೂ ಇವುಗಳಿಗೆ ಆನುಪೂರ್ವಿಯಿಲ್ಲ. ಇದ್ದುದನ್ನು ಭಾಸ್ಕರನು ಬದಲಿಸಿಕೊಂಡಿದ್ದಾನೆ. ಜೈನಶಾಸ್ತ್ರದಂತೆ ಇವುಗಳಲ್ಲಿ ಕೆಲವಕ್ಕೆ ಅರ್ಥ ಹೇಳಬಹು-ದಾದರೂ ಇನ್ನು ಕೆಲವಕ್ಕೆ ಹೇಳುವುದು ಸಾಧ್ಯವಿಲ್ಲ. 'ಸರ್ವಜ್ಞನಾಮಸ್ಮರಣೆಯಿಂದಲ್ಲದೆ ಭವಾಂಭೋರಾಶಿ ಬತ್ತುವುದೆ' ಎಂಬಲ್ಲಿ ನಾಮಸ್ಮರಣೆ ಮತ್ತು ಶರಣಾಗತಿಯ ಮಹತ್ವವು ಜೈನಶಾಸ್ತ್ರಕ್ಕೆ ಅನುಗುಣವೆಂದು ತೋರುವುದಿಲ್ಲ. ಕುಮಾರವ್ಯಾಸಭಾರತ-ವನ್ನು ಭಾಸ್ಕರನು ಓದಿ ಮೆಚ್ಚಿರಬೇಕೆಂದು ಅವನು ಸ್ವೀಕರಿಸಿದ ಭಾವ-ಪದಗಳಿಂದ ತಿಳಿಯುತ್ತದೆ. ಭಾರತದಲ್ಲಿ ಕಂಡು ಬರುವ ಭಾಗವತಧರ್ಮದ ಪ್ರಭಾವವೂ ಅವನನ್ನು ಆವರಿಸಿರಬೇಕು. ಜನಜೀವನದಲ್ಲಿ ಪ್ರಚಾರವಾಗಿದ್ದ ಜೈನಮತದಲ್ಲಿ ಭಕ್ತಿಪಂಥಗಳ ವರ್ಚಸ್ಸಿನಿಂದ ಜಿನಭಕ್ತಿ ಹರಿಭಕ್ತಿಯಂತೇ ಭಾವನಾಪ್ರಚುರವಾಗಿರ-ಬೇಕು. ಭಾಸ್ಕರನು ತಾನು 'ಭೂಸುರೋತ್ತಮ **ಬಸವಣಾಂಕಸುತ**' ಎಂದು ಹೇಳಿದ್ದನ್ನು ನೋಡಿದರೆ ಅವನ ತಂದೆ ಶೈವಬ್ರಾಹ್ಮಣನಾಗಿದ್ದು ಆಮೇಲೆ ಜೈನಧರ್ಮ-ವನ್ನು ಒಪ್ಪಿಕೊಂಡಿರಬಹುದೇನೊ ಎಂಬ ಸಂದೇಹಕ್ಕೆ ಅವಕಾಶವಿದೆ. 'ಇದರ ವಸ್ತುರಚನೆಯಲ್ಲಿ ಸರಿಯಾದ ಕ್ರಮವಿಲ್ಲ. ಎಲ್ಲ ಸಂದರ್ಭಗಳನ್ನೂ ಪೋಣಿಸಿರುವವನು ಕಥಾನಾಯಕ. ಒಟ್ಟಿನಲ್ಲಿ ಅಕ್ರಮವಾದ ಕಥಾನಿರೂಪಣೆ ಇದ್ದರೂ ಈ ಗ್ರಂಥ ಸ್ವಾರಸ್ಯವಾಗಿದೆ.'[1] ಈ ವಿಮರ್ಶೆ ಯಥಾಯೋಗ್ಯವಾಗಿದೆ. ಸಾಂಪ್ರದಾಯಿಕವಾಗಿ ಬಂದ ಕಥೆಯನ್ನು ಸರಳವಾಗಿ ಸ್ವಾರಸ್ಯವಾಗಿ ಹೇಳುವುದು ಭಾಸ್ಕರನ ಉದ್ದೇಶ-

---

1 ಡಿ. ಎಲ್. ನರಸಿಂಹಾಚಾರ್: ವಿಜಯನಗರ ಕಾಲದ ಕನ್ನಡಸಾಹಿತ್ಯ (ಪ್ರ.ಕ., ೨೨-೪, ಪು. ೧೨)

ವಾಗಿತ್ತು. ಮೇಲ್ಕಾಣಿಸಿದ ವ್ಯತ್ಯಾಸದಲ್ಲಿ ಮಾತ್ರ ಈವರೆಗಿನ ಯಾವ ಜೈನಕಾವ್ಯದಲ್ಲಿಯೂ ದೊರೆಯದ ವಿಶೇಷವು ಕಾಣುತ್ತದೆ. ಕಥನರೀತಿ ಸಾಮಾನ್ಯವಾದರೂ ಭಾಸ್ಕರನ ಕಲ್ಪನಾಶಕ್ತಿ ಮೇಲ್ಮಟ್ಟದ್ದೆಂಬುದನ್ನು ಅರಿಯಬೇಕು. ಪೂರ್ವಕವಿಗಳ ಪ್ರಭಾವಕ್ಕೆ ಅವನು ಬೇಕಾಗಿ ಒಳಪಟ್ಟಿದ್ದಾನೆ. ಅವರ ಭಾವಗಳನ್ನು ಇದ್ದಕ್ಕಿದ್ದ ಹಾಗೆ ಅಂಗೀಕರಿಸಿದ್ದಾನೆ, ಪದಗಳನ್ನು ಎತ್ತಿಕೊಂಡಿದ್ದಾನೆ, ತನ್ನ ಬಗೆಯಲ್ಲಿ ಅನುವಾದಿಸಿದ್ದಾನೆ. ಕಾಲಿದಾಸ, ನಾಗಚಂದ್ರ, ರಾಘವಾಂಕ, ವಿಶೇಷವಾಗಿ ಕುಮಾರವ್ಯಾಸ ಇವರ ಪ್ರಭಾವಗಳು ಅವನ ಗ್ರಂಥದಲ್ಲಿ ಸ್ಪಷ್ಟವಾಗಿ ಮೂಡಿವೆ. ಆದರೂ ಅವನ 'ಜೀವಂಧರಚರಿತೆ' ಕಲ್ಪನೆಯ ಸೌಷ್ಠವದಿಂದಲೂ ಶೈಲಿಯ ಲಾಲಿತ್ಯದಿಂದಲೂ ತಕ್ಕಮಟ್ಟಿಗೆ ಒಳ್ಳೆಯ ಕಾವ್ಯವಾಗಿ ಪರಿಣಮಿಸಿದೆ.

ಜೀವಂಧರಚರಿತೆಯನ್ನು ಮತ್ತೆ ಬರೆದವರೆಂದರೆ ತೆರಕಣಾಂಬಿ ಬೊಮ್ಮರಸ ಮತ್ತು ಕೋಟೀಶ್ವರ. ತೆರಕಣಾಂಬಿ ಬೊಮ್ಮರಸನು '**ಜೀವಂಧರಸಾಂಗತ್ಯ**'ವನ್ನು ಬರೆದಿದ್ದರೆ ಕೋಟೀಶ್ವರನು '**ಜೀವಂಧರಷಟ್ಪದಿ**'ಯನ್ನು ರಚಿಸಿದ್ದಾನೆ. ಇವರ ಮೇಲೆ ಭಾಸ್ಕರನ ಹಾಗೂ ಪೂರ್ವಿಕರ ಪ್ರಭಾವವು ಎಷ್ಟಾಗಿದೆ ಎಂಬುದು ಇನ್ನೂ ತಿಳಿಯಬೇಕಾದ ವಿಷಯ. ಕಲ್ಯಾಣಕೀರ್ತಿ ಇನ್ನೊಂದು ಜೈನಕಥೆಯನ್ನು 'ಜ್ಞಾನಚಂದ್ರಾಭ್ಯುದಯ'ದ ಮೂಲಕ ೨-೩ ಷಟ್ಪದಿಪ್ರಕಾರಗಳಲ್ಲಿ ಒದವಿಸಿದ್ದಾನೆ. 'ಕಾಮನ ಕಥೆ', 'ಅನುಪ್ರೇಕ್ಷೆ' ಮುಂತಾಗಿ ಅವನ ಉಳಿದ ಚಿಕ್ಕ ಗ್ರಂಥಗಳಿವೆ. 'ಕಾಮನ ಕಥೆ'ಯಲ್ಲಿ ಜೈನಮತಾನುಸಾರವಾಗಿ ಕಾಮನ ಕಥೆಯನ್ನು ಪ್ರತ್ಯೇಕವಾಗಿ ಹೇಳಿದ್ದು ವಿಶೇಷ. ಜೊತೆಗೆ ಸಾಂಗತ್ಯದಲ್ಲಿ ಅದನ್ನು ರಚಿಸಿದ್ದರೂ ಅಲ್ಲಲ್ಲಿ ಕಂದ-ಷಟ್ಪದಿವಚನಗಳನ್ನು ಸೇರಿಸಿದ್ದೂ ವಿಶೇಷವೇ ಸರಿ. ಇವನ ಶೈಲಿ ಲಲಿತವಾಗಿದೆ, ದೃಷ್ಟಿ ಸಾಂಪ್ರದಾಯಿಕವಾಗಿದೆ. ವಿಜಯಣ್ಣನು 'ದ್ವಾದಶಾನುಪ್ರೇಕ್ಷೆ'ಯನ್ನು ಸಾಂಗತ್ಯದಲ್ಲಿ ಬರೆದಿದ್ದು ನಡುನಡುವೆ ವೃತ್ತಕಂದಗಳನ್ನು ಸೇರಿಸಿದ್ದಾನೆ, ಜೈನ ಧರ್ಮದಲ್ಲಿಯ ೧೨ ಅನುಪ್ರೇಕ್ಷೆಗಳನ್ನು ಕುರಿತು ಪ್ರಮುಖವಾಗಿ ಸಾಂಗತ್ಯದಲ್ಲಿ ಬರೆದಿರುವುದೇ ಈ ಕಾಲದಲ್ಲಿ ನಡೆದ ಪಲ್ಲಟವನ್ನು ಸೂಚಿಸುತ್ತದೆ. ಜನತೆಯನ್ನು ಒಲಿಸಿಕೊಳ್ಳಲು ಕಾವ್ಯ ಜನತೆಯ ಮಟ್ಟಕ್ಕಿಳಿಯಬೇಕು ಎಂಬುದು ಉಳಿದ ಮತೀಯರಂತೆ ಜೈನರಿಗೂ ಅರಿತ ವಿಷಯವಾಗಿತ್ತು. ಇನ್ನೊಬ್ಬ ಹೆಸರಾದ ಸಾಂಗತ್ಯಕಾರನೆಂದರೆ ಶಿಶುಮಾಯಣ. ಇವನು ಸಾಂಗತ್ಯರಚನೆಯಲ್ಲಿ ಮೊದಲಿಗನಾಗಿರಲಾರನೆಂಬುದನ್ನು ಇವನ ಕಾಲವಿಷಯಕವಾದ ಹೊಸ ಆಧಾರದಿಂದ ತಿಳಿಯುತ್ತದೆ. 'ತ್ರಿಪುರದಹನಸಾಂಗತ್ಯ, ಅಂಜನಾಚರಿತ್ರೆ' ಇವು ಇವನ ಕೃತಿಗಳು. 'ತ್ರಿಪುರದಹನಸಾಂಗತ್ಯ' ಸುಮಾರು ೩೦೦ ಪದ್ಯಗಳ ಚಿಕ್ಕ ಕೃತಿ. ಶೈವಸಂಪ್ರದಾಯದಲ್ಲಿ ತ್ರಿಪುರಹದನ ಶಿವಲೀಲೆಯಿದ್ದಂತೆ ಜೈನತತ್ವಕ್ಕನುಸರಿಸಿ ಜನನ ಜರಾಮರಣಗಳೆಂಬ ಮೂರು ಪುರವನ್ನು ಆದೀಶ್ವರನು ಸುಟ್ಟ ವಿಷಯವನ್ನು ತೆಗೆದು ಕೊಂಡು ಇದನ್ನು ಬರೆದಿದೆ. 'ಅಂಜನಾಚರಿತೆ' ೧೫ ಸಂಧಿ ಮತ್ತು ೬೦೦

ಪದ್ಯಗಳುಳ್ಳ ಅತಿ ದೊಡ್ಡದಾದ ಸಾಂಗತ್ಯಗ್ರಂಥ. ಇದರಲ್ಲಿ ರವಿಷೇಣನ 'ಪದ್ಮ-ಚರಿತ್ರ'ದ ಅಂದರೆ ಜೈನರಾಮಾಯಣದಲ್ಲಿಯ 'ಅಂಜನಾಚರಿತ್ರೆ'ಯ ಭಾಗವನ್ನು ಮಾತ್ರ ಶಿಶುಮಾಯಣನು ಇಷ್ಟು ವಿಸ್ತಾರವಾಗಿ ಬರೆದಿದ್ದಾನೆ. ಎರಡೂ ಗ್ರಂಥಗಳ ಶೈಲಿ ತುಂಬ ಸರಳವಾಗಿದೆ, ಪ್ರವಾಹಿಯಾಗಿದೆ. ಶಿಶುಮಾಯಣನು ಅಂಥ ಪಂಡಿತ-ನಲ್ಲವೆಂದೂ ಲಕ್ಷಣಜ್ಞಾನವಿಲ್ಲದವನೆಂದೂ 'ಅಕ್ಷರಭೇದವನರಿಯದೆನಗೆ ಮತ್ತೆ ಲಕ್ಷಣಗಳು ಗೋಚರವೆ', 'ಕವಿತೆಯ ಮಾರ್ಗದ ಸುವಿಚಾರಗಳ ವಿವರಿಪೊಡೇ-ನೆಂದರಿಯೆ', 'ಲಕ್ಷಣವಿಲ್ಲದೊಡೀಕೃತಿಗೆ ಸಲ್ಲಕ್ಷಣಯುತೆ ಸತಿಯರೊಳು ಲಕ್ಷ್ಯವೆನಿ-ಸುವಂಜನಾಚರಿತವನು ವಿಚಕ್ಷಣರೆಯ್ದೆ ಕೇಳುವುದು' ಎಂಬ ಅವತರಣಿಕೆಗಳಿಂದ ತಿಳಿಯಬಹುದು. ಅಂತೆಯೆ ಅವನು ಜನತೆಯ ಹಾಡಿನ ಮಟ್ಟವಾದ ಛಂದಸ್ಸನ್ನು ಆರಿಸಿದನೇನೊ. ಈ ಯುಗದ ಸಾಂಗತ್ಯಕಾರರಲ್ಲಿ ಅವನಿಗೊಂದು ಮನ್ನಣೆಯ ಎಡೆಯಿದೆ.

೩ನೆಯ ಮಂಗರಸ

೩ನೆಯ ಮಂಗರಸನು ಈ ಯುಗದಲ್ಲಿ ಸಮೃದ್ಧಸಾಹಿತ್ಯವನ್ನು ನಿರ್ಮಿಸಿದ ಜೈನ ರಾಜಕವಿ. ಚಂಗಾಳರಾಜರ ಸಚಿವಕುಲದಲ್ಲಿ ಹುಟ್ಟಿ ಅವನು ಕಲ್ಲಹಳ್ಳಿಯ ಅರಸನಾಗಿದ್ದನು. ಮೈಸೂರು ಅರಸುಮನೆತನಗಳಲ್ಲಿ ಒಂದಾಗಿ ಅವನ ವಂಶವೃಕ್ಷವು ಇಂದಿನವರೆಗೆ ಬೆಳೆದು ಬಂದಿದೆ. ಅವನು ಬರೆದ ಗ್ರಂಥಗಳೆಂದರೆ 'ನೇಮಿಜಿನೇಶ-ಸಂಗತಿ, ಜಯನೃಪಕಾವ್ಯ, ಸಮ್ಯಕ್ತ್ವಕೌಮುದಿ, ಪ್ರಭಂಜನಚರಿತೆ, ಶ್ರೀಪಾಲಚರಿತೆ, ಸೂಪಶಾಸ್ತ್ರ.' ಮೊದಲ ಮೂರು ಮಾತ್ರ ಪ್ರಕಟವಾಗಿವೆ. ಎಲ್ಲ ಗ್ರಂಥಗಳನ್ನು ಷಟ್ಪದಿ ಇಲ್ಲವೆ ಸಾಂಗತ್ಯದಲ್ಲಿ ಕವಿ ಬರೆದಿದ್ದಾನೆ. 'ನೇಮಿಜಿನೇಶಸಂಗತಿ' ಎಲ್ಲಕ್ಕೂ ದೊಡ್ಡದಾದ ಗ್ರಂಥ. ಸಾಂಗತ್ಯದಲ್ಲಿ ತೀರ್ಥಂಕರಚರಿತ್ರೆಯನ್ನು 'ಪಾಡುಗಬ್ಬ'ವಾಗಿ ಬರೆದದ್ದು ಇದರಲ್ಲಿಯೆ ಮೊದಲನೆಯ ಸಲ. ನೇಮಿತೀರ್ಥಂಕರನ ಚರಿತ್ರೆ, ಜೊತೆಗೆ ಹರಿವಂಶ ಕುರುವಂಶಗಳ ಚರಿತ್ರೆ ಇದರಲ್ಲಿವೆ. ನೇಮಿಚಂದ್ರನಂತೆ ಮಂಗರಸನು ಕತೆಗಾಗಿ 'ಚಾವುಂಡರಾಯಪುರಾಣ'ವನ್ನು ಆಧಾರವಾಗಿಟ್ಟುಕೊಂಡಿದ್ದಾನೆ. ನೇಮಿಚಂದ್ರನ ಛಾಯೆಯೂ ಅಲ್ಲಲ್ಲಿ ಕಾಣುತ್ತದೆ. ಮುಖ್ಯವಾಗಿ ಮೂಲಾನುಸರಣ-ದೃಷ್ಟಿಯೆ ಇದರಲ್ಲಿದೆ. ಆದರೂ ಮೂಲದ ಕೆಲವು ಸಂಗತಿಗಳನ್ನು ವಿಸ್ತರಿಸಿ ರಸವತ್ತಾಗಿ ಸ್ವಾಭಾವಿಕವಾಗಿ ಮಾಡಿದ್ದಾನೆ. ಕೆಲವು ಸಂನಿವೇಶಗಳನ್ನು ಹೊಸದಾಗಿ ಕಲ್ಪಿಸಿ-ದ್ದಾನೆ. ಕತೆ ದೊಡ್ಡದೆಂದೋ ಏನೋ ಇದರಲ್ಲಿ ವರ್ಣನೆಗೆ ಅವಕಾಶ ಕಡಿಮೆ. ಆದರೂ ಪ್ರಾರಂಭಕ್ಕೆ ದೇಶ, ಪುರ, ಮಧ್ಯದಲ್ಲಿ ನಿಸರ್ಗ, ಬೇಟೆ, ಸೂಳೆಗೇರಿ, ಸ್ತ್ರೀಸೌಂದರ್ಯ ಈ ವಿಷಯವಾದ ವರ್ಣನೆಗಳು ಬಂದಿವೆ. ಅವುಗಳಲ್ಲಿ ಪಂಪ, ನೇಮಿಚಂದ್ರ, ಜನ್ನ, ಕುಮಾರವ್ಯಾಸ ಇವರ ಪ್ರಭಾವಗಳನ್ನು ಗುರುತಿಸಬಹುದಾಗಿದೆ.

ಸಾಮಾನ್ಯವಾಗಿ ಕೇವಲ ವರ್ಣನೆಯ ಚಪಲಕ್ಕಾಗಿ ವರ್ಣಿಸದೆ ಕತೆಯಲ್ಲಿ ಕಳೆತುಂಬು-ವುದಕ್ಕಾಗಿ ಮಂಗರಸನು ಹದವರಿತು ವರ್ಣಿಸುತ್ತಾನೆ. ಕಥೆಯ ಓಟದಲ್ಲಿ ಬರುವ ವರ್ಣನೆ ಬೇಸರುತರುವುದಿಲ್ಲ, ಬೇಕೆನ್ನಿಸುತ್ತದೆ. ಕತೆಗಾರಿಕೆಯಲ್ಲಿ ಅವನು ಬಲ್ಲಿದನು. ಸರಳವಾಗಿ ರುಚಿಕಟ್ಟಾಗಿ ಕತೆ ಹೇಳುವ ಕಲೆ ಅವನಿಗೆ ಸಹಜವಾಗಿದೆ. ಪಾತ್ರಗಳು ವಿಷಯಾಸಕ್ತರಿಂದ ಪರಮಯೋಗಿಗಳ ವರೆಗೆ ವಿವಿಧವಾಗಿದ್ದು ಜೀವಂತವೆನಿಸುತ್ತವೆ, ಜನಜೀವನದಲ್ಲಿ ನಿತ್ಯವೂ ಕಾಣುವ ವ್ಯಕ್ತಿಗಳಾಗಿ ತೋರುತ್ತವೆ. ಇದರಲ್ಲಿ ಯೋಗ-ಭೋಗಗಳ ಸಮತೂಕ, ಮೃದುಹಾಸ್ಯ ಮತ್ತು ವಿಶಾಲಜೀವನದೃಷ್ಟಿಯನ್ನು ನೋಡಿದರೆ ಮುಂದೆ ಬರಲಿರುವ ರತ್ನಾಕರವರ್ಣಿಯ 'ಭರತೇಶವೈಭವ'ಕ್ಕೆ ಇದು ಪೂರ್ವಸೂಚನೆಯಂತಾಗಿದೆ. ಸಾಂಗತ್ಯರಚನೆಯಲ್ಲಿ ರತ್ನಾಕರವರ್ಣಿಯ ಅಪ್ರತಿಮ-ವಾದ ಸೌಲಭ್ಯವು ಮಂಗರಸನಲ್ಲಿ ಇಲ್ಲವಾದರೂ ಅವನದೇ ಆದ ಧಾರಾಳತೆ ಒಂದಿದೆ. ಬೇರೆ ಯಾರಲ್ಲಿಯೂ ಕಾಣದ ಆಂತರಿಕವಾದ ಅಂತ್ಯಪ್ರಾಸದ ಲಾಲಿತ್ಯ ಅವನ ಸಾಂಗತ್ಯದಲ್ಲಿದೆ.

> 'ಅಲರ ಶರನ ಬೀಡಪರಂಜಿಮಿಗ**ದಾಡು**-।
> ವೊಲ ಕಾಮಪಶು ಮೇವ **ಕಾಡು**।
> ನೆಲವ ಹಡೆದ ನಾಕಲೋಕದೇಳ್ಗೆಗೆ **ಜೋಡು**।
> ಸಲೆ ಸೊಗಯಿಪುದಾ **ನಾಡು**॥' (೧-೬೧)

ಇದು ನೇಮವಾಗಿ ಬಂದಿಲ್ಲವಾದರೂ ಕೆಲವು ಸಲ ೨೦-೩೦ ಪದ್ಯಗಳವರೆಗೆ ಹರಡಿ-ಕೊಂಡು ಬಂದಿದೆ. ಒಟ್ಟಿನಲ್ಲಿ 'ನೇಮಿಜಿನೇಶಸಂಗತಿ' ಇದು ಮೆಚ್ಚತಕ್ಕ ಸತ್ಕಾವ್ಯ. ಕಥನಕಲೆಯ ಸರಳರಮ್ಯತೆ ಮತ್ತು ಛಂದಸ್ಸುಶೈಲಿಗಳ ಲಾಲಿತ್ಯದಿಂದ ಸಾಂಗತ್ಯ-ಗ್ರಂಥಗಳಲ್ಲಿ ಇದಕ್ಕೆ ಗಣ್ಯವಾದ ಸ್ಥಾನವಿದೆ.

'ಜಯನೃಪಕಾವ್ಯ'ದಲ್ಲಿ ಜಿನಸೇನನು ಹಿಂದೆ ಹೇಳಿದ ಕಥೆಯನ್ನು ಮಂಗರಸನು ಪರಿವರ್ಧಿನಿಷಟ್ಪದಿಯಲ್ಲಿ ಬಿತ್ತರಿಸಿದ್ದಾನೆ. 'ಪಾಲೊಳಗಯಿದಾರೆಯ ಸಕ್ಕರೆಯಂ ಓತೊಡವೆರಸುವ ತೆಱದಿಂ ನವರಸರೀತಿವಡೆದ ಸಕ್ಕದದೊಳು ಕನ್ನಡವಾತು ಸಮಱೆ ಬೆರಸಿ' (೧-೨೩) ಇದನ್ನು ಹೇಳಿರುವುದಾಗಿ ಮೊದಲು ಸಾರಿದ್ದಾನೆ. ಅಷ್ಟು-ಮಟ್ಟಿಗೆ ಅಚ್ಚಗನ್ನಡದತ್ತ ಅವನ ಒಲವಿದೆ. 'ವಾಚಕವಾಚ್ಯವ್ಯಂಗ್ಯವ್ಯಂಜನ.... ಆಚರಿತೋಭಯಸಂಧಿಸಮಾಸವಿವೇಚನೆಗಳ ಭೇದಮನಿನಿಸಱಿಯದೆ ವಾಚಾಲತೆ-ಯಿಂದುಸುರಿದ ದುಷ್ಕೃತಿಯಲ್ಲಿದು' (೧-೨೬) ಎಂದು ಈ ಗ್ರಂಥದ ಲಾಕ್ಷಣಿಕತೆಯನ್ನು ಹೊಗಳಿಕೊಂಡಿದ್ದಾನೆ. ಹೀಗಾಗಿ, ಶೈಲಿಯ ವಿಷಯದಲ್ಲಿ ದೇಸಿಯ ದೃಷ್ಟಿ, ವರ್ಣನೆಗಳಲ್ಲಿ ಮಾರ್ಗದೃಷ್ಟಿ ಇವುಗಳ ಮಿಶ್ರಣವು ಇದರಲ್ಲಿ ಕಾಣುತ್ತದೆ. ದೇಸಿ-ಮಾರ್ಗಗಳ ಸಮನ್ವಯವೆಂದು ಇದನ್ನು ಕರೆಯಲಾಗದು, ಸ್ವತಂತ್ರಸಹಜಕಲ್ಪನೆ

ಸ್ವಚಿತ್ತಾಗಿ ಮಿನುಗುತ್ತಿದ್ದರೂ ಸಮಯಶರಣವಾದ ಅಲಂಕಾರಪ್ರಿಯತೆ, ಕಲ್ಪನಾ-ಕ್ಲೇಶವೇ ಹೆಚ್ಚು. ಅಚ್ಚಗನ್ನಡದ ಹವಣು ಒಮ್ಮೊಮ್ಮೆ ಅನಾವಶ್ಯಕವಾದ ಸಂಸ್ಕೃತಕ್ಕೆ ಇಂಬುಗೊಡುತ್ತದೆ. ಒಟ್ಟಿನಲ್ಲಿ ಛಂದೋರಚನೆಯಲ್ಲಿ ಮತ್ತು ಕಥಾನಿರೂಪಣೆಯಲ್ಲಿ ಒಳ್ಳೆಯ ಶಕ್ತಿ ಫಲಿಸಿದೆಯೆನ್ನಲು ಅಡ್ಡಿಯಿಲ್ಲ. 'ಸಮ್ಯಕ್ತ್ವಕೌಮುದಿ'ಯಲ್ಲಿ ಉದಿತೋದಯನೆಂಬ ರಾಜನು ಅರ್ಹದ್ದಾಸನೆಂಬ ವೈಶ್ಯತಿಲಕನ ಹೆಂಡತಿಯರು ತನಗೆ ಹೇಳಿದ ಸಮ್ಯಕ್ತ್ವವೊದಗಿದ ಕಥೆಗಳನ್ನು ಕೇಳಿ ವೈರಾಗ್ಯಹುಟ್ಟಿ ದೀಕ್ಷೆವಹಿಸಿ ಸ್ವರ್ಗಲೋಕದಲ್ಲಿ ಅಹಮಿಂದ್ರನಾದನೆಂಬುದು ಕಥಾಸಾರವಾಗಿದೆ. ಇದು ಧಾರ್ಮಿಕ ಕಥೆಗಳ ಸಂಗ್ರಹ, ಸಂಸ್ಕೃತ ಆನುಪೂರ್ವಿಯ ಅನುವಾದ. 'ಅತಿಕಠಿಣಪಾಕಮಲ್ಲದೆ ಸುಭಗಮೆಂದೆನಿಪ ಷಟ್ಪದಿಯೊಳು ಸಂದ ಸಕ್ಕದಗನ್ನಡವನೆರಡನೊಡವೆರಸಿ........ ಮೃದುಪಾಕವಪ್ಪಂದದಿಂ' (೧೨-೪೫) ವಿರಚಿಸಿದೆನೆನ್ನುತ್ತಾನೆ. ಈ ಸುಭಗತೆ-ಸುಲಭತೆಗಳು ಇದರಲ್ಲಿವೆ. 'ವಾರ್ಧಕಷಟ್ಪದಿಯಲ್ಲಿ ಬರೆದ ಗ್ರಂಥಗಳೊಳಗೆ ಇದೂ ಒಂದು ಉತ್ತಮ ಗ್ರಂಥ' ಎಂಬ ಮುನ್ನುಡಿಕಾರರ ಪ್ರಶಂಸೆ ಅತಿಶಯೋಕ್ತಿಯೆಂಬು-ವನ್ನು ಯಾರೂ ತಿಳಿಯಬಲ್ಲರು. 'ಪ್ರಭಂಜನಚರಿತೆ' ಇದು ಸಾಂಗತ್ಯದಲ್ಲಿ ಬರೆದ ಧಾರ್ಮಿಕ ಕಥೆ. ಇದರಲ್ಲಿ ಗುಣವಿಶೇಷವೇನೂ ಕಾಣಲಿಲ್ಲ. 'ಶ್ರೀಪಾಲಚರಿತೆ'ಯೂ ಸಾಂಗತ್ಯವಾಗಿ ೧೪ ಸಂಧಿ ಮತ್ತು ಸುಮಾರು ೧೫೦೦ ಪದ್ಯಗಳಿಂದ ತುಂಬ ದೊಡ್ಡದಾಗಿದೆ. ಗುಣಪಾಲನ ಮಗ ಶ್ರೀಪಾಲನ ಕಥೆ ಇದರಲ್ಲಿ ಬಂದಿದೆ. 'ಸೂಪಶಾಸ್ತ್ರ'ದಲ್ಲಿ ಮಂಗರಸನು ವಾರ್ಧಕಷಟ್ಪದಿಯಲ್ಲಿ 'ಷಡ್ರಸವಿಪಾಕಭೇದ'-ವನ್ನು ತಿಳಿಸಿದ್ದಾನೆ. ಪಾಕಶಾಸ್ತ್ರವನ್ನು ಕುರಿತು ದೇಸಿಯ ಛಂದಸ್ಸಿನಲ್ಲಿ ಬರೆದ ಮೊದಲನೆಯ ಗ್ರಂಥವಿದು. ಸಂಸ್ಕೃತ ಗ್ರಂಥದ ಅನುವಾದವಾಗಿದೆ ಎಂದು ತಿಳಿಯುತ್ತದೆ. ಹೀಗೆ ಮಂಗರಸನು ತೀರ್ಥಂಕರ ಚರಿತ್ರೆ, ಅದರಲ್ಲಿ ಅಡಕವಾಗಿ ಬರುವ ಭಾರತ ಮತ್ತು ಕೃಷ್ಣಕಥೆ, ಧಾರ್ಮಿಕಮಹತ್ವದ ಚರಿತ್ರೆ ಮತ್ತು ಕಥೆಗಳು ಈ ಮೊದಲಾದ ಸಾಮಗ್ರಿಯನ್ನು ದೇಶೀಯ ಕಾವ್ಯರೂಪಗಳಲ್ಲಿ ಹೇರಳವಾಗಿ ತಂದಿರಿಸಿ, ಜೈನಮತಪ್ರಸಾರಕನೂ ಜನಪ್ರಿಯನೂ ಆದ ಸತ್ಕವಿಯೆಂದು ಹೆಸರು-ಪಡೆದನು.

ಈ ಯುಗದ ಜೈನಕವಿಗಳು ಈ ರೀತಿ ಪೂರ್ವಪರಂಪರೆಯ ಚಂಪೂಕಾವ್ಯಗಳ ಕಾಲುಂಡು ಪುಷ್ಟರಾದರೂ ವರ್ಣನೆ-ಕಲ್ಪನೆಗಳಲ್ಲಿ ಅವಕ್ಕೆ ಹಂಗಿಗರಾದರೂ ದೇಸಿಗಬ್ಬದ ಉಪಾಸಕರಾದರು, ಚಂಪೂಕೃತಿಗಳ ನಿರ್ಮಾಣಕ್ಕೆ ಕೈಹಾಕಲಿಲ್ಲ. ಕಾಲಮಾನದ ಸಂಗೀತದಲ್ಲಿ ಅದು ಅಪಸ್ವರವಾದೀತೆಂದು ಅವರಿಗೆ ತೋರಿತು. ಆದರೆ ಅದರ ಅಭ್ಯಾಸಕ್ಕೆ ಉತ್ತೇಜನ ದೊರೆಯಲಿ ಎಂದು ಮಲ್ಲಿಕಾರ್ಜುನನ 'ಸೂಕ್ತಿಸುಧಾ-ರ್ಣವ'ದ ತರುವಾಯ ಅಭಿನವವಾದಿವಿದ್ಯಾನಂದನ 'ಕಾವ್ಯಸಾರ'ವೆಂಬ ಸಂಕಲನ-ಗ್ರಂಥವು ೧೬ನೆಯ ಶ.ದಲ್ಲಿ ಹುಟ್ಟಿತು. ಅದರಲ್ಲಿ ಅಷ್ಟಾದಶವರ್ಣನೆಗಳಲ್ಲಿ ಒಂದೊಂದಕ್ಕೆ ಅನುಕ್ರಮವಾಗಿ ಬೇರೆ ಬೇರೆ ಗ್ರಂಥಗಳಿಂದ ಆಯ್ದುಕೊಂಡ

ಉದಾಹೃತಪದ್ಯಗಳು ಇರುತ್ತವೆ. ಇದರಲ್ಲಿ ೪೫ ಅಧ್ಯಾಯುಗಳೂ ಸಾವಿರದ ಮೇ ಪದ್ಯಗಳೂ ಇರುತ್ತವೆ. 'ಉದಯಾದಿತ್ಯಾಲಂಕಾರ'ದಂಥ ಕಂದಪದ್ಯದಲ್ಲಿಯ ಗ್ರಂ 'ಗುರುಮೂರ್ತಿಶಂಕರಶತಕ', ಚಾಟುಪದ್ಯ-ಮುಕ್ತಕಗಳನ್ನು ಬಿಟ್ಟರೆ ಉಳಿದೆಲ್ಲ ಪ್ರೌಢಚಂಪೂಗ್ರಂಥಗಳಾಗಿವೆ. ಅನುಪಲಬ್ಧವಾದ ೧ನೆಯ ಗುಣವರ್ಮನ 'ಹರಿವಂ ಮತ್ತು 'ಶೂದ್ರಕ' ಇವು ಚಂಪೂಕೃತಿಗಳೆಂದೂಹಿಸಲು ಆಧಾರವಿದೆ. ಇದರಲ್ಲಿ ಪದ್ಯಗಳಿಂದ ಅವುಗಳ ದಿಗ್ದರ್ಶನವಾದರೂ ದೊರೆತಿದೆ. ಇದು ಮಲ್ಲಿಕಾರ್ಜುನ 'ಸೂಕ್ತಿಸುಧಾರ್ಣವ'ವನ್ನು ಬಹಳ ಮಟ್ಟಿಗೆ ಹೋಲುತ್ತಿದೆಯಾದರೂ ಅದರ ಕವಿಗಳ ಅಥವಾ ಗ್ರಂಥಗಳ ಹೆಸರು ಹೇಳಿಲ್ಲ, ಇದರೊಳಗೆ ಅವನ್ನು ಹೇಳಿದ ಕಾರ ಕಾಲನಿರ್ಣಯಕ್ಕೆ ಇದರಿಂದ ಬಹಳ ಸಹಾಯವಾಗಿದೆ. ಪ್ರೌಢಕಾವ್ಯದಲ್ಲಿಯ ಒಳ್ಳೆ ವರ್ಣನೆಗಳ ವ್ಯಾಸಂಗಕ್ಕೂ ತುಲನಾತ್ಮಕವಾದ ವಿಮರ್ಶೆಗೂ ಈ ಸಂಕಲನ ಉಪಯುಕ್ತವಾಗಿದೆ. ಎಲ್ಲ ಕಾವ್ಯಗಳನ್ನು ಓದಲಾರದವರಿಗೆ ಈ ಕಾವ್ಯಸಾರ ಅಂದರೆ ಕಾವ್ಯಗಳಲ್ಲಿಯ ವರ್ಣನಸಾರವು ಯಥಾರ್ಥವಾದ ಕನ್ನಡಿಯಾಗಿದೆ.

ಸಾಳ್ವನೆಂಬ ಪಂಡಿತಕವಿ ೧೬ನೆಯ ಶ.ದ ಮಧ್ಯದಲ್ಲಿದ್ದು 'ರಸರತ್ನಾಕರ ಮತ್ತು 'ಸಾಳ್ವಭಾರತ'ಗಳನ್ನು ರಚಿಸಿದನು. 'ಶಾರದಾವಿಲಾಸ'ವೂ ಇವನದೆಂ ಗ್ರಹಿಕೆಯಿದೆ. 'ರಸರತ್ನಾಕರ'ದಲ್ಲಿ ಸಂಸ್ಕೃತ ಅಲಂಕಾರಿಕರಾದ ಅಮೃತಾನಂ ರುದ್ರಭಟ್ಟ, ವಿದ್ಯಾನಾಥ, ಹೇಮಚಂದ್ರರ ಮಾರ್ಗವಲ್ಲದೆ 'ನಾಗವರ್ಮಕವಿಕಾಮ ದಿಗಳ ಮಾರ್ಗದಿಂ ರಸಭಾವಾದಿಗಳನೆಲ್ಲಂ' ಕನ್ನಡಿಸಲಾಗಿದೆ. 'ರಸಮಿಲ್ಲದ ಕಾವ್ ನೀರಸಮದಱಿಂ ಕೃತಿಗೆ ರಸಮೆ ಸಾರಂ' (೧-೪) ಎಂಬುದಾಗಿ ರಸಪಂಥೀಯನಾ ಸಾಳ್ವನು ರಸಶಾಸ್ತ್ರವನ್ನು ವಿವರಿಸಿದ್ದಾನೆ, ಪ್ರಸಿದ್ಧ ಕನ್ನಡಕವಿಗಳಿಂದ ಉದಾಹರ ಗಳನ್ನು ಕೊಟ್ಟಿದ್ದಾನೆ. ಕವಿಕಾಮನ 'ಶೃಂಗಾರರತ್ನಾಕರ'ವು ಶೃಂಗಾರರಸ ಪ್ರಾಮುಖ್ಯಕೊಟ್ಟಿತು. ಇದರಲ್ಲಿ ಎಲ್ಲ ಒಂಬತ್ತು ರಸಗಳೂ ನಿರೂಪಿತವಾಗಿ ಇದು ಈ ಗ್ರಂಥದ ವೈಶಿಷ್ಟ್ಯ. ಧ್ವನಿಯನ್ನು ಪ್ರತಿಪಾದಿಸುವ ಮೊದಲನೆಯ ಗ್ರಂ ವೆಂದು 'ಶಾರದಾವಿಲಾಸ'ದ ಖ್ಯಾತಿಯಿದೆ. ಸಂಪೂರ್ಣಗ್ರಂಥವು ದೊರೆತ ಮೆ ಈ ವಿಷಯದ ನಿಷ್ಕರ್ಷೆಯಾಗಬೇಕು. ಇವನ 'ಸಾಳ್ವಭಾರತ' ಜೈನಭಾ ಕಥೆಯನ್ನು ಮೊದಲನೆಯ ಸಲ ಸಮಗ್ರವಾಗಿ ೧೬ ಪರ್ವಗಳಲ್ಲಿ ನಿರೂಪಿಸುತ್ತ ಪಂಪರನ್ನರು ವ್ಯಾಸಭಾರತ ಕಥೆಯನ್ನು ಕನ್ನಡಕ್ಕೆ ತರುವಲ್ಲಿ ಜೈನದೃಷ್ಟಿಯ ಅದರ ಮೇಲೆ ಕೆಲಮಟ್ಟಿಗೆ ಬೀರಿದರೇ ಹೊರತು ಜೈನಭಾರತವನ್ನೇ ಕನ್ನಡಿಸಲ ಆಮೇಲೆ ನೇಮಿಚಂದ್ರ, ಕರ್ಣಪಾರ್ಯ ಮುಂತಾದವರ 'ನೇಮಿನಾಥಪುರಾಣ'ಗ ತೀರ್ಥಂಕರಚರಿತ್ರೆಯ ಅಂಗವಾಗಿ ಅದು ಬಂದಿದೆ. ಸಾಳ್ವಭಾರತಕ್ಕೂ 'ನೇಮಿ ಚರಿತೆ' ಎಂಬ ಹೆಸರಿದೆ, ಹರಿವಂಶ-ಕುರುವಂಶಗಳ ಚರಿತ್ರವು ಇದರಲ್ಲಿ ಅಡಕವಾ ಆದರೆ ಭಾರತಕಥೆಗೆ ಇಲ್ಲಿ ಪ್ರಾಮುಖ್ಯವಿದೆ.

‘ ನವರಸದ ನೆಲೆ ಮಧುರಭಾವದ |
ತವದಲಂಕಾರಂಗಳಿಂದೊ- |
ಪ್ಪುವ ವಿಮಲಲಲಿತಾಂಗಮೃದುಪದರಚನೆ ನೆಱೆ ಮೆಱೆವ ||
ವಿವಿಧಗುಣಗಣನಿಳಯೆ ಸೊಬಗಿನ |
ಸವಿಯ ಸೈವಟೆಗಱೆವ ಮತ್ಕೃತಿ- |
ಯುವತಿ ಚದುರರ ಮನವನಿರ್ಕುಳಿಗೊಳ್ವುದಚ್ಚರಿಯೆ || ’

ಎಂಬ ಆತ್ಮಸ್ತುತಿ ಕವಿಪರಂಪರೆಯ ರೀತಿಯಲ್ಲಿದ್ದರೂ ಅದರಲ್ಲಿ ಸತ್ಯಾಂಶವಿದೆ. ಮಧ್ಯಮಕಾವ್ಯದ ಸರಳಮಾಧುರ್ಯ ಇದರಲ್ಲಿ ಕಾಣುತ್ತದೆ. ‘ ಅಳಿಕುಳಕ್ಷಳ ’........ ಮುಂತಾದ ಪದ್ಯಗಳಲ್ಲಿ ವ್ಯಾಕರಣದೋಷಗಳ ‘ ಪೞಯನೇನುಂ ಪಾಡುಗವಿತೆ- ಗಳೊಳು ವಿಚಾರಿಸಸಲ್ಲದೆಂಬಗ್ಗಳದ ಪಟಗಬ್ಬಿಗರ ಪೇೞ್ಕೆಯ ತೆಱದಿ ವಿರಚಿಸಿದೆ ’ ಎಂದಿದೆ. ‘ ವರ್ಣಕಕ್ಕೆ ಲಕ್ಷಣವಿಲ್ಲ ’ ಎಂಬ ಕವಿಗಳ ಗುಂಪಿಗೆ ಸಾಳ್ವನು ಸೇರಿಕೊಂಡಿ- ದ್ದಾನೆ. ಈ ಗುಂಪಿನಲ್ಲಿ ಇಬ್ಬಗೆಯೆಂದು ತಿಳಿಯಬಹುದು. ಸಾಕಷ್ಟು ಪಾಂಡಿತ್ಯ- ವಿಲ್ಲದೆ ಕಾವ್ಯರಚನೆ ಮಾಡಿರುವ ಕೆಲವರು ಈ ತತ್ವಹಿಡಿದು ತಮ್ಮಿಂದ ಆಗುವ ಲಕ್ಷಣದೋಷಗಳನ್ನು ಸಮರ್ಥಿಸುತ್ತಾರೆ. ಪಾಂಡಿತ್ಯವಿದ್ದೂ ಸಾಮಾನ್ಯವಾಗಿ ದೋಷ- ಗಳನ್ನು ಅಷ್ಟುಮಟ್ಟಿಗೆ ಮಾಡದೆಯೂ ಈ ತತ್ವವನ್ನು ಒಪ್ಪಿಕೊಂಡವರು ಬೇರೆ ಕೆಲವರು ಇರುತ್ತಾರೆ. ಸಾಳ್ವನು ಅಂಥವರಲ್ಲಿ ಒಬ್ಬನೆಂದು ತೋರುತ್ತದೆ. ಇವನ ಭಾಮಿನಿ- ಷಟ್ಪದಿಯ ಪದ್ಯಗಳಲ್ಲಿಯ ಪ್ರಸಾದಕ್ಕೂ ಲಾಲಿತ್ಯಕ್ಕೂ ಕೆಳಗಿನ ಪದ್ಯವನ್ನು ಉದಾ- ಹರಿಸಬಹುದು :

‘ ಏಱಿದುದು ತಂಬೆರಲು ಹಿಮು ಪೊಱ- |
ಮಾಱಿದುದು ಕಾಸಾರದೊಳು ಕಾ- |
ಲೂಱಿದುವು ರಾಯಂಚೆ ಪದುಮಿನಿ ನಗೆಮೊಗದ ಮಧುವ ||
ತೂಱಿದುವು ಪರಪುಟ್ಟಗಳು ಸರ- |
ದೋಱಿದುವು ದರ್ಪಕಗೆ ದರ್ಪವು |
ಪೇಱಿದುದು ಜಾಱಿದುದು ಜಾತಿಯ ಪೂತ ಸೌಭಾಗ್ಯ || ’

ವಾರ್ಧಕಷಟ್ಪದಿಯನ್ನೂ ಇದರಲ್ಲಿ ಬಳಸಲಾಗಿದೆ. ಇದೇ ಗುಣವನ್ನು ಅದರ ರಚನೆ- ಯಲ್ಲಿ ಕಾಣಬಹುದು.

೩೪. ಈ ಯುಗದ ಜೈನಸಾಹಿತ್ಯ (೨)

ರತ್ನಾಕರವರ್ಣಿ

ರತ್ನಾಕರವರ್ಣಿ ಈ ಯುಗದ ಹಿರಿಯ ಕವಿಗಳಲ್ಲಿ ಒಬ್ಬನು, ಕನ್ನಡಸಾಹಿತ್ಯದ ಐಶ್ವರ್ಯವನ್ನು ಹೆಚ್ಚಿಸಿದ ತೀರ ಸ್ವಲ್ಪ ಮಹಾಕವಿಗಳಲ್ಲಿಯೂ ಒಬ್ಬನು. ೧೬ನೆಯ ಶ.ದ ಮಧ್ಯಭಾಗದಲ್ಲಿ ವಿಜಯನಗರಸಾಮ್ರಾಜ್ಯವು ತನ್ನ ವೈಭವಶಿಖರವನ್ನು ಮುಟ್ಟಿ ಇಳಿತರಕ್ಕೆ ಹತ್ತಿರ ಬಂದಾಗ ಇವನು ಪಶ್ಚಿಮಕರಾವಳಿಯ ಮೂಡಬಿದಿರೆಯಲ್ಲಿ ಹುಟ್ಟಿ ಬೆಳೆದನು. ಕಾರ್ಕಳ–ಮೂಡಬಿದಿರೆಯ ಆ ಪ್ರಾಂತವು ಜೈನಧರ್ಮದ ಜೀವಂತಕೇಂದ್ರಗಳಲ್ಲಿ ಒಂದಾಗಿತ್ತು. ಕ್ಷತ್ರಿಯವಂಶಜನಾಗಿ ಹುಟ್ಟಿ ಅಂಥ ಕೇಂದ್ರದ ವಿದ್ಯಾಮಯವಾತಾವರಣದಲ್ಲಿ ಅವನು ಬೇಗಬೇಗನೆ 'ಕಾವ್ಯಾಲಂಕಾರಲಕ್ಷಣಶಾಸ್ತ್ರದೊಳತಿನಿಪುಣ'ನಾದನು. ಮುಂದೆ ಅವನ ಗುರುವಾದ ಚಾರುಕೀರ್ತಿ ಅವನಿಗೆ ಶ್ರೀಶುಚಿದೀಕ್ಷೆಯನ್ನು ಕೊಟ್ಟನು. 'ಮೋಕ್ಷಗುರು ಹಂಸನಾಥನೆಂದು ಹೇಳುವುದು ಚಾರುಕೀರ್ತಿಯನ್ನು ಕುರಿತೇ ಎಂದು ತೋರುತ್ತದೆ'[1] ಎಂಬ ಅಭಿಪ್ರಾಯವು ಚರ್ಚಿಸತಕ್ಕುದು.

> 'ದೀಕ್ಷಾಗ್ರಗುರು ಚಾರುಕೀರ್ತಿಯೋಗೀಶ್ವರ |
> ಮೋಕ್ಷಾಗ್ರಗುರು ಹಂಸನಾಥ ॥ (೨೭–೧೧೩, ಪಂಚಮಕಲ್ಯಾಣ)
>
> ದೇಶಿಗಣಾಗ್ರಣಿ ಚಾರುಕೀರ್ತ್ಯಾರ್ಯಚಾರ್ಯ |
> ಶ್ರೀಶುಚಿದೀಕ್ಷೆಯಿತ್ತಾಗ |
> ಆಶಾತಿದೂರ ಶ್ರೀ ಗುರುಹಂಸನಾಥ ಪ್ರ- |
> ಕಾಶದೊಳ್ನೆಲಸಿ ರಕ್ಷಿಸಿದಾ ॥' (೨೭–೧೧೪, ಪಂ.ಕ.)
>
> ಗುರುಹಂಸನಾಥನಾಜ್ಞೆಯೊಳು ಸಿದ್ಧಾಂತದ |
> ತಿರುಳರಿದಾತ್ಮಲೀಲಾರ್ಥ |
> ಭರತೇಶವೈಭವವೆಂಬ ಕಾವ್ಯವನಿದ- |
> ನೊರೆದೆನು ಸುಖಿಗಳಾಲಿಪುದು ॥' (೨೭–೧೧೫, ಪಂ.ಕ.)

ಈ ಪದ್ಯಗಳಿಂದ ದೀಕ್ಷಾಗುರು ಮತ್ತು ಮೋಕ್ಷಗುರು ಭಿನ್ನರೆಂದು ಸೂಚಿತವಾಗುತ್ತದೆ. ಗ್ರಂಥಪ್ರಾರಂಭದಲ್ಲಿ

---

1 ತ. ಸು. ಶಾಮರಾವ: ಭರತೇಶವೈಭವ (ಪ್ರ.ಕ., ೨೨–೧, ಪು. ೨೯)

'ಪರಬೊಮ್ಮ ತ್ರಿಭುವನಸಾರ ಚಿದಂಬರ- |
ಪುರುಷ ನಿರಂಜನಸಿದ್ಧಾ |
ದುರಿತಂಜಯ **ಹಂಸನಾಥ** ನಮೋ ನಮೋ |
ಗುರುವೆ ಪ್ರತ್ಯಕ್ಷವಾಗೆನಗೆ || (೧-೪)

ಬಿನ್ನಹ ಗುರುವೇ ಧ್ಯಾನಕೆ ಬೇಸರಾದಾಗ |
ನಿನ್ನನಾದಿಯ ಮಾಡಿಕೊಂಡು |
ಕನ್ನಡದೊಳಗೊಂದು ಕಥೆಯ ಪೇಳುವೆನದು |
ನಿನ್ನಾಜ್ಞೆ ಕಂಡ್ಯಾ ನನ್ನೊಡೆಯ ||' (೧-೫)

ಂದೆ ಗ್ರಂಥದ ಅನೇಕ ಕಡೆಗಳಲ್ಲಿ, ಸಂಧ್ಯಂತಪದ್ಯಗಳಲ್ಲಿ ಹಂಸನಾಥ, ಹಂಸತತ್ವ, ಸಯೋಗ ಈ ಪದಪ್ರಯೋಗಗಳು ಬಂದಿವೆ. ಹಂಸನಾಥನೆಂಬ ಹೆಸರಿನ ೕಕ್ಷಗುರು ಬೇರೆಯಾಗಿದ್ದು ಅವನಿಗೆ ಜ್ಞಾನೋಪದೇಶವನ್ನು ಮಾಡಿರಬಹುದು. ರೆ ವಿಶಾಲವಾದ ಅರ್ಥದಲ್ಲಿ ಹಂಸನಾಥನೆಂದರೆ ಅಂತರಾತ್ಮ, ಪರಮಾತ್ಮ ಎಂದು ಯಬೇಕು. ಮೋಕ್ಷಗುರುವಿಗೂ ಅವನಿಗೂ ಕೂಡಿಯೇ ಅನ್ವಯಿಸುವಂತೆ ್ನಕರವರ್ಣಿ ಕೆಲವು ಸಲ ವರ್ಣಿಸುತ್ತಾನೆ. ಕೆಲವು ಸಲ ಪರಮಾತ್ಮನೊಬ್ಬನನ್ನೇ ತು ಆ ಪದವನ್ನು ಬಳಸುತ್ತಾನೆ. 'ಬಿನ್ನಹ ಗುರುವೇ' ಎಂಬಲ್ಲಿ 'ನಿನ್ನನಾದಿಯ ಡಿಕೊಂಡು' ಎಂದರೆ 'ನಿನ್ನನ್ನು ಮುಖ್ಯವಿಷಯವಾಗಿ ಮಾಡಿಕೊಂಡು' ಹಾಗೂ ನ್ನನ್ನು ಮುಖ್ಯವಾಗಿ ನೆನಹಿನಲ್ಲಿ ಇಟ್ಟುಕೊಂಡು' ಎಂಬೆರಡು ಅರ್ಥಗಳು ಮಾತ್ಮನಿಗೂ ಮೋಕ್ಷಗುರುವಿಗೂ ಕೂಡಿ ಸರಿಹೋಗುತ್ತವೆ. 'ಪರಬೊಮ್ಮ ುವನಸಾರ' ಇತ್ಯಾದಿ ಪದ್ಯದಲ್ಲಿ ಪರಮಾತ್ಮಪರವಾದ ಅರ್ಥವು ಹೆಚ್ಚು ಪ್ರಮುಖ- ದ್ದರೂ ಅದೇ ಬಗೆಯ ಶ್ಲೇಷಹೇತುವಿದೆ. ಹಂಸ**ನಾಥ** ಎಂಬ ಹೆಸರಿನಿಂದ ್ನಕರನ ಮೋಕ್ಷಗುರು ನಾಥಪಂಥದವನಾಗಿ ಅವನನ್ನು ಯೋಗಶಾಸ್ತ್ರಪಾರಂಗತ- ್ನಾಗಿ ಮಾಡಿರುವ ಸಂಭವವಿದೆ. ರತ್ನಾಕರನು ಸಂಪ್ರದಾಯಬದ್ಧನಾದ ಜೈನನಲ್ಲ- ಬುದು ಅವನ ವಿಷಯವಾಗಿ ಪ್ರಚಲಿತಕಥೆಗಳಿಂದಲೂ ಗ್ರಂಥಸ್ಥಪ್ರಮಾಣ- ಂದಲೂ ಊಹಿಸಬಹುದು. ದೇವಚಂದ್ರನು ಹೇಳುವಂತೆ ಅವನು ಭೈರಸ ಯರ ಸಭೆಯಲ್ಲಿ ಶೃಂಗಾರಕವಿಯಾಗಿ ಅರಸುಗುವರಿಯಲ್ಲಿ ನೇಹಮಾಡಿದ್ದು, ೕಗಬಲದಿಂದ ಅರಮನೆಯ ಅಟ್ಟವನ್ನೇರಿದ್ದು, ಅರಸನು ಹಿಡಿಯುವ ಯತ್ನ- ಡಲು ಓಡಿಹೋಗಿ ಅಣುವ್ರತದೀಕ್ಷೆಕೈಕೊಂಡದ್ದು, ಭರತೇಶವೈಭವ ಬರೆದು ಶಾಸ್ತ್ರವಿರೋಧವಿರುವುದೆಂಬ ಕಾರಣದಿಂದ ಪುರಸ್ಕಾರಹೊಂದದೆ 'ಆತ್ಮಜ್ಞಾನಿಗೆ ತಿಕುಲ ಯಾವುದಾದೊಡಂ ಸಮವೆಂದು' ಲಿಂಗಧಾರಣೆಮಾಡಿ ವೀರಶೈವಶಾಸ್ತ್ರ ದ್ದು, ಮತ್ತೆ ಕೋಪ ಶಾಂತವಾದಮೇಲೆ ಜೈನಮತಕ್ಕೆ ಮರಳಿ ಬಂದದ್ದು ಈ ತ್ರೆಯಲ್ಲಿ ಸತ್ಯಾಂಶವಿದ್ದಂತೆ ಕಾಣುತ್ತದೆ. ವಿವರಗಳು ಏನೇ ಇರಲಿ, ಅವನು

ಶೃಂಗಾರಪ್ರಿಯನೂ ಸ್ವತಂತ್ರಪ್ರಜ್ಞೆಯುಳ್ಳವನೂ ಆಗಿದ್ದನೆಂದೂ ಅವನ ಜೀವನ ವಿಚಿತ್ರಘಟನೆಗಳಿಂದ ಕೂಡಿ ಅದ್ಭುತರಮ್ಯವಾಗಿತ್ತೆಂದೂ ತಿಳಿಯಲು ಆಸ್ಪದವಿದೆ.

ರತ್ನಾಕರನ ಕೃತಿಗಳೆಂದರೆ 'ತ್ರಿಲೋಕಶತಕ, ಅಪರಾಜಿತೇಶ್ವರಶತ ಹಾಡುಗಳು ಮತ್ತು ಭರತೇಶವೈಭವ.' 'ರತ್ನಾಕರಾಧೀಶ್ವರಶತಕ'ವೂ ಇವನ ಆಗಿರಬಹುದು. ಆದರೆ ಅದರಲ್ಲಿಯ ಅಂಕಿತಭೇದ ಮುಂತಾದ ಕಾರಣದಿಂದ ಅದನ ಅವನು ರಚಿಸಿಲ್ಲವೆಂದೂ ಹಂಸರಾಜನೆಂಬ ಬೇರೊಬ್ಬ ಕವಿ ರಚಿಸಿದನೆಂದೂ ಕವಿಚರಿ ಕಾರರು ಅಭಿಪ್ರಾಯಿಸುತ್ತಾರೆ. ಆದರೆ ಹಂಸರಾಜ ಎಂಬುದು ರತ್ನಾಕರನ ಒಂ ಬಿರುದೆಂದೂ 'ರತ್ನಾಕರಧೀಶ್ವರಶತಕ'ಕ್ಕೂ 'ಭರತೇಶವೈಭವ'ಕ್ಕೂ ಭಾವಸಾಮ್ ವಿರುವುದರಿಂದ ರತ್ನಾಕರನೇ ಈ ಶತಕದ ಕರ್ತೃವಾಗಿರಬೇಕೆಂದೂ ಇನ್ನೊಂ ಅಭಿಪ್ರಾಯವಿದೆ. 'ತ್ರಿಲೋಕಶತಕ'ದಲ್ಲಿ ನೂರರ ಮೇಲೆ ಕಂದಪದ್ಯಗಳಿ ಇದರಲ್ಲಿ ಜೈನಮತಾನುಸಾರವಾಗಿ ಪ್ರಪಂಚಸ್ಥಿತಿ ಇಲ್ಲವೆ ಸೃಷ್ಟಿಶಾಸ್ತ್ರವನ್ನು ಹೇ ಲಾಗಿದೆ. ಸಾಮಾನ್ಯವಾಗಿ ಶೃಂಗಾರ ಭಕ್ತಿ ಜ್ಞಾನ ವೈರಾಗ್ಯ ನೀತಿ ಈ ವಿಷಯಗ ಶತಕಗಳಲ್ಲಿರುತ್ತವೆ. ಇದರಲ್ಲಿ ಜೈನಶಾಸ್ತ್ರದಲ್ಲಿಯ ಒಂದು ಅಂಗವು ಮಾ ನಿರೂಪಿತವಾಗಿದೆ. ಜ್ಞಾನವಿಭಾಗದಲ್ಲಿ ಇದು ಬರುವುದೆಂದು ಹೇಳಬಹುದ 'ಅಪರಾಜಿತೇಶ್ವರಶತಕ'ದಲ್ಲಿಯೂ ಅಷ್ಟೇ ಪದ್ಯಗಳಿದ್ದು ಅದರಲ್ಲಿ ನೀತಿ, ವೈರಾಗ ಆತ್ಮವಿಚಾರಗಳು ಅಡಕವಾಗಿವೆ. ಇದರಲ್ಲಿಯ ಕೆಲವು ಪದ್ಯಗಳು ತುಂಬ ಚೆನ್ನಾಗಿ 'ತನ್ಮಯನಾಗುತೆ ತಾನೆ ತನ್ನೊಳ್ಳೋಲಾಡುವ ಯೋಗಿಯೇ ಅಮೃತಭಾಗಿಯಲ ಈ ಮುಂತಾದ ಭಾವಗಳಲ್ಲಿ ರತ್ನಾಕರನ ಆತ್ಮಾನುಭವವೇ ವರ್ಣಿತವಾದಂತಿ 'ಅಣ್ಣನ ಪದಗಳು' ಎಂಬ ಹೆಸರಿನಲ್ಲಿ ಅವನ ಹಾಡುಗಳಿದ್ದು ನೀತಿತತ್ವಬೋಧ ವಾಗಿವೆ. ಇವುಗಳ ಸಂಕಲನ ಮತ್ತು ಅಭ್ಯಾಸ ಆಗುವುದಗತ್ಯ. ಶರಣರೂ ದಾಸ ಒದವಿಸಿದ ಗೀತವಾಙ್ಮಯಕ್ಕೆ ರತ್ನಾಕರನು ಸಲ್ಲಿಸಿದ ಕಾಣಿಕೆ ಎಂಥದೆಂಬು ಅದರಿಂದ ತಿಳಿಯುತ್ತದೆ.

ರತ್ನಾಕರಸಿದ್ಧನ ಸಿದ್ಧಹಸ್ತದಿಂದ ನಿರ್ಮಾಣವಾದ ಶ್ರೇಷ್ಠಕೃತಿಯೆಂ 'ಭರತೇಶವೈಭವ.' ಜಿನಸೇನನ 'ಪೂರ್ವಪುರಾಣ'ವೆಂಬ ಸಂಸ್ಕೃತಗ್ರಂಥ, ಆ ಪಂಪನ 'ಆದಿಪುರಾಣ', ಚಾವುಂಡರಾಯನ 'ಚಾವುಂಡರಾಯಪುರಾಣ' ಮೊದಲಾದ ಕನ್ನಡಗ್ರಂಥಗಳಲ್ಲಿ ಮೊದಲನೆಯ ತೀರ್ಥಂಕರನಾದ ಪುರುದೇ ಚರಿತ್ರೆಯಲ್ಲಿ ಅವನ ಮಕ್ಕಳಾದ ಭರತಚಕ್ರವರ್ತಿ ಮತ್ತು ಬಾಹುಬಲಿಗಳ ಚ ಬಂದಿದೆ. 'ಆದರೂ ಭರತನನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡು ವಿಸ್ತಾರ ಪ್ರತಿಪಾದಿಸಿದ ಕೀರ್ತಿಯು ರತ್ನಾಕರವರ್ಣಿಗೆ ನಿರ್ವಿವಾದವಾಗಿ ಸೇರತಕ್ಕದು

1 ತ. ಸು. ಶಾಮರಾವ: ಭರತೇಶವೈಭವ (ಪ್ರ.ಕ., ೨೨–೧, ಪು. ೨೯)

ಯೇ ಅಲ್ಲ, ಯಾವ ಮೊದಲಿನ ಗ್ರಂಥಗಳಲ್ಲಿಯೂ ಕಾಣದೊರೆಯದ ಬಗೆಯಲ್ಲಿ ರಸಮಯಕ್ಕೆ ಬಹುಶಃ ಬಾಧೆತರದಂತೆ ಭರತೇಶನ ಭವ್ಯಮೂರ್ತಿಕಲ್ಪನೆ, ಆದರ್ಶ-ವನದ ಸಂಪೂರ್ಣಸಮನ್ವಯಸಾಧನೆ ಇವು ಒಂದು ಸಾಕಾರಸ್ವಪ್ನದಂತೆ ಈ ವ್ಯದಲ್ಲಿ ಕಂಡುಬರುತ್ತವೆ. ಯಾವುದೇ ಆಕರಕ್ಕೆ ಅವನು ಎಷ್ಟೇ ಋಣಿಯಾಗಿರಲಿ ುಗಳನ್ನು ಮೀರಿದ ಅದ್ಭುತದರ್ಶನದಿಂದ, ಚಿತ್ರಸಂಪತ್ತಿಯಿಂದ ಅವನ ಕೃತಿ ನ್ಯವಾಗಿದೆ. ಎಂಬತ್ತು ಸಂಧಿ ಮತ್ತು ಸುಮಾರು ಹತ್ತುಸಾವಿರ ಸಾಂಗತ್ಯಪದ್ಯ-ಳ್ಳ ಈ ಕಾವ್ಯವನ್ನು ಅವನು ಒಂಬತ್ತು ತಿಂಗಳಲ್ಲಿಯೆ ಬರೆದು ಮುಗಿಸಿದ್ದು ರ್ಯವೇ ಸರಿ. ಅದಕ್ಕಿಂತ ಹೆಚ್ಚಾಗಿ ಇಷ್ಟು ಗಾತ್ರದಲ್ಲಿ ಉನ್ನತಜೀವನದರ್ಶನ-ನ್ನು ತರತರವಾಗಿ ಎರಕಹೊಯ್ದ ಅಸಾಧಾರಣ ಪ್ರತಿಭೆಯ ಕಾರ್ಯ ಒಂದು ಾಡಕ್ಕೆ ಸಮಾನವಾಗಿದೆ. ದೇವಚಂದ್ರನ ಕಾಲದಲ್ಲಿ ಇದು ೮೪ ಸಂಧಿಗಳಲ್ಲಿರ-ಕು. ಕೊನೆಯ ನಾಲ್ಕು ಶೋಭನಸಂಧಿಗಳಾಗಿದ್ದ ಕಾರಣ ಅವನ್ನು ಬರೆದಿಡುವ ುಪಾಟ ತಪ್ಪಿ ನಷ್ಟವಾಗಿ ಹೋಗಿದೆ ಎಂಬ ಗ್ರಹಿಕೆಯಿದೆ. ಆದರೆ ಇತ್ತೀಚೆ ೋಭನಸಂಧಿಗಳು ದೊರೆತು ಅಚ್ಚಾಗಿವೆ. ಅವು ಭರತೇಶ್ವರನ ಪೂರ್ವಕಥೆಗೆ ಬಂಧಿಸಿದ್ದು ಕಡೆಯ ಸಂಧಿಗಳಾಗಲಾರವು. ಅವುಗಳ ಸರಣಿ ರತ್ನಾಕರವರ್ಣಿಯ-ದು ತೋರುವುದಿಲ್ಲ. ಅವನ್ನು ಇನ್ನೊಬ್ಬ ಕವಿ ಬರೆದು ದೇವಚಂದ್ರನ ಕಾಲದಷ್ಟು ಾತ್ತಿಗೆ ಸೇರಿಸಿರಬಹುದು. ಅಂತೇ ಒಟ್ಟು ೮೪ ಸಂಧಿಗಳೆಂದು ಅವನು ಹೇಳಿದಂತಿದೆ.

'ಭರತೇಶವೈಭವ'ದ ಕಥೆಯನ್ನು ಸ್ವಲ್ಪದರಲ್ಲಿ ಕವಿ ಹೀಗೆ ಹೇಳುತ್ತಾನೆ:

'ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾ- |
ರಿಣಿ ಮೆಚ್ಚೆ ಜಿನಯೋಗಿಯಾಗಿ |
ಕ್ಷಣಕೆ ಕರ್ಮವ ಸುಟ್ಟು ಜಿನನಾದ ಭೂಭೂಜಾ- |
ಗ್ರಣಿಯ ವೈಭವವ ಲಾಲಿಸಿರೊ ||

ಆಗಮುವಧ್ಯಾತ್ಮವಳವಟ್ಟು ಶೃಂಗಾರ- |
ತ್ಯಾಗಭೋಗದ ಮೋಡಿ ಮೆರೆಯೆ |
ಭೋಗಿಯೋಗಿಗಳೆದೆ ಜುಮ್ಮುಜುಮ್ಮೆನೆ ನೇಮು- |
ದಾಗಿ ಸೊಲ್ಲಿಸುವೆನಾಲಿಸಿರೊ ||' (೧–೧೩, ೧೪)

ಈ ಕಾವ್ಯದಲ್ಲಿ ವರ್ಣಿತವಾದ ಭರತೇಶ್ವರನ ವೈಭವವು ಜಿನಯೋಗಿಯಾದ ಚಕ್ರ-ರ್ತಿಯ ಸಮ್ಯಕ್‌ಜೀವನದ, ತ್ಯಾಗಭೋಗಗಳ ಸಮನ್ವಯವೈಭವವೆಂಬುದು ಷ್ಟವಾಗಿದೆ. ಹಾಗೆ ನೋಡಿದರೆ ಇಷ್ಟು ದೊಡ್ಡ ಕಾವ್ಯಕ್ಕೆ ಬೇಕಾಗುವಷ್ಟು ಕಥಾ-ಸ್ತರವು ಇದರಲ್ಲಿಲ್ಲ. ಇದು ಹೆಚ್ಚಾಗಿ ಭರತೇಶನಂಥ ಸಿದ್ಧಪುರುಷನ ಜೀವನ-ರ್ಯೆಯ ಬಿತ್ತರಣೆಯಾಗಿದೆ. ಆದಿತೀರ್ಥಂಕರನ ಹಿರಿಯ ಮಗನಾದ ಭರತೇಶ್ವರನು

ತನ್ನ ನಿರಾತಂಕವಾದ ಸಮನ್ವಯಪೂರ್ಣವಾದ ರಸಿಕಜೀವನವನ್ನು ತೊಂಬತ್ತಾರು ಸಾವಿರ ರಾಣಿಯರೊಂದಿಗೆ ನಡೆಸುತ್ತಿರಲು ದಿಗ್ವಿಜಯಕ್ಕೆ ಹೊರಡಬೇಕೆಂದು ಸೂಚಿಸುವ ಚಕ್ರರತ್ನವು ಆಯುಧಾಗಾರದಲ್ಲಿ ಉದಯಿಸಿತು. ಅವನು ದಿಗ್ವಿಜಯಕ್ಕೆ ಹೊರಟು ಹೋದಲ್ಲಿ ಗೆಲವು ಪಡೆದು ಸ್ತ್ರೀರತ್ನಗಳನ್ನೂ ಕಪ್ಪಕಾಣಿಕೆಗಳನ್ನೂ ಪಡೆದಸು ಆರು ಖಂಡಗಳನ್ನು ಸಾಧಿಸಿ ಚಕ್ರವರ್ತಿಯಾಗಿ ಅವನು ಅಯೋಧ್ಯೆಗೆ ಹಿಂದಿರುಗು ತ್ತಿರುವಾಗ ಅವನ ತಮ್ಮ ಬಾಹುಬಲಿಯ ರಾಜಧಾನಿಯಾದ ಪೌದನಪುರದ ಬಾಗಿ ಮುಂದೆ ಆ ಚಕ್ರ ನಿಲ್ಲುತ್ತದೆ. ಬಾಹುಬಲಿ ಅವನೊಡನೆ ಸೆಣಸಲು ಹೊರಬರುತ್ತಾನೆ ಅವನೊಡನೆ ಹೋರಾಡದೆ ಭರತನು ಮಾತಿನಿಂದ ಅವನ ಮನವೊಲಿಸಲಾಗಿ, ಅವ ವಿರಕ್ತನಾಗಿ ದೀಕ್ಷೆಪಡೆದು ತಪೋನಿರತನಾಗುತ್ತಾನೆ. ಹೀಗೆ ಅವನ ತಾಯಿ, ಅವ ಮಕ್ಕಳು ಸಂನ್ಯಾಸಪಡೆಯುತ್ತಾರೆ. ಭರತನು ತಂದೆಯ ಬಳಿ ಹೋಗಿ ಪೂಜೆಮಾ ಮುಂದೊಮ್ಮೆ ತಾನೂ ವೈರಾಗ್ಯತಾಳಿ ತಪಸ್ಸಿನಿಂದ ಕೈವಲ್ಯಪದವಿಯನ್ನು ಪಡೆಯು ತ್ತಾನೆ. ಈ ಕಥೆ ಬಹುಭಾಗದಲ್ಲಿ ಯಥಾಮೂಲವಾಗಿದೆ. ಆದರೆ ಚಕ್ರವರ್ತಿ ಯಾಗುವುದಕ್ಕೆ ಮುಂಚೆ ಭರತನ ಜೀವನ ಮತ್ತು ವ್ಯಕ್ತಿತ್ವಗಳು ಹೇಗಿದ್ದುವೆಂಬುದನ್ ಯಾವ ಮೂಲದಲ್ಲಿಯೂ ನಾವು ಪಡೆಯುವುದಿಲ್ಲ. ರತ್ನಾಕರವರ್ಣಿ ತ 'ಭೋಗವಿಜಯ'ವೆಂಬ ಮೊದಲನೆಯ ಭಾಗದಲ್ಲಿ ಇದನ್ನು ಬಿಡಿಬಿಡಿಯಾ ಚಿತ್ರಿಸಿದ್ದಾನೆ. ಇದೇ ಅವನ ಮಹಾಕವಿತ್ವಕ್ಕೆ ನಿದರ್ಶನವಾದ, ಕನ್ನಡಸಾಹಿತ್ ಪ್ರಪಂಚಕ್ಕೆ ನೂತನವಾದ ರಸಸೃಷ್ಟಿ. ಭರತೇಶನ ಜನನ-ಬಾಲ್ಯಗಳನ್ನು ಜಿನಸೇ ನಂತೆ ಬಣ್ಣಿಸದೆ ಅವನು ದೊಡ್ಡವನಾಗಿ ಒಡ್ಡೋಲಗದಲ್ಲಿ ಕುಳಿತು ಅರಸನಾಗಿ ಹೇ ತೋರುತ್ತಿದ್ದನೆಂಬ ಬಣ್ಣನೆಯಿಂದಲೇ ರತ್ನಾಕರನು ತನ್ನ ಕಾವ್ಯವನ್ನು ಮೊದಲ ಮಾಡುತ್ತಾನೆ. ಉಳಿದ ಭಾಗಗಳಲ್ಲಿ ಮೂಲದಲ್ಲಿಲ್ಲದ ಮುಖ್ಯ ಸಂಗತಿಯೆಂದ ಭರತಬಾಹುಬಲಿಸಂದರ್ಭದಲ್ಲಿಯ ವ್ಯತ್ಯಾಸ. ಇತರ ಗ್ರಂಥಗಳಲ್ಲಿ ಬಾಹುಬ ಭರತನಿಗಿಂತ ಹೆಚ್ಚು ಸತ್ವಶಾಲಿಯಾಗಿ ಅವನನ್ನು ಜಲಯುದ್ಧ-ದೃಷ್ಟಿಯುದ್ಧಗಳ ಸೋಲಿಸಿ ಸಂಸಾರಕ್ಕೆ ತಾನೇ ಹೇಸಿ ವಿರಕ್ತನಾಗುತ್ತಾನೆ. ಇಲ್ಲಿ ಮಾತ್ರ ಭರತ ಉದಾತ್ತತೆಗೆ ಭಂಗ ತರಕೂಡದೆಂದು ಯಾವುದೇ ಬಗೆಯ ಯುದ್ಧವನ್ನು ಹೂಡ ಅವನು ಬಾಹುಬಲಿಯನ್ನು ಮಾತಿನಿಂದ ಮನವೊಲಿಸಿದನೆಂದು ಬಂದಿದೆ. ಮೂ ವನ್ನು ಅನುಸರಿಸುವಾಗ ಭರತೇಶ್ವರನ ಉನ್ನತವ್ಯಕ್ತಿತ್ವಕ್ಕೆ ಬಾಧೆಯುಂಟುಮಾಡು ಸಂನಿವೇಶ ಬಂದರೆ ಅದನ್ನು ಸ್ವತಂತ್ರಬುದ್ಧಿಯಿಂದ ಬದಲಿಸಿಕೊಳ್ಳುವ ದೃ ರತ್ನಾಕರನಿಗೆ ಇತ್ತೆಂಬುದು ಇದರಿಂದ ವಿಶದವಾಗುತ್ತದೆ.

ಸ್ವಲ್ಪವಾದ ಕಥಾನಕದ ನಿಮಿತ್ತ ಮಾಡಿಕೊಂಡು ವರ್ಣನೆ-ಬೋಧನೆಗಳನ ವಿಸ್ತಾರವಾಗಿ ತಂದು ಮಹಾಕಾವ್ಯರಚನೆ ಮಾಡುವುದು ಕನ್ನಡಕವಿಗಳ ಕುಲಧರ್ಮವ ಆಗಿದೆ. ರತ್ನಾಕರವರ್ಣಿ ಇದಕ್ಕೆ ಅಪವಾದವಾಗಿಲ್ಲವಾದರೂ ಇವನ ಬರೆವಣಿಗೆಯ ಬಗೆ ಹಿಂದಿನ ಕವಿಗಳ ಬಗೆಗೆ ಅಪವಾದವಾಗಿದೆ. ಹದಿನೆಂಟು ವರ್ಣನೆಗಳ ನಿಯಮ

ಲಿಸಲು ಇಲ್ಲವೆ ವರ್ಣನೆಗಾಗಿ ವರ್ಣನೆ ತರಲು ಇವನು ಪ್ರವೃತ್ತನಾಗಿಲ್ಲ. ಾಸಂದರ್ಭದಲ್ಲಿ ಕಥಾನಾಯಕನ ಸ್ವಭಾವಚಿತ್ರಣಕ್ಕೆ ಪೋಷಕವಾದ ವರ್ಣನೆ- ನ್ನು ಮಾತ್ರ ಬಹುಶಃ ಬಿತ್ತರಿಸಿದ್ದಾನೆ. ತತ್ವನಿರೂಪಣೆಯಲ್ಲಿಯೂ ಅದೇ ಹೇತು ಲವಾಗಿದೆ. ಭರತೇಶ್ವರನ ವ್ಯಕ್ತಿತ್ವದ ಸಂಪೂರ್ಣವಾದ ಚಿತ್ರಣಕ್ಕೆ ಉಳಿದೆಲ್ಲ ಕರಗಳು ಪರಿವಾರವಾಗಿ ಬಂದಿವೆ. ಕಥಾರಚನೆಯಲ್ಲಿ ಇದರಿಂದ ಏಕಸೂತ್ರತೆ ಂಟಾಗಿದೆ. ಕಥೆಯ ಹೆಚ್ಚುಭಾಗದಲ್ಲಿ ಗತಿ ಮಂದವಾಗಿದೆ, ಪ್ರಗತಿ ಇಲ್ಲವೇ ಇಲ್ಲ ಸ್ತುವಷ್ಟು ಸಾವಕಾಶವಾಗಿದೆ. ಎಲ್ಲಿಯೂ ವಿಶೇಷವಾದ ತಿಕ್ಕಾಟವಿಲ್ಲ, ತೊಳಲಾಟ ಲ್ಲ. ಭರತೇಶನಿದ್ದಲ್ಲಿ ಗೆಲವು, ನಲಿವು. ಅವನ ಮೇಲೇರಿ ಹೋದವರು ತಾವೇ ದುಬಿಡುತ್ತಾರೆ. ಈ ಅಖಂಡವಾದ ಸುಸೂತ್ರತೆ ಕಥಾವಸ್ತುವಿಗೆ ಚುರುಕನ್ನೂ ಯನ್ನೂ ಕೊಡುವಂಥದಲ್ಲ. ಆದರೆ ರತ್ನಾಕರನ ಕೈಯಲ್ಲಿ ಮಣ್ಣು ಹೊನ್ನಾಗಿದೆ. ು ಬರೀ ಕೈವಾಡವಲ್ಲ, ಆಂತರಿಕಶ್ರದ್ಧೆಯ ಮತ್ತು ಸ್ವಾನುಭಾವದ ವಾಣಿಯಾಗಿ ರಸೂಸಿದ ಅಪೂರ್ವ ಪ್ರತಿಭೆಯ ಪವಾಡ. 'ಭರತೇಶವೈಭವ'ವು ರತ್ನಾಕರನ ವಗೀತೆಯಾಗಿದೆ, ಅವನ ದರ್ಶನಪ್ರತೀಕವಾಗಿದೆ. ಒಂದು ಶ್ರೇಷ್ಠವಾದ ರ್ಶನಿಕಕಾವ್ಯವೆಂದಿದನ್ನು ನೋಡಿದಾಗ ಇದರ ರಚನೆಯ ಸ್ವಾರಸ್ಯ ಮುಂದಟ್ಟಾಗು- ದೆ. ಇದರಲ್ಲಿ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿ- ಜಯ, ಮೋಕ್ಷವಿಜಯ ಎಂಬ ಐದು ಭಾಗಗಳಿವೆ. ಇವನ್ನು ಕವಿ ಪಂಚಕಲ್ಯಾಣ- ಂದು ಕರೆದಿದ್ದಾನೆ. ತೀರ್ಥಂಕರನ ಕೊನೆಯ ಜನ್ಮದಲ್ಲಿ ಪಂಚಕಲ್ಯಾಣಗಳನ್ನು ಣ್ಣಿಸುವುದುಂಟು. ಇಲ್ಲಿ ತೀರ್ಥಂಕರನ ಮಗನಾದ ಭರತೇಶ್ವರನ ಜೀವನದಲ್ಲಿಯ ಚಕಲ್ಯಾಣಗಳನ್ನು ಬೇರೆ ಅರ್ಥದಲ್ಲಿ ಬಣ್ಣಿಸಿರುವುದು ಹೊಸತಾಗಿದೆ. ಎರಡೂ ಲ್ಯಾಣಗಳಲ್ಲಿ ಸಾದೃಶ್ಯವೇನೂ ಕಾಣುವುದಿಲ್ಲ. ಅದನ್ನು ಕಾಣುವ ಪ್ರಯತ್ನ ಶಸ್ವಿಯಾಗಲಾರದು. 'ತೀರ್ಥಂಕರನ ಜೀವನಚರಿತ್ರೆಯಲ್ಲಿ ಆತನ ಹಿಂದಿನ ನ್ಮದ ಸುಖಭೋಗಗಳನ್ನು ತೋರಿಸುವುದು ಪ್ರಥಮಕಲ್ಯಾಣ'[1] ಎಂಬುದು ಯಲ್ಲ. ಗರ್ಭಾವತರಣ ಎಂದು ಪ್ರಥಮಕಲ್ಯಾಣಕ್ಕೆ ಹೇಳುತ್ತಾರೆ, ಕೊನೆಯ ನ್ಮದಲ್ಲಿ ತಾಯಿಯಾಗುವವಳ ಗರ್ಭದಲ್ಲಿ ಅವತರಣವೆಂದದಕ್ಕೆ ಅರ್ಥ. ಹಿಂದಿನ ನ್ಮದ ಸುಖಭೋಗಗಳಿಗೆ ಪ್ರಥಮಕಲ್ಯಾಣದ ಸಂಬಂಧವಿಲ್ಲ. ಹೀಗಿರುವಾಗ ರತ್ನಾಕರನು ಭರತನ ಭೋಗಜೀವನವನ್ನು 'ಭೋಗವಿಜಯ'ದಲ್ಲಿ ಚಿತ್ರಿಸಿ ಇದನ್ನು ಧಿಸಿದ್ದಾನೆ. ಆದರೆ ತೀರ್ಥಂಕರನು ಭೋಗಿಸುವುದು ಸ್ವರ್ಗದಲ್ಲಿಯಾದರೆ ಚಕ್ರಿಯು ೋಗಿಸುವುದು ಭೂಲೋಕದಲ್ಲಿ'[1] ಈ ಮುಂತಾದ ವಾಕ್ಯಗಳಲ್ಲಿ ವಿವರಣೆಯ ಾತುರ್ಯವಿದೆಯೆಂದು ಮಾತ್ರ ಎನ್ನಬೇಕಾಗುತ್ತದೆ.

---

1 ತ. ಸು. ಶಾಮರಾವ: ಭರತೇಶವೈಭವ (ಪ್ರ.ಕ., ೨೨-೧, ಪು. ೩೩)

ಭರತೇಶ್ವರನೇ ಈ ಕಾವ್ಯದ ನಾಯಕ, ರತ್ನಾಕರನು ಕಂಡ ಆದರ್ಶಮಾನವ ಸ್ವಪ್ನರೂಪಕ. ಜನಕ–ರಾಮಚಂದ್ರನಂಥ ರಾಜರ್ಷಿ–ಪುರುಷೋತ್ತಮರಲ್ಲಿ ಭಾರತೀಯ ಕವಿಗಳು ಇಂಥ ಆದರ್ಶ ಮಾನವನ ಕನಸನ್ನು ಕಂಡಿದ್ದಾರೆ, ಕೃತಿಗಳ ಕಾಣಿಸಿದ್ದಾರೆ. ಭಾಗವತದಲ್ಲಿ ಜಡಭರತನ ಚಿತ್ರವೂ ಇದೆ. ರತ್ನಾಕರನ ಕಾಣ್ಕೆ ದೃಷ್ಟಿಯಿಂದ ಹೊಸದೇನೂ ಅಲ್ಲ. ಆದರೆ ಜೈನತತ್ವದ ಕನ್ನಡಿಯಲ್ಲಿ ವಿಶ್ವದರ್ಶನ ಚಿತ್ರವನ್ನು ಕಂಡು ಅದಕ್ಕೆ ಅನುಗುಣವಾಗಿ ಆದರ್ಶಮಾನವನ ಸಮನ್ವಯ ಸಮ್ಯಕ್ತ್ವವನ್ನು ಬಣ್ಣಿಸುವುದರಲ್ಲಿ ರತ್ನಾಕರನ ಸ್ವಂತಿಕೆಯಿದೆ. ಅವನ ಭರತೇಶ ರಾಜಯೋಗಿ, ಜಿನಯೋಗಿ, ತ್ಯಾಗಿ–ಭೋಗಿ, ರಸಿಕ–ವಿರಕ್ತ. ಇದನ್ನು ಎದೆದುಂ ರಸವುಕ್ಕಿ ವಿವರವಿವರಗಳಲ್ಲಿ ರತ್ನಾಕರನು ಚಿತ್ರಿಸಿದ್ದಾನೆ. ಅವನು ಕಂಡ ಕನಸ ಕನಸಲ್ಲ, ನನಸೇ ಎಂದು ಭಾಸವಾಗುವಂತೆ ಬಣ್ಣಿಸಿದ್ದಾನೆ. ಎಲ್ಲ ಸಂಧಿಗಳೂ ಎ ಪದ್ಯಗಳೂ ಈ ಚಿತ್ರಣದ ಸ್ಥಾಯಿಗೆ ಸಹಾಯಕಸಾಮಗ್ರಿಯಾಗಿವೆ. ಆರಂಭ ದಿಂದಲೂ ಭರತೇಶನು ಅಲೌಕಿಕವ್ಯಕ್ತಿಯೆಂಬುದನ್ನು ಕವಿ ತಿಳಿಸುತ್ತಾನೆ :

> ' ಹಲವು ಮಾತೇನೊಂದ ಪೇಳ್ವೆನಾ ಕ್ಷತ್ರಿಯ- ।
> ಕುಲರತ್ನಗಾಹಾರವುಂಟು ।
> ಮಲವಿಲ್ಲ ಮೂತ್ರವಿಲ್ಲೆಂದರೀ ಲೋಕದ ।
> ಬಳಕೆಗಾರರ ಪೇಳ್ವ ತೆರನೆ ॥ ' (೧–೨೩)

ಅವನು ಕೋಮಲಾಂಗ, ಹೇಮವರ್ಣ, ಆಮೋದವುಕ್ಕುವ ಜವ್ವನಿಗನು. ಅವನಿ ಒಂದಲ್ಲ ಎರಡಲ್ಲ, ತೊಂಬತ್ತಾರುಸಾವಿರ ಹೆಂಡಂದಿರು. ಈ ಬಗೆಯ ಅಲೌಕಿಕ ಯಿಂದ ಅವನು ಸಾಮಾನ್ಯಮಾನವನಿಂದ ಬೇರೆಯಾಗುತ್ತಾನೆ, ದೂರವಾಗುತ್ತಾ ಅವನಲ್ಲಿ ನಮ್ಮ ಆಸಕ್ತಿ ಕುಗ್ಗುತ್ತದೆ ಎಂದು ತೋರಬಹುದು. ಆದರೆ ದಾರ್ಶನಿ ಕಾವ್ಯದ ರೀತಿಯನ್ನು ನಾವು ತಿಳಿದಿರಬೇಕು. ಆದರ್ಶಮಾನವನು ಭರತೇಶನ ದೇಹಪಡೆದವನಿರಬೇಕು, ಹೆಂಡಿರನ್ನು ಮಾಡಿಕೊಂಡಿರಬೇಕು ಎಂದಲ್ಲ. ಅ ಅವನು ಅತಿಮಾನವನಾಗುತ್ತಾನೆ, ಆಗಬೇಕು ಎಂಬುದೇ ಅದರ ಆಶಯ.

ತನ್ನ ಪ್ರತಿನಿತ್ಯದ ಪ್ರತಿಯೊಂದು ಕಾರ್ಯವಿವರದಲ್ಲಿ ಮಾತುಕತೆಯ ಭರತೇಶನು ಯಾವ ಎತ್ತರದ ನೆಲೆಯಲ್ಲಿರುತ್ತಾನೆ; ಅರಸು, ಪತಿ, ಸುತ, ಅ ಗೆಳೆಯ, ಭಕ್ತ ಮುಂತಾದ ಸ್ಥಾನಗಳಲ್ಲಿ ಅವನ ನಡತೆ ಹೇಗೆ ಅವನ ಚಿತ್ತಸಾಮ ಮತ್ತು ಸಮನ್ವಯದ ಗುರುತಾಗಿರುತ್ತದೆ ಎಂಬುದನ್ನು ರತ್ನಾಕರನು ಸಹಜಸಂದ ಗಳಲ್ಲಿ ತೋರಿಸಿದ್ದಾನೆ. ಮೊದಲು ಅವನ ಸೌಂದರ್ಯ ಮತ್ತು ಕ್ಷತ್ರತೇಜವ ವರ್ಣಿಸಿ ಆಮೇಲೆ ಅವನ ಗಾಂಭೀರ್ಯವನ್ನು ಹೀಗೆ ಚಿತ್ರಿಸಿದ್ದಾನೆ:

'ನೋಡುವ ಠೀವಿ ಹತ್ತೆಂಟಕೊಮ್ಮೊಮ್ಮೆ ಮಾ- |
ತಾಡುವ ನುಡಿಯ ವಿಡಾಯಾ |
ಪಾಡರಿದೋಲಗಗೊಟ್ಟಾಚೆ ಶಿರವನ- |
ಲ್ಲಾಡಿಸುತಿಹನು ನೋಳ್ಪವರಾ ||' (೧-೩೭)

ಏಕೆ ನುಡಿಯನೋ ಇನ್ನೊಮ್ಮೆಯೆಂಬಂತೊಂದು ತೂಕದೊಳೆಸೆದನಾ ರಾಯಾ'
೧-೩೮)

'ಗಂಭೀರವೆಂಬುದು ಸರ್ವಗುಣಗಳ |
ಅಂಭೋಧಿಯಾದಿಯಾಗಿಹುದು |
ಗಂಭೀರ ಬೇಕು ರಾಜಗು ರಾಜಯೋಗಿಗು |
ಗಂಭೀರ ಕೆಟ್ಟರೇನುಂಟು ||' (೧-೩೯)

ರತೇಶನ ಓಲಗದ ಕವಿ ಅವನನ್ನು ಬಾಯ್ತುಂಬ ಹೊಗಳುತ್ತ 'ಭೋಗದೊಳಿದ್ದು
ೋಗವ ಮಾಡಿ ಭವಮುಕ್ತರಾಗುವರಾರು ನಿನ್ನಂತೆ' (೨-೬೦)

'ವಿಷಯವಿಷವನುಂಡು ದಕ್ಕಿಸಬಲ್ಲ ನಿ- |
ರ್ವಿಷಸಿದ್ಧಾ ನೀನವನೀಶ |
ವಿಷಮಚಿತ್ತವನಾತ್ಮನೊಳು ನಿಲಿಸಿದ ರಾಜ- |
ಋಷಿಯಲ್ತೆ ರಾಜನೆ ನೀನು ||'

ಂದು ಅವನ ವ್ಯಕ್ತಿತ್ವದ ಜೀವಾಳವನ್ನು ಗುರುತಿಸುತ್ತಾನೆ. ಓಲಗ ಹರೆಯಲೊಡನೆ ಅವನು ತನ್ನ 'ಭೂರಿವಿಡಾಯುವ ಬಿಟ್ಟು ದ್ವಾರಾವಲೋಕನಕೆ ಅಡಿಯಿಟ್ಟನು ಅಂಗ- ೃಂಗಾರವೆರಸಿ ಭಕ್ತಿಯಿಂದ' (೩-೩). ಯಾಕೆಂದರೆ ಮುನಿಗಳನ್ನು ಭುಕ್ತಿಗೆ ಬರ- ಮಾಡಿಕೊಳ್ಳುವ ಸಮಯವದು. ರಾಜಚಿಹ್ನಗಳನ್ನೆಲ್ಲ ಕಳೆದಿರಿಸಿ, 'ಒಡನಿದ್ದ ಸೇವಕ- ೆಲ್ಲರ ತೊಲಗಿಸಿ' ಅವನು ಮಡಿಮುಟ್ಟ ದೋತ್ರವನುಟ್ಟು ನಡೆದನಂತೆ. ಕ್ಷಣದ ಂದೆ ರಾಜನಾಗಿದ್ದವನು ಈಗ ಭಕ್ತನಾದನು, ನಮ್ರತೆಯ ಮೂರ್ತಿಯಾದನು.

'ಲೋಕವೆಲ್ಲೆನ್ನನೋಲೈಸುತಿರ್ದರು ನಾನು |
ಲೋಕವ ಬೆರಸೆನೆಂಬುದನು |
ಲೋಕಕರಿಕೆಮಾಡಲೆಂದು ನಿಂದಂತೆ ತಾ- |
ನೇಕಾಕಿಯಾಗಿರ್ದನಾಗ ||' (೩-೩೧)

ಮುನಿಗಳ ನಿರೀಕ್ಷೆ, ಮುನಿಗಳ ದರ್ಶನವಾದೊಡನೆ ತೋರಿದ ಭಯಭಕ್ತಿವಿನಯ ಇವುಗಳನ್ನು ಬಿಡಿಬಿಡಿಯಾಗಿ ಚಿತ್ರಿಸುತ್ತ ರತ್ನಾಕರವರ್ಣಿ ತನ್ನ ನಾಯಕನ ವ್ಯಕ್ತಿತ್ವದ

ಈ ಅಂಗವನ್ನು ಸೊಗಸಾಗಿ ನಿರೂಪಿಸಿದ್ದಾನೆ. ಆರೋಗಣೆಸಂಧಿಯಿಂದ ಮುಂದೆ ಹಲವಾರು ಸಂಧಿಗಳಲ್ಲಿ ಅವನ ರಾಣೀವಾಸದೊಡನೆ ಊಟ, ಬೇಟ, ಸಂಗೀತ–ನೃತ್ಯ, ವಿರಸ–ಸರಸ ಇವೆಲ್ಲವೂ ಉಜ್ವಲವಾದ ವರ್ಣನೆಯ ವಿಷಯವಾಗಿ ಅಲೌಕಿಕರಸಿಕತೆಯನ್ನು ಇದಿರುನಿಲ್ಲಿಸುತ್ತವೆ. ಅರಸಿಯರು ಅವನ ಆರೋಗಣೆಗೆಂದು ಎಲ್ಲವನ್ನು ಬಡಿಸಿದ ಮೇಲೆ

‘ ಶಾಂತಭಾವದೊಳು ಕಣ್ಮುಚ್ಚಿ ನೆನಹು ಲೋ- |
ಕಾಂತಕೆ ನಡಿಸಿ ಸಿದ್ಧರನು |
ಅಂತರಂಗಕೆ ತಂದು ಪೂಜಿಸಿ ಬೀಳ್ಕೊಟ್ಟು |
ಕಂತುಸಂನಿಭನು ಕಣ್ದೆರೆದಾ ॥ ’ (೪–೮೬)

‘ ಕಂಗಳಿಂದನ್ನವ ನೋಡಿ ಜ್ಞಾನದೊಳಂತರಂಗದೊಳಾತ್ಮನ ನೋಡಿ ತುಂಗಭಾವದೊಳನ್ನಪಾನವ ಹಂಸನಾಥಂಗೆ ಸಮರ್ಪಣೆಗೈದಾ ’ (೪–೮೭). ಭೋಜನಮಾಡುವಾಗಲೂ ಅದೇ ಸಮರ್ಪಣಭಾವ. ಭೋಜನಾಂತರದಲ್ಲಿ ಉಳಿದವರಿಗೆ ಬಡಿಸಿ ನೀವೆಂದು ‘ ಯುವತಿಯರಿಗೆ ಸನ್ನೆಮಾಡಿ ಕಣ್ಮುಚ್ಚಿ ಮಾನವಪತಿ ಯೋಗದೊಳಿದ್ದಾ ’ (೪–೧೧೨). ಉಪ್ಪರಿಗೆ ಸಂಧಿಯಲ್ಲಿ ಅರಸಿಯರು ಒಬ್ಬೊಬ್ಬರಾಗಿ ಬಂದು ತಮ್ಮ ನಲ್ಗಾಣಿಕೆಗಳನ್ನು ಭರತೇಶನಿಗೆ ಕೊಡುತ್ತಾರೆ. ಹಾಡು ಹೊಮ್ಮುತ್ತದೆ, ಶೃಂಗಾರಶರಧಿ ಉಕ್ಕುತ್ತದೆ. ಆಗ

‘ ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ |
ಸೊಕ್ಕಿದಂತಿಹನು ಸೊಕ್ಕಾ |
ಠಕ್ಕರಂತಿಹನು ಠಕ್ಕನಲ್ಲ **ನಿಜವ ಕ-** |
ಣ್ಣಿಕ್ಕಿ ಕಂಡವನ ಲೀಲೆಯಿದು ॥ (೫–೯೮)

ದುರ್ಗದಂತೊಮ್ಮೆ ಗ್ರಾಮೆಗಳಂತೆ ಹೂವಿನ |
ಕೂರ್ಗಣೆಯಂತಿಹನೊಮ್ಮೆ |
ಸ್ವರ್ಗವೆ ಪುರುಷನಾದಂತೆ ಹೆಂಗಳಿಗೆ ಸಂ- |
ಸರ್ಗಸುಖವ ತೋರುತಿಹನು ॥ ’ (೫–೯೯)

ಈ ಮುಂತಾಗಿ ಅವನ ವರ್ಣನೆಯಾಗುತ್ತದೆ. ರಾಜಲಾವಣ್ಯಸಂಧಿಯಲ್ಲಿ ಅಮೃತವಾಚಕನೆಂಬ ಗಿಳಿಗೆ ಅರಸಿಯೊಬ್ಬಳು ಹೇಳಿದ ಕಾವ್ಯದಲ್ಲಿ ಭರತೇಶನು ಎಲ್ಲ ಹೆಂಡಂದಿರೊಡನೆ ಸಮಾನಪ್ರೇಮದಿಂದ ಇರುವುದನ್ನು ಬಣ್ಣಿಸಲಾಗಿದೆ :

'ಅಂಬರದೊಳಗಿದ್ದ ಸೂರ್ಯನೊಬ್ಬನು ಜಲ- |
ತುಂಬಿದ ಹಲವು ಕುಂಭದೊಳು |
ಬಿಂಬಿಸುವಂತೆಲ್ಲ ಪೆಂಗಳೆದೆಯೊಳೀತ- |
ನಿಂಬುಗೊಂಡಿಹ ಪರಿಯೇನು' (೬–೩೭)

ತವರೂರ ಮರೆಯಿಸಿ ನಿದ್ರೆಯ ತೊರೆಯಿಸಿ |
ಸವಿಗಳನರಿಯಿಸಿ ನಮ್ಮ |
ದಿವರಾತ್ರಿಯೆನ್ನದೆ ಸುಖದೊಳೋಲಾಡಿಸು- |
ವವ ಗಡ ಯಾತರಿಂದಾಯ್ತು ||' (೬–೩೯)

ಧರೆಯೊಳೊಬ್ಬರನೊಮ್ಮೆ ಕಂಡು ಮತ್ತೊಮ್ಮೆ ಕಂ- |
ಡರೆ ಮೊದಲನಿತೊಪ್ಪವಿಲ್ಲ |
ಭರತೇಶ ದಿನದಿನಕೆಮ್ಮ ನೋಟ ಹೊಸ- |
ಪುರುಷನಾದ ಪರಿಯೇನು ||'

...ನ್ನಣೆಯ ಸಂಧಿಯಲ್ಲಿ ಶೃಂಗಾರಲೀಲೆ ಮುಗಿದೊಡನೆ ಹೆಂಗಳೆಯರೆಲ್ಲರು ಹೋಗು...ರೆ, ಭರತೇಶನು ಕೂಡಲೆ ಧ್ಯಾನಲೀಲನಾಗುತ್ತಾನೆ. ಅದನ್ನು ಕವಿ ಬಣ್ಣಿಸಿದ ...ಗೆ ತುಂಬ ಮೆಚ್ಚುವಂತಿದೆ.

'ಊಳಿಗವೆಂಗಳು ಕಡೆಸಾರ್ದರರಸನಾ |
ಜೋಲಿಯೆಲ್ಲವು ನಿಂದ ಮೇಲೆ |
ಕಾಲೋಚಿತಾತ್ಮಯೋಗವನೆಸಗಿದ- |
ನಾ ಲೇಸನೇನ ಬಣ್ಣಿಪೆನು || (೮–೯೮)

ಎತ್ತ ಹೋದುದೊ ಹೆಂಗಳೊಡನುಬ್ಬಿನಿಂದಿಪ್ಪ |
ಹೊತ್ತು ತಾನಾಡಿದ ಲೀಲೆ |
ಹತ್ತುಸಾವಿರ ಕಾಲ ತಪಸುಮಾಡಿದ ಮುನಿ- |
ಪೋತ್ತಮನಂತಿರ್ದನಾಗ || (೮–೧೦೦)

ದೊರೆಯಿದ್ದು ಹೋಗೆನೆ ಹೋಗಿ ಬಾರೆಂದರೆ |
ಬರುತಿಹ ಸೇವಕರಂತೆ |
ಕರಣನಾಲ್ಕಿಂದ್ರಿಯವೈದವನುಸುರಿದಂ- |
ತಿರುತಿಹವೇನ ಬಣ್ಣಿಪೆನು || (೮–೧೦೧)

ಬೇಕಾದರಾಡಿಸಿ ಗಾಳಿಪಟವನರ್ತಿ ।
ಸಾಕಾಗೆ ಸುರುಳುವನಂತೆ ।
ನೂಕಿ ಚಿತ್ತವ ಹೊರಗಾಡಿಸುವನು ತನ್ನೊ- ।
ಳೇಕವಾಗಿರಿಸುವನೊಮ್ಮೆ ॥' (೮-೧೦೨)

ಸಂನಿವೇಶದಲ್ಲಿಯ ಈ ಹೋಲಿಕೆಗಳಿಂದ ಭರತೇಶನ ಆತ್ಮವೈಭವವು ಪರಿಸ್ಫುಟವಾಗಿ
ತ್ತದೆ. ಅವನು 'ಉಂಡುಪವಾಸಿ, ಬಳಸಿ ಬ್ರಹ್ಮಚಾರಿ, ಭೂಮಂಡಲವಿದ್ದು ನಿಸ್ಸಂಗ
ಮುಂಡೆ ಬೆಳೆದು ಮನ ಬೋಳಾದ ತಪಸಿ '(೮-೧೧೧)ಯಾಗಿದ್ದನೆಂಬುದನ್ನು ಆಯ
ಸಂನಿವೇಶಗಳಲ್ಲಿ ನಾವು ಅನುಭವಿಸುತ್ತೇವೆ. ಸರಸಸಂಧಿಯಲ್ಲಿ, ಸಾಮಾನ್ಯವಾ
ಗಂಭೀರನಾದ ಭರತೇಶನು ಅರಸಿ ಕುಸುಮಾಜಿಯ ತಂಗಿ ಮಕರಂದಾಜಿಯೊಡ
ಶುಚಿಯಾದ ನಗೆಯಾಟವನ್ನು ಆಡುತ್ತಾನೆ. ಅವನ ಸರಸವು ರಸವತ್ತಾಗಿ ನಕ
ನಗಿಸುವ ನಗೆಯಾಗುತ್ತದೆ. ಇದೇ ಉತ್ತಮಸಂಸ್ಕೃತಿಯ ಕುರುಹು. ಸರಸಸಂ
ಸಂವಾದ, ಚಿತ್ರಮಾಲಿಕೆಗಳಿಂದ ರತ್ನಾಕರವರ್ಣಿಯ ವಿಶಿಷ್ಟವಾದ ಮಹೋನ್ನ
ಸಾಕ್ಷಿಯಾಗಿದೆ. ಸನ್ಮಾನಸಂಧಿ-ವೀಣಾಸಂಧಿಗಳಲ್ಲಿ ಭರತೇಶ-ಕುಸುಮಾಜಿಯ
ದಿವ್ಯಪ್ರಣಯವು ಸುರತದಲ್ಲಿ ನನೆಕೊನೆಯಾಗುತ್ತದೆ, ಸಂಗಿತದಲ್ಲಿ ಫಲಿಸುತ್ತ
ರತ್ನಾಕರವರ್ಣಿ ಈ ಭಾಗದಲ್ಲಿ ತನ್ನ ಶಿಖರವನ್ನು ಮುಟ್ಟಿದ್ದಾನೆ. ವೀಣೆ ಬಾರಿಸು
ಕುಸುಮಾಜಿ ಹಾಡಿದರೆ

'ಒಳಗುಮ್ಮಿದಾನಂದರಸ ತನ್ನ ತನುತುಂಬಿ ।
ತುಳುಕಿ ಹೊರಸೂಸುವಂತೆ ।
ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ ।
ಹೊಳೆದು ಮೋಹಿಸುತಿದ್ದುದಾಗ ॥' (೧೧-೧೨)

ರತ್ನಾಕರನಿಗೂ ಈ ಕಾವ್ಯವನ್ನು ಬರೆಯುವಾಗ 'ಒಳಗುಮ್ಮಿದಾನಂದರಸ ತ
ತನುತುಂಬಿ ತುಳುಕಿ' ಹೊರಸೂಸಿದಂತಾಗಿರಬೇಕು. ಅದಿಲ್ಲದೆ ಈ ಅದ್ಭುತಪ್ರವಾಹ
ಹರಿಯಲಾರದು. ಗಾಯನವಾಯಿತು, ಪ್ರಣಯಲೀಲೆಯಾಯಿತು. ಮತ್ತೆ ಅರಸ
ಆತ್ಮಯೋಗನಿರತನಾದನು. 'ಮರೆದನಾಗಳೆಯಿಷ್ಟುಹೊತ್ತು ನಲ್ಲಳ ಕೂಡೆ ಮೆರೆದು
ಹಳೆಮುರಹಾಯ್ತು । ಅರಿದನಾಗಳೆ ಕಂಡನಾಗಳೆ ಹಂಸನ ಕುರುಹನಾ ರಾ
ಯೋಗೀಂದ್ರಾ', 'ಸಂದು ಭೋಗದೊಳಿದ್ದು ಯೋಗಕ್ಕೆ ಸಲುವಾಗ ಹಿಂದಣ ವಾ
ಯಿಲ್ಲ । ಒಂದ ಬಿಟ್ಟೊಂದು ವಸ್ತ್ರವ ಹೊದೆಮಂತಿಹುದೆಂದು ಭಾವವಾ ನೃಪ
(೧೧-೧೩೦, ೧೩೧).

ಪಾರಣಾಸಂಧಿಯಲ್ಲಿ ಭರತೇಶನ ಮಾತೃಭಕ್ತಿಯನ್ನು ಕವಿ ಚೆನ್ನಾಗಿ ಚಿತ್ರಿ
ದ್ದಾನೆ. ಪಾರಣೆಯ ದಿನ ತಾಯಿಯಿದ್ದಲ್ಲಿಗೆ ತನ್ನ ಸತಿಯರನ್ನು ಕಳಿಸಿ ತಾ

ೂರಡುತ್ತಾನೆ. ಸೊಸೆಂದಿರು ಮೊದಲು ಬರುತ್ತಾರೆ. ಅವರೂ ಅರಸನೂ ಉಪವಾಸ-
ಾಡಿದ್ದು ಕೇಳಿ 'ನಿವಗೆ ಕೆಲಸವಿಲ್ಲ ನಿಮ್ಮಾಣ್ಮಗಾದರೆ ಸುವಿವೇಕಯೆಳ್ಳನಿತಿಲ್ಲ।
ವನಿಯನಾಳುತ ಮುನಿಯಂತೆ ನಡೆವುದಿದವಿವೇಕಿಗಳ ನಡೆಯಲ್ತೆ' (೧೯–೬೫)
ಂದು ಯಶಸ್ವತಿದೇವಿ ಲೋಕದ ಎಲ್ಲ ತಾಯಂದಿರಂತೆ ಮಾತಾಡುತ್ತಾಳೆ.
ುಪವಾಸದಲ್ಲಿ ತನ್ನ ಮಗನು ನಡೆದು ನೊಂದಪನೆಂದು ತಾನೇ ಅವನಿದ್ದಲ್ಲಿಗೆ
ೂರಡುತ್ತಾಳೆ. ಇತ್ತ ಮಗನು ಅವಳಲ್ಲಿಗೆ ಹೊರಟದ್ದಾನೆ, ಅವಳು ಬರುತ್ತಿರುವು-
ನ್ನು ನೋಡಿ ಮೋಸವಾಯ್ತು ಎನ್ನುತ್ತಾನೆ, ತನ್ನ ಕಾಂತೆಯರಿಗೆ ಬಯ್ಯುತ್ತಾನೆ.
ವರ ತಪ್ಪಲ್ಲ ಎಂದು ತಾಯಿ ಸುಧಾರಿಸಿಕೊಳ್ಳುತ್ತಾಳೆ. ತಾಯಿಗೆ ತಲೆವಾಗುತ್ತಾನೆ,
ವಳು ಹರಸುತ್ತಾಳೆ. 'ಉಪವಾಸವೇಕೆ?' ಎನ್ನುತ್ತಾಳೆ.

> 'ನರಜನ್ಮಪಡೆದಾಗ ತಾಳ್ವಷ್ಟು ವ್ರತದೊಳಾ-।
> ಚರಿಸಬೇಕೆಲ್ಲರು ತಾಯೆ।
> ಮರುಳಾಗಬಾರದು ಭೋಗಕಮ್ಮಾಜಿ ಬ-।
> ಲ್ಲರ ನಡೆಯಿಂತಲ್ತೆ ಜನನಿ॥' (೧೯–೯೮)

ಂದು ಭರತ ಹೇಳುತ್ತಾನೆ. ಆಮೇಲೆ ಎಲ್ಲರೂ ಕುಳಿತು ಪಾರಣೆಮಾಡುತ್ತಾರೆ.
ುಂದೆ,

> 'ತೂಗುಮಂಚದೊಳೊರಗಿದ ತಾಯ ಭರತೇಶ।
> ತೂಗಿದನಂದು ತೊಟ್ಟಲೊಳು।
> ರಾಗದೊಳಿಟ್ಟಾಕೆ ತೂಗಿದ ಸಾಲವ।
> ತೂಗಿ ತಿದ್ದುವನೊಯೆಂಬಂತೆ॥' (೧೯–೧೩೧)

ಾಯಮಕ್ಕಳ ಈ ಮಮತೆಯ ಮಾದರಿ ಪ್ರತಿಯೊಂದು ವಿವರದಲ್ಲಿ ಚೆಲುವಾಗಿ
ಹಜವಾಗಿ ಚಿತ್ರಗೊಂಡಿದೆ.

ಬಾಹುಬಲಿಯೊಡನೆ ಕಾಳಗಮಾಡುವ ಪ್ರಸಂಗ ಬಂದಿರಲು ಭರತೇಶನ
ತ್ವಪರೀಕ್ಷೆಯ ಕಾಲವು ಒದಗಿ ಬಂದಿತು. ರತ್ನಾಕರನಿಗೂ ಸತ್ವಪರೀಕ್ಷೆಯೆ ಅದು.
ಾಕೆಂದರೆ ಎಲ್ಲ ಕಡೆಗೆ ದಿಗ್ವಿಜಯ ಪಡೆದು ತಾನು ಅಜೇಯನೆಂಬ ಅಹಂಕಾರದಿಂದ
ುನ್ನಡೆದ ಚಕ್ರವರ್ತಿಯೆಂಬುದಾಗಿ ಭರತೇಶನನ್ನು ಎಲ್ಲ ಮೂಲಗಳು ನಿರೂಪಿಸು-
ವೆ. ಅದಕ್ಕೆ ಅನುಗುಣವಾಗಿ ಭರತನು ಬಾಹುಬಲಿಯ ಕೂಡ ಹೋರಾಡಬೇಕು.
ದರೆ ರತ್ನಾಕರನ ಭರತನು ಅಹಂಕಾರಿಯಲ್ಲ, ರಾಜಯೋಗಿ. ತಮ್ಮನೊಡನೆ
ೋರಾಟಕ್ಕೆ ನಿಲ್ಲುವುದೆಂದರೆ ಅವನ ವ್ಯಕ್ತಿಮಹತ್ವಕ್ಕೆ ಕುಂದು. ಅಂತೇ ಈ
ಪ್ರಸಂಗದಲ್ಲಿ 'ಸಾಹಸಪರರ ನೋಯಿಸಬೇಕು ಸ್ವಕುಟುಂಬದ್ರೋಹವ ಮಾಳ್ಪದು

ಗುಣವೆ', 'ಶ್ರೀಹಂಸನಾಥ ನೀನೆ ಬಲ್ಲೆಯಿದಕೆ ತಕ್ಕೂಹೆ ಯಾವುದು ಸ್ವಾಮಿ (೩೨–೪೨, ೪೩) ಎಂದು ಭರತೇಶನು ತನ್ನಷ್ಟಕ್ಕೆ ಯೋಚಿಸುತ್ತಾನೆ. ಕೊನೆ ಮನವೊಲಿಕೆಯ ಮಾತಿನಿಂದ ಬಾಹುಬಲಿಯಲ್ಲಿ ಪರಿವರ್ತನವುಂಟುಮಾಡುತ್ತಾನೆ ಅಹಿಂಸೆಯ ತತ್ವಕ್ಕೆ ಸರಿಯಾಗಿ, ಅವನ ಉದಾತ್ತಭೂಮಿಕೆಗೆ ಸುಸಂಗತವಾ ಈ ಸಂಗತಿ ನಡೆಯುತ್ತದೆ.

'ಮನಸಿಜ ಕೇಳಣ್ಣ ನಿನಗೆನಗಿಂದು ದು- |
ರ್ಮನದಿಂದ ಜಗಳವಪ್ಪುದಕೆ |
ಘನವೇನು ಹೇಳು ನಿಷ್ಕಾರಣಕದನವ |
ಜನಪರೆಸಗುವರೆಯೆಂದಾ ॥ (೩೨–೭೦)

ಈ ಸಿರಿಯನು ನಾನು ಪುಣ್ಯದ ಫಲವೆಂದು- |
ದಾಸೀನದೊಳು ನೋಡುತಿಹೆನು |
ಆಸೆಯಿಲ್ಲೆನಗೆ ನೀನೊಪ್ಪುಗೊಳ್ಳೆಂದಣ |
ಭೂಸುದತೀಶ ನೀನಲ್ತೆ ॥' (೩೨–೧೦೫)

ಇಂಥ ಸಮಂಜಸ ಮಾತಿಗೆ ಬಾಹುಬಲಿ ಒಲಿದನು.

'ಗರುಡಮಂತ್ರಕೆ ವಿಷವಿಳಿಪಂತೆ ಭರತಭೂ- |
ವರನ ವಾಕ್ಯವ ಕೇಳಲಾಗಿ |
ಜರಿಜರಿದಂಗಜಗೆತ್ತಿದ ಕೋಪ ಪೈ- |
ಸರಿಸಿತು ಹೃದಯ ತಂಪಾಯ್ತು ॥' (೩೨–೧೧೯)

ಎಂದು ಕವಿ ವರ್ಣಿಸಿದ್ದು ಯಥೋಚಿತವಾಗಿದೆ. ಹೀಗೆ ಭರತೇಶ್ವರನ ಪಾತ್ರದ ಕರ್ಮಯೋಗಿಯ ಚಿತ್ರವು ಆದರ್ಶರೂಪದಲ್ಲಿ ಬಂದಿದೆ. ಅವನು ಪಡೆದದ್ದೆ ವಿಜಯ, ಅನುಭವಿಸಿದ್ದೆಲ್ಲ ಸುಖ ಎಂದಿರುವಾಗ 'ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೇ ಜಯಾಜಯೇ' ಎಂಬ ಸಮತ್ವಕ್ಕೆ ಅವಕಾಶವಿಲ್ಲ ಎನ್ನಬಹುದು ಆದರೆ ಸೋಲನ್ನು ಅನುಭವಿಸಿಲ್ಲ ಎಂದ ಮಾತ್ರಕ್ಕೆ ಸೋಲನ್ನು ಇದಿರಿಸುವ ಶಕ್ತಿಯಿ ಎಂದರ್ಥವಲ್ಲ. ದುಃಖದ ಪ್ರಸಂಗಗಳು ಬಂದಿಲ್ಲವೆಂದಲ್ಲ. ಅವನು ರಾಜಯೋಗಿ ಯೆಂದ ಮೇಲೆ ಸ್ಥಿತಪ್ರಜ್ಞನ ಸಮತ್ವ ಅವನಲ್ಲಿ ಸಹಜವಾಗಿತ್ತು. ತನ್ನನ್ನು ಗೆದ್ದವನ ಎಲ್ಲವನ್ನು ಗೆದಿಯುತ್ತಾನೆ ಎಂಬುದಕ್ಕೆ ಪ್ರತೀಕವಾಗಿ ಅವನ ಪಂಚವಿಜಯಗಳ ಕ ನಿರೂಪಿತವಾಗಿದೆ. 'ಭರತನ ಜೀವನಚಿತ್ರವು ಶ್ರೀಕೃಷ್ಣನ ಜೀವನಚಿತ್ರವನ ಬಹುಮಟ್ಟಿಗೆ ಹೋಲುತ್ತದೆ. ಕವಿಯ ಆವೇಶಕ್ಕೆ ಉದ್ಗಮಸ್ಥಾನವು ಕೃಷ್ಣ

ಹತ್ತಾದ, ಅದ್ಭುತವಾದ, ಅಸಾಮಾನ್ಯವಾದ ಜೀವನಚಿತ್ರವೇ ಇರಬೇಕು ಎನ್ನಿಸು-
ದೆ. ಅವರ ವ್ಯಾಪ್ತಿಯು ಬೇರೆ ಬೇರೆಯಾಗಿರಬಹುದಾದರೂ ಇಬ್ಬರ ಮನೋ-
ತ್ತಿಯೂ ಒಂದೇ. ಇಬ್ಬರೂ 'ಪದ್ಮಪತ್ರಮಿವಾಂಭಸ' ಜೀವಿಗಳು. ಕೃಷ್ಣನು
ದಿನಾರುಸಾವಿರ ಗೋಪಿಕಾಸ್ತ್ರೀಯರಿಂದ ಪರಿವೃತನಾಗಿ ಲೋಲುಪ್ತಿಯಲ್ಲಿದ್ದರೂ
ಹ್ಮಚಾರಿ. ತೊಂಬತ್ತಾರುಸಹಸ್ರ ರಾಣಿಯರಿಂದ ಸಂಸೇವ್ಯನಾಗಿ ಕೇವಲ ರಾಗರಸ-
ಲ್ಲಿ ಮುಳುಗುವಂತೆ ತೋರುತ್ತಿದ್ದರೂ ಭರತನು ಮಹಾಯೋಗಿ.'[1] ಭರತಕೃಷ್ಣರಲ್ಲಿ
ೋಲಿಕೆಯೇನೊ ಇದೆ. ಕೃಷ್ಣನಿಗಿಂತ ಭರತನು ಆರು ಪಟ್ಟು ಶೃಂಗಾರರಸಿಕನೆಂದು
ೋರಿಸಲು ಸ್ಪರ್ಧೆ ಹೂಡಿದಂತೆ ಮೂಲಗ್ರಂಥಗಳು ಹೆಂಡಂದಿರ ಸಂಖ್ಯೆಯನ್ನು
ರಿಸಿವೆ. ರತ್ನಾಕರವರ್ಣಿಯ ಮೇಲೆ ಕೃಷ್ಣಪಾತ್ರದ ಪ್ರಭಾವವಾಗಿರಲೂ ಬಹುದು.
ದರೆ ರತ್ನಾಕರನ ದೃಷ್ಟಿ ಬೇರೆಯಾಗಿದೆ, ಅವನಿಗೆ ದಾಂಪತ್ಯಜೀವನದ ಯಶಸ್ಸಿಗೆ
ೂಲಕಾರಣವನ್ನು ತಿಳಿಸಬೇಕಾಗಿದೆ. ಭೋಗಯೋಗದ ರಹಸ್ಯವನ್ನರಿತ ಮೋಕ್ಷ
ಸಕನಿಗೆ ಅಷ್ಟು ಜನ ಹೆಂಗಳೆಯರೊಂದಿಗೆ ಸಹ ವಿರಸವಿಲ್ಲದೆ ಬಾಳುವೆಮಾಡುವ
ಕ್ತಿಬರುತ್ತದೆ, ರಹಸ್ಯವನ್ನರಿಯದ ಸಂಸಾರಿಗೆ ಒಬ್ಬಳೊಡನೆ ಸಹ ಬಾಳುವೆ
ಾಡುವುದು ಕಷ್ಟ. ಇದೇ ಅದರ ಇಂಗಿತ.

ಉಳಿದ ಪಾತ್ರಗಳಲ್ಲಿ ಬಾಹುಬಲಿ, ರಾಣಿವರ್ಗ, ಯಶಸ್ವತಿದೇವಿ, ಪಂಡಿತೆ
ೂದಲಾದವರು ಬರುತ್ತಾರೆ. ಭರತೇಶನ ಉದಾತ್ತಜೀವನಗಾಯನಕ್ಕೆ ಹೊಂದಿ-
ೊಂಡ ಮೇಳವಾದ್ಯಗಳಂತೆ ಅವರಿದ್ದಾರೆ. ಅಲ್ಲಲ್ಲಿ ಅಪಸ್ವರ ಹುಟ್ಟಿದರೂ ಅದನ್ನು
ರತೇಶನು ತಿದ್ದಿ ಸಾಮರಸ್ಯವನ್ನು ಉಂಟುಮಾಡುತ್ತಾನೆ. ಬಾಹುಬಲಿ ಇದಕ್ಕೆ
ುದಾಹರಣೆ. ವಿನಮಿ ಇನ್ನೊಂದು ನಿದರ್ಶನ. 'ರತ್ನಾಕರವರ್ಣಿಯು ಧೀರೋ-
ಾತ್ತನಾದ ತನ್ನ ಕಥಾನಾಯಕನಿಗೆ ಹೆಚ್ಚು ಮಹತ್ವವನ್ನು ಕಲ್ಪಿಸುವುದಕ್ಕಾಗಿ
ಾಹುಬಲಿಯ ಪ್ರತಿಭೆಯನ್ನು ತಗ್ಗಿಸಿರುತ್ತಾನೆ'[2] ಇದು ಅರ್ಧ ಸತ್ಯ. ಭರತೇಶನಿಗೆ
ದ್ದ ಮಹತ್ವವನ್ನು ಪ್ರಕಟಿಸಬೇಕಾಗಿತ್ತು, ಅದರ ಪ್ರಭಾವದಿಂದ ತಮ್ಮನಾದ
ಾಹುಬಲಿ ಸೋತದ್ದು ಕಾಣಲಿಕ್ಕೆ ಸೋಲು, ನಿಜವಾಗಿ ಗೆಲವು. ಅವನ ಪ್ರಭೆ
ಗ್ಗುವ ಬದಲು ಹಿಗ್ಗುತ್ತದೆ. ಪಂಡಿತೆ ಸ್ತ್ರೀವಿದೂಷಕಳಂತೆ ಜಾಣ್ಣುಡಿ-ಜಾಣ್ಣಡೆ.
ಂದ ಅರಸನನ್ನೂ ಅರಸಿಯರನ್ನೂ ಒಂದುಗೂಡಿಸುತ್ತಾಳೆ, ಹಗುರಾದ ನಗೆಯಿಂದ
ಾವ್ಯರಸಿಕರನ್ನು ರಮಿಸುತ್ತಾಳೆ.

ಈ ಕಾವ್ಯದಲ್ಲಿ ವರ್ಣನೆಗಳಿಗೆ ಇತಿಮಿತಿಯಿಲ್ಲ. ಆದರೆ ಅವು ಸಾಮಯಿಕ-
ರ್ಣನೆಗಳಲ್ಲ.

---

1 ತ. ಸು. ಶಾಮರಾವ: ಭರತೇಶವೈಭವ (ಪ್ರ.ಕ., ೨೨-೩, ಪು. ೧೫)

2 ,, ,, ,, ಪು. ೧೬

'ಪ್ರಚುರದಿ ಪದಿನೆಂಟು ರಚನೆಯ ವಾಕ್ಯಕೆ |
ರಚಿಸುವರಾನಂತು ಪೇಳೆ |
ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ |
ನಿಚಿತಪ್ರಯೋಜನವೆನಗೆ ||' (೧-೧೫)

ಎಂದವನು ಹೇಳಿದಂತೆ ಹದಿನೆಂಟು ವರ್ಣನೆಗಳ ನಿರ್ಬಂಧಕ್ಕೆ ಒಳಪಟ್ಟಿಲ್ಲ. ಅವು ಗಳಲ್ಲಿ ನಿಸರ್ಗ, ನಗರ ಮುಂತಾಗಿ ಕೆಲವು ವರ್ಣನೆ ಸಮಯೋಚಿತವಾಗಿ ಬಂದಿವೆ. ಶೃಂಗಾರವರ್ಣನೆ 'ಭೋಗವಿಜಯ'ದಲ್ಲಿ ಪರಾಕಾಷ್ಠೆಯನ್ನು ಮುಟ್ಟಿದೆ. ಆದರೆ ಸೂಳೆಗೇರಿಯ ವರ್ಣನೆ ಎಲ್ಲಿಯೂ ಇಲ್ಲ. ಭರತೇಶ್ವರನ ವರ್ಣನೆಯೇ ಅತ್ಯಂತ ಮುಖ್ಯವಾದುದು. ಕವಿವಾಕ್ಯ, ಅರಗಿಳಿಯಾಲಾಪ, ಅರಸಿಯರ ಮಾತು-ಹಾಡು ಈ ಎಲ್ಲದರಲ್ಲಿ ಅವನ ವ್ಯಕ್ತಿತ್ವದ ಗುಣಾತಿಶಯವು ಚೆಂದಚೆಂದವಾಗಿ ಹೊಸ ಹೊಸ ಮಾತಿನಲ್ಲಿ ಬಣ್ಣಿಸಲಾಗಿದೆ. ಅದಕ್ಕೆ ಪೂರಕವಾಗಿ ಸ್ತ್ರೀರೂಪ, ವಾದ್ಯ, ಗೀತ, ನೃತ್ಯನಾಟಕ ಮುಂತಾದ ಶೃಂಗಾರಿಕ ವಿಭಾವಗಳ ವರ್ಣನೆ ವಿಪುಲವಾಗಿದೆ. 'ಭೋಗವಿಜಯ'ವಲ್ಲದೆ ದಿಗ್ವಿಜಯ ಮುಂತಾದ ಭಾಗಗಳಲ್ಲಿಯ ಭರತೇಶನ ರಾಜವೈಭವ, ವಿಜಯಶಾಲಿತ್ವ, ಶೃಂಗಾರರಸಿಕತೆ, ಅಧ್ಯಾತ್ಮನಿಷ್ಠೆ, ಜಿನಭಕ್ತಿ ಇವೇ ವರ್ಣ್ಯವಿಷಯಗಳಾಗಿವೆ. ಸಂಗೀತಸುಖದ ವರ್ಣನೆಯನ್ನು ಕವಿ ತಿರುಗಿತಿರುಗಿ ಮಾಡುತ್ತಾನೆ. ಅವನಿಗೆ ಅದರಿಂದ ಬೇಸರವಿಲ್ಲ, ಕೇಳುವವರಿಗೂ ಬೇಸರವಿಲ್ಲ. ಅಷ್ಟು ತಲ್ಲೀನತೆಯನ್ನು ಉಂಟುಮಾಡುವ ರಸಾನುಭವವದು. (ರತ್ನಾಕರವರ್ಣಿ ವರ್ಣನೆಗಳಲ್ಲಿ ವಿವರಪ್ರಿಯ ಆದರೆ ಸಮಯಸ್ವತಂತ್ರ.) ಸ್ವಭಾವೋಕ್ತಿ ಮತ್ತು ಕಲ್ಪಕತೆಗಳು ಕೈಯಲ್ಲಿ ಕೈಹಾಕಿ ಕನ್ನಡದೇಸಿಯ ಉಯ್ಯಾಲೆಯಲ್ಲಿ ತಿರುತಿರುಗಿ ತೂಗಿಕೊಳ್ಳುವಂತೆ ಅವು ತೋರುತ್ತವೆ. ಅವುಗಳ ಸಮಗ್ರಸೌಂದರ್ಯ ವೈಶಿಷ್ಟ್ಯ-ಪೂರ್ಣವಾಗಿದೆ. ಭರತೇಶನ ಪ್ರಣಯಲೀಲೆಯನ್ನು ಬಣ್ಣಿಸುತ್ತ ಅವನು 'ಇನ್ನು ಈ ಗೆರೆ ದಾಟಬಾರದು' ಎಂಬ ನಿರ್ಬಂಧವನ್ನು ತಾನೇ ಹಾಕಿಕೊಳ್ಳುತ್ತಾನೆ. ಆದರೆ ಕೆಲವು ಸಲ ತನ್ನ ನಿರ್ಬಂಧವನ್ನು ತಾನೇ ಮೀರಿ ಸುರತಕ್ರೀಡೆಯನ್ನು ಚಿತ್ರಿಸು-ತ್ತಾನೆ. 'ಉಚಿತಕೆ ತಕ್ಕಷ್ಟು ಪೇಳ್ವೆ' ಎಂಬ ಪ್ರತಿಜ್ಞೆಯನ್ನು ಇಂಥಲ್ಲಿ ಅವನು ಪಾಲಿಸುತ್ತಾನೆ ಎಂದು ಹೇಳಬಾರದು. ಆದರೆ ಇತರರ ಕೈಯಲ್ಲಿ ಯಾವುದು ಕೇವಲ ಅಶ್ಲೀಲವಾಗಬಹುದಾಗಿತ್ತೋ ಅದು ರತ್ನಾಕರನ ಕೈಯಲ್ಲಿ ಉದಾತ್ತಭೋಗವಾಗು-ತ್ತದೆ. ಭರತೇಶನಂಥ ಆದರ್ಶಪುರುಷನ ಎಲ್ಲ ಕ್ರಿಯೆಗಳೂ ಎತ್ತರದ ನೆಲೆಯಲ್ಲಿ ನಡೆಯುತ್ತವೆ ಎಂಬುದನ್ನು ತೋರುವುದೇ ಅದರ ಉದ್ದೇಶ.

'ಅಧ್ಯಾತ್ಮವೆ ನಿಚಿತಪ್ರಯೋಜನವೆನಗೆ', 'ಆಗಮವಧ್ಯಾತ್ಮವಳವಟ್ಟು ಶೃಂಗಾರತ್ಯಾಗಭೋಗದ ಮೋಡಿ ಮೆರೆಯೆ' ಎಂದು ಮುಂತಾದ ಉಕ್ತಿಗಳಿಂದ ರತ್ನಾಕರನ ಕಾವ್ಯೋದ್ದೇಶ ಸ್ಪಷ್ಟವಾಗುತ್ತದೆ. ಭರತೇಶನ ಕಥೆಯನ್ನು ಅವನು ತನ್ನ

ಅಧ್ಯಾತ್ಮದರ್ಶನದ ನಿರೂಪಣೆಗೆ ಹೇಳುತ್ತಾನೆ. ಬಾಳಿನಲ್ಲಿ ಏಳುಬೀಳುಗಳನ್ನು ಅನುಭವಿಸಿ ಭೋಗಿಯಾಗಿ ಯೋಗಿಯಾಗಿ ಒಂದು ಭವ್ಯವಾದ ಮತ್ತು ಸಮನ್ವಯ-ಪೂರ್ಣವಾದ ಜೀವನದರ್ಶನವನ್ನು ಅವನು ಕಂಡಿದ್ದಾನೆ, ಅದರಂತೆ ಜೀವಿಸಲು ಹವಣಿಸುತ್ತಿದ್ದಾನೆ. ಭರತೇಶನ ಕಥೆ ಅದರ ಪ್ರತೀಕವಾಗಿದೆ. ಅಂತೇ ಅವನ ಚಿತ್ರಣದಲ್ಲಿ ಹಾಗೂ ದೊರೆಯುವ ಎಲ್ಲ ಸಂದರ್ಭಗಳಲ್ಲಿ ರತ್ನಾಕರನು ತನ್ನ ದರ್ಶನವನ್ನು ತರತರವಾಗಿ ಬಣ್ಣಿಸುತ್ತಾನೆ. ಅದು ಅವನ ಅಂತರಂಗದಾಳದಿಂದ ಬಂದುದೆಂಬುದನ್ನು ಕಾಣಬಹುದು. ಹಂಸತತ್ವ, ಆತ್ಮಯೋಗ ಎಂದು ಮುಂತಾಗಿ ಅವನದನ್ನು ಕರೆಯುತ್ತಾನೆ. ಅದರಲ್ಲಿ ಭಕ್ತಿಕರ್ಮಗಳುಳ್ಳ ಜ್ಞಾನಮಾರ್ಗವಿದೆ, ವಿಶ್ವಧರ್ಮವಿದೆ.

‘ಆರು ಬಲ್ಲರು ಹಂಸತತ್ವವ ತಮ್ಮ ಶ- |
ರೀರ ತುಂಬಿರುತಿಹುದದನು |
ಹಾರದೆ ಸಾರದೆ ಹೊರಹೊರಗಾಡಿ ಸಂ- |
ಸಾರದುಃಖವನುಣುತಿಹರು ||

ಹೊಳೆವ ಕನ್ನಡಿ ಕೈಯೊಳಗಿರ್ದು ನೋಡದೆ ನೀರ |
ನೆರಳಲ್ಲಿ ಮೊಗವ ನೋಳ್ಪಂತೆ |
ಒಳಗೆ ಚಿದ್ರೂಪ ನೋಡದೆ ಜಗವೆಲ್ಲ |
ಬಳಲುತಿಹುದು ಹೊರಗಾಡಿ ||’ (೧–೧೦೨, ೧೦೩)

ಹಂಸವೆಂದರೆ ಆತ್ಮಜ್ಞಾನ, ಆತ್ಮಜ್ಯೋತಿ ಎಂದೂ ಹೇಳುತ್ತಾನೆ :

‘ತಿಳಿವೆ ಶರೀರ ತಿಳಿವೆ ರೂಪು ಬೆಳಗೆ ಮೈ- |
ಬೆಳಗೆ ತಾನಾಗಿರುತಿಹುದು |
ತಿಳಿವುಬೆಳಗುಗಳೆ ಹಂಸನ ಕುರುಹೆಂದು |
ತಿಳಿದು ನೋಳ್ಪವನೀಗ ಧನ್ಯ ||’ (೧–೧೦೯)

ಆಮೇಲೆ ತನ್ನ ಸಮನ್ವಯತತ್ವದ ಬೋಧನೆಯನ್ನು ತಿಳಿನುಡಿಯಲ್ಲಿ ಮಾಡುತ್ತಾನೆ :

‘ಭೋಗವಿಚಾರವು ಬೇಕು ನೃಪತಿಗಾತ್ಮ- |
ಯೋಗವಿಚಾರವು ಬೇಕು |
ರಾಗರಸಿಕನಾಗಬೇಕು ಭಾವಿಸೆ ವೀತ- |
ರಾಗರಸಿಕನಾಗಬೇಕು ||

ಇಹಲೋಕಸುಖವ ಭೋಗಿಸಬೇಕು ನೃಪತಿಯು- |
ತ್ಸಹನಾಗಬೇಕು ಧರ್ಮದೊಳು |
ಬಹುಕಾಂಕ್ಷೆಯೊಳು ಸಿಕ್ಕಿದಂತಿರಬೇಕು ನಿಃ- |
ಸ್ಪೃಹನಾಗಬೇಕೆದೆಯೊಳಗೆ ॥ ' (೨-೭, ೯)

ಈ ಸರಣಿಯಲ್ಲಿ ಅವನು ಆದರ್ಶಪುರುಷನ ಮನುಸ್ಮೃತಿಯನ್ನೇ ಸಾರುತ್ತಾನೆ. ಅವನು ತನ್ನ ತತ್ವಪರಪದ್ಯಗಳಲ್ಲಿ ಜನಕ್ಕೆ ಹಿಡಿಸುವಂಥ ಸೊಗಸಾದ ಹೇಳಿಕೆಗಳನ್ನು ವೆಗ್ಗಳವಾಗಿ ಕೊಡುತ್ತಾನೆ. ಅವುಗಳಲ್ಲಿ

' ಗಾನಮುದ್ದಳಿ ತಾಳಲಯಕೆ ನರ್ತಿಪ ಮಂದ- |
ಯಾನೆಗೆ ಶಿರದ ಕುಂಭದೊಳು |
ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿಸಂ- |
ಧಾನದೊಳಗೆ ತನ್ನ ನೆನಹು ॥ ' (೨-೪೨)

ಇದನ್ನು ನೋಡಬೇಕು.

' ಒಳಗಿದ್ದ ದೇವನ ಕಾಣದೆ ಹೊರಗೆ ದೇ- |
ಗುಲವ ಪೂಜಿಸುವೆಗ್ಗನಂತೆ |
ಒಳಗಣಾತ್ಮನ ಬಿಟ್ಟು ಮೈಯನೇ ತಾನೆಂದು |
ಸಲೆ ಹೊಗಳಿಸಿಕೊಳುತಿಹರು ' (೨-೫೫)

ಇಂಥ ಪದ್ಯಗಳಲ್ಲಿ ಅವನ ವಿಶಾಲಧಾರ್ಮಿಕದೃಷ್ಟಿಯನ್ನು ಅರಿಯಬಹುದು. ದಿವ್ಯ-ಕಲಾಧರ ಕವಿ ಭರತೇಶನ ಆಂತರಿಕ ಅನುಭವವನ್ನು ವರ್ಣಿಸುತ್ತ ರತ್ನಾಕರನ ಸ್ವಾನುಭವವನ್ನೇ ನಿರೂಪಿಸುತ್ತಾನೆ. ' ತನ್ನಂತರಂಗಾನುಭವವನೆಲ್ಲವನೀತ ಮುನ್ನ ಕಂಡಂತೆ ಪೇಳ್ದಪನು ' (೨-೮೭) ಎಂಬಲ್ಲಿ ಈ ಅರ್ಥಸೂಚನೆಯಿದೆ. ಇಂಥ ಪದ್ಯ-ಗಳಲ್ಲಿ ಕವಿ ತಾನೇ ಹೇಳಿದಂತೆ ಹೊಸ ಒಂದು ' ಅಧ್ಯಾತ್ಮರಸ 'ವನ್ನು ನಿರ್ಮಿಸಿ-ಕೊಂಡಿದ್ದಾನೆ. ಯಾವ ಕನ್ನಡಕಾವ್ಯದಲ್ಲಿಯೂ ಇಲ್ಲಿಯಷ್ಟು ಅದರ ಸವಿಯ ಬಿತ್ತರವಿಲ್ಲ.

ಸಮನ್ವಯಶೀಲನಾದ ರತ್ನಾಕರನು ತನ್ನ ಕೃತಿಯಲ್ಲಿ ಆಂತರಿಕ ಅನುಭವ-ದೊಡನೆ ತಾನು ಕಂಡ ಬಾಹ್ಯಜೀವನದ ವಿವಿಧಾಂಗಗಳನ್ನು ವರ್ಣಿಸಿದ್ದಾನೆ. ಅವು ಹೆಚ್ಚಾಗಿ ರಾಜಜೀವನಕ್ಕೆ, ಸಂಗೀತ ನೃತ್ಯ ನಾಟಕ ಮುಂತಾದ ಸೌಖ್ಯಸಾಧನಗಳಿಗೆ ಸಂಬಂಧಪಟ್ಟುವು. ಜನಜೀವನದ ಈ ಚಿತ್ರ ವಿಜಯನಗರಕಾಲದ ವೈಭವವನ್ನೂ ಕವಿಯ ಪ್ರಾಂತದ ರಸಿಕತೆಯನ್ನೂ ತೋರುತ್ತದೆ.

ರತ್ನಾಕರನ ಶೈಲಿ–ಛಂದಸ್ಸುಗಳ ಅದ್ಭುತವಾದ ಸಂಪತ್ತಿಯನ್ನೂ ಸಹಯೋಗವನ್ನೂ ಎಷ್ಟು ವರ್ಣಿಸಿದರೂ ಸಾಲದು, ಜಾನಪದವಾದ ಸಾಂಗತ್ಯಧಾಟಿ ಮತ್ತು ಅಚ್ಚಗನ್ನಡದೇಸಿ ಅವನ ಪ್ರತಿಭೆಯ ಪರುಷದಿಂದ ಹೊಳೆಹೊಳೆಯುವ ಹೊನ್ನಾಗಿವೆ. ಅವನ ಬರೆವಣಿಗೆಯ ಓಘದಲ್ಲಿ ಸರಸ್ವತಿಯ ಪ್ರಸನ್ನತೆಯಿದೆ, ನಿರ್ಮಲತೆಯಿದೆ. ದರ್ಶನದ ಉನ್ನತಿ, ವ್ಯಕ್ತಿಯ ಉದಾತ್ತತೆ ಇವನ್ನು ಚಿತ್ರಿಸುವ ಭಾಷೆ ಮತ್ತು ನುಡಿಯುವ ಛಂದ ಎಷ್ಟು ಸರಳವೋ ಅಷ್ಟು ಭವ್ಯವಾಗಿವೆ.

‘ ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು ।
ವಿಕಳವಾದರು ದೋಷವಿಲ್ಲ ।
ಸಕಲ ಲಕ್ಷಣಕಾಗಿ ಬಿರುಸುಮಾಡಿದರೆ ಪು- ।
ಸ್ತಕದ ಬದನೆಕಾಯಹುದು ॥ ’ (೧–೯)

ಇಲ್ಲಿ ಅವನು ಹೂಣಿಕೊಂಡಂತೆ ವರ್ಣಕಕಾವ್ಯದ ಸ್ವತಂತ್ರದೃಷ್ಟಿ ಫಲಿಸಿದೆ. ಹೀಗೆಂದು ದೋಷಗಳು ಹೆಚ್ಚಿವೆಯೆಂದಲ್ಲ. ದೇಸಿಯನ್ನು ಮಾರ್ಗದ ಮಟ್ಟಕ್ಕೆ ಒಯ್ಯುವ ಸಾಹಸ ಬಹುಮಟ್ಟಿಗೆ ಸಫಲವಾಗಿದೆ. ಕ್ವಚಿತ್ತಾಗಿ ಶೈಲಿ ಜಾನಪದ ಸಾಹಿತ್ಯದ ಹಾಗೆ ಮೊಂಡಾಗಿದೆ ಇಲ್ಲವೆ ಒರಟಾಗಿದೆ. ‘ ರತ್ನಾಕರನು ಆಯ್ದುಕೊಂಡಿರುವ ವಸ್ತುವಿನಲ್ಲಿ ಹಲವು ಬಗೆಯ ಭಾವಾವೇಗಗಳು ಬರಲು ಆಸ್ಪದವಿಲ್ಲ. ಉಗ್ರಭಾವಗಳಿಗೆ ಇಲ್ಲಿ ಎಡೆಯಿಲ್ಲ. ಆದ್ದರಿಂದ ಅವನ ಶೈಲಿಯಲ್ಲಿ ಒಂದು ಸತ್ವವು ಕಡಿಮೆಯಾದಂತೆ ತೋರಿ ಬರುತ್ತದೆ.........ಮನಸ್ಸನ್ನು ಕೆರಳಿಸಬಲ್ಲ, ಕಿಚ್ಚನ್ನು ಹೆಚ್ಚಿಸಬಲ್ಲ ಉಗ್ರಭಾವಗಳು ಅವನಲ್ಲಿ ಕಡಿಮೆ. ಅವನ ದೃಷ್ಟಿಯೆಲ್ಲವೂ ಸುಂದರವಾದ, ಕೋಮಲವಾದ, ಕಳಕಳಿಸುವ ಲಲಿತಕಲೆಯ ಕಡೆಗೆ.’[1] ಈ ವಿಮರ್ಶೆ ಭರತೇಶವೈಭವದ ಪ್ರತ್ಯಕ್ಷರೂಪಕ್ಕೆ ಅನ್ವಯಿಸುತ್ತದೆ. ಆದರೆ ಕೋಮಲ, ಉಗ್ರ ಮುಂತಾದ ಎಲ್ಲ ಭಾವಗಳಿಗೂ ರತ್ನಾಕರನ ಶೈಲಿ ಸಮರ್ಥವಾಗಬಲ್ಲುದು ಎಂಬುದಕ್ಕೆ ಅಪ್ರತ್ಯಕ್ಷ ಪ್ರಮಾಣವು ಅದರಲ್ಲಿ ಬೇಕಾದಷ್ಟು ದೊರೆಯುತ್ತದೆ. ಉಗ್ರವಲ್ಲದಿದ್ದರೂ ಉತ್ಕಟವಾದ ಅನೇಕ ಭಾವಗಳು ಈ ಕಾವ್ಯದಲ್ಲಿ ಸುಳಿಯುತ್ತವೆ. ಅವನ್ನು ಕವಿ ಸಮರ್ಪಕವಾಗಿ ಬಣ್ಣಿಸಿದ್ದಾನೆ. ‘ ರತ್ನಾಕರನ ಕಾವ್ಯ ಕನ್ನಡದ ಮಕ್ಕಳ ಭಾವದ ಹಸಿವನ್ನು ತೀರಿಸಬಲ್ಲುದು. ನಾವು ಅವನ ಕಾವ್ಯದ ಕಡೆಗೆ ಹೆಚ್ಚುಹೆಚ್ಚಾಗಿ ತಿರುಗಬೇಕು. ಅವನ ಭಾವನೆಯ ಸಂಪತ್ತು ಅಪಾರವಾದದ್ದು. ಅದಕ್ಕೆ ಸಾಕ್ಷಿ ಅಪಾರವಾದ ಅವನ ಶಬ್ದಸಂಪತ್ತು.’[2] ಈ ಮೆಚ್ಚಿಗೆಯನ್ನು ಗಮನಿಸಬೇಕು.

---

1 ತ. ಸು. ಶಾಮರಾವ: ಭರತೇಶವೈಭವ (ಪ್ರ.ಕ., ೨೨–೩, ಪು. ೩೪)

2 ಮಾಸ್ತಿ ವೆಂಕಟೇಶ ಅಯ್ಯಂಗಾರ್ : ರತ್ನಾಕರನ ಶಬ್ದಸಂಪತ್ತು (ಜೀವನ, ೧೦–೬, ಪು. ೨೫೩)

'ಭರತೇಶವೈಭವ'ವು ಭರತೇಶನ ಆತ್ಮವೈಭವವಾಗಿರುವಂತೆ ರತ್ನಾಕರನ ಕಾವ್ಯ ವೈಭವವಾಗಿರುತ್ತದೆ. ಅದು ಒಬ್ಬ ಮಹಾಕವಿಯ ಮಹಾಕೃತಿಯೆಂಬುದು ನಿರ್ವಿವಾದ ಪಂಪ, ಹರಿಹರ, ಕುಮಾರವ್ಯಾಸ ಇವರಿಗೆ ಸರಿಜೋಡಿಯಾಗಿ ನಿಲ್ಲುವ ಮಹಾಕವಿ ಯೆಂದರೆ ರತ್ನಾಕರನೇ. ಸಾಂಗತ್ಯವು ಬೆಳೆಬೆಳೆಯುತ್ತ ಬಂದು ರತ್ನಾಕರನಲ್ಲಿ ಮಹಾ ಕಾವ್ಯದ ವಾಹಕವಾಯಿತು. 'ಭಾಮಿನಿಷಟ್ಪದಿಗೆ ಕುಮಾರವ್ಯಾಸನು ಹೇಗೋ ರಗಳೆಗಳಿಗೆ ಹರಿಹರನು ಹೇಗೋ, ಸಾಂಗತ್ಯಕ್ಕೆ ರತ್ನಾಕರನು ಹಾಗೆ'[1] ಎಂಬುದು ಸೂಕ್ತವಾದ ವಿಮರ್ಶೆ. ಈ ಯುಗದ ದೇಸಿ 'ಭರತೇಶವೈಭವ'ದಲ್ಲಿ ತನ್ನ ಪರಮ ಸೀಮೆಯನ್ನು ಮುಟ್ಟಿ ಕನ್ನಡಸಾಹಿತ್ಯವು 'ಜನತಾಂತರ್ದೃಷ್ಟಿ' ಎಂಬುದನ್ನು ಸಾರ್ಥಕಗೊಳಿಸಿತು.

1 ತ. ಸು. ಶಾಮರಾವ: ಭರತೇಶವೈಭವ (ಪ್ರ.ಕ., ೨೨-೪, ಪು. ೪೫)

೩೫. ಈ ಯುಗದ ಕೊನೆಕೊನೆಯ ಗ್ರಂಥಕಾರರು

ರತ್ನಾಕರವರ್ಣಿಯ ಸಮಕಾಲೀನರೂ ಉತ್ತರಕಾಲೀನರೂ ಆದ ಅನೇಕ ಜೈನಕವಿಗಳು ಅವನ ಪ್ರಭಾವದಿಂದಲೂ ಕಾಲಮಹಿಮೆಯಿಂದಲೂ ಸಾಂಗತ್ಯಗ್ರಂಥಗಳನ್ನು ಬರೆದರು. ಬಹುಶಃ ಎಲ್ಲ ಗ್ರಂಥಗಳು ಗುಣದಿಂದ ಸಾಧಾರಣವಾದುವು. ದೊಡ್ಡಯ್ಯನ 'ಚಂದ್ರಪ್ರಭಚರಿತೆ'ಯೊಂದು ತೀರ್ಥಂಕರವಿಷಯವಾಗಿದೆ, ಉಳಿದುವೆಲ್ಲ ನೀತಿಬೋಧಕವಾದ ಚರಿತೆಗಳು. ಬಾಹುಬಲಿಯ 'ನಾಗಕುಮಾರಚರಿತೆ', ಬ್ರಹ್ಮಕವಿಯ 'ವಜ್ರಕುಮಾರಚರಿತೆ', ಚಂದ್ರಮನ 'ಗೋಮಟೇಶ್ವರಚರಿತೆ', ದೇವರಸನ 'ಗುರುದತ್ತಚರಿತೆ' ಮುಂತಾದುವು. ಚಿದಾನಂದಕವಿಯ 'ಮುನಿವಂಶಾಭ್ಯುದಯ', ಧರಣಿಪಂಡಿತನ 'ಬಿಜ್ಜಳರಾಯಚರಿತೆ', ಚಿಕ್ಕರಸನ 'ಸಣ್ಣಬೈರೆಗೌಡನ ಚರಿತೆ'ಗಳಲ್ಲಿ ಕಲ್ಪನಾಮಿಶ್ರವಾದ ಐತಿಹ್ಯವಿದೆ. ಕೆಲವು ಸಾಂಗತ್ಯಗಳು ತತ್ವ ಇಲ್ಲವೆ ನೀತಿಯನ್ನು ಬೋಧಿಸುತ್ತವೆ. ಉದಾಹರಣೆಗೆ, ವೇಮಣ್ಣನ 'ಜ್ಞಾನಭಾಸ್ಕರಚರಿತೆ'. ಕಂದಪದ್ಯಗಳಲ್ಲಿ ತತ್ವ, ನೀತಿಯನ್ನು ಹೇಳುವ ಗ್ರಂಥಗಳೆಂದರೆ ಶಾಂತರಸನ 'ಯೋಗರತ್ನಾಕರ', ಸಿಂಹರಾಜನ 'ಚಿನ್ಮಯಚಿಂತಾಮಣಿ'. ಸಾಂಗತ್ಯದ ಜೊತೆಗೆ ಪದ್ಮರಸನ 'ಶೃಂಗಾರಕಥೆ' ವಚನಗಳನ್ನೊಳಗೊಂಡಿದೆ, ಆದಿಯಪ್ಪನ 'ಧನ್ಯಕುಮಾರಚರಿತೆ'ಯಲ್ಲಿ ವೃತ್ತಗಳಿವೆ. ಒಂದೆರಡು ಷಟ್ಪದಿಗ್ರಂಥಗಳನ್ನು ಬಿಟ್ಟರೆ ೧೬-೧೭ನೆಯ ಶ.ಗಳಲ್ಲಿಯ ಎಲ್ಲ ಗ್ರಂಥಗಳು ಸಾಂಗತ್ಯರೂಪದಲ್ಲಿವೆಯೆಂಬುದು ಗಮನಾರ್ಹವಾದ ಸಂಗತಿ. ಪ್ರೌಢವಾದ ಚಂಪೂರೂಪವನ್ನೂ ಕಂದವೃತ್ತಗಳನ್ನೂ ಬಳಸಿದ ಜೈನಕವಿಗಳ ಸಂಪ್ರದಾಯವು ಹಿಂದುಳಿದು, ಷಟ್ಪದಿ-ಸಾಂಗತ್ಯಗಳ ಹೊಸ ಸಂಪ್ರದಾಯ ರೂಢವಾದುದು ಕನ್ನಡಕವಿಗಳ ಮಣಿಬಲ್ಲತನಕ್ಕೆ ನಿದರ್ಶನವಾಗಿದೆ. ಶಾಸ್ತ್ರಗ್ರಂಥಗಳಲ್ಲಿ ಶೃಂಗಾರಕವಿಯ 'ಕರ್ಣಾಟಕಸಂಜೀವನ'ವೆಂಬ ನಿಘಂಟು, ಗುಣಚಂದ್ರನ 'ಛಂದಸ್ಸಾರ'ವಲ್ಲದೆ ಭಟ್ಟಾಕಳಂಕನ 'ಶಬ್ದಾನುಶಾಸನ' ಇವನ್ನು ನೆನೆಯಬೇಕು. ಭಟ್ಟಾಕಳಂಕನು ಈ ಯುಗದ ಶ್ರೇಷ್ಠ ಕನ್ನಡವ್ಯಾಕರಣಪಂಡಿತನಾದನು. ಅವನ 'ಶಬ್ದಾನುಶಾಸನ'ವು ಸಂಪೂರ್ಣವಾಗಿ ಸಂಸ್ಕೃತದಲ್ಲಿ ಸೂತ್ರವೃತ್ತಿವ್ಯಾಖ್ಯಾನಗಳುಳ್ಳ, ಕನ್ನಡಭಾಷೆಯ ವ್ಯಾಕರಣಗ್ರಂಥ. ನಾಗವರ್ಮನ 'ಭಾಷಾಭೂಷಣ' ಸಂಸ್ಕೃತದಲ್ಲಿದೆ. 'ಶಬ್ದಾನುಶಾಸನ' ಅದಕ್ಕಿಂತ ತುಂಬ ವಿಸ್ತಾರವಾಗಿದ್ದು ಕೇಶಿರಾಜನ 'ಶಬ್ದಮಣಿದರ್ಪಣ'ದ ತರುವಾಯ ಪ್ರಮಾಣಗ್ರಂಥವಾಗಿದೆ.

ಈ ಯುಗದ ಕೊನೆಕೊನೆಯ ಗ್ರಂಥಕಾರರಲ್ಲಿ ದೇವಚಂದ್ರನನ್ನು ಹೆಸರಿಸುವುದು ಅಗತ್ಯ. ೧೮ನೆಯ ಶ.ದ ಉತ್ತರಾರ್ಧ ಮತ್ತು ೧೯ನೆಯ ಶ ದ ಪೂರ್ವಾರ್ಧದಲ್ಲಿ ಮೈಸೂರುದೊರೆಗಳ ಆಶ್ರಯದಲ್ಲಿದ್ದು ಇವನು ಚರಿತ್ರಕಾರಕವಿಯಾದನು. ಇವನ 'ರಾಮಕಥಾವತಾರ' ಎಂಬ ಚಂಪೂಗ್ರಂಥವು ನಾಗಚಂದ್ರನ 'ರಾಮಚಂದ್ರಚರಿತ-

ಪುರಾಣ'ದಲ್ಲಿ ಹೇಳಿರುವ ಜೈನರಾಮಾಯಣಕಥೆಯನ್ನು ವಿಸ್ತರಿಸಿ ಹೇಳಿದೆ. 'ರಾಜಾವಳೀಕಥೆ' ಚಾರಿತ್ರಿಕದೃಷ್ಟಿಯಿಂದ ಹೆಚ್ಚು ಮಹತ್ವದ್ದಾಗಿದೆ. ಪ್ರಾಯಿಕವಾಗಿ ಗದ್ಯರೂಪದಲ್ಲಿದ್ದ ಇದರಲ್ಲಿ ಜೈನಮತಕ್ಕೆ ಸಂಬಂಧಿಸಿದ ಹಲವು ಇತಿಹಾಸಗಳೂ ರಾಜರ ಮತ್ತು ಕವಿಗಳ ಚರಿತ್ರೆ ಮುಂತಾದ ವಿಷಯಗಳೂ ಹೇಳಲಾಗಿವೆ. ಕಾಲ್ಪನಿಕ ಅಂಶಗಳಿಂದ ಮಿಶ್ರವಾಗಿರುವ ಕಾರಣ ಚಾರಿತ್ರಿಕಸತ್ಯವನ್ನು ಇದರಿಂದ ಶೋಧಿಸಿ ತೆಗೆಯಬೇಕಾಗುತ್ತದೆ.

೧೯ನೆಯ ಶತಕವು ಮುಂದುವರಿದಂತೆ ಹೊಸ ಪ್ರೇರಕಶಕ್ತಿಗಳೂ ಹೊಸ ಸಾಹಿತ್ಯರೂಪಗಳೂ ಹತ್ತಿರ ಬರತೊಡಗಿದುವು. ಈ ಸಂಧಿಕಾಲದಲ್ಲಿ ತೀರ ಹಳೆಯ ಮಾರ್ಗದಲ್ಲಿ ಬರೆದವರಿದ್ದಾರೆ, ಹಳೆಯದನ್ನೂ ಹೊಸದನ್ನೂ ಮಿಶ್ರಗೊಳಿಸಿ ಬರೆದವರೂ ಇದ್ದಾರೆ. ಮೈಸೂರು ಒಡೆಯರ ಆಶ್ರಯದಲ್ಲಿ ಕನ್ನಡಸಾಹಿತ್ಯವು ಸಂಗೀತಾದಿ ಇತರ ಕಲೆಗಳಂತೆ ಅಭ್ಯುದಯಹೊಂದಿತು. ಚಿಕದೇವರಾಯನಂತೆ ಈ ಕಾಲದಲ್ಲಿ ರಾಜರೂ ಗ್ರಂಥ ರಚಿಸಿದ್ದಾರೆ. ೧೭೯೪–೧೮೬೮ರ ವರೆಗೆ ಆಳಿದ ಮುಮ್ಮಡಿ ಕೃಷ್ಣರಾಜನು ಕನ್ನಡ ಸಂಸ್ಕೃತ ಎರಡರಲ್ಲಿಯೂ ಪಂಡಿತನಾಗಿ ಐವತ್ತರವರೆಗೆ ಗ್ರಂಥಗಳನ್ನು ಬರೆದನೆಂದು ಖ್ಯಾತಿಯಿದೆ. 'ಈ ಗ್ರಂಥಗಳಲ್ಲಿ ಹಲವನ್ನು ಆಸ್ಥಾನ-ಪಂಡಿತರುಗಳಿಗೆ ಸೂಚನೆಗಳನ್ನು ಕೊಟ್ಟು ಬರಸಿರಬಹುದು' ಎಂದು ಕವಿಚರಿತಕಾರರು ಹೇಳಿದ್ದಾರೆ. ಪ್ರಾಯಿಕವಾಗಿ ಇವೆಲ್ಲ ಗದ್ಯರೂಪವಾಗಿವೆ, ಎರಡು ಮೂರು ಮಾತ್ರ ಪದ್ಯರೂಪವಾಗಿವೆ. ಇದರಿಂದ ಹೊಸಗನ್ನಡದ ಗದ್ಯಪ್ರಾಧಾನ್ಯದ ಗಾಳಿ ಬೀಸತೊಡಗಿತ್ತೆಂದು ತಿಳಿಯಬಹುದು. ಇವುಗಳಲ್ಲಿ ಕಥಾಸಾರ, ಪುರಾಣಸಂಗ್ರಹ, ಟೀಕೆ, ಮಾಹಾತ್ಮ್ಯ, ಶತಕ, ಹಾಡು ಈ ಎಲ್ಲ ಪ್ರಕಾರಗಳು ಸೇರಿಕೊಂಡಿವೆ. 'ಭಾಮಾಕಥೆ'ಯಂಥಲ್ಲಿ ಯಕ್ಷಗಾನವೂ ಇದೆ. ಬರೆವಣಿಗೆಯ ದೃಷ್ಟಿ, ರೀತಿ ಎಲ್ಲಾ ಸಾಂಪ್ರದಾಯಿಕವಾದುದು. ಅದೇ ಕೆಂಪುನಾರಾಯಣನ ಒಂದೇ ಒಂದು ಗ್ರಂಥವಾದ 'ಮುದ್ರಾಮಂಜೂಷ'ವನ್ನು ನೋಡಿದರೆ ಹೊಸಗನ್ನಡಗದ್ಯದ ನಸುಕು ಮೂಡಿತೆಂದು ನಿಚ್ಚಳವಾಗಿ ತೋರುತ್ತದೆ. ೧೮೨೩ರಲ್ಲಿ ಇದನ್ನು ಅವನು ಬರೆದು ಮುಗಿಸಿದನಂತೆ. 'ಇದು ಮುದ್ರಾರಾಕ್ಷಸವೆಂಬ ಸಂಸ್ಕೃತನಾಟಕಕ್ಕೆ ಗದ್ಯರೂಪವಾದ ಭಾಷಾಂತರವು' ಎಂಬ ಹೇಳಿಕೆ ಯಥಾರ್ಥವಲ್ಲ. ಇದರಲ್ಲಿಯ ಮೊದಲಿನ ೧೨ ಪ್ರಕರಣಗಳ ಕಥೆ ಸಂಸ್ಕೃತನಾಟಕದ ಉಪೋದ್ಘಾತದಲ್ಲಿ ಸೂಚನೆಯಿಂದ ಮಾತ್ರ ಬಂದಿದೆ. ಇನ್ನುಳಿದ ಪ್ರಕರಣಗಳಿಗೂ ನಾಟಕಕ್ಕೂ ಸಂಬಂಧವಿದ್ದರೂ ಒಂದು ಇನ್ನೊಂದರ ಭಾಷಾಂತರವಲ್ಲ. ತನ್ನ ಅವತರಣಿಕೆಯಲ್ಲಿ 'ಪುರಾಣದಲ್ಲಿ ಹೇಳಿದ ಕಥೆಯುನ್ನು ಈಗ ಕೆಂಪುನಾರಾಯಣನೆಂಬ ಕವಿ ಕರ್ಣಾಟಭಾಷೆಯಿಂ ವಿಸ್ತರಿಸಿ ಇವಕ್ಕೆ ಮುದ್ರಾಮಂಜೂಷವೆಂಬ ಪೆಸರಿಟ್ಟು ಪೇಳ್ವನದೆಂತೆನೆ' ಎಂದಿದ್ದಾನೆ. ಮುದ್ರಾರಾಕ್ಷಸನಾಟಕದ ಉಲ್ಲೇಖವೇ ಇಲ್ಲ. ಕಥೆಯಲ್ಲಿ ಕೆಲವು ಸ್ವತಂತ್ರಕಲ್ಪನೆಗಳನ್ನು ಸೇರಿಸಿದ್ದಾನೆ. ಮೂಲದಲ್ಲಿಯ ಕೆಲವನ್ನು ಬಿಟ್ಟಿದ್ದಾನೆ, ವ್ಯತ್ಯಾಸಮಾಡಿಕೊಂಡಿದ್ದಾನೆ. 'ಮುದ್ರಾ-

ಮಂಜೂಷ'ದ ಭಾಷಾಶೈಲಿ ಏಕರೂಪವಾಗಿಲ್ಲ, ಸಂಧಿಕಾಲದ ವಿಷಮತೆಯನ್ನು ಒಳಗೊಂಡಿದೆ. ಬಾಣಕಾದಂಬರಿ, ಸಂಸ್ಕೃತಪ್ರೌಢಕಾವ್ಯ ಇವುಗಳ ಪ್ರಭಾವದಿಂದ ಅನೇಕ ಭಾಗಗಳು ಉದ್ದಾನುದ್ದವಾಗಿದ್ದು ಸಂಸ್ಕೃತಮಯವಾಗಿವೆ. ಶೈಲಿ ಒಮ್ಮೆ ಪ್ರೌಢವಾದರೆ ಒಮ್ಮೆ ಸರಳವಾಗುತ್ತದೆ. ಹಳಗನ್ನಡ-ಹೊಸಗನ್ನಡಗಳ ತೀರ ವಿಚಿತ್ರ-ಮಿಶ್ರಣವು ತಲೆದೋರಿದೆ. ಉದಾಹರಣೆಗೆ, 'ಅದರ ಪರೀಕ್ಷೆಯಂ ಅವನು ತಿಳಿದು ಹೇಳಿದರೆ ಕಾರಾಗೃಹದಿಂದ ತಾನು ಬಿಡಿಸಲ್ಪಟ್ಟು ವಿಶೇಷಸನ್ಮಾನಕ್ಕೆ ಪಾತ್ರನಾಗುವನು' (ಪು. ೨೧). 'ಇದು ಅರಗು ಮೇಣ ಈ ಮುಖ್ಯವಾದ ಸರಿಗಳಿಂ ತೊಡೆಯಲ್ಪಟ್ಟ ಬಟ್ಟೆಗೆ ಸಿಂಹದ ರೋಮಗಳಂ ಹತ್ತಿಸಿ ಅದಂ ಚರ್ಮದಂತೆ ಮಾಡಿ ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವಂ ಕೊಡುವ ರಂಧ್ರಮುಖವಂ ಹಿಡಿದು ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಸಲಾಕಿಗಳಂ ಜೋಡಿಸಿ ಬಾಲಕತ್ತುಗಳಿಗೆ ರೋಮಸಹಿತ-ವಾದ ಉಕ್ಕಿನ ತಂತಿಗಳಿಂ ಜತೆಗೊಳಿಸಿ ಅಲ್ಲಿಗಲ್ಲಿಗೆ ಬಣ್ಣವಂ ಬರೆದು ಪೂರೈಸಿದ ಕೃತ್ರಿಮಸಿಂಹವಾಗಿರಬಹುದು' (ಪು. ೨೨). ಇಂಥ ದೀರ್ಘವಾಕ್ಯಗಳೊಡನೆ 'ನಿಮ್ಮಂ ಶರಣಂ ಹೊಕ್ಕೆನು' ಎಂಬ ಚಿಕ್ಕ ವಾಕ್ಯಗಳೂ ಬಂದಿವೆ. ಈ ಶೈಲಿಯ ವಿಶಿಷ್ಟರೂಪಕ್ಕೆ ಪ್ರೇರಕವಾದ ತತ್ವ ಯಾವುದೂ ಇಲ್ಲ. ಹಳಗನ್ನಡವನ್ನು ಹೊಸಗನ್ನಡಕ್ಕೆ ಪರಿವರ್ತಿಸುತ್ತಿರುವಾಗ ತೋರುವ ಸಂಧಿಕಾಲದಲ್ಲಿಯ ಗೊಂದಲವೆಲ್ಲ ಇದರಲ್ಲಿದೆ. ಆದರೂ ಕೆಂಪುನಾರಾಯಣನಲ್ಲಿ ಶಬ್ದಶಕ್ತಿಯಿದೆ, ನವೀನದೃಷ್ಟಿಯಿದೆ ಎಂಬುದನ್ನು ಅರಿತಿರಬೇಕು. ಮೈಸೂರು ಅರಸುಗಳ ಮನೆತನಕ್ಕೆ ಸೇರಿದ ಅಳಿಯ-ಲಿಂಗರಾಜನು (೧೮೨೩-೧೮೭೪) ೪೭ ಗ್ರಂಥಗಳನ್ನು ರಚಿಸಿದ್ದಾನೆ. ಮುಮ್ಮಡಿ ಕೃಷ್ಣರಾಜನ ಪೋಷಣೆಯಲ್ಲಿದ್ದು ವಿದ್ಯಾವಂತನಾಗಿ ಅವನಂತೆ ವಿಪುಲವಾದ ಸಾಹಿತ್ಯನಿರ್ಮಾಣಮಾಡಿದ್ದಾನೆ. 'ಚಂಪು, ಸಾಂಗತ್ಯ, ಷಟ್ಪದಿ, ಯಕ್ಷಗಾನ, ಶತಕ, ಹಾಡು, ಲಾವಣಿ ಇದೇ ಮೊದಲಾದ ರೂಪದಲ್ಲಿರುವ ಇವನ ಗ್ರಂಥಗಳು ಈತನ ಸರ್ವತೋಮುಖವಾದ ಕವಿತಾಶಕ್ತಿಯನ್ನು ಸೂಚಿಸುತ್ತವೆ' ಎಂದು ಕವಿ-ಚರಿತಕಾರರು ಹೇಳಿದ್ದಾರೆ. ಕವಿತಾಶಕ್ತಿ ಸರ್ವತೋಮುಖವಾದರೂ ಊರ್ಧ್ವ-ಮುಖವಲ್ಲ, ಅಲ್ಲದೆ ಸಂಪ್ರದಾಯಶರಣವೆಂದು ತೋರುತ್ತದೆ. ೧೯ನೆಯ ಶತಕದ ಕೊನೆಯ ಭಾಗದಲ್ಲಿ ಆಗಿ ಹೋದ ಕವಿಗಳಲ್ಲಿ ಬಸವಪ್ಪಶಾಸ್ತ್ರಿಯ ಉಲ್ಲೇಖವನ್ನು ವಿಶೇಷವಾಗಿ ಮಾಡಬೇಕು, ಅವನು 'ಶಾಕುಂತಳ, ಚಂಡಕೌಶಿಕ, ಉತ್ತರರಾಮ-ಚರಿತ, ಶೂರಸೇನಚರಿತ್ರೆ' ಎಂಬ ನಾಟಕಗಳನ್ನೂ 'ದಮಯಂತೀಸ್ವಯಂವರ' ಎಂಬ ಚಂಪುವನ್ನೂ 'ಸಾವಿತ್ರೀಚರಿತ್ರೆ' ಎಂಬ ಷಟ್ಪದಿಕಾವ್ಯವನ್ನೂ 'ನೀತಿಸಾರ-ಸಂಗ್ರಹ ಮತ್ತು ಭರ್ತೃಹರಿಶತಕ' ಎಂದು ಅನುಕ್ರಮವಾಗಿ ಕಂದವೃತ್ತಗಳನ್ನೂ ರಚಿಸಿದ್ದಾನೆ. 'ರೇಣುಕಾರ್ಯವಿಜಯ' ಎಂಬ ಚಂಪೂಗ್ರಂಥವನ್ನೂ ಬರೆದಂತೆ ತಿಳಿಯುತ್ತದೆ. ನಾಟಕಗಳಲ್ಲಿ ಮೊದಲಿನ ಮೂರು ಸಂಸ್ಕೃತನಾಟಕಗಳ ಭಾಷಾಂತರ-ಗಳಾಗಿದ್ದು 'ಶೂರಸೇನಚರಿತ್ರೆ' ಶೆಕ್ಸಪಿಯರ್ ಕವಿಯ ಆಥೆಲ್ಲೊ ನಾಟಕದ

ಅನುವಾದವಾಗಿದೆ. ಕನ್ನಡಸಾಹಿತ್ಯದ ಸಾವಿರಾರು ವರ್ಷಗಳ ಚರಿತ್ರೆಯಲ್ಲಿ ಸಂಸ್ಕೃತಕಾವ್ಯನಾಟಕಗಳ ಪ್ರಭಾವವು ನಮ್ಮ ಕವಿಗಳ ಮೇಲೆ ಆಗಿದ್ದರೂ ಅವುಗಳ ಅನುವಾದವು ಮೊದಲನೆಯದಾಗಿ 'ಮಿತ್ರವಿಂದಾಗೋವಿಂದಾ' ನಾಟಕದಲ್ಲಿ ಆಯಿತು. ಶಾಕುಂತಲದಂಥ ಉತ್ತಮ ನಾಟಕದ ಅನುವಾದವಾದದ್ದು ಬಸವಪ್ಪ-ಶಾಸ್ತ್ರಿಯಿಂದಲೇ ಮೊದಲು. ಶೇಕ್ಸಪಿಯರನಂಥ ಶ್ರೇಷ್ಠನಾಟಕಕಾರನ ಉತ್ತಮ-ದುರಂತನಾಟಕವೊಂದರ ಅನುವಾದವೂ ಅವನಿಂದಲೇ ಮೊದಲು. ಹೊಸಗನ್ನಡ-ಸಾಹಿತ್ಯಕ್ಕೆ ಇಂಗ್ಲಿಷ್ ಸಾಹಿತ್ಯ ಕೊಟ್ಟ ಸ್ಫೂರ್ತಿ ಇಲ್ಲಿ ಎದ್ದು ಕಾಣುತ್ತದೆ. ಬಸವಪ್ಪ-ಶಾಸ್ತ್ರಿ ಮೇಲಾದ ಅನುವಾದಕಾರ. ಅವನ ಕವಿತಾಶಕ್ತಿ ಮತ್ತು ಪದ್ಯರಚನಾಶಕ್ತಿ ಮೇಲಾದುವು. ಶಾಕುಂತಲದ ಪದ್ಯಗಳಲ್ಲಿ ಇದನ್ನು ಕಾಣಬಹುದು. ಅವನಿಗೆ 'ಅಭಿನವಕಾಲಿದಾಸ' ಎಂಬ ಬಿರುದು ಕಾಲಿದಾಸನ ಅನುವಾದಕಾರ ಎಂಬರ್ಥ-ದಲ್ಲಿದ್ದರೆ ಮಾತ್ರ ಯಥೋಚಿತವಾದುದು.

೧೯ನೆಯ ಶತಮಾನದ ಕೊನೆಕೊನೆಗೆ ಉದಯವಾಗಿ ೨೦ನೆಯ ಶ.ದ ಮೊದಲಲ್ಲಿ ಅಸ್ತನಾದ ಮುದ್ದಣನು ಹಳೆಯ ಮತ್ತು ಹೊಸ ಸಾಹಿತ್ಯಗಳ ಸಂಧಿಸಮಯದ ಸಂಕೇತವಾದನು. ಸೂರ್ಯಾಸ್ತದ ಹೊತ್ತಿಗೆ ಬೆಳ್ಳಗೆ ಹೊಳೆದ ಬೆಳ್ಳಿ ಸಂಜೆ-ಯಾದೊಡನೆ ಕೆಲಕಾಲ ಮಾತ್ರ ತಳತಳಸಿ ಮುಳುಗಿದಂತೆ ಅವನ ಅಲ್ಪಜೀವನ-ವಾಯಿತು. ನಂದಳಿಕೆ ಲಕ್ಷ್ಮೀನಾರಾಯಣ ಮತ್ತು ಮುದ್ದಣರು ಇಬ್ಬರೂ ಬೇರೆಯೊ ಒಂದೆಯೊ ಎಂಬ ಭೇದಾಭೇದ ಚರ್ಚೆ ಹಿಂದೆ ನಡೆದು ಭೇದವು ಕವಿಮಾಯೆಯಿಂದ ಕಲ್ಪಿತವಾದದ್ದೆಂದು ತಿಳಿದು ಅಭೇದಸಿದ್ಧಾಂತವು ಈಗ ಸ್ಥಾಪಿತವಾಗಿದೆ! ಆದೀಗ ಗತಕಾಲದ ವಾದವಾಯಿತು. ಮುದ್ದಣನು ತನ್ನ ಮೂವತ್ತೊಂದು ವರ್ಷಗಳ ಅಲ್ಪಾಯುಷ್ಯದಲ್ಲಿ ಹತ್ತಿಪ್ಪತ್ತು ರೂಪಾಯಿ ಸಂಬಳದ ವ್ಯಾಯಾಮಶಿಕ್ಷಕನಾಗಿ ಕನ್ನಡವ್ಯಾಸಂಗಪರಿಣತಿಯನ್ನು ಪಡೆಯುವ ಸಾಹಸಮಾಡಿದ್ದಲ್ಲದೆ 'ರತ್ನಾವತೀ-ಕಲ್ಯಾಣ, ಕುಮಾರವಿಜಯ' ಎಂಬ ಯಕ್ಷಗಾನಪ್ರಸಂಗಗಳನ್ನೂ, 'ಅದ್ಭುತ-ರಾಮಾಯಣ, ರಾಮಪಟ್ಟಾಭಿಷೇಕ, ರಾಮಾಶ್ವಮೇಧ' ಎಂಬ ಕಾವ್ಯಗಳನ್ನೂ ರಚಿಸಿ ಕನ್ನಡನುಡಿಯ ಕಣಜಕ್ಕೆ ನೀಡಿದನು. ಇದಲ್ಲದೆ 'ಗೋದಾವರಿ' ಎಂಬ ಕಾದಂಬರಿಯ ಕೆಲವು ಪರಿಚ್ಛೇದ, ಭಗವದ್ಗೀತೆ–ರಾಮಾಯಣಗಳ ಕನ್ನಡ ಅನುವಾದ, ಕಾಮಶಾಸ್ತ್ರವನ್ನು ಕುರಿತು ಗ್ರಂಥ, ಸಂಶೋಧನೆಯ ಲೇಖನ ಇವನ್ನು ಬರೆದಿದ್ದಾನೆ. ವ್ಯಾಕರಣ, ನಿಘಂಟು ಇವುಗಳಿಗೆ ಸಂಬಂಧಿಸಿದ ಗ್ರಂಥಗಳ ಯೋಜನೆ ಮಾಡಿದ್ದನಂತೆ. ಅವನು ವಿಷಮಪರಿಸ್ಥಿತಿಯೊಡನೆ ಹೋರಾಡುತ್ತ ಇನ್ನೂ ಮೇಲಾದ ಅದ್ಭುತಕಾರ್ಯ-ಗಳನ್ನು ಮಾಡಿದರೆ ಜನ ನಂಬಲಿಕ್ಕಿಲ್ಲವೆಂದು ಭಾವಿಸಿಯೊ ಏನೊ ಮೃತ್ಯು ಅವನನ್ನು ಬೇಗ ಅಪ್ಪಿಕೊಂಡಿತು.

ಮುದ್ದಣನ ಜೀವನಚರಿತ್ರೆಯಲ್ಲಿ ನಮ್ಮ ಕನಿಕರ–ಕೈವಾರಗಳನ್ನು ಸೆಳೆದು-ಕೊಳ್ಳುವ ವಿಶೇಷವಿದೆ. ಆದರೂ ಅವನ ಗ್ರಂಥಗಳ ವಿಮರ್ಶೆಯಲ್ಲಿ ನಾವು

ಮೈಮರೆಯಕೂಡದು. ಅವನ ಮೇಲೆ ಹಳೆಯ ಕಾವ್ಯದ ಸಂಸ್ಕಾರಗಳಾದಂತೆ ಹೊಸ ಪಾಶ್ಚಾತ್ಯ ಪದ್ಧತಿಯ ಸಾಹಿತ್ಯದ ಸಂಸ್ಕಾರಗಳೂ ಆದುವು. ಬಿ. ವೆಂಕಟಾಚಾರ್ಯರ ಕಾದಂಬರಿಗಳನ್ನು ಅವನು ಓದಿಕೊಂಡಿದ್ದನು. ಹಳೆಯ ತಂತ್ರ, ಹೊಸ ಮಂತ್ರ ಎರಡೂ ಅವನನ್ನು ಆಕರ್ಷಿಸಿದ್ದುವು. ಇನ್ನೂ ಹೆಚ್ಚಾದ ಇಂಗ್ಲಿಷ್ ಶಿಕ್ಷಣವನ್ನು ಪಡೆದಿದ್ದರೆ ಮತ್ತು ತನಗೆ ತೋರಿದಂತೆ ಬರೆವರೆ ಅಂದಿನ ಕನ್ನಡನಾಡಿನಲ್ಲಿ ಮನ್ನಣೆ-ದೊರೆಯಬಹುದೆಂಬ ನಂಬಿಕೆ ಅವನಲ್ಲಿ ಹುಟ್ಟಿದ್ದರೆ ಅವನು ಹೊಸ ತಂತ್ರ, ಹೊಸ ಶೈಲಿಗಳನ್ನು ಅಂಗೀಕರಿಸಿ ಸ್ವತಂತ್ರನಿರ್ಮಾಣವನ್ನು ಮಾಡಬಹುದಾಗಿತ್ತು. ಆದರೆ ಅವೆರಡೂ ಅಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿರಲಿಲ್ಲ. ಅಪರಿಹಾರ್ಯವಾಗಿ ಅವನು ಹಳೆಯ ತಂತ್ರವನ್ನು ಸ್ವೀಕರಿಸಿದನು, ಅದರಲ್ಲಿ ಸಾಧ್ಯವಾದಷ್ಟು ಹೊಸ ಮಂತ್ರವನ್ನು ಊದಿದನು.

ಅವನ 'ಅದ್ಭುತರಾಮಾಯಣ'ವು ಶಾಕ್ತಸಂಪ್ರದಾಯದ ರಾಮಾಯಣಕಥೆ-ಯನ್ನು ಗದ್ಯದಲ್ಲಿ ಸಂಗ್ರಹಗೊಳಿಸಿದೆ. ವ್ಯಾಯಾಮಶಿಕ್ಷಕನು ಅಂಗಸಾಧನೆಯಲ್ಲಿ ಕೆಲವು ಬೈಠಕುಗಳನ್ನು ತೆಗೆದು ನೋಡುವಂತೆ ಮುದ್ದಣನು ಇದರಲ್ಲಿ ತನ್ನ ನುಡಿ-ಬಲ್ಮೆಯನ್ನೂ ಸಂಗ್ರಹಚಾತುರ್ಯವನ್ನೂ ಅರಿತುಕೊಳ್ಳಲು ಹವಣಿಸಿದ್ದಾನೆ. ರೀತಿ-ಪ್ರಧಾನವಾದ ಚಿಕ್ಕ ಗ್ರಂಥವಿದು. ಮೂಲದಲ್ಲಿದ್ದ ವಸ್ತು, ಪಾತ್ರಗಳನ್ನು ಅವನು ಇದ್ದಂತೆ ಎತ್ತಿಕೊಂಡಿದ್ದಾನೆ. ವ್ಯತ್ಯಾಸಮಾಡುವ ಉದ್ದೇಶವು ಅವನಲ್ಲಿಲ್ಲ. ನೀರಸ-ವಾದ ಭಾಗಗಳನ್ನು ಬಿಟ್ಟು ಅವಶ್ಯವಾದುವುಗಳನ್ನು ಸಂಕ್ಷೇಪಿಸಿ ಮುಖ್ಯವಾದ ಕಥಾನಕವನ್ನು ಮೂಲದಂತೆ ಸ್ವಾರಸ್ಯವಾಗಿ ಅನುವಾದಮಾಡುವುದು ಅವನ ಉದ್ದೇಶ-ವಿತ್ತು. ಅದು ಕೈಗೂಡಿದೆಯೆನ್ನಬೇಕು. ಆದರೆ ಇದು 'ಸುಂದರವಾದ ವಚನಕಾವ್ಯ' ಎನ್ನಲು ನಾವು ಸಿದ್ಧರಿಲ್ಲ. 'ಈ ವಚನಕಾವ್ಯ ಉತ್ತಮವಾದ ಕೆಲವು ಕಥೆಗಳನ್ನು ಒಳಗೊಂಡಿರುವುದರಿಂದ ಓದುವುದಕ್ಕೆ ತುಂಬ ಸೊಗಸಾಗಿದೆ. ಮುದ್ದಣನ ಅದ್ಭುತ-ರಾಮಾಯಣವನ್ನು ಓದುತ್ತಿದ್ದರೆ ಆಧುನಿಕ ಸಣ್ಣಕಥೆಗಳನ್ನು ಓದುತ್ತಿರುವಂತೆ ನಮಗೆ ಭಾಸವಾಗುತ್ತದೆ'[1] ಎಂಬ ಪ್ರಶಂಸೆ ಹೆಚ್ಚೆಂದು ನಮಗೆ ತೋರುತ್ತದೆ. ಅದರ ಗುಣಭಾಗವೆಲ್ಲ ಚೊಕ್ಕಟವಾದ, ಬಿಗಿಯಾದರೂ ತಿಳಿಯಾದ ಹಳಗನ್ನಡ ಗದ್ಯದಲ್ಲಿದೆ. ಅಲ್ಲಲ್ಲಿ ಕವಿಗೆ ತಿಳಿದೊ ತಿಳಿಯದೆಯೊ ಹೊಸಗನ್ನಡ ಪ್ರಯೋಗಗಳು ಬಂದಿವೆ. ಚಿಕ್ಕ ಚಿಕ್ಕ ವಾಕ್ಯಗಳು ಹೊಸ ಗದ್ಯದ ಗುರುತಾಗಿ ಮೆರೆಯುತ್ತವೆ. ತದ್ಭವಗಳ ಅತಿರೇಕ, ಪ್ರಾಸದ ಆಡಂಬರ, ಅಚ್ಚಗನ್ನಡದ ಹುಚ್ಚು ಆವೇಶ ಒಮ್ಮೊಮ್ಮೆ ಈ ಶೈಲಿಯನ್ನು ಕೃತಕಗೊಳಿಸಿದರೂ ಮುದ್ದಣನು ತನ್ನದೇ ಆದ ಪ್ರೌಢಪ್ರಸನ್ನಗದ್ಯದ ಹೊಳಹನ್ನು ಹಾಕುತ್ತಿದ್ದನೆಂದು ತಿಳಿಯಬೇಕು.

---

1 ಎಸ್. ವಿ. ಪರಮೇಶ್ವರಭಟ್ಟ : ಅದ್ಭುತರಾಮಾಯಣ, ಪೀಠಿಕೆ, ಪು. ೪೦

'ರಾಮಪಟ್ಟಾಭಿಷೇಕ'ವು ಮುದ್ದಣನ ಒಂದೇ ಒಂದಾದ ಪದ್ಯಕಾವ್ಯ. ಇದ
ವಾರ್ಧಕಷಟ್ಪದಿಯಲ್ಲಿ ಬರೆಯಲಾಗಿದೆ. ವನವಾಸದಿಂದ ಮರಳಿ ಬಂದ ಮೇ
ಜರುಗಿದ ರಾಮಪಟ್ಟಾಭಿಷೇಕವೇ ಇದರ ವಿಷಯ. ಇದರಲ್ಲಿ ಕಥಾಭಾಗ ಕಡಿ
ವರ್ಣನಾಭಾಗವೇ ಹೆಚ್ಚು. ರಾಮನ ನಿರೀಕ್ಷೆಯನ್ನು ಮಾಡುತ್ತಿರುವ ಭರತ
ಪ್ರೇಮಾದರ, ಉತ್ಸುಕತೆ, ಸಂಭ್ರಮ ಇವುಗಳ ಚಿತ್ರ ಸೊಗಸಾಗಿದೆ. 'ರಾ
ನಾಮಾಮೃತದ ಬಿಂದಿಗೆ'ಯೆಂಬುದು ಸಾರ್ಥಕವಾಗುವಂತೆ ರಾಮಭಕ್ತಿ, ನಾ
ಸ್ಮರಣೆಗಳಿಗೆ ಇದರಲ್ಲಿ ಪ್ರಾಮುಖ್ಯಬಂದಿದೆ. ವರ್ಣನೆಗಳಲ್ಲಿ ಸಮುದ್ರವರ್ಣ
ರಾಮನು ಹಿಂದೆ ಸಂದರ್ಶಿಸಿದ ಸ್ಥಲಗಳ ವರ್ಣನೆ ಮುಂತಾದುವು ಚಮತ್ಕ
ಪ್ರಧಾನವಾಗಿ ಬಂದಿವೆ. 'ಇದರಲ್ಲಿ ಸುಲಭತೆಯಿರುವಂತೆ ಕ್ಲಿಷ್ಟತೆಯೂ ಇರುವು
ಶಬ್ದಚಮತ್ಕಾರಗಳಿರುವಂತೆ ಅರ್ಥಚಮತ್ಕಾರಗಳೂ ಕಂಡು ಬರುವವು'[1] ಎ
ಹೇಳಿಕೆ ಸರಿಯಾಗಿದೆ. ಒಟ್ಟಿನಲ್ಲಿ ಗದ್ಯಕಥೆ ಬರೆಯುವ ವಿಷಯದಲ್ಲಿ 'ಅದ್ಭು
ರಾಮಾಯಣ'ವು ಒಂದು ಕವಿತಾಪ್ರಯೋಗವಾದಂತೆ ಪದ್ಯಕಾವ್ಯದಲ್ಲಿ ಇ
ಪ್ರಯೋಗವಾಗಿದೆ. ಕ್ರಮೇಣ ಬೆಳೆಯುತ್ತಿರುವ ಮುದ್ದಣನ ಪ್ರತಿಭೆ, ಪಳಗುತ್ತಿರು
ಶೈಲಿ ಇವುಗಳಿಗೆ ಇಲ್ಲಿ ಸಾಕ್ಷ್ಯದೊರೆಯುತ್ತವೆ. ಆದರೆ ಪಾಂಡಿತ್ಯ-ಚಮತ್ಕೃತಿ
ವ್ಯಾಮೋಹವು ಅವನನ್ನು ಬಿಡಲೊಲ್ಲದು ಎಂಬುದನ್ನು ಇಲ್ಲಿ ಕಾಣಬಹುದು.

'ರಾಮಾಶ್ವಮೇಧ'ವು ಮುದ್ದಣನ ಮೂರನೆಯ ಮತ್ತು ಕೊನೆಯ ಕಾ
ಮೊದಲಿನೆರಡರಲ್ಲಿ ಹೇಗೊ ಹಾಗೇ ಇಲ್ಲಿಯೂ ರಾಮಾಯಣಕ್ಕೆ ಸಂಬಂಧಿ
ಕಥಾನಕವಿರುತ್ತದೆ. 'ಅದ್ಭುತರಾಮಾಯಣ'ದಲ್ಲಿ ಅಂಗಸಾಧನೆ ಮಾಡಿದ ಗದ್ಯ
ಇಲ್ಲಿ ಪಳಗಿದ ಜಟ್ಟಿಯಂತಾಗಿದೆ. 'ರಾಮಪಟ್ಟಾಭಿಷೇಕ'ದಲ್ಲಿ ತೋರಿದ ಕಲ್ಪನ
ಚಮತ್ಕೃತಿ ಇಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತದೆ. ಪದ್ಮಪುರಾಣದಲ್ಲಿಯ 'ಶೇ
ರಾಮಾಯಣ'ವೇ ಇದರ ಮುಖ್ಯಕಥಾನಕಕ್ಕೆ ಆಕರವಾಗಿದೆ. ಸಾಮಾನ್ಯವಾ
ಕಥಾಸಂಗತಿಗಳಲ್ಲಿ ಇದಕ್ಕೂ ಮೂಲಕ್ಕೂ ಭೇದವು ಕಡಿಮೆ. ಇರುವ ಭೇದವ
ಸೃಷ್ಟಿವರ್ಣನೆ, ಕಥಾಕ್ರಮ, ವಸ್ತುವಿಸ್ತರ ಹಾಗೂ ಮುಖ್ಯವಾಗಿ ಮುದ್ದಣ
ಮನೋರಮೆಯರ ಸರಸದಾಂಪತ್ಯದ ಸಂವಾದಸ್ವಾರಸ್ಯದ ಹೊರಕಟ್ಟು ಇವುಗಳಲ್ಲಿ
ತ್ತದೆ. 'ಓವೊ ಕಾಲಪುರುಷಂಗೆ ಗುಣಮಣಮಿಲ್ಲಂ ಗೆಡ' ಎಂದು ಕಥಾಮುಖ
ಆರಂಭವಾಗಲು ವಾಚಕರು ಅದರ ನವೀನತೆಯಿಂದ ಚಕಿತರಾಗುತ್ತಾರೆ. ದೇವತ
ಪ್ರಾರ್ಥನೆ, ಗುರುಸ್ತುತಿ, ಕುಕವಿನಿಂದೆ, ಆತ್ಮಸ್ತುತಿ ಇದು ಯಾವುದೂ ಇಲ್ಲ
ಮಳೆಗಾಲದ ವರ್ಣನೆಯು ಸ್ವತಂತ್ರರೂಪಕವಲ್ಲಿ ಮೊದಲಾಗುವ ಈ ಗದ್ಯಕಾ
ಕ್ರಾಂತಿಕಾರಕವೆಂದು ತೋರುತ್ತದೆ. ಮುದ್ದಣ-ಮನೋರಮೆಯರ ಸಂವಾದ
ಆನೇಲೆ ನಗೆಯ ತೆರೆತೆರೆಗಳನ್ನು ಎಬ್ಬಿಸಲು ಕವಿಯ ಬಗ್ಗೆ ಹೆಮ್ಮೆ ಇನ್ನೂ ಹೆಚ್ಚುತ್ತ

---

1 ಮ. ಪ್ರ. ಪೂಜಾರ: ರಾಮಪಟ್ಟಾಭಿಷೇಕ (ಮುದ್ದಣ, ಪು. ೩೦)

ಯಲ್ಲಿ ಹಳೆಯದಾದರೂ ಮುದ್ದಣನು ಹೊಸ ಮಂತ್ರವನ್ನು ಅರಿತ ಮಾಂತ್ರಿಕ-
ನೆಂದು 'ರಾಮಾಶ್ವಮೇಧ'ದ ಈ ಭಾಗವು ಸಾರುತ್ತದೆ. ಮುಂದೆಯೂ
ದಂಪತಿಗಳ ಸಂಭಾಷಣೆಗಳು ಬಂದಲ್ಲೆಲ್ಲ ಮೋಹಕವಾಗಿವೆ. ಪೌರಾಣಿಕ-
ವಕಕ್ಕೆ ಮುದ್ದಣನು ಕೊಟ್ಟ ಈ ಪರಿವೇಷವನ್ನು ನೋಡಿದರೆ ನಿಜವಾಗಿಯೂ
ಕಾವ್ಯಸೃಷ್ಟಿಗೆ ಅಚ್ಚ ಹೊಸಬರಾದ ರಸಿಕದಂಪತಿಗಳನ್ನು ಕವಿ ಮತ್ತು ಪಾಠಕಿಯ-
ಗಿ ನಿರ್ಮಿಸಿ ಮುದ್ದಣನು ಕತೆಯಲ್ಲಿ ಹೊಸಜೀವವನ್ನು ತುಂಬಿರುವನೆಂದು
ಯುತ್ತದೆ. ಆದರೆ ಕತೆಯ ಉದ್ದಳತೆಯಲ್ಲಿ ಇದರ ಆಳವು ತೀರ ಕಡಿಮೆಯಾಗಿರು-
, ಮುಖ್ಯಕಥೆಯ ಕಲೆ ಸಾಂಪ್ರದಾಯಿಕವಾಗಿ ಸಾಮಾನ್ಯಕೌಶಲದಿಂದ ಕೂಡಿರು-
, ಇಡಿಯ ಕಥಾರಚನೆ ಗುಣಪೂರ್ಣವೆಂದಾಗಲಿ ಉಜ್ಜ್ವಲವೆಂದಾಗಲಿ ಹೇಳುವುದು
ವಿಲ್ಲ. ಪಾತ್ರದೃಷ್ಟಿಯಿಂದ ಕಥೋಪಕಥೆಗಳ ಓಟದಲ್ಲಿ ವ್ಯಕ್ತಿಗಳನ್ನು ಕಡಿ-
ದು ಚಿತ್ರಿಸುವ ಪ್ರವೃತ್ತಿ ಬಹುಭಾಗದಲ್ಲಿ ತೋರಿದೆಯಾದರೂ ರಾಮ–ಸೀತೆ,
ಣ–ಮನೋರಮೆ ಈ ಹಳೆಯ ಹಾಗೂ ಹೊಸ ಆದರ್ಶದಂಪತಿಗಳ ವಿಷಯದಲ್ಲಿ
ಒಂದು ಪಾತ್ರಕಲ್ಪನೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸಿರುವನು. ರಾಮನ
ನಿರ್ಮಾಣವು ಮಾತ್ರ ತುಂಬ ವಾದಗ್ರಸ್ತವಾಗಿದೆ. ಸೀತಾಪರಿತ್ಯಾಗದ
ರ್ಭದಲ್ಲಿ ಅವನನ್ನು ಸಮರ್ಥಿಸುವುದು ಯಾವ ಕವಿಗೂ ಕಷ್ಟ. ಮುದ್ದಣನು
ಲ್ಲಿ ಮಿಕ್ಕಿದ ವಿಕಾರವಶತೆಯನ್ನೂ ಸಲ್ಲದ ನಿಷ್ಠುರತೆಯನ್ನೂ ಆರೋಪಿಸಿ ಅವನಿಗೂ
ಗೂ ಕೂಡಿಯೆ ಅನ್ಯಾಯಮಾಡಿದ್ದಾನೆ. ಅಲ್ಲದೆ ರಾಮನು ಒಮ್ಮೆ ದೇವ,
ಮ್ಮೆ ಮಾನವನಾಗಿ ಅಸ್ಥಿರವಾದ ಅಸಂಗತವಾದ ವ್ಯಕ್ತಿತ್ವವನ್ನು ತೋರುತ್ತಾನೆ.
ಯ ಸ್ವಭಾವಚಿತ್ರವು ಮಾತ್ರ ಇಲ್ಲಿ ಬಂದಿರುವಷ್ಟು ಸಮರ್ಪಕವಾಗಿದೆ.

'ಕರ್ಮಣಿಸರದೊಳ್ ಜೆಂಬವಳಮಂ ಕೋದಂತಿರೆ ರಸಮೊಸರೆ ಲಕ್ಷಣಂ
ರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ ತಿರುಳ್ಗನ್ನಡದೊಳ್ ಕತೆಯ-
ರ್ಪೆಂ' ಎಂದು ಮುದ್ದಣನು ತನ್ನ ಹೃದ್ಯವಾದ ಗದ್ಯಶೈಲಿಯ ಆದರ್ಶವನ್ನು
ದ್ದಾನೆ. ಈ ತಿರುಳ್ಗನ್ನಡವು ಅವನಿಗೆ ಬಹುಮಟ್ಟಿಗೆ ಸಾಧಿಸಿದೆ. ಆದರೂ
ರಣವಾದ ಸಂಸ್ಕೃತ, ಕ್ಲಿಷ್ಟವಾದ ಕನ್ನಡ ಇವುಗಳಿಂದ ಅವನಿಗೆ ಒಂದೆಸವನಾದ
ದೊರೆತಿಲ್ಲ. 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂಬ ಶ್ರೀ.
ವಿ. ರಂಗಣ್ಣನವರ ತೀರ್ಮಾನವು 'ರಾಮಾಶ್ವಮೇಧ'ಕ್ಕೆ ಒಟ್ಟಿನಲ್ಲಿ
ಹೋಗುತ್ತದೆ. ಆದರೆ ಸಾಮಾನ್ಯ ಚಿತ್ರದಲ್ಲಿಯೂ ಅಲ್ಲಲ್ಲಿ ಮಿನುಗುತ್ತಿರುವ
ರ್ಣದ ಗೆರೆಗಳನ್ನು ನೋಡಿ ನಾವು ಮುಗ್ಧರಾಗಬೇಕು.

ಮುದ್ದಣನು ಮಹಾಕವಿಯೇ? ಎಂಬ ಪ್ರಶ್ನೆಗೆ ಉತ್ತರಗಳು ಒಂದೆ ರೀತಿ-
ಲ್ಲ. 'ರಾಮಾಶ್ವಮೇಧ'ದಲ್ಲಿಯ ಸಮಯಸ್ವತಂತ್ರವಾದ ವರ್ಷಾರಂಭ-
ಲ್ಲಿಯ ಕಲ್ಪನಾವೈಭವ, ಕನ್ನಡಕ್ಕೆ ನವೀನವಾದ ಮುದ್ದಣಮನೋರಮೆಯರ

ಸಂವಾದಪರಿವೇಷ, ಅಲ್ಲಲ್ಲಿ ಅನೂನವಾಗಿ ಸಹಜಲೀಲೆಯಿಂದ ಸೊಲ್ಲುವ ತಿರುಳ್ಗನ್ನಡ ಇವು ಮಹಾಕವಿಯೋಗ್ಯವಾಗಿವೆ. ಅವನಲ್ಲಿ ಮಹಾಕವಿಯ ಅಂಶವಿದೆಯಾದರೂ ಒಟ್ಟನಲ್ಲಿ ಅವನು ಸತ್ಕವಿಯಾಗಿ ತನ್ನ ಕೃತಿಗಳಲ್ಲಿ ತೋರಿದ್ದಾನೆ. ಅವನ ಅಲ್ಪಾಯುಷಿಯಾದ ಬಾಳಿನಲ್ಲಿ, ದಿನದಿನದ ಜೀವನಕಲಹದಲ್ಲಿ ಅವನು ಈ ನೆಲೆಯನ್ನು ಮುಟ್ಟಿ ಮೆರೆದದ್ದು ಸೋಜಿಗವೇ ಸರಿ.

೩೬. ಸಮಾರೋಪ

(ಕನ್ನಡಸಾಹಿತ್ಯದ ವೈಲಕ್ಷಣ್ಯಗಳು)

ಈವರೆಗೆ ಕನ್ನಡಸಾಹಿತ್ಯದ ಚಾರಿತ್ರಿಕ ಸಮೀಕ್ಷೆಯನ್ನು ಮಾಡಿದ್ದಾಯಿತು. ಷ್ಟು ಸಂಗ್ರಹವೆಂದರೂ ಈ ಸಮೀಕ್ಷೆ ವಿಸ್ತಾರವಾಯಿತೆಂಬುದು ನಿಜ. ಸಾವಿರಾರು ರ್ಷಗಳ ಕಾಲವೀಥಿಯಲ್ಲಿ ಹಾಯ್ದುಹೋದ ಸಾವಿರಾರು ಗ್ರಂಥಕಾರರಲ್ಲಿ ಕೆಲವರ ುಖಪರಿಚಯವನ್ನಾದರೂ ಮಾಡಿಕೊಡುವುದು ನಮ್ಮ ಉದ್ದೇಶವಾಗಿತ್ತು. ದರೊಡನೆ ಅವರಲ್ಲಿ ಗಣ್ಯರಾದ ಗ್ರಂಥಕಾರರ ವಿಷಯವಾಗಿ ಸಾಧ್ಯವಾದಷ್ಟು ಮರ್ಶನಸಾಮಗ್ರಿಯನ್ನು ಒದಗಿಸಬೇಕೆಂದೂ ನಮ್ಮ ಸಂಕಲ್ಪವಿತ್ತು. ಇವೆರಡೂ ್ಕಮಟ್ಟಿಗೆ ಕೈಗೂಡಿವೆಯೆಂದು ವಾಚಕರಿಗೆ ತೋರಿದರೆ ಈ ಶ್ರಮ ಸಫಲ-ಾಗುತ್ತದೆ.

ಕನ್ನಡಸಾಹಿತ್ಯದ ಕಾಲವಿಸ್ತಾರ ಬೆರಗುಗೊಳಿಸುವಂಥದು. ಗ್ರಂಥಕಾರರ ುತ್ತು ಗ್ರಂಥಗಳ ಸಂಖ್ಯೆ ಸಹ ಎದ್ದುಕಾಣುವಂಥದು. ಕವಿಚರಿತೆಯ ಮೂರು ಂಪುಟಗಳು ಸೇರಿ ಗ್ರಂಥಕರ್ತರ ಸಂಖ್ಯೆ ೧೧೪೪ ಎಂದು ಕವಿಚರಿತಕಾರರು ್ಕಮಾಡಿ ತಿಳಿಸಿದ್ದಾರೆ. ಇದರಲ್ಲಿ ಕೆಲವು ಬರಿ ಹೆಸರುಗಳಾಗಿರಬಹುದು, ಇನ್ನು ಲವು ಹೆಚ್ಚಿನ ಬರೆವಣಿಗೆಯಿಲ್ಲದ ಹೆಸರುಗಳಾಗಿರಬಹುದು. ಇಂಥವನ್ನು ತೆಗೆದು ಮೇಲಿನ ಸಂಶೋಧನೆಯಿಂದ ಕಂಡುಹಿಡಿದ ಕೆಲವನ್ನು ಕೂಡಿಸಿದರೆ ಸುಮಾರು ಂದು ಸಾವಿರದಷ್ಟು ಜನ ಗ್ರಂಥಕರ್ತರು ಆಗುತ್ತಾರೆ. ಯಾವ ಸಾಹಿತ್ಯದ ುಲ್ಮೆಯೂ ಕಾಲವಿಸ್ತಾರ ಇಲ್ಲವೆ ಗ್ರಂಥಕರ್ತರ ವಿಪುಲಸಂಖ್ಯೆಯ ಮೇಲೆ ರ್ಣಯವಾಗುವುದಿಲ್ಲ. ಆದರೆ ಅದರಿಂದ ತಿಳಿಯುವ ಪರಂಪರೆಯ ಸುದೀರ್ಘತೆ-ಯನ್ನೂ ಗಾಢಸಂಸ್ಕಾರವನ್ನೂ ಅಲ್ಲಗಳೆಯಲಾಗದು. ಕನ್ನಡಸಾಹಿತ್ಯಕ್ಕೆ ಇಂಥ ರಂಪರೆಯಿದೆ, ಅದು ದೃಢಮೂಲವಾಗಿದೆ ಎಂಬುದನ್ನು ನೆನೆಯಬೇಕು. ಸಂಸ್ಕೃತ ುತ್ತು ತಮಿಳುಗಳ ತರುವಾಯ ಭಾರತದೇಶದಲ್ಲಿ ಕನ್ನಡಭಾಷೆ-ಸಾಹಿತ್ಯಗಳಿಗೆ ್ರಾಚೀನವೂ ಸಂಪನ್ನವೂ ಆದ ಪರಂಪರೆಯಿದೆ ಎಂಬುದು ಚಾರಿತ್ರಿಕಸತ್ಯ.

ಕನ್ನಡಸಾಹಿತ್ಯದ ವೈಲಕ್ಷಣ್ಯಗಳೇನು? ವೈಲಕ್ಷಣ್ಯವೆಂಬುದಾದರೂ ಅದಕ್ಕೆ ದೆಯೆ? ಈ ಪ್ರಶ್ನೆ ಸಾಹಿತ್ಯಚರಿತ್ರೆಯ ಅಭ್ಯಾಸಕನಿಗೆ ಉಂಟಾದರೆ ಅದು ಸಹಜ. ಸಾಹಿತ್ಯದ ಸ್ಫೂರ್ತಿಕೇಂದ್ರಗಳನ್ನೂ ಆಕರಗಳನ್ನೂ ನೋಡಿದಲ್ಲಿ ಇದರ ಬಹುಭಾಗ ನುಕರಣಶೀಲವಾದದ್ದೆಂದು ತೋರಬಹುದು, ತನ್ನದೇ ಎಂಬ ವೈಲಕ್ಷಣ್ಯವು ಇದರಲ್ಲಿ ಡಿಮೆ ಎಂದೂ ತೋರಬಹುದು. ಇದನ್ನು ನಾವು ಅಭಿಪ್ರಾಯವೆಂದು ಮಾಡಿ-ಕೊಂಡರೆ ಅರ್ಧಸತ್ಯವನ್ನು ಸಂಪೂರ್ಣಸತ್ಯವೆಂದು ತಿಳಿದುಕೊಂಡಂತಾಗುತ್ತದೆ.

ಶ್ರೀಯವರು ಹೇಳಿದಂತೆ 'ಕನ್ನಡಸಾಹಿತ್ಯಕ್ಕೆ ಸಂಸ್ಕೃತಸಾಹಿತ್ಯವೇ ಪ್ರೇರಕ ಪೋಷಕ, ಗುರು'[1] ಎಂಬುದು ದಿಟ. ಆದರೆ ಗುರುವಿನಿಂದ ಪ್ರೇರಣೆ–ಪೋಷಣೆಯನ್ನು ಪಡೆದ ಸತ್‌ಶಿಷ್ಯನು ತನ್ನ ರೀತಿಯಲ್ಲಿ ಬೆಳೆದು ಸ್ವತಂತ್ರವ್ಯಕ್ತಿಯಾಗುತ್ತಾನೆ ಹಾಗೆ ಕನ್ನಡಸಾಹಿತ್ಯವು ಸಂಸ್ಕೃತಸಾಹಿತ್ಯದಿಂದ ಪ್ರಾರಂಭದಿಂದಲೂ ಅನೇಕಾಂಶಗಳಲ್ಲಿ ಸ್ಫೂರ್ತಿಹೊಂದಿರುವುದಾದರೂ ತನ್ನ ಸ್ವತಂತ್ರವಿಕಾಸದಿಂದ ವೈಲಕ್ಷಣ್ಯವನ್ನು ಪಡೆದಿರುತ್ತದೆ. ಕನ್ನಡನುಡಿಗೆ ದ್ರಾವಿಡಮೂಲದಿಂದ ಬಂದ ತನ್ನದೆಂಬ ಸೊತ್ತಿದೆ, ಕನ್ನಡಜನದ ಬಾಳಿಗೆ ಅದೇ ಬಗೆಯ ತನ್ನತನವಿದೆ. ಸಂಸ್ಕೃತದ ಪ್ರಭಾವಗಳು ಎಷ್ಟು ಪರಿಯಿಂದ ಆವರಿಸಿದರೂ ಈ ಮೂಲಸತ್ವವನ್ನು ಅವು ನಷ್ಟಗೊಳಿಸಲಿಲ್ಲ ಕನ್ನಡದ ಬೇರಿಗೆ ಸಂಸ್ಕೃತದ ನೀರು ಬಿದ್ದು ಒಂದು ವಿಶಿಷ್ಟವಾದ ಸಂಸ್ಕೃತಿಯ ಮರವು ಮೊಳೆತು ಬೆಳೆಯಿತು. ದಕ್ಷಿಣಭಾರತದಲ್ಲಿಯ ಇತರ ದ್ರಾವಿಡಭಾಷೆಗಳಿಗೆ ಅವವುಗಳ ರೀತಿಯಲ್ಲಿ ಈ ಸಂಮಿಲನ, ಅದರ ಫಲವಾದ ಸಂತಾನ ತೋರಿದೆ. ಒಟ್ಟಿನಲ್ಲಿ ಕನ್ನಡಸಾಹಿತ್ಯದ ವೈಲಕ್ಷಣ್ಯವು ಕನ್ನಡನಾಡುನುಡಿಗಳಿಗೆ ವಿಶಿಷ್ಟವಾಗಿ ಫಲಿಸಿ ಆರ್ಯ–ದ್ರಾವಿಡ ಅಂಶಗಳ ಸಂಗಮದಿಂದ ಪ್ರಾಪ್ತವಾದ ಸಮಗ್ರತೆಯಲ್ಲಿದೆ ಎಂದು ಅರಿಯಬೇಕು.

ಬಿಡಿಯಾಗಿ ನೋಡಿದರೆ ಕನ್ನಡಸಾಹಿತ್ಯದ ಪ್ರಮುಖವಾದ ವೈಲಕ್ಷಣ್ಯವೆಂದರೆ ಅದರಲ್ಲಿ ಅಭಿವ್ಯಕ್ತಿಹೊಂದಿದ ಮತಪಂಥಗಳ ವೈವಿಧ್ಯ ಮತ್ತು ಅವುಗಳ ಅನ್ಯೋನ್ಯ ಸಂಪರ್ಕ ಮತ್ತು ಸಂಘರ್ಷಗಳಿಂದ ಉಂಟಾದ ನವೀನ ಸಾಮರಸ್ಯ. ಕನ್ನಡ ಸಂಸ್ಕೃತಿಯ ವೈಲಕ್ಷಣ್ಯವೆಲ್ಲ ಕನ್ನಡಸಾಹಿತ್ಯದಲ್ಲಿ ಒಡಮೂಡಿದೆ. ವೈದಿಕಪರಂಪರೆಯ ಶೈವ, ವೈಷ್ಣವ ಭಕ್ತಿಮಾರ್ಗಗಳು, ಆಮೇಲೆ ತಲೆದೋರಿದ ಶಾಂಕರ, ರಾಮಾನುಜ ಮಾಧ್ವಮತತ್ರಯಗಳು ಇವೆಲ್ಲಕ್ಕೆ ಕನ್ನಡಸಾಹಿತ್ಯ ವಾಣಿಯಾಗಿದೆ. ಶಾಂಕರಮತದಲ್ಲಿ ವಿಷ್ಣುಭಕ್ತಿ ಸೇರಿ ರೂಪಗೊಂಡ ಸ್ಮಾರ್ತಭಾಗವತಸಂಪ್ರದಾಯ, ರಾಮಾನುಜಮತದಲ್ಲಿ ವರ್ಣವ್ಯವಸ್ಥೆಯಲ್ಲಿ ಸಮನ್ವಯಗೊಳಿಸಿದ ಸಮಾನಭಾವ ಮತ್ತು 'ಉಭಯವೇದಾಂತ', ಮಾಧ್ವಮತದಲ್ಲಿ ತಾರತಮ್ಯಕ್ರಮದಲ್ಲಿ ಸೇರಿದ ಶಿವಭಕ್ತಿ ಮತ್ತು ಯಜ್ಞಯಾಗಗಳಲ್ಲಿ ಹಿಂಸೆಯ ತ್ಯಾಗ ಇವು ಕನ್ನಡನಾಡಿನಲ್ಲಿ ನಡೆದ ವೈದಿಕ ಅವೈದಿಕ ಮತಪಂಥಗಳ ಮಥನದಿಂದ ಹೊರಪಟ್ಟ ಸಮನ್ವಯದ ಗುರುತುಗಳಾಗಿವೆ ಪ್ರತ್ಯೇಕವಾಗಿ ಇವುಗಳಲ್ಲಿ ಕೆಲವು ಬೇರೆ ಕಡೆಗೂ ಕಾಣಬಹುದು, ಆದರೆ ಸಮಷ್ಟಿಯಲ್ಲಿ ಕನ್ನಡಸಂಸ್ಕೃತಿ ಮತ್ತು ಸಾಹಿತ್ಯದ ವೈಲಕ್ಷಣ್ಯವನ್ನು ಇವು ಎತ್ತಿತೋರುತ್ತವೆ. ಇವುಗಳಲ್ಲದೆ ವೈದಿಕಪರಂಪರೆಗೆ ಸಂಬಂಧವಿಲ್ಲದ ಮತ್ತು ಅದಕ್ಕೆ ವಿರೋಧಿಯಾದ ಬೌದ್ಧ ಮತ್ತು ಜೈನಮತಗಳು ಬಹುಪ್ರಾಚೀನಕಾಲದಿಂದ ಈ ನಾಡಿನಲ್ಲಿ ಕಾಲಿಟ್ಟು ತಮ್ಮ ವರ್ಚಸ್ಸನ್ನು ಬೀರತೊಡಗಿದುವು. ಬೌದ್ಧವರ್ಚಸ್ಸು ಕನ್ನಡಸಾಹಿತ್ಯದಲ್ಲಿ ಮೂಡಿ-

1 ಬಿ. ಎಂ. ಶ್ರೀಕಂಠಯ್ಯ: ಕನ್ನಡ ಕೈಪಿಡಿ, ಸಂ. ೨, ಪು. ೪೭೨.

ಬೇಕೆಂದು ಕೆಲವರು ಭಾವಿಸುತ್ತಾರೆ. ಆದರೆ ಅದಕ್ಕೆ ಆಧಾರಗಳು ಬಲವಾಗಿಲ್ಲ. ಜೈನಮತವು ಮಾತ್ರ ಕ್ರಿಸ್ತಶಕಪೂರ್ವದಿಂದಲೂ ಕರ್ನಾಟಕದಲ್ಲಿ ಬೆಳೆಯುತ್ತ ಬಂದಿದೆ. ಕ್ರಿ.ಶ.ದ ಮೊದಲ ಶತಕಗಳಲ್ಲಿ ಕನ್ನಡನುಡಿಯನ್ನು ಸಾಹಿತ್ಯಪದವಿಗೇರಿಸಿ ಕನ್ನಡಸಾಹಿತ್ಯದ ಪ್ರಾರಂಭಕಾರ್ಯವನ್ನು ಮಾಡಿದ ಶ್ರೇಯಸ್ಸು ಜೈನಮತಕ್ಕೆ ಸಲ್ಲುತ್ತದೆ. ಕ್ರಿ.ಶ. ೫–೬ನೆಯ ಶ.ದಿಂದ ೧೨ನೆಯ ಶ.ದ ವರೆಗೆ ಕನ್ನಡಸಾಹಿತ್ಯ ಜೈನಭೂಯಿಷ್ಠವಾಗಿದೆ. ಮುಂದೆಯೂ ಅದು ಹೊಸ ಪ್ರಭಾವಗಳಿಗೆ ಒಳಪಟ್ಟು ಹೊಸ ರೂಪಗಳಲ್ಲಿ ಪೈದಾಳಿದೆ. ೧೨ನೆಯ ಶ.ದಿಂದ ಮುಂದೆ ಇನ್ನೂ ಒಂದು ನವೀನಶಕ್ತಿಯಾಗಿ ಹರಿದು ವೀರಶೈವವು ಕನ್ನಡಸಾಹಿತ್ಯಕ್ಕೆ ಮಹಾಪೂರವನ್ನು ತಂದಿತು. ಒಂದು ದೃಷ್ಟಿಯಿಂದ ಇದನ್ನೂ ಅವೈದಿಕ ಎನ್ನಬಹುದಾದರೂ ವೇದಾಂತ, ಆಗಮಗಳ ಅನುಭಾವ ಮತ್ತು ಭಕ್ತಿಪರಂಪರೆ ಇದರಲ್ಲಿ ಸೇರಿದ ಕಾರಣ ವೈದಿಕವೆಂದೂ ಕರೆಯಬಹುದು. ಮುಖ್ಯವಾಗಿ ವರ್ಣಾಶ್ರಮಧರ್ಮದ ಕಟ್ಟುನಿಟ್ಟಿಗೆ ವಿರೋಧಕವಾದ ಸರ್ವಸಮತ್ವವು ಇದರಲ್ಲಿ ತಲೆಯೆತ್ತಿತು. ವೀರಶೈವ ವಚನ, ಷಟ್ಪದಿ ಮುಂತಾದ ರೂಪಗಳಲ್ಲಿ ಕನ್ನಡಸಾಹಿತ್ಯವು ವೀರಶೈವಸಂಸ್ಕೃತಿಯ ಸಾರವನ್ನು ಒಳಗೊಂಡಿದೆ. ಕನ್ನಡಸಾಹಿತ್ಯಕ್ಕೆ ಇದು ಕೇವಲವಾದ ವೈಲಕ್ಷಣ್ಯವೆಂದು ಹೆಮ್ಮೆಯಿಂದ ಹೇಳಬಹುದು. ಬೇರೆಡೆಗೆ ಜನ್ಮತಾಳಿ ಕನ್ನಡಭೂಮಿಯಲ್ಲಿ ಬೆಳೆದು ಬಂದ ಜೈನ, ಶಾಂಕರ, ರಾಮಾನುಜಮತಗಳು, ಕನ್ನಡನೆಲದಲ್ಲಿಯೇ ಹುಟ್ಟಿ ಬೆಳೆದ ವೀರಶೈವ, ಮಾಧ್ವಮತಗಳು ಕ್ರಿಯೆ–ಪ್ರತಿಕ್ರಿಯೆಯಿಂದ ತಾಕಲಾಡಿ ಹೊಂದಿಕೊಂಡು ಹೊಸ ಸಮನ್ವಯಗಳನ್ನು ಪಡೆದು ಕನ್ನಡಸಾಹಿತ್ಯದಲ್ಲಿ ಅವನ್ನು ಮೂಡಿಸಿರುವುದು ಅದರ ವೈಲಕ್ಷಣ್ಯವಾಗಿದೆ. ಈ ವೈಲಕ್ಷಣ್ಯ, ವೈವಿಧ್ಯ ದಕ್ಷಿಣಭಾರತದ ಇತರ ಸಾಹಿತ್ಯಗಳಲ್ಲಿ ಕಾಣದು. ತಮಿಳು, ತೆಲುಗು, ಮಲಯಾಳಿ ಭಾಷೆಗಳಲ್ಲಿಯ ಪ್ರಾಚೀನಸಾಹಿತ್ಯದಲ್ಲಿ ಕನ್ನಡದಲ್ಲಿದ್ದಷ್ಟು ಅಖಂಡವಾದ, ವೈಭವಶಾಲಿಯಾದ ಜೈನ, ವೀರಶೈವ ಮತ್ತು ಮಾಧ್ವಪರಂಪರೆಗಳಿಲ್ಲ. ಅವುಗಳಲ್ಲಿಯ ಶೈವ, ವೈಷ್ಣವ ಎಂಬ ಪರಂಪರೆಗಳು ಕನ್ನಡಕ್ಕೆ ಸಮಾನವಾಗಿರುತ್ತವೆ. ಮರಾಠಿ ಭಾಷೆಯಲ್ಲಿ ಹಿಂದಿನ ಸಾಹಿತ್ಯವೆಲ್ಲ ಪ್ರಾಯಶಃ ವೈದಿಕಸ್ವರೂಪದ್ದು. ಮಹಾನುಭಾವ ಸಾಹಿತ್ಯದ ಹೊರತಾಗಿ ಉಳಿದುದೆಲ್ಲ ಶಾಂಕರ ಅದ್ವೈತವನ್ನೂ ಸ್ಮಾರ್ತಭಾಗವತಸಂಪ್ರದಾಯದ ವಿಠಲಭಕ್ತಿಯನ್ನೂ ಪ್ರತಿಪಾದಿಸುವಂಥದು. ಜೈನಸಾಹಿತ್ಯವೆಂಬುದಕ್ಕೆ ಅಲ್ಲಿ ಆಸರೆ ದೊರೆತಿಲ್ಲ. ಗುಜರಾತಿಯಲ್ಲಿ ಜೈನಗ್ರಂಥಗಳಿವೆಯಾದರೂ ಕನ್ನಡದಲ್ಲಿದ್ದ ಪರಂಪರೆ ಅದಕ್ಕಿಲ್ಲ. ಭಾರತದೇಶದ ಎಲ್ಲ ಪ್ರಮುಖ ಭಾಷೆಗಳ ಹಿಂದಿನ ಸಾಹಿತ್ಯವನ್ನು ನೋಡಿದರೆ ಅವುಗಳಲ್ಲಿ ರಾಮಾಯಣ, ಭಾರತ, ಭಾಗವತ ಇವುಗಳ ಪ್ರೌಢ ಇಲ್ಲವೆ ಸರಳ ಅನುವಾದ, ಭಕ್ತಿಪರವಾದ ಗೀತವಾಙ್ಮಯ ಇವುಗಳ ಸಮಾನತೆ ಎದ್ದು ಕಾಣುತ್ತದೆ. ಕನ್ನಡವು ಇದಕ್ಕೆ ಅಪವಾದವಾಗಿಲ್ಲ. ಇತರ ಭಾರತೀಯ ಸಾಹಿತ್ಯಗಳ ಲಕ್ಷಣವನ್ನೊಳಕೊಂಡಿದ್ದರೂ ತನ್ನದೆಂಬ ಪರಂಪರೆಯನ್ನು ಅದು ಬೆಳೆಸಿಕೊಂಡು ಬಂದಿದೆ.

ಹೀಗೆ ದಾರ್ಶನಿಕ ವೈವಿಧ್ಯವನ್ನು ಪಡೆದ ಕನ್ನಡಸಾಹಿತ್ಯವು ಗ್ರಂಥವಿಷಯ, ಗ್ರಂಥರೂಪ, ಛಂದಸ್ಸು, ಶೈಲಿ ಮುಂತಾದ ಅಂಶಗಳಲ್ಲಿಯೂ ವಿವಿಧವಾಗಿದೆ, ವಿಲಕ್ಷಣವಾಗಿದೆ. ವೈದಿಕಸಂಪ್ರದಾಯದ ವಿಷಯಗಳಲ್ಲದೆ ಜೈನ ಮತ್ತು ವೀರಶೈವ ವಿಷಯಗಳು ಹಟತೊಟ್ಟು ಕನ್ನಡದಲ್ಲಿ ಪ್ರವೇಶಮಾಡಿವೆ; ಸತ್ಕೃತಿ, ಮಹಾಕೃತಿಗಳಿಗೆ ಪ್ರೇರಣೆಯನ್ನೊದವಿಸಿರುತ್ತವೆ. ಇವು ಒಂದರೊಂದರ ಮೇಲಿನ ಪ್ರಭಾವದಿಂದ ಹೊಸ ರುಚಿಯನ್ನು ಒಮ್ಮೆ ಪಡೆದಿದ್ದರೆ ಒಂದರೊಂದರ ನಡುವಿನ ಕಾದಾಟದಿಂದ ಹೊಸ ಈರ್ಷೆಯನ್ನೂ ತೋರಿವೆ. ಬೆದಂಡೆ–ಚತ್ತಾಣದಂಥ ತೀರ ಹಳೆಯ ಕಾವ್ಯ-ರೂಪಗಳು, ಆಮೇಲಿನ ಚಂಪೂರೂಪ, ಶತಕ–ಅಷ್ಟಕಗಳು ಇವುಗಳಲ್ಲಿ ಸಂಸ್ಕೃತ-ಪ್ರಭಾವವನ್ನು ಹೀರಿ ಕನ್ನಡ ಅಂಶಗಳನ್ನು ಒಳಗೊಂಡ ಮಿಶ್ರಸ್ವರೂಪದ ವೈಶಿಷ್ಟ್ಯ-ವಿದೆ. ತ್ರಿಪದಿ, ಷಟ್ಪದಿ, ರಗಳೆ, ಸಾಂಗತ್ಯ, ವಚನ, ಕೀರ್ತನೆ ಈ ಮುಂತಾದುವಲ್ಲಿ ಬಹುಮಟ್ಟಿಗೆ ಇಲ್ಲವೆ ಸಂಪೂರ್ಣವಾಗಿ ಕನ್ನಡವೆನ್ನಬಹುದಾದ ವೈಶಿಷ್ಟ್ಯವಿದೆ. ಕನ್ನಡಛಂದಸ್ಸು ಬರಬರುತ್ತ ತನ್ನ ಸ್ವತ್ವವನ್ನು ಪಡೆಯಿತೆಂಬುದನ್ನು ಕಾವ್ಯರೂಪಗಳ ಚರಿತ್ರೆ ತಿಳಿಸುತ್ತದೆ. ಮಾರ್ಗ–ದೇಸಿ, ಸಂಸ್ಕೃತ–ಕನ್ನಡ ಇವುಗಳ ಸಮನ್ವಯದಲ್ಲಿ ಕನ್ನಡಶೈಲಿಯ ಉಗಮವಿದೆ,• ವಿಕಾಸವಿದೆ. ಆದರೆ ಪ್ರತ್ಯಕ್ಷ ಕೃತಿಯಲ್ಲಿ ಈ ಸಮನ್ವಯದ ಆದರ್ಶವು ಬೇರೆ ಬೇರೆ ಗ್ರಂಥಗಳಲ್ಲಿ ತೋರಿದ ವೈವಿಧ್ಯವು ಕನ್ನಡ-ಸಾಹಿತ್ಯದ ವೈಲಕ್ಷಣ್ಯಗಳಲ್ಲಿ ಒಂದಾಗಿದೆ. ಆಂಡಯ್ಯನ ಅಚ್ಚಗನ್ನಡದ ಪ್ರಯೋಗವು ಅದರಲ್ಲಿ ಒಂದು ಮಾದರಿ. ಶುದ್ಧದೇಶ್ಯವೆಂಬುದು ಕನ್ನಡಸಾಹಿತ್ಯದಲ್ಲಿ ಅಸಾಧ್ಯ-ವೆಂಬುದನ್ನು ಅವನ ಈ ಪ್ರಯೋಗವೇ ಸಿದ್ಧಮಾಡಿದಂತಾಯಿತು.

'ಕನ್ನಡಸಾಹಿತ್ಯದಲ್ಲಿ ಮತೀಯತೆಯಿದೆ, ಚರ್ವಿತಚರ್ವಣವಿದೆ, ಕವಿಸಮಯದ ಅತಿರೇಕವಿದೆ, ಸಂಸ್ಕೃತದ ಆಡಂಬರವಿದೆ, ವರ್ಣನೆಯ ವೆಗ್ಗಳವಿದೆ' ಈ ಮುಂತಾಗಿ ವಿಮರ್ಶಕರು ಹೇಳುವುದುಂಟು. ಹಳೆಯ ಯಾವ ಸಾಹಿತ್ಯವನ್ನೂ ಕುರಿತು ಸಾಮಾನ್ಯವಾಗಿ ಇಂಥ ವಿಮರ್ಶೆಯನ್ನು ಮಾಡಬಹುದಾಗಿದೆ. ಕನ್ನಡಸಾಹಿತ್ಯದ ಗುಣಾತಿಶಯವನ್ನು ಅಲ್ಲಗಳೆಯದೆ ಅದರ ವಿವಿಧ ಸಂಪತ್ತಿಯನ್ನು ಕೊಂಡಾಡಿಯೂ ಅದರಲ್ಲಿ ದೋಷಗಳಿರುತ್ತವೆಂಬುದನ್ನು ಒಪ್ಪಬೇಕು. ಆದರೆ ಅವನ್ನು ಸರಿಯಾಗಿ ಗುರುತಿಸಬೇಕು, ಆಯಾ ಕಾಲದ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟು ಅವನ್ನು ಖಂಡಿಸಬೇಕು. ಕನ್ನಡಸಾಹಿತ್ಯಚರಿತ್ರೆಯನ್ನು ಸುಮಾರು ನಾಲ್ವತ್ತು ವರ್ಷಗಳ ಹಿಂದೆ ಮೊದಲನೆಯದಾಗಿ ಇಂಗ್ಲಿಷಿನಲ್ಲಿ ಬರೆದು ಮಹೋಪಕಾರಮಾಡಿದ ಇ. ಪಿ. ರೈಸ್ ಅವರು 'ಕನ್ನಡಸಾಹಿತ್ಯದ ವೈಲಕ್ಷಣ್ಯಗಳು' ಎಂಬ ಪ್ರಕರಣ ಬರೆದು ಅಲ್ಲಿಯ ಕೆಲವು ಉಕ್ತಿಗಳಿಂದ ತಿಳಿದೋ ತಿಳಿಯದೆಯೋ ಕನ್ನಡಕ್ಕೆ ತುಂಬ ಅಪಕಾರ-ಮಾಡಿದರೆಂದು ಖೇದದಿಂದ ಹೇಳಬೇಕಾಗುತ್ತದೆ. ಅವರ ವಿಮರ್ಶೆ ಕನ್ನಡವನ್ನರಿಯದ ಇತರ ಜನದಲ್ಲಿ ಪ್ರಸಾರವಾಯಿತು, ಪ್ರಮಾಣಭೂತವಾಯಿತು. ಅದರ ಸತ್ಯಾಸತ್ಯತೆ-ಯನ್ನು ಚರ್ಚಿಸಿರುವ ಒಂದು ಪುಸ್ತಕ, ಲೇಖನ ಕೂಡ ಇಂಗ್ಲಿಷಿನಲ್ಲಿ ಈವರೆಗೆ

ಪ್ರಕಟವಾಗಿಲ್ಲ. ಅದು ಹಳೆಯ ಮಾತಾಯಿತು, ಅವರಿಗಿದ್ದ ಅಂದಿನ ತಿಳಿವಳಿಕೆಯಂತೆ ಏನೇನನ್ನೊ ಅವರು ಬರೆದುಕೊಂಡರು ಎಂದು ಈಗ ಉದಾಸೀನಮಾಡುವುದು ಸರಿಯಲ್ಲ. ಆದರಲ್ಲಿಯ ಸತ್ಯಾಂಶವೆಷ್ಟು ಎಂಬುದನ್ನು ಪರೀಕ್ಷಿಸುವುದು ಅಗತ್ಯವಾಗಿದೆ.

ಅವರು ಕನ್ನಡಸಾಹಿತ್ಯದ ಏಳು ವೈಲಕ್ಷಣ್ಯಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಕೆಲವು ಇತರ ಭಾಷೆಗಳಲ್ಲಿಯೂ ಕಂಡುಬರಬಹುದೆಂದು ಸೂಚಿಸಿದ್ದಾರೆ. ಒಂದೊಂದಾಗಿ ಅವನ್ನು ಇಲ್ಲಿ ಸಂಕ್ಷೇಪವಾಗಿ ಚರ್ಚಿಸೋಣ. (೧) 'ಮೊದಲನೆಯ ವೈಲಕ್ಷಣ್ಯ-ವೆಂದರೆ ಕನ್ನಡಗ್ರಂಥಕಾರರ ಆಸಕ್ತಿ ಬಹುಶಃ ಧಾರ್ಮಿಕವಾಗಿರುತ್ತದೆ. ವ್ಯಾಕರಣ ಮುಂತಾದ ಶಾಸ್ತ್ರಗ್ರಂಥಗಳನ್ನು ಬಿಟ್ಟರೆ ಧರ್ಮಕ್ಕೆ ಸಂಬಂಧಪಡದ ಕೃತಿಯೇ ಇಲ್ಲ. ಅವರು ಬರೆವ ಇತಿಹಾಸವೆಲ್ಲ ಬಹುಭಾಗದಲ್ಲಿ ಧಾರ್ಮಿಕ, ಸಾಧುಸಂತರ ಚರಿತ್ರೆ, ಪುರಾಣಪುಣ್ಯಕಥೆಗಳೇ ಹೆಚ್ಚಾಗಿವೆ. ಲೌಕಿಕಚರಿತ್ರೆ ಶಿಲಾಶಾಸನಗಳಲ್ಲಿ ಮಾತ್ರ ಕಾಣುತ್ತದೆ, ಗ್ರಂಥಗಳಲ್ಲಿ ಮುಂದೆ ತಡವಾಗಿ ಬರುತ್ತದೆ.' ಈ ವೈಲಕ್ಷಣ್ಯ ವಿದೇಶೀ-ಯರ ಕಣ್ಣಿಗೆ ಬೀಳುವುದು ಸ್ವಾಭಾವಿಕ. ಆದರೆ ಹಳೆಯ ಭಾರತೀಯ ಸಾಹಿತ್ಯಕ್ಕೆಲ್ಲ ಇದು ಸಮಾನವಾದುದು. ಒಟ್ಟಿನಲ್ಲಿ ರೈಸ್ ಅವರ ಹೇಳಿಕೆ ಇಲ್ಲಿ ಯಥಾರ್ಥವಾಗಿದೆ. ಆದರೆ ಕನ್ನಡದಲ್ಲಿ ಧಾರ್ಮಿಕಗ್ರಂಥಗಳ ಜೊತೆಗೆ ಲೌಕಿಕಗ್ರಂಥಗಳ ಪರಂಪರೆಯೊಂದು ನಡೆದುಬಂದಿದೆಯೆಂಬುದನ್ನು ಅಲಕ್ಷಿಸಕೂಡದು. ಉಪಲಬ್ಧಸಾಹಿತ್ಯದಲ್ಲಿ ಆದಿಪಂಪನ 'ಭಾರತ' ಅದಕ್ಕೆ ಆದಿಗ್ರಂಥ. ಅದು ಲೌಕಿಕವೆಂದು ಅವನೇ ಸಾರಿದ್ದಾನೆ. ರನ್ನನು ಅದನ್ನು ಅನುಸರಿಸಿದನು. ಇಬ್ಬರೂ ಮತದಿಂದ ಜೈನರಾದರೂ ಭಾರತಕಥೆಯನ್ನು ಲೌಕಿಕದೃಷ್ಟಿಯಿಂದ ಉಜ್ವಲವಾಗಿ ನಿರೂಪಿಸಿದ್ದಾರೆ. ಇದೇ ರೀತಿ ಬಹುಮಟ್ಟಿಗೆ ಲೌಕಿಕವಾದ ಬೇರೆ ಗ್ರಂಥಗಳೂ ಕಾಲಕಾಲಕ್ಕೆ ನಿರ್ಮಾಣವಾಗಿವೆ. ಅನುವಾದರೂಪ-ವಾದ 'ಕರ್ನಾಟಕ ಕಾದಂಬರಿ', 'ಅಭಿನವದಶಕುಮಾರಚರಿತೆ', ಸ್ವತಂತ್ರವಾದ 'ಹರಿಶ್ಚಂದ್ರಚಾರಿತ್ರ', 'ರಾಮಧಾನ್ಯಚರಿತೆ' ಇಂಥ ಕೃತಿಗಳನ್ನು ನೋಡಬೇಕು. 'ಕುಮಾರರಾಮನ ಕಥೆ, ಕಂಠೀರವನರಸರಾಜವಿಜಯ, ಕೆಳದಿನೃಪವಿಜಯ' ಇಂಥ ಗ್ರಂಥಗಳಲ್ಲಿ ನೇರವಾಗಿ ಚರಿತ್ರೆ ಮೂಡಿದೆ; 'ಪಂಪಭಾರತ'ದಂಥ ಲೌಕಿಕಗ್ರಂಥ-ಗಳಲ್ಲಿಯೂ 'ಚಿಕದೇವರಾಯವಂಶಾವಳಿ'ಯಂಥ ಸಂಮಿಶ್ರಗ್ರಂಥಗಳಲ್ಲಿಯೂ ವ್ಯಂಗ್ಯವೂ ವಾಚ್ಯವೂ ಆಗಿ ಬಂದಿದೆ. ಸಾಮಾನ್ಯವಾಗಿ ಕನ್ನಡಸಾಹಿತ್ಯ ಧಾರ್ಮಿಕ, ಮತೀಯವೆಂಬುದು ನಿಜ. ಹೀಗೆನ್ನುವಾಗ ಅದರ ವೈವಿಧ್ಯ, ವಿಶಾಲಭಾವ, ವಿವಿಧ ಸಮನ್ವಯಗಳನ್ನು ಮಾತ್ರ ನೆನೆದಿರಬೇಕು.

(೨) 'ಎರಡನೆಯ ವೈಲಕ್ಷಣ್ಯವೆಂದರೆ ೧೯ನೆಯ ಶ.ದ ವರೆಗೆ ಕನ್ನಡಸಾಹಿತ್ಯದ ಹೆಚ್ಚು ಭಾಗ ಪದ್ಯದಲ್ಲಿದೆ. ಚಂಪುವಿನಲ್ಲಿ ಗದ್ಯವಿದೆ, ಸಂಪೂರ್ಣ ಗದ್ಯಗ್ರಂಥಗಳು ಕಡಿಮೆ.' ಶಾಸನಗದ್ಯ, ಶಾಸ್ತ್ರಗದ್ಯ, ಕಥಾಗದ್ಯ ಇವುಗಳಿಂದ ಪ್ರಾಚೀನವಾಗಿ ಮೊದಲಾದ ಕನ್ನಡಸಾಹಿತ್ಯ ಚಂಪೂಗದ್ಯ, ವಚನಗದ್ಯ ಮುಂತಾದ ಪ್ರಕಾರಗಳನ್ನು

ಒಳಗೊಂಡಿದೆ. ಕನ್ನಡಗದ್ಯಕ್ಕೆ ವೈವಿಧ್ಯವಿದೆ, ಸಾಮರ್ಥ್ಯವಿದೆ. ಆದರೆ ಸಂಪೂರ್ಣ ಗದ್ಯಗ್ರಂಥಗಳ ಸಂಖ್ಯೆ ಬೆರಳಿನ ಮೇಲೆ ಎಣಿಸುವಷ್ಟು ಮಾತ್ರ ಎಂಬುದು ಒಪ್ಪತಕ್ಕ ಮಾತು. ಅಂದಿನ ಪದ್ಯಪ್ರಿಯತೆಗೆ ಕಾರಣವಿತ್ತು. ಆದರೂ 'ಕವಿರಾಜಮಾರ್ಗ'ದ ಕಾಲದಲ್ಲಿ ಮತ್ತು ಅದಕ್ಕೆ ಹಿಂದೆ ದುರ್ವಿನೀತನಂಥ ಅನೇಕ ಪ್ರಸಿದ್ಧ ಗದ್ಯಕಾರರು ಆಗಿಹೋದರೆಂಬ ಉಲ್ಲೇಖವನ್ನು ನೆನೆದಿರಬೇಕು.

(೩) 'ಮೂರನೆಯದಾಗಿ ಶೈಲಿಯಲ್ಲಿ ಹಳಗನ್ನಡರೂಪಗಳಿವೆ, ಸಂಸ್ಕೃತ-ಪ್ರಯೋಗಗಳಿವೆ. ಪುಸ್ತಕಗಳನ್ನು ಪಾಮರರ ಸಲುವಾಗಿ ಅಲ್ಲ, ಪಂಡಿತರ ಸಲುವಾಗಿ ಬರೆಯುತ್ತಾರೆ' (The books are written for scholars, not for the man in the street.)[1] ಈ ಮಾತು ಅರ್ಧಸತ್ಯವಾಗಿದ್ದು ಪರಿಣಾಮದಲ್ಲಿ ಘಾತಕವಾಗಿದೆ. ಕನ್ನಡದಲ್ಲಿ ಪ್ರೌಢಕಾವ್ಯಗಳಿದ್ದಂತೆ ಸುಲಭಗ್ರಂಥಗಳಿವೆ. ವಚನ, ಕೀರ್ತನೆ, ತ್ರಿಪದಿ, ಷಟ್ಪದಿ, ಸಾಂಗತ್ಯಗಳಲ್ಲಿ ಜನಸಾಮಾನ್ಯಕ್ಕಾಗಿ ಕನ್ನಡಸಾಹಿತ್ಯವು ಹುಟ್ಟಿದೆ. ಇದನ್ನು ತಾವೇ ಮೊದಲು ವರ್ಣಿಸಿದ ರೈಸ್ ಸಾಹೇಬರು ಈ ಪ್ರಕರಣದಲ್ಲಿ ಹೇಗೆ ಮರೆತುಬಿಟ್ಟರೋ ತಿಳಿಯದು.

(೪) 'ನಾಲ್ಕನೆಯ ವೈಲಕ್ಷಣ್ಯವೆಂದರೆ ಶ್ಲೇಷ ಮತ್ತು ಶಬ್ದಚಮತ್ಕೃತಿಯ ವ್ಯಾಮೋಹ.' ಭಾರತೀಯ ಸಾಹಿತ್ಯದಲ್ಲಿ ಇದು ಹೆಚ್ಚಾಗಿದೆಯೆಂದೂ ಇದರಿಂದ ಟೀಕೆಟಿಪ್ಪಣಿಗಳಿಲ್ಲದೆ ಅರ್ಥವು ತಿಳಿಯದಂತಾಗುವುದೆಂದೂ ರೈಸ್‌ರು ಹೇಳಿದ್ದಾರೆ. ಜಗತ್ತಿನ ಯಾವ ಸಾಹಿತ್ಯದಲ್ಲಿ ಈ ಹುಚ್ಚಿಲ್ಲ? ಶೇಕ್ಸ್‌ಪಿಯರನ ನಾಟಕಗಳನ್ನೂ ಮಿಲ್ಟನ್ನನ ಕಾವ್ಯಗಳನ್ನೂ ಟೀಕೆಯ ನೆರವಿಲ್ಲದೆ ತಿಳಿದುಕೊಳ್ಳಬಹುದೇ? ಪ್ರೌಢ-ವಾದ ಮಾರ್ಗಕಾವ್ಯ ಎಲ್ಲ ಕಡೆಗಿದೆ. ಇಷ್ಟು ಹೇಳಿಯೂ ಭಾರತೀಯಸಾಹಿತ್ಯದಲ್ಲಿ ಸಂಸ್ಕೃತಕ್ಕೆ ವಿಶಿಷ್ಟವಾದ ಶ್ಲೇಷವು ಕಾವ್ಯಸೌಂದರ್ಯದ ಒಂದು ಭಾಗವಾಗಿ ಬರುತ್ತದೆ ಎಂಬುದನ್ನು ಒಪ್ಪಬೇಕು. ಅದನ್ನು ಅತಿರೇಕಕ್ಕೆ ಒಯ್ದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳ ಕೆಲವು ಭಾಗಗಳಿವೆ ಎಂಬುದೂ ದಿಟ.

(೫) 'ಐದನೆಯದಾಗಿ, ಕಮಲ, ಭ್ರಮರ ಇತ್ಯಾದಿಗಳಿಂದ ಕೂಡಿದ ಪ್ರಸಿದ್ಧ-ರೂಪಕಗಳು ಕಾವ್ಯದಲ್ಲಿ ಬರುತ್ತವೆ. ನಿಸರ್ಗಕ್ಕೆ ವಿರುದ್ಧವಾದ ಕವಿಸಮಯವನ್ನು ಕವಿಗಳು ಪಾಲಿಸುತ್ತಾರೆ.' ಈ ವೈಲಕ್ಷಣ್ಯಕ್ಕೆ ಆಕ್ಷೇಪವೆತ್ತಬೇಕಾಗಿಲ್ಲ. ಆದರೆ ಇದರಿಂದ ಭಾರತೀಯ ಮತ್ತು ಕನ್ನಡಕವಿಗಳ ಕಲ್ಪನಾಶಕ್ತಿ ಸಂಪೂರ್ಣ ಪರತಂತ್ರ-ವೆಂದು ತಿಳಿಯಕೂಡದು. ಕವಿಸಮಯವನ್ನು ಉಪಯೋಗಿಸಿಯೂ ಅವರು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವರಲ್ಲಿ ಕೆಲವರು ಕವಿಸಮಯವನ್ನು ಬದಿಗಿರಿಸಿ

[1] E. P. Rice: A History of Kanarese Literature, p. 106

ಸ್ವತಂತ್ರಕಲ್ಪನೆಗಳನ್ನು ಹೆಣೆದಿದ್ದಾರೆ. ಕವಿಸಮಯವೆಂದರೆ ಎಲ್ಲವೂ ನಿಸರ್ಗಕ್ಕೆ ವಿರುದ್ಧವಾದುದೆಂದು ತಿಳಿಯಕೂಡದು.

(೬) 'ಆರನೆಯದಾಗಿ, ಭಾರತೀಯ ಸಾಹಿತ್ಯದಲ್ಲಿ ಶುದ್ಧವಾದ ಮಾನವ-ಪ್ರೇಮದ ಕಾವ್ಯ (The poetry of pure human love) ಕಾಣುವುದಿಲ್ಲ. ಪಾಶ್ಚಾತ್ಯ ಸಾಹಿತ್ಯದಲ್ಲಿ ಇದು ಹೇರಳವಾಗಿದೆ. ಹೆಂಗಸಿಗೆ ಭಾರತೀಯಸಮಾಜ-ದಲ್ಲಿರುವ ಬಹಳ ಕೀಳಾದ ಸ್ಥಾನವು ಇದಕ್ಕೆ ಅಂಶತಃ ಕಾರಣವಾಗಿದೆ. ಈ ದೇಶದಲ್ಲಿ ಬಾಲ್ಯವಿವಾಹಪದ್ಧತಿಯಿದ್ದ ಕಾರಣ ವಿವಾಹಪೂರ್ವಪ್ರೇಮವಿಲ್ಲ, ಪ್ರಣಯಾರಾಧನೆ-ಯಿಲ್ಲ. ಸಾಹಿತ್ಯದಲ್ಲಿ ಇದರ ಪರಿಣಾಮವಾಗಿ ಪ್ರಣಯಿನಿಯ ಬದಲು ವೇಶ್ಯೆ ಬಂದಿರುತ್ತಾಳೆ. ಶುದ್ಧಪ್ರೇಮದ ಸದ್ಭಾವನೆಯ ಸ್ಥಾನದಲ್ಲಿ ಶೃಂಗಾರಿಕವರ್ಣನೆಗಳ ಅಶ್ಲೀಲವು ಸೇರಿಕೊಂಡು ಕಾವ್ಯಗ್ರಂಥಗಳ ಬಹುಭಾಗವನ್ನು ವಿರೂಪಗೊಳಿಸುತ್ತದೆ. ಸೀತಾ–ದಮಯಂತಿ–ಸಾವಿತ್ರಿ ಇವರ ಪತಿಭಕ್ತಿಯ ಚಿತ್ರಗಳು ಮಾತ್ರ ಹೃದ್ಯ-ವಾಗಿರುತ್ತವೆ.' ರೈಸ್‌ರ ಈ ವಿಮರ್ಶೆ ಸ್ವಲ್ಪುಮಟ್ಟಿಗೆ ಮಿಸ್ ಮೇಯೋಳ ಸರಣಿ-ಯಲ್ಲಿದ್ದರೂ ಇದರಲ್ಲಿ ಸತ್ಯಾಂಶವಿದೆ. ವಾಸವದತ್ತಾ, ಶಕುಂತಲಾ, ಕಾದಂಬರಿ, ಮಹಾಶ್ವೇತಾ, ಮಾಲತಿ, ಸೀತಾ ಈ ಮುಂತಾದ ಪ್ರಣಯಿನಿಯರ ಮತ್ತು ಸತಿಯರ ಚಿತ್ರದಲ್ಲಿ, ಅವರಿಗೆ ಒಲಿದ ಪ್ರಣಯಿಗಳ ಮತ್ತು ಪತಿಗಳ ಚಿತ್ರದಲ್ಲಿ ಯಾವ ಪ್ರೇಮ-ವಿದೆ? ಶುದ್ಧಮಾನವಪ್ರೇಮವೆಂದರಾದರೂ ಏನು? ಕನ್ನಡಸಾಹಿತ್ಯದಲ್ಲಿ ಸಂಸ್ಕೃತ-ಪ್ರಭಾವದಿಂದ ಮತ್ತು ಬೇರೆಯಾಗಿ ಇಂಥ ಚಿತ್ರಗಳು ಬಂದಿವೆ. 'ಆದಿಪುರಾಣ'ದ ಆದಿದೇವನ ಪೂರ್ವಭವದ ಚಿತ್ರಗಳಿಂದ 'ಭರತೇಶವೈಭವ'ದ ಭರತೇಶ್ವರನ ದಾಂಪತ್ಯಜೀವನಚಿತ್ರಗಳವರೆಗೆ ಇವನ್ನು ಉದಾಹರಿಸಬಹುದು. ವಿವಾಹಪೂರ್ವ-ಪ್ರೇಮಕ್ಕಿಂತ ವಿವಾಹೋತ್ತರ ಪ್ರೇಮ–ನಿಷ್ಠೆಗಳ ನಿರೂಪಣೆ ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿದ್ದರೆ ಅದು ಸ್ವಾಭಾವಿಕ. ಜನ್ನನಂಥ ಕವಿ ಪ್ರಣಯಸಮಸ್ಯೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದನ್ನೂ ಈ ಸಂದರ್ಭದಲ್ಲಿ ಸ್ಮರಿಸಬೇಕು. ಔಚಿತ್ಯದೃಷ್ಟಿಯನ್ನು ಕಳೆದುಕೊಂಡು ಪ್ರಮಾಣಜ್ಞಾನವಿಲ್ಲದೆ ಅನೇಕ ಕನ್ನಡಕವಿಗಳು ವೇಶ್ಯಾವಾಟಿಯನ್ನು ವರ್ಣನೆಮಾಡಿದ್ದು ಪ್ರಮಾದವೇ ಸರಿ. ಈ ಬಗ್ಗೆ ರೈಸ್ ಅವರು ಮಾಡಿದ ವಿಮರ್ಶೆ ಸರಿಯಾಗಿದೆ.

(೭) ಏಳನೆಯ ವೈಲಕ್ಷಣ್ಯವನ್ನು ಕನ್ನಡಲೇಖಕರಿಗೆ ಸಂಬಂಧಿಸಿಯೆ ರೈಸ್‌ರು ಘಂಟಾಘೋಷವಾಗಿ ಹೇಳಿದ್ದಾರೆ. ಅದೆಂದರೆ 'ಕನ್ನಡಲೇಖಕರು ಭಾಷೆಯ ಪ್ರಯೋಗದಲ್ಲಿ ಅತ್ಯಂತ ಕುಶಲರಾಗಿ ಕರ್ಣಮಧುರವಾದ ಪದರಚನೆಗಳನ್ನು ಮಾಡುವವರಾದರೂ ಜಗತ್ತಿನ ಜ್ಞಾನಭಾಂಡಾರಕ್ಕೆ ಮತ್ತು ಸ್ಫೂರ್ತಿಸಾಹಿತ್ಯಕ್ಕೆ ಈವರಿಗೆ ತೀರ ಸ್ವಲ್ಪವಾಗಿ ತಮ್ಮದೆಂಬ ಕಾಣಿಕೆಯನ್ನು ಸಲ್ಲಿಸಿರುವರೆಂದು ಒಪ್ಪ-ಬೇಕಾಗುತ್ತದೆ........ವ್ಯಾಕರಣದ ವ್ಯಾಸಂಗದಲ್ಲಿ, ಋತುಗಳ ವರ್ಣನೆಯಲ್ಲಿ ಅವರು

ಮೇಲಾಗಿದ್ದಾರೆ, ಆದರೆ ಮನುಷ್ಯನಿಗೆ ಯಾವಾಗಲೂ ಪ್ರಿಯವಾದ ವಿಷಯಗಳ ಬಗ್ಗೆ ಅವರಲ್ಲಿ ಸ್ವತಂತ್ರವಾದ ಮತ್ತು ಅಮರವಾದ ವಿಚಾರವಿಲ್ಲ........ಜೀವನವೆಂದರೆ ಒಂದು ಮುಗಿಯುವ ಜನ್ಮಯಾತ್ರೆ, ನಿರ್ವಾಣದ ಶೋಧನೆ ಎಂದು ತಿಳಿದ ಕಾರಣ ಆಸೆಯನ್ನು ಹುಟ್ಟಿಸುವ, ಹಿರಿಯ ಸಾಹಸಕ್ಕೆ ಸ್ಫೂರ್ತಿಯನ್ನು ಕೊಡುವ ಸಾಹಿತ್ಯವು ಅವರಿಂದ ನಿರ್ಮಾಣವಾಗಿಲ್ಲ.' (' I am afraid it must be confessed that Kanarese writers, highly skilful though they are in the manipulation of their language, and very pleasing to listen to in the original, have as yet contributed extremely little to the stock of the world's knowledge and inspiration........there is little of original and imperishable thought on the questions of perennial interest to man........Hence a lack of that which stimulates hope and inspires to great enterprises.')[1] ರೈಸ್ ಅವರು ಒತ್ತುಕೊಟ್ಟು ಹೇಳಿದ ಈ ಏಳನೆಯ ವೈಲಕ್ಷಣ್ಯವು ಕನ್ನಡಸಾಹಿತ್ಯಕ್ಕೆ ಅತ್ಯಂತ ಅನ್ಯಾಯವನ್ನು ಮಾಡಿರುತ್ತದೆ. ಕನ್ನಡಸಾಹಿತ್ಯಚರಿತ್ರೆಯನ್ನು ಬರೆದು ಅವರು ಮಾಡಿದ 'ಉಪಕೃತಿ' ಈ ನಿರ್ಣಯಾತ್ಮಕವಾಕ್ಯಗಳಿಂದ ತೊಳೆದು ಹೋದಂತಾಗಿದೆ. ಕನ್ನಡಸಾಹಿತ್ಯವನ್ನು ಅವರು ಸ್ವಂತವಾಗಿ ಎಷ್ಟು ಓದಿ ತಿಳಿದಿದ್ದರೋ ನಾವರಿಯೆವು. ಆದರೆ ಅವರ ಅಭಿಪ್ರಾಯಕ್ಕೆ ಅರ್ಧಜ್ಞಾನವಾಗಲಿ ಪೂರ್ವಗ್ರಹ-ವಾಗಲಿ ಕಾರಣವಾಗಿರಬೇಕೆಂದು ನಮಗೆ ತೋರುತ್ತದೆ. ಜಗತ್ತಿನ ಜ್ಞಾನಭಾಂಡಾರಕ್ಕೆ ಕನ್ನಡದ ಕಾಣಿಕೆಯೇನೆಂಬುದನ್ನು ತಿಳಿಯಲು ಶಾಸ್ತ್ರೀಯ ಮತ್ತು ತಾತ್ವಿಕಗ್ರಂಥ-ಗಳನ್ನು ಕೂಲಂಕಷವಾಗಿ ಪರೀಕ್ಷಿಸಬೇಕು. ವೈದ್ಯ, ಜೋತಿಷ ಮುಂತಾದ ಶಾಸ್ತ್ರಗಳನ್ನು ಕುರಿತು ಕನ್ನಡದಲ್ಲಿ ಹಲವಾರು ಗ್ರಂಥಗಳಿವೆ. ಅವುಗಳಲ್ಲಿ ಸಂಸ್ಕೃತ ಆನುಪೂರ್ವಿಯ ಪ್ರಭಾವವಿದ್ದರೂ ಸ್ವಾನುಭವದ ಸ್ವತಂತ್ರ ಅಂಶಗಳಿವೆ. ಈ ವಿಷಯದ ಪರಿಶೋಧನೆಯಾಗಬೇಕು. ಅಲ್ಲಿಯವರೆಗೆ ಯಾವ ನಿರ್ಣಯವೂ ತಪ್ಪಾದುದು. ತಾತ್ವಿಕಗ್ರಂಥಗಳಲ್ಲಿ ವೀರಶೈವ, ಮಾಧ್ವ ಇವುಗಳ ಸ್ವತಂತ್ರದರ್ಶನ-ಗಳು ಕನ್ನಡಸಾಹಿತ್ಯದಲ್ಲಿಯೆ ಮುಖ್ಯವಾಗಿ ಅಭಿವ್ಯಕ್ತವಾಗಿವೆ. ಜಗತ್ತಿನ ಜ್ಞಾನ-ಭಾಂಡಾರಕ್ಕೆ ಇವು ಉಜ್ವಲವಾದ ಕಾಣಿಕೆಗಳಲ್ಲವೇ? ಜೈನಧರ್ಮ ಮತ್ತು ಶಾಂಕರ, ರಾಮಾನುಜದರ್ಶನಗಳು ಕನ್ನಡಜನಕ್ಕಾಗಿ ವಿವಿಧಸಾಹಿತ್ಯರೂಪಗಳಲ್ಲಿ ಇಳಿದು ಬಂದು ಜನಸಾಮಾನ್ಯದ ತಿಳಿವನ್ನು ಹೆಚ್ಚಿಸಿದ್ದು ಸಣ್ಣಸಂಗತಿಯೇ? ಇನ್ನು ಜಗತ್ತಿನ ಸ್ಫೂರ್ತಿಸಾಹಿತ್ಯಕ್ಕೆ ಕನ್ನಡದ ಕಾಣಿಕೆಯೇನು? ಸ್ಫೂರ್ತಿಪಡೆಯಬೇಕೆನ್ನುವವರಿಗೆ

[1] E. P. Rice: A History of Kanarese Literature, p. 108

ಅದು ವಿಪುಲವಾಗಿದೆ, ಪ್ರಭಾವಿಯಾಗಿದೆ. ಪಂಪನ 'ಆದಿಪುರಾಣ', ರಾಘವಾಂಕನ 'ಹರಿಶ್ಚಂದ್ರಕಾವ್ಯ', ಕುಮಾರವ್ಯಾಸನ 'ಭಾರತ', ರತ್ನಾಕರನ 'ಭರತೇಶವೈಭವ' ಈ ಮೊದಲಾದ ಕೆಲವು ಕನ್ನಡದ ಶ್ರೇಷ್ಠಗ್ರಂಥಗಳು ಕಲಾದೃಷ್ಟಿಯಿಂದ ಉನ್ನತ-ವಾಗಿರುವುವಲ್ಲದೆ ಒಂದೊಂದು ಭವ್ಯವಾದ ಜೀವನದರ್ಶನದ ಪ್ರತೀಕಗಳಾಗಿವೆ. ಜನ್ಮದಿಂದ ಜನ್ಮಕ್ಕೆ ವಿಕಾಸಗೊಳ್ಳುವ ಜೀವನಸಮ್ಯಕ್ತ್ವಸಿದ್ಧಿ, ಸತ್ಯವೇ ಪರಮಾತ್ಮ-ನೆಂಬ ಸಾಕ್ಷಾತ್ಕಾರ, ಭಗವತ್‌ಶಕ್ತಿಯಿಂದ ಸಮಗ್ರಜೀವನದ ಚಾಲಕತ್ವ, ತ್ಯಾಗ-ಭೋಗಗಳ ಸಮನ್ವಯವಾದ ಜೀವನರಸಿಕತೆ—ಒಂದೇ ಎರಡೇ, ಇಂಥ ಸಂದೇಶ-ಗಳನ್ನು ಸಮೃದ್ಧವಾಗಿ ರಸೋತ್ಕಟವಾಗಿ ಕನ್ನಡಸಾಹಿತ್ಯವು ಕನ್ನಡಿಗರ ಮತ್ತು ಇತರರ ಕಲ್ಯಾಣಕ್ಕಾಗಿ ನೀಡಿರುತ್ತದೆ. ಶಿವಶರಣರ ವಚನಗಳು ಮತ್ತು ಹರಿದಾಸರ ಹಾಡುಗಳು ಆಧ್ಯಾತ್ಮಿಕವಾದ ಜೀವನನಿಷ್ಠೆಯನ್ನು ಬೇಸರಿಲ್ಲದೆ ಬೋಧಿಸಿರುತ್ತವೆ. ಜ್ಞಾನ-ಭಕ್ತಿ-ಪೂರ್ವಕವಾದ ಕರ್ಮಯೋಗವನ್ನು ಕನ್ನಡಸಂಸ್ಕೃತಿ ತನ್ನ ಸಾಹಿತ್ಯದ ಉತ್ತಮಿಕೆ-ಯಲ್ಲಿ ಸಾರುತ್ತಲಿದೆ. ಜೈನಮತದಲ್ಲಿ ವೈರಾಗ್ಯವನ್ನು ಉಪದೇಶಿಸಿದ್ದರೂ ಅದಕ್ಕೆ ಒಂದು ತಾತ್ವಿಕಭೂಮಿಕೆಯಿದೆ; ಯತಿಧರ್ಮ, ಗೃಹಸ್ಥಧರ್ಮ ಎಂಬ ತಾರತಮ್ಯವಿದೆ. ಸರ್ವಜ್ಞನಂಥ ಜ್ಞಾನಿಗಳೂ ಜನತಾಕವಿಗಳೂ ಕಲಿಸಿದ ವಿವೇಕವು ಎಲ್ಲ ಜಗತ್ತಿಗೆ ಸ್ಫೂರ್ತಿಯನ್ನು ಕೊಡಬಲ್ಲುದು. 'ಶೂನ್ಯಸಂಪಾದನೆ'ಯಂಥ ಗ್ರಂಥದಲ್ಲಿಯೂ ಪ್ರಭುದೇವನ ವಚನಗಳಲ್ಲಿಯೂ ಕಾಣುವ ಅನುಭವಮಂಟಪದ ವಿಚಾರಮಂಥನ, ಜ್ಞಾನದ ಪ್ರಖರತೆಗಳನ್ನು ಕನ್ನಡಸಾಹಿತ್ಯವು ತನ್ನ ಕಾಣಿಕೆಗಳೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. 'ಮನುಷ್ಯಜಾತಿ ತಾನೊಂದೆ ವಲಂ', 'ಮರ್ತ್ಯಲೋಕ-ವೆಂಬುದು ಕರ್ತಾರನ ಕಮ್ಮಟವಯ್ಯ', 'ಅಯ್ಯಾ ಎನೆ ಸ್ವರ್ಗ, ಎಲವೋ ಎನೆ ನರಕ', 'ತನ್ನ ತಾನರಿದಡೆ ತನ್ನರಿವೆ ಗುರು', 'ಮಾತೆಂಬುದು ಜ್ಯೋತಿರ್ಲಿಂಗ'. 'ಈಸಬೇಕು ಇದ್ದು ಜೈಸಬೇಕು', 'ಬಿಲ್ಲಾಗಿರಬೇಕು ಬಲ್ಲವರೊಳು, ಕಲ್ಲಾಗಿರಬೇಕು ಕಲಿ-ಭವತೊರೆಯೊಳು', 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದ-ಡೆಂತಯ್ಯ', 'ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಣವಕ್ಕು' ಇಂಥ ನೂರಾರು ನುಡಿಕಿಡಿಗಳು ಕೂಡಿ ಜೀವನಶಕ್ತಿಯನ್ನು ಕೊಡುವ ತೇಜೋರಾಶಿಯಂತೆ ಕನ್ನಡ-ಸಾಹಿತ್ಯದಲ್ಲಿರುವಾಗ 'ಸ್ವತಂತ್ರವಾದ, ಅಮರವಾದ ವಿಚಾರವಿಲ್ಲ' ಎಂಬರೇನು? ಈ ವಿಚಾರಗಳಿಗೆ ಭಾರತೀಯವೆಂಬ ದೊಡ್ಡ ಹಿನ್ನೆಲೆಯಿದೆ, ಸ್ವಾನುಭವದ ಪೀಠಿಕೆ-ಯಿದೆ, ಒಟ್ಟುಗೂಡಿದ ಅಭಿವ್ಯಕ್ತಿಯಲ್ಲಿ ಸ್ವತಂತ್ರತೇಜಸ್ಸಿದೆ. ಹಾಗೆ ನೋಡಿದರೆ ಯಾವುದು ಶುದ್ಧವಾಗಿ ಸ್ವತಂತ್ರ?

ಹಳೆಯ ಕನ್ನಡಸಾಹಿತ್ಯವು ವಿಷಯದಲ್ಲಿ ನಿರೂಪಣೆಯಲ್ಲಿ ಎಷ್ಟು ವೈವಿಧ್ಯಯುತ-ವಾದರೂ ಮರ್ಯಾದಿತವಾಗಿದೆ, ಸಮಯಶರಣವಾಗಿದೆ ಎಂಬುದು ನಿಜವಾದರೂ ಅಂದಂದಿನ ಆವರಣದಲ್ಲಿ ಅದು ಪಡೆದ ಶಕ್ತಿಯನ್ನೂ ಬೀರಿದ ಪ್ರಭಾವವನ್ನೂ ಅರಿತು

ಮೆಚ್ಚಬೇಕು. ಹೊಸ ಕನ್ನಡಸಾಹಿತ್ಯವು ವಿಷಯದ ಆಯ್ಕೆಯಲ್ಲಿ ವ್ಯಕ್ತಿತ್ವಸಿರೂಪಣೆಯಲ್ಲಿ ಹೆಚ್ಚು ಸ್ವತಂತ್ರವಾಗಿ ಮತ್ತು ಸಾಮಾಜಿಕವಾಗಿ ಬೆಳೆಯುತ್ತಲಿದ್ದ ಹೊಸ ಶಕ್ತಿಯ ಕೇಂದ್ರವಾಗುತ್ತಲಿದೆ. ಅದನ್ನು ಬೆಳೆಸುವಾಗ ಹಳೆಯ ಸಾಹಿತ್ಯದಿಂದ ದೊರೆಯುವ ಸ್ಫುರಣವನ್ನು ಪಡೆಯುವುದು ಅವಶ್ಯವಾಗಿದೆ.

ಕನ್ನಡಸಾಹಿತ್ಯವು ಕನ್ನಡದ ನಂದಾದೀಪ, ಕರ್ನಾಟಕದ ತವನಿಧಿ ಎಂಬ ಶ್ರದ್ಧೆ ಕನ್ನಡಿಗರಲ್ಲಿಯೆ ಬೆಳೆಯದಿದ್ದರೆ ಇತರರಲ್ಲಿ ಹೇಗೆ ಬೆಳೆದೀತು?

★

ಅಭ್ಯಾಸ ಸೂಚಿ

★

ಅಭ್ಯಾಸ ಸೂಚಿ

ಕನ್ನಡ ಸಾಹಿತ್ಯದ ಚರಿತ್ರೆ, ಗ್ರಂಥಕಾರರು ಹಾಗೂ ಕೆಲವು ಸಾಹಿತ್ಯಿಕ ವಿಷಯಗಳ ಬಗ್ಗೆ ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು,* ಗ್ರಂಥಭಾಗಗಳು ಮತ್ತು ಪತ್ರಿಕಾಲೇಖನಗಳ ವರ್ಗೀಕೃತ ಸೂಚಿ.

—ಸಂಕ್ಷೇಪ ಚಿಹ್ನಗಳು

(೧) ಚರಿತ್ರೆ

(ಅ) ಸಾಹಿತ್ಯದ ಚರಿತ್ರೆ
(ಆ) ಕಾಲವಿಭಾಗಗಳು

(೨) ಗ್ರಂಥಕಾರರು

(ಅ) ಪ್ರಮುಖ ಗ್ರಂಥಕಾರರು
(ಆ) ಇತರ ಗ್ರಂಥಕಾರರು

(೩) ವಿಷಯಗಳು

(ಅ) ಕಾವ್ಯ, ನಾಟಕ ಇ. ಸಾಹಿತ್ಯ
(ಆ) ಜೈನಸಾಹಿತ್ಯ
(ಈ) ದಾಸಸಾಹಿತ್ಯ
(ಇ) ವಚನಸಾಹಿತ್ಯ
(ಉ) ಶಾಸನಸಾಹಿತ್ಯ
(ಊ) ಸಂಕೀರ್ಣವಿಷಯ

---

* ಗ್ರಂಥಗಳನ್ನು ದಪ್ಪಕ್ಕರಗಳಲ್ಲಿ ತೋರಿಸಲಾಗಿದೆ.

ಸಂಕ್ಷೇಪ ಚಿಹ್ನೆಗಳು

ಅರುಣೋ.	....	ಅರುಣೋದಯ, ಬೆಳಗಾವಿ
ಕ.ನು.	....	ಕನ್ನಡ ನುಡಿ, ಬೆಂಗಳೂರು
ಕ.ಕಾ.ಪ.	....	ಕರ್ನಾಟಕ ಕಾಲೇಜು ಪತ್ರಿಕೆ
ಕ.ಸಾ.ಪ.	....	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು
ಕಾ.ಲೋ.	....	ಕಾವ್ಯಾವಲೋಕನ
ಜ.ಕ.	....	ಜಯಕರ್ನಾಟಕ, ಧಾರವಾಡ
ಪ್ರ.ಕ.	....	ಪ್ರಬುದ್ಧ ಕರ್ಣಾಟಕ, ಮೈಸೂರು
ಮೈ.ಪ್ರ.ಪು.ಮಾ.	....	ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ-ಪುಸ್ತಕ ಮಾಲೆ, ಮೈಸೂ
ರಾ.ಕಾ.ಪ.	....	ರಾಜಾರಾಮ ಕಾಲೇಜ್ ಪತ್ರಿಕೆ, ಕೊಲ್ಹಾಪುರ
ಲಿಂ.ವಿ.ಪ.	....	ಲಿಂಗಾಯತ ವಿದ್ಯಾಭಿವೃದ್ಧಿಯ ಸಂಸ್ಥೆಯ ಸಾಹಿತ್ಯಸಮಿತಿಯ ಪತ್ರಿಕೆ, ಧಾರವಾ
ಶ.ಸಾ.	....	ಶರಣ ಸಾಹಿತ್ಯ, ಬೆಂಗಳೂರು
ವಾಗ್ಭೂ.	....	ವಾಗ್ಭೂಷಣ, ಧಾರವಾಡ
ವ.ಕೋ.	....	ವಸ್ತುಕೋಶ
ವಿ.ವಾ.	....	ವಿಶ್ವವಾಣಿ (ಮಾಸಿಕ), ಬೆಂಗಳೂರು
ಶಿವಾ.	....	ಶಿವಾನುಭವ, ವಿಜಾಪೂರ
ಹ.ಭಾ.	....	ಹರಿದಾಸ ಭಾರತೀ, ಬೆಂಗಳೂರು
I.A.	....	Indian Antiquary
I.H.Q.	....	Indian Historical Quarterly
J.A.	....	Jaina Antiquary
J.O.R., U.M.	....	Journal of Oriental Research (University of Madras), Madra
K.H.R.	....	Karnatak Historical Review, Dharwa
Q.J.M.S.	....	Quarterly Journal of the Mythic Society, Bangalor

೧. (ಅ) ಕನ್ನಡ ಸಾಹಿತ್ಯದ ಚರಿತ್ರೆ

ನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ (ಮೈ.ಪ್ರ.ಪು.ಮಾಲೆ) (೧೯೩೯)

ನ್ನಡ ಸಾಹಿತ್ಯ' [ಗ್ರಂಥವಿಮರ್ಶೆ]—ರಂ. ಶ್ರೀ. ಮುಗಳಿ (ಜೀವನ, ೧-೯)

ನ್ನಡ ಸಾಹಿತ್ಯ—ಮುಳಿಯ ತಿಮ್ಮಪ್ಪಯ್ಯ
(ಕನ್ನಡ ಸಾಹಿತ್ಯ, ಇತರ ಉಪನ್ಯಾಸಗಳು, ಪು. ೧)

ನ್ನಡ ಸಾಹಿತ್ಯ ಚರಿತ್ರೆ, ಭಾ. ೧—ಬಿ. ಎಂ. ಶ್ರೀಕಂಠಯ್ಯ
(ಕನ್ನಡ ಕೈಪಿಡಿ, ಸಂ. ೨)

ನ್ನಡ ಸಾಹಿತ್ಯವಾಹಿನಿ—ಎನ್. ಕೆ. ಕುಲಕರ್ಣಿ (೧೯೩೯)

ನ್ನಡ ಸಾಹಿತ್ಯ ಸಿಂಹಾವಲೋಕನ—'ಶಿವಮೂರ್ತಿ' (ಶಿವಾ., ೧೪-೭)

ರ್ನಾಟಕ ಕವಿಚರಿತೆ, ಸಂ. ೧-೩—ಆರ್. ನರಸಿಂಹಾಚಾರ್
(೧೯೦೭, '೧೯, '೨೯)

ರ್ನಾಟಕ ಕವಿಚರಿತೆಯ ಅನುಬಂಧ—ಆರ್. ನರಸಿಂಹಾಚಾರ್
(ಕ.ಸಾ.ಪ., ೧೫-೧, ೨)

ರ್ನಾಟಕ ಕವಿಚರಿತೆ, ಸಂ. ೩ [ಗ್ರಂಥವಿಮರ್ಶೆ]—ಎಂ. ಗೋವಿಂದ ಪೈ
(ಪ್ರ.ಕ., ೧೧-೪)

ರ್ನಾಟಕ ಕವಿಚರಿತೆ [ವ.ಕೋ.]— . . . (ಪ್ರ.ಕ., ೬-೧)

ರ್ನಾಟಕ ವಾಙ್ಮಯದ ಸಂಕ್ಷಿಪ್ತ ಪರಿಗಣನೆ—ಪ್ರೊ. ನಾರಾಯಣಶಾಸ್ತ್ರಿ
(ಜ.ಕ., ೨-೧೦, ೧೨)

ರ್ನಾಟಕ ಸಾಹಿತ್ಯ—'ಕನ್ನಡವಕ್ಕಿ' (ಕರ್ನಾಟಕದ ಕೈಪಿಡಿ, ಪು. ೨೦೫)

ಕಾವ್ಯಪರಿಚಯ—ಆರ್. ಎಸ್. ರಾಮರಾವ್ (೧೯೪೯)

ವು ಕನ್ನಡ ಕವಿಗಳ ಕಾಲವಿಚಾರ—ಎ. ವೆಂಕಟಸುಬ್ಬಯ್ಯ (೧೯೩೩)

ಪನಿಂದ ಕುವೆಂಪುವರೆಗೆ—ಜಿ. ಬ್ರಹ್ಮಪ್ಪ (೧೯೫೫)

Essay on Canarese Literature.—F. Kittel
(In Nagavarma's Canarese Prosody, p. xxi

History of Kanarese Literature—E. P. Rice
(Rev. Edn.) (192

History of Kanarese Literature [Review]—T. S. V.
(ಕ.ಸಾ.ಪ., ೮-

History of Kannada Literature—R. Narasimhachar
(194

History of Kannada Literature [ಗ್ರಂಥವಿಮರ್ಶೆ]
—ರಂ. ಶ್ರೀ. ಮುಗಳಿ (ಕ.ಸಾ.ಪ., ೨೫-

History of Kannada Literature ಮತ್ತು ಕನ್ನಡ ಸಾಹಿತ್ಯವಾಹಿ
ಇವುಗಳ ವಿಮರ್ಶೆ—ರಂ. ಶ್ರೀ. ಮು. (ಜೀವನ, ೨-

Kannada Literature—R. S. Mugali
(Encyclopaedia of Literatur
Ed. by Joseph T. Shipley, Vol. 1, p. 52
(19

Old Kannada Literature—R. S. Mugali
(Heritage of Karnatak, p. 17
Chapters xii to xiv) (19

೧. (ಆ) ಕನ್ನಡ ಸಾಹಿತ್ಯದ ಚರಿತ್ರೆಯ ಕಾಲವಿಭಾಗಗಳು*

ಕನ್ನಡ ಸಾಹಿತ್ಯದ ಪ್ರಾಚೀನತೆ—ಎಂ. ಗೋವಿಂದ ಪೈ (ಉ.ಭಾ., ೨-

ಕನ್ನಡ ಸಾಹಿತ್ಯದ ಪ್ರಾಚೀನತೆ—ಎಂ. ಗೋವಿಂದ ಪೈ
(ಮೂರು ಉಪನ್ಯಾಸಗಳು, ಪು. ೧

ಜ್ಞಾನೇಶ್ವರಪೂರ್ವಕಾಲೀನ ಕಾನಡೀ ವಾಙ್ಮಯ—ದ. ರಾ. ಬೇಂದ್ರೆ
(ಮ.ಸಾ.ಪ., ೭-

ರ್ನಾಟಕ ವಾಙ್ಮಯದ ಕಾಲವಿಭಾಗಗಳು—'ವಾಙ್ಮಯಸೇವಕ'
(ಕ.ಸಾ.ಪ., ೧೧-೧)

ನ್ನಡ ಸಾಹಿತ್ಯ ಚರಿತ್ರೆ : ಪ್ರಾಚೀನ ಕಾಲ—ತ. ಸು. ವೆಂಕಣ್ಣಯ್ಯ
(ಕ.ಸಾ.ಪ., ೬-೪)

ನ್ನಡದಲ್ಲಿ ಬೌದ್ಧರು ಗ್ರಂಥಗಳನ್ನು ಬರೆದಿದ್ದರೆ?—ತ. ಸು. ವೆಂಕಣ್ಣಯ್ಯ
(ಪ್ರ.ಕ., ೨-೩)

ನ್ನಡ ಸಾಹಿತ್ಯದಲ್ಲಿ ಹತ್ತನೆಯ ಶತಮಾನವು—ಜಿ. ಡಿ. ರಾಜಶೇಖರಯ್ಯ
(ಶ.ಸಾ., ೧-೭)

ತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ—ತ. ಸು. ವೆಂಕಣ್ಣಯ್ಯ
(ಕ.ಸಾ.ಪ., ೫-೪)

ನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯ
—ಎಚ್. ಚೆನ್ನಕೇಶವ ಅಯ್ಯಂಗಾರ್ (ಕ.ಸಾ.ಪ., ೧೪-೨)

th Century Kannada Literature
—S. S. Malwad (ಲಿಂ.ವಿ.ಪ., ೪-೨೩)

ರ್ನಾಟಕ ಸಾಹಿತ್ಯ ಚರಿತ್ರೆ, ೧೧೫೦-೧೬೦೦—ಎಂ. ಆರ್. ಶ್ರೀನಿವಾಸಮೂರ್ತಿ
(ಕ.ಸಾ.ಪ., ೮-೧, ೯-೧, ೯-೪)

ಮತ್ತು ೧೩ನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ
—ತ. ಸು. ವೆಂಕಣ್ಣಯ್ಯ (ಕ.ಸಾ.ಪ., ೬-೧)

ನಿಮೂರನೆಯ ಶತಮಾನದ ಕರ್ನಾಟಕಾಂಧ್ರಮಹಾರಾಷ್ಟ್ರ ಸಾಹಿತ್ಯಾವಲೋಕನ—ಡಿ. ಕೆ. ಭೀಮಸೇನರಾವ್ (೧೯೪೨)

ನಿಮೂರನೆಯ ಶತಮಾನದ ಕನ್ನಡ ಸಾಹಿತ್ಯ—ಸ. ಸ. ಮಾಳವಾಡ
(ಕರ್ನಾಟಕ ಸಾಹಿತ್ಯಸಂಸ್ಕೃತಿದರ್ಶನ, ಪು. ೮೭)

ನಿಮೂರನೆಯ ಶತಮಾನದಲ್ಲಿ ವೀರಶೈವ ವಾಙ್ಮಯವಿದ್ದಿಲ್ಲವೊ ಹೇಗೆ?
—ಫ. ಗು. ಹಳಕಟ್ಟಿ (ಶಿವಾ., ೧೫-೧)

ಜಯನಗರದ ಅರಸರ ಆಳಿಕೆಯ ಕಾಲದಲ್ಲಿ ಕರ್ಣಾಟಕ ಸಾಹಿತ್ಯದ ಬೆಳವಣಿಗೆ
—ಕೆ. ವಿ. ಕೃಷ್ಣಭಟ್ಟ (ಅರುಣೋ., ವಿ. ಸಂಚಿಕೆ, ೧೯೩೬)

ಜಯನಗರದ ಅರಸರ ಕಾಲದ ಕನ್ನಡ ಸಾಹಿತ್ಯ—ಕೆ. ಜಿ. ಕುಂದಣಗಾರ
(ಅರುಣೋ., ವಿ. ಸಂಚಿಕೆ, ೧೯೩೬)

---

* ಈ ಪಟ್ಟಿಯನ್ನು ಕಾಲಾನುಕ್ರಮದಲ್ಲಿ ಕೊಟ್ಟಿದೆ; ಅಕ್ಷರಾನುಕ್ರಮದಲ್ಲಿ ಅಲ್ಲ.

ವಿಜಯನಗರ ಕಾಲದ ಕನ್ನಡ ಸಾಹಿತ್ಯ—ದೊ. ಲ. ನರಸಿಂಹಾಚಾರ್
(ಪ್ರ.ಕ., ೨೨-

ವಿಜಯನಗರ ಕಾಲದ ಸಾಹಿತ್ಯ—ಸಿ. ಬಿ. ಸೀತಾರಾಮ್ (ಶ.ಸಾ., ೧-೧೧, ೧

ವಿಜಯನಗರ ಸಾಮ್ರಾಜ್ಯದ ವೀರಶೈವಸಾಹಿತ್ಯ—ಎಸ್. ಷಣ್ಮುಖ (ಶಿವಾ., ೧೬-

ವಿಜಯನಗರ ಸಾಮ್ರಾಜ್ಯದ ಸಾಹಿತ್ಯಪ್ರಪಂಚ—ಎನ್. ಅನಂತಾಚಾರ್
(ಅರುಣೋ., ವಿ.ಸಂ., ೧೯೩

ವಿಜಯನಗರ ಸಾಮ್ರಾಜ್ಯದಲ್ಲಿ ಸಾಹಿತ್ಯದ ಬೆಳೆವಣಿಗೆ
—ಆರ್. ಬಿ. ಕುಲಕರ್ಣಿ (ಅರುಣೋ., ವಿ.ಸಂ., ೧೯೩

ವಿಜಯನಗರ ಸಾಮ್ರಾಜ್ಯದಲ್ಲಿ ಸಾಹಿತ್ಯದ ಬೆಳೆವಣಿಗೆ
—ಸೋಸಲೆ ಕೃಷ್ಣಶಾಸ್ತ್ರಿ (ಅರುಣೋ., ವಿ.ಸಂ., ೧೯೩

ವಿಜಯನಗರದ ಸಾಮ್ರಾಜ್ಯವೂ ಕನ್ನಡವಾಙ್ಮಯಾಭಿವೃದ್ಧಿಯೂ
—ಚಂದ್ರಶೇಖರಶಾಸ್ತ್ರಿ (ಅರುಣೋ., ವಿ.ಸಂ. ೧೯೩

ವಿಜಯನಗರದ ಸಾಹಿತ್ಯಸಾಮ್ರಾಜ್ಯ—ಎನ್. ಅನಂತರಂಗಾಚಾರ್
(ಪ್ರ.ಕ., ೩೭-೧-

ಕೃಷ್ಣದೇವರಾಯನ ಕಾಲದ ಕವಯಿತ್ರಿಯರು—ಪುಲಮತಿ ಸುಶೀಲಮ್ಮ
(ಕ.ನು., ೧-೪

ಕೃಷ್ಣದೇವರಾಯನ ಸಾಹಿತ್ಯವೈಭವ—ಟಿ. ಎನ್. ಮಹದೇವಯ್ಯ (ಕ.ನು., ೧೬-

ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ—ಸ. ಸ. ಮಾಳವಾಡ
(ಪ್ರ.ಕ., ೨೩-

ಹದಿನೈದನೆಯ ಶತಮಾನದ ವಾಙ್ಮಯ—ಸೊಂಡೆಕೊಪ್ಪದ ಶ್ರೀಕಂಠಶಾಸ್ತ್ರಿ
(ಜ.ಕ., ೫-

ಹದಿನಾರನೆಯ ಶತಮಾನದ ಕನ್ನಡಸಾಹಿತ್ಯ—ಸ. ಸ. ಮಾಳವಾಡ (ಕ.ನು., ೧೪-

ಹದಿನೇಳನೆಯ ಶತಮಾನದ ಸಾಹಿತ್ಯ—ಸ. ಸ. ಮಾಳವಾಡ
(ಕರ್ನಾ. ಸಾ.ಸಂಸ್ಕೃತಿದರ್ಶನ, ಪು. ೧೮

ಚಿಕದೇವರಾಜ ಒಡೆಯರ ಕಾಲದ ಪ್ರಜಾಜೀವನ ಮತ್ತು ಸಾಹಿತ್ಯ
—ಸಿ. ಆರ್. ಶ್ರೀನಿವಾಸ ಅಯ್ಯಂಗಾರ್ (ಕ.ಸಾ.ಪ., ೨೩-

ಕನ್ನಡ ಸಾಹಿತ್ಯ ಮತ್ತು ಮೈಸೂರೊಡೆಯರು
—ಡಿ. ಟಿ. ರಂಗಸ್ವಾಮಿ (೧೯

೨. (ಅ) ಪ್ರಮುಖ ಗ್ರಂಥಕಾರರು

ಆಂಡಯ್ಯ

ಂಡಯ್ಯ—ಎಂ. ಮರಿಯಪ್ಪಭಟ್ಟ (A.O.R., U.M., VI-1)
ಂಡಯ್ಯ—ಸಂ: ರಂ. ಶ್ರೀ. ಮುಗಳಿ (೧೯೪೯)
ಂಡಯ್ಯ [ವಿಮರ್ಶೆ]—ಜೆ. ಎ. ಕವಲಿ (ಜ.ಕ., ೨೭-೬)
ಂಡಯ್ಯ—ಟಿ. ವ್ಯಾಸಶಾಸ್ತ್ರಿ (ಜ.ಕ., ೨೫-೧೦)
ಂಡಯ್ಯನ ನಾಡಪ್ರೇಮ—ಅ. ಶಂಕರಶೆಟ್ಟಿ (ಜೀವನ, ೧೪-೧೧)
ಂಡಯ್ಯನೂ ಕನ್ನಡವೆನಿಪ್ಪಾ ನಾಡೂ—ಮುಳಿಯ ತಿಮ್ಮಪ್ಪಯ್ಯ
(ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪು. ೭೭)
ನ್ನಡ ಕಹಳೆ—ಚನ್ನಬಸವಸ್ವಾಮಿಗಳು
ಬ್ಬಿಗರ ಕಾವ—ರಂ. ಶ್ರೀ. ಮುಗಳಿ (ಕ.ಕಾ.ಪ., ೧೯೩೫-ಫೆಬ್ರು.)
ಬ್ಬಿಗರ ಕಾವ [ಕಾ.ಲೋ.]—ಎಸ್. ವಿ. ರಂಗಣ್ಣ (ಪ್ರ.ಕ., ೨-೧)
ಬ್ಬಿಗರ ಕಾವ—ಜಿ. ವೆಂಕಟಸುಬ್ಬಯ್ಯ (ಕ.ಸಾ.ಪ., ೪೩-೧)
ಬ್ಬಿಗರ ಕಾವಂ—ಬೆಳ್ಳಾವೆ ವೆಂಕಟನಾರಣಪ್ಪ (ಕ.ಸಾ.ಪ., ೧೦-೨)

ಕನಕದಾಸ

ನಕದಾಸರ ಕಳವಳ—'ಚಿಚ್ಚಕೋರ' (ಜೀವನ, ೩-೪, ೫)
ನಕದಾಸರ ಕೃತಿಗಳ ವಿಮರ್ಶೆ—ಎಂ. ಆರ್. ಲಕ್ಷ್ಮಮ್ಮ (ಕ.ಸಾ.ಪ., ೨೩-೪)
ನಕದಾಸರ ಚರಿತ್ರೆ—ರಾಮಲಿಂಗಕವಿ
ನಕದಾಸರು—**ಸುಬೋಧ** ಎಂ. ರಾಮರಾವ್ (ಹ.ಭಾ., ೭-೧)
ನಕದಾಸರು; ವ್ಯಕ್ತಿ ಮತ್ತು ವಾಙ್ಮಯ—ರಂ. ಶ್ರೀ. ಮುಗಳಿ (ಜೀವನ, ೨-೮)
ನಕದಾಸರು ಮತ್ತು ಅನುಭಾವಪಂಥ—ಕೆ. ವಿ. ಸುಬ್ಬಣ್ಣ (ಪ್ರ.ಕ., ೩೩-೪)
ನಕದಾಸರು ಕುರುಬರಲ್ಲವೇ?—ವಿ. ಆರ್. ಹನುಮಂತಯ್ಯ (ಜ.ಕ., ೨೩-೫)
ನಕಮಹಿಮಾದರ್ಶ—ಭೀಮಾಚಾರ್ಯ ವಡವಿ (೧೯೨೭)
ವಿ ಕನಕದಾಸರು—ಕಟ್ಟಿ ಶೇಷಾಚಾರ್ಯ (೧೯೩೮)
ಿ ಕನಕದಾಸರು [ವಿಮರ್ಶೆ]— . . . (ಕ.ಸಾ.ಪ., ೨೪-೨)
ಾಸಶ್ರೇಷ್ಠ ಕನಕದಾಸರು—ಹಾ. ಸು. ಸೀತಾರಾಮಯ್ಯ (ಸುಬೋಧ, ೩೦-೫)
ಕಚರಿತ್ರೆಯಲ್ಲಿ ಔಚಿತ್ಯವಿಚಾರ—ಹೋ. ಸೀತಾರಾಮಾಚಾರ್ಯ (ಕ.ನು., ೧೫-೨)
ಾಧುವರ್ಯ ಕನಕದಾಸರು—ನಾ. ಶ್ರೀ. ರಾಜಪುರೋಹಿತ (ಜ.ಕ., ೨೨-೪)

ಕುಮಾರವಾಲ್ಮೀಕಿ

ಕುಮಾರವಾಲ್ಮೀಕಿ ಚಿತ್ರಿಸಿದ ದುರಂತರಾವಣ—'ವಿಶ್ವಾಮಿತ್ರ' (ಕ.ಕಾ.ಪ., ೧೯೩೯-೨)

ತೊರವೆರಾಮಾಯಣದ ವಿಮರ್ಶೆ—ಕೆ. ರಾಜಾರಾವ (ಕ.ಸಾ.ಪ., ೨೩-೨)

ತೊರವೆರಾಮಾಯಣಸಾರಸಂಗ್ರಹ [ವಿಮರ್ಶೆ]—ಮಿರ್ಜಿ ಅಣ್ಣಾರಾಯ (ಜೀವನ, ೩-೭)

ಕುಮಾರವ್ಯಾಸ

ಐರಾವತವನ್ನು ಬರೆದ ಕವಿ ಯಾರು?—ಎಂ. ಜಿ. ವೆಂಕಟೇಶಯ್ಯ (ಕ.ನು., ೧೫-೮)

ಕನ್ನಡ ಭಾರತದ ರೀತಿ—ಟಿ. ಎಲ್. ಶ್ರೀನಿವಾಸಾಚಾರ್ (ಜ.ಕ., ೬-೨, ೩ ; ೭-೨, ೫)

ಕನ್ನಡ ಮಹಾಭಾರತದ ಆದಿಪರ್ವ, ಸಭಾಪರ್ವ, ವಿರಾಟಪರ್ವ, ಉದ್ಯೋಗಪರ್ವ ಸಂಗ್ರಹಗಳ ಪೀಠಿಕೆಗಳು—ತ. ಸು. ಶಾಮರಾಯ (೧೯೪೭-೧೯೫೧)

ಕರ್ನಾಟಕ ಭಾರತಕರ್ತನ ವಿಚಾರ—ಟಿ. ಎನ್. ಸುಬ್ಬರಾಯಶಾಸ್ತ್ರಿ (ಪ್ರ.ಕ., ೪-೨)

ಕರ್ಣನ ಮೂರು ಚಿತ್ರಗಳು—ಶಂ. ಬಾ. ಜೋಶಿ (೧೯೪೭)

ಕುಮಾರವ್ಯಾಸ—ಎಂ. ಎ. ದೊರೆಸ್ವಾಮಯ್ಯಂಗಾರ್ (ಜ.ಕ., ೧೦-೧೧)

ಕುಮಾರವ್ಯಾಸ—ಕು. ವೆಂ. ಪುಟ್ಟಪ್ಪ (ಕ.ನು., ೫-೩)

ಕುಮಾರವ್ಯಾಸ—ಸ. ಸ. ಮಾಳವಾಡ (ಸಂಭಾವನೆ, ಪು. ೩೩೯)

ಕುಮಾರವ್ಯಾಸ—ಎಸ್. ವಿ. ರಂಗಣ್ಣ (ಮೈ.ಪ್ರ.ಪು.ಮಾ., ೩ನೇ ಮು.) (೧೯೪೯)

ಕುಮಾರವ್ಯಾಸ—ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಕ.ಸಾ.ಪ., ೨೭-೨)

ಕುಮಾರವ್ಯಾಸ—ಎಲ್. ಎಸ್. ಶೇಷಗಿರಿರಾವ (ಕ.ನು., ೧೦-೩೫)

ಕುಮಾರವ್ಯಾಸ ಅಥವಾ ಕರ್ನಾಟಕದ ಕಾಳಿದಾಸ—ಐ. ಶಿವರಾಮಯ್ಯ (ಜ.ಕ., ೨-೨)

ಕುಮಾರವ್ಯಾಸಕೃತ ಭಾರತ—ಶಂ. ನ. ಕುಲಕರ್ಣಿ (ಕ.ಸಾ.ಪ., ೭-೧)

ಕುಮಾರವ್ಯಾಸಕವಿಯ ಚರಿತ್ರ ಮತ್ತು ಕಾವ್ಯವಿಚಾರ—ರಾ. ಸ್ವಾ. ಪಂಚಮುಖಿ (ಅಭಿವಂದನೆ, ಪು. ೩೩೬)

ಕುಮಾರವ್ಯಾಸನ ಅಜೇಯ ಭೀಮಸೇನ—'ಹೆಚ್ಚಿ' (ಸುಬೋಧ, ೨೬-೩)

ಕೋಳಿವಾಡಗೌಡರ ಕುಲವೃತ್ತಾಂತ—ಶಂಕರಭಟ್ಟ ಜೋಶಿ (ಜೀವನ, ೨-೩)

ಗದುಗಿನ ವೀರನಾರಾಯಣ—ಡಿ. ಎಂ. ಸೂಗವೀರಶರ್ಮ
(ಲಿಂ.ವಿ.ಪ., ೩-೩, ೪ ; ೪-೧)

ಪಂಪ-ಕುಮಾರವ್ಯಾಸರಲ್ಲಿ ಕೃಷ್ಣದ್ರೌಪದಿಯರ ಚಿತ್ರ
—ಜಿ. ವೆಂಕಟಸುಬ್ಬಯ್ಯ (ಶ್ರದ್ಧಾಂಜಲಿ, ಪು. ೧೧೮)

ಭಾರತದ ಶಿಶುಪಾಲವಧೆ—ತ. ಸು. ಶಾಮರಾವ (ಕ.ಸಾ.ಪ., ೨೫-೨)

ಭಾರತಗಳ ಶ್ರೀಕೃಷ್ಣ—ವಿ. ಸೀತಾರಾಮಯ್ಯ (ಕವಿಕಾವ್ಯ ದೃಷ್ಟಿ, ಪು. ೮೯)

ಮಹಾಭಾರತದ ಸೂತ್ರಧಾರ—ಸಿ. ಆರ್. ಶ್ರೀನಿವಾಸ ಅಯ್ಯಂಗಾರ್ (೧೯೫೫)

ಕೇಶಿರಾಜ

ಎನಿತ್ತೆನಿತ್ತಂಬುಜಪತ್ರನೇತ್ರೆಯಾ—ತೀ. ನಂ. ಶ್ರೀಕಂಠಯ್ಯ (ಕ.ಸಾ.ಪ., ೩೧-೨)

ಕರ್ನಾಟಕ ಧಾತುಗಳು—ಎಚ್. ನಾರಾಯಣರಾವ (ಕ.ಸಾ.ಪ., ೧-೩)

ಕೆಲವು ಕನ್ನಡ ವ್ಯಾಕರಣವಿಚಾರಗಳು—ಮ. ಪ್ರ. ಪೂಜಾರ (೧೯೫೨)

ಕೇಶಿರಾಜದಂಡನಾಯಕ—ಬಸವರಾಜಶಾಸ್ತ್ರಿ ಕೋಡಿಕೊಪ್ಪಮಠ (ಶ.ಸಾ., ೧೦-೫)

ಕೇಶಿರಾಜನ ಎರಡು ಸೂತ್ರಗಳು—ರಾ. ಸ್ವಾ. ಪಂಚಮುಖಿ (ಕ.ಸಾ.ಪ., ೨೬-೧)

ಕೇಶಿರಾಜನು ಜೈನನಲ್ಲ, ಬ್ರಾಹ್ಮಣನು—ಕೆ. ಜಿ. ಕುಂದಣಗಾರ
(ಕ.ಸಾ.ಪ., ೧೯-೧)

ಕೇಶಿರಾಜನು ಜೈನನಲ್ಲ, ಬ್ರಾಹ್ಮಣನು—ಶ್ರೀನಿವಾಸರಂಗಾಚಾರ್ಯ
(ಕ.ಸಾ.ಪ., ೧೬-೩)

ಕೇಶಿರಾಜನು ಜೈನನೇ?—ಕೆ. ಜಿ. ಕುಂದಣಗಾರ (ಕ.ಸಾ.ಪ., ೧೮-೧೨)

ಕೇಶಿರಾಜನು ಜೈನನೇ?—ಜಯಂತ (ಕ.ನು., ೧೪-೫)

ದರ್ಪಣದ ಕೆಲವು ಸಮಸ್ಯೆಗಳು—ಬಿ. ಪದ್ಮನಾಭ ಸೋಮಯಾಜಿ
(ಶ್ರದ್ಧಾಂಜಲಿ, ಪು. ೧೪೬)

ಱೞಕುಳಕ್ಷಳವಿಚಾರಂ—ಸ. ಸ. ಮಾಳವಾಡ (ಕ.ಸಾ.ಪ., ೨೬-೧)

ಶಬ್ದಮಣಿದರ್ಪಣ (ಮದ್ರಾಸ ಆವೃತ್ತಿ) [ಅವತರಣಿಕೆ]
—ಎಚ್. ಚೆನ್ನಕೇಶವ ಅಯ್ಯಂಗಾರ್ (೧೯೩೯)

ಶಬ್ದಮಣಿದರ್ಪಣ (ಶಾರದಾ ಮಂದಿರ) [ಪೀಠಿಕೆ]
—ದೊ. ಲ. ನರಸಿಂಹಾಚಾರ್ (೧೯೫೯)

ಗುಬ್ಬಿಯ ಮಲ್ಲಣಾರ್ಯ

ಗೋಪಕವಿ

ಚಾಮರಸ

ಅಭಿನವಪಂಪನೆಂಬ ನಾಗಚಂದ್ರನ ಕಾಲವಿಚಾರ—ಮಂ. ಗೋವಿಂದ ಪೈ
(ಜ.ಕ., ೧೩-೨)

ನಾಗಚಂದ್ರನ ಕಾವ್ಯಗಳು—ಡಿ. ವಿ. ಶೇಷಗಿರಿರಾವ್ (೧೯೫೦)

ನಾಗಚಂದ್ರನ ಮಲ್ಲಿನಾಥಪುರಾಣ—ದ. ರಾ. ಬೇಂದ್ರೆ
(ಸಾಹಿತ್ಯಸಂಶೋಧನ, ಪು. ೧)

ನಾಗಚಂದ್ರನ ರಾಮಾಯಣ—ಡಿ. ಎಸ್. ಹೊಸಕೇರಿ (ಜ.ಕ., ೨೩-೩)

ನಾಗಚಂದ್ರನ ಶೈಲಿ—ಎಸ್. ವಿ. ರಂಗಣ್ಣ (ಶೈಲಿ, ಭಾ. ೨)

ಪಂಪರಾಮಾಯಣಸಂಗ್ರಹ [ಪೀಠಿಕೆ]—ದೊ. ಲ. ನರಸಿಂಹಾಚಾರ್ (೧೯೪೬)

ಪಂಪರಾಮಾಯಣಸಂಗ್ರಹ [ಕಾ.ಲೋ.]—ದ. ರಾ. ಬೇಂದ್ರೆ (ಪ್ರ.ಕ., ೧೯-೧)

'ಪಂಪರಾಮಾಯಣಸಂಗ್ರಹ'ದ ವಿಮರ್ಶೆ—ಕೆ. ಜಿ. ಕುಂದಣಗಾರ
(ಕ.ಸಾ.ಪ., ೨೧-೨)

ಮಲ್ಲಿನಾಥಪುರಾಣದ ವಿಮರ್ಶೆ—ಶೇಷ ಭಿ. ಪಾರಿಷವಾಡ (ಕ.ಸಾ.ಪ., ೮-೧)

ರಾಮಚಂದ್ರಚರಿತಪುರಾಣದ ಕಥೆ— (ಕ.ಸಾ.ಪ., ೫-೪)

ನಾಗವರ್ಮ - ೧

ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ
(ಮೈ. ಪ್ರಚಾರ ಪುಸ್ತಕ ಮಾಲೆ) (೧೯೪೮

ಕರ್ಣಾಟಕ ಕಾದಂಬರೀ ಕಾವ್ಯ—ಡಿ. ವಿ. ಶೇಷಗಿರಿರಾವ್ (ಜ.ಕ., ೧೨-೬)

ಕರ್ನಾಟಕ ಕಾದಂಬರೀ ಸಂಗ್ರಹ [ಪ್ರಸ್ತಾವನೆ]—ತ. ಸು. ವೆಂಕಣ್ಣಯ್ಯ (೧೯೪೪

ಕರ್ನಾಟಕ ಕಾದಂಬರೀ ಸಂಗ್ರಹ [ಕಾವ್ಯಾವಲೋಕನ]—ಎಸ್. ವಿ. ರಂಗಣ್ಣ
(ಪ್ರ.ಕ., ೧೫-೪

ಕಾದಂಬರಿಯ ಶ್ರೀಕವಿನಾಗವರ್ಮ—ಹುಲ್ಲೂರ ಶ್ರೀನಿವಾಸಜೋಯಿಸ
(ಕ.ನು., ೧೪-೧೧

ಪಂಪ, ಪೊನ್ನ, ನಾಗವರ್ಮರ ಅರಸರುಗಳು—ಎಚ್. ನಾರಾಯಣರಾವ್
(ಕ.ಸಾ.ಪ., ೪

ಪಂಪ, ಪೊನ್ನ, ನಾಗವರ್ಮರ ಜನ್ಮಸ್ಥಳಗಳು—ಎಚ್. ನಾರಾಯಣರಾವ್
(ಕ.ಸಾ.ಪ., ೩-೧

ಮಹಾಶ್ವೇತೆಯ ತಪಸ್ಸು—ಕು. ವೆಂ. ಪುಟ್ಟಪ್ಪ (ಪ್ರ.ಕ., ೨೩-೧

ನಾಗವರ್ಮ - ೨

ನಿಜಗುಣಶಿವಯೋಗಿ

ನೇಮಿಚಂದ್ರ

ನೇಮಿಚಂದ್ರನ ಲೀಲಾವತಿ—ಎನ್. ಕೆ. ಕುಲಕರ್ಣಿ (ಜೀವನ, ೨-೩)

ನೇಮಿಚಂದ್ರನ ಲೀಲಾವತಿ; ಕಥಾವಸ್ತು—ಎಂ. ಆರ್. ಶ್ರೀ. (ಕ.ಸಾ.ಪ., ೧೦-೨)

ಪಂಪ

ಅರಿಕೇಸರಿಯೂ ಪಂಪನ ಯುಗವೂ—ರಾ. ಸ್ವಾ. ಪಂಚಮುಖಿ (ಕ.ಸಾ.ಪ., ೩೧-೨)

ಅಸಗ, ಪಂಪ, ಪೊನ್ನ—ಚ. ನಿಂಗರಾಜ ಪಾಟೀಲ (ಕ.ಸಾ.ಪ., ೧೭-೨)

ಆದಿಕವಿಯನ್ನು ಕುರಿತು—'ಜೈ' (ಕ.ನು., ೨-೯)

ಆದಿಪಂಪನು ಅಚ್ಚ ಕನ್ನಡಿಗನೇ—ಪಾಂ. ಭೀ. ದೇಸಾಯಿ (ಜ.ಕ., ೧೧-೧೨)

ಆದಿಪಂಪ ಮಹಾಕವಿಯ ವಿಷಯವು—ಎಸ್. ತಿಮ್ಮಪ್ಪಯ್ಯಶಾಸ್ತ್ರಿ (ಕ.ಸಾ.ಪ., ೨-೨)

ಆದಿಪುರಾಣದ ರಚನಾಕಾಲವನ್ನು ಕುರಿತೊಂದು ಅಪಪಾಠ—ಎಂ. ಗೋವಿಂದ ಪೈ (ವಾಗ್ಭೂ., ಹೊಸ ಸಂ., ೧-೧)

ಕರ್ನಾಟಕ ಕವಿಕುಲಾಗ್ರಣಿಯಾದ ಪಂಪಮಹಾಕವಿ—ಎನ್. ಅನಂತರಂಗಾಚಾರ್ (ಕ.ಸಾ.ಪ., ೧೫-೪)

ಆದಿಪುರಾಣಸಂಗ್ರಹ [ಉಪೋದ್ಘಾತ]—ಎಲ್. ಗುಂಡಪ್ಪ (೧೯೫೫)

ಆದಿಪುರಾಣಂ [ಉಪೋ.]—ಕೆ. ಜಿ. ಕುಂದಣಗಾರ (೧೯೫೩)

ಕರ್ಣನ ಮೂರು ಚಿತ್ರಗಳು—ಶಂ. ಬಾ. ಜೋಶಿ (೧೯೪೯)

ಕರ್ಣನ ವಿನಯಶ್ರೀ—ಪ್ರಭುಶಂಕರ (ಪ್ರ.ಕ., ೩೦-೨)

ಕವಿ ಕಂಡ ನಾಡು—ಬಿ. ಎಂ. ಶ್ರೀಕಂಠಯ್ಯ (ಕ.ನು., ೧-೫)

ಗದಾಯುದ್ಧಭಾಗದಲ್ಲಿ ಪಂಪನು ಚಿತ್ರಿಸಿರುವ ದುರ್ಯೋಧನ —ಯು. ಕೆ. ಸುಬ್ರಾಯಾಚಾರ್ (ಪ್ರ.ಕ., ೨೯-೪)

ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ—ತಿ. ತಾ. ಶರ್ಮಾ (ಕ.ನು., ೧೧-೪)

ಚಿತ್ರಗಾರ ಪಂಪ—'ಶಾಂತಿ' (ಪ್ರ.ಕ., ೩೪-೧)

ಜೈನಮನ್ವಂತರಗಳಲ್ಲಿ ಸಮಾಜವಿಕಾಸದ ಚಿತ್ರ (ಆದಿಪುರಾಣದಲ್ಲಿ ರೇಖಿಸಿದಂತೆ) —ದ. ರಾ. ಬೇಂದ್ರೆ (ಜೀವನ, ೧-೧)

ನಮ್ಮ ರತ್ನತ್ರಯದ ವಿನಯ—ಜಿ. ಪಿ. ರಾಜರತ್ನಂ (ಕ.ಸಾ.ಪ., ೨೬-೧)

ನಾಡೋಜ ಪಂಪ—ಮುಳಿಯ ತಿಮ್ಮಪ್ಪಯ್ಯ (೧೯೩೪)

ನೇತ್ರಮನಾಡಿದರಾರು—ಕ. ವೆಂ. ರಾಘವಾಚಾರ್ (ಕ.ನು., ೧೭-೧೧)

ನೇತ್ರವನ್ನಾಡಿದವರಾರು—ಮುಳಿಯ ತಿಮ್ಮಪ್ಪಯ್ಯ (ಜ.ಕ., ೧೪-೧)

ಪರಭಣಿಯ ತಾಮ್ರಶಾಸನ ಮತ್ತು ಪಂಪಭಾರತ
—ಸಂ: ಎ. ಆರ್. ಕೃ. ಮತ್ತು ಬಿ. ವೆಂ. (ಪ್ರ.ಕ., ೧೫-೧)

ಪಂಪಕವಿಯೂ ಚಾಳುಕ್ಯರೂ—ಕೆ. ವೆಂಕಟರಾಯಾಚಾರ್ಯ (ಸುಬೋಧ, ೨೮-೬)

ಪಂಪ—ದೊ. ಲ. ನರಸಿಂಹಾಚಾರ್ (ಕ.ನು., ೧೦-೩೪)

ಪಂಪಕುಮಾರವ್ಯಾಸರಲ್ಲಿ ಕೃಷ್ಣದ್ರೌಪದಿಯರ ಚಿತ್ರ—ಜಿ. ವೆಂಕಟಸುಬ್ಬಯ್ಯ
(ಶ್ರದ್ಧಾಂಜಲಿ, ಪು. ೧೧೮)

ಪಂಪನ ಆದಿಪುರಾಣ—ಓ. ಎನ್. ಲಿಂಗಣ್ಣಯ್ಯ (ಶ.ಸಾ., ೨-೧೦)

ಪಂಪನ ಆದಿಪುರಾಣ ರಚನಾಕಾಲ—ಎಂ. ಗೋವಿಂದ ಪೈ (ಶ.ಸಾ., ೩-೭)

ಪಂಪನ ಆಶ್ರಯದಾತ ಅರಿಕೇಸರಿಯ ಶಾಸನಗಳು [ಸಾರಾಂಶ]
[ಮೂಲ: J.A.H.R.S., IV - 3, 4] (ಕ.ಸಾ.ಪ., ೧೮-೪)

ಪಂಪನ ಕರ್ಣ—ಕೆ. ವಿ. ಪುಟ್ಟಪ್ಪ (ಅಭಿನಂದನೆ, ಪು. ೩೫೫)

ಪಂಪನ ಕರ್ಣ—ವಿ. ಶ್ರೀರಂಗಾಚಾರ್ (ಪ್ರ.ಕ., ೨೩-೪)

ಪಂಪನ ಜ್ವಾಲಾಮುಖಿ—ಜಿ. ಬ್ರಹ್ಮಪ್ಪ (ಶ್ರದ್ಧಾಂಜಲಿ, ಪು. ೯೭)

ಪಂಪನ ದೇಸಿ—ರಂ. ಶ್ರೀ. ಮುಗಳಿ (ಕ.ಸಾ.ಪ., ೩೦-೨)

ಪಂಪನ ದೇಶಕಾಲಗಳ ವಿಚಾರ—ಎಂ. ಗೋವಿಂದ ಪೈ (ಭಾರತಿ, ಸಂ. ೧)

ಪಂಪನ ನಾಡಾವುದು?—ಪಾಂ. ಭೀ. ದೇಸಾಯಿ (ಜ.ಕ., ೧೨-೫)

ಪಂಪನ ಮೇಲಣ ಲೇಖನಗಳು [ವ.ಕೋ.] . . . (ಪ್ರ.ಕ., ೨೩-೪)

ಪಂಪನ ಶೈಲಿ—ಎಸ್. ವಿ. ರಂಗಣ್ಣ (ಶೈಲಿ, ಭಾ. ೧)

ಪಂಪನಲ್ಲಿ ಭವ್ಯತೆ—ಕು. ವೆಂ. ಪುಟ್ಟಪ್ಪ (ಪಂಪಮಹಾಕವಿ, ಪು. ೧೫೪)

ಪಂಪನ ಸಮರಸದೃಷ್ಟಿ—ಜಿ. ಎಸ್. ಶಿವರುದ್ರಪ್ಪ (ಕ.ನು., ೩೮-೧)

ಪಂಪನ ಸಮೀಪಪೂರ್ವ ಕಾವ್ಯಲುಪ್ತ ಗುಪ್ತ ಕನ್ನಡ ಕವಿತ್ರಯರು
—ಕೆ. ಎಸ್. ಪದ್ಮನಾಭಾಚಾರ್ (ಕ.ನು., ೨೦-೩)

ಪಂಪ, ನಾಗವರ್ಮರ ಮೂಲದೇಶ—ಹ. ನಾರಾಯಣರಾವ (ವಾಗ್ಭೂ., ೨೪-೧)

ಪಂಪ, ಪೊನ್ನ, ನಾಗವರ್ಮರ ಜನ್ಮಸ್ಥಳಗಳು—ಹ. ನಾರಾಯಣರಾವ
(ಕ.ಸಾ.ಪ., ೩-೧)

ಪಂಪಭಾರತ— (ಕ.ಸಾ.ಪ., ೯-೩)

ಪಂಪಭಾರತ [ಉಪೋದ್ಘಾತ]—ಬೆ. ವೆಂಕಟನಾರಾಯಣಪ್ಪ (೧೯೩೦)

ಪಂಪಭಾರತ—ಎಸ್. ವಿ. ರಂಗಣ್ಣ (ಕ.ಸಾ.ಪ., ೧೫-೩)

ಪಂಪಭಾರತ—ತ. ಸು. ವೆಂಕಣ್ಣಯ್ಯ (ಪ್ರ.ಕ., ೧೫-೪)

ಪಂಪಭಾರತ—ತಿರುಮಲೆ ಶ್ರೀನಿವಾಸಾಚಾರ್ (ಜ.ಕ., ೫-೧, ೪)

ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯ—ರಂ. ಶ್ರೀ. ಮುಗಳಿ
(ಜೀವನ, ೧-೬, ೮)

ಪಂಪಭಾರತ-ಗದಾಯುದ್ಧಗಳ ತುಲನೆ—ಶೇ. ಭೀ. ಪಾರಿಷವಾಡ
(ಕ.ಸಾ.ಪ., ೧೦-೩)

ಪಂಪಭಾರತದ ಕೃಷ್ಣ - ಒಂದು ಚಿಕ್ಕ ಟಿಪ್ಪಣಿ—ತೀ. ನಂ. ಶ್ರೀಕಂಠಯ್ಯ
(ಸಮಾಲೋಕನ, ಪು. ೯೬)

ಪಂಪಭಾರತದ ಕಥಾಂತರಗಳು—ಕೆ. ವೆಂಕಟರಾಯಾಚಾರ್ (ಜಯಂತಿ, ೧೫-೬)

ಪಂಪಭಾರತದ ಕರ್ಣನ ಪಾತ್ರ—ಪದ್ಮನಾಭ (ಜ.ಕ., ೧೩-೧೧)

ಪಂಪಭಾರತದ ದ್ರೌಪದೀವಿಚಾರ—ಕೆ. ವೆಂಕಟರಾಯಾಚಾರ್ (ಕ.ನು., ೧೬-೧೨)

ಪಂಪಭಾರತದ ನಿರ್ಮಾಣಕಾಲ—ಕೆ. ವೆಂಕಟರಾಯಾಚಾರ್ (ಕ.ನು., ೧೬-೩

ಪಂಪಭಾರತದ ಯುದ್ಧಚಮತ್ಕಾರ—ಶೇ. ಭೀ. ಪಾರಿಷವಾಡ (ವಾಗ್ಭೂ., ೩೦-೫)

ಪಂಪ - ಭಾರವಿ—ಕೆ. ಎಸ್. ಕೃಷ್ಣಮೂರ್ತಿ (ಅಭಿವಂದನೆ, ಪು. ೧೨೬)

ಪಂಪಮಹಾಕವಿ—ಸಂ: ರಂ. ಶ್ರೀ. ಮುಗಳಿ (೧೯೫೧

ಪಂಪಮಹಾಕವಿ—ಮುಳಿಯ ತಿಮ್ಮಪ್ಪಯ್ಯ
(ಕ.ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪು. ೩೫

ಪಂಪಮಹಾಕವಿ ವಿರಚಿತ ಆದಿಪುರಾಣಂ [ಕಾ.ಲೋ.]—. . . (ಪ್ರ.ಕ., ೩೪-೪

ಪಂಪರನ್ನರ ದುರ್ಯೋಧನರು—ಶೇ. ಭೀ. ಪಾರಿಷವಾಡ (ಜ.ಕ., ೧-೩

ಪಂಪರನ್ನರ ಶ್ರೀಕೃಷ್ಣನು—ಶೇ. ಭೀ. ಪಾರಿಷವಾಡ (ಜ.ಕ., ೩-೬

ಪಂಪರಾಮಾಯಣ—ಶೇ. ಭೀ. ಪಾರಿಷವಾಡ (ವಾಗ್ಭೂ., ೨೧-೧೦

ಪಂಪಸ್ಮಾರಕೋತ್ಸವ—ವಿ. ಕೃ. ಗೋಕಾಕ (ಜೀವನ, ೩-೩

ಪಂಪಾದಿಕವಿಗಳಲ್ಲಿ ಕಂಡುಬರುವ ಕೆಲವು ವಿಶೇಷ ಪದಾರ್ಥಗಳ ಸ್ವರೂಪನಿರ್ಣಯ
—ಎಚ್. ಶೇಷಯ್ಯಂಗಾರ್ (A.O.R., U.M., VI

ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ—ನ. ಸುಬ್ರಹ್ಮಣ್ಯಂ
(ಶ್ರದ್ಧಾಂಜಲಿ, ಪು. ೧೧೧

ರತೇಶನ ನಾಲ್ಕು ಚಿತ್ರಗಳು—ಮಿರ್ಜಿ ಅಣ್ಣಾರಾಯ (೧೯೫೪)
ಾರತದ ಶಿಶುಪಾಲವಧೆ—ತ. ಸು. ಶಾಮರಾವ (ಕ.ಸಾಪ., ೨೫-೨)
ಾರತಗಳ ಶ್ರೀಕೃಷ್ಣ—ವಿ. ಸೀ. (ಕವಿಕಾವ್ಯ ದೃಷ್ಟಿ, ಪು. ೮೯)
ುದನಮದಭಂಗ—ಜಿ. ಪಿ. ರಾಜರತ್ನಂ (ಕ.ನು., ೩-೩೮)
ುಹಾಕವಿ ಶ್ರೀ ಪಂಪನು—ಮ. ಪ್ರ. ಪೂಜಾರ (ವಾಗ್ಭೂ., ೧೬-೨, ೩)
್ರೀಕವಿಪಂಪ—ಸಂ: ಜಿ. ಪಿ. ರಾಜರತ್ನಂ (೧೯೫೧)
On Pampa's Works—H. Shesha Iyengar (A.O.R., U.M., IV–)

ಪ್ರಭುದೇವ

ಅಲ್ಲಮ—ಪಾಂ. ಭೀ. ದೇಸಾಯಿ (ಶ.ಸಾ., ೧೭-೧)
ಅಲ್ಲಮಪ್ರಭು—ಅ. ನ. ಕೃಷ್ಣರಾಯ (೧೯೫೯)
ಅಲ್ಲಮಪ್ರಭು—ಕಪಟ್ರಾಳ ಕೃಷ್ಣರಾವ (ಶ.ಸಾ., ೧೫-೭)
ಅಲ್ಲಮಪ್ರಭು—ಬು. ಮ. ಪುರಾಣಿಕ (೧೯೩೬)
ಅಲ್ಲಮಪ್ರಭು—ಜಿ. ಪಿ. ರಾಜರತ್ನಂ (೧೯೫೫)
ಅಲ್ಲಮಪ್ರಭು—ವಿ. ಸೀತಾರಾಮಯ್ಯ (ಕವಿಕಾವ್ಯ ದೃಷ್ಟಿ, ಪು. ೧೧೨)
ಅಲ್ಲಮಪ್ರಭುದೇವರು—ಬುದ್ಧಯ್ಯಸ್ವಾಮಿ ಪುರಾಣಿಕ (ಲಿಂ.ವಿ.ಪ., ೫-೧)
ಅಲ್ಲಮಪ್ರಭುದೇವರು—ಜ್ಞಾನೋಪಾಸಕ (ಶಿವಾ., ೨೧-೭)
ಅಲ್ಲಯ್ಯನ ಬೆಳಕು—'ಜ. ಚ. ನಿ.' (೧೯೫೨)
ಆತ್ಮಜ್ಞಾನಿ ಅಲ್ಲಮಪ್ರಭು—ಓ. ಎನ್. ಲಿಂಗಣ್ಣಯ್ಯ (೧೯೪೫)
ರ್ಶನದಿವಾಕರ ಅಲ್ಲಮಪ್ರಭು—ಎಂ. ಆರ್. ರಾಮಸ್ವಾಮಿ (ಶ.ಸಾ., ೨೧-೬)
ಪ್ರಭುದೇವರ ಗ್ರಂಥಗಳು [ಕಾ.ಲೋ.]— (ಪ್ರ.ಕ., ೧೨-೪)
ಪ್ರಭುದೇವರ ನಟನತಾರಾವಳಿ—ಬುದ್ಧಯ್ಯಸ್ವಾಮಿ ಪುರಾಣಿಕ [ವಿಮರ್ಶೆ] (ಕ.ಸಾ.ಪ., ೧೫-೧)
ಪ್ರಭುದೇವಪುರಾಣ—ಎಳಂದೂರ ಹರೀಶ್ವರಕೃತ (೧೯೪೦)
ಪ್ರಭುದೇವರ ಪುರಾಣ [ಕಾ.ಲೋ.]—ದೊ. ಲ. ನರಸಿಂಹಾಚಾರ್ (ಪ್ರ.ಕ., ೨೨-೧)
ಪ್ರಭುದೇವರ ವ್ಯಕ್ತಿತ್ವ—ಸ. ಸ. ಮಾಳವಾಡ (ಲಿಂ.ವಿ.ಪ., ೫-೩)

ಪ್ರಭುಲಿಂಗಲೀಲೆ [ಪ್ರಸ್ತಾವನೆ]—ಶಿ. ಶಿ. ಬಸವನಾಳ (೧೯೩

ಪ್ರಭುಲಿಂಗಲೀಲೆಯ ಸಂಗ್ರಹ [ಪ್ರಸ್ತಾವನೆ]—ಎಂ. ಆರ್. ಶ್ರೀನಿವಾಸಮೂ
(೧೯೫

ಪ್ರಭುದೇವರ ಕಾಲ—ಬುದ್ಧಯ್ಯಸ್ವಾಮಿ ಪುರಾಣಿಕ (ಶಿವಾ., ೧೦-೨,

ಪ್ರಭುವಿನ ಪ್ರಭೆ—ದೇಶಪಾಂಡೆ ಮನೋಹರರಾಯ (೧೯೫

ಶ್ರೀಮದನಾದಿ ಅಲ್ಲಮಪ್ರಭು—ಬುದ್ಧಯ್ಯಸ್ವಾಮಿ ಪುರಾಣಿಕ (೧೯೩

ಶ್ರೀಮದಲ್ಲಮವ್ಯೋಮ—ಸಿದ್ಧರಾಮಪ್ಪ ಪಾವಟೆ (೧೯೩

ಶೂನ್ಯಸಂಪಾದನೆ—(ಸಂ) ಫ. ಗು. ಹಳಕಟ್ಟಿ (೧೯೫

Allamaprabhu—Historicos (ಲಿಂ.ವಿ.ಪ., ೧-

ಪುರಂದರದಾಸ

ಕನ್ನಡಸಾಹಿತ್ಯದಲ್ಲಿ ಪುರಂದರದಾಸರು—ಶಂಕರ ಕಿಡಿಲಯ (ಜೀವನ, ೧೫-

ತ್ಯಾಗವೀರ ಪುರಂದರದಾಸರು—ಸುಬೋಧ ಎಂ. ರಾಮರಾವ (ಸುಬೋಧ, ೨೬-

ದಾಸಶ್ರೇಷ್ಠ ಪುರಂದರದಾಸರು—ಕೆ. ವಿ. ಗಜೇಂದ್ರಗಡಕರ (ಜ.ಕ., ೩೫-

ಪುರಂದರದಾಸರ ಅಧ್ಯಾತ್ಮಜೀವನ—ಕೆ. ಡಿ. ಸಂಗೋರಾಮ (ಜೀವನ, ೧-೬,

ಪುರಂದರದಾಸರ ಒಂದು ಕೀರ್ತನೆ—ಜಿ. ವರದರಾಜರಾವ (ಕ.ನು., ೯-೧

ಪುರಂದರದಾಸರ ಕೀರ್ತನೆಗಳಲ್ಲಿ ಭಾವವಿಕಾಸ—ಎಂ. ಎ. ವೆಂಕಟರಾಯ
(ಪ್ರ.ಕ., ೧೮-

ಪುರಂದರದಾಸರ ಕೀರ್ತನೆಗಳು—ಜಿ. ವರದರಾಜರಾವ (ಕ.ಸಾ.ಪ., ೨೮-೨,

ಪುರಂದಸದಾಸರ ಚರಿತ್ರೆ—ಕಾ. ಶಿವರಾಮದಾಸ (೧೯೩

ಪುರಂದರದಾಸರ ಚರಿತ್ರೆ—ಬೇಲೂರ ಕೇಶವದಾಸ (೧೯೩

ಪುರಂದರದಾಸರ ಚರಿತ್ರೆ [ವಿಮರ್ಶೆ]—ಟಿ. ಎಸ್. ವೆಂ. (ಕ.ಸಾ.ಪ., ೭-

ಪುರಂದರದಾಸರ ಜೀವನಚರಿತ್ರೆ—ರಾ. ಸ್ವಾ. ಪಂಚಮುಖಿ (೧೯೫

ಪುರಂದರದಾಸರ ಪರಿಚಯ—ಎಂ. ವಿ. ಸೀತಾರಾಮಯ್ಯ (ಕ.ನು., ೫-೧

ಪುರಂದರದಾಸರ ಲಾವಣಿ (ಸಂಗ್ರಹ)—ದ. ರಾ. ಬೇಂದ್ರೆ (ಜ.ಕ., ೩-

ಪುರಂದರದಾಸರ ಲೋಕೋಪಕಾರ [ವ.ಕೋ.] . . . (ಪ್ರ.ಕ., ೩-

ಪುರಂದರದಾಸರು—ಕೇಶವಶರ್ಮಾ ಗಲಗಲಿ (ವಾಗ್ಭೂ., ೨೯-೮,

ಪುರಂದರದಾಸರು [ವ.ಕೋ.] . . . (ಪ್ರ.ಕ., ೨೨-

ಂದರದಾಸರು; ಜೀವನವೃತ್ತಾಂತ— . . . (ಪ್ರ.ಕ., ೩-೨)
ಂದರದಾಸರು [ಕೀರ್ತನೆಗಳ ವಿಮರ್ಶೆ] . . . (ಪ್ರ.ಕ., ೩-೩)
ಂದರದಾಸರು—'ಚಾಲುಕ್ಯ' (ಜ.ಕ., ೩-೪)
ಂದರದಾಸರು—ಸುಬೋಧ ಎಂ. ರಾಮರಾವ (ಪ.ಭಾ., ೮-೩)
ಂದರದಾಸರು ಮತ್ತು ಕರ್ನಾಟಕ ಶ್ರೀಹರಿದಾಸಪರಂಪರೆ— . . .
(ಕ.ನು., ೭-೨೯)
ಂದರದಾಸರು ಮತ್ತು ಅವರ ಕೀರ್ತನೆಗಳು—ಜಿ. ವರದರಾಜರಾವ
(೧೯೪೪)
ಂದರೋಪನಿಷತ್—ಬಿ. ನಾಗೇಶರಾವ (ಕ.ಸಾಪ., ೪೨-೧, ೨)
ಂದರದಾಸಾರ್ಯರ ಚರಿತ್ರೆ—ಶ್ರೀಪಾದ ಹಂಡೆ (೧೯೨೫)

ಪೊನ್ನ

ರತ್ನತ್ರಯದ ವಿಸಯ—ಜಿ. ಪಿ. ರಾಜರತ್ನಂ (ಕ.ಸಾ.ಪ., ೨೬-೧)
ಚಕ್ರವರ್ತಿ ಪೊನ್ನನ ಮೋರು—ಎನ್. ಬಸವಾರಾಧ್ಯ (ಜೀವನ, ೧೮-೧೦)
, ಪೊನ್ನ, ನಾಗವರ್ಮರ ಜನ್ಮಸ್ಥಳಗಳು—ಎಚ್. ನಾರಾಯಣರಾವ್
(ಕ.ಸಾ.ಪ., ೩-೧)
ನ್ನನ ಭುವನೈಕರಾಮಾಭ್ಯುದಯ—ದೊ. ಲ. ನರಸಿಂಹಾಚಾರ್
(ಪ್ರ.ಕ., ೧೫-೨)
ನ್ನನ ಭುವನೈಕರಾಮಾಭ್ಯುದಯ - ಒಂದೂಹೆ—ದ. ರಾ. ಬೇಂದ್ರೆ
(ಸಾಹಿತ್ಯಸಂಶೋಧನೆ, ಪು. ೧೧೮)
ನ್ನನೂ ಕಾಳಿದಾಸನೂ—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೨-೨)
ನೈಕರಾಮಾಭ್ಯುದಯದ ಭುವನೈಕರಾಮ—ಎಲ್. ಆರ್. ಹೆಗಡೆ
(ಕ.ನು., ೨೦-೫)
ಶಿಪುರಾಣಂ [ಪ್ರಸ್ತಾವನೆ]—ಎ. ವೆಂಕಟರಾವ್
ಮತ್ತು ಎಚ್. ಶೇಷ ಅಯ್ಯಂಗಾರ್ (ಮದ್ರಾಸ ವಿ.ವಿ.) (೧೯೨೯)

ಬಸವೇಶ್ವರ

ರ್ನವಾಡ ಶಿಲಾಶಾಸನದಲ್ಲಿ ಬಸವೇಶ್ವರನ ವಂಶವಿಚಾರ
—ಟಿ. ಎನ್. ಮಲ್ಲಪ್ಪ (ಶ.ಸಾ., ೧೦-೧೦)
ರ್ನವಾಡ ಶಿಲಾಶಾಸನದ ೧೦ನೆಯ ಕಂದಪದ್ಯ—ಎಂ. ಗೋವಿಂದ ಪೈ
(ಶ.ಸಾ., ೧೦-೧೧, ೧೨)

ಕನ್ನಡ ಕುಲದೀಪ ಬಸವಣ್ಣ—ಸಿಂಪಿ ಲಿಂಗಣ್ಣ (೩ನೇ ಮು.) (೧೯೫

ಕನ್ನಡ ಭಕ್ತಿದೀಪಕ ಬಸವಣ್ಣ—ಸಿಂಪಿ ಲಿಂಗಣ್ಣ (ಶಿವಾ., ೧೪-೯-೧೨, ೧೯-೧

ಕನ್ನಡಕ್ಕೆ ಬಸವಣ್ಣನವರ ಕಾಣಿಕೆ—ಗ. ಸ. ಹಾಲಪ್ಪ (ಜ.ಕ., ೩೩-೧

ಕನ್ನಡಸಾಹಿತ್ಯಕ್ಕೆ ಬಸವಣ್ಣನವರ ಕಾಣಿಕೆ—ಜೀರಗೆ ಕರಬಸಪ್ಪ (ಶಿವಾ., ೧೬-೩

ಕಲ್ಯಾಣದ ಇತಿಹಾಸ—ಗಿ. ಶ್ರೀ. ದೀಕ್ಷಿತ (ಜ.ಕ., ೨೭-೮

ಕ್ರಾಂತಿಕಾರಕ ಬಸವ—ಎನ್. ಬಿ. ಹಿರೇಮಠ (ಲಿಂ.ವಿ.ಪ., ೧-೧

ಕ್ರಾಂತಿ ಮತ್ತು ಬಸವ—ಸ. ಸ. ಮಾಳವಾಡ (ಲಿಂ.ವಿ.ಪ., ೧-೧

ಜೀವಜ್ಯೋತಿ ಬಸವಣ್ಣನವರು—ಮಹಾಂತದೇವರು ಇಲಕಲ್ಲ (ಶಿವಾ., ೨೩-೭

ಬಸವಚರಿತೆ—ಮಂಜಪ್ಪ ಹರ್ಡೇಕರ (೧೯೨

ಬಸವಜಯಂತಿ ವಿಶೇಷ ಸಂಚಿಕೆ—ಶರಣಸಾಹಿತ್ಯ (ಶ.ಸಾ., ೨-೪, ೩

ಬಸವಜ್ಯೋತಿ—ಬುದ್ಧಯ್ಯಸ್ವಾಮಿ ಪುರಾಣಿಕ (ಜ.ಕ., ೨೭-

ಬಸವಣ್ಣನ ದಾಸೋಹಭಾವ—ಬುದ್ಧಯ್ಯಸ್ವಾಮಿ ಪುರಾಣಿಕ (ಲಿಂ.ವಿ.ಪ., ೧-

ಬಸವಣ್ಣನವರ ಅಮೃತವಾಣಿ—ಅ. ನ. ಕೃಷ್ಣರಾಯ (೧೯೪

ಬಸವಣ್ಣನವರ ಆಧ್ಯಾತ್ಮಿಕ ಸಾಧನೆ—ಶೀ. ಕೋ. ಚೆನ್ನಬಸಪ್ಪ
(ಬಸವನಾಳ ಸ್ಮಾರಕ ಸಂಪುಟ, ಪು. ೫೫

ಬಸವಣ್ಣನವರ ಕಾಲದ ಸಾಮಾಜಿಕ ಪರಿಸ್ಥಿತಿ—ಮಾ. ನಂ. ನಂಜಪ್ಪ
(ಶ.ಸಾ., ೨-೧

ಬಸವಣ್ಣನವರ ಕಾರ್ಯದ ಗುಟ್ಟು—ಕೆ. ಜಿ. ಕುಂದಣಗಾರ (ಲಿಂ.ವಿ.ಪ., ೧-

ಬಸವಣ್ಣನವರ ಕೆಲವು ವಚನಗಳ ಪಾಠ—ದೊ. ಲ. ನರಸಿಂಹಾಚಾರ್
(ಶ.ಸಾ., ೧೧-೫,

ಬಸವಣ್ಣನವರ ಕೆಲವು ವಚನಗಳು—ಪಾಂ. ಭೀ. ದೇಸಾಯಿ (ಪ್ರ.ಕ., ೩೪-

ಬಸವಣ್ಣನವರ ಜೀವನರಹಸ್ಯ— ಶ್ರೀ ಮಹದೇವಸ್ವಾಮಿಗಳು (ಶ.ಸಾ., ೪-

ಬಸವಣ್ಣನವರ ದರ್ಶನಕ್ಕೆ ಸುದರ್ಶನದ ಅವಶ್ಯಕತೆ
—ಅನ್ನದಾನೀಶ್ವರ ವಿರಕ್ತಮಠ (ಶಿವಾ., ೨೩-

ಬಸವಣ್ಣನವರ ಬಗ್ಗೆ ಸಮಕಾಲೀನರ ಮತ್ತು ಆ ತರುವಾಯದವರ ಅಭಿಪ್ರಾಯಗ
—ಮಲ್ಲಾಬಾದಿ ವೀರಭದ್ರಪ್ಪ (ಲಿಂ.ವಿ.ಪ., ೧-

ಬಸವಣ್ಣನವರ ಬೆಳವಣಿಗೆ—ಅ. ನ. ಕೃಷ್ಣರಾಯ (ಜ.ಕ., ೧೬-

ಬಸವಣ್ಣನವರ ಭಕ್ತಿ—' ಚಿಚ್ಚಕೋರ ' (ಜೀವನ, ೧-೧೦, ಶ.ಸಾ., ೨-

ಸವಣ್ಣನವರ ಭಕ್ತಿಸಾಧನೆಯು . . .—ಕೆ. ಜಿ. ರುದ್ರಸ್ವಾಮಿ (ಶಿವಾ., ೨೨-೧೧)

ಸವಣ್ಣನವರ ರಾಜಕಾರಣ—ಅನ್ನದಾನೀಶ್ವರ ವಿರಕ್ತಮಠ (ಶಿವಾ., ೨೩-೫)

ಸವಣ್ಣನವರ ವಚನಗಳು—ಅ. ನ. ಕೃಷ್ಣರಾಯ

(ಕ. ಸಾಹಿತ್ಯ ಮತ್ತು ಸಂಸ್ಕೃತಿ, ಪು. ೮೦)

ಸವಣ್ಣನವರ ವಚನಗಳು [ವ.ಕೋ.] (ಪ್ರ.ಕ., ೧೨-೨)

ಸವಣ್ಣನವರ ಷಟ್ಸ್ಥಲದ ವಚನಗಳು [ಪ್ರಸ್ತಾವನೆ]

—ಸಂ: ಶಿ. ಶಿ. ಬಸವನಾಳ (೧೯೫೧)

ಸವಣ್ಣನವರ ಸಂಸಾರ—ಸಿಂಪಿ ಲಿಂಗಣ್ಣ (ಶಿವಾ., ೨೩-೧೧, ೧೨)

ಸವಣ್ಣನವರ ಸಾಮಾಜಿಕ ವಿಚಾರಗಳು—ಕೆ. ಜಿ. ಕುಂದಣಗಾರ

(ಶಿವಾ., ೧೦-೬)

ಸವಣ್ಣನವರು—ಬೆಟಗೇರಿ ಕೃಷ್ಣಶರ್ಮ (೧೯೩೩)

ಸವನು ಮೊದಲು ಹೋದದ್ದು ಕಲ್ಯಾಣಕ್ಕೋ ಮಂಗಳವಾಡಕ್ಕೋ?

—ಫ. ಗು. ಹಳಕಟ್ಟಿ (ಶಿವಾ., ೧೪-೧)

ಸವನೂ ಜಗತ್ತಿನ ಮಹದ್ವಿಭೂತಿಗಳೂ—ಸ. ಸ. ಮಾಳವಾಡ (ಶಿವಾ., ೯-೫)

ಸವ ಬಿಜ್ಜಳರ ಇತಿಹಾಸ: ಪುನರ್ವಿಮರ್ಶೆ—ಕಪಟ್ರಾಳ ಕೃಷ್ಣರಾಯ

(ಪ್ರ.ಕ., ೨೯-೨)

ಸವಭಾನು—ಸಿದ್ಧರಾಮಪ್ಪ ಪಾವಟೆ (೧೯೨೨)

ಸವಯುಗದ ಹಿನ್ನೆಲೆ ಮತ್ತು ಅಂದಿನ ಪರಿಸ್ಥಿತಿ—ಮಾ. ನಂ. ನಂಜಪ್ಪ

(ಲಿಂ.ವಿ.ಪ., ೧-೧)

ಸವರಾಜದೇವ—ಸ. ಸ. ಮಾಳವಾಡ (ಶಿವಾ., ೧೪-೩)

ಸವರಾಜದೇವರ ರಗಳೆಯೂ ಬಸವನ ಚರಿತ್ರೆಯೂ—ಸ. ಸ. ಮಾಳವಾಡ

(ಶಿವಾ., ೯-೫)

ಸವೇಶ್ವರ—ಎಸ್. ಶ್ರೀಕಂಠಶಾಸ್ತ್ರೀ (ಕ.ಸಾ.ಪ., ೨೩-೨)

ಸವೇಶ್ವರನ ಕಾಲ—ಚನ್ನಮಲ್ಲಿಕಾರ್ಜುನ (೧೯೪೫)

ಸವೇಶ್ವರನ ಕಾಲ—(ಪ್ರಪಂಚ ಪರಿಚಯ ಸಂಪಾದಕರಿಂದ) . . . (ಜ.ಕ., ೪-೭)

ಸವೇಶ್ವರನ ಕಾಲದ ಮತಮತಗಳ ಗೊಂದಲ—ಕ. ಶ್ರೀಕಂಠಯ್ಯ (ಶ.ಸಾ., ೩-೧)

ಸವೇಶ್ವರನ ಕಾಲದ ರಾಜಕೀಯ ಪರಿಸ್ಥಿತಿ—ಓ. ಎಸ್. ಲಿಂಗಣ್ಣಯ್ಯ

(ಶ.ಸಾ., ೨-೧೦)

ಸವೇಶ್ವರನ ಕಾಲನಿರ್ಣಯ —ಎಂ. ಗೋವಿಂದ ಪೈ } (ಮೂರು ಉಪನ್ಯಾಸಗಳು, ಪು. ೫೯) ಮತ್ತು (ಶ.ಸಾ., ೨-೧೦; ಶಿವಾ., ೧೪-೨-೪)

ಬಸವೇಶ್ವರನ ಚರಿತ್ರೆ—ಫ. ಗು. ಹಳಕಟ್ಟಿ (ಶಿವಾ., ೧೫-೧೦-೧೨,
೧೬-೧-೩, ೫-೧೨, ೧೭-೧-೬, ೮-೧೨, ೧೮-೧-೩)

ಬಸವೇಶ್ವರನ ಚರಿತ್ರೆ—ಸಿಂದಗಿ ಸಿದ್ದಪ್ಪ (೧೯೨೭)

ಬಸವೇಶ್ವರನ ಚರಿತ್ರೆ [ಕಾ.ಲೋ.]—ಎಂ. ಆರ್. ಶ್ರೀ. (ಪ್ರ.ಕ., ೮-೪)

ಬಸವೇಶ್ವರನ ಚರಿತ್ರೆ—ಗ. ಹು. ಹೊನ್ನಾಪುರಮಠ (೧೯೨೯)

ಬಸವೇಶ್ವರನ ತತ್ವಗಳು—ಸಂ: ಫ. ಗು. ಹಳಕಟ್ಟಿ

ಬಸವೇಶ್ವರನ ಸಾಹಿತ್ಯಸೇವೆ—ಎಸ್. ವಿ. ಹಂಜಿ (ಶ.ಸಾ., ೩-೩

ಬಸವೇಶ್ವರನು ಆವ ಬಿಜ್ಜಳನಲ್ಲಿ ಇದ್ದನು?—ಫ. ಗು. ಹಳಕಟ್ಟಿ (ಶಿವಾ., ೧೪-೬

ಬಸವೇಶ್ವರನು ಕರ್ನಾಟಕ ವಾಙ್ಮಯದ ಸೀಮಾಪುರುಷನು—ಫ. ಗು. ಹಳಕಟ್ಟಿ
(ಶಿವಾ., ೨೭-೪

ಬಸವೇಶ್ವರನು ಚಾರಿತ್ರಿಕ ಪುರುಷನೋ ಹೇಗೆ?—ಫ. ಗು. ಹಳಕಟ್ಟಿ
(ಶಿವಾ., ೧೪-೯

ಬಸವೇಶ್ವರನು ನಾಥಸಿದ್ಧಪಂಥದ ಅನುಯಾಯಿ—ಕಪಟ್ರಾಳ ಕೃಷ್ಣರಾಯ
(ಪ್ರ.ಕ., ೨೪-೧

ಬಸವೇಶ್ವರನು ನಿರ್ಮಿಸಿದ ಸರ್ವಾಂಗಸುಂದರವಾದ ಸಮಾಜಮಂದಿರ
—ಎಸ್. ವಿ. ಹಂಜಿ (ಶಿವಾ., ೧೪-೧

ಬಸವೇಶ್ವರನು ಮಾಡಿದ ಕನ್ನಡಸಾಹಿತ್ಯಸೇವೆ—ಎಸ್. ವಿ. ಹಂಜಿ
(ಶಿವಾ., ೧೪-೧೦

ಬಸವೇಶ್ವರನು ವೀರಶೈವಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡಿದ್ದು
—ಎಸ್. ವಿ. ಹಂಜಿ (ಶಿವಾ., ೧೯-೨

ಬಸವೇಶ್ವರನೂ ಕರ್ನಾಟಕದ ಅಭ್ಯುದಯವೂ
—ಚೆನ್ನಬಸಪ್ಪ. ಮು. ಹಾಲಪ್ಪನವ

ಬಸವೇಶ್ವರನೂ ಕರ್ನಾಟಕದ ಅಭ್ಯುದಯವೂ [ಕಾ.ಲೋ.]—ಎಂ. ಆರ್. ಶ್ರೀ.
(ಪ್ರ.ಕ., ೧೧-

ಬಸವೇಶ್ವರ ವಚನಗಳನ್ನು ಕುರಿತು—ಕೆ. ವೆಂಕಟರಾಯಾಚಾರ್ಯ
(ಶ.ಸಾ., ೨೧-೨, ೩

ಬಸವೇಶ್ವರ ಷಟ್ಸ್ಥಲವಚನದ ಕಥಾಸಾರ—ಫ. ಗು. ಹಳಕಟ್ಟಿ (೧೯೫

ಬಿಜ್ಜಳ—ಎಸ್. ಶ್ರೀಕಂಠಶಾಸ್ತ್ರೀ (ಶಿವಾ., ೧೪-

ಬಿಜ್ಜಳನು ಜೈನನೇ—ತ. ಸು. ವೆಂಕಣ್ಣಯ್ಯ (ಪ್ರ.ಕ., ೧೦-

ುದ್ಧ ಮತ್ತು ಬಸವಣ್ಣನವರ ವಚನಗಳಲ್ಲಿ ಸಾಮರಸ್ಯ—ಗುರುರಾಜರಾವ್ (ಕ.ನು., ೨೦-೫)

ಕ್ತಿರಾಜ ಬಸವಣ್ಣ—ಸಿಂಪಿ ಲಿಂಗಣ್ಣ

ಕ್ತಿಭಾಂಡಾರಿ ಬಸವಣ್ಣನವರು—ಎಂ. ಆರ್. ಶ್ರೀನಿವಾಸಮೂರ್ತಿ (೧೯೪೬)

ಗವಾನ್ ಬಸವೇಶ್ವರ (ಚಾರಿತ್ರಿಕ)—ಬುದ್ಧಯ್ಯಸ್ವಾಮಿ ಪುರಾಣಿಕ (ಜ.ಕ., ೧೮-೮)

ಾರತಭಾಗ್ಯವಿಧಾತ ಬಸವ—ಎಂ. ಜಿ. ನಂಜುಂಡಾರಾಧ್ಯ (ಲಿಂ.ವಿ.ಪ., ೧-೧)

ೀಮಕವಿಯ ಬಸವ—ವೀ. ರು. ಕೊಪ್ಪಳ (ಲಿಂ.ವಿ.ಪ., ೧-೧)

ುನಗೋಳಿ ಶಿಲಾಶಾಸನದ ಬಸವನು ಕಲ್ಯಾಣದ ಬಸವನೇ?
—ಜೀರಗೆ ಕರಬಸಪ್ಪ (ಶಿವಾ., ೧೪-೩)

ುಹಾತ್ಮಾ ಬಸವೇಶ್ವರ—ಜಿ. ಡಿ. ರಾಜಶೇಖರಯ್ಯ (ಶ.ಸಾ., ೬-೬)

ುಹಾತ್ಮಾ ಬಸವಣ್ಣನವರ ಕ್ರಾಂತಿಕಾರ್ಯ—ಕೆ. ಕೆ. ಗಲಗಲಿ (೧೯೪೭)

ುಹಾತ್ಮಾ ಬಸವಣ್ಣನವರ ಭಾವಚಿತ್ರ—ಹಳಪೇಟಿ ಚಿಂತಾಮಣಿ (ಜ.ಕ., ೨೧-೨೨)

ುಹಾತ್ಮಾ ಬಸವಣ್ಣನವರು—ರಾ. ಯ. ಧಾರವಾಡಕರ (ಜೀವನ, ೩-೧೨)

ುಹಾತ್ಮಾ ಬಸವೇಶ್ವರರು—ಮ. ಮಲ್ಲಪ್ಪ (ಶಿವಾ., ೨೨-೨)

ಯುಗಪ್ರವರ್ತಕ ಬಸವಣ್ಣನವರು—ಹಳಪೇಟಿ ಚಿಂತಾಮಣಿ (೧೯೪೫)

ಚನಕಾರ ಬಸವೇಶ್ವರ—ಅ. ನ. ಕೃ. (ಕ.ಸಾಹಿತ್ಯ ಮತ್ತು ಸಂಸ್ಕೃತಿ, ಪು. ೯೧)

ಚನಕಾರ ಬಸವೇಶ್ವರರು—ಕು. ವೆಂ. ಪುಟ್ಟಪ್ಪ (ವಿಭೂತಿಪೂಜೆ, ಪು. ೩೭)

ಶ್ವಪ್ರೇಮಿ ಬಸವಣ್ಣನವರು—ಟಿ. ಎಚ್. ಎಮ್. ಸದಾಶಿವಯ್ಯ (ಶ.ಸಾ., ೩-೭)

ಶ್ವಬಂಧು ಶ್ರೀ ಬಸವೇಶ್ವರ—ಅ. ನ. ಕೃ. (೧೯೫೯)

ಾಸನಗಳಲ್ಲಿ ಬಸವೇಶ್ವರ—ಎಂ. ಗೋವಿಂದ ಪೈ
(ಬಸವನಾಳ ಸ್ಮಾರಕ ಸಂಪುಟ, ಪು. ೫೨೫)

ರಣಬಸವೇಶ್ವರಚರಿತ್ರೆ—'ಶೂಲಪಾಣಿ' (ಶ.ಸಾ., ೯-೯)

ವಾನುಭವ ಸತ್ಯಮಾರ್ಗ—ಸಂ: ಫ. ಗು ಹಳಕಟ್ಟಿ

ಿವಾನುಭವಿ ಬಸವಣ್ಣ—ಬುದ್ಧಯ್ಯಸ್ವಾಮಿ ಪುರಾಣಿಕ (ಶಿವಾ., ೧೫-೨)

್ರೀ ಬಸವೇಶ್ವರ—ಅ. ನ. ಕೃಷ್ಣರಾಯ (ಸಮದರ್ಶನ, ಪು. ೮೦)

್ರೀ ಬಸವೇಶ್ವರ—ಎ. ಎಮ್. ಷಣ್ಮುಖಶಾಸ್ತ್ರಿ (ಲಿಂ.ವಿ.ಪ., ೩-೨)

್ರೀ ಬಸವೇಶ್ವರರು—ಸಿದ್ಧರಾಮಪ್ಪ ಪಾವಟೆ (ಜ.ಕ., ೧-೩-೫, ೭, ೧೧)

ಸಮಾಜೋದ್ಧಾರಕ ಬಸವಣ್ಣನವರು—ಗ. ಸ. ಹಾಲಪ್ಪ (೧೯೫೭)
ಸಾಧನಜೀವಿ ಬಸವತಂದೆ—ಕರಿಬಸವಕುಮಾರ (ಶಿವಾ., ೨೩-೫)
Basava & Anubhavamantapa—C. D. Uttangi (ಲಿಂ.ವಿ.ಪ., ೧-೧)
Basava's Attitude Towards Women —V. B. Halbhavi (ಲಿಂ.ವಿ.ಪ., ೧-೧)
Shri Basaveshwara—S. C. Nandimath (ಲಿಂ.ವಿ.ಪ., ೧-೧)
Basaweswara—S. S. Basavanal (Musings of Basava-Intro.)
Sayings of Basavanna—M. Venkatesh Iyengar (1935)

ಭಟ್ಟಾಕಳಂಕ

ಕರ್ಣಾಟಕ ಶಬ್ದಾನುಶಾಸನಪ್ರಕಾಶಿಕೆ [ಪ್ರಸ್ತಾವನೆ] (ಕ.ವಿ.ವ. ಸಂಘ, ಧಾರವಾಡ) (೧೯೪೧)
ಕೆಲವು ಕನ್ನಡ ವ್ಯಾಕರಣವಿಚಾರಗಳು—ಮ. ಪ್ರ. ಪೂಜಾರ (೧೯೫೨)
ಭಟ್ಟಾಕಳಂಕದೇವ—ಪಾಂ. ಭೀ. ದೇಸಾಯಿ (ಕ.ಸಾ.ಪ., ೩೦-೩, ೪)
ಭಟ್ಟಾಕಳಂಕನ ಕಾಲವಿಚಾರ—ವರದಾಚಾರ್ಯ (ಪ್ರ.ಕ., ೧೯೨೧)

ಮಲ್ಲಿಕಾರ್ಜುನ

ಮಲ್ಲಿಕಾರ್ಜುನ ಮತ್ತು ಅವನ ಮಗ ಕೇಶಿರಾಜ ಇವರು ಜೈನರೇ, ಸ್ಮಾರ್ತಬ್ರಾಹ್ಮಣರಲ್ಲ—ಅ. ಫ. ಚೌಗುಲೆ (ಪ್ರ.ಕ., ೩೧-೩, ೪)
ಮಲ್ಲಿಕಾರ್ಜುನನ ಮತಕಾಲಗಳ ವಿಚಾರ—ಎಂ. ಎಚ್. ಕೃಷ್ಣ (ಪ್ರ.ಕ., ೧೫-೪)
ಸೂಕ್ತಿಸುಧಾರ್ಣವ [ಪ್ರಸ್ತಾವನೆ]—ಎನ್. ಅನಂತರಂಗಾಚಾರ್ (೧೯೪೭)
ಸೂಕ್ತಿಸುಧಾರ್ಣವ ಕಾಲ—ಅ. ವೆಂಕಟಸುಬ್ಬಯ್ಯ
ಸೂಕ್ತಿಸುಧಾರ್ಣವ ಕಾಲವಿಚಾರ—ಎಂ. ಎಚ್. ಕೃಷ್ಣ (Mys. Arch. Report, 1931)

ಮಹಾದೇವಿಯಕ್ಕ

ಅಕ್ಕನ ಅಚ್ಚ ಬಾಳು—'ಜ. ಚ. ನಿ.' (೧೯೫೩)
ಅಕ್ಕನ ಐತಿಹಾಸಿಕ ಜೀವನದರ್ಶನ—ತೋ. ಶಿ. ಕೊಟಗಿ

ಅಕ್ಕನ ಬಾಳಿನ ಮಾಯೆ—ಕರಿಬಸವಕುಮಾರ (ಶಿವಾ., ೨೩-೨)

ಅಕ್ಕನ ಸಂದೇಶ—ಚ. ಸುಂದರೇಶನ್ (ಶ.ಸಾ., ೧೯-೧೦)

ಅಕ್ಕಮಹಾದೇವಿ—ಎಚ್. ಎಂ. ವೀರಭದ್ರಯ್ಯ (೧೯೫೧)

ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ (ಮೈ.ಪ್ರ.ಪು.ಮಾಲೆ) (೧೯೪೫)

ಅಕ್ಕಮಹಾದೇವಿ [ನಾಟಕ]—ರಂ. ಶ್ರೀ. ಮುಗಳಿ

ಅಕ್ಕಮಹಾದೇವಿ [ಕಾ.ಲೋ.]—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೯-೨, ೩)

ಅಕ್ಕಮಹಾದೇವಿಯ ಆದರ್ಶ—ಶಾಂತಾದೇವಿ ಮಾಳವಾಡ (ಶ.ಸಾ., ೨-೧)

ಅಕ್ಕಮಹಾದೇವಿಯ ಆಧ್ಯಾತ್ಮಿಕ ಪ್ರಗತಿ—ಅ. ನ. ಕೃಷ್ಣರಾಯ (ಶ.ಸಾ., ೧-೯)

ಅಕ್ಕನವರ ಅಧ್ಯಾತ್ಮಿಕೆ—ಮ. ಮಲ್ಲಪ್ಪ (ಶಿವಾ., ೨೧-೧೨)

ಅಕ್ಕಮಹಾದೇವಿಯ ಜೀವನರಹಸ್ಯ—ಸ. ಸ. ಮಾಳವಾಡ (ಶಿವಾ., ೧೨-೩)

ಉಡುತಡಿಯ ಮಹಾದೇವಿಯಕ್ಕಗಳ ಸಂಪಾದನೆ—ಶಿವಾನಂದಸ್ವಾಮಿಗಳು
(ಶಿವಾ., ೩೦-೫)

ಕದಳೀಬನದ ಬಟ್ಟೆ—ಲಕ್ಷ್ಮಣರಾವ ಜಮುಖಂಡಿ (ಶಿವಾ., ೨೩-೮)

ಕವಯಿತ್ರಿ ಅಕ್ಕಮಹಾದೇವಿ—ಕೆ. ಜಿ. ಕುಂದಣಗಾರ (ಶ.ಸಾ., ೧೭-೫)

ಜೀವನ್ಮುಕ್ತೆ ಮಹಾದೇವಿಯಕ್ಕ—ಚಂದ್ರಶೇಖರದೇವರು (ಕ.ನು., ೧-೩೪)

ತತ್ವಶಿಖಾಮಣಿ ಮಹಾದೇವಿಯಕ್ಕ—ಮಾ. ನಂ. ನಂಜಪ್ಪ (೧೯೪೯)

ಮಹಾದೇವಿ-ಕೌಶಿಕ—ಎಚ್. ದೇವೀರಪ್ಪ (ಲಿಂ.ವಿ.ಪ., ೫-೨, ೩)

ಮಹಾದೇವಿಯಕ್ಕ—ಕೆ. ಜಿ. ಕುಂದಣಗಾರ
(ರಾಜಾರಾಮ ಕಾಲೇಜ ಕರ್ನಾಟಕ ಸಂಘ) (೧೯೩೮)

ಮಹಾದೇವಿಯಕ್ಕ [ಕಾ.ಲೋ.]—ದೊ. ಲ. ನರಸಿಂಹಾಚಾರ್ (ಪ್ರ.ಕ., ೨೧-೧)

ಮಹಾದೇವಿಯಕ್ಕ—ನೀಲಾಂಬಿಕೆ, ಸಾದರಹಳ್ಳಿ (ಕ.ನು., ೩-೩೭)

ಮಹಾದೇವಿಯಕ್ಕಗಳ ಸೃಷ್ಟಿವಚನ—ಸಂಪಾದಕರಿಂದ (ಶ.ಸಾ., ೩-೨)

ಮಹಾದೇವಿಯಕ್ಕನ ಕಾವ್ಯವಾಣಿ—ಎಂ. ಎಸ್. ವೀರಾಪೂರ (ಶಿವಾ., ೧೬-೬)

ಮಹಾದೇವಿಯಕ್ಕನ ಕೆಲವು ವಚನಗಳು—ತೀ. ನಂ. ಶ್ರೀಕಂಠಯ್ಯ
(ಪ್ರ.ಕ., ೨೩-೩)

ಮಹಾದೇವಿಯಕ್ಕನವರ ಜೀವನ ಚರಿತ್ರೆ—ಟಿ. ಎನ್. ಮಹಾದೇವಯ್ಯ (೧೯೩೫)

ಮಹಾದೇವಿಯಕ್ಕನ ನಿರವಯಲ ಅಥವಾ ಜೀವನ್ಮುಕ್ತಿ—ಸಿದ್ಧರಾಮಪ್ಪ ಪಾವಟೆ
(ಜ.ಕ., ೨-೧೧, ೧೨)

ಮಹಾದೇವಿಯಕ್ಕನವರು—ಬಿ. ಪುಟ್ಟಸ್ವಾಮಯ್ಯ (ಶಿವಾ., ೧೧–೩)

ಮಹಾದೇವಿಯಕ್ಕನ ಸಾಂಗತ್ಯ—ರಂ. ಶ್ರೀ. ಮುಗಳಿ (ಶ.ಸಾ., ೧–೬)

ಮಹಾದೇವಿಯಕ್ಕನ ವಚನಾಮೃತ—ಸ. ಸ. ಮಾಳವಾಡ
(ಕರ್ನಾಟಕ ಸಾಹಿತ್ಯಸಂಸ್ಕೃತಿದರ್ಶನ, ಪು. ೩೫)

ಮಹಾದೇವಿಯಕ್ಕಳ ಜೀವನ ಮತ್ತು ಸಾಹಿತ್ಯ—ಸ. ಹಾ. ಶಿವಮೂರ್ತಿಗಳು
(ಶಿವಾ., ೧೧–೯)

ರಸಋಷಿ ಮಹಾದೇವಿಯಕ್ಕ—ವೀರಯ್ಯ ಕಂಬಿ (ಶ.ಸಾ., ೧೧–೧)

ವಿರಾಗಿಣಿ [ನಾಟಕ]—ಸಿದ್ಧಲಿಂಗಪ್ಪ ಕಂಠಿ (೧೯೪೧)

ವೈರಾಗ್ಯನಿಧಿ—ಶಾಂತಾದೇವಿ ಮಾಳವಾಡ (ಕನ್ನಡ ತಾಯಿ, ಪು. ೨೪)

ವೈರಾಗ್ಯನಿಧಿ ಅಕ್ಕಮಹಾದೇವಿ—ನಿಗಡಿ ಸಂಗನಬಸವ (ಶಿವಾ., ೨೯–೧೧)

Akkamahadevi & St. John—S. V. Jevoor (ಲಿಂ.ವಿ.ಪ., ೩–೩)

Akkamahadevi—T. N. Srikantia
(Women Saints of East & West, p. 30)

Sister Mahadevi—A. N. Krishnarao (ಲಿಂ.ವಿ.ಪ., ೧–೨)

Why Mahadevi is great?—Sandhyadevi (ಲಿಂ.ವಿ.ಪ., ೫–೪)

ಮುದ್ದಣ

ಅದ್ಭುತರಾಮಾಯಣ—ಯು. ಮಂಗೇಶರಾವ (ಪ್ರ.ಕ., ೭–೧)

ಅದ್ಭುತರಾಮಾಯಣ ಮುಂತಾದ ಗ್ರಂಥಗಳ ಕರ್ತೃ ಯಾರು?
—ಎಂ. ಎ. ರಾಮಾನುಜಯ್ಯಂಗಾರ್ (ಪ್ರ.ಕ., ೮–೨)

ಕನ್ನಡ ಕಬ್ಬಿಗರ ಬಲ್ಲಹನಾದ ಮುದ್ದಣ—ಎಂ. ಗೋವಿಂದ ಪೈ (ಕ.ನು., ೮–೭)

ಕನ್ನಡದ ಬಾಣ ಮುದ್ದಣ—ಎಂ. ರಾಜಗೋಪಾಲಾಚಾರ್ಯ
(ಸುದರ್ಶನ, ಪರ್ಯಾಯಾಂಕ, ೧೯೬೦)

ಕವಿಯ ನೆನಪು—ಹುರಳಿ ಭೀಮರಾವ (ಪ್ರ.ಕ., ೭–೧)

ಕವಿವರ್ಯ ನಂದಳಿಕೆಯವರೂ ಕನ್ನಡ ಕಾಮಶಾಸ್ತ್ರವೂ [ವ.ಕೋ.]
—ಎಂ. ಗೋವಿಂದ ಪೈ, ಆರ್. ನರಸಿಂಹಾಚಾರ್ಯ (ಪ್ರ.ಕ., ೯–೨)

ಕವಿವಲ್ಲಭ—ಜಿ. ಪಿ. ರಾಜರತ್ನಂ (ಕ.ನು., ೨, ೪೩–೪)

ಕಾಂತಾಸಮ್ಮಿತತಯಾ ಉಪದೇಶ—ಜಿ. ಪಿ. ರಾಜರತ್ನಂ (ಕ.ನು., ೭–೫, ೬)

ಜೋ ಜೋ—ನಂದಳಿಕೆ ಲಕ್ಷ್ಮೀನಾರಣಪ್ಪ (ಪ್ರ.ಕ., ೭-೧, ಅನುಬಂಧ)
ನಂದಳಿಕೆ ಲಕ್ಷ್ಮೀನಾರಣಪ್ಪ—ಮುಳಲಿ ಸುಬ್ಬರಾಯ (ಪ್ರ.ಕ., ೭-೩)
ನಂದಳಿಕೆ ಲಕ್ಷ್ಮೀನಾರಣಪ್ಪನವರು—ಐ. ಶಿವರಾಮಯ್ಯ (ಪ್ರ.ಕ., ೧೨-೧)
ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು—ಪಿ. ಮಂಗೇಶರಾವ (ಪ್ರ.ಕ., ೭-೧)
ನಂದಳಿಕೆ ಲಕ್ಷ್ಮೀನಾರಾಯಣಪ್ಪನೂ ಶ್ರೀರಾಮಪಟ್ಟಾಭಿಷೇಕವೂ
—ನಾಗರಹಳ್ಳಿ ರಂಗ (ಕ.ಸಾ.ಪ., ೧೭-೧)
ನೆನಹು : ಮುದ್ದಣ ಸ್ಮಾರಕ ಗ್ರಂಥ—ಸಂ : ಮುನಿಪಾಲರಾಜು (೧೯೫೪)
ಮಹಾಲಕ್ಷ್ಮೀವಿರಚಿತ ಶ್ರೀರಾಮಪಟ್ಟಾಭಿಷೇಕ; ವಿಮರ್ಶೆ—ಎಫ್. ಜಿ. ಮಠದ
(ಜ.ಕ., ೨೩-೬, ೭)
ಬಿ. ಸೀತಾರಾಮಯ್ಯನವರು ಹುರಳಿ ಭೀಮರಾಯರಿಗೆ
ಕವಿಯ ವಿಷಯವಾಗಿ ಬರೆದ ಪತ್ರ (ಪ್ರ.ಕ., ೭-೧, ಅನುಬಂಧ)
ಮುದ್ದಣ—ಕರ್ನಾಟಕ ಸಂಘ, ಚಿಕ್ಕಮಗಳೂರು
ಮುದ್ದಣ—ತ. ಸು. ಶಾಮರಾವ (ಮೈ.ಪ್ರ.ಪು. ಮಾಲೆ) (೧೯೫೦)
ಮುದ್ದಣಕವಿಯ ಅದ್ಭುತರಾಮಾಯಣಂ [ಅವತರಣಿಕೆ]
—ಎಸ್. ವಿ. ಪರಮೇಶ್ವರಭಟ್ಟ (೧೯೫೪)
ಮುದ್ದಣನ ಪ್ರತಿಭೆ—ಹಾ. ಸು. ಸೀತಾರಾಮಯ್ಯ (ಸುಬೋಧ, ೨೯-೮)
ಮುದ್ದಣನ ಜಾಣ್ಮೆ—ಮುಳಿಯ ತಿಮ್ಮಪ್ಪಯ್ಯ
(ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು, ಪು. ೧೧೩)
ಮುದ್ದಣನ ಮನೋರಮೆ—ಸರಸ್ವತೀದೇವಿ ಗೌಡರ (ಕ.ನು., ೨೨-೮)
ಮುದ್ದಣನ ಸೀತಾಪರಿತ್ಯಾಗದ ಕಥೆ—ರಾ. ಯ. ಧಾರವಾಡಕರ
(ಸಾಹಿತ್ಯ ಸಮಿಾಕ್ಷೆ)
ಮುದ್ದಣನ ಮನೋರಮೆಯೂ ರಾಮಾಶ್ವಮೇಧವೂ—ದ. ರಾ. ಬೇಂದ್ರೆ
(ವಾಗ್ಭೂ., ೨೫-೧೦)
ಮುದ್ದಣನರಸಿ ಮನೋರಮೆ—ಕ. ನರಸಿಂಹಶಾಸ್ತ್ರಿ (ಪ್ರ.ಕ., ೩೭-೩)
ಮುದ್ದಣನಿಗೆ ಸಂಬಂಧಿಸಿದ ಒಂದು ಹೇಳಿಕೆ—ಬಿ. ಎಚ್. ಶ್ರೀಧರ (ಕ.ನು., ೬-೪೪)
ಮುದ್ದಣನಿಗೆ ಸಂಬಂಧಿಸಿದ ಇನ್ನೊಂದು ಹೇಳಿಕೆ—ಹ. ಗೋ. ಕಟ್ಟಿ (ಕ.ನು., ೭-೧)
ಮುದ್ದಣರಚಿತ ಸೀತಾಪರಿತ್ಯಾಗ—ಕೆ. ವೆಂಕಟರಾಯಾಚಾರ್ (ಸುಬೋ., ೨೬-೪)
ಮುದ್ದು ಮುದ್ದಣರಾಯ—ಪ್ರ. ಬ. ನರೇಗಲ್ಲ (ಪ್ರಬಂಧಪುಷ್ಪಾಂಜಲಿ, ಪು. ೪೯)

ರಸಿಕ ಮುದ್ದಣ—ಹಾ. ಸು. ಸೀತಾರಾಮಯ್ಯ (ಸುಬೋಧ, ೩೦)
ರಾಮಾಶ್ವಮೇಧ—ರಂ. ಶ್ರೀ. ಮುಗಳಿ (ಕ.ಕಾ.ಪ.)
ರಾಮಾಶ್ವಮೇಧ—ಕೆ. ವೆಂಕಟರಾಯಾಚಾರ್ (ಸುಬೋಧ, ೩೧-೬, ೧೧)
ರಾಮಾಶ್ವಮೇಧದಲ್ಲಿ ಮುದ್ದಣ-ಮನೋರಮೆಯರ ಸಂವಾದ
—ಯು. ಕೆ. ಸುಬ್ಬರಾಯಾಚಾರ್ (ಪ್ರ.ಕ., ೩೧-೩, ೪)
ರಾಮಾಶ್ವಮೇಧ ರಚನಾಕಾಲದಲ್ಲಿ—ತೆ. ಗೋಪಾಲಕೃಷ್ಣ ಭಟ್ಟ (ಜೀವನ, ೯-೮)
ರಾಮಾಶ್ವಮೇಧದ ಹೊಸ ದೃಷ್ಟಿ—ರಾ. ಯ. ಧಾರವಾಡಕರ
(ವಾಗ್ಭೂ., ಹೊಸ ಸಂ., ೩-೧-೫) (ಸಾಹಿತ್ಯಸಮೀಕ್ಷೆ)
ಲಕ್ಷ್ಮೀನಾರಾಯಣಕವಿ—ಬಿ. ರಾಮರಾವ (ಪ್ರ.ಕ., ೭-೨)
ಶ್ರೀಮಾನ್ ನಂದಳಿಕೆ ಲಕ್ಷ್ಮೀನಾರಾಯಣಯ್ಯ—ಆರ್. ನರಸಿಂಹಾಚಾರ್
(ಪ್ರ.ಕ., ೭-೧)
ಶ್ರೀರಾಮಪಟ್ಟಾಭಿಷೇಕದ ಕರ್ತೃ ಯಾರು—ಎಂ. ಗೋವಿಂದ ಪೈ (ಪ್ರ.ಕ., ೧೦-೨
ಸಾಮಾನ್ಯಚಿತ್ರಕ್ಕೆ ಸುವರ್ಣದ ಚೌಕಟ್ಟು—ಎಸ್. ವಿ. ರಂಗಣ್ಣ (ಪ್ರ.ಕ., ೧೬-೧

ರತ್ನಾಕರವರ್ಣಿ

ಅಪೂರ್ವ ಪುರುಷ ರತ್ನಾಕರ—ಜಿ. ಪಿ. ರಾಜರತ್ನಂ (ಕ.ನು., ೩-೪೬
ಭರತೇಶನ ಕಣ್ಣಲ್ಲಿ ಹೆಣ್ಣು—ಗಂಗಾಧರ ಭಾವುಶಾಸ್ತ್ರಿ (ಜೀವನ, ೨-೧೨
ಭರತೇಶನ ನಾಲ್ಕು ಚಿತ್ರಗಳು—ಮಿರ್ಜಿ ಅಣ್ಣಾರಾಯ (೧೯೫೪
ಭರತೇಶವೈಭವ, ಭಾ. ೧ [ಪೀಠಿಕೆ]—ಉಗ್ರಾಣ ಮಂಗೇಶರಾವ (೧೯೪೮
ಭರತೇಶವೈಭವ [ಕಾ.ಲೋ.]—ತ. ಸು. ವೆಂಕಣ್ಣಯ್ಯ (ಪ್ರ.ಕ., ೫-೪
ಭರತೇಶವೈಭವ—ತ. ಸು. ಶಾಮರಾವ (ಪ್ರ.ಕ., ೨೨-೧, ೩
ಭರತೇಶವೈಭವದ ಶೋಭನಸಂಧಿಗಳು—ಮಿರ್ಜಿ ಅಣ್ಣಾರಾಯ (ಸಂ.)
(೧೯೫೧
ಭರತೇಶವೈಭವಸಂಗ್ರಹ [ಪೀಠಿಕೆ]—ತ. ಸು. ಶಾಮರಾವ (೧೯೫
ಮದನಮದಭಂಗ—ಜಿ. ಪಿ. ರಾಜರತ್ನಂ (ಕ.ನು., ೩-೩೯
ಮೂರು ಕಣ್ಣಿನ ಕವಿ ರತ್ನಾಕರವರ್ಣಿ—ಕೆ. ವಿ. ಸುಬ್ಬಣ್ಣ (ಬಾಗಿನ, ಪು. ೩೪
ರತ್ನಾಕರ—ಜಿ. ಪಿ. ರಾಜರತ್ನಂ (ಕ.ನು., ೩-
ರತ್ನಾಕರನ ರಸನಿರೂಪಣಕೌಶಲ—ಎಂ. ಜಿ. ನಂಜುಂಡಾರಾಧ್ಯ (ಶ.ಸಾ., ೧೧-೧

ರತ್ನಾಕರನ ಶಬ್ದಸಂಪತ್ತು—ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ, ೧೦-೬)
ರತ್ನಾಕರನ ಶೈಲಿ—ಎಸ್. ವಿ. ರಂಗಣ್ಣ (ಶೈಲಿ, ಭಾ. ೨, ಪು. ೧೧೦)
ರತ್ನಾಕರನೂ ಜೈನಧರ್ಮವೂ—ಕೆ. ಭುಜಬಲಿಶಾಸ್ತ್ರಿ (ಶ.ಸಾ., ೧೦-೨)
ರತ್ನಾಕರನೂ ವಿಜಯನಗರವೂ—ಟಿ. ಎಸ್. ಮಹಾದೇವಯ್ಯ (ಕ.ನು., ೧೬-೯-೧೨)
ರತ್ನಾಕರವರ್ಣಿಯ ಕಾಲನಿರ್ಣಯ—ನಾ. ಶ್ರೀ. ರಾಜಪುರೋಹಿತ (ಜ.ಕ., ೨೨-೧)
ರತ್ನಾಕರವರ್ಣಿಯ ಕಾಲವಿಚಾರ—ಎಂ. ಗೋವಿಂದ ಪೈ (ಕ.ಸಾ.ಪ., ೨೮-೧)
ರತ್ನಾಕರವರ್ಣಿಯ ಕಾವ್ಯಧರ್ಮ—ವಿ. ಕೃ. ಗೋಕಾಕ (ಜೀವನ, ೨-೫)
ರತ್ನಾಕರವರ್ಣಿಯೂ ಲಕ್ಷ್ಮೀಶನೂ—ಕಾ. ಶಿವರಾವ (ಕ.ಸಾ.ಪ., ೧೪-೩)
ರಸಿಕಬ್ರಹ್ಮಜ್ಞಾನಿ ಭರತೇಶ—ಜಿ. ಬ್ರಹ್ಮಪ್ಪ (ಅಭಿನಂದನೆ, ಪು. ೩೬೨)

ರನ್ನ

ಅಜಿತಪುರಾಣ ವಿಮರ್ಶೆ—ಆರ್. ತಾತಾಚಾರ್ಯ (ಕ.ಸಾ.ಪ., ೪-೪)
ಅತ್ತಿಮಬ್ಬೆ—ಆರ್. ಎಸ್. ರಾಮರಾವ (ಸರಸ್ವತಿ, ಜನೆ., ೧೯೪೨)
ಅಪರಾದಿತ್ಯರ ಯುದ್ಧದ ಕಾಲನಿರ್ಣಯ ಮತ್ತು ರನ್ನನ ಗದಾಯುದ್ಧದ ಕಾಲನಿರ್ಣಯ—ನಾ. ಶ್ರೀ. ರಾಜಪುರೋಹಿತ (ಜ.ಕ., ೧೭-೯)
ಇಬ್ಬರು ರನ್ನರು—(ವಿಶ್ವಕರ್ನಾಟಕ, viii-೧೬, ೧೭) (ಜ.ಕ., ೭-೧೧)
ಕರ್ಣನ ಮೂರು ಚಿತ್ರಗಳು—ಶಂ. ಬಾ. ಜೋಶಿ (೧೯೪೭)
ಕವಿಚಕ್ರವರ್ತಿಗಳ ಶಿಶಿರಸಮರ—ಹೆಮ್ಮಿಗೆ ದೇಶಿಕಾಚಾರ್ಯ (ಕ.ನು., ೨೦-೨, ೩)
ಕವಿಚಕ್ರವರ್ತಿ ರನ್ನ—ಡಿ. ವಿ. ಗುಂಡಪ್ಪ (ಕ.ನು., ೧೨-೬)
ಕವಿಚಕ್ರವರ್ತಿ ರನ್ನ—ಎನ್. ಪ್ರಹ್ಲಾದರಾವ (ಸುಬೋ., ೨೫-೧)
ಕವಿಚಕ್ರವರ್ತಿ ರನ್ನ—ಹಾ. ಸು. ಸೀತಾರಾಮಯ್ಯ (ಸುಬೋಧ, ೧೯೫೨ ಮೇ)
ಕವಿರನ್ನ—ಆರ್. ತಾತಾಚಾರ್ಯ (ಕ.ಸಾ.ಪ., ೪-೨-೩)
ಕವಿರನ್ನ—ಎನ್. ಅನಂತರಂಗಾಚಾರ್ (೧೯೪೬)
ಕವಿರನ್ನನ ಗದಾಯುದ್ಧಸಂಗ್ರಹ (ಭಾ. ೧) —ಸಂ: ತೀ. ನಂ. ಶ್ರೀಕಂಠಯ್ಯ (೧೯೪೯)

ಕವಿರನ್ನನ ಸಿಂಹಾವಲೋಕನ ಕ್ರಮವೆಂದರೇನು ?
—ಕೆ. ವೆಂಕಟರಾಯಾಚಾರ್ಯ (ಸುಬೋ., ೨೬-೧೧)

ಕವಿರನ್ನನು ಬಳೆಗಾರ ಕುಲದವನೆ ?—ಬಾ. ರಾ. ಗೋಪಾಲ್ (ಕ.ನು., ೪೦-೪)

ಕವಿರನ್ನನು ಶಾಸನ ಬರೆದಿದ್ದನೆ ?—ಕೆ. ವೆಂಕಟರಾಯಾಚಾರ್ಯ (ಸುಬೋ., ೨೭-೬)

ಕವಿರನ್ನರು ಇಬ್ಬರು—(?) (ರಾ.ಬ., ೨-೮, ೯)

ಕುಲಮೆಂಬದುಂಟೆ ಬೀರಮೆ ಕುಲಮಲ್ಲದೆ—ತಿ. ತಾ. ಶರ್ಮ (ಕ.ನು., ೧೧-೪)

ಕೇಶಿದಂಡನಾಯಕ—ತಿ. ತಾ. ಶರ್ಮ (ಪ್ರ.ಕ., ೧೧-೪)

ಗದಾಯುದ್ಧ : ಕಾವ್ಯ, ನಾಟಕ—ಎಸ್. ವಿ. ರಂಗಣ್ಣ (ಸಂಭಾವನೆ, ಪು. ೭೩)

ಗದಾಯುದ್ಧ ಕಾವ್ಯವೂ ಗದಾಯುದ್ಧ ನಾಟಕವೂ—ವಿ. ಜಿ. ಕುಲಕರ್ಣಿ
(ಸಂಭಾವನೆ, ಪು. ೮೧)

ಗದಾಯುದ್ಧದ ಐತಿಹಾಸಿಕ ಮಹತ್ವ—ಪ್ರ. ಗೋ. ಕುಲಕರ್ಣಿ (ಜ.ಕ., ೩-೫, ೬)

ಗದಾಯುದ್ಧದ ಕಾಲನಿರ್ಣಯ—ಬಾ. ರಾ. ಗೋಪಾಲ್ (ಕ.ನು., ೪೦-೨)

ಗದಾಯುದ್ಧದ ಕಾಲನಿರ್ಣಯ—ವೆಂ. ಬಿ. ಲೋಕಾಪೂರ (ಕ.ಸಾ.ಪ., ೨೪-೨;
ಜ.ಕ., ೧೭-೨ ; ೧೮-೪, ೭)

ಗದಾಯುದ್ಧದ ಕೆಲವು ಸಮಸ್ಯೆಗಳು—ವರದರಾಜಯ್ಯಂಗಾರ್ (ಜೀವನ, ೧೫-೩)

ಗದಾಯುದ್ಧದಲ್ಲಿಯ ಪ್ರಧಾನರಸವಾವುದು—ದ. ರಾ. ಬೇಂದ್ರೆ
(ಸಾಹಿತ್ಯಸಂಶೋಧನೆ, ಪು. ೧೦೧)

ಗದಾಯುದ್ಧನಾಟಕಂ—ಜಿ. ವೆಂಕಟಸುಬ್ಬಯ್ಯ (ಅನುಕಲ್ಪನೆ, ಪು. ೧೯)

ಗದಾಯುದ್ಧನಾಟಕ [ಗದ್ಯಾನುವಾದ]—ವೆಂ. ಭೀ. ನಾಯಕ (೧೯೨೯)

ಗದಾಯುದ್ಧನಾಟಕ—ಬಿ. ಎಂ. ಶ್ರೀಕಂಠಯ್ಯ (೧೯೩೦)

ಗದಾಯುದ್ಧನಾಟಕ [ವಸ್ತುಕೋಶ] (ಪ್ರ.ಕ., ೭-೩)

ಗದಾಯುದ್ಧಪ್ರಶಸ್ತಿವಿಚಕ್ಷಣೆ [ಲೇಖನಮಾಲೆ]—ಎಚ್. ಶ್ರೀನಿವಾಸಾಚಾರ್
(ವಿವೇಕಾ., ೨-೨, ೩-೪)

ಚಾವುಂಡರಾಯಪುರಾಣವನ್ನು ರನ್ನನು ಬರೆದಿರಬಹುದೆ ?
—ವೆಂ. ಬಿ. ಲೋಕಾಪೂರ (ಕ.ನು., ೩೫-೨

ದಾನಚಿಂತಾಮಣಿ ಅತ್ತಿಮಬ್ಬೆ—ತೀ. ನಂ. ಶ್ರೀಕಂಠಯ್ಯ
(ಸಮಾಲೋಕನೆ, ಪು. ೧೪೪

ನಮ್ಮ ರತ್ನತ್ರಯದ ವಿನಯ—ಜಿ. ಪಿ. ರಾಜರತ್ನಂ (ಕ.ಸಾ.ಪ., ೨೬-೧

ರನ್ನನ ಗದಾಯುದ್ಧದಲ್ಲಿ ಶಬ್ದಾರ್ಥವಿಚಾರ—ಕೆ. ವೆಂಕಟರಾಯಾಚಾರ್ (ಸುಬೋಧ, ೩೦-೧೧)

ರನ್ನನ ದುರ್ಯೋಧನನು ಮಹಾನುಭಾವನೆ—ನಾ. ಗೋ. ದೇವ (ಕ.ಸಾ.ಪ., ೨೫-೩)

ರನ್ನ ನಮ್ಮ ಈ ಇಪ್ಪತ್ತನೆಯ ಶತಮಾನದಲ್ಲಿ ಇದ್ದಿದ್ದರೆ ಕವಿಚಕ್ರವರ್ತಿ ಆಗುತ್ತಿದ್ದನೆ?—ಸಿ. ಆರ್. ಸುಂದರರಾಜ (ಕ.ನು., ೧೨-೭)

ರನ್ನನ ಪರಶುರಾಮಚರಿತ, ಚಕ್ರೇಶ್ವರಚರಿತಗಳನ್ನೂ, ಗದಾಯುದ್ಧದ ರಚನಕಾಲವನ್ನೂ ಕುರಿತು—ಎಂ. ಗೋವಿಂದ ಪೈ (ಮೂರು ಉಪನ್ಯಾಸಗಳು, ಪು. ೧)

ರನ್ನನ ಮುದುವೊಳಲು—ಪಾಂ. ಭೀ. ದೇಸಾಯಿ (ಜ.ಕ., ೧೬-೪)

ರನ್ನನ ವೀರಕೌರವ—ಹಾ. ಸು. ಸೀತಾರಾಮಯ್ಯ (ಸುಬೋಧ, ೨೯-೫)

ರನ್ನನ ಸಹಸ್ರವಾರ್ಷಿಕೋತ್ಸವದ ಮೇಲಿನ ಲೇಖಗಳು— . . . (ಕ.ನು., ೧೨-೬)

ರನ್ನನ ಸುಯೋಧನ—ಆರ್. ಜಿ. ಕುಲಕರ್ಣಿ (ಜಯಂತಿ, ೨೧-೧)

ರನ್ನನೊಬ್ಬನೇ [ಲೇಖನಮಾಲೆ]—ಎಂ. ಗೋವಿಂದ ಪೈ (ಜ.ಕ., ೯-೫, ೬, ೭, ೯, ೧೧, ೧೨)

ರನ್ನನು ಬೋಧಿಸಿರುವ ನೀತಿ—ಎಂ. ಗೋವಿಂದರಾವ (ಸುಬೋ., ೨೫-೧)

ರನ್ನನು ಹೇಳಿದ ಗುಣದೋಷಗಳು—ಕೆ. ವಿ. ಆಚಾರ್ (ಶ.ಸಾ., ೧೯-೭)

ರನ್ನಮಹಾಕವಿಯ ಅಜಿತತೀರ್ಥಂಕರಪುರಾಣತಿಲಕಂ—ಎನ್. ಅನಂತರಂಗಾಚಾರ್ (ಕ.ಸಾ.ಪ., ೧೫-೩)

ರನ್ನವಾಣಿ—ಸಂ: ಸ. ವೆಂಕಟಾಚಲಪತಿ

ಶಕ್ತಿಕವಿ ರನ್ನ—ಕು. ವೆಂ. ಪುಟ್ಟಪ್ಪ (ವಿಭೂತಿಪೂಜೆ, ಪು. ೭)

ಶಿಲಾಹಾರ ಅಪರಾಜಿತನು ನೂರ್ಮಡಿ ತೈಲಪನಿರಬಹುದೆ? —ವೆಂ. ಬಿ. ಲೋಕಾಪೂರ (ಪ್ರ.ಕ., ೨೦-೯)

ಶ್ರೀಕವಿರತ್ನ—ಜಿ. ಪಿ. ರಾಜರತ್ನಂ (೧೯೪೯)

ಸತ್ಯಪ್ರತಿಜ್ಞ ಸಾಹಸಕವಿ ರನ್ನ—ಜಿ. ಪಿ. ರಾಜರತ್ನಂ (ಜೀವನ, ೧೦-೯)

Author of Gadayuddha—R. Shyamashastri (Q.J.M.S., 21-1) (ಜ.ಕ., ೮-೧೧)

ರಾಘವಾಂಕ

ಕರುಣಾರಸನಿರೂಪಣೆಯಲ್ಲಿ ರಾಘವಾಂಕನು ತೋರಿದ ಕೈವಾಡ —ಎನ್. ಕೆ. ಕುಲಕರ್ಣಿ (ಕ.ನು., ೩-೨೬)

ವಿ ರಾಘವಾಂಕ—ಎಚ್. ಎಂ. ಶಂಕರನಾರಾಯಣರಾವ

ವಿ ರಾಘವಾಂಕನ ಸ್ಮರಣೆ—ಎಚ್. ಗಂಗಾಧರನ್ (ಶ.ಸಾ., ೧೬-೪)

ವಿರಾಘವಾಂಕನ ಹೊಸ ಹಾದಿ—ಸ. ಸ. ಮಾಳವಾಡ
(ಕರ್ನಾ. ಸಾಹಿತ್ಯಸಂಸ್ಕೃತಿದರ್ಶನ, ಪು. ೫೫)

ಮಹಾಕವಿ ರಾಘವಾಂಕ—ಸ. ಸ. ಮಾಳವಾಡ (ಕ.ನು., ೧-೩೯)

ಮಹಾಕವಿ ರಾಘವಾಂಕ— ಆರ್. ಸಿ. ಹಿರೇಮಠ (೧೯೫೦)

ಘವಾಂಕ ಕವಿಯ ಚಂದ್ರಮತಿ—ಕೆ. ಕುಶಾಲಪ್ಪಗೌಡ (ಸುಬೋಧ, ೨೯-೧೧)

ಘವಾಂಕನ ಕಥೆ—ಬಿ. ಶಿವಮೂರ್ತಿಶಾಸ್ತ್ರೀ (ಶ.ಸಾ., ೬-೬, ೭)

ಘವಾಂಕನ ಕೃತಿರತ್ನ—ಕೆ. ವೆಂಕಟರಾಯಾಚಾರ್
(ಕ.ನು., ೧೯-೬, ೭; ೨೦-೩, ೮)

ಘವಾಂಕನ ಕಾಲ ಮತ್ತು ಮತ—ಬಿ. ಶಿವಮೂರ್ತಿಶಾಸ್ತ್ರೀ (ಶ.ಸಾ., ೬-೧೧)

ಘವಾಂಕನ ಕಾವ್ಯಗಳು—ಬಿ. ಶಿವಮೂರ್ತಿಶಾಸ್ತ್ರೀ (ಶ.ಸಾ., ೬-೧೦)

ಘವಾಂಕನ ಗುರುಪರಂಪರೆ—ಬಿ. ಶಿವಮೂರ್ತಿಶಾಸ್ತ್ರೀ (ಶ.ಸಾ., ೬-೯)

ಘವಾಂಕನ 'ಚಂದ್ರಮತಿ'—ಎಂ. ಆರ್. ರಾಮಸ್ವಾಮಿ (ಶ.ಸಾ., ೨೧-೫)

ಘವಾಂಕನ ದೇಶಾಭಿಮಾನ—ಬಿ. ಶಿವಮೂರ್ತಿಶಾಸ್ತ್ರೀ (ಶ.ಸಾ., ೬-೮)

ಘವಾಂಕನ ನಾಟ್ಯಪ್ರತಿಭೆ—ರಂ. ಶ್ರೀ. ಮುಗಳಿ (ಜೀವನ ೨-೩)

ಘವಾಂಕನ ಪಾತ್ರಸೃಷ್ಟಿ—ಎಂ. ಶರಭಯ್ಯ (ಶಿವಾ., ೧೧-೧೦)

ಘವಾಂಕನ ವೀರೇಶಚರಿತೆ—ಪಂ. ಗಂಗರಾಜು (ಶ.ಸಾ., ೧೨-೮)

ಘವಾಂಕನ ವೀರೇಶಚರಿತೆ—ಆರ್. ಸಿ. ಹಿರೇಮಠ (ಶ.ಸಾ., ೧೦-೮)

ಘವಾಂಕನ ಶೈಲಿ—ಎಸ್. ವಿ. ರಂಗಣ್ಣ (ಶೈಲಿ)

ಘವಾಂಕನ ಸಿದ್ಧರಾಮಚಾರಿತ್ರ—ಆರ್. ಸಿ. ಹಿರೇಮಠ (ಶಿವಾ., ೧೬-೧)

ಘವಾಂಕನ ಸೋಮನಾಥಚರಿತೆ—ಆರ್. ಸಿ. ಹಿರೇಮಠ (ಜ.ಕ., ೨೫-೯)

ಘವಾಂಕನ ಹೊಸ ಮಾರ್ಗ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೬-೮)

ಘವಾಂಕ ಪಂಡಿತನ ಲಿಂಗವಂತಿಕೆಯ ಐತಿಹ್ಯ—ಸ. ಹಾ. ಶಿವಮೂರ್ತಿ
(ಶಿವಾ., ೧೪-೧೨)

ಟ್ಪದಿಕಾರ ರಾಘವಾಂಕ—ಕೆ. ಜಿ. ಕುಂದಣಗಾರ
(ಶ.ಸಾ., ೯-೨; ಕ.ಸಾ.ಪ., ೨೬-೧)

ಸತ್ಯವಿಜಯ ; ಹರಿಶ್ಚಂದ್ರಕಾವ್ಯದ ಸಂಗ್ರಹಾನುವಾದ
—ಎದುರ್ಕಳ ಶಂಭುಭಟ್ಟ (೧೯೫೩)

ಸತ್ಯಸಾಧಕ ಹರಿಶ್ಚಂದ್ರ—ಜಿ. ಎಸ್. ಶಿವರುದ್ರಪ್ಪ (ಪ್ರ.ಕ., ೩೭-೧)

ಸರಸಕವಿ ರಾಘವಾಂಕ—ಟಿ. ಎನ್. ಚನ್ನಪ್ಪ (ಶ.ಸಾ., ೨೧-೯)

ಸ್ಮಶಾನ ಹರಿಶ್ಚಂದ್ರ—ಓ. ಎನ್. ಲಿಂಗಣ್ಣಯ್ಯ (ವಿ.ವಾ., ೧-೫)

ಸಿದ್ಧರಾಮಚಾರಿತ್ರ [ಪೀಠಿಕೆ]—ದೊ. ಲ. ನರಸಿಂಹಾಚಾರ್ (೧೯೪೧)

ಸಿದ್ಧರಾಮಚಾರಿತ್ರ [ಕಾ.ಲೋ.]—ಕೆ. ಜಿ. ಕುಂದಣಗಾರ (ಪ್ರ.ಕ., ೨೩-೧)

ಸಿದ್ಧರಾಮಚಾರಿತ್ರದ ಅಲ್ಲಮಪ್ರಭು—ಎಂ. ಆರ್. ಶ್ರೀ.
(ಕ.ಸಾ.ಪ., ೨೭-೨ ; ಶ.ಸಾ., ೧೦-೮)

ಹರಿಶ್ಚಂದ್ರಕಾವ್ಯ—ಅ. ನ. ಕೃಷ್ಣರಾಯ
(ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಪು. ೧೫೩)

ಹರಿಶ್ಚಂದ್ರಕಾವ್ಯ—ಎ. ಆರ್. ಕೃಷ್ಣಶಾಸ್ತ್ರೀ
(ಭಾಷಣಗಳು ಲೇಖನಗಳು, ಭಾ. ೧, ಪು. ೧೨೪)

ಹರಿಶ್ಚಂದ್ರಕಾವ್ಯ—ಕು. ವೆಂ. ಪುಟ್ಟಪ್ಪ (ಪ್ರ.ಕ., ೧೫-೩, ೪)

ಹರಿಶ್ಚಂದ್ರಕಾವ್ಯ—ತಿರುಮಲೆ ಶ್ರೀನಿವಾಸಾಚಾರ್ (ಜ.ಕ., ೬-೯, ೧೦)

ಹರಿಶ್ಚಂದ್ರಕಾವ್ಯ—ರಂ. ಶ್ರೀ. ಮುಗಳಿ (ಜೀವನ, ೧-೧೧)

ಹರಿಶ್ಚಂದ್ರಕಾವ್ಯಸಂಗ್ರಹ [ಮುನ್ನುಡಿ]—ಎ. ಆರ್. ಕೃಷ್ಣಶಾಸ್ತ್ರೀ (೧೯೩೧)

ಹರಿಶ್ಚಂದ್ರಚಾರಿತ್ರದಲ್ಲಿಯ ರಸವಿಚಾರ—ರಾಘವೇಂದ್ರ ಕುಲಕರ್ಣಿ
(ಶಿವಾ., ೧೪-೭, ೮)

ಹರಿಶ್ಚಂದ್ರನಾಟಕಂ—ಆರ್. ಸಿ. ಹಿರೇಮಠ (೧೯೫೧)

ಹರಿಶ್ಚಂದ್ರಮಹಾಕಾವ್ಯದ ತಿರುಳು—ಬಸವರಾಜಶಾಸ್ತ್ರಿ ಕೋಡಿಕೊಪ್ಪಮಠ

ಹರಿಶ್ಚಂದ್ರರೂಪಕಂ—ಬಿ. ನಂಜುಂಡಪ್ಪ (೧೯೫೬)

ಹರಿಹರ-ರಾಘವಾಂಕರ ಕಾಲವಿಚಾರ—ಎಂ. ಗೋವಿಂದ ಪೈ (ಶ.ಸಾ., ೨-೮)

ರುದ್ರಭಟ್ಟ

ಅರಿಕಾಮಧ್ವಂಸಿ—ಎ. ವೆಂಕಟಸುಬ್ಬಯ್ಯ (ಪ್ರ.ಕ. ೧೧-೩

ಕವಿರುದ್ರಭಟ್ಟನ ಜನ್ಮಸ್ಥಳವಾವುದು—ಡಿ. ರಾಘವೈಯ್ಯಂಗಾರ್ (ಕ.ನು., ೧೪-೧

ಕೃಷ್ಣಕರ್ಣಾಮೃತ ಮತ್ತು ಜಗನ್ನಾಥವಿಜಯ—ಎಂ. ಗೋವಿಂದರಾವ
(ಸುಬೋ., ೨೪-೧೦, ೧೧

ಜಗನ್ನಾಥವಿಜಯ [ಪೀಠಿಕೆ]—ಆರ್. ಶ್ಯಾಮಾಶಾಸ್ತ್ರಿ (೧೯೫೨)
ಜಗನ್ನಾಥವಿಜಯ—ಬೆಳ್ಳಾವೆ ನರಹರಿಶಾಸ್ತ್ರಿ (ವಿ.ವಾ., ೧-೩೫)
ಜಗನ್ನಾಥವಿಜಯ— (ಸಾಹಿತ್ಯದ ಗುಟ್ಟು)
ಜಗನ್ನಾಥವಿಜಯ ವಿಮರ್ಶೆ—ಶೇಷ ಭಿ. ಪಾರಿಷವಾಡ (ಕ.ಸಾ.ಪ., ೫-೨)
ಭಾರತದ ಶಿಶುಪಾಲವಧೆ—ತ. ಸು. ಶಾಮರಾವ (ಕ.ಸಾ.ಪ., ೨೫-೨)
ರುದ್ರಭಟ್ಟ—ದೊ. ಲ. ನರಸಿಂಹಾಚಾರ್ (ಪ್ರ.ಕ., ೩೨-೪)
ರುದ್ರಭಟ್ಟನ ಜಗನ್ನಾಥವಿಜಯ—ರಮೇಶ ಕುಲಕರ್ಣಿ (ಕಾಲೇಜಿಯನ್-ಸೊಲ್ಲಾಪುರ, ೪-೧)
ರುದ್ರಭಟ್ಟನ ಜಗನ್ನಾಥವಿಜಯ—ಎಚ್. ವಿ. ಶೇಷಾಚಾರ್ (ಮಿತ್ರಮಂಡಳಿಯ ಕಾಣಿಕೆ, ಪು. ೬೪)

ಲಕ್ಷ್ಮೀಶ

ಅಲಂಕಾರಿಕ ಲಕ್ಷ್ಮೀಶನು—ಕೇಶವಶರ್ಮಾ ಗಲಗಲಿ (ವಾಗ್ಭೂ., ೨೯-೪)
ಕನ್ನಡಕವಿ ಲಕ್ಷ್ಮೀಶನ ಕಾಲದ ಮರುವಿಚಾರ—ಎಂ. ಗೋವಿಂದ ಪೈ (ಪಂಜೆಯವರ ನೆನಪಿಗಾಗಿ, ಪು. ೧೮೨)
ಕನ್ನಡಕವಿ ಲಕ್ಷ್ಮೀಶನ ಮತ—ದೊ. ರಾಘವಯ್ಯಂಗಾರ್ (ಜ.ಕ., ೭-೭)
ಕನ್ನಡ ಜೈಮಿನಿಭಾರತ—ಮ. ಪ್ರ. ಪೂಜಾರ (ಕ.ಸಾ.ಪ., ೩-೧)
ಕನ್ನಡ ಜೈಮಿನಿಯಲ್ಲಿ ಕವಿಸಮಯ—ಬಿ. ಎಸ್. ಶಾಸ್ತ್ರೀ (ಶ.ಸಾ., ೧೯-೭)
ಕವಿ ಲಕ್ಷ್ಮೀಶ—ಕನ್ನಡ ಸಂಘ, ಚಿಕ್ಕಮಗಳೂರ (೧೯೩೩)
ಕವಿ ಲಕ್ಷ್ಮೀಶ [ಪತ್ರವ್ಯವಹಾರ]—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೫-೩)
ಕವಿ ಲಕ್ಷ್ಮೀಶ [ಕಾ.ಲೋ.]—ಎಂ. ಆರ್. ಶ್ರೀ. (ಪ್ರ.ಕ., ೧೫-೨)
ಕನ್ನಡ ಜೈಮಿನಿಭಾರತದಲ್ಲಿ ರಾಮಾಶ್ವಮೇಧ—ಕೆ. ವೆಂಕಟರಾಯಾಚಾರ್ (ಸುಬೋಧ, ೩೧-೭)
ಕವಿ ಲಕ್ಷ್ಮೀಶನ ಚಂದ್ರಹಾಸ—ನಾ. ಗೋ. ದೇವ (ಕ.ಕಾ.ಪ., ೧೯೩೯-ಅಕ್ಟೋ.)
ಕವಿ ಲಕ್ಷ್ಮೀಶನ ಬಿರುದು—ಕೆ. ವೆಂಕಟರಾಯಾಚಾರ್ (ಶ.ಸಾ., ೧೭-೮)
ಜೈಮಿನಿಭಾರತ [ವಾದಭೂಮಿ]—ವಿ. ಸೀತಾರಾಮಯ್ಯ (ಕ.ಸಾ.ಪ., ೨೭-೨)
ಜೈಮಿನಿಭಾರತ; ವಿಹಾರವಿಮರ್ಶೆ—ಆರ್. ವ್ಹಿ. ಜಾಗೀರದಾರ (ಕ.ಸಾ.ಪ., ೨೭-೨)
ಜೈಮಿನಿಭಾರತ ಕಥಾಸಂಗ್ರಹ [ಕಾ.ಲೋ.]—ತ. ಸು. ವೆಂ. (ಪ್ರ.ಕ., ೪-೧)

ಜೈಮಿನಿಭಾರತದ ವೈಶಿಷ್ಟ್ಯ—ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ (ಶ.ಸಾ., ೨೧-೫)

ಜೈಮಿನಿಭಾರತ ಸಂಗ್ರಹ [ಪೀಠಿಕೆ]—ತ. ಸು. ಶಾಮರಾವ (೧೯೫೪)

ದೇವನೂರ ಲಕ್ಷ್ಮೀಶ ಕವಿ—ಕೆ. ರಾಮಸ್ವಾಮಯ್ಯಂಗಾರ್ (ಕ.ಸಾ.ಪ., ೬-೧)

ಲಕ್ಷ್ಮೀಶ—ಎನ್. ಅನಂತರಂಗಾಚಾರ್ (ಮೈ.ಪ್ರ.ಪು.ಮಾಲೆ) (೧೯೫೫, ದ್ವಿ.ಮು.)

ಲಕ್ಷ್ಮೀಶ—ತ. ಸು. ವೆಂಕಣ್ಣಯ್ಯ (ಕ.ಸಾ.ಪ., ೫-೧)

ಲಕ್ಷ್ಮೀಶ ಕವಿ [ವಿ.ವಿ.]— . . . (ಕ.ಸಾ.ಪ., ೧೬-೪)

ಲಕ್ಷ್ಮೀಶ ಕವಿ—ಪಂಜೆ ಮಂಗೇಶರಾಯ (ಪಂಜೆಯವರ ನೆನಪಿಗಾಗಿ, ಪು. ೧೭೬)

ಲಕ್ಷ್ಮೀಶ ಕವಿಯ ಶ್ರೀರಾಮಾಶ್ವಮೇಧ—ಕೆ. ವೆಂಕಟರಾಯಾಚಾರ್ (ಸುಬೋಧ, ೩೧-೧೨)

ಲಕ್ಷ್ಮೀಶ ಕವಿಯ ಸ್ಥಳ ಕಾಲ ಮತಗಳ ನಿರ್ಣಯ—ನಾ. ಶ್ರೀ. ರಾಜಪುರೋಹಿತ (ಕ.ಸಾ.ಪ., ೮-೩)

ಲಕ್ಷ್ಮೀಶ ಕವಿಯು ಚಿತ್ರಿಸಿರುವ ಸ್ತ್ರೀಪಾತ್ರಗಳು—ಸಿ. ಕೆ. ವೆಂಕಟರಾಮಯ್ಯ (ಜ.ಕ., ೧೦-೯, ೧೦)

ಲಕ್ಷ್ಮೀಶನ ಕಾಲ ಮತ್ತು ಸ್ಥಳ [ವ.ಕೋ.]— . . . (ಪ್ರ.ಕ., ೧೦-೨)

ಲಕ್ಷ್ಮೀಶನ ಕಾಲವಿಚಾರ—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೩-೧)

ಲಕ್ಷ್ಮೀಶನ ಕಾವ್ಯಸಂಪತ್ತು—ಬಿ. ಎಸ್. ಶಾಸ್ತ್ರೀ (ಶ.ಸಾ., ೧೯-೬)

ಲಕ್ಷ್ಮೀಶನ ಕೀರ್ತನೆಗಳು—ಕೆ. ರಾಮಸ್ವಾಮಯ್ಯಂಗಾರ್ (ಕ.ಸಾ.ಪ., ೬-೩

ಲಕ್ಷ್ಮೀಶನ ಜೈಮಿನಿಭಾರತಕ್ಕೆ ಮುನ್ನುಡಿ—ದ. ರಾ. ಬೇಂದ್ರೆ (೧೯೫೪

ಲಕ್ಷ್ಮೀಶನ ಮಹಾಕಾವ್ಯ; ಜೈಮಿನಿಭಾರತ ಕಥೆ—ವಿ. ಎಸ್. ರಾಮಕೃಷ್ಣ (೧೯೫೫

ಲಕ್ಷ್ಮೀಶನ ಶೈಲಿ—ಎಸ್. ವಿ. ರಂಗಣ್ಣ (ಶೈಲಿ, ಭಾ. ೨, ಪು. ೧೪೯

ಲಕ್ಷ್ಮೀಶನ ಸೀತಾರಾಮರು—ಅ. ನ. ಕೃಷ್ಣರಾಯ (ಸಾಹಿತ್ಯ ಮತ್ತು ಜೀವನ, ಪು. ೫೬

ವಿರೂಪಾಕ್ಷಪಂಡಿತ

ಚೆನ್ನಬಸವಪುರಾಣ [ಪ್ರಸ್ತಾವನೆ]—ಶಿ. ಶಿ. ಬಸವನಾಳ (೧೯೩೪

ಚೆನ್ನಬಸವಪುರಾಣ [ಕಾ.ಲೋ.]—ಎಂ. ಆರ್. ಶ್ರೀ. (ಪ್ರ.ಕ., ೧೭-೧

ಶಿವಕೋಟ್ಯಾಚಾರ್ಯ

ಶಿವಕೋಟ್ಯಾಚಾರ್ಯ—ದೊ. ಲ. ನರಸಿಂಹಾಚಾರ್ (ಕ.ಸಾ.ಪ., ೧೬-೨)
ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ—ಅ. ನ. ಉಪಾಧ್ಯೆ (ಪ್ರ.ಕ., ೨೪-೨)
ವಡ್ಡಾರಾಧನೆಯ ಕತೆಗಳು—ಬಿ. ಶಂಕರಭಟ್ಟ (೧೯೫೮)

ಷಡಕ್ಷರಿ

ಕರ್ನಾಟಕ ಸಾಹಿತ್ಯದಲ್ಲಿ ಷಡಕ್ಷರಿಯ ಸ್ಥಾನನಿರ್ದೇಶ
—ಎಂ. ಆರ್. ಶ್ರೀನಿವಾಸಮೂರ್ತಿ (ಪ್ರ.ಕ., ೪-೧)
ಕವಿ ಷಡಕ್ಷರಿ—ಎಸ್. ಷಣ್ಮುಖ (ಶಿವಾ., ೧೬-೫)
ಭಾರವಿ ಮತ್ತು ಷಡಕ್ಷರ ಕವಿಗಳು—ಸೊಲ್ಲಾಪುರಮಠ (ಶ.ಸಾ., ೨೨-೬)
ಮಹಾಕವಿ ಷಡಕ್ಷರದೇವ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೧-೧೦; ೧೨-೯)
ರಾಜಶೇಖರವಿಲಾಸವೈಭವ—ಮ. ಮಲ್ಲಪ್ಪ (ಜ.ಕ., ೩೭-೯)
ರಾಜಶೇಖರವಿಲಾಸ—ಎಚ್. ದೇವೀರಪ್ಪ (ಅಭಿವಂದನೆ, ಪು. ೨೬೪)
ರಾಜಶೇಖರವಿಳಾಸದಲ್ಲಿಯ ಕರುಣರಸಚಿತ್ರ—ಓ. ಎಸ್. ಲಿಂಗಣ್ಣಯ್ಯ
(ಜ.ಕ., ೧೪-೧೧)
ರಾಜಶೇಖರವಿಳಾಸ ವಿಮರ್ಶೆ—ಕೇಶವಶರ್ಮಾ ಗಲಗಲಿ (ವಾಗ್ಭೂ., ೨೫-೩)
ವೃಷಭೇಂದ್ರವಿಜಯ—ಎಂ. ಆರ್. ಶ್ರೀನಿವಾಸಮೂರ್ತಿ (ಕ.ಸಾ.ಪ., ೭-೧)
ಶರಣಚರಿತಮಾನಸ—ಸಂ: ಚ. ತಿಪ್ಪೇರುದ್ರಸ್ವಾಮಿ (೧೯೫೬)
ಶಿಶುಹೃದಯವಿಜ್ಞಾನಿ ಷಡಕ್ಷರ ಕವಿ—ಷಡಕ್ಷರಯ್ಯ ಸಿದ್ಧಯ್ಯನವರು
(ಶ.ಸಾ., ೧೦-೧೧)
ಷಡಕ್ಷರ ಕವಿಯ ಅಂಕಿತ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೭-೧)
ಷಡಕ್ಷರ ಕವಿ ವಾಕ್ಯಗಳು—ಕೆ. ವೆಂಕಟರಾಯಾಚಾರ್ (ಶ.ಸಾ., ೨೦-೧)
ಷಡಕ್ಷರದೇವನ ಕಾವ್ಯದೃಷ್ಟಿ—ಸಿ. ಮಹದೇವಪ್ಪ (ಪ್ರ.ಕ., ೨೯-೪)
ಷಡಕ್ಷರದೇವ ಮತ್ತು ರಾಜಶೇಖರವಿಳಾಸ—ಎಂ. ಎಸ್. ಬಸವಲಿಂಗಯ್ಯ
(ಶಿವಾ., ೧೧-೬, ೭)
ಷಡಕ್ಷರ ಜಯಂತಿ [ವ.ಕೋ.] —. . . (ಪ್ರ.ಕ., ೧೧-೪)
ಷಡಕ್ಷರನ ಶಬರಶಂಕರವಿಳಾಸ—ಮಲ್ಲಪ್ಪ ಹಲಗೂರು (ಶಿವಾ., ೩೧-೩)
ಷಡಕ್ಷರಿಯ ರಾಜಶೇಖರವಿಳಾಸ—ಎಂ. ಆರ್. ಶ್ರೀನಿವಾಸಮೂರ್ತಿ
(ಕ.ಸಾ.ಪ., ೫-೪)
ಷಡಕ್ಷರಿಯ ಶೈಲಿ—ಎಂ. ಆರ್. ಶ್ರೀನಿವಾಸಮೂರ್ತಿ (ಪ್ರ.ಕ., ೨-೨, ೩)

ಸರ್ವಜ್ಞ

ಕನ್ನಡಜಾಣ ಸರ್ವಜ್ಞಕವಿ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೭-೧೧, ೧೨)

ಕವಿಸರ್ವಜ್ಞಮೂರ್ತಿ—ಷಣ್ಮುಖಪ್ಪ ಬಮ್ಮಣ್ಣ (ಶ.ಸಾ., ೨೭-೪)

ಜನಪದಕವಿ ಸರ್ವಜ್ಞ—ಅ. ನ. ಕೃಷ್ಣರಾಯ (ಸಾಹಿತ್ಯ ಮತ್ತು ಯುಗಧರ್ಮ, ಪು. ೧೦೮)

ರಸಜ್ಞ ಸರ್ವಜ್ಞ—ವೀರಬಸವಯ್ಯ ಶಿವಲಿಂಗಯ್ಯ (ಶ.ಸಾ., ೭೦-೧೧)

ವಿಶ್ವಕವಿ ಸರ್ವಜ್ಞ—ಎಸ್. ಸಿ. ಬೂದಿಹಾಳಮಠ (ಜ.ಕ., ೨೬-೩ ; ಶಿವಾ., ೨೨-೬)

ಸರ್ವಜ್ಞ—ಎ. ಆರ್. ಕೃಷ್ಣಶಾಸ್ತ್ರಿ (ಮೈ.ಪ್ರ.ಪು. ಮಾಲೆ) (೧೯೪೮)

ಸರ್ವಜ್ಞಕವಿ—ಅ. ನ. ಕೃಷ್ಣರಾಯ (ವೀರಶೈವ ಸಾಹಿತ್ಯ-ಸಂಸ್ಕೃತಿ, ಪು. ೧೯೪)

ಸರ್ವಜ್ಞಕವಿ—'ಚಿಚ್ಚಕೋರ' (ಶಿವಾ., ೮-೫)

ಸರ್ವಜ್ಞಕವಿ—ದ. ರಾ. ಬೇಂದ್ರೆ (ಜೀವನ, ೩-೨)

ಸರ್ವಜ್ಞಕವಿ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೭-೧೨)

ಸರ್ವಜ್ಞಕವಿ ಮತ್ತು ವಿಜ್ಞಾನಶಾಸ್ತ್ರ—ಚೆನ್ನಪ್ಪ ಉತ್ತಂಗಿ (ಕ.ನು., ೭೧-೨೧)

ಸರ್ವಜ್ಞನ ಜೀವನ—'ಚಿಚ್ಚಕೋರ' (ಕ.ನು., ೬-೧೨)

ಸರ್ವಜ್ಞನ ಓನಾಮುಪದ್ಧತಿ—ಪಂಜೆ ಮಂಗೇಶರಾವ (ಪಂಜೆಯವರ ನೆನಪಿಗಾಗಿ, ಪು. ೮೩)

ಸರ್ವಜ್ಞನ ಮಾನಸಿಕ ಸಂಸ್ಕೃತಿ—ವರಗಿರಿ ಮಾರ್ತಾಂಡರಾಯ (ಪ್ರ.ಕ., ೨೬-೪)

ಸರ್ವಜ್ಞನ ಸಾರೋಕ್ತಿಗಳು—ಅ. ನ. ಕೃಷ್ಣರಾಯ (ಸಂಸ್ಕೃತಿಯ ವಿಶ್ವರೂಪ, ಪು. ೩೬)

ಸರ್ವಜ್ಞಮೂರ್ತಿ—ಬಿ. ಶಿವಮೂರ್ತಿಶಾಸ್ತ್ರಿ (೧೯೫೦)

ಸರ್ವಜ್ಞಮೂರ್ತಿ—ರಾ. ಅನಂತಕೃಷ್ಣಶರ್ಮ (ಕ.ನು., ೪-೪೧, ೪೨)

ಸರ್ವಜ್ಞಮೂರ್ತಿ—ಸಿ. ಕೃಷ್ಣಶರ್ಮ (ಕ.ಸಾ.ಪ., ೬-೧)

ಸರ್ವಜ್ಞನ ವಚನಗಳ ಸ್ವಾರಸ್ಯ—ಬಿ. ಶಿವಮೂರ್ತಿಶಾಸ್ತ್ರಿ (ಶಿವಾ., ೭೪-೯, ೧೧)

ಸರ್ವಜ್ಞನ ವಚನಗಳು [ಪ್ರಸ್ತಾವನೆ]—ಚೆನ್ನಪ್ಪ ಉತ್ತಂಗಿ (೯ನೇ ಮು.) (೧೯೫೬)

ಸರ್ವಜ್ಞನ ವಚನಗಳು [ಕಾ.ಲೋ.]—ಎಂ. ಆರ್. ಶ್ರೀನಿವಾಸಮೂರ್ತಿ (ಪ್ರ.ಕ., ೬-೩)

ರ್ವಜ್ಞನ ಸಂದೇಶ [ಮುನ್ನುಡಿ]—'ಚಿಚ್ಚಕೋರ'
ರ್ವಜ್ಞನ ಸಮಾಜಟೀಕೆ—ಶಂಕರ ಪಾಟೀಲ (ಜ.ಕ., ೨೫-೪)
ರ್ವಜ್ಞನ ಸ್ವಾನುಭವ ಸಾಹಿತ್ಯ—ಎಸ್. ಕೆ. ಕುಲಕರ್ಣಿ (ಜ.ಕ., ೧೫-೨)
ರ್ವಜ್ಞನು ಸಂಸಾರಿಯೇ?—ಶೂಲಪಾಣಿ (ಶ.ಸಾ., ೧-೧೨)
ರ್ವಜ್ಞನೂ ಕವಿಯೆ?—ರಾ. ಬ. ವಾಡೇದ (ಜ.ಕ., ೧೪-೪)
ರ್ವಜ್ಞವಚನಗಳು—ಬ. ಶಿ. ಶಾಸ್ತ್ರಿ (ಶ.ಸಾ., ೧೨-೩)

ಸೋಮರಾಜ

ುದ್ಭಟಕಾವ್ಯ [ಪ್ರಸ್ತಾವನೆ]—ಆರ್. ಶ್ಯಾಮಾಶಾಸ್ತ್ರಿ (೧೯೨೨)
ುದ್ಭಟಕಾವ್ಯ—ಬೆಳ್ಳಾವೆ ವೆಂಕಟನಾರಣಪ್ಪ (ಕ.ಸಾ.ಪ., ೧೦-೧)
ುದ್ಭಟಕಾವ್ಯ—ಎಂ. ಗೋವಿಂದ ಪೈ (ಕ.ಸಾ.ಪ., ೧೨-೧)
ೋಮರಾಜಕವಿಯ ಕೆಲವು ವರ್ಣನೆಗಳು—ಭಾರತೀಪ್ರಿಯ (ವಿ.ವಾ., ೧-೧)
ೋಮರಾಜನ ಕಾಲ [ವ.ಕೋ.] (ಪ್ರ.ಕ., ೧೨-೧)

ಹರಿಹರ

ವಿ ಹರಿಹರನ 'ಪರವೆನಾಚಿ'—ಅನಂತ ಬುರ್ಲಿ (ಪ್ರ.ಕ., ೩೪-೧)
್ರಾಂತಿಕವಿ ಹರಿಹರದೇವ—ಎನ್. ಎಸ್. ವೀರಪ್ಪ (ಶ.ಸಾ., ೯-೯)
ರಿಜಾಕಲ್ಯಾಣ—ಜಿ. ವೆಂಕಟಸುಬ್ಬಯ್ಯ (ಅನುಕಲ್ಪನೆ, ಪು. ೧)
ರಿಜಾಕಲ್ಯಾಣ ವಸ್ತುರಚನೆ—ಎಂ. ಆರ್. ಶ್ರೀನಿವಾಸಮೂರ್ತಿ (ಪ್ರ.ಕ., ೫-೪)
ರಿಜಾಕಲ್ಯಾಣವು—ಬ. ಚ. ಜವಳಿ (೧೯೫೭)
ಂಚಾಕ್ಷರೀ ರಗಳೆ—ಕೋಟಪ್ಪಯ್ಯ ಶಾಸ್ತ್ರಿ (ಶ.ಸಾ., ೬-೯)
ಂಪಾಶತಕದಲ್ಲಿ ಭಕ್ತಿಪ್ರತಿಪಾದನೆ—ಭಾರತೀಪ್ರಿಯ (ಸುಬೋಧ, ೧೯೩೬-ಎಪ್ರಿಲ್)
ಸವರಾಜದೇವರ ರಗಳೆ—ರಂ. ಶ್ರೀ. ಮುಗಳಿ (ಜೀವನ, ೧-೧೦)
ಸವರಾಜದೇವರ ರಗಳೆಯೂ ಬಸವಚರಿತ್ರೆಯೂ—ಸ. ಸ. ಮಾಳವಾಡ (ಕರ್ನಾ. ಸಾಹಿತ್ಯಸಂಸ್ಕೃತಿದರ್ಶನ, ಪು. ೧೧೧)
ಲುಹಣದೇವಚರಿತೆ—ಶಾಂತಯ್ಯ ರಾಯಚೂರ (ಶ.ಸಾ., ೨೧-೬)
ಲುಹಣನ ರಗಳೆ—ಎಲ್. ಆರ್. ಹೆಗಡೆ (ಪ್ರ.ಕ., ೩೬-೪)
ರಿಹರ ಕವಿ—ಎಂ. ನಂಜುಂಡಶಾಸ್ತ್ರಿ (ಶ.ಸಾ., ೧-೨)

ಹರನು ಚಿತ್ರಿಸಿದ ಗಿರಿಜಾದೇವಿ—ಎಂ. ಎಸ್. ವೀರಾಪೂರ (ಶಿವಾ., ೬-೪)

ಹರ-ರಾಘವಾಂಕ—ಸ. ಸ. ಮಾಳವಾಡ (ಕ.ನು., ೧೪-೨)

ಹರ-ರಾಘವಾಂಕರ ಕಾಲವಿಚಾರ—ಎಂ. ಗೋವಿಂದ ಪೈ (ಶ.ಸಾ., ೨-೮, ೯)

ೀಶ್ವರನ ಇಬ್ಬರು ಮಹಾನುಭಾವರು—ಅ. ನ. ಕೃಷ್ಣರಾಯ
(ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಪು. ೧೧೮)

ೀಶ್ವರಕವಿಯ ಬಸವಣ್ಣನವರು—ಸಿ. ಕೆ. ವೆಂಕಟರಾಮಯ್ಯ (ಶ.ಸಾ., ೧೦-೨-೩)

ೀಶ್ವರನ ಗಿರಿಜೆ—ಡಿ. ಟಿ. ರಂಗಸ್ವಾಮಿ (ಕ.ನು., ೧೬-೧)

ೀಶ್ವರನು ಚಿತ್ರಿಸಿರುವ ಗಿರಿಜೆ—ಸಿ. ಕೆ. ವೆಂಕಟರಾಮಯ್ಯ
(ಶ.ಸಾ., ೯-೫, ೬, ೧೧೦ ; ೧೦-೧, ೬, ೯)

ಂಪೆಯ ಹರಿಹರ—ದೊ. ಲ. ನರಸಿಂಹಾಚಾರ್
(ಮೈ.ಪ್ರ.ಪು. ಮಾಲೆ) (೧೯೩೯)

ಹಂಪೆಯ ಹರಿಹರ' [ವಿಮರ್ಶೆ]—ರಂ. ಶ್ರೀ. ಮುಗಳಿ (ಜೀವನ, ೧-೭)

ಂಪೆಯ ಹರಿಹರ—ಎಚ್. ಎಸ್. ಬಸವಕುಮಾರ (ಜ.ಕ., ೨೬-೫)

ಂಪೆಯ ಹರಿಹರನ ಷಟ್ಪದಿಕಾವ್ಯ—ಬಿ. ಎಸ್. ಗದ್ದಗಿಮಠ (ಜ.ಕ., ೩೬-೮)

ಹೊನ್ನಮ್ಮ

ತೀಗೀತೆ ಅಥವಾ ದಾಂಪತ್ಯಧರ್ಮ—ಸಂ: ಕ. ನರಸಿಂಹಶಾಸ್ತ್ರಿ (೧೯೫೫)

ರಸಸಾಹಿತ್ಯದ ವರದೇವಿ—ಶಾಂತಾದೇವಿ ಮಾಳವಾಡ (ಕನ್ನಡ ತಾಯಿ, ಪು. ೩೫)

ಂಚಿಯ ಹೊನ್ನಮ್ಮ—ಕ. ನರಸಿಂಹಶಾಸ್ತ್ರಿ (ಪ್ರ.ಕ., ೩೭-೩)

ಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ
—ಎಚ್. ಎಂ. ಶಂಕರನಾರಾಯಣರಾವ (ಸುಬೋಧ, ೧೯೩೬-ಮಾರ್ಚ)

ಹದಿಬದೆಯ ಧರ್ಮ [ಪೀಠಿಕೆ]—ಡಿ. ಚಂಪಾಬಾಯಿ (೧೯೪೦)

ಹದಿಬದೆಯ ಧರ್ಮ [ವಿಮರ್ಶೆ]—ಮುಳಿಯ ತಿಮ್ಮಪ್ಪಯ್ಯ (ಕ.ಸಾ.ಪ., ೨೬-೧)

ಹೊನ್ನಮ್ಮನ ಕಾವ್ಯ-ಹದಿಬದೆಯ ಧರ್ಮ—ಎಸ್. ವಿನೋದಾಬಾಯಿ
(ಕ.ನು., ೧೯-೧)

೨. (ಆ) ಇತರ ಗ್ರಂಥಕಾರರು

ಅಗ್ಗಳದೇವ—ದೊ. ಲ. ನರಸಿಂಹಾಚಾರ್ (ಪ್ರ.ಕ., ೩೫-೪)

೯ನೇ ಶತಮಾನದಲ್ಲಿದ್ದ ಅಚಲಾನಂದದಾಸರು—ಬೇಲೂರ ಕೇಶವದಾಸ (ಜ.ಕ., ೨-೧೧)

ಅನ್ನಮಾರ್ಯ, ಪುರಂದರ, ನಿಜಗುಣಶಿವಯೋಗಿ—ರಾ. ಸ್ವಾ. ಪಂಚಮುಖಿ (ಕ.ನು., ೧೧-೨೩)

ಅಸಗಕವಿಯ ಖ್ಯಾತಿ—ವೆಂ. ಬಿ. ಲೋಕಾಪೂರ (ಪ್ರ.ಕ., ೩೭-೧)

ಅಸಗಕವಿಯ ಪರಿಚಯ—ವೆಂ. ಬಿ. ಲೋಕಾಪೂರ (ಜ.ಕ., ೨೫-೪)

ಅಸಗನ ಕನ್ನಡ ಕುಮಾರಸಂಭವ—ವೆಂ. ಬಿ. ಲೋಕಾಪೂರ (ಕ.ನು., ೧೫-೧೦)

Asaga & His Works—A. N. Upadhye (K.H.R., II-1)

ಕರಸ್ಥಲವ ನಾಗಿದೇವ—ಚಂದ್ರಶೇಖರದೇವರು (ಶ.ಸಾ., ೧-೧೧)

ಕರ್ಣಪಾರ್ಯನ ನೇಮಿನಾಥಪುರಾಣ [ವಿಮರ್ಶೆ] —ದೊ. ಲ. ನರಸಿಂಹಾಚಾರ್ (ಪ್ರ.ಕ., ೨೩-೨)

ಕವಿಕಾಮನು ಯಾರಿರಬಹುದು?—ಸದಾನಂದ ನಾಯಕ (ಪ್ರ.ಕ., ೩೮-೩)

ಕವಿಪರಮೇಶ್ವರ ಅಥವಾ ಪರಮೇಷ್ಠಿ—ಎ. ಎನ್. ಉಪಾಧ್ಯೆ (ಪ್ರ.ಕ., ೨೮-೩)

ಕವಿತಾಲಕ್ಷ್ಮೀಧರ ಮತ್ತು ಕವೀಂದ್ರಾಭರಣಮಧುರ—ತಿ. ತಾ. ಶರ್ಮ (ಕ.ಸಾ.ಪ., ೧೪-೧)

ಅಭಿನವ ವಾಗ್ದೇವಿ [ಕಂತಿ]—ಶಾಂತಾದೇವಿ ಮಾಳವಾಡ (ಕನ್ನಡ ತಾಯಿ, ಪು. ೧೪)

ಕಂತಿ—ಶ್ರೀಮತಿ ನರಸಮ್ಮ (ಕ.ನು., ೫-೩೦)

ಕಾರಿಕಾಲಮ್ಮೆ—ಹುಲ್ಲೂರು ಶ್ರೀನಿವಾಸಜೋಯಿಸ (ಕ.ಸಾ.ಪ., ೩೧-೨)

ಕವಿಕೀರ್ತಿವರ್ಮ—ಎನ್. ಲಕ್ಷ್ಮೀನಾರಾಯಣರಾವ್

ಕುಮಾರರಾಮನ ಸಾಂಗತ್ಯ—ಹುಲ್ಲೂರು ಶ್ರೀನಿವಾಸಜೋಯಿಸ (ಕ.ಸಾ.ಪ., ೨೭-೧)

ಕವಿ ಕೋನಪ್ಪ—ಹುಲ್ಲೂರು ಶ್ರೀನಿವಾಸಜೋಯಿಸ (ಕ.ಸಾ.ಪ., ೩೦-೧)

ಕೊಂಡಗುಳಿ ಕೇಶಿರಾಜ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೧೭-೧೦)

ಗಜಾಂಕುಶ—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೪-೨)

ಗಜಾಂಕುಶ, ದುರ್ಗಸಿಂಹ, ಬಸವೇಶ್ವರ, ರನ್ನ ಮತ್ತು ರುದ್ರಭಟ್ಟ ಇವರು ಯಾವ ಶಾಖೆಯ ಬ್ರಾಹ್ಮಣರು?—ನಾ. ಶ್ರೀ. ರಾಜಪುರೋಹಿತ (ಕ.ಸಾ.ಪ., ೨೦-೩)

ಕವಿಯಿತ್ರಿ ಗಂಗಾದೇವಿ—'ಕನ್ನಡ ಜಾಣ' (ಶ.ಸಾ., ೯-೬)

Guddapura Danamma—V. B. Halabhavi (ಲಿಂ.ವಿ.ಪ., ೧-೪)

ಗುಣಚಂದ್ರನ ಛಂದಸ್ಸಾರ—ಎಂ. ಮರಿಯಪ್ಪಭಟ್ಟ
(A.O.R., U.M., VII-2)

…ನೆಯ ಗುಣವರ್ಮನ ಶೂದ್ರಕ—ರಂ. ಶ್ರೀ. ಮುಗಳಿ (ಶ್ರದ್ಧಾಂಜಲಿ, ಪು. ೩೭೬)

…ನೆಯ ಗುಣವರ್ಮ ಕೃತ ಪುಷ್ಪದಂತಪುರಾಣದ ರಚನೆಯ ಕಾಲ
—ಎ. ವೆಂಕಟಸುಬ್ಬಯ್ಯ (ಕ.ಸಾ.ಪ., ೧೯-೧)

ಚಿಕ್ಕುಪಾಧ್ಯಾಯ: ವೆಂಕಟಗಿರಿಮಹಾತ್ಮ್ಯ—ರಾ. ನರಸಿಂಹಾಚಾರ್
(ಕ.ಸಾ.ಪ., ೪-?)

ಚೆನ್ನಪ್ಪಕವಿಯು ಚಿತ್ರಿಸಿರುವ ಬಸವಣ್ಣನವರು—ಆರ್. ಬಸವರಾಜ
(ಶಿವಾ., ೩೨-೬)

ಜಟಾಸಿಂಹನಂದಿಯ ವರಾಂಗಚರಿತ್ರೆ—ದೊ. ಲ. ನರಸಿಂಹಾಚಾರ್
(ಕ.ಸಾ.ಪ., ೨೫-೨)

ವರ್ಧಮಾನ ತುಂಬಲೂರಾಚಾರ್ಯ ಮತ್ತು ಶ್ರೀವರ್ಧದೇವ—ಕೆ. ಭುಜಬಲಿಶಾಸ್ತ್ರಿ
(ಕ.ಸಾ.ಪ., ೧೮-೨)

ದಂಡನಾಯಕ ಕೇಶಿ—ಬಾ. ರಾ. ಗೋಪಾಲ್ (ಕ.ಸಾ.ಪ., ೪೩-೨)

ದುರ್ಗಸಿಂಹನ ಕಥನಕಲೆ—ವರದರಾಜ ಹುಯಿಲಗೋಳ (ಸುಬೋ., ೨೪-೨)

ದುರ್ಗಸಿಂಹನ ಪಂಚತಂತ್ರ—ತ. ಸು. ಶಾಮರಾಯ (ಶ್ರದ್ಧಾಂಜಲಿ, ಪು. ೧೨೮)

ದುರ್ವಿನೀತನ ಕಾವ್ಯಗಳು—ಕೆ. ವೆಂಕಟರಾಯಾಚಾರ್ (ಸುಬೋಧ, ೩೦-೨)

ದೇವಕವಿಯ ಮರುಳಸಿದ್ಧಕಾವ್ಯ [ಪ್ರಸ್ತಾವನೆ]
—ಅ. ನ. ಕೃಷ್ಣರಾಯ (೧೯೪೬)

ಕುಸುಮಾವಳಿ ವಿಮರ್ಶೆ (ದೇವಕವಿ)—ಕಡಬ ನಂಜುಂಡಶಾಸ್ತ್ರಿ
(ಕ.ಸಾ.ಪ., ೪-೨, ೩)

ದೇವಾಂಗಕವಿಗಳು (ಕವಿಸಿದ್ಧಮಲ್ಲಾರ್ಯ ಇ.)—ಶಿಗ್ಗಲಿ ಬೆನಕಪ್ಪಶಾಸ್ತ್ರಿ
(ಕ.ಸಾ.ಪ., ೫-೩)

ರಾಜಾವಳೀಕಥೆ (ದೇವಚಂದ್ರ)—ಟಿ. ಎಸ್. ಕುಲಕರ್ಣಿ (ಜ.ಕ., ೨೯-೧೦)

ರಾಮನ ಕಾಳಗ (ನಾಗಚಂದ್ರ)—ಕೆ. ಭುಜಬಲಿಶಾಸ್ತ್ರಿ (ಪ್ರ.ಕ., ೨೪-೪)

ನಾರಾಯಣಕವಿಯ ಉತ್ತರಕಾಂಡ—ಉಗ್ರಾಣ ಮಂಗೇಶರಾವ್
(ಕ.ಸಾ.ಪ., ೧೨-೨)

ಪದ್ಮಣಾಂಕನ ಪದ್ಮರಾಜಪುರಾಣ [ಪೀಠಿಕೆ]—ಆರ್. ಸಿ. ಹಿರೇಮಠ (೧೯೫೮)

ಪದ್ಮರಾಜಪುರಾಣ ಕುರಿತು—ಭೀಮಪ್ಪ (ಶ.ಸಾ., ೨೦-೧೧)

ಪದ್ಮನಾಭನ ಜಿನದತ್ತರಾಯಚರಿತ್ರೆ—ದೊ. ಲ. ನರಸಿಂಹಾಚಾರ್ (ಬಾಗಿನ, ಪು. ೨೭೬)

ಪ್ರಸನ್ನವೆಂಕಟದಾಸರು—ಎ. ಟಿ. ಪಾಟೀಲ (೧೯೫೬)

ಪಾರ್ತಿಸುಬ್ಬ—ಮುಳಿಯ ತಿಮ್ಮಪ್ಪಯ್ಯ (೧೯೪೫)

ಯಕ್ಷಗಾನಕವಿ ಪಾರ್ತಿಸುಬ್ಬ—ಎಂ. ಗೋವಿಂದ ಪೈ (ಕ.ನು., ೧೧-೨೫)

ಪಾಲುಕುರಿಕಿ ಸೋಮನಾಥಕವಿ—ಬಂಡಾರು ತಮ್ಮಯ್ಯ (ಶ.ಸಾ., ೧೫-೮)

ಪಾಲ್ಕುರಿಕೆ ಸೋಮನಾಥ ಮತ್ತು ಭೀಮಕವಿ—ಕೆ. ಸುಬ್ಬರಾಮಪ್ಪ (ಕ.ನು., ೨೧-೬)

ಬ್ರಹ್ಮಶಿವನ ಕಾಲವಿಚಾರ—ಎಚ್. ದೇವೀರಪ್ಪ (ಪ್ರ.ಕ., ೨೪-೪)

ವೃತ್ತವಿಲಾಸ [ವ.ಕೋ.]—ಸಂಪಾದಕರಿಂದ (ಪ್ರ.ಕ, ೧೩-೨)

ಧರ್ಮನಾಥಪುರಾಣದ ಕರ್ತೃವಾದ ಬಾಹುಬಲಿಪಂಡಿತ —ಎನ್. ಅನಂತರಂಗಾಚಾರ್ (ಕ.ಸಾ.ಪ., ೨೫-೪)

ಬಾಹೂರ ಬೊಮ್ಮಣ್ಣಗಳ ವಚನ—ಚಂದ್ರಶೇಖರದೇವರು (ಶ.ಸಾ., ೨-೧)

ಪರಶುರಾಮ ರಾಮಾಯಣ (ಬೊಬ್ಬೂರು ರಂಗಪ್ಪ)— . . . (ಕ.ಸಾ.ಪ., ೨-೩)

ಬೊಂತಾದೇವಿ, ಮಹಾದೇವಿಯಕ್ಕ, ಗೊಗ್ಗವ್ವೆಯರು—ಫ. ಗು. ಹಳಕಟ್ಟಿ (ಶಿವಾ., ೧೯-೩)

ಕನ್ನಡ ಭಾಗವತದ ಕವಿ ಯಾರು?—ಕೃ. ಶ್ರೀ. ಬೆಟಗೇರಿ (ಕ.ಸಾ.ಪ., ೧೨-೨)

ಭೀಮಕವಿಯ ಬಸವಪುರಾಣ—ಎಸ್. ಕೆ. ಕುಲಕರ್ಣಿ (ಜ.ಕ., ೧೬-೨)

ಭೋಗನಾಥಕವಿ—ಡಿ. ವಿ. ಗುಂಡಪ್ಪ (ಪ್ರ.ಕ., ೧೩-೩)

ಮಗ್ಗೆಯ ಮಾಯಿದೇವರು—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೨೦-೧೧)

ಮರುಳಸಿದ್ಧಾಂಕ—ಸಂ: ಕವಲಿ ಚೆನ್ನಬಸವಪ್ಪ ಮತ್ತು ಮಠದ ಮರಿದೇವಸ್ವಾಮಿ (೧೯೪೯)

ಮಹಿಪತಿರಾಯರು—ಮನೋಹರರಾವ ದೇಶಪಾಂಡೆ (ಜೀವನ, ೨-೪)

ಮಂಗರಸನ (೧) ಖಗೇಂದ್ರಮಣಿದರ್ಪಣ [ವಿಮರ್ಶೆ] —ಎನ್. ಅನಂತರಂಗಾಚಾರ್ (ಪ್ರ.ಕ., ೨೫-೧)

ಖಗೇಂದ್ರಮಣಿದರ್ಪಣ [ವಿಮರ್ಶೆ]—ಡಿ. ಕೆ. ಭಾರದ್ವಾಜ (ಕ.ಸಾ.ಪ., ೨೮-೨, ೩)

ಮಂಗರಸನ (೩) ಸಮ್ಯಕ್ತ್ವಕೌಮುದಿ [ವಿಮರ್ಶೆ] (ಕ.ಸಾ.ಪ., ೮-೪೯)

ನಾಲ್ಕನೆಯ ಮಂಗರಸ—ದೊ. ಲ. ನರಸಿಂಹಾಚಾರ್ (ಕ.ಸಾ.ಪ., ೧೬–೫, ೩)
ಸಮುದಾಯದ ಮಾಘನಂದಿ ಮತ್ತು ಆಚಣ್ಣ—ಕೆ. ಜಿ. ಕುಂದಣಗಾರ (ಕ.ಸಾ.ಪ., ೪೪–೬)
[ಮುಪ್ಪಿನ ಷಡಕ್ಷರಿಯ] ಕೈವಲ್ಯದರ್ಪಣದ ವಿಮರ್ಶೆ (ಪ್ರ.ಕ., ೨೫–೧)
ಮುಪ್ಪಿನಾರ್ಯರ ಭಾವಪಾತ್ರಗಳು—'ಜ. ಚ. ನಿ.' (೧೯೫೩)
ಯಾದವರಾಯನ ಕಲಾವತೀಪರಿಣಯ—ಬೆ. ವೆಂಕಟನಾರಣಪ್ಪ (ಕ.ಸಾ.ಪ., ೯–೩)
ಲಕ್ಕಣ್ಣದಂಡೇಶ ಮತ್ತು ಇನ್ನು ಕೆಲಕವಿಗಳ ಕಾಲವಿಚಾರ —ಎಚ್. ದೇವೀರಪ್ಪ (ಪ್ರ.ಕ., ೩೦–೪)
ಲಕ್ಷ್ಮೀಕವಿ—ರಾ. ನರಸಿಂಹಾಚಾರ್ (ಕ.ಸಾ.ಪ., ೭–೩)
ಲಕ್ಷ್ಮೀಕವಿ: ಚಿನ್ನನ ನೀತಿಕಂದಗಳು—ಸಂ: ಕೆ. ರಾಮಸ್ವಾಮಯ್ಯಂಗಾರ್ (ಕ.ಸಾ.ಪ., ೭–೩)
ವಾದಿರಾಜರು—ಕೂಡಲಿ ಸುಬ್ಬರಾವ್ (ಜ.ಕ., ೨೦–೮)
ವ್ಯಾಸರಾಯರು—ಕೂಡಲಿ ಸುಬ್ಬರಾವ್ (ಜ.ಕ., ೨೦–೬)
ವ್ಯಾಸರಾಯಸ್ವಾಮಿಗಳು—ಸುಬೋಧ ಎಂ. ರಾಮರಾವ (ಹ.ಭಾ., ೮–೨)
ವಿದ್ಯಾನಿಧಿ ಕೇಶಿರಾಜ ದಿಗಂಬರ್‌ದಾಸಿ ಇ.—ಟಿ. ಎಸ್. ಶರ್ಮಾ (ಕ.ಸಾ.ಪ., ೧೬–೧)
Shankara Dasimayya—V. B. Halabhavi (ಲಿಂ.ವಿ.ಪ., ೧–೩)
ಕಲ್ಯಾಣದ ವಚನಭಂಡಾರಿ ಶಾಂತರಸರ ವಚನಗಳು —ಅಡ್ನೂರು ಚಂದ್ರಶೇಖರದೇವರು (ಶ.ಸಾ., ೨–೨)
ಕವಿ ಶಾಂತಲಿಂಗದೇಶಿಕ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೧೭–೫)
ಸುಕುಮಾರಚರಿತೆ(ಶಾಂತಿನಾಥ)ಯಲ್ಲಿ ಕಂಡುಬರುವ ಒಂದು ಷಟ್ಪದ —ತ. ಸು. ಶಾಮರಾಯ (ಕ.ಸಾ.ಪ., ೩೧–೨)
ಶಿಶುಮಾಯಣಕವಿಯ ಕಾಲ ಇ. [ವ.ಕೋ.]— . . . (ಪ್ರ.ಕ., ೧೩–೨)
Late Shridharacharya—S. Shrikantha Sastry (J.A., XIV–2)
Shrivardhadeva and Tumbuluracharya —M. Govinda Pai (J.A., 1939 Mar.)

ಪವಾಡಪ್ರಿಯ ಸಿಂಗಿರಾಜನ ಬಸವಣ್ಣ—ಆರ್. ಬಸವರಾಜ (ಜ.ಕ., ೩೬–೧೧
ರತ್ನಾವಳಿ—ಮಿತ್ರವಿಂದಾಗೋವಿಂದ (ಸಿಂಗರಾರ್ಯ) [ವ.ಕೋ.] (ಪ್ರ.ಕ., ೨–೩
ಹಮ್ಮೀರಕಾವ್ಯ ವಿಮರ್ಶೆ—ಎನ್. ರಾಘವಾಚಾರ್ (ಕ.ಸಾ.ಪ., ೬–೧
ಹಂಪೆಯ ದೇವರಾಜ—ಹುಲ್ಲೂರ ಶ್ರೀನಿವಾಸಜೋಯಿಸ (ಜೀವನ, ೨–೧೧
ಸಿದ್ಧನಂಜೇಶ—ರಾ. ನರಸಿಂಹಾಚಾರ್ (ಕ.ಸಾ.ಪ., ೩–೪
ಸಿದ್ಧನಂಜೇಶನ ಕಾಲ—ಎಚ್. ದೇವೀರಪ್ಪ (ಪ್ರ.ಕ., ೩೬–೨
ಸೋಮದೇವಸೂರಿಯ ನೀತಿವಾಕ್ಯಾಮೃತದಿಂದ ಆರಿಸಿದ ಕನ್ನಡ ಪದಗಳು
—ಕೆ. ಜಿ. ಕುಂದಣಗಾರ (ಕ.ಸಾ.ಪ., ೩೨–೩–೪
ಸೋಮೇಶ್ವರ ಶತಕ—ಅನ್ನದಾನೀಶ್ವರ ವಿರಕ್ತಮಠ (ಜ.ಕ., ೩೬–೭
ಸೋಮೇಶ್ವರ ಕವಿಯು—ವಿ. ಸಿ. ಯಗಟಿ (ಜ.ಕ., ೨–೯

ಪರಿಶಿಷ್ಟ

ಅಸಗನ ವರ್ಧಮಾನಪುರಾಣದ ಕನ್ನಡ ವ್ಯಾಖ್ಯಾನ
—ವೆಂ. ಭೀ. ಲೋಕಾಪುರ (ಜಯಂತಿ, ೧೪–೨
(ಕುಂಡಲಗಿರಿಕೃತ) ರಸಿಕಮನೋರಂಜನವಿಲಾಸ
—ಎನ್. ಅನಂತರಂಗಾಚಾರ್ (ಪ್ರ.ಕ., ೨೪–೧
(ಕೋಳೂರು ಶಂಕರಕೃತ) ನವಮೋಹನತರಂಗಿಣಿ
—ಎನ್. ಅನಂತರಂಗಾಚಾರ್ (ಪ್ರ.ಕ., ೨೧–೪
(ದೇಪಕವಿಕೃತ) ಸಿದ್ಧಲಿಂಗಚಾರಿತ್ರ—ಎಚ್. ದೇವೀರಪ್ಪ (ಲಿಂ.ವಿ.ಪ., ೨–
(ಮಲ್ಲಿಕಾರ್ಜುನಪಂಡಿತಾರಾಧ್ಯನ) ಶಿವತತ್ವಸಾರ
—ತ. ಸು. ವೆಂಕಣ್ಣಯ್ಯ (ಪ್ರ.ಕ., ೧೬–
(ವಿರುಪರಾಜಕೃತ) ಗುರುಭಕ್ತಚಾರಿತ್ರ—ಎನ್. ಅನಂತರಂಗಾಚಾರ್
(ಪ್ರ.ಕ., ೧೪–
(ಶಾಂತಲಿಂಗದೇಶಿಕನ) ಸಿದ್ಧಲಿಂಗಚಾರಿತ್ರ—ಎಂ. ಜಿ. ನಂಜುಂಡಾರಾಧ್ಯ
(ಲಿಂ.ವಿ.ಪ., ೧–
ಕುಮುದೇಂದುರಾಮಾಯಣವಿಚಾರ—ದೊ. ಲ. ನರಸಿಂಹಾಚಾರ್
(ಕ.ಸಾ.ಪ., ೨೪–
ಶಿಶುಮಾಯಣನ ಕಾಲವಿಚಾರ—ಎಂ. ಗೋವಿಂದ ಪೈ
(ಸ್ವದೇಶಾಭಿಮಾನಿ, ರಜತೋತ್ಸವ ಸಂಚಿ

೩. (ಅ) ವಿಶಿಷ್ಟ ವಿಷಯಗಳು

ಕಾವ್ಯ, ನಾಟಕ ಇತ್ಯಾದಿ

ಕನ್ನಡ ಕಾವ್ಯಸಾಹಿತ್ಯ—ಮ. ಪ್ರ. ಪೂಜಾರ (ವಾಗ್ಭೂ., ೩೧-೭-೧೧)

ಕನ್ನಡ ಗದ್ಯಸಾಹಿತ್ಯ—ಬಿ. ಎನ್. ನಾಗಪ್ಪ (ಕ.ನು., ೯-೩೪)

ಕನ್ನಡ ಗದ್ಯಸಾಹಿತ್ಯದ ಚರಿತ್ರೆ—ಎಂ. ಗೋವಿಂದರಾವ್ (ಸುಬೋ., ೨೪-೧)

ಕನ್ನಡ ನಾಟಕ (ಐತಿಹಾಸಿಕ ಟಿಪ್ಪಣಿ)—ತಿ. ತಾ. ಶರ್ಮ (ಜ.ಕ., ೧-೪)

ಕನ್ನಡ ನಾಟಕಗಳು—ಅ. ನ. ಕೃಷ್ಣರಾಯ (ಶ.ಸಾ., ೩-೧೦)

ಕನ್ನಡ ನಾಟಕಗಳು—ಸಿ. ಹನುಮಂತಗೌಡ (ಕ.ಸಾ.ಪ., ೪-೨-೩)

ಕನ್ನಡ ನಾಟಕದ ಹಳಮೆ—ಎಂ. ಗೋವಿಂದ ಪೈ (ಕ.ಸಾ.ಪ., ೩೧-೨)

೩. (ಆ) ಜೈನಸಾಹಿತ್ಯ

ಕನ್ನಡ ಜೈನಭಾರತಗಳು—ಟಿ. ಎಸ್. ಕುಲಕರ್ಣಿ (ಪ್ರ.ಕ., ೩೮-೧)

ಕನ್ನಡ ಜೈನವಾಙ್ಮಯ—ಆರ್. ತಾತಾಚಾರ್ಯ (೧೯೩೧)

ಕನ್ನಡದಲ್ಲಿ ಜೈನಗ್ರಂಥಗಳು—ಕೆ. ವೆಂಕಟರಾಮಾಚಾರ್ಯ(ಸುಬೋಧ, ೩೧-೧, ೨, ೬)

ಕನ್ನಡಸಾಹಿತ್ಯಕ್ಕೆ ಜೈನಕವಿಗಳ ಕಾಣಿಕೆ—ಸ. ಸ. ಮಾಳವಾಡ
(ಕನ್ನಡ ಸಾ. ಸಂಸ್ಕೃತಿದರ್ಶನ, ಪು. ೧೩)

ಕನ್ನಡಸಾಹಿತ್ಯಕ್ಕೆ ಜೈನರ ಕಾಣಿಕೆ—ಮಿರ್ಜಿ ಅಣ್ಣಾರಾಯ
(ಜೈನಧರ್ಮ, ಪು. ೭೩೦)

ಕನ್ನಡಸಾಹಿತ್ಯದಲ್ಲಿ ಜೈನಯುಗ—ಮಿರ್ಜಿ ಅಣ್ಣಾರಾಯ (ಜ.ಕ.)

ಕನ್ನಡಸಾಹಿತ್ಯ ಮತ್ತು ಜೈನಕವಿಗಳು—ಕೆ. ಭುಜಬಲಿಶಾಸ್ತ್ರಿ (ಕ.ಸಾ.ಪ., ೧೧-೧)

ಜೈನಕವಿಪ್ರಶಂಸೆ—ಶೇಷ ಭೀ. ಪಾರಿಷವಾಡ (ಕ.ಸಾ.ಪ., ೯-೪)

ಜೈನಕವಿಗಳು—ಶೇಷ ಭೀ. ಪಾರಿಷವಾಡ (ಕ.ಸಾ.ಪ., ೭-೪)

ಜೈನವಾಙ್ಮಯ—ಕೆ. ಭುಜಬಲಿಶಾಸ್ತ್ರಿ (೧೯೫೧)

ಜೈನವಾಙ್ಮಯವಿಚಾರ—ಶೇಷ ಭೀ. ಪಾರಿಷವಾಡ (ಕ.ಸಾ.ಪ., ೧೧-೧)

Jaina Ramayanas—D. L. Narasimhachar
(I.H.Q., 1939 Dec.)

೩. (ಇ) ವಚನಸಾಹಿತ್ಯ

ಆದ್ಯರ ವಚನ—ಎನ್. ಆರ್. ದೇಸಾಯಿ (ಶಿವಾ., ೨೬-೨)

ಉಪನಿಷತ್ತು ಮತ್ತು ವಚನಸಾಹಿತ್ಯ—ಎಂ. ಡಿ. ಬಸವಪ್ಪ (ಶ.ಸಾ., ೧-೮, ೯)

ಕನ್ನಡ ವಚನಗಾರ್ತಿಯರು—'ಅನುಭಾವಿ' (ಶ.ಸಾ., ೨೧-೪)

ಕನ್ನಡಸಾಹಿತ್ಯದಲ್ಲಿ ವಚನಗಳ ಸ್ಥಾನ—ಚಂದ್ರಶೇಖರಶಾಸ್ತ್ರಿ (ಸಂಭಾವನೆ, ಪು. ೨೮೪)

ಕೆಲವರು ವಚನಕಾರರು—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೯-೧, ೪)

ಬಸವಯುಗದ ಮಹಿಳಾಸಾಹಿತ್ಯ—ಸರಸ್ವತಿ ಗೌಡರ (ಲಿಂ.ವಿ.ಪ., ೪-೨೩)

ವಚನಕಾರರ ಮೇಲ್ಮೆ—ರಂ. ರಾ. ದಿವಾಕರ (ಜ.ಕ., ೧೪-೪)

ವಚನಕಾರರ ಶೈಲಿ—ಸಿ. ಕ. ಪುರಾಣಿಕ (ಲಿಂ.ವಿ.ಪ., ೫-೪)

ವಚನಕಾರರೂ ಹರಿದಾಸರೂ—ಸೂ. ವೆಂ. ಆರಗ (ಬಾಗಿನ, ಪು. ೧೩೪)

ವಚನಧರ್ಮಸಾರ—ಎಂ. ಆರ್. ಶ್ರೀನಿವಾಸಮೂರ್ತಿ (೧೯೪೨)

ವಚನಧರ್ಮಸಾರದ ವಿಮರ್ಶೆ—ಎನ್. ಲಕ್ಷ್ಮೀನಾರಾಯಣರಾವ್ (ಕ.ಸಾ.ಪ., ೨೮-೧)

ವಚನವಾಙ್ಮಯ—ಗೌರೀಶಂಕರಸ್ವಾಮಿಗಳು (ಕ.ನು., ೧೦-೪೪)

ವಚನವಾಙ್ಮಯ—ಶಿ. ಚೆ. ನಂದೀಮಠ (ಶಿವಾ., ೧೪-೬)

ವಚನವಾಙ್ಮಯ—ಶಿ. ಚೆ. ನಂದೀಮಠ (ಶ.ಸಾ., ೩-೨)

ವಚನವಾಙ್ಮಯ—ಮಹಾದೇವಸ್ವಾಮಿಗಳು (ಕ.ನು., ೧-೧೨)

ವಚನವಾಙ್ಮಯದ ವೈಭವ—ಹು. ಬ. ಕಲಬುರ್ಗಿ (ಶಿವಾ., ೨೦-೩)

ವಚನಶಾಸ್ತ್ರದ ಮಹತಿ—ರತ್ನಾಶಾಸ್ತ್ರಿ (ಶ.ಸಾ., ೨೦-೩)

ವಚನಶಾಸ್ತ್ರರಹಸ್ಯ—ರಂ. ರಾ. ದಿವಾಕರ (೧೯೩೬)

ವಚನಶಾಸ್ತ್ರವು ಸಾಹಿತ್ಯವಲ್ಲವೆ?—ಬಿ. ಪಿ. ಪಾಟೀಲ (ಶಿವಾ., ೧೬-೩)

ವಚನಶಾಸ್ತ್ರವೂ ಉಪನಿಷತ್ತುಗಳೂ—ಚಂದ್ರಶೇಖರಶಾಸ್ತ್ರಿ (ಶ.ಸಾ., ೩-೯)

ವಚನಶಾಸ್ತ್ರಸಾರ—ಫ. ಗು. ಹಳಕಟ್ಟಿ (೧೯೩೧)

ವಚನಸಾಹಿತ್ಯ—ಜಿ. ಕೆ. ಬಸವಪ್ಪ (ಶ.ಸಾ., ೧-೪)

ವಚನಸಾಹಿತ್ಯ—ಮ. ಮಲ್ಲಪ್ಪ (ಶಿವಾ., ೨೧-೪)

೩. (ಈ) ದಾಸಸಾಹಿತ್ಯ

ಕರ್ಣಾಟಕ ಹರಿದಾಸ ಸಾಹಿತ್ಯದ ಕಾಣಿಕೆ—ಆರ್. ಕೃಷ್ಣಮೂರ್ತಿ (ಸುಬೋಧ, ೩೨-೬)

ದಾಸಕೂಟದ ಸಂಕ್ಷಿಪ್ತ ಇತಿಹಾಸ—ಎಚ್. ಜಿ. ಬೆಂಗೇರಿ (ಜ.ಕ., ೪-೮, ೧೧, ೧೨)

ದಾಸರ ಅಂಕಿತಗಳು—ಬೆಂಗೇರಿ ಗುರುರಾವ್ (ಜ.ಕ., ೬-೧೧)

ದಾಸರ ಕಾಲದ ಸಾಮಾಜಿಕ ಜೀವನ—ಎಂ. ಗೋವಿಂದರಾವ್ (ಸುಬೋಧ, ೨೪-೫)

ದಾಸರ ಮುದ್ರಿಕೆಗಳು—ಬೆಂಗೇರಿ ಗುರುರಾವ್ (ಜ.ಕ., ೬-೫)

ದಾಸಸಾಹಿತ್ಯ ಮತ್ತು ಕರ್ನಾಟಕದ ಜನತೆ—ಎಸ್. ಪ್ರಹ್ಲಾದರಾವ್ (ಸುಬೋಧ, ೨೬-೪)

ವೈಷ್ಣವದಾಸರ ಕೀರ್ತನೆಗಳು—'ಶ್ರೀನಿವಾಸ' (ಜ.ಕ., ೨-೯)

ಹದಿನಾರನೆಯ ಶತಮಾನದಲ್ಲಿದ್ದ ವೈಕುಂಠದಾಸರು —ಬೇಲೂರ ಕೇಶವದಾಸ (ಜ.ಕ., ೬-೫)

—(ಮೇಲಿನದಕ್ಕೆ ಉತ್ತರ)—ಭೀಮಾಚಾರ್ಯ ವಡವಿ (ಜ.ಕ., ೬-೧೧)

ಹರಿದಾಸರು—ಕೆ. ಎಂ. ಕೃಷ್ಣರಾವ್ (ಹ.ಭಾ., ೭-೩)

ಹರಿದಾಸ ಸಾಹಿತ್ಯ—ಬೇಲೂರ ಕೇಶವದಾಸ (೧೯೪೬)

ಹರಿದಾಸ ಸಾಹಿತ್ಯ—ಎಂ. ರಾಮರಾವ್ (ಕ.ನು., ೧-೩೫, ೩೬)

ಹರಿದಾಸ ಸಾಹಿತ್ಯ—. . . (ಸುಬೋಧ, ೨೯-೧)

ಹರಿಭಕ್ತಿಸುಧೆ—ರಂ. ರಾ. ದಿವಾಕರ (೨ನೇ ಮು.) (೧೯೪೯)

ಹರಿಭಕ್ತಿಸುಧೆ [ವಿಮರ್ಶೆ]— (ಕ.ಸಾ.ಪ., ೨೪-೨)

ಹರಿಭಕ್ತಿವಿಜಯ, ಭಾ. ೧-೨—ಬೇಲೂರ ಕೇಶವದಾಸ (೧೯೩೭)

Haridasa Movement in Karnatak —N. B. Kalamadani (I.H.Q., IV-1, 2)

Mystic Teachings of the Dasas of Karnatak —N. B. Kalamadani & A. P. Karmarkar (1941)

೩. (ಉ) ಶಾಸನಸಾಹಿತ್ಯ

ಕನ್ನಡ ಶಾಸನಗಳ ಅಭ್ಯಾಸ—ಕಪಟ್ರಾಳ ಕೃಷ್ಣರಾಯ (ಶ.ಸಾ., ೧೨-೧)

ಕನ್ನಡ ಸಾಹಿತ್ಯದ ಒಂದು ಮುಚ್ಚಿದ ಬಾಗಿಲು—ಪಾಂ. ಭೀ. ದೇಸಾಯಿ (ಕ.ನು., ೧-೮)

ಕೆಲವು ಕರ್ಣಾಟಕ ಕವಿಗಳ ಚರಿತ್ರೆ (ಶಾಸನಗಳಿಂದ) —ತಿ. ತಾ. ಶರ್ಮ (ಕ.ಸಾ.ಪ., ೯-೧)

ಶಾಸನಗಳಲ್ಲಿ ಕಂಡ ಕರ್ಣಾಟಕ ಕವಿಗಳು—ತಿ. ತಾ. ಶರ್ಮ (೧೯೨೪)

ಶಿಲಾಶಾಸನ–ಕನ್ನಡ ಜನಜೀವನ—ತಿ. ತಾ. ಶರ್ಮ (ಕ.ನು., ೯-೪೩)

ಶಿಲಾಶಾಸನಗಳ ಕೆಲವು ಕೆಲವು ಕನ್ನಡ ಕವಿಗಳು—ಶ್ರೀನಿವಾಸ ರಿತ್ತಿ (ಕ.ಸಾ.ಪ., ೪೩-೨)

ಶಾಸನ ಮತ್ತು ಸಾಹಿತ್ಯ—ಪಾಂ. ಭೀ. ದೇಸಾಯಿ (ಕ.ಸಾ.ಪ., ೩೧-೨)

೩. (ಊ) ಸಂಕೀರ್ಣ ಬರಹಗಳು

ಅನುಭವ ಮತ್ತು ಸಾಹಿತ್ಯ—ರಂ. ಶ್ರೀ. ಮುಗಳಿ (ಕ.ನು., ೧೧-೨೫)

ಈಗ ದೊರೆಯದ ಕೆಲವು ಹಳಗನ್ನಡ ಕಾವ್ಯಗಳು —ತೀ. ನಂ. ಶ್ರೀಕಂಠಯ್ಯ (ಕ.ನು., ೪-೬)

ಈಚೆಗೆ ದೊರೆತ ಕೆಲವು ಪ್ರಾಚೀನ ಕನ್ನಡ ಕಾವ್ಯಗಳು —ಎಂ. ಎಸ್. ಬಸವಲಿಂಗಯ್ಯ (ಕ.ಸಾ.ಪ., ೨೪-೪)

ಕನ್ನಡ ಕವಿಕಾವ್ಯಪ್ರಸಂಗ—ಜಿ. ಪಿ. ರಾಜರತ್ನಂ (ಕ.ಸಾ.ಪ., ೧೫-೩)

ಕನ್ನಡ ಕವಿಗಳ ಕಾವ್ಯೋದ್ದೇಶ—ಎನ್. ಎಸ್. ವೀರಪ್ಪ (ಶ.ಸಾ., ೧೦-೧, ೨)

ಕನ್ನಡ ಕವಯಿತ್ರಿಯರು—ಸೀತಮ್ಮ ಬೇಲಿ (ಕ.ಸಾ.ಪ., ೪೩-೨)

ಕನ್ನಡ ಕಾವ್ಯಗಳಲ್ಲಿ ಸ್ತ್ರೀಪಾತ್ರಗಳು—ಅನ್ನಪೂರ್ಣಮ್ಮ (ಶ.ಸಾ., ೨೭-೧)

ಕನ್ನಡ ಗ್ರಂಥಗಳು ಪರಭಾಷೆಗೆ ಪರಿವರ್ತಿಸಲ್ಪಟ್ಟವೆಯೆ? (ರಟ್ಟಸೂತ್ರ, ಪ್ರಭುಲಿಂಗಲೀಲೆ ಇ.)—ನಾ. ಶ್ರೀ. ರಾಜಪುರೋಹಿತ (ಕ.ಸಾ.ಪ., ೫-೨)

ಕನ್ನಡದಲ್ಲಿ ವಿಡಂಬನಸಾಹಿತ್ಯ—ಎಚ್. ಎಸ್. ಕೃಷ್ಣಸ್ವಾಮಿ (೧೯೪೭)

ಕನ್ನಡದ ವೈಯಾಕರಣರು—ಜಿ. ಬಿ. ಕೊಲ್ಲೂರಯ್ಯ (ಬಾಗಿನ, ಪು. ೯೧)

ಕನ್ನಡ ಮಹಾಭಾರತಗಳು—ಎಚ್. ಎಂ. ಶಂಕರನಾರಾಯಣರಾವ (ಪ್ರ.ಕ., ೩೨-೧)

ಕನ್ನಡಸಾಹಿತ್ಯಕ್ಕೆ ವೀರಶೈವರ ಮುಡಿಪು—ಎಂ. ಎಸ್. ಬಸವಲಿಂಗಯ್ಯ (ಸಂಭಾವನೆ, ಪು. ೨೮೮)

ಕನ್ನಡಸಾಹಿತ್ಯದ ಗುಣದೋಷಗಳು—ಎಸ್. ವಿ. ರಂಗಣ್ಣ (ಪ್ರ.ಕ., ೧-೨)

ಕನ್ನಡಸಾಹಿತ್ಯದ ಸ್ವರೂಪ ಮತ್ತು ಉದ್ದೇಶ—ಎಂ. ಗೋವಿಂದರಾವ್ (ಮಿತ್ರಮಂಡಲಿಯ ಕಾಣಿಕೆ, ಪು. ೪೪)

ಕನ್ನಡಸಾಹಿತ್ಯದಲ್ಲಿ ಕೊರತೆಗಳು—ಕೆ. ಜಿ. ಕುಂದಣಗಾರ (ಶ.ಸಾ., ೪-೧೧)

ಕನ್ನಡಸಾಹಿತ್ಯದಲ್ಲಿ ವೀರರಸಪ್ರತಿಪಾದನೆ—ತ. ರಾ. ಸುಬ್ಬರಾಯ (ಕ.ಸಾ.ಪ., ೩೨-೩, ೪)

ಕನ್ನಡಸಾಹಿತ್ಯದಲ್ಲಿ ಬಾಹುಬಲಿಯ ಕಲ್ಪನೆ—ಶ. ಮ. ನ. (ಪ್ರ.ಕ., ೩೦-೪)

ಕನ್ನಡಸಾಹಿತ್ಯ ಮತ್ತು ರಾಜಾಶ್ರಯ—ಡಿ. ಎನ್. ರಾಮು (೧೯೪೭)

ಕನ್ನಡಸಾಹಿತ್ಯವನ್ನು ಕುರಿತು ಹಲವು ಸಲಹೆಗಳು—ಎನ್. ರಾಮರಾವ್ (ಪ್ರ.ಕ., ೧೩-೨)

ಕರ್ನಾಟಕದಲ್ಲಿ ಭಕ್ತಿಮಾರ್ಗ—ದ. ರಾ. ಬೇಂದ್ರೆ (ಜೀವನ, ೧-೯)

ಕರ್ನಾಟಕದಲ್ಲಿ ಸಾಹಿತ್ಯಕ್ಕೆ ರಾಜಾಶ್ರಯ—ಕೇಶವಶರ್ಮಾ ಗಲಗಲಿ (ಕ.ಸಾ.ಪ., ೧೪-೪)

ಕರ್ನಾಟಕ ಸಾಹಿತ್ಯದಲ್ಲಿ ಪ್ರಕೃತಿವರ್ಣನೆ—ದೊ. ಲ. ನರಸಿಂಹಾಚಾರ್ (ಕ.ಸಾ.ಪ., ೧೩-೨)

ಕಲಾಸಾಹಿತ್ಯಗಳಿಗೆ ಮೈಸೂರರಸರ ಪ್ರೋತ್ಸಾಹ—ಎನ್. ಅನಂತರಂಗಾಚಾರ್

ಕವಿಚರಿತೆ (ಕೆಲವು)—ಕೆ. ಜಿ. ಕುಂದಣಗಾರ (ಜ.ಕ., ೪-೯)

ಕುಲಭೇದನಿವಾರಣೆ ಮತ್ತು ಕನ್ನಡಕವಿಗಳು—ಎಸ್. ಪಂಚಾಕ್ಷರಿ (೧೯೫೮)

ಕೆಲವು ಅಜ್ಞಾತಕವಿಗಳೂ ಕಾವ್ಯಗಳೂ—ದೊ. ಲ. ನರಸಿಂಹಾಚಾರ್ (ಜ.ಕ., ೯-೪, ೮, ೧೨; ೧೦-೪)

ಕೆಲವು ರಗಳೆಯ ಕವಿಗಳು—ದೊ. ಲ. ನರಸಿಂಹಾಚಾರ್ (ಪ್ರ.ಕ., ೧೭-೪)

ದ್ರೌಪದಿಯ ಶ್ರೀಮುಡಿ—ಕು. ವೆಂ. ಪುಟ್ಟಪ್ಪ (ಪ್ರ.ಕ., ೩೫-೪)

ಪಂಪನ ಸಮೀಪಪೂರ್ವ ಕಾವ್ಯಲುಪ್ತ ಗುಪ್ತ ಕನ್ನಡ ಕವಿತ್ರಯರು —ಕೆ. ಎಸ್. ಪದ್ಮನಾಭಾಚಾರ್ (ಕ.ನು., ೨೦-೩)

ಪ್ರಾಚೀನ ಕನ್ನಡಕಾವ್ಯಗಳಲ್ಲಿ ಪ್ರಕೃತಿವರ್ಣನೆ—ಚೆನ್ನವೀರ ಕಣವಿ (ಜ.ಕ., ೩೫–೨)

ಪ್ರಾಚೀನ ಕನ್ನಡಸಾಹಿತ್ಯದಲ್ಲಿ ಊಟ—ಶಾಂತಾದೇವಿ ಮಾಳವಾಡ (ಕ.ನು., ೩–೩೩)

ಬಳ್ಳಾರಿ ಪ್ರಾಂತದ ಕೆಲವು ಕನ್ನಡ ಗತಕವಿಗಳು—ಎನ್. ಬಸವಾರಾಧ್ಯ (ಕ.ನು., ೨೧–೧)

ಮಾಧ್ವರೂ ಕನ್ನಡಸಾಹಿತ್ಯವೂ—ಮುಕ್ತಾಫಲ (ಜ.ಕ., ೪–೬, ೯; ೭–೮–೧೦)

ವೀರಶೈವವಾಙ್ಮಯಸ್ವರೂಪ—ಬಿ. ಟಿ. ಗಚ್ಚಿನಮನಿ (ಶಿವಾ., ೧೫–೬)

ವೀರಶೈವಕವಿಗಳು—ಬಿ. ಕೃಷ್ಣಪ್ಪ (ಕ.ಸಾ.ಪ., ೫–೩)

ವೀರಶೈವಧರ್ಮವಿಪ್ಲವವೂ ಕರ್ನಾಟಕವಾಙ್ಮಯವೂ —ಟಿ. ಎಚ್. ಎಂ. ಸದಾಶಿವಯ್ಯ (ಕ.ಸಾ.ಪ., ೧೨–೧)

ವೀರಶೈವರೂ ಕನ್ನಡಸಾಹಿತ್ಯವೂ—ಶರಭಯ್ಯ (ಶ.ಸಾ., ೨–೬)

ವೀರಶೈವವಾಙ್ಮಯಾವತಾರ—ಫ. ಗು. ಹಳಕಟ್ಟಿ (ಶಿವಾ., ೧೪–೭)

ವೀರಶೈವವಾಙ್ಮಯಾವತಾರ—ಚಿಲಕೂರ ನಾರಾಯಣರಾವ್ (ಶಿವಾ., ೧೪–೯)

ವೀರಶೈವವಾಙ್ಮಯಾವತಾರವನ್ನು ಕುರಿತು – ವೀರಭದ್ರಶಾಸ್ತ್ರಿ (ಶಿವಾ., ೧೫–೩)

ವೀರಶೈವಸಾಹಿತ್ಯ—ಅ. ನ. ಕೃಷ್ಣರಾಯ (ಶ.ಸಾ., ೧–೩)

ವೀರಶೈವಸಾಹಿತ್ಯ—ಸ. ಸ. ಮಳವಾಡ (ಕರ್ನಾಟಕ ಸಾ. ಸಂಸ್ಕೃತಿದರ್ಶನ, ಪು. ೭೧; ಶ.ಸಾ., ೧–೯, ೧೨)

ವೀರಶೈವಸಾಹಿತ್ಯದ ನಿಜಸ್ವರೂಪ—ಅ. ನ. ಕೃಷ್ಣರಾಯ (ಸಾಹಿತ್ಯ ಮತ್ತು ಯುಗಧರ್ಮ, ಪು. ೬೦)

ವೀರಶೈವಸಾಹಿತ್ಯದ ವೈಶಿಷ್ಟ್ಯ—ಎಲ್. ಜಿ. ಹಿರೇಮಠ (ಶಿವಾ., ೧೪–೧)

ವೀರಶೈವಸಾಹಿತ್ಯ ಮತ್ತು ಇತಿಹಾಸ—ಬಿ. ಶಿವಮೂರ್ತಿಶಾಸ್ತ್ರಿ (೧೯೫೩)

ವೀರಶೈವಸಾಹಿತ್ಯ ಮತ್ತು ಸಂಸ್ಕೃತಿ—ಅ. ನ. ಕೃಷ್ಣರಾಯ (೧೯೪೩)

ವೀರಶೈವಸಾಹಿತ್ಯಸ್ವರೂಪ—ಬಿ. ಶಿವಮೂರ್ತಿಶಾಸ್ತ್ರಿ (ಶ.ಸಾ., ೧೯–೧೧, ೧೨)

ಅನುಬಂಧ ೧

ಅತ್ಯಂತ ಪ್ರಾಚೀನ ಕನ್ನಡ ಶಾಸನ

(ಹಲ್ಮಿಡಿಯಲ್ಲಿ ದೊರೆತುದು)

೧. ಜಯತಿ ಶ್ರೀಪರಿಷ್ವಙ್ಗ ಶ್ಯಾಙ್ರ್ಗ(ವ್ಯಾನತಿ)ರಚ್ಯುತಃ
ದಾನವಾಕ್ಷ್ಣೋರ್ಯುಗಾನ್ತಾಗ್ನಿಃ (ಶಿಷ್ಟಾನಾನ್ತು) ಸುದರ್ಶನಃ

೨. ನಮಃ ಶ್ರೀಮತ್ಕದಂಬನ್ತ್ಯಾಗಸಂಪನ್ನನ್ಕಲಭೋರ(ನಾ) ಅರಿಕ

೩. ಕುಸ್ಥಭಟ್ಟೋರ ನಾಳೆ ನರಿದಾವಿ(ಳೆ) ನಾಡುಳ್ ಮೃಗೇಶನಾ

೪. ಗೇನ್ದ್ರಾಭೀಳಭ್ಭರ್ಟಹರಪ್ಪೋರ್ ಶ್ರೀ ಮೃಗೇಶನಾಗಾಹ್ವಯ

೫. ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ

೬. ಗಣಪಶುಪತಿಯಾ ದಕ್ಷಿಣಾಪಥ ಬಹು ಶತಹವನಾ

೭. ಹವದು(ಳ್) ಪಶುಪ್ರದಾನ ಶೌರ್ಯೋದ್ಯಮಭರಿತೋ(ನ್ದಾನ)ಪ

೮. ಶುಪತಿಯೆನ್ದು ಪೊಗಳ್ತೆಪ್ಪೊಟ್ಟಣ ಪಶುಪತಿ

೯. ನಾಮಧೇಯನಾ ಸರಕ್ಕೆಲ್ಲ ಭಟರಿಯಾ ಪ್ರೇಮಾಲಯ

೧೦. ಸುತನ್ಗೆ ಸೇನ್ದ್ರಕಬಣೋಭಯ ದೇಶದಾವೀರಾಪುರುಷಸಮಕ್ಷ

೧೧. ದೆ ಕೇಕಯಪಲ್ಲವರಂ ಕಾದೆಱದು ಪೆತ್ತಜಯನಾ ವಿಜ

೧೨. ಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮೂಱುವಳ್ಳಿಉಂ ಕೊ

೧೩. ಟ್ಟಾರ್ ಬಟಾರಿಕುಲದೊನಳಕದಮ್ಬನ್ಕಳ್ದೋನ್ ಮಹಾಪಾತಕನ್

೧೪. ಇರ್ವ್ವರುಂ ಸಟ್ಬಙ್ಗದರ್ ವಿಜಾರಸರುಂ ಪಲ್ಮಡಿಗೆ ಕುಱು

೧೫. ಮ್ಬಿಡಿವಿಟ್ಟಾರ್ ಅದಾನಱಿವೊನ್ಗೆ ಮಹಾಪಾತಕಮ್ ಸ್ವಸ್ತಿ

೧೬. ಭಟ್ಟರ್ಗ್ಗೀಗಲ್ದ್ದೆ ಒಡ್ಡಲಿ ಆಪತ್ತೊನ್ದಿ ನಿವಿಟ್ಟಾರಕರ

ಅನುಬಂಧ ೨

ಈ ಗ್ರಂಥದ ಅಡಿಟಿಪ್ಪಣಿಗಳಲ್ಲಿ ಉಲ್ಲೇಖಿಸಲಾದ ಗ್ರಂಥಗಳ ಮೊದಲನೆಯ ಮುದ್ರಣ ಅಥವಾ ಆವೃತ್ತಿಯ ಪುಟಗಳನ್ನು ಸಾಮಾನ್ಯವಾಗಿ ಕೊಟ್ಟಿದೆ. ಬೇರೆ ಮುದ್ರಣ ಅಥವಾ ಆವೃತ್ತಿಗಳ ಪುಟಗಳನ್ನು ಕೊಟ್ಟಿರುವಲ್ಲಿ ಆಯಾ ಗ್ರಂಥಗಳ ಹೆಸರುಗಳನ್ನು ವಿವರಗಳೊಂದಿಗೆ ಈ ಕೆಳಗೆ ಕೊಡಲಾಗಿದೆ.

೧. ಕವಿಚರಿತೆ, ಸಂ. ೧—ತಿದ್ದಿದ ಮುದ್ರಣ (೧೯೨೪)
   ,, (ಸಂ. ೨ ಮತ್ತು ೩ ಮಾತ್ರ ಮೊದಲನೆಯ ಮುದ್ರಣ ೧೯೧೯, ೧೯೨೯)

೨. ಕವಿರಾಜಮಾರ್ಗ—ಸಂ. ಪಿ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್ (ಮದ್ರಾಸ್ ಆವೃತ್ತಿ, ೧೯೩೦)

೩. A History of Kanarese Literature—E. P. Rice (Second Edition, 1920)

೪. ವಡ್ಡಾರಾಧನೆ—ಸಂ. ಡೊ. ಲ. ನರಸಿಂಹಾಚಾರ್ (ಕನ್ನಡಸಾಹಿತ್ಯಪರಿಷತ್ತು, ೧೯೪೯)

೫. ಬಸವೇಶ್ವರನ ವಚನಗಳು—ಸಂ. ಫ. ಗು. ಹಳಕಟ್ಟಿ (೨ನೇ ಆವೃತ್ತಿ, ೧೯೩೦)

೬. ಪ್ರಭುದೇವರ ವಚನಗಳು—ಸಂ. ಫ. ಗು. ಹಳಕಟ್ಟಿ (೧೯೩೧)

೭. ಮಹಾದೇವಿಯಕ್ಕನ ವಚನಗಳು—ಸಂ. ಫ. ಗು. ಹಳಕಟ್ಟಿ (೧೯೨೬)

ಅಕಾರಾದಿ

(ಈ ಗ್ರಂಥದಲ್ಲಿ ಉಲ್ಲೇಖವನ್ನು ಪಡೆದ ಕನ್ನಡ ಗ್ರಂಥಕಾರರ ಮತ್ತು ಗ್ರಂ
ಅಕಾರಾದಿ ಇದು. ದಪ್ಪಕ್ಷರಗಳಲ್ಲಿ ಮುದ್ರಿಸಲಾದ ಪುಟಗಳಲ್ಲಿ ಆಯಾ ಗ್ರಂಥ ಇಲ್ಲವೆ ಗ್ರಂ
ನನ್ನು ಕುರಿತು ವಿಮರ್ಶಾತ್ಮಕ ವಿವೇಚನೆಯಿದೆಯೆಂದು ತಿಳಿಯಬೇಕು.)

ಉಷಾ ಪ್ರೆಸ್, ಮೈಸೂರು